MISSING

3 JAN. TO 15 FEB.

ಕಾರ್ಡಿಕ್ಸ ಎಗ್ಯೂ ಮಿಕ್ಶ್ಚರ.

[illegible] ಮಾತ್ರೆ.

ದೊಡ್ಡ ಬಾಟ್ಲಿ ಕ್ರಯ ೧—४—೦, ಸಣ್ಣದಕ್ಕೆ ೦—११—೦

ಈ ಪ್ರಸಿದ್ಧ ಔಷಧವನ್ನು ಮಾರುವರಿಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು: ದಿ ಊಲನ್ ಮಾರ್ಟ, ಮಂಗಳೂರು. | ಕಣ್ಣೋರ್ಕ ಬ್ರದರ್ಸ, ಗಿರಿಗಾಂವ, ಮುಂಬಯಿ.

Famous

Mysore Perfumes.

Best incense sticks (Agar Bathis)

Maharaja Bathi	per seer (24 Tolas)	Rs. 20
Darbar „	„	„ 15
Ananda „	„	„ 12
Manmohan „	„	„ 10
Musk Heena	„	„ 8
Dilchaman „	„	„ 8
Kasthur Javaji	„	„ 10
Amber „	„	„ 8
Rose „	„	„ 6
Jasmin „	„	„ 5
Punugu (Civet)	„	„ 4
Heena „	„	„ 3
A Tin Case containing 300 Assorted Bathis of 12 kinds	„	„ 6

Packing & Postage Extra.

The State Perfumery Mart,
Bangalore City,
Mysore State.

'ಅಂಬಾ ತಾಯಿತ್'

[illegible]

A NAME THAT MERIT HAS MADE FAMOUS.

೪೦ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

[illegible]

Liberal Discount to Trade

ಟೆಲಿಗ್ರಾಮ:—CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್, Sayani Road, P. O. Cadell Road, Bombay. No. 14.

ಕೇಸರಿಯ ವರ ಲೋಧ್ರ

ಗರ್ಭಾಶಯ ರೋಗನಿವಾರಿಣೀ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಆಭರಣ'ವೆಂದೂ, 'ಸರ್ವಾರ್ಥೇಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜವನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಮುಟ್ಟಿನಶೂಲೆ, ಮುಟ್ಟುಸ್ರಾವದೋಷ, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಮುಟ್ಟು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಮೇಹ) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿತ್ತಾಶಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ಉಬ್ಬಸ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ಔಷಧಿ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— **ಕೇಸರೀ ಕುಟೀರಂ,**

TELEGRAMS:—'KESARI' ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

15-4-'27 ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ, ಹಂಪನಕಟ್ಟಾ, ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯಪಟ್ಟಿ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್.
ದಿ ಕೆನರಾ ವಾಚ್ ಹೌಸ್, ಉಡುಪಿ.

[illegible]

ಅನುಕ್ರಮಣಿಕೆ.

ಅಗ್ರಲೇಖ	ಪುಟ
ಏಕೀಕರಣ ದಿನ	೩
ವಿದೇಶ ವರ್ತಮಾನ	,,
ಸ್ಥಳೀಯ ಸಮಾಚಾರಗಳು	೪
ಟೀಕೆಗಳು	,,
ವರ್ತಮಾನ ಸಂಗ್ರಹಗಳು	
ಒಳದೇಶ ವರ್ತಮಾನ	೩-೪
ದಕ್ಷಿಣ ಕನ್ನಡ— ಮಂಗಳೂರು, ಹೊಸದುರ್ಗ, ಗುರುಪುರ, ಪಾಣೆಮಂಗಳೂರು, ಬಂಟವಾಳ, ಅಜೆಕಾರು ಕಾಪು	೬-೯
ವಿವಿಧ ಸಮಾಚಾರಗಳು	೯
ವಿಶೇಷ ಸಮಾಚಾರಗಳು	,,
ಕಲ್ಲಡ್ಕ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವ	೧೨
ದ್ವಿತೀಯ 'ರಾಷ್ಟ್ರಧ್ವಜ ವಂದನೆಯ ಕಾರ್ಯಕ್ರಮವು	,,
ಪತ್ರವ್ಯವಹಾರ ೧, ೨, ೩,	೨
ಮಾನವ ಜನ್ಮದ ಸಾರ್ಥಕತೆ	೧೩
ಸಕಲೇಶಪುರದ ಪತ್ರ	,,

ಸ್ವದೇಶಾಭಿಮಾನಿ.

ತಾರೀಕು ೨೨ನೇ ಶುಕ್ರವಾರ ಫೆಬ್ರವರಿ ೧೯೨೯.

ಏಕೀಕರಣ ದಿನ.

ಕರ್ನಾಟಕ ಏಕೀಕರಣ ದಿನವನ್ನು ವ್ಯವಸ್ಥೆಗೊಳಿಸಿದುದಕ್ಕಾಗಿ ನಾವು ಕರ್ನಾಟಕ ಏಕೀಕರಣ ಸಭೆಯನ್ನು ಅಭಿನಂದಿಸುವೆವು. ಕರ್ನಾಟಕ ಏಕೀಕರಣದ ಪ್ರಚಾರಕಾರ್ಯವು ಇಂತಹ ಉತ್ಸವಗಳ ಆಚರಣೆಯಿಂದಲೇ ಸಾಗತಕ್ಕದ್ದಿದೆ; ಮತ್ತು ಇವುಗಳಿಂದಲೇ ಕರ್ನಾಟಕದ ತೀವ್ರ ಆಕಾಂಕ್ಷೆಯ ಪರಿಮಾಣವು ಅಳೆಯಲ್ಪಡತಕ್ಕದ್ದಿದೆ.

ಕರ್ನಾಟಕದ ಸುತ್ತಲಿನ ಪ್ರಾಂತದಲ್ಲಿ ತೆಲುಗರು, ಆಂಧ್ರದೇಶವೆಂದೂ, ತಮಿಳರು ತಮಿಳುನಾಡು ಎಂದೂ, ಮಲೆಯಾಳಿಗಳು ಕೇರಳವೆಂದೂ, ಮರಾಟೆಗರು ಮಹಾರಾಷ್ಟ್ರವೆಂದೂ ಬಹುಕಾಲ ಪೂರ್ವದಿಂದಲೇ ತಮ್ಮ ಪ್ರಾಂತಾಭಿಮಾನವನ್ನು ಬೆಳಸಿ, ತಮ್ಮ ತಮ್ಮ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸಿ, ವಿಶಾಲವಾದ ವಾಙ್ಮಯಕ್ಷೇತ್ರವನ್ನುಂಟುಮಾಡಿ ಪ್ರಬಲರಾಗುತ್ತಾ ಬಂದಿರುವಾಗ, ಕರ್ನಾಟಕೀಯರು ಬಾವಿಯ ಕಪ್ಪೆಯಂತೆ, ಸ್ವಗೃಹದ ಹೊರ ಅರಿವು ಇಲ್ಲದೆ, ಪ್ರಾಂತಾಭಿಮಾನವನ್ನು ಪಡೆಯಲು ನಾಕಷ್ಟು ಐಕ್ಯವಿಲ್ಲದೆ ಬಹುಕಾಲ ಇರಬೇಕಾಯಿತು. ಈ ದಿನ ಕರ್ನಾಟಕ ವಾಙ್ಮಯ ಪ್ರಸಾರವೂ ರಚನೆಯೂ ಬಹು ಸಂಕುಚಿತವಾಗಿರಲು ಇದೇ ಕಾರಣವಾಗಿರುತ್ತದೆ. ಇತರ ಪ್ರಾಂತಗಳಲ್ಲಿ ಸಾಮಾನ್ಯ ಕೂಲಿಯವನು ಕೂಡ ಅಕ್ಷರಸ್ಥನಾಗಿದ್ದು ಸ್ವಭಾಷೆಯ ಚಿಕ್ಕ ಪುಸ್ತಕಗಳನ್ನು ಬಹಳ ಆದರದಿಂದ ಓದಿಕೊಳ್ಳುವಾಗ, ಕರ್ನಾಟಕೀಯರಲ್ಲಿ ಅಕ್ಷರಸ್ಥರೇ ಕಡಿಮೆಯಿರುವರಲ್ಲದೆ, ಅಕ್ಷರಸ್ಥರಾಗಿರುವವರು ಕೂಡ ಓದುವ ಅಭಿಲಾಷೆಯುಳ್ಳವರಾಗಿಲ್ಲ. ಈ ಕಾರಣದಿಂದ ಕರ್ನಾಟಕೀಯ ಸಂಸ್ಕೃತಿಗೆ ಕುಂದಿದ್ದಿರುವುದಲ್ಲದೆ, ಜನತೆಯೊಳಗಿನ ಸೌಹಾರ್ದವು ಬಹಳ ಕಡಿಮೆಯಾಗಿದ್ದು ವ್ಯವಹಾರಗಳು ಕಷ್ಟಕರವಾಗಿ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಈ ಮೂರು ತರದ ಉನ್ನತಿಯೂ ಸಾಗಲಾರದೆ ಹಿಂದೆ ಬಿದ್ದಿವೆ.

ಜನತೆಯ ಈ ಅವನತಿಯನ್ನು ಕಡೆಗಾಣಿಸಲು ವೈ. ಕಡಪಾ ರಾಘವೇಂದ್ರ ರಾಯರು ಬಹಳ ದೂರದರ್ಶಿತೆಯಿಂದ [ಕರ್ನಾ]ಟಕ ಏಕೀಕರಣದ ಮೂಲಕ ಪ್ರಯತ್ನಿಸಲು ಕೈಯಿಕ್ಕಿ[ದರು]. ಅದು ಸಾಮಾನ್ಯವಾದ ಕೆಲಸವಲ್ಲ. ಕಡಪಾ [ರಾಯರು] ವೈಕುಂಠವಾಸಿಗಳಾದರು. ಆದರೆ [ಅವರು] ಮಹತ್ತರ ಕೆಲಸವು ಅಪೂರ್ಣವಿದ್ದು ಕರ್ನಾಟಕದ [ಜ]ನತೆ ... ಪ್ರೇರಕಾತ್ಮಕ ಆಹ್ವಾನವನ್ನು ಕೊಡುತ್ತಿದೆ. [ಅವರು ಅಗಲಿದ] ದಿನ, ಅದುದರಿಂದಲೇ ಈ ದಿನವು ಕರ್ನಾ[ಟಕ ದಿನವಾ]ಗಿದೆ. ಈ ದಿನವೇ ರಾಘವೇಂದ್ರರಾಯರು [ಮಾಡಿದ] ಕೆಲಸವನ್ನು ಎಲ್ಲಾ ಕರ್ನಾಟಕೀಯರ [ಗಮನಕ್ಕೆ ತರಲು] ಶ್ರೇಯ ಸಮಾಪನವನ್ನು ಮಾಡಿದರು.

ಕರ್ನಾಟಕ ಸಭೆಯವರು ಈ ದಿನದ ಪ್ರಚಾರ ಕಾರ್ಯಕ್ಕಾಗಿ ಚಿಕ್ಕದೊಂದು ಪುಸ್ತಕವನ್ನು ಹೊರಡಿಸಿರುವರು. ಈ ಪುಸ್ತಕದಲ್ಲಿ ಕಡಪಾ ರಾಘವೇಂದ್ರ ರಾಯರ ಕರ್ಮಜೀವನದ ಸಂಕ್ಷಿಪ್ತ ಇತಿಹಾಸ, ಕರ್ನಾಟಕ ಏಕೀಕರಣವೆಂದರೇನೆಂಬುದನ್ನು ತಿಳಿಸುವ ಒಂದು ಉಪನ್ಯಾಸ, ಅದರಿಂದ ಕರ್ನಾಟಕೀಯರಿಗುಂಟಾಗುವ ಲಾಭ, ಮತ್ತು ಏಕೀಕರಣ ಸಂಬಂಧವಾದ ಕೆಲವು ಮುಖ್ಯ ಅಂಕೆಗಳು, ಏಕೀಕೃತ ಕರ್ನಾಟಕದ ಭವ್ಯ ಚಿತ್ರದೊಡನೆ ಕೊಡಲ್ಪಟ್ಟಿವೆ. ಪ್ರತಿಯೊಬ್ಬರೂ ಈ ಪುಸ್ತಕವನ್ನು ತರಿಸಿ ಓದಿಕೊಳ್ಳಬೇಕೆಂದು ನಾವು ಆಗ್ರಹಪೂರ್ವಕ ಕೇಳಿಕೊಳ್ಳುತ್ತೇವೆ. ಕರ್ನಾಟಕ ಸಭೆಯವರು ಇದನ್ನು ಅತ್ಯಲ್ಪ ಬೆಲೆಗೆ ತಯಾರಿಸಿರುವರು.

ಕರ್ನಾಟಕ ಏಕೀಕರಣದೊಡನೆ ಇನ್ನೊಂದು ಸಮಸ್ಯೆಯು ಮುಂದೆ ಬಂದುದನ್ನು ನಾವು ಇಲ್ಲಿ ಎತ್ತದಿರಲಾರೆವು. ಬೆಳಗಾಂವಿಯು ಕರ್ನಾಟಕದ ಸೀಮಾ ಪ್ರದೇಶದಲ್ಲಿರುವುದರಿಂದ ಇಲ್ಲಿ ಕರ್ನಾಟಕ-ಮರಾಠಿವಾದವು ಬಹಳವಿರುತ್ತದೆ. ಇಲ್ಲಿಯಷ್ಟು ಕಠಿಣವಾದ ಕರ್ನಾಟಕ-ಮರಾಠಿ ವಾದವು ಮತ್ತೆಲ್ಲಿಯೂ ತೋರಿಬರುವುದಿಲ್ಲ. ಮಾತ್ರವಲ್ಲದೆ ಇದು ಬರೇ ಮಾತಿನ ವಾದದಲ್ಲಿರದೆ ಮನಸ್ಸಿನ ತಾಪಕ್ಕೂ ಪರಿಣಮಿಸಿಯದಾಗಿ ತೋರಿಬರುತ್ತದೆ. ಮೇಲಾಗಿ ಮರಾಠಿಗರು ಹಠಸಾಧನೆಯಲ್ಲಿಯೂ ತಂತ್ರಯುಕ್ತಿಗಳಲ್ಲಿಯೂ ನಿರತರಿರುವಂತೆಯೂ ಕಂಡುಬರುತ್ತದೆ. ಬೆಳಗಾಂವಿಯಲ್ಲಿ ಮರಾಠಿ ಸಾಹಿತ್ಯಪರಿಷತ್ತನ್ನು ಏರ್ಪಡಿಸಿರುವ ಪ್ರಯತ್ನಗಳು ಸೌಹಾರ್ದದ ಕ್ರಮವಾಗಿರದೆ ಕುಟಿಲತೆಯ ಸಾಹಸವಾಗಿದೆಯೆಂದೂ ತಿಳಿಯುತ್ತದೆ. ಈ ಮನಃಕ್ಲೇಶಗಳನ್ನು ನಿವಾರಿಸುವ ಉಪಾಯವೇನೂ ಇಲ್ಲವೇ? ಎಂದು ಆಲೋಚಿಸುವುದೂ ಆಗತ್ಯವಿದೆ.

ಇಂದಿನ ಈ ಅಖಿಲ ಕರ್ನಾಟಕ ದಿನದಲ್ಲಿ ಅಖಿಲ ಕರ್ನಾಟಕವನ್ನು ನಾವು ಹರಸುವೆವು. ಸೌಹಾರ್ದವೂ ಐಕ್ಯವೂ ನೆಲಸಿ ಚಿರಕಾಲಂತೆಯಿಂದ ಸಸ್ಯಸಂಪತ್ತಿಗಳು ಸಮೃದ್ಧವಾಗಿ ಕರ್ನಾಟಕೀಯರ ಹೃದಯವು ಅಭಿಮಾನದಿಂದ ತುಂಬಲೆಂದು ನಾವು ಚಿರಕಾಲವೂ ಆಶಿಸುವೆವು.

ವಿದೇಶ ವರ್ತಮಾನ.

— ಇಂಗ್ಲಾಂಡಿನಿಂದ ಹಿಂದೂಸ್ಥಾನಕ್ಕೆ ಮಾರ್ಚ್ ೩ನೇ ತಾರೀಕಿನಿಂದ ಹೊರಡುವಂತಹ ವಿಮಾನಸರ್ವಿಸಿನ ಚಲನೆಯ ಸಮಯವು ತಿಳಿದುಬರುತ್ತದೆ. ಲಂಡನಿನಿಂದ ಪ್ರತಿ ಶನಿವಾರ ಬೆಳಗ್ಗೆ ೧೦-೩೦ಕ್ಕೆ ಹೊರಟು ಕರಾಚಿಗೆ ಮರುವಾರ ಶುಕ್ರವಾರ ೧೦-೩೦ಕ್ಕೆ ಬಂದು ತಲುಪುವದು.

— ಬೆಲ್‍ಫಾಸ್ಟಿನಲ್ಲಿ ಉತ್ತರ ಐಯರ್ಲಾಂಡಿನ ಅಧಿಕಾರಿಗಳು ೭ ಮಲೆಯಾಳವರನ್ನು ಕೈದುಮಾಡಿದುದರ ಸಲುವಾಗಿ ಬ್ರಿಟಿಷ ರಿಪಬ್ಲಿಕನರು ಬೆಲ್‍ಫಾಸ್ಟಿನ ಸಾಮಗ್ರಿಗಳೆಲ್ಲವನ್ನು ಬಹಿಷ್ಕರಿಸಬೇಕೆಂದು ನಿಶ್ಚಯಿಸಿರುವರು. ಬ್ರಿಟಿಷ ರಿಪಬ್ಲಿಕನ್ ಉದ್ದೇಶಗಳಿಗೆ ಮಲೆಯಾಳವರನ್ನು ಕೈದು ಮಾಡಿರುವರೆಂದು ಅವರ ಅಭಿಪ್ರಾಯ.

— ಗ್ರೇಟ್‍ಬ್ರಿಟನಿನಲ್ಲಿ ಈಗ ನ್ಯಾಯವಾದ ಮದುವೆಯ ಪ್ರಾಯವು ಹುಡುಗಿಯರಿಗೆ ೧೨ ಮತ್ತು ಹುಡುಗರಿಗೆ ೧೪ ಆಗಿರುತ್ತದೆ. ಆದರೆ ಹುಡುಗ ಹುಡುಗಿಯರು ೧೬ ವರುಷಗಳ ಮೊದಲು ಮದುವೆಯಾಗಲೇಬಾರದೆಂಬ ಮಸೂದೆಯು ಹೌಸ್ ಆಫ್ ಲೋರ್ಡ್ಸ್ ಇವರ ಮುಂದಕ್ಕೆ ತರಲ್ಪಡಲಿದೆ. ೧೯೧೫ರಿಂದ ೧೯೨೬ನೇ ವರೆಗಿನ ೧೨ ವರುಷಗಳಲ್ಲಿ ೧೬ ವರುಷಗಳಿಗೆ ಕಡಿಮೆಯಾದ ದಂಪತಿಗಳು ಸುಮಾರು ೩೦೦ ಮದುವೆಗಳಾದುವಂತೆ.

— ಲಿಸ್ಬನಿನ ಇಂಜಿನಿಯರನೋರ್ವನು ಪೋರ್ಚುಗಲ್ ಸರಕಾರದ ವಿರೋಧವಾಗಿ ನಿಲ್ಲಬೇಕೆಂದು ಹಲವು ಕ್ರಾಂತಿಕಾರರಿಗೆಲ್ಲ ಬೋಧನೆಕೊಟ್ಟು ಆ ಬಗ್ಗೆ ತಯಾರಿಗಳನ್ನು ಮಾಡುತ್ತಿದ್ದನು. ಆದರೆ ಅಕಸ್ಮಾತ್ ಆತನ ಉದ್ದೇಶಗಳು ಬಯಲಾಗಿ ಆತನು ಕೈದುಮಾಡಲ್ಪಟ್ಟಿರುವನು. ಆತನ ಕೂಡೆ ಹಲವು ಬಾಂಬುಗಳು ಇದ್ದುವೆಂದು ಕಂಡು ಹಿಡಿಯಲ್ಪಟ್ಟಿರುತ್ತದೆ.

— ಗ್ರೇಟರ್ ಲಂಡನ್ ಎಂಡ್ ಕೌಂಟಿಸ್ ಟ್ರಸ್ಟ್ ಲಿಮಿಟೆಡ್ ಇದರ ಚೆಯರ್ಮನನಾಗಿ ಲೋರ್ಡ್ ಬರ್ಕನಹೆಡ್ಡರಿಗೆ ವರ್ಷಕ್ಕೆ ೧೫,೦೦೦ ಪವನು ಸಂಬಳವು ನಿಶ್ಚಯವಾಯಿತೆಂದು ತಿಳಿದುಬರುತ್ತದೆ.

— ಅರಸರ ದೇಹಸ್ಥಿತಿಯು ಈಗ ಚೆನ್ನಾಗಿರುತ್ತದೆ. ನಡೆಯಲು ಅವರಿಗೆ ಶಕ್ತಿಯುಂಟಾಗಿರುತ್ತದೆ.

— ಬ್ರಿಟಿಷರ ವಸಂತ ಔದ್ಯೋಗಿಕ ಪ್ರದರ್ಶನದ ಎರಡು ಶಾಖೆಗಳು ಕಳೆದ ಸೋಮವಾರ ತೆರೆಯಲ್ಪಟ್ಟವು. ಒಂದನೆಯ ಶಾಖೆಯಲ್ಲಿ ಇಂಜಿನಿಯರಿಂಗಿಗೆ ಸಂಬಂಧಿಸಿದ ಇದುವರೆಗೆ ಪ್ರದರ್ಶಿಸಲ್ಪಡದಂತಹ ಸಾಮಗ್ರಿಗಳು ಪ್ರದರ್ಶಿಸಲ್ಪಟ್ಟವು. ಹನ್ನೊಂದು ಎಕರೆಸ್ಥಳವು ಈ ಪ್ರದರ್ಶನಕ್ಕಾಗಿ ಆಕ್ರಮಿಸಲ್ಪಟ್ಟಿತು. ಎರಡನೆಯ ಶಾಖೆಯಲ್ಲಿ ಅಷ್ಟೊಂದು ಸಾಮಗ್ರಿಗಳಿರಲಿಲ್ಲ. ಬರೆ ೧೫೦೦ ಸಾಮಾನುಗಳು ಮಾತ್ರವೇ ಪ್ರದರ್ಶಿಸಲ್ಪಟ್ಟವು.

— ಪೆರಿಸಿನಲ್ಲಿದ್ದ ಅಫಗಾನದ ಮಾಜಿಮಂತ್ರಿಯಾಗಿದ್ದ ನಾದಿರ್ ಖಾನನು ಅಫಗಾನದ ಸಿಂಹಾಸನವನ್ನು ಸಂಪಾದಿಸುವ ಸಲುವಾಗಿ ಅಫಘಾನಸ್ಥಾನಕ್ಕೆ ಹೊರಟುಬಂದಿರುವನೆಂಬ ವಾರ್ತೆಯಿದೆ.

— ಲಂಡನಿನ ಫೀಟರ್ ರಸ್ತೆಯಲ್ಲಿ ಲೋರ್ಡ್ ನೋರ್ಥ್‍ಕ್ಲಿಫ್ ಎಂಬವರ ಪ್ರತಿಮೆಯನ್ನು ಸ್ಥಾಪಿಸುವ ಸಲುವಾಗಿ ಲಂಡನಿನ ಮುಖ್ಯ ಮುಖ್ಯ ಪತ್ರಿಕಾಕರ್ತರುಗಳೆಲ್ಲರೂ ಒಟ್ಟಾಗಿ ಒಂದು ಕಮಿಟಿಯನ್ನು ಏರ್ಪಡಿಸಿರುವರು.

— ಅಮೀರ್ ಕಾಬೂಲಿಯ ರಾಜ್ಯ ಶಾಂತಿ ... ಈಗ ... ಅವನ್ನು ಕೊಡಲ್ಪಟ್ಟಿತೆ. ಅವನ್ನು ಶೀಘ್ರದಲ್ಲಿಯೇ ಮಂತ್ರಿ ಮಂಡಲದವರಿಗೆ ಸಮರ್ಪಿಸಲಿರುವರು.

— ಬ್ರಿಟನಿನಲ್ಲಿ ಈಗ ಕೆಲಸವಿಲ್ಲದವರ ಸಂಖ್ಯೆಯು ಒಂದುಮಿಲಿಯಕ್ಕೆ ಮುಟ್ಟಿರುತ್ತದೆ. ಹೇಗಾದರೂ ಮಾಡಿ ಇವರೆಲ್ಲರ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸುವ ಹಂಚಿಕೆಯನ್ನು ಮಾಡುವುದಗತ್ಯವೆಂದು ಯುವರಾಜರು ಔದ್ಯೋಗಿಕ ಪ್ರದರ್ಶನದ ಸಮಯದಲ್ಲಿ ಭಾಷಣವಿತ್ತರು.

— ಲಂಡನ್ ಮತ್ತು ಬರ್ಮಿಂಗ್‍ಹೇಮಿನಲ್ಲಿ ತೆರೆಯಲ್ಪಟ್ಟ ಔದ್ಯೋಗಿಕ ಪ್ರದರ್ಶನವು ಇಂತಹ ಪ್ರಮಾಣದಿಂದ ಇದುವರೆಗೆ ಎಲ್ಲಿಯೂ ನಡೆದಿರಲಿಲ್ಲ. ಸಾಮಾನುಗಳೆಲ್ಲವನ್ನು ನೋಡಬೇಕಾದರೆ ಆರು ಮೈಲುಗಳ ದೂರದಿಂದ ನಡೆಯಬೇಕಾಗುವುದು.

— ಎಸೆಂಬ್ಲಿಯ ಮುಂದಕ್ಕೆ ತರಲ್ಪಟ್ಟಿರುವ ಪಬ್ಲಿಕ್ ಸೇಫ್ಟಿ ಬಿಲ್ಲನ್ನು ಆದಷ್ಟು ಬೇಗನೇ ಮಂಜೂರು ಮಾಡುವದು ಅಗತ್ಯವಿದೆಯೆಂದೂ, ಮುಂಬಾಯಿಯಲ್ಲಿದ್ದುದರಿಂದ ಹಿಂದೂಸ್ಥಾನದ ಕುರಿತಾಗಿ ತನಗೆ ಚೆನ್ನಾಗಿ ಅನುಭವವಿದೆಯೆಂದೂ ಹೌಸ್ ಆಫ್ ಕೋಮನ್ಸಿನಲ್ಲಿ ಸರ್ ಲೆಸ್ಲಿ ವಿಲ್ಸನರು ವಿವರಿಸಿದರು.

— ಪರ್ಸಿಯ ಮತ್ತು ಜರ್ಮನಿ ರಾಜ್ಯಗಳೊಳಗೆ ಒಪ್ಪಂದವು ನಡೆದಿರುತ್ತದೆ.

— ಮೆಸಿಡೋನಿಯ ಎಂಬಲ್ಲಿ ಅಕಸ್ಮಾತ್ತಾಗಿ ನದಿಗಳಲ್ಲಿ ನೀರು ತುಂಬಿ ನೆರೆ ಬಂದಿತು, ದನಕರುಗಳು ಸತ್ತುಹೋದವು. ಮನೆಗಳನೇಕ ಕೊಚ್ಚಿಹೋಗಲ್ಪಟ್ಟು ಸಾವಿರಾರು ಜನರು ಮನೆಯಿಲ್ಲದೆ ತಿರುಗುತ್ತಿರುವರು. ನೆರೆಯಿಂದ ಅಸಹಾಯರಾದವರಿಗೆ ಸಹಾಯವನ್ನು ಮಾಡಬೇಕೆಂದು ಸರಕಾರದವರು ಪ್ರಯತ್ನಿಸುತ್ತಲಿರುವರು.

— ಇಟೆಲಿಯಲ್ಲಿ ಕಳೆದ ಆದಿತ್ಯವಾರ ಅಕಸ್ಮಾತ್ತಾಗಿ ಆಕಾಶದಲ್ಲಿ ಎರಡು ಸೂರ್ಯ ಬಿಂಬಗಳು ಕಾಣಬಂದುವು. ಎರಡನ್ನು ಜೋಡಿಸಲು ನಡುವೆ ಒಂದು ಬಾಣದಾಕಾರದ, ಜಗಜಗಿಸುವ ವೃತ್ತವಿದ್ದಿತು. ಜ್ಯೋತಿಷ್ಯರು ಇದು ದೇಶಕ್ಕೆ ಶುಭಸೂಚನೆಯೆಂದರು, ಅಂದರೆ ಇಟೆಲಿ ಮತ್ತು ವ್ಯಾಟಿಕನ್ ರಾಜ್ಯಗಳೊಳಗೆ ರಾಜಿಯಾಗುವದೆಂದೂ, ಮುಸ್ಸೊಲಿನಿಯೆಂಬವರೇ ಆ ಜಗಜಗಿಸುವ ವೃತ್ತವೆಂದೂ ಅಭಿಪ್ರಾಯಪಟ್ಟರು.

— ಹೊಸ ವರುಷದ ಆದಿಯಲ್ಲಿ ಬಿರುದುಗಳನ್ನು ಸಮರ್ಪಿಸಬೇಕಾದುದನ್ನು ಅರಸರ ಅಸ್ವಸ್ಥದ ಕಾರಣದಿಂದ ಮುಂದರಿಸೋಣಾಗಿತ್ತು. ಬಹುಶಃ ಮಾರ್ಚ್ ಮೊದಲನೆಯ ವಾರದಲ್ಲಿ ಬಿರುದುಗಳು ಕೊಡಲ್ಪಡುವವಂತೆ.

— ಮೆಕ್ಸಿಕೋದ ಪ್ರೆಸಿಡೆಂಟನಾದ ಗೋಜನು ಕಾರಿನಲ್ಲಿ ಕುಳಿತು ಹೋಗುತ್ತಿರುವಾಗ ಆರು ಮಂದಿ ಮಾರ್ಗದ ಬದಿಯ ಪೊದೆಯಲ್ಲಿ ಅಡಗಿಕೊಂಡು, ಕಾರಿನ ಕಡೆಗೆ ಗುಂಡುಹೊಡೆದರು. ಆದರೆ ಪ್ರೆಸಿಡೆಂಟರು ರೊಡನಿದ್ದವರು, ಕಾರಿನಿಂದ ಇಳಿದು ಆರು ಮಂದಿಯನ್ನೂ ಹಿಡಿದು ಕೊಂದುಹಾಕಿದರು.

— ಹಿಂದಿನ ವಾರಕ್ಕಿಂತ ಕಳೆದ ವಾರ ಬ್ರಿಟನಿನ ನಿರುದ್ಯೋಗಿಗಳ ಸಂಖ್ಯೆಯಲ್ಲಿ ೨೫,೦೦೦ ಕಡಿಮೆಯಾಗಿರುತ್ತದೆ.

— ಯುರೋಪಿನಲ್ಲಿ ಶೀತವು ವಿಪರೀತವಾದುದರಿಂದ ಹಲವರು ಶೀತದ ಬೇನೆಯಿಂದಲೇ ಸತ್ತುಹೋದರು.

— ಬುಡಾಪೆಸ್ಟಿನಲ್ಲಿ ಛಳಿಯ ದೆಸೆಯಿಂದ ತೋಳಗಳು ಪಟ್ಟಣವನ್ನು ಪ್ರವೇಶಿಸಿ ದನಕರುಗಳನ್ನು ತಿಂದುವಂತೆ.

ಒಳದೇಶ ವರ್ತಮಾನ.

— ಕಲ್ಕತ್ತೆಯಲ್ಲಿರುವ ಯೂನಿಯನ್ ಸಾಬಿನ ಗಿರಣಿಯ ಕೆಲಸದವರು ತಮಗೆ ಸಂಬಳ ಸಾಕಾಗುವದಿಲ್ಲವೆಂದೂ, ಸಂಬಳವನ್ನು ಏರಿಸದ ವಿನಹ ತಾವು ಕೆಲಸವನ್ನು ಪ್ರಾರಂಭಿಸಲಾರೆವೆಂದೂ ಮುಷ್ಕರವನ್ನು ಆರಂಭಿಸಿದರು.

— "ಅರಂಕೋಲಾ" ಎಂಬ ಹೆಸರಿನ ರಂಗೂನ್ ಮೈಲ್ ಸ್ಟೀಮರು ಹಗ್ಲಿ ನದಿಯನ್ನು ಪ್ರವೇಶಿಸುವಾಗ ಒಬ್ಬ ಯುವಕನು ಅಕಸ್ಮಾತ್ತಾಗಿ ನೀರಿಗೆ ಹಾರಿದನು. ಆತನ ರಕ್ಷಣೆಗಾಗಿ ಲೈಫ್ ಬೆಲ್ಟುಗಳು ನೀರಿಗೆ ಎಸೆಯಲ್ಪಟ್ಟವು. ಒಂದು ಲೈಫ್ ಬೋಟು ಇಳಿಸಲ್ಪಟ್ಟಿತು. ಆದರೆ ಲೈಫ್ ಬೋಟು ಹತ್ತಿರ ಯುವಕನು ಪ್ರಯತ್ನಿಸುತ್ತಿರುವಾಗಲೇ ಭಯಂಕರವಾದ ನೀರು ನ್ಯಾಗವೊಂದು ಅಲ್ಲಿಗೆ ಬಂದು ಆತನನ್ನು ನುಂಗಿಬಿಟ್ಟಿತು.

ಬೆಂಗಳೂರಿನಲ್ಲಿ ಕೆಲವು ದಿವಸಗಳ ಹಿಂದೆ ಮಕ್ಕಳನ್ನು ಕದ್ದುಕೊಂಡು ಹೋಗುತ್ತಿರುವರೆಂಬ ವಾರ್ತೆಯಾಯಿತು. ಹಿಂದೂ ಮಂಗಳರು ಮನೆಯ ಮುಂದಿನ ಹೆಂಗಸು ... ಮಹಮ್ಮದೀಯರನ್ನೂ, ಇಬ್ಬರು ಕಂದಹಾರಿಗಳನ್ನೂ ಸುತ್ತುವರಿದರು. ಅವರನ್ನು ಸೀದಾ ಪೋಲೀಸ್ ಸ್ಟೇಶನಿಗೆ ಎಳದೊಯ್ದರು. ಆದರೆ ಪೋಲೀಸರು ಅವರನ್ನು ನಿರಪರಾಧಿಗಳೆಂದು ಕಂಡುಹಿಡಿದು ಅವರನ್ನು ಬಿಟ್ಟುಬಿಟ್ಟರು. ಬರೋಡಾದಲ್ಲಿ ಕಟ್ಟಲ್ಪಡುವ ಸಂಕಕ್ಕೆ ಆಹುತಿ ಕೊಡಲು ಇಂಜಿನಿಯರಿಂಗ ಇಲಾಖೆಯವರಿಗೆ ಸುಮಾರು ೨೫೦೦ ಮಕ್ಕಳು ಬೇಕಾಗಿದ್ದುದರಿಂದ ಮಕ್ಕಳನ್ನು ಕದ್ದುಕೊಂಡು ಹೋಗುವವರಿಗೆ ಸರಕಾರದವರ ಗುಪ್ತ ಸಹಾಯವಿದೆಯೆಂದು ಚೊಬ್ಬೆಯಾಯಿತು. ಆದರೆ ಸ್ವಲ್ಪ ಸಮಯದೊಳಗೆ ಗಲಾಟೆಯು ಮಾಯವಾಯಿತು.

— ಸೈಮನ್ ಕಮಿಶನಿನ ಸಂಬಂಧದಲ್ಲಿ ಸತ್ಯಾಗ್ರಹಿಯಾಗಿದ್ದ ಕುತ್ತಿಕೋಡಿನ ನರಸಿಂಹ ಸೋಮಯಾಜಿ ಎಂಬವರು ಸ್ವಾಮಿ ಬಹಿಷ್ಕಾರದ ಸಿದ್ಧತೆಗಾಗಿ ಮದರಾಸಿಗೆ ಹೋಗುವ ತಯಾರಿಯನ್ನು ಮಾಡುತ್ತಿದ್ದರು. ಕಲೆಕ್ಟರರ ಹುಕುಮಿನ ಮೇಲೆ ಅವರನ್ನು ಕೈದು ಮಾಡಲಾಯಿತು.

— ಮಹಾತ್ಮಾಜಿಯವರ ಆಂಧ್ರದೇಶದ ಸಂಚಾರವು ಮುಂದರಿಸಲ್ಪಟ್ಟಿರುತ್ತದೆ, ಎಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ಅವರು ಅಲ್ಲಿಗೆ ಹೋಗುವರು

— ಲಾಹೋರಿನಲ್ಲಿ ಕಾಂಗ್ರೆಸು ನಡೆಯುವಾಗ ಒಂದು ಪ್ರದರ್ಶನವನ್ನು ಜರಗಿಸಬೇಕೆಂದು ಪಂಜಾಬು ಕಾಂಗ್ರೆಸ್ ಕಾರ್ಯಕಾರಿ ಕಮಿಟಿಯವರೂ ಪಂಜಾಬ ಪ್ರಾಂತಿಕ ಕಾಂಗ್ರೆಸ್ ಸ್ವಾಗತ ಕಮಿಟಿಯವರೂ ಯೋಚಿಸುತ್ತಲಿರುವರು.

— ಇಂಡಿಯನ್ ಟ್ರೇಡ್ ಕಮಿಶನರಾದ ಮಿ. ಲಿಂಡಸೆಯವರು ಪೆರಿಸ್, ಹೆಂಬರ್ಗ್, ಲೀಪ್‌ಜಿಗ್, ಬ್ರೆಮನ್, ಮತ್ತು ಬರ್ಲಿನ ಈ ಕಡೆಗಳಲ್ಲಿ ತಮ್ಮ ಸಂಚಾರವನ್ನು ಮುಗಿಸಿರುವರು. ಹೋದಲ್ಲೆಲ್ಲ ಅವರು ಹಿಂದೂಸ್ಥಾನದ ಉದ್ಯೋಗಿಕ ಮತ್ತು ವ್ಯಾಪಾರ ಪ್ರಗತಿಯ ಕುರಿತಾಗಿ ಭಾಷಣವಿತ್ತರು.

— ಅಹಮದಾಬಾದಿನ ಬಿನಿವಾರ ಸಹೋದರರಿಬ್ಬರು ಖೋಟಾ ನಾಣ್ಯಗಳನ್ನು ತಯಾರಿಸುತ್ತಿರುವರೆಂಬ ಸಂಶಯದ ಮೇಲೆ ಹಿಡಿಯಲ್ಪಟ್ಟು ಶಿಕ್ಷೆಗೆ ಒಳಪಡಿಸಲ್ಪಟ್ಟರು. ಅವರ ಮನೆಯೊಳಗೆ ನೆಲಮಾಳಿಗೆಯಲ್ಲಿ ನಾಣ್ಯಗಳನ್ನು ತಯಾರಿಸುವಂತಹ ಒಂದು ಕಾರಖಾನೆಯೇ ಇದ್ದಿತಂತೆ. ಹಿಂದೂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಈ ಕಾರಖಾನೆಯ ಶಾಖೆಗಳಿದ್ದುವಂತೆ. ಅವರಲ್ಲಿ ಒಬ್ಬನಿಗೆ ೪ ವರುಷದ ಕಠಿಣ ಸಜೆ ಮತ್ತು ೩೦೦೦ ರೂಪಾಯಿ ಜುರ್ಮಾನೆ, ಇನ್ನೊಬ್ಬನಿಗೆ ೬ ವರುಷಗಳ ಕಠಿಣ ಸಜೆ ಮತ್ತು ೩೦೦೦ ರೂಪಾಯಿ ಜುರ್ಮಾನೆ ವಿಧಿಸಲಾಯಿತು. ಮೂರನೆಯವನೊಬ್ಬನಿಗೆ ಎರಡು ವರುಷಗಳ ಕಠಿಣ ಸಜೆಯೂ, ೨೦೦೦ ರೂಪಾಯಿ ಜುರ್ಮಾನೆಯೂ ವಿಧಿಸಲಾಯಿತು.

ಹೊಸಡಿಲ್ಲಿಯಲ್ಲಿ ಸರ್ ಎಡ್ವಿನ್ ಲ್ಯೂಟೆನ್ಸ್ ಎಂಬವರ ಮನೆಯಲ್ಲಿ ಕೋಟಬಿಹಾರಿನ ಮಹಾರಾಣಿಯವರ ಸುಮಾರು ೩ ಲಕ್ಷ ಮೌಲ್ಯದ ಆಭರಣಗಳು ಕಳವಾಗಿ ಹೋದವು. ರಾಣಿಯವರು ಚೆನ್ನಾಗಿ ನಿದ್ರಿಸುವಾಗ ಕಳ್ಳರು ಕೋಣೆಯನ್ನು ಹೊಕ್ಕು ಆಭರಣಗಳ ಪೆಟ್ಟಿಗೆಗಳನ್ನು ಕದ್ದೊಯ್ದರು. ಪ್ರಾತಃಕಾಲ ಮೂರುವರೆ ಘಂಟೆಯ ಸಮಯ ಮಹಾರಾಣಿಯು ಪೈವೋಲೀನಾದರೂ ಆಭರಣಗಳಿವೆಯೋ ಎಂದು ಕಳ್ಳರು ಬಂದು ಹುಡುಕುವಾಗ ಮಹಾರಾಣಿಗೆ ಎಚ್ಚರವಾಯಿತು. ಗಟ್ಟಿಯಾಗಿ, ಇತರರನ್ನು ಕೂಗಿದರು. ಆದರೆ ಅಷ್ಟು ಹೊತ್ತಿನೊಳಗೆ ಕಳ್ಳರು ಪಲಾಯನ ಮಾಡಿದರು.

— ಅಹಮದಾಬಾದಿನ ಬಸ್ಸು ಮತ್ತು ಟೇಕ್ಸಿ ಡ್ರೈವರರು ಒಮ್ಮೆಲೇ ಮುಷ್ಕರವನ್ನು ಆಚರಿಸಿದರು. ನಿಷ್ಕಾರಣವಾಗಿ ಪೋಲೀಸರು ಆಗಾಗ ಅವರನ್ನು ಹಿಡಿದು ಚಾರ್ಜು ಮಾಡುತ್ತಿರುವುದೇ ಅವರ ದೂರು. ರಾಜಿಯಾಗುವ ಸಲುವಾಗಿ ಡಿಪ್ಯುಟಿ ಪೋಲೀಸ್ ಸುಪರಿಂಟೆಂಡೆಂಟರವರು ಪ್ರಯತ್ನಿಸುತ್ತಿರುವರು. ಆದರೂ ಮುಷ್ಕರವು ಮುಂದರಿಯುತ್ತಲೇ ಇದೆ.

— ಜಿ. ಐ. ಪಿ. ರೈಲುವೆಯ ಅಸಿಸ್ಟೆಂಟ ಟ್ರೆಫಿಕ್ ಮೇನೇಜರನು ಅಲಕ್ಷ್ಯದಿಂದ ಮುಂಬಾಯಿ ಪಟ್ಟಣದೊಳಗೆ ಮೋಟಾರನ್ನೋಡಿಸಿ ಒಬ್ಬ ಪಾರ್ಸಿಯ ಮರಣಕ್ಕೆ ಕಾರಣನಾದುದರಿಂದ ಮೆಜಿಸ್ಟ್ರೇಟರು ಆತನಿಗೆ ಒಂದು ಸಾವಿರ ರೂಪಾಯಿಗಳ ಜುರ್ಮಾನೆಯನ್ನು ವಿಧಿಸಿರುವರು. ಜುರ್ಮಾನೆಯ ಅರೆವಾಸಿಯು ಮೃತ ಪಾರ್ಸಿಯ ಸಂಬಂಧಿಕರಿಗೆ ದೊರಕುವುದು.

— ದಕ್ಷಿಣ ಆಫ್ರಿಕದಿಂದ ಹಿಂತಿರುಗಿದ ಶ್ರೀ ಶ್ರೀನಿವಾಸ ಶಾಸ್ತ್ರಿಯವರಿಗೆ ಮುಂಬಾಯಿ ನಗರ ನಿವಾಸಿಗಳು ಚೆನ್ನಾಗಿ ಸ್ವಾಗತವನ್ನಿತ್ತರು.

— ಗುಜರಾಥ ಕೋಲೆಜು ದಿನಾಚರಣೆಯ ಸಮಯದಲ್ಲಿ ಶಾಲೆಗೆ ಬಾರದಿದ್ದ ಕೆಲವು ವಿದ್ಯಾರ್ಥಿಗಳ ಸ್ಕಾಲರಶಿಪ್ಪನ್ನು ವಜಾಮಾಡಬೇಕಾಗಿ ಶಾಲಾ ಪ್ರಿನ್ಸಿಪಾಲರು ಆತನ ಬೋರ್ಡಿಗೆ ಬರೆದುದರ ಸಲುವಾಗಿ ಅಲ್ಲಿನ ವಿದ್ಯಾರ್ಥಿಗಳು ೫ ದಿನಗಳ ವರೆಗೆ ಮುಷ್ಕರವನ್ನು ಆಚರಿಸಿದರು. ಒಂದು ಸಭೆಯು ನಡೆದು ಇನ್ನು ಮುಂದೆ ಕಾರ್ಯ ಆಗುವವರೆಗೆ ಮಕ್ಕಳ ಹೆತ್ತವರು ಮಕ್ಕಳನ್ನು ಶಾಲೆಗೆ ಸರ್ವಥಾ ಕಳುಹಿಸಬಾರದೆಂದು ನಿರ್ಣಯವಾಯಿತು.

— ಲಾಹೋರಿನಲ್ಲಿ ಕಳೆದವಾರ ಭಯಂಕರವಾದ ಬೆಂಕಿಯುಂಟಾಗಿ ಹಲವು ಲಕ್ಷ ರೂಪಾಯಿಗಳ ನಷ್ಟವುಂಟಾಯಿತು. ಎರಡು ಫಾಯರ್ ಇಂಜಿನುಗಳು ಬಹುವಾಗಿ ಪ್ರಯತ್ನಿಸಿ ಬೆಂಕಿಯನ್ನು ನಂದಿಸಿದವು. ಬೆಂಕಿಯು ಯಾವ ಕಾರಣದಿಂದ ಉಂಟಾಯಿತೆಂದು ತಿಳಿದು ಬರುವುದಿಲ್ಲ.

— ಮ್ಯಾಸೂರಿನವರ ಅಧ್ಯಕ್ಷತೆಯಲ್ಲಿ ಡಿಲ್ಲಿಯಲ್ಲಿ ಚೇಂಬರ್ ಓಫ್ ಪ್ರಿನ್ಸಸ್ ಇವರ ಸಭೆಯು ಜರಗಿತು. ಹಿಂದೂಸ್ಥಾನದ ಎಲ್ಲ ರಾಜರುಗಳ ಪೈಕಿಯ ಕುರಿತಾಗಿ ವಿಚಾರಣೆ ನಡಿಸಲು ಒಂದು ಕಮಿಟಿಯನ್ನು ನೇಮಿಸಬೇಕೆಂದು ಬಿಕಾನೀರಿನ ಮಹಾರಾಜರು ಒಂದು ಠರಾವನ್ನು ಮುಂದಕ್ಕೆ ತಂದರು. ಈ ಕಮಿಟಿಗೆ ಚೆನ್ಸಲರ್, ಕಾಶ್ಮೀರದ ಮಹಾರಾಜರು, ಭೂಪಾಲು, ನವನಗರ, ಮತ್ತು ಬಿಕಾನೀರದ ರಾಜರು ಇವರೇ ಮೊದಲಾದವರು ಮೆಂಬರರಾಗಬೇಕೆಂದೂ ಅವರು ಸೂಚಿಸಿದರು.

— ನರಸಾಪುರ, ತಾನಕು, ಮತ್ತು ಭೀಮಾವರ ತಾಲೂಕುಗಳ ಪೋಸ್ಟುಮೇದಿ ರನ್ನರ್ ಮತ್ತು ಕ್ಲೇಕ್ ಒವರ್‌ಸಿಯರರ ಪರಿಷದವು ನರಸಾಪುರದಲ್ಲಿ ಜರಗಿತು. ಪೋಸ್ಟಾಫೀಸುಗಳ ಡ್ಯಾರೆಕ್ಟರ್ ಜನರಲರಿಂದ ಸೆಂಕ್ಷನಾದ ಅವರ ಕೇಳುವಿಕೆಗಳನ್ನು ಇಲಾಖೆಯವರು ಜ್ಯಾಂಗೆ ತರಬೇಕೆಂಬುದೇ ಅವರ ಕೂಡುವಿಕೆಯ ಉದ್ದೇಶವಾಗಿದ್ದಿತು. ಪ್ರತಿಯೊಬ್ಬ ಪೋಸ್ಟಮೇದಿಯ ಬೀಟು, ದಿನಕ್ಕೆ ೧೦ ಮೈಲುಗಳಿಗೆ ಮೀರಬಾರದು, ಅವರಿಗೆ ೨ ದಿನಗಳ ಕೇಜುವಲ್ ರಜೆಯನ್ನು ಕೊಡಿಸಬೇಕು, ಅವರ ಮನೆಬಾಡಿಗೆ ಕೊಡಿಸಬೇಕು, ಪೋಸ್ಟುಮೇದಿಗಳಿಗೆ ಕಡಿಮೆಯೋಗ್ಯತೆಯ ಕ್ಲಾರ್ಕ ಕೆಲಸವನ್ನು ಕ್ರಮೇಣ ಕೊಡಿಸಬೇಕು, ದೊಡ್ಡ ಸಬ್ ಆಫೀಸುಗಳ ಟಪ್ಪಾಲು ಪೇದೆಗಳಿಗೆ ಯುನಿಫೋರ್ಮು ಉಡಿಗೆಗಳನ್ನು ಒದಗಿಸಬೇಕು, ಎಂಬುದೇ ಅಲ್ಲಿ ಮಂಜೂರಾದ ಠರಾವುಗಳು,

— ಮಹಾತ್ಮಾ ಗಾಂಧಿಯವರು ಕಳೆದ ಶನಿವಾರ ಡಿಲ್ಲಿಯನ್ನು ಸಂದರ್ಶಿಸಿದರು. ಡಿಲ್ಲಿಯಲ್ಲಿ ಅವರನ್ನು ಪಂಡಿತ ಮೋತಿಲಾಲ, ಮದನ ಮೋಹನ ಮಾಲವೀಯ, ಜವಾಹಿರಲಾಲ ನೆಹರು, ಮೌಲಾನಾ ಅಬುಲ್ ಕಲಮ್ ಅಜದ್ ಮೊದಲಾದವರು ಎದುರುಗೊಂಡರು. ಅವರು ಶ್ರೀ ವಿ. ಜೆ. ಪಟೇಲರ ಮನೆಯಲ್ಲಿ ಇಳಕೊಂಡರು.

— ನಾಗಪುರದಲ್ಲಿ ಸೈಮನ್ ಕಮಿಶನು ಬರುವ ಮೊದಲು ಒಂದು ರಾಜಕೀಯ ಪರಿಷದವು ನಡೆಯುವದು. ಇದು ಬರುವ ತಿಂಗಳ ೯ ಮತ್ತು ೧೦ನೇ ತಾರೀಕುಗಳ ದಿನ ನಡೆಯುವುದು. ಅದಕ್ಕಾಗಿ ಒಂದು ಸ್ವಾಗತ ಮಂಡಲವು ತಯಾರಿಸಲ್ಪಟ್ಟಿರುವುದು. ಪಂಡಿತ ಜವಾಹಿರಲಾಲ ನೆಹರುರವರು ಅಧ್ಯಕ್ಷತನಕ್ಕೆ ಆರಿಸಲ್ಪಟ್ಟಿರುವರು.

— ಮೈಸೂರಿನ ದಿವಾನರು ಡಿಲ್ಲಿಗೆ ಹೋಗಿದ್ದರು. ಅವರನ್ನಲ್ಲಿ ಬಹು ಸಂಭ್ರಮದಿಂದ ಸ್ವಾಗತಿಸಿದರು. ಸುಮಾರು ೩೦೦ ಜನ ಅತಿಥಿಗಳು ಬಂದಿದ್ದರು.

— ಅಲಿಗಾರದಲ್ಲಿ ಕೆಲವು ದಿನಗಳ ಹಿಂದೆ ಹಿಂದೂ ಮುಸಲ್ಮಾನರ ಜಗಳವು ನಡೆಯಿತು. ಮೊದಲು ಚಿಕ್ಕ ಚಿಕ್ಕ ಹುಡುಗರೊಳಗೆ ಜಗಳವು ನಡೆಯಿತಾದರೂ ಕೊನೆಗದು ಪ್ರಚಂಡವಾಗಿ ಬೆಳೆಯಿತು. ಸುಮಾರು ೨೭ ಮಂದಿ ಜಖಮು ಹೊಂದಿದರು. ಆದರೆ ಸಕಾಲದಲ್ಲಿ ಪೋಲೀಸರು ಬಂದುದರಿಂದ ಜಗಳವು ಅಷ್ಟೊಂದು ವಿಪರೀತವಾಗಿ ಬೆಳೆಯಲಿಲ್ಲ.

— ಮುಂಬಾಯಿಯ ಪರೇಲಿನಲ್ಲಿರುವ ಜೇಕಬ್ ಸೆಸ್ಸುನ್ ನೂಲುವ ಗಿರಣಿಗೆ ಬೆಂಕಿತಾಗಿದುದನ್ನು ಬಹಳ ಕಷ್ಟದಿಂದ ನಂದಿಸಲಾಯಿತು. ನಷ್ಟವು ಸುಮಾರು ಒಂದು ಲಕ್ಷವೆಂದು ಅಂದಾಜು ಮಾಡಲಾಗಿಯದೆ. ಆದರೆ ಕಟ್ಟಡವನ್ನು ಇನ್ಶೂರು ಮಾಡಿರುವರಂತೆ.

— ಮುಂಬಾಯಿ ಕೌನ್ಸಿಲಿನ ಅಧಿವೇಶನದಲ್ಲಿ ಲಾಲಾಜಿಯವರ ನಿಧನದ ವಿಷಯವಾಗಿ ದುಃಖವನ್ನು ವ್ಯಕ್ತಗೊಳಿಸಿ ಎಲ್ಲ ಪಕ್ಷದವರೂ ಕೂಡಿ ಒಂದು ಠರಾವನ್ನು ಮಂಜೂರು ಮಾಡಿದರು.

— ಬೇಲೂರಿನ ರೈಲುವೇ ಅಪಘಾತದ ಸಂಬಂಧದಲ್ಲಿ "ಫೋರ್ವರ್ಡ" ಪತ್ರಿಕೆಯಲ್ಲಿ ಲೇಖನವನ್ನು ಬರೆದುದಕ್ಕೆ ಸಂಪಾದಕರಿಗೆ ಮೂರು ತಿಂಗಳ ಸಾದಾ ಸಜೆ ಮತ್ತು ಒಂದು ಸಾವಿರ ರೂಪಾಯಿ ಜುರ್ಮಾನೆ, ಮುದ್ರಕರಿಗೆ ೧೦೦೦ ರೂಪಾಯಿ ಜುರ್ಮಾನೆ ವಿಧಿಸಲಾಗಿತ್ತು. ಆದರೆ ಈ ಶಿಕ್ಷೆಯನ್ನು ಹೆಚ್ಚಿಸಿರುವರು. ಸಂಪಾದಕರಿಗೆ ಆರು ತಿಂಗಳ ಸಾದಾ ಸಜೆ ಮತ್ತು ಒಂದು ಸಾವಿರ ರೂಪಾಯಿ ಜುರ್ಮಾನೆ, ಮುದ್ರಕರಿಗೆ ಎರಡು ತಿಂಗಳ ಸಾದಾ ಸಜೆ ಮತ್ತು ಒಂದು ಸಾವಿರ ರೂಪಾಯಿ ಜುರ್ಮಾನೆ.

— ವಿದೇಶಿ ವಸ್ತ್ರ ಬಹಿಷ್ಕಾರ ಕಮಿಟಿಯವರಿಗೆ ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಕಮಿಟಿಯವರು ೫ ಸಾವಿರ ರೂಪಾಯಿಗಳ ಗ್ರೇಂಟನ್ನು ಕೊಟ್ಟಿರುವರು.

ದಕ್ಷಿಣ ಕನ್ನಡ.

ಮಂಗಳೂರು — ಚತುರ್ಥ ಕರ್ನಾಟಕ ಪ್ರಾಂತಿಕ ಆಯುರ್ವೇದ ಪರಿಷತ್ತಿನ ಸ್ವಾಗತ ಸಮಿತಿಯ ಸಭೆಯೊಂದು ಇದೇ ಬರುವ ೨೭ನೇ ಬುಧವಾರ ಸಾಯಂ ಘಂಟೆ ೬ಕ್ಕೆ ಕೆನರಾ ಹೈಸ್ಕೂಲಿನ ಧ್ರುವ ನೇಂದ್ರ ಸಭಾಸದನದಲ್ಲಿ ಜರಗುವದು. ಅಂದಿನ ಸಭೆಗೆ ಸರ್ವ ಮಂಬರರೂ ಬರಬೇಕಾಗಿ ಗೌರವ ಕಾರ್ಯದರ್ಶಿಯವರಾದ ಶ್ರೀ ಎನ್. ಮಹಾಬಲ ಶೆಟ್ಟಿ ಮತ್ತು ಶ್ರೀ ಬಿ ಆರ್. ಹರಿದಾಸ ಇವರು ತಿಳಿಸುತ್ತಾರೆ. ಸಭೆಯಲ್ಲಿ - ವರದಿಯ ಓದುವಿಕೆ. ಲೆಕ್ಕಪತ್ರಗಳನ್ನು ಮುಂದಿಡುವಿಕೆ, ಪರಿಷತ್ತು ಮತ್ತು ಪ್ರದರ್ಶನಕ್ಕೆ ಸಂಬಂಧಪಟ್ಟ ನ್ಯಾಯವಾದಾವುದೇ ಸಂಗತಿಗಳು ಆಗತ್ಯವಿದ್ದಲ್ಲಿ ಅವನ್ನು ಮುಂದಕ್ಕೆ ತರುವಿಕೆ, ಸ್ವಾಗತ ಕಮಿಟಿಯನ್ನು ಮುಕ್ತಾಯಗೊಳಿಸುವ ವಿಚಾರ, ಇವೇ ಸಭೆಯ ಕಾರ್ಯಕ್ರಮಗಳಾಗಿವೆ.

ದಿ ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್ ಇವುಗಳ ಸಹಾಯಾರ್ಥವಾಗಿ ತೆರೆಯಲ್ಪಟ್ಟ ಲೋಟರಿಯು ಇದೇ ೨೪ನೇ ತಾರೀಕಿಗೆ ತೆಗೆಯಲ್ಪಡುವುದು. ಈ ಲೋಟರಿಯಲ್ಲಿ ಜಯಿಸಿದ ಹಣದ ದಾವಣಿಯಿಂದ ಇನಾಮುಗಳನ್ನು ಈ ಕೆಳಗಿನಂತೆ ನಿರ್ಣಯಿಸಿರುವರು. ಮೊದಲನೆ ಇನಾಮು ರೂ. ೫,೫೦೦, ಎರಡನೆಯ ಇನಾಮು ೨೨೫೦, ರೂಪಾಯಿ ೫೦೦ರ ೨ ಇನಾಮುಗಳು, ರೂ. ೨೫೦ರ ಮೂರು ಇನಾಮುಗಳು, ರೂ ೧೦೦ರ ಆರು ಇನಾಮುಗಳು, ರೂ. ೫೦ರ ೧೦ ಇನಾಮುಗಳು, ರೂ. ೨೫ರ ೨೦ ಇನಾಮುಗಳು, ರೂ ೨೦ರ ೪೫ ಇನಾಮುಗಳು, ರೂ ೧೦ರ ೩೫೦ ಇನಾಮುಗಳು, ರೂ. ೫ರ ೯೦೦ ಇನಾಮುಗಳು.

ಎಂಪಾಯರ್ ಓಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿಯು ಒಂದು ಶಾಖೆಯು ಮಂಗಳೂರಲ್ಲಿ ಹಂಪನಕಟ್ಟೆಯಲ್ಲಿರುವ ಸದಾನಂದ ಬಿಲ್ಡಿಂಗ್ಸಿನಲ್ಲಿ ಇದೇ ಬರುವ ಮಾರ್ಚ ತಾ ೨೦ರಂದು ತೆರೆಯಲ್ಪಡುವದಾಗಿ ಶ್ರೀಯುತ ಗಣಪತಿ ಹೆಗ್ಗಡೆ, ಕಾರ್ಕಳ ಇವರು ಜೀವವಿಮೆ ಗೆ ಪಾಲಿಸಿ ಸುದ ಮಹನೀಯರಲ್ಲಿ ವಿನಂತಿಸಿಕೊಳ್ಳುತ್ತಾರೆ.

ಮಹಾ ಶಿವರಾತ್ರಿಯ ಸಂಬಂಧ ದಿ ಬೊಂಬಾಯ್ ಸ್ಟೀಮ್ ನೆವಿಗೇಶನ್ ಕಂಪೆನಿಯು ಮಂಗಳೂರಿನಿಂದ ತಾ. ೪ನೇ ಮತ್ತು ೮ನೇ ಮಾರ್ಚ ದಿವಸಗಳಲ್ಲಿ ಹೊರಡುವ ಸ್ಟೀಮರುಗಳು ತದಡಿ ಬಂದರಕ್ಕೆ ಹೋಗುತ್ತವೆ. ಅದಲ್ಲದೆ ವಾಪಾಸು ಬರುವಾಗ ಸಹಾ ಅನುಕೂಲವಾದ ಆಗಬೋಟುಗಳು ಇರುವವು. ರಿಟರ್ನ ಟಿಕೇಟುಗಳಿಗೆ ದರ ಕಡಿಮೆಮಾಡಿರುತ್ತದೆ.

ಕನ್ನಡನಾಡಿನ ನುಡಿ, ಸಂಸ್ಕೃತಿ, ಕಲೆಗಳ ಏಳಿಗೆಗಾಗಿ ಮಂಗಳೂರಿನಲ್ಲಿ ಸ್ಥಾಪಿಸಬೇಕೆಂದಾದ "ಕರ್ನಾಟಕ ಸಂಘ"ದ ಪ್ರಾರಂಭೋತ್ಸವವು ಇದೇ ಬರುವ ಆದಿತ್ಯವಾರ ತಾ. ೨೪ನೇ ಫೆಬ್ರವರಿ ೧೯೨೯ ಸಾಯಂಕಾಲ ೫ ಗಂಟೆಗೆ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಶ್ರೀಯುತ ಸಿ. ಆರ್. ಕೃಷ್ಣರಾವ್, ಬಿ. ಎ. ಬಿ ಎಲ್ ಡಿಸ್ಟ್ರಿಕ್ಟ್ ಮುನ್ಸಿಫ್, ಇವರ ಅಧ್ಯಕ್ಷತೆಯಲ್ಲಿ ಜರಗುವದು.

ಮಂಗಳೂರಿನಿಂದ ಪೇಶಾವರಕ್ಕೆ ಸೀದಾ ಟ್ರೈನ್, ಗ್ರೇಟ್ ಇಂಡಿಯನ್ ಪೆನಿನ್ಸುಲಾರ್ ರೈಲುವೇ ಕಂಪನಿಯವರಿಂದ ಇತರ ಕಂಪೆನಿಗಳೊಂದಿಗೆ ಕನೆಕ್ಷನು ಇದ್ದು, ತಾ. ೧ನೇ ಎಪ್ರೀಲಿನಿಂದ ಪ್ರಾರಂಭಿಸಲ್ಪಡುವುದು. ಈ ಟ್ರೈನು ಮಂಗಳೂರಿನಿಂದ ಹೊರಟು ಮದರಾಸು, ಬೆಜವಾಡ ಬಾಲಷಾಪುರ್, ನಾಗಪುರ್, ಇಟಾರ್ಸಿ, ಡಿಲ್ಲಿ ದಾರಿಯಾಗಿ ಪೇಶಾವರಕ್ಕೆ ತಲಪುವದು.

ಬೋಳಾರ ಹಳೆಕೋಟೆ ಮಾರಿಯಮ್ಮ ದೇವಸ್ಥಾನದಲ್ಲಿ ಸ್ಥಳರಿವಾಜು ಸಾಂಪ್ರದಾಯದಂತೆ ನಡೆಯಲಿರುವ ಮಹಾ ಪೂಜಾ ಮಹೋತ್ಸವವು ತಾ. ೨೬—೨—೨೯ನೇ ಮಂಗಳವಾರ ಪ್ರಾರಂಭವಾಗಿ ೫—೪—೨೯ನೇ ಮಂಗಳವಾರ ವರೇಗೆ ನಡೆಯಲಿರುವುದು.

ಈ ಸಮ್ಮಂಧ ಪದ್ರಿ ಮಾರಿಗುಡಿಯ ಮುಹೂರ್ತ ಕಂಭವನ್ನು ಕಳೆದ ಮಂಗಳವಾರ ತಾ. ೧೯—೨—೨೯ನೇ ಬೆಳಗ್ಗೆ ಗಂಟೆ ೧೦ಕ್ಕೆ ಡೋಂಗರಕೇರಿ ಬಸವನಗುಡಿ ಕಾಮೀರ ಪಳ್ಳಿಯ ಮಾರ್ಗವಾಗಿ ಸುಮಾರು ಹಂಗ್ಕೆ ಮುಕ್ತದ ಮೋಗವೀರರು ಎತ್ತಿಕೊಂಡು ವಾದ್ಯ ಘೋಷನೆ ಮುಂತಾದವುಗಳಿಂದ ಒಯ್ದು ನಿರ್ವಿಘ್ನವಾಗಿ ಎಲ್ಲಾ ತರದ ಆಯುಧೋತ್ಸವ ದೊಡನೆ ಮಾರಿಗುಡಿಯಲ್ಲಿ ಒಪ್ಪಿಸಿದರು.

ಮಂಗಳೂರು ಶ್ರೀ ವೆಂಕಟರಮಣ ದೇವಸ್ಥಾನದ ವರ್ಷಂಪ್ರತಿ ನಡೆಯುವ ರಥೋತ್ಸವವು ಈ ವರ್ಷ ವಿಜೃಂಭಣೆಯಿಂದ ನಿರ್ವಿಘ್ನವಾಗಿ ನಡೆಯಿತು.

ಹೊಸದುರ್ಗ — ಇಲ್ಲಿಯ ಗವರ್ನಮೆಂಟ್ ಲೇಬರ್ ಡಿಪಾರ್ಟ್‌ಮೆಂಟ್ ಆದಿದ್ರಾವಿಡ ಎಲಿಮೆಂಟರಿ ಶಾಲೆಗೆ ತಾ. ೧೬—೨—೨೯ನೇ ಶನಿವಾರ ದಿವಸ ಉಪ್ಪಿನಂಗಡಿ ತಾಲೂಕಿನ ಜಮೀನ್‌ದಾರರವರಾದ ಮಹಾರಾಜಶ್ರೀ ಅರಿಯಡ್ಕ ಸುಬ್ಬಯ್ಯರೈಯವರೂ, ಮತ್ತು ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ ಅಧ್ಯಾಪಕರಾದ ರಾ. ನಾರಾಯಣ ನ್ಯಾತರವರೂ, ಭಕ್ತನೆ ಪದ್ರಿ ಶಾಲೆಯನ್ನು ಸಂದರ್ಶಿಸಿ ವಿದ್ಯಾರ್ಥಿಗಳ ಓದು ಬರಹವನ್ನೂ, ಅಭಿನಯ ಗೀತಗಳನ್ನೂ, ಕೋಲಾಟವನ್ನೂ ಕೇಳಿ ಸಂತೋಷಭರಿತರಾಗಿ ಪದ್ರಿ ಶಾಲಾ ಮುಖ್ಯ ಅಧ್ಯಾಪಕರಾದ ಎ. ಇಬ್ರಾಹಿಂ ಸಾಹೇಬರ ವಶ ಕೊಟ್ಟ ಇನ್ನೊಂದು ಸಲ ಪದ್ರಿ ವಿದ್ಯಾರ್ಥಿಗಳಿಗೆ ವಸ್ತ್ರ ದಾನವನ್ನು ಮಾಡುವೆನು ಎಂಬುದಾಗಿ ಹೇಳಿ ಹೋಗಿರುತ್ತಾರೆ. ಇವರಂತೆಯೇ ಬಡ ಜನಾಂಗದವರಾದ ಆದಿದ್ರಾವಿಡರನ್ನು ಸುಧಾರಣೆಗೆ ತರುವ ಬಗ್ಗೆ ಮೇಲ್ ಜಾತಿ ಎನ್ನಿಸಿಕೊಂಡ ಮಹಾನುಭಾವರುಗಳು ಆಗಿಂದಾಗ್ಗೆ ಪದ್ರಿ ಶಾಲೆಗಳನ್ನು ಸಂದರ್ಶಿಸಬೇಕೆಂದು ಕೋರುತ್ತೇನೆ.

ಗುರುಪುರ — ಇಲ್ಲಿ ೩ನೇ ವರ್ಷದ ಆರೋಗ್ಯ ಮತ್ತು ಶಿಶು ಸಪ್ತಾಹ ಸಮಾರಂಭವು "ಶ್ರೀ" ಗುರುಪುರ ಜಂಗಮ ಮಠದ ಚೆನ್ನ ಬಸಪ್ಪ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ತಾ. ೩—೨—೨೯ನೇ ಆದಿತ್ಯವಾರ ದಿನ ೨ ಘಂಟೆಗೆ ಜಂಗಮ ಮಠದ ಎದುರುಗಡೆ ರಚಿಸಿದ ಸಭಾಮಂಟಪದಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಈ ಸಮಾರಂಭಕ್ಕೆ ಮ. ರಾ. ಜಿಲ್ಲಾ ಹೆಲ್ತ್ ಆಫೀಸರ್, ಮಂಗಳೂರು ರೇಂಜ್ ಹೆಲ್ತ್ ಇನ್ಸ್‌ಪೆಕ್ಟರ್, ಗುರುಪುರ ಡಿವಿಜನ್ ರೆವಿನ್ಯೂ ಇನ್ಸ್‌ಪೆಕ್ಟರ್, ಪುತ್ತಿಗೆ ರೆವಿನ್ಯೂ ಇನ್ಸ್‌ಪೆಕ್ಟರರೇ ಮೊದಲಾದ ಆಫೀಸರರೂ, ಗುರುಪುರ ಮಠದ ಅದಾಲತದಾರ್, ವೀರಯ್ಯ ಪಟೇಲರೇ ಮುಂತಾದ ಗ್ರಾಮಸ್ಥರೂ, ನೆರೆಕರೆಯ ಗ್ರಾಮಸ್ಥರೂ, ಹೆಂಗಸರೂ ಗುರುಪುರ ಹಿಂದೂ, ಮಾಪಿಳ್ಳೆ, ಸೋಮನಾಥ, ಆದಿದ್ರಾವಿಡ, ಗುರುಪುರ ಬೋರ್ಡು ಹುಡುಗಿಯರ ಕೂಡಾ ನಾಲ್ಕು ಶಾಲೆಗಳ ಉಪಾಧ್ಯಾಯ, ಉಪಾಧ್ಯಾಯಿನಿಯರೂ, ಬಾಲಕ ಬಾಲಕಿಯರೂ ಕೂಡಿ ಸುಮಾರು ೬೦೦ ಮಂದಿ ನೆರೆದಿದ್ದರು. ಪೂಲಿ ಮತ್ತು ಅಡ್ಡೂರು ಶಾಲೆಗಳ ಉಪಾಧ್ಯಾಯರೂ, ವಿದ್ಯಾರ್ಥಿಗಳೂ ಈ ಸಮಾರಂಭಕ್ಕೆ ಭಾಗಿಗಳಾಗಿದ್ದರು. ಸಭಾ ಕಾರ್ಯಕ್ರಮದಂತೆ ಗ್ರಾಮಸ್ಥರ ಕೂಡುವಿಕೆಯಿಂದ ಮ. ರಾ. ಜಿಲ್ಲಾ ಹೆಲ್ತ್ ಆಫೀಸರರವರು ಗುರುಪುರ ಹಿಂದೂ ಎಲಿಮೆಂಟರಿ ಶಾಲೆಯ ಮುನೇಜರ್ ರವರ ಮುಖ್ಯೇನ ತಯಾರಿಸಿದ ಚಿತ್ರ ವ ವಸ್ತು ಪ್ರದರ್ಶನ ಸಂದರ್ಶನ, ಮಾಡಿದ ನಂತರ ಆರೋಗ್ಯ ಮತ್ತು ಶಿಶುಸಪ್ತಾಹ ಸಮಾರಂಭವನ್ನು ಆಚರಿಸುವ ಅವಶ್ಯಕತೆಯ ಕುರಿತು ಹೆಲ್ತ್ ಆಫೀಸರರು ಸುಂದರವಾದ ಭಾಷಣವನ್ನು ಕೊಟ್ಟರು. ತರುವಾಯ ಪೂಲಿ ಶಾಲೆಯ ಮೆನೇಜರ್ ರಾ. ಟಿ. ಮುಸ್. ರಾಯರಿಂದ ರಚಿತವಾದ ಆರೋಗ್ಯ ಸಂಬಂಧ ಪದ್ರಿ ಶಾಲೆಯ ಮಕ್ಕಳಿಂದ ಗೀತ ಸಂಭಾಷಣ, ಹಿಂದೂ ಶಾಲಾ ಮಕ್ಕಳಿಂದ ಆರೋಗ್ಯ ಚಂದ್ರಿಕೆಯಲ್ಲಿ ಪ್ರಕಟವಾದ ಆರೋಗ್ಯ ಗೀತಾ ಹಾಡೋಣ, ತದನಂತರ ಶಿಶುಪ್ರದರ್ಶನವಾಗಿ ಉತ್ತಮವಾದ ಮಗುವಿಗೆ ಹೆಲ್ತ್ ಆಫೀಸರರವರು ೧ನೇ ಇನಾಮನ್ನು ಕೊಟ್ಟು ಬಳಿಕ ಉಳಿದ ಆರೋಗ್ಯದಲ್ಲಿರುವ ಮಕ್ಕಳಿಗೆ ರೆವಿನ್ಯೂ ಇನ್ಸ್‌ಪೆಕ್ಟರರೇ ಮೊದಲಾದ ಸಭಿಕರು ಇನಾಮು ಹಂಚಿದ ತರುವಾಯ, ಹೊಟೆಲು ಶುಚಿತ್ವದ ಕುರಿತು ರಾ. ಅಣ್ಣಪ್ಪ ಶಮ್ಮಯವರಿಗೆ ಒಂದು ಸರ್ಟಿಫಿಕೇಟು ಕೊಡುವುದಾಗಿ ಹೆಲ್ತ್ ಆಫೀಸರರು ಸೂಚಿಸಿದ ತರುವಾಯ, ಕಳೆದ ವರ್ಷದ ಮಂಗಳೂರು ರೇಂಜಿನಲ್ಲಿ ಗುರುಪುರ ಬೋರ್ಡು ಹುಡುಗಿಯರ ಶಾಲೆಯವರು ಉತ್ತಮ ರೀತಿಯಲ್ಲಿ ಈ ಸಮಾರಂಭವನ್ನು ಆಚರಿಸಿದ್ದಕ್ಕೋಸ್ಕರ ಪದ್ರಿ ಶಾಲೆಗೆ "ಫಸ್ಟ ಪ್ರೈಸಾಗಿ" ಒಂದು ಬೆಳ್ಳಿಯ ಕಪ್ಪನ್ನು ಕಳುಹಿಸಿದ್ದು ಕೊಟ್ಟ ಮೇಲೆ ತಾ. ೩—೩—೨೯ರಲ್ಲು ಜರಗಿದ ಪಂದ್ಯಾಟದಲ್ಲಿ ಗೆದ್ದ ಬಾಲಕ ಬಾಲಕಿಯರಿಗೆ ಇನಾಂ ಹಂಚಿದ ನಂತರ ಸಭಿಕರು ವ ಅಧ್ಯಕ್ಷರು ಭಾಷಣವಿತ್ತ ಬಳಿಕ ಸಭಾಸತ್ಕಾರವಾಗಿ ಸಭೆಯನ್ನು ಅಲಂಕರಿಸಿದ ಅಧ್ಯಕ್ಷರಿಗೂ ಸಭೆಗೆ ದಯೆಮಾಡಿಸಿದ್ದ ಮಹನೀಯರಿಗೂ, ಧನ್ಯವಾದಗಳನ್ನು ಅರ್ಪಿಸಿದ ತರುವಾಯ. ಎಲ್ಲರೂ ಪಾನ್ಸುಪಾರಿ ಪಡೆದು ಹಿಂದೂ ಶಾಲೆಗೆ ತೆರಳಿ ಅಲ್ಲಿಯ ಬಾಲಕರಿಂದ ನಟಿಸಲಾದ ಆರೋಗ್ಯ ಪ್ರಹಸನಗಳನ್ನು ನೋಡಿ ಉತ್ತಮ ನಟರಿಗೆ ಬಹುಮಾನವಿತ್ತು ಬಳಿಕ ಮ. ರಾ. ಹೆಲ್ತ್ ಇನ್ಸ್‌ಪೆಕ್ಟರರವರು ಮಾಯಾದೀಪ ಪ್ರದರ್ಶನವನ್ನು ತೋರಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಪಾಣೆಮಂಗಳೂರು — ಈ ಊರಿನವರು ಆರೋಗ್ಯ ವಾರವನ್ನು ೬ನೇ ೭ನೇ ತಾರೀಕಿಗೆ ಆಚರಿಸಿದರು. ಇಲ್ಲಿಯ ಊರಿನ ಗೌಡ ಸಾರಸ್ವತ ಹತ್ತು ಸಮಸ್ತರು ಬಹಳ ಚೆಲೋ ರೀತಿಯಲ್ಲಿ ನಡೆಸಿದರು.

ಬಂಟವಾಳ — ಇಲ್ಲಿ ಮೇ ಚಕ್ರಪಟ್ಟ ಎಂಬಲ್ಲಿ ಸೋಮವಾರ ರಾತ್ರಿ ಒಂದು ಜೀನಸಿನ ಅಂಗಡಿಗೆ ಬೆಂಕಿ ತಗಲಿ ಸುಮಾರು ೬೦೦ ರೂಪಾಯಿ ನಷ್ಟವಾಯಿತು.

ಉಡುಪಿ — ಇಲ್ಲಿಯ ಅನಂತೇಶ್ವರ ಶಾಲೆಯ ಟೀಚರ್ ಮುನೇಜರರಾಗಿದ್ದ ಶ್ರೀ ಉ. ಲಕ್ಷ್ಮೀನಾರಾಯಣ ಕಮ್ತಿಯವರು ಇದೇ ತಾ ೧೯—೨—೨೯ರಲ್ಲಿ ತನ್ನ ೫೫ನೇ ವಯಸ್ಸಿನಲ್ಲಿ ಅಕಾಲ ಮೃತ್ಯು ವಶರಾದರೆನ್ನಲು ತುಂಬಾ ವಿಷಾದವಾಗುತ್ತದೆ. ಮೃತರು ಸುಮಾರು ೩೦ ವರ್ಷಗಳಿಂದಲೂ ಇದೇ ಶಾಲೆಯ ಉಪಾಧ್ಯಾಯ ಮೇನೇಜರಾಗಿದ್ದುಕೊಂಡು, ಶಿಷ್ಯವರ್ಗದ ಭಕ್ತಿಗೂ ಹೆತ್ತವರ ಪ್ರೀತಿ ವಿಶ್ವಾಸಪಾತ್ರರಾಗಿದ್ದರು. ಇತ್ತಲಾಗೆ ತನ್ನ ಶಾಲಾಭಿವೃದ್ಧಿಗಾಗಿ ಉತ್ಸಾಹವನ್ನು ತೋರಿಸಲಾರಂಭಿಸಿದ್ದರು. ಅಷ್ಟರಲ್ಲಿ ... ಲಾರದ ನಿರ್ದಯನಾದ ಮೃತ್ಯುವು ಅವರನ್ನು ಹಾರಿಸಿಕೊಂಡಿತು. ಮೃತರ ಆತ್ಮಕ್ಕೆ ಶಾಂತಿ ದೊರಕಲಿ।

ಅಜೆಕಾರು — ಊರಲ್ಲಿ ಜಾನುವಾರು ... ಹಲವು ಕಡ ಗೋವುಗಳು ಸತ್ತುಹೋದವು. ... ವರೆ ದಿನಂಪ್ರತಿ ಗ್ರಾಮ ಉದ್ಯೋಗಸ್ಥರ ... ನರಿ ಆಫೀಸರರು ಈ ಕಡೆ ದೃಷ್ಟಿಯನ್ನು ... ಇನ್ನಾದರೂ ಅವರ ಸವಾರಿಯು ಇತ್ತ ... ವನ್ನುಳಿಸುವ ಪುಣ್ಯವು ಬರುವುದಲ್ಲವೆ.

[illegible] ವರ್ತಮಾನ [illegible]

							ಸೂರ್ಯ.	
ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಉ	ಅಸ್ತ
23	[illegible]	●	[illegible]	ಮಘಾ	[illegible]	[illegible]	6.53	6 37
24	[illegible]	[illegible]	[illegible]	ಪೂಫ	[illegible]	[illegible]	6 52	6.38
25	[illegible]	[illegible]	[illegible]	ಉತ್ತರಾ	[illegible]	[illegible]	6.52	6.38
26	[illegible]	[illegible]	[illegible]	ಹಸ್ತಾ	[illegible]	[illegible]	6 51	6.38
27	ಬುಧ	[illegible]	[illegible]	ಚಿತ್ರಾ	[illegible]	[illegible]	6 51	6.38
28	ಗುರು	[illegible]	[illegible]	ಸ್ವಾತಿ	[illegible]	[illegible]	6.50	6.39
1	ಶುಕ್ರ	[illegible]	[illegible]	ಸ್ವಾತಿ	[illegible]	[illegible]	6.49	6.38

ಮಂಗಳೂರಿನ ವಾಯುಸ್ಥಿತಿ.

ತಾರೀಖು. Date	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
15	87— 2	72— 3	—	—
16	87— 8	72— 9	—	—
17	90— 2	73—8	—	—
18	90— 0	74— 9	—	—
19	89— 2	74— 5	—	—
20	88— 3	71— 4	—	—
21	87— 9	74— 6	—	—
				124-77

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಅ.	ವರೆಗೆ ರೂ. ಅ.
ಹೊಸ ಮುಸ್ಕಿ ...	7– 2	7– 6
ಹೊಸ ಗುಡ್ಡು ...	6 – 4	6 – 8
ಹೊಸ ರಾಶಿ ...	5 – 8	6 – 2
ಊರ ಅಮ್ಲರ್ ಬೆಳ್ತಿಗೆ ...	6--12	7 – 4
ರಂಗೂನು ಬೆಳ್ತಿಗೆ ಗೋಣಿ ಗಳ್ಕೆ ...	12— 8	–
ಎಟ್ಟಿರು ಬೆಳ್ತಿಗೆ ಮುಡಿ ಗಳ್ಕೆ ...	6 – 4	6 –
ಗೋದಿ ಗೋಣಿ ಗಳ್ಕೆ ...	18 – 12	20 - 0
ಹುರುಳಿ ಗೋಣಿ ಗಳ್ಕೆ ..	7 – 4	9 4
ಕಡಲೆ ಗೋಣಿ ಗಳ್ಕೆ ...	14 – 8	15 8
ತೊಗರಿ ಗೋಣಿ ಗಳ್ಕೆ ...	14 – 0	15 – 0
ತೊಗರಿಬೇಳೆ ಗೋಣಿ ಗಳ್ಕೆ ...	18 – 8	17 0
ಉದ್ದು ಗೋಣಿ ಗಳ್ಕೆ ...	15 – 4	15 12
ಹೆಸರು ಗೋಣಿ ಗಳ್ಕೆ ...	14 – 0	14 8
ಊರು ಬೆಲ್ಲ ಖಂಡಿ ಗಳ್ಕೆ ...	52 – 0	68 0
ಉಪ್ಪು ಗೋಣಿ ಗಳ್ಕೆ ..	4 – 0	4 – 4
ಬೆಂಡ್ರು ಖಂಡಿ ಗಳ್ಕೆ ...	110 - 0	-
ಹೊಸ್ರು ಹಿಂಡಿ ಖಂಡಿ ಗಳ್ಕೆ ...	36 – 0	-
ಎಳ್ಳಿಂಡಿ ಖಂಡಿ ಗಳ್ಕೆ ...	45 – 0	
ಹೊಸ್ರು ಎಣ್ಣೆ ಮುಡಿ ಗಳ್ಕೆ ...	6 – 14	7 – 4
ಎಳ್ಳೆಣ್ಣೆ ಮುಡಿ ಗಳ್ಕೆ ...	7 – 12	8 4
ಚಮಣೆಎಣ್ಣೆ ಹಸ್ಲಿಗೆ ಗಳ್ಕೆ ...	7 – 2	7 - 4
ಮೋರಿಸ ಸಕ್ಕರೆ ಮುಡಿ ಗಳ್ಕೆ ...	3 – 4	3 8
ಹೊಸ ಮೆಣಸು ...	5 – 8	6 – 12
ಹಳ್ಳು ಊರ ಮೆಣಸಿನಕಾಯಿ ಮುಡಿ ಗಳ್ಕೆ	1 – 8	2 – 8
ಸಾಸಿವೆ ಮುಡಿ ಗಳ್ಕೆ ...	3 – 4	8 - 8
ಕೊತ್ತುಂಬರಿ ಮುಡಿ ಗಳ್ಕೆ ..	4 – 4	4 8
ನೇಟಿವ್ ಅಡಿ ಖಂಡಿ ಗಳ್ಕೆ ...	375 – 0	388 – 0
ಅಳಗೋಟು ಅಡಿಕೆ ಖಂಡಿ ಗಳ್ಕೆ ...	240 – 0	245 – 0
[illegible] ಖಂಡಿ ಗಳ್ಕೆ ...	529 – 0	524 - 0
[illegible] ಮುಡಿ ಗಳ್ಕೆ ...	60 – 0	65 –
[illegible] ಮುಡಿ ಗಳ್ಕೆ ...	3 – 8	
[illegible] ಗಳ್ಕೆ ...	40 – 0	42 – 8
[illegible] ಗಳ್ಕೆ ...	19 – 0	19 - 8
[illegible] ಮುಡಿ ಗಳ್ಕೆ ...	21 – 0	22 – 4
[illegible] ...	15 – 6	–
[illegible] ...	14 – 3	16 – 0
...	13–8–6	–
...	40 – 0	42 – 8

[illegible]! [illegible]!

ತಿಮ್ಮಪ್ಪ [illegible] [illegible]

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್, ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದೀಯ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ ಶ್ರೀ ವೈದ್ಯರತ್ನ ಪರಮೇಶ್ವರ [illegible] ಅವರ [illegible] ಅನುಭವಶಾಲಿಯಾದ [illegible] ವೈದ್ಯರಿಂದ [illegible] ಈ ಸ್ಥಾಪನೆಯಲ್ಲಿ ಸರ್ವ [illegible] ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲ್ಪಡುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, [illegible], ಮಾತ್ರೆ, [illegible] ಮುಂತಾದ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಗುತ್ತವೆ. [illegible] ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, [illegible], [illegible] [illegible] ಕ್ರಮ, ವೃತ್ತಿ [illegible] ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮುಕ್ತ [illegible] [illegible] ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು [illegible] ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವದಲ್ಲದೆ [illegible] ಸಂದರ್ಭ ಬೇಕಾದ ಸಂಗತಿಗಳಲ್ಲಿ ಕೂಡ [illegible] ಪತ್ರವ್ಯವಹಾರ ನಡಿಸಿದಲ್ಲಿ [illegible] ಕೊಡಲ್ಪಡುವುದಲ್ಲದೆ [illegible] [illegible] ಅವರ ಅಗತ್ಯದ ಮಟ್ಟಿಗೆ [illegible] ಕೊಡುವದರಲ್ಲೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ [illegible] ತಿಳಿಸುವದರಲ್ಲೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು [illegible] ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್, ಕಾಂಞಂಗಾಡ (ದ. ಕ.

[illegible] [illegible]

ತಯಾರಾಗಿದೆ [illegible] ತಯಾರಾಗಿವೆ!

[illegible], [illegible]

[illegible]

ಚಕ್ರರೋಲ್‌ಗಳು

ಮೂರು ಸ್ಟೈಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ | ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ [illegible] ಸಾರಸಂಗ್ರಹ ರೂಪವಾಗಿರುವ [illegible] ಭಾಷೆಗಳಲ್ಲಿ ಛಾಪಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಪೂರ್ತಿಯಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧಿಗಳಿಗನುಸಾರವಾಗಿ ನಡೆಯುವದೇ ದಾರಿ. ಹಾಗಿಲ್ಲದಿದ್ದರೆ ಅದರಲ್ಲಿ ಹೇಳಿರುವ ಉಪಾಯವನ್ನು ಮಾಡುವದು ಮತ್ತೊಂದೇ ದಾರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಜೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ, ಸುಂದರವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ ನಮ್ಮ ಲೋಕಪ್ರಸಿದ್ಧವಾದ ಟಾನಿಕ್ಕೆಂಬುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು.

ಈ ಮಾತ್ರೆಗಳು ಮಲಬಂಧ ಮೊದಲು ನಪುಂಸಕತ್ವದವರೆಗಿನ ವ್ಯಾಧಿಗಳನ್ನು ಪರಿಹರಿಸುತ್ತವೆ.

ಡಿ. ಊಲನ್ ಮಾರ್ಟ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1921ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1860ನೇ ಇಸವಿಯ XXIನೇ ಆಕ್ಟಿನನುಸಾರವಾಗಿ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು – ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಕೂಡ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ 'ಫಾರ್ಮಸಿ'ಯಲ್ಲಿ ಶಾಸ್ತ್ರೋಕ್ತ ತಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟಮಾಡಿ ಹುಟ್ಟುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತವೆ. 1927ನೇ ಇಸವಿಯಲ್ಲಿ [illegible] ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೂ ನಮ್ಮಲ್ಲಿ ತಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,

ಡೊಂಗರಕೇರಿ, ಮಂಗಳೂರು.

ದಕ್ಷಿಣ ಕನ್ನಡಾ ಜಿಲ್ಲೆಯ ಮಾಗಣೆ ಶ್ಯಾನುಭಾಗರ ಪರಿಷತ್ತು.

ಇದೇ ಫೆಬ್ರುವರಿ ತಾರೀಖು ೭ನೇ ಆದಿತ್ಯವಾರ ಮತ್ತು ಮರುದಿನ ಸೋಮವಾರ ಶ್ರೀ. ಕೆ. ಆರ್. ಕಾರಂತ, ಎಮ್. ಎಲ್. ಸಿ., ಇವರ ಅಧ್ಯಕ್ಷತೆಯಲ್ಲಿ ಕೂಡಿದ ದಕ್ಷಿಣ ಕನ್ನಡಾ ಜಿಲ್ಲಾ ಶ್ಯಾನುಭಾಗರ ಪರಿಷತ್ತಿನ ವರದಿ—

ಜಿಲ್ಲೆಯ ಎಲ್ಲಾ ಭಾಗಗಳಿಂದ ಒಟ್ಟು ೪೬ ಶ್ಯಾನುಭಾಗರು ಬಂದಿದ್ದರು. ಶ್ರೀ.ಗಳಾದ ಶೇಷಭಟ್ಟ ಭಿಡೆಯವರು ಮತ್ತು ನಿವೃತ್ತ ರೆವಿನ್ಯು ಇನ್ಸ್‌ಪೆಕ್ಟರ್ ಉಚ್ಚಿಲ ಸುಬ್ಬರಾಯರು ಪ್ರೇಕ್ಷಕರಾಗಿ ಬಂದಿದ್ದರು ಅಧ್ಯಕ್ಷರು,— ಶ್ಯಾನುಭಾಗರ ಕೆಲಸದಲ್ಲಿ ಬೇಕಾದ ಬುದ್ಧಿ, ಮತ್ತು ಕೌಶಲ, ಸಮಯ, ಇವುಗಳ ಪ್ರತಿಫಲವಾಗಿ ಅವರಿಗೆ ದೊರೆಯುವ ಸಂಬಳದ ಅಲ್ಪತೆಯ ಕುರಿತಾಗಿ ಸಂಗ್ರಹವಾಗಿ ಮಾತಾಡಿದರು. ಕೇವಲ ಕೂಲಿಗಳಿಗೆ, ಪೇದೆಗಳಿಗೆ, ಶ್ಯಾನುಭಾಗರಿಗಿಂತ ಹೆಚ್ಚು ಸಂಬಳವಿದೆ; ಶ್ಯಾನುಭಾಗರು ಅನುಚಿತ ವೃತ್ತಿಯನ್ನು ಮಾಡುವರೆಂದು ಅವರನ್ನು ದೂರುವುದು ಸರಿಯಲ್ಲ. ಏಕೆಂದರೆ ಅವರ ಸ್ಥಿತಿಗತಿಗಳನ್ನು ಬಲ್ಲ ಸರಕಾರವೇ ಆ ಮಾರ್ಗವನ್ನು ಅವರು ಅನುಸರಿಸುವಂತೆ ಮಾಡುತ್ತದೆ. ಮದ್ರಾಸು ನ್ಯಾಯಮಂಡಲದಲ್ಲಿ ಗ್ರಾಮ ಉದ್ಯೋಗಸ್ಥರ ಸಂಬಳವನ್ನು ಏರಿಸಬೇಕೆಂದು ಒಂದು ನಿರ್ಣಯವು ತಾ. ೨೭-೧-೨೭ರಲ್ಲಿ ಪಾಸಾಗಿತ್ತು. ಆದರೆ ಸರಕಾರವು ಅದನ್ನು ಸ್ವೀಕರಿಸಲಿಲ್ಲ. ರೈತವಾರಿ ಪದ್ಧತಿ ಇರುವಲ್ಲಿ ಮಾತ್ರ ಶ್ಯಾನುಭಾಗರ ಸಂಬಳವನ್ನು ಏರಿಸಬೇಕಾಗಿ ಸೂಚನೆ ಬಂದದ್ದನ್ನು ಜಮೀನುದಾರಿ ಪದ್ಧತಿ ಇರುವಲ್ಲಿ ಕೂಡಾ (ಎಂದರೆ ಇಡೀ ಸಂಸ್ಥಾನದೊಳಗಣ ಶ್ಯಾನುಭಾಗರ ಸಂಬಳವನ್ನೇ) ಏರಿಸಬೇಕಾಗಿ ಉಪಸೂಚನೆ ಬಂದು ಅದರಂತೆಯೇ ನಿರ್ಣಯವು ಮಂಜೂರಾತಿ ಪಡೆದ ಕಾರಣ ಸರಕಾರಕ್ಕೆ ವರ್ಷ ೧೨ ೪೦ ಲಕ್ಷ ರೂಪಾಯಿಗಳು ಹೆಚ್ಚು ಖರ್ಚಾಗುತ್ತವೆ, ಆದುದರಿಂದ ಸರಕಾರವು ಸ್ವೀಕರಿಸದಿರುವಲ್ಲಿ ಆಶ್ಚರ್ಯವಿಲ್ಲ. ಗ್ರಾಮ ಉದ್ಯೋಗಸ್ಥರಲ್ಲಿ ಶ್ಯಾನುಭಾಗರು ಬಹಳ ಬಡವರು; ಕೆಲಸವಾದರೆ ತುಂಬಾ. ಪಟೇಲರಂತೆ ಅವರು ಧನಿಕರಲ್ಲ. ಆದುದರಿಂದ ಶ್ಯಾನುಭಾಗರ ಮಟ್ಟಿಗೆ ಪ್ರತ್ಯೇಕವಾಗಿ ಪ್ರಯತ್ನಪಟ್ಟರೆ ಸರಕಾರವು ಗಮನಿಸುವ ಸಂಭವವಿದೆ.

ಕೆಲಕಾಲಕ್ಕೆ ಮೊದಲು ಪಟೇಲರಿಗೆ ರೂಪಾಯಿ ೧೦. ಶ್ಯಾನುಭಾಗರಿಗೆ ರೂ. ೫. ಉಗ್ರಾಣಿಗಳಿಗೆ ೨—೮—೦, ಈ ಪ್ರಕಾರ ಜಮಾಬಂಧಿ ಬತ್ತೆಯು ದೊರೆಯುತ್ತಿತ್ತು. ಅನಂತರ ಶ್ಯಾನುಭಾಗರಿಗೂ ಪಟೇಲರಿಗೂ ೫ ರೂಪಾಯಿ ಎಂದು ನಿರ್ಣಯವಾಯಿತು. ಎರಡು ವರ್ಷಗಳಿಂದ ಅದೂ ಇಲ್ಲ. ಉಗ್ರಾಣಿಗೆ ಮಾತ್ರ ಈಗಲೂ ರೂ. ೨—೮—೦ ದೊರೆಯುತ್ತದೆ. ನಿಜವಾಗಿ ನೋಡಿದರೆ, ತನ್ನ ಸ್ವಂತ ಖರ್ಚಿಂದೂ, ಗುಮಾಸ್ತ ಮೊದಲಾದವರಿಗೆ ಕಾಫಿ ಕುಡಿಸುವ ಖರ್ಚಿಂದೂ, ಪ್ರತಿಯೊಬ್ಬ ಶ್ಯಾನುಭಾಗನಿಗೆ ಜಮಾಬಂದಿಯ ಒಂದು ತಿಂಗಳಲ್ಲಿ ರೂ. ೫೦ ಖರ್ಚಾಗುತ್ತದೆ. ಜಮಾಬಂದಿಯು ಸರಿಯಾಗಿ ಮಾಡಲ್ಪಟ್ಟರೆ ೩ ದಿನಗಳಿಗಿಂತ ಹೆಚ್ಚು ಸಮಯ ಬೇಕಾಗಲಿಕ್ಕಿಲ್ಲ. ಇದಲ್ಲದೆ ಮೊಖಾಬಿಲೆ ಎಂಬ ಲೆಕ್ಕ ತನಿಖೆ ಬಗ್ಗೆ ಎಂತ ಒಂದು ವಾರ ತಾಲೂಕು ಕಚೇರಿಯ ಮುಂದೆ ಕಾಣಬೇಕು. ಕ್ರಮವಾಗಿ ಮಾಡಿದರೆ ಇದಕ್ಕೆ ಒಂದು ದಿನಕ್ಕಿಂತ ಹೆಚ್ಚು ಬೇಡ. ಆ ಮೇಲೆ 'ಮಳೆಗಾಲದ ಕ್ಲಾಸು' ಎಂದು ೧೫ ದಿನ ತಾಲೂಕು ಆಫೀಸಿನಲ್ಲಿ, ಅವಶ್ಯವಿಲ್ಲದೆ ಅಡ್ಡಾಡಬೇಕು. ಅದೂ ಸಾಲದುದಕ್ಕೆ ಮನಸ್ಸಿಗೆ ಬಂದಾಗಲೆಲ್ಲ ತಹಶಿಲ್ದಾರರು 'ಏ' ಎಂದ ಕೂಡಲೆ 'ಓ' ಎಂದು ಹಾಜರಾಗಬೇಕು. ಇದನ್ನೆಲ್ಲಾ ಒಟ್ಟುಗೂಡಿಸುವಾಗ ಕಡಿಮೆ ಪಕ್ಷ ವರ್ಷಕ್ಕೆ ೧೦೦ರಿಂದ ೧೫೦ ರೂಪಾಯಿ ವರೆಗೆ ಶ್ಯಾನುಭಾಗನಿಗೆ ಖರ್ಚಾಗುತ್ತದೆ. ದೊಡ್ಡ ಹುದ್ದೆದಾರರಿಗೆ ಮಾತ್ರ ಸರಿಯಾಗಿ ತಲಬು, ಭತ್ತೆ ಇತ್ಯಾದಿ, ಕೊಡುವಷ್ಟು ಹಣ ಕೊಡುವ ಸರಕಾರವು, ಈ ಬಡ ನೌಕರರಿಗೆ ಅವಶ್ಯವಾಗಿ ಖರ್ಚಾಗುವ ಹಣವನ್ನೂ ಕೊಡುವುದಿಲ್ಲ. ಇದು ಬಹಳ ದುಃಖಕರ.

ಶ್ಯಾನುಭಾಗರು ತಮ್ಮ ಕೆಲಸಗಳನ್ನಷ್ಟು ಮಾಡಿದರೆ ಸಾಲದು; ತಮ್ಮ ಕೆಲಸವೇ ಅವರಿಗೆ ಬೇಕಾದಷ್ಟಿದೆ. ಪಂಚಾಯತ ಕೋರ್ಟು ರಿಕಾರ್ಡುಗಳನ್ನು ನಕಲು ತೆಗೆಯಬೇಕು. ಗ್ರಾಮದ ಅಡಂಗಲು ಮತ್ತು ಸ್ಥಳ ಅಳತೆ ನಕ್ಷೆಯ ಪುಸ್ತಕಗಳನ್ನು (ಕಾನೂನು ಪ್ರಕಾರ ರೆವಿನ್ಯು ಇನ್‌ಸ್ಪೆಕ್ಟರರೇ ಬರೆಯಬೇಕಾಗಿದ್ದರೂ) ಬರೆಯುವ ಕೆಲಸವು ಬೀಳುವುದಲ್ಲ ಶ್ಯಾನುಭಾಗರ ಪಾಲಿಗೆ. ತಾಲೂಕಿನ ಚಿಟ್ಟಿ, ಅಡಂಗಲ್, ನಕ್ಷೆಗಳನ್ನು ಲೆಂಡ ರಿಕಾರ್ಡ ಗುಮಾಸ್ತನು ಸಹಜವಾಗಿ ತಯಾರಿಸಬೇಕಾಗಿರುವುದಾದರೂ ಈ ಕೆಲಸಕ್ಕೂ ಶ್ಯಾನುಭಾಗರೆ ಬೇಕು! ಇವನ್ನೆಲ್ಲ ವಿಚಾರಿಸಿ ಸರಕಾರವು ನ್ಯಾಯಮಾರ್ಗವನ್ನು ಈಗಲಾದರೂ ಅನುಸರಿಸುವುದೆಂದು ನಂಬಿಕೆ. ಎಂದು ಹೇಳಿ ಅವರು ತಮ್ಮ ಭಾಷಣವನ್ನು ಮುಗಿಸಿದರು. ಅನಂತರ ಹಲವು ಭಾಷಣಗಳಾಗಿ ಸಂಬಂಧಪಟ್ಟ ವಿಷಯಗಳು ಚರ್ಚಿಸಲ್ಪಟ್ಟು ಈ ಕೆಳಗಿನ ನಿರ್ಣಯಗಳು ಸರ್ವಾನುಮತದಿಂದ ಮಂಜೂರಾದವು—

I (ಅ) ದ. ಕ. ಜಿಲ್ಲೆಯ ಮಾಗಣೆ ಶ್ಯಾನುಭಾಗರ ಒಂದು ಸಂಘವು ಸ್ಥಾಪಿತವಾಗಿ, ಅದರ ಕೇಂದ್ರವು ಮಂಗಳೂರಾಗಿ ಮಾಡಲ್ಪಟ್ಟಿರುತ್ತದೆ; ಈ ಸಭೆಯು ಮುಂದಿಟ್ಟ ಅದರ ಉದ್ದೇಶ ಮತ್ತು ರಚನೆ ಕ್ರಮಗಳನ್ನು ಮಂಜೂರು ಮಾಡಿರುತ್ತದೆ. ಮತ್ತು ಅವನ್ನು ಮುದ್ರಿಸಿ ಪ್ರಕಟಿಸಲಾಗುವುದು;

(ಆ) ಜಿಲ್ಲೆಯ ಎಲ್ಲಾ ಶ್ಯಾನುಭಾಗರೂ ಈ ಸಂಘಕ್ಕೆ ಕೂಡಲೆ ಸೇರಬೇಕೆಂದು ಈ ಪರಿಷತ್ತು ವಿನಂತಿ ಮಾಡುತ್ತದೆ.

II ಮ. ರಾ. ರಾ. ಗಳಾದ

೧. ಬಿ. ನಾರಾಯಣ ರಾವ್,
ಯಡತರೆ ತರ್ಫ ಶ್ಯಾನುಭಾಗ (ಕುಂದಾಪುರಕ್ಕೆ).

೨. ಕೆ. ನರಹರಿ ರಾವ್,
ಪೆರ್ಣಂಕಿಲ ತರ್ಫ ಶ್ಯಾನುಭಾಗ (ಉಡುಪಿಗೆ).

೩. ಎಚ್. ರಘುರಾಮ ರಾವ್,
ಬೈಲೂರು ತರ್ಫ ಶ್ಯಾನುಭಾಗ (ಕಾರ್ಕಳಕ್ಕೆ).

೪. ಇನ್ನ ಕೃಷ್ಣರಾವ್,
ಇನ್ನ ತರ್ಫ ಶ್ಯಾನುಭಾಗ (ಮಂಗಳೂರಿಗೆ).

೫. ಬಿ. ಭುಜಂಗರಾವ್,
ಜನ್ನಾಡು ತರ್ಫ ಶ್ಯಾನುಭಾಗ (ಕಾಸ್ರಗೋಡಿಗೆ)

೬. ಬಿ. ಭವಾನಿಶಂಕರರಾವ್,
ಅಯಾರ್ಪು ತರ್ಫ ಶ್ಯಾನುಭಾಗ (ಪುತ್ತೂರಿಗೆ).

ಇವರನ್ನು ಕಾರ್ಯ ಪ್ರಚಾರ ಮಾಡುವುದಕ್ಕೂ ಮೆಂಬರರನ್ನು ಕೂಡಿಸುವುದಕ್ಕೂ ಆಯಾ ತಾಲೂಕುಗಳಿಗೆ ಕಾರ್ಯದರ್ಶಿಗಳಾಗಿ ನೇಮಿಸಲಾಯಿತು.

೭. ಹಳೆ ಅಂಗಡಿ ಬೊಮ್ಮಯ್ಯ ಶ್ಯಾನುಭಾಗ, ಹಳೆ ಅಂಗಡಿ ತರ್ಫ ಶ್ಯಾನುಭಾಗ (ಮಂಗಳೂರು ತಾಲೂಕು) ಇವರು ಸಂಘದ ಜಿಲ್ಲಾ ಕಾರ್ಯದರ್ಶಿಗಳು.

೮. ಎಮ್. ಗೋಪಾಲಕೃಷ್ಣರಾವ್, ಕಸಬಾ ಬಜಾರು (ಮಂಗಳೂರು) ತರ್ಫಶ್ಯಾನುಭಾಗರು ಇವರ ಕೋಶಾಧಿಕಾರಿಗಳು.

೯. ನಿವೃತ್ತ ರೆವಿನ್ಯು ಇನ್ಸ್‌ಪೆಕ್ಟರ್ ಉಚ್ಚಿಲ ಸುಬ್ಬರಾಯರು ಉಪಾಧ್ಯಕ್ಷರು,

೧೦. ಶೇಷಭಟ್ಟ ಭಿಡೆ, ಬಿ. ಎ. ಬಿ. ಎಲ್.,—ಇವರು ಅಧ್ಯಕ್ಷರು.

ಈ ಹತ್ತು ಜನರು ಆರು ತಿಂಗಳ ವರೆಗೆ ತಾತ್ಕಾಲಿಕ ಕಾರ್ಯಕಾರಿ ಮಂಡಲಿಯವರು. ಸಾಧ್ಯವಿದ್ದಷ್ಟು ಮೆಂಬರರನ್ನು ಸೇರಿಸಿ ಅನಂತರ ಹೊಸ ಚುನಾವಣೆಯಾಗುವುದು.

III ಈಗ ಶ್ಯಾನುಭಾಗರಿಗೆ ಕೊಡತಕ್ಕ ಸಂಬಳವು ಅವರ ಮತ್ತು ಕುಟುಂಬದ ಪೋಷಣೆಗೆ ಏನೂ ಸಾಕಾಗುವುದಿಲ್ಲವಾದುದರಿಂದ ಕಡಿಮೆ ಪಕ್ಷ ತಿಂಗಳಿಗೆ ೩೦ ರೂಪಾಯಿಗೆ ಏರಿಸಲೇ ಬೇಕು; ತಾಲೂಕಿನ ಮುಖ್ಯ ಪಟ್ಟಣಗಳಲ್ಲಿ ಜೀವನದ ಖರ್ಚು ಹೆಚ್ಚಾಗಿರುವುದರಿಂದ ಅಲ್ಲಿಯ ಶ್ಯಾನುಭಾಗರಿಗೆ ರೂ. ೩೫; ಮಲೆಷ್ಟುದವಿರುವ ಪ್ರಾಂತಗಳಲ್ಲಿರುವವರಿಗೆ ಸಂಬಳವಲ್ಲದೆ ತತ್ಸಂಬಂಧ ತಿಂಗಳಿಗೆ ೫ ರೂ. ಹೆಚ್ಚು. ಈ ರೀತಿ ಕೊಡುವುದಲ್ಲದೆ, ತಮ್ಮ ತರ್ಫಿನಿಂದ ಹೊರಗೆ ಸಂಚಾರ ಮಾಡಬೇಕಾದ ಸಂದರ್ಭದಲ್ಲಿ ಊಟ ಮೊದಲಾದ ಖರ್ಚಿಗೆ ಕಡಿಮೆ ಪಕ್ಷ ದಿನಕ್ಕೆ ೧೨ ಆಣೆ; ವ್ಯವಸ್ಥಾಪೂರ್ವಕವಾದ ವಾಹನ ಸಂಚಾರವಿಲ್ಲದಿರುವಲ್ಲಿ ಮೈಲಿಗೆ ೨ ಆಣೆ; ಮೋಟಾರು ಬಸ್ಸು ಚಲಾವಣೆ ಇರುವಲ್ಲಿ ಅದಕ್ಕೆ ತಗಲುವ ಚಾರ್ಜು; ರೈಲು ಮಾರ್ಗವಿರುವಲ್ಲಿ ಮೂರನೇ ಕ್ಲಾಸು ಚಾರ್ಜು; ಈ ಪ್ರಕಾರ ಪ್ರಯಾಣ ಬತ್ತೆಯನ್ನು ಸರಕಾರವು ಕೊಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ.

IV ಶ್ರೀ. ಕಾರಂತ, ಎಮ್. ಎಲ್. ಸಿ., ಈ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಮತ್ತು ಇದೇ ತಾರೀಖು ೨೫ರ ಒಳಗೆ ಈ ಸಂಘದ ಮೆಂಬರರು ಆಯಾ ತಾಲೂಕುಗಳಲ್ಲಿ ಸಭೆ ಸೇರಿ ತಮ್ಮ ಪ್ರತಿನಿಧಿಯಾಗಿ ಚುನಾಯಿಸುವಂತೆ ೬ ತಾಲೂಕುಗಳಿಗೆ ೬ ಜನ ಪ್ರತಿನಿಧಿಗಳು,—ಇವರಿಂದ ಕೂಡಿದ ಶಿಷ್ಟ ಮಂಡಳಿಯು, ಮಾನ್ಯ ರೆವಿನ್ಯು ಮೆಂಬರರ ಅಪ್ಪಣೆ ಪಡೆದು ಬರುವ ಮಾರ್ಚ ತಿಂಗಳಲ್ಲಿ ಅವರ ಮುಂದೆ ಶ್ಯಾನುಭಾಗರ ಸಂಕಷ್ಟಗಳನ್ನು ನಿವೇದಿಸಬೇಕು.

V ಇಂದಿನ ಕಾರ್ಯಗಳ ವರದಿಯ ನಕಲನ್ನು ಸಂಬಂಧ ಅಧಿಕಾರಿಗಳಿಗೂ, ಪತ್ರಿಕೆಗಳಿಗೂ ಕಳುಹಿಸುವ ಅಧಿಕಾರವನ್ನು ಈ ಪರಿಷತ್ತಿನ ಅಧ್ಯಕ್ಷರಿಗೆ ಕೊಡಲಾಯಿತು.

ಅಧ್ಯಕ್ಷರಿಗೆ ವಂದನೆಗಳನ್ನು ಸಮರ್ಪಿಸಿ ಸಭೆಯು ವಿಸರ್ಜಿಸಲ್ಪಟ್ಟಿತು.



ಈ ಹತ್ತು ಗಡಿಯಾರಗಳನ್ನು ನೋಡಿರಿ.

ಮಾಲ್ಚಕರು ಸ್ವತಃ ಪರೀಕ್ಷಿಸಿದಂತವುಗಳು. ಎಲ್ಲಾ ತರದ ಗೋಲ್ಡನ್ ರಿಸ್ಟವಾಚುಗಳಿರುತ್ತವೆ.

ಈ ಮಹಾಲು ಈ ಕ್ರಮಕ್ಕೆ ಎಂದಿಗೂ ದೊರೆಯದು. ಇವರಲ್ಲಿ ಯಾವುದಾದರೊಂದನ್ನು ಆರಿಸಿ. ಪ್ರತ್ಯಪ್ರತ್ಯೇಕ ತರಹಗಳಲ್ಲಿ ನೀವು ಆರಿಸಿರುವ ತರಹದ ಸುಂದರ ಗೋಲ್ಡನ್ ರಿಸ್ಟವಾಚು ಉತ್ತಮ ತರದ ಚಾಲ್ತಿಯದಾಗಿ, ಚೆನ್ನಾಗಿ ಸಮಯವನ್ನು ತೋರಿಸುವುದಲ್ಲದೆ, ನಾಲ್ಕು ವರುಷದ ಗ್ಯಾರಂಟಿಯು ಕೊಡಲ್ಪಡುವುದು.

ಗ್ಯಾರಂಟಿಯೊಡನೆ ಬರೇ ರೂ. 5—15—0ಕ್ಕೆ ನಿಮಗೆ ಸಿಗುವುದು.

ಟಿ. ಬಿ. ಆರಾಣೆ ಮಾತ್ರ ಪ್ರತ್ಯೇಕ ಬೀಳುವುದು 3ಕ್ಕೆ ರೂ 15; 6ಕ್ಕೆ ರೂ. 28; ಟಪ್ಪಾಲು ಖರ್ಚು ಮುಫತ್ತು.

ಪೋಸ್ಟು ಖರ್ಚು ಬಿಟ್ಟು ನಿಮಗೆ ತೃಪ್ತಿಯಾಗದಿದ್ದರೆ ಪುನಃ ಹಿಂದಕ್ಕೆ ಪಡೆಯುವೆವು. ಇದಲ್ಲದೆ ಟ್ಯಾಂಡ್‌ಪೀಸ, ಪಾಕೆಟ್ ವಾಚುಗಳು ವಗೈರೆ ಎಲ್ಲಾ ತರದ ಗಡಿಯಾರಗಳು ಸಿಕ್ಕುತ್ತವೆ. ಒಂದಾಣೆಯ ಟಿಕೆಟು ಕಳುಹಿಸಿದಲ್ಲಿ ಕೆಟಲಾಗ ಕಳುಹಿಸಲಾಗುವದು.

ಗಣಪತಿಯ ತಿರುಗುವ ಛತ್ರಗಳೇ ನಮಗೆ ಟ್ರೇಡ್‌ಮಾರ್ಕು.

Master Watch Company,

350 Bhuleshwar, BOMBAY NO. 2.






SPORT CABRIOLET WITH DICKEY SEAT

FIVE-PASSENGER TWO-DOOR SEDAN

FIVE-PASSENGER PHAETON

The Story of a New

OAKLAND

Series 6-212

the cosmopolitan six

WHY COSMOPOLITAN?

THE new Oakland has been called the cosmopolitan six because of its background and its ability to perform.

General Motors has produced this car as a result of its cosmopolitan experience in building and operating motor cars in all parts of the world.

Oakland is built to render a high order of service wherever it may be called. It is equally at home on mountain road, desert sand or city boulevard. Its beauty makes it acceptable anywhere. That is cosmopolitan character.

OAKLAND

BODY FEATURES *of the* NEW OAKLAND

Closed bodies by Fisher; open bodies designed by Fisher but built by Oakland.

Body lines longer and lower. Five-passenger bodies are six inches longer and all bodies are much lower.

Seat positions and contours are improved.

Spanish leather upholstery on open models and Sport Cabriolet.

Leather upholstery available on all closed models.

Improved body hardware on all models.

Instrument board beautifully carved in oak, leaf design and contains three clusters of instruments with platinum-silver dials.

New and attractive Duco color combinations on all models.

Narrow front corner posts on closed models.

Forward-folding windshields on open models.

For Further Particulars Apply to

RAO & RAO

Dealers of Oakland, Pontiac, Chevrolet, & Vauxhall Cars,

Maidan Road, MANGALORE.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸು ತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡು ತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗ ನಿಕ್ಕಿ ಕರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ತಿಕ್ಕುತ ಔಷಧ. ಸೀಸೆ 1ಕ್ಕೆ ರೂ. 0—8—0.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜೆಂಟರು:—

ಆತ್ಮಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು. ಚಿಕ್ಕಪೇಟೆ ಬೆಂಗಳೂರು ಸಿಟಿ. ...ರಾಘವ ವೈದ್ಯಶಾಲಾ, ಮೈಸೂರು.

ಹೊಸಮುದ್ರಣ! ಅಂದವಾದ ಅಕ್ಷರ!!

ಸಂಗೀತಶಾಸ್ತ್ರ ಪ್ರವೇಶದಾಯಿನಿ.

(ಮೈಸೂರು ಮತ್ತು ಬೊಂಬಾಯಿ ವಿದ್ಯಾಭ್ಯಾಸದ ಇಲಾಖೆಯವರಿಂದ ಅಂಗೀಕರಿಸಲ್ಪಟ್ಟಿದೆ.)

ಇದರಲ್ಲಿ ಸಂಗೀತಶಾಸ್ತ್ರ ಸಂಬಂಧವಾದ ಅನೇಕ ರಹಸ್ಯಗಳು ಸಂಗೀತ ವಿದ್ವಾಂಸರ ಸಲಹೆಗಳನ್ನು ಅನುಸರಿಸಿ ಸುಲಭ ರೀತಿಯಲ್ಲಿ ಕನ್ನಡದಲ್ಲಿ ವಿವರಿಸಲ್ಪಟ್ಟಿವೆ.

ಸರಳೆ ಅಲಂಕಾರ, ಗೀತ, ಸ್ವರಜತಿ, ವರ್ಣ... ಮತ್ತು ತ್ಯಾಗಯ್ಯರ್, ಪಟ್ಟಣಂ ಸುಬ್ರಹ್ಮಣ್ಯಯ್ಯರ್, ದೀಕ್ಷಿತರು, ಸದಾಶಿವರಾಯರು, ರಾಮಶಾಸ್ತ್ರಿಗಳು ಮೊದಲಾದ ಸುಪ್ರಸಿದ್ಧ ಸಂಗೀತ ವಿದ್ವಾಂಸರ 106 ಕೃತಿಗಳೂ ಜಾವಡಿಗಳು ಸ್ವರಚಿಹ್ನ ಸಹಿತವಾಗಿ ಇದರಲ್ಲಿ ಕೊಡಲ್ಪಟ್ಟಿವೆ.

ಅಂಚೆ 0—6—0 ಬೆಲೆ 2—4—0

ಹಾರ್ಮೋನಿಯಂ ಸ್ವಯಂಬೋಧೆ.

0—12—0.

ಹೆಚ್. ಎನ್. ರಾವ್ ಬ್ರದರ್ಸ್,

ಪುಸ್ತಕ ವ್ಯಾಪಾರಿಗಳು ಚಿಕ್ಕಪೇಟೆ ಬೆಂಗಳೂರು ಸಿಟಿ.

ತಯಾರಾಗಿವೆ! ತಯಾರಾಗಿವೆ!!

ಮೂರನೇ ದರ್ಜೆಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0 Registered No. M. 489 ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರಿಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದಂ । ಹರುಷವಾಯಿತೆ! ಮತ್ತೆ ವಿಶ್ವದ ಸುಡುತ ಬರುತಿರುವ ॥

ಗರಲಕೆವರಂಜಿದರೆ! ಸುಧೆಯನು । ಮರೆತು ಸ್ವಸ್ಥರ ತೆರದಿ ಕುಳಿತರೆ ತಿರೆಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೩. ಮಂಗಳೂರು, ತಾ. ೨೨ನೇ ಶುಕ್ರವಾರ ಫೆಬ್ರುವರಿ ೧೯೨೯. (22—2—'29.) ಸಂಚಿಕೆ ೮

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

Head office:—UDIPI. **Branches:—COONDAPOOR. Mangalore**

ಹೆಡ್ ಆಫೀಸು:—ಉಡುಪಿ. ಶಾಖೆ:—ಕುಂದಾಪುರ. ಮಂಗಳೂರು.

1. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000- 3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 96,600-
2. ತೆತ್ತು ಬಂದ ಮೂಲಧನ ರೂ. 1,99,650- 4. ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 3,34,218-50-

Bank Receives,
Season Deposits at its Head Office and Branches for **3, 4, 5, & 6** *months at* **6½** *p. c.*

ಬೇಂಕಿನ ಹೆಡ್ಡ ಆಫೀಸಿನಲ್ಲಿಯೂ ವ ಇದರ ಬ್ರಾಂಚ್ ಆಫೀಸುಗಳಲ್ಲಿಯೂ ಮುಸಂತೇವಣಾತಿಗಳನ್ನು ತಿಂಗಳು **3, 4, 5,** ಮತ್ತು **6**ರ ಅವಧಿಗೆ ಶೇಕಡಾ **6½**ರ ಬಡ್ಡಿಯಿಂದ ಪಡಕೊಳ್ಳೋಣಾಗುತ್ತದೆ.

Office of the Corporation, UDIPI, 18—1—'29. **N. ANANDA RAO**, *Secretary.*

ಅಮೃತಾಂಜನ.

ಪ್ರಸಿದ್ಧವಾದ್ದೂ ಮತ್ತು ನಂಬಿಗೆಯ ಔಷಧಿಯಾದ ಅಮೃತಾಂಜನವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕ ಅತ್ಯಾವಶ್ಯಕವಾದದ್ದು. ತಲೆನೋವು ವಾತದ ಬೇನೆ, ಶೀತ, ಕೆಮ್ಮು ಮೊದಲಾದವುಗಳನ್ನು ಕೂಡಲೇ [illegible] ಅಮೃತಾಂಜನವು ಎಲ್ಲಾ ಕಡೆಗಳಲ್ಲಿಯೂ ದೊರಕುತ್ತದೆ. [illegible] ಬಾಟ್ಲಿಗೆ ಆಣೆ 10, ಟಪಾಲು ಖರ್ಚು ಬೇರೆ.

ರಿಂಗ್‌ವರ್ಮ್ ಮುಲಾಮು:— ರಿಂಗ್‌ವರ್ಮ್, ಕಜ್ಜಿ ಮೊದಲಾದ ಸರ್ವ ತರದ ಚರ್ಮರೋಗಗಳಿಗೂ, [illegible] ಔಷಧಿ, ಚರ್ಮದ ರೋಗದ ಔಷಧಿಗಳಲ್ಲಿ ಮೊದಲನೆಯದು; [illegible]. ಡಬ್ಬಿಗೆ ಆಣೆ 6, ಟ. ಖ. ಬೇರೆ.

ದಂತಮಂಜನ:— [illegible] ಈ ಹಲ್ಲು ಪುಡಿಯು ಹಲ್ಲುಗಳಿಂದ [illegible] ನಿಲ್ಲಿಸಿ, ಹಲ್ಲುಗಳನ್ನು ಬೆಳ್ಳಗೆ [illegible], ಅವುಗಳನ್ನು ಬಲಪಡಿಸುತ್ತವೆ. ಡಬ್ಬಿಗೆ ಆಣೆ 2, ಟ. ಖ. ಬೇರೆ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬ್ಯಾ.

ಮಕ್ಕಳ ಸಲುವಾಗಿ,

ಡೋಂಗರ

ನವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರ್ಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜೆಂಟರು—ದಿ. ಉಲನ್ ಮಾರ್ಟ್, ಮಂಗಳೂರು.

ಬಹುಮಾನ! ಬಹುಮಾನ!

1929ನೇ ವರುಷದ **ಸರಸ್ವತೀ ಕ್ಯಾಲೆಂಡರ್.**

ಮಹನೀಯರೇ ನಮ್ಮಲ್ಲಿ ದೊರೆಯುವ ಕನ್ನಡ ಕಥೆ, ಕಾವ್ಯ, ನಾಟಕ, ಕೀರ್ತನೆ, ವೇದಾಂತಾದಿಗ್ರಂಥಗಳ ಪಟ್ಟಿಗೆ ಕೂಡಲೇ ಬರೆದು ತರಿಸಿಕೊಳ್ಳಿರಿ.

ಈ ಮೇಲೆ ಕಂಡವುಗಳಲ್ಲದೆ [illegible] ನಮ್ಮಲ್ಲಿ ಸಿಗುತ್ತವೆ.

ಕಥೆ ಪುಸ್ತಕಗಳು

ಸೌಭಾಗ್ಯ ಲಕ್ಷ್ಮಿ 0—5—0	ಧರ್ಮ ಸಾಮ್ರಾಜ್ಯ
ವಿಮಲಾ ದೇವಿ 1—12—0	ಲಾವಣ್ಯ ತಿಲೋ[illegible]
ವಚನ ಭಾರತ 0—12—0	ವಚನ ರಾಮಾ[illegible]
ಆನಂದ ಮಠ 1—12—0	ಜೈಮಿನಿ ಭಾ[illegible]

ಲಾ ಪುಸ್ತಕಗಳು

ವ್ಯವಹಾರ ಧರ್ಮ ಶಾಸ್ತ್ರ ಭಾಗ I
ಭಾಗ II

ವ್ಯವಹಾರ ಲೇಖ್ಯ ಬೋಧಿನಿ
ಕ್ರಿಮಿನಲ್ ಪ್ರೊಸಿಜರ್ ಕೋಡ್
ಇಂಡಿಯನ್ ಪಿನಲ್ ಕೋಡ್

ಶ್ರೀ ಸರಸ್ವತೀ [illegible]

(ಕ್ರಿಶ್ಚಿಯನ್ನಿ)ಗಳಲ್ಲಿ ಇದೆ.

ಪತ್ರವ್ಯವಹಾರ.

ಪತ್ರಿಕೆಯಲ್ಲಿನ ಅಭಿಪ್ರಾಯಗಳಿಗೆ ನಾವು ಬಾಧ್ಯರಲ್ಲ.

ವಕ್ರದೃಷ್ಟಿ.

ಯಾವ ವಿಷಯವನ್ನು ಪರಿಶೀಲಿಸುವಾಗಲೂ ಸರಿಯಾದ ಮಾರ್ಗವನ್ನೇ ಅವಲಂಬಿಸಿ ಆ ಕಾರ್ಯವನ್ನು ಕೈಕೊಳ್ಳಬೇಕೆಂದು ತಿಳಿದವರು ಹೇಳುತ್ತಾರಷ್ಟೆ. ವಿಷಯಗಳ ಮೇಲೆ ನಾವು ಪಡಬಹುದಾದ ತಪ್ಪು ಅಭಿಪ್ರಾಯಗಳಿಗೆ ನಮ್ಮ ವಕ್ರದೃಷ್ಟಿಯೂ, ಅದಕ್ಕೆ ಮೂಲವಾಗಿರುವ ನಮ್ಮ ಮನಸ್ಸಿನ ವಕ್ರಗತಿಯೂ ಕಾರಣಗಳಾಗಿವೆ. ಮನಸ್ಸಿನ ವಕ್ರಗತಿಯಿಂದ ವಕ್ರದೃಷ್ಟಿಯು ಪರಿಣಮಿಸುವುದು. ಮನಸ್ಸಿನ ಗತಿಯು ಕಾರ್ಯವನ್ನು ಆರಂಭಿಸುವಲ್ಲಿ ಮೊದಲು ಅದರ ಮೇಲೆ ನಮ್ಮಲ್ಲಿರಬಹುದಾದ ಭಾವನೆಯನ್ನು Propossession ಹೊಂದಿರುತ್ತದೆ. ಅಂತು ಭಾವನೆಯು ಒಳ್ಳೆಯದಾಗಿದ್ದರೆ ದೃಷ್ಟಿಯೂ ಸರಿಯಾಗುವುದು. ಮನಸ್ಸಿನ ಭಾವನೆಯು ನಿರ್ಮಲವಾಗಿದ್ದರೆ ಯೋಗ್ಯವಾದ ವಿಮರ್ಶೆಯೂ ವಿಚಾರವೂ ನಮ್ಮಲ್ಲಿ ಹುಟ್ಟುವುದು. ಇಲ್ಲವಾದರೆ ಎಷ್ಟೇ ಸಮೀಪದಲ್ಲಿದ್ದರೂ ನಮ್ಮ ವಕ್ರತೆಯನ್ನೆ ಪಡೆಯಬೇಕಾಗುವುದು. "ನವಯುಗ"ದ ೨೧ನೆಯ ಸಂಚಿಕೆಯ (ತಾ. ೧೯-೩-೩೯) "ಸಮೀಪದರ್ಶಿ"ಗಳ "ಯಕ್ಷಗಾನದ ನೋಟ"ವೆ ಇದಕ್ಕೆ ಯೋಗ್ಯವಾದ ಉದಾಹರಣವಾಗಿರುವದು. ನಾನೇನೂ ದೂರದರ್ಶಿಯಾಗಿದ್ದರೂ ಮಹಾಶಯರುಗಳನ್ನು ಯೋಚಿಸುವಾಗ ನಮ್ಮ ಬಂಧು ಸಮೀಪದರ್ಶಿಗಳಂತೆ ವಕ್ರದೃಷ್ಟಿಯನ್ನುಪಯೋಗಿಸಲಿಲ್ಲವೆಂದು ಅವರೆ ಬರೆದ ನನ್ನ ಲೇಖನದ ಮೇಲಿನ ವಿಮರ್ಶೆಯಿಂದಲೆ ಪುಷ್ಟೀಕರಿಸುವೆನು. ಸಹೃದಯರಾದ ವಾಚಕ ಮಹಾಶಯರು ನ್ಯಾಯಾನ್ಯಾಯವನ್ನು ಪರೀಕ್ಷಿಸಬೇಕೆಂಬುದೆ ನನ್ನ ಮೊದಲನೆಯ ಕೋರಿಕೆ.

ಯಾವುದಾದರೊಂದು ಮಹತ್ಕಾರ್ಯದ ಮೇಲೆ ಅಭಿಪ್ರಾಯಪಡುವವರನ್ನು ಸಪಕ್ಷ, ವಿಪಕ್ಷ, ಉದಾಸೀನಪಕ್ಷ, ಎಂದೇ ಮೂರು ಪಂಗಡವಾಗಿ ವಿಭಾಗಿಸಿದ ಸಮೀಪದರ್ಶಿಗಳಿಗೆ ವಕ್ರದೃಷ್ಟಿಯಲ್ಲದೆ ಸಮದೃಷ್ಟಿ ಇರುವದೆ? ಆ ಕಾರ್ಯಕ್ಕೆ ಸಂಬಂಧಪಟ್ಟವರು ಸಪಕ್ಷದವರಂತೆ. ಸಮೀಪದರ್ಶಿಗಳು ಇವರಲ್ಲಿ ಮುಖಂಡರು, ವಿರೋಧಾಭಿಪ್ರಾಯವನ್ನು ಕಟ್ಟಿಕೊಂಡವರು ವಿಪಕ್ಷದವರಂತೆ. ಇವೆರಡಕ್ಕೂ ಮಧ್ಯೆ ನಿಂತವರು ಉದಾಸೀನಪಕ್ಷದವರಂತೆ. ಅಂತು ಈ ಮೂರು ಪಂಗಡಗಳಿಗೆ ಸೇರಿದ ಮಹನೀಯರೆಲ್ಲರೂ ಪಕ್ಷಪಾತದಿಂದ ತುಂಬಿತುಳುಕುತ್ತಿರಬೇಕೆ? ಪಕ್ಷಪಾತವೂ ವಿಮರ್ಶೆಯ ಅಂಗವಾಗಿರುವದೊ? ವಿಚಾರಯುಕ್ತವೂ ನ್ಯಾಯವೂ ಆದ ಅಭಿಪ್ರಾಯವನ್ನು ಹೇಳಿ ಪಕ್ಷಪಾತದಿಂದ ವಿಮೋಚನೆಯನ್ನು ಹೊಂದಿ ಧನ್ಯತೆಯನ್ನು ಪಡೆಯಬಾರದೆ? ಸಮೀಪದರ್ಶಿಗಳು ಸಪಕ್ಷಕ್ಕೆ ಸೇರಿದವರೆಂದು ಅವರೆ ಒಪ್ಪಿಕೊಳ್ಳುತ್ತಾರೆ. ಅಂತು ಅವರು ಪಕ್ಷಪಾತಕ್ಕೆ ಬಲಿಬಿದ್ದಿರುವರೆಂದು ಅವರ ಮಾತಿನಿಂದಲೆ ನಿಶ್ಚಯವಾದ ಹಾಗಾಯಿತು. ಆದರೆ ನಾನು ಮಾತ್ರ ವಿಪಕ್ಷಕ್ಕೆ ಸೇರಿದವನೆಂದು ಅವರು ಬರೆದುದನ್ನು ನಾನೆಂದಿಗೂ ಸಮ್ಮತಿಸಲಾರೆನು. ನಾನು ಬರೆದ ವಿಷಯಗಳು ಹೆಚ್ಚು ಕಡಿಮೆ ಸಪಕ್ಷದ ಮುಖಂಡರಾದ ಸಮೀಪದರ್ಶಿಗಳಿಗೂ ಸಮ್ಮತವಾಗಿರುವಾಗ ನನ್ನನ್ನು ವಿಪಕ್ಷದವನೆಂದು ಕರೆಯಲು ಕಾರಣವಿದೆಯೆ? ನ್ಯಾಯ. ಸಮ್ಮತವಾಗಿರದಿದ್ದರೆ ನನ್ನ ಮುಖ್ಯ ಅಭಿಪ್ರಾಯವನ್ನು ಸಮೀಪದರ್ಶಿಗಳು ಯಾಕೆ ಖಂಡಿಸಲಿಲ್ಲ? ಸರಸ್ವತೀ ಕ್ಷೇತ್ರದಲ್ಲಿ ಪ್ರತ್ಯಕ್ಷ ಕಲಹದ ಬೀಜವನ್ನು ಬಿತ್ತುವದೆಂದರೆ ಬಂಟ್ವಾಳದ ಮಹಾಸಭೆಯ ಮೊದಲನೆಯ ಸಂದರ್ಭವಾಗಿರುವದು. ಬಹುಮಾನಗಳು ನ್ಯಾಯಸಮ್ಮತವಲ್ಲದೆ ಪ್ರದಾನಿಸಲ್ಪಟ್ಟ ಅರ್ಥವವರಿಗೂ ಕೊಡಲ್ಪಟ್ಟವು ಎಂಬೀ ಮೊದಲಿನ ಲೇಖನದಲ್ಲಿ ನಾನು ಬರೆದ ಮುಖ್ಯ ವಿಷಯಗಳನ್ನು ಖಂಡಿಸದೆ ಬರಿ ಅಲ್ಪ ವಿಷಯಗಳನ್ನು ಎತ್ತಿಹಿಡಿದು ನನ್ನನ್ನು ದೂಷಿಸುವದೆಂದರೆ ವಕ್ರದೃಷ್ಟಿಯ ಮಹಿಮೆಯಲ್ಲವೆ? ಮುಖ್ಯ ವಿಷಯಗಳಿಗೆ ಖಂಡನೆಯಿಲ್ಲ. ಹಾಗಾದರೆ ಸಮೀಪದರ್ಶಿಗಳೂ ಅವುಗಳಿಗೆ ಒಡಂಬಟ್ಟಂತಾಯಿತು. ಅದೂ ಅಲ್ಲದೆ, ಸಪಕ್ಷ, ವಿಪಕ್ಷ, ಉದಾಸೀನಪಕ್ಷಗಳಿಗೆ ಸೇರದೆ ನ್ಯಾಯವೂ, ನಿಷ್ಪಕ್ಷಪಾತವೂ, ವಿಚಾರಯುಕ್ತವೂ ಆದ ವಾಕ್ಯಗಳನ್ನೆ ಬರೆಯುತ್ತೇನೆಂದರೆ ಪರನಿಂದೆಗೆ ಬೇಕಾದ ಆತ್ಮಸ್ತುತಿಯಾಗುವದೆ? ನನ್ನ ಅಭಿಪ್ರಾಯವು ಅನ್ಯಾಯವಾಗಿದ್ದರೆ ಅದನ್ನೇಕೆ ಆಕ್ಷೇಪಿಸಲಿಲ್ಲ? ಇಷ್ಟಿಷ್ಟನ್ನು ಇಷ್ಟಹಾಗೆ ಹೇಳಿದರೆ ಸಿಟ್ಟುಬರುವ ಪಾಮರರ ಲಕ್ಷಣವಲ್ಲವೆ? ನ್ಯಾಯದ ಬೆಂಬಲವನ್ನು ನಾನು ಹಿಡಿದಿದ್ದೇನೆಂದು ಬರೆದುದು ಹೆಗ್ಗಳಿಕೆಯಾದರೆ ಸಪಕ್ಷದವರೆ ಹಾದೆಂದು ಬರೆದ ಸಮೀಪದರ್ಶಿಗಳ ಮಾತಿಗೆ ಏನೆಂದು ಕರೆಯಬೇಕು? ಇಂತಹ ಭಾವನೆಗಳಿಗೆ ವಕ್ರದೃಷ್ಟಿಯು ಕಾರಣವೆಂದು ನುಡಿದರೆ ಅತಿಶಯೋಕ್ತಿಯಾಗುವದೆ?

ಮಾನ್ಯ ಸಮೀಪದರ್ಶಿಗಳು ತಮ್ಮ ಸಮೀಪದೃಷ್ಟಿಯನ್ನು ಮಾತ್ರ ಉಪಯೋಗಿಸಿ ಒಂದೆರಡು ಅಲ್ಪ ವಿಷಯಗಳ ಆಧಾರದಿಂದ ನನ್ನನ್ನು ಹೀಯಾಳಿಸಲು ಯತ್ನಿಸಿ ತಾವೆ ನಿಂದಾಸ್ಪದರಾಗಿ ಭವಿಸಿದರೆಂದರೆ ತುಂಬ ಶೋಚನೀಯ. ಸಂಗೀತರತ್ನರಾದ ಶ್ರೀಯುತ ಬಲಿಪ ನಾರಾಯಣ ಭಾಗವತರೂ ರಾ। ಅರ್ಕುಳ ಸುಬ್ರಾಯ ಆಚಾರಿಗಳೂ ಆ ಸಭೆಗೆ ಕಾರಣಾಂತರದಿಂದ ಬರಲಿಲ್ಲವೆಂಬ ಇದೆ ಪತ್ರಿಕೆಯ ಮೊದಲಿನ ಲೇಖನದ ವಾಕ್ಯವನ್ನು ನಾನು ಪುಷ್ಟೀಕರಿಸಿದುದು ನಮ್ಮ ಬಂಧುಗಳಿಗೆ ಅಸಮ್ಮತವಾಯಿತು. ಆ ಮಹನೀಯರೀರ್ವರ ಹೆಸರುಗಳನ್ನು ಮಾತ್ರ ಯಾಕೆ ಬರೆಯಬೇಕಿತ್ತೆಂಬುದು ಅವರ ಮೊದಲನೆಯ ಚೋದ್ಯ. ಮುಂಚಿನ ದಿವಸ ಬಾರದೆ ಮರುದಿವಸದ ಸಭೆಗೆ ಅವರೀರ್ವರೂ ಬಂದಿದ್ದರಿಂದ ಅವರ ವಿಷಯ ಬರೆಯಬೇಕಾಯಿತು. ಅದಕ್ಕಾಗಿಯೇ ಹಿಂದಿನ ಲೇಖಕರು "ಕಾರಣಾಂತರದಿಂದ" ಎಂಬ ಶಬ್ದಗಳನ್ನುಪಯೋಗಿಸಿರಬಹುದು. ಆದರೆ 'ನವಯುಗ'ದ ಸ್ವಂತ ಬಾತ್ಮೀದಾರರ ಲೇಖನವನ್ನು ಓದಿದ, ಅಷ್ಟುಮಾತ್ರವಲ್ಲ "ಈ ಸಭೆಗೆ ಕೆಲವು ಯಕ್ಷಗಾನ ಪ್ರಮುಖ ಪ್ರವೀಣರೆನಿಸಿಕೊಂಡವರು ...ದರೆ ಸಭೆಯಿಲ್ಲವೆಂಬುದಾಗಿ ಗ್ರಹಿಸಿಯೊ ಏನೊ ಬರಲಿಲ್ಲ" ... ಗೂಢಾರ್ಥವನ್ನು ವಿಚಾರಿಸಿ "ಕಾರಣಾಂತರವನ್ನು" ... ವಾಯಿತು. ಅದೂ ಅಲ್ಲದೆ ಸಂದರ್ಭವನ್ನು ವಿಚಾರಿಸಿ ...ರ ಹೆಸರುಗಳನ್ನು ಬರೆದುದರಲ್ಲಿ ಅಯೋಗ್ಯತೆ ಇಲ್ಲ. ... ಸ್ಪರ್ಧೆಗೆ ನಿಲ್ಲಲಾರರೆಂದೂ, ಹಾಗಿಲ್ಲಿಯಾದರೂ ಕೆಲ... ಉತ್ಸಾಹದಿಂದಾಗಿರಬೇಕೆಂದೂ, ಅದರಿಂದಲೆ ...ದಂತ ಶ್ರೀಯುತ ಭಾಗವತರೂ, ರಾ। ಸುಬ್ರಾಯ... ಯಕ್ಷಗಾನ ಪ್ರವೀಣರು ಆ ಸಭೆಗೆ ಬರಲಿಲ್ಲ... ಇದೂ ವಕ್ರದೃಷ್ಟಿಯ ಫಲಿತಾಂಶ

ಅಲ್ಲಿಗೆ ಬಂದ ಪ್ರವೀಣರ ಹೆಸರುಗಳನ್ನು ಬರೆಯದಿದ್ದುದು ದೊಡ್ಡ ತಪ್ಪೆಂದು ಸಮೀಪದರ್ಶಿಗಳು ಭಾವಿಸುವರಲ್ಲ! ಆದರೆ ರಾ। ನಾರಾಯಣ ಭಾಗವತರಿಗೆ ಮಾಡಿದ ಅಪಮಾನವನ್ನು ಇನ್ನೊಮ್ಮೆ ಪ್ರಕಟೀಕರಿಸುವ ಬದಲು, ಅಥವಾ ಅವರ ಮಹನೀಯರಿಗೆ ಎಷ್ಟರಮಟ್ಟಿಗೆ ಬಹುಮಾನವಿತ್ತವನ್ನು ಬಯಲುಪಡಿಸಿದ ವಿಷಯವನ್ನು ಬೆಳಕಿಗೆ ತರುವದಕ್ಕೋ? ಇನ್ನಷ್ಟು ವಿಚಾರಿಸಿದರೆ ಬಂಟ್ವಾಳದ ಸಭೆಯು ಯಕ್ಷಗಾನಕ್ಕೆ ತೀರ ಹೊಸ ಹುರುಪನ್ನೇ ಉಂಟುಮಾಡಿತೆಂದು ನಾನು ಮತ್ತೊಮ್ಮೆ ಸಭೀರವಾಗಿ ಹೇಳಬೇಕಾಗಿದೆ.

ಸಂಗೀತರತ್ನರೆಂದು ಶ್ರೀಯುತ ಬಲಿಪ ನಾರಾಯಣ ಭಾಗವತರನ್ನು ಕರೆದರೆ ಸಮೀಪದರ್ಶಿಗಳಿಗೆ ಅಸಹನವಾಗುವದಾವುದರಿಂದ? ಸಂಗೀತವೆಂಬುದರ ಅರ್ಥವಾದರೂ ಅವರಿಗೆ ತಿಳಿಯದೆ? ಚೆನ್ನಾಗಿ ಹಾಡಲ್ಪಟ್ಟುದಕ್ಕೆ ಸಂಗೀತವೆಂದೂ (ಸಮ್ಯಕ್ ಗೀತಂ ಸಂಗೀತಂ), ಸಂಗೀತದಲ್ಲಿ ಶ್ರೇಷ್ಠವಾದುದಕ್ಕೆ ಸಂಗೀತರತ್ನವೆಂದೂ, ಅಂತಹ ಉತ್ತಮತರದ ಸಂಗೀತವನ್ನು ಯಾರು ಹಾಡುತ್ತಾರೊ ಅವರೆ ಸಂಗೀತರತ್ನರೆಂದೂ ಸಮೀಪದರ್ಶಿಗಳು ಇನ್ನೂ ಅರಿತಿಲ್ಲವೆ? ಮನುಷ್ಯರಲ್ಲಿಷ್ಟ ಗುಣಗಳನ್ನಾದರೂ ವ್ಯಕ್ತಗೊಳಿಸಲು ಪ್ರತ್ಯೇಕ "ಬಿರುದು" ಬೇಕಾಗಿರುವದೆ? ಇದು ಹಠ್ಯತನವೊ, ಅಥವಾ ವಕ್ರದೃಷ್ಟಿಯ ಉಪಕಾರದ ಫಲವೊ?

ಶ್ರೀಯುತ ಭಾಗವತರು ಮತ್ತು ರಾ। ಸುಬ್ರಾಯ ಆಚಾರಿಗಳು ಯಾಕೆ ಬರಲಿಲ್ಲವೆಂದು ಸ್ವಾಗತ ಸಮಿತಿಯವರಾಗಲಿ ಇನ್ನಿತರರ್ಯಾರಾಗಲಿ ಕೇಳಿದರೆ ಎಂಬುದೊಂದೂ ಸಮೀಪದರ್ಶಿಗಳ ಪ್ರಶ್ನೆ. "ಹೊಸ ಹುರುಪು" ಎಂಬ ಲೇಖನವು ಸ್ವಾಗತ ಸಮಿತಿಯವರಿಗೆ ಬರೆಕೊಂಡ ಪತ್ರವಲ್ಲ. ಮಹಾಜನರಿಗೆ ತಿಳಿಸಿದ ನಿಷ್ಕಳಂಕವಾದ ವಾರ್ತೆ. ಅದು ಇನ್ನಿತರರ್ಯಾರ ಪ್ರಶ್ನೆಗೆ ಉತ್ತರವೂ ಅಲ್ಲ. ಅದರಿಂದ ಅಂತಹ ಕುಚೋದ್ಯಗಳನ್ನು ಮಾಡುವದೆಂದರೆ ಅದಕ್ಕೂ ವಕ್ರದೃಷ್ಟಿಯ ನೋಟವೆಂದರೆ ಸಮೀಪದರ್ಶಿಗಳಿಗೆ ಅಪ್ರಿಯವಾಗುವದಲ್ಲ? ನಾವೇನು ಮಾಡಲಿ?

ಸ್ಪರ್ಧೆ ಕಲಹಗಳಿಂದ ಯಕ್ಷಗಾನಿಗಳಲ್ಲಿ ಒಕ್ಕಟ್ಟು ಬಂದುದಿಲ್ಲ. ಅಷ್ಟಲ್ಲದೆ, ಸಪಕ್ಷ, ವಿಪಕ್ಷ, ಉದಾಸೀನಪಕ್ಷಗಳೆಂಬ ವಿಭಾಗದಿಂದ ಯಕ್ಷಗಾನಾಭಿಮಾನಿಗಳಲ್ಲಿಯೂ ಪರಸ್ಪರ ವಿರೋಧವನ್ನು ತಂದುಹಾಕಲು ಸಮೀಪದರ್ಶಿಗಳು ಯತ್ನಿಸುತ್ತಾರೆ. ಯಕ್ಷಗಾನೋಜ್ಜೀವನವೆಂದರೆ ಕಲಹದ ಪೋಷಣೆಯ ಮಾರ್ಗವೆ? ಮನಸ್ಸಿನ ವಕ್ರಗತಿಯ ಪರಿಣಾಮವೆ ಇಂತಹ ಭಾವನೆಯಾಗಿರುವುದು. ಅದರಿಂದ ಸದ್ವಿದ್ಯಾವಂತರು ಉತ್ತಮ ವಿದ್ಯೆಯಾಗಿರುವ ಯಕ್ಷಗಾನವನ್ನು ಪಕ್ಷಪಾತ, ಕಲಹ, ಕುಚೋದ್ಯ ಭಾವ ಮೊದಲಾದ ದುರ್ಗುಣಗಳ ಕೌಲುಮನೆಯಾಗಿ ಮಾಡಿದರೆ ಎಂದೆಂದಿಗೂ ಶ್ರೇಯಸ್ಸು ದೊರೆಯಲಾರದು. ಇದನ್ನು ಎಲ್ಲರೂ ತಿಳಿದಿರಲಿ.

"ದೂರದರ್ಶಿ"

ಜಿಲ್ಲಾ ಉಪಾಧ್ಯಾಯರ ಸಂಘ.

ಒಂದು ಸೂಚನೆ

ಜಿಲ್ಲೆಯ ಎಲ್ಲಾ ಉಪಾಧ್ಯಾಯರ ಸಂಘಗಳ ಏಕೀಕರಣ ಬಗ್ಗೆ ಶ್ರೀಯುತ ಎಂ. ಗಣಪತಿ ರಾವ್ ಐಗಳರವರು ಇದೇ ಪತ್ರಿಕೆಯ ೧೬-೨-೧೯೩೯ರ ಸಂಚಿಕೆಯಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಅದರಲ್ಲಿ ಅವರು ಜಿಲ್ಲಾ ಸಂಘದ ಸ್ಥಾಪನೆ ಬಗ್ಗೆ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘಗಳಿಗೆ ಮಾತ್ರ ಆಮಂತ್ರಣವನ್ನು ಕೊಟ್ಟಿರುವಂತೆ ಕಾಣುತ್ತದೆ. ಕಂಠೀರವ ಮತ್ತು ಸ್ವದೇಶಾಭಿಮಾನಿಯಲ್ಲಿ ಪ್ರಕಟವಾದ ನನ್ನ ಹಿಂದಿನ ಲೇಖನಗಳಲ್ಲಿ ಸ್ಪಷ್ಟವಾಗುವ ಪ್ರಕಾರ ಆಂಥಾ ಜಿಲ್ಲಾ ಸಂಘದಲ್ಲಿ ಜಿಲ್ಲೆಯ ಪ್ರಾಥಮಿಕ ಶಾಲಾ ಉಪಾಧ್ಯಾಯರು ಮಾತ್ರವಲ್ಲ, ಬೇರೆ ಬೇರೆ ತರಗತಿಯ ಶಾಲೆಗಳ ಉಪಾಧ್ಯಾಯರ ಪ್ರಾತಿನಿಧ್ಯವಿರುವದು ಯೋಗ್ಯವೆಂದು ಕಾಣುತ್ತದೆ. ಈ ವಿಷಯ ಸಂಬಂಧಪಟ್ಟವರು ಆಲೋಚಿಸಿ ಆಮಂತ್ರಣಗಳನ್ನು ಕೊಡಬೇಕಾಗಿ ವಿನಂತಿ.

ಈ ವಿಷಯದಲ್ಲಿ ನನ್ನ ಮನಸ್ಸಿಗೆ ತೋರುವ ಅಭಿಪ್ರಾಯಗಳನ್ನು ನನ್ನ ಮುಂದಿನ ಲೇಖಗಳಲ್ಲಿ ಇನ್ನೂ ಸ್ಪಷ್ಟವಾಗಿ ಕೊಡಲಾಗುವದು.

ತಮ್ಮ ಬಂಧು,
ಕಟಪಾಡಿ ಶ್ರೀನಿವಾಸ ಶೆಟ್ಟಿ.

ತಾಲೂಕು ಬೋರ್ಡು ಉಪಾಧ್ಯಾಯ ವರ್ಗದ ಮಹಾಶಯರೇ!

ಬಂಟ್ವಾಳ ಸೆಂಟರಿನ ಕಾರ್ಯದರ್ಶಿಯವರ ಸೂಚನೆಯನ್ನು ತಾವೆಲ್ಲರೂ 'ಸ್ವದೇಶಾಭಿಮಾನಿ'ಯಲ್ಲಿ ಓದಿರಬಹುದು. ಅವರ ಸೂಚನೆಯಂತೆ ಬೋರ್ಡು ಶಾಲೆಗಳ ಉಪಾಧ್ಯಾಯರ ಪರವಾಗಿಯೂ ಪ್ರತಿನಿಧಿಗಳು ಅಗತ್ಯ. ಇಂತಾದರೆ ತಾಲೂಕು ಬೋರ್ಡು ಉಪಾಧ್ಯಾಯರ ಸಂಘದಿಂದಲೇ ಪ್ರತಿನಿಧಿಗಳನ್ನು ಕಳುಹಿಸಲೇ ಬೇಕಲ್ಲವೆ! ಉಡುಪಿ ತಾಲೂಕು ಬೋರ್ಡು ಉಪಾಧ್ಯಾಯರು ತಮ್ಮದೊಂದು ಸಂಘವನ್ನು ಸ್ಥಾಪಿಸಿಕೊಂಡು ಬೇಕುಬೇಕಾದಂತೆ ಕಟ್ಟುಕಟ್ಟಳೆಗಳನ್ನು ಮಾಡಿಕೊಂಡು ಸುವ್ಯವಸ್ಥೆಯನ್ನು ಏರ್ಪಡಿಸಿಕೊಂಡಿರುತ್ತಾರೆಂಬ ವಿಷಯ ವಾರ್ತಾಪತ್ರಿಕೆಯನ್ನು ಓದುವ ತಮಗೊ ತಿಳಿದಿರಬಹುದು. ಹಾಗೆಯೇ ಇತರ ಎಲ್ಲಾ ತಾಲೂಕು ಬೋರ್ಡು ಉಪಾಧ್ಯಾಯರು ತಮ್ಮ ತಮ್ಮ ಪರವಾಗಿ ಒಂದು ಸಂಘವನ್ನು ನಿರ್ಮಿಸಿಕೊಂಡು ಸಂಘದ ಕಾರ್ಯಕಲಾಪಗಳ ನಿರ್ವಾಹಕ್ಕೆ ಬೇಕಾದ ನಿಯಮಗಳನ್ನು ರಚಿಸಿ, ಒಂದು ವ್ಯವಸ್ಥೆಯನ್ನು ಏರ್ಪಡಿಸಿಕೊಳ್ಳುವುದು ಸಮಂಜಸವೆಂಬುದನ್ನು ಬಲ್ಲಿರಿ. ಇದಕ್ಕಾಗಿ ಧಾವಂತಗೊಂಡು ಒಂದು ಸಂಘವನ್ನು ಏರ್ಪಡಿಸಿ ತನ್ಮೂಲಕ ಪ್ರತಿನಿಧಿಗಳನ್ನು ಆರಿಸಿ ಬಂಟ್ವಾಳದಲ್ಲಿ ಜರಗಲಿರುವ ಸಭೆಗೆ ಕಳುಹಿಸಿ. ಉತ್ಸಾಹದಿಂದ ಉದ್ಯೋಗಿಸಬಲ್ಲ ಉಪಾಧ್ಯಾಯರಿಗೆ ಸೂಚಿಸುವದಕ್ಕಾಗಿ ಬೇಸರಿಸಬಾರದಾಗಿ ವಿನಂತಿ.

"ಉಪಾಧ್ಯಾಯ ಬಂಧು".

ಮುಖವು ನಿಮ್ಮ ಒಳಗಿನ ಆರೋಗ್ಯವನ್ನು

ಪ್ರತಿಬಿಂಬಿಸುವದು.

ನೀವು ಹೇಗಿರುವಿರಿ, ನಿಮ್ಮ ಸ್ಥಿತಿ ಹೇಗಿದೆ ಎಂಬುದನ್ನು ನಿಮ್ಮ ಮುಖಚ್ಛಾಯೆಯು ತೋರ್ಪಡಿಸುವದು.

ಬಳಲಿದ ನೀರಸವಾದ ಮುಖದಿಂದ, ಒಳಗಿನ ಆರೋಗ್ಯದ ... ಪ್ರತಿಬಿಂಬವು ಕಂಡು ಹಿಡಿಯುವದು.

ಕಣ್ಣುಗಳ ಬುಡದಲ್ಲಿ ಕಪ್ಪು ಉಂಗುರಗಳಿರುವುದು, ಇಂದ್ರಿಯ ದೋಷಗಳ ಬಾಧೆಯನ್ನು ಸೂಚಿಸುವವು. ಭಾರವಾದ ಕಣ್ಣುಗಳು ಆಗಾಗ ತಲೆನೋವು ಉಂಟಾಗುವದೆಂಬ ನನ್ನ ಗೊತ್ತುಪಡಿಸುವವು. ಬಳಲಿದ ಕೆನ್ನೆ ... ಸೊಂಟ ಮತ್ತು ಹಿಂಗಾಲು ನೋವನ್ನು ಪ್ರಕಟಿಸುವವು.

ಮನಸ್ಸಿನ ಮೊದಲಾದವುಗಳೇ ರಕ್ತದ ಅಶುದ್ಧತೆಯನ್ನು ವ್ಯಕ್ತಪಡಿಸುವವು.

ಆದರೆ ಫೆಲೂನಾ ಮಾತ್ರೆಗಳನ್ನು ಸೇವಿಸುವದರಿಂದ ಇಂದ್ರಿಯಗಳು ಸರಿಯಾಗಿ ಕೆಲಸಮಾಡುವದರಿಂದ ಶರೀರದಲ್ಲಿ ಎಂತಹ ಬದಲಾವಣೆಯಾಗುವದು! ಹೊಳೆಯುವ ಕಣ್ಣುಗಳು, ಸುಂದರ ಮುಖ ಮತ್ತು ಸ್ವಚ್ಛವಾದ ಚರ್ಮ, ಕುಂದದ ಉತ್ಸಾಹ, ನಡಿಗೆಯ ಹುರುಪು ಇವುಗಳು ಒಳಗಿನ ಉತ್ತಮ ಆರೋಗ್ಯದ ಸೂಚನೆಗಳಾಗಿವೆ. ಅಂದಿನ ಆಲಸ್ಯದ ಬಳಲಿಕೆಯ ದಿನಗಳು ಮೆಲ್ಲನೆ ಕಳೆದು ಹೋಗುವವು. ಇಂದಿನ ದಿನಗಳು ಬೇಗನೆ ಕಳೆಯುವವು. ಒಳಗಿನ ಆರೋಗ್ಯವೇ ... ಫೆಲೂನಾ ಮಾತ್ರೆಗಳು ರಕ್ತವನ್ನು ಅಭಿವೃದ್ಧಿಪಡಿಸಿ, ರಕ್ತನಾಡಿಗಳಲ್ಲಿ ತೀವ್ರವಾಗಿಯೂ, ಹೋರಿನಿಂದಲೂ ಚಲಿಸುವಂತೆ ಮಾಡುವವು. ಜೀರ್ಣಕಾರಕ ರಸಗಳನ್ನು ಹುಟ್ಟಿಸುವವು. ತಿಂದ ಆಹಾರದಿಂದ ಶರೀರಕ್ಕೆ ಶಕ್ತಿಯುಂಟಾಗುವದು. ಜೀವನವೇ ಸುಖಮಯವಾಗುವದು.

FELUNA PILLS
for females only

ಇಂಡಿಯಾ, ಬ್ರಿಟನ್, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸಿನಿಂದಲೂ ಉತ್ತಮ ಫೆಲೂನಾ ಮಾತ್ರೆಗಳ ... ಕೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ಮಾರಲ್ಪಡುತ್ತದೆ. ಬಾಟಲಿಗೆ ರು. ೨-...

ಪಟೇಲ್ ಎಂಡ್ ಧೊಂಡಿ,
ಪಿ. ಒ. ಬೋಕ್ಸ್ ೪೪೪, ಬೊಂಬಾಯಿ.

ದಾದಾ ಎಂಡ್ ಕೋ.,
26೮ ಚೈನಾ ಬಜಾರ್ ರೋಡು, ಮದರಾಸು.

10

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಶಾಕುಂತಲ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಕ್ಷಯರೋಗ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಲ್ಯಾಣಮಿತ್ರ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಮೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

[illegible] "[illegible] ರಹಸ್ಯ" ಎಂಬ ಪುಸ್ತಕ [illegible].

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ

ಮುವತ್ತರವಾದ ಬೆಳ್ಳಿ ವ್ಯಾಪಾರಹಗ್ಗ.

ESTD 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವ್ಯಾಪಾರಗಳು ತಯಾರು ಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. [illegible] ಅನುಭವದ ಕೆಲಸದ್ದು ಉಡುದಾರ ಹಗ್ಗಗಳು, ಕಾಲ ಸೈಸ್ಟಿಯು, ದಾರಣೆ ವರದ ವಸ್ತ್ರಯು, ನವಕೆನ ನಾಶಾಯ ವಸ್ತ್ರಯು ಪತ್ರಿಕಾ ಇಂಡಿಯಾದಲ್ಲಿ ಹೆಸರು ಪಡೆದಿವೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡುದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಹುಂಡಿ ವ್ಯಾಪಾರ,
24-8-'28 ಕಮ್ಮಾಪೇಟೆ. ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಆತಂಕನಿಗ್ರಹ ಔಷಧಾಲಯ,

ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—

ಮೆಸ್ಸರ್ಸ್. ರೇಫೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಖಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ವ್ಯಾಪ್ತಿ ಆಗುವ ರೂ. 1000/-ದ ಮೇಲ್ಪಟ್ಟ ಮುದ್ದತಿ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. 10 - @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs 5 - during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to—

Canara Bank Ltd.,
Mangalore. 11—2—1929.

K. Venkat Rao,
Secretary.

THE PANGAL NAYAK BANK, LTD.

Head Office: Udipi, S. K.] *Estd. 1920.* [Branches: Mangalore & Cochin.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಉಡ್ಪಿ, ದ. ಕ.] ಸ್ಥಾಪಿತವಾದದ್ದು 1920. [ಬ್ರಾಂಚುಗಳು ಮಂಗಳೂರು ಮತ್ತು ಕೊಚ್ಚಿ

ಬೇಂಕರರು—ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/-

ಚಂದಾ ಮೂಲಕ ಹಾಕಲ್ಪಟ್ಟ ವಸೂಲಾದ ಮೂಲಧನ ರೂ. 1,50,000-	ಆಪದ್ಧನ ಇತ್ಯಾದಿ ನಿಧಿಗಳು ರೂ. 1,19,000/

FIXED DEPOSITS are received for 3 months at 5%, for 6 or 9 months at 5¼% of 12, 15, 18 or 21 months at 6¼% and for 24 months at 6½%. Interest being payable every 3 Months. SEASON DEPOSITS from January to June at 6¼%. SHORT NOTICE DEPOSITS, withdrawable by giving 15 days previous notice after one month at 4½% and CUMULATIVE DEPOSITS by monthly instalments are also received. SAVINGS BANK DEPOSIT ACCOUNTS may be opened and interest allowed at 4½%. CURRENT DEPOSIT ACCOUNTS may also be opened and interest allowed at 3% from January to June and at 2% from July to December. Loans granted on personal and approved securities on reasonable terms. Banking business of every description transacted.

Further information may be had on application to the Secretary at the HEAD OFFICE or to the AGENT at BRANCH OFFICE.

ಖಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಶ. 5ರಂತೆಯೂ, 6 ಯಾ 9 ತಿಂಗಳುಗಳಿಗೆ ಸಾ. ಶ. 5¼ರಂತೆಯೂ 12, 15, 18, ಯಾ 21 ತಿಂಗಳುಗಳಿಗೆ ಸಾ. ಶ. 6¼ರಂತೆಯೂ, 24 ತಿಂಗಳುಗಳಿಗೆ ಸಾ. ಶ. 6½ರಂತೆಯೂ, ಪ್ರತಿ 3 ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು. ಮುದ್ದತಿ ಠೇವಣಾತಿಗಳು. (ಜನವರಿಯಿಂದ ಜೂನ್ ಅಂತ್ಯದ ವರೆಗೆ) ಸಾ. ಶ. 6¼ರಂತೆಯೂ ಅಲ್ಪಾವಧಿ ಠೇವಣಾತಿಗಳು ಸಾ. ಶ. 4½ರಂತೆಯೂ, ಸಂಚಯ ಠೇವಣಾತಿಗಳು, ಪ್ರಯೋಜನಕರವಾದ [illegible], ಸೇವಿಂಗ್ಸ್ ಬೇಂಕ ಠೇವಣಾತಿಗಳು ಸಾ. ಶ. 4½ರಂತೆಯೂ, ಚಾಲ್ತಿ ಠೇವಣಾತಿಗಳು. ಜನವರಿಯಿಂದ ಜೂನ್ ಅಂತ್ಯದ ವರೆಗೆ ಸಾ. ಶ. 3ರಂತೆಯೂ, ಜುಲಾಯಿ ತಿಂಗಳಿಂದ ಡಿಸೆಂಬರ ಅಂತ್ಯದ ವರೆಗೆ ಸಾ. ಶ. 2 ರಂತೆಯೂ ಅಂಗೀಕರಿಸಲ್ಪಡುವವು.

ಸಾಲಗಳು ಯೋಗ್ಯವಾದ ಜವಾಬ್ದಾರಿಗಳ ಮೇಲೆ ನ್ಯಾಯವಾದ ರೀತಿಯಲ್ಲಿ ಕೊಡಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿನ ಸೆಕ್ರೆಟರಿಯವರಿಗೂ ಯಾ ಬ್ರೇಂಚ್ ಆಫೀಸಿನ ಏಜಂಟರಿಗೂ ಬರಕೊಳ್ಳುವುದು.

ಬೇಂಕಿನ ಆಫೀಸು, ಉಡ್ಪಿ,
ತಾ. 1-2-'29.

ಪಿ. ಲಕ್ಷ್ಮಣ ನಾಯಕ್,
ಒಫೀಸಿಯೇಟಿಂಗ್ ಸೆಕ್ರೆಟರಿ

Diamonds! Diamonds!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಚುನಾಯಿತ (first quality Selected) ಎಂಟ್‌ವರ್ಪಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

Diamonds ವಜ್ರಗಳು Diamond

BOLA MANGESH ROW &
MANGALORE.

Agents & Direct Importers of
Daimonds of Antwe

ಡೈರೆಕ್ಟಾಗಿ, ಎಂಟ್‌ವರ್ಪಿನಿಂದ
— ವಜ್ರಂಗಳು [illegible]

ಬೋಳ

[illegible]

ಮಾನಪತ್ರದ ಅವಮಾನ.

ಮದ್ರಾಸು ಕಾರ್ಪೊರೇಶನು ಕಷ್ಟಪಟ್ಟು ಸ್ಯಾಮನ್ ಸಮಿತಿಗೆ ಮಾನಪತ್ರಕೊಡುವ ಠರಾವನ್ನು ಮಂಜೂರು ಮಾಡಿತು; ಮಾತ್ರವಲ್ಲದೆ ಕೊಟ್ಟೂ ಬಿಟ್ಟಿತು. ಆದರೆ ಈ ಮಾನಪತ್ರವನ್ನು ಈ ಮೊದಲಿನ ಕ್ರಮದಂತೆ ಟೌನ್‌ಹೋಲಿನಲ್ಲಿಯೇ ಕೊಡಲು ಅಧ್ಯಕ್ಷರಿಗೆ ಮನಸ್ಸೊಪ್ಪದೆ ಅದನ್ನು ಅವರು ಹಾರ್ಬರಿನಲ್ಲಿ ಸುರಕ್ಷಿತವಾಗಿ ಸ್ಯಾಮನ್ ಸಮಿತಿಗೆ ಭಕ್ತಿಪೂರ್ವಕವಾಗಿ ಒಪ್ಪಿಸಿದರು. ಈ ಸಮಾರಂಭಕ್ಕೆ ಆಮಂತ್ರಣಗಳನ್ನು ಕಳುಹಿಸುವಾಗ ಅಧ್ಯಕ್ಷರು ಕಾರ್ಪೊರೇಶನು ಠರಾವಿಗೆ ಪ್ರತಿಕೂಲ ಮತಗಳನ್ನು ಕೊಟ್ಟವರಿಗೆ ಆಮಂತ್ರಣಗಳನ್ನು ಕಳುಹಿಸದೆ ಅನುಕೂಲ ಮತಗಳನ್ನು ಕೊಟ್ಟವರಿಗೆ ಮಾತ್ರ ಆಮಂತ್ರಣಗಳನ್ನು ಕೊಟ್ಟರು. ಅನುಕೂಲ ಪ್ರತಿಕೂಲ ಮತಕೊಡುವುದು ಅವರವರ ಸ್ವೇಚ್ಛೆ; ಆದರೆ ಒಂದು ಬಾರಿ ಮಂಜೂರಾದ ಮೇಲೆ ಠರಾವು ಎಲ್ಲರಿಗೂ ಅನ್ವಯಿಸುವುದು. ಆದುದರಿಂದ ಅನುಕೂಲ ಮತಕೊಟ್ಟವರು ಮತ್ತು ಪ್ರತಿಕೂಲ ಮತ ಕೊಟ್ಟವರೆಂಬ ಭೇದಗಳನ್ನುಂಟುಮಾಡುವ ಅಧಿಕಾರವು ಅಧ್ಯಕ್ಷರಿಗಿಲ್ಲ. ಹಾಗೆ ಭೇದವನ್ನುಂಟುಮಾಡಿ ಪ್ರತಿಕೂಲಮತದವರಿಗೆ ಆಮಂತ್ರಣವನ್ನು ನಿರಾಕರಿಸಿದುದು ಪ್ರತಿಕೂಲ ಮತ ಕೊಟ್ಟವರಿಗೆ ಅವಮಾನ ಮಾಡಿದಂತಾಯಿತು ಮಾತ್ರವಲ್ಲದೆ ವ್ಯವಸ್ಥಿತ ಸಂಸ್ಥೆಗನೇ ಅಧ್ಯಕ್ಷರು ಅವಮಾನ ಮಾಡಿದಂತಾಯಿತು. ಅಧ್ಯಕ್ಷರ ಈ ವರ್ತನವು ಉದ್ದೇಶಪೂರ್ವಕವಾದುದೆಂದು ತಿಳಿದುಬರುವುದರಿಂದ ಅಕ್ಷಮ್ಯವಾದುದೆಂದೂ ಹೇಳಬೇಕಾಗುವುದು. ಆದರೆ ಈ ಬಗ್ಗೆ ನಿಷೇಧವನ್ನು ವ್ಯಕ್ತಪಡಿಸುವಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸ್ವಲ್ಪಮಟ್ಟಿಗೆ ತಾಳ್ಮೆ ತಪ್ಪಿದ್ದರೆಂದು ತೋರುವುದು. ಬರೇ ಉನ್ಮತ್ತ ಕೋಪ ಪ್ರದರ್ಶನವು ನಿಷೇಧದ ಮಹತ್ವವನ್ನು ಕುಗ್ಗಿಸುವುದು. ಇವೆಲ್ಲವುಗಳಿಂದ ಸ್ಯಾಮನ್ ಸಮಿತಿಯ ಸ್ವಾಗತಕ್ಕಾಗಿ ಎಂತಹ ಉಪಾಯಗಳನ್ನೆಲ್ಲಾ ಅನುಸರಿಸಬೇಕಾಗುತ್ತದೆಂದು ತಿಳಿದು ಬರುವುದು. ಮದ್ರಾಸ್ ಕಾರ್ಪೊರೇಶನಿನ ಅಧ್ಯಕ್ಷರೊಡನೆ ಕಾರ್ಪೊರೇಶನಿನ ಬಹುಮತದ ಠರಾವಿದ್ದರೂ ಪ್ರಜೆಗಳಲ್ಲಿ ಬಹುಸಂಖ್ಯಾತರು ಅದಕ್ಕೆ ವಿರೋಧವಿದ್ದ ಮಾನಪತ್ರ ಸಮರ್ಪಣೆಯ ಸಮಾರಂಭಕ್ಕೆ ತೊಂದರೆ ಬರಬಹುದೆಂದು ಪೋಲಿಸ್ ಪಡೆಯ ಕಾವಲಿನೊಳಗೆಯೇ ಅದನ್ನು ನಡಿಸಿದರು; ಮತ್ತು ಪ್ರತಿಕೂಲಮತದವರು ತಮ್ಮ ನಿಷೇಧವನ್ನು ವ್ಯಕ್ತಪಡಿಸಬಹುದೆಂದು ಹೆದರಿ ಅವರಿಗೆ ಆಮಂತ್ರಣವನ್ನೇ ನಿರಾಕರಿಸಿದರು. ಭಯಶಂಕೆಗಳಿಂದ ವ್ಯವಸ್ಥೆಗೊಳಿಸಲ್ಪಡುವ ಈ ಸ್ವಾಗತಗಳಿಗೆ ಸ್ಯಾಮನರು ಎಷ್ಟು ಬೆಲೆ ಕೊಡುವರೋ! ಸರಕಾರಕ್ಕೆ ಎಷ್ಟು ಮನಸ್ಸಮಾಧಾನವಾಗುವುದೋ! ರಾಜಭಕ್ತರಿಗೆ ಎಷ್ಟು ಉಲ್ಲಾಸವಾಗುವದೋ. ಅಂತೂ ಸ್ಯಾಮನರನ್ನು ಮಾನಿಸಲಿಕ್ಕೆ ಹೋಗಿ ಸ್ವಾಭಿಮಾನವನ್ನೇ ಮರೆಯುವ ಈ ಭಕ್ತಿಯ ಮಾನಸಿಕತೆಯೇ ವಿಚಿತ್ರದ್ದಾಗಿದೆ

ಪಟೇಲರ ಚಹಾಪಾರ್ಟಿ.

ಪಟೇಲರು ಒಂದು ಫಲಾಹಾರದ ಪಾರ್ಟಿಯನ್ನು ಕೊಡಿಸಿದರು. ಅದಕ್ಕೆ ವ್ಯಾಸರಾಯರೂ, ಅವರ ಪ್ರೈವೇಟ್ ಸೆಕ್ರೆಟರಿಯವರೂ, ಆಮಂತ್ರಿತರಿದ್ದರಲ್ಲದೆ, ಮಹಾತ್ಮಾಗಾಂಧಿಯವರೂ, ಜಿನ್ನಾರವರೂ, ಮೋತಿಲಾಲ ನೆಹರೂರವರೂ ಮೊದಲಾಗಿ ಪ್ರಮುಖ ರಾಜಕೀಯ ಮುಂದಾಳುಗಳೂ ಹಾಜರಿದ್ದರು. ಆಸನಯೋಜನೆಯು ಕೂಡ ಉದ್ದೇಶಪೂರ್ವಕ ಮಾಡಲ್ಪಟ್ಟಿತು. ವ್ಯಾಸರಾಯರೊಡನೆ ಮಹಾತ್ಮಾಜೀ ಮತ್ತು ಜಿನ್ನಾರವರು ಕೂತುಕೊಂಡಿದ್ದರು. ಪ್ರೈವೇಟ್ ಸೆಕ್ರೆಟರಿಗಳೊಡನೆ ಪಂಡಿತ ಮಾಲವೀಯರು ಇದ್ದರು. ಮೋತಿಲಾಲ ನೆಹರೂರವರೂ, ಶ್ರೀ ಅಣ್ಣಾರಾಯರವರೂ, ಸರ್. ಡಿ. ಆರ್. ಲಿಂಡ್ಸೆಯವರೊಡನೆ [illegible] ಹೀಗೆ ಕೆಲವು ಪ್ರಜಾಪಕ್ಷದ ಮುಂದಾಳುಗಳು ಸರ[illegible] ಮುಖ ಅಧಿಕಾರಿಗಳೊಡನೆ ಕೂಡಿಸಲ್ಪಟ್ಟಿದ್ದರು. ಪ್ರ[illegible] ತಿನಿಧಿಯೊಬ್ಬರು ಪಂಡಿತ ಮೋತಿಲಾಲ ನೆಹರೂ [illegible] ನಡೆಯಿತೆಂದು ಕೇಳಿದಾಗ ಉತ್ತಮ ಚಹಾವೂ, [illegible]ತಿಂಡಿಗಳೂ ಇದ್ದುವಲ್ಲದೆ ಸಾರ್ವಜನಿಕ ಪ್ರಶ್ನೆಗಳ [illegible]ಎಂದು ಹೇಳಿರುವರಾದರೂ, ಈ ಫಲಾಹಾರದ [illegible] ಪೂರ್ವಕವಾಗಿಯೇ ಕೂಡಿಸಲ್ಪಟ್ಟಿತೆಂದೂ, ಮತ್ತು ಇತರ ರಾಜಕೀಯ ಪ್ರಶ್ನೆಗಳು [illegible]ತೀಯ ಪ್ರಶ್ನೆಗಳೂ ಅಲ್ಲಿ ಚರ್ಚಿಸಲ್ಪ[illegible]

ಪ್ರಯತ್ನವೂ ಮಾಡಲ್ಪಟ್ಟಿದೆ. ಲಾರ್ಡ್ ಅರ್ವಿನರು ಬೇಗನೆ ಇಂಗ್ಲೆಂಡಿಗೆ ರಜೆಯ ಮೇಲೆ ಹೋಗಬಹುದಾಗಿ ತಿಳಿದುಬಂದಿದೆ. ಹೋಗುವ ಮೊದಲು ಹಿಂದೂಸ್ಥಾನದ ರಾಜಕೀಯ ಮುಖಂಡರ ಮನಸ್ಸನ್ನು ಸ್ವಂತ ಅನುಭವದಿಂದ ತಿಳಿಯುವ ಇಚ್ಛೆಯಿಂದ ವ್ಯಾಸರಾಯರು ಈ ಪಾರ್ಟಿಗೆ ಬಂದಿರಬಹುದೆಂದು ಊಹಿಸಲು ಕಾರಣವಿದೆ. ಸರಿಯಾದ ಔದಾರ್ಯದಿಂದಲೂ, ಸ್ನೇಹದಿಂದಲೂ, ಸಹಾನುಭೂತಿಯಿಂದಲೂ, ಸರಕಾರದ ಅಧಿಕಾರಿಗಳೂ ಪ್ರಜಾಮುಖಂಡರೂ ಒಟ್ಟಾಗಿ ದೇಶದ ಮಹತ್ವದ ಸಮಸ್ಯೆಗಳನ್ನು ಚರ್ಚಿಸಿದರೆ ಅದರಿಂದ ಒಳ್ಳೇಯದೇ ಆಗುವುದು. ಈ ಬಾರಿಯ ಅಭಿಪ್ರಾಯ ವಿನಿಮಯಗಳಿಂದ ಸರಕಾರದ ಧೋರಣದಲ್ಲಿ ಯಾವ ತರದ ಪರಿಣಾಮವು ಉಂಟಾಗಬಹುದೆಂದು ಊಹಿಸಲು ಸಾಧ್ಯವಿರುವುದಿಲ್ಲ. ಆದರೆ ವ್ಯಾಸರಾಯರು ಬೇಗನೆ ಇಂಗ್ಲೆಂಡಿಗೆ ಹೋಗುವುದಾದರೆ, ಅಲ್ಲಿ ಅವರು ರಾಜಕೀಯ ವಿಷಯಗಳನ್ನು ಬ್ರಿಟಿಷ ಸರಕಾರದೊಡನೆ ಮುಖತಃ ಮಾತನಾಡಲಿಕ್ಕೆ ಹೋಗುವುದರಿಂದಲೂ, ಅಂತಹ ಮಾತುಗಳಲ್ಲಿ ಸರಕಾರವು ಹೆಚ್ಚಿನ ಸಹಾನುಭೂತಿಯನ್ನು ತೋರಿಸುವ ಅವಶ್ಯಕತೆಯಿದೆ ಎಂದು ಹೇಳಲಿಕ್ಕಿಲ್ಲವಾದರೆ ಈ ತರದ ಅಭಿಪ್ರಾಯ ವಿನಿಮಯವು ಅವಶ್ಯವಿಲ್ಲವಾದುದರಿಂದಲೂ, ಈ ಬಾರಿಯ ಪಟೇಲರ ಚಹಾವು ಮುಂದಿನ ರಾಜಕೀಯ ಬದಲಾವಣೆಗಳ ಶುಭಚಿಹ್ನೆಯಾಗಬಹುದೆಂದೂ ಆಶಿಸಲು ಕಾರಣವಾಗುತ್ತದೆ.

ಕರ್ನಾಟಕ ಮುದ್ರಣ.

ಇಡೀ ಕರ್ನಾಟಕದಲ್ಲಿ ಮುದ್ರಣಕ್ಕೆ ಹೆಸರು ಉಂಟುಮಾಡಿದವರು ಮಂಗಳೂರಿನವರು. ಪ್ರಥಮತಃ ಬಾಸೆಲ್ ಮಿಶನ್ನಿನವರು ಮುದ್ರಾಶಾಲೆಯನ್ನು ಹೊರಡಿಸಿದರು. ಮುದ್ರಣ ಕಲೆಯಲ್ಲಿ ಜರ್ಮನ್ ಪಾದ್ರಿಗಳು ಸ್ವತಃ ಶೋಧನೆಯನ್ನು ಮಾಡಿಕೊಂಡು ಸ್ವಚ್ಛವೂ ಸುಂದರವೂ ಆದ ಮುದ್ರಣವನ್ನು ಹೊರಡಿಸಿದರು. ಆ ಮೇಲೆ ದಕ್ಷಿಣಕನ್ನಡದ ಕೈಗೆಲಸದವರೆಲ್ಲರನ್ನು ಹಿಡಿದು ಮುಂಬಯಿಯ ನಿರ್ಣಯಸಾಗರದವರು ಉತ್ತಮ ಮೆಟ್ರಿಕ್ಸ್‌ಗಳನ್ನು ತಯಾರಿಸಿ ಕನ್ನಡ ಅಕ್ಷರದ ಅಚ್ಚುಗಳನ್ನು ಕೊಟ್ಟರು. ಮಂಗಳೂರಿನಲ್ಲಿ ಮೊದಲು ಈ ಅಚ್ಚುಗಳು ಪ್ರಾಧಾನ್ಯವನ್ನು ಹೊಂದಿದರೂ ಕೆಲಸಮಯದ ಮೇಲೆ ಸ್ವಂತ ಅಚ್ಚು ತಯಾರಿಸದೆ [illegible] ಮುದ್ರಣವನ್ನು ಸುಧಾರಿಸಿದರು. ಮಂಗಳೂರು ಮುದ್ರಣಕ್ಕೆ ಸರಿಯಾದ ಮುದ್ರಣವು ಎಲ್ಲಿಯೂ ಆಗುತ್ತಿರಲಿಲ್ಲ. ಬೆಂಗಳೂರಿನಲ್ಲಿ ಹೊಗೆ ಹಿಡಿದಂತಹ ತೀರಾ ಕಾಗದದಲ್ಲಿ ಅಸ್ಪಷ್ಟವಾದ ಅಕ್ಷರಗಳಲ್ಲಿ ಗ್ರಂಥಗಳು ಪ್ರಕಟವಾಗುತ್ತಿದ್ದುವು; ಧಾರವಾಡದ ಮುದ್ರಣವೂ ಓದಲಿಕ್ಕೆ ಕಷ್ಟವನ್ನುಂಟುಮಾಡುವಂತಹವುಗಳಾಗಿರಲಿಲ್ಲ. ಧಾರವಾಡ ಮತ್ತು ಉತ್ತರ ಕರ್ನಾಟಕದ ಮುದ್ರಣವು ಹಿಂದಿಗಿಂತಲೂ ಸುಧಾರಿತವಾಗಿರುವುದಾದರೂ, ಅದು ಇನ್ನೂ ಬಹಳವಾಗಿ ತಿದ್ದಲ್ಪಡುವ ಅವಶ್ಯಕತೆ ಇರುತ್ತದೆ. ಎಲ್ಲಾ ಕಡೆಗಳಿಗಿಂತಲೂ ಬೆಂಗಳೂರು ಮುದ್ರಣವು ಬಹು ಬೇಗನೇ ಸುಧಾರಿಸಲ್ಪಟ್ಟಿದೆ. ಅಲ್ಲಿಯ ಹಲವು ಕಡೆಗಳಲ್ಲಿ ಮುದ್ರಣವು ಬಹಳ ಚೆನ್ನಾಗಿರುತ್ತದೆ. ಬೆಂಗಳೂರಿನ ಮುದ್ರಣ ಕಲಾ ಅಭಿವೃದ್ಧಿಗಾಗಿ ನಾವು ಬೆಂಗಳೂರನ್ನು ಅಭಿನಂದಿಸುತ್ತೇವೆ. ಮಂಗಳೂರಿನೊಡನೆ ಸ್ಪರ್ಧಿಸಲಿಕ್ಕೆ ತತ್ಕಾಲಕ್ಕೆ ಬೆಂಗಳೂರೇ ಎದುರು ಇರುತ್ತದೆ. ಮಂಗಳೂರು ಮುದ್ರಣವು ಒಳ್ಳೇಯದಿದೆ. ಆದರೆ ಮಂಗಳೂರು ಮುದ್ರಣವು ಮತ್ತೂ ಒಳ್ಳೇಯದಾಗಬೇಕೆಂಬ ಆಕಾಂಕ್ಷೆಯನ್ನು ತೋರಿಸದೆ ಇರುವುದು ದುಃಖಕರ. ಹದಿನೈದು ವರ್ಷಗಳಿಂದೀಚೆಗೆ ನಮ್ಮ ಜಿಲ್ಲೆಯಲ್ಲಿ ಮುದ್ರಾಶಾಲೆಗಳ ಸಂಖ್ಯೆಯು ಬೆಳೆಯುವುದು ಕಾಣುತ್ತದಲ್ಲದೆ ಮುದ್ರಣ ಕಲೆಯು ಬೆಳೆದಿಲ್ಲ. ಮುದ್ರಣ ಕಲೆಯು ಶ್ರೇಷ್ಠತರವಾದ ಕಲೆಗಳಲ್ಲಿ ಒಂದಾಗಿರುತ್ತದೆ ಅದರ ಬೆಳವಣಿಗೆಯು ಹಲವು ತರದ್ದಾಗಿದೆ ಆಧುನಿಕ ಮುದ್ರಣ ಕಲೆಯ ಚಿತ್ರದ ಒಂದಂಶವಾದರೂ ಈಗಿನ ಕರ್ನಾಟಕ ಮುದ್ರಣಗಳಲ್ಲಿಲ್ಲ. ಆದುದರಿಂದ ಸ್ಪಷ್ಟವಾಗಿ ಮುದ್ರಿಸಿಬಿಟ್ಟರೆಂದರೆ ಅಭಿವೃದ್ಧಿಯ ಮೇರೆಯನ್ನು ಮುಟ್ಟಿದಂತಾಗಲಿಲ್ಲ. ಬೆಂಗಳೂರಿನೊಡನೆ ಮಂಗಳೂರು ಸಚೇತನವಾಗಿ ಹೆಚ್ಚಿನ ಆಸಕ್ತಿಯಿಂದ ಪ್ರತಿಸ್ಪರ್ಧಿಸುವುದು ಅಗತ್ಯವೂ ಹಿತಕರವೂ ಇರುತ್ತದೆ

ಇಂಥಾ ಕಮಿಟಿಯಿಂದ ಸಿಕ್ಕುವದು ಭಕ್ತಿ ಮೆಂಬರರಿಗೆ, ಬೇಡಾದ ಶರ್ತಗಳು ಕೂಲಿಕಾರರಿಗೆ.

• • • •

ಸ್ಯಾಮನ ಕಮಿಟಿಯು ಮಾರ್ಚ ಮೊದಲನೆ ವಾರದಲ್ಲಿ ಮೈಸೂರು, ಬೆಂಗಳೂರು ಅತ್ತಕಡೆ. ಅಲ್ಲಿ ಹೋಗಿ ಮಾಡುವ ಕೆಲಸ, ಬೇಟೆಯಾಡುವುದು.

• • • •

ಮೈಸೂರು ಬೆಂಗಳೂರು ಅತ್ತಕಡೆ ಕಾಡಿನಲ್ಲಿ ಮೃಗಗಳು ಜಾಸ್ತಿಯಾದಕ್ಕೆ ಇವರ ಬೇಟೆ.

ನೋಟಗಳು
NOTES

ಕಳೆದ ವಾರದಲ್ಲಿ ನಮ್ಮ ಮಂಗಳೂರಿನ ವೆಂಕಟರಮಣ ದೇವಸ್ಥಾನ ರಥೋತ್ಸವ ಮುಗಿಯಿತು, ಎಲ್ಲವೂ ಶಾಂತ.

• • • •

ಎಲ್ಲವೂ ಶಾಂತತೆಯಲ್ಲಿ ನಡೆಯಲು ಪೋಲೀಸರ ಸಾಹಸ ಹೆಚ್ಚಿನ ಪರಿಶ್ರಮದಲ್ಲಿ ನಡೆದಿರುತ್ತದೆ. ಆದರೆ ಹೂ ಮಾಲೆ ಬಿದ್ದದ್ದು ಇನ್ನೊಂದು ಕಡೆಯವರಿಗೆ.

• • • •

ಮಾಮೂಲು ಪ್ರಕಾರ ನಡೆಯುವ ಮೃಗಬೇಟೆ ಉತ್ಸವವು ಜಾಮಿ ಪಳ್ಳಿಯ ಎದುರಿನಿಂದಲೇ ನಡೆಯಿತು. ಮುಸಲ್ಮಾನರು ಪಳ್ಳಿಯ ಒಳಗಿನಿಂದ ಕಾಣುತ್ತಿದ್ದರು. ದೇವರ ಬೇಟೆ ಸಮೀಪಿಸುವಾಗ ಪಳ್ಳಿಯ ಬಾಗಿಲು ಮುಚ್ಚಲ್ಪಟ್ಟಿತು. ಎಲ್ಲವನ್ನೂ ಶಾಂತದಲ್ಲಿ ಮತ್ತು ಏನೊಂದು ಘಲಾಟೆಯಾಗದ ನೋಡಿಕೊಳ್ಳುತ್ತೇನಾಗಿ ಹೇಳಿದ ಪೌಜುದಾರರೇ (ಪಳ್ಳಿಯ ಬಾಗಿಲಿಗೆ) ಕೀಲು ಹಾಕಿ ನಿಂತುಕೊಂಡಿದ್ದರು. ಬಾಗಿಲಿಗೆ ಕೀಲು ಹಾಕಿದುದರಿಂದ ಮುಸಲ್ಮಾನರಿಗೆ ಹೊರ ಬರಲು ಹಾದಿ ಇರಲಿಲ್ಲ.

• • • •

ಉತ್ಸವ ಸಮಾರಂಭಗಳು ಪೋಲೀಸರ ಸಹಾಯದಿಂದ ಆಡಳಿತೆಯ ಮೊಕ್ತೇಸರರು ಹಗಲು ರಾತ್ರೆ ನಿದ್ದೆಬಿಟ್ಟು ನಡೆಸಿದರು. ಜನರಲ್ಲಿ ಉತ್ಸವ ಹೊರಡುವ ವಿಷಯ ಹೆಚ್ಚಿನ ಗಲಭೆ ಉಂಟಾದರೂ ಇತರ ಮೊಕ್ತೇಸರರ ಲಕ್ಷ್ಯ ಮಧ್ಯದಲ್ಲಿತ್ತು.

• • •

ಕಡೆಗೆ ಉತ್ಸವ ಸರಿಯಾಗಿ ನಡೆಸಲಿಕ್ಕೂ ಆಫೀಸರರಿಗೆ ಸಮಾಧಾನ ಹೇಳಲಿಕ್ಕೂ ಬೇಕಾದವರು ಜಾತಿಯಿಂದ ಹೊರಗೆ ಓಡಿಸಿದವರು.........ಜಾತಿಯ ಮುಖ್ಯಸ್ಥರಿಗೆ ಪುರುಸತ್ತು ಕಡಿಮೆಯಾಗಿತ್ತಂತೆ.

• • • •

ಸ್ಯಾಮನ್ ಸಾಹೇಬರು ಮದ್ರಾಸಿಗೆ ಕಳೆದ ಸೋಮವಾರ ತಾ. ೧೮ಕ್ಕೆ ಬಂದಿಳಿದರು. ಮಾರಾಮಾರಿ ಕಾಣುವುದಿಲ್ಲ. ಆದರೆ ಸಭೆಗಳು ಪ್ರಚಂಡ ರೀತಿಯಲ್ಲಿ ನಡೆದಿದ್ದಾವೆ.

• • • •

ಸ್ಯಾಮನ್ ಕಮಿಶನ್ ಎದುರುಗೊಳ್ಳಲು ಮದ್ರಾಸಿನ ಹಾರ್ಬರಿನಲ್ಲಿ ಕಾರ್ಪೊರೇಶನಿನ ಮಾನಪತ್ರಕ್ಕೆ ಎದುರಾಗಿ ಓಟುಕೊಟ್ಟವರಿಗೆ ಸ್ವಾಗತಕ್ಕೆ ಬರಬಾರದಾಗಿ ಪ್ರೆಸಿಡೆಂಟರವರು ಬಹಿರಂಗವಾಗಿ ತಿಳಿಸಿದ್ದರು. ಇದು ಹೊಸ ಕ್ರಮ.

• • •

ಪ್ರೆಸಿಡೆಂಟರ ಹೊಸ ಕ್ರಮವನ್ನು ಖಂಡಿಸಲು ಮೆಂಬರರ ಶಪಥ, ಇಂಥಾ ಕ್ರಮ ತಮಗೆ ತಂದು ಅವಮಾನಪಡಿಸಿದುದಕ್ಕೆ ಮೆಂಬರರು ಬೇಗ "ಬಂದಿ, ನಮ್ಮ ಮೀಟಿಂಗಿ" ಎಂದು ಕೂಗುತ್ತಿರುವರು.

• • •

ಮೆಂಬರರ ಮೇಜಿನ ಮೇಲೆ ಇದ್ದ ಪೇಪರ್ ವೈಯಿಟ್ ಆ ಸಲ ಮೆಂಬರರಿಗೆ ಬಹು ಉಪಕಾರಕ್ಕೆ ಬಿತ್ತು. ವೈಯಿಟನ್ನು ಮೇಜಿಗೆ ಬಡಿದು ಗೊಂದಲದ ಶಬ್ದಗಳನ್ನು ಮಾಡಿದರು.

• • •

ಪ್ರೆಸಿಡೆಂಟರು ತಮ್ಮ ಚಂದ ಮಾತುಗಳನ್ನು ತಿಳಿಸುವದರಲ್ಲಿ ಮೆಂಬರರ ಸೂಚನೆ—ಪ್ರೆಸಿಡೆಂಟರವರೆ ಹೊರ ಹೋಗಬೇಕಾಗಿ. ಏನೊಂದು ಮಾತನಾಡಲು, ಏನೊಂದು ಮಾಡಲು ಆಗದ ಪ್ರೆಸಿಡೆಂಟರು ಪಲಾಯನಮಾಡಬೇಕಾಯಿತು!

• • •

ಈ ವಾರದಲ್ಲಿ ನಮ್ಮ ಮಂಗಳೂರು ಹಳೇಕೋಟೆ ಮಾರಿಯಮ್ಮನವರ ಮಹಾ ಪೂಜೆಯ ಮುಹೂರ್ತ ಧ್ವಜವನ್ನು ಪೇಟೆ ತಿರುಗಾಡಿಸಿ, ಇರಿಸುವ ಸಮಾರಂಭವು ವೆಂಕಟರಮಣ ದೇವಸ್ಥಾನದ ರಥೋತ್ಸವದ ಒಟ್ಟಿಗನೇ ಆಗಿಹೋಯಿತು.

• • •

ಮುಹೂರ್ತ ಧ್ವಜಕ್ಕೆ ಸುಮಾರು ೪೦೦, ೫೦೦ ಜನ ಮೊಗವೀರರು ಬೇಂಡುವಾದ್ಯ ಭಜನೆಗಳಿಂದ ಕೂಡಿ ಮೆರವಣಿಗೆಯು ಜಾಮಿ ಪಳ್ಳಿಯ ಎದುರಿನಿಂದ ವಾದ್ಯ ಬೇಂಡಿನಿಂದಲೇ ಸಾಗಾಯಿತಂತೆ. ನಿಜವಾದಲ್ಲಿ ಮುಂದಕ್ಕೆ.......

• • •

ಬಗ್ಗಿದವರಿಗೆ ಒಂದು ಗುದ್ದು ಹೆಚ್ಚು ಎಂಬ ಗಾದೆಗೆ ಮೇಲಿನದೆ ಒಂದು ದೃಷ್ಟಾಂತ.

• •

ಬೆಂಗಳೂರಲ್ಲಿ ಗಲಾಟೆಯಾಗಿ ವಿಚಾರಣೆಯಾಗಿ ವಿಚಾರಣೆ ಮುಗಿದಾಗ್ಯೆ ಮುಂಬಾಯಿಯಲ್ಲಿ ಮುಂಬಾಯಿ ಗಲಾಟೆಯ ಕಮಿಟಿ ಕಾರ್ಯ ಪ್ರಾರಂಭ.

ನಂಬ್ರ ೫೯೫ನೇ ಅಕೋಲಾ ಸಹಕಾರ ಸಂಘ ಮಹಾಸಭೆಯೂ ಇದೇ ಬರುವ ಮಾರ್ಚ ತಾ. ೧೯ನೇ ಆದಿತ್ಯವಾರ ದರಾಹ್ನ ಘಂಟೆ ೧-೩೦ಕ್ಕೆ ಮ. ರಾ. ರಾ. ಸಿ. ಕೃಷ್ಣನ್‌ನಾಯರ್, ಅವರ್, ಅಸಿಸ್ಟೆಂಟ್ ರಿಜಿಸ್ಟ್ರಾರರ ಅಧ್ಯಕ್ಷತೆಯಲ್ಲಿ ಜರಗಲಿರುವುದರಿಂದ, ಕೂಡಬಿದರೆ ಕೃಷಿ ಇಲಾಖಾ ಇನ್ಸ್‌ಪೆಕ್ಟರವರು ಕೃಷಿಯ ವಿಷಯಗಳ ಬಗ್ಗೆ ಅನುಭವ ಕೊಡಲು ಬರಲಿರುವುದರಿಂದಲೂ, ಎಲ್ಲಾ ಸದಸ್ಯರು ಮೆಂಬರರು ವ ಸಹಕಾರಿಗಳು ತಪ್ಪದೆ ಹಾಜರಾಗಬೇಕಾಗಿ ಅಧ್ಯಕ್ಷ ಎಮ್. ಎನ್. ದೇವರಾಜ ಹೆಗ್ಗಡೆಯರು ಅಪೇಕ್ಷಿಸುತ್ತಾರೆ.

ಇಲ್ಲಿ ದಯೊಳಗಳಾದ ಬೋರ್ಡಿನವರು ಕಟ್ಟಿದ ಧರ್ಮಬಾವಿಯ (Public well) ಕೆಲಸವು ಪೂರೈಯಾದ ಸುದ್ದಿ ಸಂತೋಷದ ವಾರ್ತೆ. ಆದರೆ ಇದರಲ್ಲಿ ಬೇಸಗೆ ಆಖೈರು ವರೆ ನೀರು ಇರುವುದೋ ಏನೋ ನೋಡಬೇಕು! ಆಗದಾತ್ತವಲ್ಲವೆ ನಮ್ಮ ಸದಾಕಾಲದ ಅಭಿನಂದನೆಗಳು!!

ಕಾಪು — ಇಲ್ಲಿಯ ಶ್ರೀ ಜನಾರ್ಧನದೇವರ ಸನ್ನಿಧಿಯಲ್ಲಿ ವರ್ಷಾವಧಿ ಜರಗಿತಕ್ಕೆ ಜಾತ್ರೆಯು ಮುಗಿಯಿತು. ಕೆಲವು ವರ್ಷಗಳಿಂದ ಆಗುತ್ತಲಿದ್ದ ಜಾತ್ರೆಗಿಂತ ಈ ವರುಷದ ಜಾತ್ರೆಯು ಅತಿ ವಿಜೃಂಭಣೆಯಿಂದಲೇ ಆಯಿತು. (ಕೋಳಿ) ಅಂಕ ಕಟ್ಟುವ ಜನಗಳ ದೆಸೆಯಿಂದ ಅಹೋರಾತ್ರಿ ಆರಂಭದಿಂದ ಅಂತ್ಯದವರೆಗೆ ಜನಸ್ತೋಮವು ತುಂಬಿಯೇ ಇತ್ತು. ಜೂಗಾರಿ ಕಳವಿಗೂ ಕಡಿಮೆ ಇದ್ದಿಲ್ಲ. ಆವರೆಗೆ ದೂರದಿಂದ ಬಂದ ಸಂಕಷ್ಟ ಪಟ್ಟು ಕಾಲು ನಡಿಗೆಯಿಂದ ನರಳುತ್ತಿರುವವರೂ ಮೋಟರು ಕಾರಿನಲ್ಲಿ ಬರುವವರೂ ದೇವಸ್ಥಾನಕ್ಕೆ ಬಂದು ಉತ್ಸವವು ಸೂತ್ರದಲ್ಲಿ ನೆರವೇರುವಂತೆ ಮಾಡಿರುವನು. ಉತ್ಸವದ ಬಳಿಕ ನೋಡುವ ಪಟ್ಟಣಿಗರಿಗೆ ಆರೋಗ್ಯವಾಗುವಂತೆಯೂ ತನ್ನ ಸೇವೆಯನ್ನು ಚಿರಕಾಲ ನಡಿಸಿಕೊಳ್ಳುವಂತೆಯೂ ಶ್ರೀ ಜನಾರ್ದನನು ಅನುಗ್ರಹಿಸಲೇ!

ಇಲ್ಲೊಂದು ಟಪ್ಪಾಲು ಕಟ್ಟೆ ಈಗಳ ಆದುದು ರಜೆಗೆ, ಹಣದ ವಹಿವಾಟಿಗೆ ಏನೂ ಕಡಿಮೆಯಿಲ್ಲ ಪ್ರತಿ ದಿನ ಕೆಲಸ ಕ್ಕಿಂತ ವಿಶೇಷ. ಪರಂತು ಒಬ್ಬನೇ ಪೋಸ್ಟ್ ಮಾಸ್ಟರ ಕೆಲಸ ಯಂತೆ. ಬದಲಿಯವನಿದ್ದರೆ ಇಲ್ಲವೆ ತೀರಿಯಾಗಿದೆ. ಬಟವಾಡೆ ಯಾಗದ ಕಾಗದಗಳ್, ವಿ. ಪಿ. ಗಳ್, ರಿಜಿಸ್ಟ್ರಿಗಳ ಕಟ್ಟುಗಳೇ ಬಿದ್ದಿವೆ. ಆಫೀಸಿನಲ್ಲಿ ಕಾಯಂ ಪೋಸ್ಟ್‌ಮಾಸ್ತರರು ಬೇಕಲ್ಲ. ಅಂತು ಇಂತೂ ಇಲ್ಲಿಯ ಟಪ್ಪಾಲು ಕಟ್ಟೆಯಲ್ಲಿ ಕೆಲಸಕ್ಕೆ ಪ್ರತಿ ವಿರಾಮ. ಇದೊಂದು ಆಚಾರ!

ತಾಲೂಕು ಬೋರ್ಡು ಪ್ರೆಸಿಡೆಂಟರವರ ಸವಾರಿಯು ಇದೇ ತಾ. ೧೭ರಲ್ಲಿ ಇಲ್ಲಿಗೆ ಬಂದು ಈ ಊರ ಸ್ಕೂಲಿನ ಬೋರ್ಡು ಶಾಲಾ ಉಪಾಧ್ಯಾಯ ಉಪಾಧ್ಯಾಯರಿಗೆ ಸಂಬಳ ಬಟವಾಡೆಮಾಡಿದುದು ಪ್ರಶಂಸನೀಯ. ಬಡ ಉಪಾಧ್ಯಾಯರ ಅವಸ್ಥೆಯ ಅನುಭವವನ್ನು ಗ್ರಹಿಸಿರುವ ಅಧಿಕಾರಿಗಳೆಂದರೆ ಇವರೇ!

ಮೂಳೂರು ಮಠದ ಮನೆ ಕೃಷ್ಣ ಕೊಲೆ ಮೊಕದ್ದಮೆಯಲ್ಲಿ ನಾಲ್ಕು ಮಂದಿ ಜನರ ಮೇಲೆ (ತಪ್ಪುಸ್ಥನೆಯಾಗಿ) ಚಾರ್ಜು ಮಾಡಿ, ರಿಮಾಂಡಿನಲ್ಲಿಟ್ಟಿರುತ್ತಾರೆ. ಇನ್ನೂ ತನಿಖೆಯಲ್ಲಿರುತ್ತದೆ. ಕೊಂದ ಕೊಲೆ ತಪ್ಪೀತೇ!

ಆರೋಗ್ಯ ಮತ್ತು ಶಿಶುಸಪ್ತಾಹ ಸಮಾರಂಭವೂ ಈ ಊರಲ್ಲಿ ತಾ. ೧೦ರಿಂದ ೧೭ರ ವರೆಗೆ ಸಾಂಗವಾಗಿ ಜರಗಿತು. ಇದಕ್ಕಾಗಿ ಊರವರ ಒಂದು ಸಭೆ, ಕಾರ್ಯನಿರ್ವಾಹಕ ಮುಂತಲಿ ಉದ್ಯೋಗಸ್ಥರು, ಸಮಾರಂಭದ ಪ್ರತಿ ಒಂದು ಅಂಗವೂ ಸಾಂಗವಾಗಿ ಆಗಿ ಅವಶ್ಯಕ ಉಚಿತಗಳೂ ಹಂಚಲ್ಪಟ್ಟವು. ಜನತೆಯು ಕೆಲಸದಲ್ಲಿ ಈ ಊರವರೂ ಮುಂದೊತ್ತುವುದಕ್ಕೆ ಹಿಂಜರಿಯುವುದಿಲ್ಲವೆಂಬುದಕ್ಕೆ ಇದೊಂದು ನಿದರ್ಶನ.

ವಿ ವಿ ಧ ಸ ಮಾ ಚಾ ರ ಗ ಳು.

ಮದರಾಸಿನಲ್ಲಿ ಸ್ಯಾಮನ್ ಕಮಿಶನು.

ಈ ಸಲವೂ ಸ್ಯಾಮನ್ ಕಮಿಶನು ಮದರಾಸಿಗೆ ಬಂದಾಗ ಕಳೆದ ಸಲ ನಡೆದಂತ ರೀತಿಯ ಬಹಿಷ್ಕಾರವೇ ನಡೆಯಿತು. ಬಹಿಷ್ಕಾರದ ಸಭೆಗಳು, ಕಪ್ಪು ಧ್ವಜಗಳ ಮೆರವಣಿಗೆ, ಹರತಾಳ ಇವು ಮೂರು ಬಹು ಯಶಸ್ವಿಯಾಗಿ ನಡೆದುವು. ಹರತಾಳವನ್ನು ಆಚರಿಸಬೇಕೆಂದು ಒಬ್ಬರು ಮತ್ತೊಬ್ಬರಿಗೆ ಹೇಳಲಿಲ್ಲವಾದರೂ ಜನರೆಲ್ಲರೂ ಸ್ವಂತ ಬುದ್ಧಿಯಿಂದಲೇ ಹರತಾಳವನ್ನು ಆಚರಿಸಿದರು. ಕೇವಲ ಯುರೋಪಿಯನರ ಅಂಗಡಿಗಳೂ, ಕೊಲೇಜುಗಳೂ, ಕೋರ್ಟು ಕಚೇರಿಗಳೂ ಮಾತ್ರವೇ ತೆರೆಯಲ್ಪಟ್ಟಿದ್ದುವು. ಹರತಾಳವು ಎಲ್ಲಾ ರಸ್ತೆಗಳಲ್ಲಿಯೂ ಒಂದೇ ರೀತಿಯಾಗಿದ್ದಿತು. ಕಾಂಗ್ರೆಸ್ ಕಮಿಟಿಯವರು ಜರಗಿಸಿದ ಕಪ್ಪು ಪತಾಕೆಗಳ ಮೆರವಣಿಗೆಯೂ, ಶಾಂತತೆಯಿಂದ ಕೊನೆಗೊಂಡುದು ಆಶ್ಚರ್ಯಕರವಾಗಿದೆ. ಅವರೂ ಕೆಲವೆಡೆಗಳಲ್ಲಿ ಪೋಲೀಸರು ಜನರನ್ನು ನಿರ್ಬಂಧಿಸಿದುದರಿಂದ ಮೆರವಣಿಗೆಯ ಜನಸಂಖ್ಯೆಯು ಅತ್ಯಧಿಕವಾಗಿ ಬೆಳೆಯಲಿಲ್ಲ. ಸ್ವರಾಜ್ಯ ಆಫೀಸಿನಿಂದ ತಮಿಳುನಾಡು ಮತ್ತು ಆಂಧ್ರಾ ಕಾಂಗ್ರೆಸ್ ಕಮಿಟಿಯವರ ಬಹಿಷ್ಕಾರದ ಮೆರವಣಿಗೆಯು ಹೊರಟು ಅದು ಕೂಡಾ ಬಹು ವಿಜಯಯಾಗಿ ನಡೆಯಿತು. ಈ ಮೆರವಣಿಗೆಯು ನೇಪಿಯರ್ ಬ್ರಿಡ್ಜಿನ ಹತ್ತಿರ ಬರುವಾಗ ಅಲ್ಲಿಯ ಸ್ಯಾಕೋರ್ಟು ರಸ್ತೆಗೆ ಮೆರವಣಿಗೆಯು ಹೋಗದಂತೆ ತಡೆಗಟ್ಟಿದರು. ಆದು ಕಾರಣ ಮೆರವಣಿಗೆಯು ಸ್ಯಾಕೋರ್ಟಿನತ್ತ ಕಡೆಗೆ ಹೋಗದೆ ಬೇರೆ ಕಡೆಗೆ ಹೋಯಿತು. ಕರಾವಳಿಯಲ್ಲಿ ಒಂದು ಸಭೆಯು ನಡೆದು ಅಲ್ಲಿ ಆಂಧ್ರಾ ಮತ್ತು ತಮಿಳುನಾಡು ಧುರೀಣರು ಭಾಷಣಗಳನ್ನು ಕೊಟ್ಟರು. ಈ ಸಭೆಗೆ ಸುಮಾರು ೫ ಸಾವಿರ ಜನರು ಬಂದಿದ್ದರು. ಸಭೆಯ ಸುತ್ತುಮುತ್ತಲೂ ಆಯುಧಪಾಣಿಗಳಾದ ಪೋಲೀಸರೂ, ಸವಾರರೂ ಇದ್ದೇ ಇದ್ದರು.

ಮೊದಲೇ ನಿಶ್ಚಯವಾಗಿದ್ದಂತೆ ತಾರೀಕು ೧೮ನೇ ದಿನ ಬೆಳಗ್ಗೆ ೮ ಘಂಟೆಗೆ ಸ್ಯಾಮನ್ ಸಮಿತಿಯು ಹಡಗದಲ್ಲಿ ಬಂದು ಇಳಿಯಿತು. ಅವರನ್ನು ಎಕ್ಸಿಕ್ಯೂಟಿವ್ ಕೌನ್ಸಿಲರರೂ, ಮಂತ್ರಿಗಳೂ, ಮುನಿಸಿಪಾಲಿಟಿಯ ಪ್ರೆಸಿಡೆಂಟರೂ, ವೆಂಕಟಗಿರಿಯ ಮಹಾರಾಯರೂ ಎದುರುಗೊಂಡರು. ತದನಂತರ ಮಾನಪತ್ರಗಳು ಓದಲ್ಪಟ್ಟವು. ಮೊದಲು ಮುನಿಸಿಪಾಲಿಟಿಯ ಮಾನಪತ್ರ, ತದನಂತರ ಡಿಸ್ಟ್ರಿಕ್ಟ್ ಬೋರ್ಡಿನ ಪತ್ರ, ಇವುಗಳ ತರುವಾಯ ಇತರ ಕೆಲವು ಮಾನ ಪತ್ರಗಳು ಸಮರ್ಪಿಸಲ್ಪಟ್ಟುವು. ಮಾನಪತ್ರಗಳೆಲ್ಲವನ್ನು ಸ್ವೀಕರಿಸಿ, ಸ್ಯಾಮನ್ ಸಾಹೇಬರು ಅವರಿಗೆ ಉತ್ತರಗಳನ್ನು ಕೊಡಲಾರಂಭಿಸಿದರು. ಉತ್ತರದ ರೂಪದಿಂದ ಅವರು ತುಂಬ ಸಮಯದ ವರೆಗೆ ಭಾಷಣಮಾಡಿದರು. ಸ್ವಲ್ಪ ಸಮಯದ ವರೆಗೆ ಪರಸ್ಪರರೊಳಗೆ ಸಂಭಾಷಣೆಗಳಾಗಿ, ಕಾರಿನಲ್ಲಿ ಕುಳಿತು ಬಿಡಾರಕ್ಕೆ ತೆರಳಿದರು. ಅವರು ಹೋಗುತ್ತಿರುವ ಮಾರ್ಗಗಳಲ್ಲಿ ಆಯುಧಪಾಣಿಗಳಾದ ರಕ್ಷಕ ಪೋಲೀಸರು ನಿಂತು ತೊಂದರೆಗಳಾಗದಂತೆ ಜಾಗರೂಕರಾಗಿದ್ದರು. ಕಾರುಗಳು ಹೋಗುವಾಗ ಬಹಿಷ್ಕಾರಗಾರರು ಇತರ ಕಡೆಗಳಲ್ಲಿ ಮಾಡಿದಂತೆ ಬೊಬ್ಬೆಯನ್ನು ಮಾಡದಿರಲಿಲ್ಲ. ಕೆಲವು ಕಡೆಗಳಲ್ಲಿ ಸ್ಯಾಮನರ ರಕ್ಷಣೆಗಾಗಿ ಮಿಲಿಟರಿಯವರು ಕೂಡ ಮಾರ್ಗಗಳನ್ನು ಕಾಯುತ್ತಿದ್ದರು.

* * *

ದಕ್ಷಿಣ ಆಫ್ರಿಕದಲ್ಲಿನ ಹಿಂದೀಯರು.

ದಕ್ಷಿಣ ಆಫ್ರೀಕದಲ್ಲಿರುವ ಹಿಂದೂಗಳ ಕುರಿತಾಗಿ ಶ್ರೀ ಶ್ರೀನಿವಾಸ ಶಾಸ್ತ್ರಿಯವರು ಮುಂಬಾಯಿಯಲ್ಲಿ ಒಂದು ಭಾಷಣವನ್ನು ಕೊಟ್ಟರು. ಮುಖ್ಯವಾಗಿ ಅವರು ಹೇಳಿದುದೇನಂದರೆ “ದಕ್ಷಿಣ ಆಫ್ರಿಕದ ಕಾನೂನುಗಳೆಲ್ಲವೂ ಅಲ್ಲಿ ಇರುವ ಹಿಂದೀಯರಿಗೆ ತೀರ ವಿರುದ್ಧವಾಗಿರುತ್ತವೆ. ನಾಟಾಲ ಎಂಬ ಜಿಲ್ಲೆಯಲ್ಲಿನ ಸ್ಯಾಕೋರ್ಟು ಮಾಡಿರುವ ಕಾನೂನಿನಿಂದ ಹಿಂದೀಯರಿಗೆ ಆಸ್ತಿ ಇರಬಾರದು ಎಂದು ಆಗಿರುತ್ತದೆ. ಇದು ವರೆಗೆ ಸಾವಿರಾರು ಹಿಂದೀಯರು ಅಲ್ಲಿ ಆಸ್ತಿಗಳನ್ನು ಅನುಭೋಗಿಸುತ್ತಾ ಇದ್ದರು. ಈ ಕಾನೂನಿನಿಂದ ಅವರು ಆಸ್ತಿಗಳೆಲ್ಲವನ್ನು ಕಳಕೊಳ್ಳಬೇಕಾಗಿರುವರು. ಅದು ಮಾತ್ರವಲ್ಲದೆ ಅಂಗಡಿಗಳನ್ನಿಡುವವರಿಗೂ, ವಸ್ತು ಮಾರುವವರಿಗೂ ಲೈಸನ್ಸನ್ನು ಕೊಡಬಾರದೆಂದಾಗಿರುತ್ತದೆ. ಜೋಹಾನ್ಸ್‌ಬರ್ಗನಲ್ಲಿ ಮುನಿಸಿಪಾಲಿಟಿಯವರು ಹೊಸ ಲೈಸನ್ಸುಗಳನ್ನು ಮಾತ್ರವೇ ಕೊಡದಿರುತ್ತಿದ್ದರು. ಆದರೆ ದಕ್ಷಿಣ ಆಫ್ರಿಕದಲ್ಲಿರುವ ಕೆಲವು ಯುರೋಪಿಯನರಿಗೆ ಮಾತ್ರ ಹಿಂದುಗಳ ಮೇಲೆ ಮಮತೆಯಿದೆ. ಅವರೊಂದಿಗೆ ಹಿಂದೂಗಳು ಚೆನ್ನಾಗಿ ಸ್ನೇಹವನ್ನು ಸಂಪಾದಿಸಿದುದಾದರೆ ಹಿಂದೂಗಳಿಗೆ ಸ್ವಲ್ಪದಲ್ಲಿಯೇ ಅಲ್ಲಿ ಒಳಿತಾದೀತು ಎಂದು ನಂಬಬಹುದಾಗಿದೆ” ಎಂದು ಅವರು ಭಾಷಣವಿತ್ತರು. ಈ ಸಭೆಗೆ ಡಾ। ಆನ್ನಿಬೆಸೆಂಟಮ್ಮನವರೇ ಅಧ್ಯಕ್ಷರಾಗಿದ್ದರು. ಹೆಚ್ಚಾಗಿ ವಿದ್ಯಾರ್ಥಿಗಳೇ ಬಹು ಸಂಖ್ಯಾಕರಾಗಿ ಸಭೆಗೆ ಬಂದಿದ್ದರು.

* * *

ಅಫಘಾನದ ಸಮಾಚಾರ.

ಅಮಾನುಲ್ಲಾರವರೇ ಬೇಗದಲ್ಲಿ ಪುನಃ ಅಫಘಾನದ ಒಡೆಯರಾಗುವರೆಂಬ ವಾರ್ತೆ. ಕಾನ್‌ಸ್ಟಾಂಟಿನೋಪಲಿನ ಮಿಲಿಟರಿ ವಿಶ್ವವಿದ್ಯಾಲಯದಲ್ಲಿ ತರಬೇತಿ ಹೊಂದಿದ ೬೦ ಮಂದಿ ಅಫಘಾನಿ ಆಫೀಸರರು ಅಮಾನುಲ್ಲಾರವರ ಸಹಾಯಕ್ಕೆಂದು ಕಂದಹಾರಿಗೆ ತೆರಳಿರುವರು. ಕಾಬೂಲಿನಲ್ಲಿ ಆಹಾರ ಸಾಮಾಗ್ರಿಗಳು ಸಾಕಷ್ಟು ದೊರೆಯದ ಕಾರಣ ಸುಲಿಗೆಗಳು ನಡೆಯುತ್ತಲಿವೆ. ಜಗಳಗಳನ್ನು ನಿಲ್ಲಿಸುವ ಸಲುವಾಗಿ, ಅಫಘಾನದಲ್ಲಿರುವ ಟರ್ಕೀ ಮಿಲಿಟರಿ ಮಿಶ್ಯನಿನ ಅಧಿಕಾರಿಯಾದ ಇಸ್ಮಾಯಿಲ್ ಪಾಶಾ ಎಂಬವನು ಅಮಾನುಲ್ಲಾರ ಪರವಾಗಿ ಬಾಚಾ-ಇ-ಸಾಕೋವಿನೊಂದಿಗೆ ಮಾತನಾಡುತ್ತಲಿರುವನು.

ಇದು ವರೆಗೆ ಅಲಿ ಅಹಮದಜಾನರಿಗೆ ವಿಧೇಯವಾಗಿದ್ದ ಸೈನ್ಯಗಳು ಈಗ ಹಬಿಬುಲ್ಲಾನ ವಶವಾಗುವವಂತೆ. ಅದು ಮಾತ್ರವಲ್ಲದೆ ಶಿನ್ವಾರಿಗಳ ಸಹಾಯವನ್ನು ಆತನು ಹೊಂದಲಿರುವನು. ಹಿಂದಣ ಹಬಿಬುಲ್ಲಾರವರ ಕಾಲದಲ್ಲಿ ಮುಲ್ಲಾರವರಿಗೆ ಸರಕಾರದಿಂದ ಹಣ ಸಿಕ್ಕುತ್ತಿತ್ತು. ಅದನ್ನು ಅಮಾನುಲ್ಲಾರವರು ನಿಲ್ಲಿಸಿದ್ದರು. ತಾನು ಆ ಹಣವನ್ನು ಪುನಃ ಕೊಡಲು ಪ್ರಾರಂಭಿಸುವನಾಗಿ ಬಾಚಾ-ಇ-ಸಾಕೊವು ಪ್ರಕಟಿಸಿರುವನು. ವಿದೇಶಿಯರು ಸಮಾಧಾನದಿಂದ ಕಾಬೂಲಿನಿಂದ ವಿಮಾನಗಳ ಮೂಲಕ ಹೊರಟು ಹೋಗುತ್ತಿರುವರು.

ರಮಾಜಾನ್ ತಿಂಗಳು ಮುಗಿದೊಡನೆ ಕಾಬೂಲು ಎಲ್ಲಿ ಶತ್ರುಗಳಿಂದಲೂ ಮುತ್ತಲ್ಪಡಬಹುದೆಂದು ಕಾಬೂಲು ನಿವಾಸಿಕರು ಹೆದರಿರುವರು. ಜಲಾಲಾಬಾದಿನ ಸ್ಥಿತಿಯೇ ಕಾಬೂಲಿಗೂ ಬರಬಹುದೆಂದು. ಅವರ ಹೆದರಿಕೆ ವಿರೋಧಪಕ್ಷಗಳೊಳಗೆ ನಾಶವಾಗಲೆಂದು ಅವರು ಅನುದಿನವೂ ದೇವರನ್ನು ಪ್ರಾರ್ಥಿಸಿಕೊಳ್ಳುವರು. ನಾದಿರಖಾನರು ಬಂದರೆ ಇದು ಸಾಧ್ಯವಾಗಬಹುದು. ನಾದಿರಖಾನರನ್ನು ಪ್ರತಿಯೊಬ್ಬನೂ ಗೌರವಿಸುವನು. ನಾದಿರಖಾನ ಮತ್ತು ಅಮಾನುಲ್ಲಾರೊಳಗೆ ಏನೋ ಮನಸ್ತಾಪವಿರಬಹುದೆಂದೂ, ಅದೇ ಕಾರಣ ನಾದಿರಖಾನರು ಕಂದಹಾರಿಗೆ ಹೋಗದೆ ಕಾಬೂಲಿಗೆ ಬರಲಿರುವರೆಂದೂ ವಾರ್ತೆ.

* * *

ವ್ಯಾಸರಾಯಿ ಗಾಂಧೀಜಿಯವರ ಬೇಟಿ.

ಡಿಲ್ಲಿಯಲ್ಲಿ ತಾರೀಕು ೧೯ನೇ ದಿನ ಪ್ರೆಸಿಡೆಂಟ ಪಟೇಲರು ಜರಗಿಸಿದ ಒಂದು ಟೀಪಾರ್ಟಿಯಲ್ಲಿ ಮಹಾತ್ಮಾ ಗಾಂಧಿಯವರು ವ್ಯಾಸರಾಯಿಯವರ ಬೇಟಿಯಾದರು. ಮೊದಲು ಅವರು ಅನ್ಯ ವಿಷಯಗಳ ಕುರಿತಾಗಿ ಮಾತನಾಡುತ್ತಾ ಕೊನೆಗೆ ಹಿಂದೂಸ್ಥಾನದ ಜಾತೀಯ ಮತ್ತು ರಾಜಕೀಯ ಪರಿಸ್ಥಿತಿಯ ಕುರಿತು ಚರ್ಚಿಸತೊಡಗಿದರು. ಸುಮಾರು ಒಂದೂವರೆ ತಾಸಿನ ವರೆಗೆ ಅವರು ಮಾತನಾಡಿಕೊಂಡರು. ಮಹಾತ್ಮಾಜಿಯವರು ಆಗಾಗ ಹಾಸ್ಯೋತ್ಪಾದಕ ಮಾತುಗಳನ್ನಾಡುತ್ತಿದ್ದುದರಿಂದ ವ್ಯಾಸರಾಯಿಯವರಲ್ಲಿ ನಗುವು ಉಕ್ಕಿ ಬರುತ್ತಿದ್ದಿತು. ಹಿಂದೀ ಧುರೀಣರಿಂದ ರಾಜಕೀಯ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಉತ್ಸಾಹಿಗಳಾಗಿದ್ದ ವ್ಯಾಸರಾಯಿಯವರು ಮಹಾತ್ಮಾಜಿಯವರ ಪ್ರತಿಯೊಂದು ಅಕ್ಷರಕ್ಕೂ ಚೆನ್ನಾಗಿ ಕಿವಿಗೊಟ್ಟು ಕೇಳುತ್ತಿದ್ದರು. ಕಲಕತ್ತಾ ಕೊಂಗ್ರೆಸಿನಲ್ಲಿ ಮಂಜೂರಾದ ಡೊಮಿನಿಯನ್ ಸ್ಟೇಟಸಿನ ಠರಾವಿನ ಕುರಿತಾಗಿ ಅವರು ಚರ್ಚಿಸಿದರೆಂದು ಊಹಿಸಬಹುದು. ಏಕೆಂದರೆ ಅವರ ಸಂಭಾಷಣೆಯು ಗೋಪ್ಯವಾಗಿದ್ದಿತು. ವ್ಯಾಸರಾಯಿಯವರು ಆರು ಗಂಟೆಗೆ ಬೇರೆ ಕಡೆಗೆ ಬರುವೆನೆಂದು ಮೊದಲೇ ಮಾತು ಕೊಡದೆ ಇದ್ದಿದ್ದರೆ, ಅವರು ಇನ್ನಷ್ಟು ಹೊತ್ತು ಮಹಾತ್ಮಾಜಿಯವರೊಡನೆ ಮಾತನಾಡಿ ಕುಳಿತುಕೊಳ್ಳುತ್ತಿದ್ದರು. ಟಿಪ್ಯಾರ್ಟಿಯ ಮೇಲೆ ಟೀಪಾರ್ಟಿಯು ವಿಜಯಯಾಗಿ ನಡೆಯಿತು.

ವಿ ಶೇ ಷ ವಾ ರ್ತೆ ಗ ಳು.

ಅಮೇರಿಕದಲ್ಲಿ ಬಾಲ್ಯವಿವಾಹಗಳು.

ಅಮೇರಿಕದಲ್ಲಿ ಹದಿನಾರು ವರುಷಕ್ಕಿಂತ ಕಡಿಮೆ ಪ್ರಾಯದಲ್ಲಿಯೇ ಮದುವೆಯಾದ ೩೫೦,೦೦೦ ಮಂದಿ ಹುಡುಗಿಯರಿರುವರೆಂದು ತಿಳಿದು ಬರುತ್ತದೆ. ಬಾಲ್ಯವಿವಾಹವು ಅಲ್ಲಿ ದಿನಗಳೆದಷ್ಟಕ್ಕೆ ಬೆಳೆಯುತ್ತಾ ಬರುತ್ತದೆ. ಕೆಲವು ಸಂಸ್ಥಾನದವರು ಬಾಲ್ಯವಿವಾಹವನ್ನು ಮಾಡುವವರಿಗೆ ಶಿಕ್ಷೆಯನ್ನೀಯಬೇಕೆಂದು ಯೋಚಿಸುತ್ತಿರುವರು. ಉದಾಹರಣೆಗಾಗಿ ಪೆನ್ಸಿಲ್ವೇನಿಯದಲ್ಲಿ ಈಗ ಹದಿನಾರಕ್ಕಿಂತ ಕಡಿಮೆ ವಯಸ್ಸಿನ ಸ್ತ್ರೀಯರಿಗೆ ಮದುವೆಯಾಗುವುದಿಲ್ಲ.

ಹಸ್ತಲಾಘವದ ಪರಿಣಾಮ.

ಒಬ್ಬರಿಗೊಬ್ಬರು ಹಸ್ತಲಾಘವ (ಶೇಕ್-ಹೆಂಡ್) ವನ್ನು ಕೊಡುವದರಿಂದ ಒಬ್ಬನ ಶರೀರದಲ್ಲಿರುವ ರೋಗದ ಅಣುಗಳು ಇನ್ನೊಬ್ಬನ ಶರೀರವನ್ನು ಸುಲಭವಾಗಿ ಪ್ರವೇಶಿಸುವವು ಎಂದು ಬ್ರಿಟಿಷ್ ಕೊಲಂಬಿಯಾ ಯುನಿವರ್ಸಿಟಿಯ ಮಿಸ್. ಹೆಲೆನ್ ಎಂಬವಳು ಪ್ರಕಟಪಡಿಸಿರುವಳು. ಮಕ್ಕಳಾಗಲಿ ಹಿರಿಯರಾಗಲಿ ಕೈಗಳನ್ನು ಹುಟ್ಟಿಸ ಸಮಯ ಮುಖದ ಮೇಲೆಯೇ ಆಡಿಸುವುದರಿಂದ ರೋಗದ ಅಣುಗಳು ಬಾಯಿಯ ಮೂಲಕ ಕೈಬೆರಳುಗಳ ಮೇಲೆ ಬಂದು ಹಸ್ತಲಾಘವದಿಂದ ಇತರರಲ್ಲಿ ಹರಡುವವು.

ಆಶ್ಚರ್ಯದ ರತ್ನವು!

ನ್ಯೂಸೌತ್‌ವೇಲ್ಸ್‌ನಲ್ಲಿ ಒಂದು ಸ್ಫಟಿಕ ರತ್ನವು ದೊರಕಿರುತ್ತದೆ. ಇದಕ್ಕೆ ೩೦೦೦ರಿಂದ ೫,೦೦೦ ಪವನಿನ ವರೆಗೆ ಕ್ರಯ ಕಟ್ಟುವರು. “ಜಗತ್ತಿನ ಜ್ಯೋತಿ” ಎಂದು ಅದಕ್ಕೆ ಹೆಸರಿಟ್ಟಿರುವರು. ಆ ರತ್ನದ ಮಧ್ಯದಲ್ಲಿ ಒಬ್ಬ ಹೆಂಗಸಿನ ರೂಪು ಸ್ಪಷ್ಟವಾಗಿ ಕಾಣುತ್ತಿರುವದಂತೆ.

ಕಾಫಿಗಾಗಿ ಮೋಟರಿನ ಮಾರಾಟ!

ಇಟೇಲಿಯ ಹೋಟೇಲು ವ್ಯಾಪಾರಿಯೊಬ್ಬನು ತನ್ನಲ್ಲಿ ಕಾಫಿ ಕುಡಿಯಲು ಬಂದಿದ್ದ ಗಿರಾಕಿಯೊಬ್ಬನ ಅಂದವಾದ ಕಾರನ್ನು ಕಂಡು ಮನಸೋತು ಅದನ್ನು ಕೊಂಡುಕೊಳ್ಳಬೇಕೆಂದು ನಿಶ್ಚಯಿಸಿದನು. ಆದರೆ ಆತನ ಕಡೆ ಹಣವಿರಲಿಲ್ಲ. ಹತ್ತು ಸಾವಿರ ಕಪ್ಪು ಕಾಫಿಗೆ ಆ ಕಾರನ್ನು ಕೊಡುವದಾಗಿ ಮೋಟಾರಿನ ಮಾಲಿಕನು ಒಪ್ಪಿಕೊಂಡನು. ಮಾಲಿಕನು ಹತ್ತುಸಾವಿರ ಕಪ್ಪು ಕಾಫಿ ಕುಡಿದ ನಂತರ ಮೋಟಾರು ಹೋಟೇಲುಕೀಪರನಿಗೆ ಕೊಡಲ್ಪಡುವದು.

ಮದುವೆಯ ಸಮಯ ವಧುವಿನ ಪಲಾಯನ.

ವಿನ್ನಿಪೆಗ್‌ನ ಎಂಬಲ್ಲಿ ಒಬ್ಬ ಹೆಂಗಸಿಗೂ, ಒಬ್ಬ ಗಂಡಸಿಗೂ ಮದುವೆಯ ನಿಶ್ಚಯವಾಯಿತು. ನಿಶ್ಚಯವಾದ ದಿನ ಗಂಡನ ಕಡೆಯವರು ಇಗರ್ಜಿಗೆ ಹೋಗಿ ಕುಳಿತು ಹೆಣ್ಣಿನ ಕಡೆಯವರ ಹಾದಿಯನ್ನು ನಿರೀಕ್ಷಿಸುತ್ತಿದ್ದರು. ಆದರೆ ಹೆಣ್ಣು ಆ ಸಮಯದಲ್ಲಿಯೇ ಆಕೆಯ ಮನೆಗೆ ಬಂದಿದ್ದ ಬೇರೊಬ್ಬ ಮನುಷ್ಯನೊಡನೆ ಮೋಟಾರಿನಲ್ಲಿ ಕುಳಿತು ಪಲಾಯನಮಾಡಿದಳು. ತಾನು ತನ್ನ ಮನಸ್ಸನ್ನು ಬದಲಾಯಿಸಿರುವಳೆಂದೂ ಆ ಮದುವೆಯನ್ನು ರದ್ದುಪಡಿಸಬೇಕೆಂದೂ ಕಾಗದವನ್ನು ಬರೆದಿಟ್ಟಿದ್ದಳು.

ಉನ್ನತವಾದ ಕಟ್ಟಡ.

ಅಮೇರಿಕದ ಚಿಕಾಗೊ ಪಟ್ಟಣದಲ್ಲಿ ಒಂದು ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿರುವನು. ಅದಕ್ಕೆ ಒಟ್ಟು ೭೫ ಮಾಳಿಗೆಗಳು ಕಟ್ಟಲ್ಪಡುವವಂತೆ. ಆ ಕಟ್ಟಡದಲ್ಲಿ ಒಟ್ಟು ೪೦೦೦ ಹೊಟೇಲು ಕೋಣೆಗಳೂ, ೧೦೦೦ ಕಾರು ಗೆರೇಜುಗಳೂ, ಒಂದು ಆಸ್ಪತ್ರೆಯೂ, ಒಂದು ಈಜಾಡುವ ಸರೋವರವೂ, ಒಂದು ವ್ಯಾಯಾಮ ಮಂದಿರವೂ ಇರುವುವಂತೆ.

ಜಪಾನಿನ ಸಿನೇಮಾ ಮಂದಿರಗಳು.

ಜಪಾನ ರಾಜ್ಯದಲ್ಲಿ ಒಟ್ಟು ೧೧೩೦ ಸಿನೇಮಾ ಮಂದಿರಗಳಿವೆಯಂತೆ. ಪ್ರತಿಯೊಂದರಲ್ಲಿ ೫೦೦ ಜನರು ಹಿಡಿಸಬಹುದಾದಷ್ಟು ಸ್ಥಳವಿರುವದು. ಜಪಾನಿನಲ್ಲಿ ಸಿನೇಮಾ ಮಂದಿರದಲ್ಲಿ ಎಷ್ಟು ಜನರು ಕುಳಿತುಕೊಳ್ಳಬಹುದು ಎಂದು ಸರಕಾರದವರು ತಿಳಿದು ಆ ಪ್ರಮಾಣದಲ್ಲಿ ಮಂದಿರಗಳ ಮೇಲೆ ತೆರಿಗೆಯನ್ನು ಹೊರಿಸಿದರು. ಅದಕ್ಕಾಗಿ ಒಬ್ಬನು ಕುಳಿತುಕೊಳ್ಳಬಹುದಾದ ಸ್ಥಳದಲ್ಲಿ ಅಲ್ಲ ಮೂವರು ನಿಂತು ಸಿನೇಮಾ ನೋಡಿ ತೆರಿಗೆಯ ಹಣವನ್ನು ಉಳಿಸುತ್ತಿರುವರಂತೆ.

Liveliness-zip-pep-you get that all the time from an "Exide" because it is built into it.
Care and thought ... keen discrimination in the selection of material and the experience of thousands of users have made
Exide
THE LONG-LIFE BATTERY
The C. P. C. Co. Ltd.,
MANGALORE

Chikmagalur Public Conveyance Motor Service. CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ಟೆಲಿಗ್ರಾಮ್ ಅಡ್ರೆಸ್ [illegible] Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯವಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ ಬೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ಹಗಲು 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟ್ಯಾಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಬೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸಾಯಂಕಾಲ 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮರುದಿನ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8. ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು,

ಬಿ. ಎನ್. ಹನುಮಂತಪ್ಪ, ಪ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ

ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವವರ ಪ್ರತಿದಿನವೂ ಮೂಲ್ಕಿ ಕಾಪು ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

[illegible] ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. K. Mangalore.

ಮಲೇರಿಯಾನ ಸರ್ವಜ್ವರಸಂಹಾರಿ

ಕ್ರಯ 8 ಡಿಜ್ಜಿ 1-8-0 ½ ಡಜನಿಗೆ 8-8-0 ಡಜನಿಗೆ 16-8-0

ದಿಟನಂಬು ಪುಟ್ಟನಾಗು!! ನೆಟ್ಟಗಾಗು!!

ಯುವಕನಿನ್ನ ಬೆಲೆ ಯಾವದರಲ್ಲಿದೆ? ಸೌಮ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ!

ಆರೋಗ್ಯವೇ! ದೇಹವು ಕ್ಷೀಣವಾಗಿದೆಯೇ! ಮನಸಂತೋಷ ತಪ್ಪಿದೆಯೇ! ಜಠರ ಶಕ್ತಿ ಕುಂದಿರುವುದೇ? ಮುಂಗೋಪ ಜಾಸ್ತಿ ಇದೆಯೇ! ಅಲಸ್ಯವುಂಟಾಗುವದೇ! ಚುರುಕು ಚಟುವಟಿಕೆ ಇಲ್ಲವೇ! ವ್ಯಾಕುಲತೆಯಿಂದ ನರಳುತ್ತೀಯೋ! ಸುಖವಾಗಬೇಕೆಂಬ ಆಶೆ ಇದೆಯೇ! ಹಾಗಾದರೆ ಇಗೋ ಬಹು ಗುಣಕರವಾದ 'ಕಂಪೌಂಡ್ ಸಿರಪ್ ಸಾಲಿಸಪರಿಲಾ'ವೆಂಬ ಔಷಧವನ್ನೇ ಸೇವಿಸು. ಆವಾಗ ಮೇಲಿನ ಅವಲಕ್ಷಣತೆಗಳು ಬೇಗನೆ ಬಹು ಆರೋಗ್ಯವೂ ಶರೀರ ಪುಷ್ಟಿಯೂ ಉಂಟಾಗಿ ನಿನ್ನ ಆರೋಗ್ಯದಲ್ಲಿಯೇ ಇದೆಯೆಂದು ನಿನಗೇನೇ ತೋರಿ ಬರುವುದು.

ಕ್ರಯ ಬಿನ್ ಸೀಸೆಗೆ ರೂ. 3—8—0.

ಯುವತಿಯೇ ನಿನ್ನ ಸುಂದರವಾದ ಉಡುಪು ಯಾವುದು? ಅಚ್ಚುಕಟ್ಟಾಗಿ ಹೊಳೆಯುವ ನಿನ್ನ ಆರೋಗ್ಯದ ದೇಹವಲ್ಲವೇ!

ದೇಹವು ಅಚ್ಚುಕಟ್ಟಾಗಿಲ್ಲವೇ! ರೂಪಕ್ಕೆ ಕಳೆ ಬಂದೀತೇ! ಮುಖ ಕಳೆಗುಂದಿದೆಯೇ! ಕೂದಲು ಬಿಳಿಯುವದೇ! ಎದೆ ನಡುಗು, ಆಯಾಸ ಉಂಟೋ? ರಕ್ತ ಧಾತುಲ್ಲವೇ! ಅಜೀರ್ಣವಿದೆಯೇ? ಸೊಂಟ ನೋವು ಉಂಟೋ? ತಲೆಸುತ್ತಿ ಬರುತ್ತಿರುವುದೇ! ತಲೆನೋವು ಉಂಟೋ? ದೃಷ್ಟಿ ಸರಿಯಿಲ್ಲವೇ! ಕಣ್ಣಿನಲ್ಲಿ ಕ್ಷೀಣವಾಗಿದೆಯೇ! ಆವಾಗ ಉಷ್ಣ ಜಾಸ್ತಿಯೇ! ಇವರಿಂದ ಬಿಡುಗಡೆ ಹೊಂದಲು ಇಷ್ಟ ಇದೆಯೇ! ಹಾಗಾದರೆ ಗುಪ್ತ ಸೇವನೆಯಿಂದ ಕಂಗಾಲು ತೀರುವ ಸದೀನ ಸೆಪಿಯಳೆಂಬವಳನು ಅಂಗೀಕರಿಸು. ಈಕೆ ಪ್ರತಿಕ್ರಿಯೆಯಿಂದ ನಿನ್ನನ್ನು ಬಿಡಿಸಿ ಶರೀರ ಪುಷ್ಟಿಯಾಗುವಂತೆಯೂ ಮುಖಕಳೆಗಳು ಹೊಳೆಯುವಂತೆಯೂ ದೇಹಕ್ಕೆ ಬಲಶಕ್ತಿ ಸಿಗುವಂತೆಯೂ ಖಂಡಿತ ಸಹಾಯವಾಗುವಳು. ಆವಾಗ ಆರೋಗ್ಯವೇ ದೇಹದ ಸಕಲ ನಿನ್ನ ಸುಂದರವಾದ ಉಡುಪಾಗಿದೆ ಎಂದು ನಿನಗೇನೇ ಖಚಿತವಾಗುವದು.

ಕ್ರಯ 8 ಔನ್ಸ ಬಾಟ್ಲಿಗೆ ರೂ. 3—8—0.

ಕೆಟಲಾಗಿಗೆ ಬರೆಯಿರಿ —

ಮಲೇರಿಯಾನ ಕಂಪೆನಿ,

22628 ಮಂಗಳೂರು ದ. ಕ.

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. **ಸಪೋಟಿಲ್ಲಾ.**

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮಂಗಳ ಕಸಿಗಳೂ, ಸಪೋಟಿಲ್ಲಾ, ಬೇರಳೆ, ಕಿತ್ತಳೆ, ದ್ರಾಕ್ಷೆ, ಅಂಜೂರ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು, ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲ ಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್‌ಸ್ಟ್ರೀಟ್ ಸೋಮ ಯಾಜಿಯವರಲ್ಲಿ ದೊರೆಯುವುವು.

ಕೆ. ಮುದ್ದಣ್ಣ ಶೆಟ್ಟಿ ದಿ. ಕೆನರಾ ನರ್ಸರಿ, ವಿಸಟ್ ಗಾರ್ಡನ್ಸ್, ಕಾಪು ದ. ಕ. 131028	ಕೆ. ವಾಮನ ಶೆಣೈ C/o ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.

ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಅತ್ಯುತ್ತಮವಾದ ಸೌಕರ್ಯಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು.

2 ಧನವಂತರೂ, ಪ್ರತಿಷ್ಠಿತರೂ ಆದ ಡೈರೆಕ್ಟರರು.

3 ತುಂಬಾ ಅನುಭವದ ವೈದ್ಯಾನಿಕ, ವಿನಮ್ರಯದ ಮತ್ತು ಸೌಹಾರ್ದದ ಆಡಳಿತ.

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆ ಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು

ಉದಾರವಾದ ಕರಾರುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ತ ಮತ್ತು ಪಂಕ್ತಿಯಾದ ಏಜಂಟರುಗಳು ಬೇಕಾಗಿರುವರು.

ಪ್ರಾಸ್ಪೆಕ್ಟಸಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, ಸ್ಪೆಶಿಯಲ್ ಏಜಂಟ್ [illegible]	ಪಿ. ಅಭಯಶಂಕರ ದೇಶಪಾಂಡೆ ಏಜಂಟ [illegible] [illegible]

ESTABLISHED 1876.

M. Ganapaya & Sons,

AYURVEDIC PHYSICIANS.

Car Street, MANGALORE, S. Kanara.

(53 ವರುಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ
— ಔಷಧಗಳು.) —

1. **ಅಶೋಕಾರಿಷ್ಟ ಮತ್ತು ಮಾತ್ರೆ—**

ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಬಿಳಿಜ್ವರ, ರಕ್ತಹೀನತೆ, ಕೈಕಾಲು ಸೆಳೆತ, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರೈಸುವುದು.

ಒಂದು ಬಾಟಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗೆ 6-4-0.

2. **ಮಲೇರಿಯಾ ನಿವಾರಿಣಿ—**

ಘಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ಶೀಘ್ರದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲೂಯೆಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲೆಜ್ವರದಿಂದ ಬಾಧಿಸಲ್ಪಟ್ಟು ಹಲವುತರದ ಔಷಧಿಗಳನ್ನು ಉಪಯೋಗಿಸಿ, ಗುಣಹೊಂದದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ ಬಾಟ್ಲಿಯೊಂದಕ್ಕೆ 1-8-0, 3 ಬಾಟ್ಲಿಗೆ 4-2-0,

ಇವುಗಳಲ್ಲದೆ ಮಲೇರಿಯಾಗುಟಿಕೆ, ಜ್ವರಗಡ್ಡೆಯ ಮೇಲೆ ಸ್ಪಂಧಕ ವಟಿ, ಬಾಲಗ್ರಹ ಗುಟಿಕೆ, ಶ್ವಾಸಕುಠಾರ ಗುಟಿಕೆ ಇಚ್ಛಾಭೇದಿ ಗುಟಿಕೆ, ಚ್ಯವನ ಪ್ರಾಶಾವಲೇಹ, ಧಾತುಪುಷ್ಟಿ ಲೇಹ, ಚಂದನಾಸವ ಮತ್ತು ಮಾತ್ರೆಗಳು ಇವೇ ಮೊದಲಾದ ಸಮಸ್ತ ಔಷಧಗಳೂ ದೊರೆಯುವವು. ಹೆಚ್ಚಿನ ವರ್ತಮಾನಕ್ಕೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ADVERTISE IN OUR WEEKLY.

To Reach the Hearths & Homes

OF INDIA'S MASSES

For Particulars Apply to:

The Manager,

SWADESHABHIMANI,

MANGALORE.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

☞ ಫೆರ್ರೊಕ್ವಿನ್

FERROQUIN

[illegible]ವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3—4—0 ಮಾತ್ರ.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

[illegible]ಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

[illegible]ಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು ಖಚಿತವಾಗುವುವು.

ಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

[illegible]ಂಚು ಸ್ಟ್ರೀಟ್, [illegible]ರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡಾ.

ಬಹುಮಾನ! ಬಹುಮಾನ!

1929ನೇ ವರುಷದ ಸರಸ್ವತೀ ಕ್ಯಾಲೆಂಡರ್.

ಮಹನೀಯರೇ ನಮ್ಮಲ್ಲಿ ದೊರೆಯುವ ಕನ್ನಡ ಕಥೆ ಕಾವ್ಯ, ನಾಟಕ, ಕೀರ್ತನೆ, ಮುಂತಾದುವುಗಳ ಕ್ರಯದ ಪಟ್ಟಿಗೆ ಕೂಡಲೇ ಬರೆದು ತರಿಸಿಕೊಳ್ಳಿರಿ.

ಈ ಮೇಲೆ ಕಂಡವುಗಳಲ್ಲದೆ ಇನ್ನೂ ಸಾವಿರಾರು ತರದ ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ.

ಕಥೆ ಪುಸ್ತಕಗಳು

ಸೌಭಾಗ್ಯ ಲಕ್ಷ್ಮೀ	0—8—0	ಧರ್ಮ ಸಾಮ್ರಾಜ್ಯಂ	1—4—0
ವಿಮಲಾ ದೇವಿ	1—12—0	ಲಾವಣ್ಯ ತಿಲೋತ್ತಮೆ	0—12—0
ವಚನ ಭಾರತ	0—12—0	ವಚನ ರಾಮಾಯಣ	1—8—0
ಆನಂದ ಮಠ	1—12—0	ಜೈಮಿನೀ ಭಾರತ	1—8—0

ಲಾ ಪುಸ್ತಕಗಳು.

ವ್ಯವಹಾರ ಧರ್ಮ ಶಾಸ್ತ್ರ	ಭಾಗ I	4—0—0
" "	ಭಾಗ II	4—8—0
ವ್ಯವಹಾರ ಲೇಖ್ಯ ಬೋಧಿನಿ		2—8—0
ಕ್ರಿಮಿನಲ್ ಪ್ರೊಸೀಜರ್ ಕೋಡ್		3—0—0
ಇಂಡಿಯನ್ ಪಿನಲ್ ಕೋಡ್		2—8—0

ಶ್ರೀ ಸರಸ್ವತೀ ಭಂಡಾರ.
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು,
ಅವಿನ್ಯೂ ರೋಡ್, ಬೆಂಗಳೂರು ಸಿಟಿ.

(ಶ್ರೀಟ್ಟರಿಗಳಲ್ಲಿ ಇವಲ್ಲ ಎಲ್ಲಾ ಪುಸ್ತಕಗಳೂ ದೊರೆಯುತ್ತವೆ)

ಮುಂಬಾಯಿಯೊಳಗಿನ ನ್ಯಾಯಾಧಿಕಾರದ ಹೈಕೋರ್ಟಿನಲ್ಲಿ.

ವ್ಯಕ್ತ್ಯ ಪತ್ರ ಮತ್ತು ವ್ಯಾಕ್ಯ ಪತ್ರ ಮಾಡದ ಅಧಿಕಾರವು ೫ನೇ ಜೋರ್ಜ, ದೇವರ ಕೃಪೆಯಿಂದ ಗ್ರೇಟ ಬ್ರಿಟನ್, ಐರ್ಲಾಂಡ ಹಾಗೂ ಸಮುದ್ರಗಳ ಆಚೇ ಕಡೆಯ ಬ್ರಿಟಿಷ ರಾಜ್ಯಗಳ ರಾಜರೂ, ಸದ್ಧರ್ಮ ಪರಿಪಾಲಕರೂ, ಹಿಂದೂಸ್ಥಾನದ ಚಕ್ರವರ್ತಿಯೂ.

ವ್ಯಾತ ರಾಜು ಪರಮೇಶ್ವ ಶೆಟ್ಟಿ ಉರ್ಫ ರಾಜೂ ಪರಮೇಶುರ ಶೆಟ್ಟಿ ಉರ್ಫ ರಾಜು ಪರಮೇಶ್ವರ, ಮುಂಬಯಿಯ ಕೊನೆಯ ಹಿಂದೂ ರಹಿವಾಶಿಯೂ, ಚಹಾ ಅಂಗಡಿಯೊಳಗಿನ ನೌಕರ ಇವನ ಆಸ್ತಿಯ ಮತ್ತು ಹೊರಗಿನಿಂದ ಬರತಕ್ಕವು (ರಕಮು)ಗಳ ಲೇಟರ್ಸ ಅಫ್ ಎಡ್‌ಮಿನಿಸ್ಟ್ರೇಶನ್ (ವಹಿವಾಟು ಪತ್ರಗಳ) ಬಗ್ಗೆ ಮಾಡಿದ ಅರ್ಜಿಯು ....ಮಯತ.

ಒನ್ನುಬಾಯಿ, ಪರಮೇಶರ ಶೆಟ್ಟಿಯ ವಿಧವೆ, ಮೇಲೆ ನಮೂದಿಸಿದ ವ್ಯಾತನ ತಾಯಿ, ಹಾಲಿ, ಹಂಗಾಮಿ ವಾಸ್ತವ್ಯವು ಪುಲ್ಲಾ, ಕೋಟ ಮುಂಬಯಿ ಕೋಟೆಯೊಳಗಿನ ಬೇಂಕ್ ಓಪ್ ಇಂಡಿಯಾದೊಳಗಿನ ಶಿಪಾಯಿ, ಇವನಲ್ಲಿ............ ಅರ್ಜದಾರ.

ಮೇಲೆ ನಮೂದಿಸಿದ ವ್ಯಾತನ ಇಸ್ಟೇಟಿಯಲ್ಲಿ ಏನೊಂದು ಹಿತಸಂಬಂಧ ಇದೆ ಎಂತ ಹಕ್ಕು ಹೇಳುವ ಎಲ್ಲಾ ಜನರು, ಲೇಟರ್ಸ ಓಫ್ ಎಡ್ಮಿನಿಸ್ಟ್ರೇಷನ್ (ವಹಿವಾಟು ಪತ್ರ) ಕೊಡುವ ಪೂರ್ವದಲ್ಲಿ ಅವರಿಗೆ ಯೋಗ್ಯ ಕಂಡರೆ (ಅವರು) ಬಂದು ಕಾಗದ ಪತ್ರಗಳನ್ನು ನೋಡಲಿಕ್ಕೆ ಇದರಿಂದ ಕರೆಸಲ್ಪಡುತ್ತಾರೆ.

ಸಾಕ್ಷಿ—ಸರ್. ಎಂಬ್ಸನ್, ಬೆರಿಂಗಟನ್, ಮಾರ್ಟೇನ್, ನೈಟ, ಸರದಹ ಮುಂಬಯಿಯ ಚೀಫ್ ಜಸ್ಟಿಸರು, ಈ ಹೊತ್ತು ತಾರೀಕು ಇಪ್ಪತ್ತಮೂರನೇ ಜನವರಿ ನಮ್ಮ ಪ್ರಭುಗಳ ಒಂದು ಸಾವಿರದ ಒಂಭೈನೂರ ಇಪ್ಪತ್ತೊಂಭತ್ತನೇ ಮತ್ತು ನಮ್ಮ ಕಾರಕೀರ್ದಿಯ ಹತ್ತೊಂಬತ್ತನೇ ವರುಷವು.

ಆರ್. ಬಿ. ಪಟೇಲ್, ರಜಿಸ್ಟ್ರಾರ್.
ಈ. ಚೇ ದಿವಸ

ತಾರೀಕು ೨೩ನೇ ಜನವರಿ ೧೯೨೯.
ಒನ್ನುಬಾಯಿ ಪರಮೇಶರ ಶೆಟ್ಟಿಯು ವಿಧವೆ,
ಅರ್ಜದಾರ ಸ್ವತಹ ಹಾಜರ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ,

O. P. No. 11/1929.

ಕೃಷ್ಣ ಕೊಂಗ್ರನ್ನಾಯ—ಅರ್ಜದಾರ.

ಅರ್ಜದಾರನ ಮಗ ವ್ಯಾತಪಟ್ಟ ನಾರಾಯಣ ಕೊಂಗ್ರನ್ನಾಯಗೆ ವಿಟ್ಲ ಸೀಮೆ ಕುಂಬ್ಳೆ ರಾಮಚಂದ್ರ ಪಡ್ಡಿಲ್ಲಾಯರು ಬರದಿಟ್ಟ ವಿಲಿಯನಾಮೆಯ ಮೇರೆಗೆ ಹಕ್ಕು ಬಂದ ತಾ. 9—4—26ರಲ್ಲಿ ಸದರಿ ರಾಮಚಂದ್ರ ಪಡ್ಡಿಲ್ಲಾಯರಿಗೆ ಅನಂತ ಕೊಂಗ್ರನ್ನಾಯನು ರೂ 500ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸ್ಲು ಬಡ್ಡಿ ವಸೂಲಿ ಕುರಿತು ತನಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜದಾರನು ಮೇಲ್ಕಂಡ ಅರ್ಜಿ ಮೂಲಕ ಮನವಿ ಮಾಡಿಕೊಂಡಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಬರುವ ಮಾರ್ಚಿ ತಿಂಗಳ 4ನೇ ತಾರೀಕಿನ ಪೂರ್ವಾಹ್ನ 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

ಪುತ್ತೂರು,
ತಾ. 13-2-29, }

(sd) M. Shiva Rao,
Pleader Puttur S. Kanara,

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ಟೆಲಿಗ್ರಾಮ್ ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಖ್ವಾರಡೂನ್ ಸೊರಾಬ್, ಕೆ. ಸಣ್ಣರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ. ಸಿ. ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವಿರಾದರೆ ಪ್ರತಿದಿನವೂ ಮೂಲ್ಕಿ ಕಾಪು ವಳಿ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ನ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. K. Mangalore.

ಪಿಲೇರಿಯಾನ ಸರ್ವಜ್ವರ ಸಂಹಾರಿಣಿ

ಕ್ರಯ 8 ಬಿಲ್ಲೆ 1-8-0 ½ ಡಜನಿಗೆ 8-8-0 ಡಜನಿಗೆ 16-8-0

ದಿಟನಂಬು ಪುಟ್ಟನಾಗು!! ನೆಟ್ಟಗಾಗು!!

ಯುವಕನೆ ನಿನ್ನ ಬಲ ಯಾವದರಲ್ಲಿದೆ? ಸೌಖ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ!

ಆರೋಗ್ಯವೇ! ದೇಹವು ಕ್ಷೀಣವಾಗಿದೆಯೇ? ಮನಸಂತೋಷ ತಪ್ಪಿದೆಯೇ? ಜಠರ ಶಕ್ತಿ ಕುಂದಿರುವುದೇ? ಮುಂಗೋಪ ಜಾಸ್ತಿ ಇದೆಯೇ? ಆಲಸ್ಯ ಕುಂದಿರುವದೇ? ಚುರುಕು ಚಟುವಟಿಕೆ ಇಲ್ಲವೇ? ವ್ಯಾಕುಲತೆಯಿಂದ ಮರುಗುತ್ತೀಯೋ? ಸುಖವಾಗಬೇಕೆಂಬ ಇಚ್ಛೆ ಇದೆಯೇ? ಹಾಗಾದ ಇಗೋ ಬಹು ಗುಣಕರವಾದ 'ಕಂಬೌಂಡ್ ಸಿರಪ್ ಸಾಲಿಸಿವನ್'ವೆಂಬ ಔಷಧವನ್ನೇ ಸೇವಿಸು. ಆವಾಗ ಮೇಲಿನ ಆವ ಲಕ್ಷಣಗಳು ಶೀಘ್ರವಾಗಿ ಬಹು ಆರೋಗ್ಯವೂ ಶರೀರ ಪುಷ್ಟಿಯೂ ಉಂಟಾಗಿ ನಿನ್ನ ಆರೋಗ್ಯದಲ್ಲಿಯೇ ಇದೆಯೆಂದು ನಿನಗೇನೇ ತೋರಿ ಬರುವುದು.

ಕ್ರಯ ಬಿನ್ ಸೀಸೆಗೆ ರೂ. 3—8—0.

ಯುವತಿಯೇ ನಿನ್ನ ಸುಂದರವಾದ ಉಡುಪು ಯಾವುದು? ಅಚ್ಚುಗಟ್ಟಾಗಿ ಹೊಳೆಯುವ ನಿನ್ನ ಆರೋಗ್ಯವಾದ ದೇಹವಲ್ಲವೇ!

ದೇಹವು ಅಚ್ಚುಕಟ್ಟಾಗಿಲ್ಲವೇ? ರೂಪಕ್ಕೆ ಕಳೆ ಬಂತೇ? ಮುಖ ಕಳೆಗುಂದಿದೆಯೇ? ಶೂಲು ಬಡಿವದೇ? ಎದೆ ನಡುಗು, ಆಯಾಸ ಉಂಟೋ? ರಕ್ತ ಧಾತುಲ್ಲವೇ? ಅಜೀರ್ಣವಿದೆಯೇ? ಸೊಂಟ ನೋವು ಉಂಟೋ? ತಲೆತಿರುಗುವುದೇ? ತಲೆನೋವು ಉಂಟೋ? ದೃಷ್ಟಿ ಸರಿಯಿಲ್ಲವೇ? ಕಣ್ಣಿಗೆ ಕ್ಷಯವಾಗಿದೆಯೇ? ಆವಾಗ ಉಷ್ಣ ಜಾಸ್ತಿಯೇ? ಇವರಿಂದ ಬಿಡುಗಡೆ ಹೊಂದಲು ಇಚ್ಛೆ ಇದೆಯೇ? ಹಾಗಾದರೆ ಗುಪ್ತ ಸೇವಕಿಯಂತಿರುವ ಕಂಬೌಂಡ್ ಸಿರಪ್ ಸಬೀನ ಸಬಿಯಾಳೆಂಬವಳನು ಅಂಗೀಕರಿಸು. ಈಕೆ ಪ್ರತಿಹಿಂಸೆಯಿಂದ ನಿನ್ನನ್ನು ಬಿಡಿಸಿ ಶರೀರ ಪುಷ್ಟಿಯಾಗುವಂತೆಯೂ ಮುಖಶೀಲಗಳು ಹೊಳೆಯುವಂತೆಯೂ ದೇಹಕ್ಕೆ ಬಲಶಕ್ತಿ ಸಿಗುವಂತೆಯೂ ಖಂಡಿತ ಸಹಾಯವಾಗುವಳು. ಆವಾಗ ಆರೋಗ್ಯವುಳ್ಳ ದೇಹವು ಹೊಳೆಯುವ ನಿನ್ನ ಸುಂದರವಾದ ಉಡುಪಾಗಿದೆ ಎಂದು ನಿನಗೇನೇ ಖಚಿತವಾಗುವದು

ಕ್ರಯ 8 ಔನ್ಸ ಬಾಟ್ಲಿಗೆ ರೂ. 3—8—0,

ಕೆಟಲಾಗಿಗೆ ಬರೆಯಿರಿ —

ಪಿಲೇರಿಯಾನ ಕಂಪೆನಿ,

22628 ಮಂಗಳೂರು ದ. ಕ.

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಿಲ್ಲಾ, ಚಿಕ್ಕು, ಕಿತ್ತಳೆ, ದ್ರಾಕ್ಷೆ, ಅಂಜೂರ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ಕಾಲಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್ ಸ್ಟ್ರೀಟ್ ಸೋಮಯಾಜಿಯವರಲ್ಲಿ ದೊರೆಯುವವು.

ಕೆ ಮಧ್ವರಾಜ ಶೆಟ್ಟಿ, ದಿ. ಕೆನರಾ ನರ್ಸರಿ, ವಿಸಿಟ್‌ಗಾರ್ಡನ್, ಕಾಪು ದ.ಕ. 13 1 028 } C/o ಕೆ. ವಾಮನ ಶೆಣೈ ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.

ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಅತ್ಯುತ್ತಮವಾದ ಸೌಕರ್ಯಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀಯ ಜೀವವಿಮಾ ಕಂಪೆನಿಯು.

2 ಜನಪ್ರಿಯರೂ, ಪ್ರತಿಷ್ಠಿತರೂ ಆದ ಡೈರೆಕ್ಟರರು.

3 ಕಂಬಾ ಅನುಭವದ ವೈದ್ಯಾನಿಕ, ವಿತರಣೆಯ ಮತ್ತು ಸೌಹಾರ್ದದ ಆಡಳಿತ,

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆ ಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ,

ಬೇಕಾಗಿರುವರು.

ಉದಾರವಾದ ಕರಾರುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ತ ಮತ್ತು ಪರಿಶ್ರಮಿಯಾದ ಏಜಂಟರುಗಳು ಬೇಕಾಗಿರುವರು.

ಪ್ರಾಸ್ಪೆಕ್ಟಸಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, ಸ್ಪೆಶಿಯಲ್ ಏಜಂಟ್ ಹಳ್ಳಿ ಗ್ರಾಮ, [illegible] ದ. ಕ.

ಪಿ. ಅಭಯಂಕರ ದೇಶಪಾಂಡೆ ಅಥವಾ ಮತ್ತು ಕಂಪೆನಿ, ಮೆನೇಜಿಂಗ್ ಏಜಂಟ್.

ಕ ರ ಣಾ ಟ ಕ ಎ ಗ್ಯು ಮಿ ಕ್ಶ ರ್

ಕರ್ಣಾಟಕ ಎಗ್ಯುಮಿಕ್ಸ್ಚರ.

ಇವರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಜಾ, ಚಳಿ ಜ್ವರ, ಕಾಡಿಜ್ವರ ಇವುಗಳ ಮೇಲೆ ಅತಿ ಉತ್ತಮವಾದ ಔಷಧವು. ಇದರಿಂದ ಜ್ವರ ಬಿಟ್ಟು, ಶೀಘ್ರವಾಗಿ ರಕ್ತ ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತ್ತು ೧-೪-೦, ಸಣ್ಣದಕ್ಕೆ ೦-೧೪-೦.

ಎಲ್ಲ ಕಡೆಗೂ ಔಷಧವನ್ನು ಮಾರುವುದಕ್ಕೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು
ದಿ ಊಲನ್ ಮಾರ್ಟ್,
ಮಂಗಳೂರು. | ಕರ್ಣಾಟಕ ಬ್ರದರ್ಸ್,
ಗಿರಿಗಾಂವ, ಮುಂಬಯಿ.

Famous

Mysore Perfumes.

Best Incense sticks (Agar Bathis)

Maharaja Bathi	per seer (24 Tolas)	Rs	20
Darbar	,,	,,	15
Ananda	,,	,,	12
Manmohan	,,	,,	10
Musk Heena	,,	,,	8
Dilchaman	,,	,,	8
Kasthur Javaji	,,	,,	10
Amber	,,	,,	8
Rose	,,	,,	6
Jasmin	,,	,,	5
Punugu (Civet)	,,	,,	4
Heena		,,	3
A Tin Case containing 300 Assorted Bathis of 12 kinds		,,	6

Packing & Postage Extra.

The State Perfumery Mart,
Bangalore City,
Mysore State.

'ಅಂಬಾ ತಾಯಿತ್'

ನಿಮ್ಮ ಸ್ವಪ್ನವನ್ನು ಕೊಡುವದು—ಧಾರಣಾ ಮಾತ್ರ ದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯು ವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿಯಸ್ತದೆ.

೧ನೇ ನಂಬ್ರ ೧೫ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೩೦೦ ರೂಪಾಯಿ ವರೆಗೆ, ದೈವೀಶಕ್ತಿಯು, ಒಂದು ಸಾರಿ ಪರಿಕ್ಷಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
ಶಕ್ಲೆಶ್ಪೂರ್, ಹಾಸ್ಸನ್ ಡಿಸ್ಟ್ರಿಕ್ಟ್

Batliwalla's Preparations Cover All Your Needs.
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
ಬಾಟ್ಲಿವಾಲರ ಎಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ, ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಲರ್ ಅರ್ ಪಾಪ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈಫಾಯಡ ಮಿಕ್ಸ್ಚರ—ಟಾಯಿಫಾಯಿಡ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೀನ ಟೇಬ್ಲೆಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟುಗಳು ಇರುತ್ತವೆ
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೪—೦ ರೂ. ೧—೦—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ
ಏಜಂಟರು ಬೇಕಾಗಿದ್ದಾರೆ.

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
Sayani Road, P. O. Cadell Road, Bombay, No 14.

ಕೇಸರಿಯವರ ಲೋಧ್ರ

ಗರ್ಭಾಶಯ ರೋಗನಿವಾರಿಣೀ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಆಭರಣ'ವೆಂದೂ, 'ಸರ್ವಾರ್ಥೀಪ್ಸಿತಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜವನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಋತುಶೂಲೆ, ಋತುಸ್ರಾವದೋಷ, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಬಿಳಿಚು) ರೋಗ, ಗರ್ಭಸ್ರಾವ ಗರ್ಭಪಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ಉಬ್ಬಸ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ಔಷಧಿ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರೀ ಕುಟೀರಂ,

TELEGRAMS:—'KESARI' ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

15—4—'27

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತರಗಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್‌ಪೀಸ್‌ಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸ, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ... ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ತ್ವರೆಯಾ... ಆರ್ಡರಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಪಟ್ಟಿ ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉ...

ಪಿ. ಸೂ.— ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸರಿಯಾದ ಸಮಯವು ದೊರಕುವುದು.

ಅನುಕ್ರಮಣಿಕೆ.

ಅಗ್ರಲೇಖ,	ಪುಟ
೧೯೨೭-೨೮ರಲ್ಲಿನ ಹಿಂದೂಸ್ಥಾನ.	೬
ವಿದೇಶ ವರ್ತಮಾನ	"
ಸ್ಥಳೀಯಸಮಾಚಾರಗಳು	೪
ಟೀಕೆಗಳು	"
ವರ್ತಮಾನ ಸಂಗ್ರಹಗಳು	
ಒಳದೇಶ ವರ್ತಮಾನ	೬-೬
ದಕ್ಷಿಣ ಕನ್ನಡ — ಕುಂಗನೂರು,	೯
ವಿವಿಧ ಸಮಾಚಾರಗಳು	"
ಸಾಂಬಾಲುಗಳ ಶಿಕ್ಷಣಪ್ರಾಪ್ತಿ	೯
ಮುಂಬಾಯಿಯಲ್ಲಿ ದಂಗೆ	"
ಪತ್ರವ್ಯವಹಾರ ೧	೨
ದಕ್ಷಿಣ ಕನ್ನಡ ಜಿಲ್ಲಾ ಮಾಗಣೆ ಕ್ರಾಸುಭಾಗರ ಪರಿಷತ್ತು	೧೬

ಸ್ವದೇಶಾಭಿಮಾನಿ.

ತಾರೀಕು ೧೫ನೇ ಶುಕ್ರವಾರ ಫೆಬ್ರುವರಿ ೧೯೨೯.

೧೯೨೭-೨೮ರಲ್ಲಿನ ಹಿಂದೂಸ್ಥಾನ.

ಪ್ರತಿ ವರ್ಷದ ಕ್ರಮದಂತೆ ಸರಕಾರವು ಈ ವರ್ಷವೂ ಹಿಂದೂಸ್ಥಾನದ ೧೯೨೭-೨೮ರೊಳಗಿನ ಒಂದು ವರ್ಷದ ಘಟನೆಗಳ ವಿಮರ್ಶೆಯನ್ನು ಪ್ರಕಟಿಸಿಯದೆ. ಈ ಪುಸ್ತಕವನ್ನು ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಫೊರ್ಮೇಶನ್, ಇವರು ಸರಕಾರಕ್ಕಾಗಿ ತಯಾರಿಸುತ್ತಾರೆ. ಸ್ವಭಾವತಃ ಇದರೊಳಗಿನ ವಿಮರ್ಶೆಗಳು ಸರಕಾರದ ಏಕಪಕ್ಷೀಯ ಅಭಿಪ್ರಾಯಗಳನ್ನೇ ತೋರಿಸುವಂತಹವುಗಳಾಗಿರುತ್ತವೆ. "೧೯೨೭ನೇ ಇಸವಿಯ ಎಪ್ರಿಲ್ ಒಂದನೇ ತಾರೀಕಿನಲ್ಲಿ ಹಿಂದೂ ಮುಸಲ್ಮಾನ ಸಮಸ್ಯೆಯ ತರ್ಕವು ನಡೆಯಿತು. ಅಂತರ್ಜಾತೀಯ ಕಲಹಗಳು ಕಡಿಮೆಯಾಗುವ ಬದಲಿಗೆ ಮತ್ತೂ ಹೆಚ್ಚಾಯಿತು" ಎಂದು ವರ್ಷಾರಂಭದ ಘಟನೆಯ ಉಲ್ಲೇಖವನ್ನು ಮಿ| ಕೋಟಮನ್‌ರವರು ಹೇಳುವರು.

"ರಿಸರ್ವ ಬೇಂಕ್ ಬಿಲ್ಲು ಮತ್ತು ಇಂಡಿಯನ್ ನೇವಿ ಡಿಸಿಪ್ಲಿನ್ ಬಿಲ್ಲು ಈ ಎರಡು ಬಿಲ್ಲುಗಳು ಸ್ಯಾಮನ್ ಕಮಿಶನ್ ನಿವೇದನೆಯೊಡನೆಯೇ ಬಿದ್ದು ಹೋದವು" ಎಂದು ಹೇಳಿ "ಇವುಗಳಲ್ಲಿ ರಿಸರ್ವ ಬೇಂಕ್ ಬಿಲ್ಲು ಎಂಬುದು ಸೆಲ್ಫಗವರ್ನಮೆಂಟಿನ ಒಂದು ಶಾಖೆಯ ಪ್ರಮುಖ ಸೋಪಾನವಾಗಿತ್ತು" ಎಂದು ಕೋಟಮನ್ನರು ಹೇಳುವರು. ರಿಸರ್ವ ಬೇಂಕ್ ಬಿಲ್ಲಿನ ಆಶ್ಚರ್ಯರೂಪವಲ್ಲಿಯೂ ಅದು ಮಂಜೂರಾಗದೆ ಹೋದುದು ವಿಷಾದಕರವೆಂದು ನಾವು ಒಪ್ಪುವೆವು.

"ಮಿಸ್ ಮೇಯೋ ಪುಸ್ತಕಕ್ಕೆ ಸರಕಾರದ ಗುಟ್ಟಿನ ಸಹಾಯವಿದ್ದಿತೆಂದು" ಬಹಿರಂಗವಾಗಿ ಆರೋಪಿಸಲ್ಪಟ್ಟಿತು. ಆದರೆ ಎಸೆಂಬ್ಲಿಯ ಪ್ರಶ್ನೆಗಳಿಗೆ ಉತ್ತರವಾಗಿ ಹೋಮ್ ಮೆಂಬರರು ಸರಕಾರಕ್ಕೆ ಈ ಪುಸ್ತಕದೊಡನೆ ಯಾವ ಸಂಬಂಧವೂ ಇಲ್ಲವೆಂದು ತೋರಿಸಲು ಶಕ್ತರಾದರು" ಎಂದು ಈ ಪುಸ್ತಕವು ಹೇಳುತ್ತಿದೆ. ಸರಕಾರವು ಗುಟ್ಟಿನ ಸಹಕಾರವನ್ನೂ ಸಹಾಯ ಕೊಡಲಿಕ್ಕೆ ಹೋಮ ಮೆಂಬರರು ಶಕ್ತರಾಗಿಲ್ಲವೆಂದೂ, ಈ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳುವ ಬರೀ ಮಾತ್ರ ಆಗಿನ್ನುವೆಂದೂ ತಿಳಿದುಬರುತ್ತದೆ.

ಸಮಸ್ಯೆಯ ವಿಷಯವಾಗಿ ಮಿ| ಕೋಟ... ನ ಅಭಿಪ್ರಾಯಗಳು ಸಾಧಾರಣವಾಗಿವೆ... ಗುವುದು, "ಕಳೆದ ವರ್ಷ ಪರಿಸ್ಥಿತಿನ ... ನಿರ್ಮಾಣವನ್ನು ಮಾಡಲಿಲ್ಲ. ಅವು ... ಇನ್ನೊಂದು ಜಾತಿಗೆ ಒಂದು ಸಾರಿ ... ಗಳಾಗಿರಲಿಲ್ಲ. ಹಿಂದೂ ಮುಸಲ್ಮಾನ ... ಕೂಡುವ ಮೊದಲು ಹೇಗಿತ್ತೋ ಆ ... ಉಳಿಯಿತು." ಎಂದು ಹೇಳುವುದನ್ನು ... ಬರೀ ಠರಾವುಗಳು ಹಿಂದೂ ಮುಸಲ್ಮಾನ ... ನಿಸಲಾರವು; ಮಾನಸಿಕತೆಯು ಬದ ... ಕಾದುದಾಗಿದೆ ಎಂದು ಸ್ವದೇ... ಹೇಳುತ್ತಿದೆ. ಹಿಂದೂ ಮುಸ...

ಲ್ಮಾನ ಜಗಳಗಳು ಮುಕ್ತಾಯವಾದರೂ, ಅವುಗಳ ರೀತಿ ಮುಕ್ತವಲ್ಲಿರುವುದಿಲ್ಲ, ಸಂಬಂಧಪಟ್ಟ ಸಮಾಜಗಳ ಮಾನಸಿಕತೆಯಲ್ಲಿರುತ್ತದೆ. ಅಂತಹ ಮಾನಸಿಕತೆಯ ಬದಲಾವಣೆಯ ಪ್ರಯತ್ನಗಳು ನಡೆಯುವುದಂತಿರಲಿ; ಆ ಬದಲಾವಣೆಗಳು ಆಗುವುದಾದರೆ ಧುರೀಣರೇ ನಿರೋಧಿಸುವರು. ಆದುದರಿಂದ ಜಾತಿಗಳ ಈಗಿನ ಧುರೀಣತ್ವದಲ್ಲಿಯೂ, ಸರಕಾರದ ಈಗಿನ ಧೋರಣದಲ್ಲಿಯೂ ಜಾತೀಯ ಐಕ್ಯವು ಸಾಧ್ಯವಾದೀತೆಂದು ನಾವೂ ನಂಬಲಾರೆವು.

"ಸಾಧಾರಣವಾಗಿ ಎಲ್ಲಾ ರಾಜಕೀಯ ಪಂಗಡಗಳೂ ಹಿಂದೂಸ್ಥಾನಕ್ಕೆ ಸಾಮ್ರಾಜ್ಯದೊಳಗಿನ ಇತರ ಡೊಮಿನಿಯನುಗಳಂತೆ ಸೆಲ್ಫ ಗವರ್ನಮೆಂಟನ್ನು ಕೊಡಬೇಕೆಂದು ಏಕಕಂಠದಿಂದ ಕೇಳುತ್ತೇವೆ" ಎಂದು ಈ ಪುಸ್ತಕವು ಒಪ್ಪುತ್ತದೆ. ಆದರೆ "ಸ್ವಂರಾಜ್ಯಿಸ್ಟರೂ ರಿಸ್ಪೊನ್ಸಿವಿಸ್ಟರೂ ಜವಾಬುದಾರರು" ಎಂದು ಹೇಳಿ ದೇಶದೊಳಗೆ ಶ್ರೀಮಂತರು ಬಡವರೆಂಬ ಒದಕನ್ನು ಪ್ರಬಲ ಪಕ್ಷಗಳೊಳಗೆ ಹುಟ್ಟಿಸಲು ಪ್ರಯತ್ನಿಸುವುದು ಅತೀ ನಿಂದನೀಯವಿದೆ. ಮೇಲಿನ ಎರಡು ಪಕ್ಷಗಳಲ್ಲಿಯೂ ಎಲ್ಲಾ ತಂಗತಿಯ ಜನರೂ ಇರುವರೆಂದು ಬೇರೆ ಹೇಳಬೇಕಾಗಿಲ್ಲ.

ಈ ಪುಸ್ತಕವು ಸ್ಯಾಮನ್ ಬಹಿಷ್ಕಾರವು ದೊಡ್ಡದಾಗಿಲ್ಲವೆಂದು ತೋರಿಸಲು ಪ್ರಯತ್ನಿಸುತ್ತಿದೆ. ಪ್ರಾಂತಿಕ ಕೌನ್ಸಿಲುಗಳ ಮಟ್ಟಿಗೆ ಹಿಂದೀ ರಾಷ್ಟ್ರೀಯ ಆಶಯವು ಕಾರ್ಯಕಾರಿಯಾಗಲಿಲ್ಲ. ಆದರೆ ಅಧಿಕ ಸಂಖ್ಯಾಕ ಜನತೆಯು ಈ ಕಮಿಶನಿಗೆ ಬದ್ಧವಿರೋಧವಾಗಿರುತ್ತದೆಯೆಂಬುದು ಕೇವಲ ಸ್ಪಷ್ಟವಿದೆ.

ವಿದೇಶ ವರ್ತಮಾನ.

— ಫ್ರಾನ್ಸಿನಲ್ಲಿ ಪ್ರಾರಂಭವಾಗಿದ್ದ ಇನ್‌ಫ್ಲುಯೆಂಜಾ ರೋಗವು ಇನ್ನೂ ಕಡಿಮೆಯಾಗಿಲ್ಲ. ಪೇರಿಸಿನಲ್ಲಿ ಆಸ್ಪತ್ರೆಗಳೆಲ್ಲವೂ ರೋಗಿಗಳಿಂದ ತುಂಬಿಹೋಗಿರುತ್ತವೆ. ಸಾವಿರಾರು ರೋಗಿಗಳಲ್ಲಿ ಇದುವರೆಗೆ ಸತ್ತವರು ಆರು ಜನರು ಮಾತ್ರ.

— ಮಿ| ಡಿವಲೇರಾರವರು ಒಂದು ತಿಂಗಳ ಕಾರಾಗೃಹವಾಸಕ್ಕೆ ಬೆಲ್‌ಫಾಸ್ಟಿನಲ್ಲಿ ವಿಧಿಸಲ್ಪಟ್ಟಿರುವರು.

— ತುರ್ಕಿಸ್ತಾನದಲ್ಲಿ ಈಗ ವಿಪರೀತ ಛಳಿಯು ಪ್ರಾರಂಭಿಸಿರುತ್ತದೆ. ಮಾಂಚೂರಿಯವರ ದೆಸೆಯಿಂದ ರೈಲು ಚಲಾವಣೆಗೆ ಅಡ್ಡಿಯುಂಟಾಯಿತು. ೨೫ ವರುಷಗಳಿಂದೀಚೆಗೆ ಇಂತಹ ಛಳಿಯು ಅಲ್ಲಿ ಉಂಟಾಗಿರಲಿಲ್ಲವಂತೆ.

— ಬಟ್ಲರ್ ಕಮಿಟಿಯವರು "ಹಿಂದೂ ಅರಸರು ಮತ್ತು ವರಿಷ್ಠ ಅಧಿಕಾರಗಳೊಳಗಿನ ಸಂಬಂಧದ ಕುರಿತಾಗಿ ತಮ್ಮ ವರದಿಯನ್ನು ಕೊಡುವುದಿಲ್ಲವೆಂದೂ ಅದರ ಒಂದು ಭಾಗವು ಮಾತ್ರ ಪ್ರಕಟಿಸಲ್ಪಡುವದೆಂದೂ ವರ್ತಮಾನವಿದೆ.

— ಪರ್ಶಿಯದಲ್ಲಿ ಗುಲಾಮರ ವ್ಯಾಪಾರವನ್ನು ತಡೆಗಟ್ಟುವಂತಹ ಒಂದು ಕಾನೂನನ್ನು ಮಂಜೂರು ಮಾಡಿರುವರು. ದೇಶವನ್ನು ಪ್ರವೇಶಿಸುವ ಗುಲಾಮರು ಸ್ವತಂತ್ರರೆಂದೇ ಪರಿಗಣಿಸಲ್ಪಡುವರು.

— ಬ್ರಿಟಿಷ ರಾಜ್ಯದಿಂದ ಪರಕೀಯರಿಗೆ ಸಲಬೇಕಾದ ಸಾಲವು ಕಳೆದ ಡಿಸೆಂಬರ ೩೧ನೇ ತಾರೀಕಿನ ದಿನ ೭,೭೩೮ ಮಿಲಿಯ ಪೌಂಡುಗಳಾಗಿದ್ದವು.

— ಸ್ಪೈನಿನ ಅರಸಿಯ ತಾಯಿಯ ಶವಕ್ಕೆ ಗೌರವದ ಸಲುವಾಗಿ ಫಿರಂಗಿ ಹಾರಿಸುವಾಗ ಫಕ್ಕನೆ ಸಿವಿಲಿಯನನೊಬ್ಬನು ಫಿರಂಗಿಯ ಎದುರು ಬಂದುದರಿಂದ ಗುಂಡಿನ ಪೆಟ್ಟಿನಿಂದ ಸತ್ತುಹೋದನು. ಆತನ ಒಂದು ಕೈಯು ಬಹಳ ದೂರಕ್ಕೆ ಹಾರಿಸಲ್ಪಟ್ಟಿತು.

— ಜಿಬ್ರಾಲ್ಟರಿನಲ್ಲಿ ಒಂದು ಆರ್. ಎ. ಎಫ್. ವಿಮಾನವು ಫಕ್ಕನೆ ಸಮುದ್ರದೊಳಕ್ಕೆ ಬಿದ್ದುದರಿಂದ ಇಬ್ಬರು ಆಫೀಸರರು ಸತ್ತುಹೋದರು. ಒಬ್ಬನ ಶರೀರವು ಇನ್ನೂ ಸಿಕ್ಕಿಲ್ಲ.

— ಗ್ರೇಟ್‌ಬ್ರಿಟನು ಮತ್ತು ಆಯರ್‌ಲೆಂಡುಗಳಲ್ಲಿ ತಯಾರಾಗುವಷ್ಟು ಹಡಗುಗಳು, ಉಳಿದ ಎಲ್ಲಾ ಕಡೆಗಳಲ್ಲಿ ಒಟ್ಟು ಆಗುವದಕ್ಕಿಂತ ಹೆಚ್ಚಾಗಿರುವವು. ಬ್ರಿಟನು ಮತ್ತು ಆಯರ್‌ಲೆಂಡುಗಳಲ್ಲಿಯೇ ಜಗತ್ತಿನಲ್ಲಿ ತಯಾರಾಗುವ ಹಡಗುಗಳ ಶೇಕಡಾ ೫೬-೬ರಷ್ಟು ಹಡಗುಗಳು ತಯಾರಾಗುವವು.

— ಇನ್‌ಫ್ಲುಯೆಂಜಾ ಜ್ವರದಿಂದ ಇಂಗ್ಲಂಡು ಮತ್ತು ವೇಲ್ಸುಗಳಲ್ಲಿ ಸಾಯುವವರ ಸಂಖ್ಯೆಯು ಒಂದೇ ಒಂದು ತಿಂಗಳೊಳಗೆ ಆರು ಪಾಲು ಬೆಳೆದಿರುತ್ತದೆ. ಫೆಬ್ರುವರಿಯ ಮೊದಲನೆ ವಾರದಲ್ಲಿ ೬೫೩ ಜನರು ಸತ್ತುಹೋದರು. ಮಿಡ್‌ಲೇಂಡ್ ಮತ್ತು ವೇಲ್ಸುಗಳಲ್ಲಿ ರೋಗವು ಮೊದಲಿನಂತೆಯೇ ಇದೆಯಾದರೂ ಲಂಡನಿನಲ್ಲಿ ಅದು ಬೆಳೆಯುತ್ತಾ ಬರುತ್ತದೆ. ಲಂಡನಿನಲ್ಲಿಯೇ ಫೆಬ್ರುವರಿಯ ಮೊದಲನೆ ವಾರದಲ್ಲಿ ೧೯೮ ಜನರು ಸತ್ತುಹೋದರು. ಜನವರಿ ತಿಂಗಳಲ್ಲಿ ೩೬೫ ಜನರು ಸತ್ತುಹೋದರು.

— ಮೆಕ್ಸಿಕೋವಿನ ಪ್ರೆಸಿಡೆಂಟರು ಕೇಮಸ್ ಪೋರ್ಟನಿಂದ ರೈಲುಗಾಡಿಯಲ್ಲಿ ಕುಳಿತು ಲಿನ್‌ಕೊನ್ನಿಕೋವಿಗೆ ಹೋಗುತ್ತಿರುವಾಗ ಮಧ್ಯ ಹಾದಿಯಲ್ಲಿ ರೈಲಿನಡಿಯಲ್ಲಿ ಒಂದು ಬಾಂಬು ಒಡೆದುಹೋಗಿ ಎರಡು ಗಾಡಿಗಳು ಕವಚಿಬಿದ್ದು ಫಾಯರ್‌ಮೇನನು ಸತ್ತುಹೋದನು. ಪ್ರೆಸಿಡೆಂಟರನ್ನು ಕೊಲ್ಲಬೇಕೆಂದು ಯಾರೋ ಈ ರೀತಿಯ ಉಪಾಯವನ್ನು ಮಾಡಿದ್ದರಾದರೂ ಪ್ರೆಸಿಡೆಂಟರಿಗೆ ಯಾವ ಅಪಾಯವೂ ಸಂಭವಿಸಲಿಲ್ಲ.

— ಅರಸರು ತಮ್ಮ ಈಗಿನ ನಿವಾಸವನ್ನು ಬದಲಾಯಿಸಿ ಸಮುದ್ರ ಕರಾವಳಿಯ ಬೋಗ್ನರಿಗೆ ಬಂದಿರುವರು. ಅವರ ಪ್ರಕೃತಿಯು ಈಗ ಉತ್ತಮಸ್ಥಿತಿಯಲ್ಲಿರುವದು.

— ಅಸ್ಸೋಸಿಯಾದಲ್ಲಿ ಬಹಳ ಹಿಮದ ವೃಷ್ಟಿ ಬಂದು ಕುಲ್ಲಿ ಸದಿಗಳಲ್ಲಿ ಇನ್ನೂ ತುಂಬಿ ಸಾಕ್ಷಾತ್ ದರುಹಗಳಿಂದಿತ್ತಿಗೆ ಬಂದಿರುವಂತಹ ಸೆರೆಯು ಬಂದಿತು. ಕೃಷಿಕ್ಷೇತ್ರ ಮೊದಲಾದವುಗಳಿಗೆ ಬಹಳ ನಷ್ಟವು ಸಂಭವಿಸಿತು. ಸಾವಿರಾರು ದನಕರುಗಳು ನಾಶವಾಗಿರುವವು. ರೈಲು ಬಂಡಿಗಳು ಕೆರೆನಡಿಯಲ್ಲಿದ್ದ ಕಾರಣ ರೈಲುಗಳು ಚಲಾವಣೆಯಾಗಲಿಲ್ಲ. ಕೆಂಪು ಎಂಬಲ್ಲಿ ಮಾತ್ರವೇ ಈ ಕೆರೆಯಿಂದ ಸುಮಾರು ಅರ್ಧ ಮಿಲಿಯ ಸ್ಟರ್ಲಿಂಗುಗಳಷ್ಟು ನಷ್ಟವಾಯಿತೆಂದು ತಿಳಿದುಬರುತ್ತದೆ. ನೂರಾರು ಜನರು ಮನೆಗಳಿಲ್ಲದೆ ಅಲೆದಾಡುತ್ತಿರುವರು.

— ಇಂದೋರದ ಮಾಜಿ ಮಹಾರಾಜರಾದ ಸರ್ ತುಕೋಜಿರಾಯರ ಮಗುವಿನ ನಾಮಕರಣದ ದಿನವು ಮುಂದರಿಸಲ್ಪಟ್ಟಿರುತ್ತದೆ.

— ಕಳೆದ ವಾರ ಪೆರಿಸಿನಲ್ಲಿ ಶೇಕಡಾ ೨೫ರಷ್ಟು ವಿದ್ಯಾರ್ಥಿಗಳು ಇನ್‌ಫ್ಲುಯೆಂಜಾ ರೋಗದ ದೆಸೆಯಿಂದ ಶಾಲೆಗಳಿಗೆ ಬಂದಿರಲಿಲ್ಲ. ಆದಿತ್ಯವಾರವೂ ಔಷಧಿಗಳ ಅಂಗಡಿಗಳನ್ನು ತೆರೆಯಬೇಕೆಂದು ಅಲ್ಲಿ ಹುಕುಂ ಕೊಡಲ್ಪಟ್ಟಿರುತ್ತದೆ.

— ತುರ್ಕಿಸ್ಥಾನದ ಸರಕಾರಿ ಹುದ್ದೇದಾರರುಗಳನ್ನು ಕೊಲ್ಲಬೇಕೆಂದೂ ಅಲ್ಲದೆ ಈಗಿನ ಸರಕಾರವನ್ನು ಉಪಾಯದಿಂದ ನಾಶಪಡಿಸಬೇಕೆಂದೂ ಒಳಸಂಚು ನಡಿಸಿದವರಿಗೆ ಶಿಕ್ಷೆ ವಿಧಿಸಲ್ಪಟ್ಟಿರುತ್ತದೆ. ಐವರಿಗೆ ಪಾಶಿ ಶಿಕ್ಷೆಯು ವಿಧಿಸಲ್ಪಟ್ಟಿದೆ. ಹದಿನಾರು ಜನರಿಗೆ ಬೇರೆ ಬೇರೆ ರೀತಿಯ ಶಿಕ್ಷೆಯು ವಿಧಿಸಲ್ಪಟ್ಟಿದೆ. ಉಳಿದವರನ್ನು ಬಿಟ್ಟುಬಿಟ್ಟಿರುವರು.

ಒಳದೇಶ ವರ್ತಮಾನ.

— ೧೯೨೮ ಮುಷ್ಕರಗಳ ಕಳೆದ ಐದಾರು ತಿಂಗಳುಗಳಲ್ಲಿ, ಪೋಲೀಸ್ ಕಮಿಶನರು ಮತ್ತು ಇತರ ಪೋಲೀಸ್ ಇಲಾಖೆಯವರ ಕೆಲಸದ ಪ್ರಶಂಸೆಯನ್ನು ಮಾಡಿದಾಯ. ಗವರ್ನರರು ಕೌನ್ಸಿಲಿನ ಮುಂದಿಡುವರೆಂದು ಮುಂಬಾಯಿ ಸರಕಾರದವರ ಠರಾವು.

— ಆಂಧ್ರ ದೇಶದಲ್ಲಿ ಸರಕಾರಿ ನೌಕರರು ಖಾದಿ ಧರಿಸಬಾರದೆಂದು ಸರಕಾರದವರು ಹುಕುಮು ಕೊಟ್ಟಿರುವರೆಂಬ ವರ್ತಮಾನವು ಸುಳ್ಳು. ಸರಕಾರದವರು, ಅಂತಹ ಹುಕುಮುಗಳನ್ನೇ ಕೊಟ್ಟಿಲ್ಲವಂತೆ.

— ದಿಲ್ಲಿಯಲ್ಲಿ ಒಂದು ಕಲಾ ಪ್ರದರ್ಶನವು ಜರಗಿತು. ವಾಟಿಯಾಳದ ಮಹಾರಾಜರು ಅದನ್ನು ತೆರೆದರು. ಆ ಸಂದರ್ಭದಲ್ಲಿ ಅವರು ದಿಲ್ಲಿಯ ಪೂರ್ವ ಚರಿತ್ರೆಯನ್ನೂ ಆ ಪಟ್ಟಣದ ಪ್ರಾಶಸ್ತ್ಯವನ್ನೂ ಕುರಿತು ಒಂದು ಭಾಷಣವನ್ನು ಮಾಡಿದರು.

— ರಂಗೂನಿನಲ್ಲುಂಟಾದ ಎಣ್ಣೆಯ ಬೆಂಕಿಯಿಂದ ಸುಮಾರು ೫ ಲಕ್ಷ ಗೆಲನ್ ಎಣ್ಣೆಯು ಸುಟ್ಟು ಹೋಗಿರುತ್ತದೆ. ನಷ್ಟವು ಸುಮಾರು ಒಂದು ಲಕ್ಷ ರೂಪಾಯಿಗಳಾಗಬಹುದೆಂದು ಅಂದಾಜು ಮಾಡಲಾಗಿಯದೆ.

— ಸ್ಯಾಮನ್ ಕಮಿಶನ್ ೧೮ನೇ ತಾರೀಕಿಗೆ ಮದರಾಸಿಗೆ ಬಂದಿಳಿಯುವದು. ಅದರಿಗೆ ಮುನಿಸಿಪಲ್ ಕೊರ್ಪೊರೇಶನ್, ಡಿಸ್ಟ್ರಿಕ್ಟ್ ಬೋರ್ಡ, ಭೂಮಾಲಿಕರ ಸಂಘ, ದಕ್ಷಿಣ ಹಿಂದೂಸ್ಥಾನದ ಎಡ್ಯುಕೇಶನಲ್ ಎಸೋಸಿಯೇಶನ್, ಪತಿತ ಜನರ ಸಂಘ, ಮತ್ತು ಒಂದೆರಡು ಆದಿದ್ರಾವಿಡ ಸಭೆಗಳು ಮಾನಪತ್ರವನ್ನರ್ಪಿಸಬೇಕೆಂದು ನಿಶ್ಚಯಿಸಿರುವವಂತೆ. ಪೋಲೀಸರು ಈಗಲೇ ಉತ್ಸಾಹದಿಂದ ವರ್ತಿಸತೊಡಗಿರುವರು.

— ಈ ಮೊದಲು ಕೈದುಮಾಡಲ್ಪಟ್ಟ ಆಂಧ್ರ ಧುರೀಣರಾದ ಶ್ರೀ ಶಂಭು ಮೂರ್ತಿಯವರು ಬೆಜವಾಡದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಮುಂದಕ್ಕೆ ಒಯ್ಯಲ್ಪಟ್ಟರು. ಅಲ್ಲಿ ಅವರನ್ನು ಜಾಮೀನಿನ ಮೇಲೆ ಬಿಡಲಾಗುವದೆಂದೂ, ಯೋಗ್ಯ ಜಾಮೀನನ್ನು ಒದಗಿಸಬೇಕೆಂದೂ ಹೇಳಿದರು. ಆದರೆ ಶಂಭು ಮೂರ್ತಿಯವರು ಜಾಮೀನನ್ನು ಕೊಡಲು ಒಪ್ಪದೆ ಇದ್ದ ಕಾರಣ ಮಾಂಟಲಿಪಟ್ಟಣದ ಸಬ್ ಜೈಲಿಗೆ ಕೊಂಡೊಯ್ಯಲ್ಪಟ್ಟರು.

— ರೈಲುವೇ ಬಜೆಟು ಇದೇ ೧೯ನೇ ತಾರೀಕಿನ ದಿನ ಎಸೆಂಬ್ಲಿಯ ಮುಂದೆ ತರಲ್ಪಡುವದು.

— "ಸ್ವರಾಜ್ಯವು ನಮಗಾಗಿ ಅಲ್ಲ. ಬಡತನದಿಂದ ನರಳುವ ಸಾವಿರಗಟ್ಟಲೆ ಜನರಿಗಾಗಿ" ಎಂದು ಶ್ರೀ| ಜವಾಹಿರಲಾಲ ನೆಹರುರವರು ಲಾಹೋರಿನಲ್ಲಿ ಭಾಷಣವಿತ್ತರು. ಸ್ವರಾಜ್ಯದ ಆವಶ್ಯಕತೆಯನ್ನು ಹಳ್ಳಿಯ ಗಟ್ಟಲೆ ಬಡಜನರು ಸರಿಯಾಗಿ ಅರಿತುಕೊಂಡರೆ, ಸ್ವರಾಜ್ಯವನ್ನು ಹೊಂದಲು ಸುಲಭವಾಗುವುದೆಂದೂ ಅವರು ಹೇಳಿದರು.

— ಕಲ್ಕತ್ತದಲ್ಲಿ ಜಿ. ಡುವೆಲ ಕೈಲಟಕೆಂಬವನು ತನ್ನ ಹೆಸರಿನೊಂದಿಗೆ ಎಮ್. ಡಿ. ಎಂಬ ಬಿರುದನ್ನು ತನ್ನಿಚ್ಛೆಯಂತೆ ಸೇರಿಸಿಕೊಂಡ ಕಾರಣ, ೧೦೦ ರೂಪಾಯಿಗಳ ಜುಲ್ಮಾನೆ, ತಪ್ಪಿದರೆ ಒಂದು ತಿಂಗಳ ಸಾದಾ ಸಜೆ ವಿಧಿಸಲ್ಪಟ್ಟಿರುತ್ತದೆ.

— ಬೇಲೂರಿನ ರೈಲು ಅಪಘಾತದ ಸಂಬಂಧದಲ್ಲಿ ಫಾರ್ವರ್ಡ್ ಪತ್ರಿಕೆಯಲ್ಲಿ ಲೇಖನ ಬರೆದುದಕ್ಕಾಗಿ, ಪತ್ರಿಕೆಯ ಸಂಪಾದಕರ ಮೇಲೂ ಮುದ್ರಕರ ಮೇಲೂ ತೋಹಮತುಮಾಡಿ ಅವರಿಗೆ ಶಿಕ್ಷೆ ವಿಧಿಸಲ್ಪಟ್ಟಿತ್ತು. ಶಿಕ್ಷೆಯನ್ನು ರದ್ದುಪಡಿಸಬೇಕಾಗಿ ಅವರು ಹೈಕೋರ್ಟಿನಲ್ಲಿ ಅಪೀಲು ಮಾಡಿದ್ದರು. ಆದರೆ ಅಪೀಲು ತೆಗೆದುಹಾಕಲ್ಪಟ್ಟಿತು.

— ದಿಲ್ಲಿಯಲ್ಲಿ ಇನ್ನೊಂದು ದೈನಿಕ ಪತ್ರಿಕೆಯು ಪ್ರಾರಂಭಿಸಲ್ಪಟ್ಟಿರುವದು. ಇದರ ಹೆಸರು "ಪೈಗಾಮ್" ಎಂದು. ಇದು ಉರ್ದು ಭಾಷೆಯಲ್ಲಿ ಹೊರಡುವದು. ಇದರ ಮೊದಲನೆಯ ಸಂಚಿಕೆಯಲ್ಲಿಯೇ "ಈ ಪತ್ರಿಕೆಯು ರಾಷ್ಟ್ರೋದ್ಧಾರದ ಮತ್ತು ಹಿಂದೂ ಮುಸಲ್ಮಾನರ ಐಕ್ಯದ ಧ್ಯೇಯದಿಂದ ಹೊರಡುವದು" ಎಂದು ಉಲ್ಲೇಖಿಸಲ್ಪಟ್ಟಿದೆ.

— ಮಹಾತ್ಮಾಜಿಯವರ ಮೊಮ್ಮಗನಾದ ರಸಿಕಲಾಲ ಹರಿಲಾಲ ಗಾಂಧಿ ಎಂಬಾತನು ಹೊಸ ದಿಲ್ಲಿಯಲ್ಲಿ ಸತ್ತುಹೋದನು. ಈ ಹುಡುಗನು ಅಲ್ಲಿಯ ನೇಶನಲ್ ಯುನಿವರ್ಸಿಟಿಯಲ್ಲಿ ನೂಲುವದನ್ನು ಮಕ್ಕಳಿಗೆ ಕಲಿಸುತ್ತಿದ್ದನು, ಮೂರು ತಿಂಗಳ ಹಿಂದೆ ಸನ್ನಿಪಾತ ಜ್ವರಕ್ಕೆ ತುತ್ತಾದನು. ಶವಸಂಸ್ಕಾರದ ಸಮಯ ಹಿಂದುಗಳೂ ಮುಸಲ್ಮಾನರೂ ಹಲವರು ಬಂದಿದ್ದರು. ಗಾಂಧಿಜಿಯವರ ಪತ್ನಿಯವರೂ ಬಂದಿದ್ದರು.

—ಬಾಪತ ಎಂಬಲ್ಲಿಂದ ಶರಣಾಗತರಾಗಲು ಸ್ವೀಕರಿಸಿದ್ದ ಇಬ್ಬರು ಕಳ್ಳರನ್ನು ಪೋಲೀಸರು ಕೊಂಡೊಯ್ಯುತ್ತಿರುವಾಗ ಕಳ್ಳರು ಅಕಸ್ಮಾತ್ತಾಗಿ ತಪ್ಪಿಸಿಕೊಂಡು ಓಡಿಹೋಗಿರುವರು. ಅವರು ಎಲ್ಲಿಯೂ ಸಿಕ್ಕಲಿಲ್ಲ.

—ಬೆಂಗಳೂರಿನಲ್ಲಿ ಹವಿನಾಲ್ಕು ವರುಷದ ಹುಡುಗನೋರ್ವನು ತನ್ನ ಕೋಣೆಯ ಬಾಗಿಲ ಬಳಿಗೆ ಒಂದು ದಾರವನ್ನು ಹತ್ತಿ ಕೆಳಗಿಳಿಯುವಾಗ ಕೋಣೆಯ ಮೇಲೆ ಹಾದುಹೋಗುವ ತಂತಿಗೆ ತಗಲಿ ವಿದ್ಯುತ್ ಸಂಗಿಗೆ ಸೇರಿದ್ದರಿಂದ ಅಲ್ಲಿಯೇ ಸತ್ತು ಕೆಳಕ್ಕೆ ಬಿದ್ದನು.

—ಕೊಲ್ಲಾಚಿ ಎಂಬಲ್ಲಿ ಗುಂಡಿನ ಮದ್ದು ತಯಾರಿಸುವ ಮನೆಯೊಂದರಲ್ಲಿ ಏನೋ ಮದ್ದಿಗೆ ಬೆಂಕಿ ತಾಗಿ ನಾಲ್ವರು ಹೆಂಗಸರೂ ಒಬ್ಬ ಕೂಲಿಯವನೂ ಸತ್ತುಹೋದರು. ಹೆಂಗಸರು ಒಳಗಡೆ ಮದ್ದು ತಯಾರಿಸುತ್ತಿದ್ದರು. ಕೂಲಿಯು ಬಿಸಿಲಿನಲ್ಲಿ ಮದ್ದನ್ನು ಒಣಗಿಸುತ್ತಿದ್ದನು. ಬೇಡಿಯಿಂದ ಮದ್ದಿಗೆ ಬೆಂಕಿ ಹಿಡಿಯಿತು. ಹೊರಗಡೆ ಒಣಗ ಹಾಕಿದ್ದ ಮದ್ದು ಸುಟ್ಟು ಹೋಗಿ ಕೂಲಿಯು ಸತ್ತನು ಮಾತ್ರವಲ್ಲದೆ ಒಳಗಡೆಯ ಕೋಣೆಗೂ ಅಗ್ನಿಯು ಪಸರಿಸಿ ನಾಲ್ವರು ಹೆಂಗಸರೂ ಉರಿದು ಬೆಂದು ದಂತಾದರು.

—ಬನಾರಸಿನಿಂದ ಕಲಕತ್ತೆಕ್ಕೆ ಹೋಗುತ್ತಿದ್ದ ಎಕ್ಸ್‌ಪ್ರೆಸ್ ಟ್ರೈನು ಕಲಂದೂರ ಎಂಬಲ್ಲಿ ಕಂಬಿಗಳಿಂದ ತಪ್ಪಿಹೋಯಿತು. ಯಾರೂ ಸತ್ತು ಹೋಗಲಿಲ್ಲ.

—ಪಂಜಾಬಿನ ಗವರ್ನರರು ತಾರೀಖು ೧೩ಕ್ಕೆ ಲಾಹೋರಿನಿಂದ ಹೊರಟು ಅಲಂಪೂರಿಗೆ ಹೋಗಿ ತಾರೀಖು ೧೫ಕ್ಕೆ ಹಿಂತಿರುಗುವರು.

—ಆಲ್ ಇಂಡಿಯಾ ಎಕೌಂಟ್ ಮತ್ತು ಆಡಿಟ್ ಅಧಿಕಾರಿಗಳ ಪರಿಷತ್ತೊಂದು ಇದೇ ೨೪ ಮತ್ತು ೨೫ನೇ ತಾರೀಖುಗಳ ದಿನ ನಾಗಪುರದಲ್ಲಿ ಜರಗುವದು. ಬೆಂಗಳೂರಿನ ಸೀನಿಯರ್ ಎಕೌಂಟೆಂಟರಾದ ಪಿ. ಮುಖರ್ಜಿಯವರೇ ಈ ಪರಿಷತ್ತಿನ ಅಧ್ಯಕ್ಷರಾಗುವರು.

ದಕ್ಷಿಣ ಕನ್ನಡ.

ಮಂಗಳೂರು:—ತಾಲೂಕು ಬೋರ್ಡ್ ಸದಸ್ಯರ ಬರುವ ಸಾಧಾರಣ ಸಭೆಯು ಇದೇ ಬರುವ ೨೨ನೇ ಗುರುವಾರ ದಿನ ಮಧ್ಯಾಹ್ನ ೩ ಘಂಟೆಗೆ ತಾಲೂಕು ಬೋರ್ಡ್ ಆಫೀಸಿನಲ್ಲಿ ಕೂಡುವದು.

—ಹಿಂದೀ ಪ್ರಚಾರದ ಸಲುವಾಗಿ ದಕ್ಷಿಣ ಹಿಂದೂಸ್ಥಾನದಲ್ಲಿ ಸಂಚರಿಸುತ್ತಿರುವ ಶ್ರೀ ಜಮನಾಲಾಲ್ ಬಜಾಜ್, ಶ್ರೀ ರಾಜಗೋಪಾಲಾಚಾರ್, ಮತ್ತು ಇಗ್ನೇಶಿಯಸ್ ಇವರು ಕಳೆದ ಮಂಗಳವಾರ ಮಂಗಳೂರಿಗೆ ಬಂದಿದ್ದರು. ರೈಲುವೇ ಸ್ಟೇಶನಿನಲ್ಲಿ ಅವರನ್ನು ಎದುರುಗೊಂಡು ಸಾಯಂಕಾಲ ೬ ಘಂಟೆಯ ಹೊತ್ತಿಗೆ ಶ್ರೀ ಎ. ಶ್ರೀನಿವಾಸಮೂರ್ತಿಗಳವರ ಅಧ್ಯಕ್ಷತೆಯಲ್ಲಿ ಮೈದಾನಿನಲ್ಲಿ ಒಂದು ಸಭೆ ಕೂಡಿತು. ಶ್ರೀ ಧರ್ಮದೇವ ವಿದ್ಯಾವಾಚಸ್ಪತಿಯವರು ಹಿಂದೀಯಲ್ಲೊಂದು ಮಾನಪತ್ರವನ್ನು ಸಮರ್ಪಿಸಿದರು. ತದನಂತರ ಶ್ರೀ ಬಜಾಜರು ಹಿಂದೀ ಭಾಷೆಯ ಪ್ರಾಮುಖ್ಯತೆ, ಅದನ್ನು ಕಲಿತುಕೊಳ್ಳುವ ಆವಶ್ಯಕತೆ, ಮೊದಲಾದವುಗಳನ್ನು ಕುರಿತು ಇಂಗ್ಲಿಷಿನಲ್ಲಿ ಸವಿವರವಾದ ಭಾಷಣವನ್ನು ಕೊಟ್ಟರು. ಅದನ್ನು ಶ್ರೀ ಕೋಟೆ ಶಿವರಾಮ ಕಾರಂತರು ಕನ್ನಡಕ್ಕೆ ಭಾಷಾಂತರಿಸಿದರು. ತದನಂತರ ಹಿಂದೀಯು ರಾಷ್ಟ್ರಭಾಷೆಯಾಗಿ ಮಾಡಲ್ಪಡಬೇಕೆಂದು ಶ್ರೀ ಸಿ. ರಾಜಗೋಪಾಲಾಚಾರಿಯವರು ಭಾಷಣವಿತ್ತರು.

ಶ್ರೀಯುತ ಶೇಟ್ ಜಮನ್‌ಲಾಲ್ ಬಜಾಜ್ ಸಿ. ರಾಜಗೋಪಾಲಾಚಾರಿ, ಇಗ್ನೇಶಿಯಸ್, ಹರಿಹರ ಶರ್ಮ ಇವರು ಶ್ರೀಯುತ್ ಕಾರ್ನಾಡ್ ಸದಾಶಿವರಾಯರೊಂದಿಗೆ ಸಾಯಂಕಾಲ ೬ ಘಂಟೆ ಸಮಯಕ್ಕೆ ಕೆನರಾ ಹೈಸ್ಕೂಲಿಗೆ ಬರಲು, ಶಾಲೆಯ ಮೆನೇಜರರು, ಹೆಡ್ ಮಾಸ್ತರರು, ಮ ಯುವಕ ಸಂಘದವರು ಸ್ವಾಗತವನ್ನಿತ್ತರು. ಕೂಡಲೆ ಅತಿಥಿಗಳು ಶಾಲೆಯ ಮ್ಯೂಸಿಯಮ್ಮನ್ನು ಸಂದರ್ಶಿಸಿ ಬಹಳ ಸಂತೋಷಪಟ್ಟರು. ಅಲ್ಲಿಂದ ಅಂದವಾಗಿ ಅಲಂಕರಿಸಲ್ಪಟ್ಟ ಭುವನೇಂದ್ರ ಸಭಾಸದನದಲ್ಲಿ ಎಲ್ಲರೂ ಒಟ್ಟುಗೂಡಿದೊಡನೆ ಶ್ರೀಯುತ್ ಧರ್ಮದೇವ ವಿದ್ಯಾವಾಚಸ್ಪತಿಯವರ ಪತ್ನಿಯು ಒಂದು ಪ್ರಾರ್ಥನಾಸ್ತೋತ್ರವನ್ನು ಹಾಡಿ ಸಭೆಯು ಪ್ರಾರಂಭವಾಯಿತು. ಕೆನರಾ ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ರಾ|| ಎ. ಬಿ. ಶೆಟ್ಟಿ, M. L. C., ಯವರು ಶ್ರೀಯುತ್ ಜಮನಲಾಲ್ ಬಜಾಜರವರನ್ನು ಅಧ್ಯಕ್ಷಸ್ಥಾನವನ್ನು ಅಲಂಕರಿಸಬೇಕಾಗಿ ಸೂಚಿಸಿದರು. ಕೂಡಲೇ ರಾ|| ಎಮ್. ಮಾಧವರಾಯರವರು, ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳು ಶಾಲೆಗೆ ಕೊಟ್ಟ, ದಿವಂಗತ ಗೋಖಲೆ ಮತ್ತು ಪಂಡಿತ ಮದನ ಮೋಹನ ಮಾಲವೀಯಜಿಯವರ, ತೈಲ ಚಿತ್ರಗಳನ್ನು ಅನಾವರಣ ಮಾಡಬೇಕಾಗಿ ಕೇಳಿಕೊಂಡರು. ಕೂಡಲೇ ಅಧ್ಯಕ್ಷರು ಎದ್ದು ಇಬ್ಬರೂ ಮಹನೀಯರ ವಿಷಯ ಚಿಕ್ಕ ಭಾಷಣಗಳನ್ನು ಮಾಡಿ ಅನಾವರಣ ಮಾಡಿದರು. ಶಾಲೆಯ ಮೆನೇಜರು ಹಳೇ ವಿದ್ಯಾರ್ಥಿಗಳಿಗೆ ತಮ್ಮ ಧನ್ಯವಾದಗಳನ್ನು ಅರ್ಪಿಸಿದರು. ತರುವಾಯ ಯುವಕ ಸಂಘದ ವಾರ್ಷಿಕ ಸಭೆಯು ಪ್ರಾರಂಭವಾಯಿತು. ರಾ|| ಪರಮೇಶ್ವರನ್ನರವರು ಗತ ವರ್ಷದ ವರದಿಯನ್ನು ಓದಿದರು. ತರುವಾಯ ಶ್ರೀ ರಾಜಗೋಪಾಲಾಚಾರ್ಯರವರು ಯುವಕ ಸಂಘದವರಿಗೆ ಒಂದು ಒಳ್ಳೇ ಭಾಷಣವನ್ನಿತ್ತರು. ಯುವಕರಲ್ಲಿ ಒಳ್ಳೆ ನಡತೆಯನ್ನೂ, ಪರಸ್ಪರ ಪ್ರೇಮವನ್ನೂ ಅಭಿವೃದ್ಧಿ ಪಡಿಸಬೇಕಾಗಿ ಹೇಳಿದರು, ಖಾದಿಯ ವಿಷಯವಾಗಿಯೂ ವಿವರವಾಗಿ ಹೇಳಿದರು.

ನಂತರ ಶ್ರೀ ಇಗ್ನೇಶಿಯಸ್ಸರವರು ಹಿಂದಿ ಭಾಷೆಯ ವಿಷಯವಾಗಿ ಸುರಸವಾದ ಭಾಷಣ ಕೊಟ್ಟರು. ಹಿಂದೀ ಭಾಷೆಯನ್ನು ನಮ್ಮ ದೇಶ ಭಾಷೆಯಾಗಿ ಯಾಕೆ ಮಾಡಬೇಕೆಂಬುವನ್ನು ರುಜುಪಡಿಸಿದರು. ಅವರ ಭಾಷಣವು ಮುಗಿದೊಡನೆ ಅಧ್ಯಕ್ಷರು ಹಿಂದಿಯಿಂದ ಒಳ್ಳೆ ಬುದ್ಧಿಮಾರ್ಗ ದಿರಿತೋರಿಸಿದ ತಮ್ಮ ಭಾಷಣವನ್ನು ಯುವಕ ಸಂಘದವರಿಗೆ ಇತ್ತು, ಸಭಿಕರಿಗೆ ತಮ್ಮ ಕೃತಜ್ಞತಾಭಾವವನ್ನು ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಿದರು. ಯುವಕ ಸಂಘದವರು ಅಧ್ಯಕ್ಷರಿಗೂ, ಅತಿಥಿಗಳಿಗೂ, ಸಭೆಯವರಿಗೂ ಧನ್ಯವಾದಗಳನ್ನರ್ಪಿಸಿ, ಹೂಗಳನ್ನು ಕೊಟ್ಟು ಸಭೆಯು ಕೊನೆಗೊಂಡಿತು.

ಈ ವರುಷ ನಾಸಿಕದಲ್ಲಿ ಮೇ. ೫, ೬, ೭, ಅನೇ ದಿನಗಳಲ್ಲಿ ಸೇರುವ ಆಲ್ ಇಂಡಿಯಾ ೧೧ನೇ ಆಯುರ್ವೇದ ಪರಿಷತ್ತಿಗೆ ಮದರಾಸು ಗವರ್ನಮೆಂಟ್ ಇಂಡಿಯನ್ ಸ್ಕೂಲ್ ಒಫ್ ಮೆಡಿಸನ್ಸ್ ಇದರ ಸುಪರಿಂಟೆಂಡೆಂಟರಾಗಿರುವ ಡಾ|| ಜಿ ಶ್ರೀನಿವಾಸಮೂರ್ತಿ ಬಿ. ಎ. ಬಿ. ಎಲ್, ಎಮ್. ಬಿ. ಸಿ. ಎಮ್. ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಕರ್ನಾಟಕ ದವರಾದ ಇವರು ಚುನಾಯಿಸಲ್ಪಟ್ಟದು ತುಂಬಾ ಅಭಿಮಾನಾಸ್ಪದವಾಗಿದೆ.

ಉಡುಪಿ.

ಪತ್ರ ೧. ತಾ. 12-2-'34.

ಪ್ರಾರ್ಥನೆ—"ಮರಿಮುಂಚಿ" ಎಂಬವರೊಬ್ಬರು ಇದೇ ಪತ್ರಿಕೆಯಲ್ಲಿ ಉಡುಪಿಯ ಪತ್ರಗಳನ್ನು ಬರೆಯುತ್ತಿದ್ದ ಸಂಗತಿಯು ವಾಚಕ ವರ್ಗಕ್ಕೆ ಮರೆತಿರಲಿಕ್ಕಿಲ್ಲ. ಈಗ ಅವರು ಅದನ್ನು ನಿಲ್ಲಿಸಿಬಿಟ್ಟಂತೆ ತೋರಿ ಬರುತ್ತದೆ. ಅದು ಕಾರಣ ನಾನು ಈ ಪತ್ರವನ್ನು ಬರೆಯಲುದ್ಯೋಗಿಸಿರುವೆನು. ನನಗೆ ಸಹಾಶ್ರಯವನ್ನು ಕೊಡುವಂತೆ ಪತ್ರಿಕಾ ಸಂಪಾದಕರನ್ನೂ ವಾಚಕ ವರ್ಗವನ್ನೂ ನಾನು ಪ್ರಥಮದಲ್ಲಿ ಪ್ರಾರ್ಥಿಸುತ್ತೇನೆ.

ಶಿಶುಸಪ್ತಾಹ—ತಾ. ೧-೨-'೩೪ರಿಂದ ತಾ. ೭-೨-'೩೪ರವರೆಗೆ ಜರಗಿತು. ಈ ಸಂಸ್ಥೆಯು ಇಲ್ಲಿ ಮೊದಲು ಸ್ಥಾಪಿತವಾದಾಗ್ಗೆ ತನ್ನ ಆರಂಭದ ಉತ್ಸಾಹವನ್ನು ತೋರಿ ಸತ್ಫಲಕಾರಿಯೆನಿಸಿತ್ತು. ನಂತರ ಒಂದೆರಡು ವರ್ಷ ವಿಶ್ರಾಂತಿಯನ್ನು ಪಡೆಯಿತು. ಆದರೆ ಈ ವರ್ಷ ವಿಶೇಷ ಜಾಗ್ರತಿಯನ್ನು ಹೊಂದಿ ಕಾರ್ಯಾಸಕ್ತವಾದುದು ಅಭಿನಂದನೀಯ! ಈಗಿನ ಉತ್ಸಾಹೀ ಹೆಲ್ತ್ ಇನ್ಸ್‌ಪೆಕ್ಟರರು ಇದಕ್ಕಾಗಿ ಪಟ್ಟ ಶ್ರಮವು ಸಾರ್ಥಕವು. ಆರೋಗ್ಯ ಪ್ರದರ್ಶನವೂ "ಡೈರೆಕ್ಟರಿ" (Directory) ಎಂಬ ಪುಸ್ತಕ ಪ್ರಕಟನವೂ ಈ ಸಂಘದ ಈ ವರ್ಷದ ವಿಶಿಷ್ಟ ಲಕ್ಷಣಗಳಾಗಿವೆ. ಇವುಗಳೊಂದಿಗೆ 'ನಾಟಕಾ'ದಿ ವಿಷಯಗಳನ್ನೂ ಕೈಕೊಂಡಿದ್ದರೆ ಉತ್ತಮವಿದ್ದಿತು.

ಆರೋಗ್ಯ ಪ್ರದರ್ಶನ—ಈ ಪ್ರದರ್ಶನವು ಪ್ರಥಮ ಪ್ರಯತ್ನಕ್ಕೆ ತಕ್ಕುದಾಗಿತ್ತು. ವಿಶೇಷ ಪರಿಣಾಮವನ್ನುಂಟುಮಾಡದಿದ್ದರೂ, ಪ್ರದರ್ಶಿಸಲ್ಪಟ್ಟ ವಸ್ತುಗಳಲ್ಲಿ ಕೆಲವು ಉತ್ಕೃಷ್ಟವಿದ್ದುವು. ರಾ|| ರಾಮಯ್ಯ ಶೆಟ್ಟಿ ಎಂಬವರ ಶಿಶುಟು ಸಂಬಂಧವಾದ ಕೆಲವು ಚಾರ್ಟುಗಳೂ, ರಾ|| ಪದ್ಮನಾಭ ಭಟ್ಟ ಎಂಬವರ ರಟ್ಟಿನ ಒಂದು ಕಟ್ಟಡದ ಆಕೃತಿಯೂ, ರಾ|| ಮುಖ್ಯಪ್ರಾಣ ಉಪಾಧ್ಯರ ಒಂದು ಮೊದಲೂ ಯೋಗ್ಯವಾಗಿದ್ದುವು. ಯೋಗ್ಯವಾದವುಗಳಿಗೆ ತಕ್ಕ ಪ್ರೋತ್ಸಾಹವು ದೊರಕುವಂತಾದರೆ, ಇಂಥಾ ಪ್ರದರ್ಶನಗಳು ಜಯಶೀಲವಾಗುವುದರಲ್ಲಿ ಸಂದೇಹವಿರದು.

"ಡೈರೆಕ್ಟರಿ" ಎಂಬ ಪುಸ್ತಕ—ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರರಾದ ರಾ|| ಬಿ. ಸಂಜೀವ ಬಾಳಿಗ, ಎಲ್ ಎಮ್. ಎಂಡ್ ಎಸ್ ಡಿ. ಟಿ. ಎಮ್ ರವರ ಮುನ್ನುಡಿಯನ್ನೊಳಗೊಂಡ ಈ ಪುಸ್ತಕದಲ್ಲಿ ಆರೋಗ್ಯ ವಿಷಯ ಗರ್ಭಿತವಾದ ಕೆಲವು ಲೇಖನಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಬರೆಯಲ್ಪಟ್ಟಿವೆ. ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ಕುಲಭಕ್ತಿಲಯ ನಾಲ್ಕೈದು ಕವಿತೆಗಳಿವೆ. ಇವುಗಳು ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಬಾಲಕಿಯರಿಗೆ ಪಠನಯೋಗ್ಯವಾಗಿವೆ. ವಿಶೇಷ ಜಾಹೀರಾತುಗಳು ಪುಸ್ತಕದ ಸೌಂದರ್ಯವನ್ನು ಕುಂದಿಸಿದವೆಂತಿದ್ದರೂ ಈ ಪುಸ್ತಕವು ವಾಚನೀಯವಾಗಿದೆಯೆನ್ನಲು ಅಡ್ಡಿಯಿಲ್ಲ.

ಆತ್ಮಹತ್ಯೆ—ಇಲ್ಲಿಯ ಭಂಡಾರೋಣಿಯ ಒಂದು ಬಾವಿಯಲ್ಲಿ "ಮೊಗ್ಲಿ" ಜಾತಿಯ ತರುಣನೊಬ್ಬನು ಕುತ್ತಿಗೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವನೆಂದು ತಿಳಿದುಬರುತ್ತದೆ. ಅವನಿಗೆ ಜೀವನದಲ್ಲಿ ಅಸೌಖ್ಯವಿದ್ದುದೇ ಇದಕ್ಕೆ ಕಾರಣವಾಗಿದೆಯಂತೆ!

—ಹೊಸಬ.

ವಿವಿಧ ಸಮಾಚಾರಗಳು.

ಪ್ರಕಟಣೆಗಾಗಿ ಹಣ ಖರ್ಚು.

ಅಮೇರಿಕನರು ತಮ್ಮ ಉದ್ಯೋಗದ ಪ್ರಕಟಣೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದರಲ್ಲಿ ಹೆಸರು ಹೊಂದಿರುವರು. ಪ್ರಕಟಣೆಗಳಿಗಾಗಿ ಅವರಷ್ಟು ಹಣವನ್ನು ಇನ್ನಾವ ರಾಷ್ಟ್ರದವರೂ ಖರ್ಚುಮಾಡುವುದಿಲ್ಲ. ಹಿಂದೆ ಮಾತ್ರವಲ್ಲ. ಈಗಲೂ ಕೂಡಾ ಅವರು ಹಿಂದಿನಂತೆಯೇ ವಿಶೇಷ ರೀತಿಯಿಂದ ಪ್ರಕಟಣೆಗಳನ್ನು ಪ್ರಕಟಿಸುವರು.

ಅಮೇರಿಕದ ಹೊಗೆಸೊಪ್ಪಿನ ಕಂಪೆನಿಯವರು ೧೯೩೩ನೇ ಇಸವಿಯಲ್ಲಿ ತಮ್ಮ ಲಕ್ಕಿಸ್ಟ್ರೈಕ್ ಸಿಗರೇಟುಗಳ ಪ್ರಕಟಣೆಗಾಗಿ ಸುಮಾರು ೩೩೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಿರುವರೆಂದು ಸೂಚಿಸುವರು. ಇದರಲ್ಲಿ ೧೪೦ ಲಕ್ಷ ರೂಪಾಯಿಗಳು ವೃತ್ತ ಪತ್ರಿಕೆಗಳಿಗಾಗಿ ಖರ್ಚು ಮಾಡಲ್ಪಡುವವು. ಯುನೈಟೆಡ್ ಸ್ಟೇಟ್ಸಿನ ಪ್ರತಿಯೊಂದು ದೈನಿಕ ಪತ್ರಿಕೆಗಳಲ್ಲಿಯೂ ಇವರ ಜಾಹೀರಾತು ಕೊಡಲ್ಪಡುವುದು. ೮ ಲಕ್ಷ ರೂಪಾಯಿಗಳು ಬಿಲ್ ಬೋರ್ಡುಗಳಿಗಾಗಿಯೂ, ೩೧ ಲಕ್ಷ ರೂಪಾಯಿಗಳು ಮಾಸಪತ್ರಿಕೆಗಳಿಗಾಗಿಯೂ, ೨೧ ಲಕ್ಷ ರೂಪಾಯಿಗಳನ್ನು ನೋಟೀಸು ಮೊದಲಾದವುಗಳಿಗಾಗಿಯೂ, ೧೧ ಲಕ್ಷ ರೂಪಾಯಿಗಳನ್ನು ರೇಡಿಯೋಗಳಿಗಾಗಿಯೂ, ವಿನಿಯೋಗಿಸುವರು. ಒಂದೇ ಒಂದು ಸಾಮಾಗ್ರಿಯ ಪ್ರಕಟಣೆಗಾಗಿ ಇದುವರೆಗೆ ಯಾರೂ ೩೩೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುದಿಲ್ಲ. ಜನರಲ್ ಮೋಟಾರಿನವರು ಒಂದೇ ಒಂದು ವರುಷದಲ್ಲಿ ಕೇವಲ ಪ್ರಕಟಣೆಗಳ ಸಲುವಾಗಿಯೇ ೩೩೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವರು. ಆದರೆ ಈ ಹಣದಿಂದ ಅವರು ಹಲವು ಕಾರುಗಳ ಮತ್ತು ಎಂಜಿನ್ನುಗಳ ಜಾಹೀರಾತುಗಳನ್ನು ಪ್ರಕಟಿಸಿದ್ದರು. ಪ್ರಕಟಣೆಗಾಗಿಯೇ ಇಷ್ಟು ಹಣವನ್ನು ಖರ್ಚು ಮಾಡುತ್ತಿರುವಾಗ, ಅವರ ವರುಷದ ಆಧಾಯವೆಷ್ಟಾಗಿರಬಹುದೆಂಬುದನ್ನು ಅಂದಾಜು ಮಾಡಲು ಕೂಡಾ ಸಾಧ್ಯವಿರುವುದಿಲ್ಲ.

ಮೈಸೂರು ಪತ್ರಿಕಾಕರ್ತರ ಸಭೆ.

ಮೈಸೂರಿನ ಪತ್ರಿಕಾ ಕರ್ತರ ಸಭೆಯೊಂದು ನವಜೀವನ ಆಫೀಸಿನಲ್ಲಿ "ಇವಿನಿಂಗ್ ಮೈಲ್" ಪತ್ರಿಕೆಯ ಸಂಪಾದಕರಾದ ಶ್ರೀ ನಾರಾಯಣ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಕಳೆದ ಶುಕ್ರವಾರ ಜರಗಿತು. ವಿಶ್ವಕರ್ನಾಟಕ ಪತ್ರಿಕೆಯ ಸಂಪಾದಕರಾದ ಶ್ರೀ ತಾತಾಚಾರ್ಯ ಶರ್ಮರವರು ವಿಶ್ವೇಶ್ವರಯ್ಯ ಕಮಿಟಿಯವರು ಕಂಡುಹಿಡಿದ ಸಂಗತಿಗಳನ್ನೂ ಅವುಗಳ ಮೇಲೆ ಸರಕಾರದವರು ಕೊಟ್ಟ ನಿರೂಪಗಳನ್ನೂ ವಿವರಿಸಿದರು.

ಎರಡನೆಯದಾಗಿ ಶ್ರೀ ಸಂಜೀವ ರಾಯರು "ಪತ್ರಿಕೆಗಳನ್ನು ನಿಲ್ಲಿಸಿದುದು ಸರಕಾರದವರ ತಪ್ಪು. ಪತ್ರಿಕೆಗಳನ್ನು ಸರಕಾರದವರು ನಿಲ್ಲಿಸಿದುದು ಸರಿಯೆಂದು ವಿಶ್ವೇಶ್ವರಯ್ಯ ಕಮಿಟಿಯವರು ಅಭಿಪ್ರಾಯಪಟ್ಟುದಕ್ಕೆ ತಾನು ಒಪ್ಪುವುದಿಲ್ಲ. ಕಮಿಟಿಯವರು ಪ್ರೆಸ್ಸುಗಳ ಸಲುವಾಗಿ ಒಂದು ಎಡ್ವೈಸರಿ ಬೋರ್ಡನ್ನು ಸ್ಥಾಪಿಸಬೇಕೆಂದುದೂ ಅನುಚಿತ" ಎಂದು ವಿವರಿಸಿದರು.

ತದನಂತರ ಚಿತ್ರಗುಪ್ತ ಪತ್ರಿಕೆಯ ಸಂಪಾದಕರಾದ ಶ್ರೀ ವೀರಣ್ಣಗೌಡರು ಅದೇ ವಿಷಯವಾಗಿ ಮಾತನಾಡಿದರು. ಶ್ರೀ ರಾಮಯ್ಯನವರೂ ಅದನ್ನು ಸಮರ್ಥಿಸಿದರು.

ಠರಾವುಗಳಲ್ಲಿ ಮೊದಲನೆಯದಾಗಿ, ಶ್ರೀ ವೀರಣ್ಣ ಗೌಡರು "ವಿಶ್ವೇಶ್ವರಯ್ಯ ಕಮಿಟಿಯವರು ಪತ್ರಿಕೆಗಳ ಸಲುವಾಗಿ ಕಂಡುಹಿಡಿದ ಸಂಗತಿಗಳು ಸರಿಯಲ್ಲವೆಂದೂ, ಸರಕಾರದವರ ಹುಕುಮು ಸರಿಯಲ್ಲವೆಂದೂ" ಮುಂದಕ್ಕೆ ತಂದ ಠರಾವು ಮಂಜೂರಾಯಿತು.

ಪ್ರೆಸ್ ಎಡ್ವೈಸರಿ ಬೋರ್ಡನ್ನು ಸ್ಥಾಪಿಸುವದನ್ನು ಖಂಡಿಸಿ, ಮತ್ತು ಅದರಿಂದ ಪತ್ರಿಕೋದ್ಯೋಗಕ್ಕೆ ಭಂಗವುಂಟಾಗುವದೆಂಬವನ್ನೂ ವಿವರಿಸಿ, ಶ್ರೀ ತಾತಾಚಾರ್ಯ ಶರ್ಮರವರು ಎರಡನೆ ತಂದ ಠರಾವು ಮಂಜೂರಾಯಿತು.

ಬ್ರಿಟಿಷ ಇಂಡಿಯಾದಲ್ಲಿ ಪದ್ಧತಿಯಾಗಿರುವಂತೆ ಮೈಸೂರಿನ ಪ್ರೆಸ್ಸುಗಳೂ ಸ್ವಾತಂತ್ರ್ಯಯುಕ್ತವುಗಳಾಗಬೇಕೆಂದು ಶ್ರೀ ರಾಮಯ್ಯನವರ ಠರಾವು ಮಂಜೂರಾಯಿತು.

ಕೊನೆಯದಾಗಿ ಪತ್ರಿಕೆಗಳಿಂದ ಜಾತಿ ವಿರೋಧವು ಹೆಚ್ಚಿತೆಂದು ಕಮಿಟಿಯವರು ಸೂಚಿಸುವುದನ್ನು ಖಂಡಿಸಿ ಶ್ರೀ ಶರ್ಮರವರು ಮುಂದಕ್ಕೆ ತಂದ ಠರಾವು ಕೂಡ ಮಂಜೂರಾಯಿತು.

ಅಸ್ಪ್ರಶ್ಯತಾ ನಿಷೇಧಕರ ಪರಿಷತ್ತು.

ಅಸ್ಪೃಶ್ಯತಾ ನಿಷೇಧಕರ ದ್ವಿತೀಯ ಪರಿಷತ್ತು ಮದರಾಸಿನಲ್ಲಿ ಕೂಡಿತು. ಸ್ವಾಗತಾಧ್ಯಕ್ಷರಾದ ಆರ್. ಕೃಷ್ಣರಾವ ಬೋಸ್ಲೆಯವರು ತಮ್ಮ ಸ್ವಾಗತ ಭಾಷಣದಲ್ಲಿ ಪರಿಷತ್ತಿನ ಉದ್ದೇಶವನ್ನು ಸೂಚಿಸಿ "ಅಸ್ಪೃಶ್ಯತೆಯು ನಮ್ಮನ್ನು ಕವಿದಿರುವ ಪ್ರಾಮುಖ್ಯ ಕಳಂಕವು. ಎಲ್ಲ ಜಾತಿಯವರಿಗೂ ಅದು ಸಂಬಂಧಿಸಿರುತ್ತದೆ. ಪ್ರಯತ್ನದಿಂದ ಆ ಕಳಂಕವನ್ನು ತೊಳೆಯಬೇಕು." ಎಂದು ಮೊದಲಾಗಿ ವಿವರಿಸಿದರು. ಸ್ವಾಮಿ ಆತ್ಮಾನಂದರವರ ಸ್ಮಾರಕ ಫಂಡಿಗೆ ಹಣವನ್ನು ಕೊಡಬೇಕೆಂದು ನಿವೇದಿಸಿದರು. ಆರಿಸು ಶೀಘ್ರದಲ್ಲಿಯೇ ಗುರುಪೂಂದಿ ...ಕ್ಕೆ ಆನಂದವನ್ನು ಸೂಚಿಸಿದರು. "ಅಸ್ಪೃಶ್ಯರಿಗೆ ದೇವಸ್ಥಾನಗಳನ್ನು ಪ್ರವೇಶಿಸುವ ಹಕ್ಕಿಲ್ಲ. ಅವರು ಸ್ಥಾನವಾದ ಹಳ್ಳಿಗಳಲ್ಲಿ ವಾಸಿಸುವರು. ಡಿಸ್ಟ್ರಿಕ್ಟ್ ಬೋರ್ಡಿನ ಬಾವಿಗಳಿಂದ ನೀರು ತೆಗೆಯಲು ಅವರಿಗೆ ಅನುಮತಿಯಿಲ್ಲ. ಕೊಳಕಾದ ಕೆರೆಯ ನೀರನ್ನು ಅವರು ಕುಡಿಯಬೇಕಾಗಿದೆ. ಅಸ್ಪೃಶ್ಯರ ಮಕ್ಕಳು ಶಾಲೆಯಲ್ಲಿ ಪ್ರತ್ಯೇಕವಾಗಿ ಕೂತು ಅಪ್ಪಿ ತಪ್ಪಿ ಇತರರನ್ನು ಮುಟ್ಟಿದರಾದರೆ ಅಧಿಕಾರಿಗಳಿಂದ ಹೊಡೆಯಲ್ಪಡುವರು. ಬಸ್ಸಿನ ಮೇಲೆ ಅಸ್ಪೃಶ್ಯರು ಏರಬಾರದೆಂದು ಹಿಂದೂಗಳಿಂದ ನಿರ್ಬಂಧಿಸಲ್ಪಡುವರು" ಎಂಬ ಈ ಸಂಗತಿಯು ಬಂಗಾರದ ಪತಿತ ಜನರ ಪ್ರತಿನಿಧಿಗಳಿಂದ ಸ್ವಾಮಿನ್ ಕಮಿಟಿಯ ಜೊಯಿಂಟ್ ಕಮಿಟಿಗೆ ನಿವೇದಿಸಲ್ಪಟ್ಟಿತು ಎಂಬುದನ್ನು ವಿವರಿಸಿದರು. ಸರಕಾರದವರು ಅಸ್ಪೃಶ್ಯರ ವಿದ್ಯಾ ಸೌಕರ್ಯಗಳಿಗಾಗಿ ಮಾಡಿದ ವ್ಯವಸ್ಥೆಗಳನ್ನು ಕೊಂಡಾಡಿದರು. ಶ್ರೀ ಗೋಪಾಲಸ್ವಾಮಿಯವರು ಅಸ್ಪೃಶ್ಯರ ಉದ್ಧಾರಕ್ಕಾಗಿ ಮಾಡಿದ ಪ್ರಯತ್ನಗಳನ್ನು ಹೊಗಳಿದರು. ಮತ್ತು ರಾಮಕೃಷ್ಣ ಮಠದ ಹಾಗೆ ದೇಶದ ನಾನಾ ಕಡೆ ಜಾತಿಯವರ ಮನೆಕೊಳೆದ ಉದಾಹರಣೆಯನ್ನು ಸೂಚಿಸಿದರು.

ದಿವಂಗತ ಎಮ್. ಬಾಬು ಬಿ. ಎ. ಎಲ್. ಟಿ. ಯವರ ಸ್ಮಾರಕ ಸಮಾರಂಭ.

ಮಹನೀಯರೇ!

ಈ ಸಮಾರಂಭವು ತಾ. ೨೪-೨-೧೯೩೪ನೇ ಶನಿವಾರ ಅಪರಾಹ್ನ ೪ ಘಂಟೆ ಬಳಿಕ್ಕೆ ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಆಚರಿಸಲ್ಪಡುವುದು. ಆ ದಿನ ರಾತ್ರಿ ಟ್ರೈನಿಂಗ್ ಶಾಲಾ ವಾರ್ಷಿಕ ವರ್ಧಂತಿಯೂ ನಡೆಯುವುದು. ಸ್ಮಾರಕ ಫಂಡಿಗೆ ...ಸಿದ ಹಣದಿಂದ ತಯಾರಿಸಲ್ಪಟ್ಟ ದಿವಂಗತರ ತೈಲ ಚಿತ್ರ... ...ಅಂದು ಟ್ರೈನಿಂಗ್ ಶಾಲೆಯಲ್ಲಿ ಜರಗುವುದು. ಮಾನಿಗಳೂ ದಿವಂಗತರ ಶಿಷ್ಯವೃಂದವೂ, ಸ್ಮಾರಕ ದಯಮಾಡಿ ಚಿತ್ತೈಸಿ ಸ್ಮಾರಕ ಸಮಾರಂಭದಲ್ಲಿ ಸಹ ಪ್ರಾರ್ಥಿಸುತ್ತೇವೆ.

ವಿ. ಸೂ.—ಸ್ಮಾರಕ ಫಂಡಿನ ರಶೀದಿ ಹಲವು ಭಾಗಗಳಿಗೆ ಕಳುಹಿಸಲ್ಪಟ್ಟಿವೆ. ಸದರಿ ಮಹನೀಯರು ದ್ರವ್ಯ ಸಮೀಕರಿಸಿದ ಎಲ್ಲಾ ಸಂಗ್ರಹವಾದ ಹಣವನ್ನೂ ತಾ. ೨೦-೨-' ರ ಒಳಗೆ ಟ್ರೈನಿಂಗ್ ಶಾಲೆಯ ಮುಖ್ಯ ಉಪಾಧ್ಯಾಯರೂ ಕಮಿಟಿಯ ಸೆಕ್ರೆಟರಿ ಕೋಟೆಕಾರ್ ಸುಬ್ಬಣ್ಣರವರಿಗೆ ದಯಮಾಡಿ ತಲುಪಿಸಬೇಕಾಗಿ ನಮ್ಮ ವಿನಂತಿ.

ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆ, ಕಲ್ಯಪಾಡಿ ಪೋಸ್ಟು, ತಾ. ೧೦-೨-'೩೪. } ದಿವಂಗತ ಶಿಷ್ಯರು ಕುರಿತು

ದಿವಂಗತ ಎಮ್. ಬಾ...

[illegible] ಮಂಗಳೂರಿನ ವಿಳಂಬ ಸಂವತ್ಸರದ ಪುಷ್ಯ [illegible] ಶುಕ್ರವಾರದ ವರೆಗಿನ ಪಂಚಾಂಗ.

(ಗ್ರೆಗೋರಿಯನ್ ಮಟ್ಟ (ಪ್ರಯಾಣಿಕ))

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ: ಉ	ಅಸ್ತ
16	ಶನಿ	[illegible]	[illegible]	ಭರಣೀ	[illegible]	೫	6.55	6.35
17	ರವಿ	[illegible]	[illegible]	ಕೃತ್ತಿಕಾ	[illegible]	೬	6 55	6 36
18	ಸೋಮ	[illegible]	[illegible]	ರೋಹಿಣೀ	[illegible]	೭	6.55	6.36
19	ಮಂಗಳ	೧೦	[illegible]	ಮೃಗಶಿರಾ	[illegible]	೮	6 54	6.36
20	ಬುಧ	೧೧	[illegible]	ಆರ್ದ್ರಾ	[illegible]	೯	6 54	6.37
21	ಗುರು	೧೨	[illegible]	ಪುನರ್ವಸೂ	[illegible]	೧೦	6.54	6.37
22	ಶುಕ್ರ	೧೪	[illegible]	ಆಶ್ಲೇಷಾ	[illegible]	೧೧	6.53	6.37

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚು		Minimum ಕಡಿಮೆ		Rainfall. ಮಳೆ ದಿನದ ಮಳೆ	ಒಟ್ಟು ಮಳೆ
8	88—	3	71—	0	—	—
9	88—	8	70—	6	—	—
10	87—	2	71—	1	—	—
11	85—	2	70—	2	—	—
12	86—	6	71—	2	—	—
13	87—	9	71—		—	—
14	87—	1	72—	9	—	—
						124-77

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮುಸ್ಕಿ ...	7 – 7	7 – 6
ಹೊಸ ಗುಡ್ಡ ...	6 – 4	6 – 10
ಹೊಸ ರಾಶಿ ...	5 – 8	6 – 2
ಊರ ಅಪ್ಪಲ್ ಬೆಳ್ತಿಗೆ ...	7 – 0	7 – 4
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ ...	12 – 8	—
ಎಲ್ಲೂರು ಬೆಳ್ತಿಗೆ ಮೂಡಿ ಗಳ್ಳೆ ...	6 – 4	6 – 8
ಗೋಧಿ ಗೋಣಿ ಗಳ್ಳೆ ...	18 – 12	20 – 0
ಹುರುಳಿ ಗೋಣಿ ಗಳ್ಳೆ ...	7 – 4	9 – 4
ಕಡಲೆ ಗೋಣಿ ಗಳ್ಳೆ ...	14 – 8	15 – 8
ಕೊಗಂ ಗೋಣಿ ಗಳ್ಳೆ ...	14 – 0	15 – 0
ಕೊಗಂಬೇಳೆ ಗೋಣಿ ಗಳ್ಳೆ ...	18 – 8	27 – 0
ಉದ್ದು ಗೋಣಿ ಗಳ್ಳೆ ...	15 – 4	15 – 12
ಹೆಸರು ಗೋಣಿ ಗಳ್ಳೆ ...	14 – 0	14 – 8
ಊರ ಬೆಲ್ಲ ಖಂಡಿ ಗಳ್ಳೆ ...	55 – 0	60 – 0
ಉಪ್ಪು ಗೋಣಿ ಗಳ್ಳೆ ...	4 – 0	4 – 4
ಕೊಪ್ರ ಖಂಡಿ ಗಳ್ಳೆ ...	110 – 0	—
ಕೊಪ್ರ ಹಿಂಡಿ ಖಂಡಿ ಗಳ್ಳೆ ...	35 – 0	—
ಎಳ್ಳಿಂಡಿ ಖಂಡಿ ಗಳ್ಳೆ ...	45 – 0	
ಕೊಪ್ರ ಎಣ್ಣೆ ಮುಡಿ ಗಳ್ಳೆ ...	7 – 0	7 – 4
[illegible] ಮುಡಿ ಗಳ್ಳೆ ...	7 – 12	8 – 4
[illegible] ಗಳ್ಳೆ ..	7 – 2	7 – 4
[illegible] ಗಳ್ಳೆ ...	3 – 8	3 – 10
[illegible] ...	5 – 8	5 – 12
[illegible] ಕಾಯಿ ಮುಡಿ ಗಳ್ಳೆ	1 – 8	2 – 8
[illegible] ...	8 – 4	8 – 8
[illegible] ಗಳ್ಳೆ ...	4 – 4	4 – 8
[illegible] ಗಳ್ಳೆ ...	378 – 0	388 – 0
[illegible] ಖಂಡಿ ಗಳ್ಳೆ ...	240 – 0	245 – 0
[illegible] ಗಳ್ಳೆ ...	520 – 0	524 – 0
[illegible] ...	62 – 0	65 –
[illegible] ...	8 – 9	
[illegible] ...	40 – 0	42 – 8
[illegible]	17 – 8	18 – 0
[illegible] ಮುಡಿ ಗಳ್ಳೆ ...	21 – 0	22 – 4
[illegible] ...	15 – 6	—
[illegible] —	14 – 8	16 – 8
[illegible] ...	13 – 9	—
[illegible] ...	40 – 0	42 – 8

ತಯಾರಾಗಿವೆ! ತಯಾರಾಗುವದು!!

ತಿಮ್ಮಪ್ಪ ಅಗ್ಗ ಬಲ್ಲ ವೈದ್ಯರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಞಂಗಾಡ (S.I.R.)

ಆಯುರ್ವೇದ ವೈದ್ಯ [illegible] ಮುಖ್ಯವಾಗಿ [illegible] "ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ" ಅವರ [illegible] ಹೊಂದಿ, ಅನುಭವಶಾಲಿಯಾದ [illegible] ವೈದ್ಯರಿಂದ ನಡೆಯುವ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರಧ ಎಣ್ಣೆಗಳು, [illegible], [illegible], [illegible], ಅರಿಷ್ಟಾಸವಗಳು ಇತ್ಯಾದಿ ಔಷಧಿಗಳು ನಮ್ಮಲ್ಲಿ ಯಾವಾಗಲೂ [illegible] ತಯಾರಿರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, [illegible] ಕ್ರಮ, ವೃತ್ತಿ [illegible] ಪದಾರ್ಥಗಳ ಅಭ್ಯಾಸವಿದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು [illegible] ಎಂಬ [illegible] ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು [illegible] ಎಂಬೀ ವಿವರಗಳ [illegible] ಪತ್ರ ಮುಖಾಂತರ [illegible] ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ [illegible] ಸಂದರ್ಭ [illegible] ಸಂಗತಿಗಳಲ್ಲಿ [illegible] ಪತ್ರವ್ಯವಹಾರ ನಡೆಸಿದಲ್ಲಿ [illegible] ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮದ್ದುಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅವನ್ನು ಸೇವಿಸುವ ಎಲ್ಲಾ [illegible] ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು [illegible] ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಲಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್, ಕಾಞಂಗಾಡ (ದ. ಕ.)

ತಯಾರಾಗಿವೆ! ತಯಾರಾಗಿವೆ!

ಶಾಲಿ ಹೈಸ್ಕೂಲುಗಳಿಗೂ, ಕೋರ್ಟುಗಳಿಗೂ ಬೇಕಾಗುವಂಥ

ಚೆಕ್ ರೋಲ್ ಗಳು

ಮೂರು ಸ್ಯಾಂಪಲ್‌ನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

ಮೆನೇಜರ್,

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಪ್ರಿಯವಾಗಲಿ ಅಂಚೆಹಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯು[illegible]ದ ಸಾರಸಂಗ್ರಹ ರೂಪವಾಗಿರುವ 9 ಭಾಷೆಗಳಲ್ಲಿ ಛಾಪಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಪೂರ್ತಿಯಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧಿಗಳಿಗನುಸಾರವಾಗಿ ನಡೆಯುವದೇ ದಾರಿ. ಬೇಕಾಗಿದ್ದವರು ಕಾರ್ಡು ಬರೆದು ತರಿಸಿಕೊಳ್ಳಿರಿ. [illegible] ಹಾಗಿಲ್ಲದಿದ್ದರೆ ಅದರಲ್ಲಿ ಹೇಳುವ ಉಪಾಯವನ್ನು ಮಾಡಿ. [illegible] ವನು ಮತ್ತೊಂದೇ ದಾರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಜೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ ಸುಂದರವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ ನಮ್ಮ ಲೋಕಪ್ರಸಿದ್ಧವಾದ ಟಾನಿಕ್ಕೆಂಬುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು.

ಈ ಮಾತ್ರೆಗಳು ಮೂಲಬಂಧ ಮೊದಲು ನಪುಂಸಕತ್ವವರೆಗಿನ ವ್ಯಾಧಿಗಳನ್ನು ಪರಿಹರಿಸುತ್ತವೆ.

ಡಿ. ಊಲನ್ ಮಾರ್ಟ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1923ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1860ನೇ ಇಸವಿಯ XXIನೇ ಆಕ್ಟಿನನುಸಾರವಾಗಿ ರಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಕೂಡ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ "ಫಾರ್ಮಸಿ"ಯಲ್ಲಿ ಶಾಸ್ತ್ರರೀತ್ಯಾ ತಯ್ಯಾರಿರುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟಮಾಡಿ ಹುಟ್ಟಬರುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತದೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯ್ಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ, ನಮ್ಮಲ್ಲಿ ತಯ್ಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,

ಕೊಡಿಯಾಲಬೈಲ್, ಮಂಗಳೂರು.

ತಾಲೂಕುಗಳ ಶಿಶುಸಪ್ತಾಹ.

ಪಾಣೆಮಂಗಳೂರು,

ಇಲ್ಲಿಯ ಬೋರ್ಡು ಮಾಪಿಳ್ಳಾ ಶಾಲೆಯ ಮುಖ್ಯ ಉಪಾಧ್ಯಾಯರಾದ ರಾ। ರಾ। ಎಸ್. ರಹಿಮ್‌ಸಿಂಗರು ಕಳೆದ ವರುಷ ಆರೋಗ್ಯವಾರವನ್ನು ಯೋಗ್ಯರೀತಿಯಲ್ಲಿ ನಡಿಸಿದುದಕ್ಕಾಗಿ ಆರೋಗ್ಯ ಇಲಾಖೆಯವರು ಇವರಿಗೆ ಒಂದು ಬೆಳ್ಳಿಯ ಪದಕವನ್ನು ಉಚಿತವಾಗಿ ಕೊಟ್ಟಿದ್ದರು. ಈ ವರುಷವೂ ಇದೇ ಉಪಾಧ್ಯಾಯರು ಅದೇ ಮಾಪಿಳ್ಳಾ ಶಾಲೆಯಲ್ಲಿ ಆರೋಗ್ಯವಾರವನ್ನು ಒಳ್ಳೇ ರೀತಿಯಲ್ಲಿ ಆಚರಿಸಿರುವರು. ಅದೇ ದಿನ ಬ್ಯಾಂಡ ವಾದ್ಯದೊಡನೆ ಪೋಲೀಸುವಾರ್ಗದ ಹತ್ತಿರದಿರುವ ಗುಂಟಸಿಗೆ ಶಾಲಾ ಮಕ್ಕಳೊಡನೆ ಹೋಗಿ ಅಲ್ಲಿ ಸುಮಾರು ೩೫೦ ಮಕ್ಕಳಿಗೆ ಪಾಯಸದಿಂದ ತೃಪ್ತಿಪಡಿಸಿ, ಅಲ್ಲಿಂದ ಶ್ರೀ ವಿಠಲ ದೇವಸ್ಥಾನಕ್ಕೆ ಬಂದು ಹಣ್ಣುಕಾಯಿ ಕೊಟ್ಟು ದೇಶಕ್ಕೂ, ಜೋರ್ಜ ಸಾರ್ವಭೌಮರಿಗೂ ಆರೋಗ್ಯವು ನೆಲೆಗೊಳ್ಳಲೆಂದು ಅರ್ಚಕರಿಂದ ಪ್ರಾರ್ಥನೆಯನ್ನು ಮಾಡಿಸಿದರು.

ನಾವೂರು.

ಇಲ್ಲಿಯ ಬೋರ್ಡು ಶಾಲೆಯಲ್ಲಿ ಈ ಶಾಲೆಯವರೂ ಫಲ್ ಶಾಲೆಯವರೂ ಕೂಡಿ ಆರೋಗ್ಯವಾರ ಕಳೆದ ಗುರುವಾರ ಆಚರಿಸಿದರು. ಗ್ರಾಮ ಮೆರವಣಿಗೆ, ಮಕ್ಕಳ ಆಟಗಳು, ಮಕ್ಕಳಿಗೆ ತಿಂಡಿ ತಿಂಡಿಪಾನವುಗಳು ಹಂಚಲಾಗಿ, ಆರೋಗ್ಯ ಭಾಷಣಗಳು ಕೊಡಲಾದವು.

ಬಂಟವಾಳ.

ಈ ಊರಿನ ಹತ್ತುಸಮಸ್ತರೂ ಸರಕಾರಿ ಉದ್ಯೋಗಸ್ಥರೂ ಉಪಾಧ್ಯಾಯ ಉಪಾಧ್ಯಾಯಿನಿಯರೂ ಆರೋಗ್ಯವಾರವನ್ನು ಉತ್ತಮರೀತಿಯಲ್ಲಿ ಆಚರಿಸಿದರು. ಮೊದಲನೆಯ ದಿನ ಶಾಲಾ ಮಕ್ಕಳ ಮೆರವಣಿಗೆ, ನಂತರ ಆರೋಗ್ಯದ ವಿಷಯ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಭಾಷಣಗಳು ಇಲ್ಲಿಯ ಹುಡುಗಿಯರ ಶಾಲೆಯಲ್ಲಿ ನಡೆದವು. ಮರುದಿನ ಪಂದ್ಯಾಟಗಳು ಇಲ್ಲಿಯ ಟೆಂಪಲ್ ಸೆಕೆಂಡರಿ ಶಾಲೆಯಲ್ಲಿ ನಡೆದವು, ಮೂರನೆ ದಿನ ಬೋರ್ಡು ಹುಡುಗಿಯರ ಶಾಲೆಯಲ್ಲಿ ಬೆಳಿಗ್ಗೆ ಮಕ್ಕಳಿಗೆ ತಿಂಡಿಯು ಹಂಚಲಾಯಿತು. ಮಧ್ಯಾಹ್ನ ಊರ ಮಹನೀಯರ ಮತ್ತು ಮಹಿಳೆಯರ ಸಭೆಯು ಜರಗಿತು. ಉತ್ತಮ ರೀತಿಯಲ್ಲಿ ಸಾಕಿದ ೬ ಶಿಶುಗಳಿಗೆ ಇನಾಮುಗಳು ಕೊಡಲಾದವು. ಪಂದ್ಯಾಟದಲ್ಲಿ ಗೆದ್ದವರಿಗೆ ಇನಾಮುಗಳು ಹಂಚಲಾದವು. ಇಲ್ಲಿಯ ಡೆಪ್ಯುಟಿ ತಹಶೀಲುದಾರರಾದ ರಾ। ಬೇಕಲ ನರಸಿಂಗರಾಯರು ಅಧ್ಯಕ್ಷಭಾಷಣವನ್ನು ಕೊಟ್ಟರು. ನಂತರ ಮಕ್ಕಳಿಗೆ ಇನ್ನೊಮ್ಮೆ ತಿಂಡಿ ಹಂಚಿ ಆರೋಗ್ಯವಾರವು ಮುಗಿಯಿತು.

ಅಜೆಕಾರು.

ಇದೇ ತಾ. ೭-೨-'೨೯ನೇ ಗುರುವಾರ ಅಪರಾಹ್ನ ಘಂಟೆ ೩-೩೦ಕ್ಕೆ ದೇಶಿಯ ಆರೋಗ್ಯ ಮತ್ತು ಶಿಶುಸಪ್ತಾಹದ ಸಮಾರಂಭವು ತೋರಣಗಳಿಂದಲೂ ಬಣ್ಣದ ಕಾಗದಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟ ಅಜೆಕಾರು ಶಾಲೆಯಲ್ಲಿ ಮ। ರಾ। ಯು. ಸೋಮಯ್ಯ ಅವರ್‌ಗಳ್ ಬಿ. ಎ. ಎಜ್ಯುಕೇಷನ್ ಸಬ್ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಕಾರ್ಕಳ.

ಇಲ್ಲಿಯ ಮೂಲೂರುಪಟ್ಲ ಚಂದ್ರನಾಥ ಬಸ್ತಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶಿಶುಸಪ್ತಾಹದ ಕಡೇವಾರವಾದ ಫೆಬ್ರವರಿ ೭ನೇ ತಾರೀಕಿನ ಗುರುವಾರ ಈ ಗ್ರಾಮದ ಪಟೇಲ್ ಹಾಗೂ ಈ ಶಾಲೆಯ ಮೆನೇಜರರೂ ಆದ ಮ। ರಾ। ಎ. ಧರ್ಮಪಾಲ ಶೆಟ್ಟಿ ಅಧ್ಯಕ್ಷತೆಯಿಂದಲೂ ಸಹಾಯಕರ ಕೃಪೆಗಳಿಂದಲೂ ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ಸೆಂಟರಿನ ಸೆಕ್ರೆಟರಿಯವರೂ ಹಾಗೂ ಈ ಶಾಲೆಯ ಹೆಡ್ಮಾಸ್ತರರೂ ಆದ ಬಿ. ವೆಂಕಟಪ್ಪಯ್ಯರವರ ಆಮಂತ್ರಣದ ಮೇರೆಗೆ ಈ ಸೆಂಟರಿಗೆ ಸೇರಿದ ಶಾಲೆಗಳ ಪೈಕಿ ಕಲ್ಲೇರಿ, ಬೆಳ್ಮಣ್ಣು, ಕೊಳಕ್ಕೂರು ಬೋರ್ಡು ಶಾಲೆಗಳ ಮಕ್ಕಳು ತಮ್ಮ ಗುರುಗಳೊಂದಿಗೆ ಬಂದಿದ್ದರು. ಈ ಶಿಶುಸಪ್ತಾಹದ ಸಮಾರಂಭಕ್ಕೆ ೩೫೦ರಿಂದ ಮಿಕ್ಕಿ ಮಕ್ಕಳೂ, ೧೩ ಮಂದಿ ಉಪಾಧ್ಯಾಯರುಗಳೂ ಅನೇಕ ವಿದ್ಯಾರ್ಥಿಗಳ ಹೆತ್ತವರೂ ನೆರೆದಿದ್ದರು. ಸಭೆಯು ಸೇರಿದೊಡನೆಯೇ ಅಧ್ಯಕ್ಷರ ಚುನಾವಣೆ ಪ್ರಾರ್ಥನೆಗಳಾಗಿ ಬಹು ವಿಜೃಂಭಣೆಯಿಂದ ಮೆರವಣಿಗೆಯು ಹೊರಟು ಮಕ್ಕಳ ಪಂದ್ಯಾಟವಾದ ತರುವಾಯ ಪುನಃ ಸಭೆಸೇರಿತು. ಕೋಲಾಟದ ತರುವಾಯ ಮುಖ್ಯೋಪಾಧ್ಯಾಯರ್ ಶಿಶುಸಪ್ತಾಹದ ಆಚರಣೆಯ ಕುರಿತೂ, ಸದರಿ ಶಾಲೆಯ ಸಹಾಯಕ ಅಧ್ಯಾಪಕರಾದ ಬಿ. ಶಂಕರ್ಣಯ್ಯನವರು ಆರೋಗ್ಯವೆಂಬ ಅಮೂಲ್ಯ ಭಾಗ್ಯದ ಮಹತ್ವಿಕೆಯನ್ನೂ, ಸದರಿ ಶಾಲೆಯ ಸಹಾಯಕರಲ್ಲೊಬ್ಬರಾದ ಕೆ. ವಿಷ್ಣುಮೂರ್ತಿ ಸೋಮಯಾಜರು ದೇವರು ಕೊಟ್ಟಿರುವ ಅಮೋಘ ಭಾಗ್ಯಗಳಲ್ಲಿ ಆರೋಗ್ಯ ಭಾಗ್ಯವನ್ನು ಪಾಲಿಸುವ ನಿಯಮಗಳ ಮತ್ತು ಪೂರ್ವಾಚಾರ ಪದ್ಧತಿಗಳಿಗೂ ಆರೋಗ್ಯದ ನಿಯಮಗಳಿಗೂ ಇರುವ ಹೊಂದಿಕೆಗಳ ವಿಷಯಗಳನ್ನೂ ಕೊಳಕ್ಕೂರು ಬೋರ್ಡು ಶಾಲೆಯ ಅಧ್ಯಾಪಕರಾದ ಬಿ. ಕೇಶವಶೆಟ್ಟಿಯವರು ಎಳೇಮಕ್ಕಳಿಗೆ ತಿಳಿಯುವಂತೆ ಸರಳಭಾಷೆಯಲ್ಲಿ ಶಿಶುಸಪ್ತಾಹದ ಆವಶ್ಯಕತೆಯನ್ನು ತಮ್ಮ ತಮ್ಮ ಸುರಸವಾದ ಮಾತುಗಳಿಂದ ವಿವರಿಸಿ ಮಕ್ಕಳಿಗೆ ಬೋಧಿಸಿದರು. ಅಧ್ಯಕ್ಷರ ಭಾಷಣ, ಸ್ಪರ್ಧೆಯ ಇನಾಂ, ತಿಂಡಿಹಂಚೋಣ ಮೊದಲಾದವುಗಳೊಂದಿಗೆ ಸಭೆ ಮುಕ್ತಾಯವಾಯಿತು.

ಮಾಣಿ

ಎಂದಿನಂತೆ ಈ ವರ್ಷವೂ ಇಲ್ಲಿ "ಶಿಶುಸಪ್ತಾಹ" ಸಮಾರಂಭವು ಬಹಳ ವಿಜೃಂಭಣೆಯಿಂದ ಜರಗಿತು. ಇದೇ ಕಳೆದ ತಾ. ೭-೨-'೨೯ ದಿನ ಅಪರಾಹ್ನ ಘಂಟೆ ೩ಕ್ಕೆ ಊರ ಪ್ರಮುಖ ಗೃಹಸ್ಥರೂ, ಮಹಿಳೆಯರೂ, ಬಾಲಕ ಬಾಲಕಿಯರೂ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನೆರೆದು ಬಂದು ಸಪ್ತಾಹದ ಕಡೆಯ ದಿವಸದ ಕಾರ್ಯಭಾಗವನ್ನು ಅಂತ್ಯಪಡಿಸಿದರು. ಅನೇಕರ ಭಾಷಣಗಳಾಗಿ, ಇನಾಮು ಹಂಚಿ ಸಭೆಯು ಮುಕ್ತಾಯವಾಯಿತು.

ಇನ್ನಾ ಬೋರ್ಡು ಶಾಲಾ ೭ನೇ ಆರೋಗ್ಯ ಮತ್ತು ಶಿಶುಸಪ್ತಾಹ

ಹೆಲ್ತ್ ಆಫೀಸರರಿಂದ ಬಂದ ಕಾರ್ಯಕ್ರಮದ ಪ್ರಕಾರ ಸ್ವಲ್ಪ ಬದಲಾವಣೆಗಳನ್ನು ಮಾಡಿ ತಾ. ೬-೨-'೨೯ನೇ ಬೆಳಿಗ್ಗೆ ೮ ಘಂಟೆಗೆ ಮಕ್ಕಳು ಮೆರವಣಿಗೆ ಹೊರಟು, ವಾದ್ಯ ಪತಾಕೆಗಳಿಂದಲೂ, ಮಕ್ಕಳ ಆರೋಗ್ಯ ಗೀತೆ ಮುಂತಾದ ಹಾಡುಗಳ ಗಾಂಭೀರ್ಯದಿಂದಲೂ, ಇಡೀ ಗ್ರಾಮ ಸಂಚರಿಸುತ್ತಿರುವಲ್ಲಿ ಪದ್ಮಣ ಗುತ್ತು ಮ। ರಾ। ರಾ। ಅಣ್ಣು ಶೆಟ್ಟಿ ಈ ಸಮೂಹಕ್ಕೆ ಸಕ್ಕರೆ, ಎಳನೀರು ಮುಂತಾದವುಗಳನ್ನು ಹಂಚಿದ್ದಲ್ಲದೆ ಎಂಟಾಣೆ ದ್ರವ್ಯ ಸಹಾಯವನ್ನೂ, ಮ। ರಾ। ರಾ। ಉಳ್ಳೂರು ಕೊರಗ ಶೆಟ್ಟಿ ಎಳನೀರು ಇತ್ಯಾದಿಗಳಿಂದಲೂ ಉಪಚರಿಸಿದ್ದಲ್ಲದೆ ಎಂಟಾಣೆ ಸಹಾಯವನ್ನೂ, ಇನ್ನಾಮುಳದ ಆಚಾರ್ಯರು ಬೆಲ್ಲ ನೀರಿನಿಂದ ಸಂತೈಸಿದ್ದಲ್ಲದೆ ಎಂಟಾಣೆ ದ್ರವ್ಯ ಸಹಾಯವನ್ನೂ ಇನ್ನದ ಗುತ್ತು ಶ್ರೀಮತಿ ಲೋಕು ಶೆಟ್ಟಿಯು ಸಹಾಯ ಮಾಡಿದ ಎಂಟಾಣೆಯನ್ನೂ ಇನ್ನೂ ಅಲ್ಲಲ್ಲಿ ಹಂಚಿದ್ದ ಸಕ್ಕರೆ ತಿಂಡಿಗಳನ್ನೂ ಸ್ವೀಕರಿಸಿಕೊಂಡು, ಮಧ್ಯಾಹ್ನ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮುಸ್ವಣ್ಣ ಶಾಲಾ ಮಕ್ಕಳನ್ನು ಎದುರುಗೊಂಡು ದೇವತಾ ಪ್ರಾರ್ಥನೆ ನಡಸಿ ಬೋರ್ಡು ಶಾಲೆಗೆ ಬಂದು ಅಂದಿನ ಮೆರವಣಿಗೆಯನ್ನು ಅಂತ್ಯಗೊಳಿಸಲಾಯಿತು.

ಮರುದಿನ ಬೆಳಿಗ್ಗೆ ೯ ಘಂಟೆಗೆ ಮ। ರಾ। ರಾ। ಪದ್ಮಣ ಗುತ್ತು ಪೂವಣಿ ಶೆಟ್ಟಿ ಅಧ್ಯಕ್ಷತೆಯಲ್ಲಿ ಮಕ್ಕಳ ಮತ್ತು ಊರ ಜನರ ಸಭೆ ಸೇರಿ ಹಲವರು ಆರೋಗ್ಯ ಮತ್ತು ಶಿಶು ಸಪ್ತಾಹದ ಭಾಷಣಗಳನ್ನು ಹೇಳಿ ಅಧ್ಯಕ್ಷರ ಭಾಷಣದ ನಂತರ ಆಟದಲ್ಲಿ ಜಯಶೀಲರಾದ ಶಾಲಾ ಮಕ್ಕಳಿಗೆ ಮತ್ತು ಆರಿಸಲ್ಪಟ್ಟ ಶಿಶುಗಳಿಗೂ, ಇನಾಮುಗಳು ಹಂಚಲ್ಪಟ್ಟು ನಂತರ ಸಭಿಕರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ ಮಧ್ಯಾಹ್ನ ಶಾಲಾ ಮೆನೆಜರರಿಂದ ಒದಗಿಸಲ್ಪಟ್ಟ ಪಾನಕವನ್ನು ಸ್ವೀಕರಿಸಿಕೊಂಡು ಸರ್ವರಿ ಮಕ್ಕಳಿಗೂ, ಸಭಿಕರಿಗೂ ಕಜ್ಜಾಯ ಮತ್ತು ಪಾನಕ ತಾಂಬೂಲಾದಿಗಳಿಂದ ಉಪಚರಿಸಿ ರಾಷ್ಟ್ರಗೀತದಿಂದ ಸಭೆಯು ಮುಕ್ತಾಯವಾಯಿತು.

ಸ್ಥಳಾಭಾವದಿಂದ ಎಲ್ಲಾ ಸಂಗತಿಗಳನ್ನು ಪ್ರಕಟಿಸಲು ಸಾಧ್ಯವಾಗದೆ ಸಾರಾಂಶವನ್ನು ಮಾತ್ರ ಕೊಟ್ಟಿರುವೆವು.

ಬಂಟವಾಳದಲ್ಲಿ ೧೯೨೯ನೇ ಮಾರ್ಚಿ ೨೩ನೇ ಶನಿವಾರ ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ ಸ್ಥಾಪನೆ ಕಾಲ ಸಮೀಪಿಸಿತು.

ಜಿಲ್ಲೆಯ ಎಲ್ಲಾ ಉಪಾಧ್ಯಾಯರ ಸಂಘಗಳ ತಿಳುವಳಿಕೆ ಬಗ್ಗೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಜಿಲ್ಲಾ ಸಂಘವನ್ನು ಸ್ಥಾಪಿಸುವುದರ ಕುರಿತು ಅನೇಕ ಲೇಖನಗಳು ಸ್ವದೇಶಾಭಿಮಾನಿ, ಕಂಠೀರವ, ನವಯುಗ, ರಾಷ್ಟ್ರಬಂಧು ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇವೆ. ಹೊಸಮಾರ್ ಸೆಂಟರಿನವರು ಈ ಸಂಯೋಗವನ್ನು ಕಾರ್ಯತ್ರರುವದೆಂದು ಬರೆದಿರುವರು. ಆದುದರಿಂದ ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘವನ್ನು ಸ್ಥಾಪಿಸುವದಕ್ಕಾಗಿ ಈ ಜಿಲ್ಲೆಯ ಆರು ತಾಲೂಕುಗಳಲ್ಲಿರುವ ಸುಮಾರು ೫೦ ಉಪಾಧ್ಯಾಯರ ಸಂಘಗಳಲ್ಲಿ ಪ್ರತಿ ಒಂದು ಸಂಘವು ಇವಕ್ಕೆ ಬೋರ್ಡು ಶಾಲೆಯ ಪರವಾಗಿ ಒಬ್ಬ ಮೆಂಬರರು, ಖಾಸಗಿ ಶಾಲೆಯ ಪರವಾಗಿ ಒಬ್ಬ ಮೆಂಬರರು, ಹುಡುಗಿಯರ ಶಾಲೆಯ ಪರವಾಗಿ ಒಬ್ಬ ಮೆಂಬರರು ಈ ರೀತಿಯಲ್ಲಿ ಕನಿಷ್ಠ ಪಕ್ಷಕ್ಕೆ ಮೂವರು ಮೆಂಬರರನ್ನಾದರೂ ಕಳುಹಿಸಬೇಕಾಗಿದೆ. ಬಂದ ಪ್ರತಿನಿಧಿಗಳಿಗೆ ಊಟ ಉಪಚಾರಗಳಿಗೂ ಉಳುಕೊಳ್ಳಲಿಕ್ಕೂ ಅನುಕೂಲತೆ ಮಾಡಲ್ಪಡುವುದು. ಉಪಾಧ್ಯಾಯಿನಿಯರಿಗೆ ಹುಡುಗಿಯರ ಶಾಲೆಯಲ್ಲಿ ಅನುಕೂಲತೆಯು ಮಾಡಲ್ಪಡುವುದು.

ಈ ಸಭೆಯನ್ನು ಬಂಟವಾಳ ಬೋರ್ಡು ಹುಡುಗರ ಶಾಲೆಯಲ್ಲಿ ಇದೇ ಮಾರ್ಚಿ ತಿಂಗಳ ತಾರೀಕು ೨೩ನೇ ಶನಿವಾರ ಜರಗಿಸಬೇಕೆಂದು ನಿರ್ಣಯಿಸಿರುತ್ತದೆ. ಆದುದರಿಂದ ವಿದ್ಯಾಭಿಮಾನಿಗಳಾದ ಉಪಾಧ್ಯಾಯರೂ ಉಪಾಧ್ಯಾಯಿನಿಯರೂ ಈ ಸಭೆಗೆ ಬಂದು ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಾಯರ ಸಂಘವನ್ನು ಸ್ಥಾಪಿಸಿ ಅದಕ್ಕೆ ಬೇಕಾಗುವ ಕಾರ್ಯಕಾರಿ ಮಂಡಳಿಯನ್ನು ಸ್ಥಾಪಿಸಿ ಟೀಚರ್ ಮೆನೇಜರರ ಸಂಘವು ಸ್ಥಾಪನೆಯಾದಂತೆ ಈ ಸಂಘವನ್ನು ಸ್ಥಾಪನೆ ಮಾಡಲು ಸಹಕಾರಿಗಳಾಗಬೇಕಾಗಿ ಅಪೇಕ್ಷಿಸುವ,

ಬಂಟವಾಳ, ೧೩-೩-'೨೯.

ಎಂ. ಗಣಪತಿರಾವ್ ಐಗಳ್,
ಸೆಕ್ರೆಟರಿ,
ಬಂಟವಾಳ ಸೆಂಟರಿನ ಉಪಾಧ್ಯಾಯರ ಸಂಘ.

ಚೀಫ್ ಪ್ರಸಿಡೆನ್ಸಿ ಮೆಜಿಸ್ಟ್ರೇಟರವರ. ೧೪೪ನೇ ಪ್ರಕರಣದ ಮೇರೆಗೆ ಮಾರ್ಗದಲ್ಲಿ ಐವರಿಗಿಂತ ಹೆಚ್ಚಿಗೆ ಜನರು ಒಟ್ಟಾಗಬಾರದೆಂದೂ ಸಾಯಂಕಾಲ ೭ರ ನಂತರ ಬೆಳಿಗ್ಗೆ ೬ರ ವರೆಗೆ ಕೋಟೆಯ ವಿನಹ ಇತರ ಸ್ಥಳಗಳಲ್ಲಿ ಸಂಚರಿಸಬಾರದೆಂದೂ ಹುಕುಂ ಕೊಟ್ಟರು.

ಕಮಾಟಿಪುರದಲ್ಲಿ ಗಲಭೆಯು ವಿಶೇಷವಾಗಿದ್ದಿತು. ಅಲ್ಲಿ ಸುಮಾರು ೮೦ ಜನರು ಕೈದುಮಾಡಲ್ಪಟ್ಟರು. ರಾತ್ರಿ ಲಾಲಬಾಗ ಪಕ್ಕದ ಸಮೀಪ ಹಿಂದೂ ಮುಸಲ್ಮಾನರೊಳಗೆ ಕಲಹವಾಗಿ ಪೋಲೀಸರಿಂದ ನಿಲ್ಲಿಸಲ್ಪಟ್ಟಿತು. ಟ್ರಾಮು ಸರಿಯಾಗಿ ಓಡುತ್ತಿದ್ದಿಲ್ಲ. ಕೆಲವು ಗಿರಣಿಗಳೂ ಹಲವು ಅಂಗಡಿಗಳೂ ಮುಚ್ಚಲ್ಪಟ್ಟಿದ್ದುವು. ವಿಕ್ಟೋರಿಯ ಗಾಡಿಗಳು ಬಾಡಿಗೆಗೆ ಓಡುತ್ತಿದ್ದಿಲ್ಲ. ಮುಚ್ಚಿ ಅಂಗಡಿಗಳನ್ನು ಬಂದುಮಾಡಬೇಕಾಗಿ ಸರಕಾರದವರು ಹುಕುಂಕೊಟ್ಟರು.

ಜಾವೇರಿ ಬಾಜಾರದಲ್ಲಿನ ಸರಾಫರ ಅಂಗಡಿಗಳು ಸುಲಿಯಲ್ಪಟ್ಟವು. ಪೋಲೀಸರು ಇದಕ್ಕಾಗಿ ೧೫೦ ಮಾವಾಲಿಗಳನ್ನು ಕೈದುಮಾಡಿದರು. ಮಿಲಿಟರಿಯವರು ತಮ್ಮ ಕೆಲಸಗಳನ್ನು ಮಾಡುತ್ತಲೇ ಇದ್ದರು.

ಬೆಳಿಗ್ಗೆ ಕಾಳಬಾದೇವಿ ರಸ್ತೆಯಲ್ಲಿ ಒಬ್ಬ ಮುಸಲ್ಮಾನನ ಶವದ ಮೆರವಣಿಗೆಯು ಹೋಗುವಾಗ ಹಿಂದೂಗಳು ಅದನ್ನು ಆಕ್ರಮಿಸಿ ಒಬ್ಬ ಮುಸಲ್ಮಾನನನ್ನು ಕೊಂದುಹಾಕಿದರು. ಶಾಂತಿಯನ್ನುಂಟುಮಾಡುವ ಸಲುವಾಗಿ ನೇಮಿಸಲ್ಪಟ್ಟ ಕಮಿಟಿಯವರು ಸ್ವಯಂಸೇವಕರನ್ನು ಸೇರಿಸಿಕೊಳ್ಳುತ್ತಾ ಅದಕ್ಕು ಪ್ರಯತ್ನಿಸುತ್ತಿದ್ದರು.

ನಾಗದೇವಿ ರಸ್ತೆಯ ಸಮೀಪ ತಾರೀಕು ೧೦ನೇ ದಿನ ೩೦೦ ಮಂದಿ ಮುಸಲ್ಮಾನರು ಒಟ್ಟಾಗಿ, ಓಡುವ ಟ್ರಾಮ್‌ಕಾರನ್ನು ನಿಲ್ಲಿಸಿಬಿಟ್ಟರು. ಕ್ರೈಸ್ತನರನ್ನೂ ಪಾರ್ಸಿಗಳನ್ನೂ ಅವರು ಹಿಂಸಿಸದೆ ಹಿಂದೂಗಳನ್ನು ಹಿಂಸಿಸತೊಡಗಿದರು. ಗಾಡಿಯು ರಕ್ತಮಯವಾಗಿ ಹೋಯಿತು. ಮಿಲಿಟರಿಯವರು ಬರುವುದರೊಳಗಾಗಿ ಮುಸಲ್ಮಾನರು ಪಾರಾಗಿಹೋದರು.

ಮುಂಬಾಯಿಯಲ್ಲಿ ದಂಗೆ.

ತಾ. 7—2—'29.

ತಾ. ೭ನೇ ದಿನ ಬೆಳಿಗ್ಗೆ ಜಾತೀಯ ಜಗಳಗಳು ಜೋರಿನಿಂದ ನಡೆದುವು.

ಹಿಂದುಬಜಾರಿನಲ್ಲಿ ೩೦ ಜನ ಪಠಾಣರು ಸೇರಿದ್ದರು. ಆದರೆ ಪೋಲೀಸರಿಗೆ ಈ ಸಂಗತಿಯು ತಿಳಿದು ಅವರು ಅಲ್ಲಿಗೆ ಬಂದು ಅವರನ್ನು ಸುತ್ತುವರಿದರು. ಅವರು ಗಲಭೆಯನ್ನುಂಟುಮಾಡುವ ಮೊದಲೇ ಕೈದುಮಾಡಲ್ಪಟ್ಟರು. ಗಲಭೆಯು ಹಿಂದಿನ ದಿನಕ್ಕಿಂತಲೂ ವಿಶೇಷವಾಗಿದ್ದಿತು. ನಾಲ್ವರು ಹಿಂದೂಗಳು ಪಠಾಣರಿಂದ ಭಯಂಕರವಾದ ರೀತಿಯಲ್ಲಿ ಹೊಡೆದು ಕೊಲ್ಲಲ್ಪಟ್ಟರು.

ಮುಂಬಾಯಿಯ ಕೆಲವೇ ಭಾಗಗಳಲ್ಲಿದ್ದ ಗಲಭೆಯು ಅಂದು ಎಲ್ಲಾ ಕಡೆಗಳಲ್ಲಿಯೂ ಹರಡಿತು. ಬಡ ಹಿಂದೂಗಳೂ ಮುಸಲ್ಮಾನರೂ ವಾಸಿಸಿಕೊಂಡಿದ್ದಂತಹ ಗ್ರ್ಯಾಂಟ್ ರೋಡಿನಲ್ಲಿ ಪ್ರಾತಃಕಾಲ ಗಲಭೆಯು ವಿಶೇಷವಾಗಿದ್ದಿತು. ಪೋಲೀಸರು ಈ ಸ್ಥಳಗಳಲ್ಲಿ ಮೂರು ಸಲ ಗುಂಡು ಹಾರಿಸಿದರು. ಹಲವರು ಸತ್ತುಹೋದರು. ಗಲಭೆಗಳುಂಟಾದ ಕೇರಿಗಳಲ್ಲಿ ಜನರು ಗುಂಪು ಗುಂಪಾಗಿ ಕೂಡಿದ್ದರೂ, ಪೋಲೀಸ ದಳವು ಬರುವಾಗ ಚದರಿದರು. ಪಠಾಣರು ಲಾಠಿಗಳಿಂದ ಹೊಡೆಯುವ ಬದಲು ಚೂರಿಗಳಿಂದ ಸಿಕ್ಕಿದವರನ್ನು ತಿವಿಯಲು ಪ್ರಾರಂಭಿಸಿದ್ದರು.

ಅರ್ಗ್ಯಾಲ್ ರಸ್ತೆಯಲ್ಲಿ ಧಳ್ಳಿಯ ಸಮೀಪ ಒಬ್ಬ ಪಾನ್‌ಸುಪಾರಿ ವ್ಯಾಪಾರಿಯು ಕುಳಿತಿದ್ದವನನ್ನು ನೋಡಿ ಪಠಾಣರ ಕೆಲವರು ಆತನನ್ನು ಚೆನ್ನಾಗಿ ಹೊಡೆದು ಕೊಂದುಬಿಟ್ಟರು. ಸಮೀಪದ ಧಾನ್ಯದ ಅಂಗಡಿಯಲ್ಲಿ ಸಾಹುಕಾರನೊಬ್ಬನು ಮಗನೊಂದಿಗೆ ಕುಳಿತಿದ್ದನು. ಈ ನೋಟವನ್ನು ನೋಡಿ ಆತನು ಬಾಗಿಲುಗಳನ್ನು ಬೇಗಬೇಗನೆ ಮುಚ್ಚತೊಡಗಿದನು. ಆದರೆ ಪಠಾಣರು ಬಲಾತ್ಕಾರದಿಂದ ಬಾಗಿಲುಗಳನ್ನು ತೆರೆದು ಅವರಿಬ್ಬರನ್ನೂ ಕೊಂದುಹಾಕಿದರು. ಎರಡು ಅಂಗಡಿಗಳಲ್ಲಿ ಸಿಕ್ಕಿದವುಗಳನ್ನು ದೋಚಿ ಓಡಿಹೋದರು.

ಜಮ್‌ಶಡ್‌ಜಿ ಎಂಬ ಆಸ್ಪತ್ರೆಯಲ್ಲಿ ಒಂದೇ ದಿನವೇ ೮೦ ಮಂದಿ ಹಿಂದೂಗಳು ಚಿಕಿತ್ಸೆಗಾಗಿ ತರಲ್ಪಟ್ಟರು. ಕೆಲವು ಹೆಂಗಸರು ತಮ್ಮ ಗಂಡಂದಿರು ಕಾಣುವುದಿಲ್ಲವೆಂದು ಆಸ್ಪತ್ರೆಯಲ್ಲಿಯಾದರೂ ಅವರು ನೋಡಸಿಕ್ಕುವರೆಂದು ಬಂದು ಅಲ್ಲಿ ಅವರನ್ನು ಕಾಣದೆ ದುಃಖದಿಂದ ಹಿಂತಿರುಗಿದ ನೋಟವು ಕರುಣಾಜನಕವಾಗಿದ್ದಿತು.

ರಾತ್ರಿಯಾಗುತ್ತಾ ಗಲಭೆಯು ಅಧಿಕವಾದಂತೆ ತೋರಿತು. ಆದರೆ ಮಧ್ಯರಾತ್ರಿಯ ಸಮಯ ಸ್ವಲ್ಪ ಗೊಂದಲವುಂಟಾಯಿತು.

ಮುಂಬಾಯಿ ಕಾರ್ಪೊರೇಶನ್ ಹೋಲಿನಲ್ಲಿ ರಾ। ಬ. ಜೆ. ದೇಶಮುಖರ ಅಧ್ಯಕ್ಷತೆಯಲ್ಲಿ ಪಟ್ಟಣಿಗರ ಸಭೆಯೊಂದು ಜರಗಿ, ಗಲಭೆಗಳನ್ನು ನಿಲ್ಲಿಸುವ ಉಪಾಯಗಳ್ಯಾವುವೆಂದು ಚಿಂತಿಸಿದರು. ಶಾಂತಿಯನ್ನು ಕಾಪಾಡುವ ಬಗ್ಗೆ ದೇಶಮುಖರ ಅಧ್ಯಕ್ಷತೆಯಲ್ಲಿಯೇ ಒಂದು ಕಮಿಟಿಯನ್ನು ನೇಮಿಸಬೇಕೆಂದೂ ಈ ಕಮಿಟಿಯವರು ಕೈಲಾದಷ್ಟು ಪ್ರಯತ್ನಿಸಿ ಬೇರೆ ಬೇರೆ ಕಡೆಗಳಲ್ಲಿ ಶಾಂತಿಯನ್ನುಂಟುಮಾಡಬೇಕೆಂದೂ ನಿರ್ಣಯವಾಯಿತು. ಕಮಿಟಿಯವರಲ್ಲಿ ಈ ಸಮಯ ದಂಗೆಯಾಗುತ್ತದೆಂಬ ವರ್ತಮಾನ ಬಂದಕಾರಣ ಕೂಡಲೇ ಅಲ್ಲಿಗೆ ಹೊರಟುಹೋದರು.

ತಾ. 8—2—'29.

ಸೊಂಗ್ರಿ ಮತ್ತು ಜಕೇರಿಯಾ ಮಸೀದಿಗಳಲ್ಲಿ ಪಠಾಣರು ಹಿಂದೂಗಳನ್ನು ಆಕ್ರಮಿಸಿ ಅಂಗಡಿಗಳನ್ನು ಸುಲಿದರು. ಅಬ್ದುಲ್ ರಹಿಮಾನ ರಸ್ತೆಯಲ್ಲಿ ಮಿಲಿಟರಿಯವರು ಗುಂಡುಗಳನ್ನು ಹೊಡೆದರು. ಬೆಂಡಿ ಬಜಾರದಲ್ಲೊಬ್ಬ ರಾಜಿಯಾಯಿತೆಂದೂ ಎರಡು ಪಕ್ಷಗಳೊಳಗೆ ಇನ್ನು ವಿರೋಧವಿಲ್ಲವೆಂದೂ ವರ್ತಮಾನವಾದರೂ ಬಂದಿತು. ವಾರ್ತೆಯು ಸುಳ್ಳಾಗಿ ಪುನಃ ಹಿಂದೂ ಮುಸಲ್ಮಾನರ ಜಗಳಕ್ಕೆ ಪ್ರಾರಂಭವಾಯಿತು. ಅಂದು ರಾತ್ರಿ ಕಾಲಬಾದೇವಿ ಮೊದಲಾದ ಕಡೆಗಳಲ್ಲಿ ಸ್ಥಿತಿಯು ವಿಶೇಷ ಭಯಂಕರವಾಗಿದ್ದಿತು. ಸೈನಿಕರು ಗುಂಡು ಹೊಡೆಯುತ್ತಿದ್ದರೂ ಅಂದು ಕಾಣದ ತನಕ ಭಯಂಕರವಾದ ಗಲಭೆಯುಂಟಾಯಿತು. ಹಿಂದೂ ಮುಸಲ್ಮಾನರಲ್ಲಿ ಹಲವರು ಸತ್ತುಹೋದರು.

ಶುಕ್ರವಾರ ಸಾಯಂಕಾಲ ಹಿಂದೂ ಮುಸಲ್ಮಾನರು ಸಹೋದರರಂತೆ ವರ್ತಿಸುತ್ತಾ ಅಂಗಡಿಗಳು ತೆರೆಯಲ್ಪಟ್ಟಿದ್ದುವು. ಅದೇ ರಾತ್ರಿ ಕಾಲಬಾದೇವಿಯ ಹಿಂದೂ ವ್ಯಾಪಾರಿಗಳು, ಮುಸಲ್ಮಾನರ ವಿರೋಧವಾಗಿ ಹಟವಾದಿಗಳಾದ ಭಯ್ಯಾಜಿರನ್ನು ತಂದಿರುವರೆಂಬ ವರ್ತಮಾನವು ಹರಡಿ ಪುನಃ ಗಲಾಟೆಯಾಯಿತು. ಅದೇ ರೀತಿ ಮದನಪುರದಲ್ಲಿಯೂ ಶಾಂತಿಗಾಗಿ ಪ್ರಯತ್ನಗಳು ನಡೆಯುತ್ತಿರುವಾಗ ಮಾರ್ಗದಲ್ಲಿ ಕೊಲ್ಲಲ್ಪಟ್ಟ ಹಿಂದುವೊಬ್ಬನ ಶವವು ದೊರಕಿದುದರಿಂದ ಪುನಃ ಜಗಳವು ಆರಂಭಿಸಿತು. ಜಗಳವು ಹಿಂದಿನ ಜಗಳಕ್ಕಿಂತಲೂ ಮಾರಿಯಾಯಿತು. ಪೋಲೀಸರು ಬಕಿಸ್ ಗುಂಡುಗಳನ್ನು ಉಪಯೋಗಿಸಿದರು. ತಿವಿಯಲ್ಪಟ್ಟ ಜನರುಗಳಿಂದ ಆಸ್ಪತ್ರೆಗಳು ತುಂಬಿಹೋದುವು. ಬ್ಯಾಕ್‌ಲೇ ಎಂಬಲ್ಲಿ ಪಠಾಣರ ಗುಂಪೊಂದು ಕೆಲ ಹಿಂದೂಗಳು ಆ ಮಾರ್ಗವಾಗಿ ಬಾರದಂತೆ ಮಾಡಿದರು. ಮಧ್ಯರಾತ್ರಿಯ ಸಮಯದಾದರೂ ದಂಗೆ ನಿಂತು ಶಾಂತಿಯಾಗಲಿಲ್ಲ.

ಅದೇ ದಿನ ಸಾಯಂಕಾಲ ಗ್ರ್ಯಾಂಟ್ ರೋಡ್ ಮುಸಲ್ಮಾನರೂ ಪಠಾಣರೂ ಕೂಡಿ ಭ್ರಾತೃಭಾವದಿಂದ "... ಲ್ಯಾನಕೀ ಜೈ" ಎಂದು ಕೂಗುತ್ತಾ ಮೆರವಣಿಗೆ...

ಹಲವು ದಿನಗಳಿಂದ ಮುಚ್ಚಲ್ಪಟ್ಟ ಕೆಲವು ತೆರೆಯಲ್ಪಟ್ಟವು.

ತಾ. 9—2—'29.

ಮರುದಿನವೂ ಕೂಡ ಗಲಭೆಯು ಕಾಂ... ದೇವಿಯಲ್ಲಿ ಒಬ್ಬ ಹಿಂದುವಿನ ಅಂಗಡಿಯ... ದೋಚುವವರು, ತನ್ನ ಎಂಟು ಜನರ ಗ... ನನ್ನು ಸಮಾರ್ಪಿಸಿದರು. ಅದರಲ್ಲಿ ಮಾತಿನ... ಗಳನ್ನು ಮುಟ್ಟಬಾರದು. ಇವರಿಂದ ಜೆಟ್ಟಿಗೆ ಜ... ಹೆಚ್ಚಿಗೆ ಮಿಲಿಟರಿಯನ್ನು ಕರಿಸಬೇಕು ಎಂ... ಯಾಗಿ ಮಾಡಲ್ಪಡುವದೆಂದು ಗವರ್ನರರು... ಘಂಟೆಯ ಹೊತ್ತಿಗೆ ಹಿಂದೂ ಮುಸಲ್ಮಾನ... ಇರಿಯುವವರು ಗುಂಡುಹೊಡೆದು ನಾಲ್ವರನ್ನು

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

ಟೆಲಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಾ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಪ್ಯಾಸೆಂಜರಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕಣ್ಣನ್ನೂರು ಪ್ರಾಂತಗಳಿಗೂ ಆ ರಾತ್ರಿ ವಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾತಂಕವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿತಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ. ಸಿ. ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವವು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂಡಬಿದರೆ ಕಂಡಾವಳಿ ಮಾರ್ಗವಾಗಿಯೂ ಎಡಾಪದವು ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

...ಂಕ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.
...ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.
...ರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.
...ಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.
ಶಾರಾತ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ,
...ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ಟ್ರೈನನ್ನು ಹತ್ತಲು ಸುಲಭವಾಗುವದು.
...ಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗೆಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ವಿಸ್ತೃತ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., S. K. Mangalore.

ನಟರಾಜ ಮುದ್ರಣಾಲಯ...

ಮಲೇರಿಯಾನ
ಸರ್ವ ಜ್ವರ ಸಂಹಾರಕ

ಕ್ರಯ-3 ಡಜನ್ 1-8-0 ½ ಡಜನಿಗೆ 8-8-0 ಡಜನಿಗೆ 18-8-0

ದಿಟನಂಬು! ಪುಟ್ಟನಾಗು!! ನೆಟ್ಟಗಾಗು!

ಯುವಕನೇ! ನಿನ್ನ ಬೆಲೆ ಯಾವದರಲ್ಲಿದೆ? ಸೌಮ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ!

ಆರೋಗ್ಯವಿಲ್ಲವೇ? ದೇಹವು ಕ್ಷೀಣವಾಗಿದೆಯೇ? ಮನಸಂತೋಷ ತಪ್ಪಿದೆಯೇ? ಜ್ಞಾಪಕ ಶಕ್ತಿ ಕುಂದಿರುವುದೇ? ಮುಂಗೋಪ ಜಾಸ್ತಿ ಇದೆಯೇ? ಆಲಸ್ಯ ಕುಂಡಿರುವದೇ? ಚುರುಕು ಚಟುವಟಿಕೆ ಇಲ್ಲವೇ? ವ್ಯಾಕುಲತೆಯಿಂದ ಮರುಗುತ್ತೀಯೋ? ಸುಖವಾಗಬೇಕೆಂಬ ಇಚ್ಛೆ ಇದೆಯೇ? ಹಾಗಾದರೆ ಇಗೋ ಬಹು ಗುಣಕರವಾದ ಕಂಪೌಂಡ್ ಸಿರಪ್ ಸಾರಿಸಪರಿಲ್ಲ ಎಂಬ ಅಮೃತವನ್ನೇ ಸೇವಿಸು. ಆವಾಗ ಮೇಲಿನ ಅವಲಕ್ಷಣಗಳು ತೀರ ಗುಣವಾಗಿ ಬಹು ಆರೋಗ್ಯವೂ ಶರೀರ ಪುಷ್ಟಿಯೂ ಉಂಟಾಗಿ ನಿನ್ನ ಬೆಲೆ ಆರೋಗ್ಯದಲ್ಲಿಯೇ ಇದೆಯೆಂದು ನಿನಗೆನೇ ತೋರಿಬರುವುದು.

ಕ್ರಯ 8 ಔನ್ಸ್ ಸೀಸೆಗೆ ರೂ. 3—8—0.

ಯುವತಿಯೇ! ನಿನ್ನ ಸುಂದರವಾದ ಉಡುಪು ಯಾವುದು? ಅಚ್ಚುಗಟ್ಟಾಗಿ ಹೊಳೆಯುವ ನಿನ್ನ ಆರೋಗ್ಯದ ದೇಹವಲ್ಲವೇ?

ದೇಹವು ಅಚ್ಚುಗಟ್ಟಾಗಿಲ್ಲವೇ? ರೂಪಕ್ಕೆ ಕಳೆ ಬಂತೇ? ಮುಖ ಕಳೆಗುಂದಿದೆಯೇ? ಕೈಕಾಲು ಬಚ್ಚುವದೇ? ಎದೆ ನಡುಗು, ಆಯಾಸ ಉಂಟೋ? ರಕ್ತ ಧಾತು ಇಲ್ಲವೇ? ಅಜೀರ್ಣವಿದೆಯೇ? ಸೊಂಟ ನೋವು ಉಂಟೋ? ತಲೆಶೂಲ, ಉಮ್ಮಳಿವುದೇ? ತಲೆತಿರುಗುವಿಕೆ ಉಂಟೋ? ದೃಷ್ಟಿ ಸರಿಯಿಲ್ಲವೇ? ಕಣ್ಣಲ್ಲಿ ಅಶ್ರುವು ಬರುತ್ತದೆಯೇ? ಆವಾಗ ಉದರ ಜಾಸ್ತಿಯೇ? ಇವರಿಂದ ಬಹು ಗಡ ಹೊಂದಲು ಇಚ್ಛೆ ಇದೆಯೇ? ಹಾಗಾದರೆ ಗುಪ್ತ ಸೇವಕಿಯಂತಿರುವ ಕಂಪೌಂಡ್ ಸಿರಪ್ ಸಹೀನ ಸಿಮಿಯಳೆಂಬವಳನು ಅಂಗೀಕರಿಸು. ಈಕೆ ಗುಪ್ತಶಕ್ತಿಯಿಂದ ನಿನ್ನನ್ನು ಹಿಡಿಸಿ ಶರೀರ ಪುಷ್ಟಿಯಾಗುವಂತೆಯೂ ಮುಖಕಳೆಗಳು ಹೊಳೆಯುವಂತೆಯೂ ದೇಹಕ್ಕೆ ಬಲಶಕ್ತಿ ಸಿಗುವಂತೆಯೂ ಖಂಡಿತ ಸಹಾಯವಾಗುವಳು. ಆವಾಗ ಆರೋಗ್ಯವುಳ್ಳ ದೇಹವೇ ಶೋಭಿಸುವ ನಿನ್ನ ಸುಂದರವಾದ ಉಡುಪಾಗಿದೆ ಎಂದು ನಿನಗೆನೇ ಖಚಿತವಾಗುವದು.

ಕ್ರಯ 8 ಔನ್ಸಿನ ಬಾಟ್ಲಿಗೆ ರೂ. 3-8-0.

ಕೆಟಲಾಗಿಗೆ ಬರೆಯಿರಿ—

ಮಲೇರಿಯಾನ ಕಂಪೆನಿ,
22628 ಮಂಗಳೂರು ದ. ಕ.

WANTED.

Organising Supervisors for the District of South Kanara on Rs. 50 plus Rs. 15 astravelling allowance. Selected Candidates should pay Rs. 250 in shares of the Bank of which Rs. 50 must be paid after selections and the balance in four quarterly instalments. Apply with particulars of age qualifications and previous experience.

THE DEPUTY SUPERINTENDENT
for the Midland Bank (India) Ltd.
KODIALBAIL, MANGALORE,
(S. K)

ದಿ ಕೆನರಾ ನರ್ಸರಿ.

ಕಸಿ ಮಾವಿನ ಗಿಡಗಳು. ಸಪೋಟಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಾ, ಪೇರಳೆ, ಚಿಕ್ಕು, ದ್ರಾಕ್ಷೆ, ಅಂಜೂರ ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು, ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹ ವಿಲ್ಲದೆ ಚೆನ್ನಾಗಿ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್‌ಸ್ಟ್ರೀಟ್ ಸೋಮಯಾಜಿಯವರಲ್ಲಿ ದೊರೆಯುವವು.

ಕೆ. ಮುದ್ದಣ್ಣ ಶೆಟ್ಟಿ
ದಿ. ಕೆನರಾ ನರ್ಸರಿ,
ವಿಕ್ಟೋರಿಯಾ ಗಾರ್ಡನ್ಸ್, ಕಾಪು ದ. ಕ.
131029

ಕೆ ವಾಮನ ಶೆಣೈ
C/o ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು ದ. ಕ.

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಅತ್ಯಾಶ್ಚರ್ಯ! ಜ್ಯೋತಿಶ್ಶಾಸ್ತ್ರಾಧಾರದಿಂದ ಅತ್ಯದ್ಭುತ!!

ಮಹಾತ್ಮಾ ಗಾಂಧಿಜೀಯವರ ಬಂಧವಿಮೋಚನೆಯನ್ನು ನಿರ್ಣಯಿಸಿದುದು.

ನಿಮ್ಮ ಭವಿಷ್ಯವನ್ನು ತಿಳಿಯಲಿಚ್ಛೆಯಿದೆಯೆ? ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ಕುರಿತಾದ ಐದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. ೧; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ ೪ ಮಾತ್ರ. ಪ್ರತಿ ತಿಂಗಳ ಕೂಲಂಕುಷ ವಿಚಾರವುಳ್ಳ ಒಂದು ವರ್ಷದ ಜಾತಕ ಫಲ ರೂ. ೨ ಐದು ವರ್ಷದ ಫಲ ರೂ. ೭. ಪ್ರತಿ ಹಪ್ತೆಯ ವಿಚಾರವುಳ್ಳ ಒಂದು ವರ್ಷದ ಫಲ ರೂ. ೧೦. ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ಕ್ರಯ ರೂ. ೨. ನಿಮಗಾಗಿಯೆ ಬೇರೆ ಜಾದಾ ತಾಯಿತ ಯಂತ್ರಕ್ಕೆ ರೂ. ೫೦. ಯಾವ ಉದ್ದೇಶಕ್ಕಾಗಿ ಈ ಯಂತ್ರವೆಂದು ತಿಳಿಸಬೇಕು. ಟಪ್ಪಾಲು ಖರ್ಚು ಪ್ರತ್ಯೇಕವಿದೆ.

ಇಂಗ್ಲಿಷಿನಲ್ಲಿ ಮಾತ್ರವೇ ಪತ್ರವ್ಯವಹಾರ ನಡೆಯಿಸತಕ್ಕದ್ದು.

ಆಂಧ್ರ ಪತ್ರಿಕೆ—(ತೆಲುಗು ದೈನಿಕ ಪತ್ರಿಕೆ) ಫೆಬ್ರವರಿ ತಾ. 8—2—1924ರಲ್ಲಿ ಬರೆಯುತ್ತ—ತಿರುತ್ತಣಿ ಕ್ಷೇತ್ರದ ಹನೂಮಾನ್ ಜ್ಯೋತಿಷಾಲಯದ ಹನುಮದುಪಾಸಿ ವಿ. ಕೆ. ಶಠಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. ಇದು 1923ನೇ ಇಸವಿ ನವೆಂಬರು ತಾ. 12ರಲ್ಲಿ ಪ್ರಕಟವಾಯಿತು. ಅದರಲ್ಲಿ ಮಹಾತ್ಮಾಜೀಯವರು 1924ನೇ ಇಸವಿ ಫೆಬ್ರವರಿ ತಾ. 5ರಲ್ಲಿ ಬೆಳಗ್ಗೆ 7 ಗಂಟೆಗೆ ಕಾರಾಗೃಹದಿಂದ ಮುಕ್ತರಾಗುವರೆಂದೂ ಭಾರತವರ್ಷಕ್ಕೆ [illegible] ಸ್ಥಿತಿಯು ಪ್ರಾಪ್ತವಾಗುವುದೆಂದೂ ಬರೆದಿದ್ದಿತು. ಅದರಲ್ಲಿ ಹೇಳಿದಂತೆಯೇ ನಡೆದಿದೆ. ಇದು ಕಾರಣ, ಈ ಜ್ಯೋತಿಷ್ಯರ ಅಸಾಧಾರಣ ಶಕ್ತಿಗೆ [illegible] ನಾವು ಶಿಫಾರಸು ಮಾಡುತ್ತೇವೆ.

ಸ್ವದೇಶ ಮಿತ್ರನ್—(ತಮಿಳು ಪತ್ರಿಕೆಗಳಲ್ಲಿ ಮೊದಲನೆಯದು)—ಜ್ಯೋತಿಷ್ಯವೇ ಮೊದಲಾದ ನಮ್ಮ ಶಾಸ್ತ್ರಗಳನ್ನೆಲ್ಲ [illegible] ಬರೆದರು. ಈಗ ತಾನೆ ಪ್ರಕಟವಾಗುವ ಜ್ಯೋತಿಷ್ಯ ವಿಚಾರದ ವಿಜ್ಞಾಪನೆಗಳೆಲ್ಲ ಹಣಗಳಿಸುವುದಕ್ಕಾಗಿ ಹಲವರ ಸಾಧನೆಗಳು, ಅಷ್ಟೆ. ಆದರೆ, ಬ್ರಹ್ಮಶ್ರೀ ವಿ. ಕೆ. ಶಠಗೋಪಾಚಾರ್ಯರು ಮಹಾತ್ಮಾ ಗಾಂಧಿಯವರ ಬಿಡುಗಡೆಯ ವಿಷಯವಾಗಿ ಮೊದಲೇ ಭವಿಷ್ಯವನ್ನು ಪ್ರಕಟಿಸಿದುದನ್ನು ಓದಿ ನಾವು ಬಹಳ ಆಶ್ಚರ್ಯಗೊಂಡಿದ್ದೇವೆ. ಈ ಆಚಾರ್ಯರನ್ನು ಅವರ ಜ್ಯೋತಿಷ್ಯಾನುಭವಗಳಿಗಾಗಿ ನಾವು ಹೃತ್ಪೂರ್ವಕವಾಗಿ ವಂದಿಸುತ್ತೇವೆ.

ಶ್ರೀನಿವಾಸ ಭಾಗವತಸ್ವಾಮಿ—ಬಿ.ಎ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್, ಕಂಜೀವರಂ; ಇವರು ಬರೆಯುತ್ತ—ಸಂವತ್ಸರ ಫಲವನ್ನು ತಾವು ಬರೆದುಕೊಟ್ಟುದನ್ನು ನೋಡಿ ಅನುಭವಿಸಿ ನಾನು ತೃಪ್ತನಾಗಿ ಆನಂದಪಡೆದಿದ್ದೇನೆ. ನಿಮ್ಮ ಕೆಲಸವನ್ನು ನಾನು ತುಂಬಾ ಚೆನ್ನಾಗಿ ಮೆಚ್ಚುತ್ತೇನೆ. ನಿಮ್ಮ ಭವಿಷ್ಯ ವಾಣಿಯು ಅತ್ಯಾಶ್ಚರ್ಯಕರವಾಗಿದೆ. ಎಷ್ಟೋ ವಿಲಾಯತೀ ಮತ್ತು ಹಿಂದೀ ಜ್ಯೋಯಿಸರು ಹೇಳಿದಕ್ಕಿಂತಲೂ ನಿಮ್ಮ ಹೇಳಿಕೆಗಳು ನಿಶ್ಚಯವಾಗಿ ಇಂದಿವೆ. ತಾವು ಎಲ್ಲರಿಗೂ ಅವರವರ ಜೀವನದಲ್ಲಿ ತುಂಬ ಸಹಾಯ ಮಾಡುವವರಾಗಿದ್ದೀರಿ. ಜ್ಯೋತಿಶ್ಶಾಸ್ತ್ರದಲ್ಲಿ ನಿಮ್ಮ ಚಾತುರ್ಯ ಅಪಾರವಾಗಿದೆ. ಪ್ರತಿ ಒಬ್ಬರೂ ಅದನ್ನು ಕಂಡು ಆನಂದಪಡದೆ ಇರಲಾರರು. ನೀವೇನೋ ದೇವತೆಯಂತೆ ಕಾಣುತ್ತಿರುವಿರಿ; ನಿಮ್ಮ ಜ್ಞಾನಕ್ಕೆ ಇಷ್ಟು ಹೆಗ್ಗಳಿಕೆ ಯಥಾರ್ಥವು.

V. K SATACOP CHARIAR,
Hanuman Astrological Office.
TIRUTTANI, CHITTOOR DISTRICT,
Madras Presidency.

ವಿ. ಕೆ. ಶಠಗೋಪಾಚಾರ್ಯರ್.
ಹನುಮಾನ್ ಎಸ್ಟ್ರೊಲೋಜಿಕಲ್ ಆಫೀಸ್,
ತಿರುತ್ತಣಿ, ಚಿತ್ತೂರು ಜಿಲ್ಲಾ,
ಮದರಾಸ್ ಸಂಸ್ಥಾನ.

152

COFFEE!

THE UNIVERSAL DRINK !!

THE STANDARD OF

PURITY & QUALITY !!!

HIGHEST AWARDS AT VARIOUS EXHIBITIONS

GOLD MEDAL 1917

GOLD MEDAL 1927

Manufactured by:

'GIRI COFFEE WORKS'

Write for quotations to Proprietors:—

Messrs. M. LACHIA SETTY & SONS

COFFEE GROWERS AND MANUFACTURERS

CHIKMAGALUR

(MYSORE STATE)

T.A.: "LACHIASETTY"

ಕೋವಿಗಳನ್ನು ವಗೈರೆ ಬೇಟೆಯ ಹತ್ಯಾರುಗಳು



ದಯೆ ಇಟ್ಟು ಬೇಟೆಯ ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1923ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಆಲಿಭಾಯಿ ಎಂಡ್ ಸನ್ಸ್,
ಮದ್ದುಗುಂಡು ಕೋವಿ ಮೊದಲಾದ ವರ್ತಕರು
ಜಿಂಜಿ ಬಜಾರ್ ಹತ್ತಿರ
೧೦೧, ಅಬ್ದುಲ್ ರೆಹಮಾನ್ ರಸ್ತೆ.

ತ್ವರೆಮಾಡಿರಿ. ತ್ವರೆಮಾಡಿ.

ಶಾಲಾ ಹುಡುಗರಿಗೂ ಇತರರಿಗೂ ಬೇಕಾದಂತಹ ವಿಧವಿಧದ ಕೋಟಿಂಗ್, ಮತ್ತು ಸಾಧನಗಳೂ, ರಬ್ಬರುಗಳೂ ವಿವಿಧ ಸ್ಟ್ಯಾಂಪಿನ ಸ್ಯಾಹಿ ಬಾಟಲಿಗಳೂ, ಹೊಸತಾಗಿ ತಂದಿರುತ್ತೇವೆ. ವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ

ESTABLISHED 1876.

M. Ganapaya & Sons,

AYURVEDIC PHYSICIANS.

Car Street, MANGALORE, S. Kanara.

(53 ವರುಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ

— ಔಷಧಗಳು —

1. [illegible] ಮತ್ತು ಮಾತ್ರೆ—

ಹೆಂಗಸರ ಮುಟ್ಟಿನ ದೋಷಗಳು, ಮುಟ್ಟಿನ ಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಮಹೋದರ, ದುರ್ಬಲತೆ, ಬಿಳಿಸೆರಗು, ರಕ್ತಹೀನತೆ, ಕೈಕಾಲು ಸೆಳೆತ, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಅಲ್ಪಕಾಲದಲ್ಲಿಯೇ ಗುಣಪಡಿಸುವುದು. [illegible] ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತಹ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರೈಸುವುದು.

ಒಂದು ಬಾಟಲ ಔಷಧಕ್ಕೆ, ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣಿ—

ಘಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್, ಕಾಫಿತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಸ್ವಲ್ಪ ಸಮಯದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಛಳಿಜ್ವರ, ಜ್ವರಗಡ್ಡೆ ಮೊದಲಾದ ನಾನಾತರದ ಜ್ವರಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲೆಜ್ವರದಿಂದ ಬಾಧಿಸಲ್ಪಟ್ಟು ಹಲವುತರದ ಔಷಧಿಗಳನ್ನು ಉಪಯೋಗಿಸಿ, ಗುಣಹೊಂದದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ ಬಾಟ್ಲಿಯೊಂದಕ್ಕೆ 1-6-0, 3 ಬಾಟ್ಲಿಗೆ 4-2-0.

ಇವುಗಳಲ್ಲದೆ ಮಲೇರಿಯಾಗುಟಿಕೆ, ಜ್ವರಗಡ್ಡೆಯ ಮೇಲೆ ಸ್ಯಂಧವ ವಟಿ, ಬಾಲಗ್ರಹ ಗುಟಿಕೆ, ಶ್ವಾಸಕುಠಾರ ಗುಟಿಕೆ ಇಚ್ಛಾಭೇದಿ ಗುಟಿಕೆ, ಚ್ಯವನ ಪ್ರಾಶಾವಲೇಹ, ಧಾತುಪುಷ್ಟಿ ಲೇಹ, ಚಂದನಾಸವ ಮತ್ತು ಮಾತ್ರೆಗಳು ಇವೇ ಮೊದಲಾದ ಸಮಸ್ತ ಔಷಧಗಳೂ ದೊರೆಯುವವು. ಹೆಚ್ಚಿನ ವರ್ತಮಾನಕ್ಕೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ADVERTISE IN OUR WEEKLY.

To Reach the Hearths & Homes

OF INDIA'S MASSES

For Particulars Apply to:

The Manager,

SWADESHABHIMANI,

MANGALORE.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

☞ ಫೆರ್ರೊಕ್ವಿನ್

FERROQUIN

[illegible]ವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3—4—0 ಮಾತ್ರ.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

[illegible]ಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

[illegible]ಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು

ಖಚಿತವಾಗುವುವು.

ಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

[illegible] ಸ್ಟ್ರೀಟ್, [illegible]ರು.

ದಿ ಕಿಣಿ ಡಿಸ್ಪೆನ್ಸರಿ,

ಕೊಡಿಯಾಲ್‌ಬೈಲ್ ಪೋಸ್ಟು,

ದ. ಕನ್ನಡ.

[illegible]! [illegible]!

1929ನೇ ಇಸವಿಯ ಸರಸ್ವತೀ ಕ್ಯಾಲೆಂಡರ

[illegible]

ಈ ಕೆಳಗಿನ ಗ್ರಂಥಗಳಲ್ಲದೆ ಇನ್ನೂ ನಾನಾ ತರದ ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ.

ಕಥೆ ಪುಸ್ತಕಗಳು

ಸೌಭಾಗ್ಯ ಲಕ್ಷ್ಮಿ	0—8—0	ಧರ್ಮ ಸಾಮ್ರಾಜ್ಯ	1—4—0
ವಿಮಲಾ ದೇವಿ	1—12—0	ಲಾವಣ್ಯ [illegible]	0—12—0
ವಚನ ಭಾರತ	0—12—0	ವಚನ ರಾಮಾಯಣ	1—8—0
ಆನಂದ ಮಠ	1—12—0	[illegible] ಭಾರತ	1—8—0

ಲಾ ಪುಸ್ತಕಗಳು

ವ್ಯವಹಾರ ಧರ್ಮ ಶಾಸ್ತ್ರ	ಭಾಗ I	4—0—0
„ „	ಭಾಗ II	4—8—0
ವ್ಯವಹಾರ ಲೇಖ್ಯ ಬೋಧಿನಿ		2—8—0
ಕ್ರಿಮಿನಲ್ ಪ್ರೊಸೀಜರ್ ಕೋಡ್		3—0—0
ಇಂಡಿಯನ್ ಪಿನಲ್ ಕೋಡ್		2—8—0

ಶ್ರೀ ಸರಸ್ವತೀ ಭಂಡಾರ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು,

ಅವೆನ್ಯೂ ರೋಡ್, ಬೆಂಗಳೂರು ಸಿಟಿ.

(ಲೈಬ್ರರಿಗಳಲ್ಲಿ ಇರಲು ಎಲ್ಲಾ ಪುಸ್ತಕಗಳೂ ದೊರೆಯುತ್ತವೆ)

ಮುಂಬಾಯಿಯೊಳಗಿನ ನ್ಯಾಯಾಧಿಕಾರದ ಹೈ ಕೋರ್ಟಿನಲ್ಲಿ.

ಮೃತ್ಯು ಪತ್ರ ಮತ್ತು ಮೃತ್ಯು ಪತ್ರ ಮಾಡದ ಅಧಿಕಾರವು ಜಾರ್ಜ, ದೇವರ ಕೃಪೆಯಿಂದ ಗ್ರೇಟ್ ಬ್ರಿಟನ್, ಐರ್ಲಾಂಡ ಹಾಗೂ ಸಮುದ್ರಗಳ ಆಚೇ ಕಡೆಯ ಬ್ರಿಟಿಷ ರಾಜ್ಯಗಳ ರಾಜರೂ, ಸದ್ಧರ್ಮ ಪರಿಪಾಲಕರೂ, ಹಿಂದೂಸ್ಥಾನದ ಚಕ್ರವರ್ತಿಯರು.

ಮೃತ ರಾಜು ಪರಮೇಶ್ವ ಶೆಟ್ಟಿ ಉರ್ಫ ರಾಜೂ ಪರಮೇಶುರ ಶೆಟ್ಟಿ ಉರ್ಫ ರಾಜು ಪರಮೇಶ್ವರ, ಮುಂಬಯಿಯ ಕೂನದಿ ಹಿಂದೂ ರಹಿವಾಸಿಯು, ಜಹಾ ಅಂಗಡಿಯೊಳಗಿನ ನೌಕರ ಇವನ ಆಸ್ತಿಯ ಮತ್ತು ಹೊರಗಿನಿಂದ ಬರತಕ್ಕವು (ರಕಮು)ಗಳ ಲೇಟರ್ಸ ಆಫ್ ಎಡ್‌ಮಿನಿಸ್ಟ್ರೇಶನ್ (ವಹಿವಾಟು ಪತ್ರಗಳ) ಬಗ್ಗೆ ಮಾಡಿದ ಅರ್ಜಿಯು.........ಮಯತ.

ಒನ್ನುಬಾಯಿ, ಪರಮೇಶರ ಶೆಟ್ಟಿಯ ವಿಧವೆ, ಮೇಲೆ ನಮೂದಿಸಿದ ಮೃತನ ತಾಯಿ, ಹಾಲಿ, ಹಂಗಾಮಿ ವಾಸ್ತವ್ಯ ಫುಲ್ಬಾ, ಕೋಟೆ ಮುಂಬಯಿ ಕೋಟೆಯೊಳಗಿನ ಬೇಂಕ್ ಓಫ್ ಇಂಡಿಯಾದೊಳಗಿನ ಶಿಪಾಯಿ, ಇವನಲ್ಲಿ............ ಅರ್ಜಿದಾರ.

ಮೇಲೆ ನಮೂದಿಸಿದ ಮೃತರ ಇಸ್ಟೇಟಿಯಲ್ಲಿ ಏನೊಂದು ಹಿತಸಂಬಂಧ ಆದೆ ಎಂತ ಹಕ್ಕು ಹೇಳುವ ಎಲ್ಲಾ ಜನರು, ಲೇಟರ್ಸ ಓಫ್ ಎಡ್ಮಿನಿಸ್ಟ್ರೇಶನ್ (ವಹಿವಾಟು ಪತ್ರ) ಕೊಡುವ ಪೂರ್ವದಲ್ಲಿ ಅವರಿಗೆ ಯೋಗ್ಯ ಕಂಡರೆ (ಅವರು) ಖುದ್ದು ಕಾಗದ ಪತ್ರಗಳನ್ನು ನೋಡಲಿಕ್ಕೆ ಇದರಿಂದ ಕರಿಸಲ್ಪಡುತ್ತಾರೆ.

ಸಾಕ್ಷಿ—ಸರ್. ಎಂಬರ್ಸನ್, ಬೆರಿಂಗಟನ್, ಮಾರ್ಟೆನ್, ನ್ಯಾಟಿ, ಸದರಹು ಮುಂಬಯಿಯ ಚೀಫ್ ಜಸ್ಟಿಸರು, ಈ ಹೊತ್ತು ತಾರೀಕು ಇಪ್ಪತ್ತಮೂರನೇ ಜನವರಿ ನಮ್ಮ ಪ್ರಭುಗಳ ಒಂದು ಸಾವಿರದ ಒಂಭೈನೂರ ಇಪ್ಪತ್ತೊಂಭತ್ತನೇ ಮತ್ತು ನಮ್ಮ ಕಾರಕೀರ್ದಿಯ ಹತ್ತೊಂಬತ್ತನೇ ವರುಷವು.

ಆರ್. ಬಿ. ಪಟೇಲ್, ರಿಜಿಸ್ಟ್ರಾರ್.

ಈ. ಜೇ. ದಿಕಿವರ

ತಾರೀಕು ೨೩ನೇ ಜನವರಿ ೧೯೨೯.

ಒನ್ನುಬಾಯಿ ಪರಮೇಶರ ಶೆಟ್ಟಿಯು ವಿಧವೆ

ಅರ್ಜಿದಾರ ಸ್ವತಹ ಹಾಜರ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ,

O. P. No. 11/1929.

ಕೃಷ್ಣ ಕೊಂಗಿರ್ನಾಯ—ಅರ್ಜಿದಾರ.

ಅರ್ಜಿದಾರನ ಮಗ ವ್ಯಾಕಟಕೃಷ್ಣ ನಾರಾಯಣ ಕೊಂಗಿರ್ನಾಯರಿಗೆ ವಿಷಯವಾಗಿ ರಾಮಚಂದ್ರ ಪಡ್ಡಿಲ್ಲಾಯರು ಬರದಿಟ್ಟ ವೀಲುನಾಮೆಯ ಮೇರೆಗೆ ಹಕ್ಕು ಬಂದ ತಾ. 9—4—26ರಲ್ಲಿ ಸದರಿ ರಾಮಚಂದ್ರ ಪಡ್ಡಿಲ್ಲಾಯರಿಗೆ ಅನಂತ ಕೊಂಗಿರ್ನಾಯರು ರೂ 500ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸ್ಸಲು ಬಡ್ಡಿ ವಸೂಲಿ ಕುರಿತು ತನಗೆ ವಾರಿಸ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ಮೇಲ್ಕಂಡ ಅರ್ಜಿ ಮೂಲಕ ಮನವಿ ಮಾಡಿಕೊಂಡಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಬರುವ ಮಾರ್ಚ ತಿಂಗಳ 4ನೇ ತಾರೀಕಿನ ಪೂರ್ವಾಹ್ನ 10 ಘಂಟೆಗೆ ಈ ಕೋರ್ಟ ಮುಂದೆ ಹಾಜರಾಗಿ ಬಾಹ್ಯೀರು ಮಾಡಿಕೊಳ್ಳತಕ್ಕದ್ದು.

ಪುತ್ತೂರು, ತಾ. 13-2-29. (sd) M. Shiva Rao, *Pleader Puttur S. Kanara.*

ಕಲ್ಲಂಗಡಿಯ ಕೃಷಿ.

(ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು)

ಹೊಂಡದಲ್ಲಿ ಸುಮಾರು ಆರರಿಂದ ಒಂಭತ್ತು ಅಂಗುಲಗಳ ವರೆಗೆ ಹೊಗೆಯನ್ನು ಅಗೆದು, ನೀರಿನ ಬರಿಯು ಸಮೀಪಿಸುವಂತೆ ಮಾಡಬೇಕು. ಈ ಹೊಂಡದಲ್ಲಿ ಒಂದು ಮುಷ್ಟಿ ದನವಿನ ಗೊಬ್ಬರವನ್ನು ಹಾಕುವರು. ಈ ಗೊಬ್ಬರದ ಮೇಲೆ ಸ್ವಲ್ಪ ಹೊಯಿಗೆಯನ್ನು ಚಿಮ್ಮುಕಿಸುವರು. ಈ ಹೊಯಿಗೆಯ ಮೇಲೆ ಎರಡು ಮೂರು ಮೊಳಕೆಯಾದ ಬೀಜಗಳನ್ನು ಬಿತ್ತುವರು. ಈ ಬೀಜಗಳ ಮೇಲೆ ಪುನಃ ಒಂದಿಷ್ಟು ಹೊಯಿಗೆಯನ್ನು ಚಿಮುಕಿಸುವರು. ಬಿತ್ತಿದ ಮೇಲೆ ನೀರನ್ನು ಹಾಕುವುದಿಲ್ಲ. ಈ ಬೀಜಗಳು ಎರಡು ಮೂರು ದಿನಗಳ ತರುವಾಯ ಚೆನ್ನಾಗಿ ಮೊಳೆತು ಚಿಕ್ಕ ಸಸಿಗಳು ಮೇಲಕ್ಕೆ ಬರುವವು.

ಕಲ್ಲಂಗಡಿಯ ಕೃಷಿಯಲ್ಲಿ ಗೊಬ್ಬರದ ಕುರಿತಾಗಿ ಬಹು ಜಾಗರೂಕರಾಗಿರಬೇಕು. ಏಕೆಂದರೆ ಉಳುವಿಕೆಯು ಈ ಕೃಷಿಗೆ ಪ್ರಯೋಜನವಿರುವುದಿಲ್ಲ. ನದಿಯ ದಡದಲ್ಲಿ ಉಳುವುದಕ್ಕೂ ಸಾಧ್ಯವಿರುವುದಿಲ್ಲ. ಒಂದು ಬಳ್ಳಿಯ ಮೇಲೆ ವು ಹಣ್ಣುಗಳು ಬಿಡುವುದರಿಂದ ಸಸಿಗಳಿಗೆ ತುಂಬ ಗೊಬ್ಬರದ ಅವಶ್ಯಕತೆಯಿದೆ. ಬೀಜ ಬಿತ್ತಿದೊಡನೆ ಸಸಿಗಳಾಗಿ, ಕೇವಲ ಮೂವತ್ತು ದಿನಗಳೊಳಗೆ ಹೂ ಬಿಡುವವು. ಬರೇ ಎಪ್ಪತ್ತು ದಿನಗಳೊಳಗೆ ಹಣ್ಣುಗಳು ಪಕ್ವವಾಗುವವು. ಅದು ಕಾರಣ ತ್ವರ್ಯದಲ್ಲಿಯೇ ಫಲಕಾರಿಯಾದ ಗೊಬ್ಬರವನ್ನು ಈ ಕೃಷಿಯಲ್ಲಿ ಉಪಯೋಗಿಸುತ್ತಿರಬೇಕು. ದನದ ಸೆಗಣಿ ಮೊದಲಾದವುಗಳು ಬಹು ಸಮಯದ ಮೇಲೆಯೇ ಫಲಕಾರಿಯಾಗಿರುವ ಪ್ರಯುಕ್ತ ಅಂತಹ ಗೊಬ್ಬರ ಮೊದಲಾದುವುಗಳು ಹೆಚ್ಚು ಪ್ರಯೋಜನವಿರಲಾರವು. ನದಿಯ ದಡದಲ್ಲಿ ಪ್ರತಿ ವರುಷವೂ ನೆರೆ ಬರುವ ಕಾರಣ ಅಂತಹ ಗೊಬ್ಬರಗಳು ಪ್ರತಿ ವರುಷವೂ ಕೊಳೆಯಲ್ಪಡುವವು. ಕಲ್ಲಂಗಡಿಯ ಕೃಷಿಗೆ ಯುರೋಪು ದೇಶದಲ್ಲಿ ತಯಾರಾಗುವ ಕೃತಕ ಗೊಬ್ಬರಗಳೂ ಉಪ್ಪುಗಳೂ ಅತ್ಯುಪಯುಕ್ತವಾಗಿವೆ. ಈ ಗೊಬ್ಬರಗಳ ಉಪಯೋಗದಿಂದ ಮೊದಲನೆಯ ಬೆಳೆಯೇ ಅತ್ಯುತ್ತಮವಾಗಿ ಬೆಳೆಯುವದು. ಬಾವಲಿಯ ಮಲವನ್ನಾಗಲಿ, ಉಪ್ಪುಗಳನ್ನಾಗಲಿ ಅಥವಾ ಮೀನು ಗೊಬ್ಬರವನ್ನಾಗಲಿ, ಉಪಯೋಗಿಸುವುದರಿಂದ ಬಹು ಲಾಭವಾಗಬಹುದು. ಇನ್ನು ಗೊಬ್ಬರವನ್ನು ಉಪಯೋಗಿಸುವಾಗಲೂ ಬಹು ಜಾಗರೂಕರಾಗಿರಬೇಕು. ಪ್ರಾಣಿಗಳು ಹೇಗೆ ಇಂತಿಷ್ಟೆ ಆಹಾರವನ್ನು ತಿನ್ನಬೇಕೆಂಬ ನಿರ್ಣಯವಿದೆಯೋ ಹಾಗೆಯೇ ವನಸ್ಪತಿ ವರ್ಗಕ್ಕೂ ಮಿತವಾದ ಗೊಬ್ಬರವನ್ನು ಉಪಯೋಗಿಸುತ್ತಿರಬೇಕು. ಅತಿಯಾದ ಗೊಬ್ಬರವನ್ನು ಉಪಯೋಗಿಸಿದುದಾದರೆ ಬೆಳೆಯು ಹಾಳಾಗಿ ಫಲಗಳು ಹೆಚ್ಚು ಉತ್ಪತ್ತಿಯಾಗಲಾರವು.

ಬೀಜವನ್ನು ಬಿತ್ತಿ ಸಸಿಗಳಾದ ಮೇಲೆ ಸುಮಾರು ಇಪ್ಪತ್ತು ದಿನಗಳ ವರೆಗೆ ಎರಡು ಮೂರು ಬಗೆಯ ಗೊಬ್ಬರವನ್ನು ಉಪಯೋಗಿಸಿದ ಮೇಲೆ ಸುಮಾರು ೩೫ ದಿನಗಳು ಕಳೆದ ತರುವಾಯ ಬಳ್ಳಿಗಳು ತುಂಬಾ ಹೂ ಬಿಡುವವು. ಪ್ರತಿ ಬಳ್ಳಿಗೆ ಸಣ್ಣ ಸಣ್ಣ ಎಗ್ಗೆಗಳು ಹೊರಟು ಅವು ಸುತ್ತಲೂ ಪಸರಿಸುವವು. ಈ ಎಗ್ಗೆಗಳನ್ನು ಬಳ್ಳಿಯ ಸಮಾನಾಂತರವಾಗಿ ಎಳೆ ಪ್ರಾಯದಲ್ಲಿಯೇ ಮಾಡುವರು.

ಸಿದ್ಧಾಂತಮ ಪ್ರಾಂತದಲ್ಲಿ ದೊಡ್ಡ ಜಾತಿಯ ಒಂದು ತರದ ಕಲ್ಲಂಗಡಿ ಹಣ್ಣುಗಳು ಬೆಳೆಸಲ್ಪಡುವವು. ಇವು ಬಳ್ಳಿಯೊಂದಕ್ಕೆ ಒಂದರಂತೆ ಹೆಚ್ಚಾದರೆ ಎರಡರಂತೆ ಉತ್ಪತ್ತಿಯಾಗುವವು. ಹೆಚ್ಚಿನ ಹಣ್ಣುಗಳು ಮಿಡಿಯಾಗಿರುವಾಗಲೇ ಕೊಳೆತು ಹಾಳಾಗುವವು. ಸಣ್ಣ ಜಾತಿಯ ಹಣ್ಣುಗಳು ಒಂದು ಸಸಿಯಲ್ಲಿ ನಾಲ್ಕೈದರ ವರೆಗೆ ಹುಟ್ಟುವವು.

ಎಗ್ಗೆಗಳಲ್ಲಿ ಉತ್ಪತ್ತಿಯಾಗುವ ಹಣ್ಣುಗಳಿಗಿಂತಲೂ ಮೂಲ ಬಳ್ಳಿಯಲ್ಲಿ ಹುಟ್ಟುವ ಹಣ್ಣುಗಳು ರುಚಿಕರ, ದೊಡ್ಡವು ಮತ್ತು ಅಂದವಾದವುಗಳು. ಬಳ್ಳಿಯ ಬುಡದ ಸಮೀಪವೇ ಹುಟ್ಟುವ ಹಣ್ಣುಗಳು ಬಹು ಬೇಗನೇ ಪಕ್ವವಾಗುವವು. ಅವುಗಳಿಗೆ ಹುಳ ಹಿಡಿಯುವುದಿಲ್ಲ. ಮಾತ್ರವಲ್ಲದೆ ಅವುಗಳು ಕೊಳೆತುಹೋಗುವುದೂ ಇಲ್ಲ. ಇದು ಬಹು ಸಿಹಿಯಾಗಿದೆಯಾದರೂ ಆಕಾರದಲ್ಲಿ ಸಣ್ಣವುಗಳು. ದೊಡ್ಡ ಹಣ್ಣುಗಳು ತಾಯಿಬಳ್ಳಿಯ ಬೇರಿನಿಂದ ಮೂರಡಿ ದೂರದಲ್ಲಿ ಬೆಳೆಯುವವು. ಬಳ್ಳಿಯಲ್ಲಿಯೇ ಪಕ್ವವಾಗುವ ಹಣ್ಣುಗಳು ಅತಿ ಉತ್ತಮ ಮತ್ತು ಸಿಹಿಯಾದವುಗಳು. ಮುಕ್ಕಾಲು ಪಾಲು ಹಣ್ಣಾದ ಹಣ್ಣನ್ನು ಬಳ್ಳಿಯಿಂದ ಕಡಿದು ಹಣ್ಣಾಗಬಿಟ್ಟರೆ ಆ ಹಣ್ಣು ಅಷ್ಟು ರುಚಿಕರವಲ್ಲ. ಕಲ್ಲಂಗಡಿಯ ಬಳ್ಳಿಗೆ ತಾಯಿಬೇರೆಂದು ಒಂದು ದೊಡ್ಡ ಬೇರು ಇರದೆ ಸಣ್ಣ ಸಣ್ಣ ಬೇರುಗಳು ಗೊಂಚಲಿನ ರೂಪದಲ್ಲಿ ಇರುವವು. ಈ ಬೇರುಗಳು ಹೆಚ್ಚಾದರೆ ೯ ಅಂಗುಲಕ್ಕಿಂತ ಹೆಚ್ಚಾಗಿಲ್ಲದ ಪ್ರಯುಕ್ತ ಬಹಳ ಅಡಿಯ ವರೆಗೆ ನೆಲವನ್ನು ಉಳುವ ಅವಶ್ಯಕತೆಯಿರುವುದಿಲ್ಲ.

ಸಸಿಗಳಿಗೆ ನೀರು ಹಾಕುವ ಪದ್ಧತಿಯಿರುವುದಿಲ್ಲ. ಅದು ಕಾರಣವೇ ಅವುಗಳನ್ನು ಹರಿಯುವ ನೀರಿನ ಸಮೀಪವೇ ನೆಡುವರು. ಒಮ್ಮೆಗೆ ನೀರನ್ನು ತಂದು ಸಸಿಗಳ ಅಡಿಯಲ್ಲಿ ಹೊಯ್ದರೆ ಆ ಸಸಿಗಳಲ್ಲಿ ಉಂಟಾಗುವ ಹಣ್ಣುಗಳು ಪರಿಮಳಯುಕ್ತವಾಗಲಾರವು. ಆದರೆ ಹಣ್ಣುಗಳು ಆಕಾರದಲ್ಲಿ ಮಾತ್ರ ದೊಡ್ಡವಾಗುವವು. ಒಮ್ಮೆಗೆ ಹರಿಯುವ ನೀರು ಕಡಿಮೆಯಾದುದಾದರೆ ಹರಿಯುವ ನೀರಿಗೆ ಅಡ್ಡವಾಗಿ ದಂಡೆಯನ್ನು ಹಾಕಿ ನೀರು ಎತ್ತರದಲ್ಲಿ ನಿಲ್ಲುವಂತೆ ಅನುಕೂಲಿಸುವರು.

ಗದ್ದೆಗಳಲ್ಲಿ ಹೆಚ್ಚಾಗಿ ಬೆಳೆಸಲ್ಪಡುವ ಕೃಷಿಗೆ ಸಾಧಾರಣವಾಗಿ ಒಮ್ಮೆಯೇ ಗೊಬ್ಬರ ಹಾಕುವ ಪದ್ಧತಿಯಿದೆಯಾದರೂ ಕಲ್ಲಂಗಡಿಯ ಕೃಷಿಗೆ ಹಾಗಲ್ಲ. ಮೂರು ನಾಲ್ಕು ಸಲ ಗೊಬ್ಬರವನ್ನು ಹಾಕುವರು. ಬಾವಲಿಯ ಬಿಷ್ಟೆಗಳಷ್ಟು ಉತ್ತಮ ಗೊಬ್ಬರವು ಕಲ್ಲಂಗಡಿಯ ಕೃಷಿಗೆ ಬೇರೊಂದಿರುವುದಿಲ್ಲ. ಈ ಗೊಬ್ಬರವು ಹಣ್ಣುಗಳನ್ನು ರಸವತ್ತಾಗಿಯೂ ರುಚಿಕರವಾಗಿಯೂ ಪರಿಮಳ ಯುಕ್ತವಾಗಿಯೂ, ಗಟ್ಟಿಯಾಗಿಯೂ ಮಾಡುವವು. ಪೆರಿಸಿನತ್ತರಡೆ ಕಲ್ಲಂಗಡಿಯ ಕೃಷಿಕರು ಬಾವಲಿ, ಪಾರಿವಾಳ ಮೊದಲಾದವುಗಳ ಮಲವನ್ನು ಉಪಯೋಗಿಸುವರು. ಬಾವಲಿಯ ಬಿಷ್ಟೆಗಳು ತಿರುಪತಿ, ಕಲಹಸ್ತಿ ಮೊದಲಾದ ಕಡೆಗಳಲ್ಲಿ ದೊರಕುವವು. ಅಲ್ಲಿರುವ ಹಳೇ ಗೋಪುರಗಳಲ್ಲಿ ಈ ಬಾವಲಿಗಳು ಅತಿಯಾಗಿ ವಾಸಿಸುವವು. ಅಮೋನಿಯಮ್ ಸಲ್ಫೇಟ್ ಮೊದಲಾದ ರೀತಿಯ ಕೃತಕ ಗೊಬ್ಬರಗಳು ಅಷ್ಟು ಫಲಕಾರಿಯಲ್ಲವೆಂದು ಕಂಡುಹಿಡಿಯಲ್ಪಟ್ಟಿರುತ್ತದೆ.

ಸಿದ್ಧಾಂತಮ ಕೃಷಿಕ್ಷೇತ್ರಗಳಲ್ಲಿ ನೆಲಗಡಲೆಯ ಹಿಂಡಿಯನ್ನು ಬಾವಲಿಯ ಬಿಷ್ಟೆಯೊಂದಿಗೆ ಬೆರಸಿ ಉಪಯೋಗಿಸುವರು. ಇದರಿಂದ ಹಣ್ಣುಗಳು ಉಬ್ಬಿ ದೊಡ್ಡವಾಗುವವು. ಆದರೆ ಇದರಿಂದ ಹಣ್ಣುಗಳ ರುಚಿ ಮಾತ್ರ ಕಡಿಮೆಯಾಗುವುದರಿಂದ ಹಣ್ಣುಗಳ ಬೆಲೆಯು ಅರೆವಾಸಿ ಇಳಿದಿರುತ್ತದೆಂದು ಕೃಷಿಕರು ಹೇಳುವರು. ಹರಳೆಣ್ಣೆಯ ಹಿಂಡಿಯನ್ನು ಉಪಯೋಗಿಸುವುದರಿಂದ ಹಣ್ಣುಗಳು ಗಟ್ಟಿಯಾಗಿ ಮೂರು ನಾಲ್ಕು ದಿನಗಳ ವರೆಗೆ ಹಾಳಾಗದೆ ಉಳಿಯುವವು.

ಹಣ್ಣು ಬಿಟ್ಟ ಮೇಲೆ ಮಳೆ ಬರುವದೂ, ಮೋಡ ಕವಿದುಕೊಂಡಿರುವದೂ ಹಣ್ಣುಗಳ ಬೆಳವಣಿಗೆಗೆ ಹಾನಿಕರ. ಸಸಿಗಳು ರೋಗಿಷ್ಟವಾಗಿ ಕೊಳೆತು ಹಾಳಾಗಿಹೋಗುವವು. ಹಣ್ಣುಗಳು ಮುದುಡಿಕೊಂಡು ಚಿಕ್ಕವಾಗುವವು. ಕೆಲವು ಸಲ ಈ ಹಣ್ಣುಗಳು ನೀರಿಲ್ಲದೆ ಒಣಗಿದವುಗಳಾಗಿ ಕಹಿಯಾಗುವುದೂ ಉಂಟು. ಉಷ್ಣವಾದ ಹವೆಯಲ್ಲಿ ಹಣ್ಣುಗಳು ಚೆನ್ನಾಗಿ ಬೆಳೆದು ರುಚಿಕರ ಮತ್ತು ರಸವತ್ತಾಗುವವು.

ವೆಂಬುದನ್ನು ನಾವು ಸದಾ ಜ್ಞಾಪಕದಲ್ಲಿಟ್ಟುಕೊಳ್ಳುವೆನೆಂದು ಹೇಳಿದ್ದರು. ಆದರೆ ಈ ಧೋರಣೆಯು ನಾವು ನಿರೀಕ್ಷಿಸಿದ ರೀತಿಯಲ್ಲಿ ಕಾರ್ಯಕ್ಕೆ ಹಚ್ಚಲ್ಪಟ್ಟಿರುವುದಿಲ್ಲ. ಕಾಡುಗಳ ಸಮೀಪದಲ್ಲಿ ವಾಸಿಸುವ ರೈತರ ಹಿತಕ್ಕೆ ಸರಕಾರದ ಫೋರೆಸ್ಟ್ ಧೋರಣೆಯಿಂದ ಹೆಚ್ಚಿನ ಧಾರಕವುಂಟಾಗಿದೆ. ಫೋರೆಸ್ಟ್ ಆಫೀಸರರು ಪ್ರಥಮದಲ್ಲಿ ನೇಮಕಹೊಂದುವಾಗ ಯಾವುದಾದರೊಂದು ವ್ಯವಸಾಯ ಕೊಲೆಜಿನಲ್ಲಿ ತರಬೇತಿಯನ್ನು ಹೊಂದಬೇಕೆಂಬ ಯುಕ್ತಸಲಹೆಯನ್ನು ವ್ಯವಸಾಯಕಮಿಶನಿನವರಿತ್ತಿರುವರು. ಯಾಕೆಂದರೆ ಅವರು ಹೇಳುವಂತೆ ಇದರಿಂದ ವ್ಯವಸಾಯ ಕ್ರಮದ ಪರಿಜ್ಞಾನ ಮತ್ತು ವ್ಯವಸಾಯಗಾರರ ಭಾವನಾ ದೃಷ್ಟಿಯ ಪರಿಚಯಕ್ಕೆದೆಯಾಗಿ ಅತಿಕಡಿಮೆಯ ಬಿತ್ತಾಟದಿಂದ ಅಗತ್ಯವಾಗಿರುವ ನಿರ್ಬಂಧವನ್ನು ಹಾಕಲು ಅವರನ್ನು ಶಕ್ತರನ್ನಾಗಿಮಾಡುವುದು. ಕಳೆದ ವರ್ಷ ನನ್ನ ಮಿತ್ರರಾದ ಶ್ರೀ ಕಾರಂತರು ಈ ಕುರಿತು ವಿಚಾರಿಸಲು ಕಮಿಟಿಯೊಂದನ್ನು ನೇಮಿಸಲು ಸೂಚನೆ ತಂದಾಗ ಇಡೀ ಫೋರೆಸ್ಟ್ ಧೋರಣೆಯು ಪರಿಶೀಲನೆಯಲ್ಲಿದೆಯೆಂದು ಲಾ ಮೆಂಬರರು ಹೇಳಿದರು. ಫೋರೆಸ್ಟ್ ಧೋರಣೆಯ ಕುರಿತು ಯಾವ್ಯಾವ ವ್ಯತ್ಯಾಸಗಳನ್ನು ಮಾಡುವ ಸಂಭವವಿದೆ ಎಂಬುದನ್ನೂ ಈ ವಿಷಯಕವಾದ ಯಾವ ಯೋಜನೆಗಳಾದರೂ ಸರಕಾರದ ಮುಂದಿದೆಯೋ? ಇರುವುದಾದರೆ ಅವಾವುದೆಂಬುದನ್ನು ನಾವು ತಿಳಿಯಬಿಚ್ಛಿಸುತ್ತೇವೆ. ಮಾನ್ಯ ಮೆಂಬರರು ಈ ಕುರಿತು ಶೀಘ್ರ ಲಕ್ಷ್ಯವಹಿಸಿ ವ್ಯವಸಾಯಗಾರರ ಹಿತಕ್ಕೆ ಯಾವ ರೀತಿಯ ಬಾಧೆಯೂ ತಟ್ಟದಂತೆ ಫೋರೆಸ್ಟ್ ಧೋರಣೆಯನ್ನು ಹೆಚ್ಚು ಉದಾರಗೊಳಿಸುವಂತೆ ನೋಡುವರೆಂದು ನಂಬುತ್ತೇನೆ.

ಫೋರೆಸ್ಟ್ ಸಂಕಷ್ಟಗಳು.

(ಮುದ್ರಾಸು ಕೌನ್ಸಿಲಿನಲ್ಲಿ ಬಜೆಟಿನ ಫೋರೆಸ್ಟ್ ಖಾತೆಯ ವೆಚ್ಚದಲ್ಲಿ ರೂ. 100ನ್ನು ಕಡಿಮೆಮಾಡಿ ಸರಕಾರದ ಫೋರೆಸ್ಟ್ ಧೋರಣೆಯನ್ನು ಖಂಡಿಸಲು ಶ್ರೀ ನಾರಾಯಣ ರಾಜುರವರು ತಂದ ಸೂಚನೆಯ ಸಂದರ್ಭದಲ್ಲಿ ಶ್ರೀ ಎ. ಬಿ. ಶೆಟ್ಟಿ ಮಾಡಿದ ಭಾಷಣ.)

ಕಾಡುಗಳ ಬಳಿ ವಾಸಿಸುವ ರೈತರ ಸಂಕಷ್ಟಗಳನ್ನು ಈ ಕೌನ್ಸಿಲಿನಲ್ಲಿಯೂ ಈ ಮೊದಲಿನದರಲ್ಲಿಯೂ ಬಜೆಟ್ ಚರ್ಚೆಯ ಮತ್ತು ಇನ್ನಿತರ ಸಂದರ್ಭಗಳಲ್ಲಿ ಸರಕಾರದ ಗಮನೆಗೆ ತರಲಾಗಿದೆ. ಈ ಕೌನ್ಸಿಲಿನಲ್ಲಿ ಮಾಡಲ್ಪಟ್ಟಿರುವ ನಿರೂಪಣೆಗಳ ಪರಿಣಾಮವಾಗಿ ಹೆಚ್ಚು ಸಹಾನುಭೂತಿಯನ್ನು ತೋರಿಸಿ ಜನತೆಯ ಇಚ್ಛೆಯನ್ನು ಸಲಿಸುವ ಬದಲಿಗೆ ಸರಕಾರವು ಕೆಲವು ಕಡೆಗಳಲ್ಲಿ ಇಷ್ಟರವರೆಗಿತ್ತಿರುವ ರಿಯಾಯತಿಗಳನ್ನೂ ಹಿಂತೆಗೆಯುತ್ತಿರುವುದೆಂಬುದು ವಿಷಾದಕರವಿದೆ. ನನ್ನ ಸ್ವಂತ ಜಿಲ್ಲೆಯ ಸಂಬಂಧವಾದ ಅರಣ್ಯ ಸಂಕಷ್ಟಗಳ ಕುರಿತು ನಾನು ಸಾಕಷ್ಟು ಮಾಹಿತಿಯಿಂದ ಮಾತಾಡಬಲ್ಲೆನು. ಬೆಳೆಗಳಿಗೂ ಜಾನುವಾರುಗಳಿಗೂ ಕಾಡುಮೃಗಗಳಿಂದುಂಟಾಗುವ ಹಾವಳಿಯು ಇಂತಹ ಸಂಕಷ್ಟಗಳಲ್ಲೊಂದಾಗಿದೆ. ಕಾಡುಮೃಗಗಳನ್ನು ನಾಶಮಾಡಿದುದಕ್ಕಾಗಿ ಹೆಚ್ಚಿನ ಇನಾಮುಗಳನ್ನು ಕೊಡುವ ಬದಲಿಗೆ ಆ ಕುರಿತು ನಿರ್ಬಂಧಗಳನ್ನು ಹಾಕಲಾಗಿದೆ. ಇತ್ತಲಾಗಿ ಇನಾಮುಗಳ ಸಂಖ್ಯೆಯು ಕಡಿಮೆಯಾಗುತ್ತಾ ಹೋಗಿರುವಂತೆ ನಾಶವಾಗಿರುವ ಜಾನುವಾರುಗಳ ಸಂಖ್ಯೆಯೂ ಅಧಿಕವಾಗಿರುತ್ತದೆ. ಅರ್ಹವಾದ ವಿಷಯಗಳಲ್ಲಿ ಮಾತ್ರವೆ ಇನಾಮುಗಳನ್ನೀಯಬೇಕೆಂಬ ರೆವಿನ್ಯೂ ಬೋರ್ಡಿನವರ ಸೂಚನೆಗಳೇ ಇದಕ್ಕೆ ಕಾರಣವೆಂದು ದಕ್ಷಿಣ ಕನ್ನಡದ ಕಲೆಕ್ಟರರು ನಿರೂಪಿಸಿರುತ್ತಾರೆ. ಅರ್ಹವಾದ ವಿಷಯವೆಂದರೆ ಇಂತಹದೇ ಎಂದು ವಿವರಿಸಲ್ಪಟ್ಟಿರುವುದಿಲ್ಲ. ರಿಸರ್ವ್ ಕಾಡುಗಳಲ್ಲಿ ಜನರನ್ನು ಶಿಖಾರಿ ನಡಿಸಬಿಡುವ ವಿಷಯದಲ್ಲಿಯೂ ನಿರ್ಬಂಧಹಾಕಲಾಗಿದೆ. ಮೊದಲು ಜನರು ಯಾವುದಾದರೊಂದು ಕಾಡು ಭಾಗದಲ್ಲಿ ಶಿಖಾರಿ ನಡಿಸಬೇಕಾದರೆ ಸಂಬಂಧಪಟ್ಟ ರೇಂಜರರ ಅಪ್ಪಣೆ ಪಡೆದರೆ ಮಾತ್ರ ಸಾಕಾಗಿದ್ದಿತು. ಆದರೆ ಈಗ ಅವರು ಡಿವಿಜನಲ್ ಆಫೀಸರರ ಪರವಾನಗಿ ಪಡೆಯಬೇಕಾಗಿದೆ. ಕಾಡುಮೃಗಗಳನ್ನು ವಿವೇಚನೆಯಿಲ್ಲದೆ ಕೊಲ್ಲದಂತೆ ಮಾಡುವುದೇ ಸರಕಾರದ ಇಚ್ಛೆಯೆಂದು ತಿಳಿದುಬರುತ್ತದೆ. ಇದರ ಅರ್ಥವೇನೆಂದು ತಿಳಿಯುವುದು ಕಷ್ಟಸಾಧ್ಯವಿದೆ. ಗೊಬ್ಬರವೇ ಮೊದಲಾದುವುಗಳಿಗೆ ಬೇಕಾದ ಕಟ್ಟಿಗೆಯನ್ನೂ ಸೊಪ್ಪುಸದೆಗಳನ್ನೂ ಕಡಿಯುವ ವಿಷಯದಲ್ಲಿ ಜನತೆಗೆ ಕೊಡಲ್ಪಟ್ಟಿರುವ ರಿಯಾಯತಿಗಳನ್ನು ಕೂಡ, ಕಂಪಾವಳಿ ರಿಸರ್ವ ಕಾಡುಗಳಲ್ಲಿ ಅವನ್ನು ದುರುಪಯೋಗಗೊಳಿಸಿರುವರೆಂಬ ಆರೋಪದಿಂದ ಹಿಂತೆಗೆಯಲ್ಪಡುವವೆಂಬ ಭೀತಿಹಾಕಲಾಗಿದೆ.

ಫೋರೆಸ್ಟ್ ಪಂಚಾಯತಗಳು.

ಎಸೆಂಬ್ಲಿ ಬೋಂಬು ಕೈದಿಗಳ ವಿಚಾರಣೆಯು ಕಳೆದ ಮಂಗಳವಾರ ಪ್ರಾರಂಭಿಸಿತು. ಜೈಲಿನೊಳಗೆ ಯಾರನ್ನೂ ಬರಗೊಡದಂತೆ ಪೋಲೀಸರನ್ನು ಇಟ್ಟಿದ್ದರು. ಜೈಲರನ ಕೋಣೆಯಲ್ಲಿ ವಿಚಾರಣೆಯನ್ನು ನಡೆಸಿದ್ದರು. ಕೈದಿಗಳ ಹೆತ್ತವರೂ ಪತ್ರಿಕಾಪ್ರತಿನಿಧಿಗಳೂ ಕೆಲವರಿದ್ದರು. ವಿಚಾರಣೆಯ ಸಮಯ ಕೈದಿಗಳು ನಗಾಡುತ್ತ ಇದ್ದು ಸಂತೋಷವನ್ನೇ ಪ್ರದರ್ಶಿಸಿದ್ದರಲ್ಲದೆ ವ್ಯಾಕುಲದ ಸೂಚನೆಯನ್ನೇ ತೋರಿರಲಿಲ್ಲ. ಮಿ ಸಿ. ಬಿ. ಒಬ್ರಿಯನ್, ಪಿ ಜ ಬಿ ಒಬ್ರಿಯನ್, ಪಂಜಾಬಿನ ಡಿಪ್ಯುಟಿ ಡಾರೆಕ್ಟರ ಜನರಲರಾದ ಮಿ ಪಾರ್ಸಾರಿಯಾ, ಹೋಮ್ ಡಿಪಾರ್ಟಮೆಂಟಿನ ಡಿಪ್ಯುಟಿ ಸೆಕ್ರೆಟರಿಯವರಾದ ಮಿ ಎಸ್ ಎನ್ ರೈ; ಫ್ಯಾನೆನ್ಸಿಯಲ್ ಕಮಿಶನರರಾದ ಮಿ ಪಿ ಆರ್ ರಾವ್; ರ್‍ಯಾಬತಸಾರ್, ಎ ಪಿ ಡ್ಯಾಟ್ ಮೊದಲಾದವರ ಸಾಕ್ಷಿ ವಿಚಾರಣೆಯಾಯಿತು. ಎಸೆಂಬ್ಲಿ ಮಂದಿರದಲ್ಲಿ ನಡೆದ ಸಂಗತಿಗಳೆಲ್ಲವನ್ನು ಇವರು ವಿವರವಾಗಿ ತಿಳಿಸಿದರು. ವಿಚಾರಣೆಯು ಅಂದೇ ಮುಗಿಯದೆ ಮರುದಿನವೂ ನಡೆಯಿತು. ಮರುದಿನ ಸರದಾರ ಶೋಭಾಸಿಂಗ, ಸಾರ್ಜಂಟ್ ಟೆರಿ ಮೊದಲಾದವರ ವಿಚಾರಣೆಗಳು ನಡೆದುವು. ವಿಚಾರಣೆಗಳೆಲ್ಲವೂ ಮುಗಿದ ಮೇಲೆ ಎಡಿಶನಲ್ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ೩೦೭ನೇ ಸೆಕ್ಷನಿನ ಪ್ರಕಾರ ಅವರನ್ನು ಚಾರ್ಜುಮಾಡಿ, ನಂಬ್ರವನ್ನು ಸೆಶ್ಯನ್ ಕೋರ್ಟಿಗೆ ದಾಖಲ್‌ಪಡಿಸಿದರು. ಇಬ್ಬರು ಕೈದಿಗಳಲ್ಲಿ ಒಬ್ಬನಾದರೂ ಏನೊಂದು ಮಾತನಾಡಿರಲಿಲ್ಲ.

— ತುಮಕೂರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು, ಡಾ। ಎನ್. ಎಸ್. ಹರ್ಡೀಕರರು ತುಮಕೂರು ಜಿಲ್ಲೆಯಲ್ಲಿ ಬಹಿರಂಗದಾದ ಭಾಷಣಗಳನ್ನು ಮಾಡುವದರಿಂದ ಶಾಂತತಾಭಂಗವಾಗುವ ಸಂಭವವಿರುವುದೆಂಬ ಕಾರಣದ ಮೇಲೆ ಅವರು ಎರಡು ತಿಂಗಳುಗಳ ವರೆಗೆ ತುಮಕೂರು ಜಿಲ್ಲೆಯಲ್ಲಿ ಎಲ್ಲಿಯೂ ಭಾಷಣ ಕೊಡತಕ್ಕದ್ದಲ್ಲವೆಂದು ನೋಟೀಸು ಕೊಟ್ಟಿರುವರು.

— ಮಿ। ಸೋಂಡರ್ಸರ ವಧೆಯ ಸಂಬಂಧದಲ್ಲಿ ಅಲಹಾಬಾದದ ರಘುನಾಥ ಪ್ರಸಾದ ಎಂಬವನನ್ನು ಕಲಕತ್ತೆಯಲ್ಲಿ ಕೈದುಮಾಡಿದರು. ಅವನು 'ವಿಶ್ವಮಿತ್ರ' ಎಂಬ ಪತ್ರಿಕೆಯ ಕಾರ್ಯಾಲಯದ ಕಾರಕೂನನಾಗಿದ್ದನು.

— ಅಲಹಾಬಾದದ ಪಾಯೋನಿಯರ್ ಪತ್ರಿಕೆಯಲ್ಲಿ ಪ್ರಕಟನೆಯ ಬಗ್ಗೆ ಒಂದು ಕೆಂಪು ಕಾಗದದಲ್ಲಿ ಮುದ್ರಿಸಿದ ನೋಟೀಸು ಬಂದು ತಲಪಿತಂತೆ. ಆದರೆ ಅದರಮೇಲೆ ಲೇಖಕನ ನಿಜವಾದ ಸಹಿ ಇರಲಿಲ್ಲ. ಭಯಂಕರವಾದ ಕೊಲೆಗಳಾಗುವವೆಂದು ಅದರಲ್ಲಿ ಇದ್ದಿತು. ಅದಿಯಲ್ಲಿ "ರಕ್ತಾಪೇಕ್ಷಿ" ಎಂಬ ಹೆಸರಿದ್ದಿತು.

— ಪೋಲೀಸ ಅಧಿಕಾರಿಗಳು ಚಿತಗಾಂಗಿನ "ಜ್ಯೋತಿ" ಎಂಬ ಹೆಸರಿನ ಪತ್ರಿಕಾ ಕಾರ್ಯಾಲಯವನ್ನು ಶೋಧಿಸಿದರು. ಯುವಕ ಪಕ್ಷದ ಸಂಬಂಧದಲ್ಲಿ ಅವರು ಛಾಪಿಸಿದ ಒಂದು ನೋಟೀಸನ್ನು ಹಿಡಿದು ಹೊರಟುಹೋದರು. ಯಾರೂ ಕೈದು ಮಾಡ್ಯಪಡಲಿಲ್ಲ.

— ೧೩ನೇ ತಾರೀಕಿಗೆ ಅಂತ್ಯವಾಗುವ ವಾರದಲ್ಲಿ ಹಿಂದುಸ್ಥಾನದಲ್ಲಿ ಪ್ಲೇಗು, ಸಿಡುಬು, ಕಾಲರಾ, ಮುಂತಾದ ರೋಗಗಳ ದೆಸೆಯಿಂದ ೫೦೦೦ ಮರಣಗಳಾದವು. ಸಂಯುಕ್ತ ಸಂಸ್ಥಾನದಲ್ಲಿಯೇ ಸುಮಾರು ಎರಡು ಸಾವಿರ ಮಂದಿ ಸತ್ತುಹೋದರು. ಪ್ಲೇಗಿನಿಂದ ೧೩೪೨ ಮಂದಿ ಗಳು, ಸಿಡುಬಿನಿಂದ ೩೪೪ ಮಂದಿಗಳು, ಕಾಲರಾದಿಂದ ೮೧೫ ಮಂದಿಗಳೂ ಸತ್ತುಹೋದರು. ಬಂಗಾಳದಲ್ಲಿ ೬೦೦ಕ್ಕೆ ಮಿಕ್ಕಿದ ಮರಣಗಳುಂಟಾದವು. ೫೭೩ ಕಾಲರಾದಿಂದ, ೧೯೮ ಸಿಡುಬು ರೋಗದಿಂದ. ಬಿಹಾರ ಮತ್ತು ಒರಿಸ್ಸಾದಲ್ಲಿ ಸುಮಾರು ೫೦೦ ಮಂದಿಗಳು, ಇದರಲ್ಲಿ ಅರೆವಾಸಿ ಕಾಲರಾದಿಂದ. ಬರ್ಮಾದಲ್ಲಿ ೩೪೦, ಅಸ್ಸಾಮದಲ್ಲಿ ೧೩೫, ಮಧ್ಯಪ್ರಾಂತದಲ್ಲಿ ೭೭, ಪಂಜಾಬಿನಲ್ಲಿ ೩೩೭ ಮಂದಿ ಮರಣ ಹೊಂದಿದರು.

— ಹೊಸಂಗಾಬಾದಿನಲ್ಲಿ ತಂದೆಯು ನಿರ್ದಯತ್ವಕನಾಗಿ ತನ್ನ ಮಗಳನ್ನು ಕೊಂದು ತಾನು ಆತ್ಮಹತ್ಯವನ್ನು ಮಾಡಿಕೊಂಡನು. ಮಗಳು ತನ್ನ ಅನುಮತಿ ಇಲ್ಲದೆ ಯಾವನೋ ಒಬ್ಬ ಯುವಕನನ್ನು ಮದುವೆಯಾಗಿ ಪರಲ್ಲಾಗಿ ಓಡಿಹೋಗುವುದರಲ್ಲಿದ್ದಳು. ಆದರೆ ತಂದೆಗೆ ಸಿಟ್ಟುಬಂದು ಆತನು ಈ ಕೊಲೆಯನ್ನು ಮಾಡಿದನು.

— ಸಿಮ್ಲಾದಲ್ಲಿ ನಡೆಯುವ ಪ್ರಾಂತಿಕ ಸರಕಾರಗಳ ರೆವಿನ್ಯೂ ಮೆಂಬರರ ಪರಿಷತ್ತಿಗೆ ದಿ ಹಾನರೇಬಲ್ ಮೆಜಿಸ್ಟ್ರೇಟರವರು ತೆರಳುವರು. ಹಿಂದೂ ಸರಕಾರದೊಡನೆ ಬಹುಸಮಯದಿಂದ ನಿರ್ಣಯವಾಗದಿರುವ ಭೂಕಂದಾಯದ ವಿಷಯದ ಪ್ರಶ್ನೆಯು ಈ ಪರಿಷತ್ತಿನಲ್ಲಿ ಚರ್ಚಿಸಲ್ಪಡಬಹುದೆಂದು ನಂಬಲಾಗಿಯದೆ.

— ಬೆಂಗಳೂರಿನ ಮಿನರ್ವಾ ಗಿರಣಿಯ ಕೆಲಸಗಾರರು ಕಳೆದ ಸೋಮವಾರ ದಿನ ಪೂರಾ ಮುಷ್ಕರವನ್ನು ಆಚರಿಸಿದ್ದರು. ಕೆಲವರಿಗೆ ಸರಿಯಾಗಿ ಸಂಬಳವನ್ನು ಕೊಡಲಿಲ್ಲವೆಂಬುದೂ, ಕೆಲಸಗಾರರ ಮೇರೆಗೆ ಯಾವ ರೀತಿಯಲ್ಲಿಯೂ ಕಿವಿಕೊಡಲೇ ಇಲ್ಲವೆಂಬುದೂ ಅವರ ದೂರಾಗಿದ್ದಿತು.

— ಬನಾರಸಿನಲ್ಲಿ ಬೇರೆ ಬೇರೆ ಇಲಾಖೆಯ ಹತ್ತು ಮಂದಿಗಳು ಯುರೋಪು ಸಂಚಾರಕ್ಕಾಗಿ ಹೊರಟಿರುವರು. ಅವರು ಒಂದೆರಡು ದಿನಗಳ ಹಿಂದೆ ಮದರಾಸಿಗೆ ಬಂದು ತಲಪಿದರು. ಯುರೋಪಿನ ಬೇರೆ ಬೇರೆ ರಾಷ್ಟ್ರದವರು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ವಿದ್ಯಾ ಸಮಸ್ಯೆಗಳಲ್ಲಿ ಹೇಗೆ ವರ್ತಿಸುವರೆಂಬುದನ್ನು ಇವರು ಅಭ್ಯಸಿಸಲಿರುವರು. ಇದರಲ್ಲಿ ಬನಾರಸಿನ ಕಾಂಗ್ರೆಸ್ ಧುರೀಣರಾದ ಮಿ। ಶಿವಪ್ರಸಾದ ಗುಪ್ತರವರೂ ಇರುವರು.

— ಕಲಕತ್ತೆಯಲ್ಲಿ ಕೆಲವು ದಿನಗಳ ಹಿಂದೆಯೇ ನಡೆದ ಕೊಲೆಗಳ ಸಂಬಂಧದಲ್ಲಿ ಉತ್ತರ ಮತ್ತು ದಕ್ಷಿಣ ಕಲಕತ್ತೆಯಲ್ಲಿ ಸುಮಾರು ನಾಲ್ವತ್ತು ಮನೆಗಳು ಶೋಧಿಸಲ್ಪಟ್ಟವು. ಸುಮಾರು ಮೂವತ್ತು ಮಂದಿ ಕೈದುಮಾಡಲ್ಪಟ್ಟರು. ಇವರಲ್ಲಿ ಹಲವು ವಿದ್ಯಾರ್ಥಿಗಳೂ ಇದ್ದರು.

— ಎಸೆಂಬ್ಲಿಯಲ್ಲಿ ಬಿದ್ದ ಬಾಂಬುಗಳ ಸಂಬಂಧದಲ್ಲಿ ಲಾಹೋರಿನ ವಿದ್ಯಾರ್ಥಿಗಳ ಹಾಸ್ಟೆಲುಗಳನ್ನು ಶೋಧಿಸಿ, ಇಬ್ಬರು ವಿದ್ಯಾರ್ಥಿಗಳನ್ನು ಕೈದು ಮಾಡಿರುವರು. ವಿದ್ಯಾರ್ಥಿಗಳಿಗೆ ರಾಜಕೀಯ ಮುಖಂಡರೊಡನೆ ಸಂಬಂಧವನ್ನು ಬೆಳೆಸುವ ರೀತಿಯ ಲೇಖನಗಳನ್ನು ಬೇರೆಬೇರೆ ಪತ್ರಿಕೆಗಳಿಂದ ಕತ್ತರಿಸಿ ಅವರು ಸಂಗ್ರಹಿಸಿರುವುದನ್ನು ಪೋಲೀಸರು ತಮ್ಮ ಸ್ವಾಧೀನ ಪಡೆದುಕೊಂಡರು. ಇದೇ ರೀತಿಯ ಅಪಾದನೆಯ ಮೇಲೆ ಹಿಂದುಸ್ಥಾನದಲ್ಲಿ ಹಲವು ಮಂದಿಗಳು ಕೈದುಮಾಡಲ್ಪಡಲಿರುವರಂತೆ.

— ಪೂರ್ವದಿನ ಮೆಜಿಸ್ಟ್ರೇಟರಿಗೆ ಒಂದು ಕೆಂಪು ಪತ್ರವು ಹೆಸರಿಸಿ ಬಂದ್ದಿಯದೆ. ಪತ್ರದಲ್ಲಿ ಹಿಂದೀ ಭಾಷೆಯಲ್ಲಿ ಬರೆದಿದ್ದಿತು. ಅದರಲ್ಲಿ "ಹಿಂದುಸ್ಥಾನದ ಮಿತ್ರರು ಸೆರೆ ಹಿಡಿಯಲ್ಪಟ್ಟ ಪಕ್ಷದಲ್ಲಿ ಗುರಿ ಮಾಡಲ್ಪಟ್ಟಿರುವರು. ಆ ಮೂವತ್ತು ಮಂದಿಗಳ ಜಿಡುಗದ ಮಾಡಲ್ಪಡದೆ ಇದ್ದರೆ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಸುಪರಿಂಟೆಂಡೆಂಟರು ಗುಂಡಿನಿಂದ ವಧಿಸಲ್ಪಡುವರು" ಎಂದು ಇದ್ದಿತು. ಇಂತಹ ರೀತಿಯ ವಧೆಯು ಪೋಲೀಸ ಸುಪರಿಂಟೆಂಡೆಂಟರ ಮೇಲೋ, ಅಥವಾ ಜೈಲು ಸುಪರಿಂಟೆಂಡೆಂಟರ ಮೇಲೋ ಒಂದು ಪತ್ರದಲ್ಲಿ ಸರಿಯಾಗಿ ಸೂಚಿಸಲ್ಪಟ್ಟಿಲ್ಲ. ಪೋಲೀಸರು ಈ ಕುರಿತಾಗಿ ತನಿಖೆ ನಡೆಸುತ್ತಿರುವರು. ಕೆಲವು ದಿನಗಳ ಹಿಂದೆ ಒಂದು ಬಹಿರಂಗವಾದ ಸ್ಥಳದಲ್ಲಿ ಎರಡು ದೊಡ್ಡ ನೋಟೀಸುಗಳು ಗೋಡೆಗೆ ಹಚ್ಚಲ್ಪಟ್ಟಿದ್ದವು. ಒಂದರಲ್ಲಿ ಹಿಂದಿಯಲ್ಲಿಯೂ, ಇನ್ನೊಂದರಲ್ಲಿ ಇಂಗ್ಲಿಷಿನಲ್ಲಿಯೂ ಬರೆಯಲ್ಪಟ್ಟಿದ್ದವು. ಆದರೆ ಪೋಲೀಸರು ಆ ನೋಟೀಸುಗಳನ್ನು ಹರಿದುಹಾಕಿದರು.

— ಮೊದಲೇ ಸೂಚಿಸಲ್ಪಟ್ಟಂತೆ ಎಂದಿನಂತೆ ಈ ವರುಷ ಜುಲೈ ತಿಂಗಳಲ್ಲಿ ಕೆಲಕ್ಟರರ ಪರಿಷತ್ತು ನಡೆಯುವದಿಲ್ಲವಂತೆ. ಚರ್ಚಿಸಲ್ಪಡಬೇಕಾದ ವಿಷಯಗಳು ದೊರಕದಿರುವುದೇ ಈ ಪರಿಷತ್ತನ್ನು ಮುಚ್ಚಿ ಮಾಡುವರೆ ಕಾರಣವಾಯಿತು.

ದಕ್ಷಿಣ ಕನ್ನಡ.

ಮಂಗಳೂರು — ಕಳೆದ ಶನಿವಾರದಿಂದ ಇಲ್ಲಿನ ಮೊಗವೀರ ಮತ್ತು ಮಾಪಿಳ್ಳಾ ಜಾತಿಯವರೊಳಗೆ ಜಗಳವು ಪ್ರಾರಂಭಿಸಿರುತ್ತದೆ. ಶನಿವಾರ ದಿನ ಸುಮಾರು ಮೂರು ಘಂಟೆಯ ಹೊತ್ತಿಗೆ ಹೊಗೆ ಬಜಾರಿನ ಕೆಲವು ಮಂದಿ ಮೊಗವೀರರು ಒಂದು ಶವವನ್ನು ಹೊತ್ತು ಅದರ ಸಂಸ್ಕಾರ ಕಾರ್ಯಕ್ಕಾಗಿ ಬೋಳೂರಿನಲ್ಲಿರುವ ಸ್ಮಶಾನದ ಕಡೆಗೆ ಹೋಗುತ್ತಿದ್ದರು. ಅವರು ಹಲವು ಮಸೀದಿಗಳಿರುವ ಕುದ್ರೋಳಿ ಮಾರ್ಗವಾಗಿ ಹೋಗಬೇಕಾಗಿದ್ದಿತು. ಮೊಗವೀರರು ಶವವನ್ನು ಕೊಂಡೊಯ್ಯುವಾಗ ಭಜನೆಯನ್ನು ಮಾಡುತ್ತಾ ಹೋಗುವ ವಾಡಿಕೆಯಂತೆ ಅಂದಿನ ದಿನವೂ ಅವರು ಭಜನೆಯನ್ನು ಹಾಡುತ್ತಾ ಮುಂದರಿದರು. ಶವವು ಕುದ್ರೋಳಿಯಲ್ಲಿರುವ ಪ್ರಸಿದ್ಧ ಮಸೀದಿಯ ಸಮೀಪ ಬಂದೊಡನೆ ಅಲ್ಲಿ ನೆರೆದಿದ್ದ ಮುಸಲ್ಮಾನರು ಶವವನ್ನು ಆ ಹಾದಿಯಾಗಿ ಕೊಂಡೊಯ್ಯಬಾರದೆಂದು ವಿರೋಧಿಸಿದರು. ತಾವು ಯಾವಾಗಲೂ ಅದೇ ಹಾದಿಯಾಗಿ ಹೋಗುತ್ತಿದ್ದುದರಿಂದ ಈಗಲೂ ಹೋಗುವೆವೆಂದು ಮೊಗವೀರರು ಹೇಳಲಾಗಿ ಸುಮಾರು ಅರ್ಧ ತಾಸಿನ ವರೆಗೆ ಪರಸ್ಪರರಲ್ಲಿ ಚರ್ಚೆಯು ನಡೆಯಿತು. ಎರಡು ಪಕ್ಷಗಳ ಮುಖಂಡರು ರಾಜಿಮಾಡಿಕೊಂಡುದರಿಂದ ಶವವು ಮುಂದರಿಯಿತು. ಆದರೆ ಸ್ವಲ್ಪ ದೂರದಲ್ಲಿಯೇ ನಡುಪಳ್ಳಿ ಮಸೀದಿಯೆಂಬ ಹೆಸರಿನ ಇನ್ನೊಂದು ಮಸೀದಿ ಇದೆ. ಅಲ್ಲಿಗೆ ಇವರು ತಲಪಿದೊಡನೆ ಮುಸಲ್ಮಾನರು ಇವರನ್ನು ಹೊಡೆದರು. ತದನಂತರ ಹಲವು ಮೊಗವೀರರೊಟ್ಟಿಗೆ ಬಂದು ಶವವನ್ನು ಕೊಂಡುಹೋಗಬೇಕೆಂದು ಉದ್ಯೋಗಿಸುವಾಗ ಮುಸಲ್ಮಾನರು ಭಜನೆ ಅವರೊಳಗೆ ಮಾತುಗಳ ಚರ್ಚೆಯು ನಡೆದು ಕೊನೆಗೆ ಗುದ್ದಾಟವು ಪ್ರಾರಂಭವಾಗಿ ಬಹಿರಂಗವಾದ ಜಗಳವು ನಡೆಯಿತು. ಕಲ್ಲುಗಳು, ದೊಣ್ಣೆಗಳು, ಉಪಯೋಗಿಸಲ್ಪಟ್ಟ ವರಿಂದ ಎರಡು ಕಡೆಗಳಲ್ಲಿಯೂ ಹಲವರಿಗೆ ಬಹುಮಾಗಿ ಆಸ್ಪತ್ರೆಗೆ ಕೊಂಡುಹೋಗಬೇಕಾಯಿತು. ಈ ವರ್ತಮಾನವನ್ನು ಕೇಳಿದೊಡನೆ ಪೋಲೀಸ ಸುಪರಿಂಟೆಂಡೆಂಟರು ತನ್ನ ರಿಸರ್ವ ಪೋಲೀಸ ದಳದೊಡನೆ ಅಲ್ಲಿಗೆ ಹೋಗಲಾಗಿ ಪೋಲೀಸರನ್ನು ನೋಡಿದೊಡನೆ ನೆರೆದವರು ಚದುರಿ ಅಂದಿನ ಕಲಹವು ಶಾಂತವಾಯಿತು.

ಮರುದಿನ ಮೊಗವೀರರು, ಸಭೆಸೇರಿ ಇನ್ನು ಕೆಲವು ದಿನಗಳ ವರೆಗೆ ತಮ್ಮ ಹೆಂಗಸರನ್ನು ಮೀನು ವ್ಯಾಪಾರಕ್ಕಾಗಿ ಹೊರಗೆ ಕಳುಹುವುದು ಅಪಾಯಕರವೆಂದು ನೆನಸಿ ಎಳೆಂಟು ದಿನಗಳ ವರೆಗೆ ಮೀನು ಹಿಡಿಯಬಾರದೆಂದು ನಿಶ್ಚಯಿಸಿದರು.

ಆದಿತ್ಯವಾರ ದಿನ ಏನೂ ಗಲಭೆಯಿರಲಿಲ್ಲ. ಸೋಮವಾರ ಕೆಲ ಮುಸಲ್ಮಾನರು ಒಬ್ಬ ಮೊಗವೀರನನ್ನು ಚೆನ್ನಾಗಿ ಹೊಡೆದರೆಂಬ ವಾರ್ತೆಯು ಹಬ್ಬಿ, ಮಧ್ಯಾಹ್ನ ಅಸಂಖ್ಯಾತ ಮೊಗವೀರರು ಸೇರಿದು ಮುಸಲ್ಮಾನರನ್ನು ಎದುರಿಸಲಿಕ್ಕಾಗಿ ಕುದ್ರೋಳಿಯ ಕಡೆಗೆ ನಡೆದರು. ಮುಸಲ್ಮಾನರೂ ಮೊಗವೀರರೂ ಆಯುಧಪಾಣಿಗಳಾಗಿದ್ದರು. ಸಕಾಲದಲ್ಲಿ ಪೋಲೀಸು ಸುಪರಿಂಟೆಂಡೆಂಟರವರೂ, ಟೌನ್ ಮೆಜಿಸ್ಟ್ರೇಟರವರೂ, ಪೋಲೀಸ ದಳವೂ ಅಲ್ಲಿಗೆ ಬಂದು ಹಲವು ಮಂದಿಗಳನ್ನು ಕೈದುಮಾಡಿದರು. ಸುಪರಿಂಟೆಂಡೆಂಟರು ಆಯುಧಗಳನ್ನು ಕೆಳಗಿರಿಸಿ ಹೋಗಬೇಕೆಂದು ಮೊಗವೀರರನ್ನು ಕೇಳಲಾಗಿ, ಅದಕ್ಕೊಪ್ಪದ ಕೆಲ ಮೊಗವೀರರನ್ನು ಬಯೊನೆಟ್ಟು ಗಳಿಂದ ತಿವಿದು ಚದುರಿಸಬೇಕಾಯಿತು. ಇತ್ತಂಡಗಳೊಳಗೆ ಜಗಳವು ಗರಂತ ನೋಡಿಕೊಂಡುದರಿಂದ ಯಾರಿಗೂ ಪ್ರಾಣಹಾನಿಯಾಗಲಿಲ್ಲ. ಆದರೆ ಈ ವಿದ್ಯ ಸರ್ಕಲ್ ಇನ್ಸ್‌ಪೆಕ್ಟರರಾದ ಮಿ। ಕಮ್ಮಾರ್ ಸಾಹೇಬರಿಗೆ ಗುಂಡುಹಾರಿಸುವ ಅವಶ್ಯಕತೆಯು ಬಿದ್ದುದರಿಂದ ಅವರ ಗುಂಡಿನ ಪೆಟ್ಟಿಗೆ ಒಬ್ಬ ಮುಸಲ್ಮಾನನು ಬಲಿಬಿದ್ದು, ಸತ್ತುಹೋದನು. ಎಂತಹ ಗಲಾಟೆಯಾಗುವುದೋ ಎಂದು ಹೆದರಿ ಬಂದರದಲ್ಲಿ ಅಂಗಡಿಗಳೆಲ್ಲವೂ ಮುಚ್ಚಲ್ಪಟ್ಟಿದ್ದವು. ಪೋಲೀಸರನ್ನು ಆ ದಿನವೂ ಮತ್ತೆರಡು ದಿನಗಳ ವರೆಗೂ ಆ ಸ್ಥಳಗಳಲ್ಲಿ ಜಗಳಗಳಾಗದಂತೆ ಕಾಯುವುದಕ್ಕಾಗಿ ನಿಲ್ಲಿಸಿದ್ದರು. ಜಗಳಗಳ ಮೂಲಕ ಯಾರಿಗೂ ಬಹುಮಾಗಿದ್ದರೂ ಜನರ ಸುಗ್ಗಾಟದಲ್ಲಿ ಕೆಲವರಿಗೆ ಸ್ವಲ್ಪ ಪೆಟ್ಟಾಗಿದ್ದಿತು. ಈ ಸಂದರ್ಭದಲ್ಲಿ ನಮ್ಮ ಪೋಲೀಸ್ ಸುಪರಿಂಟೆಂಡೆಂಟರು ಧೈರ್ಯದಿಂದ ಒಬ್ಬಂಟಿಗನಾಗಿ ಅಲ್ಲಿ ಬಂದು ಶಾಂತಸ್ಥಾಪನೆಯ ಬಗ್ಗೆ ಅವಶ್ಯಕವಾದ ಉಪಾಯಗಳನ್ನು ಕೈಕೊಳ್ಳುತ್ತಲಿದ್ದುದು ವಿಶೇಷ ಸ್ತೋತ್ರಾರ್ಹವಾಗಿದೆ.

ಈಗ ಜಗಳವು ಪೂರಾ ಶಾಂತವಾಗಿರುತ್ತದೆ. ಸುಮಾರು ೨೦ ಮಂದಿ ಗಾಯಹೊಂದಿ ಆಸ್ಪತ್ರೆಯಲ್ಲಿರುವರೆಂದು ತಿಳಿದು ಬರುತ್ತದೆ. ಸತ್ತವನೆಂದರೆ ಒಬ್ಬನೇ ಮಾಪಿಳ್ಳೆಯನು.

ಮಂಗಳೂರು ತಾಲೂಕು ಬೋರ್ಡಿನ ಬಂಟವಾಳ ಸರ್ಕಲಿನ ಒಬ್ಬ ಮೆಂಬರರ ಅವಧಿಯು ಇದೇ ಬರುವ ಮೇ ತಿಂಗಳ ತಾ. ೩೧ರಲ್ಲಿ ಮುಗಿದು ಹೋಗುವುದರಿಂದ ಬೇರೊಬ್ಬ ಮೆಂಬರರ ಚುನಾವಣೆಯು ನಡೆಯುವದು. ನೋಮಿನೇಶನ್ ಪತ್ರವನ್ನು ಇದೇ ತಾ. ೧೭ನೇ ಶುಕ್ರವಾರ ಅಪರಾಹ್ನ ೧ ಘಂಟೆ ೩ರಿಂದ ೪ರ ವರೆಗೆ ಮಂಗಳೂರು ತಾಲೂಕು ಬೋರ್ಡು ಆಫೀಸಿನಲ್ಲಿ ಕೊಡಬಹುದು. ಆ ಪತ್ರಗಳನ್ನು ಮರುದಿನ ಶನಿವಾರ ಅಪರಾಹ್ನ ೩ರಿಂದ ೪ರ ವರೆಗೆ ಪರಿಶೋಧಿಸುವರು. ಮತ್ತು ಅದೇ ದಿವಸ ಮಂಜೂರಾದ ಕ್ಯಾಂಡಿಡೇಟರ ಪಟ್ಟಿಯನ್ನು ಪ್ರಕಟಿಸುವರು. ಚುನಾವಣೆಯು ಬಂಟವಾಳ ಸ್ಪೇಶಲಿಗೆ ಬಂಟವಾಳ ಬೋರ್ಡು ಹುಡುಗಿಯರ ಶಾಲಾ ಕಟ್ಟೋಣದಲ್ಲಿ ಇದೇ ಬರುವ ಜೂನ್ ತಾ. ೧ನೇ ಶನಿವಾರ ಪೂರ್ವಾಹ್ನ ೭ರಿಂದ ೧೧ ಘಂಟೆಯ ವರೆಗೂ, ಅಪರಾಹ್ನ ೧೧ರಿಂದ ೬ ಘಂಟೆಯ ವರೆಗೂ, ಕಾವಳಕಟ್ಟೆ ಸ್ಟೇಶನಿಗೆ ಕಾವಳ ಮುಡೂರು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿಯೂ, ರಾಯಿ ಸ್ಟೇಶನಿಗೆ ರಾಯಿಗ್ರಾಮ ಚಾವಡಿಯಲ್ಲಿಯೂ, ಅದೇ ಜೂನ್ ೧ನೇ ಶನಿವಾರ ಅಷ್ಟೇ ಸಮಯಕ್ಕೆ ಜರಗುವದು. ಪ್ರಿಸೈಡಿಂಗ್ ಆಫೀಸರುಗಳನ್ನು ತಾಲೂಕು ಬೋರ್ಡು ಆಫೀಸಿನಲ್ಲಿ ಜೂನ್ ತಾ ೫ನೇ ಬುಧವಾರ ಅಪರಾಹ್ನ ಘಂಟೆ ೩ರಿಂದ ೫ರ ವರೆಗೆ ಲೆಕ್ಕ ಮಾಡುವರು.

"ಇಲ್ಲಿಯ ಮಹಿಳಾ ಸಭಾಮಂದಿರದಲ್ಲಿ ಪ್ರತಿ ಆದಿತ್ಯವಾರ ಸಾಯಂಕಾಲ ಘಂಟೆ ೪ರಿಂದ ೬ರ ವರೆಗೆ ಭಜನೆಯೂ, ಭಕ್ತಿವಾಚನವೂ ನಡೆಯುವುದೆಂದೂ, ಎಲ್ಲಾ ಮಹಿಳೆಯರೂ ಸುಸ್ವಾಗತವಿದೆಯೆಂದೂ ಸಭೆಯ ಕಾರ್ಯದರ್ಶಿಯವರು ತಿಳಿಸುವರು.

ಕಳೆದ ಮಂಗಳವಾರ ಇಲ್ಲಿಗೆ ಹಿಂದೂ ಮಹಾಸಭೆಯ ವರ್ಕಿಂಗ್ ಪ್ರೆಸಿಡೆಂಟ ಮತ್ತು ಎಸೆಂಬ್ಲಿ ಮೆಂಬರರಾದ ಡಾ। ಮೂಂಜೆಯವರು ಬಂದು ಬುಧವಾರ ದಿನ ಸಾಯಂಕಾಲ, ಕೆನರಾ ಹ್ಯಾಸ್ಕೂಲಿನಲ್ಲಿ ಶ್ರೀ ಯು. ಸಿ. ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಹಿಂದೂಸಭೆಯು ಹೇಗೆ ಇಡೀ ರಾಷ್ಟ್ರಕ್ಕೆ ಸಂಬಂಧಿಸಿರುವದೆಂಬುದನ್ನು ವಿವರಿಸಿದರು. ಇತರ ಸಹಾಯಾರ್ಥವಾಗಿ ತಾನು ತೆರೆಯಲಿರುವ 'ಸರ್ವೆಂಟ್ ಓಫ್ ಹಿಂದೂ ಮಹಾಸಭಾ' ಇವಕ್ಕೆ ಮಂಗಳೂರಿನವರು ೨ ಸಾವಿರ ರೂಪಾಯಿಗಳಷ್ಟಾದರೂ ವಂತಿಗೆ ಹಾಕಬೇಕೆನ್ನಲಾಗಿ, ವಂತಿಗೆಯನ್ನು ಸಂಗ್ರಹಿಸಲು ಒಂದು ಕಮಿಟಿಯು ನೇಮಕವಾಯಿತು.

ಹೊಸದುರ್ಗ — ತಾ. ೨—೫—೧೯೨೯ನೇ ಗುರುವಾರ ದಿವಸ ಇಲ್ಲಿಯ ಗವರ್ನಮೆಂಟ್ ಲೇಬರ್ ಡಿಪಾರ್ಟ್‌ಮೆಂಟ್ ಎಲಿಮೆಂಟರಿ ಶಾಲೆಯ ಬಡ ವಿದ್ಯಾರ್ಥಿಯರಿಗೆ ಬಿಸಿಭೋಜನಾರ್ಥ, ಶಾಲೆ ಇಲ್ಲಿಗೆ ಬಂದಿದ್ದ ಪುತ್ತೂರು ತಾಲೂಕಿನ ಒಳಮೊಗ್ರು ಗ್ರಾಮದ ಮಡತ್ತಡಿಯೆಂಬಲ್ಲಿರುವ ಜಮೀನುದಾರ ರಾಜಶ್ರೀ ಗಳವರಾದ ಚಕ್ರಪರ್ತಿಯವರ ಧರ್ಮಪತ್ನಿಯವರಾದ ಸೌಭಾಗ್ಯವತಿ ಪರಮೇಶ್ವರಿ ಅಮ್ಮನವರ ಕರವಾಗಿ ಒಳ್ಳೇ ವೈಭವದಿಂದ ಅನ್ನದಾನವು ಕೊಡಿಸೋಣಾಯಿತು. ಇವರಂತೆ ಬಡ ಜನಾಂಗದವರಾದ ಆದಿದ್ರಾವಿಡರ ಹಿತವನ್ನು ಬಯಸಿ ಆಗಿಂದಾಗ್ಯೆ ಅನ್ನದಾನ ಮಾಡುವ ಮಹಾನುಭಾವರಿಗೆ ಶ್ರೀ ದೇವರು ದೀರ್ಘಾಯು ರಾರೋಗ್ಯವನ್ನೂ ಸುಖಸಂಪತ್ತನ್ನೂ ದಯಪಾಲಿಸಲೆಂದು ಕೋರುವ,

ಇತಿ ಆದಿದ್ರಾವಿಡರ ಹಿತಚಿಂತಕ.

ಧರ್ಮಸ್ಥಳ — ಶ್ರೀ ಧರ್ಮಸ್ಥಳದಲ್ಲಿ ತಾ. ೧೯—೪—೧೯೨೯ನೆ, ಶುಕ್ರವಾರ ಮಧ್ಯಾಹ್ನ ೧ ಘಂಟೆಗೆ ಧರ್ಮಸ್ಥಳ ಶ್ರೀ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ದಕ್ಷಿಣ ಕನ್ನಡಾ ಗೌಡ ವಿದ್ಯಾವರ್ಧಕ ಸಂಘದ ವಿಶೇಷ ಮಹಾಸಭೆಯೊಂದು ಜರಗಿತು. ಸಭೆಗೆ ಶ್ರೀ ಕಾರ್ನಾಡ ಸದಾಶಿವರಾಯರು ಮತ್ತು ಅತಿಥಿಗಳಾಗಿ ಅನ್ಯ ಸಮಾಜದ ಕೆಲ ಮಹನೀಯರೂ, ಸಮಾಜದ ಮೆಂಬರರೂ ಮತ್ತು ಮೆಂಬರೇತರರೂ ಕೂಡಿ ಸುಮಾರು ೧೫೦ ಮಂದಿ ಸಭೆ ಸೇರಿದ್ದರು. ಸಭಾಧ್ಯಕ್ಷರು ಈ ವಿಶೇಷ ಸಭೆಯು ಇಲ್ಲಿ ಜರಗಿಸಿದ ಕಾರಣವನ್ನು ನೆರೆದ ಸಭಿಕರಿಗೆ ವಿವರಿಸಿದ್ದಲ್ಲದೆ ಸಂಘ ಸ್ಥಾಪನೆಯಾಗಿ ೮ ವರ್ಷಗಳು ಕಳೆದಾಗ್ಯೂ ಇನ್ನು ಈ ಪ್ರಾಂತದಿಂದ ಮೆಂಬರರಾಗಿ ಸೇರದ್ದು ವಿಷಾದಕರವೆಂತಲೂ, ಧರ್ಮಸ್ಥಳ, ಬೆಳ್ತಂಗಡಿ, ಶಿರಾಡಿ, ಉಂಗಾಡಿ, ಕೊಕ್ಕಡ, ಬಂಟ್ವಾಳ ಈ ಕಡೆಗಿನ ಮಹನೀಯರು ಅವಶ್ಯ ಕೈಯ ಮೆಂಬರರಾಗಿ ಸೇರಬೇಕೆಂತ ವಗೈರೆಯಾಗಿ ಸೂಚಿಸಿ ಸಭಿಕರಿಗೆ ಉತ್ತೇಜನ ಕೊಟ್ಟದ್ದಲ್ಲದೆ ಈ ಸಂಘದ ಬಡ ವಿದ್ಯಾರ್ಥಿ ಫಂಡಿಗೆ ೧೦೦—೦—೦ ರೂ. ಉದಾರವಾಗಿ ಕೊಟ್ಟದ್ದು ಮತ್ತು ಕೂಡದ ಸಭಿಕರಿಗೆಲ್ಲಾ ಅನುಪಾನಾದಿಗಳಿಂದ ಸತ್ಕರಿಸಿದುದೂ ಸಭಾ ಹಿಂದುಳಿದ ವರ್ಗದವರಲ್ಲಿ ಧುರೀಣರಾದ ಹೆಗ್ಗಡೆಯವರಿಗಿರುವ ಅಭಿಮಾನವನ್ನು ತೋರ್ಪಡಿಸುತ್ತದೆ.

ಕಾಸರಗೋಡು — ಇಲ್ಲಿಯ ತಾಲೂಕು ಬೋರ್ಡಿನ ಹಿಂದೆ ಇರುವ ಬೋರ್ಡು ಎಲಿಮೆಂಟರಿ ಶಾಲೆಗೆ ಮಳೆಯ ಮಾಡು ಇಲ್ಲ. ಮಳೆ ಬರುವಾಗ ಕೆಸ್ರೋಣವೆಲ್ಲಾ ಸೋರುವುದರಿಂದ ಹಾಳಾಗುತ್ತದೆ. ಗೋಡೆಯ ಮೇಲೆ ನೀರು ಇಳಿದು ಚಿತ್ರವಗಳು ಶಾಲೆಯಲ್ಲಿ ಇನ್ನು ಹೆಚ್ಚು ಕಾಲ ಸ್ಥಿತಿಯಲ್ಲಿದೆ. ಮಾಡಿನ ಪೆಟ್ಟಿಗೆ ಬಂಗುಗಳ ಮೇಲೆ ಸೋಗೆ ಅಡ್ಡ ಹಾಕಲಾಗಿದೆ. ಆದುದರಿಂದ ಕೆಳಗಿನ ಕಡ್ಡಿಗೆ ಹಂಚಿನ ಮಾಡು ನಿಲ್ಲುವ ರೀತಿಯಲ್ಲಿಯೇ ಈ ಕಟ್ಟಡಕ್ಕೂ ಹಂಚಿನ ಮಾಡನ್ನು ಈಗಿನ ಪ್ರೆಸಿಡೆಂಟರು ಮಾಡಿಸಿದರೆ ಒಳ್ಳೆಯದು. ರಾಜೀಸ್ತ್ರ ಸ್ವಪ್ನಿಂದೆಂಟರು ಒಂದಾವರ್ತಿ ಈ ಸ್ಥಿತಿಯನ್ನು ಕಣ್ಣಾರೆ ನೋಡಿದರೆ ಉತ್ತಮವಿತ್ತು.

ಕುಂಬಳೆ — ಇಲ್ಲಿಯ ಲೋವರ್ ಎಲಿಮೆಂಟರಿ ಮತ್ತು ಹಾಯರ್ ಎಲಿಮೆಂಟರಿ ಶಾಲೆಗಳನ್ನು ಒಟ್ಟು ಗೂಡಿಸುವುದಕ್ಕಾಗಿ ತಾಲೂಕು ಬೋರ್ಡಿನವರು ಕುಂಬಳೆ ಗದ್ದೆ ಬೈಲಿನಲ್ಲಿ ಯೋಗ್ಯವಾದ ಕಟ್ಟೋಣವನ್ನು ಈಗಿನ ಪ್ರೆಸಿಡೆಂಟರಾದ ರಾಜಶ್ರೀ ಜಿಕೃಷ್ಣ ಭಂಡಾರಿಗಳವರು ಕಟ್ಟಿಸಿದ್ದು ಸ್ತುತ್ಯವಾಗಿದೆ.

ಎರುನಾಕುಲಂ — ಇದೇ ಕಳೆದ ಎಪ್ರಿಲ್ ತಿಂಗಳ ತಾ. ೨೬-೨೭ರಲ್ಲಿ ಸಮಸ್ತ ಕೇರಳ ಬ್ರಾಹ್ಮಣ್ ಯುವಕ ಸಂಘದ ಚತುರ್ಥ ವಾರ್ಷಿಕ ಮಹೋತ್ಸವವು ದಕ್ಷಿಣ ಕನ್ನಡಾ ಜಿಲ್ಲೆಯ ಸುಪ್ರಸಿದ್ಧ ಜಮೀನುದಾರರಾದ ಮಿ। ರಾ। ಮಹಮ್ಮದ್ ಕೋಯ ಬಹದೂರ್ ಇವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು. ಈ ಮಹಾಸಭೆಗೆ ಸುಹೃದ್ದೀಯ ಶ್ರಮಮು ಮ. ಜಂದರರಾವ, ಕೆ. ಯಮ್ ಸೀಶ ಸಾಹೇಬ್ ಬಿ. ಎ. ಬಿ. ಎಲ್ ಎಮ್, ಎಲ್. ಸಿ, ಎ ಕೆ, ಕರ್ನಾಡ್ ಪ್ರೆಸಿಡೆಂಟ್ ಎಮ್. ಎಲ್. ಸಿ. (ಕೊಚ್ಚಿನ್) ಟಿ ಎಮ್. ಪ್ರೆಸಿಡೆಂಟ್ ಸಾಹೇಬ್, ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ್ (ಮಲಬಾರ್) ಯಮ್ ಎಲ್. ಸಿ. ಮುಂತಾದವರು ಮೊದಲಾದ ಮಹನೀಯರನೇಕರು ಆಗಮಿಸಿದ್ದರು. ಸ್ವಾಗತಾಧ್ಯಕ್ಷರವರಿಗಾಗಿ ಕೆಲವು ಮಹತ್ವದ ಠರಾವುಗಳು ಮಂಜೂರಾದವು. ಅಧ್ಯಕ್ಷ ಮಹಾಶಯರು ಸಂದರ್ಭೋಚಿತವಾದ ಭಾಷಣದಿಂದ ಸಭಿಕರನ್ನು ಸಂತೋಷಗೊಳಿಸಿದರು.

ಕುಂಜತ್ತೂರು — ಇದೇ ತಿಂಗಳ ತಾ. ೨೩ನೇ ಗುರುವಾರದಿಂದ ಇಲ್ಲಿಯ ಬೇಡ್‌ಮಿಂಟನ್ ಟೀಮಿನವರು ಟೂರ್ನಮೆಂಟು ಪ್ರಾರಂಭಿಸುತ್ತಾರಾಗಿಯೂ, ಗೆದ್ದ ಟೀಮಿನವರಿಗೆ ೫ ಬೆಳ್ಳಿಯ ಪದಕಗಳನ್ನೂ ರನ್ನರ್ ಅಪ್ ಟೀಮಿನವರಿಗೆ ೫ ಬೆಳ್ಳಿಗಳನ್ನೂ ಕೊಡುತ್ತಾರಾಗಿಯೂ, ಸ್ಪರ್ಧೆಗೆ ನಿಲ್ಲಲಿಚ್ಛಿಸುವ ಜಿಲ್ಲೆಯ ಯಾವ ಟೀಮಿನವರಾದರೂ ಪ್ರವೇಶ ಹಾಸಲು ರೂಪಾಯಿ ೩ ರೊಂದಿಗೆ ತಮ್ಮ ಟೀಮಿನವರ ಹೆಸರುಗಳನ್ನು ಕಾಣಿಸಿ ಇದೇ ತಿಂಗಳ ತಾರೀಕು ೨೦ರ ವರೆಗೆ ಸೆಕ್ರೆಟರಿಯಾದ ಎಮ್. ಕೃಷ್ಣರಾಜ ಶೆಟ್ಟಿಯವರ ಹೆಸರಿಗೆ ಕಳುಹಿಸಬೇಕಾಗಿ ಕೇಳಿಕೊಳ್ಳಲಾಗಿದೆ. ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲಾ ಟೀಮಿನವರು ಕಾಸರಗೋಡು ಟೂರ್ನಮೆಂಟಿನಲ್ಲಿ ಸೋಲದೆ ಅಂದೇ ಮಂಜೇಶ್ವರಕ್ಕೆ ಹೋಗಿ ಅಲ್ಲಿಯ ಟೀಮಿನವರೊಡನೆ ಗೆದ್ದಿರುವರು. ಈಗ ಮಂಜೇಶ್ವರದ ಟೀಮಿನವರು ಪುನಃ ಇಲ್ಲಿ ಬಂದು ಸೋತುಹೋದರು.

ಮಂಜೇಶ್ವರ — ತಾಲೂಕು ಬೋರ್ಡು ಮೆಂಬರ ರಾ। ಲಕ್ಷ್ಮಣ ಶೆಟ್ಟರ ಮೆಂಬರಿಕೆ ಅವಧಿಯು ಈ ತಿಂಗಳ ಅಂತ್ಯದೊಳಗಾಗಿ ಮುಗಿಯಿತು. ೩ ವರುಷಗಳಿಂದ ಓಟರರನ್ನು ಕಂಡು ಕಾಣದ ಇವರು ಪಾನ ಈಗ ಮನೆ ಮನೆಗೆ ಹೋಗಬಂದಿದೆ. ಇವರ ಎದುರಾಳಿಯಾದ ಮೆಂಬರರ ಸಾಧನೆಯೂ ಸಹಾ ನಡೆಯುತ್ತಲೇ ಇದೆ. ಮೆಂಬರರಿಗೆ ಓಟರರ ಗುರ್ತು ಎಂದರೆ ಓಟು ಸಮೀಪಿಸಿದಾಗ. ರಾ। ಚಿಮ್ಮು ಸ್ಪರ್ಧೆಗಳಿಗೆ ಸಹಾ ಹೆಚ್ಚಿನ ಪ್ರೋತ್ಸಾಹ ದಯಪಾಲಿಸಬೇಕೆಂದು ಪ್ರಾರ್ಥಿಸುವರು!

ಕೊಡಲ್ಪಡುವ [illegible] ಬ್ಯಾರುಗಳು.

ಬಂದೂಕು ಮತ್ತು ಮೋಟಾರು ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮ ಹೊಸ ವಿಚಾರಿಸಿಕೊಳ್ಳಿರಿ ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,

ಮದ್ದುಗುಂಡುಗಳನ್ನು ಧಾರಾಳವಾಗಿ ಆಮದು ಮಾಡುವವರು.

ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ;

210, ಅಬ್ದುಲ್ ರಹಿಮಾನ್ ರಸ್ತೆ, ಮುಂಬಾಯಿ.

ಶಾಲಾ ಹುಡುಗರಿಗೆ ಬೇಕಾದ

ಗೆರೆ ಹಾಕಿದ ಮತ್ತು ಹಾಕದ ಎಕ್ಸರಸೈಜ ಪುಸ್ತಕಗಳೂ, ಕೋಪಿ ಪುಸ್ತಕಗಳೂ, ಮ್ಯಾಪು ಡ್ರೋಯಿಂಗ್ ಪುಸ್ತಕಗಳೂ, ಡ್ರೋಯಿಂಗ್ ಪುಸ್ತಕಗಳೂ, ಪೆನ್ಸಿಲು ಕಂಪಾಸ್ ಬಾಕ್ಸ, ಶಾಯಿ ಕುಪ್ಪಿ ಮೊದಲಾದ ಸ್ಟೇಶನರಿ ಸಾಮಾನುಗಳೂ ಇವೆ.

ಲೆಜ್ಜರ್, ಜರ್ನಲ್ಸ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಸಾಮಾನುಗಳು ಯಾವಾಗಲೂ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

Liveliness-zip-pep-you get that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

Exide

THE LONG-LIFE BATTERY

The C. P. C. Co., Ltd.,
MANGALORE.

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.

ಬಾಟ್ಲಿವಾಲರ ಟಾನಿಕ್ [illegible]—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಶಕ್ತಿ ಕೊಡುವ ಔಷಧ ಕ್ರಯ ೧೪.

ಬಾಟ್ಲಿವಾಲರ ಕಾಲರ್ ಆರ್ ಟಾನಿಕ್—[illegible], [illegible] ಎದೆನೋವು, ಈ ಎಲ್ಲಾ ತರದ ರೋಗಗಳಿಗೂ ಒಳ್ಳೇ ಔಷಧ ಕ್ರಯ ೧೩.

ಬಾಟ್ಲಿವಾಲರ ಟೈಫಾಯಿಡ್ ಮಿಕ್ಸ್ಚರ—[illegible] ಮತ್ತು [illegible] ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಕ್ರಯ ೧೪.

ಬಾಟ್ಲಿವಾಲರ ಕ್ವಿನೀನ ಟೇಬ್ಲೆಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೪—೦. ರೂ. ೧—೪—೦. ೧—೧೨—೦.

ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ತಂತಿವಿಳಾಸ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

ವಿಜಂಟರು ಬೇಕಾಗಿದ್ದಾರೆ. Sayani Road. P. O. Cadell ad, Bombay: No. 14.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ—ತೀರ್ಥಹಳ್ಳಿ—ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಿಗ್ಗೆ ೯ ಘಂಟೆಗೆ ಹೊರಡುತ್ತಾ ಇದ್ದುದು ಸರಿಯಷ್ಟೆ. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. ೧೫—೮—೧೯೨೮ರ ಆರಭ್ಯ ಶಿವಮೊಗ್ಗಾದಿಂದ ಬೆಳಗ್ಗೆ ೮ವರೆ ಘಂಟೆಗೆ ಹೊರಡಲು ಏರ್ಪಾಡು ಮಾಡಿದೆ.

ತೀರ್ಥಹಳ್ಳಿ—ಸಾಗರರಸ್ತೆ.

ಅನಂತಪುರ—ಸಾಗರಕ್ಕೆ 0—8—0. ತೀರ್ಥಹಳ್ಳಿ—ಸಾಗರಕ್ಕೆ ೨—೮—೦.

ಆರಗ, ಗುಡ್ಡೇಕೊಪ್ಪ, ಕೋಣಂದೂರು, ಹಾರೊಗೆರೆ, ಹುಮಚದಕಟ್ಟೆ, ರಿಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಮಳೆಗಾಲ ದೆಸೆಯಿಂದ ಕಳೆದ ಜೂನ್ ತಾ. ೮ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಖು ೬—೧೧—೧೯೨೮ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾ ಭಟ್,

ಮಾಲಿಕ,

ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಅಸಲಿ ಉತ್ತಮ ತರಹದ ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲೋಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ.—ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಹಾಕಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.

ವಿವಿಧ ಸಮಾಚಾರಗಳು.

ಅಫಘಾನದ ವಾರ್ತೆ.

ಕಾಬೂಲಿನ ಸಮೀಪದ ಲೋಗಾರ ತಗ್ಗಿನಲ್ಲಿ ಯುದ್ಧವು ನಡೆಯುತ್ತಿದೆಯಂತೆ. ನಾದಿರಖಾನರ ಮತ್ತು ಅವರ ಸಹೋದರ ಹಾಮಷಮುದರ ಸೈನ್ಯಗಳು ಈ ಸ್ಥಳದಲ್ಲಿ ಮುಂದರಿಸಿ ಹೋದವುಗಳು. ಗಜನಿಯೂ ಅಮಾನುಲ್ಲನ ವಶದಲ್ಲಿಯೇ ಇದೆ. ಗಜನಿಯ ಸುತ್ತಮುತ್ತಲೂ ಯುದ್ಧಗಳು ನಡೆಯುತ್ತಿವೆಯಂತೆ. ಲೋಗಾರದಲ್ಲಿ ನಡೆದ ಯುದ್ಧದಲ್ಲಿ ನಾದಿರಖಾನರ ಕಡೆಯವರಿಗೆ ಜಯವು ದೊರಕಲಿಲ್ಲ. ಏಕೆಂದರೆ ಅವರನ್ನು ಹಜರತ್ ಗೌಸುದ್ದೀನರ ಕೈಕೆಳಗಿನ ಗಿಲ್‌ಜ್ಯಾ ಸೈನ್ಯದವರು ಅವರಿಗೆ ಮೋಸವನ್ನು ಮಾಡಿದರು. ಇದೇ ರೀತಿ ಜಗನಿಯ ಸಮೀಪವೂ ತಮಗೇನೇ ಜಯವು ಲಭಿಸುವದೆಂದು ಹಬೀಬುಲ್ಲನ ಕಡೆಯವರು ತಿಳಿಕೊಂಡಿರುವರು. ಕಾಬೂಲಿನ ಯುದ್ಧದ ಮಂತ್ರಿಯಿಂದ ಪೇಶಾವರದಲ್ಲಿರುವ ಬಾಚಾ-ಇ-ಸಾಕೋವಿನ ವ್ಯಾಪಾರಿ ಏಜಂಟನಿಗೆ ತಂತಿ ಬಂದಿರುತ್ತದೆ. ಅದರಲ್ಲಿ "ಗಜನಿಯ ಸಮೀಪ ನಮ್ಮ ಸೈನ್ಯಗಳೊಳಗೂ ಅಮಾನುಲ್ಲಾಖಾನರ ಸೈನ್ಯಗಳೊಳಗೂ ಭಯಂಕರವಾದ ಜಗಳವು ನಡೆಯಿತು. ವೈರಿಗಳು ಸೋತರು. ಮುಕೂರಿನ ತನಕ ಅವರು ಓಡಿಸಲ್ಪಟ್ಟರು. ಅವರೊಡನಿದ್ದ ಮೋಟರುಗಳನ್ನೂ, ಫಿರಂಗಿಗಳನ್ನೂ, ಗುಂಡುಗಳನ್ನೂ ಗುಂಡು ಮದ್ದನ್ನೂ ನಾವು ಸ್ವಾಧೀನಪಡಿಸಿಕೊಂಡೆವು. ಮುಕೂರಿನ ವರೆಗಿನ ರಾಜ್ಯವು ಈಗ ನಮ್ಮ ಕೈಕೆಳಗಿದೆ" ಎಂದಿದ್ದಿತು.

ಕಾಬೂಲ ದಂಗೆಯಲ್ಲಿ ಒಬ್ಬ ಶೂರ ಪುರುಷನಾದ ಮಹಮ್ಮದ್ ಅಲಮಖಾನನು ವಧಿಸಲ್ಪಟ್ಟನೆಂಬ ವಾರ್ತೆಯು ನಿಜವೆಂದು ನಂಬಲಾಗುವುದಿಲ್ಲ. ಆತನು ಗಾರ್ಡೆಜಿನಿಂದ ಬಂದು ಕಾಬೂಲಿನಲ್ಲಿರುವನೆಂದು ತಿಳಿದುಬರುತ್ತದೆ. ಜನರಲ್ ನಾದಿರಖಾನರು ಒಮ್ಮೆ ಸೋತರೂ, ಈಗ ಅವರೂ ಅವರ ಸಹೋದರನೂ ಕೂಡಿ ಕಠಿಣವಾದ ಸೈನ್ಯವನ್ನು ಸಂಗ್ರಹಿಸುತ್ತಿರುವರಂತೆ. ಅಮಾನುಲ್ಲಾರವರ ಮೊದಲನೆಯ ಪುತ್ರನು ಅವರ ಕೂಡೆ ಒಳಸಂಚಿನಿಂದ ಇರುವನೆಂದು ಬಾಚಾ-ಇ-ಸಾಕೋವಿನಿಂದ ವಧಿಸಲ್ಪಟ್ಟನು. ಸೋಹಿಡಮನು ಮತ್ತು ಕೋಹಿಸ್ತಾನಿನಿಂದ ಬಾಚಾ-ಇ-ಸಾಕೋವು ಹೊಸದಾದ ಸಾವಿರ ಸೈನ್ಯಕ್ಕಾಗಿ ಕೇಳಿಕೊಂಡಿರುವನು.

ಕೇರಳಾ ಹಿಂದೂ ಪರಿಷತ್ತು.

ಮೊದಲನೆಯ ಅಖಿಲ ಕೇರಳ ಹಿಂದೂ ಪರಿಷತ್ತು ತಿರುನಾವಾಯಿಯಲ್ಲಿ ಕಳೆದ ನಾಲ್ಕನೆಯ ತಾರೀಕಿನ ದಿನ ಸಂಜೆ ನಾಲ್ಕು ಘಂಟೆಯ ಹೊತ್ತಿಗೆ ಪಂಡಿತ ಮದನಮೋಹನ ಮಾಲವೀಯರವರ ಅಧ್ಯಕ್ಷತೆಯಲ್ಲಿ ಜರಗಿತು. ಸುಮಾರು ೨ ಸಾವಿರ ಮಂದಿ ಬಂದಿದ್ದರು. ಹಲವು ಮಂದಿ ಮಹಿಳೆಯರೂ ಬಂದಿದ್ದರು. ಸ್ವಾಗತಾಧ್ಯಕ್ಷರಾದ ಪಟ್ಟತಿಲ ನಾರಾಯಣ ಮೆನನರವರು ತಮ್ಮ ಸ್ವಾಗತ ಭಾಷಣದಲ್ಲಿ ಹಿಂದಿನ ದಿನ ಮಳೆಗಾಳಿಯಿಂದ ವಿಶೇಷ ತೊಂದರೆಯುಂಟಾದರೂ, ಜನರು ಎದೆಗುಂದಬಾರದೆಂದೂ, ಪಂಡಿತ ಮದನಮೋಹನ ಮಾಲವೀಯ, ಡಾ। ಮುಂಜೆ ಮೊದಲಾದ ಮಹಾ ಪುರುಷರ ಆಗಮನದ ಕುರಿತಾಗಿ ಆನಂದಪಡಬೇಕೆಂದೂ ವಿವರಿಸಿ, ಅಧ್ಯಕ್ಷಸ್ಥಾನವನ್ನು ವಹಿಸಲು ಪಂಡಿತಜೀಯವರನ್ನು ಕೇಳಿಕೊಂಡರು. ಪಂಡಿತ ಮದನಮೋಹನ ಮಾಲವೀಯರವರು ತನ್ನ ಅಧ್ಯಕ್ಷ ಭಾಷಣದಲ್ಲಿ "ದೇಶದ ಬಗ್ಗೆ ಹೋರಾಡುತ್ತಿದ್ದ ನಾಯರರ ವಿದ್ಯಾರ್ಥಿಯೊಬ್ಬನು ಮೃತಪಟ್ಟುದರ ಬಗ್ಗೆ ದುಃಖಿಸಬೇಕಾಗಿದೆ. ಆದರೂ ಅದರಿಂದ ಎದೆಗುಂದಬಾರದು. ನಮ್ಮಲ್ಲಿ ಹಳೇಕಾಲದಲ್ಲಿ ಇದ್ದ ವಿದ್ಯಾಶಿಕ್ಷಣೆಯು ಈಗ ಇರುವುದಿಲ್ಲ. ಈಗಿನಷ್ಟು ಮುಂದೆ ಇರಬಾರದು. ಅದರೆ ಹಾಗಾಗಬಾರದು. ಬ್ರಾಹ್ಮಣರು ವೇದಾಭ್ಯಾಸವನ್ನು ತ್ಯಜಿಸಬಾರದು; ಬ್ರಾಹ್ಮಣ, ಕ್ಷತ್ರಿ, ವೈಶ್ಯ, ಶೂದ್ರ ಎಂಬ ಜಾತಿಭೇದಗಳಿಲ್ಲದೆ, ಆರ್ಯರ ವಿದ್ಯೆಯನ್ನು ಅಭ್ಯಾಸಿಸಬೇಕು. ಅದರಿಂದಲೇ ಹಿಂದೂಗಳು ದೇವತಾಸಮಾನರಾಗುವರು. ಆದರೆ ಹಿಂದೂಗಳು ಈಗ ತಮ್ಮ ಹಿರಿಯರ ವಿದ್ಯೆಯನ್ನು ಅಭ್ಯಾಸಿಸುವುದರ ಬದಲು ಪರಕೀಯರ ವಿದ್ಯೆಯನ್ನು ಕಲಿಯಲು ಉತ್ಸುಕರಾಗಿರುವರು. ಹಿಂದೂಗಳು ಧಾರ್ಮಿಕ ಶಿಕ್ಷಣೆಯ ಬಗ್ಗೆ ಊರೊಳ್ಳೆಲ್ಲಾ ಸಾರುತ್ತಾ ಹಿಂದೂ ಶಿಕ್ಷಣೆಯನ್ನು ಪಾಶ್ಚಿಮಾತ್ಯರೂ ಪಡೆಯುವಂತೆ ಮಾಡಬೇಕು. ಯಾವ ವಿದೇಶಿ ಭಾಷೆಯನ್ನು ಕಲಿತರೂ ಸಂಸ್ಕೃತವನ್ನು ಅಲಕ್ಷಿಸಬಾರದು. ಅದನ್ನು ಚೆನ್ನಾಗಿ ಅಭ್ಯಾಸಿಸಬೇಕು. ಹಿಂದೆ ಮಲಬಾರಿನಲ್ಲಿ ಬ್ರಾಹ್ಮಣ ವಿದ್ವಾಂಸರಿದ್ದರು. ನಾಯರ ವೀರರಿದ್ದರು. ಈಗ ಅವರಂತಹ ಮನುಷ್ಯರಿಲ್ಲದಿದ್ದುದೇ ಶೋಚನೀಯ. ಅವರಾರೇ ಪರಕೀಯರ ಆಳ್ಕೆಗೆ ಒಳಪಟ್ಟಿದ್ದರೂ, ಅವರ ಶಿಕ್ಷಣೆಗೆ ಯಾರ ತಡೆಯೂ ಇರಲಿಲ್ಲ. ನಮ್ಮ ನಮ್ಮ ಶಿಕ್ಷಣೆಗೆ ಬೇರೆಯವರ ಆತಂಕವಿರಲಾರದು. ಆದಕಾರಣ, ನಮ್ಮ ವಿದ್ಯೆಯ ಉನ್ನತಿಗಾಗಿ ಕೇರಳದಲ್ಲೊಂದು ಹಿಂದೂ ಸಭೆಯನ್ನು ನಿರ್ಮಿಸಬೇಕು. ನಂಬೂದಿರಿ ಬ್ರಾಹ್ಮಣರಲ್ಲಿರುವ ಘರದಾಕ್ರಮವು ತೀರ ಹಾಳು, ಮತ್ತು ಮದುವೆಯ ಕ್ರಮವೂ ಅಂತೆಯೇ ಮತವಿರೋಧವಾದುದಾಗಿದೆ. ಇನ್ನು ತೀಯ ಮೊದಲಾದವರನ್ನು ಅಸ್ಪೃಶ್ಯರೆಂದು ದೂರಮಾಡುವುದೂ ಘೋರಾಸ್ಪದವಿದೆ. ಇಂತಹ ಪಾಪಕರವಾದ ಕಟ್ಟುಕಟ್ಟಳೆಗಳನ್ನು ತ್ಯಜಿಸಿದ ವಿನಹ ಸಮಾಜದ ಅಭಿವೃದ್ಧಿಯಾಗದು" ಎಂದು ವಿವರಿಸಿದರು. ಅಷ್ಟರಲ್ಲಿ ಚೆನ್ನಾಗಿ ಮಳೆಗಾಳಿ ಬಂದು ಚಪ್ಪರವು ಮುರಿದು ಬಿದ್ದುದರಿಂದ ಭಾಷಣವನ್ನು ನಿಲ್ಲಿಸಿ ಕಾರ್ಯಕ್ರಮಗಳನ್ನು ಮರುದಿನಕ್ಕೆ ಮುಂದರಿಸಬೇಕಾಯಿತು. ಮರುದಿನವೂ ಅಧ್ಯಕ್ಷರು ಅಸ್ಪೃಶ್ಯತಾ ನಿವಾರಣೆಗಾಗಿ ಹಲವು ಸೂಚನೆಗಳನ್ನು ಕೊಟ್ಟರು. ಅಸ್ಪೃಶ್ಯರಿಗೆ ದೇವಳ ಪ್ರವೇಶದ ಅಧಿಕಾರವನ್ನು ಕೊಡಬೇಕೆಂದು ಸೂಚಿಸಿದರು. ಅಧ್ಯಕ್ಷರ ಭಾಷಣವು ಮುಗಿದ ತರುವಾಯ ಹಲವು ಠರಾವುಗಳು ಮಂಜೂರಾದವು. ಕೇರಳ ಹಿಂದೂ ಮಹಾಸಭೆಯೊಂದನ್ನು ನಿರ್ಮಿಸಬೇಕೆಂದೂ, ಅದಕ್ಕೆ ಬೇರೆ ಬೇರೆ ಕಡೆಗಳಲ್ಲಿ ಶಾಖೆಗಳನ್ನು ನಿರ್ಮಿಸಬೇಕೆಂದೂ, ಈಗಿನ ಅಸ್ಪೃಶ್ಯತಾ ಕ್ರಮವನ್ನು ಹೋಗಲಾಡಿಸಿ, ಹಿಂದೂ ಸಮಾಜದಲ್ಲಿ ಒಂದು ಪರಿವರ್ತನೆಯನ್ನು ಮಾಡಬೇಕೆಂದೂ, ದೇವಳಗಳಲ್ಲಿ ನಡಿಯುವ ಪ್ರಾಣಿಹತ್ಯವನ್ನು ನಿಲ್ಲಿಸಬೇಕೆಂದೂ, ಕೇರಳದ ಜನರ ಶಾರೀರಕ ಬಲವು ಕುಗ್ಗಿರುವುದರಿಂದ ಅದನ್ನು ಅಭಿವೃದ್ಧಿಗೊಳಿಸಬೇಕೆಂದೂ, ಬೇರೆ ಮತವನ್ನು ಪ್ರವೇಶಿಸಿರುವ ತಮ್ಮ ಸಹೋದರುಗಳನ್ನು ಪುನಃ ಹಿಂದೂ ಮತಕ್ಕೆ ಸೇರಿಸಿಕೊಳ್ಳಬೇಕೆಂದೂ ಹಲವು ಠರಾವುಗಳು ಮಂಜೂರಾತಿಯನ್ನು ಹೊಂದಿದುವು.

ಕಟ್ಟಕಡೆಗೆ ಕೃತಜ್ಞತಾ ಸೂಚನೆ, ಅಸ್ಪೃಶ್ಯರ ಕಡೆಯ ಭಾಷಣ, ಇವುಗಳಾದ ಮೇಲೆ ಪರಿಷತ್ತು ಕೊನೆಗಂಡಿತು.

ಮುಂಬಾಯಿಯ ಮುಷ್ಕರ.

ಕಳೆದ ಶನಿವಾರ ಮಧ್ಯರಾತ್ರಿಯಿಂದ ಮುಂಬಾಯಿಯ ಗಲಭೆಯು ತಕ್ಕಮಟ್ಟಿಗೆ ಶಾಂತವಾಯಿತು. ಅದು ವರೆಗೆ ಬೆಂಡಿಬಜಾರ, ನಾಗಪಾಡಾ, ಡೊಂಗ್ರಿ ಮೊದಲಾದ ಮುಸಲ್ಮಾನ ವಾಸದ ಮಾರ್ಗಗಳಲ್ಲಿ ಜಗಳಗಳು ನಡೆಯುತ್ತಿದ್ದು ಸುಮಾರು ೬೦ ಮಂದಿಗೆ ಎರಡೂ ಪಕ್ಷಗಳಲ್ಲಿ ಇರಿತ ಉಂಟಾಯಿತು. ಒಟ್ಟಾರೆ ೭ ಮಂದಿ ಸತ್ತುಹೋದರು. ವಿಲಿಬಂದಿಯವರನ್ನು ಮುಚ್ಚಿ ಮುಚ್ಚಿ ಮಾರ್ಗದ ಸಂದುಗಳಲ್ಲಿ ಸ್ಥಾಪಿಸಿದ ಕಾರಣ ಜಗಳಗಳು ಹೆಚ್ಚಲಿಲ್ಲ. ಸರಕಾರದವರು ಹೆಚ್ಚು ಜನರು ಒಂದೇ ಕಡೆಯಲ್ಲಿ ಕೂಡಿ ಸಭೆ ಜರಗಿಸಬಾರದೆಂದೂ, ಆಯುಧಪಾಣಿಗಳಾಗಿ ಸಂಚರಿಸಬಾರದೆಂದೂ ಹುಕುಮು ಕೊಟ್ಟುದರಿಂದ ಶಾಂತತೆಯು ಮೆಲ್ಲ ಮೆಲ್ಲನೆ ಉಂಟಾದುದಲ್ಲದೆ, ಸದ್ಯದಲ್ಲಿಯೇ ಎಲ್ಲಾ ತೊಂದರೆಗಳೂ ನಿಂತು ಹೋಗುವವೆಂದು ನಂಬಲು ಅವಕಾಶವಾಯಿತು. ಒಟ್ಟಾರೆಯ ಮೇಲೆ ಸತ್ತವರ ಸಂಖ್ಯೆಯು ೧೩, ಮತ್ತು ಗಾಯ ಹೊಂದಿದವರ ಸಂಖ್ಯೆಯು ೧೧೮ ಎಂದು ತಿಳಿದು ಬರುತ್ತದೆ. ಮುಂಬಾಯಿ ಪಟ್ಟಣಿಗರ ಪ್ರತಿನಿಧಿಗಳು ಒಟ್ಟಾಗಿ ಸಭೆ ಕೂಡಿ, ಗಲಭೆಗಳನ್ನು ನಿಲ್ಲಿಸಲು ಸರಕಾರಕ್ಕೆ ಬೇಕಾದ ಸಲಹೆಗಳನ್ನು ಕೊಡತಕ್ಕದ್ದೆಂದು ಒಂದು ಕಮಿಟಿಯನ್ನು ನೇಮಿಸಿದರು. ಮಹಮ್ಮದೀಯರೂ, ಪಠಾಣರೂ ಸುಮಾರು ೫೦೦ ಮಂದಿ ಆಯುಧಪಾಣಿಗಳಾಗಿ ಒಂದು ಹೊಸ ಮೆರವಣಿಗೆಯನ್ನು ಮಾಡಿ ಗಿರಗಾವ ಹಾದಿಯಾಗಿ ಹೊರಡಿದರು. ಪೋಲೀಸರು ಸಾಹಸದಿಂದ ಅವರ ಆಯುಧಗಳನ್ನು ಕಿತ್ತುಬಿಟ್ಟರು. ಮುಂಬಾಯಿ ಗವರ್ನರರು ಹೋಮ್ ಮೆಂಬರರನ್ನೂ, ಪೋಲೀಸ ಕಮಿಶನರನ್ನೂ ಒಡಗೂಡಿ ಗಲಭೆಗಳಾದ ಜಾಗಗಳೆಲ್ಲವನ್ನೂ ಸಂದರ್ಶಿಸಿದರು. ಪೋಲೀಸರು ೩೦೦ ಮಂದಿಯನ್ನು ಕೈಸೆರೆ ಮಾಡಿ ಅರ್ಥರ್ ರಸ್ತೆಯ ಜೈಲಿನಲ್ಲಿ ಸೇರಿಸಿಬಿಟ್ಟರು.

ಮುಂಬಾಯಿ ಪಟ್ಟಣಿಗರ ಪ್ರತಿನಿಧಿಗಳು ಹೋಮ್ ಮೆಂಬರರನ್ನು ಭೇಟಿಯಾಗಿ ಈ ಕಲಹವನ್ನು ನಿಲ್ಲಿಸುವ ಉಪಾಯಗಳ ಕುರಿತಾಗಿ ಚರ್ಚಿಸಿದರು. ಎರಡು ಪಕ್ಷದ ಮುಖಂಡರು ಈ ಕಲಹವು ಕೇವಲ ಪಠಾಣರಿಂದಲೇ ಪ್ರಾರಂಭಿಸಲ್ಪಟ್ಟಿತೆಂದು ಒಪ್ಪುವರು. ಆದ ಕಾರಣ ಪಠಾಣರನ್ನೇ ಹಿಡಿದು ಕೈದು ಮಾಡಿ ಬಿಟ್ಟರೆ ಗಲಭೆಗಳು ನಿಲ್ಲುವವೆಂದು ಎರಡು ಪಕ್ಷದವರೂ ನಿರ್ಣಯಿಸಿದರು.

ಮಂಗಳವಾರ ದಿನ ಗಿರಣಿ ಮುಷ್ಕರವು ಮೊದಲಿನಂತೆಯೇ ಇದ್ದಿತು. ೧೫ ಗಿರಣಿಗಳ ಹೊರತು ಉಳಿದ ಗಿರಣಿಗಳೆಲ್ಲವೂ ಬಂದುಮಾಡಲ್ಪಟ್ಟವು. ಇವುಗಳಲ್ಲಿಯೂ ಕೂಡ ಸರಿಯಾದ ಕೆಲಸವು ನಡೆಯುತ್ತಿರಲಿಲ್ಲ. ಸರಕಾರದವರು ಅಧಿಕಾರಿಗಳೊಳಗೂ ಮತ್ತು ಧಣಿಗಳೊಳಗೂ ಮಾತನಾಡಿ ರಾಜಿಮಾಡಲು ಪ್ರಯತ್ನಿಸಿದ್ದು ಸಫಲವಾಗಲಿಲ್ಲ. ಆದರೂ ಪಟ್ಟಣದ ಗೊಂದಲಗಳೆಲ್ಲವೂ ಪೂರ್ಣವಾಗಿ ನಿಂತಿದ್ದುವು. ಸಿಖ್ಖರು ಕಿರ್ಪಾನ್‌ಗಳನ್ನು ಹಿಡಿದುಕೊಂಡು ಹೋಗಬಾರದೆಂದು ಸರಕಾರದವರು ಹುಕುಮು ಕೊಟ್ಟರು. ಸಿಖ್ಖರ ಗಿರಣಿ ಅಧಿಕಾರಿಗಳು ತಮ್ಮ ಗಿರಣಿಯನ್ನು ಪುನಃ ತೆರೆಯುವ ಬಗ್ಗೆ ಉತ್ತರ ದೇಶದಿಂದ ಕೆಲಸಗಾರರನ್ನು ತರಬೇಕೆಂದು ನಿಶ್ಚಯಿಸಿರುವರಂತೆ.

ಕಳೆದ ಮಂಗಳವಾರ ೩೮ ಗಿರಣಿಗಳಲ್ಲಿ ಕೆಲಸವು ನಡೆಯುತ್ತಿದ್ದಿತು. ಇವುಗಳಲ್ಲಿ ೩೬ ಗಿರಣಿಗಳಲ್ಲಿ ಮಾತ್ರ ಪೂರ್ಣ ಕೆಲಸವು ನಡೆಯುತ್ತಿದ್ದು ೩೮ ಸಾವಿರ ಕೂಲಿಗಳು ದುಡಿಯುತ್ತಿದ್ದರು. ಗವರ್ನರರು ಗಿರಣಿ ಮಾಲೀಕರ ಸಂಘ, ಮತ್ತು ಗಿರಣಿ ಕಾಮಗಾರ ಸಂಘ ಇವೆರಡು ಸಂಘದವರನ್ನು ಕೂಡಿಸಿ ಒಂದು ಉಪಾಯವನ್ನು ಜರಗಿಸುವದರಿಂದ ಇಷ್ಟರಲ್ಲಿಯೇ ರಾಜಿಯಾಗುವದೆಂದು ಜನರು ತಿಳಿಕೊಂಡರು. ಉಭಯ ಪಕ್ಷದ ಸಮುದಾಯದಲ್ಲಿ ಗವರ್ನರ ದೊರೆಗಳವರು ಗಿರಣಿ ಮಾಲೀಕರೆಂದೂ ಗಿರಣಿ ನೌಕರರೆಂದೂ ಎರಡು ಪಕ್ಷದವರು ಏಕಾಂತದಲ್ಲಿ ವಿಚಾರಿಸಿ ರಾಜಿಮಾಡಿಕೊಳ್ಳಬೇಕೆಂದರು. ಎರಡಾದರೆ ಹೊಸ ಸಮಯ ಪಟ್ಟಣಗಳೊಳಗೂ ಚರ್ಚೆಯು ನಡೆಯುತ್ತದೆ, ಯಾವ ತರದ ರಾಜಿಯೂ ಉಂಟಾಗಲಿಲ್ಲ. ತರುವಾಯ 'ಟ್ರೇಡ್ ಡಿಸ್ಪ್ಯೂಟ್ಸ್ ಎಕ್ಟ್' ಎಂಬ ಕಾನೂನನ್ನು ಜಾರಿಗೆ ತರುವದಾಗಿಯೂ, ಆಗ ರಾಜಿಯಾಗಬಹುದಾಗಿಯೂ ಗವರ್ನರರು ತಿಳಿಸಿದರು.

ಉಡುಪಿ.

ತಾ. ಪತ್ರ 2. ಹೊಸತು. 8-5-'29.

ಜನಮರುಳು:—ಇಲ್ಲಿಗೊಬ್ಬ ಸನ್ಯಾಸಿಯು ಬಂದಿರುವನು. ಹೆಸರೇನೆಂದೂ ಊರಾವುದೆಂದೂ ಹೇಳುವುದಿಲ್ಲವಂತೆ. ಈತನು ಬಂದ ಒಂದೆರಡು ದಿನಗಳಲ್ಲಿ ಅನಂತೇಶ್ವರ ದೇಗುಲದ ಮುಂದುಗಡೆಯ ಬೀದಿಯಲ್ಲಿ ನೆಲೆಸಿದ್ದನಾಗಿದ್ದು, ಈಗ, ಸ್ಮಶಾನಭೂಮಿಯಾದ ಬೀಡಿನ ಗುಡ್ಡೆಯಲ್ಲಿರುವನು. ಅಲ್ಲಿಗೆ ಅವನನ್ನು ನೋಡಲು ದಿನಂಪ್ರತಿ ನೂರಾರು ಜನರು ಹೋಗುತ್ತಿರುವರು. ಅವನು ಗುಡ್ಡೆಯಲ್ಲಿರುವ ಒಂದು ಚಿಕ್ಕ ಕಟ್ಟಡದಲ್ಲಿ ಆಸೀನನಾಗಿರುವನು. ಸದಾ ಅವನ ಮುಂದೆಯೊಂದು ಅಗ್ನಿಕುಂಡವಿರುವದು. ಜನರು ಅವನಿಗೆ ಹಣ್ಣು ಹಂಪಲುಗಳನ್ನೂ, ಹಾಲು, ಕಾಫಿ, ಎಳನೀರುಗಳನ್ನೂ ಸಂತೋಷದಿಂದ ಕೊಡುತ್ತಿರುವರು. ತಮ್ಮ ಮನೋಗತವು ಕೈಗೂಡುವಂತೆ ಅವನೊಡನೆ ಪ್ರಾರ್ಥಿಸುವರು. ಅವನು ಒಂದಿಷ್ಟು ಬೂದಿಯನ್ನೋ, ಅಥವಾ ಇನ್ನಾವುದನ್ನೋ ಕೊಟ್ಟು, ಸೌಖ್ಯವಾಗುವುದೆಂದು ಹರಸಿ ಅವರನ್ನು ಕಳುಹುವನು. ಈಗ ಬೇಗನೆ ರೋಗಿಗಳೂ, ಕುರುಡರೂ ಕುಂಟರೂ ಬಂದು ತಮ್ಮನ್ನು ಸರಿಗೊಳಿಸಬೇಕೆಂದು ಪ್ರಾರ್ಥಿಸುತ್ತಿರುವರು. ಎಲ್ಲರೂ ಅವನನ್ನು ಪರಮ ವಿಶ್ವಾಸದಿಂದ ಕಾಣುತ್ತಿರುವರು. ಒಬ್ಬರು ಮಾಡಿದರೆಂದು ಇನ್ನೊಬ್ಬರು; ಇನ್ನೊಬ್ಬರು ಮಾಡಿದರೆಂದು ಮತ್ತೊಬ್ಬರು; ಹೀಗೆ ಅಂಧಮನೋವೃತ್ತಿಯುಳ್ಳವರಾಗಿ ಸಾಧುವನ್ನೇ ಗಗನಕ್ಕೇರಿಸಿರುವವರಾದರೂ, ಒಂದಿಷ್ಟು ವಿಚಾರ ತಕ್ಕವರಾದರೆ ತಮ್ಮ ಮರುಳುತನಕ್ಕೆ ತಾವೇ ಪಶ್ಚಾತ್ತಾಪ ಸೂಚಿಸದಿರರು.

ಮಹಾಸಭೆ:—ಬಂಟರ ಯಾನೆ ನಾಡವರ ಮಹಾಸಭೆಯು ಇಲ್ಲಿ ತಾ. ೧೫ಕ್ಕೆ ಕೂಡುವುದಾಗಿ ಕೇಳುತ್ತೇವೆ. ಶ್ರೀಗಳಾದ ಎಚ್. ರಾಮಯ್ಯ ಶೆಟ್ಟರು ಸ್ವಾಗತಾಧ್ಯಕ್ಷರಾಗಿಯೂ ಚಿಕ್ಕಪ್ಪ ಭಂಡಾರಿಗಳು ಮಹಾಸಭೆಯ ಅಧ್ಯಕ್ಷರಾಗಿಯೂ ಆರಿಸಲ್ಪಟ್ಟಿರುವರೆಂದು ತಿಳಿದು ಬರುತ್ತದೆ. ಆ ದಿನ ರಾತ್ರಿ ಕೆಲವು ವಿದ್ಯಾರ್ಥಿಗಳು ಪಂಡಿತ ಶ್ರೀ ವೆಂಕಟಾಚಾರ್ಯರಿಂದ ವಿರಚಿತವಾದ 'ರಕ್ಷಾಬಂಧನ' ಎಂಬ ನವೀನ ನಾಟಕವನ್ನು ಅಭಿನಯಿಸುತ್ತಾರಾಗಿಯೂ ಕೇಳುತ್ತೇವೆ.

ತುಳುವ ಮಹಾಸಭೆ:—ಮುಂದಿನ ಸಪ್ತಾಹದಲ್ಲಿಯೇ "ತುಳುವ ಮಹಾಸಭೆಯ ವಾರ್ಷಿಕ" ಎಂಬ ಪುಸ್ತಕವನ್ನೂ, ಶ್ರೀ ಬಡಕಬೈಲ್ ಪರಮೇಶ್ವರಯ್ಯನವರು "ತುಳು ಕೃಷ್ಣಸಂಧಾನ" ಎಂಬ ಪ್ರಸಂಗವನ್ನೂ ಪ್ರಕಟಿಸುತ್ತಾರಾಗಿ ತಿಳಿದುಬರುತ್ತದೆ.

ಸಂಚಾರ:—ಶ್ರೀಗಳಾದ ಡಿ. ಎ. ಸಾಲ್ಡಾನ್ಹಾ, ಎಮ್. ಎಲ್. ಸಿ. ಕೆ. ಆರ್. ಕಾರಂತ್, ಎಮ್. ಎಲ್. ಸಿ. ಮತ್ತು ಭೂಮಾಲೀಕರ ಸಂಘದ ಜೊತೆ ಕಾರ್ಯದರ್ಶಿಗಳಾದ ಕೆ. ಪದ್ಮನಾಭ ಭಿಡೆ, ಬಿ. ಎ. ಬಿ. ಎಲ್. ರವರು ಈ ತಾಲೂಕಿನ ಹಲವು ಸ್ಥಳಗಳನ್ನು ಸಂಚರಿಸಿ ಸಭೆಕೂಡಿಸಿ ಕಾಲೋಚಿತವಾದ ಹಲವು ಭಾಷಣಗಳನ್ನು ಮಾಡಿದರು. ಅಂತೆಯೇ ಒಂದು ಸಭೆಯು ತಾ. ೨೮—೪—'೨೯ರಲ್ಲಿ ಉಡುಪಿಯಲ್ಲಿ ಜರಗಿತು. ಪರ್ಯಾಯ ಶ್ರೀ ಪಾದಂಗಳವರು ಸಭಾಧ್ಯಕ್ಷಸ್ಥಾನದಲ್ಲಿದ್ದರು. ಅವರು ಸಂಚರಿಸಿದ ಹಲವು ಕಡೆಗಳಲ್ಲಿ ಭೂಮಾಲೀಕರ ಸಂಘದ ಶಾಖೆಗಳನ್ನು ತೆರೆದಿರುತ್ತಾರಾಗಿ ಕೇಳುತ್ತೇವೆ.

ಕರ್ನಾಟಕ ಪರಿಷತ್ತುಗಳು ಬೆಳಗಾಂವಿ, ಮೇ, ೧೯೨೯.

೧ನೆಯ ಕರ್ನಾಟಕ ಏಕೀಕರಣ ಪರಿಷತ್ತು, ತಾ. ೧೧-೧೨—ಸ್ವಾಗತಾಧ್ಯಕ್ಷರು,—ಶ್ರೀ ಬೆಳವಿ ದ. ವಿ. ಎಮ್. ಎಲ್. ಎ. ಅಧ್ಯಕ್ಷರು,—ಶ್ರೀ ರಂಗನಾಥ ದಿವಾಕರ್, ಎಮ್. ಎಲ್. ಸಿ. ಬ್ಯಾರಿಸ್ಟರ್

೧೫ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನ, ತಾ. ೧೨-೧೩-೧೪—ಸ್ವಾಗತಾಧ್ಯಕ್ಷರು,—ಶ್ರೀ ಚೌಗುಲೆ ಅಣ್ಣಪ್ಪನವರು, ಬಿ. ಎ. ಎಲ್. ಎಲ್. ಬಿ. ಅಧ್ಯಕ್ಷರು,—ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಮ್. ಎ.

ಕರ್ನಾಟಕ ಕವಿಗಳ ಸಮ್ಮೇಳನ, ತಾ. ೧೪-೧೫—ಸ್ವಾಗತಾಧ್ಯಕ್ಷರು,—ಶ್ರೀ ಮುಳಬಾಗಿಲ ರಾಘವೇಂದ್ರರಾಯರು, ಬಿ. ಎ. ಅಧ್ಯಕ್ಷರು,—ಶ್ರೀ, ಬಿ. ಎಮ್. ಶ್ರೀಕಂಠಯ್ಯನವರು, ಎಮ್. ಎ. ಬಿ. ಎಲ್.

೩ನೆಯ ಕರ್ನಾಟಕ ಪತ್ರಿಕಾಕಾರರ ಪರಿಷತ್ತು, ತಾ. ೧೪—ಸ್ವಾಗತಾಧ್ಯಕ್ಷರು,—ಡಾ। ಸವಣೂರ ಹಣಮಂತರಾಯರು.

೨ನೆಯ ಕರ್ನಾಟಕ ವೈದ್ಯ ಪರಿಷತ್ತು, ತಾ. ೧೪-೧೫—ಐತಿಹಾಸಿಕ ವಸ್ತು ಪ್ರದರ್ಶನ—ತಾ ೧೨ನೆಯ ದಿವಸ ಪ್ರಾರಂಭ—ಸ್ವಾಗತಾಧ್ಯಕ್ಷರು,—ಶ್ರೀ ಎಸ್. ಎಸ್. ಅಂಗಡಿ, ಬಿ. ಎ. ಎಲ್. ಎಲ್. ಬಿ. ಎಮ್. ಎಲ್. ಸಿ.

ಪ್ರದರ್ಶನ ತೆರೆಯುವವರು—ಡಾ। ಎಮ್. ಎಚ್. ಕೃಷ್ಣಯ್ಯಂಗಾರ್, ಎಮ್. ಎ. ಪಿ. ಎಚ್. ಡಿ. ವೃತ್ತಪತ್ರ ಪ್ರದರ್ಶನ—ತಾ. ೧೪ನೆಯ ದಿನ ಬೆಳಗಿನಲ್ಲಿ ಸ್ವಾಗತಾಧ್ಯಕ್ಷರು,—ಶ್ರೀ ಚಿಕ್ಕೋಡಿ ಪಂಡಿತಪ್ಪನವರು, ಬಿ. ಎ. ಎಮ್. ಎಲ್. ಸಿ. ಪ್ರದರ್ಶನ ತೆರೆಯುವವರು—ಟಿ. ಟಿ. ಶರ್ಮಾ, ಸಂಪಾದಕ ವಿಶ್ವಕರ್ನಾಟಕ.

ಪರಿಷತ್ತುಗಳ ಕಾಲಕ್ಕೆ ಕನ್ನಡನಾಡಿನ ಬೇರೆ ಬೇರೆ ಕಡೆಯ ಸಾಹಿತ್ಯ ಭಕ್ತರೂ, ಕವಿಗಳೂ, ಸಂಗೀತಗಾರರೂ, ಹಾಡು ಹಾಡುವವರೂ, ಯಕ್ಷಗಾನದವರೂ ಬರತಕ್ಕವರಿದ್ದಾರೆ. ಮೈಸೂರು ಆಸ್ಥಾನದ ಸಂಗೀತ ವಿದ್ವಾಂಸರಾದ "ಗಾನವಿಶಾರದ" ಬಿಡಾರದ ಕೃಷ್ಣಪ್ಪನವರೂ, ವೈ. ಪಾ. ವೀಣೆಯ ಶೇಷಣ್ಣನವರ ಶಿಷ್ಯಪರಂಪರೆಯಲ್ಲಿ ಹೆಸರು ಹೊಂದಿದ ಶ್ರೀಮತಿ ತಿರುಮಲೆ ರಾಜಮ್ಮನವರೂ, ಪ್ರೊಫೆಸರ್ ಕೆ. ವಿ. ಅಯ್ಯರ್ ಎಂಬ ಯೋಗಾಸನ ಶರೀರ ವ್ಯಾಯಾಮ ವಿಶಾರದರೂ, ಕೊಳಲೂದುವುದರಲ್ಲಿ ಅಸಮಾನರೆನಿಸಿ ಮೈಸೂರ ಮಹಾರಾಜರಿಂದ ಸನ್ಮಾನಿತರಾದ ಎಚ್. ನರಸಿಂಗರಾಯರೂ ಬರಲಿರುವರು. ಕರ್ನಾಟಕರೆಲ್ಲರೂ ಬೆಳಗಾಂವಿಗೆ ಬಂದು ಏಕತೆಯ ದರ್ಶನಲಾಭವನ್ನೂ, ಸಾಹಿತ್ಯ ಲಲಿತ ಕಲೆಗಳ ಪರಿಚಯಲಾಭವನ್ನೂ ಪಡೆಯಬೇಕಾಗಿ ಬೇಡಿಕೆ.

ಬೆಳಗಾಂವಿ, ತಾ. ೨೮-೪-'೨೯.	ಧಾರವಾಡ ಬಳವಂತರಾಯರು, ಎಮ್. ಎ. ಪಾಟೀಲ ವೀರನಗೌಡರು, ಬಿ. ಎ. ಬಿ. ಎಸ್. ಸಿ. ಗೋಖಲೆ ಕೇಶವರಾಯರು, ಬಿ. ಎ. ಮುಖ್ಯ ಕಾರ್ಯದರ್ಶಿಗಳು.

[illegible] Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

[illegible] Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯಸಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ನೀಲೇಶ್ವರ, ಕಣ್ಣನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸಾವಿರಾರು 4 ಘಂಟೆಗೆ ಮೂಡಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನ್ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೆಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಪ್ಯಾರಜಾನ್ ಸಾಹೇಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ

ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವಿರಾದರೆ ಪ್ರತಿದಿನವೂ ಮೂಡಬಿದರೆ ಕಾರ್ಕಳ ಮಾರ್ಗವಾಗಿಯೂ ಕುಂದಾಪುರ [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ಎರಡ್ಮೂರು ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಕಾರ್ಕಳ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ವಿಸ್ತೃತ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore S. K.

ಮಲೇರಿಯಾನ
ಸರ್ವ ಜ್ವರಸಂಹಾರಿ

ಯುವಕ ವಿದ್ಯಾರ್ಥಿಯು ಲಕ್ಷ್ಯಕ್ಕೆ ತರಕೊಳ್ಳಬಾರದೇ!

ದೇಹದ ಆರೋಗ್ಯವೂ ಮಿದುಳಿನ ಬಲವೂ ಇದ್ದ ಯುವಕರಿಗೆ ವಿದ್ಯಾಭ್ಯಾಸವು ಬಹು ಸುಲಭತರವಾಗಿರುವುದು.

ಆದರೆ ದೇಹದ ಆರೋಗ್ಯವು ಕೆಟ್ಟು ಹೋದಲ್ಲಿ ಮಿದುಳಿನ ಬಲವು ಕುಂದಿರುವದು ಸಹಜವೇ, ಅಂಥಾ ಯುವಕರಿಗೆ ವಿದ್ಯಾಭ್ಯಾಸವು ಅತೀ ಕಷ್ಟತರವಾಗಿದೆ. ಇಂಥಾ ಯುವಕನು ಸಹಾ ವಿದ್ಯಾಭ್ಯಾಸದಲ್ಲಿ ತೇರ್ಗಡೆಹೊಂದಬೇಕಾದರೆ, ದೇಹವು ಆರೋಗ್ಯವುಳ್ಳದ್ದಾಗಿಯೂ ಮಿದುಳು ಶಕ್ತಿವಂತವಾಗಿಯೂ ಇರಬೇಕು. ಕಂಪೌಂಡು ಸಿರಪ್ಪು ಸಾಲಿಸವನ ಎಂಬ ಅವ್ಯತವು ಯುವಕನ ಆರೋಗ್ಯವನ್ನು ಕಾಪಾಡುವದಕ್ಕೂ, ಮಿದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತೀ ಗುಣಕಾರಿಯಾಗಿದೆ.

ಕ್ರಯ 8 ಔನ್ಸಿಗೆ ರೂ. 3—8—0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳಿವೆ.)

ಮಿದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅಹೋ ರಾತ್ರಿ ತಲೆಮಂಡೆ ಬಡಕೊಂಡು ಪ್ರಯಾಸದಿಂದ ಓದುವ ಯುವಕನ ತಲೆ ಮಿದುಳು ಬಹು ಬಿಸಿಯಾಗಿ ತಲೆ ಸಿಡಿತ, ಕಣ್ಣು ನೋವು, ದೃಷ್ಟಿಮಾಂದ್ಯ, ಕಿವಿ, ಮೂಗು, ಹಲ್ಲುಗಳ ವಿವಿಧ ರೋಗಗಳು ಹುಟ್ಟುವವು. ಈ ಅಪಾಯ ರೋಗಗಳು ಪರಿಹಾರವಾಗುವಂತೆಯೂ ಅಥವಾ ಅಂಥಾ ಅಪತ್ತು ರೋಗಗಳು ಹುಟ್ಟದಂತೆಯೂ ಆಯುರ್ವೇದ ಪಿತ್ತಶಮನ ತೈಲದ ಉಪಯೋಗವು ಬಲು ಗುಣಕಾರಿಯಾಗಿದೆ. ಬಹಳ ಹೊತ್ತು ಓದುವ (ಅಥವಾ ಸಿದ್ಧಿ ಕೆಯುವ ಯುವಕನು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಾಕಿಕೊಳ್ಳುವದರಿಂದಲೇ ತಲೆ ಮಿದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವರು.

ಕ್ಲಿಷ್ಟ ಕಾಲದಲ್ಲಿ ಯುಕ್ತ ರೀತಿ ಅನುಸರಿಸುವದು, ಜಾಣ ಯುವಕನ ಬುದ್ಧಿವಂತಿಕೆಯಾಗಿದೆ

ಕ್ರಯ 8 ಔನ್ಸಿಗೆ ರೂ. 3—0—0.

ವಿಶೇಷ ಮಾಹಿತಿಗೂ, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ, ಈ ಯಾರು ಟಿಕ್ಕು ಲವಣಗಳ ಮತ್ತು ಹೋಮಿಯೋಪಥಿ ಮದ್ದುಗಳಿಗೂ ನಮೂನೆ ಮತ್ತು ವೈದ್ಯ ಚಿಕಿತ್ಸೆಗೂ ನಮ್ಮ ದೊಡ್ಡ ಕೆಟಲಾಗಿಗೆ ಕೆಳಗಿನ ಎಡ್ರೆಸಿಗೆ ಬರೆಯಿರಿ.

ಮಲೇರಿಯಾನ ಕಂಪೆನಿ,
ಮಂಗಳೂರು.

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಿಲ್ಲಾ, ಬೇಂಳೆ, ಚಿಕ್ಕಳೆ, ದ್ರಾಕ್ಷಿ, ಅಂಜೂರ, ದಾಳಿಂಬ, ಪನ್ನೀರಳೆ ಮುಂತಾದ ಕಸಿಗಿಡಗಳೂ ಸಿಗುವವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹ ವಿಲ್ಲದೆ ಚೆನ್ನಾಗಿ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಗ್ಗದೆ ಸರಿಯಾಗಿ ಫಲ ಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್ ಸ್ಟ್ರೀಟ್ ಸೋಮು ಯಾಜಿಯವರಲ್ಲಿ ದೊರೆಯುವವು.

ಕೆ. ಮಧ್ವರಾಜ ಶೆಟ್ಟಿ ದಿ. ಕೆನರಾ ನರ್ಸರಿ, ವಿಸಟ್ ಗಾರ್ಡನ್ಸ್, ಕಾರ್ಕಳ ದ. ಕ. 131028	ಕೆ. ವಾಮನ ಶೆಣೈ C/o ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.

ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ,
ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಅತ್ಯುತ್ತಮ ಸೌಕರ್ಯಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀಯ ಜೀವವಿಮಾ ಕಂಪೆನಿಯು.

2 ಜನಪ್ರೀತರೂ, ಪ್ರತಿಷ್ಠಿತರೂ ಆದ ಡೈರೆಕ್ಟರರು.

3 ತುಂಬಾ ಅನುಭವದ ವೈದ್ಯಾಧಿಕ, ವಿಶ್ವಾಸದ ಮತ್ತು ಸೌಹಾರ್ದದ ಆಡಳಿತ.

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆ ಮಾಡಿಸುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಶರ್ತುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ಥ ಮತ್ತು ಪರಿಶ್ರಮಿಯಾದ ಏಜಂಟರುಗಳು ಬೇಕಾಗಿರುವರು.

ಪ್ರಾಸ್ಪೆಕ್ಟಸಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, ಸ್ಪೆಶಿಯಲ್ ಏಜಂಟ್ ದಕ್ಷಿಣ ಕ್ಯಾನರಾ ಕೊಡ್ಯಾಲ ಪೋಸ್ಟು ದ. ಕ.	ಅಥವಾ	ಪಿ. ಅಭಯಶಂಕರ ದೇಶಪಾಂಡೆ ಮತ್ತು ಕಂಪೆನಿ, ಮೆನೇಜಿಂಗ್ ಏಜಂಟ್ಸ್.

ನುಸಿಗಳು.

ಮನುಷ್ಯವರ್ಗದ ಒಂದು ಅತ್ಯಂತ ಭಯಂಕರವಾದ ಶತ್ರುವೆಂದರೆ ಮನೆಯೊಳಗೆ ವಾಸಿಸುವಂತಹ ನುಸಿಗಳು. ಆದ್ದರಿಂದ ಅದರ ಬೆಳವಣಿಗೆಯ ವಿಷಯ ತಿಳಿದುಕೊಂಡುದಾದರೆ ಬೆಳೆದ ಮೇಲೆ ಅವು ಏನೆನು ಕೆಡುಕನ್ನುಂಟುಮಾಡಲು ಶಕ್ತವಾಗುವವೆಂಬುದು ಚೆನ್ನಾಗಿ ಮನವರಿಕೆಯಾಗುವುದು.

ಮನೆ ನುಸಿಯ ಬೆಳವಣಿಗೆಯು ಪತಂಗದಂತೆಯೇ ಆಗುವುದು. ಮೊದಲು ಮೊಟ್ಟೆಯಾಗಿ ಮೊಟ್ಟೆಯೊಡೆದು ಹುಳವಾಗಿ ತದನಂತರ ರೆಕ್ಕೆ ಹುಟ್ಟಿ ಕಟ್ಟಕಡೆಗೆ ಅವು ಹಾರುವ ನುಸಿಗಳ ರೂಪವನ್ನು ಹೊಂದುವವು. ನುಸಿಯ ಮೊಟ್ಟೆಗಳನ್ನು ಕನ್ನಡಿಯ ಗೂಡಿನೊಳಗೆ ಮುಚ್ಚಿ ಇಟ್ಟದ್ದಾದರೆ ಅದರ ಬೆಳವಣಿಗೆಯ ಎಲ್ಲಾ ಬೇರೆ ಬೇರೆ ಗತಿಗಳನ್ನು ಸುಲಭವಾಗಿ ಅರಿತುಕೊಳ್ಳಬಹುದು. ನುಸಿಗಳು ಮೊಟ್ಟೆಗಳನ್ನಿಡುವಂತೆ ಅನುಕೂಲಗೊಳಿಸುವದೇ ಸ್ವಲ್ಪ ಕಷ್ಟಕರವಾಗಿದೆ. ಅವುಗಳು ಸಾಧಾರಣವಾಗಿ ಎಲೆಗಳನ್ನು ಅರಿಸಿ ಅವುಗಳ ಮೇಲೆ ಮೊಟ್ಟೆಗಳನ್ನಿಡುವ ಪದ್ಧತಿ. ಎಲೆಗಳನ್ನು ಸಂಗ್ರಹಿಸಬಹುದಾದರೂ, ಅಂತಹ ಎಲೆಗಳ ಮೇಲೆ ಮೊಟ್ಟೆಗಳನ್ನಿಡಲು ನುಸಿಯು ಅದರ ಮೇಲೆ ಕೊಳೆತ ಪದಾರ್ಥಗಳನ್ನು ಕಾಣದೇಕೆ. ಕುದುರೆಯ ಮಲದ ಸ್ಪರ್ಶವಿರುವ ಎಲೆಗಳ ಮೇಲೆ ನುಸಿಗಳು ಮೊಟ್ಟೆ ಇಡುವವೆಂದು ಕಂಡುಹಿಡಿಯಲ್ಪಟ್ಟಿದೆ. ಅದಲ್ಲದೆ ಮನುಷ್ಯರ ಶರೀರದಿಂದ ಹೊರಗೆಡಹಲ್ಪಡುವ ಮಲಗಳನ್ನು ನುಸಿಯು ಶೋಧಿಸಿ ಅವುಗಳ ಮೇಲೆ ಮೊಟ್ಟೆಗಳನ್ನಿಡುವದು.

ನುಸಿಯು ಮೊಟ್ಟೆಗಳನ್ನಿಡಲು ಅಂತಹ ಅಸಹ್ಯವಾದ ಸ್ಥಳಗಳನ್ನು ಆರಿಸುವುದು ಮಾತ್ರವಲ್ಲದೆ, ತಾನಿಟ್ಟ ಮೊಟ್ಟೆಗಳನ್ನು ಬಹಳ ಆಡಿಯಲ್ಲಿ ಅಡಗಿಸಿಡಲು ಅದಕ್ಕೆ ಶಕ್ತಿಯಿದೆ. ಅದು ಒಂದೆರಡು ಮೊಟ್ಟೆಗಳನ್ನಿಡುವುದಿಲ್ಲ. ಒಮ್ಮೆಗೆ ೧೦೦ ರಿಂದ ೧೫೦ರ ವರೆಗೆ ಮೊಟ್ಟೆಗಳನ್ನಿಡುವದು. ಸಾಮಾನ್ಯವಾಗಿ ಒಂದು ನುಸಿಯು ಆರು ವಾರಗಳಿಗಿಂತ ಹೆಚ್ಚು ಸಮಯ ಬದುಕುವುದಿಲ್ಲವಾದರೂ, ಅಷ್ಟು ಅಲ್ಪ ಸಮಯದಲ್ಲಿ ಅದು ೮೦೦ರಿಂದ ಒಂದು ಸಾವಿರದ ವರೆಗೆ ಮೊಟ್ಟೆಗಳನ್ನಿಡುವದು. ಒಂದು ನುಸಿಯು ಮೊಟ್ಟೆಗಳನ್ನಿಟ್ಟ ಮೇಲೆ ಮೊಟ್ಟೆಗಳು ಒಡೆದು ಬರೇ ಹದಿನೈದು ದಿನಗಳೊಳಗೆ ಅವು ಸಂಪೂರ್ಣ ಬೆಳೆದು ನುಸಿಗಳಾಗುವವು. ಮಾತ್ರವಲ್ಲದೆ ಮತ್ತೊಂದು ಹತ್ತು ದಿನಗಳೊಳಗೆ ಅವು ಕೂಡ ಮೊಟ್ಟೆಗಳನ್ನಿಡುವವು. ಡಾ| ಹವರ್ಡ ನೆಂಬ ಚತುರ ಡಾಕ್ಟರನೊಬ್ಬನು ಈ ನುಸಿಗಳ ತ್ವರಿತ ಬೆಳವಣಿಗೆಯ ಕುರಿತು ಚೆನ್ನಾಗಿ ಶೋಧಿಸಿ ಹಲವು ವಿಷಯಗಳನ್ನು ಕಂಡುಹಿಡಿದಿರುವನು. ಎಪ್ರಿಲ್ ೧೫ನೇ ತಾರೀಕಿನ ದಿನ ಒಂದು ನುಸಿಯು ಬದಯಾದರೆ ಸಪ್ಟಂಬರ ೧೦ನೇ ತಾರೀಕಿನೊಳಗೆ ೫,೫೯೮,೭೨೦,೦೦೦,೦೦೦ ನುಸಿಗಳು ಹುಟ್ಟುವುವೆಂದೂ, ಇವುಗಳೆಲ್ಲವನ್ನು ಒಟ್ಟುಕೂಡಿಸಿದರೆ ಒಂದು ಘನದ ಆಕಾರವಾಗುವುದೆಂದೂ, ಈ ಘನದ ಪ್ರತಿಯೊಂದು ಬದಿಯ ಅಳತೆಯು ೨೦ ಗಜವಾಗಬಹುದೆಂದೂ ಅವರು ಅಭಿಪ್ರಾಯ ಪಡುವರು. ೨೦ ಗಜ ಬದಿ ಅಳತೆಯುಳ್ಳ ಘನವೆಂದರೆ ಎಷ್ಟಾಯಿತೆಂದು ಬಲ್ಲಿರಾ! ನಮ್ಮ ಮನೆಯ ಕೋಣೆಗಳ ಎದಾರು ಪಾಲಿನಷ್ಟಾಯಿತು.

ನುಸಿಯು ಮೊಟ್ಟೆಯಿಡಬೇಕಾದರೆ ಮೂರು ವಿಷಯಗಳು ಅದಕ್ಕೆ ಅತ್ಯವಶ್ಯಕವಾಗಿವೆ. (೧) ಉಷ್ಣ, (೨) ತ್ಯಾವ, (೩) ಕತ್ತಲೆ. ನುಸಿಗಳು ಆಹಾರ ತಿನ್ನುವುದನ್ನು ಯಾರಾದರೂ ನೋಡಿರುವಿರೆ! ಅದಕ್ಕೆ ಹಲ್ಲುಗಳಿಲ್ಲ. ಅದು ಆಹಾರವನ್ನು ಜಗಿಯಲಾರದು. ಅದು ಘನವಾದ ಆಹಾರವನ್ನು ಎಂದಿಗೂ ತಿನ್ನಲಾರದು. ಬಾಯಿಯ ಬದಲು ಅದಕ್ಕೆ ಒಂದು ತುತೂರಿಯ ಆಕಾರದ ಇಂದ್ರಿಯವಿದೆ. ಈ ಇಂದ್ರಿಯದ ಸಹಾಯದಿಂದ ಅದು ದ್ರವರೂಪವಾದ ಆಹಾರವನ್ನು ಎಳಕೊಳ್ಳುವದು. ಚಿಕ್ಕಮಕ್ಕಳು ಸಕ್ಕರೆಯನ್ನು ಪ್ರೀತಿಸುವಂತೆ ನುಸಿಗಳಿಗೂ ಸಕ್ಕರೆಯೆಂದರೆ ಬಲು ಪ್ರೀತಿ. ಸಕ್ಕರೆಯನ್ನು ನಾವು ಕಾಫಿಯಲ್ಲಾಗಲಿ, ಹಾಲಿನಲ್ಲಾಗಲಿ, ಕರಗಿಸಿ ಸೇವಿಸುವಂತೆ ನುಸಿಗಳು ಕೂಡ ಕರಗಿಸಿದ ಸಕ್ಕರೆಯನ್ನು ಸೇವಿಸುವವು. ನುಸಿಯು ಸಕ್ಕರೆಯ ಮೇಲೆ ತನ್ನ ಎಂಜಲನ್ನು ಸುರಿಸಿ, ಅದು ದ್ರವಿಸುವಂತೆ ಮಾಡಿ, ಆ ದ್ರಾವಕನ್ನು ಎಳಕೊಳ್ಳುವದು. ತನ್ನ ಆಹಾರವು ಚೆನ್ನಾಗಿ ದ್ರವಿಸುವಂತೆ ಅದು ಒಮ್ಮೆ ಎಳಕೊಂಡ ದ್ರಾವಕವನ್ನೇ ಪುನಃ ಪುನಃ ಆಹಾರದ ಮೇಲೆ ಸುರಿಯುವುದುಂಟು. ಇದು ಬಹು ಅಸಹ್ಯಕರ. ಅದು ಮಾತ್ರವಲ್ಲದ ನುಸಿಗಳ ವಾಸಸ್ಥಳವೇ ಮಲವಿಸರ್ಜನ ಸ್ಥಳಗಳು. ಆದು ಕಾರಣ ಮನೆಯೊಳಗೆ ನುಸಿಗಳು ಬಾರದಂತೆ ಸರ್ವರೂ ಜಾಗರೂಕರಾಗಿರಲಿ.

ಕಾಬೂಲಿನ ಪ್ರಸಿದ್ಧ ಪತ್ರ.

ಕಾಬೂಲಿನಲ್ಲಿ ಕೆಲವರು ಸಹಿ ಹಾಕಿ ಒಂದು ಪ್ರಕಟಣೆಯನ್ನು ಪ್ರಕಟಿಸಿರುವರು. ಅದರಲ್ಲಿ ಅಮಾನುಲ್ಲಾಖಾನರವರು ತನ್ನ ಆಳ್ವಿಕೆಯ ಸಮಯ ಅನ್ಯಾಯವಾಗಿ ತಪ್ಪು ಮಾಡಿದರೆಂಬುದು ಸೂಚಿಸಲ್ಪಟ್ಟಿದೆ. ಈ ಕೆಳಗಿನವುಗಳೇ ಅವರು ಸೂಚಿಸುವ ತಪ್ಪುಗಳಲ್ಲಿ ಕೆಲವುಗಳು.

೧ ಸಲಾಮಿನ ಕ್ರಮ—ಮತಸ್ಥಾಪಕರಿಂದ ಪ್ರಾರಂಭಿಸಲ್ಪಟ್ಟ ಇಸ್ಲಾಮಿ ಸಲಾಮಿನ ಕ್ರಮವನ್ನು ಅವರು ತೆಗೆದು ಹಾಕಿದರು. ಕಾಫೀರರಿಂದ ಅನುಸರಿಸಲ್ಪಡುವಂತಹ ಸಲಾಮಿನ ಕ್ರಮವನ್ನು ಕೈಕೊಳ್ಳಲು ಅವರು ನಮ್ಮನ್ನು ಬಲಾತ್ಕಾರ ಪಡಿಸಿದರು.

೨. ಮುಂಡಾಸು ಮತ್ತು ಟೋಪ್ಪಿ—ಮಹಮ್ಮದನಿಂದ ಪ್ರಾರಂಭಿಸಲ್ಪಟ್ಟ ಮುಂಡಾಸು ಇಡುವ ಕ್ರಮವನ್ನು ತೆಗೆದು ಹಾಕಿ, ಕಾಫೀರರಂತೆ ಟೋಪ್ಪಿಗಳನ್ನೂ, ಹೇಟುಗಳನ್ನೂ ಧರಿಸುವಂತೆ ಮಾಡಿದರು. ಟೋಪ್ಪಿಗಳನ್ನು ಧರಿಸುವದು ತಪ್ಪು ಮತಾವಲಂಬಿಗಳು. ಟೋಪ್ಪಿಗಳನ್ನೂ ಹೇಟುಗಳನ್ನೂ ಧರಿಸದವರು ಹಲವು ಬಗೆಯ ಶಿಕ್ಷೆಗಳಿಗೆ ಗುರಿಪಡಿಸಲ್ಪಟ್ಟರು.

೩. ಉಡಿಗೆ—ನಮ್ಮ ಹಿರಿಯರು ಉಡುವಂತಹ ಇಸ್ಲಾಮಿ ಉಡಿಗೆಯನ್ನು ತ್ಯಜಿಸುವಂತೆ ಮಾಡಿದರು.

೪. ಘೋಷಾಕ್ರಮ—ಹೆಂಗಸರು ಘೋಷೆಯನ್ನು ಧರಿಸಬೇಕೆಂದೂ, ಹೆಂಗಸರು ಅಪರಿಚಿತರಾದ ಗಂಡಸರ ದೃಷ್ಟಿಗೆ ಗೋಚರಿಸಬಾರದೆಂದೂ ಕುರಾನಿನಲ್ಲಿ ವಿಧಿಸಲ್ಪಟ್ಟದ್ದಾಗಿದೆ. ಆದರೆ ಇದಕ್ಕೆ ವಿರುದ್ಧವಾಗಿ ಅವರು ಘೋಷಾಕ್ರಮವನ್ನು ತೆಗೆದು ಹಾಕಿದರು.

೫. ಸ್ತ್ರೀ ವಿದ್ಯಾಲಯಗಳು—ನಮ್ಮ ಮುಸಲ್ಮಾನಿ ಮತದ ಕಾನೂನಿನ ಪ್ರಕಾರ ಕನ್ಯೆಯರಾಗಲಿ, ಬೆಳೆದ ಹೆಂಗಸರಾಗಲಿ ತಮ್ಮ ಗಂಡಂದಿರ ಅನುಮತಿಯಿಲ್ಲದೆಯಾಗಲಿ, ಇದಾಗಲಿ, ಪರಪುರುಷರಿಗೆ ಶಿಕ್ಷಣಗಾಗಿ ಹೋಗಬಾರದು. ಆದರೆ ಅಮಾನುಲ್ಲಾರವರು ಚಿಕ್ಕ ಹುಡುಗಿಯರನ್ನೂ ಹೆಂಗಸರನ್ನೂ ಶಾಲೆಗೆ ಕಳುಹಿಸಿದರು. ಇದರಿಂದ ಮುಸಲ್ಮಾನ ಮತದ ಮರ್ಯಾದೆಯನ್ನು ಕೀಳು ಸ್ಥಿತಿಗೆ ತಂದರು.

೬. ಗಡ್ಡ ಮತ್ತು ಮೀಸೆ—ಮಹಮ್ಮದನ ಬೋಧನೆಗೆ ಸರಿಯಾಗಿ ಮುಸಲ್ಮಾನರು ಗಡ್ಡ ಮತ್ತು ಮೀಸೆಯನ್ನಿಡಬೇಕಾದುದು. ಆದರೆ ಅಮಾನುಲ್ಲಾರವರು ಇದಕ್ಕೆ ವಿರೋಧವಾಗಿಯೇ ಹುಕುಮುಗಳನ್ನು ಕೊಟ್ಟಿರುವರು.

೭. ಮಕ್ಕಳ ಶಾಲೆಗಳೂ ವಿದ್ಯಾಭ್ಯಾಸವೂ—ಹುಡುಗಿಯರಿಗಾಗಿ ಇರುವ ಮತ್ತಾಬುಗಳಲ್ಲಿ ಅವರು ಹುಡುಗರನ್ನು ನಿಯಮಿಸಿ, ಧಾರ್ಮಿಕ ಶಿಕ್ಷಣವು ಸಿಕ್ಕಲು ಅನಾನುಕೂಲವಾಗುವಂತಾಯಿತು. ಧಾರ್ಮಿಕ ಮತ್ತು ಮತದ ವಿಷಯ ಕವಾದ ಕಾನೂನುಗಳ ಬಗ್ಗೆ ಜನರ ನಂಬಿಗೆಯು ಇದರಿಂದ ಕಡಿಮೆಯಾಯಿತು. ಜನರು ಖುರಾನನ್ನು ಕಲಿಯುವದರ ಬದಲು ಇಂಗ್ಲಿಷು, ಭೂಗೋಳ, ಲೆಕ್ಕ, ಚರಿತ್ರೆ ಮೊದಲಾದವುಗಳನ್ನು ಕಲಿಯತೊಡಗಿದರು.

೮. ವಿದೇಶಗಳಲ್ಲಿ ಅಫಘಾನಿ ಹುಡುಗಿಯರು—ಮುಸಲ್ಮಾನರು ತಮ್ಮ ಹುಡುಗಿಯರನ್ನು ವಿದ್ಯಾರ್ಜನೆಗಾಗಿ ಪರರಾಷ್ಟ್ರಗಳಿಗೆ ತಮ್ಮ ಸಮೀಪದ ಬಂಧುಗಳ ಜತೆಯಲ್ಲಿ ಕಳುಹುವುದಲ್ಲದೆ ಅನ್ಯಥಾ ಕಳುಹುವ ಕಟ್ಟಳೆಯಿರುವುದಿಲ್ಲ. ಆದರೆ ಅಮಾನುಲ್ಲಾರವರು ಹಲವು ಅಫಘಾನಿ ಹುಡುಗಿಯರನ್ನು ಪರಪುರುಷರಿಗೆ ಕಳುಹಿಸಿದುದರಿಂದ ಈ ಸಾಹಸಕ್ಕಾಗಿ ಪ್ರತಿಯೊಂದು ರಾಜ್ಯವೂ ದೂರುತ್ತಿದೆ. ಯಾವ ಬಾದಶಹನೇ ಆಗಲಿ ಇಂತಹ ಕೆಲಸಕ್ಕೆ ಧೈರ್ಯಪಟ್ಟದ್ದಿಲ್ಲ. ಇನ್ನೂ ಧೈರ್ಯ ಪಡಲಿಕ್ಕೆ ಇಲ್ಲ.

೯. ಐಹಿಕ ಸುಖ ಕಲ್ಪನೆ—ಅಮಾನುಲ್ಲಾರವರು ಕೈಕೊಂಡ ಪ್ರತಿಯೊಂದು ಕೆಲಸವೂ ತಪ್ಪು ಮತಾಭಿಪ್ರಾಯವುಳ್ಳದ್ದು, ಅವುಗಳಿಂದ ಕೇವಲ ಐಹಿಕ ಸುಖಪ್ರಾಪ್ತಿಯಲ್ಲದೆ ಅವರು ಪವಿತ್ರವಾದ ಮತದ ಕಡೆಗೆ ಗೌರವವನ್ನು ಕೊಡಲಿಲ್ಲ. ನಮ್ಮ ಪುರಾತನ ಮತದ ಕಟ್ಟಳೆಗಳನ್ನು ಗೌರವಿಸುವದರಿಂದಲೇ ಪಾರಮಾರ್ಥಿಕ ಸಂತೋಷವನ್ನು ಹೊಂದಬಹುದಾಗಿದೆ.

೧೦. ಉಲೇಮಾರವರೊಂದಿಗೆ ವಿರೋಧ—ಉಲೇಮಾರವರನ್ನು ಗೌರವದಿಂದ ಕಂಡು ಅವರ ಕಡೆಗೆ ಪ್ರೀತಿಯನ್ನು ತೋರ್ಪಡಿಸಬೇಕೆಂಬುದೇ ಮಹಮ್ಮದನ ಬೋಧನೆಯಾಗಿದ್ದರೂ, ಅಮಾನುಲ್ಲಾರವರು ಇಸ್ಲಾಮಿ ಶಿಕ್ಷಣೆಯ ಕಡೆಗೂ, ಉಲೇಮಾರ ಕಡೆಗೂ ಸಿಟ್ಟುಳ್ಳವರಾಗಿದ್ದರು. ಉಲೇಮಾರನ್ನು ಅವರು ಅಪಮಾನ ದೃಷ್ಟಿಯಿಂದ ಕಂಡರು. ಅವರಿಗೆ ಹಿಂಸೆ ಕೊಡಲು ಪ್ರೋತ್ಸಾಹಿಸಿದರು. ಇದೀಗ ಅವರ ಧರ್ಮನಿಂದೆಯನ್ನು ಸೂಚಿಸುವದು.

೧೧. ಮತಭೇದ ಮತ್ತು ಅನೈಕ್ಯ—ಮುಸ್ಲಿಮ್ ಮತದವರಲ್ಲಿ ಮತಭೇದವನ್ನೂ, ಮುಸ್ಲಿಮ್ ಕ್ರಮಗಳ ಹಾಳುಗೆಡುವಿಕೆಯನ್ನೂ ಆಲೋಚಿಸುವಾತನು ಮುಸ್ಲಿಮ್ ಮತದ ಕೊಲೆಗಡಕನೆನ್ನಬಹುದು. ಮತವನ್ನು ಕೆಡಿಸುವವನು ಮುಸ್ಲಿಮ್ ಜನಾಂಗವನ್ನು ಕೆಡಿಸುವನು. ಇಷ್ಟೆಲ್ಲ ಈಗಿನ ಈ ತೊಂದರೆಗಳಿಗೆ ಅವರೇ ಕಾರಣರು. ಇಸ್ಲಾಮಿ ಮತವನ್ನು ತ್ಯಜಿಸಿ ಕಾಫೀರರ ಮತವನ್ನು ಅವಲಂಬಿಸಲು ಅವರು ನಮಗೆ ಕಲಿಸಿದರು.

೧೨. ಸೌರಮಾನ ವರುಷ—ನಮ್ಮಲ್ಲಿ ಆಚರಣೆಯಲ್ಲಿದ್ದ ಚಾಂದ್ರಮಾನ ಕ್ರಮವನ್ನು ಬದಿಸಿ, ಸೌರಮಾನ ವರುಷದ ಕ್ರಮವನ್ನು ಆಚರಣೆಗೆ ತಂದರು.

೧೩. ಆಂಗ್ಲ ಶಕ ಮತ್ತು ದಿನಗಳು—ಇಂಗ್ಲಿಷರ ಶಕದ ಲೆಕ್ಕವನ್ನೂ ಇಂಗ್ಲಿಷರ ದಿನದ ಲೆಕ್ಕವನ್ನೂ ಜಾರಿಗೆ ತಂದರು. ಮುಸ್ಲೀಮ್ ಶಾಸ್ತ್ರದ ಪುಸ್ತಕಗಳನ್ನು ಬದಿಗೊತ್ತಿ ಮುಸ್ಲಿಮರಲ್ಲದವರ ಶಾಸ್ತ್ರದ ಪುಸ್ತಕಗಳನ್ನು ಮುಂದಕ್ಕೆ ತರುವ ಆಲೋಚನೆಯು ಅವರಿಗಿದ್ದಿತು.

೧೪. ಗುರುವಾರವೇ ಹಬ್ಬ ದಿನ — ಮಹಮ್ಮದನ ಕಾಲದಿಂದ ಶುಕ್ರವಾರವು ಹಬ್ಬದ ದಿನವಾಗಿದ್ದು ಆ ದಿನ ಮಸೀದಿ ಪ್ರಾರ್ಥನೆಯಾಗುವ ವರೆಗೆ ಸಾಮಾಗ್ರಿಗಳನ್ನು ಕೊಡುವ ಕೊಳ್ಳುವ ವ್ಯವಹಾರವು ಆಗಬಾರದಿತ್ತು. ಆದರೆ ಅಮಾನುಲ್ಲಾರವರು ವಾರಗಳ ಹೆಸರುಗಳನ್ನು ಬದಲಾಯಿಸಿ, ಶುಕ್ರವಾರದ ಬದಲು ಗುರುವಾರವನ್ನು ಹಬ್ಬದ ದಿನವನ್ನಾಗಿ ಮಾಡಿದರು. ಈ ರೀತಿ ಧರ್ಮಕ್ಕೆ ವಿರೋಧವಾಗಿ ಅವರು ವರ್ತಿಸಿದರು. ಇಸ್ಲಾಮಿನ ಪವಿತ್ರವಾದ ಕಾನೂನುಗಳಿಗೆ ಇದು ವಿರೋಧವಾಗಿದೆ.

೧೫. ಮುಲ್ಲಾರ ದಕ್ಷಿಣೆಯನ್ನು ನಿಲ್ಲಿಸುವಿಕೆ—ಮುಲ್ಲಾರವರಿಗೂ ಮತ ಪುರೋಹಿತರುಗಳಿಗೂ ಜೀವನದ ಬಗ್ಗೆ ಬಹಳ ಪುರಾತನ ಕಾಲದಿಂದ ಸಿಕ್ಕುತ್ತಲಿದ್ದ ದಕ್ಷಿಣಾರೂಪವಾದ ಹಣವು ಸಿಕ್ಕದಂತೆ ಮಾಡಿದರು.

೧೬. ಮುಲ್ಲಾರ ಬೋಧನೆಗೆ ತಡೆ—ಉಲೇಮರೂ, ಮುಲ್ಲಾರೂ, ಜನರಿಗೆ ಧಾರ್ಮಿಕ ವಿಷಯಗಳನ್ನು ಬೋಧಿಸದಂತೆ ತಡೆಗಟ್ಟಿದರು. ದೇವರ ಮತವನ್ನು ಕೆಡಿಸಲು ಅವರು ತಯಾರುಮಾಡಿದ್ದರೆಂದು ಸಂಶಯ ಹುಟ್ಟುವದು.

೧೭. ಮತ ಪುರೋಹಿತರಿಗೆ ದಂಡನೆ—ಹಜರತ್ ಮುಜದ್ದಿ ಎಂಬವರು ಮುಸ್ಲೀಮ್ ಮತ ಧುರೀಣರು. ಅಮಾನುಲ್ಲಾರವರ ಆಳ್ವಿಕೆಯ ಪ್ರಥಮದಲ್ಲಿ ಅವರು ತುಂಬಾ ಸಹಾಯವನ್ನು ಮಾಡಿದ್ದರು. ಆದರೆ ಅವರ ಮತವು ಅನ್ಯಾಯದ್ದೆಂದು ಅಮಾನುಲ್ಲಾರವರು ಅವರನ್ನು ಬಂಧಿಸಿದರು. ಹಜರತ್ ಮುಜದ್ದಿಯ ಗುರುವೂ ಒಬ್ಬ ಪ್ರಸಿದ್ಧ ಆಲಿಮರೂ ಆದ ಹಾಜೆ ಮುಲ್ಲಾ ಅಬ್ದುಲ್‌ರಹಿಮಾನ್‌ಖಾನ ಎಂಬವರನ್ನು ತನಗೆ ವಿರೋಧವೆಂದು ಅಮಾನುಲ್ಲಾರವರು ವಧಿಸಿದರು.

೧೮. ಘನವಾದ ತಪ್ಪುಗಳು—ಖುರಾನಿನಲ್ಲಿ ನಿಷೇಧಿಸಲ್ಪಟ್ಟ ಮದ್ಯಪಾನದ ಅಭ್ಯಾಸವನ್ನು ಅವರು ತನ್ನವರಲ್ಲಿಯೂ ತನ್ನ ಕೆಲಸದವರಲ್ಲಿಯೂ, ಮುಸ್ಲೀಮರಲ್ಲಿಯೂ ಮಾಡಿಸಿದರು. ಮತ್ತು ಮೂರ್ತಿ ಪೂಜೆಯನ್ನು ಪ್ರಾರಂಭಿಸಿದರು. ಮುಲ್ಲಾ ಅಬ್ದುಲ್ಲಾ ಎಂಬವರು ದಕ್ಷಿಣದ ಒಬ್ಬ ಮುಖ್ಯ ಮತಬೋಧಕರು. ಅವರು ಇಸ್ಲಾಮಿ ಮತದ ಉದ್ಧಾರಕ್ಕಾಗಿ ಸೊಂಟ ಕಟ್ಟಿದವರು. ಅಮಾನುಲ್ಲಾರವರ ಈ ತರದ ಸುಧಾರಣೆಗಳಿಗೆ ಅವರು ಆಕ್ಷೇಪಿಸಿದರು. ಅಮಾನುಲ್ಲಾರವರು ಈ ಮುಲ್ಲಾ ಸಾಹೇಬರನ್ನೂ ಅವರ ಅವಲಂಬಕರನ್ನೂ ಕೊಲ್ಲಿಸಿದರು.

ಇವೆಲ್ಲ ಕೃತ್ಯಗಳಿಂದ ಅಮಾನುಲ್ಲಾರ ಕಾಫೀರತನವು ವ್ಯಕ್ತವಾಗುವುದು. ದಾಹಾ-ಇ-ಸಾಕೋ ಮತ್ತು ಸಯ್ಯದ್ ಹುಸೇನಖಾನರನ್ನು ದೇವರೇ ಮುಂದಕ್ಕೆ ಕಳುಹಿಸಿದನು. ಅವರು ಎದುರಿಗೆ ಬಾರದೆ ಇರುತ್ತಿದ್ದರೆ ಮಹಮ್ಮದನ ಮತದ ರಕ್ಷಣೆಯಾಗುತ್ತಿರಲಿಲ್ಲ. ಮುಸಲ್ಮಾನರನ್ನು ಅಧಃಪತನದಿಂದ ಆತನೇ ಉಳಿಸಿದನು.

ತಯಾರಾಗಿವೆ ತಯಾರಾಗಿವೆ!

ಕಾಫಿ ಪ್ಲಾಂಟರರಿಗೂ, ತೋಟದವರಿಗೂ

ಬೇಕಾಗುವಂತಹ

ಚೆಕ್ ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಲೋಕಾಮೃಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮೃಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಹೊಟ್ಟೆನೋವು, ಚಳಿ [illegible]ವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಗಂಡುಗಳಿಗೂ, ಗಡ್ಡೆಗೂ ಶೀಘ್ರದ ಔಷಧ. ಸೀಸೆ 1ಕ್ಕೆ ರೂ. 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು [illegible]

'ಲೋಧ್ರ'ದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಶೀಸೆಯಿಂದಲೇ ಗುಣವಾಯಿತು.

ಶ್ರೀಮತಿ ಎನ್. ಕನಕಮ್ಮ, ಕೇರಾಫ್ ಎನ್. [illegible], ಗ್ರಾಮ ಮ್ಯಾಜಿಸ್ಟ್ರೇಟ್, [illegible] ಇವರು ಬರೆದಿರುವುದು:—ನಿಮ್ಮ ಒಂದು ಸಣ್ಣ ಬಾಟಲ್ ಲೋಧ್ರವನ್ನು ಉಪಯೋಗಿಸಿದ ಮಾತ್ರದಿಂದಲೇ ಗುಣವುಂಟಾಯಿತು. ಒಂದು ದೊಡ್ಡ ಶೀಸೆ ಲೋಧ್ರವನ್ನು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

ಶ್ರೀಮತಿ ಇಂದಿರಾಕುಮಾರಿ ದೇವಿ, [illegible], ಇವರು ಬರೆದಿರುವುದು:—

ಸ್ವಾಮಿ, ನಾನು ಈಗ ತಮ್ಮ ಲೋಧ್ರವನ್ನು ಸೇವಿಸುತ್ತಿದ್ದೇನೆ. ಇದಕ್ಕೆ ಮುಂಚೆ ನನ್ನ ಮುಟ್ಟಿನ ಕಾಲದಲ್ಲಿ ಬಹಳ ಬಾಧೆಯುಂಟಾಗುತ್ತಿದ್ದಿತು ಮತ್ತು ಕ್ರಮತಪ್ಪಿ [illegible] ದಿನಗಳಿಗೊಂದಾವರ್ತಿ [illegible]. [illegible] ವರ್ಷಗಳ ಕಾಲ ಇಂಗ್ಲಿಷ್ ಔಷಧಾಲಯಗಳಲ್ಲಿ ಔಷಧ ಸೇವಿಸಿಯೂ ಪ್ರಯೋಜನವಿಲ್ಲದೆ [illegible] ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು [illegible] ಆದರೆ ನಾನು ಸಮ್ಮತಿಸಲಿಲ್ಲ. ಅನಂತರ ತಮ್ಮ ಪ್ರಸಿದ್ಧವಾದ ಲೋಧ್ರ ಎರಡು ಬಾಟಲ್ ತರಿಸಿ ಸೇವಿಸಿದೆನು. ಅಂದಿನಿಂದ ಕ್ರಮವಾಗಿ [illegible] ದಿನಕ್ಕೊಂದಾವರ್ತಿ ಬಾಧೆಯಿಲ್ಲದೆ ಬಹಿಷ್ಠೆಯಾಗುತ್ತ ಸುಖವಾಗಿದ್ದೇನೆ. [illegible] ಬಾಧೆಗಳೂ ನಿವೃತ್ತಿಯಾಗಿವೆ. ಪುನಃ ಈಗ ಎರಡು ಬುದ್ದಿ ಲೋಧ್ರ ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ಮಾಯವಾಯಿತು

ಶ್ರೀಮತಿ [illegible] ಲಕ್ಷ್ಮಮ್ಮ, ಬಾಲಿಕಾ ಪಾಠಶಾಲೆ, [illegible], ಇವರು ಬರೆದಿರುವುದು

[illegible] ಈ ಸಂದರ್ಭಗಳಲ್ಲಿ [illegible] ಬಹಳ ಕಷ್ಟಪಡುತ್ತಿದ್ದೆನು. ಈ ಸಮಯದಲ್ಲಿ ತಮ್ಮ 'ಲೋಧ್ರ'ದ ಬುದ್ದಿ ತರಿಸಿ ಸೇವಿಸಿದೆನು. ಅಂದಿನಿಂದ ಈ ಬಾಧೆಗಳೆಲ್ಲವೂ ಮಾಯವಾಗಿ ಸಕಾಲಕ್ಕೆ ಬಹಿಷ್ಠೆಯಾಗುತ್ತ ಶರೀರಾರೋಗ್ಯವನ್ನು ಅನುಭವಿಸುತ್ತಿದ್ದೇನೆ. ಈ ದಿವ್ಯೌಷಧಿಯನ್ನು ನಿಲ್ಲಿಸದೆ ಇನ್ನೂ ಸೇವಿಸಬೇಕೆಂದಿರುವುದರಿಂದ ಇನ್ನೂ ಎರಡು ಬುದ್ದಿ ಕಳುಹಿಸುವುದು. ಸ್ತ್ರೀಯರ ಎಲ್ಲಾ ವ್ಯಾಧಿಗಳಿಗೂ 'ಲೋಧ್ರ'ವು ದಿವ್ಯೌಷಧಿಯೆಂದು ನಾನು ಖಂಡಿತವಾಗಿಯೂ ಹೇಳುತ್ತೇನೆ.

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ: "ಕೇಸರಿ" ಫೋನ್ 3486

ಏಜಂಟರು — ಪಾ ಕಂಪೆನಿ, (ದಿ ಊಲನ್ ಮಾರ್ಟ್) ಮಂಗಳೂರು.

ನೋಟೀಸು.

ಪುತ್ತೂರು ತಾಲೂಕು ಬೆಳಾಲು ಗ್ರಾಮದ ರಾಮನ್ನಾಯಕನ ಮಗ ಬೋರನ್ನಾಯಕನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ:—

ಬೆಳಾಲು ಗ್ರಾಮದ [illegible] ಎಂಬಲ್ಲಿರುವ ವೆಂಕಟ್ರಮಣ [illegible]ರ ಮಗಳು ವ ಗೋಪಾಲಕೃಷ್ಣ [illegible]ಯರ ವಿಧವೆ ಸುಬ್ಬಮ್ಮ ಹೆಂಗ್ಸು ತನ್ನ ಬಗ್ಗೂ ತನ್ನ ಮ್ಯಾನೆಜಿಂಗ್ ಮಗನ ಕಡೆಯಿಂದ ರಕ್ಷಕಳಾಗಿ ಸಹ ಉತ್ತಮ ಪ್ರಯೋಜನಕ್ಕೆ ಪೂರ್ಣ ಪ್ರತಿಫಲಕ್ಕೆ ರೂ. 952—1—4ಕ್ಕೆ ತಾ 4—8—'29ರಲ್ಲು ನನಗೆ ಬರಕೊಟ್ಟ ಡಿಮಾಂಡು ಪ್ರೋ. ನೋಟು ವ ಎಂಡು ಪತ್ರಗಳಿರುವ ಒಂದು ಸಣ್ಣ ಕಟ್ಟು ಮೊನ್ನೆ ದಿವಸ ಬೆಳ್ತಂಗಡಿಯಿಂದ ಪುತ್ತೂರಿಗೆ ಪೋಪ್ಯುಲರ್ ಕಂಪೆನಿ ಸರ್ವಿಸ್ ಬಸ್ಸಿನಲ್ಲಿ ಬರುವಾಗ್ಯೆ ಪಂಜಮೊಗರಿಯಿಂದ ಬಿಟ್ಟು ಹೋದದ್ದು ನನಗೆ ಈ ವರೆಗೆ ಸಿಕ್ಕಿಲ್ಲ. ಯಾರಿಗಾದರೂ ಸಿಕ್ಕಿದರೆ ಅದನ್ನು ದಯವಿಟ್ಟು ನನಗೆ ತಿಳಿಸಿದಲ್ಲಿ ನಾನು ಕೃತಜ್ಞನಾಗಿರುವುದಲ್ಲದೆ ಸದ್ರಿ ನೋಟನ್ನು ಯಾರಿಗಾದರೂ ಅನ್ಯರಿಗೆ ಕೊಟ್ಟರೆ ನಾನು ಮೋಸಕ್ಕೂ ಬಹುನಷ್ಟಕ್ಕೂ ಒಳಪಡಬೇಕಾದುದರಿಂದ ಅನ್ಯರೀಗೆ ಅದರಿಂದ ಏನೊಂದು ಪ್ರಯೋಜನ ಸಿಕ್ಕಲಾರದ ಕಾರಣ ಅದನ್ನು ನನಗೆ ತಲ್ಪಿಸಿಕೊಟ್ಟಲ್ಲಿ ಕೃತಜ್ಞತೆ ತೋರಿಸುವ ಬಗ್ಗೆ ಅವರಿಗೆ ರೂ. 25/-ನ್ನು ಇನಾಮಾಗಿ ಕೊಡುತ್ತೇನೆ ಎಂತ ಬೋರನ್ನಾಯಕನ ವಿನಂತಿ.

ಪುತ್ತೂರು, 1—5—'29.

[illegible] [illegible]
[illegible] [illegible]

ಹೊಸದುರ್ಗ ಅಮೃತೇಶ್ವರ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S. I. R.)

ಆಯುರ್ವೇದೀಯ ವೈದ್ಯ ಶಾಸ್ತ್ರಗಳಲ್ಲಿ ಮುಖ್ಯವಾಗಿ [illegible] ಬಹುದು ಕಾಲ ಪ್ರಸಿದ್ಧರಾದ 'ಭಿಷಕ್ ಶ್ರೀ ವೈದ್ಯರತ್ನ ಪರಮೇಶ್ವರ ಮುಸಾದ್' ಅವರ [illegible] ಅನುಭವಶಾಲಿಯಾದ [illegible] ಈ ವೈದ್ಯಶಾಲೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ [illegible]ಗಳು, [illegible]ಗಳು, [illegible]ಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಗಳು ನಮ್ಮಲ್ಲಿ ಯಾವಾಗಲೂ [illegible] ತಯಾರಿರುವವು. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತಿಂದಗಿದ ಕಾಲ, ವಯಸ್ಸು, [illegible] ದೇಹ ಪ್ರಕೃತಿ, [illegible] ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ಕಲಸು ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು [illegible] ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ [illegible]. [illegible] ಸಂಗತಿಗಳಲ್ಲ [illegible] ವಿಶಾಲಕ್ಕೆ [illegible] ನಡಿಸಿದಲ್ಲಿ [illegible] ಅನಾನುಕೂಲಸ್ಥರಾದ [illegible] ಅವರ ಅಗತ್ಯದ [illegible] ಕೊಡುವರೆಯೂ ರೋಗಕ್ಕೆ [illegible] ಮತ್ತು [illegible] ಎಲ್ಲಾ [illegible] ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯವಾದವರಿಗೆ ಮದ್ದುಗಳನ್ನು [illegible] ಕೊಡುವರೆ [illegible] ಇವೆ [illegible] ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಲಿಕ್ಕಾದು.

[illegible] ವೈದ್ಯಶಾಲೆಯಲ್ಲಿ [illegible]

ಮೇನೇಜರ್,
ಅಮೃತೇಶ್ವರ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ.

ನೋಟೀಸು.

ಹಾಲಿ ಮಂಗಳೂರಿಗೆ ಬಂದಿರುವ [illegible] ತಾಲೂಕು ಪಿಲಾತ್ತಿಕ್ಕೆ ಅಂಶಂ [illegible] ದೇಶದ [illegible] ನಲ್ಲಿರುವ ಪುತ್ತಲತ್ ಮೊಯ್ದುದನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—

ನನ್ನ ತಂದೆ ಕಾಂಞ್ ಮೈದೀನ್ ಬ್ಯಾರಿ ಯಾನೆ ಅವುಲ[illegible] ಎಂಬವನ ಆಸ್ತಿ ಬಾಬ್ತು ಮಂಗಳೂರು ಸಬ್‌ಕೋರ್ಟು ಕ್ರಮ ನಂ 5/1923ನೇ ವ್ಯಾಜ್ಯದಲ್ಲಿ ಸ್ತಿರಪಟ್ಟ ಸಂಪೂರ್ಣ ಹಕ್ಕಿನ ಬಾಬ್ತು ಸರ್ವಾದಿ [illegible] ವ ಈರ ಆಸ್ತಿ ವಗೈರೆಗಳಿಗೆ ಮರಿಯಮ ಮತ್ತು ಮೊಂಡಿ[illegible] ಮಾತ್ರ ವಾರಿಸುದಾರರು ಎಂತ ತೋರಿಸಿಕೊಂಡು ತಮ್ಮ ತಮ್ಮೊಳಗೆ ಬೇಕಾದಂತೆ ಅಕ್ರಮವಾದ ದಾಖಲೆಗಳನ್ನು ಮಾಡಿಕೊಂಡು ನನ್ನ ಹೆಸರನ್ನೇ ಮರೆ ಮಾಡಿ ನನ್ನ ಹಕ್ಕಿಗೆ ಮೋಸಕೊಡುವ ಕೆಟ್ಟ ಇರಾದೆಯಿಂದ ಸದರಿ ಆಸ್ತಿಗಳನ್ನು ಮಾರಾಟ ಮಾಡುತ್ತಾನೆಯೆಂತ ಸದರಿ ಮೊಯ್ದುದ್‌ಖಾನನ ಅಕೃತ್ಯಗಳು ಈಗ ನನ್ನ ತಿಳುವಳಿಕೆಗೆ ಬಂದದರಿಂದ ನಾನು ಈ ಮೂಲಕ ವ್ಯಕ್ತಪಡಿಸುವದೇನೆಂದರೆ ಸದರಿ [illegible] ಆಸ್ತಿಯಲ್ಲಿ ಮೊಯ್ದುದ್‌ಖಾನಗೆ ಯಾವ ತರದ ಹಕ್ಕೂ ಇರುವುದಿಲ್ಲ. ಆದ್ದರಿಂದ ಸದರಿ ಆಸ್ತಿಯನ್ನು ಸದರಿ ಮೊಯ್ದುದ್‌ಖಾನನಿಂದ ಯಾರಾದರೂ ಕ್ರಯಕ್ಕೆ ವಗೈರೆ ಪಡಕೊಂಡಿದ್ದಾದರೆ ಅದು ಸಿಂಧು ಆಗತಕ್ಕದಲ್ಲ. ಇದಕ್ಕೆ ವಿರೋಧವಾಗಿ ಯಾರಾದರೂ ಪಡಕೊಂಡರೆ ಅಂಥವರ ಮೇಲೆ ಸದರಿ ಸ್ವಾಧೀನವನ್ನು ಲದ್ದು ಪಡಿಸಲಿಕ್ಕೆ ನಾನು ಮಾಡಬೇಕಾದ ಯಾವತ್ತು ವ್ಯವಹರಣೆಗಳಿಗೆ ವಗೈರೆಗಳಿಗೆ ನನಗೆ ಆಗುವ ಸಕಲ ಖರ್ಚಿಗೂ ವ ನಷ್ಟಕ್ಕೂ ಮುಂತಾದಕ್ಕೆ ಸದರಿ ಆಸ್ತಿ ಪಡಕೊಂಡವರು ಪೂರ್ಣ ಜವಾಬುದಾರರಾಗಿರತಕ್ಕದ್ದು ಎಂಬ ಸಂಗತಿ ಇದರಿಂದ ಸರ್ವರಿಗೂ ತಿಳಿದಿರತಕ್ಕದ್ದು.

ಪುತ್ತಲತ್ ಮೊಯ್ದುದ್‌ನ ರುಜು,
ತಾ 8-5-'29.

ಕರ್ನಾಟಕ ಪತ್ರಿಕಾಕರ್ತರ ಪರಿಷತ್ತು.

ಎರಡನೆಯ ಕರ್ನಾಟಕ ಪತ್ರಿಕಾಕರ್ತರ ಪರಿಷತ್ತು ಬೆಳಗಾವಿಯಲ್ಲಿ ಮೇ ತಿಂಗಳ ೧೯ನೇ ತಾರೀಕಿನ ದಿವಸ ನೆರೆಯುವದು. ಮದಿಂಬಯಿ [illegible] ಸಂಪಾದಕರಾದ ಶ್ರೀ [illegible] ಇವರು ಈ ಪರಿಷತ್ತಿನ ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ. ಮತ್ತು ಡಾ॥ [illegible] ಹನುಮಂತರಾಯರು ಸ್ವಾಗತಾಧ್ಯಕ್ಷರಿದ್ದಾರೆ. ಕಾರಣ ಈ ಪರಿಷತ್ತಿಗೆ ಸರ್ವರೂ ಆಗ್ನಮಿಸಬೇಕೆಂದು ಆಗ್ರಹದ ವಿನಂತಿ ಇರುವದು.

ಪತ್ರಿಕಾಕರ್ತರಲ್ಲಿ ವಿನಂತಿ.

ಕರ್ನಾಟಕದಲ್ಲಿ ಸಕಲ ಪತ್ರಿಕಾಕರ್ತರೂ ತಮ್ಮ ಪತ್ರಿಕೆಯ ಒಂದು ಸಂಚಿಕೆಯನ್ನೂ ಮತ್ತು ವಿಶೇಷ ಸಂಚಿಕೆಗಳನ್ನೂ ದಯಮಾಡಿ ನಮ್ಮ ಕಾರ್ಯಾಲಯಕ್ಕೆ ಕಳಿಸಿಕೊಡಬೇಕು. ಮತ್ತು ಪರಿಷತ್ತಿನಲ್ಲಿ ತರುವ ತಮ್ಮ ಠರಾವುಗಳಾಗಲೀ ಅಥವಾ ಸೂಚನೆಗಳಾಗಲೀ ಏನಾದರೂ ಇದ್ದಲ್ಲಿ ಇದೇ ತಿಂಗಳ ಹತ್ತನೇ ತಾರೀಕಿನೊಳಗಾಗಿ ನಮಗೆ ಮುಟ್ಟುವಂತೆ ಕಳಿಸಬೇಕು.

ಎ. ಬಿ. ದೇಶಪಾಂಡೆ. ಆ. ರಂಗಾಚಾರ್ಯ.

ಕಾರ್ಯದರ್ಶಿಗಳು.

ತಸ್ಕರ ಚಮತ್ಕಾರ

(ಕತೆ)

ಹಾರಾಡಿ ಲಕ್ಷ್ಮಣ ಶೆಟ್ಟಿ

— ೧ —

[ಸೂಚನೆ:– ಈ ಕಲ್ಪಿತ ಕತೆಯೊಳಗಣ ವ್ಯಕ್ತಿನಾಮಗಳೂ ಸ್ಥಳನಾಮಗಳೂ ಕಲ್ಪಿತವಾದವುಗಳೆಂದು ತಿಳಿಯಬೇಕು]

ಒಂದು ದಿವಸ ಪ್ರಾತಃಕಾಲದಲ್ಲಿ ಸದಾಶಿವರಾಯನು ತನ್ನ ಚಾಕರನನ್ನು ಕರೆದು "ವಿಟ್ಠಲಾ ಈ ನಾಯಿಯನ್ನು ಇನ್ನೂ ಓಡಿಸಲಿಲ್ಲವೇ ಇದರ ತೊಂದರೆಯನ್ನು ಹೇಳಿತೀರದು. ಸಿಕ್ಕಿದ ವಸ್ತುಗಳನ್ನು ಕಚ್ಚಿ ಕಚ್ಚಿ ಚೂರು ಚೂರು ಮಾಡುವ ಒಂದು ದುರಭ್ಯಾಸವು ಇದಕ್ಕಿದೆ. ಮೊನ್ನೆ ಆ ನವೀನ ಬೂಟುಸುಗಳನ್ನು ಕಚ್ಚಿ ಚೂರು ಮಾಡಿ ಹಾಕಿಬಿಟ್ಟಿತು. ಇಂದು ನನ್ನ ಕೋಟನ್ನೇ ಚೂರುಚೂರಾಗಿ ಹಾಕಿಯದೆ. ಇದನ್ನು ಈಗಲೇ ಓಡಿಸಿ ಬಿಡು" ಎಂದು ಆಜ್ಞಾಪಿಸಿದನು. ವಿಟ್ಠಲನು ಅಯ್ಯಾ, ನಾಯಿಯನ್ನು ಮೂರು ಬಾರಿ ಎಣ್ಣೆಹೊಳೆಯ ಆಚೆ ದಡದಲ್ಲಿ ಬಿಟ್ಟುಬಂದೆನು. ಆದರೂ ಅದು ಇನ್ನೂ ಇನ್ನೂ ಇಲ್ಲೇ ಬರುತ್ತಿದೆ. ಎಷ್ಟು ಹೊಡೆದರೂ ಎಷ್ಟು ಬಡಿದರೂ ಅದಕ್ಕಿಲ್ಲ. ಅದು ಎಷ್ಟು ಪ್ರಯತ್ನವಾದರೂ ಈ ಮನೆಯನ್ನೇ ಬಿಡುವುದಿಲ್ಲ. ಅದಕ್ಕೇನು ಮಾಡಲಿ? ದೊಡ್ಡ ಕಷ್ಟವಾಯಿತಲ್ಲ!" ಎಂದು ಉತ್ತರವಿತ್ತನು.

ಸದಾಶಿವರಾಯನು—"ಹಾಗಾದರೆ ಇಂದು ಆ ನಾಯಿಯನ್ನು ಹಿಡಿದು ಅದರ ಕೊರಳಿಗೆ ದೊಡ್ಡ ಕಲ್ಲನ್ನು ಕಟ್ಟಿ ನೀರಿನಲ್ಲಿ ಮುಳುಗಿಸಿ ಕೊಂದು ಬಿಡು. ಹಾಗಾದರೂ ಆ ನಾಯಿಯ ಉಪದ್ರವೊಂದು ನಿಲ್ಲಲಿ. ಮತ್ತೇನು ಮಾಡುವುದಪ್ಪ!" ಎಂದನು. ಇದನ್ನು ಕೇಳಿದೊಡನೆಯೇ ವಿಟ್ಠಲನು ನಾಯಿಯನ್ನು ಹಿಡಿಯುವುದಕ್ಕಾಗಿ ಆ ಕಡೆ ಈ ಕಡೆ ಓಡಿದನು. ಸದಾಶಿವರಾಯನ ಮೊಮ್ಮಗನಾದ ನರಸಿಂಗನಿಂದ ಸಾಕಲ್ಪಟ್ಟ ನಾಯಿ ಇದು. ನರಸಿಂಗನು ತನ್ನ ಪ್ರೀತಿಯ ನಾಯಿಯ ವಿಷಯದಲ್ಲಿ ಆಜ್ಞಾಪಿಸಲ್ಪಟ್ಟ ಪ್ರಾಣದಂಡವನ್ನು ಕೇಳಿ ಅವರೀತಿಯಲ್ಲಿ ನಾಯಿಯನ್ನು ತಪ್ಪಿಸಬಹುದೆಂದು ಯೋಚಿಸತೊಡಗಿದನು. ವಿಟ್ಠಲನೆಂದರೆ ಕ್ರೂರ ಸ್ವಭಾವದ ಮನುಷ್ಯನು. ನಾಯಿಯನ್ನಲ್ಲ, ಮನುಷ್ಯರನ್ನೇ ಬೇಕಾದರೂ ಕೊಲ್ಲಲು ಸಿದ್ಧನಾಗಿರುವಂಥ ಸ್ವಭಾವ ಅವನದು. ಆದುದರಿಂದ ನರಸಿಂಗನು ಮೆಲ್ಲಮೆಲ್ಲನೇ ನಾಯಿಯನ್ನು ಉಪಾಯದಿಂದ ಮನೆಯಿಂದ ಹೊರಕ್ಕೆ ಕರೆದುಕೊಂಡು ಹೋದನು. ಅಲ್ಲಿಂದ ಬೇರೊಂದು ಸ್ಥಳಕ್ಕೆ ಕೊಂಡುಹೋಗಿ ಅಡಗಿಸಿಟ್ಟನು. ಆದರೆ ಮಾಡುವುದೇನು? ನಾಯಿಯು ನಾಯಿಯೇ! ನರಸಿಂಗನು ಯತ್ನಪೂರ್ವಕ ಅದನ್ನು ಅಡಗಿಸಿದೇನೋ ನಿಜ. ನಾಯಿಯು ಮಾತ್ರ ಸ್ವಲ್ಪ ಸಮಯ ಸ್ಥಾನಾಂತರ ಮಾಡಲ್ಪಟ್ಟ ಸ್ಥಳದಲ್ಲಿ ಅತ್ತಿತ್ತ ಸಂಚರಿಸಿ ಆಹಾರವನ್ನು ಭಕ್ಷಿಸುವ ಕಾಲಕ್ಕೆ ಸರಿಯಾಗಿ ಇನ್ನೊಮ್ಮೆ ಅದೇ ಮನೆಗೆ ಬಂದಿತು. ನರಸಿಂಗನಿಗೆ ನಾಯಿಯು ಬಂದುದರಿಂದ ಸ್ವಲ್ಪ ದುಃಖವುಂಟಾದರೂ ಅದು ಆತನ ಪ್ರೀತಿಯ ಪ್ರಾಣಿಯಾದುದರಿಂದ ಅದಕ್ಕೆ ಬೇಕಾದಷ್ಟು ಆಹಾರವನ್ನಿಕ್ಕಿದನು.

— ೨ —

ಸದಾಶಿವರಾಯನು ಭೋಜನವಾದ ಬಳಿಕ ಆತನು ನಿತ್ಯವೂ ಕುಳಿತುಕೊಳ್ಳುವ ಸ್ಥಾನದಲ್ಲಿದ್ದ ಒಂದು ಕುರ್ಚಿಯ ಮೇಲೆ ಕುಳಿತುಕೊಂಡನು. ಚಾಕರನಾದ ವಿಟ್ಠಲನು ಅಷ್ಟರಲ್ಲಿ ಒಂದು ಹರಿವಾಣದಲ್ಲಿ ವೀಳ್ಯವನ್ನಿಟ್ಟು ಆತನ ಮುಂದುಗಡೆಯಲ್ಲಿರುವ ಒಂದು ಮೇಜಿನ ಮೇಲೆ ಇಟ್ಟನು. ಕೂಡಲೇ ಸದಾಶಿವರಾಯನ ತಾಂಬೂಲ ಸ್ವೀಕಾರವಾಯಿತು. ಅದೇ ಸಮಯ ಅಪರಿಚಿತ ಪುರುಷನೊಬ್ಬನು ಆ ಮನೆಯನ್ನು ಪ್ರವೇಶಿಸಿ, "ಮಹಾಶಯರೇ ಸುಲಭ ಕ್ರಯಕ್ಕೆ ದೊರೆಯುವ ಒಂದು ಮುದ್ರಾಲಯವು ಬೇಕು ಎಂಬುದಾಗಿ ಪತ್ರಿಕೆಗಳಲ್ಲಿ ಪ್ರಕಟನೆ ಕೊಟ್ಟವರು ನೀವೇ ಅಲ್ಲವೇ? ನನ್ನ ಸ್ನೇಹಿತನೊಬ್ಬನೊಡನೆ ಒಂದು ಉತ್ತಮ ಮುದ್ರಣಯಂತ್ರವಿದೆ. ಅದನ್ನು ಅವನು ಮಾರಲು ಸಿದ್ಧನಾಗಿರುವನು. ಮುದ್ರಾಯಂತ್ರದಲ್ಲಿ ಕೆಲಸವೇನೋ ಚೆನ್ನಾಗಿ ನಡೆಯುತ್ತಿದೆ. ನಿಮಗೆ ನಿಜವಾಗಿಯೂ ಮುದ್ರಾಯಂತ್ರವು ಬೇಕೇ? ಬಹಳ ಸುಲಭ ಬೆಲೆಗೆ ದೊರೆಯುವುದು" ಎಂದನು. ಸದಾಶಿವರಾಯನು "ಆ ಮುದ್ರಾಯಂತ್ರದ ಹೆಸರೇನು? ಅದು ನಿಮ್ಮ ಸ್ವಂತ ಮುದ್ರಾಯಂತ್ರವೇ?" ಎಂದು ಪ್ರಶ್ನಿಸಿದನು.

ಆ ಅಪರಿಚಿತ ಪುರುಷನು—"ಕಲ್ಯಾಣಪುರದ ಕರ್ನಾಟಕ ಮುದ್ರಣಾಲಯವು. ಕಲ್ಯಾಣಪುರದಲ್ಲಿರುವ ಮಿಸ್ಟರ್ ಬ್ರೆಕ್‌ಹ್ಯಾಟ್ ಸಾಹೇಬರೇ ಅದರ ಮಾಲೀಕರಾಗಿರುವರು. ಅವರಿಗೀಗ ಮುದ್ರಾಲಯವು ಬೇಡವಾಗಿದೆ. ಅವರಿಗೆ ಆ ಮುದ್ರಾಲಯದ ಮೇಲ್ವಿಚಾರವನ್ನು ನೋಡಲು ಸಮಯವು ದೊರಕದುದರಿಂದ ಅದರಿಂದ ಅವರಿಗೆ ಏನೂ ಪ್ರಯೋಜನವಿಲ್ಲ. ಸರಿಯಾದ ಮೇಲ್ವಿಚಾರವನ್ನಿಟ್ಟು ನಡೆಯಿಸುವುದಾದರೆ ಏನಿಲ್ಲವೆಂದರೂ ನಾಲ್ಕೈದು ಸಾವಿರ ರೂಪಾಯಿಗಳನ್ನು ವರ್ಷ ಒಂದಕ್ಕೆ ಲಾಭಹೊಂದ ಬಹುದು." ಎಂದುತ್ತರವಿತ್ತನು.

ಸದಾಶಿವರಾಯನು ನನಗೊಂದು ಮುದ್ರಣಾಲಯವು ಬೇಕೆಂಬುದು ನಿಜ. ಆದರೆ ನನ್ನೊಡನಿರುವುದು ಬರೇ ಒಂದುವರೆ ಸಾವಿರ ರೂಪಾಯಿಗಳು ಮಾತ್ರ. ನಾನೊಂದು ಬೋರ್ಡ್ ಹೈಸ್ಕೂಲಿನಲ್ಲಿ ಅಧ್ಯಾಪಕನಾಗಿದ್ದೆನು. ಜಿಲ್ಲಾ ಬೋರ್ಡಿನಲ್ಲಿ ನನ್ನ ಕೆಲಸ ಮಾಡಿದ ಸಮ್ಬಂಧದ ಪ್ರೊವಿಡೆಂಟ ಫಂಡಿನ ಒಂದೂವರೆ ಸಾವಿರ ರೂಪಾಯಿಗಳು ದೊರಕಿರುವುದು. ಅದನ್ನೀಗ ನಾನು ಒಂದು ಬ್ಯಾಂಕಿನಲ್ಲಿಟ್ಟಿರುವೆನು. ನನಗೀಗ ಜಿಲ್ಲಾ ಬೋರ್ಡ್ ಶಾಲೆಯಲ್ಲಿ ಕೆಲಸವಿಲ್ಲ. ಜೀವನಕ್ಕೆ ಈ ಹಣದ ಬಡ್ಡಿ ಮಾತ್ರವಲ್ಲದೆ ಮತ್ತೇನೂ ಉಪಾಯವಿಲ್ಲ. ನನಗಿದ್ದ ಒಬ್ಬ ಪುತ್ರನೂ ಕಾಡಾ ವ್ಯಸನಾಗಿರುವನು. ಆತನ ಒಬ್ಬ ಪುತ್ರನೂ ಒಬ್ಬ ಪುತ್ರಿಯೂ ನನ್ನೊಡನೆಯೇ ಇದ್ದಾರೆ. ನನಗೆ ಪತ್ನಿಯಿಲ್ಲ. ನಾನು ಮೃತನಾದರೆ ಈ ಇಬ್ಬರು ಮಕ್ಕಳ ಪೋಷಣೆಗೆ ಅನ್ಯ ಉಪಾಯವಿಲ್ಲ. ಆದುದರಿಂದಲೇ ಸುಲಭ ಕ್ರಯಕ್ಕೆ ಒಂದು ಮುದ್ರಾಲಯವು ದೊರಕಿದರೆ ಅದನ್ನು ಯೋಗ್ಯವಾಗಿ ನಡೆಯಿಸಿ ನನ್ನ ಮೊಮ್ಮಗನಿಗೂ ಅದರ ಮಾಹಿತಿಯನ್ನು ಕೊಡಬೇಕೆಂಬುದಾಗಿ ಬಗೆದಿರುವೆನು. ಸರಿಯಾಗಿ ಕೆಲಸವನ್ನು ನಡೆಯಿಸಿದರೆ ಆತನು ಮುಂದೆ ದಿನಗಳನ್ನು ಕಳೆಯಬಹುದು. ಒಟ್ಟಾರೆ ಸಿಕ್ಕುವುದಾದರೆ ನನಗೆ ಒಂದೂವರೆ ಸಾವಿರ ರೂಪಾಯಿಗಳೊಳಗೆ ಸಿಕ್ಕಬೇಕು. ಇದಕ್ಕಿಂತ ಅಧಿಕ ಬೆಲೆಯ ಮುದ್ರಣಾಲಯವನ್ನು ಕೊಂಡುಕೊಳ್ಳಲು ನನ್ನಿಂದ ಸಾಧ್ಯವಿಲ್ಲ" ಎಂದು ಹೇಳಿದನು.

ಅಪರಿಚಿತ ಪುರುಷನು—"ನಿಮ್ಮ ಕೆಲಸವು ಇಷ್ಟೇ ರೂಪಾಯಿಗಳಿಂದಾಗುವುದು! ಆದರೆ ನನಗೆ ಮಾತ್ರ ಏನಾದರೂ 'ಕಮಿಷನ್' ಕೊಡಬೇಕು. ನಾನು ಆ ಮುದ್ರಾಲಯವನ್ನು ಸುಲಭ ಕ್ರಯಕ್ಕೆ ನಿಮಗೆ ದೊರಕುವಂತೆ ಮಾಡುವೆನು. ನನ್ನ ಹೆಸರು ವಿಶ್ವಂಭರರಾಯನೆಂಬುದಾಗಿದೆ. ಬ್ರೆಕ್‌ಹ್ಯಾಟ್ ದೊರೆಗಳು ಆ ಮುದ್ರಾಲಯವನ್ನು ಬಹಳ ಆಶೆಯಿಂದ ತೆರೆದರು. ಆದರೆ ಅವರ ಆ ಆಶೆಯೆಲ್ಲವೂ ಈಗ ಅಡಗಿಹೋಯಿತು. ಮುದ್ರಾಲಯವನ್ನು ಸ್ಥಾಪಿಸುವುದಕ್ಕೆ ಅವರು ಹೇರಳ ಹಣ ಖರ್ಚು ಮಾಡಿರುವರು. ಈಗ ಮಾತ್ರ ಅವರಿಗೆ ಅದರ ಮೇಲೆ ಬೇಸರ ಹುಟ್ಟಿಯದೆ. ನಿಮಗೆ ಮುದ್ರಾಲಯವನ್ನು ನೋಡಬೇಕೆಂಬ ಅಪೇಕ್ಷೆಯಿದ್ದರೆ ಒಮ್ಮೆ ನೋಡಿ ಬರುವಾ. ಮುದ್ರಾಲಯದಲ್ಲಿ ಕೆಲಸವು ಚೆನ್ನಾಗಿ ನಡೆಯುತ್ತಿದೆ" ಎಂದ ಬಳಿಕ ಇಬ್ಬರೂ ಒಂದು ಜಟಕಾ ಬಂಡಿಯನ್ನು ಬಾಡಿಗೆಗೆ ಹಿಡಿದು ಕಲ್ಯಾಣಪುರದಲ್ಲಿರುವ ಕರ್ನಾಟಕ ಮುದ್ರಣಾಲಯಕ್ಕಾಗಿ ಹೊರಟು ಹೋದರು. ಸದಾಶಿವರಾಯನ ಗೃಹದಿಂದ ಆ ಮುದ್ರಣಾಲಯವು ಸಾಧಾರಣ ಎಂಟು ಮೈಲು ದೂರವಿತ್ತು.

— ೩ —

ಕಲ್ಯಾಣಪುರದಲ್ಲಿ ಹರಿಯುವ ನದಿ ತೀರದಲ್ಲಿ ಅಂದವಾಗಿ ಕಂಗೊಳಿಸುವ ಗೃಹವೇ ಕರ್ನಾಟಕ ಮುದ್ರಾಯಂತ್ರವಿರುವ ಭವನವು. ಭವನದೊಳಗೆ ಎರಡು ಮೂರು ಮುದ್ರಿಸುವ ಯಂತ್ರಗಳು. ಒಂದು ಕಟ್ಟಿಂಗ್ ಯಂತ್ರವೂ ವಿವಿಧ ಟೈಪುಗಳೂ ಇವೆ. ಒಟ್ಟಾರೆ ಮುದ್ರಾಲಯಕ್ಕೆ ಬೇಕಾದ ಸರ್ವ ಸಾಮಗ್ರಿಗಳೂ ಅಲ್ಲಿವೆ. ಹತ್ತಿಪ್ಪತ್ತು ಜನರು ಮುದ್ರಣಾಲಯದಲ್ಲಿ ಕೆಲಸವನ್ನು ಮಾಡುತ್ತಿರುವರು. ಕೆಲಸದ ಭರದಲ್ಲಿ ಒಬ್ಬರನ್ನೊಬ್ಬರು ನೋಡುವುದೇ ಇಲ್ಲ. ಕೆಲಸವು ಚೆನ್ನಾಗಿ ನಡೆಯುತ್ತಲಿದೆ. ಟೈಪು, ಕೇಸುಗಳು ಸಮಸ್ತವೂ ನೂತನ ವಿಧದವುಗಳು. ಸದಾಶಿವರಾಯನು ಇದೆಲ್ಲವನ್ನೂ ನೋಡಿ "ಈ ಮುದ್ರಾಲಯವನ್ನು ಒಂದೂವರೆ ಸಾವಿರ ರೂಪಾಯಿಗಳಿಗೆ ಕೊಂಡುಕೊಳ್ಳಲು ನಾನು ಸಿದ್ಧನಾಗಿರುವೆನು." ಎಂದನು.

ವಿಶ್ವಂಭರರಾಯನು "ಸುಮ್ಮನಿರಿ! ಸುಮ್ಮನಿರಿ!! ಈಗ ಏನೊಂದೂ ಮಾತನಾಡಲಾಗದು. ಈಗ ಮುದ್ರಾಲಯದಲ್ಲಿ ಕೆಲಸವೆಲ್ಲ ಹೇಗೆ ನಡೆಯುತ್ತದೆ ನೋಡೋಣ. ನಿಜವಾಗಿಯೂ ಮುದ್ರಣಾಲಯದಲ್ಲಿ ದಿವ್ಯ ಕಾರ್ಯವು ನಡೆಯುತ್ತದೆ" ಎಂದು ಹೇಳಿದ ಬಳಿಕ ಆ ಕಡೆ ಈ ಕಡೆ ನೋಡಿದಂತೆ ನಟಿಸಿ ಇಬ್ಬರೂ ಅಲ್ಲಿಂದ ಬಹಿರ್ಗತರಾದರು. ಆದರೆ ಮುದ್ರಾಲಯದಲ್ಲಿ ಆರೊಡನಾದರೂ ಏನೊಂದೂ ಇವರು ಮಾತನಾಡಲಿಲ್ಲ. ಪಥದಲ್ಲಿ ಬರುತ್ತಿರುವಾಗ ವಿಶ್ವಂಭರರಾಯನು ಸದಾಶಿವರಾಯನೊಡನೆ "ಮುದ್ರಾಲಯದಲ್ಲಿ ಅದರ ಕ್ರಯವಿಕ್ರಯದ ಕುರಿತು ಪ್ರಸ್ತಾಪಿಸಬಾರದು. ಏಕೆಂದರೆ ಮುದ್ರಣಾಲಯವನ್ನು ವಿಕ್ರಯಮಾಡುವರೆಂಬ ಸಂಗತಿಯು ಮುದ್ರಣಾಲಯದ ಕರ್ಮಚಾರಿಗಳಿಗೆ ತಿಳಿದು ಬಂದರೆ ಅವರು ಅದರೊಳಗಿನ ಹಲವು ವಸ್ತುಗಳನ್ನು ತಪ್ಪಿಸಿಬಿಡುವರು. ಇಷ್ಟೇ ಅಲ್ಲದೆ ಬ್ರೆಕ್‌ಹ್ಯಾಟ್ ದೊರೆಗಳ ಅಭಿಪ್ರಾಯವಾದರೂ ಮುದ್ರಾಲಯವನ್ನು ಹಸ್ತಾಂತರಗೊಳಿಸುವ ಮುಂಚೆ ಅನ್ಯರಿಗೆ ಅದರ ವಿಕ್ರಯದ ಕುರಿತಾದ ವಾರ್ತೆಯೇ ತಿಳಿಯಬಾರದಾಗಿ ಇದೆ. ಏಕೆಂದರೆ ಮುದ್ರಣಾಲಯವು ಮಾರಲ್ಪಡುವುದು ಎಂದು ವರ್ತಮಾನವು ಹರಡಿದ ಮೇಲೆ ಮುದ್ರಣಾಲಯವು ವಿಕ್ರಯವಾಗದಿದ್ದರೆ ಅವರ ಸನ್ಮಾನಕ್ಕೆ ಕುಂದು ಹಾನಿಯದೆ. ನಿಮಗೆ ಮುದ್ರಣಾಲಯವನ್ನು ನೋಡಿ ಸಂತೋಷವಾಯಿತಲ್ಲವೇ? ಆ ಮುದ್ರಾಲಯದಲಿ ಅವಾವ ವಿಧವಾದ ಟೈಪುಗಳಿವೆ, ಎಷ್ಟು ಯಂತ್ರಗಳಿವೆ, ಎಷ್ಟು ಕೇಸುಗಳಿವೆ, ಅವಾವ ಕರ್ಮಚಾರಿಗೆ ಎಷ್ಟೆಷ್ಟು ವೇತನವು ಕೊಡಲ್ಪಡುವುದು ಎಂಬ ಈ ವಿಷಯದ ಕುರಿತು ನಾನು ನಿಮಗೆ ನಾಳೆಯೇ ತಿಳಿಸುವೆನು. ನೀವು ಇದೆಲ್ಲವನ್ನೂ ತಿಳಿದ ಬಳಿಕ ಮುದ್ರಾಲಯವನ್ನು ತೆಗೆದುಕೊಳ್ಳಬಹುದು. ಮುದ್ರಾಲಯವನ್ನು ತೆಗೆದುಕೊಂಡ ಮೇಲೆ ಪರಿಚಾಲಕರಾಗಿ ನೀವು ನಿಮಗೆ ಇಚ್ಛೆಯಿದ್ದಂತೆ ಮುದ್ರಾಲಯದಲ್ಲಿ ಸುಧಾರಣೆಗಳನ್ನು ಮಾಡಬಹುದು. ಬ್ರೆಕ್‌ಹ್ಯಾಟ್ ದೊರೆಗಳು ಮುದ್ರಾಲಯವನ್ನು ನಿಮ್ಮ ವಶ ಬಿಟ್ಟೊಡನೆಯೇ ನೀವು ಮುದ್ರಾಲಯದಲ್ಲಿ ಪರಿಚಾಲಕರು ಕುಳಿತುಕೊಳ್ಳುವ ಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳಿರಿ. ಕರ್ಮಚಾರಿಗಳೆಲ್ಲರೂ ಅವಾಕ್ಕಾಗುವರು. ಇದೆಲ್ಲವೂ ಹೀಗೆ ನಡೆದರೇನೇ ಕರ್ಮಚಾರಿಗಳಿಗೆ ಮುದ್ರಾಲಯದಿಂದ ಅವುದೊಂದೂ ವಸ್ತುವನ್ನು ಕದ್ದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ" ಎಂದನು.

ಸದಾಶಿವರಾಯನು "ಮುದ್ರಾಲಯವು ತೆರೆಯಲ್ಪಟ್ಟ ಭವನದ ಬಾಡಿಗೆಯ ವ್ಯವಸ್ಥೆಯೇನು?" ಎಂದು ಪ್ರಶ್ನಿಸಿದನು.

"ಬ್ರೆಕ್‌ಹ್ಯಾಟ್ ದೊರೆಗಳು ಈತನಕ ಎಷ್ಟು ಬಾಡಿಗೆಯನ್ನು ಕೊಡುತ್ತಾ ಬಂದಿರುವರೋ ಅಷ್ಟೇ ಬಾಡಿಗೆಯನ್ನು ನೀವೂ ಕೊಟ್ಟರಾಯಿತು. ಅವರು ಕೊಟ್ಟಷ್ಟೇ ಬಾಡಿಗೆಯನ್ನು ನೀವು ಕೊಡುವುದಾದರೆ ಗೃಹದ ಅಧಿಕಾರಿಯು ಆಕ್ಷೇಪಿಸಲಿಕ್ಕಿಲ್ಲ." ಎಂದು ವಿಶ್ವಂಭರರಾಯನು ಉತ್ತರ ಕೊಟ್ಟ ಮೇಲೆ ಇಬ್ಬರೂ ತಮ್ಮ ತಮ್ಮ ಮನೆಗಳಿಗೆ ಪ್ರಸ್ಥಾನ ಮಾಡಿದರು.

— ೪ —

ಮರುದಿವಸ ವಿಶ್ವಂಭರರಾಯನು ಕೆಲವು ಲೆಕ್ಕದ ಪುಸ್ತಕಗಳನ್ನು ತೆಗೆದುಕೊಂಡು ಸದಾಶಿವರಾಯನಲ್ಲಿಗೆ ಬಂದನು. ಈ ಪುಸ್ತಕಗಳಲ್ಲಿ ಕರ್ನಾಟಕ ಮುದ್ರಾಲಯದ ವಸ್ತುಗಳೆಲ್ಲವುಗಳ ವಿವರಣೆಯೂ, ಕರ್ಮಚಾರಿಗಳ ವೇತನಾದಿಗಳೂ, ಮುದ್ರಾಲಯದ ಆಯವ್ಯಯದ ಮಾಹಿತಿಯೂ ಅಡಕವಾಗಿತ್ತು. ಸದಾಶಿವರಾಯನು ಪುಸ್ತಕಗಳನ್ನು ತೆರೆದು ಎಲ್ಲವನ್ನೂ ಕೂಲಂಕುಷವಾಗಿ ನೋಡಿದನು. ಬಳಿಕ ಮುದ್ರಾಲಯವು ಒಂದೂವರೆ ಸಾವಿರ ರೂಪಾಯಿಗಳಿಗೆ ದೊರೆಯುವಂತೆ ಮಾಡಿದರೆ ವಿಶ್ವಂಭರರಾಯನಿಗೆ ನೂರು ರೂಪಾಯಿಗಳನ್ನು ದಲಾಲಿಯಾಗಿ ಕೊಡುವುದೆಂಬುದಾಗಿ ನಿಶ್ಚಿತವಾಯಿತು.

ಸದಾಶಿವರಾಯನು "ಮುದ್ರಣಾಲಯದ ಈ ಲೆಕ್ಕದ ಪುಸ್ತಕಗಳೆಲ್ಲವೂ ನನ್ನ ಸ್ವಾಧೀನವಿರಲಿ. ಇನ್ನು ಬ್ರೆಕ್‌ಹ್ಯಾಟ್ ದೊರೆಗಳೊಡನೆ ಮುದ್ರಾಲಯದ ಕುರಿತು ಕೂಡಲೇ ಮಾತನಾಡಿ ಒಂದು ವ್ಯವಹಾರವನ್ನು ಮಾಡಿ ಬಿಡುವಾ" ಎಂದನು.

ವಿಶ್ವಂಭರರಾಯನು "ಬ್ರೆಕ್‌ಹ್ಯಾಟ್ ದೊರೆಗಳು ಈಗ ಕಲ್ಯಾಣಪುರದಲ್ಲಿ ಇಲ್ಲ. ಅವರು ಹವಾ ಬದಲಾವಣೆಗಾಗಿ ಕುದುರೆಮುಖ ಬೆಟ್ಟಕ್ಕೆ ಹೋಗಿರುವರು. ಇನ್ನು ನಾಲ್ಕೈದು ದಿನಗಳೊಳಗೆ ಅವರು ಬರುವರು. ಆ ಮೇಲೆ ಅವರೊಡನೆ ಮಾತನಾಡಿದರಾಯಿತು" ಎಂದು ಹೇಳಿದನು. ಹೀಗೆಯೇ ಎರಡು ಮೂರು ದಿನಗಳು ಕಳೆದುವು. ಸದಾಶಿವರಾಯನು ಇಷ್ಟರಲ್ಲಿ ನಾಲ್ಕೈದು ಬಾರಿ ಕಲ್ಯಾಣಪುರತನಕ ಹೋಗಿ ಕರ್ನಾಟಕ ಮುದ್ರಾಲಯದ ಹಿಂದೆ ಮುಂದೆ ತಿರುಗಾಡಿ ಬಂದನು.

ಒಂದು ದಿವಸ ಅಪರಾಹ್ನ ಕಾಲದಲ್ಲಿ ವಿಶ್ವಂಭರರಾಯನು ಸದಾಶಿವರಾಯನಲ್ಲಿಗೆ ಬಂದು "ಬ್ರೆಕ್‌ಹ್ಯಾಟ್ ದೊರೆಗಳು ಕುದುರೆಮುಖ ಬೆಟ್ಟದಿಂದ ಹಿಂತಿರುಗಿ ಬಂದಿರುವರು. ಮುದ್ರಾಲಯದ ಕುರಿತು ಈಗಲೇ ಅವರೊಡನೆ ಮಾತನಾಡುವುದು ಯುಕ್ತವು" ಎಂದನು.

ಸದಾಶಿವರಾಯನು ಕರ್ನಾಟಕ ಮುದ್ರಾಲಯವನ್ನು ನೋಡಿ ಎಷ್ಟು ಪ್ರಲುಬ್ಧನಾಗಿರುವನೆಂಬುದನ್ನು ಹೇಳಿ ತೀರದು. ವಿಶ್ವಂಭರರಾಯನು ನುಡಿದುದನ್ನು ಕೇಳಿದೊಡನೆಯೇ ಬ್ರೆಕ್‌ಹ್ಯಾಟ್ ದೊರೆಗಳ ಭವನಕ್ಕಾಗಿ ಹೊರಟನು.

(ಸಶೇಷ)

ESTABLISHED 1876.

M. Ganapaya & Sons,

AYURVEDIC PHYSICIANS.

Car Street, MANGALORE, S. Kanara.

(53 ವರುಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ — ಔಷಧಗಳು.) —

1. ಅಶೋಕಾರಿಷ್ಟ ಮತ್ತು ಮಾತ್ರೆ—

ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಅತಿ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರೈಸುವುದು.

ಒಂದು ಬಾಟಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣಿ—

ಘಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ಶೀಘ್ರದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟುಬರುವ ಜ್ವರ, ಚಾತುರ್ಥಿಕ ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲೆಜ್ವರದಿಂದ ಬಾಧಿಸಲ್ಪಟ್ಟು ಹಲವುತರದ ಔಷಧಿಗಳನ್ನು ಉಪಯೋಗಿಸಿ, ಗುಣಹೊಂದದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ ಬಾಟ್ಲಿಯೊಂದಕ್ಕೆ 1-8-0, 3 ಬಾಟ್ಲಿಗೆ 4-2-0.

ಇವುಗಳಲ್ಲದೆ ಮಲೇರಿಯಾ ಗುಟಿಕೆ, ಜ್ವರಗಡ್ಡೆಯ ಮೇಲೆ ಹಚ್ಚುವ ತೈಲ, ಬಾಲಗ್ರಹ ಗುಟಿಕೆ, ಶ್ವಾಸಕಾಸ ಗುಟಿಕೆ, ಇಚ್ಛಾಭೇದಿ ಗುಟಿಕೆ, ಚ್ಯವನ ಪ್ರಾಶಾವಲೇಹ, ಧಾತುಪುಷ್ಟಿ ಲೇಹ, ಚಂದನಾಸವ ಮತ್ತು ಮಾತ್ರೆಗಳು ಇವೇ ಮೊದಲಾದ ಸಮಸ್ತ ಔಷಧಗಳೂ ದೊರೆಯುವವು. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಬೇಕೆಂದಿದೆಯೋ? ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿ. ಭವಿಷ್ಯವನ್ನು ಕಂಡುಹಿಡಿದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. ೧; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ ೪ ಮಾತ್ರ; ಪ್ರತಿ ತಿಂಗಳ ಕಾಲಂಶದ ವಿವರವುಳ್ಳ ಒಂದು ವರುಷದ ಜಾತಕ ಫಲ ರೂ. ೫; ಐದು ವರ್ಷದ ಫಲ ರೂ. ೭; ಪ್ರತಿ ಸಪ್ತೆಯ ವಿವರವುಳ್ಳ ಒಂದು ವರ್ಷದ ಫಲ ರೂ. ೧೦. ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ರೂ. ೩; ೮ ಟ. ೬. ಆಣೆ ೪; ನಿಮಗಾಗಿಯೇ ಬೇರೆ ಮಾಡಿದ ತಾಯಿತಕ್ಕೆ ರೂ. ೫೦.

ಆಂಧ್ರ ಪತ್ರಿಕೆ—(ತೆಲುಗ ದೈನಿಕ ವರ್ತಮಾನಪತ್ರಿಕೆ) ಮದ್ರಾಸ ತಾ. ೩-೨-೧೯೨೪ರಲ್ಲಿ ಬರೆದುದು—ತಿರುತ್ತಣಿಯಲ್ಲಿನ ಹನೂಮಾನ್ ಜ್ಯೋತಿಷಾಲಯದ ಜ್ಯೋತಿಷ್ಯರಾದ ವಿ. ಕೆ. ಶಠಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. ತಾ. ೧೯೨೩ನೇ ಇಸವಿ ನವಂಬರು ತಾ. ೧೫ರಲ್ಲಿ ಪ್ರಕಟಿಸಿದುದು. ಅದರಲ್ಲಿ ವ ಗಾಂಧಿಯವರು ೧೯೨೪ನೇ ಇಸವಿ ಫೆಬ್ರುವರಿ ತಾ. ೫ರಲ್ಲಿ ೭ ಘಂಟೆಗೆ ಕಾರಾಗೃಹದಿಂದ ಮುಕ್ತರಾಗುವರೆಂದು ಬರೆದಿತ್ತು. ಅದರಲ್ಲಿ ಹೇಳಿದಂತೆಯೇ ನಡೆದಿದೆ. ಇದಕ್ಕಾಗಿ ಈ ಜೋತಿಷ್ಯರ ಅದ್ಭುತ ಶಕ್ತಿಸಾಮರ್ಥ್ಯಗಳನ್ನು ಸರ್ವರೂ ಪರೀಕ್ಷಿಸಲು ನಾವು ಶಿಫಾರಸು ಮಾಡುತ್ತೇವೆ.

V. K. Satagopachariar,
Hanuman Astrological Office,
TIRUTTANI, CHITTOOR DISTRICT,
Madras Presidency.

ವಿ. ಕೆ. ಶಠಗೋಪಾಚಾರ್ಯರ್,
ಹನೂಮಾನ್ ಎಸ್ಟ್ರಾಲೋಜಿಕಲ್ ಆಫೀಸ್,
ತಿರುತ್ತಣಿ, ಚಿತ್ತೂರು ಜಿಲ್ಲಾ,
ಮದರಾಸು ಸಂಸ್ಥಾನ.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾವಾಗಿಯೇ ತಿಳಿಯುವುದು.

ಫೆರ್ರೊಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3-4-0 ಮಾತ್ರ.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು ಖಚಿತವಾಗುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲಿಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು:
ಡೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕೆನರಾ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡಾ.

ಹೊಸ

ಇಂಡೋಬಾಮ್

ಡಬ್ಬಿಗೆ ಆಣೆ ೮ — ಡಜನಿಗೆ ರೂ. ೫-೦-೦

ಹುಣ್ಣುಗಳಿಗೂ, ಸೀತಕಟ್ಟು, ಗಂಟುನೋವಿಗೂ, ಚೇಳಿಗಳಿಗೂ ಇಂಡೋಬಾಮ್ ದಿವ್ಯ ಔಷಧ. ಎರಡುಸಲ ಹಚ್ಚಿದೊಡನೆ ಕೆಲವೇ ನಿಮಿಷಗಳೊಳಗೆ ಬೇನೆಯು ಮಾಯವಾಗುವುದು. ಇಂಡೋಬಾಮನ್ನು ಇವರಿಂದ ಪಡೆಯಿರಿ.

ಕರ್ನಾಟಕ ಬ್ರದರ್ಸ್,
ಮುಂಬಾಯಿ ನಂಬ್ರ 4.

ತ್ವರೆಮಾಡಿರಿ. **ತ್ವರೆಮಾಡಿರಿ.**

ಶಾಲಾ ಹುಡುಗರಿಗೂ ಇತರರಿಗೂ ಬೇಕಾಗುವಂತಹ ವಿದವಿಧದ ಕೊಪಿಗಳು, ಮತ್ತು ಸಾದಾ ಪೆನ್ಸಿಲುಗಳೂ, ರಬ್ಬರುಗಳೂ ವಿವಿಧ ಸ್ವಾಚಿನ ಸ್ಟಿಫನ್ಸ್ ಇಂಕ್ ಬಾಟಲಿಗಳೂ, ಹೊಸತಾಗಿ ತಂದಿರುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ತಯಾರಾಗಿವೆ! ತಯಾರಾಗಿವೆ!!

ಎರಡನೇ ಮತ್ತು ಮೂರನೇ ದರ್ಜೆಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಭಾವಮಾನೆ,
ರಥಬೀದಿ, ಮಂಗಳೂರು.

Diamonds ವಜ್ರಗಳು Diamonds

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ನೇರವಾಗಿ, ಯಂಟವರ್ಪಿನಿಂದ ತರಿಸುವ ವಜ್ರಗಳು — ಮಾರಾಟಕ್ಕಿವೆ. —

ಬೋಳ ಮಂಗೇಶ ರಾವ್,
ಮಂಗಳೂರು

Diamonds! Diamonds!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಚುನಾಯಿತ (first quality Selected) ಎನ್ ಸ್ಟೋಡಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೦ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೩೦೦ ರೂಪಾಯಿ ವರೆಗೆ, ದೈವೀಶಕ್ತಿಯು, ಒಂದು ಸಾರಿ ಧರಿಸಿ ನೋಡಿದರೆ ನಿಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
ಸಕ್ಲೇಶಪುರ ಪೋಸ್ಟು ಕಡೂರ್ ಡಿಸ್ಟ್ರಿಕ್ಟ

Edited Printed & Published by V. S. Kamath at the M. T. A SHARADA PRESS, MANGALORE

ಚಂದಾ ನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ 2—0—0 **Registered No. M. 489** ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible]

ಪುಸ್ತಕ ೨೩. ಮಂಗಳೂರು, ತಾ. ೧೭ನೇ ಶುಕ್ರವಾರ ಮೇ ೧೯೨೯. (17—5—29.) ಸಂಚಿಕೆ ೨೦

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. Branches:—COONDAPOOR. Mangalore.

ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ. ಮಂಗಳೂರು.

ನಿಯಮಿತ ಮೂಲಧನ ರೂ. 3,50,000-

1. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ವಿಕ್ರಿದ ಮೂಲಧನ ರೂ. 2,25,000-
2. ಕೆಟ್ಟಿ ಒಂದ ಮೂಲಧನ ರೂ. 2,12,630-
3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 1,26,700-
4. ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 3,84,218-5-0-

Statement of Affairs of the Canara Banking Corporation Udipi, Limited as on 31st March 1929

CAPITAL AND LIABILITIES.

1	Paid up Capital	Rs. 2,20,870-0- 0
2	Reserve and other contingent funds	„ 1,26,700-0- 0
3	Deposits	„ 16,39,286-2-10
4	Due to Bankers on Overdraft and Loan a/c	„ 1,65,516-10-10
5	Sundry Persons' a/c for Bills for collection as per Contra	„ 30,503-1- 7
6	Sundries including P & L items	„ 24,371-8- 3
	Total	22,07,247-7- 6

PROPERTY AND ASSETS

1	Premises Building, Furniture &c.	Rs. 9,215-0-0
2	Investments on G. P. Notes at cost	„ 8,84,218-6-0
3	Investments on Approved Securities	„ 18,06,750-14- 7
4	Bills for collection as per Contra	„ 30,503- 1-7
5	Cash in hand & with Bankers.	„ 23,332-8-11
6	Sundries	3,227-9-5
	Total	22,07,247- 7-6.

Office of the Corporation, UDIPI, 28—4—'29.

N. ANANDA RAO, *Secretary.*

ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು:— ರಿಂಗ್‌ವರ್ಮ್, [illegible]

ದಂತಮಂಜನ:— [illegible]

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

ಡೋಂಗರ

ರವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನ ದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧ ವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಆತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,

ಗಿರಗಾಂವ, ಮುಂಬಯಿ.

ಏಜಂಟರು — ದಿ ಯೂನಿಯನ್ ಪರ್ಡಾ, ಮಂಗಳೂರು.

ಶ್ರೀ ಸರಸ್ವತೀ ಭಂಡಾರ.

1	ಸಚಿತ್ರ ರಾಮಾಯಣ ಕಥಾ ಸಂಗ್ರಹ	1—[illegible]—0
2	ಮದನಮೋಹನ ರಾಜ ಚರಿತ್ರೆ	0—[illegible]
3.	ಮಾಧವೀ ಕಂಕಣ	[illegible]
4.	ವಿದ್ಯಾಮಂಜರಿ ಕಥೆಗಳ.	[illegible]
5.	ಮಹಾಭಕ್ತ ವಿಜಯ.	3—[illegible]
6	ಶೃಂಗಾರ [illegible] ಕಥೆಗಳ.	[illegible]—12—0
7.	[illegible]	1—[illegible]
8.	ವಿಮಲಾ ದೇವಿ	1—12—0
9	ಸೌಭಾಗ್ಯ [illegible]	[illegible]
10.	ಧರ್ಮ ಸಾಮ್ರಾಜ್ಯಂ	1—4—0
11.	ರಾಮ ರಾಜ್ಯ	0—12—0
12.	ಆನಂದ ಮಠ	1—12—0
13.	[illegible]	0—12—0
14.	ವಚನ ಭಾರತ	1—8—0
15.	ಇಂಡಿಯನ್ ಪಿನಲ್ ಕೋಡ್	2—8—0
16	ಕ್ರಿಮಿನಲ್ ಪ್ರೊಸೀಜರ್ ಕೋಡ್	3—0—0
17.	ಲ್ಯಾಂಡ್ ರೆವೆನ್ಯೂ ಕೋಡ್	1—0—0

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ [illegible] ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

[illegible] ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ.

ವಿಳಾಸ— **ಶ್ರೀ ಸರಸ್ವತೀ ಭಂಡಾರ.**

[illegible]!

ಬರುವ ಜೂನ್ 30ರಿಂದ [illegible]

ಬನಿಯನುಗಳ ಮಾರಾಟ!

ಸ್ತ್ರೀಪುರುಷರಿಗೂ, ಬಾಲಕಬಾಲಕಿಯರಿಗೂ ಬೇಕಾಗುವ ಸುಮಾರು 5 ಸಾವಿರ ರೂಪಾಯಿ ಬೆಲೆಬಾಳುವ ಉಡಿಗೆತೊಡಿಗೆಗಳು ಹೇಗೂ ಮಾರಿಯೇ ತೀರಬೇಕಾದುದರಿಂದ ದರ ತುಂಬಾ ಇಳಿಸಲಾಗಿದೆ.

ಮೊದಲು ಬಂದವರಿಗೆ ಮನವೊಪ್ಪುವ ಉತ್ತಮ ಉಡಿಗೆ ಬೇಕಾದಂತೆ ಚುನಾಯಿಸಿ ಕೊಂಡುಕೊಳ್ಳ ಲಾಗುತ್ತದೆ.

ಕ್ರಯವು ಅಗ್ಗವಾಗಿರುವುದರಿಂದ ಬೇಗ ಬೇಗನೇ ಮಾರಿಹೋಗುವುದು ನಿಶ್ಚಯ.

ವಿಳಂಬ ಮಾಡದೆ ಆದಷ್ಟು ಮೊದಲಾಗಿ ಬನ್ನಿರಿ!

ದಿ ಕೊಮನ್‌ವೆಲ್ತ್ ಹೊಸಿಯರಿ ಫೆಕ್ಟರಿ,

ಮಂಗಳೂರು.

ಬೆಳಗಾವಿನ ಪರಿಷದಗಳು.

ಕರ್ನಾಟಕ ಏಕೀಕರಣ ಪರಿಷತ್ತು.

ಕರ್ನಾಟಕ ಏಕೀಕರಣ ಪರಿಷತ್ತು ತಾರೀಕು ೧೬ ಮತ್ತು ೧೭ನೇ ದಿನಗಳಲ್ಲಿ ಮದರಾಸು ಸರಕಾರದ ಮಾಜಿ ಮಂತ್ರಿಗಳಾದ ಶ್ರೀ ಎ. ರಂಗನಾಥ ಮೊದಲಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಕರ್ನಾಟಕದ ವಿವಿಧ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಮೊದಲು ಸ್ವಾಗತಾಧ್ಯಕ್ಷರಾದ ಶ್ರೀ ಡಿ. ವಿ. ಬೆಲ್ಲದವರ ಸ್ವಾಗತ ಭಾಷಣವಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕರ್ನಾಟಕ ಏಕೀಕರಣ ಚಳವಳಿಯ ಪ್ರಾಮುಖ್ಯತೆ, ನೆಹರು ವರದಿಯನ್ನು ಸರ್ವರೂ ಸ್ವೀಕರಿಸಬೇಕಾಗಿರುವಿಕೆ ಮೊದಲಾದವುಗಳ ಕುರಿತಾಗಿ ವಿವರಿಸಿದರು.

ಕರ್ನಾಟಕ ಪತ್ರಿಕಾಕರ್ತರ ಪರಿಷತ್ತು.

ಕರ್ನಾಟಕ ಪತ್ರಿಕಾಕರ್ತರ ಪರಿಷತ್ತು ತಾರೀಕು ೧೬ನೇ ದಿನ ಬೊಂಬೆ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಮಿ. ಬ್ರೆಲ್ವಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಅವರ ಅಧ್ಯಕ್ಷ ಭಾಷಣದಲ್ಲಿ ಹಿಂದೂಸ್ಥಾನದಲ್ಲಿ ಪತ್ರಿಕಾಕರ್ತರ ಸಂಘ ನಿರ್ಮಾಣದ ಅವಶ್ಯಕತೆಯ ಕುರಿತಾಗಿ ವಿವರಿಸಿದರು. ಪತ್ರಿಕೋದ್ಯೋಗಕ್ಕೆ ಹಾನಿಕರವಾದ ಜಾತೀಯ ದ್ವೇಷವನ್ನು ಖಂಡಿಸಿ, ಅಂತಹ ಜಾತೀಯ ಭಾವನೆಯ ಪತ್ರಿಕಾ ಸಂಪಾದಕರ ವೃತ್ತಿಯು ಸರಿಯಾಗದೆಂದೂ ನುಡಿದರು. ಮದರಾಸ, ಮುಂಬಾಯಿ, ಮೈಸೂರು, ಹೈದರಾಬಾದ ಸರಕಾರದವರು ತಮ್ಮ ಪ್ರಕಟಣೆಗಳನ್ನು ಧರ್ಮಾರ್ಥವಾಗಿ ಪ್ರಕಟಿಸುವ ಬಗ್ಗೆ ಕರ್ನಾಟಕದ ಎಲ್ಲಾ ಪತ್ರಿಕೆಗಳಿಗೆ ಕೊಡತಕ್ಕದ್ದೆಂದೂ ಮೈಸೂರಿನ ಪತ್ರಿಕೋದ್ಯೋಗಕ್ಕೆ ತಡೆಯುವ ಈಗಿನ ಕಾನೂನುಗಳನ್ನು ಮೈಸೂರು ಮಹಾರಾಜರವರು ಸುಧಾರಿಸಬೇಕೆಂದೂ, ಮುಂಬಾಯಿಯ 'ನವಕಾಳ' ಪತ್ರಿಕೆಯನ್ನು ನಿಲ್ಲಿಸಿದುದಕ್ಕೆ ಮುಂಬಾಯಿ ಸರಕಾರದ ವರ್ತನೆಯನ್ನು ಖಂಡಿಸಿಯೂ, ನಿರ್ಣಯಗಳಾದುವು. ಮಂಗಳವಾರ ದಿನ ಕರ್ನಾಟಕ ಪತ್ರಿಕೆಗಳ ಒಂದು ಪ್ರದರ್ಶನವು ಜರಗಿತು.

ಕರ್ನಾಟಕ ವ್ಯಾಪಾರಿಗಳ ಪರಿಷತ್ತು.

ಈ ಪರಿಷತ್ತು ಬೆಂಗಳೂರಿನ ಪ್ರಮುಖ ವ್ಯಾಪಾರಿಗಳಾದ ಶ್ರೀ ಸುಬ್ಬರಾಮ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ತಾರೀಕು ೧೮ನೇ ದಿನ ಜರಗಿತು. ಹಲವು ಜನರು ಹಾಜರಿದ್ದರು. ಸ್ವಾಗತಾಧ್ಯಕ್ಷರಾದ ರಾವ್ ಬಹದ್ದೂರ್ ವಿ. ಎ. ಅಂಗೋಳಿಯವರು ಸ್ವಾಗತ ಭಾಷಣದಲ್ಲಿ ಕರ್ನಾಟಕದ ಹಿಂದಿನ ವ್ಯಾಪಾರದ ಅಭಿವೃದ್ಧಿ, ಇಂದಿನ ಅವನತಿ, ಕರ್ನಾಟಕ ವ್ಯಾಪಾರಿ ಮಂಡಳವನ್ನು ಆದಷ್ಟು ಬೇಗನೆ ವೃದ್ಧಿಗೊಳಿಸುವ ಆವಶ್ಯಕತೆ ಮೊದಲಾದವುಗಳನ್ನು ವಿವರಿಸಿದರು. ಅಧ್ಯಕ್ಷರು ಕೂಡಾ ಇದೇ ವಿಷಯಗಳನ್ನು ವಿಸ್ತರಿಸಿ ಮಾತನಾಡಿದುದಲ್ಲದೆ ಕರ್ನಾಟಕ ವ್ಯಾಪಾರದ ಉನ್ನತಿಯ ಉಪಾಯಗಳನ್ನು ಸೂಚಿಸಿದರು. ಮುಂಬಾಯಿರಾದ ಠರಾವುಗಳಲ್ಲಿ ವಿದೇಶಿ ವಸ್ತ್ರಗಳ ಮೇಲೆ ಶೇಕಡಾ ೧೦ರಂತೆ ಸುಂಕ ಹೊರಿಸುವಿಕೆ, ಕರ್ನಾಟಕ ವ್ಯಾಪಾರಿ ಮಂಡಳದಿಂದ ಮದ್ರಾಸು, ಮುಂಬಾಯಿ ಕೌನ್ಸಿಲುಗಳಿಗೂ, ಎಸೆಂಬ್ಲಿಗೂ ಒಬ್ಬೊಬ್ಬ ಮೆಂಬರರನ್ನು ಕಳುಹಿಸಲು ಅನುಮತಿಯು ಕೊಡಲ್ಪಡಬೇಕಾಗುವಿಕೆ, ಕರ್ನಾಟಕದಲ್ಲಿ ವ್ಯಾಪಾರಿ ಮತ್ತು ಔದ್ಯೋಗಿಕ ಶಾಲೆಗಳನ್ನು ತೆರೆಯುವಿಕೆ, ಕರ್ನಾಟಕದ ಪ್ರತ್ಯೇಕ ಪ್ರಾಂತರಚನೆ ಅಲ್ಲದೆ ಕರ್ನಾಟಕ ವ್ಯಾಪಾರಿ ಮಂಡಳದ ಪರವಾಗಿ ಎಮ್. ಎಂಡ್ ಎಸ್. ಎಮ್. ರೈಲುವೇ ಎಡ್ವೈಸರಿ ಕಮಿಟಿಯಲ್ಲಿ ಒಬ್ಬ ಪ್ರತಿನಿಧಿಯನ್ನಿಡುವಿಕೆ, ಇವೇ ಮುಖ್ಯವಾದವುಗಳಾಗಿದ್ದುವು.

[illegible] ಅತೃಪ್ತಿ.

(ನ್ಯಾಯದಾನದ ಅತೃಪ್ತಿಕರ ಅವಸ್ಥೆಯ ಕುರಿತು [illegible] ಮದ್ರಾಸ್ ಕೌನ್ಸಿಲಿನಲ್ಲಿ ಮಾಡಿದ ಭಾಷಣ.)

ಸಿವಿಲ್ ವ್ಯವಹರಣೆಗಳೂ ಅವುಗಳ ಅತ್ಯಧಿಕ ವೆಚ್ಚವೂ

ಸಿವಿಲ್ ನ್ಯಾಯಾಡಳಿತದ ಕುರಿತು ಜನತೆಯು ಬಹು ಕಾಲದ ದೂರೆಂದರೆ ವ್ಯಾಜ್ಯಗಳಿಗೆ ತಾಗುವ ಅತ್ಯಧಿಕ ವೆಚ್ಚವಾಗಿದೆ. ೧೯೨೭ರಲ್ಲಿ ಕೋರ್ಟುಗಳಲ್ಲಿ ದಾಖಲು ಮಾಡಲ್ಪಟ್ಟಿರುವ ಶೇಕಡ ೮೦ಕ್ಕಿಂತಲೂ ಮಿಕ್ಕಿದ ವ್ಯಾಜ್ಯಗಳು ಹಣವೆ ಇತರ ಚರವಸ್ತುಗಳ ಕುರಿತಾಗಿವೆ. ಉಳಿದವುಗಳಲ್ಲಿ ಸುಮಾರು ಅರೆವಾಸಿ ಅಡವುಸಂಬಂಧವಾಗಿವೆ, ಇವು ಹಣದ ವ್ಯವಹರಣೆಗಳಂತೆಯೇ ಸರಿ. ವ್ಯಾಜ್ಯಗಾರನು ಮೂಲ ಕೋರ್ಟಿನಲ್ಲಿ ವ್ಯವಹರಣೆಯ ಐವೇಜಿನ ಶೇಕಡ ೧೦ನ್ನು ಕೋರ್ಟು ಫೀಸಾಗಿ ಕೊಡತಕ್ಕದು. ಇಷ್ಟೇ ಹಣವನ್ನು ಸಬ್ ಕೋರ್ಟು ಮತ್ತು ಹೈಕೋರ್ಟುಗಳಲ್ಲಿ ಅಪೀಲು ಮಾಡುವುದಾದರೆ ತೆರಬೇಕು. ಇದಲ್ಲದೆ ಪ್ರತಿ ಕೋರ್ಟಿನಲ್ಲಿ ಶೇಕಡ ೫ರಷ್ಟು ವಕಲಾತ್ತು ಫೀಸು ಕೊಡಬೇಕು. ಹೀಗೆ ಈ ಮೂರು ಕೋರ್ಟುಗಳಲ್ಲಿ ವ್ಯವಹರಣೆ ನಡಿಸಬೇಕಾದರೆ ವ್ಯಾಜ್ಯಗಾರನು ವ್ಯಾಜ್ಯದ ಐವೇಜಿನ ಸುಮಾರು ಅರ್ಧಾಂಶವನ್ನು ಕ್ರಮಪ್ರಕಾರದ ಫೀಸುಗಳಿಗಾಗಿಯೇ ವೆಚ್ಚಮಾಡತಕ್ಕದ್ದು. ಇನ್ನು ನಕಲುಗಳನ್ನು ಪಡೆಯುವುದು, ರಿಕಾರ್ಡುಗಳನ್ನೂ ಅರ್ಜಿಗಳನ್ನೂ ದಾಖಲ್ ಮಾಡುವುದು, ಸಾಕ್ಷಿಗಾರರನ್ನು ಹಾಜರು ಮಾಡುವುದೇ ಮೊದಲಾದ ಇತರ ವೆಚ್ಚಗಳನ್ನು ಗಣಿಸಿದರೆ ವ್ಯಾಜ್ಯದ ಐವೇಜಿನಷ್ಟೇ ವೆಚ್ಚವಾಗುವುದು. ಈ ವಿಪರೀತ ವೆಚ್ಚದ ಸಂಕಷ್ಟವೊಂದೇಯಲ್ಲ. ವ್ಯಾಜ್ಯಗಾರನು ಅತ್ಯಧಿಕ ಹಣ ವೆಚ್ಚಮಾಡಿದ ಮೇಲೆಯೂ ತೀರ್ಮಾನ ಪಡಿಯಬೇಕಾದರೆ ಅತಿ ದೀರ್ಘಕಾಲ ಕಾಯಬೇಕಾಗುವುದು. ಹೇಗೂ ಕೊನೆಗೊಂದು ತೀರ್ಮಾನವಾದರೂ ಅದನ್ನು ಜ್ಯಾರಿಗೆ ತರುವರೆ ಅನಾವಶ್ಯಕ ವಿಳಂಬ ಅಡಚಣೆಗಳನ್ನು ಸಹಿಸಿಕೊಳ್ಳಬೇಕಾಗುವುದು.

ಮೂಲ ಮತ್ತು ಅಪೀಲು ವ್ಯಾಜ್ಯ ತೀರ್ಮಾನ ವಿಳಂಬ.

ಮೂಲ ಮತ್ತು ಅಪೀಲು ವ್ಯಾಜ್ಯ ತೀರ್ಮಾನದಲ್ಲಿ ವಿಳಂಬ ಮತ್ತು ಡಿಕ್ರಿ ಜ್ಯಾರಿಯ ಅತೃಪ್ತಿಕರ ಫಲಿತಾಂಶಗಳ ಕುರಿತು ಹಿಂದೂದೇಶಗಳ ಹೆಚ್ಚುಕಡಿಮೆ ಪ್ರತಿಯೊಂದು ಪ್ರಾಂತಗಳವರೂ ಸರಕಾರದೊಡನೆ ಆಗಾಗ್ಗೆ ನಿರೂಪಿಸಿಕೊಂಡಿರುತ್ತಾರೆ. ಈ ನಿರೂಪಣೆಗಳ ಪರಿಣಾಮವಾಗಿ ಈ ವಿಷಯವನ್ನು ಪರಿಶೀಲಿಸಿ ಕೋರ್ಟುಗಳಲ್ಲಿನ ಕೆಲಸವು ಶೀಘ್ರವಾಗಿ ನಿರ್ವಹಿಸಲ್ಪಡುವಂತೆ ಮತ್ತು ಕೋರ್ಟಿನ ಡಿಕ್ರಿಗಳು ಹೆಚ್ಚು ತೃಪ್ತಿಕರವಾಗಿ ಜ್ಯಾರಿಗೆ ತರುವಂತೆ ಏನು ಮಾಡಲು ಸಾಧ್ಯವಿದೆಯೆಂಬ ಕುರಿತು ರಿಪೋರ್ಟು ಮಾಡಲು ಇಂಡಿಯಾ ಸರಕಾರದವರು ೧೯೨೩ರಲ್ಲಿ ಸಿವಿಲ್ ಜಸ್ಟಿಸ್ ಕಮಿಟಿಯೊಂದನ್ನು ನೇಮಿಸಿದರು. ಈ ಕಮಿಟಿಯ ಪರಾಮರ್ಶೆ ಮತ್ತು ಸಲಹೆಗಳ ಪರಿಣಾಮವಾಗಿ ಮೊದಲಿನ ಪರಿಸ್ಥಿತಿಯು ಸುಧಾರಿತವಾಗಿರುವುದೇ? ೧೯೨೮ನೇ ಇಸ್ವಿಯ ಸಿವಿಲ್ ಕೋರ್ಟುಗಳ ಆಡಳಿತದ ಕುರಿತು ಸರಕಾರವು ೪—೧—೨೯ರಲ್ಲಿ ಕೊಟ್ಟಿರುವ ಹುಕುಮನ್ನು ನಾನು ಕೌನ್ಸಿಲಿನ ಗಮನಕ್ಕೆ ತರುತ್ತೇನೆ. "ಕೆಲವು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟುಗಳ ಕಾರ್ಯನಿರ್ವಾಹವು ತೃಪ್ತಿಕರವಾಗಿರುವುದಿಲ್ಲ. ಮೂಲ ವ್ಯಾಜ್ಯಗಳನ್ನು ತೀರ್ಮಾನಿಸುವ ವಿಷಯದಲ್ಲಿ ಕೋರ್ಟುಗಳು ಮಾಡಿರುವ ಕೆಲಸವು ಅಸಮಾಧಾನವಾಗಿದೆ. ಜಿಲ್ಲಾ ಜಡ್ಜರು ತೀರ್ಮಾನಿಸುವ ಸಿವಿಲ್ ಅಪೀಲುಗಳು ಕಡಿಮೆಯಾಗಿರುವುದು ಶೋಚನೀಯವಿದೆ. ಪ್ರೆಸಿಡೆನ್ಸಿ ಸ್ಮೋಲ್ ಕೋಸ್ ಕೋರ್ಟಿನಲ್ಲಿ ವಿವಾದದ ವ್ಯಾಜ್ಯ ತೀರ್ಮಾನದ ಅವಧಿಯು ೧೯೨೭ರಲ್ಲಿ ೧೧೬ರಿಂದ ೧೩೭ಕ್ಕೇರಿದೆ" ೧೯೨೭ರ ಸಿವಿಲ್ ಕೋರ್ಟು ಆಡಳಿತದ ಕುರಿತು ಸರಕಾರವು ಕಳೆದ ಜನವರಿ ತಾ. ೩ರಲ್ಲಿ ಕೊಟ್ಟಿರುವ ಹುಕುಮನ್ನು ವಿಚಾರಿಸುವ, "೧೯೨೭ರ ಆಡಳಿತದ ಕುರಿತು ಸರಕಾರವು ಟೀಕಿಸಿದ್ದರೂ ಡಿಸ್ಟ್ರಿಕ್ಟ್ ಮುನ್ಸಿಫ್ ಮತ್ತು ಸಬೋರ್ಡಿನೇಟ್ ಜಡ್ಜರ ವ್ಯಾಜ್ಯ ತೀರ್ಮಾನಗಳು ಕಡಿಮೆಯಾಗಿಯೇ ಇರುತ್ತವೆಂದು ಸರಕಾರವು ಇನ್ನೊಮ್ಮೆ ಸೂಚಿಸಬೇಕಾಗಿ ಬಂದಿದೆ. ಇಂತಹ ಅತೃಪ್ತಿಕರ ಸ್ಥಿತಿಗತಿಗಳ ಪುನರಾವರ್ತನೆಯಾಗದಂತೆ ಮಾನ್ಯ ನ್ಯಾಯಾಧೀಶರುಗಳು ತಕ್ಕ ಕಾರ್ಯ ಕೈಕೊಳ್ಳುವರೆಂದು ನಿರೀಕ್ಷಿಸಲಾಗಿದೆ. ಇನ್ನು ಮುಂದೆ ಡಿಸ್ಟ್ರಿಕ್ಟ ಕೋರ್ಟುಗಳಲ್ಲಿ ಮೂಲ ವ್ಯಾಜ್ಯಗಳ ಕುರಿತು ಈಗಕ್ಕಿಂತ ಉತ್ತಮ ಕೆಲಸವನ್ನು ನಿರೀಕ್ಷಿ

[illegible]

[illegible] ಸರಕಾರದವರು [illegible] ಮೂಲ ಮತ್ತು ಅಪೀಲು ವ್ಯಾಜ್ಯಗಳ ಕುರಿತು ಈ ರೀತಿಯ ವಿಳಂಬವು [illegible] ಪರಿಸ್ಥಿತಿಯಲ್ಲ.

ಅಮಲ್‌ಜ್ಯಾರಿಯ ದುರವಸ್ಥೆ.

ಅತಿ ವಿಳಂಬವಾಗಿ ತೀರ್ಮಾನವಾದರೂ ಸಂತಕ [illegible] ಜ್ಯಾರಿಯ ಅವಸ್ಥೆಯು ಇನ್ನೂ ಕೆಟ್ಟದಾಗಿದೆ. ಸರ್ವಸಾಧಾರಣವಾಗಿ ನಿಷ್ಫಲವಾಗುವ ಅಮಲ್‌ಜ್ಯಾರಿ ಅರ್ಜಿಗಳ ಸಂಖ್ಯೆಯು ಶೇಕಡಾ ೬೦ರಿಂದ ೭೦ರ ವರೆಗಿರುತ್ತದೆಂದು ಸಿವಿಲ್ ಜಸ್ಟಿಸ್ ಕಮಿಟಿಯ ವರದಿಯಿಂದ ತಿಳಿದುಬರುತ್ತದೆ. ಮದ್ರಾಸ್ ಪ್ರಾಂತ್ಯದಲ್ಲಿ ಪ್ರಕೃತ ಈ ಪರಿಸ್ಥಿತಿಯೇನೂ ಸುಧಾರಿತವಾಗಿರುವುದಿಲ್ಲ. ನಮಗೆ ದೊರೆಯುವ ೧೯೨೭ರ ವರದಿಯನ್ನವಲೋಕಿಸಿದರೆ, ಅಮಲ್‌ಜ್ಯಾರಿಯ ಒಟ್ಟು ಸಂಖ್ಯೆಯಲ್ಲಿ ಶೇಕಡಾ ೨೦ರಷ್ಟಕ್ಕೆ ಮಾತ್ರ ಸಂಪೂರ್ಣ ಪ್ರತಿಫಲ ದೊರೆತಿದೆ. ೧೫ನ್ನು ಅರ್ಧಕ್ಕರ್ಧ ಫಲಕಾರಿಯಾಗಿವೆ. ಸುಮಾರು ಶೇಕಡಾ ೬೫ರಷ್ಟು ಸಂಪೂರ್ಣ ನಿರರ್ಥಕವಾಗಿವೆ. ಕೋರ್ಟಿನವರು ಕೊಡುವ ಸುಮಾರು ಮುಕ್ಕಾಲು ಪಾಲು ಡಿಕ್ರಿಗಳನ್ನು ಜ್ಯಾರಿಗೆ ತರಲು ಅಸಾಧ್ಯವೆಂದಾದರೆ ಅಷ್ಟೊಂದು ವೆಚ್ಚಮಾಡಿ ಕೋರ್ಟುಗಳಿಂದ ಡಿಕ್ರಿ ಪಡಕೊಳ್ಳುವುದರಿಂದ ಪ್ರಯೋಜನವೇನು? ಕೆಲವು ವರ್ಷಗಳ ಮೊದಲು ಸರ್ ತೇಜ ಬಹದೂರು ಸಪ್ರುರವರು, "ಡಿಕ್ರಿ ಅಮಲ್‌ಜ್ಯಾರಿಯ ಈಗಣ ಪದ್ಧತಿಯನ್ನೇ ಸಂಪೂರ್ಣವಾಗಿ ಮಾರ್ಪಡಿಸಿ, ಅದನ್ನು ಹೆಚ್ಚು ತೃಪ್ತಿಕರ ಸ್ಥಿತಿಗೆ ತರುವಂತೆ ತೀವ್ರ ಕಾರ್ಯ ಕೈಕೊಳ್ಳುವ ಕಾಲವು ಉಪಸ್ಥಿತವಾಗಿರುವುದೆಂದು ನಾನು ದೃಢಾಭಿಪ್ರಾಯವುಳ್ಳವನಾಗಿರುತ್ತೇನೆ" ಎಂದಿರುವರು. ನನ್ನ ಅಭಿಪ್ರಾಯವು ಇದೇ ರೀತಿಯಾಗಿದೆ. ಡಿಕ್ರಿಯಾದ ಅಪ್ರಮಾಣಿಕ ಸಾಲಗಾರರು ಡಿಕ್ರಿಹಣ ತೆರದೆ ತಪ್ಪಿಸಿಕೊಳ್ಳಲು ಸಾಕಷ್ಟು ಅಸ್ಪದ ದೊರೆಯುವಂತೆ ಅಮಲ್‌ಜ್ಯಾರಿ ಪದ್ಧತಿಯೇ ಅಷ್ಟೊಂದು ದೋಷಯುಕ್ತವಾಗಿರುವುದೇ? ಅಥವಾ ಅಮಲ್‌ಜ್ಯಾರಿ ಶಿಬ್ಬಂದಿಯೇ ಅಯೋಗ್ಯವಾಗಿ ಹೆಚ್ಚಿನ ಅಮಲ್‌ಜ್ಯಾರಿಗಳು ನಿಷ್ಪ್ರಯೋಜನವಾಗಲು ಕಾರಣರಾಗಿರುವುದೇ? ಎಂಬುದನ್ನು ಸರಕಾರವು ಪರಾಮರ್ಶಿಸಬೇಕಾಗಿದೆ. ನಾವು ನಮ್ಮ ಕೆಲಸವಾಗಬೇಕಾದರೆ ಡಿಕ್ರಿ ಜ್ಯಾರಿ ಮಾಡುವ ಕೀಳು ನೌಕರರ ಕೈತಣ್ಣಗೆ ಮಾಡಬೇಕೆಂಬ ಮಾತನ್ನು ನಾವು ಆಗಾಗ್ಗೆ ಕೇಳುತ್ತೇವೆ. ಅಮೀನ ಮತ್ತು ಅಮಲ್‌ಜ್ಯಾರಿ ಪೇದೆಗಳ ಸಂಬಳವು ಬಹಳ ಕಡಿಮೆಯಾಗಿ ಉದರನಿರ್ವಾಹಕ್ಕೆ ಸಾಕಾಗದುದರಿಂದ ಅವರು ಲಂಚ ತೆಗೆದುಕೊಳ್ಳುವುದರಲ್ಲಿ ವಿಚಿತ್ರವೇನೂ ಇಲ್ಲ. ಅಪ್ರಾಮಾಣಿಕ ಸಾಲಗಾರರಿಗೆ ಪಾಪದ ಕಾನೂನು ರಕ್ಷಣೆಯನ್ನೀಯುತ್ತದೆಂಬ ಅಭಿಪ್ರಾಯವು ಜನರಲ್ಲುಂಟಾಗಿದೆ. ಇದು ನಿಜವಾದರೆ ಸರಕಾರವು ಈ ಭಾಗದ ಕಾನೂನನ್ನು ಪರಿಶೀಲಿಸಿ, ವ್ಯಾಪಾರ ವ್ಯವಹಾರಗಳಿಗೆ ಅಪಾಯವನ್ನುಂಟುಮಾಡುತ್ತಿರುವ ಈ ಪ್ರಬಲ ಕೆಡುಕನ್ನು ತಡೆಗಟ್ಟಲೇನು ಮಾಡಬೇಕೆಂಬುದನ್ನು ಕಂಡುಕೊಳ್ಳಬೇಕು.

ಎಸೆಸ್ಸರನ್ನೂ ಕಕ್ಷಿಗಾರ ಮತ್ತು ಸಾಕ್ಷಿಗಾರರನ್ನೂ ಕೋರ್ಟಿನವರು ಕಾಣುವ ರೀತಿ.

ಜೂರಿ ಮತ್ತು ಎಸೆಸ್ಸರನ್ನೂ ಕೋರ್ಟಿನಲ್ಲಿ ಯಾವ ರೀತಿಯಲ್ಲಿ ಕಾಣುವರೆಂಬ ವಿಷಯವನ್ನು ನನ್ನ ಮಾನ್ಯ ಮಿತ್ರ ಸಲ್ಡಾನರು ಸರಕಾರದ ಲಕ್ಷ್ಯಕ್ಕೆ ತಂದಿರುವರು. ಸ್ವಲ್ಪ ಸಮಯದ ಮೊದಲು ಅವರು ಈ ಕುರಿತು ಹಾಕಿದ ಪ್ರಶ್ನೆಗೆ ಸರಕಾರವು ತೃಪ್ತಿಕರ ಉತ್ತರವೀಯಲಿಲ್ಲ. ಕೋರ್ಟುಗಳಿಗೆ ಹೋಗುವ ಕಕ್ಷಿಗಾರರೂ ಸಾಕ್ಷಿಗಾರರೂ ಕೋರ್ಟಿನ ಸುತ್ತು ಮುತ್ತು ಅಲ್ಲಲ್ಲಿ ಅಡ್ಡಾಡುತ್ತಿರಬೇಕಾಗಿದೆ. ಕಾದು ಕೂತುಕೊಳ್ಳಲು ಅವರಿಗೆ ಯಾವ ಯೋಗ್ಯಸ್ಥಳ ವ್ಯವಸ್ಥೆಯೂ ಇಲ್ಲ. ಅವರು ಅನೇಕ ವೇಳೆ ಕೋರ್ಟಿನ ವಠಾರದಲ್ಲಿ ಬಂದೋಬಸ್ತಿಗೆ ನಿಂತವರಂತಿರುವ ಪೇದೆಗಳು ಹೇಳಿದಂತೆ ಕೇಳಬೇಕಾಗುತ್ತದೆ. ಕೋರ್ಟಿನ ನ್ಯಾಯಾಡಳಿತಕ್ಕಾಗಿ ಇಷ್ಟೊಂದು ಹಣವನ್ನೀಯುವ ಈ ಜನರನ್ನು ಯೋಗ್ಯರೀತಿಯಲ್ಲಿ ಯಾಕೆ ಕಾಣಬಾರದೆಂದೇ ನನ್ನ ಪ್ರಶ್ನೆ. ಅತ್ಯಧಿಕ ಕೋರ್ಟು ಫೀಸನ್ನು ಹೊರಿಸಿ, ವ್ಯಾಜ್ಯ ಅಪೀಲುಗಳ ತೀರ್ಮಾನವನ್ನು ವಿಳಂಬಿಸಿ, ಜನರ ಸಂಕಷ್ಟಗಳನ್ನು ಯೋಗ್ಯ ಮತ್ತು ಯಥಾರ್ಥ ರೀತಿಯಲ್ಲಿ ನಿವಾರಿಸದೆ, ಕೋರ್ಟುಗಳನ್ನು ಆಶ್ರೈಸುವವರನ್ನು ಮರ್ಯಾದೆಯಿಂದ ಕಾಣದೆ ಇರಲು ವ್ಯಾಜ್ಯಗಳನ್ನು ಕಡಿಮೆಮಾಡುವುದೇ ಸರಕಾರದ ಉದ್ದೇಶವಾದರೆ ಇವುಗಳೆಲ್ಲಾ ಒಂದು ವಿಧದ ನ್ಯಾಯವಿರಬಹುದು. ಆದರೆ ಈ ವಿಧಾನಗಳಿಂದ ವ್ಯವಹರಣೆಗಳು ನಿಲ್ಲಿಸಲ್ಪಟ್ಟಿರುವವೇ? ಮಾನ್ಯ ಲಾ ಮೆಂಬರರು ಈ ವಿಷಯವನ್ನು ಆಸ್ಥೆಯಿಂದ ವಿಚಾರಿಸಿ, ನ್ಯಾಯಾಡಳಿತದ ಕುರಿತು ಜನರ ದೀರ್ಘಕಾಲದಿಂದಿರುವ ಸಂಕಷ್ಟಗಳನ್ನು ನಿವಾರಿಸಲು ಏನು ಮಾಡಬಹುದೆಂಬುದನ್ನು ಕಂಡುಕೊಳ್ಳುವರೆಂದು ನಾನು ನಂಬುತ್ತೇನೆ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪೂರ್ವದಲ್ಲಿ ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಷ್ಟಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 3—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣಾ!
ಧಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲು ಬೇಕಾಗುವುದು.

ಕ್ರಯ ಬಾಟ್ಲು 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

[illegible]

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮೊದಲ್‌ತರವಾದ ಬೆಳ್ಳಿ ಪುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. [illegible] ಅನುಭವದ ಮೇಲೆ ನಮ್ಮ ಪುಡಿದಾರ ಹಗ್ಗಗಳು ಕಲಕತ್ತೆಯಲ್ಲಿಯೂ, ದಾರದ ಸಂಸದಲ್ಲಿಯೂ, ಸರಕಿನ ನಾಣಾಯವಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸಂಗಾಪು ವ್ಯಾಪಾರಿ,

24-8-'28 ಶೆವ್ವಾಪೇಟೆ. ಸೇಲಂ (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು
ಆತಂಕನಿಗ್ರಹ ಮಾತ್ರೆಗಳನ್ನು
ಉಪಯೋಗಿಸಿರಿ.
32 ಮಾತ್ರೆಗಳಿಳ್ಳ ಡಬ್ಬಿಗೆ ಬರೇ ರೂಪ್ಯಾ 1/- ಮಾತ್ರ.
ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ
ಬರೆಯಿರಿ—
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೇಛೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0
Reserve and other sinking Funds „ 3,88,000—0—0
Amount invested on G. P. Notes Rs. 4,87,793—6—0
Rates of interest on fixed deposits at Head Office and Branch 6¼% for 2 Years
6% „ 1 Year
Season deposits of Rs. 1000/- & above terminable by the end of June are received at 6¼% p. a.

ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ರಿಸರ್ವು ಫಂಡು ಮತ್ತು ಇತರ ಫಂಡುಗಳು 3,88,000—0—0
ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
ಕಾಯಂ ಠೇವಣಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ 6.
ಜೂನ್ ಅಂತ್ಯದ ವರೆಗೆ ವ್ಯಾದ ಆಗುವ ರೂ. 1000/-ದ ಮೇಲ್ಪಟ್ಟ ಮೊಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to –

Canara Bank Ltd. **K. Venkat Rao,**
Mangalore, 11—2—1929. *Secretary*

THE PANGAL NAYAK BANK, LTD.

Branch Office Mangalore.	Head Office: Udipi, *Established 1920.*	Agency Office Cochin.

Authorised Capital: Rs. 2,00,000- Paidup Capital: Rs. 1,57400-
Issued Capital: Rs. 1,75,000- Reserve and other Funds. Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5%, 6 or 9 months 5¼%, 12, 15, 18 or 21 months 6¼; 24 months 6¼% and **interest being payable every 3 months.**

Short Notice Deposits, Cumulative Deposits, and **Savings Bank Deposits** are accepted at favourable rates of interest.

Season Deposits from January to June received at 6¼%

N. B Fixed Deposits for 24 months are accepted at our Mangalore Branch at 6¼% and interest being payable every quarter.

Loans and Advances are made on pledge of valuables, on proper personal securities on reasonable terms; and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
1st March, 1929. P. Lakshman Nayak,
Offg. Secretary.

ADVERTISE IN OUR WEEKLY.
To Reach the Hearths & Homes
OF INDIA'S MASSES

For Particulars Apply to:

The Manager,
SWADESHABHIMANI,
MANGALORE.

A1

[illegible]

... ಅದೇ ಹಿಂಗಳೊಳಗೆ ಇದೇ ಸ್ವಾತಂತ್ರ್ಯ ... ಮಂತ್ರಿಪದವಿಗಳು ಸ್ವೀಕಾರಾರ್ಹವಾದುವು. ... ಯವರು ಸರಕಾರದ ಒತ್ತಾಯವನ್ನು ... ತೀರದು, ಅವರ ಸಹಕಾರದಿಂದ ಮಂತ್ರಿ ಪದವಿಯನ್ನು ... ಕೊಳ್ಳಲು ಆಲೋಚಿಸುವರು! ಮೊಂಟೆಗ್ಯೂನಿಂದ ನಿಯೋಜಿತ ಈಗಿನ ಸುಧಾರಿತ ಸರಕಾರಕ್ಕೆ ಮದ್ರಾಸಿನಲ್ಲಿ ... ಸಹಕಾರವೂ, ವಿರೋಧವೂ ಎಲ್ಲಿಯೂ ಸಿಕ್ಕಿಲ್ಲ. ಆದರೂ ಜಸ್ಟೀಸ ಪಕ್ಷದಿಂದ ಮಂತ್ರಿಗಳಾದವರೂ ಸ್ವತಂತ್ರ ಪಕ್ಷದಿಂದ ಮಂತ್ರಿಗಳಾದವರೂ, ಈ ಮಂತ್ರಿಪದವಿಗೆ ನಿರರ್ಥಕತೆಯನ್ನು ತೋರಿಸದೆ ಇಲ್ಲ. ಆದರೂ ಯಾವ ಆಧಾರವಾದದ ಮೇಲೆ ಶ್ರೀ ಸತ್ಯಮೂರ್ತಿಯವರು ಮಂತ್ರಿಪದವಿ ಸ್ವೀಕಾರವನ್ನು ಬೋಧಿಸಲು ಹೊಂಟರೆಂದು ತಿಳಿಯುವುದಿಲ್ಲ. ಮಂತ್ರಿ ಪದವಿ ನಿರಾಕರಣೆಯು ಕಾಂಗ್ರೆಸ್ಸಿನ ಸ್ಪಷ್ಟವಾದ ಧೋರಣೆಯಾಗಿರುತ್ತದೆ. ಅಂತಹ ಧೋರಣವು ಕಾಂಗ್ರೆಸ್ಸಿನ ಇನ್ನೊಂದು ಅಧಿವೇಶನದಲ್ಲಿ ಬದಲಾಯಿಸಲ್ಪಡುವ ತನಕ, ಕಾಂಗ್ರೆಸ್ಸಿನ ಪರವಾಗಿ ಚುನಾವಣೆಯ ಸಂದರ್ಭದಲ್ಲಿ ಆ ಧೋರಣವನ್ನು ತಿರಸ್ಕರಿಸಲು ಕಾಂಗ್ರೆಸ್ಸಿನ ಪಕ್ಷವನ್ನುವವರಿಗೆ ಸಾಧ್ಯವಾಗಬಾರದು. ಆದುದರಿಂದ ಶ್ರೀ ಸತ್ಯಮೂರ್ತಿಯವರು ಈ ಸೂಚನೆಯನ್ನು ಈ ಸಮಯದಲ್ಲಿ ಹೊರಹಾಕಿದುದು ತೀರಾ ಅಪ್ರಕೃತವಾಗಿರುತ್ತದೆ. ಈ ಚುನಾವಣೆಯ ಸಮಯದಲ್ಲಿ ಇಂತಹ ಸೂಚನೆಗಳನ್ನು ಕೊಟ್ಟು ಕಾಂಗ್ರೆಸು ಪಕ್ಷವು ತನ್ನ ಮೇಲಿನ ವಿಶ್ವಾಸವನ್ನು ಜನತೆಯಿಂದ ಕಳಕೊಳ್ಳುತ್ತಿದೆ. ಸ್ವರಾಜ್ಯ ಪಕ್ಷೀಯರು ಇಂತಹ ವಿಶೃಂಖಲ ವರ್ತನೆಗೆ ಎಡೆಕೊಡದೆ ಸರಿಯಾದ ಧೋರಣವನ್ನು ಚುನಾವಣೆಗಾಗಿ ರಚಿಸಿ ಅದನ್ನೇ ಪ್ರತಿ ಒಬ್ಬರೂ ಪಾಲಿಸುವಂತೆ ನೋಡಿಕೊಳ್ಳುವುದು ಅಗತ್ಯವಿದೆ. ಈಗಿನ ರಾಜಕೀಯ ಸಮಸ್ಯೆಗಳಲ್ಲಿ ಮಂತ್ರಿಪದವಿ ಸ್ವೀಕಾರವೇ ಅತೀ ಪ್ರಮುಖವಾದುದರಿಂದ ಅದನ್ನು ಅನುಮಾನಕ್ಕೆ ಬಿಡುವುದು ಯೋಗ್ಯವಾಗಿಲ್ಲ.

ಸರಕಾರದ ಮದ್ಯಪಾನ ನಿಷೇಧಕಾರ್ಯ

ಈಗಿನ ದ್ವಿದಳ ರಾಜ್ಯಪದ್ಧತಿಯಲ್ಲಿ ಮಂತ್ರಿಗಳಾದವರನ್ನು ಮೂದಲಿಸಲು ಸಿಕ್ಕುವ ವಿಷಯಗಳಲ್ಲಿ ಮದ್ಯಪಾನ ನಿವಾರಣೆ ವಿಷಯವೊಂದು. ಸರ್ವಸಾಮಾನ್ಯವಾಗಿ ಮದ್ಯಪಾನವು ಹಾನಿಕರವೆಂದು ಎಲ್ಲರೂ ತಿಳಿದಿರುವಂತಾದರೂ, ಸುಲಭವಾಗಿ ಹತ್ತಿರದ ಗಡಂಗುಗಳಿಂದಾಗ ಮದ್ಯಪಾನದ ವ್ಯಸನದಿಂದ ತಪ್ಪಿಸಿಕೊಳ್ಳುವುದೆಂದರೆ ಜನತೆಗೆ ಬಹಳ ಕಷ್ಟವಾಗುತ್ತಿದೆ. ಜನರಿಂದ ಚುನಾಯಿಸಲ್ಪಟ್ಟ ಮಂತ್ರಿಗಳು ಜನತೆಯ ಮದ್ಯಪಾನ ನಿಷೇಧಪರವಾದ ಅಭಿಪ್ರಾಯವನ್ನೇ ಮಾನಿಸಬೇಕಾಗುತ್ತದೆ. ಆದರೆ ಸರಕಾರವು ಇದರಿಂದ ತಮಗೆ ಸಿಕ್ಕತಕ್ಕ ಕರವನ್ನು ಬಿಟ್ಟುಕೊಡಲು ಒಪ್ಪುವುದಿಲ್ಲವಾದ್ದರಿಂದ ಸರಕಾರಕ್ಕೆ ವಿರೋಧವಾಗದೆ ಜನತೆಯ ಕಣ್ಣಿಗೆ ಮಣ್ಣೆರಚುವ ಯಾವುದೊಂದು ಕಾರ್ಯಕ್ರಮಕ್ಕೆ ಕೈಹಾಕುವ ಅವಶ್ಯಕತೆಯು ಆ ಮಂತ್ರಿಗಳ ಪಾಲಿಗೆ ಬೀಳುತ್ತದೆ. ಮದ್ರಾಸ ಮಂತ್ರಿಗಳು ಕಳೆದ ಕೌನ್ಸಿಲಿನಲ್ಲಿ ಮದ್ಯಪಾನದ ವಿಷಯವು ಚರ್ಚೆಗೆ ಬಂದಾಗ ಸಮರ್ಪಕವಾದ ಉತ್ತರವನ್ನು ಕೊಡಲು ತೊಂದರೆ ಪಟ್ಟಿದ್ದರು. ಹೇಗೂ ತಮ್ಮ ಮನಸ್ಸಾಕ್ಷಿಯನ್ನು ತಣಿಸಲಿಕ್ಕೆ ಒಂದು ನೂತನ ವಿಧಾನವನ್ನು ಈ ಮಂತ್ರಿಗಳು ರಚಿಸಿರುವರು. ಮದ್ಯಪಾನ ನಿವಾರಣೆಯನ್ನು ಗಡಂಗುಗಳ ಸಂಖ್ಯೆಯನ್ನು ಇಳಿಸುವ ಮಾಮೂಲ ಸರಿಯಾದ ಹಾದಿಯನ್ನು ಅನುಸರಿಸುವುದು ಇವರಿಗೆ ಸಾಧ್ಯವಿಲ್ಲ; ಏಕೆಂದರೆ ಸರಕಾರವು ಇದಕೊಪ್ಪುವುದಿಲ್ಲ. ಬದಲಿಗೆ ಪ್ರಚಾರಕಾರ್ಯವನ್ನು ಇವರು ಮಾಡಿಸುವರಂತೆ. ಇದಕ್ಕಾಗಿ ನಾಲ್ಕು ಲಕ್ಷ ರೂಪಾಯಿಯೂ ವಿಂಗಡಿಸಲ್ಪಟ್ಟಿದೆ. ಗಡಂಗುಗಳ ಸಂಖ್ಯೆಯು ಅನೇಕವಾಗಿ ಇರುವ ತನಕ ಸರಕಾರದ ಪ್ರಚಾರಕಾರ್ಯದ ಆವಶ್ಯಕತೆಯು ತಿಳಿಯುವುದಿಲ್ಲ. ಅಲ್ಲದೆ ಮದ್ಯಪಾನಕ್ಕೆ ಜನತೆಯ ಅಭಿಪ್ರಾಯವೇ ವಿರೋಧವಾಗಿರುವಾಗ, ಅದ

[illegible] ... ಸ್ವೀಕರಿಸಿದ್ದಾರೆ ... ಬರಲು ಸುಮ್ಮನಿರುವುದೇ ಉತ್ತಮ.

ಲಾಹೋರು ಕಾಂಗ್ರೆಸ್ಸು

ಲಾಹೋರಿನಲ್ಲಿ ಈ ವರ್ಷ ಕೂಡಲಿಕ್ಕಿರುವ ಕಾಂಗ್ರೆಸ್ಸಿಗೆ ಎಲ್ಲಾ ತರದ ವಿಘ್ನಗಳನ್ನು ತಂದು ಹಾಕಲು ಪಂಜಾಬ ಸರಕಾರವು ನಿಶ್ಚಯಿಸಿರುವಂತೆ ತೋರುತ್ತಿದೆ. ಪಂಜಾಬಿನ ಸರಕಾರವು ಎಂದೂ ಔದಾರ್ಯದ ಕಡೆಗೆ ಬಗ್ಗಿ ಮೋಸ ಹೋಯಿತೆಂದು ಹೇಳಲಾಗುವುದಿಲ್ಲ. "ಲೇಖಣಿಯೋ! ಖಡ್ಗವೋ!" ಎಂಬ ಶಕ್ತಿ ಸಹಿತ ಪ್ರತಿಷ್ಠಿತವಾದ ಲೊರೆನ್ಸ ಪ್ರತಿಕೃತಿಯು ಇರುವುದು ಅಲ್ಲಿಯೇ. ಮತ್ತು ಆ ಮಾತಿಗೆ ಅನುಸಾರವಾಗಿಯೇ ಲೇಖಣಿಯನ್ನೂ, ಖಡ್ಗವನ್ನೂ ಝಳಪಿಸುತ್ತ ಪಂಜಾಬ ಸರಕಾರವು ತನ್ನ ಆಳುವಿಕೆಯ ನೆಲೆಯನ್ನು ಕಟ್ಟಿರುತ್ತದೆ. ಲಾಲಾಜಿಯವರ ನಿಧನವೂ ಇದೇ ಧೋರಣದ ಪರಿಣಾಮವೆಂದರೂ ಹೇಳಬಹುದು. ಇದರ ಪರಿಣಾಮವು ಹೇಗಾಗಿದೆ? ಎಂಬುದನ್ನು ಪಂಜಾಬ ಸರಕಾರವು ಈ ವರೆಗೂ ಆಲೋಚಿಸಲು ಹೋಗಿಲ್ಲ. ಹೊರಗೆ ಕಾನೂನಿಗೆ ಅನುಗುಣವಾಗಿ ನಡೆಯತಕ್ಕ ಚಳವಳವನ್ನು ಅಡಗಿಸ ಹೋಗಿ, ಅಂತರ ಚಳವಳಕ್ಕೆ ಸರಕಾರವು ಪ್ರೋತ್ಸಾಹವನ್ನು ಕೊಟ್ಟಂತಾಗಿದೆ. ಹಿಂದೂಸ್ಥಾನದ ಅಂತರ ಚಳವಳದ ಇತಿಹಾಸವನ್ನು ಲಕ್ಷಿಸಿದರೆ ಬಂಗಾಳವು ಪ್ರಥಮವಾಗಿಯೂ, ಪಂಜಾಬ ಎರಡನೆಯದಾಗಿಯೂ ಈ ಚಳವಳಕ್ಕೆ ಇಳಿದಂತೆ ಕಾಣುತ್ತಿದೆ. ಮಹಾತ್ಮಾಜಿಯವರ ಅಸಹಕಾರ ಚಳವಳದಿಂದ ಎರಡೂ ಕಡೆಗಳಲ್ಲಿ ಅಂತರ ಚಳವಳವು ಕಡಿಮೆಯಾಯಿತು; ಪ್ರಾಯಶಃ ಅದು ಹೆಸರಿಲ್ಲದೇನೇ ಹೋಗಬಹುದಿತ್ತು. ಆದರೆ ನ್ಯಾಯವಾದ ಅಸಹಕಾರ ಚಳವಳಕ್ಕೂ ಈ ಸರಕಾರದ ಕೈಯಲ್ಲಿ ಮಾನ್ಯತೆದೊರೆಯಲಿಲ್ಲ. ದಬ್ಬಾಳಿಕೆಯ ಕ್ರೂರತರವು ಸಾತ್ವಿಕತೆಯನ್ನು ನಾಶಿಸಲು ಹೊರಟಿತು. ಪ್ರಾಯಶಃ ಸರಕಾರದ ಈ ವರ್ತನವು ಹಿಂದೀ ಯುವಕ ಹೃದಯದಲ್ಲಿ ಪ್ರತಿಕ್ರಿಯೆಯ ಭಾವವನ್ನುಂಟುಮಾಡಿದೆ. ಸರಕಾರದ ಇತ್ತೀಚೆಗಿನ ಹೊಸ ಕಾನೂನುಗಳೂ, ಕೈದುಗಳೂ, ಶಿಕ್ಷೆಗಳೂ ಅಂತರ ಮಂಡಳಿಯನ್ನು ಬೆಳೆಸುವಂತೆ ಈಗಿನ ಘಟನಾವಳಿಗಳಿಂದ ತಿಳಿದು ಬರುತ್ತಿದೆ. Saundersರ ಹತ್ಯೆಯನ್ನು ಯಾರೂ ಕ್ಷಮಿಸಲಾರರಾದರೂ, ಅದನ್ನು ಪ್ರೇರಿಸಿದ ಮಾನಸಿಕತೆಯು ಸರಕಾರದ ವಿಶೃಂಖಲ ದಂಡನೀತಿಯ ಫಲವಾಗಿರುತ್ತದೆಯೆಂದು ಹೇಳಬಹುದು. ಆದುದರಿಂದ ಲಾಹೋರಿನಂತಹ ಮುಖ್ಯಸ್ಥಳದಲ್ಲಿ ಕಾಂಗ್ರೆಸ್ಸು ಸೇರಲಿಕ್ಕೆ ವಿಘ್ನವನ್ನು ತಂದೊಡ್ಡಿ, ಸರಕಾರವು ದೇಶಕ್ಕೂ, ಸರಕಾರಕ್ಕೂ ಹಾನಿಕರವಾದ ಮೇಲಿನ ಮಾನಸಿಕತೆಯನ್ನೇ ಬೆಳೆಸುತ್ತಿದೆ. ಮೊದಲಾಗಿ ಡಾ। ಸತ್ಯಪಾಲರ ಮೇಲಿನ ಖಟ್ಲೆಯೂ ಆ ಮೇಲೆ ಕಾಂಗ್ರೆಸ್ಸು ಸೇರಲಿಕ್ಕೆ ಅಗ್ನಿಯ ವಿಸ್ತಾರವಾದ ಮೈದಾನ [illegible] ಉಪಯೋಗದ ನಿರಾಕರಣೆಯೂ, ಸರಕಾರವು ಕಾಂಗ್ರೆಸ್ಸನ್ನು ಲಾಹೋರಿನಲ್ಲಿ ಸುಲಭದಲ್ಲಿ ಕೂಡಿಸಲು ಬಿಡುವುದಿಲ್ಲವೆಂದು ಸೂಚಿಸಲು ಕಾರಣಕೊಡುತ್ತಿವೆ. ಸರಕಾರವು ತನ್ನ ತೀರ್ಮಾನವನ್ನು ಪುನರಾಲೋಚಿಸಿ ಉದಾರ ಧೋರಣೆಯನ್ನು ಕೈಕೊಂಡರೆ ದೇಶಕ್ಕೂ ಸರಕಾರಕ್ಕೂ ಹಿತವಾಗುತ್ತಿತ್ತು.

ಮುಂಬಯಿಯಲ್ಲಿ ಗಿರಣಿ ಮುಷ್ಕರ, ಕೂಲಿಕಾರರು ಕೆಲಸಕ್ಕೆ ಹೊಕ್ಕವರಿಗೆ ಗಿರಣಿಕಾರರ ಸಂಬಳದ ಚರ್ಚೆ. ಗಿರಣಿಗಳಿಗೆ ಲಕ್ಷಾಂತರ ರೂಪಾಯಿಗಳ ನಷ್ಟಬಂದರೂ ಗಿರಣಿ ಮಾಲಿಕರ ಹಟ ಮುಗಿದಿಲ್ಲ.

• • •

ಇಷ್ಟರ ತನಕ ಸಿನಿಮಾ ಫಿಲ್ಮುಗಳಲ್ಲಿ ಮಾತಾಡುವದು ಕೇಳುತ್ತಿದ್ದಿಲ್ಲ. ಇತ್ತಲಾಗೆ ಫಿಲ್ಮುಗಳು ಮಾತಾಡುವುದು ಕೇಳುವ ಹಾಗೆ ತಯಾರಿಸುತ್ತಾರಂತೆ. ಹೊಸ ಶೋಧನೆ! ಸಿನಿಮಾ ಕಂಪೆನಿಗಳ ಜೇಬು ತುಂಬುವ ಹೊಸ ಮಾರ್ಗ!

• • •

ಮೈಸೂರಿಯನ್ನವರ ಕಾವೇರಿ ನೀರಿನ ಜಗಳ—ತೀರ್ಪಿಗೆ ಉಟಿಯಲ್ಲಿ ಇಟ್ಟಿದೆ. ಎರಡು ಪಕ್ಷಕ್ಕೂ ದೊಡ್ಡ ವಕೀಲರನ್ನು ನೇಮಿಸಿದ್ದಾರೆ. ಪಂಚಾಯತಿಕೆಯ ತೀರ್ಪು ಮುಂದಿನಿಂದ.

[illegible] ... ಹೊಂದಿದೆ.

ವಿಲಾಯತಿ ಕೂಲಿಕಾರರಿಗೆ ಹಿಂದೂಸ್ತಾನದ [illegible] ಕಾರರ ಮೇಲೆ ಪ್ರೀತಿ ಹುಟ್ಟಿದ್ದು [illegible].

• • • •

ವಿಲಾಯಿತಿಯ ಒಂದು ಧರ್ಮ ಶಾಲೆಯಲ್ಲಿ ಬಾಂಬುಗಳು ಕಾಣಸಿದ್ದವೆಯಂತೆ. ಕಾಣಸಿದ್ದಕ್ಕೆ ನಾಲ್ಕು ಜನರಿಗೆ ಕೈದು ಮಾಡಿರುವರು.

• • • •

ನಾಲ್ಕು ಜನರನ್ನು ಕೈದುಮಾಡಿದ್ದು ಸಾಲದೆ ಅಲ್ಲಿ ಹುತಾಗಿ ಬರುವವರ ಮೇಲೆ ಬಳ್ಳೆಯ ಬಲವತ್ತಾದ ಪಿಕೆಟ್ ಇಟ್ಟಿರುವರು.

• • •

ಲಾಹೋರಿನಲ್ಲಿ ಇನ್ನೊಂದು ಗುಪ್ತಮಂಡಲಿಯು ಸ್ಥಾಪಿತವಾಗಿದೆ. ನೆಹರು ರಿಪೋರ್ಟನ್ನು ಸಹಕರಿಸಿದವರಿಗೆ ಕೊಲೆ ಶಿಕ್ಷೆಯಾಗಿ ಗದರಿಸುವದು, ಗುಪ್ತಮಂಡಳಿಗಳ ಕಾರ್ಯವಾ ಜೋರಾಗಿ ನಡೆಯುತ್ತಿದೆ. ಕೊಲ್ಲುವುದು ವಿನಹ ಬೇರೆ ಕಾರ್ಯವೆ ಇವರಿಗಿಲ್ಲ.

• • •

ಮದ್ರಾಸು ಸಂಸ್ಥಾನದಲ್ಲಿ ಮೋಟಾರು ಕಾರುಗಳು ಬಸ್ಸುಗಳು ದಿನಹೋಗುತ್ತ ಹೆಚ್ಚುವುದರಿಂದ ಟ್ರಾಫಿಕ್‌ಕಂಟ್ರೋಲ ನಿಬಂಧನೆಯನ್ನು ಹೆಚ್ಚಿಸಬೇಕಾಗಿ ನಿರ್ಣಯಿಸಿದ್ದಾರೆ. ಇದ ಬಸ್ಸು ಹೊಸ ದರಕ್ಕೆ ತಂದರೆ ಒಳ್ಳೇದಿತ್ತು.

• • • •

ಇದರಿಂದ ತುಂಬಿತು ಕೆಲ ಪೋಲೀಸರ ಹೊಟ್ಟೆ. ಇನ್ನು ರಿಟ್ರೆಂಚಮೆಂಟಿನ ಅವಶ್ಯ ಬೀಳಲಿಕ್ಕಿಲ್ಲ.

• • • •

ಮೈಸೂರಿನಲ್ಲಿ, ಮೈಸೂರು ಸಂಸ್ಥಾನದ ಕಾಂಗ್ರೆಸ ಮುಗಿಯಿತು. ಕಾಂಗ್ರೆಸ್ಸಿನ ಬಟ್ಟೆ ಹೆಚ್ಚಿನ ಇತರ ಸಮ್ಮೇಳನಗಳು ಸಾಂಗವಾಗಿ ನಡೆದವು.

• • •

ವಿದೇಶಿ ವಸ್ತ್ರಗಳನ್ನು ಧರಿಸಿದವರು, ತಮ್ಮ ವಸ್ತ್ರಗಳನ್ನು ದಹಿಸಿದರಂತೆ. ಸಂಗ್ರಹಿಸಿದ ವಸ್ತ್ರಗಳನ್ನು ಕಲಾಮಂದಿರದಂಗಳದಲ್ಲಿ ದಹನಮಾಡಿದರಂತೆ. ಅಂತೂ ಮೈಸೂರಿನಲ್ಲಿಯೂ ವಿದೇಶಿ ವಸ್ತ್ರದಹನ ನಡೆದಂತಾಯಿತು.

• • • •

ಟಿನ್ನವೆಲ್ಲಿಯಲ್ಲಿ ಬಸ್ಸು ಕಂಪೆನಿಗಳಿಗೂ ಮುನಿಸಿಪಾಲಿಟಿಯವರಿಗೂ ಜಗಳ ಬಿದ್ದಿದೆ. ಎಲ್ಲಾ ಕಂಪೆನಿಗಳು ಒಟ್ಟುಕೂಡಿ ಬಸ್ಸುಚಲಾವಣೆ ನಿಲ್ಲಿಸಿರುವರು.

• • • •

ಬಸ್ಸುಗಳ ಚಲಾವಣೆ ಇದ್ದಲ್ಲಿ ಕಾಂಪಿಟಿಶನ್ ಇರುವಾಗ್ಯೆ ಎಲ್ಲವರೂ ಒಟ್ಟುಕೂಡಿದ್ದು ತುಂಬಾ ಆಶ್ಚರ್ಯ. ಇದು ವೊನ್ನೆಯ ಸಹಯೋಗ್ಯತನದ ಮಹಾತ್ಮ್ಯ ಆಗಿರಬಹುದು!

• • •

ಅಮೇರಿಕದಲ್ಲಿ (Birth Control) ಮಿತಸಂತತಿಯ ಕೆಲಸವು ಜೋರಾಗಿ ನಡೆಯುತ್ತಿರುವದು ಎಲ್ಲರಿಗೂ ಗೊತ್ತಿರುವ ಸಂಗತಿ. ಕೆಲವು ದಿವಸಗಳ ಹಿಂದೆ ಡಾಕ್ಟರ ಕೆಲಸದ ಕ್ಲಿನಿಕ ಎಂಬ ಜನ ಸ್ತ್ರೀಯರನ್ನು ಏನೋ ಒಂದು ಆರೋಪದ ಮೇಲೆ ಕೈದುಮಾಡಿದ್ದರು.

• • • •

ಪೋಲೀಸರಿಗೆ ಆಕ್ಷೇಪಣೆ ಕಂಡಿದ್ದರೂ ಮ್ಯಾಜಿಸ್ಟ್ರೇಟರಿಗೆ ಆಕ್ಷೇಪಣೆ ಕಂಡುಬಂದಿಲ್ಲವಾದುದರಿಂದ ಅವರನ್ನು ಬಿಡುಗಡೆ ಮಾಡಿಸಿದರು.

• • • •

ಅಫಘಾನದ ಸುದ್ದಿ—ಇಷ್ಟು ಸಮಯ ಅಮಾನುಲ್ಲರು ಬಲವಾಗಿ ಮುಂದರಿಸುತ್ತಾರಾಗಿ ವರ್ತಮಾನ. ಇತ್ತಲಾಗಿನ ವರ್ತಮಾನ ಅಮಾನುಲ್ಲರ ಹತ್ತಿರ ಹಣ ಕಡಿಮೆಯಾಗಿ ಜನಸಹಾಯ ಪೂರ್ಣ ಇಲ್ಲವೆಂದು. ಅಂತು ನಿಜಸ್ಥಿತಿ ತಿಳಿಯುವುದು ಎಲ್ಲ ಮುಗಿದ ನಂತರ.

• • •

[illegible] ಶಕೆ [illegible] ವರ್ಷದ ಸೌರ ಮಾಸ [illegible] ಮಾಸ ಕೃಷ್ಣ ಪಕ್ಷ [illegible] ವರೆಗಿನ ಪಂಚಾಂಗ.

([illegible] ಮಾಸ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
18	ಶನಿ	೧೦	[illegible]	ಉತ್ತರಾ	[illegible]	[illegible]	6. 7	6.47
19	ಆದಿ	೧೧	[illegible]	ಹಸ್ತ	[illegible]	[illegible]	6 7.	6 47
20	ಸೋಮ	೧೨	[illegible]	ಚಿತ್ರಾ	[illegible]	[illegible]	6. 7	6.48
21	ಮಂಗಳ	೧೩	[illegible]	ಸ್ವಾತಿ	[illegible]	[illegible]	6 6	6.48
22	ಬುಧ	೧೪	[illegible]	ವಿಶಾಖಾ	[illegible]	[illegible]	6 6	6.48
23	ಗುರು	○	44. [illegible]	ವಿಶಾಖಾ	[illegible]	೧೦	6. 6	6 49
24	ಶುಕ್ರ	೧	[illegible]	ಅನುರಾಧಾ	[illegible]	೧೧	6. 6	6.49

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
10	92— 0	81— 4	—	—
11	92— 9	79— 0	—	—
12	92— 0	81— 7	—	—
13	92— 6	78— 7	—	—
14	92— 3	79— 7	—	—
15	92— 7	78— 8	—	—
16	92— 3	77— 4	—	—
				3 – 94

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	6 – 14	7 – 4
ಗೋಧು	6 – 4	6 – 8
ಧಾಳಿ	5 – 8	5 – 14
ಊರ ಅವ್ವಲ್ ಬೆಳ್ತಿಗೆ	7 – 0	7 – 8
ಸುಗ್ಗಿ	5 – 8	6 – 5
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	12 – [illegible]	12 – 3
ಎಣ್ಣೂರು ಬೆಳ್ತಿಗೆ ಮುಡಿ ೧ಕ್ಕೆ	6 – 8	6 – 10
ಗೋಧಿ ಗೋಣಿ ೧ಕ್ಕೆ	15 – 12	20 – 0
ಹುರುಳಿ ಗೋಣಿ ೧ಕ್ಕೆ	7 – 6	9 – 8
ಕಡಲೆ ಗೋಣಿ ೧ಕ್ಕೆ	15 – 8	16 – 8
ತೊಗರಿ ಗೋಣಿ ೧ಕ್ಕೆ	14 – 8	5 – 8
ತೊಗರಿಬೇಳೆ ಗೋಣಿ ೧ಕ್ಕೆ	18 – 8	27 – 0
ಉದ್ದು ಗೋಣಿ ೧ಕ್ಕೆ	15 – 0	18 – 0
ಹೆಸರು ಗೋಣಿ ೧ಕ್ಕೆ	14 – 8	16 – 0
ಊರು ಬೆಲ್ಲ ಕಂಡಿ ೧ಕ್ಕೆ	60 – 0	65 – 8
ಉಪ್ಪು ಗೋಣಿ ೧ಕ್ಕೆ	4 – 6	4 – 14
ಕೊಬ್ರಿ ಕಂಡಿ ೧ಕ್ಕೆ	95 – 0	90 –
[illegible] ಹಿಂಡಿ ಕಂಡಿ ೧ಕ್ಕೆ	33 – 0	33 – 8
ಎಳ್ಳಿಂಡಿ ಕಂಡಿ ೧ಕ್ಕೆ	42 – 8	45 –
ಕೊಬ್ರಿ ಎಣ್ಣೆ ಮಣ ೧ಕ್ಕೆ	6 – 10	8 – 0
ಎಳ್ಳೆಣ್ಣೆ ಮಣ ೧ಕ್ಕೆ	7 – 12	8 – 4
[illegible]ಎಣ್ಣೆ ಪೆಟ್ಟಿಗೆ ೧ಕ್ಕೆ	7 – 12	8 – 4
ಮೋರಿಸ್ ಸಕ್ಕರೆ ಮಣ ೧ಕ್ಕೆ	3 – 11	3 – 13
ಹೊಸ ಮೆಣಸು	5 – 4	6 – 8
ಸಾಸಿವೆ ಮುಡಿ ೧ಕ್ಕೆ	8 – 8	–
ಕೊತ್ತಂಬರಿ ಮುಡಿ ೧ಕ್ಕೆ	3 – 12	4 – 0
[illegible] ಕಾಫಿ ಕಂಡಿ ೧ಕ್ಕೆ	360 – 0	370 – 0
[illegible] ಅಡಿಕೆ ಕಂಡಿ ೧ಕ್ಕೆ	145 – 0	160 – 0
[illegible] ಕಂಡಿ ೧ಕ್ಕೆ	430 – 0	420 – 0
[illegible] ಮಣ ೧ಕ್ಕೆ	50 – 0	66 –
[illegible] ಮುಡಿ ೧ಕ್ಕೆ	3 – 6	
[illegible] ಕಂಡಿ ೧ಕ್ಕೆ	44 – 0	45 – 8
[illegible] ಮಣ ೧ಕ್ಕೆ	18 – 0	18 – 12
[illegible] ಮಣ ೧ಕ್ಕೆ	23 – 0	24 – 0
[illegible] ಸೇರು ೧ಕ್ಕೆ	15 – 4	–
[illegible] ಮಣ ೧ಕ್ಕೆ	17 – 0	17 – 8
[illegible] ೧ಕ್ಕೆ	13-9-6	–
[illegible] ಕಂಡಿ ೧ಕ್ಕೆ	30 – 0	37 – 8

ಗೌರವಾದ ಪುಸ್ತಕ? [illegible] ಚಿತ್ರಗಳು ಇವೆ

[ನಾವು ತಿಳಿಸಿರುವಂತೆ ಇಲ್ಲದಿದ್ದರೆ ವಾಪಾಸು ತೆಗೆದುಕೊಳ್ಳುವೆವು]

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ

ಕ್ರಯ ರೂ. ೧-೪-೦

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ, ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಥಳಥಳಿಸುವ ಗ್ಲೇಜು ಕಾಗದದಲ್ಲಿ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲ ಮರ್ಮ ರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದ ಕಾಲ ಗರ್ಭ ಧರಿಸುವುದು, ಗರ್ಭನಿಂತು ಹೋಗುವದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಕರ್ಮ ನಿಯಮಗಳು, ಶಿಶೂತ್ಪತ್ತಿ ವಿಧ, ಗುಪ್ತ ವೈದ್ಯಗಳ ಚಿಕಿತ್ಸೆ, ಶಯನಗೃಹದ ಆವಶ್ಯಕ ನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಸ್ತ್ರೀಯರ ಗೂಢ ರಹಸ್ಯ, ಇನ್ನೂ ಸ್ತ್ರೀ ಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ.

ಕ್ರಯ ಪುಸ್ತಕ ೧ಕ್ಕೆ ೧-೪-೦

ವಿಳಾಸ:— K. Nadhamuni & Son,
ಕೆ. ನಾಧಮುನಿ ಅಂಡ್ ಸನ್, 168 China Bazaar
೧೬೮ ಚೈನಾ ಬಜಾರ್, ಮದರಾಸು. Madras.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯುರ್ವೇದ ಸಾರಸಂಗ್ರಹರೂಪವಾಗಿರುವ ಭಾಷೆಗಳಲ್ಲಿ ಪ್ರಕಟಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಪೂರ್ತಿಯಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧಿಗಳಂತೆ ಸಾವಧಾನವಾಗಿ ನಡೆಯುವದೇ ದಾರಿ. ಹಾಗಿಲ್ಲದಿದ್ದರೆ ಅದರಲ್ಲಿ ಹೇಳಿರುವ ಉಪಾಯವನ್ನು ಮಾಡುವದು ಮತ್ತೊಂದೇ ದಾರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಚೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ ಸುಂದರವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ ನಮ್ಮ ರೋಗಪ್ರಸಿದ್ಧವಾದ ಶಾಶ್ವತವಾಗಿ ಗುಣಪಡಿಸುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು.
ಈ ಮಾತ್ರೆಗಳು ಮಲಬಂಧ ನೋವು ನಪುಂಸಕತ್ವದಿಂದಾಗುವ ವ್ಯಾಧಿಗಳನ್ನು ಪರಿಹರಿಸುತ್ತವೆ.

ಪಿ. ಜಾಲನ್ ಮಾರ್ಟ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1923ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1860ನೇ ಇಸವಿಯ XXIನೇ ಆಕ್ಟಿನಮುಖಾಂತರ ರೆಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು – ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, [illegible] ಆಯುರ್ವೇದ ಔಷಧಗಳು ಉಪಯೋಗವಾಗುವಂತೆ ನಮ್ಮ ಫಾರ್ಮಸಿಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟವಾಗಿ ಹುಟ್ಟಿಬರುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ಮುಂದುವರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತವೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ಣಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೂ ನಮ್ಮಲ್ಲಿ ತಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೂ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಕೊಡಿಯಾಲಬೈಲು, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ. . . . ೬೬
ಎಚ್ಚೆತ್ತ ಕರ್ನಾಟಕ . . . ೬
ವಿದೇಶ ವರ್ತಮಾನ . . . ೬
ಸ್ಥಳೀಯ ಸಮಾಚಾರಗಳು . . . ೮
ಟಿಪ್ಪಣಿಗಳು . . . ೧೧
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ . . . ೬-೭
ದಕ್ಷಿಣ ಕನ್ನಡ—ಮಂಗಳೂರು, ಮಂಜೇಶ್ವರ, ಬಂಟವಾಳ, ಕಾರ್ಕಳ . . . ೩
ವಿವಿಧ ಸಮಾಚಾರಗಳು . . . ೯
ಕನ್ನಡ ಪುರಸ್ಕಾರ (ಕಥೆ) . . . ೧೪
ವಿಶೇಷ ವರ್ತಮಾನ, ಎಕ್ಸ್‌ಚೆಂಜ್ ಎಡ್ವೈಜರಿ ಕಮಿಟಿಯ ಸಭೆಯಲ್ಲಿ ಆದ ಠರಾವುಗಳು, ಕರ್ನಾಟಕಸ್ಥರೇ, . . . ೧೧
ನ್ಯಾಯವಾಕೆಯ ಆವಶ್ಯಕತೆಯ ಕುರಿತು ಆಕ್ಷೇಪ . . . ೨

ಸ್ವದೇಶಾಭಿಮಾನಿ.

ತಾರೀಕು ೧೭ನೇ ಶುಕ್ರವಾರ ಮೇ ೧೯೨೯.

ಎಚ್ಚೆತ್ತ ಕರ್ನಾಟಕ.

ನಿಶ್ಚಯರೂಳಗೆ, ಬೆಳಗಾಂವಿಯಲ್ಲಿ ಕಳೆದ ಹನ್ನೊಂದನೆಯ ತಾರೀಕಿನಿಂದ ಕೇಂದ್ರೀಕೃತವಾದ ಕರ್ನಾಟಕದ ಜಾಗೃತ ಚೇತನವು ತನ್ನ ಮಹತ್ವದ ಶಕ್ತಿಯ ಪ್ರಮಾಣವನ್ನು ವ್ಯಕ್ತಪಡಿಸಿ ಹೇರಿ ಹೋಗಿರಬೇಕು. ಬೆಳಗಾಂವನ್ನು ಮರಾಠಿಗರ ಆಕ್ರಮಣದೊಳಗೆ ಯುಕ್ತಿ ಪೂರ್ವಕ ತರಲು ಮಾಡಿದ ಮರಾಠಿ ಸಾಹಸವು ಇನ್ನು ವಿರೋಧ ಪರಿಣಾಮಕ್ಕೆ ಹೋಗಬಹುದೆಂದು ಮರಾಠಿಗರು ತಿಳಿದಿರಲಿಕ್ಕಿಲ್ಲ. ಹೇಗೂ ಮರಾಠಿಗರ ತಂತ್ರವು ಕರ್ನಾಟಕದ ಸಮಗ್ರ ಚೇತನವನ್ನು ಒಟ್ಟುಗೂಡಿಸಲು ಕಾರಣವಾಯಿತೆಂಬುದೇ, ಈ ಕನ್ನಡ—ಮರಾಠಿಯೊಳಗಣ ತೀವ್ರವಾಗಿರುವ ವಾದದ ಅಭಿನಂದನೀಯವಾದ ವಿಷಯವಾಗಿರುತ್ತದೆ.

ತಾ. ೧೧-೧೨ರಲ್ಲಿ ಶ್ರೀ ರಂಗನಾಥ ಮುದಲಿಯಾರರ ಅಧ್ಯಕ್ಷತೆಯಲ್ಲಿ ಏಕೀಕರಣ ಪರಿಷತ್ತು, ತಾ. ೧೩-೧೪ರಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಲನ, ತಾ. ೧೪ ೧೫ರಲ್ಲಿ ಶ್ರೀ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಕವಿಗಳ ಸಮ್ಮೇಲನ, ತಾ. ೧೫ರಲ್ಲಿ, ವಿ. ಬೃಹ್ಮಯ್ಯವರ ಅಧ್ಯಕ್ಷತೆಯಲ್ಲಿ ಪತ್ರಿಕಾಕಾರರ ಪರಿಷತ್ತು, ತಾ. ೧೫-೧೬ರಲ್ಲಿ ವಣಿಕ್ ಪರಿಷತ್ತು, ಮೊದಲಾಗಿ ಹಲವು ಪರಿಷತ್ತುಗಳು ನೆರೆದು ಹೋದುವು. ಕರ್ನಾಟಕದೊಳಗಿನ ವ್ಯವಹಾರ ಸೌಕರ್ಯಗಳೂ, ಕರ್ನಾಟಕೀಯ ಪ್ರಸಾರಕಾರ್ಯದ ಅಭಾವವೂ ಇವುಗಳ ವರ್ತಮಾನವನ್ನು ನಮಗೆ ಇನ್ನೂ ಮುಟ್ಟಿಸಲಾರವು. ಹಿಂದೂ ಮುಂತಾದ ದೈನಿಕ ಪತ್ರಿಕೆಗಳಲ್ಲಿ ಈ ಪರಿಷತ್ತುಗಳ ಬರೇ ಸಾಮಾನ್ಯ ವರದಿಗಳು ಬರುತ್ತಿವೆಯೇ ಹೊರತು, ಕೂಲಂಕುಷವಾದ ವಾರ್ತೆಯು ಬರುವುದಿಲ್ಲ ಕರ್ನಾಟಕಕ್ಕೆ ಸಂಬಂಧಪಟ್ಟ ಪ್ರಾಂತಗಳ ದೈನಿಕ ಪತ್ರಿಕೆಗಳಲ್ಲಿ ಕರ್ನಾಟಕದ ಚಳವಳಿಗಳಿಗೆ ಗೌರವದ ಸ್ಥಳವು ದೊರೆಯುವಂತೆ ಧುರೀಣರು ಯತ್ನಮಾಡುವುದು ಅಗತ್ಯವಿದೆ.

ಕರ್ನಾಟಕ ಸಾಹಿತ್ಯ ಸಮ್ಮೇಲನ, ಕವಿಗಳ ಸಮ್ಮೇಲನ ಮತ್ತು ವಣಿಕ್ ಪರಿಷತ್ತುಗಳಿಗೆ ಕರ್ನಾಟಕೀಯರೇ ಅಧ್ಯಕ್ಷರಾಗಿರುವಾಗ, ಏಕೀಕರಣ ಪರಿಷತ್ತಿಗೂ, ಪತ್ರಿಕಾಕಾರರ ಪರಿಷತ್ತಿಗೂ ಹೊರಗಿನವರನ್ನು ಕರೆಸುವ ಅಗತ್ಯವಿರಲಿಲ್ಲವೆಂದು ನಮಗನ್ನಿಸುತ್ತಿದೆ. ಏಕೆಂದರೆ, ಸಾಮಾನ್ಯ ಸಂದರ್ಭಗಳಲ್ಲಿ ಹೊರಗಿನವರನ್ನು ಅಧ್ಯಕ್ಷರನ್ನಾಗಿ ಮಾಡುವುದು ಒಳ್ಳೆಯದೇ ಆದರೂ, ಈಗಿನ ಕರ್ನಾಟಕದ ಚೇತನವನ್ನು ಕರ್ನಾಟಕಕ್ಕಾಗಿಯೇ ಹುರಿದುಂಬಿಸಬೇಕಾದ ಈ ಸಮಯದಲ್ಲಿ ಕರ್ನಾಟಕದ ಅಂತರ್ಯದ ಸಾಹಸ-ಸಾಧನೆಗಳ ಪರಿಜ್ಞಾನವಿಲ್ಲದವರು ಅಧ್ಯಕ್ಷರಾದರೆ, ಅವರು ಪರಿಷತ್ತಿಗೆ ಬೇಕಾದ ಸಹಾಯವನ್ನು ಕೊಡಲಾರರು. ಹೊರಗಿನಿಂದ ಬಂದ ಅಧ್ಯಕ್ಷರುಗಳ ಭಾಷಣಗಳ ಸಂಕ್ಷಿಪ್ತ ವರದಿಯನ್ನು ನೋಡಿದರೂ, ಆ ಭಾಷಣಗಳು ಕರ್ನಾಟಕಕ್ಕೆ ಉಪಕಾರಿಯಾಗುವಂತಹವುಗಳೆಂದು ನಮಗೆ ಅನ್ನಿಸಲಿಲ್ಲ. ಆದುದರಿಂದ ಹೊರಗಿನವರನ್ನು ಕರೆದುದರಿಂದ ಹೊರಗಿನ ದೊಡ್ಡ ಜನರುಗಳನ್ನು ಮಾನಿಸಿದಂತಾಯಿತೇ ಹೊರತು ಕರ್ನಾಟಕ ಪ್ರಾಂತ್ಯದ ಆವಶ್ಯಕತೆಗಳನ್ನು ಮಾನಿಸಿದಂತಾಗಲಿಲ್ಲ.

ಈ ಪರಿಷತ್ತುಗಳೂ, ಅವುಗಳ ವ್ಯವಸ್ಥೆಯೂ ಕರ್ನಾಟಕ ತರುಣರ ಅಸೀಮ ಚೇತನದ ಪ್ರತ್ಯಕ್ಷ ಚಿಹ್ನೆಯಾಗಿದೆ. ಇವುಗಳಿಗೆ ಕರ್ನಾಟಕದ ಸುಪ್ರಸಿದ್ಧ ಸಮಸ್ತ ಪ್ರತಿಭಾನ್ವಿತರೂ ಬಂದಿರುವರೆಂಬುದೂ ಕರ್ನಾಟಕದ ಭಾವೀ ಏಳಿಗೆಯ ಆಶಾವಾದವಾಗಿರುತ್ತದೆ. ಈ ಪರಿಷತ್ತುಗಳು ಬೆಳಗಾಂವಿನ ಮರಾಠಿಗರ ಮೇಲೂ ಪರಿಣಾಮಕಾರಿಯಾಗಿ ಮರಾಠಿಗರೂ ಕರ್ನಾಟಕದ ಮೇಲೆ ಪ್ರೀತಿಯನ್ನು ತಾಳಲೆಂದು ಆಶಿಸಲಿಕ್ಕೂ ಕಾರಣವಿದೆ. ಮತ್ತು ಇನ್ನೊಂದು ವಾರದೊಳಗೆ ನಡಿಯುವ ಮರಾಠಿ ಸಾಹಿತ್ಯ ಪರಿಷತ್ತಿನಲ್ಲಿಯೂ ಕರ್ನಾಟಕದ ಹಕ್ಕು ಮತ್ತು ಅಧಿಕಾರಗಳಿಗೆ ಯೋಗ್ಯ ಮಾನತೆಯೂ ದೊರೆಯಬಹುದೆಂದೂ ಆಶಿಸಬಹುದಾಗುತ್ತಿದೆ.

ಈ ಪರಿಷತ್ತುಗಳು ನಿರ್ಣಯಿಸಿರುವ ಕಾರ್ಯಕ್ರಮಗಳ ವಿಷಯವಾಗಿ ನಾವು ಯಾವ ವಿಮರ್ಶೆಯನ್ನೂ ಕೊಡಲಾರೆವು. ಈ ವಾರದಲ್ಲಿ ಬರಲಿರುವ ಅತ್ತ ಕಡೆಯ ಪತ್ರಿಕೆಗಳೇ ನಮಗೆ ಈ ಪರಿಷತ್ತುಗಳ ನಿರ್ಣಯಗಳ ವರದಿಯನ್ನು ಕೊಡಬೇಕು. ಆ ವರೆಗೆ ನಾವು ಈ ಪರಿಷತ್ತುಗಳಿಗೆ ಕಾರಣರಾದ ಉತ್ತರ ಕರ್ನಾಟಕಸ್ಥರನ್ನು ಅವರ ಸ್ಥಿರವಾದ ಧ್ಯೇಯದ ಕಡೆಗೂ, ಅವಿಶ್ರಾಂತ ಸಾಹಸದ ಕಡೆಗೂ ಅವರನ್ನು ಅಭಿನಂದಿಸಿ ತೃಪ್ತರಾಗಬೇಕಾಗಿದೆ.

ವಿದೇಶ ವರ್ತಮಾನ.

— ಇಂಗ್ಲಾಂಡಿನಲ್ಲಿ ಹೆಂಗಸರು ಗಂಡಸರ ಸೋಗಿನಿಂದ ಜೀವನ ನಡೆಸುತ್ತಿರುವರು. ಇಂತಹ ಹಲವು ನಿದರ್ಶನಗಳು ಇತ್ತೀಚೆಗೆ ಕಂಡು ಹಿಡಿಯಲ್ಪಟ್ಟಿವೆ. ವಿಲ್ಲಿಯಮ್ ಹಾಲ್ಟನೆಂಬ ಹೆಸರಿನವನೊಬ್ಬನು ಅಸ್ವಸ್ಥದ ನಿಮಿತ್ತದಿಂದ ಆಸ್ಪತ್ರೆಗೆ ದಾಖಲುಮಾಡಲ್ಪಟ್ಟನು ನಿಜವಾಗಿ ನೋಡಲಾಗಿ ಆತನು ಹೆಂಗಸೆಂದು ಗೊತ್ತಾಗಿರುತ್ತದೆ.

— ಸಿಂಗಾಪುರದ ಜೈಲಿನಲ್ಲಿ ಬಹು ಸಮಯದಿಂದ ಶಿಕ್ಷೆಯನ್ನು ಅನುಭವಿಸುತ್ತಿದ್ದ ಒಬ್ಬ ಚೀನಿ ಕೈದಿಯು ಯುರೋಪಿಯನ ವಾರ್ಡರ ನೊಬ್ಬನನ್ನು ತಿವಿದು ಕೊಂದನು. ಆದರೆ ಕೈದಿಯು ಒಡನೆಯೇ ಗುಂಡು ಹೊಡೆದು ವಧಿಸಲ್ಪಟ್ಟನು.

ಸಿಲೋನಿನಲ್ಲಿ ಸೇಂದಿ ಅಂಗಡಿಗಳನ್ನು ತೆಗೆದು ಹಾಕುವದರ ಬಗ್ಗೆ ಯೋಚನೆಗಳು ನಡೆಯುತ್ತಲಿವೆ.

ಕಳೆದ ಎಪ್ರಿಲ್ ತಿಂಗಳಲ್ಲಿ ಬ್ರಿಟನರ ರಫ್ತು ೬೦,೨೪೪,೦೦೦ ಸ್ಟರ್ಲಿಂಗುಗಳಷ್ಟು ಮತ್ತು ಆಮದು ೧೦೪,೧೪೯,೦೦೦ ಸ್ಟರ್ಲಿಂಗುಗಳಷ್ಟು. ಕಳೆದ ವರುಷದ ಇದೇ ಸಮಯದಲ್ಲಾದ ಆಮದು ರಫ್ತುಗಳಿಗಿಂತ ಇದು ಎಷ್ಟೋ ಹೆಚ್ಚಾಗಿರುತ್ತದೆ.

ರಷ್ಯಯದಲ್ಲಿ ಧಾನ್ಯಗಳೂ ಆಹಾರ ಸಾಮಗ್ರಿಗಳೂ ಬಹು ಕಡಿಮೆಯಾಗಿರುತ್ತವೆ. ಇನ್ನ ಧಾನ್ಯಗಳ ಬೆಲೆಯು ಏರುತ್ತಲಿದೆ.

ಮಹಾಕ್ಷಾಮಯುದ್ಧದಿಂದ ಪ್ರಾರಂಭಿಸಲ್ಪಟ್ಟ ಖಾದಿ ಚಳವಳಿಯಿಂದ ಬ್ರಿಟಿಷರ ಹತ್ತಿ ಕೈಗಾರಿಕೆಗೆ ಬಲವಾದ ಹೊಡತವುಂಟಾಗಿ ಹಿಂದೂಗಳಿಗೆ ಲಾಭವಾಗುವದರಿಂದ ಅವರ ಈ ಚಳವಳಿಯನ್ನು ಅಭಿನಂದಿಸಿ ಯುನೈಟೆಡ್ ಸ್ಟೇಟ್ಸಿನ ಲೇಬರ್ ಡೈರೆಕ್ಟರರು ಭಾಷಣವನ್ನಿತ್ತರು.

— ಜರ್ಮನಿಯಲ್ಲಿ ಸಿನೆಮಾ ಫಿಲ್ಮಿನ ಬಗ್ಗೆ ಚಿತ್ರ ತೆಗೆಯುವಾಗ ಒಂದು ಯುದ್ಧದ ಚಿತ್ರವನ್ನು ತೆಗೆಯುವ ಆವಶ್ಯಕತೆಯೊದಗಿತು. ಎರಡು ಪಕ್ಷಗಳು ಕಾದಾಡುತ್ತಿರುವಾಗ, ನಿಜವಾಗಿಯೂ ಅದರಲ್ಲಿ ಯುದ್ಧವು ನಡೆದು ೩೫ ಮಂದಿಗಳಿಗೆ ಜಖಮುಂಟಾಯಿತು.

— ಸರ್ ಜೋನ್ ಸ್ಯಾಮುವೆಲರ ರಾಜಕೀಯ ಸಂಚಾರದ ಸಮಯ ಅವರಿಗೆ ಪೋಲೀಸರ ರಕ್ಷಣೆಯಿದೆಯಂತೆ.

— ಜಪಾನಿನ ಒಸಾಕಾ ಎಂಬಲ್ಲಿ ಪ್ಲೇಗ್ ರೋಗವು ಪ್ರಾರಂಭಿಸಿದ್ದು ಆ ಕಾರಣದಿಂದ ಡ್ಯೂಕ್ ಒಫ್ ಗ್ಲೌಸೆಸ್ಟರ್ ಇವರು ಒಸಾಕಾವನ್ನು ಸಂದರ್ಶಿಸದೆ ಇರಬಹುದೆಂದು ನಂಬಲಾಗಿಯದೆ. ಮುಂಬಾಯಿ ಯಿಂದ ಬಂದು ತಲುಪಿದ ಒಬ್ಬ ನಾವಿಕನು ಪ್ಲೇಗು ರೋಗದಿಂದ ಸತ್ತುಹೋದನು. ಮುತ್ತವಲ್ಲದೆ ಏನು ಬಂದರುಗಳಲ್ಲಿ ಪ್ಲೇಗು ಇಲಿಗಳು ಕಂಡು ಹಿಡಿಯಲ್ಪಟ್ಟವೆ. ಅಲ್ಲಿಗೆ ಬಂದಿಳಿಯುವ ಪ್ರಯಾಣಿಕರನ್ನು ಇಳಿಯುವ ಮೊದಲು ಚೆನ್ನಾಗಿ ಪರೀಕ್ಷಿಸುತ್ತಿರುವರು.

— ಲಂಡನಿನಲ್ಲಿರುವ ಆಂಗ್ಲೋ ಇಂಡಿಯನ್ ಮದ್ಯಪಾನ ನಿಷೇಧ ಸಂಘದ ವಾರ್ಷಿಕ ಸಭೆಯು ಜರಗಿತು. ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಲು ಅನುಕೂಲವಾಗುವಂತೆ ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯುಂಟಾಗುವುದೆಂದು ಅಧ್ಯಕ್ಷರು ಸೂಚಿಸಿದರು. ಈ ಸಂದರ್ಭದಲ್ಲಿ ಪ್ರೊಫೆಸರ್ ರಾವೆ, ವಿ. ಯುಸುಫ್ ಅಲಿ ಮೊದಲಾದವರು ಭಾಷಣಗಳನ್ನು ಮಾಡಿದರು. ಹಿಂದೂಸ್ಥಾನದಲ್ಲಿ ಹಲವು ಪರಿಷತ್ತುಗಳೂ ಬಹಿರಂಗವಾದ ಸಭೆಗಳೂ ಮದ್ಯಪಾನ ನಿಷೇಧದ ಕುರಿತಾಗಿ ಮಂಜೂರು ಮಾಡಿದ ಠರಾವುಗಳನ್ನು ಅಭಿನಂದಿಸಿಯೂ, ಮಾದಕ ಪಾನೀಯಗಳ ವ್ಯವಹಾರವನ್ನೇ ನಿರೋಧಿಸುವ ಅಧಿಕಾರವು ಹಿಂದೂ ಜನರಿಗೆ ಬರುವ ಹಿಂದೂಸ್ಥಾನದ ಹೊಸ ಸರಕಾರ ರಚನೆಯಲ್ಲಿ ಉಂಟಾಗಬೇಕೆಂದೂ ಠರಾವುಗಳು ಮಂಜೂರಾದುವು.

— ಇಟೆಲಿಯನ್ ಕಲೆಗಳ ಒಂದು ಪ್ರದರ್ಶನವು ರಷ್ಯಿಯ ಬರ್ಲಿಂಗ್ಟನ್ ಹೌಸ್ ಎಂಬಲ್ಲಿ ನಡೆಯುವದು. ಇದರ ಮೇಲ್ವಿಚಾರಣೆಯಲ್ಲಿರುವ ಲೇಡಿ ಚೇಂಬರ್‌ಲೈನರು ಈ ಕುರಿತಾಗಿ ಹಲವು ದೇಶಗಳಿಗೆ ಸಂಚಾರವನ್ನು ಮಾಡಿ ಇತ್ತಲೊಳಗೆ ಮರಳಿರುವರು. ಇದಕ್ಕೆ ಪೋಪ ಧೊರೆಗಳೂ, ಮುಸ್ಸೊಲಿನಿಯವರೂ ಸಹಾಯಮಾಡಲು ಕುತೂಹಲಿಗಳಾಗಿರುವರು.

— ಸಿಲೋನಿನಲ್ಲಿ ಭಯಂಕರವಾದ ಗಾಳಿ ಮಳೆ ಬಂದುದರಿಂದ ರೈಲ್ವೇ ಭಾಗಗಳು ಕಡಿದು ಹೋದುದಲ್ಲದೆ ರೈಲುವೇ ಸಂಚಾರವೂ ನಿಂತುಹೋಯಿತು.

— ಶ್ರೀಮತಿ ಸರೋಜಿನಿ ನಾಯುಡರವರು ಈಗ ಲಂಡನಿನಲ್ಲಿ ಒಳ್ಳೆಯ ಆರೋಗ್ಯದಲ್ಲಿರುವರು. ಆದರೆ ಇದುವರೆಗೆ ಅವರು ಯುನೈಟೆಡ್ ಸ್ಟೇಟ್ಸಿನ ಸಂಚಾರದಲ್ಲಿದ್ದುದರಿಂದ ಬಹಳ ಬಳಲಿರುವರಂತೆ. ಈ ವಾರವನ್ನು ಅವರು ಒಕ್ಸ್‌ಫೋರ್ಡಿನಲ್ಲಿ ಭಾಷಣಗಳನ್ನು ಮಾಡುತ್ತಾ ಕಳೆಯುವರು. ಹಿಂದೂಸ್ಥಾನದ ಕುರಿತಾಗಿ ಭಾಷಣಗಳನ್ನು ಕೊಡಬೇಕಾಗಿ ಹಲವರು ಅವರನ್ನು ಕೇಳಿಕೊಂಡಿರುವರು.

— ಲಂಡನಿನ ಡೊಂಕೆಸ್ಟರ್ ಗನಿಯ ೪೫೦ ಕೆಲಸಗಾರರು ತಮ್ಮ ಸಂಬಳ ಸಾಕಾಗುವದಿಲ್ಲವೆಂಬ ಕಾರಣದ ಮೇಲೆ ಮುಷ್ಕರವನ್ನಾಚರಿಸಿದರು.

— ಮೆಕ್ಸಿಕೊದಿನಲ್ಲಿ ಇತ್ತೀಚೆಗೆ ನಡೆದ ದಂಗೆಯ ಸಂಬಂಧದಲ್ಲಿ ೫೦ ಮಂದಿ ಜನರಲ್ ಅಧಿಕಾರಿಗಳನ್ನು ಕೆಲಸದಿಂದ ನಿವೃತ್ತಿಪಡಿಸಿರುವರು.

— ಮೇ ೬ನೇ ತಾರೀಕಿನ ದಿನ ಬ್ರಿಟನಿನಲ್ಲಿ ಒಟ್ಟು ನಿರುದ್ಯೋಗಿಗಳ ಸಂಖ್ಯೆ ೧,೧೩೩,೭೦೦ ಆಗಿದ್ದಿತು. ಕಳೆದ ವಾರಕ್ಕಿಂತ ಇದು ೩೧,೧೦೫ ಕಡಿಮೆಯಾದ ಹಾಗಾಯಿತು. ಒಂದು ವರುಷದ ಹಿಂದೆ ಈ ಸಂಖ್ಯೆಯು ಬಹು ಕಡಿಮೆಯಾಗಿದ್ದಿತು.

ಅರಸರು ಬೋಗನೂರಿನಿಂದ ಹೊರಟು ವಿಂಡ್ಸರ್ ಅರಮನೆಗೆ ಬಂದಿರುವರು.

— ಪರ್ಷಿಯಾ ಮತ್ತು ಫ್ರಾನ್ಸ್ ಇವುಗಳೊಳಗೆ ಶಾಶ್ವತವಾದ ಸ್ನೇಹದ ಬಗ್ಗೆ ಕರಾರು ಆಗಿರುತ್ತದೆ.

ಇಂಗ್ಲಾಂಡಿನಲ್ಲಿ ಮೇ ೩೦ನೇ ತಾರೀಕಿನ ದಿನ ನಡೆಯುವ ಜನರಲ್ ಚುನಾವಣೆಗೆ ಪಾರ್ಲಿಮೆಂಟರಿ ಉಮೇದುವಾರರ ಸಂಖ್ಯೆಯು ೧೭೩೬ ಆಗಿರುವದು. ಈ ಪೈಕಿ ಕನ್ಸರ್‌ವೇಟಿವ್ ಪಕ್ಷದವರು ೫೭೦, ಲಿಬರಲ್ ಪಕ್ಷದವರು ೫೧೯, ಕೊಮ್ಯುನಿಸ್ಟರು ೩೪, ಇತರ ಪಕ್ಷದವರು ೩೩, ಚುನಾವಣೆಯ ಸಂಬಂಧವಾಗಿ ರಾಜಕೀಯ ಪಕ್ಷದ ಧುರೀಣರು ಉದ್ರೇಕವಾಗಿ ಪ್ರಯತ್ನಿಸುತ್ತಿರುವರು.

— ಯುವರಾಜರು ನ್ಯೂಕಾಸಲಿನಲ್ಲಿ ಔದ್ಯೋಗಿಕ ಪ್ರದರ್ಶನವೊಂದನ್ನು ತೆರೆದರು. ಕಲ್ಲಿದ್ದಲು, ಕಬ್ಬಿಣ, ಮೊದಲಾದ ಕೈಗಾರಿಕೆಗಳು ಇಂಗ್ಲಾಂಡಿನ ಉತ್ತರ ಪ್ರಾಂತದಲ್ಲಿ ಇಳಿತದ ಸ್ಥಿತಿಗೆ ಬಂದಿರುತ್ತವೆ ಯುವರಾಜರು ಇದನ್ನರಿತು ಈ ಕೈಗಾರಿಕೆಗಳನ್ನು ಯಾವದಾದರೂ ವೈಜ್ಞಾನಿಕ ಮಾರ್ಗದಿಂದ ಅಭಿವೃದ್ಧಿಗೊಳಿಸಬೇಕೆಂದು ಸೂಚಿಸಿದರು ಸಮುದ್ರದಾಚೆಯ ದೇಶಗಳಲ್ಲಿ ಪ್ರತಿ ಸ್ಪರ್ಧೆಯಿರುವಾಗ ಇವುಗಳು ಅಭಿವೃದ್ಧಿಯಾಗಬೇಕು. ಗಣಿ ಕೆಲಸಗಾರರು ವಿದ್ಯಾವಂತರಾದರೆ ಹಿತವಾಗುವದು ಎಂದು ಮೊದಲಾಗಿ ವಿವರಿಸಿ ಅವರು ಭಾಷಣವನ್ನು ಮಾಡಿದರು.

ಒಳದೇಶ ವರ್ತಮಾನ.

— ಕಲಕತ್ತೆಯಲ್ಲಿ ಒಂದೆರಡು ದಿನಗಳ ಹಿಂದೆ ಯಮುನಾ ಬಾಲದಾಸಿ ಎಂಬ ಹರಿಜಾರು ವರುಷ ಪ್ರಾಯದ ಬಂಗಾಳಿ ಹುಡುಗಿಯೊಬ್ಬಳು ಬೆಂಕಿಯಿಂದ ಸುಟ್ಟು ಸತ್ತಳು. ಆಕೆಯ ಹುಣಿ ಚರಣ ದತ್ತ ಎಂಬಾತನ ಪತ್ನಿಯು. ಎರಡು ವರುಷಗಳ ಹಿಂದೆ ಆಕೆಯ ಮದುವೆಯು ನಡೆಯಿತು. ಗಂಡನ ಮನೆಗೆ ಬಂದಂದಿನಿಂದ ಆಕೆಯು ಪೀಡಿಸಲ್ಪಟ್ಟು, ಕೊನೆಗೆ ಕಳೆದ ಶನಿವಾರ ದಿನ ರಾತ್ರಿ ಆಕೆಯು ಉಟ್ಟ ವಸ್ತ್ರವನ್ನು ಸ್ಪಿರಿಟಿನಿಂದ ತೊಯಿಸಿ ಅದಕ್ಕೆ ಬೆಂಕಿಯನ್ನು ಕೊಟ್ಟಳು. ಆಕೆಯ ರೋದನದಿಂದ ಮನೆಯೊಳಗಿನವರೂ, ಹೊರಗಿನವರೂ ಆಕೆಯ ಸನ್ನಿಧಿಗೆ ಓಡಿ ಬಂದು ಆಕೆಯನ್ನು ಆಸ್ಪತ್ರೆಗೆ ಕೊಂಡೊಯ್ದರೂ ಆಸ್ಪತ್ರೆಯಲ್ಲಿ ಆಕೆಯು ಮೃತಪಟ್ಟಳು.

— ಪೆರಿಯಪಾಲಯಮ್ ಎಂಬಲ್ಲಿ ಗೋಪಾಲರೆಡ್ಡಿ ಎಂಬವನೊಬ್ಬನು ಹಲವು ಪರಕರುಗಳನ್ನು ಸಾಕಿಕೊಂಡಿದ್ದನು. ಆತನು ಕಳೆದ ಆದಿತ್ಯವಾರ ದನಗಳನ್ನು ಕಟ್ಟಹಾಕಿದ ಹಟ್ಟಿಗೆ ಹೋದಾಗ ಒಂದು ದನವು ಆತನನ್ನು ಹಾಯ್ದುದರಿಂದ ಆತನು ಸ್ಮೃತಿ ತಪ್ಪಿ ಬಿದ್ದುಬಿಟ್ಟನು. ಆತನನ್ನು ಆಸ್ಪತ್ರೆಗೆ ಕೊಂಡೊಯ್ದಾಗಿ ಆಸ್ಪತ್ರೆಯಲ್ಲಿ ಆತನು ಮೃತಪಟ್ಟನು

— ಮುಂಬಾಯಿ ಮಜ್ದೂರ ರಾಜ ಚಳ್ವಳಿಯು ಕಾಣಬರುವದಿಲ್ಲ. ಆದರೂ ಈಗ ಸುಮಾರು ೫೦ ಗಿರಣಿಗಳಲ್ಲಿ ಕೆಲಸವು ನಡೆಯುತ್ತದೆಯಂತೆ. ಒಟ್ಟಾರೆಯ ಮೇಲೆ ೫೦ ಸಾವಿರ ಜನರು ಕೆಲಸಮಾಡುತ್ತಿರುವರು.

— ಕಳೆದ ಎಂಟು ತಿಂಗಳುಗಳಿಂದ ಇತ್ತೀಚೆಗೆ ಮದರಾಸು ಪಟ್ಟಣದಲ್ಲಿ ಹಲವು ಬೈಸಿಕಲ್ಲುಗಳನ್ನು ಕಳವು ಮಾಡಿದ ಮುತ್ತಯ್ಯ ಪಿಳ್ಳೆಯೆಂಬಾತನು ಕೈದುಮಾಡಲ್ಪಟ್ಟವನು. ಆತನು ಯೋಗ್ಯರಂತೆ ಉಡಿಗೆಯನ್ನುಟ್ಟು ಕಾಫಿ ಹೋಟೆಲುಗಳ ಹೊರಗಡೆ ಕಾದಿದ್ದು ಯಾರಾದರೂ ಸೈಕಲು ಇಟ್ಟು ಒಳಗೆ ಹೋದೊಡನೆ ಸೈಕಲು ಹಿಡಿದು ಒಡನೆ ಮಾಯವಾಗುತ್ತಿದ್ದನು. ಆತನು ಒಂದೆರಡು ದಿನಗಳೊಳಗೆ ಸೈಕಲನ್ನು ಮಾರಿಬಿಡುತ್ತಿದ್ದನು. ತಿಯಾಗರಾಯದಲ್ಲಿ ತೆರೆಯಲ್ಪಟ್ಟ ಒಂದು ಸೈಕಲ್ ಅಂಗಡಿಯಲ್ಲಿ ಆತನು ಆಗಾಗ ಹದಿನೈದು ಸೈಕಲುಗಳನ್ನು ಮಾರಿದ್ದನಂತೆ.

— ಹಿಂದೂಸ್ಥಾನ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿಯ ಸೆಕ್ರೆಟರಿಯವರಿಂದ ಲಾಹೋರಿನ 'ಟ್ರಿಬ್ಯೂನ್' ಪತ್ರಿಕೆಯ ಸಂಪಾದಕರಿಗೊಂದು ಕೆಂಪು ಪತ್ರವು ತಲುಪಿತು. ಲಾಹೋರಿನಲ್ಲಿಯೇ ಅದು ಅಂಚೆಗೆ ಹಾಕಲ್ಪಟ್ಟಿದ್ದಿತು. ಪತ್ರದ ಅಡಿಯಲ್ಲಿ ಸಹಿಯನ್ನು ರಕ್ತದಿಂದ ಹಾಕಿದ್ದರು. ಸರಕಾರದವರು ಕಾಂಗ್ರೆಸ್ ಕೆಲಸದವರನ್ನು ಸರಿಯಾಗಿ ಕಾಣದೆ ಇದ್ದರೆ ನಾವು ಕಠಿಣೋಪಾಯಗಳನ್ನು ಕೈಕೊಳ್ಳಬೇಕಾಗುವದರಿಂದ ಬರೆದಿದ್ದರು. ಸರಕಾರದವರು ತಮ್ಮನ್ನು ಹಿಡಿದು ಪ್ರಯೋಜನವಿಲ್ಲವೆಂದು ಪತ್ರದಲ್ಲಿ ಬರೆ ಕೈಬರಹದಿಂದಲೇ ಅದನ್ನು ಬರೆದಿದ್ದರು.

ಬೆಂಗಾಂಗಿನಲ್ಲಿ ಯುವಕ ಪರಿಷದವು ನಡೆಯುತ್ತಿರುವಾಗ ಅಧ್ಯಕ್ಷರಾದ ಜ್ಯೋತಿಷಚಂದ್ರ ಘೋಷರವರನ್ನು ಪೋಲೀಸರು, ಹುಗ್ಲಿ ಡಿವಿಜನಲ್ ಮೆಜಿಸ್ಟ್ರೇಟರ ಹುಕುಮು ಮೇರೆಗೆ ಕೈದುಮಾಡಿಕೊಂಡು ಹೋದರು.

— ಕಾಶಿ ಮಹಾಪಂಡಿತರಾದ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿ ಶ್ರೀಪಾದಂಗಳವರು ಕಳೆದ ಸೋಮವಾರ ಅಲ್ಲೆಪ್ಪಿಗೆ ಹೋಗಿ ತಲುಪಿದರು. ಅವರನ್ನು ಅಲ್ಲಿ ಪ್ರತಿ ಜಾತಿಯ ಮಹನೀಯರೂ ಕೂಡಿ ವಿಶೇಷವಾದ ಸಂಭ್ರಮದಿಂದ ಸ್ವಾಗತೀಕರಿಸಿದರು. ಸ್ವಾಮಿಜಿಯವರು ಅಲ್ಲಿಯ ತಿರುಮಲ ದೇವಸ್ಥಾನದಲ್ಲಿ ಉಳಕೊಂಡಿರುವರು.

— ಕರ್ನೂಲು, ಕೊಯಮತ್ತೂರು ಮತ್ತು ತಿನ್ನವೆಲ್ಲಿ ಜಿಲ್ಲೆಗಳ ಅಸ್ಪೃಶ್ಯರ ಸಹಾಯಾರ್ಥವಾಗಿ ಸರಕಾರದವರು ಈ ವರುಷ ಬೇಕಾದ ಕಾರ್ಯಕ್ರಮಗಳನ್ನು ಕೈಕೊಳ್ಳುವರು. ಅವರ ಬಗ್ಗೆ ಬಾವಿಗಳನ್ನು ತೋಡಿಸುವಿಕೆ, ಶಾಲೆಗಳನ್ನು ಕಟ್ಟಿಸುವಿಕೆ, ಇವೇ ಅವರ ಸಹಾಯದ ಕಾರ್ಯಗಳು.

— ಕೊಯಮುತ್ತೂರಿನ ಸೆಂಟ್ರಲ್ ಜೈಲಿನ ಸಮೀಪವಿರುವ ದೇವಸ್ಥಾನದ ಕಟ್ಟಡಕ್ಕೆ ಬೆಂಕಿ ಹಿಡಿದು ಅದು ಪೂರ್ಣ ಸುಟ್ಟುಹೋಯಿತು. ದೇವರ ವಿಗ್ರಹಕ್ಕೆ ಸ್ವಲ್ಪ ಊನವುಂಟಾಗಿರುತ್ತದೆ.

— ಎಲಿಮೆಂಟರಿ ವಿದ್ಯಾಭ್ಯಾಸದ ಅಭಿವೃದ್ಧಿಯನ್ನು ಹೇಗೆ ಮಾಡಬಹುದೆಂಬುದನ್ನು ಚರ್ಚಿಸುವ ಸಲುವಾಗಿ ಉದಕಮಂಡಲದಲ್ಲಿ ವಿದ್ಯಾಮಂತ್ರಿ, ಡೈರೆಕ್ಟರ್ ಓಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮೊದಲಾದವರ ಪರಿಷತ್ತು ಜರಗಿತು. ಈಗಿನ ಉಪಾಧ್ಯಾಯರ ಸಂಖ್ಯೆಯನ್ನು ಏರಿಸಬೇಕೆಂದೂ, ಈ ಕುರಿತು ಎಲಿಮೆಂಟರಿ ವಿದ್ಯಾಭ್ಯಾಸದ ಚಾರ್ಜಿನಲ್ಲಿರುವ ಹೊಸ ಡಿಪ್ಯುಟಿ ಡೈರೆಕ್ಟರರವರಿಗೆ ಸೂಚಿಸಬೇಕೆಂದೂ, ಅವರು ಬೇಕಾದವುಗಳನ್ನು ಸರಕಾರಕ್ಕೆ ನಿವೇದಿಸಿಕೊಳ್ಳಬೇಕಾಗಿಯೂ ನಿರ್ಣಯವಾಯಿತು.

— ಯಮುನಾ ನದಿಯಲ್ಲಿ ನೀರು ಕಡಿಮೆಯಾಗಿರುವ ಕಾರಣ ಅಲಹಾಬಾದದಲ್ಲಿ ಸಾಕಷ್ಟು ನೀರು ಈಗ ದೊರಕುವುದಿಲ್ಲ. ನೀರಿನ ಬರವೇ ಅಲ್ಲಿ ಬರಬಹುದೋ, ಎಂಬ ಹೆದರಿಕೆಯಿದೆ. ನೀರನ್ನು ಒದಗಿಸುವ ಸಮಯದ ಅವಧಿಯನ್ನು ಈಗ ಇಳಿಸಿರುವರು. ನದಿಯ ನೀರು ಇನ್ನೂ ಕಡಿಮೆಯಾದರೆ ನಳಿಗೆಗಳ ಮೂಲಕ ನೀರನ್ನು ಒದಗಿಸುವದೇ ಕಷ್ಟವಾಗಿ ಫಲಿತಾಂಶವು ವಿಪರೀತವಾಗಲಬಹುದು.

— ಜವಾಹಿರಲಾಲ ನೆಹರುಗಳವರ ಪತ್ನಿಯವರು ಕಾಹಿಲೆಯಲ್ಲಿರುವದರಿಂದ ಪಂಡಿತ ಮೋತಿಲಾಲ ನೆಹರುಗಳವರು ಅವರನ್ನು ಚಿಕಿತ್ಸೆಯ ಬಗ್ಗೆ ಕಲಕತ್ತೆಗೆ ಕರೆದುಕೊಂಡು ಬಂದಿರುವರು.

— ಕಾಶಿಯಲ್ಲಿ ಈ ವರುಷ ವಾಂತಿಭೇದಿಯ ರೋಗವು ಹರಡಿದ್ದದರಿಂದ ಸೂರ್ಯಗ್ರಹಣದ ದಿನ ಗಂಗಾಸ್ನಾನಕ್ಕಾಗಿ ಪರಸ್ಥಳಗಳಿಂದ ಅಷ್ಟೊಂದು ಹೆಚ್ಚು ಯಾತ್ರಿಕರು ಬಂದಿರಲಿಲ್ಲ. ಬಂದ ಯಾತ್ರಿಕರ ವ್ಯವಸ್ಥೆಗಾಗಿ ಪೋಲೀಸರೂ, ಕಾಶಿ ಸೇವಾಸಮಿತಿಯ ಸ್ವಯಂ ಸೇವಕರೂ ಸಿದ್ಧರಾಗಿಯೇ ಇದ್ದರು.

— 'ಈಗಿನಂತೆಯೇ ಮುಂದಣ ತಿಂಗಳಲ್ಲಿಯೂ, ಬ್ರಿಟಿಷ ವಸ್ತ್ರ ಬಹಿಷ್ಕಾರವನ್ನು ನಾವು ಕೈಕೊಳ್ಳುವೆವು' ಎಂದು ಪಂಡಿತ ಮೋತಿಲಾಲ ನೆಹರುಗಳವರು ಸೂಚಿಸುವರು.

— ಮೌಲಾನಾ ಜಫರ್ ಅಲಿಯವರು ನೆಹರು ವರದಿಯನ್ನು ಸಮರ್ಥಿಸುವರಾದುದರಿಂದ ತನ್ನ ಅಭಿಪ್ರಾಯವನ್ನು ಬದಲಿಸದೆ ಇದ್ದರೆ ಅವರು ಮರಣಕ್ಕೆ ಗುರಿಮಾಡಲ್ಪಡುವರೆಂದು ಡಿಲ್ಲಿಯ ಮುಸ್ಲಿಮರ ಕೇಂದ್ರದಿಂದ, 'ಯುವಕ ಮುಸ್ಲಿಮ್ ಸಂಘದ' ಅಧ್ಯಕ್ಷರ ಸಹಿಯಿಂದೊಡಗೂಡಿದ ಒಂದು ಪತ್ರವು ಬಂದಿರುತ್ತದೆ. ವಿಚಾರ ಮಾಡುವ ಸಲುವಾಗಿ ಅವರಿಗೆ ಎರಡು ತಿಂಗಳ ಸಮಯವು ಕೊಡಲ್ಪಟ್ಟಿರುತ್ತದೆ. ಅಷ್ಟರೊಳಗೆ ಅವರು ತನ್ನ ಮನೋನಿರ್ಧಾರವನ್ನು ಬದಲಿಸಬೇಕು. ಅಥವಾ ಮರಣವನ್ನು ಆಮಂತ್ರಿಸಬೇಕು. ಈ ಸಂಘದವರು ಪೂರ್ಣ ಸ್ವಾತಂತ್ರ್ಯವನ್ನು ಬಯಸುವರು. ಮಾತೃಭೂಮಿಯ ಸಲುವಾಗಿ ತನಗೆ ಮರಣವೇ ಸುಖಕರವೆಂದು ಮೌಲಾನಾ ಜಫರ್ ಅಲಿಯವರು ಹೇಳುವರು.

— ಸಿಮ್ಲಾದಲ್ಲಿ ರೆವಿನ್ಯು ಮೆಂಬರರುಗಳ ಪರಿಷದವು ಜರಗಿತು. ಮುಂಬಾಯಿ, ಸಂಯುಕ್ತಪ್ರಾಂತ, ಮಧ್ಯಪ್ರಾಂತ, ಅಸ್ಸಾಮ, ಇವೆಲ್ಲ ಪ್ರಾಂತಗಳಿಂದ ಮೆಂಬರರುಗಳು ಬಂದಿದ್ದರು.

— ಕೈಲಕೋಟೆಯಲ್ಲಿ ಶಾಲೆಯ ಹದಿನಾಲ್ಕು ಮಂದಿ ವಿದ್ಯಾರ್ಥಿಗಳು ತಾವು ಯಾವಾಗಲೂ ಖಾದಿಯನ್ನು ಧರಿಸುವೆವೆಂದು ರಕ್ತದಿಂದ ಸಹಿಹಾಕಿ ಪ್ರತಿಜ್ಞೆಮಾಡಿಕೊಂಡಿರುವರು. ಇನ್ನೂ ಆರು ಮಂದಿ ವಿದ್ಯಾರ್ಥಿಗಳು ಇಂತಹದೇ ಪ್ರತಿಜ್ಞೆಯನ್ನು ಮಾಡಲು ಸಿದ್ಧರಾಗಿರುವರು. ಹಿಂದೆ ಶ್ರೀ ಬಿಪಿನಚಂದ್ರಪಾಲ ಮತ್ತು ಸುಂದರಿ ಮೋಹನ ದಾಸರವರು ತಾವು ಸರ್ವಥಾ ಸರಕಾರಿ ಕೆಲಸಕ್ಕೆ ನಿಲ್ಲಲಾರೆವೆಂದು ರಕ್ತದಿಂದ ಸಹಿಹಾಕಿ ಪ್ರತಿಜ್ಞೆಮಾಡಿಕೊಂಡಿದ್ದರಂತೆ.

— ವಿದೇಶಿ ವಸ್ತ್ರಗಳನ್ನು ಕೊಂಡುಕೊಳ್ಳುವ ಯೋಚನೆಯನ್ನು ತ್ಯಜಿಸದಿದ್ದರೆ ಅವರಿಗೆ ನೆಮ್ಮದಿಯಿರಲಾರದೆಂದು ಹೆದರಿಕೆಯನ್ನು ಹುಟ್ಟಿಸುವಂತಹ ಕರಾಚಿಯ ಹಲವು ಹಿಂದೂ ಮತ್ತು ಯುರೋಪಿಯನ ವ್ಯಾಪಾರಿಗಳಿಗೆ ಇಂಡಿಯನ್ ಸೋಸಿಯಲಿಸ್ಟ ರಿಪಬ್ಲಿಕನ್ ಆರ್ಮಿ ಇದರ ಪರವಾಗಿ ಸಹಿ ಹಾಕಲ್ಪಟ್ಟ ಪತ್ರಗಳು ಬಂದು ತಲುಪಿರುವವಂತೆ. ಪೋಲೀಸರು ಈ ಕುರಿತಾಗಿ ಶೋಧವನ್ನು ನಡೆಸುತ್ತಿರುವರು.

— ಕರಾಚಿಯ "ಡೈಲಿಗಜೆಟ್" ಎಂಬ ಪತ್ರಿಕೆಯ ಸಂಪಾದಕನು ಮಿಸ್. ಮಯೊಳನ್ನು ಈ ಮೊದಲು ಪ್ರೋತ್ಸಾಹಿಸಿದುದರಿಂದ ಹಿಂದೂಸ್ಥಾನ ರಿಪಬ್ಲಿಕನ್ ಸರಕಾರದ ೧೭ನೇ ಪ್ರಕರಣದ ಮೇರೆಗೆ ಅಪರಾಧಿಯಾದುದರಿಂದ, ಆತನ ವಧೆಯ ಬಗ್ಗೆ ಇಬ್ಬರು ಸೈನಿಕರು ಕಳುಹಿಸಲ್ಪಟ್ಟಿರುವರೆಂದು ಆತನಿಗೆ ಒಂದು ಕೆಂಪು ಪತ್ರವು ಬಂದಿತು. ಹಿಂದೂಸ್ಥಾನ ರಿಪಬ್ಲಿಕನ್ ಆರ್ಮಿಯ ಸಿಂಧೂ ಪ್ರಾಂತದ ಆಡಳಿತ ಅಧೀಸರನಾದ ಎ. ಜಿ. ರಾಬ್, ಎಂಬಾತನ ಸಹಿಯು ಪತ್ರದಲ್ಲಿದ್ದಿತು.

— ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರ ಬರುವ ಸಭೆಯು ಮುಂಬಾಯಿಯಲ್ಲಿ ಇದೇ ತಿಂಗಳ ೨೪ನೇ ತಾರೀಕಿಗೆ ಜರಗುವದು.

— ಸೂರ್ಯಗ್ರಹಣದ ಸಮಯ ಹೂಗ್ಲಿ ನದಿಯಲ್ಲಿ ಸ್ನಾನಕ್ಕಾಗಿ ಬಂದಿದ್ದ ಸಾವಿರಾರು ಮಂದಿ ಯಾತ್ರಿಕರಲ್ಲಿ ಅಭಿಪ್ರಾಯ ಭೇದದಿಂದ ಸ್ವಲ್ಪ ಜಗಳವುಂಟಾಯಿತು. ಕಾಂಗ್ರೆಸ್ ಸ್ವಯಂ ಸೇವಕರೂ, ದೇವಳದ ಅಧಿಕಾರಿಗಳೂ ಕೂಡ ಜನರು ಬಂದಿದ್ದರು. ಎರಡು ಕಡೆಗಳಲ್ಲಿ ಕೆಲವರಿಗೆ ಜಖಮುಂಟಾಯಿತು. ಸಕಾಲದಲ್ಲಿ ಪೋಲೀಸರು ಬಂದುದರಿಂದ ಹೆಚ್ಚಿನ ಅಪಾಯಗಳು ಸಂಭವಿಸಲಿಲ್ಲ.

— ವಿಲ್ಲುಪುರದಲ್ಲಿ ವೆಲ್ಲಿಯರಾವುತಾನ ಮತ್ತು ಇಸ್ಮಿಟ್ಟರು, ಪಳ್ಳಿಯಮ್ಮಾಳ್ ಮತ್ತು ಐವರು ಇತರ ಹೆಂಗಸರುಗಳನ್ನು ಕುದಿವ ಎಣ್ಣೆಯಲ್ಲಿ ಕೈ ಹಾಕಲು ಬಲಾತ್ಕರಿಸುವದರಿಂದ ಪೋಲೀಸರ ವಶವಾಗಿರುವರು. ಈ ಆರು ಜನ ಹೆಂಗಸರು ವೆಲ್ಲಿಯನ ಅಂಗಡಿಯಲ್ಲಿ ಸಾಮಾನು ಕೊಂಡುಕೊಳ್ಳಲು ಬಂದಾಗ ಆತನ ಪೆಟ್ಟಿಗೆಯಲ್ಲಿ ಮೂವತ್ತು ರೂ.ಗಳು ಕಡಿಮೆಯಾದುದು ತಿಳಿಯಬಂತು. ಒಡನೆ ಆತನು ಆರು ಮಂದಿ ಹೆಂಗಸರನ್ನು ಬಂಧಿಸಿ, ಒಂದು ಕೋಣೆಗೆ ಕರೆದೊಯ್ದು, ಒಂದು ಪಾತ್ರೆಯಲ್ಲಿ ಉರಿಯುವ ಎಣ್ಣೆಯನ್ನಿಟ್ಟು ಅದರಲ್ಲಿ ಒಂದಾಣೆಯ ಪಾವಲಿಯನ್ನು ಹಾಕಿದನು. ಪ್ರತಿಯೊಬ್ಬರೂ ಆ ಎಣ್ಣೆಯಲ್ಲಿ ಕೈ ಮುಳುಗಿಸಬೇಕೆಂದೂ, ಆ ಒಂದಾಣೆಯ ಪಾವಲಿಯನ್ನು ಮೇಲಕ್ಕೆ ತೆಗೆಯಬೇಕೆಂದೂ, ಯಾರ ಕೈಯು ಸುಟ್ಟುಹೋಗದೆ ಇದ್ದಂತೆಯೇ ಉಳಿಯುವದೋ, ಅವರು ಅಪರಾಧಿಗಳಲ್ಲವೆಂದೂ ಹೇಳಿ ಬಲಾತ್ಕಾರದಿಂದ ಕೈ ಮುಳುಗಿಸುವಂತೆ ಮಾಡಿದನು. ಆರು ಜನರ ಕೈಗಳೂ ಸುಟ್ಟುಹೋದ ಕಾರಣ ಅವರನ್ನು ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಪೋಲೀಸರು ಇಬ್ಬರನ್ನು ಕೈದುಮಾಡಿ ಈಗ ವಿಚಾರಣೆಯು ನಡೆಯುತ್ತಲಿದೆ.

— ಮೀರತಿನ ಸಮೀಪದ ಶರಣಪುರವೆಂಬಲ್ಲಿ ಪೋಲೀಸರಿಗೆ ಕೆಲವು ಬೊಂಬುಗಳು ಸಿಕ್ಕಿರುತ್ತವೆಂದು ವರ್ತಮಾನವಿದೆ. ಮೂರು ರಿವೋಲ್ವರುಗಳೂ ಸಿಕ್ಕಿರುವದರಿಂದ ಇಬ್ಬರನ್ನು ಕೈದುಮಾಡಿರುವರಂತೆ.

— ಶ್ರೀಪೆರಂಬುದೂರಿನಿಂದ ಹೊರಟು ಮದರಾಸಿಗೆ ಹೋಗುತ್ತಲಿದ್ದ ಒಂದು ಬಸ್ಸಿನ ಡ್ರೈವರ ಮತ್ತು ಕಂಡಕ್ಟರರನ್ನು ನಟರಾಜ ಅಯ್ಯರನೆಂಬ ಯುವಕನೊಬ್ಬನು ಐದು ನಳಿಗೆಗಳ ಪಿಸ್ತೂಲಿನಿಂದ ಹೆದರಿಸಿಬಿಟ್ಟನು. ಆತನು ಎರಡು ಗುಂಡುಗಳನ್ನು ಬಿಟ್ಟನಾದರೂ ಅದೃಷ್ಟವಶಾತ್ ಅವು ಯಾರಿಗೂ ತಗಲಲಿಲ್ಲ. ಅವರೆ ಆಗಲೇ ಆತನನ್ನು ಹಿಡಿದು ಪೋಲೀಸರ ವಶವಿತ್ತರು.

— ಕಲಕತ್ತೆಯ ಪ್ರಮೋದನಾಥ ಬಿನರ್ಜಿ ಎಂಬೋರ್ವ ಧರ್ಮಿಷ್ಠನು ಒಂದು ಲಕ್ಷ ರೂಪಾಯಿ ಬೆಲೆಬಾಳುವ ತನ್ನ ಆಸ್ತಿಯನ್ನು, ಬಡ ಹಿಂದೂ ವಿಧವೆಗಳ ಸಹಾಯಾರ್ಥಕ್ಕಾಗಿ ಬಿಟ್ಟಿರುವನು.

— ಪೂನೆಯಿಂದ ಬೆಂಗಳೂರಿಗೆ ಬಂದಿದ್ದ ರಿಸರ್ಚ ವಿದ್ಯಾರ್ಥಿ ಮಿ॥ ಶಿಂತ್ರೆ ಎಂಬವನಿಗೆ ಭಯಂಕರವಾದ ಮರಣವು ಸಂಭವಿಸಿತು. ಶಿಂತ್ರೆಯು, ಐದಾರು ಮಂದಿ ಸ್ನೇಹಿತರುಗಳೊಡಗೂಡಿ ಒಂದು ಕೆರೆಯಲ್ಲಿ ಈಜಾಡಲು ಹೋಗಿದ್ದನು. ಮೂವರು ಕೆರೆಯ ನಡುವಿಗೆ ಹೋದರು. ಶಿಂತ್ರೆಯು ಶಕ್ತಿಯು ಕುಂದಿ ಆತನು ಮೆಲ್ಲನೆ ಮುಳುಗತೊಡಗಿದನು. ಸ್ನೇಹಿತನೊಬ್ಬನು ಆತನ ಸಹಾಯಕ್ಕೆ ಬಂದರೂ ಆತನನ್ನು ವಶಕ್ಕೆ ತರಲಾಗಲಿಲ್ಲ. ಅವನು ಸಹಾಯಕ್ಕಾಗಿ ಕರೆದು ಹೇಳಿದನು. ಸಹಾಯಕ್ಕೆ ಬೇರೆಯವರು ಬರುವ ಮೊದಲೇ ಶಿಂತ್ರೆಯು ಮುಳುಗಿಹೋದನು. ಆತನ ಅಣ್ಣನು ಕೆಲವು ಸಮಯದ ಹಿಂದೆ ಪೂನೆಯಲ್ಲಿ ಇಂತಹದೇ ವಿಜ್ಞಾನ ಶೋಧಗೃಹದಲ್ಲಿ ಒಂದು ಉಪಕರಣವು ಸ್ಫೋಟನವಾದುದರಿಂದ ಮೃತಪಟ್ಟಿದ್ದನು.

— ಮುಂಬಾಯಿ ಜಗಳಗಳ ವಿಚಾರಣೆಯನ್ನು ನಡೆಯಿಸಲು ಸ್ಥಾಪಿತವಾದ ಕಮಿಟಿಯು ಜೂನ್ ತಿಂಗಳ ಕೊನೆಯ ವಾರದ ವರೆಗೆ ತನ್ನ ಕೆಲಸವನ್ನು ಪ್ರಾರಂಭಿಸುವುದಿಲ್ಲವಂತೆ. ಮೊದಲು ಮೇ ೨೦ಕ್ಕೆ ವಿಚಾರಣೆಯನ್ನು ಪ್ರಾರಂಭಿಸಬೇಕೆಂದು ನಿಶ್ಚಯವಾಗಿದ್ದಿತಾದರೂ, ಈಗ ಮುಂಬಯಿಯ ವಾತಾವರಣವು ಶಾಂತತೆಯಲ್ಲಿಲ್ಲದಕಾರಣ ವಿಚಾರಣೆಯನ್ನು ಪ್ರಾರಂಭಿಸುವದುಚಿತವಲ್ಲವೆಂದು ಕೆಲವು ನಾಗರಿಕರು ಸೂಚಿಸಿದ್ದಕ್ಕೆ ಸರಕಾರದವರು ಒಪ್ಪಿರುವರು.

— ನಾಗಪುರದ ಸಮೀಪದ ಬೆಂಕಿಯ ಅನಾಹುತದಿಂದ ಸುಮಾರು ೧೦೦ ಗುಡಿಸಲುಗಳು ಸುಟ್ಟುಹೋದವು. ನಿರಾಶ್ರಿತರಾದ ಮಜೂರರು ಈಗ ಮನೆಯಿಲ್ಲದೆ ಕಷ್ಟಪಡುತ್ತಿರುವರು. ಒಬ್ಬ ಮುದಿ ಹೆಂಗಸು ತನ್ನ ಗುಡಿಸಲಿನಲ್ಲಿ ಬೆಲೆಯುಳ್ಳ ವಸ್ತುಗಳನ್ನು ಸಂರಕ್ಷಿಸಬೇಕೆಂದು ಪ್ರಯತ್ನಿಸುತ್ತಿರುವಾಗ ತುಂಬ ಜಖಮು. ನಂದಿಸಲು ನೀರು ಸಮೀಪದಲ್ಲಿ ಇಲ್ಲದುದರಿಂದ ಬೆಂಕಿಯನ್ನು ನಂದಿಸಲಾಗಲಿಲ್ಲ.

— ಬರೋಡಾ ರಾಜ್ಯದ ಪಾದ್ರೋಲ ಎಂಬಲ್ಲಿಯೂ ಬೆಂಕಿಯಿಂದ ೧೫೦ ಮನೆಗಳೂ ಸುಮಾರು ೫೦ ಗುಡಿಸಲುಗಳೂ ಸುಟ್ಟುಹೋದವು. ೩ ಲಕ್ಷ ರೂಪಾಯಿಗಳ ನಷ್ಟವಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಸುಮಾರು [illegible] ಕುಟುಂಬಗಳು ಮನೆಯಿಲ್ಲದೆ, ಕಾಸಿಲ್ಲದೆ ಅಲೆದಾಡುತ್ತಿರುವರು.

— ಮಿ॥ ಸಕಲಾತ ವಾಲರವರಿಗೆ ಚುನಾವಣೆಯ ಖರ್ಚಿನ ಬಗ್ಗೆ ೫೦ ಪವನುಗಳನ್ನು ಕೊಡಬೇಕೆಂಬುದರ ಬಗ್ಗೆ ತರಲ್ಪಟ್ಟ ಠರಾವನ್ನು ಮುಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ನಿರಾಕರಿಸಿರುವರು.

— ಜಸ್ಟೀಸ್ ಪತ್ರಿಕೆಯ ಸಂಪಾದಕನಿಗೂ ಒಂದು ಕೆಂಪು ಕಾಗದ ಬಂದಿದೆ. "ನೀನು ಸರಕಾರದವರನ್ನು ಕುರಿತು ಜನರಿಗೆ ತೊಂದರೆಯನ್ನು ಕೊಡುತ್ತಿರುವೆ, ಮುಂದೆ ಜಾಗರೂಕನಾಗಿರು. ಇಲ್ಲದಿದ್ದರೆ ಸೊಂದರ್ಭದ ಗತಿಯೊದಗುವದು. ಕವಾಂತರದಿಂದ ನಮಗೆ ಈ ಹುಕುಮು ಬಂದಿದೆ' ಎಂದು ಪತ್ರದಲ್ಲಿದ್ದಿತು. ಪತ್ರವು ಬೆಂಗಳೂರಿನಿಂದ ಬಂದಿತ್ತು. ನಂಬ್ರ ೩೩೫೭೭ ಮತ್ತು ೨೧೭೩ ರ ಸೈನಿಕರೆಂದು ಸಹಿಯಿದ್ದಿತು.

— ಈ ವರುಷ ಲಾಹೋರಿನಲ್ಲಿ ಕಾಂಗ್ರೆಸ್ ಚಪ್ಪರವನ್ನು ಕಟ್ಟಿ ಕಾಂಗ್ರೆಸ್ ಮತ್ತು ಪ್ರದರ್ಶನಗಳನ್ನು ನಡೆಯಿಸಲು 'ಮಿಂಟೊಪಾರ್ಕ' ಎಂಬ ಸ್ಥಳವನ್ನು ಕೊಡಬೇಕಾಗಿ, ಕಾಂಗ್ರೆಸ್ ಸ್ವಾಗತ ಮಂಡಳಿಯವರು ಪಂಜಾಬ್ ಸರಕಾರಕ್ಕೆ ಮನವಿಯನ್ನು ಮಾಡಿದ್ದರು. ಆದರೆ ಇದಕ್ಕೆ ಪಂಜಾಬ ಸರಕಾರದವರು ಸಮ್ಮತಿಸಿರುವುದಿಲ್ಲ.

ದಕ್ಷಿಣ ಕನ್ನಡ.

ಮಂಗಳೂರು — ಮುಂಬಾಯಿಯಿಂದ ಕೊಚ್ಚಿಗೆ ಹೋಗುತ್ತಿದ್ದ ಎರಡು ಸೀ ಪ್ಲೇನುಗಳು ಕಳೆದ ಶನಿವಾರ ಬೆಳಿಗ್ಗೆ ಮಂಗಳೂರು ಹಾದಿಯಾಗಿ ಹಾರಿಹೋದುವು.

ಬರುವ ಲೆಜಿಸ್ಲೇಟಿವ್ ಎಸೆಂಬ್ಲಿ ಚುನಾವಣೆಯಲ್ಲಿ ಮಲಬಾರು ಮತ್ತು ದಕ್ಷಿಣಕನ್ನಡಾ ಈ ಎರಡು ಜಿಲ್ಲೆಗಳ ಪರವಾಗಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಉಮೇದುವಾರರಾಗಿರುವರೆಂದು ತಿಳಿದು ಬರುತ್ತದೆ.

ಇಲ್ಲಿಯ ಬ್ರಹ್ಮಸಮಾಜದವರ ಮಂದಿರದಲ್ಲಿ ಇದೇ ಬರುವ ಆದಿತ್ಯವಾರ ಬೆಳಿಗ್ಗೆ ೮॥ ಘಂಟೆಗೆ ಶ್ರೀಯುತ ಗಂಗೊಳ್ಳಿ ಕೃಷ್ಣರಾಯರು ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡೆಸುವರು. ಸರ್ವರಿಗೂ ಸುಸ್ವಾಗತವಿದೆ.

ಇದೇ ಮೇ ತಿಂಗಳ ತಾರೀಕು ೩೦ನೇ ಗುರುವಾರ ಅಪರಾಹ್ನ ೩ ಘಂಟೆಗೆ ಇಲ್ಲಿಯ ತಾಲೂಕು ಬೋರ್ಡ ಸದಸ್ಯರ ಸಭೆಯು ತಾಲೂಕು ಬೋರ್ಡ ಆಫೀಸಿನಲ್ಲಿ ಜರಗುವುದು.

ತಾರೀಕು ೧೧-೫-'೨೯ಕ್ಕೆ ಅಂತ್ಯವಾಗುವ ವಾರದಲ್ಲಿ ೨೫ ಮರಣಗಳೂ, ೩೪ ಜನನಗಳೂ ಆದುವು. ಸನ್ನಿಪಾತದಿಂದ ೧, ಅತಿಸಾರದಿಂದ ೧, ಶ್ವಾಸಕೋಶದ ರೋಗಗಳಿಂದ ೬, ಸಿಡುಬಿನಿಂದ ೧, ಇತರ ಎಲ್ಲಾ ಕಾರಣಗಳಿಂದ ೧೬, ಶಿಶು ಮರಣಗಳು ೪.

ಮಂಜೇಶ್ವರ — ಈ ಸರ್ಕಲಿನ ತಾಲೂಕು ಬೋರ್ಡಿನ ಒಂದು ಮೆಂಬರಿಕೆಯು ಬೇಗನೆ ಚುನಾವಣೆಯಾಗಲಿಕ್ಕಿದೆ. ಇಷ್ಟರವರೆಗೆ ರಾ॥ ಬಾಕ್ರಬೈಲು ಲಕ್ಮಣ್ಣ ಶೆಟ್ಟಿ ಮೆಂಬರರಾಗಿದ್ದರು. ಇವರು ತಾಲೂಕು ಬೋರ್ಡ ಮೆಂಬರರು ಮಾತ್ರವಲ್ಲದೆ ಕಾಸರಗೋಡು ತಾಲೂಕಿನ ಪರವಾಗಿ ಡಿಸ್ಟ್ರಿಕ್ಟ ಬೋರ್ಡ ಮೆಂಬರರೂ ಆಗಿದ್ದರು. ಇವರು ಮಂಜೇಶ್ವರ ಸರ್ಕಲಿನಿಂದ ತಾಲೂಕು ಬೋರ್ಡಿಗೆ ಮೆಂಬರರಾಗಿ ಹೋದ ಯಾವನೊಬ್ಬ ಮೆಂಬರರೂ ಮಾಡದೆ ಇರುವ ಮತ್ತು ಮಂಜೇಶ್ವರ ಬಂಗ್ರ ಮಂಜೇಶ್ವರ ಊರಿನವರೂ ಸುತ್ತುಮುತ್ತಲಿನ ಗ್ರಾಮದವರೂ ಯಾವಾಗಲೂ ಮರೆಯದ ಒಂದು ಲೋಕೋಪಕಾರಕವಾದ ಕೆಲಸವನ್ನು ಮಾಡಿರುವರು. ಅದು ಏನೆಂದು ಹೇಳಬೇಕಾಗಿಲ್ಲ. ಮಂಜೇಶ್ವರ ಬಂಗ್ರ ಮಂಜೇಶ್ವರ ಹೊಳೆಗೆ ಒಂದು ಸೇತುವೆ ಮಾಡಿಸಿದ್ದು. ಈ ಸೇತುವೆಗಾಗಿ ಇವರು, ಊರಿನವರು ಮಾಡಿದ ಮನವಿಯನ್ನು ತಮ್ಮ ಶಿಫಾರಸಿನೊಂದಿಗೆ ಕಳುಹಿಸಿದ್ದು ಮಾತ್ರವಲ್ಲ, ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಸಾಧಿಸಿ ಈ ಸೇತುವೆಗೆ ೨೭ ಸಾವಿರ ಚಿಲ್ಲರೆ ರೂಪಾಯಿ ಸೆಂಕ್ಷನ್ ಮಾಡಿಸಿರುವರು. ಇದು ಚಿರಸ್ಮರಣೀಯವಾದ ಕೆಲಸ. ಆದುದರಿಂದ ಮಂಜೇಶ್ವರ ಸರ್ಕಲಿನ ವೋಟರರು ಈ ಸಾರಿಯೂ ಇವರಿಗೇನೆ ತಮ್ಮ ವೋಟನ್ನು ಕೊಟ್ಟು ಮೆಂಬರರಾಗಿ ಚುನಾಯಿಸಿದರೆ ಇವರು ಇನ್ನು ಲೋಕೋಪಕಾರಕವಾದ ಕೆಲಸವನ್ನು ಮಾಡಲಿಕ್ಕೆ ಉತ್ತೇಜನ ಕೊಟ್ಟಂತಾಗುವುದರಲ್ಲಿ ಸಂದೇಹವಿಲ್ಲ.

ಬಂಟ್ವಾಳ — ದಕ್ಷಿಣ ಕನ್ನಡ ಜಿಲ್ಲಾ ಕುಲಾಲರ ಯಾನೆ ಮೂಲ್ಯರ ಜಾತ್ಯಾಭ್ಯುದಯ ಸಂಘದ ಒಂದು ಸಭೆ ಮೆ॥ ರಾ॥ ರಾ॥ ಮಂಗಳೂರು ತಾಲೂಕು ಬೋರ್ಡ ಕ್ಲಾರ್ಕ ಬಾಬುರವರ ಅಧ್ಯಕ್ಷತೆಯಲ್ಲಿ ಜರಗಿತು.

ಕಳೆದ ಸಾರಿ ಮೀಟಿಂಗಿನ ವರದಿ ಓದಿದ ಬಳಿಕ ಮುಂದಿನ ಮೂರು ವರ್ಷಗಳಿಗೋಸ್ಕರ ಮೆ॥ ರಾ॥ ತನಿಯಪ್ಪ ಬಂಗೇರರನ್ನು ಪ್ರೆಸಿಡೆಂಟರನ್ನಾಗಿಯೂ ಕ್ಲಾರ್ಕ ಬಾಬುರವರನ್ನು ಕಾರ್ಯದರ್ಶಿಯವರನ್ನಾಗಿಯೂ, ಕ್ಯಾನಭೋಗ ಸುಬ್ಬಪ್ಪರವರನ್ನು ಖಜಾಂಚಿಯವರನ್ನಾಗಿಯೂ ನಿಶ್ಚಯಿಸಲಾಯಿತು. ಜಿಲ್ಲೆಯ ಹಲವು ಕಡೆಗಳಿಂದ ಸುಮಾರು ೩೦ ಜನ ಮೆಂಬರರನ್ನು ಕಾರ್ಯ ನಿರ್ವಾಹಕ ಡೈರೆಕ್ಟರನ್ನಾಗಿಯೂ ನೇಮಿಸಲಾಯಿತು. ಸಂಘದ ಶಾಸನದ ಪುಸ್ತಕವನ್ನು ರಿಜಿಸ್ಟ್ರಿ ಮಾಡಿಸಿ ತನಿಯಪ್ಪ ಬಂಗೇರರು ಓದಿ ಹೇಳಿದನ್ನು ಮಂಜೂರು ಮಾಡಲಾಯಿತು. ಈ ಮೊದಲು ಸಂಘಕ್ಕೆ ದಾನವಾಗಿತ್ತ ಮಹನೀಯರಿಂದ ಮೊಬಲಗನ್ನು ೬ ಕಂತುಗಳಿಂದ ವಸೂಲು ಮಾಡಬೇಕೆಂತ ನಿಶ್ಚಯಿಸಲಾಯಿತು. ಜಾತಿಗ್ರಹಸ್ಥರ ವರ್ಷಾವಧಿ ಮಾಸವಂತಿಗೆಯನ್ನು ಆಯಾ ಗ್ರಾಮದ ಗ್ರಾಮ ಗುರಿಕಾರರೇ ವಸೂಲಿ ಮಾಡಿ ಸಂಘದ ಪ್ರೆಸಿಡೆಂಟರಿಗೆ ರವಾನಿಸುವದು. ಸಂಘಕ್ಕೆ ಅವಶ್ಯವಿರುವ ಒಂದು ಮೊಹರನ್ನು ತೆಕ್ಕೊಳ್ಳಬೇಕೆಂದು ನಿಶ್ಚಯಿಸಲಾಯಿತು. ಮುಂದಿನ ಮೀಟಿಂಗ್ ಬರುವ ನವಂಬರ ತಾ॥ ೧೬ನೇ ಶನಿವಾರ ಮಂಗಳೂರು ಮಾರ್ನಮಿಕಟ್ಟೆ ತನಿಯಪ್ಪ ಬಂಗೇರರಲ್ಲಿ ಜರಗಿಸಬೇಕೆಂದು ನಿಶ್ಚಯಿಸಲಾಯಿತು. ಅಧ್ಯಕ್ಷರ ಚಿಕ್ಕ ಭಾಷಣದಿಂದ ಸಭೆಯು ಮುಕ್ತಾಯವಾಯಿತು.

ಕಳೆದ ವಾರ ಒಂದೆರಡು ಮಳೆ ಬಂದಂದಿನಿಂದ ಅಲ್ಲಲ್ಲಿ ಒಂದು ತರದ ಇನ್‌ಫ್ಲುಂಜಾ ನಮೂನೆಯ ಜ್ವರ ಪ್ರಾರಂಭವಾಗಿದೆ.

ಇಲ್ಲಿಯ ತಿರುಮಲ ದೇವಸ್ಥಾನದಲ್ಲಿ ಕೆಲವು ವರ್ಷಗಳಿಂದ ಆಲೋಚನೆಯಲ್ಲಿದ್ದ ಬೆಳ್ಳಿಯ ಲಾಲಕಿ ಕೆಲಸವು ಇದೇ ತಿಂಗಳ ತಾ. ೧೧ಕ್ಕೆ ಮುಹೂರ್ತ ಮಾಡಲಾಗಿದೆ.

ಪೊಳಲಿ — ಕುಂದಾಪುರ ತಾಲೂಕು ಬೋರ್ಡ ಪ್ರೆಸಿಡೆಂಟ ಶ್ರೀಯುತ ಬಿದರ ಸೋಬಳ ನರಸಿಂಹ ಕಾರಂತರ ದ್ರವ್ಯಸಹಾಯದಿಂದ ಕುಮಾರ ಮಂಡಪ್ಪಾ ಮೊನ್ನಪ್ಪಾ ಎಂಬ ಪುಸ್ತಕ ವ್ಯಾಪಾರಿಗಳು ಪ್ರಕಟಪಡಿಸಿದ ಯಕ್ಷಗಾನ ಧ್ರುವ ಚರಿತ್ರೆ ಎಂಬ ಪುಸ್ತಕವು ಪೊಳಲಿಯಲ್ಲಿ ಕಳೆದ ಚೆಂಡಿನ ಸಮಯ ಭಕ್ತರಿಗೆ ಪ್ರಾರಂಭವಾಯಿತು. ಇದರಿಂದ ಹುಟ್ಟಿ ಬಂದ ಮುನಾಫೆಯಿಂದ ಪೊಳಲಿಯಲ್ಲಿ ತಾ ೧೦, ೧೧, ೧೨, ೧೩ನೇ ದಿನಗಳಲ್ಲಿ ಸಾಂಗವಾಗಿ ಗೋಸೇವೆಯು ನಡೆಯಿತು. ಇಲ್ಲಿಯೇ ಗಯಾಸುರ ಕಾಳಗವೆಂಬ ಪುಸ್ತಕ ಮಾರಾಟದಿಂದ ಬಂದ ಲಾಭಾಂಶದ ಹಣವನ್ನು ಗೋಸೇವೆಗೆ ಉಪಯೋಗಿಸಿರುತ್ತೆ. ಈ ಪುಸ್ತಕ ಪ್ರಚಾರಕ್ಕೆ ತ್ರಿವಿಕ್ರಮ ವೆಂಕಟಗಿರಿ ಹೆಬ್ಬಾರರವರೂ ನರಸಿಂಹ ಕಾರಂತರೂ ಸಹಾಯ ಮಾಡಿದ್ದರು.

ದಿವಂಗತರಾದ ಬೈಲೂರು ರಾಮರಾಯರು ಈ ಮಂಡಪ್ಪನವರಿಗೆ ಗೋಸೇವೆ, ಲೋಕಸೇವೆ ಮಾಡೆಂದು ಉಪದೇಶಿಸಿದಂತೆ ಇವರು ಪ್ರಯತ್ನಪಟ್ಟು ಪುಸ್ತಕ ಪ್ರಚಾರ ಕಾರ್ಯದಿಂದ ಹುಟ್ಟಿಬಂದ ದ್ರವ್ಯವನ್ನು ಧರ್ಮಕಾರ್ಯಕ್ಕೆ ವಿನಿಯೋಗಿಸಲು ನಿಶ್ಚಯಿಸಿದಂತೆ ಈಗ ಅದು ಫಲಿತಾಂಶಕ್ಕೆ ಬಂದಿರುತ್ತದೆ. ಎಂದೋ ಹೇಳಿದ ಸಜ್ಜನ ಮಹನೀಯರ ಮಾತು ಹಾಲಿಸದೆ ಫಲಿಸುವುದೆಂಬುದಕ್ಕೆ ಇದೇ ದೃಷ್ಟಾಂತವಾಗಿದೆ. ಅಲ್ಲದೆ ಧನಿಗಳ ರೂಪದಿಂದ ಕೊಟ್ಟ ಗುರು ಉಪದೇಶದಂತೆ ಈ ಮಂಡಪ್ಪನವರು ಶ್ರಮಪಟ್ಟು ಈ ಲೋಕ ಸೇವೆಗೆ ತೊಡಗಿರುತ್ತಾರೆ. ಇವರಂತೆ ಮಾಡುವವರು ಬಹಳ ವಿರಳ. ಇವರ ಎಲ್ಲಾ ಪುಸ್ತಕ ಪ್ರಚಾರ ಕಾರ್ಯಗಳೂ ಗೋವುಗಳ ಮತ್ತು ಎಲ್ಲಾ ಜನರ ಕ್ಷೇಮಲಾಭದ ಬಗ್ಗೆಯಾಗಿರುತ್ತದೆ. ಮುಂದೆಯೂ ಇಂಥವರು ಹೆಚ್ಚಿ ಲೋಕಕ್ಕೆ ಸುಭಿಕ್ಷೆಯಾಗಲೆಂದು ಪ್ರಾರ್ಥಿಸುತ್ತೇನೆ.

[illegible] ಸ್ಥಾಪಿತವಾದುದು

ಹೊಸದುರ್ಗ ಅಮೃತೇಶ್ವರ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ಸೌತ್ ಸ್ಟೇಶನ್ ಕಾಂಞಂಗಾಡ (S.I.R.)

[illegible] ವೈದ್ಯ [illegible] ಮುಖ್ಯವಾಗಿ ಸರಕಾರದಿಂದ [illegible] ಪ್ರಸಿದ್ಧಪಟ್ಟ 'ವೈದ್ಯ ಶ್ರೀ ವೈದ್ಯ [illegible]' ಅವರ [illegible] ವಿದ್ಯಾಭ್ಯಾಸ [illegible] ವೈದ್ಯರಿಂದ [illegible] ಎಲ್ಲಾ ತರದ [illegible] ನಮ್ಮಲ್ಲಿ [illegible] ರೋಗಿಗಳು ಮತ್ತು ರೋಗದ [illegible] ಆ ವಿವರ ಮತ್ತು [illegible] ರೋಗಿಗಳ ಚಿಕಿತ್ಸೆ ನಡಿಸುವರೆಯೂ [illegible] ರೋಗಕ್ಕೆ ಬೇಕಾದ ಮದ್ದು [illegible] ವೈದ್ಯಶಾಲೆಯು [illegible] ಸಿದ್ಧವಾಗಿರುವವು. [illegible] ಮದ್ದುಗಳನ್ನು [illegible] ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರ ವೈದ್ಯಶಾಲಾ ಹೊಸದುರ್ಗ

ಪೋಸ್ಟ್, ಕಾಂಞಂಗಾಡ (ದ. ಕ

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ, ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಕ. ರೂ. ೧.

ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಶಕ್ತಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲರ ಟಾನಿಕ್ ಆಫ್ ಡಾಪ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

ಬಾಟ್ಲಿವಾಲರ ಡೈರಿಯಾ ಮಿಕ್ಶ್ಚರ—ಹೊಂತೆಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪

ಬಾಟ್ಲಿವಾಲರ ಕ್ವಿನೇನ ಟೇಬುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೩—೦. ರೂ. ೧—೮—೦. ೧—೧೨—೦.

ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,

Sayani Road, P. O. Cadell Road, Bombay. No. 14.

ಶಾಲಾ ಹುಡುಗರಿಗೆ ಬೇಕಾದ

ಗೆರೆ ಹಾಕಿದ ಮತ್ತು ಹಾಕದ ಎಕ್ಸರಸೈಜ ಪುಸ್ತಕಗಳೂ, ಕೋಪಿ ಪುಸ್ತಕಗಳೂ, ಮ್ಯಾಪು ಡ್ರೋಯಿಂಗ್ ಪುಸ್ತಕಗಳೂ, ಡ್ರೋಯಿಂಗ್ ಪುಸ್ತಕಗಳೂ, ಪೆನ್ಸಿಲು ಕಂಪಾಸ್ ಬಾಕ್ಸ, ಶಾಯಿ ಕುಪ್ಪಿ ಮೊದಲಾದ ಸ್ಟೇಶನರಿ ಸಾಮಾನುಗಳೂ ಇವೆ.

ಲೆಜ್ಜರ್, ಜರ್ನಲ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಸಾಮಾನುಗಳು ಯಾವಾಗಲೂ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಶಾರದಾ ಛಾಪಖಾನೆ.

ರಥಬೀದಿ, ಮಂಗಳೂರು.

Liveliness-zip-pep-you get that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

Exide

THE LONG-LIFE BATTERY

The C. P. C. Co., Ltd.,

MANGALORE.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ—ತೀರ್ಥಹಳ್ಳಿ—ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಿಗ್ಗೆ ೯ ಘಂಟೆಗೆ ಹೊರಡುತ್ತಾ ಇದ್ದುದು ಸರಿಯಷ್ಟೆ. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. ೧೫—೪—೧೯೩೫ರ ಆರಭ್ಯ ಶಿವಮೊಗ್ಗಾದಿಂದ ಬೆಳಿಗ್ಗೆ ೮ರ ಘಂಟೆಗೆ ಹೊರಡಲು ಏರ್ಪಾಡು ಮಾಡಿದೆ.

ತೀರ್ಥಹಳ್ಳಿ—ಸಾಗರರಸ್ತೆ.

ಅನಂತಪುರ—ಸಾಗರಕ್ಕೆ 0—8—0. ತೀರ್ಥಹಳ್ಳಿ—ಸಾಗರಕ್ಕೆ ೨—೮—೦,

ಆರಗ, ಗುಡ್ಡೇಕೊಪ್ಪ, ಕೋಣಂದೂರು, ಹಾರಿಗೆಲ್, ಹುಂಚದಕಟ್ಟೆ, ರಿಪ್ಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪ್ಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳಗಳ ದೆಸೆಯಿಂದ ಕಳೆದ ಜೂನ್ ತಾ. ೮ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಕು ೬—೧೧—೧೯೩೪ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾ ಭಟ್,

ಮಾಲಿಕ,

ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತರದ ರಿಸ್ಟ್ ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೇಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಗ್ರಾಮೋಫೋನು, ಮತ್ತು ಪೆಟ್ರೊಮೇಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯು ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ.— ನಮ್ಮ ವಾಚು ರಿಪೇರಿ ಕೆಲಸದವರಿಗೆ ಎರಡು ವರ್ಷಗಳಿಗೂ ಮೇಲ್ಪಟ್ಟ ಅನುಭವ ಇರುವುದರಿಂದ ಸಂಶಯವಿಲ್ಲದ ಕೆಲಸವು ದೊರಕುವುದು.

ವಿವಿಧ ಸಮಾಚಾರಗಳು.

ಮೀರತಿನ ಬೊಂಬುಗಳು!

ಮೀರತಿನ ಧರ್ಮಶಾಲೆಯಲ್ಲಿ ಕಳೆದ ಶುಕ್ರವಾರ ಪೋಲೀಸರು ಎರಡು ಬೊಂಬುಗಳನ್ನು ಕಂಡುಹಿಡಿದರು. ಹಲವು ದಿನಗಳಿಂದ ಮೀರತಿಗೆ ಬಂದು ಹೋಗುವವರ ಕುರಿತಾಗಿ ಪೋಲೀಸರು ಚೆನ್ನಾಗಿ ಜಾಗರೂಕರಾಗಿದ್ದುದು ಒಳ್ಳೆಯ ಪರಿಣಾಮಕಾರಿಯಾದ ಹಾಗಾಯಿತು. ಪೋಲೀಸರು ಧರ್ಮಶಾಲೆಯಲ್ಲಿ ಒಂದು ಬೀಗ ಹಾಕಲ್ಪಟ್ಟ ಕೋಣೆಯನ್ನು ಕಂಡುದರಿಂದ ಅವರಿಗೆ ಸಂಶಯವಾಯಿತು. ಬಾಗಿಲನ್ನೊಡೆದು ಒಳಗೆ ಹೋದೊಡನೆ ಅವರಿಗೆ ಎರಡು ಬೊಂಬುಗಳು ದೊರೆತವು. ಬೊಂಬುಗಳು ಹಿಂದೂಸ್ಥಾನದಲ್ಲಿಯೇ ತಯಾರಿಸಲ್ಪಟ್ಟವುಗಳಾದರೂ ಅಪಾಯಕರವೆಂದು ಕಂಡುಹಿಡಿಯಲ್ಪಟ್ಟಿವೆ. ಅಂದು ಸಂಶಯದ ಮೇಲೆ ನಾಲ್ವರನ್ನು ಕೈದುಮಾಡಲಾಯಿತು. ಇದೇ ಅನುಮಾನದ ಮೇಲೆ ಅಲ್ಲಿನ ಹಲವು ಧರ್ಮಶಾಲೆಗಳನ್ನು ಪೋಲೀಸರು ಶೋಧಿಸಿದರು. ಧರ್ಮಶಾಲೆಯಲ್ಲಿ ಶೋಧನೆಯು ನಡೆಯುತ್ತಿರುವ ಸಮಯ ಹಾಜರಿದ್ದವರನ್ನು ಅಲ್ಲಿಯೇ ಸಂಶಯದ ಮೇಲೆ ನಿಲ್ಲಿಸಿದ್ದರು. ಮರುದಿನ ಕೈದಿಗಳು ಮೆಜಿಸ್ಟ್ರೇಟರ ಎದುರು ತರಲ್ಪಟ್ಟು ೩. ೧೯ರ ವರೆಗೆ ರಿಮಾಂಡಿನಲ್ಲಿ ಅವರನ್ನು ಇಡಬೇಕೆಂದು ವಿಧಿಸಲಾಯಿತು. ಅಂದೇ ರಾತ್ರಿ ಪೋಲೀಸರು ಇದೇ ಸಂಬಂಧದಲ್ಲಿ ಇನ್ನೊಬ್ಬನನ್ನು ಕೈದುಮಾಡಿದರು. ಆತನು ಮೀರತ್ ಕಾಲೇಜಿನ ಇಂಟರಮೀಡಿಯೇಟ ವಿದ್ಯಾರ್ಥಿ ಮತ್ತು 'ಹಿತವಾದಿ' ಎಂಬ ಪತ್ರಿಕೆಯ ವಾರ್ತಾವಾಹಕನು. ಆತನು ಬೊಂಬುಗಳು ಸಿಕ್ಕಿದುದರ ವಿಷಯದಲ್ಲಿ ವಿಚಾರಣೆಯನ್ನು ನಡೆಸಲು ಧರ್ಮಶಾಲೆಗೆ ಹೋಗಿದ್ದನಂತೆ.

ಮರುದಿನ ಪೋಲೀಸರು ಮೀರತಿನ ಕಾಂಗ್ರೆಸ್ ಕೆಲಸಗಾರರಾದ ಶಕಾಂಬರಸಹಾಯ ಎಂಬಾತನ ಮನೆಯನ್ನು ಪರೀಕ್ಷಿಸಿದರು. ಆತನನ್ನು ಪೋಲೀಸ್ ಸ್ಟೇಶನಿಗೆ ಕೊಂಡೊಯ್ದು ಮನೆಯಲ್ಲಿದ್ದವರೆಲ್ಲರೂ ಪೋಲೀಸ ಕಾವಲಿಗೆ ಒಳಪಡಿಸಲ್ಪಟ್ಟರು. ಆದರೆ ಪೋಲೀಸರಿಗೆ ವಿಶೇಷವಾದುದೇನೂ ದೊರಕಲಿಲ್ಲ. ಸರಕಾರಿ ಗೃಹ ಮತ್ತು ಅಧಿಕಾರಿಗಳ ಬಂಗಲೆಗಳ ಸುತ್ತುಮುತ್ತ ಬಲವಾದ ಮಿಲಿಟರಿಯನ್ನು ಕಾವಲಿಗಾಗಿ ಸ್ಥಾಪಿಸಿದ್ದಾರೆ. ಅಷ್ಟುಮಾತ್ರವಲ್ಲದೆ ಮುಖ್ಯ ಮುಖ್ಯ ಮಾರ್ಗದ ಸಂದುಗಳಲ್ಲಿಯೂ ಮಿಲಿಟರಿಯವರನ್ನು ನಿಲ್ಲಿಸಿದರು. ಮೋಟಾರುಗಳ ಮೂಲಕವಾಗಲಿ, ರೈಲುಗಳ ಮೂಲಕವಾಗಲಿ ಮೀರತಿಗೆ ಬಂದು ತಲಪುವವರನ್ನು ಚೆನ್ನಾಗಿ ಪರೀಕ್ಷಿಸುತ್ತಿದ್ದಾರೆ.

ಮೀರತಿನ ಬೊಂಬಿನ ಸಂಬಂಧವಾಗಿ ಕೈದುಮಾಡಲ್ಪಟ್ಟ ರಾಮಗೋಪಾಲ ಮತ್ತು ಜಯದೇವಸಿಂಗ ಇವರಿಬ್ಬರನ್ನೂ ಐದುಸಾವಿರ ಮತ್ತು ಎರಡು ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಶುದ್ಧಿ ಸಮಾರಂಭ.

ಕಲ್ಲಾವೇರಿಯ ವೆಲ್ಲಾಯನ್ ಎಂಬ ಆದಿದ್ರಾವಿಡನು ತನ್ನ ಹೆಂಡತಿಯೊಂದಿಗೆ ಹಲವು ವರುಷಗಳ ಹಿಂದೆ ಕ್ರೈಸ್ತಮತಕ್ಕೆ ಸೇರಿದ್ದನು. ಆದರೆ ಆತನ ಮಗಳು ಮಾತ್ರ ಇದಕ್ಕೆ ನಿರಾಕರಿಸಿ, ಅಳಿಯ ಮಾವನ ಮನೆಯಲ್ಲಿ ಉಳಕೊಂಡು ಒಬ್ಬ ಹಿಂದೂವನ್ನು ಮದುವೆಯಾಗಿದ್ದಳು. ಕಿರಿಯ ಮಗಳು ಮಾತ್ರ ತಂದೆತಾಯಿಗಳೊಂದಿಗಿದ್ದಳು. ಅವಳು ಪ್ರಾಯ ಭಂಗಳಾದೊಡನೆ ಹಿಂದೂವನ್ನು ಮದುವೆಯಾಗಿ, ಹಿಂದೂವಾಗಿಯೇ ಇರಬೇಕೆಂದು ಅವಳು ನೆನಸಿದಳು. ಇದರಿಂದ ಅವಳ ಹೆತ್ತವರೂ ಹಿಂದೂಗಳಾಗಬೇಕೆಂದು ನೆನಸಿದರು. ಒಮ್ಮೆ ಕ್ರಿಸ್ತಮತಕ್ಕೆ ಸೇರಿದವರನ್ನು ಪುನಃ ಹಿಂದೂಮತಕ್ಕೆ ಸೇರಿಸಿಕೊಳ್ಳುವ ಪದ್ಧತಿ ಇರುವುದಿಲ್ಲ. ಆದರೂ ತಕ್ಕ ಸಂಸ್ಕಾರ ಸಮಾರಂಭವು ನಡೆದರೆ ವೆಲ್ಲಾಯನನ್ನು ತಮ್ಮ ಸಮಾಜಕ್ಕೆ ಸೇರಿಸಿಕೊಳ್ಳುವೆವೆಂದು ಹಳ್ಳಿಯ ಆದಿದ್ರಾವಿಡರೆಂದರು. ಚಿದಂಬರದ ಸ್ವಾಮಿ ಸಹಜಾನಂದರವರಿಗೆ ಈ ಸಂಗತಿಯು ತಿಳಿಸಲ್ಪಟ್ಟಿತು. ಒಂದು ನಿಶ್ಚಿತ ದಿನ ಬೆಳಗ್ಗೆ ಒಂಭತ್ತು ಘಂಟೆಗೆ ಸ್ವಾಮಿಯವರು ಕಲ್ಲಾವೇರಿಗೆ ಬಂದು ತಲುಪಿದರು. ಹಳ್ಳಿಯ ಹಿಂದೂ ದೇವಳವನ್ನು ಶುದ್ಧಿ ಸಮಾರಂಭಕ್ಕಾಗಿ ಶೃಂಗರಿಸಿದ್ದರು. ಹಳ್ಳಿಯ ಮೊದಲನೆಯಲ್ಲಿಯೇ ಕ್ರಿಸ್ತರ ಶಾಲೆಯಿದ್ದಿತು. ಶಾಲೆಯ ಮುಖ್ಯೋಪಾಧ್ಯಾಯನೇ ಸ್ವಾಮಿಯವರಿಗೆ ದೇವಳದ ಹಾದಿಯನ್ನು ತೋರಿಸಿದನು. ಕ್ರಿಸ್ತೀಯರಿಗೆ ಇದರಿಂದ ಯಾವ ರೀತಿಯ ಹೊಟ್ಟೆಕಿಚ್ಚು ಉಂಟಾಗಿರಲಿಲ್ಲ. ಶುದ್ಧಿ ಸಮಾರಂಭವನ್ನು ನೋಡುವ ಸಲುವಾಗಿ ಬಹುಮಂದಿ ಕ್ರಿಸ್ತರೂ ನೆರೆದಿದ್ದರಂತೆ. ದೇವಳದಲ್ಲಿ ತಯಾರಿಸಿದ ಸ್ಥಳದಲ್ಲಿ ನಡುವೆ ವೆಲ್ಲಾಯನೂ ಆತನ ಹೆಂಡತಿ, ಪುತ್ರಿ, ಮತ್ತು ಇಬ್ಬರು ಪುತ್ರರೂ ಕುಳಿತಿದ್ದರು. ಹೋಮಾಗ್ನಿಯನ್ನು ಉರಿಸಿದ ಮೇಲೆ ಸ್ವಾಮಿಜಿಯವರು ನೆರೆದವರಿಗೆ ಅದರ ಉದ್ದೇಶವನ್ನು ವಿವರಿಸಿ ತಿಳಿಸಿದರು. "ಸಹೋದರ ಸಹೋದರಿಯರೇ! ಸಾಮಾನ್ಯ ವಸ್ತುಗಳನ್ನು ಮಣ್ಣು ಮತ್ತು ನೀರಿನಿಂದ ಶುದ್ಧಗೊಳಿಸುವರು, ಭಂಗಾರದಂತಹ ವಸ್ತುಗಳನ್ನು ಬೆಂಕಿಯಿಂದ ಶುದ್ಧಗೊಳಿಸುವರು; ಆದರೆ ಮಾನವ ಆತ್ಮವನ್ನು ಶುದ್ಧೀಕರಿಸಲು ಬೆಂಕಿಗಿಂತಲೂ ಕಠಿಣವಾದ ಸಾಧನ ಬೇಕಾಗಿದೆ. ಅದೇ ರಾಮ ಮಂತ್ರವು. ಮೊದಲಾಗಿ ನಾನು ಸಿಂಪಡಿಸುವ ಗಂಗೆಯು ನಿಮ್ಮ ಮನಸ್ಸು ಮತ್ತು ಶರೀರಗಳನ್ನು ಶುದ್ಧವಾಗಿಸಲಿ" ಎಂದು ನುಡಿದರು. ತದನಂತರ ತನ್ನೊಂದಿಗೆ ರಾಮಮಂತ್ರವನ್ನು ಜಪಿಸಬೇಕೆಂದು ನೆರೆದವರಿಗೆ ನಿವೇದಿಸಿದರು. ನೆರೆದವರು ಶ್ರೀ ರಾಮನ ಪವಿತ್ರವಾದ ನಾಮವನ್ನು ಅರ್ಧತಾಸಿನ ವರೆಗೆ ರಮ್ಯವಾಗಿ ಜಪಿಸಿದರು. ತದನಂತರ ಸ್ವಾಮಿಜಿಯವರು "ಈಗ ವಾತಾವರಣವು ಪವಿತ್ರವಾಯಿತು. ನಮ್ಮ ಮನಸ್ಸು ಭಗವಂತನ ಮೇಲೆ ಕೇಂದ್ರಿತವಾಗಿರುತ್ತದೆ. ನಮ್ಮೊಡನೆ ಈಗ ಕೂಡಿಸಲ್ಪಡುವ ಕುಟುಂಬವು ಸದಾಚಾರವಂತವಾಗಿದ್ದು ಮುಂದೆ ಅವರು ನಮ್ಮವರೇ ಆಗಿ ಇರಲೆಂದು ಪ್ರಾರ್ಥಿಸೋಣ" ಎಂದು ಹೇಳಿದರು. ವೆಲ್ಲಾಯನ್ ಮೊದಲಾದವರ ಕೈಗೆ ಒಂದಿಷ್ಟು ಭಸ್ಮವನ್ನು ಕೊಟ್ಟು ಅದನ್ನು ಹೋಮಾಗ್ನಿಯಲ್ಲಿ ಇಕ್ಕಿ "ನಾರಾಯಣ" ಎಂಬ ನಾಮವನ್ನು ಜಪಿಸುತ್ತಾ, ಸುಟ್ಟ ಭಸ್ಮವನ್ನು ಬಾಯಿಯಲ್ಲಿ ಹಾಕಿಕೊಳ್ಳಬೇಕೆಂದರು. ತದನಂತರ ಸ್ವಾಮಿಜಿಯವರು ಕೆಲವು ಮಂತ್ರಗಳನ್ನು ಉಚ್ಚರಿಸಿ ನೆರೆದವರೊಡನೆ ಪವಿತ್ರವಾದ ಜೀವನವನ್ನು ನಡೆಸಬೇಕೆಂದೂ ಸದಾ ಭಗವಂತನ ನೆನವನ್ನಿಟ್ಟುಕೊಳ್ಳಬೇಕೆಂದೂ ವಿವರಿಸಿದ ಮೇಲೆ ಶುದ್ಧಿ ಸಮಾರಂಭವು ಕೊನೆಗಂಡಿತು.

ಮದ್ಯಪಾನ ನಿಷೇಧ.

ಕಳೆದ ವಾರ ಸೇಲಮಿನಲ್ಲಿ ಮದ್ಯಪಾನ ನಿಷೇಧದ ಸಂಬಂಧದಲ್ಲಿ ಒಂದು ಬಹಿರಂಗವಾದ ಸಭೆಯು ಜರಗಿತು. ಸಭೆಯ ಆದಿಯಲ್ಲಿ ಜನರು ಹೆಚ್ಚಿರಲಿಲ್ಲವಾದರೂ ಶ್ರೀ ರಾಜಗೋಪಾಲಾಚಾರ್ಯರವರ ಭಾಷಣವು ಪ್ರಾರಂಭವಾದೊಡನೆ ಜನರು ಸುತ್ತಮುತ್ತಲಿಂದಲೂ ಕೂಡಿ ಅಧಿಕ ಸಂಖ್ಯೆಯಲ್ಲಿ ನೆರೆದರು. "ಪ್ರತಿಯೊಂದು ಚಳವಳದಲ್ಲಿ ಮೊದಲನೆಯ ಸ್ಥಾನವನ್ನು ವಹಿಸುತ್ತಲಿದ್ದ ಸೇಲಮೇ ಈಗ ಉತ್ಸಾಹರಹಿತವಾಗಿ ಹಿಂದಕ್ಕೆ ಸರಿವುದೇ ಆಶ್ಚರ್ಯಕರ. ಹಾಗಾಗಲು ಬಿಡಬೇಡಿರಿ" ಎಂಬುದೇ ಶ್ರೀ ಆಚಾರಿಯವರ ಭಾಷಣದ ಮೊದಲನೆಯ ವಾಕ್ಯವಾಗಿದ್ದಿತು. "೯ಂಟು ವರುಷಗಳ ಹಿಂದೆ ಇದೇ ವಿಷಯವಾಗಿ ನಾನು ಇಲ್ಲಿ ಮಾತನಾಡುತ್ತಿರುವಾಗ ನನ್ನ ತಲೆಯ ಮೇಲೆ ಕಲ್ಲು ಬಿಸಾಡಿದರು. ನನಗೆ ಗಾಯವಾಗಲಿಲ್ಲ. ಈ ಚಳವಳಕ್ಕೆ ನೀವು ಸಹಾಯಕರಾಗುವಿರೆಂದು ನುಡಿದಿರಿ. ಆದರೆ ಅದರಿಂದ ಯಾವ ಪರಿಣಾಮವೂ ಉಂಟಾಗಿಲ್ಲವೆಂದು ಜನರ ತಿಳುವಳಿಕೆ. ಯಾವ ಕೆಲಸವೇ ಆಗಲಿ, ನಾವು ಪುನಃ ಪುನಃ ಪ್ರಯತ್ನಿಸುತ್ತಲಿದ್ದರೆ ಮಾತ್ರವೇ ಸಾಧ್ಯವಾಗುವುದು. ನಮ್ಮ ಅಂದಿನ ಆರಂಭದ ಕೆಲಸದಿಂದ ಏನೂ ಆಗಿಲ್ಲವೆಂದು ತಿಳಿಯಬೇಡಿರಿ. ಸರಕಾರದವರಲ್ಲಿ ಇದರಿಂದ ಕುಂಬಾ ಬದಲಾವಣೆಯಾಗಿರುತ್ತದೆ. ಈ ಚಳವಳಕ್ಕೆ ಅವರು ಆದಿಯಲ್ಲಿ ವಿರೋಧಿಗಳಾಗಿದ್ದು ನಮ್ಮನ್ನು ಹೀಯಾಳಿಸುತ್ತಿದ್ದರಾದರೂ ಈಗವರು ಇದಕ್ಕೆ ಸಮರ್ಥಿಸಿ, ಸಹಾಯಕರಾಗಿರುವರು. ಲಕ್ಷಗಟ್ಟಲೆ ರೂಪಾಯಿಗಳನ್ನು ಮದ್ಯಪಾನ ನಿಷೇಧ ಕಾರ್ಯಕ್ಕಾಗಿ ಪ್ರತ್ಯೇಕಿಸಿಟ್ಟಿರುವರು. ಈ ಹಣವು ಸದ್ವಿನಿಯೋಗಿಸಲ್ಪಡುವುದೆಂದು ಹೇಳಲಾಗುವುದಿಲ್ಲ. ಈ ಚಳವಳದಲ್ಲಿ ಅವರು ಇಳಿದುದಕ್ಕೆ ಅವರು ಇನ್ನೂ ಭಯದಿಂದ ನಡೆಯುವ ಬಗ್ಗೆ ನಾನು ನಾಲ್ಕು ಲಕ್ಷ ರೂಪಾಯಿಗಳನ್ನು ಜನರಿಂದ ಎತ್ತಿಕೊಡಲಿರುವೆನು. ಮದ್ಯ ಒಂದಕ್ಕೆ ೬ ಕೋಟಿ ರೂಪಾಯಿಗಳನ್ನು ನಾವು ಮದ್ಯದ ಬಗ್ಗೆ ಹಾಳುಮಾಡುತ್ತಿರುವಾಗ ನಾಲ್ಕು ಲಕ್ಷ ರೂಪಾಯಿಯು ಹೆಚ್ಚಾಗಲಾರದು.

ನಮ್ಮ ಚಳವಳಕ್ಕೆ ಹಲವು ವಿರೋಧಿಗಳಿದ್ದಾರೆ. ಅವರಿಗೆ ವಿರೋಧವಾಗಿ ನಾವು ಹೋರಾಡಬೇಕಾಗುತ್ತದೆ. ನ್ಯಾಯವಿಧಾಯಕ ಸಭೆಗಳಲ್ಲಿ ಈ ವಿಷಯವೇ ಈಗ ಹೆಚ್ಚು ಹೆಚ್ಚಾಗಿ ಚರ್ಚಿಸಲ್ಪಡುತ್ತಿದೆ. ನಾವೆಲ್ಲರೂ ಒಟ್ಟಾಗಿ ಪ್ರಯತ್ನಿಸಿದರೆ ಜಯವನ್ನು ಹೊಂದಲೇಬಹುದು. ಮದ್ಯಪಾನದ ಪರಿಣಾಮವನ್ನು ನೋಡಿರಿ. ಮನಸ್ಸಿಗೂ, ಶರೀರಕ್ಕೂ ಅದು ಬಾಧಕವಾಗಿದೆ, ಮತಗ್ರಂಥಗಳಲ್ಲಿ ನಿಷೇಧಿಸಲ್ಪಟ್ಟಿದೆ. ಆದಕಾರಣ ಅದನ್ನು ತ್ಯಜಿಸಿರಿ; ಅಬಕಾರಿ ತೆರಿಗೆಯನ್ನು ತರುವುದೆಂದರೆ ಮದ್ಯಪಾನವನ್ನು ಹೆಚ್ಚಿಸಿದಂತಾಗುವುದು. ಇನ್ನು ಮುಂದಕ್ಕೆ ಸೇಲಮಿನಲ್ಲಿಯೂ ಇತರ ಕಡೆಗಳಲ್ಲಿಯೂ ಸೇಂದಿ, ಗಾಂಜಾ ಮೊದಲಾದವುಗಳ ಅಂಗಡಿಗಳನ್ನು ಮುಚ್ಚಲು ಮನಸ್ಸಿದ್ದವರು ಕೈಯೆತ್ತಿರಿ" ಎನಲು ಎಲ್ಲರೂ ಕೈಯೆತ್ತಿದರು. ಆಚಾರ್ಯರು ಪುನಃ ಪ್ರಾರಂಭಿಸಿದರು. "ನೀವು ಚೆನ್ನಾಗಿ ನುಡಿದಿರಿ, ಆದರೆ ನೀವು ಕೌನ್ಸಿಲು, ಎಸೆಂಬ್ಲಿಗಳಿಗೆ ಕಳುಹಿಸಿದ ನಿಮ್ಮ ಪ್ರತಿನಿಧಿಗಳು ಏನು ಮಾಡುತ್ತಿರುವರು? ಅವರು ನಿಮಗಾಗಿ ಪ್ರಯತ್ನಿಸುವುದಿಲ್ಲ. ಈ ಚಳವಳದ ವಿರುದ್ಧವಾಗಿಯೇ ಅವರು ಸಮರ್ಥಿಸುವರು. ಯಾರು ಮದ್ಯಪಾನ ನಿಷೇಧದ ಸಲುವಾಗಿ ಪ್ರಯತ್ನಿಸುವೆವೆಂದು ವಚನವನ್ನೀಯುವರೋ ಅಂತಹರನ್ನು ಕೌನ್ಸಿಲುಗಳಿಗೆ ಕಳುಹಿಸಿರಿ. ಆ ಕುರಿತಾಗಿ ಇಡೀ ಹಿಂದೂಸ್ಥಾನದಲ್ಲಿಯೇ ಚಳವಳವನ್ನು ಆರಂಭಿಸಬೇಕೆಂದು ಕಾಂಗ್ರೆಸಿನಲ್ಲಿ ಮಂಜೂರಾಗಿರುತ್ತದೆ. ಪ್ರತಿ ಹಳ್ಳಿಯಲ್ಲಿಯೂ, ಪ್ರತಿ ಪಟ್ಟಣದಲ್ಲಿಯೂ ಈ ಚಳವಳವು ಆರಂಭಿಸಲ್ಪಡಬೇಕು. ಸರಕಾರದವರು ನಮ್ಮ ಚಳವಳಕ್ಕೆ ಕಿವಿಗೊಡದೆ ಇರುತ್ತಿದ್ದರೆ ಬೇರಾವ ಉಪಾಯದಿಂದಲಾದರೂ ಗುತ್ತಿಗೆಗಳನ್ನು ಇದರಂತೆ ಮಾಡಬೇಕು" ಎಂದು ಮುಂತಾಗಿ ಅವರು ಭಾಷಣವನ್ನಿತ್ತು ಜನರ ಮನಸ್ಸನ್ನು ಮದ್ಯಪಾನ ನಿಷೇಧದ ಕಡೆಗೆ ಒಲಿಸಿದರು.

ಅಫಘಾನದ ಸಮಾಚಾರ.

ಹೇರಾತಿನವರು ಈಗ ಬದಲಾವಣೆಯನ್ನು ಹೊಂದಿರುವರು. ಮೇ ೩ನೇ ತಾರೀಕಿನ ದಿನ ಅಲ್ಲಿ ಹಬೀಬುಲ್ಲನ ಅನುಯಾಯಿಯಾದ ಅಬ್ದುಲ್ ರಹೀಮನ ಸೈನ್ಯವಿದ್ದಿತು. ಹಬೀಬುಲ್ಲನನ್ನು ಸಂದರ್ಶಿಸಲಿಕ್ಕಾಗಿ ಹೋಗಿದ್ದ ಕುಗಿಯಾನಿ ಮಾಲಿಕರು ಆಶಾಭಂಗ ಹೊಂದಿ ಕಾಬೂಲಿನಿಂದ ಹಿಂತಿರುಗಿದರು. ಆದರೆ ಅವರ ನಾಯಕನಾದ ಮಾಲಿಕ ಗಾಯಸನು ಬಹಿರಂಗವಾಗಿಯೇ ಹಬೀಬುಲ್ಲನಿಗೆ ಸಹಾಯಕನಾಗಿರುವನು. ಮಾಲಿಕ ಮಹಮದ್ ಅಫ್ಜಲ್‌ನ ವಶದಲ್ಲಿದ್ದ ಸಿಪಾಯಿಗಳು ಎರಡು ಪಕ್ಷಗಳಾಗಿ ತಮಗೆ ಚೆನ್ನಾಗಿ ಸಂಬಳವನ್ನು ಕೊಟ್ಟುದಾದರೆ ಅಮಾನುಲ್ಲಾರವರಿಗೆ ಸಹಾಯಮಾಡುವದಾಗಿ ಒಪ್ಪಿರುವರು.

ಗಜನಿಯ ಸಮೀಪ ಏನಾಗುವದೆಂದು ಈಗ ಸರಿಯಾದ ವರ್ತಮಾನ ಸಿಗುವುದಿಲ್ಲ. ಆದರೆ ಎಪ್ರಿಲ್ ಆಖೈರಿಯಲ್ಲಿ ಅಲ್ಲಿ ಹಬೀಬುಲ್ಲಾ ಮತ್ತು ಅಮಾನುಲ್ಲಾರವರ ಸೈನ್ಯಗಳೊಳಗೆ ಯುದ್ಧವು ನಡೆದಿತ್ತೆಂದು ತಿಳಿದುಬರುತ್ತದೆ. ಅಮಾನುಲ್ಲಾರವರ ಕಡೆಗೆ ಶಿನವಾರಿಗಳೂ, ಟೊಕ್ಕಿಸರೂ, ಹಜಾರ ಸೈನಿಕರೂ ಇದ್ದರು. ಹಬೀಬುಲ್ಲನ ಸೈನ್ಯದಲ್ಲಿ ಗಿಲಜಾ, ಕೋಹಿಸ್ತಾನ ಮೊದಲಾದ ಸೈನಿಕರು. ಇದರಲ್ಲಿ ಅವರು ಅಮಾನುಲ್ಲಾರವರ ಸೈನ್ಯವನ್ನು ಚೆನ್ನಾಗಿ ಬಳಲಿಸಿದರು. ಮತ್ತು ಅಮಾನುಲ್ಲಾರವರ ಸೈನ್ಯವು ಸೋತುಹೋಯಿತು. ಎಪ್ರಿಲ್ ೨೬ನೇ ತಾರೀಕಿನ ದಿವಸ ಗಜನಿಯ ಸಮೀಪದಲ್ಲಿ ಗಿಲಜಾ ಮತ್ತು ಅಮಾನುಲ್ಲಾಖಾನರ ಸೈನ್ಯಗಳೊಳಗೆ ಜಗಳವು ನಡೆದು ಅಮಾನುಲ್ಲಾಖಾನರ ಸೈನ್ಯವೇ ಸೋತುಹೋಯಿತು. ಗಿಲಜಾಯವರು ಇನ್ನೂ ಅಮಾನುಲ್ಲಾರವರ ಸೈನಿಕರನ್ನು ಹೊಡೆಯುತ್ತಲೇ ಇರುವರು.

ನಾದಿರಖಾನರನ್ನು ಕೂಡುವ ಸಲುವಾಗಿ ಸರದಾರ ಹಶಮ್‌ಖಾನರು ಇದೇ ತಿಂಗಳ ೪ನೇ ತಾರೀಕಿಗೆ ಕಾಬೂಲ ಎಂಬಲ್ಲಿಂದ ಹೊರಟು ಹಿಸಾರಕಿನ ಕಡೆಗೆ ನಡೆದಿರುವರು. ಹಶಮ್‌ಖಾನನು ಬರೇ ೪೦೦ ಮಂದಿ ಕುಗಿಯಾನಿಗಳನ್ನು ಒಟ್ಟುಕೂಡಿಸಿರುವನು, ಉಳಿದವರನ್ನು ಒಟ್ಟುಗೂಡಿಸಲು ಅವರಿಗೆ ಸಾಧ್ಯವಾಗದೆ ಹೋದುದು, ಬೇರೆ ಬೇರೆ ಪಂಗಡಗಳೊಳಗೆ ಅಂತಃಕಲಹವಿದ್ದುದೇ ಕಾರಣವಾಗಿರುತ್ತದೆ.

ಹಿಂದೂಸಮಾಜದ ಅನಾಚಾರಗಳು.

ಪಂಡಿತ ಮದನಮೋಹನ ಮಾಳವೀಯರವರ 'ಶಾಸ್ತ್ರಕ್ಕೆ ವಿರೋಧವಾದ ಆಲೋಚನೆಗಳನ್ನು ಹೋಗಲಾಡಿಸುವ ಸಲುವಾಗಿ ಮದರಾಸಿನಲ್ಲಿ ಸದ್ಯದಲ್ಲಿಯೇ ಪಂಡಿತರುಗಳ ಪರಿಷದ ಜರಗಲಿರುವುದಂತೆ. ಆದರೆ ಮದರಾಸಿನಲ್ಲಿಯೇ ನಡೆಯುವ ಹಲವು ಕ್ರೂರ ಕೃತ್ಯಗಳನ್ನು ಈ ಪಂಡಿತರುಗಳು ಕೇಳಲಿಲ್ಲವೆಂದು ನೆನಸಬೇಕಾಗುವುದು. ಕೆಲವು ವರುಷಗಳ ಹಿಂದೆ ಒಬ್ಬ ಬ್ರಾಹ್ಮಣ ಯುವಕನು ಮದರಾಸಿಗೆ ಬಂದು ಒಂದು ಹೊಟೇಲಿನಲ್ಲಿ ಕೆಲಸಕ್ಕಾಗಿ ನಿಂತುಕೊಂಡನು. ಚೆನ್ನಾಗಿ ದುಡಿದು ಕೆಲಸ ಮಾಡಿ ಆತನು ಒಂದೆರಡು ವರುಷಗಳೊಳಗೆ ಹೇಗಾದರೂ ೬೦೦ ರೂಪಾಯಿಗಳನ್ನು ಕೂಡಹಾಕಿದನು. ಆತನಿಗೊಬ್ಬ ಪ್ರಾಪ್ತವಯಸ್ಕಳಾದ ತಂಗಿಯಿದ್ದಳು. ಆಕೆಗೆ ಮದುವೆಯ ಪ್ರಾಯವು ಒದಗಿದ್ದಿತು. ತನ್ನ ಹೊಟೇಲಿನ ಸಮೀಪವಿರುವ ಬೇರೊಂದು ಹೊಟೇಲಿನ ಕೆಲಸಗಾರನೊಬ್ಬನ ಕೂಡೆ ಮಾತನಾಡಿ ಆತನಿಗೆ ತನ್ನ ತಂಗಿಯನ್ನು ಕೊಡುವುದೆಂಬುದಾಗಿ ನಿಶ್ಚಯಿಸಿಕೊಂಡನು. ವರದಕ್ಷಿಣೆಯ ಪ್ರಶ್ನೆಯು ಬಂದು ಹೇಗೂ ತನ್ನೊಡನಿದ್ದ ೬೦೦ ರೂಪಾಯಿಗಳ ಗಂಟನ್ನು ಕೊಡುವುದೆಂಬುದಾಗಿ ವರನ ಕಡೆಯವರನ್ನು ಹಾಗೂ ಹೀಗೂ ಒಪ್ಪಿಸಿ ಮದುವೆಯಾಯಿತು. ಕೆಲವು ಸಮಯದ ಮೇಲೆ ಶೋಭನಪ್ರಸ್ತವಾಗಬೇಕಾಯಿತು. ಆಗ ಪುನಃ ದಕ್ಷಿಣೆ ಕೊಡಬೇಕೆಂದು ವರನ ಕಡೆಯವರು ಕೇಳಿದರು. ಅಷ್ಟು ಸಮಯದಲ್ಲಿ ಆತನು ಗಳಿಸಿಟ್ಟಿದ್ದ ೧೭೫ ರೂಪಾಯಿಗಳನ್ನು ಆತನು ತಂಗಿಯ ಸಲುವಾಗಿ ಸಂತೋಷದಿಂದ ಕೊಟ್ಟುಬಿಟ್ಟನು. ಆದರೆ ವರನ ಕಡೆಯವರು ಇಷ್ಟರಿಂದಲೇ ತೃಪ್ತರಾಗಲಿಲ್ಲ. ಪುನಃ ಪುನಃ ಹಣ ತರಬೇಕೆಂಬುದಾಗಿ ಹುಡುಗಿಯನ್ನು ಪೀಡಿಸಿದರು. ಅನಾಥಳಾದ ಹುಡುಗಿಯು ಗಂಡನ ಮನೆಯನ್ನು ತ್ಯಜಿಸಿ ತನ್ನ ಅಣ್ಣನೊಡನೆಯೇ ಬಂದು ವಾಸಿಸಬೇಕಾಯಿತು. ಬ್ರಾಹ್ಮಣ ಸಮಾಜದಲ್ಲಿ ಇಂತಹ ಘಟನೆಗಳೆಷ್ಟೋ ನಡೆಯುತ್ತಿವೆ. ವರನ ಕಡೆಯವರು, ತನ್ನ ಪುತ್ರನು ಹೊಟೇಲಿನವನಾದರೂ ಇನ್ನೊಂದು ಸಂಬಂಧದಿಂದ ಹೆಚ್ಚು ಹಣವು ದೊರಕಬಹುದೆಂದು ನಂಬಿದರು. ಆದರೆ ಆ ಹುಡುಗಿಯು ಬದುಕಿರುವವರೆಗೆ ಮಾತ್ರ ಅವರನ್ನು ತೃಪ್ತಿಪಡಿಸಲಾರನು. ಇದು ಶಾಸ್ತ್ರಕ್ಕೆ ವಿರೋಧವಾಗಿಲ್ಲವೇ? ಇದಕ್ಕೆ ಪಂಡಿತರೇನನ್ನುವರು? ಇದೆಲ್ಲಕ್ಕೂ ಕಾರಣವೆಂದರೆ ತಮ್ಮ ಮಕ್ಕಳನ್ನು ಪ್ರೌಢೆಯರಾಗುವ ಮೊದಲೇ ಮದುವೆಮಾಡಬೇಕೆಂಬ ಶಾಸ್ತ್ರವಚನವಿರುವುದರಿಂದ ಅಷ್ಟರೊಳಗೆ ಯಾವ ರಾಕ್ಷಸನೇ ಆಗಲಿ ಅಂತಹ ವರನಲ್ಲಿ ಹುಡುಗಿಯರನ್ನು ಕೊಡುವದು ಎಂಥಹ ಶಾಸ್ತ್ರವು? ಮೊದಲನೆಯ ಹೆಂಡತಿಯು ಜೀವಿಸಿರುವಾಗಲೇ ಹಿಂದೂಗಳಿಗೆ ಸುಲಭವಾಗಿ ಬೇರೆ ಹೆಂಡಂದಿರು ದೊರೆಯುವರು. ಇದಕ್ಕಾಗಿ ಮೊದಲನೆಯ ಹೆಂಡತಿಯು ಜೀವಿಸಿರುವಾಗ ಎರಡನೆಯವರನ್ನು ಮದುವೆಯಾಗಬಾರದೆಂಬ ಶಾಸನವನ್ನು ಮಾಡಬೇಕು. ಅಥವಾ ತನ್ನ ಮೊದಲ ಹೆಂಡತಿಯು ಗೃಹಕರ್ತವ್ಯಗಳಿಗೆ ಅರ್ಹಳಾಗಿಲ್ಲವೆಂಬುದನ್ನು ಆತನು ನ್ಯಾಯಸ್ಥಾನದಲ್ಲಿ ಸರಿಯಾಗಿ ರುಜುಪಡಿಸಬೇಕು. ಪ್ರಾಯಶಃ ಇಂತಹ ಘಟನೆಗಳು ಎಷ್ಟು ಹೆಚ್ಚು ನಡೆಯುತ್ತಿವೆಯೋ, ಅಷ್ಟಕ್ಕೆ ಹಿಂದೂ ಶಾಸ್ತ್ರದ ಗೌರವವು ಹೆಚ್ಚುವದೆಂದು ಪಂಡಿತರು ತಿಳಿದಿರಬಹುದು.

ಮಹಾತ್ಮಾಜಿಯವರ ಸಂಚಾರ.

ಆಂಧ್ರ ದೇಶಸಂಚಾರದ ಸಮಯ ಮಹಾತ್ಮಾಜಿಯವರು ನೆಲ್ಲೂರನ್ನು ಸಂದರ್ಶಿಸಿದರು. ಅಲ್ಲಿ ಅವರನ್ನು ಕಸ್ತೂರಿ ಬಾಯಿ ಗಾಂಧಿಯವರು ಬಂದು ಕೂಡಿದರು. ಸಾಯಂಕಾಲ ೫ ಘಂಟೆಯ ಹೊತ್ತಿಗೆ ಮಹಾತ್ಮಾಜಿಯವರು ಬಂಗಲೆಯಿಂದ ಹೊರಟು, ಗೋರಕ್ಷಣ ಸಂಘವನ್ನು ಸಂದರ್ಶಿಸಿದರು. ವಿ. ಆರ್. ಕಾಲೇಜಿನ ಮಂದಿರದಲ್ಲಿ ಮುನಿಸಿಪಾಲಿಟಿಯವರು ಒಂದು ಖಾದಿ ಪ್ರದರ್ಶನವನ್ನು ವ್ಯವಸ್ಥೆಗೊಳಿಸಿದ್ದರು. ೨೫ ಉಪಾಧ್ಯಾಯರೂ, ೭೫ ವಿದ್ಯಾರ್ಥಿನಿಯರೂ ನೂಲುತ್ತಿದ್ದರು. ಇವರಲ್ಲಿ ಮೂವರು ಪಂಚಮ ವಿದ್ಯಾರ್ಥಿನಿಯರಾಗಿದ್ದರು. ಮುನಿಸಿಪಾಲಿಟಿಯ ಪರವಾಗಿ ಪ್ರೆಸಿಡೆಂಟರೇ ಮೊದಲಾದವರು ಮಹಾತ್ಮಾಜಿಯವರನ್ನು ಅಲ್ಲಿ ಎದುರುಗೊಂಡರು. ಪಟ್ಟಣದ ಬಹಿರಂಗವಾದ ಸಭೆಯ ಸಂದರ್ಭದಲ್ಲಿ ಮಹಾತ್ಮಾಜಿಯವರಿಗೆ ಹಲವು ನಿಧಿಗಳು ಸಮರ್ಪಿಸಲ್ಪಟ್ಟವು. ಎಲ್ಲಾ ನಿಧಿಗಳ ಜಮಾ ಹಣವು [illegible] ರೂಪಾಯಿಗಳಷ್ಟು. ನಿಧಿಗಳು ಮಾತ್ರವಲ್ಲದೆ ಅವರಿಗೆ ಮಾನಪತ್ರಗಳೂ ಸಮರ್ಪಿಸಲ್ಪಟ್ಟವು. ಮುಕುಂದರಾಯರೆಂಬವರೊಬ್ಬರು ಮಹಾತ್ಮಾಜಿಯವರ ದೊಡ್ಡ ಪಟವೊಂದನ್ನು ಸಮರ್ಪಿಸಿದರು. ಮಹಾತ್ಮಾಜಿಯವರು ತನ್ನನ್ನು ಕಾಣೇ ಮಾರುವೆನೆಂದು ಹೇಳಿ ತನ್ನ ಪಟವನ್ನು ಏಲಂ ಹಾಕಲಾಗಿ ೮೦ ರೂಪಾಯಿಗಳು ದೊರೆತುವು. ಡಿಸ್ಟ್ರಿಕ್ಟ್ ಬೋರ್ಡು, ತಾಲೂಕ ಬೋರ್ಡು, ಟೆಂಪರೆನ್ಸ್ ಲೀಗ್, ಮುನಿಸಿಪಾಲಿಟಿ, ವಕೀಲರ ಸಂಘ, ಕೋ-ಆಪರೇಟಿವ್ ಬೇಂಕ್ ಇವರೆಲ್ಲರೂ ಮಹಾತ್ಮಾಜಿಯವರಿಗೆ ಮಾನಪತ್ರಗಳನ್ನು ಅರ್ಪಿಸಿದರು. ಮಹಾತ್ಮಾಜಿಯವರು ತದನಂತರ ಅಲ್ಲಿ ನೆರೆದ ಹತ್ತು ಸಾವಿರ ಮಂದಿ ಜನರಿಗೆ ಹಿಂದೀ ಭಾಷೆಯಲ್ಲಿ ಭಾಷಣವನ್ನು ಮಾಡಿದರು. ಅದನ್ನು ದೇಶಭಕ್ತ ಶ್ರೀ ಕೊಂಡ ವೆಂಕಟಪ್ಪಯ್ಯನವರು ತೆಲುಗು ಭಾಷೆಗೆ ಭಾಷಾಂತರಿಸಿ ಹೇಳಿದರು. ಮಾನಪತ್ರಗಳಿಗೆ ಕೃತಜ್ಞತೆಯನ್ನು ಸೂಚಿಸಿ, ತಾನು ೮ ವರುಷಗಳ ಹಿಂದೆ ನೆಲ್ಲೂರಿಗೆ ಬಂದಿದ್ದೆನೆಂದೂ ಈಗ ತಾನು ಹಣದ ಸಲುವಾಗಿ ಬಂದಿರುವೆನೆಂದೂ ಹೇಳಿದರು. "ಮೂವತ್ತುಮೂರು ಕೋಟಿ ಜನರುಳ್ಳ ಈ ದೇಶದಲ್ಲಿ ಅರೆವಾಸಿಯಷ್ಟು ಜನರಿಗೆ ಹಿಂದಿಯು ಬರುತ್ತದೆ. ಅವರು ಹಿಂದೀ ಭಾಷೆಯಲ್ಲಿ ಮಾತನಾಡುವರು. ತೆಲುಗು ಭಾಷೆಯಲ್ಲಿ ಹೇಗೆ ಹೇರಳ ಶಬ್ದಗಳು ಸಂಸ್ಕೃತ ಶಬ್ದಗಳಾಗಿವೆಯೋ ಹಾಗೆಯೇ ಹಿಂದಿಯಲ್ಲಿಯೂ ಸಂಸ್ಕೃತ ಶಬ್ದಗಳೇ ಇರುತ್ತವೆ. ಆದಕಾರಣ ಹಿಂದಿಯನ್ನು ಅಭ್ಯಾಸಿಸಲು ಆಂಧ್ರ ದೇಶೀಯರಿಗೆ ಬಹು ಸುಲಭವಾಗಿರುತ್ತದೆ. ನೀವು ಈ ಕುರಿತಾಗಿ ಚೆನ್ನಾಗಿ ಪ್ರಯತ್ನಿಸುವಿರೆಂದು ಭರವಸೆಪಡುವೆನು".

ಅಂದಿನ ಮರುದಿವಸ ಮಹಾತ್ಮಾಜಿಯವರು ಮೌನವ್ರತವನ್ನಾಚರಿಸಿದರು. ಅವರು ರೇಬಲ ಪಟ್ಟಾಭಿರಾಮ ರೆಡ್ಡಿಯವರ ಮನೆಯಲ್ಲಿ ಉಳಕೊಂಡಿದ್ದರು. ಮೌನವನ್ನು ತ್ಯಜಿಸಿದೊಡನೆ ರೆಡ್ಡಿಯವರು ಅವರಿಗೆ ೧೧೧೧ ರೂಪಾಯಿಗಳನ್ನು ಸಮರ್ಪಿಸಿದುದಲ್ಲದೆ ಅವರ ಅಣ್ಣಯವರು ೫೦೦ ರೂಪಾಯಿಗಳನ್ನು ಅರ್ಪಿಸಿದರು. ನೆಲ್ಲೂರಿನಿಂದ ಮಹಾತ್ಮಾಜಿಯವರು [illegible]ಗೆ ಹೊರಟುಹೋದರು.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ಟೆಲಿಗ್ರಾಮ್: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾತಂಕವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೆಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಸಮಾಚಾರಕ್ಕೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಪ್ಯಾರಜೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ. ಸಿ. ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪ್ರಾಮುಖ್ಯ ಸ್ಥಳಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಯಸುವವರು ಪ್ರತಿನಿತ್ಯ ಮೂಡಬಿದರೆ ಕುಂದಾಪುರ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore S. K.

ಮಲೇರಿಯಾನ ಸರ್ವಾಕ್ಷರಸಂಹಾರಿ

ಯುವಕ ವಿದ್ಯಾರ್ಥಿಯು ಲಕ್ಷಕ್ಕೆ ತಕ್ಕೊಳ್ಳಬಾರದೇ

ದೇಹದ ಆರೋಗ್ಯವೂ ಮೆದುಳಿನ ಬಲವೂ ಇದ್ದ ಯುವಕರಿಗೆ ವಿದ್ಯಾಭ್ಯಾಸವು ಬಹು ಸುಲಭಕರವಾಗಿರುವುದು.

ಆದರೆ ದೇಹದ ಆರೋಗ್ಯವು ಕೆಟ್ಟು ಹೋದಲ್ಲಿ ಮೆದುಳಿನ ಬಲವು ಕುಂದಿರುವದು ಸಹಜವೇ. ಅಂಥಾ ಯುವಕರಿಗೆ ವಿದ್ಯಾಭ್ಯಾಸವು ಅತಿ ಕಷ್ಟಕರವಾಗಿದೆ. ಇಂಥಾ ಯುವಕರು ಸಹಾ ವಿದ್ಯಾಭ್ಯಾಸದಲ್ಲಿ ತೇರ್ಗಡೆಯಾಗಬೇಕಾದರೆ, ದೇಹವು ಆರೋಗ್ಯವುಳ್ಳದ್ದಾಗಿಯೂ ಮೆದುಳು ಶಕ್ತಿವಂತವಾಗಿಯೂ ಇರಬೇಕು. ಕಂಪೌಂಡು ಸಿರಪ್ಪು ಸ್ಯಾಲಿಸಿಬನ ಎಂಬ ಔಷಧವು ಯುವಕರ ಆರೋಗ್ಯವನ್ನು ಕಾಪಾಡುವದಕ್ಕೂ ಮೆದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತೀ ಗುಣಕಾರಿಯಾಗಿದೆ.

ಕ್ರಯ 8 ಔನ್ಸಿಗೆ ರೂ. 3 – 8 – 0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳಿವೆ.)

ಮೆದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅಹೋ ರಾತ್ರಿ ತಲೆದಂಡೆ ಬಡಕೊಂಡು ಪ್ರಯಾಸದಿಂದ ಓದುವ ಯುವಕರ ತಲೆ ಮೆದುಳು ಬಹು ಬಿಸಿಯಾಗಿ ತಲೆ ಸಿಡಿತ, ಕಣ್ಣು ನೋವು, ದೃಷ್ಟಿಮಾಂದ್ಯ ಕಿವಿ, ಮೂಗು, ಹಲ್ಲುಗಳ ವಿವಿಧ ರೋಗಗಳು ಹುಟ್ಟುವವು. ಈ ಅವಸ್ಥೆ ರೋಗಗಳು ಪರಿಹಾರವಾಗುವಂತೆಯೂ ಅಥವಾ ಅಂಥಾ ಅವಸ್ಥೆ ರೋಗಗಳು ಹುಟ್ಟದಂತೆಯೂ ಅಸ್ಟಕಟ್ಯದ ಪಿತ್ತಶಮನ ತೈಲದ ಉಪಯೋಗವು ಬಲು ಗುಣಕಾರಿಯಾಗಿದೆ. ಬಹಳ ಹೊತ್ತು ಓದುವ ಅಥವಾ ನಿದ್ರೆಗೆಡುವ ಯುವಕನು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಾಕಿಕೊಳ್ಳುವದರಿಂದಲೇ ತಲೆ ಮೆದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವರು.

ಶಾಸ್ತ್ರ ಕಾಲದಲ್ಲಿ ಯುಕ್ತ ರೀತಿ ಅನುಸರಿಸುವದು, ಜಾಣ ಯುವಕನ ಬುದ್ಧಿವಂತಿಕೆಯಾಗಿದೆ.

ಕ್ರಯ 8 ಔನ್ಸಿಗೆ ರೂ. 3 – 0 – 0.

ವಿಶೇಷ ಮಾಹಿತಿಗೂ, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ, ಈ ಬಾರು ಟೆಸ್ಟು ಲವಣಗಳ ಮತ್ತು ಹೊಮಿಯೊಪಥಿ ಮದ್ದುಗಳಿಗೂ ನಮೂನೆ ಮಾದರಿ ಪ್ರತಿ ಚಕ್ರಗಳಿಗೂ ನಮ್ಮ ದೊಡ್ಡ ಕೆಟಲಾಗಿಗೆ ಕೆಳಗಿನ ಎಡ್ರೆಸಿಗೆ ಬರೆಯಿರಿ. ಮಲೇರಿಯಾನ ಕಂಪೆನಿ,

ಮಂಗಳೂರು.

ದಿ ಕೆನರಾ ನರ್ಸರಿ.

ಕಸಿ ಮಾವಿನ ಗಿಡಗಳು. ಸಪೋಟಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಾ, ಬಾಳೆ, ಕಿತ್ತಳೆ, ದ್ರಾಕ್ಷೆ, ಅಂಜೂರ, ದಾಳಿಂಬೆ, ಪನ್ನೀರಳೆ ಮುಂತಾದ ಕಸಿಗಿಡಗಳೂ ಸಿಗುವವು, ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವುವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಗ್ಗದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್ ಸ್ಟ್ರೀಟ್ ಸೋಮು ಯಾಜಿಯವರಲ್ಲಿ ದೊರೆಯುವುವು.

ಕೆ. ಮಧ್ವಣ್ಣ ಶೆಟ್ಟಿ ದಿ. ಕೆನರಾ ನರ್ಸರಿ, ರಸರ್ಫಗಾರ್ಡನ್, ಕಾಪು ದ. ಕ. 131028	C/o ಕೆ. ವಾಮನ ಶೆಣೈ ಶಾರದಾ ಭಂಡಾರಾನೆ, ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.

ದಿ ಕೋಮನ್‌ವೆಲ್ತ್ ಎಸ್ಯುರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಅತ್ಯುಚ್ಚವಾದ ಸೌಕರ್ಯಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು.

2 ಧನಸ್ಥೀಕರೂ, ಪ್ರತಿಷ್ಠಿತರೂ ಆದ ಡ್ಯಾರೆಕ್ಟರರು.

3 ಹುಂಟಾ ಅನುಭವದ ವೈದ್ಯಾನಿಕ, ವಿಶಸ್ವಯದ ಮತ್ತು ಸೌಹಾರ್ದದ ಆಡಳಿತ,

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಕರಾರುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ತ ಮತ್ತು ಪರಿಶ್ರಮಿಯಾದ ಏಜಂಟರುಗಳು ಬೇಕಾಗಿರುವರು.

ಪ್ರಾಸ್ಪೆಕ್ಟಸಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, ಸ್ಪೆಶಿಯಲ್ ಏಜಂಟ್ ಹಳ್ಳೆ ಗ್ರಾಮ,	ಅಥವಾ	ಪಿ. ಅಭಯಶಂಕರ ದೇಶಪಾಂಡೆ ಮತ್ತು ಕಂಪ್ನಿ, ಮೆನೇಜಿಂಗ್ ಏಜಂಟ್ಸ್,

ಸಂತತಿ ಶೂನ್ಯಳಾದ ಪ್ರತಿ ಹೆಂಗಸಿನ

ಹೆಚ್ಚಿನ ಅಭಿಲಾಷೆ.

ತನ್ನದೇ ಎನ್ನುವ ಮಕ್ಕಳಿರಬೇಕೆಂಬ ಅಭಿಲಾಷೆಯು ಯಾವ ಹೆಂಗಸಿನ ಹೃದಯದಲ್ಲಿರುವುದಿಲ್ಲ! ಮಾತೃತನವೇ ಸ್ತ್ರೀಯರಿಗೆ ಲಭಿಸಬಹುದಾದ ದೊಡ್ಡ ಪದವಿಯು. ಆದರೆ ಅಂತಹ ಪದವಿಯೇ ದೂರವಾಗಿರುವ ಸ್ತ್ರೀಯರು ಎಷ್ಟು ಮಂದಿಯರಿಲ್ಲ?

ಅವರ ಅಭಿಲಾಷೆಯನ್ನು ಪಡೆಯಲು ಕೆಲವು ಇಂದ್ರಿಯಗಳ ತಡೆಯಿರುತ್ತದೆ. ಹಲವು ತರದ ನಿವಾರಣೋಪಾಯಗಳೂ ಫಲಕಾರಿಯಾಗುವುದಿಲ್ಲ.

ಆದರೆ 'ಫೆಲೂನಾ ಮಾತ್ರೆ'ಗಳಿಂದ ಹೆಂಗಸರಿಗೆ ಅತ್ಯಂತ ಪರಿಣಾಮಕಾರಿಯಾದ ಫಲವು ದೊರಕುವುದೆಂದು, ಹಲವು ವರ್ಷಗಳ ಪರೀಕ್ಷೆಯಿಂದ ತಿಳಿದು ಬಂದಿರುತ್ತದೆ. ಸಾವಿರಾರು ಹೆಂಗಸರ ಸುಖಸ್ವಪ್ನವು ನಿಜವಾಗಿ ಪರಿಣಮಿಸುವಂತೆ ಫೆಲೂನಾ ಮಾತ್ರೆಗಳು ಹೆಂಗಸರ ಅಂತರಿಂದ್ರಿಯಗಳ ದೋಷದ ಮೂಲದ ಮೇಲೆಯೇ ತಮ್ಮ ಶಕ್ತಿಯನ್ನುಪಯೋಗಿಸಿ ಇಂದ್ರಿಯಗಳನ್ನು ಸ್ವಚ್ಛಪಡಿಸಿ, ಸ್ತ್ರೀ ಸ್ವಾಭಾವಿಕವಾದ ಬೇನೆಗಳನ್ನು ಹೋಗಲಾಡಿಸುವುದು ಮಾತ್ರವಲ್ಲದೆ, ಮುಖ್ಯತಃ ಪ್ರಾಕೃತಿಕವಾದ ಸಂತಾನದ ಬೆಳವಣಿಗೆಗೆ ಸಹಕಾರಿಯಾಗುವುದು.

ಮಕ್ಕಳನ್ನು ಪಡೆವಷ್ಟು ಶರೀರಾರೋಗ್ಯವುಳ್ಳ ಹೆಂಗಸು ನೊಂದಬೇಕಾಗಿಲ್ಲ. ಅವಳಿಗೆ ಫೆಲೂನಾ ಮಾತ್ರೆಗಳು ತುಂಬಾ ಸಹಾಯಕಾರಿಯಾಗುವವು. ಅಲ್ಲದೆ ಯಾವ ಸ್ಥಿತಿಯಲ್ಲಿದ್ದರೂ ಆರೋಗ್ಯದ ಸ್ಥಿತಿಗೆ ತಂದೊಡ್ಡುವುದು.

FELUNA PILLS
For Females only

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ಮಾರಲ್ಪಡುವವು.

ಬಾಟಲಿಗೆ ರೂಪಾಯಿ 2—4—0.

ದಿ ರಿಪ್ರಸೆಂಟೇಟಿವ್,
ಪೋಸ್ಟ್ ಬಾಕ್ಸ್ 720, ಮುಂಬಾಯಿ.

ದಾದಾ ಎಂಡ್ ಕೋ.,
260 ಚೈನಾ ಬಜಾರ್ ರೋಡು, ಮದರಾಸ್.

ತಾರೀಕು ೧೦—೫—'೩೯ರಲ್ಲಿ ಮಂಗಳೂರು ರೆವಿನ್ಯು ಡಿವಿಜನಲ್ ಆಫೀಸಿನಲ್ಲಿ ಜರಗಿದ ಎಕ್ಸೈಜ್ ಎಡ್ವ್ಯಾಜರಿ ಕಮಿಟಿಯ ಸಭೆಯಲ್ಲಿ ಆದ ಠರಾವುಗಳು.

ಹಾಜರು.

೧. ಮ॥ ರಾ॥ ರಾ॥ ಎಮ್. ಎಸ್. ವ್ಯಾಸ್ ಅವರ್ಗಳ ಬಿ. ಎ. ಅಧ್ಯಕ್ಷ ಮತ್ತು ರೆವಿನ್ಯು ಡಿವಿಜನಲ್ ಆಫೀಸರರು.
೨. „ ಸಿ. ರಾಘವನ್ ಅವರ್ಗಳ್ ಬಿ. ಎ. ಎಕ್ಸೈಜ್ ಇನ್ಸ್‌ಪೆಕ್ಟರ್, ಮಂಗಳೂರು.
೩. „ ಎಮ್. ಕಮ್ರುದ್ ಸಾಹೇಬ್ ಬಹದ್ದೂರ ಪೋಲಿಸ್ ಇನ್ಸ್‌ಪೆಕ್ಟರ್ ಮಂಗಳೂರು, ಸರ್ಕಲ್.
೪. „ ಕೆ. ಸದಾಶಿವ ಅಡಿಗ ಅವರ್ಗಳ್, ಬಿ. ಎ. ಬಿ. ಎಲ್. ಪ್ರೆಸಿಡೆಂಟ್, ತಾಲೂಕು ಬೋರ್ಡು ಮಂಗಳೂರು.
೫. „ ರೆವರೆಂಡ್ ಫಾದರ್ ಜೆ. ರೇಗೋ ಡಿ. ಡಿ. ಬೊಂದೇಲ ಇಗರ್ಜಿ ಗುರುಗಳು.

ಬರುವ ಶೇಂದಿ ಗುತ್ತೆಯ ಬಾಬ್ತು ಜಿಲ್ಲಾ ಕಲೆಕ್ಟರ ಧೊರೆಗಳಿಂದ ತಲ್ಪಿದ ಶೇಂದಿ ಅಂಗಡಿಗಳ ಪಟ್ಟಿಯನ್ನು ಓದಲಾಯಿತು.

ಕುಪಂಬಟ್ಟು ಗ್ರಾಮದ ನಂಬ್ರ ೩ನೇ ಶೇಂದಿ ಅಂಗಡಿ ಮತ್ತು ಉಳ್ಳಾಲ ಗ್ರಾಮದ ನಂಬ್ರ ೫ನೇ ಶೇಂದಿ ಅಂಗಡಿಗಳನ್ನು ಮುಚ್ಚಬಹುದಾಗಿ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರು ಸೂಚಿಸಿದರು.

ರೆವರೆಂಡ್ ಫಾದರ್ ಜೆ. ರೇಗೋರವರು ಈ ಸೂಚನೆಯನ್ನು ಅನುಮೋದಿಸಿದರು.

ಎಕ್ಸೈಜ್ ಇನ್ಸ್‌ಪೆಕ್ಟರರು ಮತ್ತು ಪೋಲಿಸ್ ಇನ್ಸ್‌ಪೆಕ್ಟರರ ಈ ಸೂಚನೆಯನ್ನು ವಿರೋಧಿಸಿದರು. ಅಧ್ಯಕ್ಷರು ಕೂಡಾ ಇದೇ ಅಭಿಪ್ರಾಯಪಟ್ಟರು. ಅದು ಕಾರಣ ಸದ್ರಿ ಸೂಚನೆಯು ಬಿದ್ದುಹೋಯಿತು.

ಕುಡುಪು ಗ್ರಾಮದ ನಂಬ್ರ ೫ನೇ ಶೇಂದಿ ಅಂಗಡಿಯು ದೇವಸ್ಥಾನಕ್ಕೆ ಮತ್ತು ಶಾಲೆಗೆ ಸಮೀಪ ಇರುವುದರಿಂದ ಸದ್ರಿ ಅಂಗಡಿ ಇರುವ ಸ್ಥಳವು ಆಕ್ಷೇಪಕರವಾದ್ದರಿಂದ ಸದ್ರಿ ಅಂಗಡಿಯನ್ನು ಕುಡುಪು ಗ್ರಾಮದ ಇನ್ಸ್‌ಪೆಕ್ಷನ್ ಕಚೇರಿಯಲ್ಲಿ ಇಡಬಹುದಾಗಿ ರೆವರೆಂಡ್ ಫಾದರ ಜೆ. ರೇಗೋ ಡಿ. ಡಿ.ಯವರು ಸೂಚಿಸಿದರು.

ಈ ಸೂಚನೆಯನ್ನು ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರು ಅನುಮೋದಿಸಿದರು.

ಸರ್ವ ಸಮ್ಮತದಿಂದ ಈ ಸೂಚನೆಯನ್ನು ಮಂಜೂರು ಮಾಡಲಾಯಿತು.

ಈಗ ಪದವು ಗ್ರಾಮದಲ್ಲಿ ಎರಡು ಶೇಂದಿ ಅಂಗಡಿಗಳು ಇರುವದರಿಂದ ಆ ಪೈಕಿ ಪದವು ಗ್ರಾಮದ ಕೊಡಿಯಾಲ್ ಬೈಲಲ್ಲಿರುವ ನಂಬ್ರ ೫ನೇ ಶೇಂದಿ ಅಂಗಡಿಯನ್ನು ತೆಗೆದು ಹಾಕಬಹುದಾಗಿ ರೆವರೆಂಡ್ ಫಾದರ್ ಜೆ. ರೇಗೋರವರು ಸೂಚಿಸಿದರು.

ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರು ಈ ಸೂಚನೆಯನ್ನು ಅನುಮೋದಿಸಿದರು.

ಎಕ್ಸೈಜ್ ಇನ್ಸ್‌ಪೆಕ್ಟರರು ಮತ್ತು ಪೋಲೀಸ್ ಇನ್ಸ್‌ಪೆಕ್ಟರರು ಇದನ್ನು ವಿರೋಧಿಸಿದರು. ಅಧ್ಯಕ್ಷರು ಕೂಡಾ ವಿರೋಧಿಸಿದರು. ಅದು ಕಾರಣ ಸದ್ರಿ ಸೂಚನೆಯು ಬಿದ್ದುಹೋಯಿತು.

ಕಲೆಕ್ಟರ ಧೊರೆಗಳವರಿಂದ ಕಳುಹಿಸೋಣಾದ ಶೇಂದಿ ಅಂಗಡಿಗಳ ಪಟ್ಟಿಯು ಪ್ರಕಟಿಸಲಾಗುವದೆಂದು ನಿರ್ಣಯಿಸಲಾಯಿತು.

ಮೇಲಿನ ಠರಾವುಗಳನ್ನು ವಿರೋಧಿಸುವವರು ವಿರೋಧ ಮತದ ಅರ್ಜಿಗಳನ್ನು ತಾರೀಕು ೨—೬—'೩೯ರ ವರೆಗೆ ಮಂಗಳೂರು ತಾಲೂಕು ತಹಸಿಲ್‌ದಾರರ ಮುಂದೆ ದಾಖಲು ಮಾಡಬಹುದು. ಆ ಬಗ್ಗೆ ಅಗತ್ಯವಿರುವ ನೋಟೀಸುಗಳನ್ನು ಈ ಕೆಳಗಿನ ಆಫೀಸುಗಳ ನೋಟೀಸು ಬೋರ್ಡುಗಳಲ್ಲಿ ಹಚ್ಚಬೇಕಾಗಿ ನಿರ್ಣಯಿಸಲಾಯಿತು.

ಜಿಲ್ಲಾ ಕಲೆಕ್ಟರರ ಕಚೇರಿ, ಡಿಪ್ಯುಟಿ ಕಲೆಕ್ಟರರ ಕಚೇರಿ, ತಾಲೂಕು ಕಚೇರಿ, ಬಂಟವಾಳ ಡಿಪ್ಯುಟಿ ತಹಸಿಲ್ದಾರರ ಕಚೇರಿ, ಅಬ್ಕಾರಿ ಆಫೀಸು, ಜಿಲ್ಲಾ ಬೋರ್ಡು ಆಫೀಸು, ತಾಲೂಕು ಬೋರ್ಡು ಆಫೀಸು, ಮುಲ್ಕಿ ಮತ್ತು ಬಂಟವಾಳ ಪೋಲೀಸ್ ಸ್ಟೇಷನುಗಳು.

ಮುಂದಿನ ಸಭೆಯು ತಾರೀಕು ೪—೬—'೩೯ರಲ್ಲಿ ಅಪರಾಹ್ನ ಒಂದು ಗಂಟೆಗೆ ಮಂಗಳೂರು ರೆವಿನ್ಯು ಡಿವಿಜನಲ್ ಆಫೀಸಿನಲ್ಲಿ ಜರಗಬೇಕಾಗಿ ನಿರ್ಣಯ ಮಾಡಲಾಯಿತು.

ಪ್ರಿಲಿಮಿನೆರಿ (ಪ್ರಾಥಮಿಕ) ಸಭೆಯ ನೋಟೀಸುಗಳ ಒಟ್ಟಿಗೆ ಈ ಕಮಿಟಿಯ ಪ್ರತೀ ಮೆಂಬರರಿಗೆ ಒಂದು ಶೇಂದಿ ಅಂಗಡಿಗಳ ಪಟ್ಟಿಯ ನಕಲು ಕಳುಹಿಸುವ ಹಾಗೆ ಶೇಂದಿ ಠರಾಬು ಅಂಗಡಿಗಳ ೯ ಪಟ್ಟಿಗಳನ್ನು ಕಳುಹಿಸುವ ಹಾಗೆ ಜಿಲ್ಲಾ ಕಲೆಕ್ಟರ ಧೊರೆಗಳವರಿಗೆ ಬರಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

— ವಿಶೇಷ ವಾರ್ತೆಗಳು. —

ಪತಂಗಗಳಿಗೆ ಮೋಟಾರು ಕಾರು— ತುಂಬ ಹೊಲಗಳು ಬೆಳೆಯುವ ಜಿಲ್ಲೆಗಳಿಗೆ ಪತಂಗಗಳನ್ನು ಒಯ್ಯುವ ಸಲುವಾಗಿ ಲೊಸ್ ಎಂಗಿಲೆಸ್ ಎಂಬ ದೇಶದಲ್ಲಿ ಮೋಟಾರು ಕಾರುಗಳನ್ನು ಉಪಯೋಗಿಸುತ್ತಿರುವರಂತೆ. ಇದು ಹೆಚ್ಚುತ್ತ ಬಂದರೆ ತುಂಬ ಜೇನು ಸಂಗ್ರಹವಾಗುವುದು.

ಎಂಥಾ ಮನುಷ್ಯನು— ಸೊಲೊಮನ್ ದ್ವೀಪದಲ್ಲಿ ಒಬ್ಬನೇ ಒಬ್ಬ ಕ್ರಿಮಿನಲ್ ... ತಿಂಗಳ ವ್ಯವಸಾಯ ಧೂಮಿಯು ಮೊಕ್ಕದ್ದಮೆ ಚಾರಣೆಯಲ್ಲಿರುವನಂತೆ. ಮನೆಯಿಂದ ಬರೆದ ಪತ್ರವು ಆತನಿಗೆ ತಲಪಬೇಕಾದರೆ ಹತ್ತು ತಿಂಗಳುಗಳ ಸಮಯವು ಬೇಕಾಗುವದು.

ಚಹಾವಿನ ಉಂಡೆಗಳು— ಚೀನಾದೇಶದಲ್ಲಿ ಚಹಾವನ್ನು ಪರ ಊರಿಗೆ ಕಳುಹಿಸುವಾಗ ಉಂಡೆಯ ರೂಪಕ್ಕೆ ತರುವರು. ಚಾಯಲೆಯನ್ನು ಪುಡಿಮಾಡಿ ಸೀಯನೊಂದಿಗೆ ಬೆರಸಿ ಉಂಡೆಯಾಗಿ ಮಾಡುವರು. ಪ್ರತಿ ಉಂಡೆಯು ೫ ರಾತಲು ಭಾರವಿರುವುದು.

ರಾಕ್ಷಸ ದಂತಗಳು— ಹಿಂದೂದೇಶದಲ್ಲಿ ಹಿಂದೆ ರಾಕ್ಷಸರಿದ್ದ ರೆಂಬ ಮಾತು ಸುಳ್ಳಾಗಿರುವುದಿಲ್ಲ. ಏಕೆಂದರೆ ಇತ್ತೀಚೆಗೆ ನಡೆದ ಶೋಧಗಳಿಂದ ಹಿಂದಿನ ಜನರಿಗೆ ಉದ್ದವಾದ ಹಲ್ಲುಗಳಿದ್ದವೆಂದೂ, ಹಲ್ಲುಗಳಲ್ಲಿ ಎರಡು ಹಲ್ಲುಗಳು ತುಟಿಗಳನ್ನು ಮೀರಿ ಹೊರಕ್ಕೆ ಬರುತ್ತಿದ್ದುವೆಂದೂ ಕಂಡುಹಿಡಿಯಲ್ಪಟ್ಟಿರುತ್ತದೆ. ಮನುಷ್ಯನ ನಾಗರಿಕತೆಯು ಹೆಚ್ಚುತ್ತಿರುವದಕ್ಕೆ ಆತನ ಹಲ್ಲುಗಳು ಗಿಡ್ಡವಾಗುತ್ತ ಬರುತ್ತವೆ. ಕೆಲವು ಸಮಯದ ಮುಂದೆ ಮನುಷ್ಯರಿಗೆ ಹಲ್ಲುಗಳೇ ಹುಟ್ಟದಿರುವುವೋ ಏನೋ!

ರಬ್ಬರಿನಂತಹ ಕೈಕಾಲುಗಳು— ಬರ್ಮಿಂಗಹೇಮಿನಲ್ಲಿ ೧೫ ವರುಷ ಪ್ರಾಯದ ಒಬ್ಬ ಹುಡುಗಿಯಿರುವಳು. ಅವಳ ಕೈಕಾಲುಗಳು ಇಂಡಿಯಾ ರಬ್ಬರಿನಂತೆ ಬೇಕಾದ ಸಮಯದಲ್ಲಿ ಎಳೆದು ಉದ್ದಮಾಡಲು ಶಕ್ಯವಿರುವುದಂತೆ. ಮಿಸ್ ಕೆಥೇನ್ ಹಾರ್‌ಕೋರ್ಟ್ ಎಂದು ಅವಳ ನಿಜವಾದ ಹೆಸರಾದರೂ 'ಮಿಸ್ ಇಂಡಿಯಾ ರಬ್ಬರ್' ಎಂದು ಅವಳನ್ನು ಕರೆಯುತ್ತಿರುವರು. ಅವಳ ನಿಜವಾದ ಎತ್ತರ ಐದೂವರೆ ಅಡಿ. ಯಾವದಾದರೂ ತಲೆಯ ಮೇಲಿನ ವಸ್ತುಗಳಿಗೆ ಹಿಡಿದು ನೇತಾಡಿದರೆ ಅವಳ ಉದ್ದವು ಮೂರು ಇಂಚು ಹೆಚ್ಚುವುದು. ಅವಳ ಕೈಗಳ ಉದ್ದವನ್ನು ೩ ಇಂಚಿಗೂ, ಕಾಲುಗಳ ಉದ್ದವನ್ನು ನಾಲ್ಕು ಇಂಚಿಗೂ ಬೆಳಸಬಹುದು. ಹೀಗಿಂದು ಅವಳ ದೇಹಸ್ಥಿತಿಯು ಚೆನ್ನಾಗಿ ಆರೋಗ್ಯದಲ್ಲಿದೆ. ಅವಳಿಗೆ ಕಾಹಿಲೆಯು ಕಠಿಣವಾಗುವುದೇ ಇಲ್ಲವಂತೆ. ಮುಂದೆ ಅವಳ ಕೈಕಾಲುಗಳಿಗೆ ಇಂತಹ ರಬ್ಬರಿನ ಗುಣಗಳು ಶಾಶ್ವತವಾಗಿ ನಿಲ್ಲಲಾರದೆಂದು ಡಾಕ್ಟರರು ಅಭಿಪ್ರಾಯಪಡುವರು.

ತಾಳೆಮರದ ಮೇಲೆ ಬಾಳೆಹಣ್ಣುಗಳು— ಕೊಟ್ಟಾರದ ಸಮೀಪ ಕಿಜನಾಥಮ್ ಎಂಬುದೊಂದು ಸಣ್ಣ ಹಳ್ಳಿಯು. ಅಲ್ಲಿಯ ವಿಷ್ಣುದೇವಾಲಯದ ಹಿಂದೆ ಒಂದು ದೊಡ್ಡ ತಾಳೆಮರಗಳ ತೋಪು ಇರುವುದು. ಒಂದು ತಾಳೆಮರದ ಮೇಲೆ ಐದಾರು ದಿನಗಳಿಂದ ಎರಡು ಬಾಳೆಗೊನೆಗಳು ಹುಟ್ಟಿರುತ್ತವೆಂದು ವರ್ತಮಾನ! ಮರವನ್ನು ಏರಲು ಪ್ರಯತ್ನಿಸುವವರಿಗೆ ನೆಗಡಿಯಾಗುವದು. ಮರವನ್ನು ಹತ್ತಿ ಅದೇನೆಂದು ನೋಡುವೊಡನೆ ಘಾತುಕ ಮುಂಬರಿಯಬಾರದಾಗಿ ಒಂದು ಅಶರೀರವಾಣಿಯು ಕರೆದು ಹೇಳುವದು. ಇದರಿಂದ ಜನರು ಗಂಧ, ಪುಷ್ಪ, ಕೇಸರಿ ಮೊದಲಾದವುಗಳಿಂದ ಮರವನ್ನು ಪೂಜಿಸತೊಡಗಿರುವರು. ಜಿಲ್ಲೆಯ ದೂರ ದೂರ ಪ್ರದೇಶಗಳಿಂದಲೂ ಜನರು ಅಲ್ಲಿಗೆ ಬರುತ್ತಿರುವರು. ಇಬ್ಬರು ಯುವಕ ಸ್ನೇಹಿತರು ಇದನ್ನು ಪರೀಕ್ಷಿಸುವ ಸಲುವಾಗಿ ಅಲ್ಲಿಗೆ ಹೋಗಿ ಬಂದು ನಿಜವೆಂದೇ ಹೇಳುತ್ತಿರುವರು.

ಧೂಳಿನ ಪ್ರಯಾಣ— ಆಸ್ಟ್ರೇಲಿಯದಿಂದ ಹಲವು ಟನ್ ಭಾರದ ಧೂಳು ೩೦೦೦ ಮೈಲು ದೂರವಿರುವ ನ್ಯೂಜಿಲೇಂಡ ದ್ವೀಪದ ಪಶ್ಚಿಮ ಪ್ರಾಂತಕ್ಕೆ ಪ್ರಯಾಣ ಬೆಳಸಿರುವುದಂತೆ. ಪ್ರಯಾಣದ ಹೆಚ್ಚಿನ ಅಂಶವು ನೀರಿನ ಮೇಲೆಯೇ ಆಗಿತ್ತು. ಧೂಳು ಇಷ್ಟು ದೂರದ ವರೆಗೆ ಒಂದೇ ಸವನೆ ಹಾರಿಹೋದದ್ದು ಇದೇ ಮೊದಲನೆಯದು.

ಕರ್ನಾಟಕಸ್ವರೇ!

ಹಿಂದೂಸ್ಥಾನೀ ಸೇವಾದಳದ ಸಂಸ್ಥೆಯು ನಮ್ಮ ಪ್ರಾಂತದವರಿಂದಲೇ ಸ್ಥಾಪಿಸಲ್ಪಟ್ಟದ್ದು ಕರ್ನಾಟಕಸ್ವತ್ತೇ ಅದನ್ನು ಬೆಳಯಿಸಿ ಸದ್ಯದಂತ ಉಜ್ವಲ ರೂಪಕ್ಕೆ ಮುಟ್ಟಿಸಿರುವರೆಂಬ ಸಂಗತಿಯು ಸರ್ವಪ್ರಖ್ಯಾತವಾಗಿದೆ. ಇದು ಕರ್ನಾಟಕದ ಯುವಕರಿಗೂ ಮತ್ತು ಇಡೀ ಕರ್ನಾಟಕ ಪ್ರಾಂತಕ್ಕೂ ಭೂಷಣಾಸ್ಪದವಾದದ್ದೆಂಬುದರಲ್ಲಿ ಸಂದೇಹವಿಲ್ಲ.

ಆದರೆ ಪ್ರತಿ ತಿಂಗಳ ಕೊನೆಯ ರವಿವಾರ ದಿವಸ ನಡೆಯಬೇಕೆಂದು ಗೊತ್ತಾದ ರಾಷ್ಟ್ರೀಯ ಧ್ವಜಾಭಿವಂದನೆಯು ಇದುವರೆಗೆ ಕರ್ನಾಟಕದಲ್ಲಿ ನಡೆದ ಸ್ಥಳಗಳ ಸಂಖ್ಯೆಯನ್ನು ನೋಡಿದರೆ ನಮ್ಮ ಪ್ರಾಂತವು ಸೇವಾದಳದ ಕೆಲಸದಲ್ಲಿ ಹಿಂದೆ ಬೀಳುವ ಅಂಜಿಕೆಯು ನಮಗುಂಟಾಗುತ್ತದೆ. ಈಗಾಗಲೇ ಸಂಯುಕ್ತ ಪ್ರಾಂತ(ಉದಾಹರಣೆಗಾಗಿ ಇವರ ಪ್ರಾಂತ್ಯ), ಬಿಹಾರ, ಈ ಎರಡು ಪ್ರಾಂತಗಳಲ್ಲಿ ದಳದ ಸದಸ್ಯರು ಧ್ವಜಾರೋಹಣದ ವಿಷಯವಾಗಿ ಭರದಿಂದ ಕೆಲಸಮಾಡಹತ್ತಿದ್ದು ಅಲ್ಲಿಯ ಪ್ರತಿ ತಿಂಗಳ ಈ ಸಮಾರಂಭವು ನಡೆಯುವಂಥ ಸ್ಥಳಗಳ ಸಂಖ್ಯೆಯು ನಮ್ಮ ಪ್ರಾಂತದ ಸಂಖ್ಯೆಗಿಂತ ಹೆಚ್ಚಾಗಹತ್ತಿದೆ. ಸೇವಾದಳಕ್ಕೆ ಜನ್ಮಕೊಟ್ಟ ಕರ್ನಾಟಕ ಪ್ರಾಂತವು ಹೀಗೆ ಹಿಂದೆ ಬೀಳುವದು ಸರಿಯಾಗಬಹುದೇ? ಇದಕ್ಕಾಗಿ, ಕನ್ನಡ ನಾಡಿನ ಎಲ್ಲ ಬಂಧುಗಳಿಗೆ ಎಚ್ಚರಿಗೆಯನ್ನೀಯಲು ಈ ಲೇಖವನ್ನು ಬರೆಯುತ್ತಿದ್ದೇನೆ.

ದಳದ ವತಿಯಿಂದ ಕನ್ನಡನಾಡಿನ ಉಜ್ವಲವಾದ ಹೆಸರನ್ನು ಇಡೀ ರಾಷ್ಟ್ರದ ಎದುರಿಗೆ ಆದರ್ಶಭೂತವಾಗಿ ಇಡಬೇಕೆಂಬ ಬುದ್ಧಿಯಿಂದಲೇ ಕನ್ನಡ ತರುಣರಿಗೆ ಶಿಕ್ಷಣ ಶಿಬಿರವು ಕೊಡಲ್ಪಟ್ಟಿದೆ. ನಮ್ಮ ನಾಡಿನ ಹೆಸರನ್ನು ಕಾಪಾಡಬೇಕಾದರೆ ನಮ್ಮ ಹೆಜ್ಜೆಯು ಇತರ ಪ್ರಾಂತಗಳಿಗಿಂತ ಮುಂದೆಯೇ ಇರಬೇಕಾಗುವದು. ಮತ್ತು ಇತರ ಪ್ರಾಂತದವರ ದೃಷ್ಟಿಯನ್ನು ನಮ್ಮ ಕಡೆಗೆ ನಮ್ಮ ಕರ್ತೃತ್ವ ಶಕ್ತಿಯಿಂದಲೇ ಎಳೆದುಕೊಳ್ಳಬೇಕಾಗುವದು.

ಅದ್ದರಿಂದ, ರಾಷ್ಟ್ರಧ್ವಜಾಭಿವಂದನವು ನಡೆಯುವ ಸ್ಥಳಗಳು ನಮ್ಮ ಪ್ರಾಂತಗಳಲ್ಲಿ ಕನಿಷ್ಠಪಕ್ಷಕ್ಕೆ ೨೦೦ರಷ್ಟಾದರೂ ಆಗಬೇಕೆಂದು ನಮ್ಮ ಇಚ್ಛೆಯು. ಈ ನಾಲ್ಕು ತಿಂಗಳುಗಳಲ್ಲಿಯ ವರದಿಯನ್ನು ನೋಡಿದರೆ ನಮ್ಮ ಪ್ರಾಂತದಲ್ಲಿ ೧೫ಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಈ ಸಮಾರಂಭವಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಕಾರವಾರ, ಬಳ್ಳಾರಿ, ಕೊಡಗು, ಚಿತ್ರದುರ್ಗ, ಹಾಸನ, ಮೈಸೂರು, ಕೋಲಾರ ಮತ್ತು ಹೈದರಾಬಾದ ಸಂಸ್ಥಾನದ ಎಲ್ಲ ಕನ್ನಡ ಜಿಲ್ಲೆಗಳಲ್ಲಿ ಇವತ್ತಿನ ವರೆಗೆ ಒಮ್ಮೆ ಸಹ ಧ್ವಜಾಭಿವಂದನೆಯ ಕಾರ್ಯವಾಗಿಲ್ಲ. ಬೆಳಗಾಂವ ಮತ್ತು ಮಂಗಳೂರ ಜಿಲ್ಲೆಗಳ ಪ್ರಮುಖರು ಈ ಕಾರ್ಯಕ್ರಮದ ಕಡೆಗೆ ಸಾಕಷ್ಟು ಲಕ್ಷ್ಯಕೊಟ್ಟಿಲ್ಲ. ಉಳಿದ ಜಿಲ್ಲೆಗಳಲ್ಲಿ ಕೇವಲ ೩-೪ ಕಡೆಗೆ ಅಷ್ಟೇ ಇದು ನಡೆ

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ತೆಗೆದುಕೊಳ್ಳುವುದರಿಂದ ... ಶೀತ, ಜ್ವರ, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಹೊಟ್ಟೆನೋವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ.

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಸ್ರತಿಸಂಧುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಟವುನ್ನಿಗೆ ಮಾತ್ರ.

'ಲೋಧ್ರ'ದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಶೀಸೆಯಿಂದಲೇ ಗುಣವಾಯಿತು.

ಶ್ರೀಮತಿ ಎನ್. ಕನಕಮ್ಮ, ಕೇರಾಫ್ ಎನ್. ನರಸಯ್ಯ, ಗ್ರಾಮ ಮ್ಯಾಜಿಸ್ಟ್ರೇಟ್, ಕವರಿ ಇವರು ಬರೆದಿರುವುದು— ನಿಮ್ಮ ಒಂದು ಸಣ್ಣ ಬಾಟಲ್ ಲೋಧ್ರವನ್ನು ಉಪಯೋಗಿಸಿದ ಮಾತ್ರದಿಂದಲೇ ಗುಣವುಂಟಾಯಿತು. ಒಂದು ದೊಡ್ಡ ಶೀಸೆ ಲೋಧ್ರವನ್ನು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

ಶ್ರೀಮತಿ ಇಂದಿರಾಕುಮಾರಿ ದೇವಿ, ಮಟ್ಟೂರು, ಇವರು ಬರೆದಿರುವುದು—

ಸ್ವಾಮಿ, ನಾನು ಈಗ ತಮ್ಮ ಲೋಧ್ರವನ್ನು ಸೇವಿಸುತ್ತಿದ್ದೇನೆ. ಇದಕ್ಕೆ ಮುಂಚೆ ನನ್ನ ಋತುಕಾಲದಲ್ಲಿ ಬಹಳ ಬಾಧೆಯುಂಟಾಗುತ್ತಿದ್ದಿತು ಮತ್ತು ಕ್ರಮತಪ್ಪಿ ೨೦ ದಿನಗಳೊಳಗಾಗಿಯೇ ಬಹಿಷ್ಠೆಯಾಗುತ್ತಿದ್ದೆನು. ೨ ವರ್ಷಗಳ ಕಾಲ ಆಂಗ್ಲ ಔಷಧಾಲಯಗಳಲ್ಲಿ ಔಷಧ ಸೇವಿಸಿಯೂ ಪ್ರಯೋಜನವಿಲ್ಲದಿರಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಹೇಳಿದರು. ಆದರೆ ನಾನು ಸಮ್ಮತಿಸಲಿಲ್ಲ. ಅನಂತರ ತಮ್ಮ ಪ್ರಸಿದ್ಧವಾದ ಲೋಧ್ರ ಎರಡು ಬಾಟಲ್ ತರಿಸಿ ಸೇವಿಸಿದೆನು. ಅಂದಿನಿಂದ ಕ್ರಮವಾಗಿ ೨೮ ದಿನಕ್ಕೊಂದು ಸಲ ಬಾಧೆಯಿಲ್ಲದೆ ಬಹಿಷ್ಠೆಯಾಗುತ್ತ ಸುಖವಾಗಿದ್ದೇನೆ. ಮಿಕ್ಕ ಇತರ ಬಾಧೆಗಳೂ ನಿವೃತ್ತಿಯಾಗಿವೆ. ಪುನಃ ಈಗ ಎರಡು ಬುದ್ದಿ ಲೋಧ್ರ ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ಮಾಯವಾಯಿತು.

ಶ್ರೀಮತಿ ಜಿ. ಲಕ್ಷ್ಮಮ್ಮ, ಬಾಲಿಕಾ ಪಾಠಶಾಲೆ, ಕುಲ್ಲಿಗಲ್, ಇವರು ಬರೆದಿರುವುದು—

ಕಳೆದ ಮೂರು ವರುಷಗಳಿಂದಲೂ ನನಗೆ ಋತುವು ಸರಿಯಾಗಿ ಆಗುತ್ತಿಲ್ಲ. ೨ ಅಥವಾ ೪ ತಿಂಗಳಿಗೊಂದುಸಾರಿಯಾಗುತ್ತಿದ್ದನು. ಈ ಸಂದರ್ಭಗಳಲ್ಲಿ ಸೊಂಟನೋವು, ಕಿಬ್ಬೊಟ್ಟೆ ನೋವು, ಮತ್ತು ನಿತ್ರಾಣವುಂಟಾಗಿ ಬಹಳ ಕಷ್ಟಪಡುತ್ತಿದ್ದನು. ಈ ಸಮಯದಲ್ಲಿ ತಮ್ಮ 'ಲೋಧ್ರ' ೩ ಬುದ್ದಿ ತರಿಸಿ ಸೇವಿಸಿದೆನು. ಅಂದಿನಿಂದ ಈ ಬಾಧೆಗಳೆಲ್ಲವೂ ವಾಸಿಯಾಗಿ ಸಕಾಲಕ್ಕೆ ಬಹಿಷ್ಠೆಯಾಗುತ್ತ ಶರೀರಾರೋಗ್ಯವನ್ನು ಅನುಭವಿಸುತ್ತಿದ್ದೇನೆ. ಈ ದಿವ್ಯೌಷಧಿಯನ್ನು ನಿಲ್ಲಿಸದೆ ಇನ್ನೂ ಸೇವಿಸಬೇಕೆಂದಿರುವುದರಿಂದ ಇನ್ನೂ ಎರಡು ಬುದ್ದಿ ಕಳುಹಿಸುವುದು. ಸ್ತ್ರೀಯರ ಎಲ್ಲಾ ವ್ಯಾಧಿಗೂ 'ಲೋಧ್ರ'ವೆ ದಿವ್ಯೌಷಧಿಯೆಂದು ನಾನು ಖಂಡಿತವಾಗಿಯೂ ಹೇಳುತ್ತೇನೆ.

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟು ಬಾಕ್ಸ್ 752 ತಂತಿ: "ಕೇಸರಿ" ಫೋನ್ 3486.

ಏಜಂಟರು—ಷಾ ಕಂಪೆನಿ, (ದಿ ಊಲನ್ ಮಾರ್ಟ್) ಮಂಗಳೂರು.

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬೈಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ತಯಾರಾಗಿವೆ ತಯಾರಾಗಿವೆ.

ಕಾಫಿ ಪ್ಲಾಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚೆಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕೃಪೆಯಿಟ್ಟು, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

... ಕಾರ್ಯವನ್ನು ಮಾಡಲು ಸಮ್ಮತಿಸಿದರೆ ನಡೆಯುವ ... ಹೋರಾಟವನ್ನು ... ನಡೆಯುವದಾಗಿದ್ದವೆಂಬ ಮಾತು ಸಿದ್ಧವಾಗುವದು. ಇದು ಅತ್ಯಂತ ಹೊಣೆಯ ಸಂಗತಿಯೆಂಬದನ್ನು ಬೇರೆ ಹೇಳಬೇಕಾಗಿಲ್ಲ.

ಆದ್ದರಿಂದ, ಅಹಾರ ಮತ್ತು ಸಂಚಾಲ ಮುಂತಾದ ಪ್ರಾಂತಿಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಂದ ಈ ರಾಷ್ಟ್ರಧ್ವಜವಂದನದ ಕಾರ್ಯವು ಕರ್ನಾಟಕ ಪ್ರಾಂತದ ಎಲ್ಲ ಭಾಗಗಳಲ್ಲಿ ನಡೆಯಬೇಕೆಂಬ ಠರಾವು ಮೊನ್ನೆ ಮೊನ್ನೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದಾದರೂ ಪಾಸುಮಾಡಲ್ಪಟ್ಟಿದೆ. ಇದರ ಕಡೆಗೆ ಕರ್ನಾಟಕದೊಳಗಿನ ಕಾಂಗ್ರೆಸ್ ಭಕ್ತರ ಲಕ್ಷ್ಯವು ಹೋದಂತೆ ಕಾಣಲ್ಲ. ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಠರಾವಿಗೆ ಮಾನ ಕೊಟ್ಟಾದರೂ ಈ ಕಾರ್ಯವನ್ನು ಉತ್ಸಾಹದಿಂದ ನಡೆಯಿಸುವದು ಅತ್ಯಾವಶ್ಯಕವಾಗಿರುವದು.

ಕರ್ನಾಟಕವು ಜಾಗ್ರತವಾಗಿ ರಾಷ್ಟ್ರಕಾರ್ಯದ ಹೋರಾಟದಲ್ಲಿ ಭಾಗ ತೆಗೆದುಕೊಳ್ಳಬೇಕಾದರೆ ಮೊದಮೊದಲು ನಾವು ನಮ್ಮ ಮನಸ್ಸನ್ನು ಸಿದ್ಧಮಾಡಬೇಕು. ರಾಷ್ಟ್ರಪ್ರೇಮವನ್ನು ಬೆಳೆಯಿಸುವದಕ್ಕಾಗಿಯೇ ಧ್ವಜವಂದನೆಯ ಕಾರ್ಯಕ್ರಮದ ಏರ್ಪಾಡು ಮಾಡಲ್ಪಟ್ಟಿದೆ. ಆದ್ದರಿಂದ ಇನ್ನು ಮೇಲಾದರೂ ಎಲ್ಲ ಕನ್ನಡಿಗರು ಪ್ರತಿ ತಿಂಗಳ ಕೊನೆಯ ರವಿವಾರ ಮುಂಜಾನೆ ಸರಿಯಾಗಿ ೮ ಘಂಟೆಗೆ ತಾವು ಇದ್ದ ಸ್ಥಳದಲ್ಲಿ ರಾಷ್ಟ್ರಧ್ವಜವಂದನೆಯನ್ನು, ರಾಷ್ಟ್ರಗೀತೆಗಳನ್ನು ಅನ್ನುವದೇ ಮೊದಲಾದ ಕಾರ್ಯಕ್ರಮಗಳೊಡನೆ ಜರುಗಿಸಿ ತಮ್ಮಲ್ಲಿ ರಾಷ್ಟ್ರದ ವಿಷಯವಾಗಿರತಕ್ಕಂಥ ಉಜ್ವಲ ಪ್ರೇಮವನ್ನೂ ಪ್ರಾಂತದ ವಿಷಯವಾಗಿದ್ದ ಅಭಿಮಾನವನ್ನೂ ವ್ಯಕ್ತಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ತಮ್ಮ ತಮ್ಮ ಸ್ಥಳಗಳಲ್ಲಿ ನಡೆದ ಈ ಸಮಾರಂಭದ ವರದಿಯನ್ನು ದಳದ ಹುಬ್ಬಳ್ಳಿಯ ಕಚೇರಿಗೆ ಕಳುಹಿಸ ಕೃಪೆಮಾಡಬೇಕು.

ಇನ್ನು ರಾಷ್ಟ್ರೀಯ ನಿಶಾನೆಗಳು ಬೇಕಾದವರು (೧—೬—೦) ಒಂದು ರೂಪಾಯಿ ಆರು ಆಣೆಗಳನ್ನು ಹುಬ್ಬಳ್ಳಿಯ ದಳದ ಕಚೇರಿಗೆ ಕಳುಹಿಸಿ ತರಿಸಿಕೊಳ್ಳಬೇಕು.

N. S. HARDIKAR,
ಸೇವಾದಳದ ಕಾರ್ಯದರ್ಶಿ.

ಮುಂಬಾಯಿ ಮುಷ್ಕರ.

ಜೋಯಿಸ್ ಮೆಂಬರ ಮತ್ತು ಗಿರಣಿ ಮಾಲೀಕರ ಸಂಘ ಇವರೊಳಗಿನ ರಾಜಿಪಂಚಾಯತಿಕೆಯು ನಡೆಯಲಿಲ್ಲವಾದ ಕಾರಣ ಮುಂಬಾಯಿಯಲ್ಲಿ ವಿಪರೀತವಾದ ಸ್ಥಿತಿಯು ಉಂಟಾಗಿತು. ಗಿರಣಿ ಮಾಲೀಕರು ಮುಷ್ಕರಗಾರರಿಗೆ ಎಪ್ರಿಲ್ ತಿಂಗಳ ಸಂಬಳವನ್ನು ಕೊಡಲು ನಿರಾಕರಿಸಿದರು. ಗವರ್ನರರು ಜೋಯಿಸ್ ಮೆಂಬರರಿಗೆ ಈ ಜಗಳದ ಸಂಗತಿಯನ್ನು ತಿಳಿಸಿದ್ದರು. ಜೋಯಿಸ್ ಮೆಂಬರರು ಕೆಲವು ದಿನಗಳಿಂದ ಗಿರಣಿ ಮಾಲೀಕರಿಂದ ಆಗಾಗ ಅವರ ವರ್ತಮಾನಗಳನ್ನು ತಿಳಿದುಕೊಳ್ಳುತ್ತಿದ್ದರು. ಗಿರಣಿ ಮಾಲೀಕರು ತಮ್ಮ ನಿರ್ಣಯವನ್ನು ಬದಲಾಯಿಸುವದಕ್ಕಿಲ್ಲವೆಂದು ಮಂಗಳವಾರ ದಿನ ಅವರು ಗಿರಣಿ ಕಾಮಗಾರ ಸಂಘದವರಿಗೆ ತಿಳಿಸಿದರು. ಆದ ಕಾರಣ ಮುಷ್ಕರಗಾರರು ತಂಡತಂಡವಾಗಿ ಗಿರಣಿಗಳ ಮುಂದೆ ಕೂಡಿ ತಮ್ಮ ಸಂಬಳವನ್ನು ಕೊಟ್ಟು ಬಿಡಬೇಕೆಂದು ಹೇಳಿದರು. ಅಧಿಕಾರಿಗಳು ನಿರಾಕರಿಸಿದರು. ಜನಸಮೂಹದಲ್ಲಿ ಚೊಬ್ಬೆಯಾಗತೊಡಗಿತು. ಪೋಲೀಸರು ಬಂದು ಅವರನ್ನು ಚದರಿಸಿದರು. ಆದುದರಿಂದ ಹೆಚ್ಚಿನ ಗಲಭೆಗೆ ಅವಕಾಶ ಉಂಟಾಗಲಿಲ್ಲ.

ಮಾರುದಿನ ಬೆಳಿಗ್ಗೆ ಮಿಲಿಟರಿಯವರನ್ನು ಗಿರಣಿಗಳ ಸಮೀಪದ ಮುಖ್ಯ ಮುಖ್ಯ ಸಂದುಗಳಲ್ಲಿ ನಿಲ್ಲಿಸಿದರು. ಬುಧವಾರದಿಂದ ನಗರದಲ್ಲಿನ ಎಲ್ಲಾ ಕೆಂದಿ ಅಂಗಡಿಗಳನ್ನು ಮುಚ್ಚಬೇಕಾಗಿ ಸರಕಾರದವರು ಹುಕುಮು ಕೊಟ್ಟರು.

ಗಿರಣಿ ಅಧಿಕಾರಿಗಳು ಮಂಗಳವಾರ ಸಂಬಳ ಕೊಡಲು ನಿರಾಕರಿಸಿದುದರಿಂದ ಮುಷ್ಕರಗಾರರೆಲ್ಲರೂ, ತಮ್ಮ ತಮ್ಮ ಗಿರಣಿಗಳ ಹೊರಗೆ ಕಲೆತು ನ್ಯಾಯವಾದ ಸಂಬಳವನ್ನು ಕೊಡಬೇಕೆಂದು ಸಮಾಧಾನದಿಂದ ಹಟಹಿಡಿಯಬೇಕೆಂದು ಕಾಮಗಾರ ಸಂಘದವರು ನಿರ್ಣಯಿಸಿಕೊಂಡರು. ಎಂದಿನ ವರೆಗೆ ತಮ್ಮ ಸಂಬಳವನ್ನವರು ಕೊಡಲಾರರೋ ಅಂದಿನ ವರೆಗೆ ಸತ್ಯಾಗ್ರಹವನ್ನಾಚರಿಸಬೇಕೆಂದೂ ನಿರ್ಣಯಿಸಿದರು. ಆದರೆ ಜನರು ಹೆಚ್ಚಾಗಿ ಒಂದೇ ಸ್ಥಳದಲ್ಲಿ ಕೂಡಲಾಗದೆಂದು ಸರಕಾರ ಹುಕುಮು ಇನ್ನೂ ಜ್ಯಾರಿಯಲ್ಲಿರುವದರಿಂದ ಆ ರೀತಿ ಜನರು ಕೂಡದಂತೆ ಪೋಲೀಸರ ಪ್ರಯತ್ನ.

ಇಂತಹ ಗಿರಣಿ ಮುಷ್ಕರಗಳಿಂದ ಮುಂಬಾಯಿಯ ಹಲವು ಗಿರಣಿಗಳಿಗೆ ಬಹಳ ನಷ್ಟವುಂಟಾಗಿರುತ್ತದೆ. ಎಡ್ವರ್ಡ್ ಮೆಯರ್ ಸೆಸ್ಸೂನ್ ಡೇವಿಡ್ ಮಿಲ್ ಇದರ ವರದ ಆದಾಯ ನಷ್ಟದ ಪಟ್ಟಿಯು ಪ್ರಕಟವಾಗಿರುತ್ತದೆ. ಕಳದ ವರುಷ ಅವರಿಗೆ ೧೬॥ ಲಕ್ಷ ರೂಪಾಯಿಗಳ ನಷ್ಟ ಉಂಟಾಯಿತೆಂದು ಅದರಲ್ಲಿ ತೋರಿಸಲ್ಪಟ್ಟಿರುತ್ತದೆ.

ಗಿರಣಿ ಮುಷ್ಕರಗಾರರ ಸತ್ಯಾಗ್ರಹವು ಬುಧವಾರ ದಿನ ಪ್ರಾರಂಭಿಸಿತು. ಸೆವ್ರಿ ಎಂಬಲ್ಲಿ ಮುಷ್ಕರಗಾರರು ಪೋಲೀಸ ಆಫೀಸರನ ಕಡೆಗೆ ಕಲ್ಲುಗಳನ್ನು ಬಿಸಾಡಿದುದರಿಂದ ಆತನು ಆಯುಧಪಾಣಿಗಳಾದ ಪೋಲೀಸರನ್ನು ತಂದನು. ಆದರೂ ಜನರು ಹೆದರಲಿಲ್ಲ. ಮೂರು ಗುಂಡುಗಳನ್ನು ಪೋಲೀಸರು ಗಾಳಿಗೆ ಹಾರಿಸಿದರು. ಆಗ ಮಾತ್ರವೇ ಜನರು ಚದರಿದರು. ಪೋಲೀಸರು ಬರುವ ಮೊದಲೇ ನಡೆದ ಗೊಂದಲದಲ್ಲಿ ಒಬ್ಬ ಪೋಲೀಸನಿಗೂ ಇಬ್ಬರು ಮುಷ್ಕರಗಾರರಿಗೂ ಸ್ವಲ್ಪ ಜಖಮುಂಟಾಗಿದ್ದಿತು. ನಾಲ್ಕು ಗಿರಣಿಗಳ ಗೇಟುಗಳು ಒಡೆಯಲ್ಪಟ್ಟು ಮಾರ್ಗದಲ್ಲಿ ಬಿಸಾಡಲ್ಪಟ್ಟಿದ್ದುವು. ಮುರಾರಜಿ ಗೋಕುಲದಾಸ ಗಿರಣಿಯ ಹತ್ತಿರ ಒಬ್ಬ ಪತ್ರಿಕಾ ಕಾರ್ಯಾಲಯದ ಒಬ್ಬ ಹುಡುಗನು ಒಬ್ಬ ಪೋಲೀಸನೊಡನೆ ಮಾತನಾಡುತ್ತಿರುವಾಗ ಆತನು ವರ್ತಮಾನಗಳೆಲ್ಲವನ್ನು ಪೋಲೀಸರಿಗೆ ತಿಳಿಸುತ್ತಿರುವನೆಂದು ಮುಷ್ಕರಗಾರರು ಕಲ್ಲುಗಳಿಂದ ಆತನನ್ನು ಚೆನ್ನಾಗಿ ಹಿಂಸಿಸಿದರು. ಕೆಲಸವನ್ನು ಪ್ರಾರಂಭಿಸಿದ ಹಲವು ಗಿರಣಿಗಳೂ ಈ ಸತ್ಯಾಗ್ರಹದ ಸಂಬಂಧವಾಗಿ ಮುಚ್ಚಲ್ಪಡಬೇಕಾಯಿತು. ಡೆಲ್ಸಾಯಿ ರಸ್ತೆಯಲ್ಲಿ ಹಟವಾದಿಗಳಾದ ಕೆಲವು ಮುಷ್ಕರಗಾರರನ್ನು ಪೋಲೀಸರು ಬೆತ್ತ ಪೆಟ್ಟುಗಳಿಂದ ತಿವಿಯುವ ಆವಶ್ಯಕತೆಯುಂಟಾಯಿತು.

ತಸ್ಕರ ಚಮತ್ಕಾರ

(ಕಥೆ)

ಹಾರಾಡಿ ಲಕ್ಷ್ಮಣಪ್ಪ.

ಕಳೆದ ಸಂಚಿಕೆಯಿಂದ ಮುಂದುವರಿದುದು.

ಲೋಕದಲ್ಲಿ ಈಗ ಎಷ್ಟೋ ಜನರು ತಿಥಿ, ನಕ್ಷತ್ರ, ಗಳಿಗೆಗಳನ್ನು ನೋಡದೆ ಕೆಲಸಕ್ಕಾಗಿ ಹೊರಡುತ್ತಾರೆ. ಗಳಿಗೆ, ತಿಥಿ, ನಕ್ಷತ್ರಗಳನ್ನು ನೋಡಿ ಅವುದೊಂದು ಕಾರ್ಯಕ್ಕಾಗಿ ಹೊರಟರೆ ಆ ಕಾರ್ಯಗಳು ಯಶಸ್ವಿಯಾಗುವುವೆಂಬದಾಗಿ ಹಲವರು ಹೇಳುತ್ತಾರೆ. ಆದರೆ ಈ ರೀತಿಯಲ್ಲಿ ನಕ್ಷತ್ರ, ಗಳಿಗೆಗಳನ್ನು ನೋಡಿ, ಹೊರಡುವವರಿಗೆ ಹಾಸ್ಯಮಾಡುವವರೂ ಇದ್ದಾರೆ. ಸದಾಶಿವರಾಯನೂ ಇದೇ ಸ್ವಭಾವದವನು. ಎಂಥಾ ಕಾರ್ಯವೇ ಆಗಲಿ—ಅವನು ನಕ್ಷತ್ರ, ಗಳಿಗೆಗಳನ್ನು ನೋಡಿ ಹೊರಡುವಂತವನೇ ಅಲ್ಲ. ಇಷ್ಟವಿದ್ದಾಗಲೇ ಹೊರಟು ಬಿಡುವನು. ಹೀಗಾಗಿ ಅವನು ವಿಶ್ವಂಭರರಾಯನು ಹೇಳಿದೊಡನೆಯೇ ಹೊರಟು ಬಿಟ್ಟನು.

— ೫ —

ಸಾಯಂಕಾಲ ಸಾಧಾರಣ ನಾಲ್ಕು ಘಂಟೆಯ ಸಮಯ ಸದಾಶಿವ ರಾಯನೂ ವಿಶ್ವಂಭರರಾಯನೂ ಬ್ರಿತ್ ಹ್ಯಾಟ್ ಧೊರೆಗಳ ಗೃಹಕ್ಕೆ ಬಂದು ತಲಪಿದರು. ಬ್ರಿತ್ ಹ್ಯಾಟ್ ಧೊರೆಗಳ ಮಾತೃಭೂಮಿಯು ಫ್ರಾನ್ಸದೇಶವಂತೆ. ಇಲ್ಲಿ ಅವರು ವ್ಯಾಪಾರಕ್ಕಾಗಿ ಬಂದವರಂತೆ. ಹಲವು ವರುಷಗಳಿಂದಲೂ ಇಲ್ಲೇ ಇದ್ದರೂ ಧೊರೆಗಳಿಗೆ ಸರಿಯಾಗಿ ಕರ್ನಾಟಕ ಭಾಷೆಯನ್ನು ಆಡಲು ಬರುತ್ತಿದ್ದಿಲ್ಲ. ಒಂದೆರಡು ಫ್ರೆಂಚ್ ಶಬ್ದಗಳನ್ನು ಸೇರಿಸಿ, ಕನ್ನಡವನ್ನಾಡುತ್ತಿದ್ದರು. ಅವರ ಭವನವೆಂದರೆ ಸಾಧಾರಣದಲ್ಲ. ಪ್ರಶಸ್ತವಾದ ಗೃಹವಾಗಿದ್ದಿತು. ಗೃಹದ ಮುಂಭಾಗದಲ್ಲಿ ವಿಸ್ತಾರವಾದ ಮೈದಾನು ಇತ್ತು. ಬ್ರಿತ್ ಹ್ಯಾಟ್ ಧೊರೆಯು ತನ್ನ ಬಂಧುಬಾಂಧವರೊಡನೆ ವಾಯು ಸೇವನೆಗಾಗಿ ಹೂಂಗಡೆಯಲ್ಲಿ ಸಂಚಾರ ಮಾಡುತ್ತಿದ್ದನು. ಅಲ್ಲೇ ಮುದ್ರಾಯಂತ್ರದ ವಿಕ್ರಯದ ಕುರಿತು ಕಥಾವಾರ್ತೆಗಳು ನಡೆದುವು. ಬ್ರಿತ್‌ಹ್ಯಾಟ್ ಧೊರೆಯು "Jai achete ce press dans la mois de Mars avec plaisir (ಈ ಮುದ್ರಾಲಯವನ್ನು ನಾನು ಮಾರ್ಚ ತಿಂಗಳಲ್ಲಿ ಬಹಳ ಆತುರದಿಂದ ಕೊಂಡುಕೊಂಡೆನು) Le prix de ceci est cinq mille Rupees (ಇದರ ಬೆಲೆಯು ಐದು ಸಾವಿರ ರೂಪಾಯಿಗಳು) Mais Je vends a un mille et cent cing Rupees (ಆದರೆ ನಾನು ಒಂದೂವರೆ ಸಾವಿರ ರೂಪಾಯಿಗಳಿಗೆ ಮಾರಲು ಸಿದ್ಧನಾಗಿದ್ದೇನೆ. (Je nai pas temps) ನನಗೆ ಮುದ್ರಾಯಂತ್ರದ ಮೇಲ್ವಿಚಾರಕ್ಕೆ ಏನೂ ಸಮಯವಿಲ್ಲ (Je vends ceci) ನಾನು ಇದನ್ನು ಖಂಡಿತವಾಗಿಯೂ ಮಾರುತ್ತೇನೆ." ಎಂದು ಹೇಳಿದ ಮೇಲೆ ಇನ್ನೂ ಕೆಲವು ಮಾತುಕಥೆಗಳು ನಡೆದು ಸದಾಶಿವರಾಯನು ಮುದ್ರಾಯಂತ್ರದ ಬೆಲೆಗಾಗಿ ಒಂದೂವರೆ ಸಾವಿರ ರೂಪಾಯಿಗಳ ಒಂದು 'ಚೆಕ್ಕನ್ನು' ಟಪ್ಪಾಲು ಮೂಲಕ ಕಳುಹಿಸಿ ಕೊಡುವುದೆಂಬುದಾಗಿ ನಿಶ್ಚಿತವಾಯಿತು. ಈ 'ಚೆಕ್ಕು' ದೊರೆತೊಡನೆಯೇ ಮುದ್ರಾಯಂತ್ರವನ್ನು ಸದಾಶಿವರಾಯನಿಗೆ ವಹಿಸಿಕೊಡುವುದಾಗಿಯೂ ನಿರ್ಣಯವಾಯಿತು. ಆ ಮೇಲೆ ಬ್ರಿತ್ ಹ್ಯಾಟ್ ಧೊರೆಯು ಕರ್ನಾಟಕ ಮುದ್ರಾಯಂತ್ರದ ವಿಕ್ರಯಾರ್ಥದ ಒಂದು ರಶೀದಿಯನ್ನು ಉಲ್ಲೇಖಿಸಿ ಅದನ್ನು ಸ್ಟಾಂಪ್ ಮತ್ತು ಮೊಹರು ಯುಕ್ತಗೊಳಿಸಿದನು. ಉಪಸ್ಥಿತ ಬಂಧುಬಾಂಧವರ ಪೈಕಿ ಕೆಲವರು ಅದರಲ್ಲಿ ಸಾಕ್ಷಿ ಹಾಕಿದರು. ಬ್ರಿತ್ ಹ್ಯಾಟ್ ಧೊರೆಯು ಇನ್ನೊಮ್ಮೆ ಫ್ರೆಂಚ್ ಭಾಷೆಯಲ್ಲಿ ಮಾತನಾಡತೊಡಗಿದನು. ವಿಶ್ವಂಭರರಾಯನು ಫ್ರೆಂಚ್ ಭಾಷೆಯ ಅನುಭವವು ಚೆನ್ನಾಗಿದ್ದುದರಿಂದ ಬ್ರಿತ್ ಹ್ಯಾಟ್ ಧೊರೆಯ ಮಾತುಗಳೆಲ್ಲವನ್ನೂ ಭಾಷಾಂತರಿಸಿ ಸದಾಶಿವರಾಯನಿಗೆ ಹೇಳತೊಡಗಿದನು, "ನೀವು ಕಳುಹಿಸುವ 'ಚೆಕ್ಕು' ನನಗೆ ನಾಳೆಯೇ ಪ್ರಾತಃಕಾಲದಲ್ಲಿ ದೊರೆತರೆ ಮುದ್ರಾಯಂತ್ರವು ನಾಳೆ ಅಪರಾಹ್ನವೇ ನಿಮ್ಮ ಸ್ವಾಧೀನವಾಗುವುದು. ಆದುದರಿಂದ 'ಚೆಕ್ಕನ್ನು' ಇದೇ ರಾತ್ರಿ ಟಪ್ಪಾಲಿಗೆ ಹಾಕುವ ಪ್ರಯತ್ನಮಾಡಿರಿ. ನಾಳೆ ಪ್ರಾತಃಕಾಲದಲ್ಲಿ ನಿಮ್ಮ 'ಚೆಕ್ಕು' ದೊರೆತ ಕೂಡಲೇ ಮುದ್ರಾಯಂತ್ರವನ್ನು ನಿಮ್ಮ ಸ್ವಾಧೀನಪಡಿಸುವ ವ್ಯವಸ್ಥೆಯನ್ನು ಮಾಡಿ ನಾನು ಅಪರಾಹ್ನದೊಳಗೆ ಕುದುರೆ ಮುಖ ಬಿಟ್ಟುಕೊಳ್ಳುವೆನು. ನೀವು ಚೆಕ್ಕನ್ನು ಕಳುಹಿಸಲು ವಿಳಂಬಮಾಡಿದರೆ ಮುದ್ರಾಯಂತ್ರವು ನಿಮ್ಮ ಸ್ವಾಧೀನವಾಗಲು ವಿಳಂಬವಾಗುವುದು"

ಸದಾಶಿವರಾಯನು "ಒಳ್ಳೇದು, ನಾನು ಮನೆಗೆ ಹೋದೊಡನೆಯೇ ಒಂದು ಚೆಕ್ಕನ್ನು ಬರೆದು ಟಪ್ಪಾಲಿಗೆ ಹಾಕುವೆನು. ಆದರೆ ಚೆಕ್ಕನ್ನು ಯಾರ ಹೆಸರಲ್ಲಿ ಕೊಡಲಿ?" ಎಂದು ಪ್ರಶ್ನಿಸಿದನು.

ಬ್ರಿತ್ ಹ್ಯಾಟ್ ಸಾಹೇಬನು 'ವಿಶ್ವಂಭರ ರಾಯರ ಹೆಸರಲ್ಲೇ ಕೊಟ್ಟು ಬಿಡಿ. ವಿಶ್ವಂಭರರಾಯರು ನನ್ನ ನಂಬಿಕೆಯ ಮಿತ್ರರಾಗಿರುವರು. ಆದರಿಂದ ಏನೂ ತೊಂದರೆಯಾಗದು.' ಎಂದನು. ಸದಾಶಿವರಾಯನು ಇದಕ್ಕೊಪ್ಪಿ ಅಲ್ಲಿಂದ ಹೊರಟನು. ಪಥದಲ್ಲಿ ನಡೆದು ಹೋಗುತ್ತಿರುವಾಗ ಭಾವಿಸತೊಡಗಿದನು. "ಬ್ರಿತ್ ಹ್ಯಾಟ್ ಧೊರೆಗಳು ನಿಜವಾಗಿಯೂ ಉದಾರ ಸ್ವಭಾವದವರೆನ್ನಬೇಕು. ನಾನಾರೆಂದು ಅವರಿಗೆ ಸರಿಯಾಗಿ ಗೊತ್ತಿಲ್ಲದಿದ್ದರೂ ಹಣವು ದೊರೆಯುವ ಮುಂಚೆಯೇ ಮುದ್ರಾಯಂತ್ರವನ್ನು ನನ್ನ ಹೆಸರಲ್ಲಿ ಮಾಡಿಬಿಟ್ಟರಲ್ಲ! ದೊಡ್ಡವರ ಹೃದಯವು ಶುದ್ಧವಾದುದೆಂಬುದಕ್ಕೆ ಇದೇ ಯೋಗ್ಯ ನಿದರ್ಶನವು"

— ೬ —

ಸದಾಶಿವರಾಯನು ಆನಂದ ಶರಧಿಯಲ್ಲಿ ಮುಳುಗಿದನು. ಐದುಸಾವಿರ ರೂಪಾಯಿ ಕ್ರಯದ ಮುದ್ರಾಯಂತ್ರವನ್ನು ಬರೇ ಒಂದೂವರೆ ಸಾವಿರ ರೂಪಾಯಿಗಳಿಗೆ ಕೊಂಡುಕೊಂಡದ್ದರಿಂದ ತುಂಬಾ ಲಾಭವಾಯಿತೆಂಬದಾಗಿ ಭಾವಿಸಿ ಭಾವಿಸಿಯೇ ಆತನಿಗೆ ಹೊಟ್ಟೆ ತುಂಬಿತು. ಊಟವಾಗಲೀ ಫಲಾಹಾರವಾಗಲೀ ಆತನಿಗೆ ಬೇಡವಾಯಿತು. ಊಟಕ್ಕೆ ಕುಳಿತಾಗಲೂ ಮುದ್ರಾಯಂತ್ರದ ಕುರಿತಾಗಿ ಕಲ್ಪನೆ!! ಅತ್ತಿತ್ತ ಹೋಗುವಾಗಲೂ ಮುದ್ರಾಯಂತ್ರದ ವಿಷಯದಲ್ಲೇ ಭಾವಿಸುವನು!!! ಆತನು ಅಷ್ಟರಲ್ಲೇ ತೃಪ್ತನಾಗಲಿಲ್ಲ. ತಾನು ಒಂದು ಮುದ್ರಾಯಂತ್ರವನ್ನು ಅಲ್ಪ ಬೆಲೆಗೆ ಕೊಂಡುಕೊಂಡು ತುಂಬಾ ಲಾಭಹೊಂದಿರುವೆನೆಂಬ ಸಂಗತಿಯನ್ನು ತನ್ನ ಆತ್ಮೀಯ ಸ್ವಜನರಿಗೂ ಬಂಧುಬಾಂಧವರಿಗೂ ತಿಳಿಸಬೇಕೆಂಬದಾಗಿ ಬಗೆದು ಕೆಲವು ಪತ್ರಗಳನ್ನು ಬರೆದಿಟ್ಟನು. ಇದರೊಡನೆ ಒಂದು 'ಚೆಕ್ಕ'ನ್ನು ವಿಶ್ವಂಭರ ರಾಯನ ಹೆಸರಲ್ಲಿ ಬರೆದು ಒಂದು ಕವರಿನಲ್ಲಿ ಅದನ್ನು ಮುಚ್ಚಿಟ್ಟನು. ಆ ಮೇಲೆ ಟಪ್ಪಾಲಿಗೆ ಹಾಕಬೇಕಾದ ಎಲ್ಲಾ ಪತ್ರಗಳನ್ನು 'ಚೆಕ್ಕು' ಇರುವ ಕವರನ್ನೂ ಒಂದು ಸಣ್ಣ ಚೀಲದೊಳಕ್ಕೆ ಹಾಕಿ ಒಂದು ಮೇಜಿನ ಮೇಲಿಟ್ಟು ತನ್ನ ಚಾಕರನಾದ ವಿಟ್ಟಲನನ್ನು ಕರೆದು 'ವಿಟ್ಟಲಾ, ಈ ಚೀಲದೊಳಗಿರುವ ಪತ್ರಗಳೆಲ್ಲವನ್ನೂ ಇಂದು ರಾತ್ರಿಯಲ್ಲಿಯೇ ಟಪ್ಪಾಲಿಗೆ ಹಾಕಬೇಕು, ಏಕೆಂದರೆ ಅದರಲ್ಲಿ ನಾಳೆ ಪ್ರಾತಃಕಾಲದೊಳಗೆ ತಲಪಬೇಕಾದ ಕೆಲವು ಪತ್ರಗಳಿವೆ. ಆದುದರಿಂದ ಜಾಗ್ರತೆಯಿಂದ ಹಾಕಿಬಿಡು" ಎಂದನು. ವಿಟ್ಟಲನು 'ಅಪ್ಪಣೆಯಂತೆ ವರ್ತಿಸುವೆನು' ಎಂದುತ್ತರವಿತ್ತನು.

ಊಟಮಾಡುವ ಇಚ್ಛೆಯಿಲ್ಲದಿದ್ದರೂ ಸದಾಶಿವರಾಯನು ಎಲೆಯ ಮೇಲೆ ಬಡಿಸಲ್ಪಟ್ಟ ಸ್ವಲ್ಪ ಅನ್ನವನ್ನೂ ಸ್ವಲ್ಪ ಪದಾರ್ಥವನ್ನೂ ಸ್ವೀಕರಿಸಿ, ಊಟ ಮುಗಿಸಿ, ಕೈತೊಳೆದು ಶಯನ ಮಾಡಿದನು.

ಆ ರಾತ್ರಿ ಸದಾಶಿವರಾಯನಿಗೆ ಸರಿಯಾಗಿ ನಿದ್ದೆ ಹತ್ತಲಿಲ್ಲ. ತಾನು ಕೊಂಡುಕೊಂಡ ಮುದ್ರಾಲಯದ ವಿಷಯವಾಗಿ ಯೋಚಿಸತೊಡಗಿದನು. "ಮುದ್ರಾಯಂತ್ರವನ್ನು ಆ ಭವನದಲ್ಲಿ ಇರಿಸಬಾರದು. ಅದನ್ನು ಅಲ್ಲಿಂದ ಸ್ಥಾನಾಂತರಗೊಳಿಸುವುದು ಉತ್ತಮವು. ಮುದ್ರಾಯಂತ್ರದ ಕೆಲಸಕ್ಕೆ ಈಗ ಇರುವ ಗೃಹವು ಅಷ್ಟೊಂದು ಯೋಗ್ಯವಾದುದಲ್ಲ. ಮುದ್ರಾಯಂತ್ರವನ್ನು ಪರಿಷ್ಕರಿಸಗೊಳಿಸಬೇಕು. ನಾನಾ ಪರಿಚಿತಸ್ಥಾನಗಳಿಂದ ಮುದ್ರಾಯಂತ್ರಕ್ಕೆ ಕೆಲಸವು ಒದಗುವಂತೆ ವ್ಯವಸ್ಥೆಯನ್ನು ಮಾಡಿಸಬೇಕು. ಆ ಮೇಲೆ ಲಾಭದ ವಿಷಯ ಹೇಳಬೇಕೆ? ಇದೇ ರೀತಿಯಲ್ಲಿ ಸುಖದ ಯೋಚನೆಯು ಆತನ ಮನಸ್ಸಿನಲ್ಲಿ ಉದಿತವಾಯಿತು. ಮನುಷ್ಯನು ಯಾವಾಗ ಸುಖದ ಸ್ವಪ್ನವನ್ನು ನೋಡುವನೋ ಆಗ ಅದರ ಸೂಚನೆಯೂ ಆತನ ದೃಷ್ಟಿಯಲ್ಲಿ ಕಾಣಬರುವುದು. ಮುದ್ರಾಲಯದ ಸುಂದರ ಮೂರ್ತಿಯು ಆತನ ದೃಷ್ಟಿಯ ಮುಂದೆ ನರ್ತನ ಮಾಡತೊಡಗಿತು. ಸದಾಶಿವರಾಯನು ಇಡೀ ರಾತ್ರಿ ತನ್ನ ಮುದ್ರಾಲಯದ ಕುರಿತಾಗಿಯೇ ಯೋಚಿಸುತ್ತಾ ಶಯನ ಮಾಡಿರುವುದರಿಂದ ರಾತ್ರಿಯು ಕಳೆದು ಹೋದುದು ಆತನಿಗೆ ತಿಳಿಯಲಿಲ್ಲ. ಆಗ ಕತ್ತಲೆಯು ಹೋಗಿ ಬೆಳಕಾಯಿತು. ಸದಾಶಿವರಾಯನು ಶಯನಮಾಡಿದ ಕೋಣೆಯಲ್ಲೂ ಬೆಳಕು ಬಂದಿತು. ಇನ್ನು ಮಲಗಿರುವುದು ಹೇಗೆ? ಆಗ ಹಾಸಿಗೆಯಿಂದ ಎದ್ದು, ಮುಖವನ್ನು ತೊಳೆದುಕೊಂಡು ಬಹಿರ್ಗತನಾದನು. ಪಥದಲ್ಲಿ ತನಗೆ ಸಿಕ್ಕಿದ ಗೆಳೆಯರೊಡನೆಲ್ಲಾ ತನ್ನ ಮುದ್ರಾಯಂತ್ರದ ವಿಷಯವಾಗಿ ಮಾತನಾಡಿದನು. ಅವರೆಲ್ಲರಿಗೂ ಸಂತೋಷವಾಯಿತು.

— ೭ —

ಮರುದಿನ ಅಪರಾಹ್ನಕಾಲದಲ್ಲಿ ಸದಾಶಿವರಾಯನು ಮುಂಚಿನ ದಿವಸ ವಿಶ್ವಂಭರರಾಯನು ಕೊಟ್ಟು ತಿಕ್ಕದ ಪುಸ್ತಕಗಳನ್ನು ಬ್ರಿತ್ ಹ್ಯಾಟ್ ಧೊರೆಗಳಿಂದ ಪ್ರದತ್ತವಾದ ರಶೀದಿಯನ್ನೂ ಹಿಡಿದುಕೊಂಡು ಕಲ್ಯಾಣಪುರಕ್ಕೆ ಬಂದು ಕರ್ನಾಟಕ ಮುದ್ರಾಲಯವನ್ನು ಪ್ರವೇಶಿಸಿ ಪರಿಚಾಲಕರು ಕೂತುಕೊಳ್ಳುವ ಸ್ಥಾನದಲ್ಲಿ ಕುಳಿತುಕೊಂಡು ತನ್ನ ಯಜಮಾನಿಕೆಯನ್ನು ಕರ್ಮಚಾರಿಗಳಿಗೆ ಪ್ರದರ್ಶಿಸಲು ಪ್ರಾರಂಭಿಸಿದನು. 'ನಾನೀಗ ಈ ಮುದ್ರಾಲಯದ ಪರಿಚಾಲಕನು.' ಎಂಬದಾಗಿ ಕರ್ಮಚಾರಿಗಳೊಡನೆ ಹೇಳಿದನು. "ನನ್ನ ಆಜ್ಞಾನುಸಾರವಾಗಿ ನೀವು ಇನ್ನು ಮುಂದೆ ಕಾರ್ಯಗಳನ್ನು ಮಾಡಬೇಕು." ಎಂದು ಕರ್ಮಚಾರಿಗಳಿಗೆ ಅವನ ಆಜ್ಞೆಯಾಯಿತು. ಮುದ್ರಾಲಯದಲ್ಲಿ ಕೆಲಸಮಾಡುತ್ತಿರುವ ಕರ್ಮಚಾರಿಗಳಿಗೆಲ್ಲ ಆಶ್ಚರ್ಯವಾಯಿತು. ಅವರು ಆತನನ್ನೇ ನೋಡುತ್ತಾ ಕುಳಿತುಕೊಂಡರು. ಹೀಗೆಯೇ ಹತ್ತಿಪ್ಪತ್ತು ನಿಮಿಷಗಳು ಕಳೆದುವು. ಆಗ ಕರ್ಮಚಾರಿಗಳಲ್ಲೊಬ್ಬನು ಸದಾಶಿವರಾಯನನ್ನು ಕುರಿತು "ನಿಮ್ಮ ಮರುಳುತನವನ್ನು ತೋರಿಸುವುದಕ್ಕೆ ಬೇರೆಲ್ಲಿಯೂ ಸ್ಥಾನವು ದೊರೆಯಲಿಲ್ಲವೇ? ನೀವೀಗ ಸುಮ್ಮನಿದ್ದರಾಯಿತು, ಇಲ್ಲವಾದರೆ ಈಗಲೇ ನಿಮ್ಮ ಕುತ್ತಿಗೆ ಹಿಡಿದು ದೂಡುವೆನು" ಎಂದನು.

ಸದಾಶಿವರಾಯನು "ಮುದ್ರಾಲಯವೀಗ ನನ್ನದು. ನೀವೆಲ್ಲರೂ ನನ್ನ ಆದೇಶಾನುಸಾರವಾಗಿ ನಡೆಯಬೇಕು. ಜಾಗ್ರತೆಯಿಂದ ಮಾತನಾಡು" ಎಂದು ಹೇಳಿದನು.

ಕೂಡಲೇ ಆ ಕರ್ಮಚಾರಿಯು ಸಮೀಪವಿದ್ದ ಒಂದು ಮನೆಗೆ ಹೋಗಿ ಅಲ್ಲಿಂದ ಒಬ್ಬ ಶ್ರೀಮಂತನಾದ ಯುವಕನನ್ನು ಕರೆದುಕೊಂಡು ಬಂದನು. ಯುವಕನು ಕೈಯೊಳಗೆ ಒಂದು ದೊಣ್ಣೆಯನ್ನು ಹಿಡಿದುಕೊಂಡು ಬಂದು "ಅಯ್ಯಾ, ನೀವಾರು? ನೀವಿಲ್ಲಿಗೇಕೆ ಬಂದುದು?" ಎಂದು ಪ್ರಶ್ನಿಸಿದನು.

"ನಾನೀಗ ಈ ಮುದ್ರಾಲಯದ ಪರಿಚಾಲಕನು. ನಾನಿದನ್ನು ಒಂದೂವರೆ ಸಾವಿರ ರೂಪಾಯಿಗಳಿಗೆ ಕೊಂಡುಕೊಂಡೆನು. ನಾನಿದನ್ನು ಪಡೆದುಕೊಂಡ ಒಪ್ಪಿಗೆ ಪ್ರದತ್ತವಾದ ರಶೀದಿಯು ಇಲ್ಲಿದೆ ನೋಡಿರಿ. ಮತ್ತು ಮುದ್ರಾಲಯಕ್ಕೆ ಸಮ್ಮಂಧಪಟ್ಟ ಲೆಕ್ಕಪತ್ರಗಳೂ ಇಲ್ಲವೆ ನೋಡಿರಿ. ನಾನೀಗ ಇದರ ಪರಿಚಾಲಕನೆಂಬುದು ನಿಮಗಿನ್ನೂ ತಿಳಿಯಲಿಲ್ಲವೇ? ಈ ಮುದ್ರಾಲಯವು ಇಂದಿನಿಂದ ನನ್ನದಾಯಿತು ಎಂದು ನಿಮಗೀಗ ತಿಳಿದಂತಾಯಿತಲ್ಲವೇ?" ಎಂದು ಸದಾಶಿವರಾಯನು ಉತ್ತರವಿತ್ತನು.

ಅದಕ್ಕೆ ಯುವಕನು "ಆಶ್ಚರ್ಯವಿದು. ಮುದ್ರಾಲಯದ ಅಧಿಕಾರಿಯು ನಾನು. ನಿಮ್ಮೊಡನೆ ಇರುವ ರಶೀದಿಯು ಬ್ರಿತ್ ಹ್ಯಾಟ್ ಧೊರೆಯು ಕೊಟ್ಟದ್ದು. ಮುದ್ರಾಲಯದ ಲೆಖ್ಖಪತ್ರಗಳಲ್ಲಿ ಯಾವನೋ ಒಬ್ಬ ಅಪರಿಚಿತ ವ್ಯಕ್ತಿಯು ಬರೆದಿದೆ. ಇದರಲ್ಲಿ ನಮ್ಮ ಮುದ್ರಾಲಯದ ಕರ್ಮಚಾರಿಯ ಬರಹವೇನೂ ಇಲ್ಲ. ನನ್ನ ಮುದ್ರಾಲಯವನ್ನು ಬ್ರಿತ್ ಹ್ಯಾಟ್ ಧೊರೆಯು ನಿಮ್ಮ ಹೆಸರಲ್ಲಿ ವಿಕ್ರಯ ಮಾಡುವುದೆಂದರೆ ಹೇಗೆ? ನಿಮಗೇನಾದರೂ ಭ್ರಾಂತಿ ಹಿಡಿದಿದೆಯೇ? ನಿಮ್ಮ ಮರುಳುತನವನ್ನು ತೋರಿಸುವುದಕ್ಕೆ ನಿಮಗೆ ಇದೊಂದೇ ಸ್ಥಳವೇ? ಹುಚ್ಚರಂತೆ ವರ್ತಿಸಬೇಡಿರಿ. ನೋಡು ಮಾನ ನೀವು ನಮ್ಮಂತೆ ತೋರುತ್ತೀರಿ. ಇಲ್ಲವಾದರೆ ನಿಮಗೆ ಇಷ್ಟರಲ್ಲೇ ಬುದ್ಧಿ ಕಲಿಸುತ್ತಿದ್ದೆನು. ನೀವೀಗ ಒಳ್ಳೇ ಮಾತಿನಿಂದ ಇಲ್ಲಿಂದ ಹೊರಟುಹೋದರಾಯಿತು. ಇಲ್ಲದಿದ್ದರೆ ಈಗಲೇ ಪೋಲೀಸಿನವರನ್ನು ಕರೆಯುತ್ತೇನೆ" ಎಂದು ಹೇಳಿದನು. ಹೀಗೆಯೇ ಅವರಿಬ್ಬರೊಳಗೂ ವಿವಾದವುಂಟಾಗಿ ಆ ಸ್ಥಳದಲ್ಲಿ ಪೋಲೀಸಿನವರು ಒಂದೇ ತೀರಬೇಕಾಯಿತು. ಪೋಲೀಸು ಇನ್ಸ್‌ಪೆಕ್ಟರನು ಇವರಿಬ್ಬರ ಹೇಳಿಕೆಯನ್ನು ಸಂಪೂರ್ಣವಾಗಿ ಕೇಳಿ ಸದಾಶಿವರಾಯನನ್ನು ಕುರಿತು "ಮಹಾಶಯಾ, ನೀವು ನಿಜವಾಗಿಯೂ ವಂಚಕರಿಂದ ಮೋಸ ಹೋಗಿರುವಿರಿ. ಈ ಮುದ್ರಾಲಯವು ನಿಮ್ಮದೇ ಆಗಿದೆ. ಇವರನ್ನು ನಾನು ಬಹು ಸಮಯದಿಂದಲೂ ಬಲ್ಲೆನು. ನಿಮಗೆ ವಂಚಕರು ವಂಚಿಸಿರುವರು" ಎಂದನು.

— ೮ —

ಸದಾಶಿವರಾಯನು ಆಗ ತಲೆಯ ಮೇಲೆ ಕೈಯಿಟ್ಟು ಅಲ್ಲಿಯೇ ಕುಳಿತುಕೊಂಡನು. ಇನ್ಸ್‌ಪೆಕ್ಟರನೊಡನೆ ಸಮಸ್ತ ವೃತ್ತಾಂತವನ್ನೂ ಆಗ ಆತನು ಹೇಳಬೇಕಾಯಿತು. ಆತನು ಇಡೀ ಜೀವಮಾನದಲ್ಲಿ ಸಂಪಾದಿಸಿದ ದ್ರವ್ಯವು ವಂಚಕರಿಂದ ಒಂದೇ ದಿನದೊಳಗೆ ಅಪಹೃತವಾಯಿತು! ಆದರಿಂದ ಆತನಿಗೆ ವಜ್ರಾಘಾತವಾದಂತಾಯಿತು.

ಸಶೇಷ.

ESTABLISHED 1876.

M. Ganapaya & Sons,

AYURVEDIC PHYSICIANS.

Car Street, MANGALORE, S. Kanara.

(೫೮ ವರುಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ — ಔಷಧಗಳು.) —

1. ಅಶೋಕಾರಿಷ್ಟ ಮತ್ತು ಮಾತ್ರೆ—

ಹೆಂಗಸರ ಮುಟ್ಟುದೋಷಗಳು, ಮುಟ್ಟುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಮೂರ್ಛೆ, ಮೂಲವ್ಯಾಧಿ, ಬಿಳಿಜ್ವರ, ರಕ್ತಹೀನತೆ, ಕೈಕಾಲು ಸೆಳೆತ, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರವಾಗಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತಹ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರೈಸುವುದು.

ಒಂದು ಬಾಟಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗಳ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣಿ—

ಗಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ಕ್ಷಣಮಾತ್ರದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟುಬರುವ ಜ್ವರ, ಚಾತುರ್ಥಿಕ ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲಿಕ್ಷಾರದಿಂದ ಬಾಧಿಸಲ್ಪಟ್ಟು ಹಲವುತರದ ಔಷಧಿಗಳನ್ನು ಉಪಯೋಗಿಸಿ, ಗುಣಹೊಂದದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ ಬಾಟ್ಲಿಯೊಂದಕ್ಕೆ 1-6-0, 3 ಬಾಟ್ಲಿಗೆ 4-2-0.

ಇವುಗಳಲ್ಲದೆ ಮಲೇರಿಯಾಗುಟಿಕೆ, ಜ್ವರಗಡ್ಡೆಯ ಮೇಲೆ ಸ್ನಿಗ್ಧದ ಮಸಿ, ಬಾಲಕೃತ ಗುಟಿಕೆ, ಪಾಚಕರಾಜ ಗುಟಿಕೆ, ಇಚ್ಛಾಭೇದಿ ಗುಟಿಕೆ, ಚ್ಯವನ ಪ್ರಾಶಾವಲೇಹ, ಧಾತುಪುಷ್ಟಿ ಲೇಹ, ಚಂದನಾಸವ ಮತ್ತು ಮಾತ್ರೆಗಳು ಇನ್ನೂ ಮೊದಲಾದ ಸಮಸ್ತ ಔಷಧಗಳೂ ದೊರೆಯುವವು. ಹೆಚ್ಚಿನ ಸಮಾಚಾರಕ್ಕೆ ಕೆಟಲಾಗ್ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಬಿಚ್ಛೆಯುಳ್ಳವರಿಗೆ ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆದ ಸಮಯವನ್ನು ಬರೆದು ಕಳುಹಿಸಿ. ಭವಿಷ್ಯವನ್ನು ಕುರಿತಾದ ಐದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. ೧; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ ೪ ಮಾತ್ರ; ಪ್ರತಿ ತಿಂಗಳ ಕಾಲಂಕುಶ ವಿಚಾರವುಳ್ಳ ಒಂದು ವರುಷದ ಜಾತಕ ಫಲ ರೂ. ೩; ಐದು ವರ್ಷದ ಫಲ ರೂ. ೭||; ಪ್ರತಿ ಪಕ್ಷದ ವಿಚಾರವುಳ್ಳ ಒಂದು ವರ್ಷದ ಫಲ ರೂ. ೧೦. ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ರೂ. ೩ ಟ. ಬ. ಆಣೆ ೪; ನಿಮಗಾಗಿಯೇ ಬೇರೆ ಜಾದಾ ತಾಯಿತಕ್ಕೆ ರೂ. ೫೦.

ಆಂಧ್ರ ಪತ್ರಿಕೆ—(ತೆಲುಗು ದೈನಿಕ ಮಾಸಪತ್ರಿಕೆ) ಮದ್ರಾಸು ತಾ. 8-2-1924ರಲ್ಲಿ ಬರೆದುದು — ತಿರುತ್ತಾಣಿಯಲ್ಲಿನ ಹನುಮಾನ್ ಜ್ಯೋತಿಷಾಲಯದ ಪಂಡಿತರಾದ ವಿ. ಕೆ. ಶತಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. ಇದು 1923ನೇ ಇಸವಿ ನವಂಬರು ತಾ. ೧೨ರಲ್ಲಿ ಪ್ರಕಟವಾಯಿತು. ಅದರಲ್ಲಿ ಮಹಾತ್ಮಾಜಿಯವರು 1924ನೇ ಇಸವಿ ಫೆಬ್ರವರಿ ತಾ. 5ರಲ್ಲಿ 7 ಘಂಟೆಗೆ ಕಾರಾವಾಸದಿಂದ ಮುಕ್ತರಾಗುವರೆಂದು ಬರೆದಿದ್ದರು. ಅದರಂತೆ ನಡೆದಿದೆ. ಇದರಿಂದ ಈ ಜೋಯಿಸರ ಅದ್ಭುತ ಶಕ್ತಿಸಾಮರ್ಥ್ಯಗಳನ್ನು ಸರ್ವರೂ ಪರೀಕ್ಷಿಸಲು ನಾವು ಶಿಫಾರಸು ಮಾಡುತ್ತೇವೆ.

V. K. Satagopachariar,
Hanuman Astrological Office,
TIRUTTANI, CHITTOOR DISTRICT,
Madras Presidency.

ವಿ. ಕೆ. ಶತಗೋಪಾಚಾರ್ಯರ್,
ಹನುಮಾನ್ ಎಸ್ಟ್ರಲೋಜಿಕಲ್ ಆಫೀಸ್,
ತಿರುತ್ತಾಣಿ, ಚಿತ್ತೂರು ಜಿಲ್ಲಾ,
ಮದರಾಸು ಸಂಸ್ಥಾನ.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

ಫೆರ್ರೋಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3—4—0 ಮಾತ್ರ.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುತ್ತೇವೆ.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು ಖಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು
ದೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡ.

ಇಂಡೋಬಾಮ್



ಹುಣ್ಣುಗಳಿಗೂ, ಗಾಯಕ್ಕೂ, ಗಂಟುನೋವಿಗೂ, ಬೇನೆಗಳಿಗೂ ಇಂಡೋಬಾಮ್ ದಿವ್ಯ ಔಷಧ. ಎರಡುಸಲ ಹಾಗಿಸಿದೊಡನೆ ಕೆಲವೇ ನಿಮಿಷಗಳೊಳಗೆ ಬೇನೆಯು ಮಾಯವಾಗುವುದು. ಇಂಡೋಬಾಮನ್ನು ಇವರಿಂದ ಪಡೆಯಿರಿ.

ಕರ್ನಾಟಕ ಬ್ರದರ್ಸ್,
ಮುಂಬಾಯಿ ನಂಬ್ರ 4.

ತ್ವರೆಮಾಡಿರಿ. ತ್ವರೆಮಾಡಿರಿ.

ಶಾಲಾ ಹುಡುಗರಿಗೂ ಇತರರಿಗೂ ಬೇಕಾಗುವಂತಹ ವಿದವಿಧದ ಕೋಪಿಂಗ, ಮತ್ತು ಸಾದ ಪೆನ್ಸಿಲುಗಳೂ, ರಬ್ಬರುಗಳೂ ವಿವಿಧ ಸ್ವಾಜಿನ ಸ್ಟಿಫನ ಇಂಕ್ ಬಾಟಲಿಗಳೂ, ಹೊಸತಾಗಿ ತಂದಿರುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಯಾರಾಗಿವೆ! ತಯಾರಾಗಿವೆ!!

ಎರಡನೇ ಮತ್ತು ಮೂರನೇ ದರ್ಜೆಯ

ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds ವಜ್ರಗಳು **Diamonds**

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಯೇರೋಪ್ಯಾಗಿ, ಹೊಂಟವರ್ಪಿನಿಂದ ತರಿಸುವ ವಜ್ರಗಳು — ಮಾರಾಟಕ್ಕಿವೆ. —

ಬೋಳ ಮಂಗೇಶ ರಾವ್ರು.
ಮಂಗಳೂರು

Diamonds! Diamonds!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality Selected) ಎನ್‌. ಸ್ಟೋರ್ನಿಸಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಕೊಳ್ಳಿರಿ

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ದೊಂಗರಕೇರಿ, ಮಂಗಳೂರು

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರವಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೦ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂ. ... ದಿಂದ ೫೦೦ ರೂಪಾಯಿ ವರೆಗೆ. ದೃಷ್ಟಿಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ, ಶೆಂಗಿನಮನೆ,
ಸಿದ್ದಾಪುರ ಪೋಸ್ಟು ಕಡೂರ್ ಜಿಲ್ಲಾ

Edited Printed & Published by V. S. Kamath at the M. T. A. SHARADA PRESS, MANGALORE.

ಚಂದಾ ನಿರ್ಣಯ:- ವರ್ಷ ಒಂದಕ್ಕೆ ರೂಪಾಯಿ 2-0-0 **Registered No. M. 489** ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ತೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ತರುಷವಾಯಿತೆ! ಮತ್ತೆ ವಿಷ್ಣವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತಿಳಿದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೩. ಮಂಗಳೂರು, ತಾ. ೨೪ನೇ ಶುಕ್ರವಾರ ಮೇ ೧೯೨೯. (24-5-'29.) ಸಂಚಿಕೆ ೨೧

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:- ಉಡುಪಿ.

Branches:—COONDAPOOR. Mangalore.
ಶಾಖೆ:- ಕುಂದಾಪುರ. ಮಂಗಳೂರು.

ನಿಯಮಿತ ಮೂಲಧನ ರೂ. 3,50,000-

1. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000-
2. ತೆತ್ತು ಬಂದ ಮೂಲಧನ ರೂ. 2,12,680-
3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 1,26,700-
4. ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 3,84,218-5-0-

Statement of Affairs of the Canara Banking Corporation Udipi, Limited as on 31st March 1929

CAPITAL AND LIABILITIES.

1	Paid up Capital	Rs. 2,20,870-0-0
2	Reserve and other contingent funds	„ 1,26,700-0-0
3	Deposits	„ 16,39,286-2-10
4	Due to Bankers on Overdraft and Loan a/c	„ 1,65,516-10-10
5	Sundry Persons' a/c for Bills for collection as per Contra	„ 30,503-1-7
6	Sundries including P & L items	„ 24,371-8-3
	Total	22,07,247-7-6

PROPERTY AND ASSETS

1	Premises Building, Furniture &c.	Rs. 9,215-0-0
2	Investments on G. P. Notes at cost	„ 3,84,218-5-0
3	Investments on Approved Securities	„ 18,06,750-14-7
4	Bills for collection as per Contra	„ 30,503-1-7
5	Cash in hand & with Bankers.	„ 23,332-8-11
6	Sundries	3,227-9-5
	Total	22,07,247-7-6.

Office of the Corporation, UDIPI, 26-4-'29.

N. ANANDA RAO, *Secretary*.

ಅಮೃತಾಂಜನ.

ಪ್ರಸಿದ್ಧವಾದ ತಲೆ ನೋವಿಗೆಯು ಔಷಧವಾದ ಅಮೃತಾಂಜನವು ಪ್ರತಿ ಮನೆಯಲ್ಲಿಯೂ ಇರತಕ್ಕ ಅತ್ಯಾವಶ್ಯಕವಾದುದು. ತಲೆನೋವು ವಾತದ ನೋವು, ಶೀತ ಇವುಗಳನ್ನು ಕ್ಷಣಕಾಲದಲ್ಲಿ ಗುಣಪಡಿಸುತ್ತದೆ. ಅಮೃತಾಂಜನವು ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ. ಕ್ರಯ ಡಬ್ಬಿಗೆ ಆಣೆ 10, ಟ. ಖ. ಬೇರೆ.

ರಿಂಗ್‌ವರ್ಮ್ ಮುಲಾಮು:— ರಿಂಗ್‌ವರ್ಮ್, ಕಜ್ಜಿ ಮೊದಲಾದ ಸರ್ವತರದ ಚರ್ಮರೋಗಗಳಿಗೂ, ರಾಮಬಾಣದಂತಹ ದಿವ್ಯ ಔಷಧಿ. ಚರ್ಮದ ರೋಗದ ಔಷಧಿಗಳಲ್ಲಿ ಮೊದಲನೆಯದು; ಮೂರೇ ದಿನಗಳೊಳಗೆ ಗುಣ. ಡಬ್ಬಿಗೆ ಆಣೆ 6, ಟ. ಖ. ಬೇರೆ.

ದಂತಮಂಜನ:— ಪರಿಮಳಯುಕ್ತವಾದ ಮತ್ತು ಅತ್ಯುತ್ತಮವಾದ ಈ ಹಲ್ಲು ಪುಡಿಯು ಹಲ್ಲುಗಳಿಂದುಂಟಾದ ರಕ್ತಸೋರುವುದನ್ನು ನಿಲ್ಲಿಸಿ, ಹಲ್ಲುಗಳನ್ನು ಬೆಳ್ಳಗೆ ಶುಭ್ರವಾಗಿರಿಸಿ, ಅವುಗಳನ್ನು ಬಲಪಡಿಸುವವು. ಡಬ್ಬಿಗೆ ಆಣೆ 2, ಟ. ಖ. ಬೇರೆ.

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

ಡೊಂಗರೆ
ಇವರ
ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪನಿ,

ಶ್ರೀ ಸರಸ್ವತೀ ಭಂಡಾರ.

1.	ಸಚಿತ್ರ ರಾಮಾಯಣ ಕಥಾ ಸಂಗ್ರಹ	1-8-0
2.	ಮದನಮೋಹನ ರಾಜ ಚರಿತ್ರೆ	0-12-0
3.	ಮಾಧವೀ ಕಂಕಣ	2-0-0
4.	ವಿದ್ಯಾಮಂಜರಿ ಕಥೆಗಳು	2-0-0
5.	ಮಹಾಭಕ್ತ ವಿಜಯ	3-0-0
6.	ಶೃಂಗಾರ ಶುಕಸಪ್ತತೀ ಕಥೆಗಳು	0-12-0
7.	ಮಂಡು ಘೋಷಾ	1-0-0
8.	ವಿಮಲಾ ದೇವಿ	1-12-0
9.	ಸೌಭಾಗ್ಯ ಲತಿಕ	0-8-0
10.	ಧರ್ಮ ಸಾಮ್ರಾಜ್ಯಂ	1-4-0
11.	ರಾಮ ರಾಜ್ಯ	0-12-0
12.	ಆನಂದ ಮಠ	1-12-0
13.	ಲಾವಣ್ಯ ತಿಲೋತ್ತಮೆ	0-12-0
14.	ವಚನ ಭಾರತ	1-8-0
16.	ಇಂಡಿಯನ್ ಪಿನಲ್ ಕೋಡ್	2-8-0
16.	ಕ್ರಿಮಿನಲ್ ಪ್ರೊಸೀಜರ್ ಕೋಡ್	3-0-0
17.	ಲ್ಯಾಂಡ್ ರೆವೆನ್ಯೂ ಕೋಡ್	1-0-0

ಈ ಪುಸ್ತಕಗಳಲ್ಲದೆ ನಮ್ಮಲ್ಲಿ ಇನ್ನೂ ಸಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಲಗ್ನಗಳಲ್ಲಿ ಇಡಲು ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಸಿಕ್ಕುತ್ತವೆ.

[illegible]

[illegible] ಪರಿಷತ್ತು — [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ೧೦ ಮತ್ತು [illegible] ನಡೆಯಿತು. [illegible] ರಾಷ್ಟ್ರೀಯ ಪದ್ಯಗಳನ್ನು [illegible] ಸ್ವಾಗತಾಧ್ಯಕ್ಷರಾದ ಶ್ರೀ [illegible]ರವರು ಸ್ವಾಗತ ಭಾಷಣ [illegible]. ತರುವಾಯ ಶ್ರೀ ಗಂಗಾಧರರಾಯರು ಸಿರಿದವರಿಗೆ [illegible] ಮಾಡಿ, ಅವರ ಯೋಗ್ಯತೆಯನ್ನು ವಿವರಿಸಿ [illegible]. [illegible] ಅಧ್ಯಕ್ಷರ ಭಾಷಣಕ್ಕೆ ಆರಂಭ [illegible]. ಭಾಷಣಕ್ಕೆ ಮೊದಲು ಕರ್ನಾಟಕ ಪ್ರೇಮಿಗಳಿಂದ ಬಂದಿದ್ದ ಸಂದೇಶಗಳನ್ನು ಓದಿ ಹೇಳಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ [illegible] ಕರ್ನಾಟಕವನ್ನು ಒಟ್ಟುಗೂಡಿಸುವ ಈ ಚಳವಳವನ್ನು ನಾನು ಅಭಿನಂದಿಸುತ್ತೇನೆ. ಒಂದೇ ಸ್ವಭಾವ, ಸಂಸ್ಕೃತಿ, ಆಕಾಂಕ್ಷೆಗಳುಳ್ಳ ಜನರನ್ನು ಬೇರೆ ಬೇರೆಯಾಗಿಡುವುದರಿಂದ ಆಳುವವರಿಗೆ ಸುಲಭವಾದರೂ ಜಾತಿಯ ಜೀವನವು ನಿಸ್ತ್ರಾಣವಾಗುವದು. ವಿಚಾರವಂತರಿಗೆ ಇದು ತಿಳಿದೋರದು. ಈಗಿನ ಪ್ರಾಂತರಚನೆಯು ಸರಿಯಾಗಿರುವುದಿಲ್ಲ. ಈಗಿನ ಪ್ರಾಂತರಚನಾ ಕ್ರಮದಿಂದ ಕನ್ನಡಿಗರು ಮುಂಬಾಯಿ, ಮದರಾಸು, ಹೈದರಾಬಾದ ಸಂಸ್ಥಾನಗಳಲ್ಲಿ ಹಂಚಿಹೋಗಿರುತ್ತಾರೆ. ಸರ್ವ ಪಕ್ಷೀಯ ಪರಿಷತ್ತಿನಲ್ಲಿ ಬರೆದ ರಾಜ್ಯಘಟನೆಯ ಯೋಜನೆಯು ಸರ್ವರ ಮನ್ನಣೆಗೂ ಪಾತ್ರವಾಗಿದೆ. ಭಾಷಾನುಗುಣವಾದ ಪ್ರಾಂತರಚನೆಯ ತತ್ವವನ್ನೇ ಇದು ಅನುಸರಿಸಿದೆ. ಕರ್ನಾಟಕ ಏಕೀಕರಣವು ಸಾಧ್ಯವಾಗಬೇಕಾದರೆ ನಾವು ಸ್ವರಾಜ್ಯವನ್ನು ಶೀಘ್ರವಾಗಿ ದೊರಕಿಸಿಕೊಳ್ಳಬೇಕು. ಈಗಿನ ಪರಕೀಯರ ಆಳುವಿಕೆಯಲ್ಲಿ ಇದು ಸಾಧ್ಯವಾಗಲಾರದು. ನಮ್ಮ ನಮ್ಮೊಳಗಿನ ವಿಭಾಗದಿಂದ ಅವರಿಗೆ ಹಿತವಾಗುವದು. ಸಂಯುಕ್ತ ಕರ್ನಾಟಕದ ಭಾವನೆಯನ್ನು ನಾವು ತ್ಯಜಿಸಬಾರದು. ಬ್ರಿಟಿಶ ಕರ್ನಾಟಕದೊಳಗಿನ ತೊಡಕು ಬಿಡಿಸಿದ ಮೇಲೆ ದೇಶೀಯ ಸಂಸ್ಥಾನಗಳೊಳಗಿನ ನಮ್ಮವರೊಡನೆ ನಾವು ಒಟ್ಟಾಗಬೇಕು. ಯಾವದಕ್ಕೂ ಇವೆಲ್ಲವನ್ನು ಸಾಧಿಸಿಕೊಳ್ಳಲು ಬ್ರಿಟಿಶ ಹಿಂದೂಸ್ಥಾನಕ್ಕೆ ಸ್ವರಾಜ್ಯವನ್ನು ದೊರಕಿಸುವದೇ ಮೂಲವಾಗಿದೆ. ಇದಕ್ಕಾಗಿ ಎಲ್ಲರೂ ಏಕ ಮನಸ್ಸಿನಿಂದ ಕೆಲಸ ಮಾಡಬೇಕು ಎಂದು ವಿವರಿಸಿದರು. ತದನಂತರ ವಿಷಯ ನಿಯಾಮಕ ಕಮಿಟಿಯ ಚುನಾವಣೆಯಾಯಿತು. ಹಲವು ಠರಾವುಗಳು ಮಂಜೂರಾದವು. ಕರ್ನಾಟಕ ಪ್ರಾಂತಕ್ಕೆ ಪ್ರತ್ಯೇಕ ಸ್ಥಾನವನ್ನು ಕೊಡಬೇಕೆಂದು ಶಿಫಾರಸು ಮಾಡಿದ್ದಕ್ಕೆ ನೆಹರು ವರದಿಗೆ ಧನ್ಯವಾದಗಳನ್ನು ಅರ್ಪಿಸಲಾಯಿತು. ಕರ್ನಾಟಕ ಏಕೀಕರಣದ ಪ್ರಯತ್ನಕ್ಕಾಗಿ ಎಸೆಂಬ್ಲಿಯಲ್ಲಿ ಠರಾವು ತಂದ ಡಾ| ಯು. ರಾಮರಾಯರನ್ನೂ ಸರ್ವ ಪಕ್ಷೀಯ ಪರಿಷತ್ತಿನಲ್ಲಿ ಈ ವಿಷಯವನ್ನು ತಂದ ಶ್ರೀ ದಿವಾಕರ ರಂಗರಾಯರನ್ನೂ ಅಭಿನಂದಿಸಲಾಯಿತು. ಕರ್ನಾಟಕದಲ್ಲಿನ ಸ್ಥಾನಿಕ ಸ್ವರಾಜ್ಯ ಸಂಸ್ಥೆಯವರು ತಮ್ಮ ಸೀಮೆಗಳಲ್ಲಿ ಕನ್ನಡ ಶಾಲೆಗಳನ್ನು ತೆರೆಯಬೇಕೆಂದೂ, ಕರ್ನಾಟಕ ಏಕೀಕರಣದ ಬಗ್ಗೆ ಪ್ರಯತ್ನಿಸುವವರಿಗೇನೇ ಕೌನ್ಸಿಲು ಮತ್ತು ಎಸೆಂಬ್ಲಿ ಚುನಾವಣೆ ಸಮಯ ಮತಗಳನ್ನು ಕೊಡಬೇಕೆಂದೂ, ಬಳ್ಳಾರಿಯ ಆದವಾನಿ, ಆಲೂರ ಮತ್ತು ರಾಯದುರ್ಗಗಳನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಆಡಳಿತಕ್ಕೆ ಸೇರಿಸಬೇಕೆಂದೂ, ಕರ್ನಾಟಕ ಏಕೀಕರಣ ಸಂಘಕ್ಕೆ ಒಂದು ಲಕ್ಷ ಸಭಾಸದರನ್ನು ಸೇರಿಸಬೇಕೆಂದೂ, ಇದರ ಉದ್ದೇಶಗಳನ್ನು ವಿವರಿಸಿ ಹೇಳಿ ಜನತೆಯನ್ನು ಎಚ್ಚರಿಸಲಿಕ್ಕೆ ಪ್ರಚಾರಕರ ವರ್ಗವನ್ನು ನೇಮಿಸಬೇಕೆಂದೂ, ನವಂಬರ ತಿಂಗಳಲ್ಲಿ ಏಕೀಕರಣ ಸಂಘದ ವಿಶಿಷ್ಟ ಸಭೆಯನ್ನು ನೆರವೇರಿಸಿ, ಕಾರ್ಯಗಳನ್ನು ಪರಿಶೀಲಿಸಬೇಕೆಂದೂ, ಮೂರು ಸಾವಿರ ಜನ ಸಂಖ್ಯೆಯುಳ್ಳ ಪ್ರತಿ ಹಳ್ಳಿಯಲ್ಲಿ ಕರ್ನಾಟಕ ಏಕೀಕರಣ ಶಾಖೆ ಮತ್ತು ವಾಚನಾಲಯಗಳನ್ನು ತೆರೆಯಬೇಕೆಂದೂ ಹಲವು ಠರಾವುಗಳು ಮಂಜೂರಾದುವಲ್ಲದೆ ಇನ್ನೂ ಹಲವು ನಿರ್ಣಯಗಳಾದವು.

೧೫ನೇ ಕರ್ನಾಟಕ ಸಾಹಿತ್ಯ ಪರಿಷತ್ತು — ಈ ಪರಿಷತ್ತು ತಾರೀಖು ೧೨ನೇ ದಿನ ಮಧ್ಯಾಹ್ನ ಎರಡು ಗಂಟೆಗೆ ಪ್ರಾರಂಭವಾಯಿತು. ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರರೇ ಇದರ ಅಧ್ಯಕ್ಷರಾಗಿದ್ದರು. ಸ್ವಾಗತಾಧ್ಯಕ್ಷರಾದ ಚೌಗುಲೆ ಅಣ್ಣಪ್ಪನವರ ಭಾಷಣವನ್ನು ಪ್ರೊ|. ಶ್ರೀಕಂಠಯ್ಯಂಗಾರರು ಓದಿದರು. ಅಧ್ಯಕ್ಷರ ಚುನಾವಣೆಯಾಯಿತು. ಆ ಮೇಲೆ ಪರಿಷತ್ಕಾರ್ಯದ ವಾರ್ಷಿಕ ವರದಿಯು ಓದಲ್ಪಟ್ಟಿತು. ಕನ್ನಡ ನಾಡಿನ ಹಲವು ಕನ್ನಡ ಸಾಹಿತ್ಯ ಭಕ್ತರು ಕಳುಹಿಸಿದ ಆಶೀರ್ವಾದದ ಸಂದೇಶಗಳು ಓದಲ್ಪಟ್ಟುವು. ಅಧ್ಯಕ್ಷರ ಭಾಷಣವಾದರೋ, ಸೊಗಸಿನಿಂದ ಕೂಡಿದುದೂ, ವ್ಯಕ್ತಿಮಧುರವಾಣಿಯಿಂದ ಯುಕ್ತವೂ ಆಗಿದ್ದಿತು. ಇದೇ ಪರಿಷತ್ತು ೧೪ ಮತ್ತು ೧೫ನೇ ತಾರೀಖುಗಳ ದಿನವೂ ನಡೆದು ಕೊನೆಗಂಡಿತು. ಈ ಪರಿಷತ್ತಿನಲ್ಲಿ ಮಂಜೂರಾದ ಮುಖ್ಯವಾದ ಠರಾವೆಂದರೆ ಮರಾಠಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಾಫೇಕರರವರು ಈ ಪರಿಷತ್ತಿಗೆ ಕಳುಹಿಸಿದ ಸಂದೇಶದಲ್ಲಿ, ಬೆಳಗಾವಿಯಲ್ಲಿ ಮರಾಠಿ ಸಾಹಿತ್ಯ ಸಮ್ಮೇಳನ ಆಗಬಾರದೆಂದು ಕನ್ನಡಿಗರು ಬಹಿಷ್ಕಾರವಾಗಿ ಆಕ್ಷೇಪಿಸುವರೆಂದು ಬರೆದುದನ್ನು ನಿರಾಕರಿಸಲಾಯಿತು. ಮತ್ತು ಮರಾಠಿ ಸಾಹಿತ್ಯ ಸಮ್ಮೇಳನವು ಬೆಳಗಾವಿಯಲ್ಲಿ ನಡೆಯುವದು ಅಪ್ರಸ್ತುತವೆಂದು ನಿರ್ಣಯಿಸಲಾಯಿತು.

ಕರ್ನಾಟಕ ಕವಿಗಳ ಸಮ್ಮೇಳನ—ಕರ್ನಾಟಕ ಕವಿ ಸಮ್ಮೇಳನವು ತಾರೀಖು ೧೪ನೇ ಬೆಳಿಗ್ಗೆ ಶ್ರೀ| ಬಿ. ಎಮ್. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೊದಲು ಸ್ವಾಗತಾಧ್ಯಕ್ಷರಾದ ಕವಿ ಘೂಷಣ ಭಟಗೇರಿಯವರ ಸ್ವಾಗತ ಭಾಷಣವಾಯಿತು. ಅಧ್ಯಕ್ಷರು ಕಾವ್ಯ, ಅದರ ಮಹತ್ವ, ಕವಿಗಳ ದಿವ್ಯ ಕರ್ತವ್ಯ, ತರುಣ ಕವಿಗಳಿಗೆ ಉಪದೇಶ, ಮೊದಲಾದವುಗಳ ಕುರಿತಾಗಿ ಭಾಷಣಮಾಡಿದರು. ಆ ದಿನವೂ ಮರುದಿನವೂ ಸಮ್ಮೇಳನಕ್ಕೆ ಬಂದ ಕವಿಗಳ ಒಂದೊಂದು ಕೃತಿಯೂ ಓದಲ್ಪಟ್ಟಿತು.

೩ನೆಯ ಕರ್ನಾಟಕ ಪತ್ರಿಕಾಕರ್ತರ ಪರಿಷತ್ತು — ಈ ಪರಿಷತ್ತು ತಾರೀಖು ೧೪-೧೫ರಲ್ಲಿ ಮುಂಬಾಯಿಯ ಬೊಂಬೈ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ವಿ.ಬ್ರೆಲ್ವಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತಾಧ್ಯಕ್ಷರಾದ ಡಾ ಸವಣೂರರು ತನ್ನ ಭಾಷಣದಲ್ಲಿ ಅಖಿಲ ಕರ್ನಾಟಕದಲ್ಲಿ ಒಂದು ಕನ್ನಡ ದೈನಿಕ ಪತ್ರಿಕೆಯಿರಬೇಕೆಂದೂ, ಒಂದು ಇಂಗ್ಲಿಷ ವಾರ ಪತ್ರಿಕೆಯೂ, ಒಳ್ಳೆಯ ಮಾಸಪತ್ರಿಕೆಯಾಗಲಿ, ತ್ರೈಮಾಸಿಕವಾಗಲಿ, ಹೊರಡಿಸಲ್ಪಡಬೇಕೆಂದೂ ನುಡಿದರು. ಅಧ್ಯಕ್ಷರ ಕಾಲೋಚಿತ ಭಾಷಣವೂ ನಡೆಯಿತು. ಕೊನೆಗೆ ಬೇರೆ ಬೇರೆ ಸರಕಾರದವರು ತಮ್ಮ ಪ್ರಕಟನಗಳನ್ನು ಪತ್ರಿಕೆಗಳಿಗೆ ತಿಳಿಸಬೇಕೆಂದೂ, ಅದರಂತೆ [illegible]ಗಳನ್ನು

[illegible] ಕರ್ನಾಟಕ [illegible] ಮುಖ್ಯ [illegible] ಪತ್ರಿಕೆಯ ಸಂಪಾದಕರಾದ [illegible] ತೀರ್ಮಾನಿಸಲಾಯಿತು.

೨ನೆಯ ಕರ್ನಾಟಕ ವರ್ತಕ ಪರಿಷತ್ತು —ವರ್ತಕ ಪರಿಷತ್ತು ತಾರೀಖು ೧೪ ನೆ ದಿನ ೩ ಘಂಟೆಗೆ ಪ್ರಾರಂಭವಾಯಿತು. ಸ್ವಾಗತಾಧ್ಯಕ್ಷರಾದ ರಾವ್ ಬಹದ್ದೂರ್ ಬಿ. ಎ. ಅಂಗೋಲರು ತಮ್ಮ ಭಾಷಣವನ್ನು ಓದಿದರು. ಅಧ್ಯಕ್ಷರಾದ ಬೆಂಗಳೂರಿನ ಶ್ರೀ ಸಾಹುಕಾರ [illegible]ಯವರ ಭಾಷಣವೂ ಚೆನ್ನಾಗಿ ನಡೆಯಿತು. ತದನಂತರ ಪರದೇಶಿ ಬಟ್ಟೆಯ ಮೇಲೆ ಸೀಳದಾ ಗಂಡಂತೆ ತೆರಹೊರಿಸಬೇಕೆಂದೂ, ಮುಂಬಾಯಿ ಮದರಾಸ ಕೌನ್ಸಿಲುಗಳಿಗೂ, ಎಸೆಂಬ್ಲಿಗೂ ಕರ್ನಾಟಕ ವರ್ತಕ ಸಂಘದವರು ಒಬ್ಬೊಬ್ಬ ಪ್ರತಿನಿಧಿಯನ್ನು ಕಳುಹಿಸಲು ಅನುವು ದೊರೆಯಬೇಕೆಂದೂ, ಸರಕಾರದವರು ಕರ್ನಾಟಕದಲ್ಲಿ ಕರ್ನಾಟಕದ ವ್ಯಾಪಾರದ ಅಭಿವೃದ್ಧಿಯ ಸಲುವಾಗಿ ವ್ಯಾಪಾರೀ ಶಾಲೆಗಳನ್ನೂ, ಔದ್ಯೋಗಿಕ ಶಾಲೆಗಳನ್ನೂ ತೆರೆಯಬೇಕೆಂದೂ, ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವಾಗಿ ವಿಭಾಗಿಸಬೇಕೆಂದೂ ಠರಾವುಗಳಾದವು.

ಐತಿಹಾಸಿಕ ವಸ್ತು ಪ್ರದರ್ಶನವು ತಾರೀಖು ೧೩ನೆಯ ದಿನ ಮುಂಜಾನೆ ೭|| ಘಂಟೆಗೆ ಮೈಸೂರು ಆರ್ಕಿಯಾಲಾಜಿಕಲ್ ಖಾತೆಯ ಎಮ್. ಎಚ್. ಕೃಷ್ಣಯ್ಯಂಗಾರರಿಂದ ತೆರೆಯಲ್ಪಟ್ಟಿತು. ವೃತ್ತಪತ್ರಿಕಾ ಪ್ರದರ್ಶನವು ಬೆಂಗಳೂರಿನ 'ವಿಶ್ವಕರ್ನಾಟಕ' ಪತ್ರಿಕೆಯ ಸಂಪಾದಕರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರಿಂದ ತಾರೀಖು ೧೪ನೇ ದಿನ ಬೆಳಿಗ್ಗೆ ತೆರೆಯಲ್ಪಟ್ಟಿತು.

ರಾಷ್ಟ್ರೀಯ ಧ್ವಜವು.

ನಿಯಮದಂತೆ ಮುಂದಿನ ಧ್ವಜಾರೋಹಣ ಸಮಾರಂಭವು ಈ ತಿಂಗಳ ೩ನೆಯ ತಾರೀಖಿನ ದಿವಸ ನಡೆಯಬೇಕಾದುದೆಂಬದನ್ನು ಕರ್ನಾಟಕಸ್ಥರಿಗೆ ನೆನಪುಗೊಡಲು ಈ ಪತ್ರವನ್ನು ಬರೆಯುತ್ತಿದ್ದೇನೆ. ಆ ದಿವಸ ಎಲ್ಲರೂ ಉತ್ಸಾಹದಿಂದ ಈ ಸಮಾರಂಭವನ್ನು ಜರುಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಾರ್ಚ ತಿಂಗಳಲ್ಲಿ ಧ್ವಜಾರೋಹಣ ಸಮಾರಂಭವು ೧೬ ಸ್ಥಳಗಳಲ್ಲಿ ನಡೆಯಿತು. ಎಪ್ರಿಲ್ ತಿಂಗಳಲ್ಲಿ ೨೨ ಸ್ಥಳಗಳಲ್ಲಿ ನಡೆದಿರುತ್ತದೆ. ಈ ಸಂಖ್ಯೆಯು ಸ್ವಲ್ಪ ಬೆಳೆದಿದ್ದರೂ ಇಷ್ಟಕ್ಕೆ ನಾವು ಸಮಾಧಾನಪಡಕೂಡದೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಪ್ರತಿ ಒಂದು ಊರಿನಲ್ಲಿಯೂ ಈ ಕಾರ್ಯವು ನಡೆಯುವುದು ಶ್ರೇಯಸ್ಕರವಲ್ಲವೇ? ಕನಿಷ್ಠಪಕ್ಷಕ್ಕೆ ಈ ಸಾರೆ ಅಂಕೆಯು ೫೦ಕ್ಕೆ ಮುಟ್ಟಬೇಕೆಂದು ನಾನು ಇಚ್ಛಿಸುತ್ತೇನೆ. ಕರ್ನಾಟಕಸ್ಥರು ಮನಸ್ಸಿನ ಮೇಲೆ ತೆಗೆದುಕೊಂಡರೆ ಇದಾವ ದೊಡ್ಡ ಕಾರ್ಯವು.

ಕರ್ನಾಟಕಸ್ಥರೇ! ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಡುವದಕ್ಕಾಗಿ ನಾನಾತರಹದ ಮತ್ತು ಕಲ್ಪನಾತೀತ ಕಾರ್ಯವನ್ನು ಮಾಡಬೇಕಾಗಿದೆ. ನಿಜವಾಗಿಯೂ ಸ್ವಾತಂತ್ರ್ಯವನ್ನು ನೀವು ಬಯಸುತ್ತಿದ್ದರೆ ಪ್ರಾರಂಭದಲ್ಲಿಯೇ ಹಿಂದೆಗೆದರೆ ಹೇಗೆ? ಇಂಥ ಸಣ್ಣಪುಟ್ಟ ಕಾರ್ಯಗಳಲ್ಲಿಯೇ ನಮ್ಮೆಲ್ಲರ ಹೃದಯದ ದಾಗೂ ಕರ್ತೃತ್ವ ಶಕ್ತಿಯ ಪರೀಕ್ಷೆಯಾಗುವದು. ಆದ್ದರಿಂದ ಕರ್ನಾಟಕಸ್ಥರೇ ಏಳಿರಿ! ರಾಷ್ಟ್ರಧ್ವಜವು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಹಾರಾಡುವಂತೆ ಮಾಡಿರಿ!

ಹುಬ್ಬಳ್ಳಿ, ೧೭-೫-೨೯. ನಾ. ಸು. ಹರ್ಡೀಕರ.

ನೋಟೀಸು.

ಮೂಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಸಮಸ್ತ ಓಟರರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ

ಶ್ರೀ ದೇವಸ್ಥಾನದ ಸ್ಕೀಮಿನ 45ನೇ ಕಲಂಪ್ರಕಾರ ವಿಭವ ಸಂವತ್ಸರದ ಕಾರ್ತಿಕ ಶು| ೧೫ನೆ ಅಂತ್ಯವಾಗುವ ವರ್ಷದ ವರ್ಷಾವಧಿ ಲೆಖ್ಖಗಳನ್ನು ಕೌನ್ಸಿಲರರ ರಿಪೋರ್ಟ ವ ಓಡಿಟರರ ರಿಪೋರ್ಟ ಸಹಾ ಅಂಗೀಕರಿಸಿ ಮಂಜೂರು ಮಾಡುವ ಬಗ್ಗೆ ಮೊಕ್ತೇಸರರನ್ನು ಚುನಾಯಿಸುವ ಬಗ್ಗೆ ಮತ್ತು ಈ ಕೆಳಗೆ ಕೊಟ್ಟ ವಿಷಯಗಳನ್ನು ತೀರ್ಮಾನಿಸುವ ಬಗ್ಗೆ ಇಲೆಕ್ಟರರ ಮಹಾಸಭೆಯು ಇದೆ 1929ನೇ ಇಸವಿ ಜೂನ ತಾ. 9ನೆ ರವಿವಾರ (ಶುಕ್ಲ ಸಂ|ರದ ಜ್ಯೇಷ್ಠ ಶು| ೩ಲ್ಲು) ಶ್ರೀ ದೇವಸ್ಥಾನದ ವಸಂತ ಮಂಟಪದಲ್ಲಿ ರಾತ್ರೆ ಘಂಟೆ 9ಕ್ಕೆ ಸೇರಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಸದರಿ ದಿನ ಸ್ಪಷ್ಟ ಸಮಯಕ್ಕೆ ಎಲ್ಲಾ ಓಟರರು ಹಾಜರಾಗಬೇಕಾಗಿ ವಿನಂತಿ.

ವಿಷಯಗಳು.

1 ಮಂಗಳೂರು ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮದ ಮೂಲ್ಕಿ ಶಾಖೆಗೆ ತಾ. 1—2—1929ರಿಂದ ಕೊಡತಕ್ಕ ಧರ್ಮಸಹಾಯ.

2 54ನೆ ಕಲಂಪ್ರಕಾರ ವಿದ್ಯಾಶಾಲೆ ವಗೈರೆಗಳಿಗೆ ಖರ್ಚನ್ನು ವಿಧಾಗಿಸಿಡುವ ವಿಷಯ.

3 ಈ ಮುಂಚೆ ಬಾಕಿ ಇದ್ದ ವಿಷಯಗಳು.

4 ಶ್ರೀ ದೇವಸ್ಥಾನದ ಮಹಾಸಂಪ್ರೋಕ್ಷಣೆ ಖರ್ಚಿನ ಕುರಿತು ವ ಇತರ ವಿಷಯಗಳು ಕೂಡಾ.

ಮೂಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ, ಮೂಲ್ಕಿ,
ತಾ. 21-5-1929.

U. V. Shenai,
Manager,
S. V TEMPLE MOOLKY.

ಉಡುಪಿ.

[illegible] ಮಹಾಸಭೆ—[illegible] ಕನ್ನಡ ಜಿಲ್ಲಾ [illegible] ಪರಿಷತ್ತು [illegible] ಉಡುಪಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ, [illegible] ಪ್ರೆಸಿಡೆಂಟರಾದ ಶ್ರೀ [illegible] ಅಧ್ಯಕ್ಷತೆಯ ಕೆಳಗೆ ಜಯಶೀಲವಾಗಿ ಜರಗಿತು. [illegible] ಸುಮಾರು ೧೦ ಘಂಟೆ ಸಮಯಕ್ಕೆ ಅಧ್ಯಕ್ಷರನ್ನು, ಇತರ ತಾಲೂಕುಗಳಿಂದ ಬಿಜ್ಜೈಸಿದ ಪ್ರತಿನಿಧಿಗಳನ್ನು ಬ್ಯಾಂಡ್ ವಾಲಗಾದಿ ಸಂಭ್ರಮದಿಂದ ಸ್ವಾಗತಮಾಡಿ, ಉಪಚಾರಗಳು ಮುಗಿದ ನಂತರ, ಕಾರ್ಯನಿರ್ವಾಹಕ ಮಂಡಳಿಯ ಸಭೆಯು ತೀರಿದ ತರುವಾಯ ಅಪರಾಹ್ನ ಸುಮಾರು ೨-೩೦ ಘಂಟೆಗೆ ಮಹಾಸಭೆಯು ಪ್ರಾರಂಭವಾಯಿತು. ಸಭಾರಂಭದಲ್ಲಿ ಸ್ವಾಗತಾಧ್ಯಕ್ಷರಾದ ಉಡುಪಿ ತಾಲೂಕು ಬೋರ್ಡ ಪ್ರೆಸಿಡೆಂಟ್ ಶ್ರೀ ಎಮ್. ರಾಮಯ್ಯ ಸೆಟ್ಟಿ ಸ್ವಾಗತ ಭಾಷಣವನ್ನು ಮಣಿಪಾಲದವರು ಓದಿ ಹೇಳಿದರು. ಅದರಲ್ಲಿ ಸ್ತ್ರೀ ವಿದ್ಯಾಭ್ಯಾಸದ ಅವಶ್ಯಕತೆ, ತರುಣ ಯುವಕರು ಕೃಷಿ ಮತ್ತು ಇತರ ಕೈಗಾರಿಕೆಗಳಲ್ಲಿ ಪ್ರವೃತ್ತಿಸುವಂತೆ ಅವರನ್ನು ಉತ್ತೇಜಿಸುವಿಕೆ, ಸಮಾಜಕ್ಕೊಂದು ಬ್ಯಾಂಕನ್ನು ಸ್ಥಾಪಿಸುವುದರ ಪ್ರಯೋಜನ, ಅಳಿಯ ಕಟ್ಟಿನ ತಿದ್ದುಪಡಿಯ ಕುರಿತು ಶ್ರೀ ಕೋಟ ರಾಮಕೃಷ್ಣ ಕಾರಂತರು ಕೌನ್ಸಿಲಿನಲ್ಲಿ ತರಲಿರುವ ಠರಾವಿನ ತೀವ್ರ ಖಂಡನೆ—ಇವೇ ಮೊದಲಾದ ವಿಷಯಗಳು ಅಡಕವಾಗಿದ್ದವು.

ಆ ಮೇಲೆ ಅಧ್ಯಕ್ಷರು ತಮ್ಮ ಭಾಷಣವನ್ನು ಓದಿ ಮುಗಿಸಿದರು. ಪರಿಷತ್ತುಗಳನ್ನು ಜರಗಿಸುವುದರಿಂದುಂಟಾಗುವ ಪ್ರಯೋಜನ, ಬಡರೈತರ ಕಷ್ಟ ಸಂಕಷ್ಟಗಳ ನಿವಾರಣೋಪಾಯ, ಮೂಲ್ಕಿಯಲ್ಲಿ ಸ್ಥಾಪಿಸಲ್ಪಡಲಿರುವ ಜಾತೀಯ ಬ್ಯಾಂಕಿನ ಶ್ರೇಯೋಭಿವೃದ್ಧಿ ಮತ್ತು ಬ್ಯಾಂಕಿನ ಪ್ರಾಮುಖ್ಯತೆ, ಅಳಿಯ ಕಟ್ಟಿನ ಮಸೂದೆಯ ಕುರಿತಾಗಿ ಶ್ರೀ. ಕೋಟ ರಾಮಕೃಷ್ಣ ಕಾರಂತರು ಮದ್ರಾಸ್ ಕೌನ್ಸಿಲಿನಲ್ಲಿ ಹೂಡಲಿರುವ ಮಸೂದೆಯ ನಿಷೇಧ—ಇವೇ ಮೊದಲಾದ ಹಲವು ವಿಷಯಗಳು ಅಧ್ಯಕ್ಷರ ಭಾಷಣದಲ್ಲಿ ತುಂಬಿದ್ದವು. ಅನಂತರ ವಿದ್ಯಾರ್ಥಿ ಭವನಗಳ ವರದಿಗಳ ವಾಚನ, ಬಡ ವಿದ್ಯಾರ್ಥಿ ಪಂಡಿಗೆ ಮತ್ತು ಉಡುಪಿ ವಿದ್ಯಾರ್ಥಿ ಭವನದ ಪರಿಪೂರ್ಣತೆಗಾಗಿ ಹಣ ಸಂಗ್ರಹ—ಇವೇ ಮೊದಲಾದ ಕಾರ್ಯಕ್ರಮಗಳು ಜರಗಿದುವು. ಸಭೆಯಲ್ಲಿ ಮಂಜೂರಾದ ಠರಾವುಗಳಲ್ಲಿ, ದಿವಂಗತ ಅಣ್ಣಾವರ ದೇವಪ್ಪ ಪೂಂಜರ ಸ್ಮರಣಾರ್ಥವಾಗಿ ಒಂದು ವಿದ್ಯಾರ್ಥಿ ವೇತನವನ್ನೀಯುವರೆ ವ ದಿವಂಗತರ ಪ್ರತಿಮೆಯೊಂದನ್ನು ಪ್ರತಿಷ್ಠಿಸುವರೆ ಸ್ಮಾರಕನಿಧಿಯೊಂದನ್ನು ಕೂಡಿರಿಸಬೇಕೆಂಬುದೂ, ಶ್ರೀ ಕಾರಂತರು ತರಲಿರುವ ಅಳಿಯ ಕಟ್ಟಿನ ತಿದ್ದುಪಾಟಿನ ಠರಾವು ತೀರಾ ಅನಗತ್ಯವೆಂಬುದೂ ಪ್ರಾಮುಖ್ಯವಾದವುಗಳು. ಸ್ಮಾರಕನಿಧಿಯ ಸಂಗ್ರಹಣಾರ್ಥವಾಗಿ ತಾಲೂಕು ಕಮಿಟಿಗಳ ಸ್ಥಾಪನೆಯಾಗಿ, ಆಗಾಮಿ ವತ್ಸರದ ಮಹಾಸಭೆಯು ಕುಂದಾಪುರಕ್ಕೆ ಆಮಂತ್ರಿಸಲ್ಪಟ್ಟು, ಆಭಾರ ಮನ್ನಣೆ, ಉಪಹಾರ ಸತ್ಕಾರಗಳೊಂದಿಗೆ ಸಭೆಯು ಸಮಾಪ್ತಿಯಾಯಿತು. ಸರ್ವಸಾಮಾನ್ಯವಾಗಿ ಎಲ್ಲಾ ತಾಲೂಕುಗಳಿಂದಲೂ ಪ್ರತಿನಿಧಿಗಳು ಬಿಜ್ಜೈಸಿದ್ದರು.

ಕೃಷಿ ಪ್ರದರ್ಶನ—ಈ ಮಹಾಸಭೆಯ ಸಂದರ್ಭದಲ್ಲಿ ಕೃಷಿ ಇಲಾಖೆಯವರು ಚಿಕ್ಕದೊಂದು ಕೃಷಿ ಪ್ರದರ್ಶನವನ್ನು ತೆರೆದಿದ್ದರು. ನಾನಾ ತರದ ಬೀಜಗಳೂ, ಕೆಲವು ಹಣ್ಣುಗಳೂ, ಕೆಲವು ಜಾತಿಯ ಗಿಡ ಸಸಿಗಳೂ ಪ್ರದರ್ಶಿಸಲ್ಪಟ್ಟಿದ್ದವು. ಕೃಷಿ ಪ್ರದರ್ಶನವು ಕೃಷಿಕರಿಗೆ ವಿಪುಲ ಫಲಕಾರಿಯಾದುದರಿಂದ ಸಭೆಯ ಚಾಲಕರು ಈ ಪ್ರದರ್ಶನವು ಇನ್ನಷ್ಟು ಉತ್ತಮ ರೀತಿಯಲ್ಲಿ ಜರಗುವಂತೆ ಗಮನವಿಡುತ್ತಿದ್ದರೆ ಒಳ್ಳೇದಿತ್ತು. ಮುಂದಕ್ಕಾದರೂ ಈ ಸೂಚನೆಯ ಕಡೆಗೆ ಲಕ್ಷ್ಯವಿಡುವರಾಗಿ ನಂಬಿಕೆಯಿದೆ. ಬರುವ ಕುಂದಾಪುರದ ಸಭೆಯ ಚಾಲಕರು ಸರ್ವಾಂಗ ಸುಂದರ ಕೃಷಿ ಪ್ರದರ್ಶನವನ್ನು ಪ್ರದರ್ಶಿಸುವರೆಂದು ನಿರೀಕ್ಷೆಯಿದೆ.

ರಕ್ಷಾಬಂಧನ—ಇತ್ತ ಮಹಾಸಭೆಯು ಕೊನೆಗಾಣುತ್ತಲೆ ಅತ್ತ ಬಂಟ ವಿದ್ಯಾರ್ಥಿ ನಾಟ್ಯಕಲಾ ಪ್ರೇಮಿಗಳು ಉಡುಪಿ ಉಪವಿದ್ಯಾರ್ಥಿ ಭವನದ ಸಹಾಯಾರ್ಥವಾಗಿ ಕೆಲವು ಅಭಿನಯಗಳನ್ನು ಪ್ರದರ್ಶಿಸಿದರು. ಅವುಗಳಲ್ಲಿ "ರಕ್ಷಾಬಂಧನ" ಎಂಬ ಕನ್ನಡ ನಾಟಕವೇ ಮುಖ್ಯವಾದುದು. ಇದನ್ನು ಬರೆದವರು ಪಂಡಿತ ಕೆ. ವೆಂಕಟರಾಮಾಚಾರ್ಯರು.

ನಾಟಕಕ್ಕೆ ಮೇಲಿನ ಹೆಸರು ಒಪ್ಪಲಿ, ಒಪ್ಪದಿರಲಿ, ರಾಜನ ಮೋಹ ಮದಾಂಧತೆಯೂ, ಮಂತ್ರಿಯ ಸ್ವಾಮಿನಿಷ್ಠೆಯೂ, ಚಾಣಾಕ್ಷನ ಕುಟಿಲ ಕುತಂತ್ರಗಳೂ, ದಿಲೀಪನ ಶೌರ್ಯಸಾಹಸಗಳೂ ಮುಖ್ಯವಾಗಿ ಅರುಂಧತಿಯ ಅಚಲಪ್ರೇಮವೂ ಒಡೆದು ಕಾಣುತ್ತಿದ್ದವು.

ಬಹುಮಾನಗಳು—ಸರ್ವಸಾಮಾನ್ಯವಾಗಿ ಎಲ್ಲಾ ಪಾತ್ರಗಳೂ ಯೋಗ್ಯವಿದ್ದವು. ಚಾಣಾಕ್ಷ ದಿಲೀಪರ ಅಭಿನಯದಲ್ಲಿ ಸ್ವಾಭಾವಿಕತೆಯಿತ್ತು. ನಾಟಕ ಕರ್ತರಾದ ಶ್ರೀ. ಕೆ. ವೆಂಕಟರಾಮಾಚಾರ್ಯರಿಗೂ, ಗಿರಿಧರನ ಪಾತ್ರವನ್ನು ವಹಿಸಿದ ಶ್ರೀ ಮೋಹನರಾಯರಿಗೂ, ಚಾಣಾಕ್ಷನ ಭೂಮಿಕೆಯನ್ನು ಅಭಿನಯಿಸಿದ ಶ್ರೀ. ದಾಸಭಟ್ಟರಿಗೂ, ಅರುಂಧತಿಯ ಪಾರ್ಟನ್ನು ನಟಿಸಿದ ಶ್ರೀ. ಲಕ್ಷ್ಮೀನಾರಾಯಣ ಭಟ್ಟರಿಗೂ ಒಂದೊಂದು ಸುವರ್ಣ ಪದಕವು ಬಹುಮಾನವಾಗಿ ಕೊಡಲ್ಪಟ್ಟಿತು. ಈ ತೆರನ ಸತ್ಕಾರವು ಅತ್ಯಂತ ಅಭಿನಂದನೀಯವು.

ಶೋಚನೀಯ ಮೃತ್ಯು—ಶ್ರೀ ಪಾದಮೂರುಮಠದ ಶ್ರೀ ವಿಬುಧ ಪ್ರಿಯ ಶ್ರೀ ಪಾದಂಗಳವರು ಘಟಿಕಾಚಲಕ್ಷೇತ್ರದಲ್ಲಿ ಪರಂಧಾಮ ವನ್ನೈದಿದರೆಂಬ ಸಂಗತಿಯು ಅತ್ಯಂತ ವಿಷಾದಕರವಿದೆ. ಈ ಸುದ್ದಿಯು ಉಡುಪಿಗೆ ತಲುಪಿತಾದೊಡನೆ ತಾ. ೧೦-೫-'೨೯ರಲ್ಲಿ ದುಃಖ ಸೂಚಕ ಹರತಾಳವನ್ನಾಚರಿಸಿದರೆಂದೂ, ಸ್ವರ್ಗೀಯ ಸ್ವಾಮಿಗಳವರ ಭಾವಚಿತ್ರದ ಮೆರವಣಿಗೆ, ಸಾರ್ವಜನಿಕ ಸಭೆ, ಭಾಷಣಗಳನ್ನು ಮಾಡಿದರೆಂದೂ ತಿಳಿದು ಬರುತ್ತದೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಿತ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಂದವಂಟನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರೋಗ್ಯರಕ್ಷಕ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮೊದಲ್ ತರವಾದ ಬೆಳ್ಳಿ ಪುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ನೀಡಿದ ಅನುಭವದ ಮೇಲೆ ನಮ್ಮ ಪುಡಿದಾರ ಹಗ್ಗಗಳು ಕೆಲವೆಕ್ಸಿಬಿಷನ್ನಲ್ಲಿಯೂ, ದಾವಣಗೆರೆಯಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದಿರುವದು. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಜರಿಪು ವ್ಯಾಪಾರಿ,
೭ - 24-8-'28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು
ಆತಂಕನಿಗ್ರಹ ಮಾತ್ರೆಗಳನ್ನು
ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1|- ಮಾತ್ರ.
ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲಿ ಹಾಕಿದ ರೂ. 4,87,798-6-0
Rates of interest on fixed deposits at Head Office and Branch 6½% for 2 Years, 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1 ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವರೆಗೆ ವ್ಯಾದೆ ಆಗುವ ರೂ. 1000/-ದ ಮಿಕ್ಕಿದ ಮೊಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to —

Canara Bank Ltd.
Mangalore, 11—2—1929.

K. Venkat Rao,
Secretary

THE PANGAL NAYAK BANK, LTD.

Branch Office Mangalore.	Head Office: Udipi. *Established 1920.*	Agency Office Cochin.

Authorised Capital: Rs. 2,00,000-	Paidup Capital: Rs. 1,57400-
Issued Capital: Rs. 1,75,000-	Reserve and other Funds Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5%, 6 or 9 months 5½%, 12, 15, 18 or 21 months 6%; 24 months 6½% and **interest being payable every 3 months.**

Short Notice Deposits, Cumulative Deposits, and **Savings Bank Deposits** are accepted at favourable rates of interest.

Season Deposits from January to June received at 6½%

N. B. Fixed Deposits for 24 months are accepted at our Mangalore Branch at 6¾% and interest being payable every quarter.

Loans and Advances are made on pledge of valuables, on proper personal securities on reasonable terms; and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
1st March, 1929.

P. Lakshman Nayak,
Offg. Secretary.

ADVERTISE IN OUR WEEKLY.

To Reach the Hearths & Homes
OF INDIA'S MASSES

For Particulars Apply to:

The Manager,
SWADESHABHIMANI,
MANGALORE.

ಜಾತೀಯತೆಯಲ್ಲಿ ಜಾಗರೂಕ ಬಂಟರ ಯುವಕ ಸಾಹಸರ ಸಂಘ.

ಜಾತೀಯ ಸಂಸ್ಥೆಗಳ ಮೂಲಕ ಜಾತೀಯ ಹಿತಗಳನ್ನು ಸಾಧಿಸಿ, ಜಾತಿಯೊಳಗೆ ಜಾಗ್ರತಿಯನ್ನುಂಟುಮಾಡಿಕೊಂಡವರೊಳಗೆ ಬಂಟರು ಪ್ರಮುಖರು. ಅವರ ಜಾತೀಯ ಚಳವಳಿಯು ಆ ಜಾತಿಯನ್ನು ಉದ್ಧರಿಸುವುದೆಂಬುದು ಬಹಳ ಅಭಿನಂದನೀಯವಿದೆ. ಅಲ್ಲದೆ ಇತರ ಜಾತಿಗಳೊಳಗಿನ ಜಾತೀಯ ಚಳವಳಿಯಂತೆ ಇವರ ಚಳವಳಿಯು ಬರೇ ಆರಂಭಶೂರತೆಯ ಕಾರ್ಯಗಳಾಗಿರದೆ ಅತೀ ಪರಿಣಾಮಕಾರಿಯಾದ ಚಳವಳಿಯಾಗಿರುತ್ತದೆ. ಉಡುಪಿಯಲ್ಲಿ ಮೊನ್ನೆ ದಿನ ನೆರೆದ ಇವರ ಸಾನೇ ಅಧಿವೇಶನವು ಈ ಚಳವಳಿಯ ಅಸೀಮ ಚೇತನದ ಸಾಕ್ಷಿಯಾಗಿರುತ್ತದೆ. ಸ್ವಾಗತಾಧ್ಯಕ್ಷರ ಭಾಷಣವು ಮಾನನೀಯವೂ ಹಲವು ಉತ್ತಮ ಸೂಚನೆಗಳಿಂದ ಕೂಡಿದುದೂ ಆಗಿತ್ತು. ಸ್ವಜಾತಿ ಸ್ತ್ರೀಯರಿಗೆ ಪ್ರಾಥಮಿಕ ಮತ್ತು ಉಚ್ಚ ವಿದ್ಯಾಭ್ಯಾಸವನ್ನು ಕೊಡುವುದು. ನಾಲ್ಕು ತಾಲೂಕುಗಳಲ್ಲಿ ರಚಿತವಾಗಿರುವ ವಿದ್ಯಾರ್ಥಿ ಭವನಗಳ ವ್ಯವಸ್ಥೆ ಪರಿಚಾಲನೆಯನ್ನು ಮತ್ತೂ ಸುಧಾರಿಸುವುದು, ಈಗಿನ ತರುಣ ಯುವಕರ ಸರಕಾರಿ ಹುದ್ದೆಗಳನ್ನು ಪಡೆಯಬೇಕೆಂಬ ಅಭಿಲಾಷೆಯ ಮಾನಸಿಕತೆಯನ್ನು ತಿದ್ದಿ ಸ್ವತಂತ್ರೋದ್ಯೋಗವಾದ ಕೃಷಿ ವ್ಯವಸಾಯದಲ್ಲಿ ಪ್ರೇರಿಸುವುದು, ಎಲ್ಲಾ ತಾಲೂಕುಗಳ ಕೇಂದ್ರಗಳಲ್ಲಿ ಬೇಂಕುಗಳನ್ನು ಸ್ಥಾಪಿಸುವುದು, ತಮ್ಮ ಕೈಗಳಿಂದಲೇ ಪೇಟೆಗೆ ಸಾಗುವ ದವಸಧಾನ್ಯಗಳನ್ನು ಯೋಗ್ಯ ಸಂಸ್ಥೆಗಳ ಮೂಲಕ ಎಲ್ಲಾ ಕೇಂದ್ರಗಳಲ್ಲಿಯೂ ತಾವೇ ಮಾರಿ, ತಮ್ಮ ಸಮಾಜಕ್ಕೇನೆ ಲಾಭವನ್ನುಂಟುಮಾಡಿ, ಒಡ ಜನರ ದ್ರವ್ಯ ನಷ್ಟವನ್ನು ತಡೆಯುವುದು, ಶ್ರೀ ಕೋಟೆ ರಾಮ ಕೃಷ್ಣ ಕಾರಂತರು ತಮ್ಮ ಸಮಾಜದೊಳಗೆ ಈಗಿನ ಚುನಾವಣೆ ಸಮಯದಲ್ಲಿ ಒಡಕನ್ನುಂಟುಮಾಡುವ ಮಾಯಾಜಾಲವಾಗಿ ತಂದಿರುವ ಅಳಿಯ ಸಂತಾನದ ಕಟ್ಟಿನ ತಿದ್ದುಪಡಿಯನ್ನು ನಿಷೇಧಿಸುವುದು, ಇವೇ ಆ ಭಾಷಣದ ಸಾರಾಂಶ ಸೂಚನೆಗಳಾಗಿರುತ್ತವೆ. ಈ ಸೂಚನೆಗಳಿಗಾಗಿ ನಾವು ಅಧ್ಯಕ್ಷರನ್ನು ಅಭಿನಂದಿಸುವಾಗ ಶ್ರೀ ಕಾರಂತರ ಮಾಯಾಜಾಲವೆಂಬ ಜಾತೀಯ ಐಕ್ಯಕ್ಕಾಗಿ ಕೂಡಲ್ಪಟ್ಟಿರುವ ನೂತನ ವಿಧಾನವನ್ನು ನಾವು ತಿಳಿಯಲಾರೆವು. ಅಳಿಯ ಸಂತಾನದ ತಿದ್ದುಪಡಿಯ ಸೂಚನೆಯು ಇಂದಿನದಲ್ಲ; ಒಂದು ಸಮಯದಲ್ಲಿ ಶ್ರೀ ಎ. ಬಿ. ಶೆಟ್ರೇ ಈ ವಿಷಯವಾಗಿ ಪ್ರಬಲ ಅಭಿಪ್ರಾಯವಿದ್ದವರಾಗಿದ್ದರು. ಆದರೆ ಈಗವರು ಸುಮ್ಮಗಾದ ಮಾತ್ರದಿಂದ ಇತರರು ಅದರಲ್ಲಿ ಕೈಹಾಕಬಾರದೆಂದು ಹೇಳುವುದು ನ್ಯಾಯಸಮ್ಮತವಾಗಿ ತೋರುವುದಿಲ್ಲ. ಚುನಾವಣೆಯ ಬಹು ಪೂರ್ವದಲ್ಲಿಯೇ ಶ್ರೀ. ಕಾರಂತರು ಈ ತಿದ್ದುಪಡಿಯನ್ನು ಮುಂದೆ ತಂದಿದ್ದರೆಂದು ನಾವು ತಿಳಿಯುತ್ತೇವೆ. ಒಮ್ಮೆಂದೊಮ್ಮೆ ಚುನಾವಣೆಯ ನೋಗನ್ನು ಇದರ ಮೇಲೆ ಹೊರಿಸಿದುದು ಮಾತ್ರ ನ್ಯಾಯವಾಗಿರಲಾರದು. ಆದರೆ ಈ ಮಹಾಸಭೆಯು ಶ್ರೀ. ಕಾರಂತರ ಮಸೂದೆಯನ್ನು ನಿರೋಧಿಸಿದಷ್ಟೇ ಹೊರತು, ಈ ಕಟ್ಟಿನ ತಿದ್ದುಪಡಿಯ ವಿಷಯದಲ್ಲಿ ಯಾವ ಸೂಚನೆಗಳನ್ನೂ ರೂಪಿಸಿಲ್ಲ. ತಿದ್ದುಪಡಿ ಬೇಕೇ, ಬೇಡವೇ, ಬೇಕಾದರೆ ಯಾವ ರೀತಿಯಲ್ಲಿ? ಎಂಬುದನ್ನು ಸ್ಪಷ್ಟವಾಗಿ ಈ ಮಹಾಸಭೆಯು ನಿರ್ಧರಿಸಿದ್ದರೆ ಉತ್ತಮವಿತ್ತು.

ಮಂತ್ರಿ ಪದವಿಯ ಸ್ವೀಕಾರ.

ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಶ್ರೀ ಶ್ರೀನಿವಾಸ ಅಯ್ಯಂಗಾರರ ನೇತೃತ್ವದಲ್ಲಿ ಈ ಹೊಸ ಧೋರಣೆಯ ಸೂಚನೆಯು ಮುಂಬೂರಾದ ಸಮಯದಿಂದ ಕಾಂಗ್ರೆಸ್ ವಾತಾವರಣದಲ್ಲಿ ಈ ವಿಷಯವಾಗಿ ಬಹಳ ವಾದ ವೆದ್ದಿರುತ್ತದೆ. ಹಿಂದೆ ಹಲಕೆಲವರು ಮಂತ್ರಿಪದವಿ ಸ್ವೀಕಾರದ ಧೋರಣೆಯು ಕಾಂಗ್ರೆಸ್ಸಿಗೆ ಬೇಕೆನ್ನುವಾಗ ಮದ್ರಾಸೇ ಬೇಡವೆನ್ನಲು ಬಹಳ ಮುಂದಾಗಿದ್ದಿತು. ಈಗ ಎಲ್ಲರೂ ಬೇಡವೆನ್ನುವ ಸಮಯದಲ್ಲಿಯೇ ಮದ್ರಾಸಿಗೆ ಬೇಕೆಂದು ತೋರಿದುದು ವಿಧಿವೈಚಿತ್ರ್ಯ (Irony of Fate)ವೆನ್ನಬೇಕು. ಮದ್ರಾಸಿನ ಈ ಚಂಚಲ ಧೋರಣೆಯನ್ನು ಇತರರು ಯಾರೂ ಪ್ರೋತ್ಸಾಹಿಸುವುದಿಲ್ಲವೆನ್ನುವುದು ಸಂತೋಷಕರವಾಗಿದೆ. ಲೆಜಿಸ್ಲೇಟಿವ್ ಕೌನ್ಸಿಲುಗಳ ಅಧ್ಯಕ್ಷತನದ ಇತರ ಯಾವ ಹುದ್ದೆಯನ್ನೂ ಯಾವ ಸಂದರ್ಭದಲ್ಲಿಯೂ ಕಾಂಗ್ರೆಸ್ ಪಕ್ಷದವರು ಸ್ವೀಕರಿಸ [illegible] [illegible] [illegible] [illegible] [illegible] ಸೂಚಿಸಿರುತ್ತದೆ. [illegible] [illegible] ತಮಿಳುನಾಡಿನ ಈ ಹೊಸ ಧೋರಣೆಯನ್ನು ಖಂಡಿಸಿರುತ್ತಾರೆ. ರಿಫೋರ್ಮಿಸ್ಟ್ ಕೊ-ಆಪರೇಟರರೂ ಕೂಡ ಸರಕಾರದೊಡನೆ ಸಹಕರಿಸಿ, ದೇಶ ರಿಸ್ಸ ಹುದ್ದೆ ಬೇಡವೆಂದು ಹೇಳುತ್ತಿರುತ್ತಾರೆ. ಕಾಂಗ್ರೆಸ್ಸಿನ ತಮಿಳುನಾಡು ಹೊರತು ಇತರ ಎಲ್ಲರೂ ಈ ಹುದ್ದೆಯ ಸ್ವೀಕಾರದ ಧೋರಣವನ್ನು ನಿಷೇಧಿಸುವರೆಂಬುದು ಬಹಳ ಅಭಿನಂದನೀಯವಿದೆ. ಇಷ್ಟು ನಿಷೇಧವು ವ್ಯಕ್ತಪಟ್ಟಿದ್ದರೂ ತಮಿಳುನಾಡಿನವರು ತಿದ್ದಿಕೊಳ್ಳಲು ಯತ್ನಿಸಿದಂತೆ ಕಾಣುವುದಿಲ್ಲ. ಕಾಂಗ್ರೆಸ್ಸಿನ ಹುದ್ದೆಯನ್ನು ನಿರಾಕರಿಸುವ ಧೋರಣವು ಬರೇ ಪೊಳ್ಳುತನದ್ದು. ಅದರ ಜವಾಬ್ದಾರಿಯನ್ನು ಹೊತ್ತೇ ಸರಕಾರದ ಟೊಳ್ಳುತನವನ್ನು ತೋರಿಸಿ ಕಾಂಗ್ರೆಸ್ಸಿನವರು ಸ್ವತಃ ಕಾರ್ಯಕಾರಿಗಳಾಗಬಹುದೆಂಬ ತರ್ಕವನ್ನು ಹೂಡುವವರಿರುತ್ತಾರೆ. ಆದರೆ ಇದು ಆತ್ಮವಂಚನೆಯ ತರ್ಕವೇ ಹೊರತು ಬೇರೇನೂ ಅಲ್ಲ. ಕಾಂಗ್ರೆಸ್ ಪಕ್ಷದವರು ಯಾವಾಗ ಹುದ್ದೆಯ ಸ್ವೀಕಾರ ಧೋರಣವನ್ನು ಕೈಕೊಳ್ಳುವರು, ಯಾವಾಗ ಮತದಾರರ ಮುಂದೆ ಅವರ ಉದ್ದೇಶವನ್ನು ಕಟ್ಟರೂಪದಲ್ಲಿ ಚಿತ್ರಿಸಿ ಅವರಿಂದ ಜನತೆಯ ಬೆಂಬಲವನ್ನು ತಪ್ಪಿಸಬಹುದೆಂದು ಆತುರರಾಗಿ ಕಾಯುವ ಇತರ ಪಕ್ಷೀಯರೂ ಇರುವರು. ಕಾಂಗ್ರೆಸ್ಸು ಇಂತಹ ಮೋಸಗಳಿಗೆ ಬೀಳದೆ ಚಂಚಲತೆಯನ್ನು ಬಿಟ್ಟು ಧೈರ್ಯದಿಂದಲೂ ದೃಢತೆಯಿಂದಲೂ ತನ್ನ ಕಾರ್ಯವನ್ನು ರಚಿಸುವ ಅವಶ್ಯಕತೆಯಿದೆ.

ಕೆಂಪು ಕಾಗದಗಳು.

ಮಿರಟ್ಟಿನ ಒಳಸಂಚಿನ ಫಿರ್ಯಾದಿಯು ಆರಂಭವಾದಂದಿನಿಂದ ಹಿಂದೂಸ್ಥಾನದ ರಿಪಬ್ಲಿಕನ್ ಸೈನ್ಯವೆಂಬ ಹೆಸರಿನಲ್ಲಿ ಹಲವು ಕಾಗದಗಳು ಹಲವರಿಗೆ ಜೀವಕ್ಕೆ ಬೆದರಿಕೆಯನ್ನು ಕಟ್ಟಿಸಿ ಬರುತ್ತಾ ಇವೆ. ಹಲವು ಸರಕಾರದ ಅಧಿಕಾರಿಗಳಿಗೆ ಈ ಕಾಗದಗಳು ಬಂದಿವೆಯಲ್ಲದೆ ಕಾಂಗ್ರೆಸ್ಸಿನ ಧುರೀಣರಿಗೂ ಈ ಬೆದರಿಕೆಯ ಕಾಗದಗಳು ಬಂದಿರುತ್ತವೆ. ಇವು ಎಲ್ಲಿಂದ ಬರುತ್ತವೆ ಎಂಬುದು ಹಲವು ತರದ ಸಂಶಯಗಳಿಗೆ ಕಾರಣವಾಗಿರುತ್ತದೆ. ಆದರೆ ಮೋತಿಲಾಲ ನೆಹರೂರವರು ಪಾಯೋನಿಯರ್ ಪತ್ರಿಕೆಗೆ ಉತ್ತರವಾಗಿ ಬರೆದಂತೆ "ಸರಕಾರೀ ಆಫೀಸರನ್ನು ಕೊಲ್ಲುವ ಉದ್ದೇಶವ ಸಂಸ್ಥೆಯೊಂದು ಇದೆಯೆಂದು ನೆನಸುವುದೇ ಆದರೂ, ಶೀಘ್ರ ತಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳುವ ಬದಲಿಗೆ ಬರೇ ಬೆದರಿಕೆಯ ಕಾಗದಗಳನ್ನು ಬರೆಯುತ್ತಲೂ, ಹೆದರಿಕೆಯ ಟೆಲಿಫೋನ್ ಸಂದೇಶಗಳನ್ನು ಕೊಡುತ್ತಲೂ ಪೋಲೀಸರನ್ನು ತಮ್ಮ ಕಡೆಗೆ ಆಕರ್ಷಣೆ ಮಾಡಿಕೊಳ್ಳುವ ಕೆಲಸದಲ್ಲಿ ಸಮಯವನ್ನು ಹಾನಿಮಾಡಿಕೊಳ್ಳುವ ಜನರು ಇರುವರೆಂದು ನಂಬುವವರೂ ಇರುವರೆಂಬುದೇ ಆಶ್ಚರ್ಯಕರವಾದುದು". ಮುಂದೆ ಅವರೇ ಹೇಳುತ್ತಾರೆ—"ಈ ದೊಡ್ಡ ಆಟ್ಟದ ವಿಷಯವಾಗಿ ಹಲವು ಅನುಮಾನಗಳಿವೆ. ಅನುಮಾನಗಳು ಯಾವುದೇ ಆದರೂ ಈ ಜನರಿಗೆ ಪೋಲೀಸರ ಹೆದರಿಕೆಯೇ ಇಲ್ಲವೆಂದೂ, ಪೋಲೀಸರಿಗೆ ಅವರನ್ನು ಹಿಡಿಯುವ ಆಸಕ್ತಿಯಾಗಲಿ ಶಕ್ತಿಯಾಗಲೀ ಇಲ್ಲವೆಂದೂ ಸ್ಪಷ್ಟವಾಗಿ ಕಾಣುವುದು." "ಈಗಿನ ಘಟನೆಗಳಲ್ಲಿ, ಈ "ಕೆಂಪು ಪತ್ರಗಳು" ನಿಜವಾದ ಬೊಲ್ಶೆವಿಕರದೆಂದು ನಾನು ನಂಬಲಾರೆನು." ಮೋತಿಲಾಲ ನೆಹರೂರವರ ಮೇಲಿನ ಅನುಮಾನಗಳು ಪ್ರಾಯಶಃ ಸರಿಯಾಗಿ ಈ ಕೆಂಪು ಪತ್ರಗಳ ಇತಿಹಾಸವನ್ನು ತಿಳಿದವರೆಲ್ಲರೂ ನಿಜವೆನ್ನದಿರಲಾರರು. ಈ ಕೆಂಪು ಪತ್ರಗಳು ಸರಕಾರಿ ಅಧಿಕಾರಿಗಳಿಗೆ ಮಾತ್ರವಲ್ಲದೆ ಜನತೆಯ ರಾಷ್ಟ್ರೀಯ ಪ್ರತಿನಿಧಿಗಳಿಗೂ ಬಂದಿರುವುದರಿಂದ, ಈ ಪತ್ರಗಳಿಂದ ಎಲ್ಲರಲ್ಲಿಯೂ ಬೊಲ್ಶೆವಿಕ್ ಭೀತಿಯನ್ನುಂಟುಮಾಡಿ ಸರಕಾರಕ್ಕೆ ಶರಣು ಹೋಗುವಂತೆ ಮಾಡುವಂತೆ ತೋರುತ್ತಿದೆ. ಆದುದರಿಂದ ಈ ಪತ್ರಗಳ ಲೇಖಕನದ ಜವಾಬ್ದಾರಿಯು ಯಾರದೆಂದು ಸರಕಾರವು ಕಂಡುಹಿಡಿಯುವ ತನಕ ಹಿಂದೀಯರು ಮೇಲಿನಂತಹ ಅನುಮಾನಗಳಲ್ಲಿಯೇ ಇರಬೇಕಾಗುವುದು.

ಇಂಗ್ಲೆಂಡಿಗೆ ಮಜೂರ ಸರಕಾರ ಬಂದರೆ ಹಿಂದೂಸ್ಥಾನಕ್ಕೆ ಲಾಭ

ಮಜೂರ ಸರಕಾರವು ಇಂಗ್ಲೆಂಡಿನಲ್ಲಿ ಅಧಿಕಾರಕ್ಕೆ ಬಂದರೆ ಹಿಂದೂಸ್ಥಾನವು ಸ್ವರಾಜ್ಯವನ್ನು ಸುಲಭವಾಗಿ ಗಳಿಸಿಕೊಳ್ಳುವುದೆಂದು ಆಶಿಸಿದವರು ಕೆಲವು ಜನರು ಹಿಂದೂಸ್ಥಾನದೊಳಗೆ ಇನ್ನೂ ಇರುವರಾದರೆ ಅಂತವರು ಹಿಂದೂಸ್ಥಾನದ ಹಿತವನ್ನು ಬಯಸಿ ಚುನಾವಣೆಯ ಭಾಷಣವನ್ನು ಕೊಟ್ಟಿರುವ ಮಜೂರ ಧುರೀಣರಾಗಿರುವ ಮಿ| ಸ್ನೊಡೆನರ ಮಾತನ್ನು ಕೇಳಿಯಾದರೂ ತಮ್ಮ ಮೋಹವನ್ನು ಕಳೆಯಬೇಕು. ಮಿ| ಸ್ನೊಡೆನರು ಹಿಂದೂಸ್ಥಾನದ ಅರ್ಜನೆಯ ಶಕ್ತಿಯನ್ನು ಬೆಳೆಸಬೇಕಾಗಿ ಸೂಚಿಸುವರು. "ಹಿಂದೀಯರ ಕ್ರಯಕ್ಕೆ ಕೊಳ್ಳುವ ಶಕ್ತಿಯನ್ನು ವಾರಕ್ಕೆ ಒಂದು ಪೆನ್ನಿಯಂತೆ ಹೆಚ್ಚಿಸಿದರೆ ಅವರು ಲಂಕೆಶಾಯರಿನ ಗಿರಣಿಗಳ ೬೦ ಮಿಲಿಯ ಪವನು ಬೆಲೆಬಾಳುವ ವಸ್ತ್ರವನ್ನು ಕೊಂಡುಕೊಳ್ಳಬಲ್ಲರು. ಆಗ ಯಾವ ಗಿರಣಿಯೂ ಕೆಲಸವಿಲ್ಲದೆ ಇರಬೇಕಾಗಿಲ್ಲ. ಹಿಂದೀಯರು ಉತ್ಪನ್ನಮಾಡಿಕೊಳ್ಳುವ್ದರಿಂದ ಬಡವರಾಗಿದ್ದಾರೆ; ಕಾರಣವೇನೆಂದರೆ ಅವರಿಗೆ ಕೃಷಿಯ ಬಗ್ಗೆ ಅಗತ್ಯವಿರುವ ಯಂತ್ರಸಾಧನಗಳಿಲ್ಲ. ಅವರಿಗೆ ಉಕ್ಕಿನ ನೇಗಿಲನ್ನೂ ಮೋಟರ ಟ್ರೆಕ್ಟರನ್ನೂ (ಉಳುವ ಯಂತ್ರ) ಕೊಡಿರಿ, ಸರಕಾರವು ಇಂಗ್ಲೆಂಡಿನ ಆರ್ಥಿಕ ಸಹಾಯದಿಂದ ಹಿಂದೂಸ್ಥಾನದ ನೀರಾವರಿ ಕೆಲಸಗಳನ್ನು ಕೈಕೊಳ್ಳಲಿ. ಆಗ ಹಿಂದೀಯರ ಖರ್ಚುಮಾಡುವ ಶಕ್ತಿಯು ವಾರಕ್ಕೆ ಒಂದು ಪೆನ್ನಿ (ಅಷ್ಟೆಯಲ್ಲ) ಶಿಲ್ಲಿಂಗು (ಹದಿನೆಂಟಾಣೆ)ಗಳಂತೆ ಹೆಚ್ಚಾಗುವುದು" ಎಂದು ಮಿ| ಸ್ನೊಡೆನ್ನರು ಹೇಳುವರು. ತಾತ್ಪರ್ಯವೇನೆಂದರೆ, ಕೃಷಿ ಉಪಕರಣಗಳೆಂದು ಬ್ರಿಟಿಷರಿಗೆ ಕೆಲಸಕೊಡಬೇಕು; ನೀರಾವರಿ ಕೆಲಸಗಳೆಂದು ಇಂಗ್ಲೆಂಡಿನಿಂದ ಸಾಲಪಡೆದು ಚಿರಕಾಲಕ್ಕೆ ಅವರ ದಾಸರಾಗಬೇಕು; ಈ ಮೂಲಕ ಇಂಗ್ಲೆಂಡಿನ ಕಾರ್ಖಾನೆಗಳನ್ನು ರಾತ್ರಿ ಹಗಲು ನಡಿಸಿ ಹಿಂದೀಯರ ದುಡ್ಡನ್ನು ಸೂರೆಕೊಡಬೇಕು. ಹಾಗೆ ಮಾಡಿಯೂ ಹಿಂದೀ ಅರ್ಜನೆಯು ಒಂದಿಷ್ಟು ಹೆಚ್ಚಾಯಿತೆಂದರೆ ಅದನ್ನು ಲಂಕೆಶಾಯರಿಗೆ ಕೊಟ್ಟು ಅಲ್ಲಿರುವ ಗಿರಣಿಗಳನ್ನು ನಡಿಸಿ ಇಲ್ಲಿ ಉಪವಾಸ ಬೀಳಬೇಕು! ಸಾಮ್ರಾಜ್ಯವಾದಕ್ಕೆ, ಅಧೀನ ಜನಾಂಗದ ಮೇಲಿನ ದಬ್ಬಾಳಿಕೆಗೆ ಈ ಸೂಚನೆಯ ಮುಂದೆ ಕನ್ಸರ್ವೇಟಿವ್ ಪಕ್ಷವಾದರೂ ತಲೆದೂಗಬೇಕು. ಇಂಗ್ಲೆಂಡಿನ ಇಂದಿನ ಮಜೂರ ಪಕ್ಷವು ಇದೇ!

ಟೀಕೆಗಳು.
NOTES.

ಮಂಗಳೂರಿನ ಪಾಪಿಳ್ಳೆ ಮೊಗವೀರರ ಘರ್ಷಣೆಯು ನೆಂಟರ ವಿಚಾರಣೆ ಮುಗಿಯಿತು. [illegible] ಜನ ಮಾಪಿಳ್ಳೆಯವರಿಗೆ ಮತ್ತು ೫ ಜನ ಮೊಗವೀರರಿಗೆ ಜಾಮೀನು ಶಿಕ್ಷೆ. ಎರಡು ಕಡೆಯವರಿಗೂ ಶಿಕ್ಷೆ ಕೊಟ್ಟು ಸಮಾಧಾನಪಡಿಸಿದಂತಾಯಿತು. ಮುಂದಕ್ಕೆ ಎಲ್ಲರೂ ಕ್ಷೇಮ.

* * *

ಬಕ್ರೀದ್ ಹಬ್ಬದ ಮೆರವಣಿಗೆಯು ಈದಗಾ ಗುಡ್ಡೆಯಿಂದ ಪೋಲೀಸರ ಸಹಾಯದಿಂದ ಕಂಪನಕಟ್ಟೆಗಾಗಿ ಬಂದರಿಗೆ ಹೋಯಿತು. ಮೆರವಣಿಗೆಯು ಸಾಂಗವಾಗಿ ನಡೆಯಿತು. ಆದರೆ ಜನರಿಗಿಂತ ಪೋಲೀಸರ ಸಂಖ್ಯೆ ಹೆಚ್ಚಾಗಿತ್ತಂತೆ.

* * * *

ಹಲವು ವರ್ಷಗಳಿಂದ ಬೆರುವಾಳ ಹಬ್ಬದ ದಿವಸ ಗಾಡಿಗಳು ಮತ್ತು ಟೆಕ್ಸಿ ಕಾರುಗಳ ಓಡಾಟದಿಂದ ಮಾರ್ಗಗಳಲ್ಲಿ ಇರುವ ಸಣ್ಣ ಕಲ್ಲುಗಳು ಪುಡಿಯಾಗಿ ದೂಳಾಗುತಿತ್ತು.

* * * *

ಈ ವರ್ಷ ಮೊಗವೀರರ ಮತ್ತು ಮಾಪಿಳ್ಳೆ ಘರ್ಷಣೆ ಸಮ್ಮಂಧ ಟೆಕ್ಸಿಗಳು ಮತ್ತು ಕುದುರೆ ಗಾಡಿಗಳು ಬಿಟ್ಟು ಸೇರಿ, ಚಲಾವಣೆಯನ್ನೆ ನಿಲ್ಲಿಸಿದ್ದರು. ಗಾಡಿ ಮೋಟಾರಿನಲ್ಲಿ ಓಡುವವರು ಬರೆ ಮೆರವಣಿಗೆಯಿಂದಲೆ ಸುಧಾರಿಸಿಬಿಟ್ಟರು.

* * *

ಮುಂಬಾಯಿಯಲ್ಲಿ ಗಿರಣಿಗಳ ಮುಷ್ಕರದಿಂದ ಕೂಲಿಕಾರರಿಗೆ ಕೆಲಸವಿಲ್ಲದೆ, ಕೂಲಿಕಾರರು ಅಲ್ಲಿ ಗುಂಪು ಕೂಡುತ್ತಿರುವರು. ವಿಲಾಯಿತಿಯಲ್ಲಿ ಕೆಲಸವಿಲ್ಲದವರ ಸಂಖ್ಯೆ ಹೆಚ್ಚಿದುದರಿಂದ, ರಸ್ತೆಗಳೆಲ್ಲಾ ಇವರಿಂದ ತುಂಬಿವೆಯಂತೆ.

* * *

ಬರ್ಡೋಲಿಯ ಸತ್ಯಾಗ್ರಹದ ಜಯ. ಕಮಿಟಿಯವರ ರಿಪೋರ್ಟು ಹೊರಬಿದ್ದು, ತೆರಿಗೆ ಹೊರಿಸಿದ್ದು ಅನ್ಯಾಯವೆಂತಾಗಿದೆ. ಕಮಿಟಿ ನೇಮಕವಾಗುವ ಮುಂಚೆ ಸರ್ವಸಿದ್ಧತೆಯಿಂದ ತಯಾರಾದ ಸರಕಾರವು ಈಗ ತನ್ನ ತಲೆಯಿಂದ ಟೊಪ್ಪಿ ತೆಗೆದು ಸಲಾಂ ಹೊಡೆಯ ಬೇಕಾಯಿತು. ಬರ್ಡೋಲಿಯ ಸತ್ಯಾಗ್ರಹ ಮುಂದಿನ ಪುರಾಣಕ್ಕೆ ಒಂದು ಕಥೆಯಾಯಿತು.

* * *

ಮುಂಬಾಯಿಯಲ್ಲಿ ಮುಸಲ್ಮಾನರೊಳಗೂ ಸಿನೆಮಾದ ಪರದೆಗೂ ಜಗಳ. ಜಗಳ ಮತ್ತೇನಲ್ಲ, ಸಿನೆಮಾದಲ್ಲಿ 'ಸಿರಾಜ' ಎಂಬ ಚಿತ್ರ ಚಲನೆಯು ಆಗುವಾಗ್ಗೆ ಕೆಲ ಜನ ಮುಸಲ್ಮಾನರು ಎದ್ದು ಸೋಡಾ ಬಾಟ್ಲಿಗಳನ್ನು ಮುಂದಿನ ಪರದೆಗೆ ಹೊಡೆದು ಘಲಾಟೆ ನಡಿಸಿಬಿಟ್ಟರು. ಮಸೀದಿಯ ಹತ್ತಿರ ವಾದ್ಯ, ಭಜನೆ ವಿಷಯ ಘಲಾಟೆ, ಸಿನೆಮಾದಲ್ಲಿ ಚಿತ್ರದ ವಿಷಯ ಆಕ್ಷೇಪ.

* * * *

ಲಾಹೋರಿನಲ್ಲಿ ಇಷ್ಟು ದಿವಸ ಕೆಂಪು ಕಾಗದಗಳ ಮೇಲೆ ಬರೆದು ಕೊಲ್ಲುತ್ತೇವೆಯಾಗಿ ಗದರಿಸುವುದಿತ್ತು. ಇತ್ತಲಾಗಿ ಟೆಲಿಫೋನಿನಲ್ಲಿ ಕರೆದು ಗದರಿಸುವುದು ಪ್ರಾರಂಭವಾಗಿದೆ.

ಶಾಲಿವಾಹನ ಶಕೆ ೧೮೫೧ನೆಯ ವಿಭವಸಂವತ್ಸರದ ವೈಶಾಖ ಬ. ೨ ಶನಿವಾರದಿಂದ ವಿಭವ ಸಂವತ್ಸರದ ವೈಶಾಖ ಬ. ೭ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೯ನೆಯ ವೃಷಭ (ಮೇ))

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
25	ಶನಿ	೨	[illegible]	ಜ್ಯೇಷ್ಠಾ	[illegible]	[illegible]	6. 6	6.49
26	ರವಿ	೩	[illegible]	ಮೂಲಾ	[illegible]	[illegible]	6 6	6.50
27	ಸೋಮ	೪	[illegible]	ಪೂ. ಷಾ	[illegible]	[illegible]	6. 5	6.50
28	ಮಂಗಳ	೫	[illegible]	ಉ. ಷಾ	[illegible]	[illegible]	6 6	6.51
29	ಬುಧ	೬	[illegible]	ಶ್ರವಣಾ	[illegible]	[illegible]	6 5	6.51
30	ಗುರು	೭	[illegible]	ಧನಿಷ್ಠಾ	[illegible]	[illegible]	6. 5	6.51
31	ಶುಕ್ರ	೮	[illegible]	ಶತಭಿಷಾ	[illegible]	[illegible]	6. 5	6.52

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆಯಾದ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
17	92—8	79—8	—	—
18	92—8	79—9	—	—
19	93—1	79—3	—	—
20	92—8	80—6	—	0—02
21	89—0	77—6	—	—
22	92—1	78—1	—	—
23	91—8	77—9	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮುಷ್ಟಿ ...	6—14	7—6
ಗುಡ್ಡು ...	6—4	6—10
ರಾಶಿ ...	5—9	5—14
ಊರ ಅನ್ವರ್ ಬೆಳ್ತಿಗೆ ...	7—0	7—8
ಸುಗ್ಗಿ ...	5—12	6—5
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ ...	12—0	12—3
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	6—4	6—9
ಗೋಧಿ ಗೋಣಿ ೧ಕ್ಕೆ ...	16—12	20—0
ಹುರುಳಿ ಗೋಣಿ ೧ಕ್ಕೆ ...	7—6	9—8
ಕಡಲೆ ಗೋಣಿ ೧ಕ್ಕೆ ...	15—8	16—8
ತೊಗರಿ ಗೋಣಿ ೧ಕ್ಕೆ ...	14—8	5—8
ತೊಗರಿಬೇಳೆ ಗೋಣಿ ೧ಕ್ಕೆ ...	18—8	27—0
ಉದ್ದು ಗೋಣಿ ೧ಕ್ಕೆ ...	15—0	16—0
ಹೆಸರು ಗೋಣಿ ೧ಕ್ಕೆ ...	14—8	16—0
ಊರು ಬೆಲ್ಲ ಖಂಡಿ ೧ಕ್ಕೆ ...	60—0	65—8
ಉಪ್ಪು ಗೋಣಿ ೧ಕ್ಕೆ ...	4—6	4—14
ಚೂಟ್ರಿ ಖಂಡಿ ೧ಕ್ಕೆ ...	95—0	99—
ತೊಟ್ರಿ ಹಿಂಡಿ ಖಂಡಿ ೧ಕ್ಕೆ ...	33—0	33—8
ಎಳ್ಳಿಂಡಿ ಖಂಡಿ ೧ಕ್ಕೆ ...	42—8	—
ತೊಟ್ರಿ ಎಣ್ಣೆ ಮುಡಿ ೧ಕ್ಕೆ ...	6—10	8—0
ಎಳ್ಳೆಣ್ಣೆ ಮುಡಿ ೧ಕ್ಕೆ ...	7—12	8—4
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7—12	8—4
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	3—10	3—11
ಜೋಸ ಮೆಣಸು ...	5—4	6—8
ಸಾಸಿವೆ ಮುಡಿ ೧ಕ್ಕೆ ...	8—8	—
ಕೊತ್ತಂಬರಿ ಮುಡಿ ೧ಕ್ಕೆ ...	3—12	4—0
ಸೀಟಿದ್ ಕಾಫಿ ಖಂಡಿ ೧ಕ್ಕೆ ...	355—0	365—0
ತೇರಿಗೋಟು ಅಡಿಕೆ ಖಂಡಿ ೧ಕ್ಕೆ ...	160—0	—
ಕಾಳುಮೆಣಸು ಖಂಡಿ ೧ಕ್ಕೆ ...	420—0	425—0
ಯೇಲಕ್ಕಿ ಮುಡಿ ೧ಕ್ಕೆ ...	50—0	56—
ಗೇರುಬೀಜ ಮುಡಿ ೧ಕ್ಕೆ ...	3—6	3—8
ಕೊಬ್ಬರಿ ಖಂಡಿ ೧ಕ್ಕೆ ...	44—0	45—8
ತಾಂಬ್ರ ತಗಡು ಮಣ ೧ಕ್ಕೆ ...	18—0	18—12
ತಾಂಬ್ರ ಪಾತ್ರಗಳು ಮಣ ೧ಕ್ಕೆ ...	23—0	24—0
ಚೀನಿಬೆಳ್ಳಿ ಸೇರು ೧ಕ್ಕೆ ...	16—4	—
ಹಿತ್ತಾಳೆ ತಗಡು ಮಣ ೧ಕ್ಕೆ ...	17—0	17—8
ಪವನು ೧ಕ್ಕೆ ...	13—9—3	—
ಹುಣಸೆಹುಳಿ ಖಂಡಿ ೧ಕ್ಕೆ ...	30—0	37—8

ಗಾರವಾದ ಪುಸ್ತಕ? — ೩೪೦ ಪೇಜುಗಳು ಇವೆ

[ನಾವು ತಿಳಿಸಿರುವಂತೆ ಇಲ್ಲದಿದ್ದರೆ ವಾಪಾಸು ತೆಗೆದುಕೊಳ್ಳುವೆವು.]

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದತ್ತನ್ನು ಇದ್ದಹಾಗೆ ತಿಳಿಸುವ

ಸ್ತ್ರೀದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ

ಕ್ರಯ ರೂ. ೧-೪-೦

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ, ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಥಳಥಳಿಸುವ ಗ್ಲೇಜು ಕಾಗದದಲ್ಲಿ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ಪುರುಷನು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದಕಾಲ ಗರ್ಭ ಧರಿಸುವದು, ಗರ್ಭನಿಂತು ಹೋಗುವದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಕರ್ಮ ನಿಯಮಗಳು, ಶಿಶೂತ್ಪತ್ತಿವಿಧ, ಗುಪ್ತ ವ್ಯಾಧಿಗಳ ಚಿಕಿತ್ಸೆ, ಶಯನಗೃಹದಾಂಪತ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಸ್ತ್ರೀಯರ ಗೂಢ ರಹಸ್ಯ, ಇನ್ನು ಸ್ತ್ರೀ ಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ.

ಕ್ರಯ ಪುಸ್ತಕ ೧ಕ್ಕೆ ೧-೪-೦

ವಿಳಾಸ:— ಕೆ. ನಾಥಮುನಿ ಅಂಡ್ ಸನ್, ೧೬೮ ಚೈನಾ ಬಜಾರ್, ಮದರಾಸು.

K. Nadhamuni & Son, 168 China Bazaar Madras.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ | ಅಂಚೆಖರ್ಚಾಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯುರ್ವೇದ ಸಾರಸಂಗ್ರಹ ರೂಪವಾಗಿರುವ ೬ ಭಾಷೆಗಳಲ್ಲಿ ಛಾಪಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಕ್ಷೇಮಿಯಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧಿಗಳನ್ನು ನಡತೆಯಲ್ಲಿ ನಡೆಸುವದೇ ದಾರಿ. ಹಾಗಿಲ್ಲದಿದ್ದರೆ ಅದರಲ್ಲಿ ಹೇಳಿರುವ ಉಪಾಯವನ್ನು ಮಾಡು. ವದ. ಮತ್ತೊಂದೇ ದಾರಿ

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಚೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ, ಸುಂದರವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ, ನಮ್ಮ ಲೋಕಪ್ರಸಿದ್ಧವಾದ ಟಾನಿಕ್ಕೆಂಬುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವವು. ಈ ಮಾತ್ರೆಗಳು ಮಲಬಂಧ ಮೊದಲು ನಪುಂಸಕತ್ವವರೆಗಿನ ವ್ಯಾಧಿಗಳನ್ನು ಪರಿಹರಿಸುತ್ತವೆ.

ಡಿ. ಜೂಲಿಯಸ್ ಮಾರ್ಟಿನ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(೧೯೨೧ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ ೧೮೬೦ನೇ ಇಸವಿ XXIನೇ ಆಕ್ಟಿನ ಪ್ರಕಾರವಾಗಿ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಶುದ್ಧ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ 'ಫಾರ್ಮಸಿ'ಯಲ್ಲಿ ಶಾಸ್ತ್ರರೀತ್ಯಾ ತಯ್ಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟಮಾಡಿ ಹುಟ್ಟಿಬರುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತದೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯ್ಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ, ನಮ್ಮಲ್ಲಿ ತಯ್ಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ, ಡೊಂಗರಕೇರಿ, ಮಂಗಳೂರು.

[illegible]
ವರ್ತಮಾನ ಸಂಗ್ರಹಗಳು
ಪರದೇಶ ವರ್ತಮಾನ . . . ೩-೪
ಸ್ಥಳೀಯ ವರ್ತಮಾನ— ಮಂಗಳೂರು, ಬಂಟ್ವಾಳ, ಮಂಜೇಶ್ವರ, ಉಡುಪಿ, ಪುತ್ತೂರು, ಕಾರ್ಕಳ, ಕುಂಬಳೆ, . . ೭-೮
[illegible] . . . ೮
[illegible] . . . ೧೩
ಅಮಾನುಲ್ಲಾರವರ ಸುಧಾರಣೆಗಳು . . . ೧೨
ಕರ್ನಾಟಕ ಪರಿಷತ್ತುಗಳು, ಬೆಳಗಾವಿ . . . ೨
[illegible] . . . ,,

ಸ್ವದೇಶಾಭಿಮಾನಿ.

ತಾರೀಕು ೨೪ನೇ ಶುಕ್ರವಾರ ಮೇ ೧೯೨೯.

ಎಚ್ಚೆತ್ತ ಕರ್ನಾಟಕ.

"ನಾವು ಸ್ವರಾಜ್ಯವನ್ನು ಎಷ್ಟು ಶೀಘ್ರವಾಗಿ ದೊರಕಿಸುವೆವೊ ಅಷ್ಟು ಶೀಘ್ರವಾಗಿ ಕರ್ನಾಟಕ ಏಕೀಕರಣವು ಸಾಧ್ಯವಾಗುವುದು. ಬೇರೆ ಯಾವುದೇ ಹಾದಿಯಿಂದ ನಾವು ನಮ್ಮ ಗುರಿಯನ್ನು ಮುಟ್ಟಬಹುದೆಂದು ಕಲ್ಪಿಸುವುದು ಸಾಧ್ಯವಿಲ್ಲ. ಯಾಕೆಂದರೆ ಈಗಿರುವ ಪರಕೀಯ ಸರಕಾರದವರಿಂದ ಇಂಥ ಸುಧಾರಣೆಯಾದೀತೆಂದು ತಿಳಿಯುವುದೇ ಸಾಧ್ಯವಿಲ್ಲ. ಪ್ರಚಲಿತ ಪದ್ಧತಿಯಿಂದ ನಮಗೆ ಉಂಟಾಗುವ ಅನಾನುಕೂಲಗಳೇ ಆಳರಸರಿಗೆ ಒಳ್ಳೇ ಅನುಕೂಲಗಳಾಗಿ ಕಂಡುಬರುತ್ತವೆ" ಎಂದು ಶ್ರೀ. ಎ. ರಂಗನಾಥ ಮುದಲಿಯಾರರು ಕರ್ನಾಟಕ ಏಕೀಕರಣದ ಪರಿಷತ್ತಿನಲ್ಲಿ ತಮ್ಮ ಅಧ್ಯಕ್ಷ ಭಾಷಣದಲ್ಲಿ ಕರ್ನಾಟಕ ಏಕೀಕರಣದ ರಹಸ್ಯವನ್ನು ನುಡಿದರು. ಕಡೆಗೆ "ಕನ್ನಡಿಗರು ಮನಸ್ಸು ಮಾಡಿದರೆ ಬೇರೆ ಅನೇಕ ಮಾರ್ಗಗಳಿಂದ ಅವರು ಒಂದಾಗಬಹುದು. ಆದರೂ ಮೊದಲು ನಮ್ಮ ಬ್ರಿಟಿಷ ಕರ್ನಾಟಕವನ್ನು ಒಂದುಗೂಡಿಸಿ ಆ ಮೇಲೆ ಉಳಿದ ಭಾಗಗಳ ಬಗ್ಗೆ ವಿಚಾರ ಮಾಡುವುದು ಒಳ್ಳೇಯದು; ಮನೆಗೆದ್ದು ಮಾರುಗೆಲಿಯಬೇಕಷ್ಟೇ!" ಎಂದು ಮುದಲಿಯಾರರು ತಮ್ಮ ಸ್ಪಷ್ಟ ಸೂಚನೆಯನ್ನು ಕೊಟ್ಟಿರುತ್ತಾರೆ. ಶ್ರೀ. ಮುದಲಿಯಾರರ ಭಾಷಣವು ಪರಿಷತ್ತಿನ ಸಮಾಲೋಚನೆಗಳಲ್ಲಿ ಬಹಳ ಸಹಕಾರಿಯಾಗಿರಬೇಕೆಂದು ನಮಗನ್ನಿಸುತ್ತದೆ.

ಪರಿಷತ್ತಿನಲ್ಲಿ ಶ್ರೀ ಗಂಗಾಧರರಾವ್ ದೇಶಪಾಂಡೆಯವರನ್ನು ಮಾತಾಡಲು ಕೆಲವು ತರುಣರು ಬಿಡಲಿಲ್ಲವಾಗಿ ಕಂಡುಬರುತ್ತದೆ. ಕನ್ನಡಿಗ ತರುಣರ ಉತ್ಸಾಹಕ್ಕಾಗಿ ನಾವವರನ್ನು ಅಭಿನಂದಿಸುವೆವಾದರೂ, ಅದು ಮೇರೆ ಮೀರಿದಲ್ಲಿ ಮರ್ಯಾದೆಯಿಲ್ಲವೆನ್ನಬೇಕಾಗುತ್ತದೆ. ತರುಣರ ಇಂತಹ ವರ್ತನವನ್ನು ಸಮರ್ಥಿಸಲಿಕ್ಕೂ ಕನ್ನಡಿಗನು ಒಂದು ಪುರಕ್ಕೆ ಮೇಲ್ಪಟ್ಟು ತರ್ಕಸರಣಿಯನ್ನು ಕೊಟ್ಟದ್ದೂ ವಿಷಾದಕರವಿದೆ. ಪರಿಷತ್ತಿನಲ್ಲಿ ತರುಣರ ವರ್ತನವನ್ನು ಖಂಡಿಸುವ ಠರಾವು ಮಂಜೂರಾದುದನ್ನು ನೋಡಿದರೆ ಗಂಗಾಧರರಾಯರ ವಿರೋಧವಾಗಿ ಗಲಭೆ ಮಾಡಿದವರು ಅಲ್ಪ ಸಂಖ್ಯಾಕರೆಂದು ತೋರುವುದು. ವಿರೋಧಾಭಿಪ್ರಾಯವನ್ನು ಇಟ್ಟುಕೊಂಡ ಮಾತ್ರಕ್ಕೆ ಒಬ್ಬರು ತಿರಸ್ಕಾರಯೋಗ್ಯರಾಗಲಾರರು. ಹೇಗೂ ಅಲ್ಪ ಸಂಖ್ಯಾಕರು ಗಲಭೆಯೆಬ್ಬಿ ಮಾತಾಡಗೊಡದಂತೆ ಮಾಡುವುದು ಮತ್ತೂ ನಿಂದನೀಯವಿದೆ. ಕೇಳಲಿಚ್ಛೆಯಿಲ್ಲದವರು ಹೊರಹೋಗಬಹುದಲ್ಲ; ಕೇಳಲಿಚ್ಛೆಯಿದ್ದ ಬಹುಸಂಖ್ಯಾಕರ ಮೇಲೆ ಅಲ್ಪ ಸಂಖ್ಯಾಕರು ನಡೆಸಿದ ಈ ದಬ್ಬಾಳಿಕೆಯು ಗರ್ಹಣೀಯವಿದೆ. ಕರ್ನಾಟಕ ಏಕೀಕರಣದ ಅತ್ಯುತ್ಸಾಹದಲ್ಲಿ ಕರ್ನಾಟಕ ತರುಣರು ಕೆಲವರು ಮರಾಠಿ ಪದ್ಧತಿಯನ್ನು ಅನುಸರಿಸುವುದು ತುಂಬಾ ಶೋಚನೀಯವಿದೆ. ಸಭ್ಯತೆಯನ್ನು ಮೀರಿದ ಟೀಕೆ, ಸಭ್ಯತೆಯನ್ನು ಮೀರಿದ ವರ್ತನ ಇವು ವಿರೋಧಿಗಳ ಕಡೆಗೆ ತೋರಿಸಲು ಮರಾಠಿಗರೇ ಅದ್ವಿತೀಯರೆನ್ನುವುದನ್ನು ಕರ್ನಾಟಕ [illegible] ಗಾವಲ್ಲಿ ಅಗ್ರಕ [illegible].

ಒಟ್ಟಿನಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು ಯಶಸ್ವೀಯಾಗಿ ನೆರವೇರಿತೆಂಬುದರಲ್ಲಿ ಸಂದೇಹವಿರುವುದಿಲ್ಲ. ಅದರಲ್ಲಿ ಮಂಜೂರಾದ ಠರಾವುಗಳೂ ಕರ್ನಾಟಕ ಏಕೀಕರಣಕ್ಕೆ ಬಹಳ ಅನುಕೂಲವಾಗಿರುತ್ತವೆ.

ಹೀಗೆ ಕರ್ನಾಟಕ ಏಕೀಕರಣ ಪರಿಷತ್ತಿನ ವಿಷಯವಾಗಿ ಕೆಲಮಟ್ಟಿಗೆ ವಿವರಗಳು ಕೆಲವು ಉತ್ತರ ಕರ್ನಾಟಕದ ಪತ್ರಿಕೆಗಳಿಂದ ನಮಗೆ ದೊರಕಿದರೂ ಇತರ ಪರಿಷತ್ತುಗಳ ವಿವರಗಳೇ ನಮಗೆ ದೊರಕಿರುವುದಿಲ್ಲ. ಪತ್ರಿಕೆಗಳಲ್ಲಿ ಪ್ರಕಟವಾದಷ್ಟು ಪರಿಷತ್ತುಗಳಲ್ಲಿ ನೆರವೇರಿದುದಾದರೆ "ಬರಿಗುಲ್ಲು ನಿದ್ದೆಗೇಡು" ಎಂಬ ಗಾದೆಯಂತಾಗಿದೆಯೋ ಎಂದು ಕಾಣುವುದು. ವೃತ್ತಪತ್ರಿಕಾಕರ್ತರ ಪರಿಷತ್ತಿನ ವರದಿಯನ್ನು ನೋಡಿದರೆ ಅಲ್ಲಿ ನಡೆದುದೇನೆಂದು ಅಭಿಪ್ರಾಯವೇ ಆಗುವುದಿಲ್ಲ. ಕರ್ನಾಟಕ ಚಳವಳಗಳೊಳಗಿನ ಒಂದು ದೊಡ್ಡ ನ್ಯೂನತೆಯೆಂದರೆ ಸರಿಯಾದ ಪ್ರಕಟನೆಯ ಅಭಾವ. ಯಾವ ಚಳವಳವಾದರೂ ಆ ಕ್ಷೇತ್ರಕ್ಕೇನೇ ಅಲ್ಲದೆ ಸಮಗ್ರ ಕರ್ನಾಟಕಕ್ಕೆ ಅದರ ತಿಳಿವು ಉಂಟಾಗುವುದಿಲ್ಲ. ಇಂತಹ ಸಮ್ಮೇಳನಗಳ ಸಮಯದಲ್ಲಿ ಸ್ಥಳೀಕ ಅಥವಾ ಹತ್ತಿರದ ಪತ್ರಿಕೆಗಳು, ಕಾಂಗ್ರೆಸ್ಸು ಮೊದಲಾದ ಅಖಿಲ ಭಾರತ ಸಮ್ಮೇಳನಗಳ ವರದಿಯನ್ನು "ಹಿಂದೂ" ಮೊದಲಾದ ದೈನಿಕ ಪತ್ರಿಕೆಗಳು ಕೊಡುವ ರೀತಿಯಲ್ಲಿ ಕೊಡುವುದಾದರೆ ಇತರ ಪತ್ರಿಕೆಗಳಿಗೆ ಈ ಚಳವಳವನ್ನು ಜನಜನಿತವಾಗಿ ಮಾಡಲು ಸುಲಭವಾಗುವುದು.

ವಿದೇಶ ವರ್ತಮಾನ.

— ಅಮೇರಿಕದ ಫಿಲೆಡೆಲ್ಫಿಯಾ ಯುನಿವರ್ಸಿಟಿಯ ೫೦೦ ಮಂದಿ ವಿದ್ಯಾರ್ಥಿಗಳು ದೊಡ್ಡ ಗಲಭೆಯನ್ನುಂಟುಮಾಡಿದರು. ಜನಸಂಚಾರ, ವಾಹನಗಳ ಚಲಾವಣೆ ಮೊದಲಾದವುಗಳನ್ನು ತಡೆಗಟ್ಟಿದರು. ಟ್ರಾಮು ಕಾರುಗಳಲ್ಲಿನ ಕಂಡಕ್ಟರರನ್ನು ಎಳೆದು ಕೆಳಗೆ ಹಾಕಿದರು. ಸಿಗ್ನಲುಗಳನ್ನು ಬದಲಾಯಿಸಿ, ಬಹಳ ತೊಂದರೆಗಳನ್ನುಂಟುಮಾಡಿದರು.

— ಸಿಲೋನಿನಲ್ಲಿ ವಿಪರೀತವಾದ ಮಳೆಗಾಳಿ ಬಂದುದರಿಂದ ಒಂದು ಮನೆಯು ಕುಸಿದು ಬಿದ್ದು ಹಲವರು ಸತ್ತುಹೋದರು. ಬಹು ಮಂದಿಗೆ ಜಖಮು ಉಂಟಾಗಿರುತ್ತದೆ.

— ಇಂಗ್ಲಾಂಡಿನ ಥೇಮ್ಸ್ ನದಿಯ ಮೇಲೆ ಹಾರುತ್ತಲಿದ್ದ ಒಂದು ವಿಮಾನಕ್ಕೆ ಥಕ್ಕನೆ ಬೆಂಕಿ ಹಿಡಿಯಿತು. ಚಾಲಕನು ಎತ್ತರದಿಂದ ಕೆಳಕ್ಕೆ ಹಾರಲಾಗಿ ಸತ್ತುಹೋದನು. ಪೈಲಟನು ಕೆಳಕ್ಕೆ ಹಾರದೆ ಅದರಲ್ಲಿಯೇ ಉಳಿದುಕೊಂಡಿದ್ದನಾದುದರಿಂದ ಸುಟ್ಟು ಬೂದಿಯಾದನು. ಆತನು ನಿಪುಣರಾದ ಪೈಲಟರುಗಳಲ್ಲಿ ಒಬ್ಬನಾಗಿದ್ದನಂತೆ.

— ಪರ್ಶಿಯ ಮತ್ತು ಸ್ವೀಡನ್ ಈ ಎರಡು ರಾಜ್ಯಗಳೊಳಗೆ ವ್ಯಾಪಾರ ಮತ್ತು ನಾವಿಕತನದ ಬಗ್ಗೆ ಶಾಶ್ವತವಾದ ಸ್ನೇಹದ ಒಪ್ಪಂದವಾಗಿರುತ್ತದೆ.

— ಶ್ರೀಮತಿ ಸರೋಜಿನಿ ನಾಯುಡುಗಳವರು ಜೂನ್ ತಿಂಗಳಲ್ಲಿ ಇಂಗ್ಲಾಂಡಿನಿಂದ ಜರ್ಮನಿಗೆ ಹೊರಟು ಹೋಗಿ ಜುಲಾಯಿ ತಿಂಗಳಲ್ಲಿ ಹಿಂದೂಸ್ಥಾನಕ್ಕೆ ಹೊರಟು ಬರುವರು.

— ಲಂಡನಿನಲ್ಲಿ ಸಧ್ಯದಲ್ಲಿಯೇ ಒಂದು ದೊಡ್ಡ ಮೋಟರ್ ಸ್ಟೇಶನು ನಿರ್ಮಿಸಲ್ಪಡುವದಂತೆ. ಈ ಸ್ಟೇಶನಿನಲ್ಲಿ ಮೂರು ಎಂಟು ಪ್ಲೇಟ್ ಫಾರ್ಮುಗಳಿರುವವು. ೪೦೦ ಮೋಟಾರು ಗಾಡಿಗಳು ನಿಲ್ಲುವ ಕೋಣೆಗಳಿರುವವು. ಒಂದು ಸಾವಿರ ಮಂದಿ ಪ್ರಯಾಣಿಕರು ಕಾದುಕೊಳ್ಳಲು ಅನುಕೂಲತೆಗಳು ಮಾಡಲ್ಪಡುವವು.

— ಡಿಲ್ಲಿಯ ಎಸೆಂಬ್ಲಿ ಹೋಲಿನಲ್ಲಿ ಬೊಂಬುಗಳನ್ನು ಬಿಸಾಡಿದವರನ್ನು ಹೊಗಳಿ ಪ್ರಕಟನೆಗಳನ್ನು ಪ್ರಕಟಿಸಿದ ನೋಟೀಸುಗಳು ಐಯರ್ಲೆಂಡಿನಲ್ಲಿ ಹಂಚಲ್ಪಡುತ್ತಿವೆಯಂತೆ.

— ಅರಸರ ಜೀವನ ಚರಿತ್ರೆಯ ಕುರಿತಾಗಿ ಲಂಡನಿನ ಒಂದು ಪ್ರಕಟನಾಲಯದವರು ಒಂದು ಪುಸ್ತಕವನ್ನು ಪ್ರಕಟಿಸುವುದರಲ್ಲಿದ್ದರಂತೆ. ಆದರೆ ಅದರಲ್ಲಿ ಸುಳ್ಳು ವಿಷಯಗಳೂ, ಅಲ್ಲದ ಸಲ್ಲದ ವಾರ್ತೆಗಳೂ ಇದ್ದುದರಿಂದ ಅದರ ಪ್ರಕಟನೆಯು ನಿಷೇಧಿಸಲ್ಪಟ್ಟಿರುತ್ತದೆ.

— ಚಹಾದಿನ ಮೇಲೆ ಆಮದು ಸುಂಕವನ್ನು ಇಳಿಸಿದುದರಿಂದ ಅದರ ಬೆಲೆಯೂ ಇಳಿದಿರುತ್ತದೆ. ಅದು ಕಾರಣ ಬ್ರಿಟನಿನಲ್ಲಿ ವಾಸಿಸುವರ ಖರ್ಚು ಮೊದಲಿಗಿಂತಲೂ ಈಗ ಸ್ವಲ್ಪ ಇಳಿದಿರುತ್ತದಂತೆ.

— ಪರ್ಶಿಯದಲ್ಲಿ ಒಬ್ಬ ಹೆಂಗಸು ಮೂರು ಮಕ್ಕಳನ್ನು ಹೆತ್ತಿರುವಳು. ಅವುಗಳಲ್ಲಿ ಎರಡು ಶಿಶುಗಳು ಯುರೋಪಿಯನರಂತೆ ಅಚ್ಚ ಬಿಳಿಯದಾಗಿರುತ್ತವೆ. ಒಂದು ಶಿಶುವು ಮಾತ್ರ ನಿಗ್ರೋಯಿನಂತೆ ಸಾದಾಕಪ್ಪು ಬಣ್ಣವುಳ್ಳದ್ದಾಗಿರುತ್ತದೆ. ಪರ್ಶಿಯದ ಡಾಕ್ಟರರನೇಕರು ಇದರ ಕಾರಣವೇನೆಂದು ಕಂಡು ಹಿಡಿಯಲು ಉತ್ಸುಕರಾಗಿರುವರು.

— ಯುಗೋಸ್ಲೇವಿಯದಲ್ಲಿ ಚೆನ್ನಾಗಿ ಮಳೆ ಬಂದುದರಿಂದ ಹಲವು ಕಡೆಗಳಲ್ಲಿ ನೆರೆ ಬಂದಿರುತ್ತದೆ. ರೈಲು ಹಾದಿಗಳಿಗೂ ಜಖಮುಂಟಾಗಿರುತ್ತದೆ. ರೈಲು ಚಲಾವಣೆಯಾಗುವುದಿಲ್ಲ.

— ಚೈನಾದ ಕೆಂಟೋನಿಸ್ ಸೈನ್ಯದವರು ಪ್ಯಾಚೊ ಎಂಬ ಸ್ಥಳವನ್ನು ಸ್ವಾಧೀನಪಡಿಸಿರುವರೆಂದೂ, ಕ್ವಾಂಗಸೀ ಸೈನ್ಯದವರು ಹಿಂತಿರುಗುತ್ತಿರುವರೆಂದೂ ವಾರ್ತೆಯಿದೆ.

[illegible]

— ಡಾ| ಎನ್ನಿಬೆಸೆಂಟಮ್ಮನವರು ಈಗ ಯುರೋಪಿನಲ್ಲಿರುವರು. ಬ್ರಿಟಿಷ ಸರಕಾರದವರು [illegible], ಆದರೆ ಹಿಂದೂಸ್ಥಾನಕ್ಕೆ ಹೋಮ್ ರೂಲ್ ಖಂಡಿತವಾಗಿ ಸಿಕ್ಕುವದಾಗಿಯೂ ಅವರು ಹೇಳಿದರು. ಅವರು ವಿಯೆನ್ನಾ ಮತ್ತು ಬುಡಾಪೆಸ್ಟುಗಳಿಗೆ ಹೋಗಿ ಭಾಷಣಗಳನ್ನು ಕೊಡುವರಂತೆ. ಹಾಲೇಂಡಿಗೆ ಹೋಗಿ ಜೆ. ಕೃಷ್ಣಮೂರ್ತಿಯವರನ್ನು ಕಂಡು ಚಿಕಾಗೋವಿನಲ್ಲಿ ನಡೆಯುವ ವರ್ಲ್ಡ್ ಥಿಯೊಸೊಫಿ ಕಾಂಗ್ರೆಸ್ಸಿಗೆ ತೆರಳುವರು.

— ಇಂಗ್ಲಾಂಡಿನಲ್ಲಿ ಬೇಂಕುಗಳಲ್ಲಿ ಕೆಲಸಮಾಡಲು ಮನುಷ್ಯರ ಬದಲು ಯಂತ್ರಗಳನ್ನಿಡುವದರಲ್ಲಿರುವರಂತೆ. ಈ ಯಂತ್ರಗಳ ಮನುಷ್ಯರು ಹಣ ಖರ್ಚನ್ನು ಸರಿಯಾಗಿ ಇಡುವದು, ಶಿಲ್ಕು ಕಾಣಿಸುವದು ಮೊದಲಾದವುಗಳನ್ನು ಮಾಡುವವು.

— ಅರಸರು ಗುಣಹೊಂದಿದಾಗ ಬಗ್ಗೆ ನಿರ್ಮಿತವಾದ ಥೇಂಕ್ಸ್ ಗಿವಿಂಗ್ ಫಂಡ್ ಇದಕ್ಕೆ ಬರ್ಮಾದ ಗವರ್ನರರು ೫೦೦ ರೂಪಾಯಿಗಳನ್ನು ಕಳುಹಿಸಿರುವರು. ಒಟ್ಟು ಈ ನಿಧಿಯಲ್ಲಿ ೧೪,೬೨೭ ರೂಪಾಯಿಗಳು ಸಂಗ್ರಹವಾಗಿರುತ್ತವೆ.

— ಅಮಾನುಲ್ಲಾರವರು ತನ್ನ ಸೈನ್ಯದೊಂದಿಗೆ ಮುಕೂರಿನಿಂದ ತೆರಳಿದವರೆಂದೂ, ಕಾಬುಲಿಗೆ ಅವರು ಬಂದಿರುವರೆಂದೂ ವರ್ತಮಾನವಿದೆ.

— ನಮ್ಮ ಅರಸರು ಮತ್ತು ಅರಸಿಯರು ಬೋಗನೂರಿನಿಂದ ಹೊರಟು ೩ ಘಂಟೆ ೩೦ ನಿಮಿಷಗಳೊಳಗೆ ವಿಂಡ್ಸರ್ ಅರಮನೆಗೆ ಬಂದು ತಲಪಿದರು. ಬೋಗನೂರಿನಿಂದ ಹೊರಡುವಾಗಲೂ, ವಿಂಡ್ಸರಿಗೆ ಬಂದು ತಲಪಿದಾಗಲೂ ಅವರಿಗೆ ಮಾನಪತ್ರಗಳು ಸಮರ್ಪಿಸಲಾಯಿತು. ಅವರ ಪ್ರಯಾಣದ ಸಮಯ ಅವರು ಕುಳಿತಿದ್ದ ಮೋಟಾರಕಾರನ್ನು ಓಡಿಸದೆ ಮೆಲ್ಲನೆ ಹೋಗಿದ್ದರು. ಮಾರ್ಗದ ಸಮೀಪ ಜನರು ಅವರಿಗೆ ವಂದಿಸಲಾಗಿ ತಮ್ಮ ಹೇಟನ್ನು ಎತ್ತಿ ಅವರಿಗೆ ಅರಸರು ಕೃತಜ್ಞತೆಯನ್ನು ಸೂಚಿಸಿದರು. ವಿಂಡ್ಸರ್ ಅರಮನೆಗೆ ಬಂದು ತಲಪುವಾಗ ಅಲ್ಲಿ ಎರಡು ಸಾವಿರ ವಿದ್ಯಾರ್ಥಿಗಳು ಯೂನಿಯನ್ ಜೇಕ್ ಧ್ವಜವನ್ನು ಬೀಸಿ, ಅರಸರಿಗೆ ಸುಸ್ವಾಗತವನ್ನು ಸೂಚಿಸಿದರು.

— ಬ್ರಿಟಿಷರ ಚುನಾವಣೆಯ ಕ್ರಮಗಳನ್ನು ಕಲಿತುಕೊಳ್ಳುವ ಸಲುವಾಗಿ ಬ್ರಿಟನಿಗೆ ಬಂದ ಹಲವು ವಿದೇಶಿ ವಿದ್ಯಾರ್ಥಿಗಳು, ಲೈಡ್ ಜೋರ್ಜರೊಂದಿಗೆ ಅವರ ಚುನಾವಣೆಯ ತಿರುಗಾಟದ ಸಮಯ ತಾವು ತಿರುಗಾಡುತ್ತಿರುವರಂತೆ.

— ಗ್ರೆಫ್ ಜೆಪ್ಪೆಲಿನ ಎಂಬ ವಿಮಾನವು ಇಂಗ್ಲಾಂಡಿನಿಂದ ಅಮೇರಿಕಕ್ಕೆ ಹಾರುವ ಸಲುವಾಗಿ ಎರಡನೆಯ ಸಲ ಹೊರಟಿತು. ಆದರೆ ಅರ್ಧ ದಿನ ಹಾರಿದೊಡನೆ ಇಂಜಿನಿನ ಯಾವುದೋ ಭಾಗವು ಹಾಳಾದುದರಿಂದ ಹಿಂದಿರುಗಬೇಕಾಯಿತು.

— ಸಸ್ಯ ಶಾಸ್ತ್ರದ ಶೋಧಗಳ ಕುರಿತಾಗಿ ಭಾಷಣಗಳನ್ನು ಕೊಡಲು ಸರ್. ಜಗದೀಶಚಂದ್ರ ಬೋಸರವರಿಗೆ ಎಬರ್ಡೀನ್ ಯುನಿವರ್ಸಿಟಿಯಿಂದ ಆಮಂತ್ರಣ ಬಂದಿರುತ್ತದೆ. ಸರ್. ಬೋಸರವರು ತನ್ನ ಪತ್ನಿಯವರೊಂದಿಗೆ ಎಬರ್ಡೀನಿಗೆ ತೆರಳಲಿರುವರು.

— ಜರ್ಮನಿಯ ದೇಶದಲ್ಲಿ ಒಂದು ಕನ್ನಡಿ ತಯಾರಾಗಿದೆ. ಅದನ್ನು ತೋರಿಸಿದ ಕೂಡಲೇ ರೈಲು ಗಾಡಿಯು ತಟ್ಟನೆ ನಿಂತುಬಿಡುತ್ತದೆ. ೪೫೦೦ ಸಾರಿ ಇದರ ಪರೀಕ್ಷೆಯಾಯಿತು. ಒಂದು ಸಾರಿಯೂ ನಿಷ್ಫಲವಾಗಲಿಲ್ಲ. ಈ ಕನ್ನಡಿಯಿಂದ ಗಾಡಿಯ ವೇಗವನ್ನೂ ನಿಲ್ಲಿಸಬಹುದೆಂದು ತಿಳಿಯಬರುತ್ತದೆ.

— ಯುರೋಪಿನಲ್ಲಿ ಈಗ ಯುದ್ಧದ ಭಯಂಕರತೆಯ ವಿಷಯವಾಗಿ ಅನೇಕ ಪುಸ್ತಕಗಳು ಪ್ರಚಾರವಾಗಿವೆ. ಇಂತಹ ಒಂದು ಪುಸ್ತಕದ ೩,೫೦,೦೦೦ ಪ್ರತಿಗಳನ್ನು ಯುದ್ಧಗಳಿಂದ ಬೇಸರವಾದ ಜರ್ಮನಿಯ ಬಡಜನರು ಎರಡೇ ತಿಂಗಳಲ್ಲಿ ಖರ್ಚುಮಾಡಿರುವರಂತೆ.

ಸ್ವದೇಶ ವರ್ತಮಾನ.

— ಬನಾರಸಿನಲ್ಲಿ ಕೊಲೆರಾ ರೋಗವು ಕಡಿಮೆಯಾಗಿಲ್ಲವಂತೆ. ಅದರ ಒಂದಿಗೆ ಸಿಡುಬು ರೋಗವೂ ಅಲ್ಲಿ ಹೆಚ್ಚುತ್ತಲಿದೆ.

— ಇತ್ತೀಚೆಗೆ ಸಿಮ್ಲಾದಲ್ಲಿ ಜರಗಿದ ರೆವೆನ್ಯೂ ಮೆಂಬರರ ಪರಿಷತ್ತಿನ ಕಾರ್ಯಕ್ರಮಗಳ ವರದಿಯು ಪ್ರಕಟವಾಗದೆ ಗೋಪ್ಯವಾಗಿಯೇ ಇಡಲ್ಪಟ್ಟಿರುತ್ತದೆ.

— ಹಿಂದೀ ವೈಮಾನಿಕನಾದ ಪಿ. ಎನ್. ಕಬೂಲಿಯು ತನ್ನ ಇಂಗ್ಲಾಂಡ್-ಕರಾಚಿಯ ಹಾರಾಟವನ್ನು ಮುಗಿಸಿ ಇಳಿದೊಡನೆ ಆತನಿಗೆ ಸಂಭ್ರಮದ ಸ್ವಾಗತವನ್ನು ಸಮರ್ಪಿಸಬೇಕೆಂದು ಕರಾಚಿಯ ಮುನಿಸಿಪಾಲಿಟಿಯವರು ನಿಶ್ಚಯಿಸಿರುವರು.

— ಕಳೆದವಾರದಲ್ಲಿ ಕಲಕತ್ತೆಯಲ್ಲಿ ಕೊಲೆರಾ ರೋಗದ ಹಾವಳಿಯು ಬಹುಮಟ್ಟಿಗೆ ಇಳಿದಿರುತ್ತದೆ. ಸತ್ತವರ ಸಂಖ್ಯೆಯು ತೀರ ಕಡಿಮೆಯಾಗಿರುತ್ತದೆ.

— ಭಾರತ ಹಿಂದೂ ಸೇವಾದಳಕ್ಕೆ ಡಾ| ಜಿ. ಡಿ. ಬಿರ್ಲಾರವರು ಪ್ರತಿ ತಿಂಗಳಲ್ಲಿಯೂ ರೂಪಾಯಿ ೯೦೦ರಂತೆ ಕೊಡುವದಾಗಿ ಪ್ರತಿಜ್ಞೆಮಾಡಿರುವರು.

— ತಾರೀಕು ೧೮ನೇ ಮತ್ತು ೧೯ನೇ ದಿನಗಳಲ್ಲಿ ೧೧ನೇ ಸಿಂಧೂ ಪ್ರಾಂತಿಕ ಪರಿಷತ್ತು ಕರಾಚಿಯಲ್ಲಿ ದಿವಾನ ಚಮನ್‌ಲಾಲರವರ ಅಧ್ಯಕ್ಷತೆಯಲ್ಲಿ ನಡೆಯಿತು.

— ಈಸ್ಟರ್ನ್ ಬೆಂಗಾಳ ರೈಲುವೇಯವರು ಜರ್ಮನಿಯ ಒಂದು ದೊಡ್ಡ ಕಾರಖಾನೆಯವರೊಂದಿಗೆ ೧೫ ಲೋಕೋಮೋಟಿವ್ ರೈಲುವೇ ಇಂಜಿನುಗಳಿಗಾಗಿ ಆರ್ಡರು ಕೊಟ್ಟಿರುವರಂತೆ. ಇವರು ೧೫ ಇಂಜಿನುಗಳನ್ನು ೪೧,೨೫೦ ಪವನುಗಳಿಗೆ ತಯಾರಿಸಿಕೊಡಲು ಒಪ್ಪಿರುವರು. ಇದು ಬ್ರಿಟಿಷರ ಒಪ್ಪಿಗೆಗಿಂತ ೫,೧೫೦ ಪವನುಗಳಿಗೆ ಕಡಿಮೆಯಾಗಿರುತ್ತದೆ.

— ಸಂಯುಕ್ತ ಪ್ರಾಂತದ ಕೆಲವು ಅಧಿಕಾರಿಗಳನ್ನು ಕೊಲೆಮಾಡುವ ಪ್ರಯತ್ನದಲ್ಲಿರುವರೆಂಬ ಅಪಾದನೆಯ ಮೇಲೆ ಕೈದುಮಾಡಲ್ಪಟ್ಟ ಬಿ. ಆರ್. ಚಂದ್ರ ಮುಖರ್ಜಿ ಮೊದಲಾದ ಆರು ಮಂದಿಗಳು ಲಾಹೋರಿಗೆ ತರಲ್ಪಟ್ಟು, ಹದಿನೈದು ದಿನಗಳ ವರೆಗೆ ಕಾರಾಗೃಹದಲ್ಲಿದ್ದು ಈಗಷ್ಟೇ ಜಾಮೀನಿನ ಮೇಲೆ ಬಿಡುಗಡೆಹೊಂದಿರುವರು. ಮುಖರ್ಜಿಯವರು ಹೇಳುವದೇನೆಂದರೆ ಕೈದುಮಾಡಲ್ಪಟ್ಟ ಮೇಲೆ ಮುಖವನ್ನು ಮುಸುಕಿನಿಂದ ಮುಚ್ಚಿ ಕೊಂಡೊಯ್ಯುದು ತನ್ನೊಬ್ಬನನ್ನೇ. ರಾತ್ರಿಯಲ್ಲಿ ಅವರನ್ನು ಒಂದು ಕತ್ತಲೆಯ ಕೋಣೆಯಲ್ಲಿ ಇಡುತ್ತಿದ್ದರಲ್ಲದೆ ಒಂದು ಕಯ್ಯನ್ನು ಕಬ್ಬಿಣದ ಸರಳಿಗೆ ಕಟ್ಟಿಹಾಕುತ್ತಿದ್ದರು. ಹಗಲು ಹೊತ್ತಿನಲ್ಲಿ ಬೇರೆಯೇ ಕೋಣೆಯನ್ನು ಒಂದು ಮಂಚದ ಮೇಲೆ ಕುಳಿತುಕೊಳ್ಳಲು ಅಥವಾ ಮಲಗಿಕೊಳ್ಳಲು ಅವರಿಗೆ ಅನುಜ್ಞೆಯಿದ್ದಿತು. ಆದರೆ ಒಂದು ಕೈಯನ್ನು ಮಾತ್ರ ಮಂಚದ ಕಾಲಿಗೆ ಸದಾ ಬಿಗಿಯುತ್ತಿದ್ದರಂತೆ.

— ಶಿಮ್ಲಾದಿಂದ ಇಪ್ಪತ್ತು ಮೈಲು ದೂರವಿರುವ ಕ್ಯಾರಿಬಂಗ್ಲಾ ಎಂಬ ಸ್ಥಳದ ಸಮೀಪ ಒಂದಕ್ಕೊಂದು ಎದುರಾಗಿ ಬರುತ್ತಿರುವ ಎರಡು ಮೋಟಾರುಕಾರುಗಳು ಢಿಕ್ಕಿಹೊಡೆದು, ಒಂದು ಮೋಟಾರುಕಾರು ಅಲ್ಲಿಯೇ ಇದ್ದ, ೬೦೦ ಅಡಿ ಆಳದ ತಗ್ಗಿನಲ್ಲಿ ಬಿದ್ದುಬಿಟ್ಟಿತು. ಕಾರಿನಲ್ಲಿ ಇದ್ದ ಒಬ್ಬನು ಒಡನೆಯೇ ಸತ್ತುಹೋದನು. ಇಬ್ಬರು ವಿಶೇಷವಾದ ಗಾಯ ಹೊಂದಿದರು.

— ಕಲಕತ್ತೆಯ ಮಿ। ಮುಕುಂದಲಾಲ ಸರಕಾರರ ಮೇಲೆ ವಿಧಿಸಲ್ಪಟ್ಟ ಶಿಕ್ಷೆಯನ್ನು ಖಂಡಿಸಿಯೂ, ಅವರ ಸಂಬಂಧಿಕರ ಮುಖದೊಂದಿಗೆ ಸಹಾನುಭೂತಿಯನ್ನು ಸೂಚಿಸಿಯೂ ಕಲಕತ್ತೆಯ ಮಜೂರ ಸಂಘದವರು ಸಭೆಕೂಡಿ ಠರಾವುಗಳನ್ನು ಮಂಜೂರು ಮಾಡಿದರು.

— ಮೀರತಿನ ಪೋಲೀಸರು ಜಿಲ್ಲಾ ಕಾಂಗ್ರೆಸ್ ಆಫೀಸನ್ನು ಶೋಧಿಸಿ, ಹಲವು ಪತ್ರಗಳನ್ನೂ, ಒಂದು ಡೈರಿಯನ್ನೂ ಸ್ವಾಧೀನ ಪಡಿಸಿಕೊಂಡರು. ಇತ್ತೀಚೆಗೆ ಬಾಂಬು ಕಂಡು ಹಿಡಿಯಲ್ಪಟ್ಟುದರ ಸಂಬಂಧವಾಗಿ ಮೊದಲು ಅಲ್ಲಿ ವಾಸಿಸುತ್ತಿದ್ದ ಮೋಹನಲಾಲ ರಾಂಕರೆಂಬವರಿಗೆ ಕೈದುಮಾಡಲ್ಪಟ್ಟು, ಮೆಜಿಸ್ಟ್ರೇಟರು ಅವರನ್ನು ಒಂದು ವಾರದ ರಿಮಾಂಡಿಗೆ ಗುರಿಮಾಡಿರುವರು.

— 'ಹಿಂದೂಸ್ಥಾನ ಟಾಯಿಮ್ಸ್' ಎಂಬ ಪತ್ರಿಕೆಯ ಸಂಪಾದಕನಿಗೆ ಕೆಂಪು ಪತ್ರದ ಬದಲು ಬಾಲರಾಜನೆಂಬವನಿಂದ ಟೆಲಿಫೋನು ವಾರ್ತೆಯು ಬಂದಿರುವುದಂತೆ. ಒಂದೆರಡು ದಿನಗಳ ಹಿಂದೆ ಪತ್ರಿಕಾ ಆಫೀಸಿನಲ್ಲಿ ಸಂಪಾದಕರಿಗೆ ಬಾಲರಾಜರಿಂದ ವಾರ್ತೆಯು ಬಂದಿತು. ಎಸೆಂಬ್ಲಿಯಲ್ಲಿ ಬಾಂಬು ಗಲಾಟೆಯ ಸಂಬಂಧವಾಗಿ ವಿಚಾರಣೆಯನ್ನು ನಡೆಸುವ ಮೆಜಿಸ್ಟ್ರೇಟರಾದ ಮಿ। ಪೂಲ್ ಮತ್ತು ಸಾಕ್ಷಿಗಾರರಾದ ಮಿ। ಒಬ್ರಿಯನ್ ಇವರಿಬ್ಬರೂ ೨೪ ತಾಸುಗಳೊಳಗೆ ವಧಿಸಲ್ಪಡುವರೆಂಬ ಸಂಗತಿಯನ್ನು ನೀವು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕು. ನೀವು ಇದಕ್ಕೆ ನಿರಾಕರಿಸುವುದಾದರೆ ನೀವು ೪೮ ತಾಸುಗಳೊಳಗೆ ಕೊಲೆಮಾಡಲ್ಪಡುವಿರಿ.' ಎಂಬುದೇ ಅವರಿಗೆ ಬಂದ ವರ್ತಮಾನವಾಗಿದ್ದಿತು. ಇದೇ ಮನುಷ್ಯನಿಂದ ಮಿ। ಒಬ್ರಿಯನರಿಗೂ ೨೪ ತಾಸುಗಳೊಳಗೆ ಅವರು ಕೊಲ್ಲಲ್ಪಡುವರೆಂದು ವುಡ್‌ಲೇಂಡ್ ಹೋಟೆಲಿನಲ್ಲಿ ಟೆಲಿಫೋನ್ ವಾರ್ತೆ ಬಂದಿತು. ಒಡನೆ ಈ ವಾರ್ತೆಯು ಪೋಲೀಸರಿಗೆ ತಿಳಿಸಲ್ಪಟ್ಟುದರಿಂದ ಪೋಲೀಸರ ಒಂದು ತಂಗಡವು ಬಂದು ಹೋಟೇಲಿನ ಕಾವಲಿಗೆ ಕಾತುಕೊಂಡಿತು.

— ತಿನ್ನವೆಲ್ಲಿಯಲ್ಲಿ ಒಬ್ಬ ಕ್ರೂರ ಸ್ವಭಾವದ ಮನುಷ್ಯನು ತನ್ನ ಹೆಂಡತಿಯನ್ನು ಹೊಡೆದು ಕೊಂದುದರಿಂದ ಪೋಲೀಸರಿಂದ ಹಿಡಿಯಲ್ಪಟ್ಟನು. ಆತನ ವಿಚಾರಣೆಯು ನಡೆಯುತ್ತಲಿದೆ.

— ಗಂಜಾಮ್ ಜಿಲ್ಲೆಯ ಈಚಾಪುರ ಎಂಬಲ್ಲಿ ರೈಲು, ರಾಜಬೀದಿಯನ್ನು ದಾಟಿ ಹೋಗುವಲ್ಲಿ ಒಂದು ದೊಡ್ಡ ಅಪಘಾತವು ಸಂಭವಿಸಿತು. ರೈಲು ಬುಸುಗುಟ್ಟುತ್ತಾ ಬರುವ ಸಮಯದಲ್ಲಿಯೇ ಒಂದು ಜೋಡು ಎತ್ತಿನ ಗಾಡಿಯು ಅದಕ್ಕೆ ಅಡ್ಡವಾಗಿ ಹೋಗುತ್ತಿತ್ತು. ಗಾಡಿಯು ಚೂರುಚೂರಾಯಿತು. ಗೇಟು ಕಾಯುವವನು ಗಾಡಿಯ ಸಮೀಪವಿದ್ದನಂತೆ. ಆತನು ಕೂಡ ರೈಲಿನಡಿಯಲ್ಲಿ ಬಿದ್ದು ಸತ್ತುಹೋದನು.

— ಕೃಷ್ಣಯ ಪೇಲವ್ ಎಂಬೂರಿನ ಹಳ್ಳಿಯ ಪಂಚಾಯಿತಿಗಳು ಮಹಾತ್ಮಾಜಿಯವರ ಆಗಮನದ ಸಂದರ್ಭದಲ್ಲಿ ಪಂಚಾಯಿತಿನ ಪರವಾಗಿ ೫ ರೂಪಾಯಿಗಳನ್ನು ಮಹಾತ್ಮಾಜಿಯವರಿಗೆ ಸಮರ್ಪಿಸಬೇಕೆಂದು ನಿಶ್ಚಯಿಸಿದ್ದರು. ಇದಕ್ಕೆ ಗೋದಾವರಿಯ ಕಲೆಕ್ಟರ ಧೊರೆಗಳು ಪಂಚಾಯಿತಿ ಹಣವನ್ನು ಅಂತಹ ಕೆಲಸಕ್ಕೆ ಉಪಯೋಗಿಸಬಾರದೆಂದೂ, ಅದು ಕಾರಣ ಮದರಾಸು ಗ್ರಾಮ ಪಂಚಾಯಿತು ಕಾನೂನಿನ ೩೩ನೇ ಪ್ರಕರಣಕ್ಕೆ ಸರಿಯಾಗಿ ಅವರ ನಿರ್ಧಾರವನ್ನು ಏಕೆ ತೆಗೆದುಹಾಕಬಾರದೆಂದು ಕಾರಣಗಳನ್ನು ಸೂಚಿಸಬೇಕೆಂದೂ' ಪಂಚಾಯಿತು ಪ್ರೆಸಿಡೆಂಟರಿಗೆ ನೋಟೀಸು ಕೊಟ್ಟಿರುವರು.

— ವಠಾರದ ಪ್ರಾಥಮಿಕ ಶಿಕ್ಷಣದ ಕಾರ್ಯವನ್ನು ಚೆನ್ನಾಗಿ ಕೈಕೊಳ್ಳಲು ಸಹಾಯವಾಗುವಂತೆ ನಾಗಪುರ ಡಿಸ್ಟ್ರಿಕ್ಟ್ ಕೌನ್ಸಿಲಿನ ಪ್ರೆಸಿಡೆಂಟರಾದ ರಾವ್‌ಬಹದೂರ್ ಡಿ. ಲಕ್ಷ್ಮೀನಾರಾಯಣರವರು ೧೩,೦೦೦ ರೂಪಾಯಿಗಳನ್ನು ಕೌನ್ಸಿಲ್ ವಿನಿಯೋಗದ ಬಗ್ಗೆ ಇಟ್ಟಿರುವರು.

— ಲಾಹೋರಿನ ಜೈಲಿನಲ್ಲಿ ಎರಡು ವರುಷಗಳ ಹಿಂದೆ ಎರಡು ವರುಷದ ಶಿಕ್ಷೆಯ ಮೇಲೆ ಒಬ್ಬ ಸಿಕ್ಖ ಕೈದಿಯು ಬಂಧಿಸಲ್ಪಟ್ಟಿದ್ದನು. ಆತನ ಎರಡು ವರುಷಗಳ ಶಿಕ್ಷೆಯು ಇನ್ನೆರಡು ತಿಂಗಳುಗಳೊಳಗೆ ಅಂತ್ಯವಾಗುತ್ತಿತ್ತು. ಕಳೆದ ಆದಿತ್ಯವಾರ ಆತನು ಜೈಲಿನಲ್ಲಿ ಕತ್ತು ಮತ್ತು ಮೂಗು ಕೊಯ್ಯಲ್ಪಟ್ಟು ವಧಿಸಲ್ಪಟ್ಟಿರುವನು. ಕೊಲೆಯ ಕಾರಣಗಳು ಪರಿಶೋಧಿಸಲ್ಪಡುತ್ತಲಿವೆ.

— ಅಹಮದಾಬಾದದ ಗುಜರಾಥಿ ಜಿನ್ನಿಂಗ ಮಿಲ್ಲಿನ ಮುಖ್ಯ ಕೆಲಸಗಾರನು ಒಬ್ಬ ನೇಕಾರನ ಅಲ್ಪ ತಪ್ಪಿಗಾಗಿ ಆತನ ಮುಖಕ್ಕೆ ಕಪ್ಪು ಬಣ್ಣವನ್ನು ಬಳಿದುದಕ್ಕಾಗಿ ಸಿಟಿ ಮೆಜಿಸ್ಟ್ರೇಟರು ಮುಖ್ಯ ಕೆಲಸಗಾರನಿಗೆ ನೂರು ರೂಪಾಯಿ ಜುಲ್ಮಾನೆ, ತಪ್ಪಿದರೆ ಎರಡು ತಿಂಗಳುಗಳ ಕಠಿಣ ಸಜೆಯನ್ನು ವಿಧಿಸಿರುವರು.

— ಅಹಮದಾಬಾದದಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರನ ಮಗ ನಾಥ ಮಹಮ್ಮದಿ ಹುಡುಗನೊಬ್ಬನು ತಿವಿಯಲ್ಪಟ್ಟಿರುವನು. ಇನ್ನೊಬ್ಬ ಮಹಮ್ಮದ ಹುಡುಗನಿಗೆ ವಿಶೇಷ ಜಖಮುಂಟಾಗಿರುತ್ತದೆ. ಪಟ್ಟಣದ ಒಂದೆಡೆಯಲ್ಲಿ ಮಹಾಭಾರತ ಕಥೆಯನ್ನು ಓದುತಿದ್ದರು. ಆಗ ಈ ಇಬ್ಬರು ಹುಡುಗರು ಒಬ್ಬ ಹಿಂದೂ ಸ್ತ್ರೀಯನ್ನು ಹಿಂಸಿಸಿದರು. ಅದು ಕಾರಣ ಒಬ್ಬ ಹಿಂದೂವು ಹರಿತವಾದ ಕೋಲಿನಿಂದ ಮಹಮ್ಮದಿ ಹುಡುಗನನ್ನು ತಿವಿದನು. ಪೋಲೀಸರು ಬಂದು ಆರು ಮಂದಿ ಹಿಂದೂಗಳನ್ನು ಕೈದುಮಾಡಿದರು.

— ಮೀರತಿನ ಬಾಂಬುಗಳ ಸಂಬಂಧವಾಗಿ ಮೀರತಿನ ಗಾಂಧಿ ಆಶ್ರಮವನ್ನು ಹುಡುಕಿ ಕಾಲೀಶ್ವರ ಪ್ರಸಾದ ಎಂಬವನನ್ನು ಪೋಲೀಸರು ಕೈದುಮಾಡಿರುವರು.

— ಟಿನ್ನವೆಲ್ಲಿಯಲ್ಲಿ ಇಬ್ಬರು ಮುಸಲ್ಮಾನ ಹೆಂಗಸರು ಪರಸ್ಪರ ಜೊತೆ ಕಾದಾಡಿ ಒಬ್ಬಳು ಸತ್ತುಹೋದಳು.

— ಮುಂಬಾಯಿಯ ಯುವಕ ಪರಿಷತ್ತು ಪೂನಾ ಯುತ್ ಲೀಗಿನ ಪ್ರೆಸಿಡೆಂಟರಾದ ಮಿ। ಎನ್. ವಿ. ಗಡ್ಗಿಲರವರ ಅಧ್ಯಕ್ಷತೆಯಲ್ಲಿ ಜರಗಿತು.

— ಬಕ್ರೀದ್ ಹಬ್ಬವು ಕಲಕತ್ತೆಯಲ್ಲಿ ಯಾವ ಗೊಂದಲವೂ ಇಲ್ಲದೆ ಶಾಂತತೆಯಿಂದ ನೆರವೇರಿತು. ಪೋಲೀಸರ ತಯಾರಿಯು ಗಲಭೆಗಳಾದರೆ ತಡೆಗಟ್ಟಲು ಸಿದ್ಧತೆಯಲ್ಲಿಯೇ ಇದ್ದಿತು.

— ಕಲಕತ್ತೆಯ ಚಿತ್ತರಂಜನ ಸೇವಾಸದನದಲ್ಲಿ ಶಸ್ತ್ರ ಚಿಕಿತ್ಸೆ ಮಾಡಲ್ಪಟ್ಟ ಪಂಡಿತ ನೋತಿಲಾಲರ ಪತ್ನಿಯು ದೇಹಾರೋಗ್ಯದಲ್ಲಿ ಅಭಿವೃದ್ಧಿ ಹೊಂದುತ್ತಿರುವರೆಂದೂ, ಶ್ರೀ ಜವಾಹಿರ ಲಾಲನೆಹರುಗಳವರ ಪತ್ನಿಯವರೂ ಅದೇ ವೈದ್ಯಾಲಯದಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ ವಾರ್ತೆಯಿದೆ.

— ಸೋಶಿಯಲಿಸ್ಟ ರಿಪಬ್ಲಿಕನ್ ಆರ್ಮಿಯ ಮುಂಬಾಯಿ ಡಿವಿಜನಿನ ಕಮಾಂಡಿಂಗ್ ಆಫೀಸರನಿಂದ ಮುಂಬಾಯಿಯ ಗಿರಣಿ ಮಾಲೀಕರ ಸಂಘದ ಪ್ರೆಸಿಡೆಂಟರಿಗೆ ಒಂದು ಕೆಂಪು ಪತ್ರವು ಬಂದಿತು. "ನೀವು ಮಜೂರಗಾರರ ಏಪ್ರಿಲ್ ತಿಂಗಳ ಸಂಬಳವನ್ನು ಕೊಡದಿರುವದು, ಉಪವಾಸದ ಕಷ್ಟದಿಂದಾದರೂ ಮಜೂರಗಾರರು ಕೆಲಸಕ್ಕೆ ಬರಬೇಕೆಂದು. ನೀವು ನೆನಸಿರುವದನ್ನು ಸೂಚಿಸುತ್ತದೆ. ಮೇ ೩೧ನೇ ತಾರೀಕಿನೊಳಗೆ ನೀವು ಅವರ ಸಂಬಳವನ್ನೆಲ್ಲ ಕೊಡತಕ್ಕದ್ದು. ಇಲ್ಲದಿದ್ದರೆ ನಿಮ್ಮ ಸಂಘದ ಎಲ್ಲ ಮಂದಿಯನ್ನು ಗುಂಡಿನಿಂದಾಗಲಿ, ಬಾಂಬುಗಳಿಂದಾಗಲಿ, ಕೊಲ್ಲಬೇಕೆಂದು ಹುಕುಮು ಆಗಿರುತ್ತದೆ' ಎಂದು ಬರೆಯಲ್ಪಟ್ಟಿತ್ತು. ಈ ಪತ್ರದ ಪ್ರತಿಯು ಮುಂಬಾಯಿ ಕ್ರೋನಿಕಲ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ.

ಆಲ್ ಇಂಡಿಯಾ ೧೯ನೇ ಆಯುರ್ವೇದ ಪರಿಷತ್ತು ನಾಸಿಕದಲ್ಲಿ ೧೯ ಮತ್ತು ನಂತರದ ದಿನಗಳಲ್ಲಿ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರ ಭಾಷಣವು ಸ್ಫೂರ್ತಿಪರವೂ, ಗಂಭೀರವೂ ವಿಚಾರಪೂರ್ಣವೂ ಆಗಿದ್ದಿತು.

ಧಾರವಾಡದ ಗೌಡಸಾರಸ್ವತ ಬ್ರಾಹ್ಮಣ ಕುಮಾರ ಸಂಘದ ೬ನೆಯ ವಾರ್ಷಿಕ ಅಧಿವೇಶನವು ಆಲ್ಲಿಸ್ಟಿಯಲ್ಲಿ ಶಕ್ಯಾರಣಾಕು ಲಕ್ಷ್ಮಣ ಕಾಮತ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಹಲವು ಪ್ರತಿಷ್ಠಿತ ಗೃಹಸ್ಥರ ಭಾಷಣಗಳು ನಡೆದುವು.

— ಮದರಾಸು ಸ್ಕ್ಯಾಮನ್ ಕಮಿಟಿಯವರ ಕಾರ್ಯಕ್ರಮಗಳು ಈ ತಿಂಗಳ ಅಖೈರಿಯೊಳಗೆ ಕೊನೆಗಾಣಲಿರುವವು. ತದನಂತರ ಅವರು ಒಂದು ವರದಿಯನ್ನು ತಯಾರಿಸಿ, ಅದನ್ನು ಮೊದಲಾಗಿ ಲೆಜಿಸ್ಲೇಟಿವ್ ಕೌನ್ಸಿಲಿಗೆ ಸಮರ್ಪಿಸುವರು. ಅಲ್ಲಿಂದ ಅದು ಸ್ಕ್ಯಾಮನ್ ಕಮಿಶನಿಗೆ ಕಳುಹಲ್ಪಡುವದು.

— ಬನಾರಸಿಗೆ ತರಿಸಲ್ಪಡುವ ವಿದೇಶಿ ವಸ್ತ್ರಗಳ ಮೇಲೂ ಹಿಂದೂ ದೇಶದಲ್ಲಿಯೇ ತಯಾರಿಸಲ್ಪಡುವ ಮಿಲ್ ವಸ್ತ್ರಗಳ ಮೇಲೂ ಮೊದಲು ರವಿವಾರಿಗೆ ಮೂರು ಪೈಯಂತೆ ತೆರಿಗೆ ತೋರಿಸುತ್ತಿದ್ದರು. ಮುನಿಸಿಪಾಲಿಟಿಯವರು ಈ ತೆರಿಗೆಯನ್ನು ಬದಲಾಯಿಸಿ ಮಣಕ್ಕೆ ೨-೮-೦ ರೂಪಾಯಿಗಳಂತೆ ತೆರಿಗೆಯನ್ನು ವಿಧಿಸಿರುವರು. ಖಾದಿ ಬಟ್ಟೆಯ ಮೇಲೆ ತೆರಿಗೆಯನ್ನು ಹೊರಿಸಿರುವುದಿಲ್ಲ.

— ಮೊನ್ನೆ ಕಾನ ನಡೆದ ಸಿಂಧೂ ಪ್ರಾಂತಿಕ ಪರಿಷತ್ತಿನಲ್ಲಿ ಲಾಲಾಜಿಯವರ ನಿಧನಕ್ಕಾಗಿ ದುಃಖವನ್ನು ಸೂಚಿಸಿಯೂ, ಅವರ ನಿಧನಕ್ಕೆ ಕಾರಣವಾದ ಪೋಲೀಸರ ವರ್ತನೆಯನ್ನು ಖಂಡಿಸಿಯೂ, ಸರಕಾರದವರು ಮಜೂರ ಧುರೀಣರನ್ನು ಕೈದುಮಾಡಿರುವಿಕೆ, ಟ್ರೇಡ್ ಡಿಸ್ಪ್ಯೂಟ್ಸ್ ಬಿಲ್ಲನ್ನು ಮಂಜೂರು ಮಾಡುವಿಕೆ ಮೊದಲಾದವುಗಳನ್ನು ಖಂಡಿಸಿಯೂ, ಖಾದಿಯನ್ನು ಪ್ರೋತ್ಸಾಹಿಸಬೇಕಾಗಿಯೂ ಠರಾವುಗಳು ಮಂಜೂರಾದವು.

ದಕ್ಷಿಣ ಕನ್ನಡ.

ಮಂಗಳೂರು: — ಪುತ್ತೂರು ಬೋರ್ಡ್ ಹೈಸ್ಕೂಲಿನ ಹೆಡ್ ಮಾಸ್ತರ್ ಶ್ರೀ ಬಾಲಕೃಷ್ಣ ಪುರಾಣಿಕರಿಗೆ ಕಾರ್ಕಳಕ್ಕೂ, ಕಾರ್ಕಳ ಬೋರ್ಡ್ ಹೈಸ್ಕೂಲಿನ ಹೆಡ್‌ಮಾಸ್ತರರಾದ ಶ್ರೀ ಶ್ರೀನಿವಾಸ ಕಿಣಿಯವರಿಗೆ ಕಾಸರಗೋಡಿಗೂ, ಕಾಸರಗೋಡು ಬೋರ್ಡ್ ಹೈಸ್ಕೂಲು ಹೆಡ್ ಮಾಸ್ತರರಾದ ಶ್ರೀ ರಾಮನ್ ನಂಬಿಯಾರರಿಗೆ ಪುತ್ತೂರಿಗೂ ವರ್ಗವಾಗಿರುತ್ತದೆ.

ಕೆಲವು ದಿನಗಳ ಹಿಂದೆ ಇಲ್ಲಿಯ ಮೊಗವೀರರೊಳಗೂ ಮಾಪಿಳ್ಳೆಯವರೊಳಗೂ ನಡೆದ ಗಲಾಟೆಯ ಸಂಬಂಧದಲ್ಲಿ ಕೈದುಮಾಡಲ್ಪಟ್ಟವರ ಕುರಿತಾಗಿ ವಿಚಾರಣೆಯು ನಡೆದು ಡಿಸ್ಟ್ರಿಕ್ಟ್ ಕಲೆಕ್ಟರ ಧೊರೆಗಳವರು ಒಂಭತ್ತು ಮಂದಿ ಮಾಪಿಳ್ಳೆಯವರಿಗೂ, ಐವರು ಮೊಗವೀರರಿಗೂ ಒಂದೊಂದು ವರುಷದ ಜಾಮೀನು ಭಿತಿಯನ್ನು ವಿಧಿಸಿರುವರೆಂದು ತಿಳಿದುಬರುತ್ತದೆ.

ಈ ವರುಷ ಮುಸಲ್ಮಾನರ ಬಕ್ರೀದ್ ಹಬ್ಬದ ಸಂಬಂಧ ಮೆರವಣಿಗೆ ನಡಿಸಲು ಮುಸಲ್ಮಾನರು ಲೈಸೆನ್ಸ್ ಪಡೆದು ಮೆರವಣಿಗೆಯನ್ನಾಚರಿಸಿದರು. ಮೆರವಣಿಗೆಯ ಸಮಯ ಅವರೊಂದಿಗೆ ಹಲವು ಪೋಲೀಸರಿದ್ದುದಲ್ಲದೆ ಮೆರವಣಿಗೆಯನ್ನು ಕ್ರಮಪ್ರಕಾರ ಸಾಲುಸಾಲಾಗಿ ನಡೆಸಿದ್ದರು. ಅಂದು ಟಕ್ಕಿ ಕಾರಿನವರೂ, ಜಟಕಾ ಬಂಡಿಯವರೂ ಮುಸಲ್ಮಾನರಿಗೆ ಟಕ್ಸಿಗಳನ್ನು, ಜಟಕಾ ಬಂಡಿಗಳನ್ನು ಬಾಡಿಗೆಗೆ ಬಿಡಲೇ ಇಲ್ಲ.

ತಾ. ೧೫-೫-೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೧೩ ಮರಣಗಳಾದವು. ಈ ಪೈಕಿ ಸನ್ನಿಪಾತ ಜ್ವರದಿಂದ ೧, ಶ್ವಾಸಕೋಶದ ರೋಗಗಳಿಂದ ೬, ಜನನದ ಸಮಯ ಮರಣ ೧, ಇತರ ಎಲ್ಲಾ ಕಾರಣಗಳಿಂದ ೫, ಶಿಶುಮರಣಗಳು ೪. ಒಟ್ಟು ಜನನಗಳು ೩೪.

ಕಳೆದ ಮಾರ್ಚ ತಾ. ೧೭ಕ್ಕೆ ಶ್ರೀ ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರ ಅಧ್ಯಕ್ಷತೆಯಲ್ಲಿ ಇಲ್ಲಿನ ಅನೇಕ ಸದ್ಗೃಹಸ್ಥರ ಕೂಡುವಿಕೆಯಿಂದ ಮ॥ ರಾ॥ ಯಸ್. ಯಸ್. ಪಾಡಿ ಟೈಲರಿಂಗ್, ಎಕ್ಸಪರ್ಟ್ ಇವರಿಂದ ಬಲ್ಮಠ ರಸ್ತೆ ಬೀ ರಾ॥ ಸ್ವಾಮಿರ ಮಹಡಿಯಲ್ಲಿ ತೆರೆಯಲ್ಪಟ್ಟ 'ದಿ ಕೆನರಾ ಟೈಲರಿಂಗ್ ಸ್ಕೂಲ್' ಎಂಬ ಸಂಸ್ಥೆಯು ಇದೇ ತಿಂಗಳ ತಾ. ೨೩ನೇ ದಿನ ಗವರ್ನಮೆಂಟ್ ಕೋಲೇಜಿನ ಎದುರು A. I. Tailors ಇವರ ಕಟ್ಟಡಕ್ಕೆ ಬಯ್ಯೋಜಾಗಿರುತ್ತದೆ. ಅದ್ದರಿಂದ ಹೊಲಿಗೆ ಶಿಕ್ಷಣವನ್ನು ಹೊಂದುವ ಕುತೂಹಲವುಳ್ಳ ವಿದ್ಯಾಪೇಕ್ಷಿಗಳು ಇನ್ನು ಮುಂದೆ ಮೇಲೆ ಹೇಳಿದ A. I. Tailorsನವರ ಕಟ್ಟಡದಲ್ಲಿ ಮಾತ್ರ ಸದ್ರಿ ಹೊಲಿಗೆ ಶಾಲೆಯ ಮಾಲಿಕರಾದ ಯಸ್. ಯಸ್. ಪಾಡಿ ಟೈಲರಿಂಗ್ ಎಕ್ಸಪರ್ಟ್ ಇವರನ್ನು ಮುಖತಹ ಕಂಡು, ಈ ಹೊಲಿಗೆ ಶಾಲೆಯಲ್ಲಿ ದಾಖಲು ಮಾಡಿಸಿಕೊಳ್ಳಬಹುದು.

— ತಿದ್ದುಪಡಿ — ಕಳೆದಸಾರಿಯ ಸ್ವದೇಶಾಭಿಮಾನಿಯ ೫ನೇ ಪುಟದಲ್ಲಿ ಬಂಟ್ವಾಳ ಮಾಲ್ಕರ ಜನ ಕುಲಾಲರ ದಾಕ್ಷಭೂಮಿಯ ಸಂಘದ ಸಭೆಯು ಎಂಬುದನ್ನು ಮಂಗಳೂರಿನಲ್ಲಿ ಎಂದು ತಿದ್ದಿಕೊಳ್ಳತಕ್ಕದ್ದು.

ಬಂಟ್ವಾಳ — ಇಲ್ಲಿಯ ಸಬ್ ಇನ್ಸ್‌ಪೆಕ್ಟರರಾದ ಮ॥ ರಾ॥ ರಾ॥ ಲಕ್ಷ್ಮೀನಾರಾಯಣಯ್ಯನವರು ಮಂಗಳೂರು ಸರ್ಕಲ್ ಇನ್ಸ್‌ಪೆಕ್ಟರರವರ ಬದಲಿ ಮೇಲೆ ಹೋಗುತ್ತಾರೆಂದು ವದಂತಿ.

ಬಂಟ್ವಾಳ ಸೆಂಟರಿನ ಉಪಾಧ್ಯಾಯರ ಸಭೆಯು ಇದೇ ತಿಂಗಳ ತಾ. ೧೮ನೇ ಶನಿವಾರ ಎಸ್. ವಿ. ಎಸ್. ವಿಠಲ ಸ್ವಾಮಿ ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಇದರ ಅಧ್ಯಕ್ಷಸ್ಥಾನವು ಮೊದಗೊಡಿನ ಬಳಿಯ ಬೋರ್ಡ್ ಶಾಲೆಯ ಹೆಡ್ ಮಾಸ್ತರರಾದ ಬಿ. ಲಕ್ಷ್ಮೀನಾರಾಯಣಯ್ಯನವರು ವಹಿಸಿಕೊಂಡಿದ್ದರು. ಕಳೆದಸಾರಿಯ ಮೀಟಿಂಗಿನ ರಿಪೋರ್ಟು ಓದಿಕೇಳೋಣಾಯಿತು.

ಕಳೆದಸಾರಿ ನಿಶ್ಚಯಿಸಿದಂತೆ ಮಂಗಳೂರು ತಾಲೂಕು ಸಂಘಕ್ಕೆ ರೂಪಾಯಿ ಹನ್ನು ಕೊಡಬೇಕೆಂತ ನಿಶ್ಚಯಿಸಿದವರಿಂದ ಅದನ್ನು ವಸೂಲಿ ಮಾಡಲಾಗುವ ಪ್ರತಿ ಆಳಿಗೆ ೨ ಪೈಯಂತೆ ಪ್ರತ್ಯೇಕವಾಯು ಕೊಡಬೇಕೆಂತ ನಿಶ್ಚಯಿಸಲಾಯಿತು.

ಮುಂದಿನ ಸಭೆ ೮-೬-೨೯ಕ್ಕೆ ಬಂಟ್ವಾಳ ಬೋರ್ಡ್ ಹುಡುಗರ ಶಾಲೆಯಲ್ಲಿ ಜರಗಿಸುವದೆಂತ ನಿಶ್ಚಯವಾಯಿತು.

ಇದರಲ್ಲಿ ಗೂಡಿನಬಳಿ ಶಾಲೆಯ ಸಹಾಯಕ ಉಪಾಧ್ಯಾಯರಾದ ಕೇಶವಯ್ಯನವರ IIನೇ ವರ್ಗ ಲೆಸನಿನ ಕುರಿತು ಒಂದು ಪಾಠ ಕೊಡುವರು. ಮತ್ತು ಪಂಜಿಕಲ್ಲು ಬೋರ್ಡ್ ಶಾಲೆ ಸಹಾಯಕ ಉಪಾಧ್ಯಾಯರಾದ ಗೋವಿಂದ ಗೌಡರು ಶಾಲೆಗೆ ಮಕ್ಕಳು ಸರಿಯಾಗಿ ಬರುವಂತೆ ಉಪಾಧ್ಯಾಯರು ಮಾಡಬೇಕಾದ ಉಪಾಯ ಈ ವಿಷಯದಲ್ಲಿ ಒಂದು ಉಪನ್ಯಾಸ ಕೊಡುವರು.

ಕೊಕ್ಕರ್ಣೆ:— ಈ ಸೆಂಟರಿನ ಉಪಾಧ್ಯಾಯರ ಮೇ ತಿಂಗಳ ಸಭೆಯು ತಾ. ೧೧-೫-೨೯ನೇ ಶನಿವಾರ, ನೀಲಾವರ ಎಲ್ಲಂಪಳ್ಳ ಎಲಿಮೆಂಟರಿ ಶಾಲೆಯಲ್ಲಿ, ಉಡುಪಿ ರೇಂಜಿನ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರಾಗಿರುವ, ಮ॥ ರಾ॥ ರಾ॥ ಕೆ. ಲಕ್ಷ್ಮಣ ಭಟ್‌ಜೀ, ಬಿ. ಎ. ಎಲ್. ಟಿ.ಯವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದಿನ ಸಭೆಗೆ, ಸದರಿ ರೇಂಜಿನ ಜ್ಯೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರರಾಗಿರುವ ಎಮ್. ಪದ್ಮನಾಭಯ್ಯನವರೂ, ಕುಂದಾಪುರ ಬೋರ್ಡ್ ಹೈಸ್ಕೂಲಿನ ಕನ್ನಡ ಪಂಡಿತರಾಗಿರುವ, ಬಿ. ಶಿವರಾಮಯ್ಯನವರೂ ಸಭೆಗೆ ಚಿತ್ತೈಸಿದ್ದು ಬಹಳ ಸಂತೋಷಕರ. ಸೆಂಟರಿಗೆ ಸಂಬಂಧಪಟ್ಟ ಉಪಾಧ್ಯಾಯರುಗಳಲ್ಲದೆ, ಬೇರೆ ಸೆಂಟರಿನ ಕೆಲವು ಉಪಾಧ್ಯಾಯರುಗಳೂ ಸಭೆಗೆ ಬಂದದ್ದು ಮತ್ತೂ ಸಂತೋಷ.

ಕಾರ್ಯಕ್ರಮದಂತೆ, ದೇವತಾ ಪ್ರಾರ್ಥನೆ, ವರದಿ, ಇತ್ಯಾದಿಗಳು ಮುಗಿದ ಬಳಿಕ 'ಪ್ರಾಚೀನ ಶಿಕ್ಷಣ ಪದ್ಧತಿ' ಮತ್ತು 'ಆಧುನಿಕ ಶಿಕ್ಷಣ ಪದ್ಧತಿ' (ಡಿರೆಕ್ಟ್ ಮೆಥಡ್) ಇವುಗಳ ಕುರಿತು ಉಪನ್ಯಾಸಗಳಾದವು. ಅನಂತರ, ಕುಂದಾಪುರ ಬೋರ್ಡ್ ಹೈಸ್ಕೂಲಿನ ಪಂಡಿತರು, 'ಪ್ರಾಚೀನ ಶಿಕ್ಷಣ ಪದ್ಧತಿಯನ್ನು ಸಾಕಷ್ಟು ಸಮರ್ಥಿಸಿ, ಚೆಲೋ ಭಾಷಣವನ್ನಿತ್ತರು. ಆ ಮೇಲೆ ಕೋಟ ಬೋರ್ಡ್ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಯುತ ಲಕ್ಷ್ಮಣ ಸ್ವಾಮಿ ಹಾರಾಡಿರವರು 'ಡಿರೆಕ್ಟ್ ಮೆಥಡ್' ಎಂಬುದನ್ನು ಸರಿಯಾಗಿ ವಿವರಿಸಿ, ಅದನ್ನು ಸಾಕಷ್ಟು ಸಮರ್ಥಿಸಿ, ಉಪಾಧ್ಯಾಯರುಗಳು ಸರಿಯಾದ ಮಾರ್ಗದಲ್ಲಿ ಅದನ್ನು ಉಪಯೋಗಿಸದೆ ಶಿಕ್ಷಣದ ಉನ್ನತಿಯಾಗಲವಕಾಶವಿಲ್ಲದಂತಾಗಿದೆ ಎಂದು ತಮ್ಮ ಭಾಷಣದಿಂದ ಮುಚಿತಪಡಿಸಿದರು.

ಅಬಳಿಕ ಸಭಿಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದರು. ಉಡುಪಿ ರೇಂಜಿನ ಶಾಲೆಗಳ ಜ್ಯೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರರವರೂ, 'ಆಧುನಿಕ ಶಿಕ್ಷಣ ಪದ್ಧತಿಯನ್ನು ಸಮರ್ಥಿಸಿ, ತಮ್ಮ ಸುರಸವಾದ ಭಾಷಣವನ್ನಿತ್ತರು. ಇದೆಲ್ಲಾ ಮುಗಿದ ಬಳಿಕ, ಕಾರ್ಯಕ್ರಮದಂತೆ ಬರುವ ಸಭೆಗೆ 'ಪದೋಪಕಾರ'ವೆಂಬ ಕುರಿತು ಉಪನ್ಯಾಸವನ್ನು ಬರೆದು ತರುವುದಾಗಿ ಸಂಘದ ಅಧ್ಯಕ್ಷರಾಗಿರುವ ಹಾರಾಡಿ ಶ್ರೀಪತಿ ಸ್ವಾಗಳವರು ಒಪ್ಪಿಕೊಂಡರು. ಒಂದನೆ ವರ್ಗದ ಮಕ್ಕಳಿಗೆ ೫ರ ವರೆಗಿನ ಸಂಖ್ಯಾರಚನೆಯ, ಒಂದು ಟಿಪ್ಪು ಪಾಠವನ್ನು ಕೊಡುವುದಾಗಿ, ಸಂಘದ ಖಜಾಂಚಿಯಾಗಿರುವ ಪಿ. ರಾಮದಾಸ ಚಡಗರು ಒಪ್ಪಿದರು. ಆ ಮೇಲೆ ಸಭಾಧ್ಯಕ್ಷರು ತಮ್ಮ ಸುರಸವಾದ ಭಾಷಣದಿಂದ ಸಭಿಕರ ಮನಸ್ಸನ್ನು ಸಂತೋಷಗೊಳಿಸಿದರು. ಆ ಮೇಲೆ, ಕಾಫಿ, ಫಲಾಹಾರಾದಿ ಉಪಚಾರಗಳು ಮುಗಿದು, ಸಭಾಧ್ಯಕ್ಷರಿಗೂ ಇತರ ಮಹನೀಯರುಗಳಿಗೂ ಧನ್ಯವಾದಗಳನ್ನರ್ಪಿಸಿ, ಬರುವ ಜೂನ್ ತಿಂಗಳ ಸಭೆಯು ತಾ. ೧-೬-೨೯ನೇ ಶನಿವಾರ ಚೇರ್ಕಾಡಿ ಎೈಡೆಡ್ ಎಲಿಮೆಂಟರಿ ಶಾಲೆಯಲ್ಲಿ ಕೂಡುವುದಾಗಿ ನಿಶ್ಚಯಿಸಿ, ಸಭೆಯು ಕೊನೆಗಂಡಿತು.

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

[illegible] ವೈದ್ಯ [illegible] ವೈದ್ಯ ಶ್ರೀ ವೈದ್ಯರ [illegible] ಎಲ್ಲಾ ತರದ [illegible] ರೋಗಿಗಳು [illegible] ಚಿಕಿತ್ಸೆ [illegible] ವೈದ್ಯಶಾಲೆಯು [illegible] ಸಿದ್ಧವಾಗಿರುವದು. [illegible] ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

ಶಾಲಾ ಹುಡುಗರಿಗೆ ಬೇಕಾದ

ಗೆರೆ ಹಾಕಿದ ಮತ್ತು ಹಾಕದ ಎಕ್ಸರ್ಸೈಜ ಪುಸ್ತಕಗಳೂ, ಕೋಪಿ ಪುಸ್ತಕಗಳೂ, ಡ್ರಾಯಿಂಗ್ ಪುಸ್ತಕಗಳೂ, ಡ್ರೋಯಿಂಗ್ ಪುಸ್ತಕಗಳೂ, ಪೆನ್ಸಿಲು ಕಂಪಾಸ್ ಬಾಕ್ಸ, ಶಾಯಿ ಕುಪ್ಪಿ ಮೊದಲಾದ ಸ್ಟೇಶನರಿ ಸಾಮಾನುಗಳೂ ಇವೆ.

ಲೆಜ್ಜರ್, ಜರ್ನಲ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಸಾಮಾನುಗಳು ಯಾವಾಗಲೂ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



Liveliness-zip-pep-you get that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

Exide

THE LONG-LIFE BATTERY
The C. P. C. Co., Ltd.,
MANGALORE

Batliwalla's Preparations Cover All Your Needs.
A NAME THAT MERIT HAS MADE FAMOUS.

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಸ್ಚರ್ ಪಿಲ್ಸ್ – ಮಲೇರಿಯಾ ಜ್ವರ ನಿವಾರಕ. ರೂ. ೧.

ಬಾಟ್ಲಿವಾಲರ ಟಾನಿಕ್ ಸ್ಟ – ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲರ ಕಿಂಗ್ ಆಫ್ ಪೇನ್ – ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

ಬಾಟ್ಲಿವಾಲರ ಕಾಲರಾ ಮಿಕ್ಸ್ಚರ – ಕಾಂಶ್ಲೇಟ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪

ಬಾಟ್ಲಿವಾಲರ ಕ್ವಿನೀನ ಟೇಬಲಗಳು – ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬಲಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು – ಧಾತು ಪುಷ್ಟಿಕರ. ರೂ. ೧–೫–೦. ರೂ. ೧–೪–೦. ೧–೧೨–೦.

ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦–೬–೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦–೬–೦. LIBERAL DISCOUNT TO TRADE

ಟೆಲಿಗ್ರಾಂ:-CAWASHAPUR, BOMBAY.

ಎಲ್ಲಾ ಅಂಗಡಿಗಳಲ್ಲಿ ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಅಂಡ್ ಕೋ. ಲಿಮಿಟೆಡ್.

ವಿಕ್ರಯಕ್ಕೆ ದೊರೆಯುತ್ತವೆ. Sayani Road, P. O. Cadell Road, Bombay. No. 14.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ – ತೀರ್ಥಹಳ್ಳಿ – ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಗ್ಗೆ ೯ ಘಂಟೆಗೆ ಹೊರಡುತ್ತಾ ಇದ್ದದು ಸರಿಯಷ್ಟೆ. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. ೧೫–೪–೧೯೩೮ರ ಲಾಗಾಯ್ತು ಶಿವಮೊಗ್ಗಾದಿಂದ ಬೆಳಗ್ಗೆ ೮ವರೆ ಘಂಟೆಗೆ ಹೊರಡಲು ಏರ್ಪಾಡುಮಾಡಿದೆ.

ತೀರ್ಥಹಳ್ಳಿ – ಸಾಗರರಸ್ತೆ.

ಅನಂತಪುರ—ಸಾಗರಕ್ಕೆ 0—8—0. ತೀರ್ಥಹಳ್ಳಿ—ಸಾಗರಕ್ಕೆ ೨—೮—೦.

ಆರಗ, ಗುಡ್ಡೇಕೊಪ್ಪ, ಕೋಣಂದೂರು, ಹಾದಿಗಲ್, ಹುಮಚದಕಟ್ಟೆ, ರಿಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳಗಳ ದೆಸೆಯಿಂದ ಕಳೆದ ಜೂನ್ ತಾ. ೮ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಕು ೬–೧೧–೧೯೩೮ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾ ಭಟ್,
ಮಾಲಿಕ,
ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಅಂಸಿದ ಉತ್ತಮ ತರಗಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್‌ಪೀಸಗಳೂ, ಎಲಿಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೊ. – ನಮ್ಮ ವಾಚು ಮಾರಾಟವಾದವುಗಳಿಗೆ ಎರಡು ವರ್ಷಗಳಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿಸುವುದರಿಂದ ಸರಿಯಾದ ಸಮಯವು ದೊರಕುವುದು.

ಉಡುಪಿ:— ಇದೇ ಏಪ್ರಿಲ್ ತಾ. ೧ರಿಂದ ಉಡುಪಿ ಸಂತೆ ಕಟ್ಟೆಯಲ್ಲಿ ತೆರೆಯಲ್ಪಟ್ಟ ಶ್ರೀಯುತ ಶೆಣೈಯವರ "ಖಾದಿ ಸ್ಟೋರ್"ದ ಮೂಲಕವಾಗಿ ಇದುವರೆಗೆ ಸುಮಾರು ರೂ. ೧೨೦ರ ಖಾದಿಯು ಊರು ಪರವೂರುಗಳಲ್ಲಿ, ವಿಶೇಷವಾಗಿ ಮಾರ್ಕೆಟ್ ಬಾರದಷ್ಟು ಶ್ರೀನಿವಾಸ ಪೈಗಳು ಹೊತ್ತು ಮಾರುವ ಪ್ರಕಾರದಿಂದ (hawking) ಮಾರಾಟವಾಯಿತೆಂದು ತಿಳಿಸಲು ಆನಂದವಾಗುತ್ತೇವೆ. ಖಾದಿ ಕೇಂದ್ರಗಳಲ್ಲಿ ಖಾದಿಯ ಬೆಲೆಗಳು ಅಧಿಕವಿದ್ದರೂ ಅಥವಾ "ಖಾದಿನಿಲಯ"ದ ಮಾಲಕರು ಸ್ವಂತ ಭಂಡವಾಳದಿಂದ ಸಾಗಿಸುತ್ತಿಲ್ಲದಿದ್ದುದರಿಂದ ಇನ್ನೂ ಹೆಚ್ಚು ಖಾದಿ ಖರ್ಚಾಗದಾಯಿತು. ಶ್ರೀ ಪೈಗಳವರು ಮೂಡಬಿದ್ರೆಯಲ್ಲಿ ಭೂಮಾಲಕರ ಸಂಘದ ಶ್ರೀ ಕೆ. ಆರ್. ಕಾರಂತ್ ಮತ್ತು ಜೆ. ಎ. ಸಲ್ಡಾಂಹ ಇವರ ಸಮಕ್ಷಮದಲ್ಲಿ ನೆರೆದಾಗಲೂ ಉಡುಪಿಯಲ್ಲಿ ದ. ಕ. ಜಿಲ್ಲಾ ಬಂಟರ ೨ನೇ ಪರಿಷದವು ಇದೇ ತಾ. ೧೫ಕ್ಕೆ ಕೂಡಿದಾಗಲೂ ಖಾದಿ ಪ್ರದರ್ಶಿಸಿದ್ದರು. ಹಿಟ್ಟರಾಗಿಯೇ ಶ್ರೀ ಪೈಗಳು ಖಾದಿಯ ಮೂಟೆಯನ್ನು ವೇಳೆ ಅವೇಳೆ ಊರು ಪರವೂರುಗಳೆನ್ನದೆ ಹೀಗೆ ಬದರ ಸೇವೆಗಾಗಿ ಸಹಿಸುತ್ತಿರುವುದು ಬಹಳ ಸ್ತುತ್ಯ. ಹೀಗೆ ಪ್ರತಿ ತಾಲೂಕಿನಲ್ಲಿ ಒಬ್ಬಿಬ್ಬರು ಖಾದಿ ಹೊತ್ತು ಮಾರುವವರು ಇರುತ್ತಿದ್ದಲ್ಲಿ ನಮ್ಮ ಜಿಲ್ಲೆಯಲ್ಲಿ ಖಾದಿಯು ಸರ್ವಪ್ರಿಯವೂ ಸರ್ವಮಾನ್ಯವೂ ಆಗುವುದರಲ್ಲಿ ಅಡ್ಡಂತರವೇನು? ಜಿಲ್ಲೆಯ ಮುಂದಾಳುಗಳೇ ಇನ್ನಾದರೂ ಈ ಜನಾಂಗ ಸಂಘಟನೆಯ ಖಾದಿ ಪ್ರಚಾರ ಕಾರ್ಯಕ್ಕೆ ನೆರವಾಗಿರಿ!

ಮಂಜೇಶ್ವರ:— ತಾಲೂಕು ಬೋರ್ಡ್ ಮೆಂಬರಿಕೆಯ ಓಟಿನ ಸ್ಪರ್ಧಾಸ್ಪರ್ಧೆಯು ನಾಳೆ ದಿನ ಜರಗುವದು. ಇತ್ತಟ್ಟಿನವರೂ ಸಾಧನೆಯಲ್ಲಿ ಪರಾಕ್ರಮಿಗಳೇ ಸರಿ. ಫಲಿತಾಂಶ ನೋಡಲಿಕ್ಕಿದೆ.

ಕುಂಬ್ಳೆ:— ಇಲ್ಲಿಯ ಬೆಡ್‌ಮಿಂಟನ್ ಟೂರ್ನಮೆಂಟ್ ತಾರೀಖು ೨೭ನೇ ಸೋಮವಾರದಿಂದ ಪ್ರಾರಂಭವಾಗುವದು

ಕಳೆದ ಸೋಮವಾರ ದಿನ ಇಲ್ಲಿ ಸಮೀಪ ಮಂಗಲಪಾಡಿ ಗ್ರಾಮದಲ್ಲಿ ಪೆರನಾಳಿನ ದಿನ ಸ್ವಲ್ಪ ಮಾರಾಮಾರಿ ಮಾಪಿಳ್ಳೆಯರೊಳಗೆ ಜರಗಿತು. ಸ್ವಲ್ಪ ಮಟ್ಟಿಗೆ ಗಾಯಗಳೂ ಆಗಿವೆ. ಜಗಳಕ್ಕೆ ನಿಶ್ಚಿತ ದಿನ ಒಳ್ಳೆಯದಲ್ಲವೇ?

ಇಲ್ಲಿ ಇಸ್ಪೀಟ್ ಜುಗಾರಾಟವು ತಲೆದೋರುತ್ತದೆ. ಕಳವುಗಳು ಆಗುತ್ತಲಿವೆ. ಪೋಲೀಸ ಅಧಿಕಾರಿಗಳು ಇದನ್ನು ಲಕ್ಷಕ್ಕೆ ತರಲಾರರೇ?

ಇಲ್ಲಿಯ ವಳ್ಳಿಯ ಕೆಳವಿನಲ್ಲಿ ಇತ್ತಲಾಗೆ ತಿಕ್ಕೆಯಿಂದ ಬಿದ್ದು ಗಡ ಹೊಂದಿದ ಉದ್ಯಾವರ ಮಮ್ಮು ಬ್ಯಾರಿಗೆ ಪುನಹಾ ಬಂತು ನಾಲ್ಕು ತಿಂಗಳ ಶಿಕ್ಷೆ.

ಕುಂಬಳೆ:— ಶ್ರೀ ಪಾರ್ವತಿಶಂಕರೇಶ್ವರ ದೇವಸ್ಥಾನದ ಇಲ್ಲಿಯ ಮೆಂಬರ ರಾ। ರಾಮಚಂದ್ರ ಪ್ರಾಕರ ಸ್ಥಾನಕ್ಕೆ ಅವರ ಅಳಿಯ ರಾ। ಮಾಧವ ಪೈಗಳು ಮತ್ತು ರಾ। ಪುಂಡಲೀಕ ಭಕ್ತರೆಂಬವರು ಉಮೇದವಾರರಂತೆ. ಇವರೆ ಈಗ ಇಬ್ಬರಿಗೂ ಬೇಡವಂತೆ. ಇವರ್ಗೂ ರಾಜಿ ಕೊಡಲಿಕ್ಕಿರುತ್ತಾರೆಂಬ ವಾರ್ತೆ.

ಕಾಸರಗೋಡು ತಾಲೂಕು ಬೋರ್ಡ್ ಮೀಟಿಂಗು ಇದೇ ತಿಂಗಳ ತಾ. ೩೧ಕ್ಕೆ ಕಾಸರಗೋಡಿನಲ್ಲಿ ಜರಗುವದು

ಪ್ರಚಂಡ ಮಾರಾಟ!!

ಬರುವ ಜೂನ್ ೩ರಿಂದ ೮ರ ವರೆಗೆ ಬನಿಯನುಗಳ ಮಾರಾಟ!

ಸ್ತ್ರೀಪುರುಷರಿಗೂ, ಬಾಲಕಬಾಲಿಕಿಯರಿಗೂ ಬೇಕಾಗುವ ಸುಮಾರು ೭ ಸಾವಿರ ರೂಪಾಯಿ ಬೆಲೆಬಾಳುವ ಉಡಿಗೆತೊಡಿಗೆಗಳು ಹೇಗೂ ಮಾರಿಯೇ ತೀರಬೇಕಾದುದರಿಂದ ದರ ತುಂಬಾ ಇಳಿಸಲಾಗಿದೆ.

ಮೊದಲು ಬಂದವರಿಗೆ ಮನವೊಪ್ಪುವ ಉತ್ತಮ ಉಡಿಗೆ ಬೇಕಾದಂತೆ ಚುನಾಯಿಸಿ ಕೊಂಡುಕೊಳ್ಳ ಲಾಗುತ್ತದೆ.

ಕ್ರಯವು ಅಗ್ಗವಾಗಿರುವುದರಿಂದ ಬೇಗ ಬೇಗನೇ ಮಾರಿಹೋಗುವುದು ನಿಶ್ಚಯ.

ವಿಳಂಬ ಮಾಡದೆ ಆದಷ್ಟು ಮೊದಲಾಗಿ ಬನ್ನಿರಿ!

ದಿ ಕೊಮನ್‌ವೆಲ್ತ್ ಹೊಸಿಯರಿ ಫೆಕ್ಟರಿ, ಮಂಗಳೂರು.

ವಿವಿಧ ಸಮಾಚಾರಗಳು.

ವಿದೇಶಿ ವಸ್ತ್ರಬಹಿಷ್ಕಾರ.

ವಿದೇಶಿ ವಸ್ತ್ರಬಹಿಷ್ಕಾರ ಕಮಿಟಿಯ ಕಾರ್ಯದರ್ಶಿಯವರು ಇತ್ತೀಚೆಗೆ ಒಂದು ನೋಟೀಸನ್ನು ಪ್ರಕಟಿಸಿರುವರು. ಹಲವು ಮುನಿಸಿಪಾಲಿಟಿಗಳವರು ವಿದೇಶಿ ವಸ್ತ್ರ ಬಹಿಷ್ಕಾರದ ಬಗ್ಗೆ ಹೆಚ್ಚಿಟ್ಟ ಕುತೂಹಲದಿಂದ ಸಹಾಯ ಮಾಡುತ್ತಿರುವ ವರ್ತಮಾನವು ಕಮಿಟಿಯ ಕಾರ್ಯಾಲಯಕ್ಕೆ ಬಂದಿದೆಯಂತೆ. ಕಮಿಟಿಯವರು ಈ ಮೊದಲು ಮಾಡಿದ ಅಂಕೆಗೆ ಹಲವು ಮುನಿಸಿಪಾಲಿಟಿಗಳವರು ಕಿವಿಗೊಟ್ಟು ನಡೆದಿರುವರು.

ಸಂಯುಕ್ತ ಪ್ರಾಂತದ ಬಲ್ಲಿಯಾ ಎಂಬ ಸ್ಥಳದಲ್ಲಿ ಮುನಿಸಿಪಾಲಿಟಿಯವರು ಅಂಗಡಿಗಳ ಮೇಲೆ ತೆರಿಗೆಯನ್ನು ಇತರ ಕಡೆಗಳಲ್ಲಿ ಹೊರಿಸಿರುವಂತೆಯೇ ಹೊರಿಸಿರುವರು. ಆದರೆ ಯಾವ ಅಂಗಡಿಯಲ್ಲಿ ಶುದ್ಧವಾದ ಕೈಯಿಂದಲೇ ನೂತ, ಕೈಯಿಂದಲೇ ನೈದ ಖಾದಿಬಟ್ಟೆಯನ್ನು ಮಾರುವರೋ, ಅಂತಹ ಅಂಗಡಿಗಳ ಮೇಲೆ ತೆರಿಗೆಯನ್ನು ಹೊರಿಸಲಾರದೆಂದೂ ಅಷ್ಟುಮಾತ್ರವಲ್ಲದೆ ಮುನಿಸಿಪಾಲಿಟಿಯವರಿಗೆ ವಸ್ತ್ರಗಳ ಅವಶ್ಯಕತೆಯುಂಟಾದಾಗ ಕೈಯಿಂದಲೇ ನೂಲು ಮಾಡಿ ಕೈಯಿಂದಲೇ ನೈದ ಬಟ್ಟೆಯನ್ನೇ ತೆಗೆದುಕೊಳ್ಳಬೇಕೆಂದೂ ನಿಶ್ಚಯಿಸಿರುವರು.

ಕೊಂಕಣದ ಮಾಲ್ವಣ್ ಮುನಿಸಿಪಾಲಿಟಿಯವರು ಮಾಲ್ವಣಿಗೆ ತರಿಸುವ ಎಲ್ಲಾ ವಿದೇಶಿ ವಸ್ತ್ರಗಳ ಮೇಲೆ ಶೇಕಡಾ ೧೦ರಂತೆ ಸುಂಕವನ್ನು ಹೊರಿಸುತ್ತಿರಬೇಕೆಂದೂ, ಇದು ಮುನಿಸಿಪಾಲ್ ತೆರಿಗೆಯ ರೂಪದಲ್ಲಿರಬೇಕೆಂದೂ ನಿಶ್ಚಯಿಸಿರುವರು. ಪಶ್ಚಿಮ ವಿಭಾಗದ ಕಮಿಶನರು ಇದಕ್ಕೆ ಅಗತ್ಯವಾದ ಸಮ್ಮತಿಯನ್ನು ಕೊಡುವರೆಂಬ ನಿರೀಕ್ಷೆಯಲ್ಲಿ ಅವರು ಇರುವರು. ವಿದೇಶಿ ವಸ್ತ್ರಗಳ ಮೇಲೆ ಸುಂಕ ಹೊರಿಸುವುದರಲ್ಲಿ ಇದು ಎರಡನೆಯ ಮುನಿಸಿಪಾಲಿಟಿಯಾಗಿರುತ್ತದೆ. ಏಕೆಂದರೆ ಧುಳೆ ಮುನಿಸಿಪಾಲಿಟಿಯವರು ಈ ಮೊದಲೇ ಈ ಕಾರ್ಯವನ್ನು ಪ್ರಾರಂಭಿಸಿರುವರು.

ಅಹಮದಾಬಾದದ ಮುನಿಸಿಪಾಲಿಟಿಯ ಪ್ರೆಸಿಡೆಂಟರು ವಿದೇಶಿ ವಸ್ತ್ರಬಹಿಷ್ಕಾರ ಕಮಿಟಿಗೆ ಬರೆದ ಪತ್ರದಲ್ಲಿ ತಾವು ಮುನಿಸಿಪಾಲಿಟಿಯೊಳಗೆ ಸುಧಾರಿಸಲ್ಪಟ್ಟ ಕಾಯಿದೆಗಳಿಗನುಸಾರವಾಗಿ, ಹೊರಗಣ ವಸ್ತ್ರಗಳ ಮೇಲೆ ತೆರಿಗೆಯನ್ನು ಏರಿಸಿ ಪಾಲು ಮಾಡಿರುವರೆಂದೂ ಆದರೆ ಕೈಯಿಂದ ನೂತ ಮತ್ತು ಕೈಯಿಂದ ನೈದ ವಸ್ತ್ರಗಳ ಮೇಲೆ ಈ ಕಾನೂನು ಬಾಧಕವಾಗದೆಂದೂ ತಿಳಿಸಿರುವರು.

ಪೋರಬಂದರ ಮುನಿಸಿಪಾಲಿಟಿಯವರೂ ಇದೇ ರೀತಿ ಖಾದಿಯ ಮೇಲೆ ತೆರಿಗೆಯನ್ನು ಹೊರಿಸಬಾರದೆಂದು ನಿಶ್ಚಯಿಸಿರುವರು. ಆದರೆ ಅವರಿಗೆ ಚರಕಸಂಘದಂತಹ ಸಂಘಗಳ ಯೋಗ್ಯತಾಪತ್ರಗಳನ್ನು ಅವರು ಸಮರ್ಪಿಸಬೇಕಾಗುವುದು. ಮುನಿಸಿಪಾಲಿಟಿಯ ಬಗ್ಗೆ ಯಾವಾಗಲೂ ಕೈಯಿಂದಲೇ ತಯಾರಿಸಲ್ಪಟ್ಟ ಖಾದಿ ಬಟ್ಟೆಯನ್ನೇ ತೆಗೆದುಕೊಳ್ಳಬೇಕೆಂದೂ ಒಮ್ಮೆಗೆ ಇದು ಸಾಧ್ಯವಿಲ್ಲವೆಂದೇ ಆದರೆ ಸ್ವದೇಶಿ ಬಟ್ಟೆಗಳನ್ನಾದರೂ ಕೊಂಡುಕೊಳ್ಳತಕ್ಕದ್ದೆಂದೂ ಅವರು ನಿಶ್ಚಯಿಸಿರುವರು

ಇದೇ ರೀತಿ ಬೀರಾರಿನ ಅಕೋಲಾ ಮುನಿಸಿಪಾಲಿಟಿಯ ಸ್ಪೆಶಿಯಲ್ ಜನರಲ್ ಕಮಿಟಿಯವರು "ಮುನಿಸಿಪಾಲಿಟಿಯವರು ಯಾವ ವಸ್ತ್ರಗಳನ್ನು ಕೊಂಡುಕೊಳ್ಳಬೇಕಾದರೂ, ಅವು ಹಿಂದೂಸ್ಥಾನದಲ್ಲಿಯೇ, ಹಿಂದೂಗಳಿಂದಲೇ ತಯಾರಿಸಲ್ಪಟ್ಟ ಶುದ್ಧ ಖಾದಿ ಬಟ್ಟೆಯಾಗಿರತಕ್ಕದ್ದು" ಎಂದು ನಿಶ್ಚಯಿಸಿರುವರು.

ಕುಂಭಕೋಣದಲ್ಲಿ ಇದೇ ಏಪ್ರಿಲ್ ೨೯ನೇ ತಾರೀಕಿನ ದಿನ ನಡೆದ ಮುನಿಸಿಪಾಲಿಟಿಯವರ ಸಭೆಯಲ್ಲಿ "ಸಾಧ್ಯವಿರುವಷ್ಟರ ಮಟ್ಟಿಗೆ ಮುನಿಸಿಪಾಲಿಟಿಯ ಅವಶ್ಯಕತೆಗೆ ಖಾದಿ ಬಟ್ಟೆಗನೇ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿರಬೇಕು." ಎಂದು ನಿರ್ಣಯವಾಗಿರುತ್ತದಂತೆ.

ಖಾನದೇಶಿನ ಶಹಾದಾ ಮುನಿಸಿಪಾಲಿಟಿಯವರು ವಿದೇಶಿ ವಸ್ತ್ರ ಬಹಿಷ್ಕಾರ ಕಮಿಟಿಯ ಕಾರ್ಯದರ್ಶಿಯವರ ಪತ್ರವು ಬಂದೊಡನೆ ಇನ್ನು ಮುಂದಕ್ಕೆ ಕೈಯಿಂದ ನೂತ ಮತ್ತು ನೈದ ಖಾದಿ ಬಟ್ಟೆಗಳ ಮೇಲೆ ತೆರಿಗೆ ಹೊರಿಸಬಾರದೆಂದು ನಿಶ್ಚಯಿಸಿದರು.

ಇದೇ ರೀತಿ ಜಾನ್ಸಿ ಮುನಿಸಿಪಾಲಿಟಿಯವರು ಕೂಡ ಶುದ್ಧ ಖಾದಿ ಬಟ್ಟೆಯ ಮೇಲೆ ತೆರಿಗೆಯನ್ನು ತೆಗೆದು ಹಾಕಿರುವರು. ಅದು ಮಾತ್ರವಲ್ಲದೆ ಅವಶ್ಯವಿದ್ದಾಗಳೆಲ್ಲಾ ಮುನಿಸಿಪಾಲಿಟಿಯವರು ಖಾದಿ ಬಟ್ಟೆಯನ್ನೇ ಉಪಯೋಗಿಸುತ್ತಿರುವರೆಂದು ಪ್ರೆಸಿಡೆಂಟರು ಬಹಿಷ್ಕಾರ ಕಮಿಟಿಯ ಕಾರ್ಯದರ್ಶಿಯವರಿಗೆ ತಿಳಿಸಿರುವರು.

ಮೈಸೂರಿನ ಯುತ್‌ಲೀಗು.

ಮುಂಬಯಿಯ ಯುತ್‌ಲೀಗಿನ ಕಾರ್ಯದರ್ಶಿಯಾದಂತಹ ಮಿ॥ ಯೂಸುಫ್ ಮೇಹಾರ್ ಅಲಿಯವರು ಮೈಸೂರಿನ ಯುತ್‌ಲೀಗನ್ನು ತೆರೆಯುವ ಸಲುವಾಗಿ ಮೈಸೂರಿಗೆ ಬಂದಿದ್ದರು. ಮಿ॥ ಕೆ. ಟಿ. ಬಾಷ್ಯಮ್ ಇವರ ಅಧ್ಯಕ್ಷತೆಯಲ್ಲಿ ನಡೆದ್ದ ದೊಡ್ಡ ಸಭೆಯಲ್ಲಿ ಅವರು ಕಳೆದ ಶುಕ್ರವಾರ ಸಾಯಂಕಾಲ ಚೆನ್ನಾದ ಒಂದು ಭಾಷಣವನ್ನು ಮಾಡಿದರು. ಮೊದಲಾಗಿ ಶ್ರೀ ಭಾಷ್ಯಮ್ ಇವರು ಮಿ॥ ಮೇಹಾರ ಅಲಿಯರಿಗೆ ಮೈಸೂರು ದೇಶಕ್ಕೆ ಸ್ವಾಗತವನ್ನು ಸೂಚಿಸಿ, ಮೈಸೂರು ಯುವಕರಿಗೆ ಬೇಕಾದ ಸಲಹೆಗಳನ್ನು ಕೊಡಬೇಕೆಂದು ಅವರನ್ನು ಕೇಳಿಕೊಂಡರು. ಒಡನೆಯೇ ಮಿ॥ ಅಲಿಯವರು ಎದ್ದುನಿಂತು ತನಗೆ ಮೈಸೂರು ಯುವಕರ ಪರಿಚಯವನ್ನು ಮಾಡಿಕೊಳ್ಳನಂತಹ ಇಂತಹ ಸುಸಂದರ್ಭವನ್ನು ಒದಗಿಸಿದುದಕ್ಕಾಗಿ ಲೀಗಿನ ವ್ಯವಸ್ಥಾಪಕರಿಗೆ ಕೃತಜ್ಞತೆಯನ್ನು ಸೂಚಿಸಿದರು. ತದನಂತರ ಜಗತ್ತಿನಲ್ಲೆಲ್ಲ ಸ್ಥಾಪಿತವಾಗಿರುವ ಯುವಕ ದಳಗಳ ಸಂಕ್ಷೇಪವಾದ ವರದಿಗಳನ್ನು ತಿಳಿಸಿ, ಯುವಕ ದಳದ ಅವಶ್ಯಕತೆಯನ್ನು ವಿವರಿಸಿದರು. ಜಗತ್ತಿನ ಪುನರ್ನಿರ್ಮಾಣಕ್ಕೆ ಯುವಕ ದಳವೇ ಅವಶ್ಯವಾದುದಾಗಿದೆ. ಯುದ್ಧದ ಹಿಂದಿನ ದಿನಗಳ ಮತ್ತು ಮುಂದಿನ ದಿನಗಳ ವಿಷಯವನ್ನು ಜರ್ಮನಿ, ಗ್ರೇಟ್‌ಬ್ರಿಟನ್, ಚೀನಾ, ಜಪಾನ್, ಮೊದಲಾದ ಕಡೆಗಳಲ್ಲಿನ ಯುವಕ ದಳದವರು ರಾಷ್ಟ್ರೀಯ ಅಭಿವೃದ್ಧಿಗೆ ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿ ತಿಳಿಸಿದರು. "ಬಂಧನದಲ್ಲಿ ಸಿಲುಕಿದ ಮಾತೃಭೂಮಿಯ ಬಂಧವಿಮೋಚನೆಗಾಗಿ ಇಂದೇ ಎಲ್ಲ ಯುವಕರೂ ಒಟ್ಟುಗೂಡಿ ದೇಶೋದ್ಧಾರದ ಕಾರ್ಯದಲ್ಲಿ ನಿಮ್ಮ ಶಕ್ತ್ಯಾನುಸಾರವಾಗಿ ತಮ್ಮ ಪಾಲಿನ ಕರ್ತವ್ಯವನ್ನು ಮುಗಿಸಲು ಮುಂದಾಗಿರಿ. ಪ್ರಕಾಶಮಾನರಾಗಿ ಉಳಿದ ರಾಷ್ಟ್ರದ ಜನರಿಗೆ ಅಚ್ಚರಿಯನ್ನುಂಟುಮಾಡಿರಿ" ಎಂದು ಅವರು ಒತ್ತಿ ಹೇಳಿದರು.

ಕಳೆದ ಶನಿವಾರವು ಮಿ॥ ಮೇಹಾರ ಅಲಿಯವರು ಮೈಸೂರಿನ ಗಾಂಧಿ ಮೈದಾನಿನಲ್ಲಿ ಸಾಯಂಕಾಲ ಆರು ಘಂಟೆಯ ಹೊತ್ತಿಗೆ ಭಾಷಣವನ್ನು ಕೊಡಬೇಕೆಂದು ನಿಶ್ಚಯವಾಗಿದ್ದಿತು. ಅದಕ್ಕೆ ಮೊದಲೇ ಬಂದು ಬಹು ಸಂಖ್ಯಾಕರಾಗಿ ಕೂಡಿ ಮೇಹಾರ ಅಲಿಯವರ ಬರವನ್ನೇ ನಿರೀಕ್ಷಿಸುತ್ತಿದ್ದರು. ಅಷ್ಟು ಹೊತ್ತಿನಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾದ ಮಿ॥ ನಾರಾಯಣ ಅಯ್ಯರರು ಕೆಲವು ಮಂದಿ ಪೋಲೀಸರೊಂದಿಗೆ ಅಲ್ಲಿ ಬಂದು ಮಿ॥ ಅಲಿಯವರ ಆಗಮನದ ಸಲುವಾಗಿ ಎದುರು ನೋಡಿದರು. ಅವರು ಬಂದೊಡನೆ ಪೋಲೀಸ್ ಇನ್ಸ್‌ಪೆಕ್ಟರರು ಒಂದು ಪತ್ರವನ್ನು ಅವರ ಕೈಗೆ ಕೊಟ್ಟರು. ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೪೪ನೇ ಪ್ರಕರಣಕ್ಕನುಸಾರವಾಗಿ ಸಿಟಿ ಮೆಜಿಸ್ಟ್ರೇಟರಿಂದ ಕೊಡಲ್ಪಟ್ಟ ಹುಕುಮು ಅದರಲ್ಲಿದ್ದಿತು. ಜನರು ಬಂದು ಅವರನ್ನು ಸುತ್ತುವರಿದರು. ಕೇವಲ ಪೋಲೀಸರ ಸುಳ್ಳು ಹೇಳಿಕೆಯಂತೆ ಮೆಜಿಸ್ಟ್ರೇಟರು ತನ್ನ ಮೇಲೆ ಈ ರೀತಿ ಅಧಿಕಾರ ಪ್ರದರ್ಶನವನ್ನು ಮಾಡಿರುವರಲ್ಲದೆ ಬೇರೆಯಲ್ಲವೆಂದು ಮೇಹರರು ಹೇಳಿದರು. ಮೆಜಿಸ್ಟ್ರೇಟರಿಂದ ಕೊಡಲ್ಪಟ್ಟ ಹುಕುಮು ಈ ರೀತಿಯಾಗಿದ್ದಿತು. "ಪೋಲೀಸ್ ಸಬ್ ಇನ್ಸ್‌ಪೆಕ್ಟರರಿಂದ ರಿಪೋರ್ಟು ಬಂದ ಮೇರೆಗೆ ನೀವು ನಿನ್ನೆಯ ದಿನ ಕಾನೂನಿಗೆ ವಿರೋಧವಾದ ರೀತಿಯಲ್ಲಿ ಭಾಷಣವನ್ನು ಮಾಡಿದಿರೆಂದೂ, ಅದೂ ಅಲ್ಲದೆ ಇಂದು ಕೂಡ ನೀವು ಅಂತಹ ಭಾಷಣವನ್ನು ಮಾಡುವಿರೆಂದೂ ತಿಳಿದುಬರುತ್ತದೆ. ನಿಮ್ಮ ಭಾಷಣಗಳಿಂದ ಶಾಂತಿಭಂಗವಾಗಿ ಜನಸಮೂಹದಲ್ಲಿ ಜಗಳ ಮೊದಲಾದವುಗಳಾಗುವ ಸಂಭವವಿರುವುದರಿಂದ ಇನ್ನೆರಡು ತಿಂಗಳುಗಳ ವರೆಗೆ, ಬೆಂಗಳೂರು ಪಟ್ಟಣದಲ್ಲಾಗಲಿ, ಬೆಂಗಳೂರು ತಾಲೂಕಿನಲ್ಲಾಗಲಿ ನೀವು ಭಾಷಣ ಮಾಡಲಾಗದೆಂದು ಕ್ರಿಮಿನಲ್ ಪ್ರೊ. ಕೋಡಿನ ೧೪೪ನೇ ಪ್ರಕರಣಕ್ಕನುಸಾರವಾಗಿ ನಿಮಗೆ ಈ ಹುಕುಮನ್ನು ಕೊಡುತ್ತಿರುವೆನು".

ಜನಸಂಘವು ಬೇಗಬೇಗನೇ ಚದರಿಹೋಯಿತು. ಮಿ॥ ಮೇಹಾರ ಅಲಿಯವರು, ಯುತ್‌ಲೀಗಿನ ಕಟ್ಟಡದೆಡೆಗೆ ಹೋಗಿ ಅಲ್ಲಿ ತಮ್ಮ ಭಾಷಣವನ್ನು ಮಾಡಿದರು. ಅವರು ತಮ್ಮ ಭಾಷಣದಲ್ಲಿ ಚೀನದ ಹೊಸ ಚಳವಳ, ಸನ್-ಯೇಟ್-ಸೇನರ ಸಾಹಸ, ಮೊದಲಾದವುಗಳನ್ನು ವಿವರಿಸಿದರು. ಚೀನಾದೇಶದಲ್ಲಿನ ಯುವಕರ ಉತ್ಸಾಹವನ್ನು ಅವರು ಹೊಗಳಿದರು. ಮಿ॥ ವೆಂಕಟಪ್ಪನವರು ಕೃತಜ್ಞತೆಯನ್ನು ಸಮರ್ಪಿಸಿದ ತರುವಾಯ ಸಭೆಯು ಕೊನೆಗಂಡಿತು.

ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಹಿಂದೀಪಾಠ.

ಮದರಾಸಿನ ಸನಾತನ ಧರ್ಮಮಂಡಳ, ಆರ್ಯಸಮಾಜ, ಗುಜರಾತಿ ಮಂಡಳ, ಮೊದಲಾದವರ ಆಶ್ರಯದಲ್ಲಿ ಮದರಾಸಿನಲ್ಲಿ ನೆಲೆಸಿಂತಿರುವ ಉತ್ತರ ಹಿಂದೂಸ್ಥಾನದ ವಿದ್ಯಾರ್ಥಿಗಳ ಜೊತ್ತವರೆ ಸಭೆಯೊಂದು ಚೈನಾಬಜಾರ ರಸ್ತೆಯ ಲಲಿತ ಭವನದಲ್ಲಿ ಜರಗಿತು. ಮಿ॥ ಗೋವಿಂದಲಾಲ ಶಿವಸೋತ್ಸವ ದಾಸಂದರೇ ಅಧ್ಯಕ್ಷರಾಗಿದ್ದರು. ಮದ್ರಾಸ್ ಮತ್ತು ಆಂಧ್ರಾ ಯುನಿವರ್ಸಿಟಿಯವರು ಹಿಂದಿಯನ್ನು ಇಂಟರಮಿಡಿಯೇಟ್ ಕ್ಲಾಸಿನ ಎರಡನೆಯ ಮತ್ತು ಮೂರನೆಯ ಭಾಗಗಳಲ್ಲಿ ಸೇರಿಸಿರುವಂತೆಯೇ ಎಸ್. ಎಸ್. ಎಲ್. ಸಿ. ಬೋರ್ಡಿನವರು ಹಿಂದೀಯನ್ನು ಎ ಮತ್ತು ಸಿ ಗ್ರೂಪ್‌ಗಳಲ್ಲಿ ಸೇರಿಸುವದು ಅವಶ್ಯಕ ಕಷ್ಟವಲ್ಲವೆಂದು ಮಿ॥ ಮಣಿಲಾಲ ತ್ರಿವೇದಿಯವರು ಸೂಚಿಸಿದರು. ತದನಂತರ ಮಿ॥ ಮಣಿಲಾಲಜಿಯವರ ಈ ಕೆಳಗಿನ ಠರಾವು ಮಂಜೂರಾತಿಯನ್ನು ಹೊಂದಿತು.

"ಮದರಾಸಿನಲ್ಲಿರುವ ಹಿಂದೀ ಮಾತನಾಡುವ ಉತ್ತರ ಹಿಂದೂಸ್ಥಾನದವರ ಈ ಸಭೆಯು—ಇಲ್ಲಿನ ಹ್ಯಾಸ್ಕೂಲುಗಳಲ್ಲಿ ಕಲಿಯುವ ಉತ್ತರ ಹಿಂದೂಸ್ಥಾನದ ವಿದ್ಯಾರ್ಥಿಗಳು ಮಾತೃಭಾಷೆಯಾದ ಹಿಂದೀಯನ್ನು ಚೆನ್ನಾಗಿ ಕಲಿಯುವಂತೆ ಎಸ್. ಎಸ್. ಎಲ್. ಸಿ. ಪಾಠಪಟ್ಟಿಯ ಎ. ಗ್ರೂಪಿನಲ್ಲಿ ಹಿಂದೀಯನ್ನು ಸೇರಿಸುವಂತೆ ವಿದ್ಯಾಮಂತ್ರಿಯವರನ್ನೂ, ಡೈರೆಕ್ಟರ್ ಓಫ್ ಪಬ್ಲಿಕ್ ಇನ್ಸ್‌ಟ್ರಕ್ಶನ್ ಇವರನ್ನೂ ಕೇಳಿಕೊಳ್ಳುತ್ತದೆ." ಶ್ರೀ ವಿದ್ಯಾಸಾಗರ ಪಾಂಡ್ಯ ಮೊದಲಾದವರನ್ನು ಕೂಡಿದ ಒಂದು ಡೆಪ್ಯುಟೇಶನು ವಿದ್ಯಾಮಂತ್ರಿಯವರನ್ನೂ, ಡೈರೆಕ್ಟರ್ ಓಫ್ ಪಬ್ಲಿಕ್ ಇನ್ಸ್‌ಟ್ರಕ್ಶನ್ ಇವರನ್ನೂ, ಎಸ್. ಎಸ್. ಎಲ್. ಸಿ. ಬೋರ್ಡಿನ ಮೆಂಬರರನ್ನೂ ಈ ವಿಷಯವಾಗಿ ಕಾಣಬೇಕೆಂದು ನಿಶ್ಚಯವಾಗಿ ಸಭೆಯು ಕೊನೆಗಂಡಿತು.

ಈ ಕುರಿತಾಗಿಯೇ ಮೇಲೆ ಹೇಳಿದ ವಿದ್ಯಾಮಂತ್ರಿ ಮೊದಲಾದವರಿಗೆ ಮದರಾಸಿನಲ್ಲಿ ವಾಸಿಸುವ ಉತ್ತರ ಹಿಂದೂಸ್ಥಾನದವರೂ, ಮಾರವಾಡಿಗಳೂ, ಹಿಂದೂಸ್ಥಾನಿಗಳೂ, ಸಿಂಧಿಗಳೂ, ಗುಜರಾಥಿಗಳೂ, ಕುಂಭಕೋಣ ಮತ್ತು ಮಧುರೆಯ ಸೌರಾಷ್ಟ್ರರೂ ಮೆಮೋರಿಯಲುಗಳನ್ನು ಸಮರ್ಪಿಸಿರುವರು. ಮದರಾಸಿನಲ್ಲಿ ಬಹು ಸಂಖ್ಯಾಕ ಉತ್ತರ ಹಿಂದೂಸ್ಥಾನದವರಿರುವರು. ಅವರ ಅಭಿವೃದ್ಧಿಯಾಗಬೇಕಾದರೆ ಅವರು ಹಿಂದೀ ಭಾಷೆಯನ್ನು ಅವಶ್ಯವಾಗಿಯೂ ಕಲಿಯಲೇಬೇಕೆಂದು ಮೆಮೋರಿಯಲಿನಲ್ಲಿ ಸೂಚಿಸಿದ್ದರು.

ಕುಂಭಕೋಣದ ಮತ್ತು ಮಧುರೆಯ ಸೈಂಗಳ ಸೌರಾಷ್ಟ್ರ ಸಮಾಜದವರೂ ಇದೇ ಕುರಿತಾಗಿ ಸರಕಾರದವರಿಗೆ ಕಳುಹಿಸಿದ ಮೆಮೋರಿಯಲಿನಲ್ಲಿ—"ನಾವು ಉತ್ತರ ಹಿಂದೂಸ್ಥಾನದವರು, ನಮ್ಮ ನಿಜವಾದ ಭಾಷೆಯು ಹಿಂದೀಯು. ಆದರೆ ಈಗ ಮಾತ್ರ ಅದು ದ್ರಾವಿಡರ ಸಂಪರ್ಕದಿಂದ ಕೊಂಚ ಬದಲಾವಣೆಯನ್ನು ಹೊಂದಿರುತ್ತದೆ. ಆದರೆ ವ್ಯಾಕರಣದ ವಿಷಯವಾಗಿ ಪರಿಶೀಲಿಸಿದರೆ ಹಿಂದಿ ಮತ್ತು ನಮ್ಮ ಈಗಿನ ಭಾಷೆಗಳೊಳಗೆ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಇತ್ತೀಚೆಗೆ ನಡೆದ ಸೌರಾಷ್ಟ್ರ ಸಮಾಜದವರ ಪರಿಷತ್ತಿನಲ್ಲಿ ದೇವನಾಗರಿಯನ್ನೇ ನಮ್ಮ ಲಿಪಿಯನ್ನಾಗಿಯೂ, ಹಿಂದೀಯನ್ನೇ ನಮ್ಮ ಭಾಷೆಯನ್ನಾಗಿಯೂ ಸ್ವೀಕರಿಸಿಕೊಳ್ಳಬೇಕೆಂದೂ ನಿರ್ಣಯವಾಗಿರುತ್ತದೆ. ಈ ನಿರ್ಣಯಕ್ಕೆ ಸರಿಯಾಗಿ ಇಲ್ಲಿಯ, ಮಧುರೆ, ಸೇಲಂ, ಮೊದಲಾದ ಕಡೆಗಳಲ್ಲಿ ಸೌರಾಷ್ಟ್ರರು ಈಗ ಹಿಂದೀಯನ್ನು ಕಲಿಯುತ್ತಿರುವರು. ಹಿಂದೀಯು ಕಲಿಯಲು ನಮಗೆ ಸುಲಭವಾಗಿದೆ. ಉತ್ತರ ಹಿಂದೂಸ್ಥಾನದಲ್ಲಿ ನಾವು ಕೆಲಸಕ್ಕೆ ಸೇರಲೂ, ವ್ಯಾಪಾರಿಯನ್ನು ನಡೆಸಲೂ ಹಿಂದೀಯು ಅವಶ್ಯಕವಾಗಿದೆ. ಸಿ ಗ್ರೂಪಿನಲ್ಲಿ ಹಿಂದೀ ಭಾಷೆಯನ್ನು ಸೇರಿಸಿದರೆ ವಿದ್ಯಾರ್ಥಿಗಳಿಗೆ ಕಲಿಯಲು ಅನುಕೂಲವಾಗುವುದಿಲ್ಲ. ಅದರ ಬದಲು 'ಎ' ಗ್ರೂಪಿನಲ್ಲಿ ಹಿಂದೀ ಪಾಠವನ್ನು ಸೇರಿಸಿದುದಾದರೆ, ನಮ್ಮ ವಿದ್ಯಾರ್ಥಿಗಳು ತಮಿಳ, ಸಂಸ್ಕೃತ ಭಾಷೆಯ ಬದಲು ಸುಲಭವಾದ ಹಿಂದೀಯನ್ನು ಕಲಿಯಲು ಮುಂದುವರಿಯುವರು" ಎಂದಿದ್ದಿತು.

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

ಟೆಲಿ ವಿಳಾಸ: ಕನ್ವೆಯನ್ಸ್. Tel:-Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಜನರ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜ್ರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟ್ರೈನಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜ್ರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮರುದಿನ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡ್ರಾಪೂರ್ ಗೋವಾ, ಬೆಳಗಾಂ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೆಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೆ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಟಿ. ಎನ್. ಹನುಮಂತಯ್ಯ, ಪ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಕ್ಕೆ ಇಚ್ಛಿಸುವವರು ಪ್ರತಿದಿನವೂ ಮೂಡಬಿದರೆ ಕಾರ್ಕಳ ಮಾರ್ಗವಾಗಿಯೂ ಶಿರ್ವ ಕಾಪು ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾಪನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಹಿರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.

ಮಲೇರಿಯಾನ ಮರ್ದ್ದನಕರಸಂಹಾರಿಣಿ

(13. 26)

ಯುವಕ ವಿದ್ಯಾರ್ಥಿಯು ಲಕ್ಷ್ಯಕ್ಕೆ ತಕ್ಕೊಳ್ಳಬಾರದೇ

ದೇಹದ ಆರೋಗ್ಯವೂ ಮೆದುಳಿನ ಬಲವೂ ಇದ್ದ ಯುವಕನಿಗೆ ವಿದ್ಯಾಭ್ಯಾಸವು ಬಹು ಸುಲಭಕರವಾಗಿರುವುದು.

ಆದರೆ ದೇಹದ ಆರೋಗ್ಯವು ಕೆಟ್ಟು ಹೋದಲ್ಲಿ ಮೆದುಳಿನ ಬಲವು ಕುಂದಿರುವದು ಸಹಜವೇ. ಅಂಥಾ ಯುವಕನಿಗೆ ವಿದ್ಯಾಭ್ಯಾಸವು ಅತಿ ಕಷ್ಟಕರವಾಗಿದೆ. ಇಂಥಾ ಯುವಕನು ಸಹಾ ವಿದ್ಯಾಭ್ಯಾಸದಲ್ಲಿ ತೇರ್ಗಡೆಯಾಗಬೇಕಾದರೆ, ದೇಹವು ಆರೋಗ್ಯವುಳ್ಳದ್ದಾಗಿಯೂ ಮೆದುಳು ಶಕ್ತಿವಂತವಾಗಿಯೂ ಇರಬೇಕು. ಕಂಪೌಂಡು ಸಿರಪು ಸಾಲಿಸವನ ಎಂಬ ಅಮೃತವು ಯುವಕನ ಆರೋಗ್ಯವನ್ನು ಕಾಪಾಡುವದಕ್ಕೂ, ಮೆದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತಿ ಗುಣಕಾರಿಯಾಗಿದೆ.

ಕ್ರಯ 8 ಔನ್ಸಿಗೆ ರೂ. 3—8—0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳು.)

ಮೆದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅಹೋ ರಾತ್ರಿ ತಲೆಯಿಂದ ಬಡಕೊಂಡು ಪ್ರಯಾಸದಿಂದ ಓದುವ ಯುವಕನ ತಲೆ ಮೆದುಳು ಬಹು ಬಿಸಿಯಾಗಿ ತಲೆ ಸಿಡಿತ, ಕಣ್ಣು ನೋವು, ದೃಷ್ಟಿಮಾಂದ್ಯ ಕಿವಿ, ಮೂಗು, ಹಲ್ಲುಗಳ ವಿವಿಧ ರೋಗಗಳು ಹುಟ್ಟುವವು. ಈ ಆಪತ್ತು, ರೋಗಗಳು ಪರಿಹಾರವಾಗುವಂತೆಯೂ ಅಥವಾ ಅಂಥಾ ಆಪತ್ತು ರೋಗಗಳು ಹುಟ್ಟದಂತೆಯೂ ಅಷ್ಟಕಟ್ಟ ಚಿಕಿತ್ಸಕ ತೈಲವು ಉಪಯೋಗವು ಬಲು ಗುಣಕಾರಿಯಾಗಿದೆ. ಬಹಳ್ಳ ಹೊತ್ತು ಓದುವ ಅಥವಾ ನಿದ್ರೆಗೆಡುವ ಯುವಕನು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಾಕಿಕೊಳ್ಳುವದರಿಂದಲೇ ತಲೆ ಮೆದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವದು.

ಕ್ಲಿಷ್ಟ ಕಾಲದಲ್ಲಿ ಯುಕ್ತ ರೀತಿ ಅನುಸರಿಸುವದು, ಜಾಣ ಯುವಕನ ಬುದ್ಧಿವಂತಿಕೆಯಾಗಿದೆ.

ಕ್ರಯ: 8 ಔನ್ಸಿಗೆ ರೂ. ೨—೧೨—೦.

ವಿಶೇಷ ಮಾಹಿತಿಗೂ, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ, ಆಯುರ್ವೇದ ಟಿಪ್ಪು ಲವಣ ಮತ್ತು ಹೋಮಿಯೋಪಥಿ ಮದ್ದುಗಳಿಗೂ ನಮೂನೆ ಮಾರು ವೈದ್ಯ ಚಕ್ರಗಳಿಗೂ ನಮ್ಮ ದೊಡ್ಡ ಕೆಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಲೇರಿಯಾನ ಕಂಪೆನಿ,
ಮಂಗಳೂರು.

ದಿ. ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಿಲ್ಲಾ, ಪೇರಳೆ, ಚಿಕ್ಕಳೆ, ದ್ರಾಕ್ಷಿ, ಅಂಜೂರ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್ ಸ್ಟ್ರೀಟ್ ಹೋಮ ಯಜಮಾನರಲ್ಲಿ ದೊರೆಯುವುವು.

ಕೆ. ಮಧ್ವರಾಜ ಶೆಟ್ಟಿ ದಿ. ಕೆನರಾ ನರ್ಸರಿ, ವಿಕ್ಟೋರಿಯಾ ಗಾರ್ಡನ್ಸ್, ಕಾರ್ಕಳ ದ. ಕ. 131028	C/o	ಕೆ. ವಾಮನ ಶೆಣೈ ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.
ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಅತ್ಯುಚ್ಚವಾದ ಸೌಕರ್ಯಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು.

2 ಜನಪ್ರಿಯರೂ, ಪ್ರತಿಷ್ಠಿತರೂ ಆದ ಡ್ಯಾರೆಕ್ಟರರು.

3 ತುಂಬಾ ಅನುಭವದ ವ್ಯವಸ್ಥಾಪಕ, ವಿಶ್ವಸನೀಯ ಮತ್ತು ಸೌಹಾರ್ದದ ಆಡಳಿತ.

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆ ಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಶರ್ತುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ತ ಮತ್ತು ಪರಿಶ್ರಮಿಯಾದ ಏಜಂಟರುಗಳು ಬೇಕಾಗಿರುವರು.

ಪ್ರಾಸ್ಪೆಕ್ಟಸಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, ಸ್ಪೆಶಿಯಲ್ ಏಜಂಟ್	ಪಿ. ಅಭಯಶಂಕರ ದೇಶಪಾಂಡೆ ಅಥವಾ ಮುಖ್ಯ ಕಂಪೆನಿ,

ಫೆಲೂನಾ ಆರೋಗ್ಯವು

ನಿಮ್ಮ

ಮನೋಭಿಲಾಷೆಯನ್ನು

ಪೂರೈಸುವುದು.

ಮಕ್ಕಳನ್ನು ಪಡೆಯುವುದು ಸ್ವಾಭಾವಿಕವು. ಮಕ್ಕಳನ್ನು ಪಡೆಯದಿರುವುದು ಅಸ್ವಾಭಾವಿಕವಾಗಿರುವುದು. ಆದರೆ ಅಂತಹ ಹೆಂಗಸರು ಬಹು ಕಡಿಮೆ.

ಆದರೆ ಹಲವು ಹೆಂಗಸರಿಗೆ ಮಾತೃತನವು ನಿರಾಕರಿಸಲ್ಪಡುವುದು. ಮಕ್ಕಳನ್ನು ಪಡೆವ ದಿನವು ಎಂದು ಉದಯಿಸುವುದೋ ಎನ್ನುತ್ತ ಅವರು ಕಾದು ಕಾದು ನಿರಾಶೆ ಹೊಂದುವರು. ಇತರರ ಕಿವಿಗಳಿಗೆ ಆ ಶುಭಸಮಾಚಾರವನ್ನುಸುರಿಯಬೇಕೆಂದು ಅವರು ಅಪೇಕ್ಷಿಸುವರು. ಆದರೆ ಕಾರಣಾಂತರಗಳಿಂದ ಅವರ ಆಶೆಯು ಫಲಿಸುವುದಿಲ್ಲ. ಇಂತಹ ಸ್ಥಿತಿಗೆ ಸಾಧಾರಣವಾಗಿ ಶಕ್ತಿಹೀನತೆಯೇ ಕಾರಣವು. ಅಂತರಿಕ ಆರೋಗ್ಯವೇ ಬೇಕಾದುದು. ಒಬ್ಬಿಬ್ಬರಿಗೆ ಅಲ್ಲ. ಸಾವಿರಾರು ಹೆಂಗಸರಿಗೆ ಈ ಫೆಲೂನಾ ಮಾತ್ರೆಗಳು ಅಂತರಿಕಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರಯಿಸಿರುವವು.

ಫೆಲೂನಾ ಮಾತ್ರೆಗಳಿಗೆ ಹೆಂಗಸರ ಇಂದ್ರಿಯಗಳನ್ನು ಶುಚಿಪಡಿಸುವ, ಬಲಪಡಿಸುವ ಶಕ್ತಿಯಿದೆ. ಅವುಗಳನ್ನು ಸೇವಿಸಿದೊಡನೆ ಮೊದಲು ಉತ್ಸಾಹವು ತಲೆದೋರಿ, ಸಂತೋಷವುಂಟಾಗಿ ರಕ್ತವು ಹೆಚ್ಚುವುದು. ಹೆಂಗಸು ಸರಿಯಾಗಿ ಬಲಿಸುವಳು. ಇದಕೆಲ್ಲಕ್ಕೆ ಫೆಲೂನಾ ಮಾತ್ರೆಗಳೇ ಕಾರಣ. ಹೀಗಾದೊಡನೆ ಸ್ವಾಭಾವಿಕವಾಗಿ ಮಕ್ಕಳು ಹುಟ್ಟಿ, ಆಗ ಫೆಲೂನಾ ಮಾತ್ರೆಗಳು ಇನ್ನಷ್ಟು ಪ್ರಶಂಸನೀಯವಾಗುವುವು.

ವಾಚಕರೇ, ನಿಮ್ಮಲ್ಲಿ ಯಾರಿಗಾದರೂ, ಫೆಲೂನಾ ಮಾತ್ರೆಗಳಿಂದ ಶುಚಿತನವೂ, ಬಲವೂ ಬೇಕಾಗಿವೆಯೆ? ನಿಮಗೆ ಮಾತೃತನವು ಅಲಭ್ಯವೆನಿಸುವುದೆ? ಹೆಂಗಸರಿಗಾಗಿಯೆ ಇರುವ ಫೆಲೂನಾ ಮಾತ್ರೆಗಳಿಂದ ಪೂರ್ಣ ಸೌಖ್ಯವೂ ಆರೋಗ್ಯವೂ ಲಭಿಸುವದು.



ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್‍ಸ್‌ರಿಂದಲೂ ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ಮಾರಲ್ಪಡುವವು. ಬಾಟಲಿಗೆ ರೂ. 2—4—0.

ದಿ ರಿಪ್ರಸೆಂಟೇಟಿವ್. ದಾದಾ ಎಂಡ್ ಕೋ.

ಪೋಸ್ಟ್ ಬಾಕ್ಸ್ 720, ಮುಂಬಯಿ. 260 ಚೈನಾ ಬಜಾರ್ ರೋಡು, ಮದರಾಸ್.

ಗರ್ಭತನ ಮೊದಲಾದವುಗಳಿಗೆ ಫೆಲೂನಾ ಮಾತ್ರೆಗಳು ಉಪಕಾರಿಯಾಗಲಾರವು. ಅವು ಸ್ವಾಭಾವಿಕವಾದ ಬೆಳವಣಿಗೆಗೆ ಮಾತ್ರವೇ ಸಹಾಯಕವಾಗುವವು. ಅವು ವನಸ್ಪತಿ ಧಾತುಗಳಿಂದಲೇ ತಯಾರಿಸಲ್ಪಟ್ಟವುಗಳಲ್ಲದೆ, ಪ್ರಾಣಿಜನ್ಯ ಧಾತುಗಳು ಅವುಗಳಲ್ಲಿರುವುದಿಲ್ಲ. ಮಾಡುವಾಗಲೂ ಕೈಯಿಂದ ಮುಟ್ಟುವುದೂ ಇಲ್ಲ.

ದಕ್ಷಿಣ ಆಫ್ರಿಕದ ಕೇಪ್ ಟೌನಿನ ಗ್ರಹಮ್ ರೆಮಿಡಿಸ್ ಲಿಮಿಟೆಡ್ ಇವರಿಂದ ತಯಾರಿಸಲ್ಪಟ್ಟಿತು.

17

ಪವಿತ್ರ ಖಾದಿ! ಬಡವರ ಖಾದಿ!!

ಶುದ್ಧ ಖಾದಿಯನ್ನೇ ವಿಕ್ರಯಿಸುವುದಾಗಿ ಅ. ಭಾ. ಚ. ಸಂಘದಿಂದ ಸರ್ಟಿಫಿಕೇಟು ಹೊಂದಿರುವ ಮತ್ತು ಇದೇ ಎಪ್ರಿಲ್ ತಾ. 3ರಲ್ಲಿ ತೆರೆಯಲಾದ

"ಖಾದಿ ನಿಲಯ"ವು

ಎಲ್ಲಾ ಉಪಯೋಗಗಳಿಗಾಗುವ ಸರ್ವ ನಮೂನೆ ಫ್ಯಾಶನಿಗಾಗುವ ನಾಜೂಕು ಖಾದಿಯನ್ನು ಸಂಗ್ರಹಿಸಿರುತ್ತದೆ. ದೇಶಬಾಂಧವರು ಮಹಾತ್ಮಾ ಗಾಂಧಿಯವರು ಈ ವರ್ಷದ ಮಟ್ಟಿಗೆ ಕೈಕೊಂಡಿರುವ ಒಂದೇ ಒಂದಾದ ಪ್ರಧಾನ ಪ್ರಚಾರ ಕಾರ್ಯವಾಗಿಟ್ಟಿರುವ

ಈ ಪವಿತ್ರ ಖಾದಿಯನ್ನು

ಬಳಕೆಗೆ ತರಲು ಸುಸಂದರ್ಭವು ಇದೇ! ತ್ವರೆಮಾಡಿರಿ!!

ವಂದೇ ಮಾತರಂ!!

ವಿಳಾಸ—ಖಾದಿ ನಿಲಯ,
(ವ್ಯವಸ್ಥಾಪಕರು, ಪೈ ಮತ್ತು ಕಂಪನಿ),
ಸಂತೆಕಟ್ಟೆ, ಬಳಿ, ಉಡುಪಿ, ದ. ಕ.

ಅಮಾನುಲ್ಲಾರವರ ಸುಧಾರಣೆಗಳು.

ಕಳೆದ ೧೯ನೇ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಕಾಬೂಲಿನ ಕೆಲವರು ಅಮಾನುಲ್ಲಾರವರನ್ನು ಕಾಫೀರರೆಂದು ದೂರಿ ಪ್ರಕಟಿಸಿರುದರಿಂದ ಇಂಡೋ ಅಫಘಾನಿ ಉಲೇಮಾರವರು ಅರಬಿ ಮತ್ತು ಪಾರ್ಸಿ ಭಾಷೆಯಲ್ಲಿ ಅಮಾನುಲ್ಲಾರವರು ಕಾಫೀರರಲ್ಲವೆಂದೂ, ಅವರು ದೇಶದ ಅಭಿವೃದ್ಧಿಯ ಬಗ್ಗೆ ಪ್ರಯತ್ನಿಸಿದರೆಂದೂ ಸೂಚಿಸುವ ಪ್ರಕಟಣೆಗಳನ್ನು ಉತ್ತರ ಹಿಂದೂಸ್ಥಾನದಲ್ಲಿಯೂ, ಅಫಘಾನಿಸ್ಥಾನದಲ್ಲಿಯೂ ಹಂಚಿರುವರು.

ಅಮಾನುಲ್ಲಾರವರು ಆಚರಣೆಗೆ ತಂದ ಸುಧಾರಣೆಗಳು ಚೆನ್ನಾಗಿ ವಿಚಾರಣೆಗೆ ಒಳಪಟ್ಟವುಗಳು. ದೇಶದ ಐಕ್ಯ ಮತ್ತು ಅಭಿವೃದ್ಧಿಯ ಬಗ್ಗೆ ಅವರು ಪರಿಗಿಸಿದರು.

ಹೇಟುಗಳು—ಅಮಾನುಲ್ಲಾಖಾನರು ತನ್ನ ಸೈನಿಕರು ಹೇಟುಗಳನ್ನಿಡುವಂತೆ ಮಾಡಿದುದಲ್ಲದೆ ತನ್ನ ಪ್ರಜೆಗಳೂ ಹೇಟು ಧರಿಸುವಂತೆ ಮಾಡಿದುದು ಅವರ ತಪ್ಪೆನ್ನುವರು. ತಲೆಯ ಮೇಲೆ ಟೊಪ್ಪಿಯನ್ನಾಗಲಿ, ಹೇಟನ್ನಾಗಲಿ, ಮುಂಡಾಸನ್ನಾಗಲಿ, ಇಂತಹ ಪ್ರಮುಖ್ಯನುಸಾರವಾಗಿಯೇ ಧರಿಸಬೇಕೆಂದು, ಹಿಂದೂಗಳು ಯಜ್ಞೋಪವೀತ ಧರಿಸಲಿರುವಂತೆ ಯಾವ ಕಾನೂನೂ ಇರುವುದಿಲ್ಲ. ಹೇಟುಗಳನ್ನು ಧರಿಸುವುದು ಶಕ್ತಿವಂತ ರಾಜ್ಯಗಳ ಚಿನ್ಹೆಯಾಗಿರುತ್ತದೆ. ಅದು ಕಾರಣ ಹೇಟುಗಳನ್ನು ಧರಿಸುವದು ಯಾವ ತಪ್ಪೆನ್ನಲೂ ಕಾರಣವಿರುವುದಿಲ್ಲ.

ಉಡುಗೆಯ ಸ್ವಾತಂತ್ರ್ಯ—'ನಿಮಗೆ ಬೇಕಾದುದನ್ನು ಉಣ್ಣಿರಿ, ಬೇಕಾದುದನ್ನು ಉಡಿರಿ' ಎಂದು ಭಗವಂತನ ಆಜ್ಞೆ ಇರುತ್ತದೆ. ಮಹಮ್ಮದನ ಕಾಲದಲ್ಲಿಯೂ, ಜನರು ಇಂತಹದೇ ಉಡುಗೆಯನ್ನು ಉಡಬೇಕೆಂದು ನಿಶ್ಚಿತವಾದ ಕಾನೂನು ಇರಲಿಲ್ಲ. 'ಫಟವಾ-ಇ-ಅಲಾಮ್‌ಗಿರಿ' ಎಂಬ ಗ್ರಂಥದಲ್ಲಿಯೂ ಇದೇ ರೀತಿ ಸೂಚಿಸಲ್ಪಟ್ಟಿರುತ್ತದೆ.

ಕೂದಲುಗಳನ್ನು ಕಡಿಯುವಿಕೆ—ರಾಣಿ ಸೋರಿಯಾ, ಮತ್ತು ಅವರ ಸ್ತ್ರೀ ಸಂಗಾತಿಗಳು ತಮ್ಮ ಕೂದಲುಗಳನ್ನು ಕಿವಿಯ ವರೆಗೆ ಕಡಿಸಿದ್ದರು. ಶರೀಯತಿಗೆ ವಿರೋಧವಾಗಿ ಇದು ಅಪಾಯಕರವಾಗಿಲ್ಲ. ಮಹಮ್ಮದನ ಹೆಂಡಂದಿರೂ ತಮ್ಮ ಕೂದಲುಗಳನ್ನು ಕಿವಿಯ ವರೆಗೆ ಕಡಿಯುತ್ತಿದ್ದರೆಂದು ತಿಳಿಯಬರುತ್ತದೆ. ಹಲವು ಗ್ರಂಥಕರ್ತರ ಅಭಿಪ್ರಾಯದಂತೆ ಸ್ತ್ರೀಯರ ಕೂದಲುಗಳನ್ನು ಗಿಡ್ಡವಾಗಿ ಕಡಿಯಬೇಕೆಂದು ವಿಧಿತವಾಗಿರುತ್ತದೆ.

ಘೋಷಾಪ್ರಥೆ—ಪರಕೀಯರೆದುರು ಹೆಂಗಸರು ಮೊಗ, ಅಂಗೈ ಮತ್ತು ಪಾದಗಳನ್ನು ಮುಚ್ಚುವ ಅಗತ್ಯವಿಲ್ಲವೆಂದು ಅಮಾನುಲ್ಲಾರವರು ವಿಧಿಸಿದರು. ಅದು ಸರಿಯಾದುದೇ ಆಗಿದೆ. ಭಗವಂತನೇ ಕುರಾನಿನಲ್ಲಿ ಈ ಕುರಿತು ಇದೇ ರೀತಿ ಅಭಿಪ್ರಾಯವನ್ನು ಸೂಚಿಸಿರುವನು. ಮುಖ್ಯ ಖಾಜಿಯಾದ ಅಬುಯುಸುಫರವರು, ಕೈಗಂಟಿನ ವರೆಗೆ ಘೋಷಾವನ್ನು ಧರಿಸದಿರಬಹುದೆಂದು ಹೇಳಿರುವರು. ಅವರು ಬಹು ತಿಳುವಳಿಕೆಯವರೂ, ಜ್ಞಾನವನ್ನು ಸಂಪಾದಿಸಿದವರೂ ಆಗಿರುವುದರಿಂದ ಅವರ ನಿರ್ಣಯವನ್ನು ತಪ್ಪೆನ್ನಲಾಗುವುದಿಲ್ಲ. ಈಗ ಘೋಷಾದ ಕ್ರಮಗಳೂ ಪಟ್ಟಣಗಳ ಕೆಲವು ಸಮಾಜಗಳಲ್ಲಿ ಮಾತ್ರ ಇರುತ್ತವೆ. ಘೋಷೆಯನ್ನು ತ್ಯಜಿಸುವದು ಪಾಪಕರವೆಂದಾಗಲೀ ನಿಷೇಧಕರವೆಂದಾಗಲೀ ಯಾವ ಶಾಸ್ತ್ರದಲ್ಲಿಯೂ ಬರೆದಿಲ್ಲ.

ಜ್ಞಾನಾರ್ಜನೆ—ಹೆಂಗಸರೂ ಗಂಡಸರೂ ಜ್ಞಾನಾರ್ಜನೆಯನ್ನು ಮಾಡಬೇಕೆಂದು ಅಮಾನುಲ್ಲಾರವರ ಹುಕುಮು. ಮಹಮ್ಮದನೂ ಕೂಡ ಇದೇ ರೀತಿಯ ಶಾಸನವನ್ನು ಮಾಡಿರುವನು. ಜ್ಞಾನಾರ್ಜನೆಗೆ ಶಾರೀರಿಕ ಬಲವಿರಬೇಕು. ಶಾರೀರಿಕ ಬಲದ ಅಭಿವೃದ್ಧಿಗೆ ವೈದ್ಯಶಾಸ್ತ್ರವನ್ನು ತಿಳಿಯಬೇಕು. ಒಟ್ಟಾರೆಯ ಮೇಲೆ ಜ್ಞಾನಾರ್ಜನೆಯ ಉದ್ದೇಶದಿಂದ ಮನಸ್ಸು ವಿಕಾಸವಾಗುವದಲ್ಲದೆ ದೇಹವೂ ಗಟ್ಟಿಮುಟ್ಟಾಗುವದು.

ವಿದೇಶದಲ್ಲಿ ಮುಸಲ್ಮಾನ ಹುಡುಗಿಯರು—ಜ್ಞಾನಾರ್ಜನೆಗಾಗಿ ಅಮಾನುಲ್ಲಾರವರು ಸ್ತ್ರೀಪುರುಷರನ್ನು ಪರವೂರುಗಳಿಗೆ ಕಳುಹಿಸಿದ್ದರು. ಪವಿತ್ರವಾದ ಖುರಾನಿನ ಕಾನೂನಿಗೆ ಅನುಸರಿಸಿಯೇ ಅವರ ವರ್ತನೆ ಇದೆ. ಮತಬೋಧಕನಾದ ಮಹಮ್ಮದನು ಜ್ಞಾನಾರ್ಜನೆಗೆ ತನ್ನ ಕಡೆಯ ಜನರನ್ನು ಚೀನಾ ದೇಶಕ್ಕೆ ಕೂಡ ಹೋಗಲು ಅನುಜ್ಞೆಯನ್ನಿತ್ತಿದ್ದನು. 'ಹಿದಯಾ' ಎಂಬ ಗ್ರಂಥದಲ್ಲಿ ಈ ಕುರಿತು ಸವಿಸ್ತಾರವಾಗಿ ಬರೆದಿರುತ್ತದೆ. ಮುಸಲ್ಮಾನ ಹುಡುಗಿಯರು ತಮ್ಮ ಹೆತ್ತವರಿಂದಾಗಲಿ, ಅಥವಾ ವಿದೇಶಗಳಿಗೆ ಗಂಡಂದಿರೊಂದಿಗೆ ಹೋಗುವುದರಿಂದಾಗಲಿ ಜ್ಞಾನಾರ್ಜನೆಯನ್ನು ಮಾಡಿಕೊಳ್ಳಬಹುದೆಂದು ಇಮಾಮ್ ಅಬು ಹನೀಫಾ ಎಂಬವರು ವಿವರಿಸಿರುವರು.

(೧೯ನೇ ಪುಟಕ್ಕೆ ಮುಂದುವರಿಸಿದೆ.)

ರೋಗಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ಕಾಯಿಲೆಯಾಗಲಿ, ಹಾಗೆಯಾಗಲಿ ಉಪಯೋಗಿಸು ತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡು ತ್ತದೆ.

ಹುಟ್ಟಿದ ಮೊದಲು ವೃದ್ಧ ವಯಸ್ಸಿನವರಿಗೂ, ಕೆಮ್ಮು, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಕಫ್ಫಾದಿ ಮೊದಲಾದ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

[illegible] ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ರೋಗಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈ ಶ್ವಾ ನ ರಾ ಸ ವ .

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗ ವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲ ಕ್ಷ್ಮೀ ವಿ ಲಾ ಸ ರ ಸ .

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸು ರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀ ನಿ ವಾ ಸ ತೈ ಲ .

ಪ್ಲೇಗು ರೋಗಿಯ ಪ್ರತಿಸಂಧುಗಳಿಗೂ, ಗಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಸ್ಟೈಟ್ಸ್‌ರೋಡ್ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಟವನಿಗೆ ವಾಸ್ತ್ರ.

'ಲೋಧ್ರ'ದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಸೀಸೆಯಿಂದಲೇ ಗುಣವಾಯಿತು.

ಶ್ರೀಮತಿ ಎನ್. ಶ್ರೀನಕಮ್ಮ, ಕೇರಾಫ್ ಎನ್. ನರಸಯ್ಯ, ಗ್ರಾಮ ಮ್ಯಾಜಿಸ್ಟ್ರೇಟ್, ಕವರ ಇವರು ಬರೆದಿರುವುದು— ನಿಮ್ಮ ಒಂದು ಸಣ್ಣ ಬಾಟಲ್ ಲೋಧ್ರವನ್ನು ಉಪಯೋಗಿಸಿದ ಮಾತ್ರದಿಂದಲೇ ಗುಣವುಂಟಾಯಿತು. ಒಂದು ದೊಡ್ಡ ಸೀಸೆ ಲೋಧ್ರವನ್ನು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

ಶ್ರೀಮತಿ ಇಂದಿರಾಕುಮಾರಿ ದೇವಿ, ಮುಟ್ಟೂರು, ಇವರು ಬರೆದಿರುವುದು—

ಸ್ವಾಮಿ, ನಾನು ಈಗ ತಮ್ಮ ಲೋಧ್ರವನ್ನು ಸೇವಿಸುತ್ತಿದ್ದೇನೆ. ಇದಕ್ಕೆ ಮುಂಚೆ ನನ್ನ ಋತುಕಾಲದಲ್ಲಿ ಬಹಳ ಬಾಧೆಯುಂಟಾಗುತ್ತಿತ್ತು ಮತ್ತು ಕ್ರಮತಪ್ಪಿ ೨೦ ದಿನಗಳೊಳಗಾಗಿಯೇ ಬಹಿಷ್ಟೆಯಾಗುತ್ತಿದ್ದೆನು. ೨ ವರ್ಷಗಳಕಾಲ ಆಂಗ್ಲ ಔಷಧಾಲಯಗಳಲ್ಲಿ ಔಷಧ ಸೇವಿಸಿಯೂ ಪ್ರಯೋಜನವಿಲ್ಲದಿರಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಹೇಳಿದರು. ಆದರೆ ನಾನು ಸಮ್ಮತಿಸಲಿಲ್ಲ. ಅನಂತರ ತಮ್ಮ ಪ್ರಸಿದ್ಧವಾದ ಲೋಧ್ರ ಎರಡು ಬಾಟಲ್ ತರಿಸಿ ಸೇವಿಸಿದೆನು. ಅಂದಿನಿಂದ ಕ್ರಮವಾಗಿ ೨೮ ದಿನಕ್ಕೊಂದುಸಲ ಬಾಧೆಯಿಲ್ಲದೆ ಬಹಿಷ್ಟೆಯಾಗುತ್ತ ಸುಖವಾಗಿದ್ದೇನೆ. ಮಿಕ್ಕ ಇತರ ಬಾಧೆಗಳೂ ನಿವೃತ್ತಿಯಾಗಿವೆ. ಪುನಃ ಈಗ ಎರಡು ಬುಡ್ಡಿ ಲೋಧ್ರ ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ಮಾಯವಾಯಿತು.

ಶ್ರೀಮತಿ ಜಯ ಲಕ್ಷ್ಮಮ್ಮ, ಬಾಲಿಕಾ ಪಾಠಶಾಲೆ, ಕುಣಿಗಲ್, ಇವರು ಬರೆದಿರುವುದು —

ಕಳೆದ ಮೂರು ವರುಷಗಳಿಂದಲೂ ನನಗೆ ಮುಟ್ಟು ಸರಿಯಾಗಿ ಆಗುತ್ತಿಲ್ಲ. ೨ ಅಥವಾ ೩ ತಿಂಗಳಿಗೊಂದುಸಾರಿಯಾಗುತ್ತಿದ್ದಿತು. ಈ ಸಂದರ್ಭಗಳಲ್ಲಿ ಸೊಂಟನೋವು, ಕಿಬ್ಬೊಟ್ಟೆ ನೋವು, ಮತ್ತು ನಿಶ್ಯಕ್ತಿಯುಂಟಾಗಿ ಬಹಳ ಕಷ್ಟಪಡುತ್ತಿದ್ದೆನು. ಈ ಸಮಯದಲ್ಲಿ ತಮ್ಮ 'ಲೋಧ್ರ' ೩ ಬುಡ್ಡಿ ತರಿಸಿ ಸೇವಿಸಿದೆನು. ಅಂದಿನಿಂದ ಈ ಬಾಧೆಗಳೆಲ್ಲವೂ ಮಾಯವಾಗಿ ಸರಿಯಾಗಿ ಬಹಿಷ್ಟೆಯಾಗುತ್ತ ಶರೀರಾರೋಗ್ಯವನ್ನು ಅನುಭವಿಸುತ್ತಿದ್ದೇನೆ. ಈ ದಿವ್ಯೌಷಧಿಯನ್ನು ನಿಲ್ಲಿಸದೆ ಇನ್ನೂ ಸೇವಿಸಬೇಕೆಂದಿರುವುದರಿಂದ ಇನ್ನೂ ಎರಡು ಬುಡ್ಡಿ ಕಳುಹಿಸುವುದು. ಸ್ತ್ರೀಯರ ಎಲ್ಲಾ ವ್ಯಾಧಿಗಳಿಗೂ 'ಲೋಧ್ರ'ವು ದಿವ್ಯೌಷಧಿಯೆಂದು ನಾನು ಖಂಡಿತವಾಗಿಯೂ ಹೇಳುತ್ತೇನೆ.

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 | ತಂತಿ: "ಕೇಸರಿ" | ಫೋನ್ 3486.

ಏಜಂಟರು — ಪಾಯ್ ಕಂಪೆನಿ, (ದಿ ಊಲನ್ ಮಾರ್ಟ್) ಮಂಗಳೂರು.

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ತಯಾರಾಗಿವೆ ತಯಾರಾಗಿವೆ.

ಕಾಫಿ ಪ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚೆಕ್ ರೋಲ್‌ಗಳು

ಮೂರು ಸ್ಯಾಂಪಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನೋಟೀಸು.

ಉಡುಪಿ ಕಸಬೆಯಲ್ಲಿರುವ ಶ್ರೀ ಫಲಮಾರು ಮಠದ ಅಧಿಪತಿಗಳಾದ ಶ್ರೀ ರಘುಮಾನ್ಯತೀರ್ಥ ಶ್ರೀ ಪಾದಂಗಳವರು ಈ ಮೂಲಕ ಸರ್ವ ಜನ ರಿಗೆ ತಿಳಿಯಪಡಿಸುವದೇನೆಂದರೆ:—

ನಮ್ಮ ಗುರುಗಳಾದ ಶ್ರೀ ಅದ್ಮಾರು ಮಠದ ಶ್ರೀ ವಿಬುಧಪ್ರಿಯ ತೀರ್ಥ ಶ್ರೀ ಪಾದಂಗಳವರು ದೈವಾಧೀನರಾದರೆಂಬ ವಿಷಾದಕರವಾದ ಸಮಾಚಾರವನ್ನು ನಾವು ತಿಳಿದು ವ್ಯಸನಭರಿತರಾಗಿ ಅದರ ಸಂದರ್ಭವನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವ ಬಗ್ಗೆ ನಾವು ಘಟಿಕಾಚಲ, ತಿರುಪತಿ, ಬೆಂಗಳೂರು ವಗೈರೇ ಸ್ಥಳಗಳಿಗೆ ಹೋಗಿ ವಿಚಾರಿಸಿದಲ್ಲಿ ಸದ್ರಿಯವರು ತಿರುಪತಿ ಶ್ರೀನಿವಾಸ ದೇವರ ದರ್ಶನಮಾಡಿ ವಾಪಸ್ಸು ಬರುವಾಗ್ಗೆ ತಾ. 7—5—'29ಲ್ಲು (ಮಂಗಳವಾರ) ತಿರುಪತಿ ದೇವಸ್ಥಾನಕ್ಕೆ ಸಮ್ಮಂಧಿಸಿದ ಮಂಗಳಾಪುರ (ಚಂದ್ರಗಿರಿ ಪೋಸ್ಟು) ಛತ್ರದಲ್ಲಿ ಸುಮಾರು ಮಧ್ಯಾಹ್ನ 2 ಘಂಟೆಗೆ ದೈವಾಧೀನರಾಧ್ದಾಗಿಯೂ ಸದ್ರಿಯವರ ಜೀವದೆಸೆಯಲ್ಲಿ ಅವರು ತಮ್ಮ ಉತ್ತರಾಧಿಕಾರಿಗಳನ್ನು ನೇಮಿಸಿ ಆಶ್ರಮಕೊಡುವ ಯಾವ ಕಾರ್ಯಗಳನ್ನೂ ಅವರು ನಡಿಸಿದ್ದಿಲ್ಲವಾಗಿಯೂ ನಮಗೆ ತಿಳಿದುಬಂದದೆ. ಸದ್ರಿ ಸ್ಥಳಗಳಲ್ಲಿ ನಾವು ಮಾಡಿರುವ ವಿಚಾರಂದಲ್ಲಿ ಅನೇಕ ಕಾರಣಗಳಿಂದ ಸದ್ರಿ ವಿಬುಧಪ್ರಿಯ ತೀರ್ಥ ಶ್ರೀ ಪಾದಂಗಳವರು ಜೀವಂತರಾಗಿರುವಾಗ್ಯೆ ಅವರು ತಮ್ಮ ಉತ್ತರಾಧಿಕಾರಿಗಳನ್ನು ನೇಮಿಸಿ ಆಶ್ರಮ ಕೊಡಲಿಲ್ಲವಾಗಿ ನಮಗೆ ಖಂಡಿತವಾಗಿ ತಿಳಿದುಬಂದಿರುತ್ತದೆ. ಈ ಸಂದರ್ಭದಲ್ಲಿ ದ್ವಂದ ಮಠದ ಹಕ್ಕಿನ ಮೇಲೆ ಸದ್ರಿ ಅದ್ಮಾರು ಮಠದ ವಿಬುಧಪ್ರಿಯ ತೀರ್ಥ ಶ್ರೀ ಪಾದಂಗಳವರಿಗೆ ಉತ್ತರಾಧಿಕಾರಿಗಳನ್ನು ನೇಮಿಸಿ ಆಶ್ರಮ ಕೊಡಲಿಕ್ಕೂ, ಆಶ್ರಮ ಹೊಂದುವ ಶ್ರೀಗಳವರು ಪ್ರಾಯ ಪ್ರಬುದ್ಧರಾಗುವ ವರೇಗೆ ಸದ್ರಿ ಮಠದ ಸಕಲ ಆಡಳಿತೆಯನ್ನು ನಡಿಸಲಿಕ್ಕೂ, ಸಕಲ ಸ್ಥಿರಚರ ಸೊತ್ತುಗಳ ಸ್ವಾಧೀನಗಾರರಾಗಲಿಕ್ಕೂ ನಾವು ಸಂಪೂರ್ಣ ಅರ್ಹರಾಗಿರುತ್ತೇವೆ. ಆದುದರಿಂದ ಸದ್ರಿ ಅದ್ಮಾರು ಮಠಕ್ಕೆ ಸಲ್ಲತಕ್ಕ ಗೇಣಿ ಕಟ್ಟೇಳು ವಗೈರೇ ಐವೇಜುಗಳನ್ನು ವ ಸಾಲ ಸಮ್ಮಂದ ಐವೇಜುಗಳನ್ನು ಕೂಡಾ ವಸೂಲು ಪಡಿಯಲಿಕ್ಕೆ ಮತ್ತು ಆಡಳ್ತೆ ಸಮ್ಮಂದ ಪಟ್ಟ ಇತರ ಎಲ್ಲ ವ್ಯವಾಟಗಳನ್ನು ನಡಿಸಲಿಕ್ಕೆ ನಾವೇ ಹಕ್ಕುದಾರರಾಗಿರುತ್ತೇವೆ. ಆದುದರಿಂದ ಸದ್ರಿ ಮಠಕ್ಕೆ ಸಮ್ಮಂದಪಟ್ಟ ಸಕಲ ವ್ಯವಾಟಗಳನ್ನು ನಮ್ಮ ಕೂಡೆ ನಡಿಸಿ ನಮ್ಮಿಂದ ಕ್ರಮಪ್ರಕಾರ ರಸೀದಿ ಪಡಿಯತಕ್ಕದ್ದು. ನಮ್ಮ ವಿನಹ ಮಿಕ್ಕ ಯಾರ ಕೂಡೆಯೂ ಸದ್ರಿ ಮಠಕ್ಕೆ ಸಂಬಂಧಿಸಿದ ಯಾವ ಲೇವಾದೇವಿಯನ್ನು ನಡಿಸಕೂಡದು. ಸದ್ರಿ ಮಠದ ಮೃತ ವಿಬುಧ ಪ್ರಿಯ ತೀರ್ಥ ಶ್ರೀ ಪಾದಂಗಳವರ ಕಾಲದಲ್ಲಿ ಸದ್ರಿ ಮಠಕ್ಕೆ ಸಮ್ಮಂಧಿಸಿದ ಏಜಂಟರರು ವ ಇತರ ನೌಕರರು ವಗೈರರು ಸದ್ರಿ ಶ್ರೀ ಪಾದಂಗಳವರು ಜೀವಂತರಾಗಿರುವಾಗ್ಗೆ ಆಶ್ರಮ ವಗೈರೆ ಅವರು ಕೊಟ್ಟರು ತ್ತಾರಾಗಿ ಸುಳ್ಳು ಸಂಗತಿಗಳನ್ನು ಕಲ್ಪಿಸಿಕೊಂಡ ಪ್ರಕಟಿಸ ಮಾಡುತ್ತಾರಾಗಿ ನಾವು ತಿಳಿಯುತ್ತೇವೆ. ಅವರು ಹೇಳುವಂತೆ ಆಶ್ರಮವಾದ್ದೆಂಬುದು ತೀರಾ ಸುಳ್ಳು, ಕಲ್ಪನೆಯು, ಅಸಿಂಧುವಾದ್ದು ಎಂಬ ಸಂಗ್ತಿಗಳನ್ನು ಈ ಮೂಲಕ ಸರ್ವ ಜನರಿಗೂ ತಿಳಿಸೋಣಾಗುತ್ತದೆ

ಈ ತುಳುಬಂಡ

ತಾರೀಕು 30ನೇ ಮೇ 1929, ಪೊಳಲಿಂ, ಉಡುಪಿ. } ಶ್ರೀ ರಘುಮಾನ್ಯ ತೀರ್ಥ ಸ್ವಾಮಿಯವರ ರುಜು.

ನೋಟೀಸು.

ಬಜಪೆ ಪಂಚಾಯಿತ ಕೋರ್ಟಿನಲ್ಲಿ.

ಕ್ರಿಮಿನಲ್ ನಂಬ್ರ 4/1929.

ಲಕ್ಷ್ಮಿನಾರಾಯಣ ಉಪಾಧ್ಯಾಯ— ಮುದ್ದೈ.

1. ಕೃಷ್ಣ ಪೆಜತಾಯ—ದಾಸಪೆಜತಾಯನ ಮಗ,
2. ಚಾಮುಕ್ಕ್ಮ ಹೆಂಗಸು—1ನೇ ಅಲೆಯವರ ತಂಗಿ ಇವರು ಮಂಗ್ಳೂರು ತಾಲೂಕು ಪೆರ್ಮುದೆ ಗ್ರಾಮಸ್ಥರು—ಮುದ್ದೈ ಅಲೆರು.

ಸದ್ರಿ ಮುದ್ದೈಯು ಅಲೆರ ಮೇಲೆ ಮಾಡಿದ ಸದ್ರಿ ಪಿಯಾರ್ದಿ ಸಮ್ಮಂಧ 2ನೇ ಸಾರಿ ಸದ್ರಿ ಮುದ್ದೈ ಅಲೆರಿಗಾದ ನೋಟೀಸಿನಲ್ಲಿ ಪೆರ್ಮುದೆ ಗ್ರಾಮದ ಪಟೇಲ್ ಉಗ್ರಾಣಿಯು 1ನೇ ಅಲೆಯು ಮೈಸೂರಿಗೆ ಹೋಗಿದ್ದುದರಿಂದ ಅತಗೆ ಆದ ನೋಟೀಸನ್ನು ಕೋರ್ಟಿಗೆ ವಾಪಾಸು ಮಾಡಿದ್ದೇನೆಂತ ತಾ. 9—5—'29ಲ್ಲಿ ಬರೆದಿದ್ದಾನೆ.

ಆ ಸಮ್ಮಂಧ ಸದ್ರಿ ನಂಬ್ರದ ತನಖಿಯನ್ನು ತಾ. 17—6—'29ಕ್ಕೆ ಇಟ್ಟಿರುತ್ತದೆ. ಸದ್ರಿ ತನಖಿ ದಿವಸ 1ನೇ ಅಲೆಯಾದ ಕೃಷ್ಣ ಪೆಜತಾಯನು ಹಾಜರು ಆಗದೆ ಇದ್ದಲ್ಲಿ ಅವನ ಗೈರು ಹಾಜರಿಯಲ್ಲಿ ಸದ್ರಿ ನಂಬ್ರವು ತೀರ್ಮಾನಿಸಲಾಗುವದು.

ಪ್ರೆಸಿಡೆಂಟ್,
ಬಜಪೆ ಪಂಚಾಯತ ಕೋರ್ಟ್.

ತಸ್ಕರ ಚಮತ್ಕಾರ

(ಕಥೆ)

[illegible]

ಕಳೆದ ಸಂಚಿಕೆಯಿಂದ ಮುಂದುವರಿದುದು.

"ವಂಚಕರ ಚಹರೆಗಳು ಹೇಗಿವೆ?" ಎಂದು ಇನ್ಸ್‌ಪೆಕ್ಟರನು ಪ್ರಶ್ನಿಸಿದನು.

ಸದಾಶಿವರಾಯನು "ಆತನು ಸ್ಥೂಲಕಾಯದವನು. ಎತ್ತರದಲ್ಲಿ ಅವನಷ್ಟು ಎತ್ತರ ಪುರುಷರು ಇಲ್ಲಿ ಯಾರೂ ಇಲ್ಲ. ಮೈ ಬಣ್ಣವು ವಿಲಾಯತಿ ಜನರಂತಿದೆ" ಎಂದು ಉತ್ತರವಿತ್ತನು.

"ನೀವು ಹೇಳುವುದು ನಿಜವಾಗಿದೆ. ಇದೇ ಚಹರೆಯ ಪುರುಷನೊಬ್ಬನು ವಿವಿಧ ಸ್ಥಾನಗಳಲ್ಲಿ ಬೇರೆ ಬೇರೆ ಹೆಸರುಗಳನ್ನು ಧರಿಸಿಕೊಂಡು ವಿವಿಧ ರೀತಿಯಿಂದ ಜನರನ್ನು ಬಹು ವರ್ಷಗಳಿಂದಲೂ ಮೋಸಗೊಳಿಸುತ್ತಿದ್ದಾನೆ. ಅವನ ವಿಷಯವಾಗಿ ಹಲವು ದೂರುಗಳು ನಮ್ಮೊಡನೆ ಬಂದಿವೆ. ಆದರೆ ಆತನನ್ನು ಯಾವ ರೀತಿಯಲ್ಲೂ ಬಂಧಿಸಲು ಸಾಧ್ಯವಾಗುವುದಿಲ್ಲ. ಆತನ ವಂಚನೆಯ ಕಾರ್ಯಕ್ಕೆ ಸಹಾಯ ಮಾಡಲು ಇನ್ನೂ ಕೆಲವರು ಆತನೊಡನೆ ಸೇರಿರುವರು. ಆ ಇಡೀ ವಂಚಕರ ಗುಂಗಡವನ್ನೇ ಬಂಧಿಸಲು ನಾವು ಪ್ರಯತ್ನಿಸುತ್ತಿರುವೆವು" ಎಂದು ಇನ್ಸ್‌ಪೆಕ್ಟರನು ನುಡಿದನು.

ಆ ಮೇಲೆ ಅವರೆಲ್ಲರೂ 'ಬ್ರೈಟ್ ಹ್ಯಾಟ್' ಧೊರೆಯ ಭವನಕ್ಕಾಗಿ ತೆರಳಿದರು. ಅಲ್ಲಿ ನೋಡುವುದೇನು? ಭವನದ ನಾಲ್ಕು ಬದಿಗಳಿಂದಲೂ ಗಾಳಿಯು ಬಲವಾಗಿ ಬೀಸುವ ಶಬ್ದವು ಮಾತ್ರ ಕೇಳಬರುತ್ತದಲ್ಲದೆ ಮಾನವ ಧ್ವನಿಯು ಕೇಳಬರುವುದಿಲ್ಲ. ಎಲ್ಲಿ ಆ ಫ್ರಾನ್ಸ್ ದೇಶದ ಬ್ರೈಟ್ ಹ್ಯಾಟ ಧೊರೆಯು! ಭವನದ ನಾಲ್ಕು ಕಡೆಗಳಲ್ಲಿರುವ 'ಗೇಟು'ಗಳಿಗೂ ಬೀಗ ಬಿದ್ದಿರುವುದು. ವಂಚಕನು ಮೋಸಗೊಳಿಸುವುದಕ್ಕಾಗಿಯೇ 'ಬ್ರೈಟ್ ಹ್ಯಾಟ್' ಎಂಬ ಕಲ್ಪಿತ ನಾಮವನ್ನು ಧರಿಸಿಕೊಂಡು ಆ ಬಾಡಿಗೆಯ ಗೃಹದಲ್ಲಿ ವಾಸಿಸಿದುದು ಎಂದು ಈಗ ಗೊತ್ತಾಯಿತು. ಅಲ್ಲವಾದರೆ ಹೀಗೆ ಇದಕ್ಕೆ ಬೀಗ ಬೀಳಲು ಕಾರಣವಿದೆಯೇ? ಹಾಗೆಯೇ 'ಚೆಕ್ಕನ್ನು' ಟಪ್ಪಾಲು ಮೂಲಕ ಕಳುಹಿಸಿದ ಪ್ರಸ್ತಾಪವೂ ಬಂದಿತು. ಅದಕ್ಕೆ ಇನ್ಸ್‌ಪೆಕ್ಟರನು "ಈಗ ಬ್ಯಾಂಕಿಗೆ ಹೋಗುವುದು ನಿಷ್ಪ್ರಯೋಜನವು. ವಂಚಕರು 'ಚೆಕ್ಕು' ಸಿಕ್ಕಿದೊಡನೆಯೆ ಬ್ಯಾಂಕಿಗೆ ಹೋಗಿ ಹಣವನ್ನು ತೆಗೆದು ಕೊಂಡು ಹೋಗದೆ ಇರಲಾರರು. ಇಷ್ಟೆಲ್ಲಾ ರೀತಿಯಿಂದ ಮೋಸಗೊಳಿಸುವ ವಂಚಕರು 'ಚೆಕ್ಕಿನ' ವಿಷಯ ಜಾಗ್ರತೆಯಿಂದಿರಲಾರರೇ?" ಎಂದನು. ಸದಾಶಿವರಾಯನು ವಿಶೇಷ ಮನಸ್ತಾಪದಿಂದ ತನ್ನ ಮನೆಗೆ ತೆರಳಿದನು. ಇನ್ಸ್‌ಪೆಕ್ಟರನು ತನ್ನ ಕೆಲಸದ ಮೇಲೆ ಹೊರಟುಹೋದನು.

— ೯ —

ಮನೆಗೆ ಬಂದೊಡನೆಯೇ ಸದಾಶಿವರಾಯನು ತನಗೊದಗಿದ ನಷ್ಟದ ಕುರಿತು ತನ್ನ ಬಂಧುಬಾಂಧವರೊಡನೆ ಹೇಳಿದನು. ಎಲ್ಲರೂ ಅದನ್ನು ಕೇಳಿ ದುಃಖಿತರಾದರು. ಪ್ರಾತಃಕಾಲದಲ್ಲಿ ಯಾವ ಮನೆಯವರೆಲ್ಲರೂ ಆನಂದಸಾಗರದಲ್ಲಿ ಮುಳುಗಿದ್ದರೊ ಅವರೇ ಅಪರಾಹ್ನಕಾಲದಲ್ಲಿ ದುಃಖ ಶರಧಿಯಲ್ಲಿ ಮುಳುಗಬೇಕಾಯಿತು. ಆಗ ಸದಾಶಿವರಾಯನ ಮೊಮ್ಮಗಳಾದ ಮಾಲತಿಯು ದುಃಖಿಸುತ್ತ ಸದಾಶಿವರಾಯನ ಸಮೀಪ ಬಂದು "ಅಜ್ಜಾ, ನರಸಿಂಗಣ್ಣನ ಆ ದುಷ್ಟನಾಯಿಯು ನನ್ನ ಕುಪ್ಪಸವನ್ನೂ ಪುಸ್ತಕಗಳನ್ನು ತುಂಬುವ ಚೀಲವನ್ನೂ ಹರಿದು ಚೂರುಚೂರು ಮಾಡಿ ಹಾಕಿತು" ಎಂದು ಹೇಳಿದಳು. ಅದನ್ನು ಕೇಳಿದೊಡನೆ ಸದಾಶಿವರಾಯನ ಕೋಪವೆಲ್ಲವೂ ಆ ಬಡ ನಾಯಿಯ ಮೇಲೆ ಸ್ಥಾಪನೆಯಾಯಿತು. "ಆ ಕೆಟ್ಟ ನಾಯಿಯನ್ನು ಈಗಲೇ ನೀರಲ್ಲಿ ಮುಳುಗಿಸಿ ಕೊಲ್ಲಬೇಕು" ಎಂದು ಹೇಳುತ್ತ ಸದಾಶಿವರಾಯನು ಕೈಯಲ್ಲಿ ದೊಡ್ಡದೊಂದು ದೊಣ್ಣೆಯನ್ನು ಹಿಡಿದುಕೊಂಡು ಮಹಾಕ್ರೋಧದಿಂದ ನಾಯಿಯನ್ನು ಕಟ್ಟಿಹಾಕುವ ಒಂದು ಸಣ್ಣ ಕೋಣೆಯ ಸಮೀಪ ಹೋಗಿ ನಿಂತುಕೊಂಡನು. ಸದಾಶಿವರಾಯನ ಕ್ರೋಧವನ್ನು ಕಂಡು ನರಸಿಂಗನು ತನ್ನ ಪ್ರೀತಿಯ ನಾಯಿಯು "ಈಗ ಖಂಡಿತವಾಗಿಯೂ ಕೊಲ್ಲಲ್ಪಡುವುದು" ಎಂಬದಾಗಿ ಬಹಳ ದುಃಖಿಸಿದನು. ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ನಿಂತುಕೊಂಡಿರುವ ಸದಾಶಿವರಾಯನನ್ನು ನೋಡಿ ನಾಯಿಯು ಭೀತಿಯಿಂದ ಆ ಕೋಣೆಯ ಒಂದು ಮೂಲೆಯಲ್ಲಿ ಅಡಗಿ ಕುಳಿತುಕೊಂಡಿತು. ಸದಾಶಿವರಾಯನು ಆ ಚಿಕ್ಕ ಕೋಣೆಯಲ್ಲಿ ತನ್ನ ತಲೆಯನ್ನು ಹಾಕಿ ನೋಡಿದನು. ಅದರಲ್ಲಿ ನಾಯಿಯು ಚರ್ಮದ ಚೂರುಗಳನ್ನೂ ಕಾಗದದ ಚೂರುಗಳನ್ನೂ, ವಸ್ತ್ರದ ಚೂರುಗಳನ್ನೂ, ಕೆಲವು ಚಿಂದಿಗಳನ್ನೂ, ಸಂಗ್ರಹಿಸಿಟ್ಟಿದೆ. ಆ ಚೂರುಗಳ ರಾಶಿಯನ್ನು ಸದಾಶಿವರಾಯನು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಶೋಧಿಸಲಾರಂಭಿಸಿದನು. ಆ ರಾಶಿಯಲ್ಲಿ ಅರ್ಧ ಹರಿದಿರುವ ಒಂದು 'ಕವರ'ನ್ನು ನೋಡಿ ಉತ್ಸುಕತೆಯಿಂದ "ಹರ! ಹರ!! ಮಹಾದೇವ!!! ನನ್ನ ಪ್ರಾಣವನ್ನು ಉಳಿಸಿದೆ. ನೀನು ನನ್ನ ಕುಲದೈವವೆಂಬುದು ನಿಜವು. ಅನಾಥರಿಗೆ ನಾಥನೆಂಬುದು ಸತ್ಯವು. ನಿನ್ನನ್ನು ನಂಬಿದವರಿಗೆ ಎಂದೂ ಆಪತ್ತು ಬರಲಾರದು" ಎಂದು ಹೇಳಿದನು.

— ೧೦ —

ಆಗ ಮನೆಯವರೆಲ್ಲರೂ ಆ ಸ್ಥಳಕ್ಕೆ ಓಡಿ ಬಂದರು. ಸದಾಶಿವರಾಯನು 'ನನ್ನ ಕುಲದೈವವಾದ ಪರಮೇಶ್ವರನು ನನ್ನ ಪ್ರಾಣವನ್ನುಳಿಸಿದನು. ಮಹದೇವನೇ ನಿನಗೆ ಸಹಸ್ರಪ್ರಣಾಮಗಳು' ಎಂದನು. "ನಿನ್ನೆ ಟಪ್ಪಾಲು ಪೆಟ್ಟಿಗೆಯಲ್ಲಿ ಹಾಕಬೇಕೆಂದು ಹೇಳಿದ ಪತ್ರಗಳಲ್ಲಿ ಆ 'ಚೆಕ್ಕು' ಇರುವ 'ಕವರೂ' ಇತ್ತು. ನೆನಪಿಲ್ಲದೆ ವಿಟ್ಠಲನು ಚೀಲವನ್ನು ಮೇಜಿಯ ಮೇಲೆಯೇ ಬಿಟ್ಟು ಹೋಗಿದ್ದನೋ ಏನೋ. ಆ ಎಲ್ಲಾ ಪತ್ರಗಳುಳ್ಳ ಚೀಲವು ನಮ್ಮ ಈ 'ಶುನಕರಾಜ'ನಿಗೆ ದೊರಕಿತು. ನಿತ್ಯದ ಅಭ್ಯಾಸದಂತೆ ಅದನ್ನು ಹರಿದು ಚೂರು ಚೂರು ಮಾಡಿ ಇಲ್ಲಿಯೇ ಇಟ್ಟುಕೊಂಡಿತು. ಆ ವಂಚಕನಾದ "ಬ್ರೈಟ್ ಹ್ಯಾಟ"ನು 'ಚೆಕ್ಕ'ನ್ನು 'ರಿಜಿಸ್ಟ್ರಿ' ಮಾಡಿ ಕಳುಹಿಸಲಾಗದು, ಅದನ್ನು 'ರಿಜಿಸ್ಟ್ರಿ' ಮಾಡಿ ಕಳುಹಿಸಿದರೆ ತನಗೆ ಬೇಗನೆ ದೊರೆಯುವುದಿಲ್ಲ. ಆದುದರಿಂದ ಕೂಡಲೇ ದೊರೆಯುವಂತೆ ಒಂದು ಕವರಿನಲ್ಲಿ ಹಾಕಿ ಕಳುಹಿಸಿರಿ" ಎಂದು ಹೇಳಿದ್ದನು. ಅದೇ ಪ್ರಕಾರ ನಾನು ಆ 'ಚೆಕ್ಕು' ಆತನಿಗೆ ಪ್ರಾತಃಕಾಲದಲ್ಲಿ ದೊರಕುವಂತೆಯೂ, ಕರ್ನಾಟಕ ಮುದ್ರಾಲಯದ ಅಧಿಕಾರವು ಅದರಾಹ್ನದೊಳಗೆ ನನಗೆ ದೊರೆಯಬೇಕಾಗಿಯೂ ಅತಿಲಶೆಯಿಂದ ಒಂದು 'ಕವರಿ'ನಲ್ಲಿ ಹಾಕಿ ಆ ಧೊರೆಯ ಮತ್ತೊಬ್ಬ ಗೆಳೆಯನಾದ ವಿಶ್ವಂಭರರಾಯನ ಹೆಸರನ್ನು ಆ ಕವರಿನ ಮೇಲುಗಡೆಯಲ್ಲಿ ಬರೆದಿಟ್ಟು ವಿಟ್ಠಲನಿಗೆ ಕೂಡಲೇ ಟಪ್ಪಾಲುಕಟ್ಟೆಗೆ ಹೋಗಿ ಪೆಟ್ಟಿಗೆಯಲ್ಲಿ ಹಾಕಬೇಕಾಗಿ ಆಜ್ಞಾಪಿಸಿದ್ದೆನು. ನನ್ನ ಆದೇಶಾನುಸಾರವಾಗಿ ಇದೆಲ್ಲವೂ ನಿನ್ನೆಯೇ ಟಪ್ಪಾಲು ಪೆಟ್ಟಿಗೆಯಲ್ಲಿ ಬಿದ್ದಿದ್ದರೆ ಇಂದು ನಾನು ಭಿಕ್ಷುಕನಂತೆ ಅಲೆದಾಡಬೇಕಾಗುತ್ತಿತ್ತು. ವಂಚಕರು ನನ್ನ ಸರ್ವಸ್ವವನ್ನು ಅಪಹಾರ ಮಾಡುತ್ತಿದ್ದರು! ಆದರೆ ನನ್ನನ್ನು ಕಾಪಾಡಿದುದು ಈ ನನ್ನ ದಿವ್ಯನಾಯಿಯೇ." ಸದಾಶಿವರಾಯನು ಹೀಗೆ ಹೇಳುತ್ತ ಆ ನಾಯಿಯನ್ನು ಹತ್ತಿರ ಎಳೆದು ಅದರ ಮೈಯನ್ನು ತನ್ನ ಕೈಯಿಂದ ಸವರಿದನು. ಸದಾಶಿವರಾಯನು ನಾಯಿಯನ್ನು ಪ್ರೀತಿಸಿದುದನ್ನು ಕಂಡು ಮನೆಯವರೆಲ್ಲರೂ ಅದನ್ನು ಪ್ರೀತಿಸಿದರು. ನಾಯಿಯು ಮಾಡಿದ ಒಂದು ಮಹತ್ಕಾರ್ಯಕ್ಕಾಗಿ ಅದರ ಸಹಸ್ರ ಅಪರಾಧಗಳನ್ನು ಸದಾಶಿವರಾಯನು ಮರೆತುಬಿಟ್ಟನು.

ಅಷ್ಟರಲ್ಲಿ ಆ ನಾಯಿಯನ್ನು ಪ್ರೀತಿಯಿಂದ ಸಾಕಿದ ನರಸಿಂಗನು ಈ ವರ್ತಮಾನವನ್ನು ಕೇಳಿ ಅಲ್ಲಿಗೆ ಬಂದನು. ತನ್ನ ನಾಯಿಯು ಮನೆಯನ್ನೇ ಉಳಿಸಿತೆಂಬುದನ್ನು ಆನಂದದಿಂದ ಕೇಳಿ ಆತನು ನಲಿದಾಡುತ್ತ ಅಜ್ಜನ ಸಮೀಪಕ್ಕೆ ಬಂದು "ಅಜ್ಜಯ್ಯನವರೇ, ನನ್ನ ಈ ನಾಯಿ ಇದ್ದುದರಿಂದ ನಮ್ಮ ಮನೆ ಉಳಿಯಿತಲ್ಲವೇ? ಇನ್ನಾದರೂ ಈ ನಾಯಿಯನ್ನು ಪ್ರೀತಿಸಬಹುದೇ? ಇದನ್ನು ದಯವಿಟ್ಟು ಇನ್ನು ಮುಂದೆ ಓಡಿಸಬೇಡಿ" ಎಂದನು.

"ಮಗೂ, ಇಗೋ ರೂಪಾಯಿ. ಈಗಲೇ ಪೇಟೆಗೆ ಹೋಗಿ ಈ ನಾಯಿಯ ಕೊರಳಿಗೆ ಹಾಕುವುದಕ್ಕೆ ಒಂದು ಅಂದವಾದ ಪಟ್ಟಿಯನ್ನೂ ಒಂದು ಸುಂದರವಾದ ಸಂಕಲೆಯನ್ನೂ ಕೊಂಡು ಬಾ" ಎಂದು ಹೇಳಿ ಸದಾಶಿವರಾಯನು ನರಸಿಂಗನ ಕೈಯಲ್ಲಿ ಒಂದು ರೂಪಾಯಿ ಕೊಟ್ಟನು. ಅಂದಿನಿಂದ ಆ ನಾಯಿಯು ಸರ್ವರ ಪ್ರೀತಿಗೂ ಪಾತ್ರವಾಯಿತು. ಸದಾಶಿವರಾಯನು ತಾನೇ ಆ ನಾಯಿಯನ್ನು ಪೇಟೆಯಲ್ಲಿ ಸಂಚಾರಕ್ಕೆ ಹೋಗುವಾಗ ಕರೆದುಕೊಂಡು ಹೋಗಲು ತೊಡಗಿದನು. ನಾಯಿಯೂ ಆ ರೀತಿಯಲ್ಲಿ ಸರ್ವರಿಂದಲೂ ಪ್ರೀತಿಸಲ್ಪಟ್ಟದ್ದರಿಂದ ತನ್ನ ದುಷ್ಟಸ್ವಭಾವವನ್ನು ಬಿಟ್ಟುಬಿಟ್ಟಿತು.

— ಸಂಪೂರ್ಣ —

(೧೧ನೇ ಪುಟದಿಂದ ಮುಂದುವರಿಸಿದ್ದು)

ಹೆಂಗಸರೂ ಸಭೆಗಳೂ—ಪ್ರಾರ್ಥನೆ ಮೊದಲಾದ ಕೂಡುವಿಕೆಗಳಲ್ಲಿ ಹೆಂಗಸರು ಭಾಗಿಗಳಾಗಬಹುದೆಂಬುದಾಗಿ ಅಮಾನುಲ್ಲಾ ಖಾನರು ವಿಧಿಸಿದರು. ಪ್ರಾರ್ಥನೆಗಳಲ್ಲಿ ಮರ್ಯಾದೆಯ ಹೆಂಗಸರೂ ಭಾಗವಹಿಸಬಹುದೆಂದು ಮಹಮ್ಮದರ ಕಾನೂನಾಗಿದೆ. ಋತುಮತಿಯರಾದ ಹೆಂಗಸರು ಮಸೀದಿಯನ್ನು ಪ್ರವೇಶಿಸಬಾರದಾದರೂ, ಧಾರ್ಮಿಕ ಕಾರ್ಯಗಳ ಚರ್ಚೆ ನಡೆಯುವ ಸಭೆಗಳಲ್ಲಿ ಅವರು ಕೂಡಬಹುದೆಂದರುತ್ತದೆ.

ವಿದೇಶಿ ಭಾಷೆಗಳು—ಅಮಾನುಲ್ಲಾ ಖಾನರು ತನ್ನ ಜನರು ಶಾಲೆಗಳಲ್ಲಿ ಫ್ರೆಂಚ್, ಜರ್ಮನ್, ಇಂಗ್ಲಿಷ್, ರಷ್ಯನ್ ಮೊದಲಾದ ಭಾಷೆಗಳನ್ನು ಕಲಿಯಬೇಕೆಂದು ವಿಧಿಸಿದರು. ಇಸ್ಲಾಮಿನ ಕಾನೂನಿಗೆ ಇದು ವಿರೋಧವಾಗಿಲ್ಲ. ಮಾತ್ರವಲ್ಲದೆ ಮಹಮ್ಮದನ ಸಂಗಾತಿಗಳೂ ವಿವಿಧ ಭಾಷೆಗಳನ್ನು ಬಲ್ಲವರಾಗಿದ್ದರು. ಖಲೀಫ ಉಸ್ಮಾನರಿಗೆ ಹಲವು ಭಾಷೆಗಳು ಬರುತ್ತಿದ್ದುವು. ಅದು ಮಾತ್ರವಲ್ಲದೆ ಖುರಾನಿನಲ್ಲಿಯೂ ವಿದೇಶಿ ಭಾಷೆಗಳ ಹಲವು ಶಬ್ದಗಳಿರುತ್ತವೆ.

ಹೆಂಗಸರೂ ವೈದ್ಯವೃತ್ತಿಯೂ—ಹೆಂಗಸರು ವೈದ್ಯರಾಗಿ ಹಣ ಸಂಪಾದಿಸಬಹುದೆಂದು ಅವರು ಆಜ್ಞೆಯಿತ್ತರು. ಖುರಾನಿನಲ್ಲಿಯೂ ದೇವರು ಇದೇ ರೀತಿಯ ಆಜ್ಞೆಯನ್ನಿತ್ತಿರುವರು. ಮುಸಲ್ಮಾನ ಹೆಂಗಸರು ವೈದ್ಯವೃತ್ತಿಯನ್ನು ಅಭ್ಯಾಸಿಸುವದು ನ್ಯಾಯವೇ ಆಗಿರುತ್ತದೆಂದು ಸೂಚಿಸಲ್ಪಟ್ಟಿರುತ್ತದೆ. ಅದು ಅಲ್ಲದೆ ಹೆಂಗಸರು ಯುದ್ಧ ವಿದ್ಯೆಯ ಅನುಭವವನ್ನು ಪಡೆದು ಜ್ಯೋತಿಷ್ಯ ಮೊದಲಾದುವುಗಳನ್ನು ಕಲಿಯಬೇಕೆಂದು ಅವರು ಬಯಸಿದುದೂ ತಪ್ಪಾಗಿರುವುದಿಲ್ಲ. ಏಕೆಂದರೆ ಹಿಂದೆ ಮಹಮ್ಮದನ ಕಾಲದಲ್ಲಿ ನಡೆದ ಯುದ್ಧದಲ್ಲಿ ಮಹಮ್ಮದನ ಪ್ರಿಯ ಪತ್ನಿಯಾದ ಆಯೀಷಾ ಸಿದ್ದಿಕಾ ಎಂಬವಳು ಚರ್ಮದ ಚೀಲಗಳಲ್ಲಿ ನೀರನ್ನು ಹೊತ್ತು ರಣರಂಗದಲ್ಲಿ ಬಳಲಿ ಬಿದ್ದವರಿಗೆ ಕೊಡುತ್ತಿದ್ದಳೆಂದು ತಿಳಿಯುತ್ತದೆ. ಹೆಂಗಸರು ರೋಗಿಗಳ ಆರೈಕೆಯಲ್ಲಿಯೂ, ರಣರಂಗದಲ್ಲಿ ಗಾಯಹೊಂದಿದವರ ಗಾಯಗಳನ್ನು ತೊಳೆದು ಅವುಗಳಿಗೆ ಔಷಧಿಯನ್ನು ಹಚ್ಚಿ ಕಟ್ಟುವುದರಲ್ಲಿಯೂ ನಿಪುಣರಿದ್ದರು.

ಕೈಗಾರಿಕೆಯ ಆವಶ್ಯಕತೆ—ಕೈಗಾರಿಕೆಯನ್ನೂ, ಕಲೆಯನ್ನೂ ಕಲಿತುಕೊಳ್ಳದೆ ಇದ್ದರೆ ಇವೆಲ್ಲವುಗಳಲ್ಲಿ ಪಾಂಡಿತ್ಯವನ್ನು ಪಡೆಯುವುದು ಸುಲಭವಲ್ಲ. ಮುದರಿಂದಲೇ ಜನರು ಕೈಗಾರಿಕೆಯನ್ನು ಆರಂಭಿಸಬೇಕೆಂದು ಅಮಾನುಲ್ಲಾರವರು ಮಾಡಿದುದು ಅವರ ಸೂಕ್ಷ್ಮವಿಚಾರ ಬುದ್ಧಿಯನ್ನೇ ಸೂಚಿಸುತ್ತಿದೆ.

ಏಕಪತ್ನೀ ವ್ರತ—ಅಮಾನುಲ್ಲಾ ಖಾನರ ಇತರ ಸುಧಾರಣೆಗಳೂ, ಇಸ್ಲಾಮ್ ನ್ಯಾಯಕ್ಕೆ ವಿರೋಧವಾಗಿಲ್ಲ. ಏಕಪತ್ನೀವ್ರತವನ್ನು ಅವರು ಆಚರಣೆಗೆ ತರಬೇಕೆಂದರು. ಭಗವಂತನೇ ಏಕ ಪತ್ನಿವ್ರತಪ್ರೋತ್ಸಾಹಕನು. ಏಕಪತ್ನಿವ್ರತದಿಂದಲೇ ರಾಜ್ಯದ ಅಭಿವೃದ್ಧಿಯಾಗುವ ಕಾರಣ ಅಂತಹ ಕಾರ್ಯಗಳನ್ನು ರಾಜನು ಕೈಕೊಳ್ಳಬೇಕಾಗಿದೆ. ನಿಜವಾಗಿ ನೋಡಹೋದರೆ ಅಮಾನುಲ್ಲಾ ಖಾನರವರೇ ಮುಹಮ್ಮದೀಮತ ಪೂಜಕರು. ಯಾರು ಅವರನ್ನು ಕಾಫಿರರೆಂದು ಕರೆಯುವರೋ, ಅವರೇ ಕಾಫಿರರೆಂದು ಕರೆಯಲ್ಪಡಲು ಅರ್ಹರು.

ಅಮೀರರಿಗೆ ವಿಧೇಯತೆ—ಮುಹಮ್ಮದರು "ಯಾರು ತಮ್ಮ ಅಮೀರರಿಗೆ ವಿಧೇಯರಾಗಿರುವರೋ ಅವರು ನನಗೆ ವಿಧೇಯರಾದ ಹಾಗಾಯಿತು" ಎಂದು ಹೇಳಿರುವರು. ಇದು ನ್ಯಾಯವೂ ಆಗಿರುತ್ತದೆ. ಯಾರು ಅಮೀರರ ಆಜ್ಞೋಲ್ಲಂಘನೆಯನ್ನು ಮಾಡುವರೋ, ಅವರು ಮರಣದ ಶಿಕ್ಷೆಗೆ ಅರ್ಹರು. ಇದಕ್ಕಾಗಿ ನಾಲ್ಕನೆಯ ಖಲೀಫರಾದ ಹಜರತ್ ಅಲಿಯವರು ಕವ್ವಾಜನೆಂಬಾತನನ್ನು ವಧಿಸಿದಾಗ ಮುಹಮ್ಮದನ ಶಿಷ್ಯರಾರೂ ವ್ಯಥೆಪಡಲಿಲ್ಲ.

ಮುಹಮ್ಮದ ಮತ್ತು ಭಗವಂತನ ಅಪ್ರೀತಿ—ಅಮಾನುಲ್ಲಾರವರು ಆಚರಣೆಗೆ ತಂದ ಸುಧಾರಣಾಕ್ರಮಗಳು ಇಸ್ಲಾಮಿ ಮತಕಾನೂನಿಗೆ ಅನುಕೂಲವಾಗಿಯೇ ಇವೆಯಲ್ಲದೆ ಪ್ರತಿಕೂಲವಾಗಿಲ್ಲ. ನಮ್ಮ ಹಲವು ಮತಗ್ರಂಥಗಳನ್ನು ಪರಿಶೀಲಿಸಿ ನೋಡಿದುದಾದರೆ, ಅವರ ಈ ಕಾರ್ಯಗಳು ನ್ಯಾಯಪೂರ್ಣವೂ, ರಾಷ್ಟ್ರೋದ್ಧಾರಕವೂ, ಮತೋದ್ಧಾರಕವೂ ಆಗಿವೆ. ಯಾವನು ಇವುಗಳಿಗೆ ವ್ಯತಿರಿಕ್ತವಾಗಿ ವರ್ತಿಸುವನೋ, ಆತನು ದೇವರಿಗೂ ಮುಹಮ್ಮದರಿಗೂ, ವಿರೋಧವಾಗಿ ವರ್ತಿಸಿದಂತಾಗುವುದು.

ESTABLISHED 1876.

M. Ganapaya & Sons,

AYURVEDIC PHYSICIANS.

Car Street, MANGALORE, S. Kanara.

(೫೦ ವರುಷಗಳ ಅನುಭವದಿಂದಲೂ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.)

1. ಅರೋಗ್ಯಕಾರಿಷ್ಟ ಮತ್ತು ಮಾತ್ರೆ—

ಹೆಂಗಸರ ಮುಟ್ಟಿನ ದೋಷಗಳು, ಮುಟ್ಟು ಸ್ತಬ್ಧವಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಬಿಳಿಜ್ವರ, ರಕ್ತಹೀನತೆ, ಕೈಕಾಲು ಸೆಳೆತ, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಅತಿ ಶೀಘ್ರದಲ್ಲಿಯೇ ಗುಣಪಡಿಸುವದು. ಅರೋಗ್ಯಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರೈಸುವದು.

ಒಂದು ಬಾಟ್ಲಿ ಔಷಧಕ್ಕೆ ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣಿ—

ಗಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ಕ್ಷಣಮಾತ್ರದಲ್ಲಿಯೇ ಹೋಗಲಾಡಿಸುವದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲೆಜ್ವರದಿಂದ ಬಾಧಿಸಲ್ಪಟ್ಟು ಹಲವುತರದ ಔಷಧಿಗಳನ್ನು ಉಪಯೋಗಿಸಿ, ಗುಣಕಾಣದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ ಬಾಟ್ಲಿಯೊಂದಕ್ಕೆ 1-8-0, 3 ಬಾಟ್ಲಿಗೆ 4-2-0.

ಇವುಗಳಲ್ಲದೆ ಮಲೇರಿಯಾ ಗುಟಿಕೆ, ಜ್ವರಗಡ್ಡೆಯ ಮೇಲೆ ಸ್ಕಂಧದ ವಟಿ, ಬಾಲಗ್ರಹ ಗುಟಿಕೆ, ಶ್ವಾಸಕಾಸಾರಿ ಗುಟಿಕೆ, ಇಚ್ಛಾಭೇದಿ ಗುಟಿಕೆ, ಚ್ಯವನ ಪ್ರಾಶಾವಲೇಹ, ಧಾತುಪುಷ್ಟಿ ಲೇಹ, ಚಂದನಾಸವ ಮತ್ತು ಮಾತ್ರೆಗಳು ಇವೇ ಮೊದಲಾದ ಸಮಸ್ತ ಔಷಧಗಳೂ ದೊರೆಯುವವು. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಬಿಚ್ಛೆಯಿದ್ದರೆ ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿ. ಭವಿಷ್ಯವನ್ನು ಕುರಿತಾದ ಐದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. ೧; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ ೪ ಮಾತ್ರ; ಪ್ರತಿ ತಿಂಗಳ ಕಾಲಂತರದ ವಿಚಾರವುಳ್ಳ ಒಂದು ವರುಷದ ಜಾತಕ ಫಲ ರೂ. ೩; ಐದು ವರ್ಷದ ಫಲ ರೂ. ೭॥; ಪ್ರತಿ ಹಸ್ತೆಯ ವಿಚಾರವುಳ್ಳ ಒಂದು ವರ್ಷದ ಫಲ ರೂ. ೧೦. ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ರೂ. ೩ ಟ. ಪ. ಆಣೆ ೪; ನಿಮಗಾಗಿಯೇ ಬೇರೆ ಮಾಡಿದ ತಾಯಿತಕ್ಕೆ ರೂ. ೫೦.

ಆಂಧ್ರ ಪತ್ರಿಕೆ—(ತೆಲುಗು ದೈನಿಕ ವಾರಪತ್ರಿಕೆ) ಮದ್ರಾಸು ತಾ. 8-2-1924ರಲ್ಲಿ ಬರೆದುದು — ತಿರುತ್ತಣಿಯಲ್ಲಿನ ಹನೂಮಾನ್ ಜ್ಯೋತಿಷಾಲಯದ ಹನುಮಾದಾಸ ವಿ. ಕೆ. ಶತಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. ಇದು 1923ನೇ ಇಸವಿ ನವಂಬರು ತಾ. ೧೫ರಲ್ಲಿ ಪ್ರಕಟವಾಯಿತು. ಅದರಲ್ಲಿ ಮಹಾತ್ಮಜಿಯವರು 1924ನೇ ಇಸವಿ ಫೆಬ್ರವರಿ ತಾ. 5ರಲ್ಲಿ 7 ಘಂಟೆಗೆ ಕಾರಾಗೃಹದಿಂದ ಮುಕ್ತರಾಗುವರೆಂದು ಬರೆದಿತ್ತು. ಅದರಲ್ಲಿ ಹೇಳಿದಂತೆಯೇ ನಡೆದಿದೆ. ಇದುಕಾರಣ ಈ ಜೋತಿಷ್ಯರ ಅದ್ಭುತ ಶಕ್ತಿಸಾಮರ್ಥ್ಯಗಳನ್ನು ಸರ್ವರೂ ಪರೀಕ್ಷಿಸಲು ನಾವು ಶಿಫಾರಸು ಮಾಡುತ್ತೇವೆ.

V. K. Satagopachariar,
Hanuman Astrological Office,
TIRUTTANI, CHITTOOR DISTRICT,
Madras Presidency.

ವಿ. ಕೆ. ಶತಗೋಪಾಚಾರ್ಯರ್,
ಹನುಮಾನ್ ಎಸ್ಟ್ರೊಲೋಜಿಕಲ್ ಆಫೀಸ್,
ತಿರುತ್ತಣಿ, ಚಿತ್ತೂರು ಜಿಲ್ಲಾ,
ಮದರಾಸು ಸಂಸ್ಥಾನ.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

ಫೆರ್ರೊಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3—4—0 ಮಾತ್ರ.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು

ಉಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲಿಷ್ ಯಾ ಕನ್ನಡದಲ್ಲಿ ಬರೆಯಿರಿ

ಆಫೀಸು
ಡೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡ.

ಇಂಡೋಬಾರ್

ಡಬ್ಬಿಗೆ ಆಣೆ ೮.

ಡಜನಿಗೆ ರೂ. 5—0—0.

ಹುಡುಗಿಯರಿಗೂ, ಸೀಯರಿಗೂ, ಗಂಟುನೋವುಗಳು, ಬೇನೆಗಳಿಗೂ ಇಂಡೋಬಾರ್ ದಿವ್ಯ ಔಷಧ. ಎರಡುಸಲ ಹಾಗಿ ದೊಡನೆ ಕೆಲವೇ ನಿಮಿಷಗಳೊಳಗೆ ಬೇನೆಯು ಮಾಯವಾಗುವುದು. ಇಂಡೋಬಾಮನ್ನು ಇವರಿಂದ ಪಡೆಯಿರಿ.

ಕರ್ಣೇಕ ಬ್ರದರ್ಸ್,
ಮುಂಬಾಯಿ ನಂಬ್ರ 4.

ತ್ವರೆಮಾಡಿರಿ. ತ್ವರೆಮಾಡಿರಿ.

ಶಾಲಾ ಹುಡುಗರಿಗೂ ಇತರರಿಗೂ ಬೇಕಾಗುವಂತಹ ವಿಧವಿಧದ ಕೋಪಿಂಗ, ಮತ್ತು ಸಾದಾ ಪೆನ್ಸಿಲುಗಳೂ, ರಬ್ಬರುಗಳೂ ವಿವಿಧ ಸ್ವಾಚಿನ ಸ್ಟ್ರೋನ ಇಂಕ್ ಬಾಟಲಿಗಳೂ, ಹೊಸತಾಗಿ ತರಿಸಿರುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಯಾರಾಗಿವೆ! ತಯಾರಾಗಿವೆ!!

ಎರಡನೇ ಮತ್ತು ಮೂರನೇ ದರ್ಜೆಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಭಾಪಖಾನೆ,
ರಥಬೀದಿ, ಮಂಗಳೂರು.

Diamonds ವಜ್ರಗಳು Diamonds

BOLA MANGESH ROW & CO.,
MANGALORE.

Agents & Direct importers of Superior Daimonds of Antwerp

ಯೋರೋಪಿನಲ್ಲಿಂದ ತರಿಸುವ ವಜ್ರಗಳು — ಮಾರಾಟಕ್ಕಿವೆ. —

ಬೋಳ ಮಂಗೇಶ ರಾವ್,
ಮಂಗಳೂರು

Diamonds! Diamonds!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಜುನ್ನಾತ (first quality Selected) ಎನ್ನ ಸ್ವಲ್ಪಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಕ್ಕಿರುತ್ತವೆ. ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟುಮಾಡಿರುತ್ತದೆ.

೧ನೇ ನಂಬ್ರ ೧॥ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೫೦೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
ಸಕ್ಲೇಶಪುರ ಪೋಸ್ಟು ಕಡೂರ್ ಜಿಲ್ಲಾ

Edited Printed & Published by V. S. Kamath, at the M. T. A SHARADA PRESS, MANGALORE.

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0 **Registered No. M. 489** ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿತಸ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥನಲು ಸುರರಿಗದಂ । ತರುತನಾಯಿತೆ! ಮತ್ತೆ ವಿಶ್ವದ ಸುಜುಕ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆಯರು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೩. ಮಂಗಳೂರು, ತಾ. ೩೧ನೇ ಶುಕ್ರವಾರ ಮೇ ೧೯೨೯. (31—5—'29.) ಸಂಚಿಕೆ ೨೨

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR. Mangalore.**

ಹೆಡ್ ಆಫೀಸು:—ಉಡುಪಿ. ಶಾಖೆ:—ಕುಂದಾಪುರ. ಮಂಗಳೂರು.

ನಿಯಮಿತ ಮೂಲಧನ ರೂ. 3,50,000-

1. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ವಿಕ್ರಿದ ಮೂಲಧನ ರೂ. 2,25,000-
2. ತೆತ್ತು ಬಂದ ಮೂಲಧನ ರೂ. 2,12,630-
3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 1,26,700-
4. ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 3,84,218-5-0-

Statement of Affairs of the Canara Banking Corporation Udipi, Limited as on 31st March 1929

	CAPITAL AND LIABILITIES.			PROPERTY AND ASSETS	
1	Paid up Capital	Rs. 2,20,870-0-0	1	Premises Building, Furniture &c.	Rs. 9,215-0-0
2	Reserve and other contingent funds	„ 1,26,700-0-0	2	Investments on G. P. Notes at cost	„ 3,84,218-5-0
3	Deposits	„ 16,39,286-2-10	3	Investments on Approved Securities	„ 18,06,750-14-7
4	Due to Bankers on Overdraft and Loan a/c	„ 1,65,516-10-10	4	Bills for collection as per Contra	„ 30,503-1-7
5	Sundry Persons' a/c for Bills for collection as per Contra	„ 30,503-1-7	5	Cash in hand & with Bankers.	„ 23,332-8-11
6	Sundries including P & L items	„ 24,371-8-3	6	Sundries	3,227-9-5
	Total	22,07,247-7-6		Total	22,07,247-7-6

Office of the Corporation, UDIPI, 26—4—'29. **N. ANANDA RAO**, *Secretary.*

ಅಮೃತಾಂಜನ.

ಪ್ರಸಿದ್ಧವಾದ ತಲೆನೋವು ಮೊದಲಾದ ನೋವುಗಳಿಗೆ ಅಮೃತಾಂಜನವು ಶೀಘ್ರವಾಗಿ ಗುಣಕೊಡುವುದು. ... ಶೀಶೆಗೆ ಆಣೆ 11, ಟ. ಖ. ಬೇರೆ.

ರಿಂಗ್‌ವರ್ಮ್ ಮುಲಾಮು:—ರಿಂಗ್‌ವರ್ಮ್, ಕಜ್ಜಿ ಮೊದಲಾದ ಸರ್ವ ಚರ್ಮರೋಗಗಳಿಗೂ, ... ಡಬ್ಬಿಗೆ ಆಣೆ 6, ಟ. ಖ. ಬೇರೆ.

ದಂತಮಂಜನ:—ಪರಿಮಳಯುಕ್ತವಾದ ಮತ್ತು ಅತ್ಯುತ್ತಮವಾದ ಈ ಹಲ್ಲು ಪುಡಿಯು. ಹಲ್ಲುಗಳನ್ನು ಬೆಳ್ಳಗೆ ... ಬಲಪಡಿಸುವದು. ಡಬ್ಬಿಗೆ ಆಣೆ 2, ಟ. ಖ. ಬೇರೆ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,

ಶ್ರೀ ಸರಸ್ವತೀ ಭಂಡಾರ.

1	ಸಚಿತ್ರ ರಾಮಾಯಣ ಕಥಾ ಸಂಗ್ರಹ	1—8—0
2	ಮದನಮೋಹನ ರಾಜ ಚರಿತ್ರ	0-12—0
3.	ಮಾಧವೀ ಕಂಕಣ	2—0—0
4.	ವಿಧ್ಯಾಮಂಜರಿ ಕಥೆಗಳು	2—0—0
5.	ಮಹಾಭಕ್ತ ವಿಜಯ	3—0—0
6	ಶೃಂಗಾರ ಶುಕಸಪ್ತತೀ ಕಥೆಗಳು	0-12—0
7.	ಪಂಡಿ. ಘೋಷಾ	1—0—0
8.	ವಿಮಲಾ ದೇವಿ	1-12—0
9.	ಸೌಭಾಗ್ಯ ಲಕ್ಷ್ಮಿ	0—8—0
10.	ಧರ್ಮ ಸಾಮ್ರಾಜ್ಯಂ	1—4—0
11.	ರಾಮ ರಾಜ್ಯ	0-12—0
12.	ಆನಂದ ಮಠ	1-12—0
13.	ಲಾವಣ್ಯ ತಿಲೋತ್ತಮೆ	0-12—0
14.	ವಚನ ಭಾರತ	1—8—0
15.	ಇಂಡಿಯನ್ ಪಿನಲ್ ಕೋಡ್	2—8—0
16	ಕ್ರಿಮಿನಲ್ ಪ್ರೊಸೀಜರ್ ಕೋಡ್	3—0—0
17.	ಲ್ಯಾಂಡ್ ರೆವೆನ್ಯೂ ಕೋಡ್	1—0—0

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ ಇನ್ನೂ ಸಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾಲೆಗಳಲ್ಲಿ ಇಡಲು ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಹಾಜರಿರುತ್ತವೆ.

ವಿಳಾಸ—

ಅಫಘಾನದ ಸಮಾಚಾರ.

[illegible] ಹಿಂದೂಗಳಿಗೂ ಸಮಾನವಾದ [illegible] ಹಿಂದೂಸ್ಥಾನದ [illegible] ಅಮಾನುಲ್ಲಾರವರಿಂದ ಸಹಾನುಭೂತಿಯನ್ನು ಸೂಚಿಸಿ [illegible] 'ಅಮಾನುಲ್ಲಾರವರ [illegible] ಬಂದ [illegible] ಅಫಘಾನಿಸ್ತಾನದ [illegible] ಅವರ ಭಯಾಳುಗಳು ಇನ್ನೂ [illegible] ಅಮಾನುಲ್ಲಾರವರ ಹಿಂದಿನ ಸೋಲು ಮುಂದೆ [illegible] ಬಹುದು.' ಎಂದು ಒಂದು ಪತ್ರಿಕೆಯು ಹೇಳುವದು. ಅಮಾನುಲ್ಲಾರವರು ಮುಂದೆ [illegible] ಕಾರ್ಯಕ್ರಮಗಳ ವಿಷಯವು ಗೋಪ್ಯವಾಗಿಯೇ ಇವೆ.

ಅಮಾನುಲ್ಲಾರವರನ್ನು, ಅವರ ಸಹೋದರ ಇನಯತುಲ್ಲಾ ಮತ್ತು ಅಮಾನುಲ್ಲಾರವರ ಕುಟುಂಬವನ್ನು ಒಳಕೊಂಡ ಸ್ಪೆಶಲ್ ಟ್ರೈನು ಶೆಳೆದ ಆದಿತ್ಯವಾರ ದಿಲ್ಲಿಗೆ ಬಂದು ತಲುಪಿತು. ಒಂದು ಗಂಟೆಯ ಹೊತ್ತು ಅಲ್ಲಿ ನಿಂತು ಮುಂಬಾಯಿಗೆ ಹೊರಟುಹೋಯಿತು. ಟ್ರೈನಿನಲ್ಲಿ ಮೂರು ಬಂಡಿಗಳಿದ್ದುವು. ಅಮಾನುಲ್ಲಾರವರ ರಕ್ಷಣೆಗಾಗಿ ಕೆಲವು ಸೈನಿಕರೂ ಇದ್ದರು. ದಿಲ್ಲಿಯ ಸ್ಟೇಶನ್ನಿನಲ್ಲಿ ಅವರನ್ನು ನೋಡುವ ಸಲುವಾಗಿ ದೊಡ್ಡ ದೊಡ್ಡ ಹುದ್ದೇದಾರರು ನೆರೆದಿದ್ದರಾದರೂ ಅಮಾನುಲ್ಲಾರವರು ಯಾರಿಗೂ ಕಾಣಿಸಿಕೊಳ್ಳಲಿಲ್ಲ. ಮೌಲಾನಾ ಮಹಮದ್ ಆಲಿಯವರು ಮುಸಲ್ಮಾನರ ಪರವಾಗಿ ಅವರಿಗೆ ಸಹಾನುಭೂತಿಯ ಸಂದೇಶವನ್ನು ಕಳುಹಿದರು. ದಿಲ್ಲಿಯ ಹಿಂದೂಗಳ ಪರವಾಗಿ ಲಾಲಾ ದೇಶಬಂಧುರವರು ಅವರಿಗೊಂದು ಸಹಾನುಭೂತಿಯ ಪತ್ರವನ್ನೂ ಮೂರು ಬುಟ್ಟಿ ಹಣ್ಣುಗಳನ್ನೂ ಕಳುಹಿದರು. ಅಮಾನುಲ್ಲಾರವರು ತನ್ನ ಕಾರ್ಯದರ್ಶಿಯವರ ಮುಖೇನ ಇವರುಗಳಿಗೆ ಕೃತಜ್ಞತೆಯನ್ನು ಸೂಚಿಸಿದರು. ದಿಲ್ಲಿಯಿಂದ ಟ್ರೈನು ಮುಂಬಾಯಿಗೆ ಹೊರಟುಹೋಗುವಾಗ "ಅಲ್ಲಾಹೊ ಅಕಬರ್" ಎಂದು ನೆರೆದ ಜನರು ಜಯಧ್ವನಿಯನ್ನು ಮಾಡಿದರು.

ಅಫಘಾನಿಸ್ತಾನದಲ್ಲಿ ರಕ್ತಪಾತವಾಗಲಾಗದೆಂದೇ ಅಮಾನುಲ್ಲಾ ಖಾನರು ಅಫಘಾನಿಸ್ತಾನವನ್ನು ತ್ಯಜಿಸಲು ಕಾರಣವಾಗಿರುತ್ತದೆ. ಮೊದಲಿನಿಂದಲೂ ಅವರಿಗೆ ರಕ್ತಪಾತದ ಮೇಲೆ ಮನಸ್ಸಿರಲಿಲ್ಲ. ಇಟಲಿಯಲ್ಲಿ ಅವರು ತನ್ನ ಭಾವನೆಂಟನಾದ ಸಯ್ಯದ್ ಖಾದಿಮಖಾನರನ್ನು ಕೂಡುವರು. ಹಿಂದಕ್ಕೆ ಬರುವ ಆಲೋಚನೆಯೇ ಅವರಿಗಿರುವುದಿಲ್ಲ. ಹಿಂದೂಸ್ಥಾನವು ತನಗೆ ತುಂಬ ಸಹಾಯವನ್ನು ಮಾಡಿದುದಕ್ಕಾಗಿ ಅಮಾನುಲ್ಲಾಖಾನರು ಹಿಂದೂಸ್ಥಾನದ ಜನರಿಗೆ ತುಂಬ ಕೃತಜ್ಞರಾಗಿರುವರು.

ಅಮಾನುಲ್ಲಾರವರು ಹಿಂದೂಸ್ಥಾನಕ್ಕೆ ಹೊರಟುಬಂದೊಡನೆ ಅಲಿ ಅಹಮದ ಖಾನರವರು ಕಿಲತ್-ಇ-ಗಿಲ್‌ಜಾಯಿಯಿಂದ ಕಂದಹಾರಿಗೆ ತೆರಳಿ ತನ್ನ ದೈಜವನ್ನು ಅಲ್ಲಿ ಬಿರಿಸಿ ತಾನು ಅಮೀರನೆಂದು ಪ್ರಕಟಿಸಿದನು. [illegible] ಅಮಾನುಲ್ಲಾರವರು ಕಂದಹಾರನ್ನು ಪ್ರವೇಶಿಸ [illegible] ಮೊರೆಗೆ ಅವರು ಈ ತರದ ನಿರ್ಧಾರ [illegible] ಕಾಬೂಲನ್ನು ಸ್ವಾಧೀನಪಡಿ [illegible]

[illegible] ಅಮಾನುಲ್ಲಾಖಾನರು ಸೋಮವಾರ ಮಧ್ಯಾಹ್ನದ ಹೊತ್ತಿಗೆ ಮುಂಬಾಯಿಯ ಕೊಲಾಬಾ ಸ್ಟೇಶನಿಗೆ ಬಂದು ತಲುಪಿದರು. ಅಧಿಕಾರಿಗಳು ಅವರ ಆಗಮನವನ್ನು ರಹಸ್ಯವಾಗಿ ಇಡಲು ಪ್ರಯತ್ನಿಸಿದರೂ ಫಲವಾಗದೆ ವಾರ್ತೆಯು ವಾಯುವೇಗದಿಂದ ವ್ಯಾಪಿಸಿತ್ತು. ಕೊಲಾಬಾ ಸ್ಟೇಶನಿನಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಇವರಲ್ಲಿ ಹೆಚ್ಚಿನವರು ಗಡಿಪ್ರಾಂತ್ಯದ ಜನರಾಗಿದ್ದರು. ಮಧ್ಯಾಹ್ನದ ತರುವಾಯ ಪೋಲೀಸರು ರೈಲುವೇ ಪ್ಲೇಟ್‌ಫೋರ್ಮಿನಿಂದ ಜನರನ್ನು ಚದರಿಸಿದರು. ಮಧ್ಯಾಹ್ನ ೧೨ ಘಂಟೆಯ ಹೊತ್ತಿಗೆ ಅವರು ಬರುವರೆಂದಿದ್ದರೂ ಟ್ರೈನು ಸುಮಾರು ಮೂರು ಘಂಟೆಯ ಹೊತ್ತಿಗೆ ಬಂದು ತಲುಪಿತು. ಅವರನ್ನು ಕೆಲವು ಹುದ್ದೇದಾರರು ಎದುರುಗೊಂಡರು. ಅಮಾನುಲ್ಲಾರ ಮೊಗದ ಮೇಲೆ ಉತ್ಸಾಹವಿರಲಿಲ್ಲ. ಅವರು ಸಾದಾ ಉಡುಗೆಯನ್ನು [illegible] ಅರ್ ಎಂದು [illegible] ಅವರ [illegible] ತೀರ ಅಪರಿಚಿತವಾದ ರೀತಿಯಿಂದ [illegible] ಹೊಟೇಲಿನ ಕಡೆಗೆ ತೆರಳಿದರು. ಅವರ ಹಿಂದೆ ಇನಯತುಲ್ಲಾರವರು [illegible] ಇದ್ದರು. ಮೂರನೆಯ ಕಾರಿನಲ್ಲಿ ಸೋರಿಯಾರಾಣಿಯವರೂ ಅರಸುಕುಟುಂಬದವರೂ ಇದ್ದರು. ಸ್ಟೇಶನಿನಿಂದ ತಾಜಮಹಾಲ ಹೊಟೇಲಿನ ವರೆಗಿನ ರಸ್ತೆಯಲ್ಲಿ ಜನರು, ವಿಶೇಷವಾಗಿ ಮುಸಲ್ಮಾನರು ದಟ್ಟವಾಗಿ ಕೂಡಿದ್ದರು.

"ನಾವು ತಮ್ಮ ಪತ್ನಿಯವರನ್ನು ಕೂಡಿಕೊಂಡು ಊರಿನಿಂದ ಹೊರಟು ಹೋಗುತ್ತಿರುವದು ನನಗೆ ಗಾಢವಾದ ಯೋಚನೆಗೆ ಕಾರಣವಾಗಿರುತ್ತದೆ. ಹಿಂದೂಸ್ಥಾನದಲ್ಲಿ ತಮ್ಮ ಪ್ರಯಾಣವು ಸುಖಕರವೂ ಚೆನ್ನಾಗಿಯೂ ಆಗುವಂತೆ ನಾನು ವ್ಯವಸ್ಥೆಗೊಳಿಸಿರುವೆನು. ಇನ್ನು ತಮ್ಮ ಸೌಕರ್ಯದ ಬಗ್ಗೆ ನಮ್ಮವರನ್ನು ನೀವು ಸಹಾಯಕರನ್ನಾಗಿ ಮಾಡಿಕೊಳ್ಳಬಹುದು" ಎಂದು ವ್ಯಾಇಸರಾಯಿಯವರು ಅಮಾನುಲ್ಲಾರವರಿಗೆ ವಾರ್ತೆ ಕಳುಹಿದ್ದರು. ಅದಕ್ಕೆ ಉತ್ತರವಾಗಿ ಅಮಾನುಲ್ಲಾಖಾನರು "ನಿಮಗೆ ದಕ್ಕಾಗಿ ಕೃತಜ್ಞನಿದ್ದೇನೆ. ನನಗೆ ಬೇಕಾದ ಸೌಕರ್ಯಗಳೆಲ್ಲ ತಮ್ಮ ಅಧಿಕಾರಿಗಳಿಂದ ಲಭಿಸಿರುತ್ತದೆ. ನಾನೂ ನನ್ನ ಪತ್ನಿಯೂ ತಮಗೆ ಇನ್ನೊಮ್ಮೆ ಕೃತಜ್ಞತಾವಂದನೆಗಳನ್ನು ಅರ್ಪಿಸುವೆವು" ಎಂದು ತಿಳಿಸಿದ್ದರು.

ಅಮಾನುಲ್ಲಾರವರು ಇಟಲಿ ದೇಶಕ್ಕೆ ಹೊರಟುಹೋಗುವರು. ಆದರೆ ಅವರ ಸಂಗಡ ಮುಂಬಾಯಿಗೆ ಬಂದವರೆಲ್ಲರೂ ಇಟಲಿಗೆ ಹೊರಟು ಹೋಗುವುದಿಲ್ಲ. ಅಫಘಾನಿಸ್ಥಾನದಲ್ಲಿ ಏನಾದರೊಂದು ವ್ಯವಸ್ಥೆಯಾಗುವ ವರೆಗೆ ಅವರಲ್ಲಿ ಕೆಲವರು ಹಿಂದೂದೇಶದಲ್ಲಿಯೇ ಉಳಕೊಳ್ಳುವರಂತೆ. ಸೋರಿಯಾರಾಣಿಯವರು ಅಮಾನುಲ್ಲಾರವರ ಜತೆಯಲ್ಲಿ ಹೋಗುವರು. ಕಾಬೂಲಿನಲ್ಲಿರುವ ಈಗ ಹೆಚ್ಚಿನ ಜನರಿಗೆ ಅಮಾನುಲ್ಲಾರವರಂತಹ ಸುಧಾರಕನಾದ ರಾಜನ ಆವಶ್ಯಕತೆಯು ತೋರುವುದಿಲ್ಲ. ಆದುಕಾರಣ ಅಮಾನುಲ್ಲಾರವರಿಗೆ ಸುಲಭವಾಗಿ ಸಿಂಹಾಸನ ಪ್ರಾಪ್ತಿಯಾಗುವ ಸಂಭವವಿರುವುದಿಲ್ಲ. ಬಾಚಾ-ಇ-ಸಾಕೋವು ಕೂಡ ವಿದ್ಯಾವಿಹೀನನೂ, ಕ್ರಮವಿಲ್ಲದವನೂ ಆಗಿರುವುದರಿಂದ ಆತನ ಆಳ್ವಿಕೆಯೂ ಶಾಶ್ವತವಾಗಿ ಉಳಿಯಬಹುದೆಂದು ನಂಬಲೂ ಕಾರಣವಿರುವುದಿಲ್ಲ. ಬಾಚಾ-ಇ-ಸಾಕೋವು ಸಿಂಹಾಸನದಿಂದ ತಳ್ಳಲ್ಪಡುವ ವರೆಗೆ ಅಮಾನುಲ್ಲಾರವರು ಹಿಂದಿರುಗುವರೆಂದು ತಿಳಿಯಲು ಅವಕಾಶವಿರುವುದಿಲ್ಲವೆಂದು ಅವರ ಪಕ್ಷದ ಜನರ ಅಂಬೋಣ.

ಅಮಾನುಲ್ಲಾಖಾನರ ಸಲುವಾಗಿ ಪಂಜಾಬಿನ ಮಿ| ಜಫಾರ ಅಲಿ ಖಾನರು ೩೭೩೦ ರೂಪಾಯಿಗಳನ್ನು ಕೂಡಿಸಿ ಹಾಕಿ ಕಳುಹಿಸಿರುವರು. ಅದರೊಂದಿಗೆ "ಅಲ್ಲಾನು ಶೀಘ್ರದಲ್ಲಿಯೇ ನಿಮಗೆ ಅಫಘಾನದ ಸಿಂಹಾಸನವನ್ನು ಮರಳಿ ಕೊಡಲಿ" ಎಂದೂ ಸೂಚಿಸಿರುವರು.

ನಾದಿರಖಾನರು ಜೋಸ್ಟ ಪ್ರಾಂತದಲ್ಲಿರುವರೆಂದೂ, ಅವರು ಪಕ್ತಿಯ ಸೈನ್ಯದವರೊಂದಿಗೆ ತುಂಬ ಅಭಿವೃದ್ಧಿಹೊಂದಿರುವರೆಂದೂ ವಾರ್ತೆ. ತಾನು ಅಫಘಾನದ ಅಮೀರನೆಂದು ಅವರು ಪ್ರಕಟಿಸಿರುವರು. ಬಾಚಾ-ಇ-ಸಾಕೋವು ಸಂಧಾನಾಪೇಕ್ಷೆಯಾಗಿ ನಾದಿರಖಾನರಲ್ಲಿಗೆ ಕೆಲ ಮಂದಿಗಳನ್ನು ಕಳುಹಿಸಿರುವನಂತೆ. ಸಯ್ಯದ್ ಹುಸೇನರವರು ವಧಿಸಲ್ಪಟ್ಟರೆಂದೂ ವರ್ತಮಾನ.

ಅಮಾನುಲ್ಲಾರವರು ಸೋರಿಯಾ ರಾಣಿಯವರೊಂದಿಗೆ ಮುಂಬಾಯಿಯಲ್ಲಿಯೇ ಇರುವರು. ಅವರನ್ನು ಹಲವು ಮಿತ್ರರುಗಳು ಎದುರುಗೊಳ್ಳುತ್ತಿರುವರು. ಮಿತ್ರರುಗಳು ಅವರಿಗೆ ಫಲಪುಷ್ಪಗಳನ್ನು ಸಮರ್ಪಿಸಿದರು. ಪಂಡಿತ ಮೋತಿಲಾಲ ನೆಹರುಗಳವರು ಒಂದು ಅಂದವಾಗಿ ಶೃಂಗರಿಸಿದ ಹೂವಿನ ಬುಟ್ಟಿಯನ್ನು ಕೊಟ್ಟಿರುವರು. ಆ ಬುಟ್ಟಿಯ ಮೇಲೆ "ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸಿನ ಪರವಾಗಿ ಅಮಾನುಲ್ಲಾರಾಜ ಮತ್ತು ಸೋರಿಯಾ ರಾಣಿಯವರಿಗೆ" ಎಂದು ಅದರ ಮೇಲೆ ಬರೆದಿತ್ತು. ಅವರು ಯಾವಾಗ ಇಟಲಿಗೆ ಹೊರಟುಹೋಗುತ್ತಿರುವರೆಂದು ಇನ್ನೂ ನಿಶ್ಚಯವಾಗಿಲ್ಲ. ಅವರ ಪಕ್ಷದ ಜನರು ಮುಂಬಾಯಿ ಪಟ್ಟಣದ ಸಂದರ್ಶನಕ್ಕಾಗಿ ತಿರುಗುತ್ತಿರುವರು. ಅವರಲ್ಲಿ ಹೆಂಗಸರೂ ಇರುವರು.

~~~~

ಪಂಜಾಬದ ಕೈಗಾರಿಕೆಯ ಅಭಿವೃದ್ಧಿ.

ಕೈಗಾರಿಕೆಯನ್ನು ಅಭಿವೃದ್ಧಿಪಡಿಸುತ್ತಿರುವರಲ್ಲಿ ಪಂಜಾಬ ಸರಕಾರದವರು ಸ್ತುತಿಗೆ ಪಾತ್ರರಾಗುವರು. ಕೈಗಾರಿಕೆಯ ಅಭಿವೃದ್ಧಿಗಾಗಿ ಮುಂಬಾಯಿ ಸರಕಾರದವರು ವರುಷ ಒಂದರ ೭ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿರುವರು. ಮದರಾಸು ಸರಕಾರದವರು ೧೦ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚುಮಾಡುವರು. ಹೆಚ್ಚಾಗಿ ಕೆಲವು ಪ್ರಾಂತ್ಯಗಳಲ್ಲಿ ಕೈಗಾರಿಕೆಯ ಡ್ಯಾರೆಕ್ಟರುಗಳಾಗಿ ಹಿಂದೂಗಳೇ ನೇಮಿಸಲ್ಪಟ್ಟಿರುವರು. ಮುಂಬಾಯಿ ಮತ್ತು ಮದರಾಸುಗಳಲ್ಲಿಯೂ ಹಿಂದೂಗಳೇ ಡ್ಯಾರೆಕ್ಟರಾಗಿರುವರು. ಪಂಜಾಬ ಸರಕಾರದವರಾದರೋ ಔದ್ಯೋಗಿಕ ಇಲಾಖೆಯಲ್ಲಿ ಪೂರಾ ಹಿಂದೂಗಳಿಗೆ ಕೆಲಸವನ್ನು ಕೊಟ್ಟಿರುವರಾದರೂ ಅಲ್ಲಿನ ಕೆಲಸವು ತುಂಬ ಅಭಿವೃದ್ಧಿಯನ್ನು ಹೊಂದಿರುತ್ತದೆ. ಅವರ ಉದಾಹರಣೆಯನ್ನು ಇತರ ಪ್ರಾಂತದವರು ಅನುಸರಿಸುವಂತಹುದಾಗಿದೆ. ಪಂಜಾಬಿನಲ್ಲಿ ಶಾದ್ರಾ ಎಂಬ ಹೆಸರಿನ ಒಂದು ಪಟ್ಟಣವಿದೆ. ಅಲ್ಲಿ ಸರಕಾರದವರು ಒಂದು ನೈಗೆ ಕಾರಖಾನೆಯನ್ನು ತೆರೆದಿರುವರು. ಈ ಕಾರಖಾನೆಯಲ್ಲಿ ಇಂಜಿನುಗಳ ಮೂಲಕ ನೂರು ಮಗ್ಗಗಳು ಕೆಲಸಮಾಡುತ್ತಿವೆ. ಅಲ್ಲಿ ೫೦ ಮಂದಿಗಳಿಗೆ ನೈಗೆ ಶಿಕ್ಷಣವನ್ನು ಕೊಡುತ್ತಿರುವರು. ಕಲಿಯುವವರಿಗೆ ತಿಂಗಳಿಗೆ ೧೫ರಿಂದ ೩೦ರೂಪಾಯಿ ವರೆಗೆ ಖರ್ಚಿನ ಹಣವು ಕೂಡ ಕೊಡಲ್ಪಡುತ್ತಿದೆ. ಅವರ ಶಿಕ್ಷಣೆಯು ಎರಡೇ ವರುಷಗಳಲ್ಲಿ ಮುಗಿದು ಅವರು ನೈಗೆಯಲ್ಲಿ ನಿಪುಣರಾಗಿ ಹೊರಹೋಗುವರು. ಅಲ್ಲಿ ತಯಾರಾಗುವ ವಸ್ತ್ರವು ಪರಊರುಗಳಿಗೆ ಕಳುಹಿಸಲ್ಪಡದೆ ಅಲ್ಲಿಯೇ ವಿಕ್ರಯವಾಗುವದು. ಇದೇ ರೀತಿ ಬಣ್ಣಹಾಕುವಿಕೆ, ಮುದ್ರಣ ಮೊದಲಾದವುಗಳಲ್ಲಿ ತರಬೇತಿಯನ್ನು ಕೊಡುವ ಪ್ರಯತ್ನವು ನಡೆಯುತ್ತಿದ್ದು ೮೦ ಮಂದಿ ಕಲಿಯುತ್ತಿರುವರು. ಇಂಜಿನುಗಳ ಮೂಲಕವೇ ನಡೆಯುವ ದೊಡ್ಡ ದೊಡ್ಡ ನೈಗೆ ಯಂತ್ರಗಳು ಮಾತ್ರವಲ್ಲದೆ, ಅಲ್ಲಿ ಸಣ್ಣ ಸಣ್ಣ ಕೈಮಗ್ಗಗಳು ಇರುವವು. ಅಲ್ಲಿಗೆ ಅಸಂಖ್ಯಾತ ನೇಕಾರರು ಬಂದು, ಹೊಸತರದ ಕೈಮಗ್ಗಗಳ ಕುರಿತಾಗಿ ಇಲಾಖೆಯವರಿಂದ ಕೊಡಲ್ಪಡುವ ಬೋಧನೆಗಳನ್ನು ಕೇಳಿ ಹೋಗುವರು. ಒಟ್ಟಾರೆಯ ಮೇಲೆ ನೈಗೆ ಕೈಗಾರಿಕೆಯು ಅಲ್ಲಿನಷ್ಟು ಬೇರೆಲ್ಲಿಯೂ ಏಳಿಗೆಯನ್ನು ಹೊಂದಿಲ್ಲ.

ಪಂಜಾಬ ಸರಕಾರದವರ ಕೈಕೆಳಗೆ ೨೩ ಔದ್ಯೋಗಿಕ ಶಾಲೆಗಳಿರುತ್ತವೆ. ದೊಡ್ಡ ಶಾಲೆಯಲ್ಲಿ ೮೦೦ ಮಂದಿ ವಿದ್ಯಾರ್ಥಿಗಳಿರುವರು. ಹಲವು ಕೆಲಸಗಳು ಅಲ್ಲಿ ಧರ್ಮಾರ್ಥವಾಗಿ ಕಲಿಸಲ್ಪಡುವವು. ಅವುಗಳೊಂದಿಗೆ ವ್ಯಾಪಾರ ವಹಿವಾಟಗಳ ವಿಷಯವೂ ಕಲಿಸಲ್ಪಡುವವು. ವಿದ್ಯಾರ್ಥಿಗಳಲ್ಲಿ ನಿಪುಣರಾದವರಿಗೆ ಸ್ಟ್ಯಾಇಪೆಂಡ್ ಸಿಕ್ಕುವದೂ ಉಂಟು. ಸರಕಾರದವರಿಂದ ಸ್ಥಾಪಿತವಾದ ಶಾಲೆಗಳು ಮಾತ್ರವಲ್ಲದೆ ಸರಕಾರದ ಗ್ರಾಂಟಿನ ಸಹಾಯದಿಂದ ನಡೆಯುವ ಇತರ ಹಲವು ಖಾಸಗಿ ಶಾಲೆಗಳೂ ಇರುತ್ತವೆ. ಸ್ತ್ರೀ ವಿದ್ಯಾಭ್ಯಾಸದ ಕಡೆಗಂತೂ ಪಂಜಾಬ ಸರಕಾರದವರ ಲಕ್ಷ್ಯವು ಕೇಂದ್ರೀಕರಿಸಲ್ಪಟ್ಟಿರುತ್ತದೆ. ಘರದಾ ಕ್ರಮವಿದೆಯಾದರೂ ಅಲ್ಲಿ ಹೆಂಗಸರ ಬಗ್ಗೆ ಔದ್ಯೋಗಿಕ ಶಾಲೆಗಳಿದ್ದು ಸುಮಾರು ೨೦೦ ಸ್ತ್ರೀಯರಿಗೆ ನೈಗೆ ಮೊದಲಾದ ಕೈಗಾರಿಕೆಗಳು ಕಲಿಸಲ್ಪಡುವವು. ಪಂಜಾಬ ಸರಕಾರದ ಬಗ್ಗೆ ಅಲ್ಲಿ ಹಿಂದೂಸ್ಥಾನದಲ್ಲಿಯೇ ತಯಾರಿಸಲ್ಪಟ್ಟ ಸಾಮಗ್ರಿಗಳು ಹೆಚ್ಚಾಗಿ ತರಿಸಲ್ಪಟ್ಟು ಸ್ವದೇಶಿ ಕೈಗಾರಿಕೆಗೆ ಪ್ರೋತ್ಸಾಹವು ಕೊಡಲ್ಪಡುತ್ತಿದೆ. ಔದ್ಯೋಗಿಕ ಕಾರಖಾನೆ ಮೊದಲಾದವುಗಳನ್ನು ತೆರೆಯುವವರಿಗೆ ಸರಕಾರದವರು ಚೆನ್ನಾಗಿ ಸಹಾಯವನ್ನು ಮಾಡುತ್ತಿರುವರು. ವ್ಯಾಪಾರಿಗಳಿಗೆ ಬೇಕಾದ ಸಲಹೆಗಳನ್ನು ಔದ್ಯೋಗಿಕ ಇಲಾಖೆಯವರು ಸಂತೋಷದಿಂದ ಕೊಡುವರು. ಪಂಜಾಬ ಸರಕಾರದವರು ಲಾಹೋರಿನಲ್ಲಿ ಒಂದು ದೊಡ್ಡ ಟರ್ಪೆಂಟ್ಯಾನ್ ಕಾರಖಾನೆಯನ್ನು ತೆರೆದಿರುವರು. ಅಲ್ಲಿ ಒಳ್ಳೆಯ ಟರ್ಪೆಂಟ್ಯಾನ್ ತಯಾರಾಗುತ್ತಲಿದೆ. ಅಲ್ಲಿ ತಯಾರಾಗುವ ರೋಸಿನನ್ನು ಸಾಬೂನಿನ ಕಾರಖಾನೆಯವರು ಕೊಂಡುಕೊಳ್ಳುವರು. ಸದ್ಯದಲ್ಲಿಯೇ ಪಂಜಾಬ ಸರಕಾರದವರು ಒಂದು ಕಾಗದದ ಕಾರಖಾನೆಯನ್ನೂ ಆರ್ಟಿಫಿಸಿಯಲ್ ಸಿಲ್ಕ್ ಕಾರಖಾನೆಯನ್ನೂ ತೆರೆಯಲಿರುವರು. ಅವರ ಉದಾಹರಣೆಯನ್ನು ಬೇರೆಯವರು ಅನುಸರಿಸಿದುದಾದರೆ ಹಿಂದೂಸ್ಥಾನದ ಅಭಿವೃದ್ಧಿಯು ಖಂಡಿತವಾಗಿಯೂ ಆಗುವದು.

ಪವಿತ್ರ ಖಾದಿ! ಬಡವರ ಖಾದಿ!!

ಶುದ್ಧ ಖಾದಿಯನ್ನೇ ವಿಕ್ರಯಿಸುವುದಾಗಿ ಅ. ಭಾ. ಚ. ಸಂಘದಿಂದ ಸರ್ಟಿಫಿಕೇಟು
ಹೊಂದಿರುವ ಮತ್ತು ಇದೇ ಎಪ್ರಿಲ್ ತಾ. ೩ರಲ್ಲಿ ತೆರೆಯಲಾದ

"ಖಾದಿ ನಿಲಯ"ವು

ಎಲ್ಲಾ ಉಪಯೋಗಗಳಿಗಾಗುವ ಸರ್ವ ನಮೂನೆ ಫ್ಯಾಶನಿಗಾಗುವ ನಾಜೂಕು
ಖಾದಿಯನ್ನು ಸಂಗ್ರಹಿಸಿರುತ್ತದ. ದೇಶಬಾಂಧವರು ಮಹಾತ್ಮಾ
ಗಾಂಧಿಯವರು ಈ ವರ್ಷದ ಮಟ್ಟಿಗೆ ಕೈಕೊಂಡಿರುವ
ಒಂದೇ ಒಂದಾದ ಪ್ರಧಾನ ಪ್ರಚಾರ ಕಾರ್ಯವಾಗಿಟ್ಟಿರುವ
ಈ ಪವಿತ್ರ ಖಾದಿಯನ್ನು
ಬಳಕೆಗೆ ತರಲು ಸುಸಂದರ್ಭವು ಇದೇ! ತ್ವರೆಮಾಡಿರಿ!!

ವಂದೇ ಮಾತರಂ !!

ವಿಳಾಸ— ಖಾದಿ ನಿಲಯ,
(ವ್ಯವಸ್ಥಾಪಕರು, ಪೈ ಮತ್ತು ಕಂಪೆನಿ),
ಸಂತೆಕಟ್ಟೆ ಬಳಿ, ಉಡುಪಿ, ದ. ಕ.
~~~~

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕಲಶವು ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಷ್ಟಾಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿ ಮಿತ್ರಾ!

ದಶಮೂಲ ಸುಖಪ್ರದ ಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಸದ ಅಂಶವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳೆಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

[illegible] "[illegible]" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮೊದಲ್ ತರವಾದ ಬೆಳ್ಳಿ ಪುಡಿದಾರಗಳು.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ತಿಳಿಸಿದ ಅನುಭವದ ಮೇಲೆ ನಮ್ಮ ಪುಡಿದಾರ ತಗ್ಗಗಳು ಕೆಲಸ ಸ್ಥಿರವಿದ್ದಿಯೂ, ದಾರಕ್ಕೆ ಸರಸದಲ್ಲಿಯೂ, ಸರಕಿನ ನಾನಾಮುದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಕ್ಕೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರಿ,
24-8-28 ಶವಾಪೇಟೆ, ಸೇಲಂ. (ದಕ್ಷಿಣ-ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೀ ರೂಪ್ಯಾ 1/- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ.—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ರಿಸರ್ವ್ ನಿಧಿ ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ವ್ಯಾಪ್ತಿ ಆಗುವ ರೂ. 1000/-ವ ಮೀಕ್ಕಿದ ಮೊಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/ and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice

For further particulars please apply to –

Canara Bank Ltd.
Mangalore, 11—2—1929.

K. Venkat Rao,
Secretary

THE PANGAL NAYAK BANK, LTD.

Branch Office Mangalore.	Head Office: Udipi, *Established 1920.*	Agency Office Cochin.

Authorised Capital: Rs. 2,00,000-	Paidup Capital: Rs. 1,57400-
Issued Capital: Rs. 1,75,000-	Reserve and other Funds: Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5%, 6 or 9 months 5¼%, 12, 15, 18 or 21 months 6¼; 24 months 6¼% and interest **being payable every 3 months.**

Short Notice Deposits, Cumulative Deposits, and Savings Bank Deposits are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6¼% and interest being payable every quarter.

Loans and Advances are made on pledge of valuables, on proper personal securities on reasonable terms; and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
1st March, 1929.

P. Lakshman Nayak,
Offg. Secretary.

ADVERTISE IN OUR WEEKLY.

To Reach the Hearths & Homes
OF INDIA'S MASSES

For Particulars Apply to:

The Manager,
SWADESHABHIMANI,
MANGALORE.

ಅಫಘಾನಿಸ್ಥಾನದ ಸಮಾಚಾರ.

[illegible] ಹಿಂದೂಸ್ಥಾನದ [illegible] ಅಮಾನುಲ್ಲಾರವರ [illegible] ಬಹುದು.' ಎಂದು ಒಂದು ಪತ್ರಿಕೆಯು ಸೂಚಿಸುವದು. ಅಮಾನುಲ್ಲಾರವರು ಮುಂದೆ ಮಾಡಬೇಕಾದಂತಹ ಕಾರ್ಯಕ್ರಮಗಳ ವಿಷಯವು ಗೋಪ್ಯವಾಗಿಯೇ ಇದೆ.

ಅಮಾನುಲ್ಲಾರವರನ್ನು, ಅವರ ಸಹೋದರ ಇನಯತುಲ್ಲಾ ಮತ್ತು ಅಮಾನುಲ್ಲಾರವರ ಕುಟುಂಬವನ್ನು ಒಳಗೊಂಡ ಸ್ಪೆಶಲ್ ಟ್ರೈನು ಕಳೆದ ಆದಿತ್ಯವಾರ ದಿಲ್ಲಿಗೆ ಬಂದು ತಲುಪಿತು. ಒಂದು ಗಂಟೆಯ ಹೊತ್ತು ಅಲ್ಲಿ ನಿಂತು ಮುಂಬಾಯಿಗೆ ಹೊರಟುಹೋಯಿತು. ಟ್ರೈನಿನಲ್ಲಿ ಮೂರು ಬಂಡಿಗಳಿದ್ದುವು. ಅಮಾನುಲ್ಲಾರವರ ರಕ್ಷಣೆಗಾಗಿ ಕೆಲವು ಸೈನಿಕರೂ ಇದ್ದರು. ದಿಲ್ಲಿಯ ಪ್ಲೇಟುಫೋರ್ಮಿನಲ್ಲಿ ಇವರನ್ನು ನೋಡುವ ಸಲುವಾಗಿ ದೊಡ್ಡ ದೊಡ್ಡ ಹುದ್ದೇದಾರರು ನೆರೆದಿದ್ದರಾದರೂ ಅಮಾನುಲ್ಲಾರವರು ಯಾರಿಗೂ ಕಾಣಿಸಿಕೊಳ್ಳಲಿಲ್ಲ. ಮೌಲಾನಾ ಮಹಮದ್ ಅಲಿಯವರು ಮುಸಲ್ಮಾನರ ಪರವಾಗಿ ಅವರಿಗೆ ಸಹಾನುಭೂತಿಯ ಸಂದೇಶವನ್ನು ಕಳುಹಿದರು. ದಿಲ್ಲಿಯ ಹಿಂದೂಗಳ ಪರವಾಗಿ ಲಾಲಾ ದೇಶಬಂಧುರವರು ಅವರಿಗೊಂದು ಸಹಾನುಭೂತಿಯ ಪತ್ರವನ್ನೂ ಮೂರು ಬುಟ್ಟಿ ಹಣ್ಣುಗಳನ್ನೂ ಕಳುಹಿದರು. ಅಮಾನುಲ್ಲಾರವರು ತನ್ನ [illegible] ಮುಖೇನ ಇವರುಗಳಿಗೆ ಕೃತಜ್ಞತೆಯನ್ನು ಸೂಚಿಸಿದರು. ದಿಲ್ಲಿಯಿಂದ ಟ್ರೈನು ಮುಂಬಾಯಿಗೆ ಹೊರಟುಹೋಗುವಾಗ "ಅಲ್ಲಾಹೊ ಅಕಬರ್" ಎಂದು ನೆರೆದ ಜನರು ಜಯಧ್ವನಿಯನ್ನು ಮಾಡಿದರು.

ಅಫಘಾನಿಸ್ಥಾನದಲ್ಲಿ ರಕ್ತಪಾತವಾಗಲಾಗದೆಂದೇ ಅಮಾನುಲ್ಲಾ ಖಾನರು ಅಫಘಾನಿಸ್ಥಾನವನ್ನು ತ್ಯಜಿಸಲು ಕಾರಣವಾಗಿರುತ್ತದೆ. ಮೊದಲಿನಿಂದಲೂ ಅವರಿಗೆ ರಕ್ತಪಾತದ ಮೇಲೆ ಮನಸ್ಸಿರಲಿಲ್ಲ. ಇಟೆಲಿಯಲ್ಲಿ ಅವರು ತನ್ನ ಭಾವನೆಂಟನಾದ ಸಯ್ಯದ್ ಖಾದಿಮಖಾನರನ್ನು ಕಾಣುವರು. ಹಿಂದಕ್ಕೆ ಬರುವ ಆಲೋಚನೆಯೇ ಅವರಿಗಿರುವುದಿಲ್ಲ. ಹಿಂದೂಸ್ಥಾನವು ತನಗೆ ತುಂಬ ಸಹಾಯವನ್ನು ಮಾಡಿದುದಕ್ಕಾಗಿ ಅಮಾನುಲ್ಲಾಖಾನರು ಹಿಂದೂಸ್ಥಾನದ ಜನರಿಗೆ ತುಂಬ ಕೃತಜ್ಞರಾಗಿರುವರು.

ಅಮಾನುಲ್ಲಾರವರು ಹಿಂದೂಸ್ಥಾನಕ್ಕೆ ಹೊರಟುಬಂದೊಡನೆ ಅಲಿ ಅಹಮದ ಜಾನರವರು ಕೇಲಟ್-ಇ-ಗಿಲ್‌ಜಾಯಿಯಿಂದ ಕಂದಹಾರಿಗೆ ತೆರಳಿ ತನ್ನ ಧ್ವಜವನ್ನು ಅಲ್ಲಿ ಏರಿಸಿ ತಾನು ಅಮೀರನೆಂದು ಪ್ರಕಟಿಸಿದರು. ನಿಜವಾಗಿಯೂ ಅಮಾನುಲ್ಲಾರವರು ಕಂದಹಾರನ್ನು ಪ್ರವೇಶಿಸಲಿಲ್ಲ. ನಾದಿರಖಾನರ ಉಪದೇಶದ ಮೇರೆಗೆ ಅವರು ಈ ತರದ ನಿರ್ಧಾರವನ್ನು ಮಾಡಿರುವರಂತೆ. ನಾದಿರಖಾನರು ಕಾಬೂಲನ್ನು ಸ್ವಾಧೀನಪಡಿಸುವ ಸಲುವಾಗಿ ಇನ್ನೊಮ್ಮೆ ಪ್ರಯತ್ನಿಸಲಿರುವರು.

ದಿಲ್ಲಿಯಿಂದ ಹೊರಟ ಅಮಾನುಲ್ಲಾಖಾನರು ಸೋಮವಾರ ಮಧ್ಯಾಹ್ನದ ಹೊತ್ತಿಗೆ ಮುಂಬಾಯಿಯ ಕೊಲಾಬಾ ಸ್ಟೇಶನಿಗೆ ಬಂದು ತಲುಪಿದರು. ಅಧಿಕಾರಿಗಳು ಅವರ ಆಗಮನವನ್ನು ರಹಸ್ಯವಾಗಿ ಇಡಲು ಪ್ರಯತ್ನಿಸಿದರೂ ಫಲವಾಗದೆ ವಾರ್ತೆಯು ವಾಯುವೇಗದಿಂದ ವ್ಯಾಪಿಸಿತ್ತು. ಕೊಲಾಬಾ ಸ್ಟೇಶನಿನಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಇವರಲ್ಲಿ ಹೆಚ್ಚಿನವರು ಗಡಿಪ್ರಾಂತ್ಯದ ಜನರಾಗಿದ್ದರು. ಮಧ್ಯಾಹ್ನದ ತರುವಾಯ ಪೋಲೀಸರು ರೈಲುವೇ ಪ್ಲೇಟ್‌ಫೋರ್ಮಿನಿಂದ ಜನರನ್ನು ಚದರಿಸಿದರು. ಮಧ್ಯಾಹ್ನ ೧-೩ ಘಂಟೆಯ ಹೊತ್ತಿಗೆ ಅವರು ಬರುವರೆಂದಿದ್ದರೂ ಟ್ರೈನು ಸುಮಾರು ಮೂರು ಘಂಟೆಯ ಹೊತ್ತಿಗೆ ಬಂದು ತಲುಪಿತು. ಅವರನ್ನು ಕೆಲವು ಹುದ್ದೇದಾರರು ಎದುರುಗೊಂಡರು. ಅಮಾನುಲ್ಲಾರ ಮೊಗದ ಮೇಲೆ ಉತ್ಸಾಹವಿರಲಿಲ್ಲ. ಅವರು ಸಾದಾ ಉಡುಗೆಯನ್ನು [illegible] ತೆರಳಿದರು. ಅವರ ಜೊತೆ ಇನಯತುಲ್ಲಾರವರು [illegible] ಮೂರನೆಯ ಕಾರಿನಲ್ಲಿ ಸೋರಿಯಾರಾಣಿಯವರೂ ಅರಸು ಕುಟುಂಬದವರೂ ಇದ್ದರು. ಸ್ಟೇಶನಿನಿಂದ ತಾಜಮಹಾಲು ಹೊಟೇಲಿನ ವರೆಗಿನ ರಸ್ತೆಯಲ್ಲಿ ಜನರು, ವಿಶೇಷವಾಗಿ ಮುಸಲ್ಮಾನರು ದಟ್ಟವಾಗಿ ಕೂಡಿದ್ದರು.

"ತಾವು ತಮ್ಮ ಪತ್ನಿಯವರನ್ನು ಕೂಡಿಕೊಂಡು ಊರಿನಿಂದ ಹೊರಟು ಹೋಗುತ್ತಿರುವದು ನನಗೆ ಗಾಢವಾದ ಯೋಚನೆಗೆ ಕಾರಣವಾಗಿರುತ್ತದೆ. ಹಿಂದೂಸ್ಥಾನದಲ್ಲಿ ತಮ್ಮ ಪ್ರಯಾಣವು ಸುಖಕರವೂ ಚೆನ್ನಾಗಿಯೂ ಆಗುವಂತೆ ನಾನು ವ್ಯವಸ್ಥೆಗೊಳಿಸಿರುವೆನು. ಇನ್ನು ತಮ್ಮ ಸೌಕರ್ಯದ ಬಗ್ಗೆ ನಮ್ಮವರನ್ನು ನೀವು ಸಹಾಯಕರನ್ನಾಗಿ ಮಾಡಿಕೊಳ್ಳಬಹುದು" ಎಂದು ವ್ಹಾಯಿಸರಾಯಿಯವರು ಅಮಾನುಲ್ಲಾರವರಿಗೆ ವಾರ್ತೆ ಕಳುಹಿದ್ದರು. ಅದಕ್ಕೆ ಉತ್ತರವಾಗಿ ಅಮಾನುಲ್ಲಾಖಾನರು "ನಿಮಗಿದಕ್ಕಾಗಿ ಕೃತಜ್ಞನಿದ್ದೇನೆ. ನನಗೆ ಬೇಕಾದ ಸೌಕರ್ಯಗಳೆಲ್ಲ ತಮ್ಮ ಅಧಿಕಾರಿಗಳಿಂದ ಲಭಿಸಿರುತ್ತದೆ. ನಾನೂ ನನ್ನ ಪತ್ನಿಯೂ ತಮಗೆ ಇನ್ನೊಮ್ಮೆ ಕೃತಜ್ಞತಾವಂದನೆಗಳನ್ನು ಅರ್ಪಿಸುವೆವು" ಎಂದು ತಿಳಿಸಿದ್ದರು.

ಅಮಾನುಲ್ಲಾರವರು ಇಟೆಲಿ ದೇಶಕ್ಕೆ ಹೊರಟುಹೋಗುವರು. ಆದರೆ ಅವರ ಸಂಗಡ ಮುಂಬಾಯಿಗೆ ಬಂದವರೆಲ್ಲರೂ ಇಟೆಲಿಗೆ ಹೊರಟು ಹೋಗುವುದಿಲ್ಲ. ಅಫಘಾನಿಸ್ಥಾನದಲ್ಲಿ ಏನಾದರೊಂದು ವ್ಯವಸ್ಥೆಯಾಗುವ ವರೆಗೆ ಅವರಲ್ಲಿ ಕೆಲವರು ಹಿಂದೂದೇಶದಲ್ಲಿಯೇ ಉಳಕೊಳ್ಳುವರಂತೆ. ಸೋರಿಯಾರಾಣಿಯವರು ಅಮಾನುಲ್ಲಾರವರ ಜತೆಯಲ್ಲಿ ಹೋಗುವರು. ಕಾಬೂಲಿನಲ್ಲಿರುವ ಈಗ ಹೆಚ್ಚಿನ ಜನರಿಗೆ ಅಮಾನುಲ್ಲಾರವರಂತಹ ಸುಧಾರಕನಾದ ರಾಜನ ಅವಶ್ಯಕತೆಯು ತೋರುವುದಿಲ್ಲ. ಅದುಕಾರಣ ಅಮಾನುಲ್ಲಾರವರಿಗೆ ಸುಲಭವಾಗಿ ಸಿಂಹಾಸನ ಪ್ರಾಪ್ತಿಯಾಗುವ ಸಂಭವವಿರುವುದಿಲ್ಲ. ಬಾಚಾ-ಇ-ಸಾಕೋವು ಕೂಡ ಮನ್ನಣೆಯಿಲ್ಲದವನೂ, ಕ್ರಮವಿಲ್ಲದವನೂ ಆಗಿರುವುದರಿಂದ ಆತನ ಆಳ್ವಿಕೆಯೂ ಶಾಶ್ವತವಾಗಿ ಉಳಿಯಬಹುದೆಂದು ನಂಬಲೂ ಕಾರಣವಿರುವುದಿಲ್ಲ. ಬಾಚಾ-ಇ-ಸಾಕೋವು ಸಿಂಹಾಸನದಿಂದ ತಳ್ಳಲ್ಪಡುವ ವರೆಗೆ ಅಮಾನುಲ್ಲಾರವರು ಹಿಂದಿರುಗುವರೆಂದು ತಿಳಿಯಲು ಅವಕಾಶವಿರುವುದಿಲ್ಲವೆಂದು ಅವರ ಪಕ್ಷದ ಜನರ ಅಂಬೋಣ.

ಅಮಾನುಲ್ಲಾಖಾನರ ಸಲುವಾಗಿ ಪಂಜಾಬಿನ ಮಿ| ಜಫಾರ ಅಲಿ ಖಾನರು [illegible] ರೂಪಾಯಿಗಳನ್ನು ಕೂಡಿಸಿ ಹಾಕಿ ಕಳುಹಿಸಿರುವರು. ಅದರೊಂದಿಗೆ "ಅಲ್ಲಾನು ಶೀಘ್ರದಲ್ಲಿಯೇ ನಿಮಗೆ ಅಫಘಾನದ ಸಿಂಹಾಸನವನ್ನು ಮರಳಿ ಕೊಡಲಿ" ಎಂದೂ ಸೂಚಿಸಿರುವರು.

ನಾದಿರಖಾನರು ಖೋಸ್ಟಪ್ರಾಂತದಲ್ಲಿರುವರೆಂದೂ, ಅವರು [illegible] ದವರೊಂದಿಗೆ ತುಂಬ ಅಭಿವೃದ್ಧಿಹೊಂದಿರುವರೆಂದೂ ವಾರ್ತೆ. ತಾನು ಅಫಘಾನದ ಅಮೀರನೆಂದು ಅವರು ಪ್ರಕಟಿಸಿರುವರು. ಬಾಚಾ-ಇ-ಸಾಕೋವು ಸಂಧಾನಾಪೇಕ್ಷೆಯಾಗಿ ನಾದಿರಖಾನರಲ್ಲಿಗೆ ಕೆಲ ಮಂದಿಗಳನ್ನು ಕಳುಹಿಸಿರುವನಂತೆ. ಸಯ್ಯದ್ ಹುಸೇನರವರು ವಧಿಸಲ್ಪಟ್ಟರೆಂದೂ ವರ್ತಮಾನ.

ಅಮಾನುಲ್ಲಾರವರು ಸೋರಿಯಾ ರಾಣಿಯವರೊಂದಿಗೆ ಮುಂಬಾಯಿಯಲ್ಲಿಯೇ ಇರುವರು. ಅವರನ್ನು ಹಲವು ಮಿತ್ರರುಗಳು ಎದುರುಗೊಳ್ಳುತ್ತಿರುವರು. ಮಿತ್ರರುಗಳು ಅವರಿಗೆ ಫಲಪುಷ್ಪಗಳನ್ನು ಸಮರ್ಪಿಸಿದರು. ಪಂಡಿತ ಮೋತಿಲಾಲ ನೆಹರೂಗಳವರು ಒಂದು ಅಂದವಾಗಿ ಶೃಂಗರಿಸಿದ ಖಾದಿನ ಬುಟ್ಟಿಯನ್ನು ಕೊಟ್ಟಿರುವರು. ಆ ಬುಟ್ಟಿಯ ಮೇಲೆ "ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸಿನ ಪರವಾಗಿ ಅಮಾನುಲ್ಲಾರಾಜ ಮತ್ತು ಸೋರಿಯಾ ರಾಣಿಯವರಿಗೆ" ಎಂದು ಅದರ ಮೇಲೆ ಬರೆದಿತ್ತು. ಅವರು ಯಾವಾಗ ಇಟೆಲಿಗೆ ಹೊರಟುಹೋಗುತ್ತಿರುವರೆಂದು ಇನ್ನೂ ನಿಶ್ಚಯವಾಗಿಲ್ಲ. ಅವರ ಪಕ್ಷದ ಜನರು ಮುಂಬಾಯಿ ಪಟ್ಟಣದ ಸಂದರ್ಶನಕ್ಕಾಗಿ ತಿರುಗುತ್ತಿರುವರು. ಅವರಲ್ಲಿ ಹೆಂಗಸರೂ ಇರುವರು.

ಪಂಜಾಬದ ಕೈಗಾರಿಕೆಯ ಅಭಿವೃದ್ಧಿ.

ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವದರಲ್ಲಿ ಪಂಜಾಬ ಸರಕಾರದವರು ಸ್ತುತಿಗೆ ಪಾತ್ರರಾಗುವರು. ಕೈಗಾರಿಕೆಯ ಅಭಿವೃದ್ಧಿಗಾಗಿ ಮುಂಬಾಯಿ ಸರಕಾರದವರು [illegible] ಒಂದರ [illegible] ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿರುವರು. ಮದರಾಸು ಸರಕಾರದವರು ೧೦ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚುಮಾಡುವರು. ಹೆಚ್ಚಾಗಿ ಕೆಲವು ಪ್ರಾಂತ್ಯಗಳಲ್ಲಿ ಕೈಗಾರಿಕೆಯ ಡೈರೆಕ್ಟರುಗಳಾಗಿ ಹಿಂದೂಗಳೇ ನೇಮಿಸಲ್ಪಟ್ಟಿರುವರು. ಮುಂಬಾಯಿ ಮತ್ತು ಮದರಾಸುಗಳಲ್ಲಿಯೂ ಹಿಂದೂಗಳೇ ಡೈರೆಕ್ಟರಾಗಿರುವರು. ಪಂಜಾಬ ಸರಕಾರದವರಾದರೋ ಔದ್ಯೋಗಿಕ ಇಲಾಖೆಯಲ್ಲಿ ಪೂರಾ ಹಿಂದೂಗಳಿಗೆ ಕೆಲಸವನ್ನು ಕೊಟ್ಟಿರುವರಾದರೂ ಅಲ್ಲಿನ ಕೆಲಸವು ತುಂಬ ಅಭಿವೃದ್ಧಿಯನ್ನು ಹೊಂದಿರುತ್ತದೆ. ಅವರ ಉದಾಹರಣೆಯನ್ನು ಇತರ ಪ್ರಾಂತದವರು ಅನುಸರಿಸುವಂತಹುದಾಗಿದೆ. ಪಂಜಾಬಿನಲ್ಲಿ ಶಾದ್ರಾ ಎಂಬ ಹೆಸರಿನ ಒಂದು ಪಟ್ಟಣವಿದೆ. ಅಲ್ಲಿ ಸರಕಾರದವರು ಒಂದು ನೈಗೆ ಕಾರಖಾನೆಯನ್ನು ತೆರೆದಿರುವರು. ಈ ಕಾರಖಾನೆಯಲ್ಲಿ ಇಂಜಿನುಗಳ ಮೂಲಕ ನೂರು ಮಗ್ಗಗಳು ಕೆಲಸಮಾಡುತ್ತಿವೆ. ಅಲ್ಲಿ ೫೦ ಮಂದಿಗಳಿಗೆ ನೈಗೆ ಶಿಕ್ಷಣವನ್ನು ಕೊಡುತ್ತಿರುವರು. ಕಲಿಯುವವರಿಗೆ ತಿಂಗಳಿಗೆ ೧೫ರಿಂದ ೩೦ರೂಪಾಯಿ ವರೆಗೆ ಖರ್ಚಿನ ಹಣವು ಕೂಡ ಕೊಡಲ್ಪಡುತ್ತಿದೆ. ಅವರ ಶಿಕ್ಷಣೆಯು ಎರಡೇ ವರುಷಗಳಲ್ಲಿ ಮುಗಿದು ಅವರು ನೈಗೆಯಲ್ಲಿ ನಿಪುಣರಾಗಿ ಹೊರಹೋಗುವರು. ಅಲ್ಲಿ ತಯಾರಾಗುವ ವಸ್ತ್ರವು ಪರಊರುಗಳಿಗೆ ಕಳುಹಿಸಲ್ಪಡದೆ ಅಲ್ಲಿಯೇ ವಿಕ್ರಯವಾಗುವದು. ಇದೇ ರೀತಿ ಬಣ್ಣಹಾಕುವಿಕೆ, ಮುದ್ರಣ ಮೊದಲಾದವುಗಳಲ್ಲಿ ತರಬೇತಿಯನ್ನು ಕೊಡುವ ಪ್ರಯತ್ನವು ನಡೆಯುತ್ತಿದ್ದು ೮೦ ಮಂದಿ ಕಲಿಯುತ್ತಿರುವರು. ಇಂಜಿನುಗಳ ಮೂಲಕವೇ ನಡೆಯುವ ದೊಡ್ಡ ದೊಡ್ಡ ನೈಗೆ ಯಂತ್ರಗಳು ಮಾತ್ರವಲ್ಲದೆ, ಅಲ್ಲಿ ಸಣ್ಣ ಸಣ್ಣ ಕೈಮಗ್ಗಗಳು ಇರುವವು. ಅಲ್ಲಿಗೆ ಅಸಂಖ್ಯಾತ ನೇಕಾರರು ಬಂದು, ಹೊಸತರದ ಕೈಮಗ್ಗಗಳ ಕುರಿತಾಗಿ ಇಲಾಖೆಯವರಿಂದ ಕೊಡಲ್ಪಡುವ ಬೋಧನೆಗಳನ್ನು ಕೇಳಿ ಹೋಗುವರು. ಒಟ್ಟಾರೆಯ ಮೇಲೆ ನೈಗೆ ಕೈಗಾರಿಕೆಯು ಅಲ್ಲಿನಷ್ಟು ಬೇರೆಲ್ಲಿಯೂ ಏಳಿಗೆಯನ್ನು ಹೊಂದಿಲ್ಲ.

ಪಂಜಾಬ ಸರಕಾರದವರ ಕೈಕೆಳಗೆ ೨೬ ಔದ್ಯೋಗಿಕ ಶಾಲೆಗಳಿರುತ್ತವೆ. ದೊಡ್ಡ ಶಾಲೆಯಲ್ಲಿ ೮೦೦ ಮಂದಿ ವಿದ್ಯಾರ್ಥಿಗಳಿರುವರು. ಹಲವು ಕೆಲಸಗಳು ಅಲ್ಲಿ ಧರ್ಮಾರ್ಥವಾಗಿ ಕಲಿಸಲ್ಪಡುವವು. ಅವುಗಳೊಂದಿಗೆ ವ್ಯಾಪಾರ ವಹಿವಾಟುಗಳ ವಿಷಯವೂ ಕಲಿಸಲ್ಪಡುವವು. ವಿದ್ಯಾರ್ಥಿಗಳಲ್ಲಿ ನಿಪುಣರಾದವರಿಗೆ ಸ್ಟೈಪೆಂಡ್ ಸಿಕ್ಕುವದೂ ಉಂಟು. ಸರಕಾರದವರಿಂದ ಸ್ಥಾಪಿತವಾದ ಶಾಲೆಗಳು ಮಾತ್ರವಲ್ಲದೆ ಸರಕಾರದ ಗ್ರೇಂಟಿನ ಸಹಾಯದಿಂದ ನಡೆಯುವ ಇತರ ಹಲವು ಖಾಸಗಿ ಶಾಲೆಗಳೂ ಇರುತ್ತವೆ. ಸ್ತ್ರೀ ವಿದ್ಯಾಭ್ಯಾಸದ ಕಡೆಗಂತೂ ಪಂಜಾಬ ಸರಕಾರದವರ ಲಕ್ಷ್ಯವು ಕೇಂದ್ರೀಕರಿಸಲ್ಪಟ್ಟಿರುತ್ತದೆ. ಪರದಾ ಕ್ರಮವಿದೆಯಾದರೂ ಅಲ್ಲಿ ಹೆಂಗಸರ ಬಗ್ಗೆ ಔದ್ಯೋಗಿಕ ಶಾಲೆಗಳಿದ್ದು ಸುಮಾರು ೩೦೦ ಸ್ತ್ರೀಯರಿಗೆ ನೈಗೆ ಮೊದಲಾದ ಕೈಗಾರಿಕೆಗಳು ಕಲಿಸಲ್ಪಡುವವು. ಪಂಜಾಬ ಸರಕಾರದ ಬಗ್ಗೆ ಅಲ್ಲಿ ಹಿಂದೂಸ್ಥಾನದಲ್ಲಿಯೇ ತಯಾರಿಸಲ್ಪಟ್ಟ ಸಾಮಗ್ರಿಗಳು ಹೆಚ್ಚಾಗಿ ತರಿಸಲ್ಪಟ್ಟು ಸ್ವದೇಶಿ ಕೈಗಾರಿಕೆಗೆ ಪ್ರೋತ್ಸಾಹವು ಕೊಡಲ್ಪಡುತ್ತಿದೆ. ಔದ್ಯೋಗಿಕ ಕಾರಖಾನೆ ಮೊದಲಾದವುಗಳನ್ನು ತೆರೆಯುವವರಿಗೆ ಸರಕಾರದವರು ಚೆನ್ನಾಗಿ ಸಹಾಯವನ್ನು ಮಾಡುತ್ತಿರುವರು. ವ್ಯಾಪಾರಿಗಳಿಗೆ ಬೇಕಾದ ಸಲಹೆಗಳನ್ನು ಔದ್ಯೋಗಿಕ ಇಲಾಖೆಯವರು ಸಂತೋಷದಿಂದ ಕೊಡುವರು. ಪಂಜಾಬ ಸರಕಾರದವರು ಲಾಹೋರಿನಲ್ಲಿ ಒಂದು ದೊಡ್ಡ ಟರ್ಪೆಂಟೈನ್ ಕಾರಖಾನೆಯನ್ನು ತೆರೆದಿರುವರು. ಅಲ್ಲಿ ಒಳ್ಳೆಯ ಟರ್ಪೆಂಟೈನ್ ತಯಾರಾಗುತ್ತಿದೆ. ಅಲ್ಲಿ ತಯಾರಾಗುವ ರೋಸಿನನ್ನು ಸಾಬೂನಿನ ಕಾರಖಾನೆಯವರು ಕೊಂಡುಕೊಳ್ಳುವರು. ಸದ್ಯದಲ್ಲಿಯೇ ಪಂಜಾಬ ಸರಕಾರದವರು ಒಂದು ಕಾಗದದ ಕಾರಖಾನೆಯನ್ನೂ ಆರ್ಟಿಫಿಶಿಯಲ್ ಸಿಲ್ಕ್ ಕಾರಖಾನೆಯನ್ನೂ ತೆರೆಯಲಿರುವರು. ಅವರ ಉದಾಹರಣೆಯನ್ನು ಬೇರೆಯವರು ಅನುಸರಿಸಿದುದಾದರೆ ಹಿಂದೂಸ್ಥಾನದ ಅಭಿವೃದ್ಧಿಯು ಖಂಡಿತವಾಗಿಯೂ ಆಗುವದು.

ಪವಿತ್ರ ಖಾದಿ! ಬಡವರ ಖಾದಿ!!

ಶುದ್ಧ ಖಾದಿಯನ್ನೇ ವಿಕ್ರಯಿಸುವುದಾಗಿ ಅ. ಭಾ. ಚ. ಸಂಘದಿಂದ ಸರ್ಟಿಫಿಕೇಟು ಹೊಂದಿರುವ ಮತ್ತು ಇದೇ ಎಪ್ರಿಲ್ ತಾ. ೩ರಲ್ಲಿ ತೆರೆಯಲಾದ

"ಖಾದಿ ನಿಲಯ"ವು

ಎಲ್ಲಾ ಉಪಯೋಗಗಳಿಗಾಗುವ ಸರ್ವ ನವನೂತನ ಫ್ಯಾಶನಿಗಾಗುವ ಸಾಮಾನುಗಳ ಖಾದಿಯನ್ನು ಸಂಗ್ರಹಿಸಿರುತ್ತದೆ. ದೇಶಬಾಂಧವರು ಮಹಾತ್ಮಾ ಗಾಂಧಿಯವರು ಈ ವರ್ಷದ ಮಟ್ಟಿಗೆ ಕೈಕೊಂಡಿರುವ ಒಂದೇ ಒಂದಾದ ಪ್ರಧಾನ ಪ್ರಚಾರ ಕಾರ್ಯವಾಗಿಟ್ಟಿರುವ

ಈ ಪವಿತ್ರ ಖಾದಿಯನ್ನು

ಬಳಕೆಗೆ ತರಲು ಸುಸಂದರ್ಭವು ಇದೇ! ತ್ವರೆಮಾಡಿರಿ!!

ವಂದೇ ಮಾತರಂ!!

ವಿಳಾಸ—ಖಾದಿ ನಿಲಯ,
(ವ್ಯವಸ್ಥಾಪಕರು, ಪೈ ಮತ್ತು ಕಂಪೆನಿ),
ಸಂತೆಕಟ್ಟೆ, ಬಳಿ, ಉಡುಪಿ, ದ. ಕ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಶ್ವಗಂಧಾದಿ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಶ್ವಿನಿಗಳ್ಳ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಾಣಿವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿ ಮಿತ್ರರೇ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ವಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಖಲಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ಮಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ವಿವರಕ್ಕಾಗಿ "ಆಯುರ್ವೇದ ಚಂದ್ರಿಕಾ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ಪ್ರತಿಮಾರಹಗ್ಗ.

Estd. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪ್ರತಿಮಾರಗಳು ತಯಾರಿಸುವುದಾಗಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ಸಾವಿರದ ಅನುಭವದ ಮೇಲೆ ನಮ್ಮ ಪ್ರತಿಮಾರ ಹಗ್ಗಗಳು ಕೆಲಸ ನೈಪುಣ್ಯತೆ, ದಾರದ ಬಲದಲ್ಲಿಯೂ, ನವೀನ ನಮೂನೆಯಲ್ಲಿಯೂ ಪಕ್ಕಾ ಹಿಂದೆಯಿದ್ದಾವನಲ್ಲ ಹೆಸರು ಪಡೆದವು. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪ್ರತಿಮಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಹಗ್ಗದ ವ್ಯಾಪಾರಿ,
24-8-'28 ಶೆವ್ವಾಪೇಟೆ. ಸೇಲಂ. (ದಕ್ಷಿಣ ಹಿಂದೂಸ್ತಾನ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1|- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 28, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0
Reserve and other sinking Funds „ 3,88,000—0—0
Amount invested on G. P. Notes Rs. 4,87,793—6—0
Rates of interest on fixed deposits at Head Office and Branch 6¼% for 2 Years
6% „ 1 Year
Season deposits of Rs. 1000/- & above terminable by the end of June are received at 6¼% p. a.

ಅಧಿಕಾರಿಗಳು ಕೊಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 3,88,000—0—0
ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಸೇಕಡಾ 6¼% 1 ವರುಷಕ್ಕೆ ಸೇ 6.
ಜೂನ್ ಅಂತ್ಯದವರೆಗೆ ವಾಪ್ತಿ ಆಗುವ ರೂ. 1000/-ವ ಮೇಲ್ಪಟ್ಟ ಮೊಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Current Account Deposits received and interest allowed on daily balance of Rs. 50/ and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to—

Canara Bank Ltd.
Mangalore, 11—8—1929.

K. Venkat Rao,
Secretary

THE PANGAL NAYAK BANK, LTD.

Branch Office Mangalore	Head Office: Udipi. *Established 1920.*	Agency Office Cochin.

Authorised Capital: Rs. 2,00,000-
Issued Capital: Rs. 1,75,000-
Paidup Capital: Rs. 1,57400-
Reserve and other Funds: Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5%, 6 or 9 months 5¼%, 12, 15, 18 or 21 months 6%; 24 months 6¼% and **interest being payable every 3 months.**

Short Notice Deposits, Cumulative Deposits, and **Savings Bank Deposits** are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6¼% and Interest being payable every quarter.

Loans and Advances are made on pledge of valuables, on proper personal securities on reasonable terms; and every other description of Banking business transacted.

Further information may be had on application to the Secretary *at the* Head Office *or to the* Agent *at the* Branch.

Office of the Bank
1st March, 1929.

P. Lakshman Nayak,
Offg. Secretary.

ADVERTISE IN OUR WEEKLY.
To Reach the Hearths & Homes
OF INDIA'S MASSES

For Particulars Apply to:

The Manager,
SWADESHABHIMANI,
MANGALORE.

ಸಾಮಯಿಕ ವಿಚಾರಗಳು

ಅಮಾನುಲ್ಲಾರ ಪ್ರಸ್ಥಾನ.

ಒಂದು ಬಾರಿ ಅಫಘಾನಿಸ್ಥಾನವನ್ನು ಉಜ್ವಲವಾಗಿ ಮಾಡಿ ವಿಹಾರದೊಳ್ಳೆ ಮತಧರ್ಮಾಂತರ ವಿದ್ವೇಷಕ್ಕೆ ಕಾರಣರಾಗಿ ಸಿಂಹಾಸನವನ್ನು ಕಳೆದುಕೊಂಡು ಅಮಾನುಲ್ಲಾರು ಕೆಲವು ತಿಂಗಳ ಯುದ್ಧ ಮಾಡಿ ಪರಾಜಯಹೊಂದಿ ಅಫಘಾನಿಸ್ಥಾನದ ರಂಗಭೂಮಿಯಿಂದ ಪ್ರಸ್ಥಾನಹೊಂದಿದರು. ಲೋಕದ ಎಲ್ಲಾ ಭಾಗಗಳೂ ಜ್ಞಾನದಲ್ಲಿ ಉನ್ನತಿಹೊಂದಬೇಕೆಂದು ಆಶಿಸುವ ವ್ಯಕ್ತಿ ಒಬ್ಬನ ಸಹಾನುಭೂತಿಯು ಅಮಾನುಲ್ಲಾರವರ ಕಡೆಗೆ ಇದ್ದೇ ಇದೆ. ಅಮಾನುಲ್ಲಾರವರು ಉಚ್ಛಧ್ಯೇಯವಿದ್ದವರಾಗಿ ಪ್ರಜೆಗಳ ಮೇಲಿನ ಅತಿರೇಕವಾದ ಮಮತೆಯಿಂದ ಅವರ ಮೇಲೆ ಅಗತ್ಯವಿದ್ದುದಕ್ಕಿಂತಲೂ ಹೆಚ್ಚಿನ ವಿಶ್ವಾಸವನ್ನಿಟ್ಟುದೇ ಅವರ ಈಗಿನ ಪತನಕ್ಕೂ, ಅಫಘಾನಿಸ್ಥಾನದ ಈಗಿನ ದುರ್ದೆಶೆಗೂ ಕಾರಣವಾಗಿದೆ. ಅಲ್ಲದೆ ಸಾಂಪ್ರದಾಯವಾದಿಗಳ ಕೈಯಲ್ಲಿ ಮತಧರ್ಮಾಂಧತೆಯು ಹೇಗೆ ಉನ್ನತ್ತತೆಯನ್ನು ತಾಳಿ ಜನಾಂಗದ ಏಳಿಗೆಯನ್ನು ಹೇಗೆ ತಡೆಗಟ್ಟುತ್ತಿದೆಯೆಂಬುದೂ ಇದರಿಂದ ವ್ಯಕ್ತವಾಗುವುದು. ಜನತೆಯನ್ನು ಸ್ವಂತ ಅಭಿಪ್ರಾಯದ ಕಡೆಗೆ ಒಲಿಸಿಕೊಳ್ಳುವ ಶಕ್ತಿಯಾಗಲಿ, ಅವರನ್ನು ಸ್ವಂತ ಅಭಿಪ್ರಾಯಗಳಿಗೆ ಅಧೀನವಿರಿಸುವ ದರ್ಪವಾಗಲಿ ಅಮಾನುಲ್ಲಾರವರಲ್ಲಿ ಇರಲಿಲ್ಲ. ಅಲ್ಲದೆ ತನ್ನ ಸುತ್ತಲಿನ ರಾಷ್ಟ್ರಗಳು ಅಫಘಾನಿಸ್ಥಾನದ ಭಾವೀ ಏಳಿಗೆಯಿಂದ ತಮಗಾಗುವ ಸಾಧಕ ಬಾಧಕಗಳನ್ನು ಗುಣಿಸುವಂತಹವುಗಳೆಂದೂ, ಆ ರಾಷ್ಟ್ರಗಳ ಗುಪ್ತಪ್ರೇರಣೆಗಳ ಮೇಲೆ ತನ್ನ ತೀಕ್ಷ್ಣವಾದ ದೃಷ್ಟಿಯನ್ನಿಡುವುದು ಅವಶ್ಯವೆಂದೂ ತಿಳಿಯುವಷ್ಟು ದೂರದರ್ಶಿತೆಯು ಅಮಾನುಲ್ಲಾರವರಲ್ಲಿ ಇರಲಿಲ್ಲ. ಮತ್ತು ಮತಧರ್ಮಿಷ್ಟ ಜನಾಂಗದ ಮಧ್ಯದಲ್ಲಿ ನೂತನ ಕ್ರಾಂತಿಕಾರಕ ಸುಧಾರಣೆಗಳನ್ನು ಸುರಿಯುವ ಸಮಯದಲ್ಲಿ, ಅವು ಯಾವ ರೀತಿಯಲ್ಲಿ ಜನರೊಳಗೆ ಬೇರೂರುತ್ತವೆ ಎಂದು ಚೆನ್ನಾಗಿ ತಿಳಿದುಕೊಳ್ಳುವ ತೀಕ್ಷ್ಣ ಬುದ್ಧಿಯು ಅಮಾನುಲ್ಲಾರವರಲ್ಲಿರಲಿಲ್ಲ. ಅವರು ಸುಲಭವಾಗಿ ಸಿಂಹಾಸನವನ್ನು ಬಿಟ್ಟು ಕಾಬೂಲಿನಿಂದ ಓಡಿದುದನ್ನೂ, ಅಷ್ಟೇ ಸುಲಭವಾಗಿ ತಾನು ರಾಜನೆಂದು ಕಂದಹಾರಿನಲ್ಲಿ ಸ್ಥಾಪಿಸಿಕೊಂಡದ್ದನ್ನೂ, ಆ ಮೇಲೆ ಸೈನ್ಯ ಸನ್ನಾಹಗಳನ್ನು ಸರಿಗೊಳಿಸುವ ಮೊದಲೇ ಯುದ್ಧವನ್ನು ಪ್ರಾರಂಭಿಸಿದುದನ್ನೂ, ಬಾಚಾ-ಇ-ಸಾಕೋವಿನ ನಿಜವಾದ ಸನ್ನಾಹವೆಷ್ಟಿದೆಯೆಂದು ತಿಳಿಯದೆ ಇದ್ದುದನ್ನೂ ನೋಡಿದರೆ ಅಮಾನುಲ್ಲಾರವರು ರಾಜತಂತ್ರದಲ್ಲಿ ಏನೊಂದೂ ತಿಳಿಯದವರೆಂಬುದು ಸ್ಪಷ್ಟವಾಗುತ್ತಿದೆ. ಪ್ರಾಯಶಃ ರಾಜತಂತ್ರವಿಚಾರದಲ್ಲಾದ ವಿಶ್ವಾಸಿಕ ಮಂತ್ರಿಯೊಬ್ಬನಿದ್ದುದಾದರೆ ಅಮಾನುಲ್ಲಾರವರು ಅಫಘಾನಿಸ್ಥಾನವನ್ನು ತುರ್ಕಿಯ ಸಮಾನ ಸ್ಥಾನಕ್ಕೆ ತರುತ್ತಿದ್ದರು. ಅಮಾನುಲ್ಲಾರವರು ಸುಸಂಸ್ಕೃತ ಮನಸ್ಸಿನವರಾಗಿರುವಾಗ ಅವರಲ್ಲಿ ರಾಜತಂತ್ರಜ್ಞನ ಪ್ರತಿಭೆಯು ಕಡಿಮೆಯಾದುದೇ ಅಫಘಾನಿಸ್ಥಾನದ ದುರವಸ್ಥೆಗೆ ಕಾರಣವಾಗಿದೆ. ಅಮಾನುಲ್ಲಾರವರ ಸಿಂಹಾಸನ ತ್ಯಾಗದಲ್ಲಿಯೂ ದೇಶತ್ಯಾಗದಲ್ಲಿಯೂ ಅವರೊಡನೆ ನಾವು ಸಹಾನುಭೂತಿಯನ್ನು ತೋರಿಸುವಾಗ, ಸಂದಿಗ್ಧ ಸಮಯಗಳಲ್ಲಿ ಅವರು ಅಷ್ಟು ಸುಲಭವಾಗಿ ಪರಾಜಯಗಳನ್ನೊಪ್ಪಿದುದನ್ನೂ ನೋಡಿ ನಮಗೆ ಬಹಳ ಅಸಮಾಧಾನವಾಗುತ್ತಿದೆ.

ಮದುವೆಯಾದ ವಿದ್ಯಾರ್ಥಿಗಳು.

ಸಣ್ಣ ಪ್ರಾಯದಲ್ಲಿಯೇ ಮದುವೆಯಾದವರು ವಿದ್ಯಾರ್ಥಿಗಳಾಗಬಹುದೋ ಬಾರದೋ ಎಂಬುದರ ವಿಷಯದಲ್ಲಿ ಪಂಜಾಬು ಶಾಲೆ ಕೋಲೇಜುಗಳಲ್ಲಿ ದೊಡ್ಡ ವಾದವೆದ್ದಿರುತ್ತದೆ. ಹದಿನೆಂಟು ವರ್ಷ ಪ್ರಾಯಕ್ಕಿಂತ ಕಡಿಮೆಯುಳ್ಳವರು ಇನ್ನು ಮುಂದೆ ಅಷ್ಟು ಸಣ್ಣ ಪ್ರಾಯದಲ್ಲಿ ಮದುವೆ ಮಾಡಿಕೊಂಡರೆ ಮೆಟ್ರಿಕ್ಯುಲೇಶನ್ ಪರೀಕ್ಷೆಗೂ, ಕೋಲೇಜಿಗೂ ಸೇರಿಸಿಕೊಳ್ಳಬಾರದಾಗಿ ಈಗಿನ ಚಳವಳಿವಾಗಿರುತ್ತದೆ. ಮತ್ತು ಒಂದೆರಡು ಕಾಲೇಜುಗಳು ತಮ್ಮ ಇಂಟರ್ಮೀಡಿಯಟ್ ತರಗತಿಯಲ್ಲಿ ಅಂತಹ ಮದುವೆಯಾದ ಮಕ್ಕಳನ್ನು ಸೇರಿಸುವುದಿಲ್ಲವೆಂದು ನಿಶ್ಚಯಿಸಿಯೂ ಇವೆ. ಆದರೆ ಹದಿನೆಂಟು ವರುಷದ ಒಳಗಿನ ಹುಡುಗರ ವಿವಾಹವು ಸಮಾಜದ ಬೆಳವಣಿಗೆಗೆ ಹಿತಕರವಲ್ಲವೆಂದು ನಾವು ಅನ್ನುವಾಗ, ಇಂತಹ ಸಾಮಾಜಿಕ ಕಾಯಿದೆಗಳನ್ನು ವಿದ್ಯಾಸಂಸ್ಥೆಗಳೇ ನಿರ್ಧರಿಸಲು ಕೈಹಾಕಿದ್ದಲ್ಲಿ ಅದರಿಂದ ಕೆಟ್ಟ ಪರಿಣಾಮಗಳುಂಟಾಗಲಾರವೇ ಎಂಬ ಸಂದೇಹ ಮಾತ್ರ ಉಂಟಾಗುವುದು. [illegible] ಗಳು ವಿದ್ಯಾ[illegible] ಕೂಲಂಕಷ [illegible] ವಿಚಾರವನ್ನು ಮಾಡಲಿಲ್ಲವೆ. ಕಾರ್ಯತಃ ವಿದ್ಯಾಸಂಸ್ಥೆ ಮಂಡಳಿಯಲ್ಲಿ ಸಣ್ಣ ಪ್ರಾಯದ ವಿವಾಹಗಳು ಕಡಿಮೆಯಾಗುತ್ತಾ ಬರುತ್ತವೆ. ಹೀಗೆ ಸ್ವಾಭಾವಿಕವಾಗಿ ವಿಕಾಸವಾಗಬೇಕಾದ ಸುಧಾರಣೆಗಳನ್ನು ವಿದ್ಯಾಸಂಸ್ಥೆಗಳು ಒತ್ತಾಯದಿಂದ ಹೇರಿಸುವುದು, ಅವು ಅವುಗಳ ನ್ಯಾಯವಾದ ಅಧಿಕಾರಗಳನ್ನು ಮೀರಿ ನಡೆದಂತಾಗುತ್ತದೆ. ಮತ್ತು ಒಂದು ಬಾರಿ ಶಾಲೆ ಕೋಲೇಜುಗಳ ಈ ಕಾಯಿದೆಯಿಂದ ಒಳ್ಳೆಯದೆ ಉಂಟಾದರೂ, ಮುಂದಿನ ವರ್ತನಕ್ಕೆ ಅಹಿತಕರವಾದ ಆದರ್ಶ (Precedent)ವನ್ನು ರಚಿಸಿದಂತಾಗುವುದು. ಪ್ರಾಯಶಃ ಕೆಲವರು ಹಿಂದಿನ ಗುರುಕುಲವಾಸದ ಬ್ರಹ್ಮಚರ್ಯದ ನೆನಪನ್ನು ತರಬಹುದು. ಆದರೆ ಹಿಂದಿನ ಗುರುಕುಲಕ್ಕೂ ಈಗಿನ ಕಾದಂಬರಿಮಯವೂ ಸಿನೆಮಾಮಯವೂ ಆದ ವಾತಾವರಣದೊಳಗಿನ ಶಾಲಾ ಕೋಲೇಜುಗಳಲ್ಲಿ ಬ್ರಹ್ಮಚರ್ಯವನ್ನು ನಿರೀಕ್ಷಿಸುವುದು ಹಾಸ್ಯಾಸ್ಪದವಿದೆ. ಶಾಲಾ ಕೋಲೇಜುಗಳು ವಿದ್ಯಾರ್ಥಿಗಳ ಬಹಿರಂಗ ವಿವಾಹಗಳನ್ನು ತಡೆಯಲು ಸಿದ್ಧರಾಗಿರುವುದಕ್ಕಿಂತ ಗುಟ್ಟಿನ ವ್ಯಭಿಚಾರಗಳಿಂದ ಅವರನ್ನು ರಕ್ಷಿಸಲು ಯೋಗ್ಯತರದ ಉಪಾಯಗಳನ್ನು ಮಾಡುವುದು ಅಗತ್ಯವಿದೆ. ಒಂದು ಬಾರಿ ಶಾಲಾ ಕಾಲೇಜುಗಳು ಈ ತರದಲ್ಲಿ ವಿದ್ಯಾರ್ಥಿಗಳೊಳಗಿನ ಹಲವು ವ್ಯಸನಗಳನ್ನು ತೆಗೆದು ಹಾಕಲು ಸಮರ್ಥವಿದ್ದುದಾದರೆ ವಿವಾಹದ ಸುಧಾರಣೆಗೆ ಕೈಹಾಕಲು ಅಧಿಕೃತವಾಗುತ್ತಿದ್ದುವು.

ಬ್ರಿಟಿಷ ಚುನಾವಣೆಗಳು.

ಈ ದಿನ ಇಂಗ್ಲೆಂಡಿನಲ್ಲಿ ಚುನಾವಣೆಯ ಗದ್ದಲ. ಹಿಂದೂಸ್ಥಾನಕ್ಕೆ ಚುನಾವಣೆಗಳು ಅನಾವಶ್ಯಕ ಎಂದು ವ್ಯಾಸರಾಯರಿಗೂ ಮತ್ತು ಇತರ ಕೆಲವು ಹಿಂದೀಯರಿಗೂ ಕಂಡು ಬಂದರೂ ಇಂಗ್ಲೆಂಡಿನಲ್ಲಿ ಅವು ಅವಶ್ಯವಿರಲಿ, ಅನಾವಶ್ಯಕವಾಗಿರಲಿ, ಕಟ್ಟಳೆಯ ಪ್ರಕಾರ ನಡೆಯಲೇಬೇಕು; ಸ್ವಾಧೀನರಾಜ್ಯಕ್ಕೂ ಪರಾಧೀನ ರಾಜ್ಯಕ್ಕೂ ಇರುವ ವ್ಯತ್ಯಾಸವಿಷ್ಟೆ. ಹೇಗೂ ಹಿಂದೂಸ್ಥಾನದ ಚುನಾವಣೆಗಳನ್ನು ವ್ಯಾಸರಾಯರು ಧೈರ್ಯದಿಂದ ನಿಲ್ಲಿಸಬಲ್ಲರಾದರು. ಸೆಂಟ್ರಲ್ ಕಮಿಟಿಯ ಸದಸ್ಯತನದ ನೇಮಕಕ್ಕಾಗಿ ಕೃತಜ್ಞತೆಯಿಂದ ತುಂಬಿ ಉಬ್ಬಿ ಹೋದ ಸರ್ ಹರಿಸಿಂಗ್ ಗೌಡರವರೂ ವ್ಯಾಸರಾಯರ ಈ ವಿಶೇಷ ಕೃತ್ಯವನ್ನು ಹೊಗಳದೆ ಇರಲಾರದೆ ಹೋದರು. ಸರಕಾರದ ಸಹಾಯವನ್ನೇ ಕಾದು ಅದರ ಮೇಲೆಯೇ ತಮ್ಮ ಮತ ಸ್ವಾರ್ಥಗಳನ್ನು ಕಟ್ಟಲೆಳಸುತ್ತಿರುವ ಕೆಲವು ಮುಸಲ್ಮಾನರೂ ವ್ಯಾಸರಾಯರನ್ನು ಹೊಗಳಿದರು. ಆದರೆ ಇಂಗ್ಲೆಂಡಿನಲ್ಲಿ ಮತದಾರರು ತಮ್ಮ ಹಕ್ಕನ್ನು ತೋರಿಸಿಕೊಳ್ಳುವ ಈ ಒಂದೇ ಒಂದು ಸಮಯವನ್ನು ತಮ್ಮ ದೇಶದಲ್ಲಿ ಮುಂದೆ ಹಾಕಿದುದನ್ನು ಕಂಡದ್ದಾದರೆ ಇಡೀ ಇಂಗ್ಲೆಂಡೇ ಉರಿದೇಳುತ್ತಿದ್ದಿತು. ಸರಕಾರವೇ ಅಸಾಧ್ಯವಾಗುತ್ತಿದ್ದಿತು. ಅದುದರಿಂದಲೇ ಅವಶ್ಯವಿರಲಿ, ಇಲ್ಲದಿರಲಿ, ಬಾಲ್ಡ್ವಿನ್ ಸರಕಾರವು ಚುನಾವಣೆಗಳನ್ನು ಮುಂದರಿಸದೆ ಸರಿಯಾದ ಸಮಯಕ್ಕೇನೇ ಅದನ್ನು ನಡೆಸಿರುವರು. ಇಂಗ್ಲೆಂಡಿನಲ್ಲಿ ಮೂರು ಪಕ್ಷಗಳು– ಕನ್ಸರ್ವೆಟಿವ್, ಲಿಬರಲ್ ಮತ್ತು ಲೇಬರ್. ಮೊದಲನೆಯದು ಶ್ರೀಮಂತರದು; ಎರಡನೆಯದು ಮಧ್ಯವರ್ತಿಗಳದು; ಮೂರನೆಯದು ಮಜೂರರದು. ಹೀಗೆ ಹೆಸರಿನಲ್ಲಿ ಇಷ್ಟು ಭೇದಗಳಿದ್ದರೂ ಎಲ್ಲಾ ಪಕ್ಷಗಳಲ್ಲಿಯೂ ಶ್ರೀಮಂತರೂ, ಮಧ್ಯಮ ತರಗತಿಯವರೂ ಇದ್ದೇ ಇರುವರು. ಆದರೆ ಅಧೀನ ಜನಾಂಗವಾದ ನಮಗೆ ಆಶ್ಚರ್ಯವಾಗುವುದೇನೆಂದರೆ—ಈಗ ಇಂಗ್ಲೆಂಡಿನಲ್ಲಿ ಪ್ರತ್ಯೇಕ ವ್ಯಕ್ತಿತೆ (individuality) ಇರುವ ರಾಜಕೀಯ ಪಕ್ಷಗಳು ಬೇರೆ ಬೇರೆ ಇರುವುವೇ? ಎಲ್ಲರಿಗೂ ನಿರುದ್ಯೋಗತೆಯನ್ನು ನಿವಾರಿಸಬೇಕೆಂಬ ಧೋರಣವಿದೆ, (ಇದು ಮಜೂರರಿಗಾಗಿ); ಎಲ್ಲರಿಗೂ ವ್ಯಾಪಾರವನ್ನು ಅಭಿವೃದ್ಧಿಪಡಿಸಬೇಕೆಂಬ ಧೋರಣವಿದೆ (ಇದು ಶ್ರೀಮಂತರಿಗಾಗಿ); ಎಲ್ಲರಿಗೂ ಸಾಮ್ರಾಜ್ಯದ ಮೇಲಿನ ತಮ್ಮ ಹಿಡಿತವನ್ನು ಮತ್ತೂ ಬಲಪಡಿಸಬೇಕೆಂಬ ಧೋರಣವಿದೆ (ಇದು ಎಲ್ಲರಿಗಾಗಿ). ಅಂದ ಮೇಲೆ ಈ ಪ್ರತ್ಯೇಕ ಪಕ್ಷಗಳ ಅಸ್ತಿತ್ವಕ್ಕೆ ಕಾರಣವೇ ತೋರುವದಿಲ್ಲ. ಒಂದು ಸಮಯದಲ್ಲಿ ಮಜೂರ ಪಕ್ಷವು ಸಮಾನತೆ ಸ್ವಾತಂತ್ರ್ಯ ಮುಂತಾದ ಆದರ್ಶಗಳ ಪ್ರಸರಣಕ್ಕಾಗಿ ಮುಂದಾಗಿದ್ದಿತು. ಆದರೆ ಆ ಉದಾರ ಭಾವನೆಯು ಈಗ ಕನ್ಸರ್ವೆಟಿವರಲ್ಲಿಷ್ಟಿದೆಯೊ ಅದಕ್ಕಿಂತ ಒಂದಿಷ್ಟು ಕಡಿಮೆಯಾಗಿಯೇ ಮಜೂರ ಪಕ್ಷದೊಳಗಿರುತ್ತದೆ. ಹಾಗೆಂದು ಕನ್ಸರ್ವೆಟಿವರಲ್ಲಿ ಕೆಂಚಿತ್ತಾದರೂ ಆ ಭಾವನೆಯಿದೆಯೆಂದು ನಾವು ಹೇಳುವದಲ್ಲ. ನಿಜವಾಗಿ ನೋಡಿದರೆ ಎಲ್ಲ ಪಕ್ಷಗಳಿಗೂ ಅಧೀನ ಜನಾಂಗಗಳನ್ನು ದುಡಿಸಿ ತಮ್ಮ ಜನಾಂಗವನ್ನು ದೊಡ್ಡದಾಗಿ ಮಾಡಬೇಕೆಂಬ ಲವಲವಿಕೆಯು ಹೆಚ್ಚು. ಇಂಗ್ಲೆಂಡಿನ ಜನತೆಯೊಳಗೆ ಅಂತಹ ಔದಾರ್ಯಕ್ಕೆ ಸ್ಥಾನವಿಲ್ಲವೆಂದು ಮಜೂರಪಕ್ಷದ ಹಿಂದಿನ

ನೋಟಗಳು.

NOTE...S.

ಅಫಘಾನಿಸ್ಥಾನದ ಯುದ್ಧ:—ಅಮಾನುಲ್ಲರು ಮುಂದರಿಸಿದ ಹಾಗೆ ಹಿಂದಕ್ಕೆ ಬಂದರು. ಕಾರಣ ತಿಳಿಯುವ ಹಾಗೆ ಇಲ್ಲ.

• • • •

ಅಮಾನುಲ್ಲರು ಹಿಂದಕ್ಕೆ ತೆರಳಿದರು ಎಂದು ಪೂರ್ಣ ವರ್ತಮಾನ ಸಿಕ್ಕುವಷ್ಟರೊಳಗೆ ಬಂದೇ ಬಿಟ್ಟರು ಮುಂಬಾಯಿಗೆ, ಈ ಅಫಘಾನಿ ಯುದ್ಧ, ಬೇರೆ ಎರಡರೊಳಗೆ.

• • •

ತನಗೋಸ್ಕರ ರಕ್ತಪಾತ ಬೇಡವೆಂದು ಅಮಾನುಲ್ಲರು ಹಿಂದಕ್ಕೆ ಬಂದರು. ಮುಂದಕ್ಕೆ ಪ್ರಯಾಣ ಇಟಲಿಗೆ. ಸರಿಯಾದ ದಿನ ಗೊತ್ತುಮಾಡಲಿಲ್ಲ. ಬಾಕಿ ಸಂಗತಿ ಮುಂದಿನಿಂದ.

• • •

ಮುಂಬಾಯಿಯಲ್ಲಿ ಒಬ್ಬ ಹದಿನೆಂಟು ವರುಷ ಪ್ರಾಯದ ನರ್ಸಿಗೆ ಒಂದು ದಿವಸದ ಶಿಕ್ಷೆ, ೪೫೦ ರೂಪಾಯಿ ಜುರುಮಾನೆ. ಕಾರಣ ತನ್ನ ಮೋಟಾರಿನ ಅಡಿಯಲ್ಲಿ ದಾರಿಯಲ್ಲಿ ಹೋಗುವ ಇನ್ನೊಬ್ಬ ಹೆಂಗಸನ್ನು ಕೊಂದದಕ್ಕೆ. ಒಳ್ಳೇ ಅನುಕೂಲ ಶಿಕ್ಷೆ.

• • •

ಕಲಕತ್ತೆಯ ಒಬ್ಬ ಯೌವನ ಡಾಕ್ಟರರಿಗೆ ಜೈಲು ಪ್ರಾಪ್ತಿ. ಕಾರಣ ಔಷಧಿಗೆ ಬಂದ ಯೌವನ ಹುಡುಗಿಗೆ ಹೊಟ್ಟೆ ಪರೀಕ್ಷೆಮಾಡಿ ಅವಮಾನ ಪಡಿಸಿದುದಕ್ಕೆ.

• • • •

ಅವಮಾನ ಪಡಿಸಿದುದರ ವಿಷಯ ಕೆಳಕೋರ್ಟಿನವರು ಯೌವನ ಡಾಕ್ಟರರು ಶಿಕ್ಷೆಗೆ ಗುರಿಮಾಡಿದರೆ ಜನ್ಮ ವ್ಯರ್ಥವೆಂದು ಭಾವಿಸಿ ಡಾಕ್ಟರರಿಗೆ ಬಿಡುಗಡೆ ಮಾಡಿದರು. ಅಪೀಲು ಕೋರ್ಟಿನಲ್ಲಿ ಕೆಳ ಕೋರ್ಟಿನ ಅಭಿಪ್ರಾಯ ವಿರೋಧವಾಗಿ ಆರು ತಿಂಗಳುಗಳ ಸಜೆ.

• • •

ಬಂಗಾಳದಲ್ಲಿ ಅತ್ತೆ ಸೊಸೆಯರ ಜಗಳ ಜೋರು, ಜಗಳ ಜೋರಾಗಿ ಸೊಸೆಯರು ಪ್ರಾಣ ತ್ಯಾಗ ಮಾಡುವರು. ಇತ್ತಲಾಗೆ ಅತ್ತೆ ಸೊಸೆಯವರ ಜಗಳ ವಾರಕ್ಕೆ ಮೂರು ನಾಲ್ಕರಂತೆ ನಡಿಯುತ್ತಿವೆ. ಕೆಲವು ಕೋರ್ಟಿಗೆ ದಾಖಲು.

• • • •

ಮೈಸೂರಿನ ಕಾವೇರಿ ನೀರಿನ ಫಲಾಪೆ ಊಟಿಯಲ್ಲಿ ಇದೆ. ಮೊದಲನೆ ಅಂಕ ಪ್ರೆಸ್ಸಿನವರಿಗೆ ಪ್ರಕಟಣೆ ಬಗ್ಗೆ ಯಾವದೊಂದು ಕೊಡಬಾರದಾಗಿ; ಎರಡನೆ ಅಂಕ ಪ್ರೆಸ್ಸಿನವರಿಗೆ ಸಭೆ ಸೇರಿದಲ್ಲಿ ಒಳ ಬಿಡಬಾರದಾಗಿ; ಮೂರನೆ ಅಂಕ ಕೆಲವಟ್ಟಿಗೆ ಒಳಬಿಟ್ಟು ಕೆಲವಟ್ಟಿನ ಸಂಗತಿಗಳನ್ನು ಪ್ರಕಟಿಸಬಹುದಾಗಿ ನಿರ್ಣಯ. ಅಂತೂ ಸಂಗತಿಗಳು ಅಂಕಗಳಲ್ಲಿದ್ದಾವೆ.

• • • •

ಕೂಡಿದ ಸಭೆಯ ಕಾರ್ಯ ನಿರ್ವಹಿಸುವದು ಇನ್ನೂ ಮುಂದೆ ಬರಲಿಲ್ಲ. ಈಗ ಇನ್ನೊಂದು, ಇನ್ನಿಬ್ಬರು ಮೆಂಬರರನ್ನು ಸೇರಿಸಿಕೊಳ್ಳುವದು. ಅಂತೂ ಒತ್ತೆಯ ದೀಲು ಎಂದು ತಡೆಯುವರಿಗೂ ಅಣೆ ಕಟ್ಟಿನ ಖರ್ಚಿನ ಅರ್ಧ ಬಿದ್ದರಾಯಿತು.

• • • •

ಮೈಸೂರಿಗೆ ಬಂತು ಹಬ್ಬದ ದಿವಸಗಳು. ಮೈಸೂರಾಯರ ಸವಾರಿ ನವಂಬರದಲ್ಲಿ ಮೈಸೂರಿಗೆ ಅತ್ತಕಡೆ ಚಿತ್ತಯಿಸು ತ್ತಾರಂತೆ.

• • • •

ಪಂಜಾಬಿನಲ್ಲಿ ವಿದ್ಯಾರ್ಥಿಗಳ ಮೇಲೆ ಹೊಸ ಕಾನೂನು. ಹದಿನೆಂಟು ವರುಷದೊಳಗೆ ಮದುವೆಯಾದ ಹುಡುಗರಿಗೆ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕೂತುಕೊಳ್ಳಲು ಬಿಡಬಾರದಾಗಿ ಪಂಜಾಬಿನ ಯುನಿವರ್ಸಿಟಿಯವರ ಸೂಚನೆ.

• • •

ಸ್ಕೂಲು ಫೈನಲ್ ಪರೀಕ್ಷೆ ಮೊದಲನೆ ಸರಕಾರಿ ಪರೀಕ್ಷೆಯಾದುದರಿಂದ ವಿದ್ಯಾರ್ಥಿಗಳಿಗೆ ಮದುವೆಯಾದಲ್ಲಿ ಫೈಲ್ ಆಗುವ ಸಂಖ್ಯೆ ಹೆಚ್ಚು ಕಂಡುಬಂದು, ಯುನಿವರ್ಸಿಟಿಯವರಿಗೆ ಈ ಹೊಸ ಆಲೋಚನೆ ಕಂಡಿರಬಹುದು.

ಧುರೀಣರ ಅನುಭವದಿಂದ ಈಗಿನ ಧುರೀಣರು ತಿಳಿದಿರುವರು. ಈ ದಿನ ಬ್ರಿಟಿಷ ಚುನಾವಣೆಯು ನಡೆಯುವುದು. ಆದರೆ ಹಿಂದೂಸ್ಥಾನವು ಅದರ ಫಲಕ್ಕಾಗಿ ಕಾತರವಿರುವುದಿಲ್ಲ.

ಶಾಲಿವಾಹನ ಶಕ ೧೮೫೧ನೆಯ ವಿಭವಸಂವತ್ಸರದ ವೈಶಾಖ ಬ. ೮ ಶನಿವಾರದಿಂದ ವಿಭವ ಸಂವತ್ಸರದ ವೈಶಾಖ ಬ. ೧೫ ಶುಕ್ರವಾರದ ವರೆಗಿನ ಪಂಚಾಂಗ.

(ಗ್ರಹಣೆಯ ವೃಷಭ (ರೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉ.	ಅಸ್ತ
1	ಶನಿ	೮	೧.೩೨	ಪೂ. ಭಾ.	೪೭.೩೨	೧೯	6. 5	6 52
2	ರವಿ	೯	೯೧.೧೭	ಉ. ಭಾ.	೪೫. ೦	೨೦	6 5	6 52
3	ಸೋಮ	೧೧	೫೬.೧೪	ರೇವತೀ	೪೭. ೨	೨೧	6. 5	6.53
4	ಕುಜ	೧೨	೫೨.೦೩	ಅಶ್ವಿನೀ	೪೫. ೧	೨೨	6 6	6.53
5	ಬುಧ	೧೩	೪೭.೩೨	ಭರಣೀ	೪೨.೩೦	೨೩	6 5	6.53
6	ಗುರು	೧೪	೪೨.೧೭	ಕೃತ್ತಿಕಾ	೩೯.೧೭	೨೪	6. 5	6 53
7	ಶುಕ್ರ	●	೩೭.೩೨	ರೋಹಿಣೀ	೩೫.೩೧	೨೫	6. 5	6.54

· ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು)		Rainfall. ಮಳೆ	
	Maximum ಅಧಿಕಾಂಶ	Minimum ಅಲ್ಪಾಂಶ	ದಿನದ ಮಳೆ	ಒಟ್ಟು ಮಳೆ.
17	92— 3	79— 8	—	—
18	92— 8	79— 9	—	—
19	93— 1	79— 3	—	—
20	92— 8	80— 6	—	0—02
21	89— 0	77— 6	—	—
22	92— 1	78— 1	—	—
23	91— 8	77— 9	—	—

ಮಂಗಳೂರಿನ ಪೇಟೆ ಧಾರಣೆ.

ದೇನಸು		ಇಂದ ರೂ. ಆ.	ವರೆಗೆ ರೂ. ಆ.
ಮುಸ್ಕಿ	...	6 — 14	7 — 6
ಗೂಡ್ಲು	...	6 — 4	6 — 10
ರಾಶಿ	...	5 — 9	5 — 14
ಊರ ಅಸ್ನರ್ ಬೆಳ್ತಿಗೆ	...	7 — 0	7 — 8
ಸುಗ್ಗಿ	...	5 — 12	6 — 5
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	...	12 — 0	12 — 3
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	...	6 — 4	6 — 9
ಗೋದಿ ಗೋಣಿ ಗಳ್ಳೆ	...	16 — 12	20 — 0
ಹುರುಳಿ ಗೋಣಿ ಗಳ್ಳೆ	...	7 — 6	9 — 8
ಕಡಲೆ ಗೋಣಿ ಗಳ್ಳೆ	...	15 — 8	16 — 8
ತೊಗರಿ ಗೋಣಿ ಗಳ್ಳೆ	...	14 — 8	5 — 8
ತೊಗರಿಬೇಳೆ ಗೋಣಿ ಗಳ್ಳೆ	...	18 — 8	27 — 0
ಉದ್ದು ಗೋಣಿ ಗಳ್ಳೆ	...	15 — 0	16 — 0
ಹೆಸರು ಗೋಣಿ ಗಳ್ಳೆ	...	14 — 8	16 — 0
ಊರು ಬೆಲ್ಲ ಖಂಡಿ ಗಳ್ಳೆ	...	60 — 0	65 — 8
ಉಪ್ಪು ಗೋಣಿ ಗಳ್ಳೆ	...	4 — 6	4 — 14
ಬೊಬ್ರಿ ಖಂಡಿ ಗಳ್ಳೆ	...	95 — 0	90 —
ತೊಬ್ರಿ ಹಿಂಡಿ ಖಂಡಿ ಗಳ್ಳೆ	...	32 — 0	33 — 8
ಎಳ್ಳಿಂಡಿ ಖಂಡಿ ಗಳ್ಳೆ	...	42 — 8	—
ತೊಬ್ರಿ ಎಣ್ಣೆ ಮುಡಿ ಗಳ್ಳೆ	...	6 — 10	8 — 0
ಎಳ್ಳೆಣ್ಣೆ ಮುಡಿ ಗಳ್ಳೆ	...	7 — 12	8 — 4
ಬಿದಿರೆಣ್ಣೆ ಬಟ್ಟಿಗೆ ಗಳ್ಳೆ	...	7 — 12	8 — 4
ಮೋರಿಸ ಸಕ್ಕರೆ ಮುಡಿ ಗಳ್ಳೆ	...	3 — 10	3 — 11
ಹೊಸ ಮೆಣಸು	...	5 — 4	6 — 8
ಸಾಸಿವೆ ಮುಡಿ ಗಳ್ಳೆ	...	8 — 8	—
ಕೊತ್ತುಂಬರಿ ಮುಡಿ ಗಳ್ಳೆ	...	3 — 12	4 — 0
ನೇಟಿವ್ ಕಾಫಿ ಖಂಡಿ ಗಳ್ಳೆ	...	355 — 0	365 — 0
ಅಳಗೋಟು ಅಡಿಕೆ ಖಂಡಿ ಗಳ್ಳೆ	...	100 — 0	—
ಕಾಳುಮೆಣಸು ಖಂಡಿ ಗಳ್ಳೆ	...	420 — 0	425 — 0
ಯೇಲಕ್ಕಿ ಮುಡಿ ಗಳ್ಳೆ	...	50 — 0	56 —
ಗೇರುಬೀಜ ಮುಡಿ ಗಳ್ಳೆ	...	3 — 6	3 — 8
ಶಕ್ಕರ ಖಂಡಿ ಗಳ್ಳೆ	...	44 — 0	45 — 8
ತಾಂಬ್ರ ತಗಡು ಮುಡಿ ಗಳ್ಳೆ	...	18 — 0	18 — 12
ತಾಂಬ್ರ ಪಾತ್ರೆಗಳು ಮುಡಿ ಗಳ್ಳೆ	...	23 — 0	24 — 0
ಹಿತ್ತಾಳೆ ಸರು ಗಳ್ಳೆ	...	16 — 4	—
ಹಿತ್ತಾಳೆ ತಗಡು ಮುಡಿ ಗಳ್ಳೆ	...	17 — 0	17 — 8
ಸವಸು ಗಳ್ಳೆ	...	13—8—6	—
ಹುಣಸೆಹುಳಿ ಖಂಡಿ ಗಳ್ಳೆ	...	30 — 0	37 — 8

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸು ತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರ್ರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯುಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ
ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಕಂದುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಭಿಷಗ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು :—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಟವನ್ ಹಾಲಿನ ಹತ್ತಿರ.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಉಂಬೋಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯುರ್ವೇದ ಸಾರಸಂಗ್ರಹರೂಪವಾಗಿರುವ ೨ ಭಾಷೆಗಳಲ್ಲಿ ಛಾಪಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಧ್ಯಾನಯಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧಗಳನನುಸಾರವಾಗಿ ನಡೆಯುವದೇ ದಾರಿ, ಹಾಗಿಲ್ಲದಿದ್ದರೆ ಅದರಲ್ಲಿ ಹೇಳುವ ಉಪಾಯವನ್ನು ಮಾಡುವದು ಮತ್ತೊಂದೇ ದಾರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಜೈನಾ ಬಜಾರು, ಮದ್ರಾಸು

ಉಚಿತ! ಉಚಿತ!!

372 ಪುಟಗಳುಳ್ಳ ಸುಂದರವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ ನಮ್ಮ ಲೋಕಪ್ರಸಿದ್ಧವಾದ ಟಾನಿಕ್ಕೆಂಬುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು.
ಈ ಮಾತ್ರೆಗಳು ಮಲಬಂಧ ಮೊದಲು ನಪುಂಸಕತ್ವದವರೆಗಿನ ವ್ಯಾಧಿಗಳನ್ನು ಪರಿಹರಿಸುತ್ತವೆ.
ಡಿ. ಗುಲಾಬ್ ಮಾರ್ಟ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1923ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1860ನೇ ಇಸವಿಯ XXIನೇ ಆಕ್ಟಿನ ಮೂಲಕ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಶುದ್ಧ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ "ಫಾರ್ಮಸಿ"ಯಲ್ಲಿ ಶಾಸ್ತ್ರೋಕ್ತ ತಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟವಾಗಿ ಹುಟ್ಟುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತವೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ನಡೆದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯ್ಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ ನಮ್ಮಲ್ಲಿ ತಯ್ಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

ವಿಷಯ ಸೂಚಿ.

ಅಗ್ರಲೇಖ,
ಮಂಗಳೂರಿಗೊಂದು ಔದ್ಯೋಗಿಕ ಶಾಲೆ ... [illegible]
[illegible] ... [illegible]
[illegible] ... [illegible]
[illegible] ... [illegible]
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ ... ೩-೪
ಜಿಲ್ಲಾ ವಿಷಯ—ಮಂಗಳೂರು, ಬಂಟವಾಳ, ಅಜೆಕಾರು,
ಹೊಸದುರ್ಗ, ಕೊಂಬಾರು, ಥರಂಗಿಪೇಟೆ, ಬೆಳ್ತಂಗಡಿ, ... ೬-೯
ವಿವಿಧ ಸಮಾಚಾರಗಳು ... ೯
ವ್ಯಾಪಾರದ ಪತ್ರ ... ೧೨
ಹಾಸ್ಯಲಹರಿ ... ೧೩
ಪಂಜಾಬಿನ ಕೈಗಾರಿಕೆ ಅಭಿವೃದ್ಧಿ ... ೨
ಅಫಘಾನದ ಸಮಾಚಾರ ... [illegible]

ಸ್ವದೇಶಾಭಿಮಾನಿ.

ತಾರೀಕು ೩೧ನೇ ಶುಕ್ರವಾರ ಮೇ ೧೯೨೯.

ಮಂಗಳೂರಿಗೊಂದು ಔದ್ಯೋಗಿಕ ಶಾಲೆ.

ನಮ್ಮ ಜಿಲ್ಲೆಯ ಅಭಿವೃದ್ಧಿ ಶಾಖೆಯ ಪ್ರಯತ್ನಗಳ ಫಲವಾಗಿ ಮಂಗಳೂರಿನಲ್ಲಿಯೂ ಒಂದು ಔದ್ಯೋಗಿಕ ಶಾಲೆಯು [illegible] ತೆರೆಯಲ್ಪಡುವುದೆಂಬುದು ಸಂತೋಷಕರವಾಗಿದೆ. ಈ ವರೆಗೆ ನಮ್ಮ ಜಿಲ್ಲೆಯ ಜನರಿಗೆ ಪ್ರಾಥಮಿಕ ಶಾಲೆಗಳಿಗಾಗಿಯೂ, ಹೈ ಸ್ಕೂಲುಗಳಿಗಾಗಿಯೂ, ಕಾಲೇಜುಗಳಿಗಾಗಿಯೂ ಚಳವಳಿಸಿಯೇ ಗೊತ್ತು. ಔದ್ಯೋಗಿಕ ಶಾಲೆಯು ಜಿಲ್ಲೆಯ ನಾಗರಿಕ ಜೀವನಕ್ರಮದ ನಿರ್ಮಾಣದಲ್ಲಿ ಮತ್ತೂ ಮುಖ್ಯವಾದುದೆಂಬುದು ಹೆಚ್ಚಿನವರಿಗೆ ತಿಳಿದಿಲ್ಲ. ಅಲ್ಲದೆ ಅಂತಹ ಶಾಲೆಗಾಗಿ ಸಾರ್ವಜನಿಕ ಚಳವಳವೂ ಹೆಚ್ಚು ಪ್ರಬಲವಿರಲಿಲ್ಲ. ಆದರೂ ನಮ್ಮ ಜಿಲ್ಲೆಗೆ ಇಂತಹದೊಂದು ಶಾಲೆಯು ಲಭಿಸುವದಕ್ಕಾಗಿ, ಅದನ್ನು ಸಾಧ್ಯವಾಗಿ ಮಾಡಿದವರೆಲ್ಲರಿಗೂ ನಾವು ಕೃತಜ್ಞರಾಗಬೇಕಾಗಿದೆ. ಶಾಲೆಯು ಸದ್ಯದಲ್ಲಿಯೇ ತೆರೆಯಲ್ಪಡುವುದೆಂದೂ, ಮಾಜಿ ಬಾಸೆಲ್ ಮಿಶನಿನ ಬುಕ್ ಡಿಪೋವಿನ ಸ್ಥಳವು ಇದಕ್ಕಾಗಿ ಗೊತ್ತುಮಾಡಲ್ಪಟ್ಟಿದೆಂದೂ, ನಾವು ತಿಳಿಯುತ್ತೇವೆ.

ಔದ್ಯೋಗಿಕ ಶಾಲೆಯು ಬಹಳ ಮುಖ್ಯವಾಗಿದ್ದುದರಿಂದಲೇ ನಮ್ಮ ಜಿಲ್ಲೆಯ ಜನರ ಲಕ್ಷ್ಯವನ್ನು ನಾವಿಲ್ಲಿ ಎಳೆಯುವೆವು. ಈಗಿನದು, ವಿಜ್ಞಾನದ ನೂತನ ನೂತನ ವಿಕಾಸಗಳಿಂದ ಪರಿಪುಷ್ಟವಾಗಿ ಬೆಳೆಯುತ್ತಿರುವ ಔದ್ಯೋಗಿಕ ಯುಗವಾಗಿರುತ್ತದೆ. ಹಿಂದೂಸ್ಥಾನವು ಈಗಿನ ಔದ್ಯೋಗಿಕ ಪ್ರಪಂಚದಿಂದ ಶತಮಾನ ಹಿಂದುಳಿದಿದೆ. ಇದನ್ನು ತಿಳಿದು ನಮ್ಮ ಯುವಕರಲ್ಲಿ ಔದ್ಯೋಗಿಕ ಜೀವನದ ಅಭಿರುಚಿಯನ್ನು ಉಂಟುಮಾಡಬೇಕಾಗಿದೆ. ಕಲಾಂತರದಿಂದ ಥಂಗಾರದ ವೃತ್ತಿಯಿಂದ ಜೀವಿಸುತ್ತಿದ್ದ ಅಕ್ಕಸಾಲಿಗನ ಮಗನು ಒಂದು ಸ್ಕೂಲ್ ಫೈನಲ್ ಕಲಿತನೆಂದರೆ ಅವನಿಗೆ ಗುಮಾಸ್ತಗಿರಿಯೇ ಗತಿ; ಕಛೇರಿಯ ಕೆಲಸವನ್ನಲ್ಲದೆ ಬೇರಾವ ವೃತ್ತಿಯನ್ನೂ ತಿಳಿಯದ ಆಚಾರಿಯ ಮಗನು ಪ್ರಾಥಮಿಕ ಶಾಲೆಯನ್ನು ಕಲಿತು ಮುಗಿಸಿದನೆಂದರೆ ಮತ್ತೆ ಹೋಗುವದು ಮಾಸ್ತರಿಕೆಗೆ; ವ್ಯಾಪಾರ ವೃತ್ತಿಯಿಂದ ಲಕ್ಷಾಧೀಶರಾಗಿ ಬೆಳೆದ ಶ್ರೀಮಂತರ ಮಗನೂ ಕಾಲೇಜಿಗೆ ಕಾಲಿಟ್ಟನೆಂದರೆ ಮತ್ತೆ ನೋಡುವದು ವಕೀಲಿಕೆಯ ವೃತ್ತಿಯನ್ನು. ಮುಖ್ಯತಃ ಈಗಿನ ಶಾಲಾ ಕಾಲೇಜುಗಳು ಔದ್ಯೋಗಿಕ ಜೀವನ ಸಂಸ್ಪರ್ಶವಿಲ್ಲದೆ, ಹಿಂದೂಸ್ಥಾನದೊಳಗಿದ್ದ ಕೆಂಪಿಕ್ ಕೈಗಾರಿಕೆ ವೃತ್ತಿಗಳನ್ನು ನಾಶಮಾಡಿ ಬಿಡುತ್ತಿವೆ. ಆದುದರಿಂದ ಈ ವಿದ್ಯಾಭ್ಯಾಸದಿಂದುಂಟಾದ ದುಷ್ಪರಿಣಾಮಗಳನ್ನು ಪರಿಹರಿಸಲಿಕ್ಕೆ ಇಂತಹ ಔದ್ಯೋಗಿಕ ಶಾಲೆಗಳು ಅತೀ ಅಗತ್ಯವಿದ್ದವುಗಳಾಗಿವೆಯೆಂಬುದು ನಿರ್ವಿವಾದವಾಗಿದೆ.

ಆದರೆ ಔದ್ಯೋಗಿಕ ಶಾಲೆಯ ರಚನೆಯು ಅದ ಮಾತ್ರದಿಂದ ತೀರಲಿಲ್ಲ. ಹಲವು ಸರಕಾರಿಯೋ ಬಿನ್ ಸರಕಾರಿಯೋ ಆದ ಔದ್ಯೋಗಿಕ ಶಾಲೆಗಳೂ ಕಾಲೇಜುಗಳೂ ತೃಪ್ತಿಕರವಾಗಿ ನಡೆಯುವುದಿಲ್ಲ. ಆದುದರಿಂದ ಸಾರ್ವಜನಿಕ ಲಕ್ಷ್ಯವು [illegible] ವಿದ್ಯಾಭ್ಯಾಸವು ಯಾವ ರೀತಿಯಲ್ಲಿ ನಡೆಯುತ್ತಿದೆಯೆಂದು ತಿಳಿದು ವಿದ್ಯಾಭ್ಯಾಸವು ಉಚ್ಚ ತರಗತಿಯದಾಗುವಂತೆ ಸಾರ್ವಜನಿಕ ಅಭಿಪ್ರಾಯವು ಪ್ರಕಟಗೊಳ್ಳತಕ್ಕದ್ದು. ಅಲ್ಲದೆ ಜಿಲ್ಲೆಯ ಶ್ರೀಮಂತರೂ ಈ ಶಾಲೆಯ ಅಭಿವೃದ್ಧಿಯಲ್ಲಿ ಉತ್ಸಾಹಿತರಾಗಿ ನೂತನ ಉಪಕರಣಗಳ ಸಂಗ್ರಹದ ಬಗ್ಗೆಯೂ, ವೇತನಗಳ ಬಗ್ಗೆಯೂ, ಪುಸ್ತಕ ಭಂಡಾರದ ಬಗ್ಗೆಯೂ, ದ್ರವ್ಯಸಹಾಯವನ್ನು ಕೊಟ್ಟು ಶಾಲೆಯ ಉಪಯೋಗವನ್ನು ಹೆಚ್ಚಿಸಬಹುದು. ಯಾವ ದೇಶದಲ್ಲಿಯೂ ಪ್ರಜೆಗಳೊಳಗಿನ ದೇಶಪ್ರೇಮಿಯಾದ ಶ್ರೀಮಂತರ ಸಹಾಯವಿಲ್ಲದೆ ವಿದ್ಯಾಭ್ಯಾಸವು ಅಭಿವೃದ್ಧಿಹೊಂದಿಲ್ಲ. ಅದರಲ್ಲಿಯೂ ಪರದೇಶೀಯರ ಸರಕಾರವಿರುವ ಹಿಂದೂಸ್ಥಾನದಲ್ಲಿ ದೇಶೀಯರೇ ಉತ್ಸಾಹಿತರಾಗಿರದಿದ್ದರೆ ಸರಕಾರದ ಔದಾರ್ಯವು ಬಿಚ್ಚಲಾರದು. ಆದುದರಿಂದ ಔದ್ಯೋಗಿಕ ಶಾಲೆಗಳ ಅಭಿವೃದ್ಧಿಗಾಗಿ ಶ್ರೀಮಂತರು ಹೆಚ್ಚು ಆಸಕ್ತಿಯನ್ನು ತೋರಿಸಬೇಕಾಗಿ ಆಶಿಸುವೆವು.

ಈ ಶಾಲೆಯು ಯಾವ ವರ್ಗದ ಔದ್ಯೋಗಿಕ ವಿದ್ಯಾಭ್ಯಾಸವನ್ನು ಕೊಡಲು ಆರಂಭಿಸುವುದೆಂದು ತಿಳಿದಿಲ್ಲ. ಪ್ರಥಮತಃ ಅದು ಉಚ್ಚತರಗತಿಯ ವಿದ್ಯಾಭ್ಯಾಸವನ್ನು ಕೊಡಲಾರದು. ಆದರೆ ಜನರ ಸಹಕಾರದಿಂದಲೂ, ಶ್ರೀಮಂತರ ದಾನಶೂರತೆಯಿಂದಲೂ ಈ ಶಾಲೆಯು ನಮ್ಮ ಜಿಲ್ಲೆಯ ಕಾರ್ಯಜೀವನದಲ್ಲಿ ಅತ್ಯಂತ ಮುಖ್ಯವಾದ ಸಂಸ್ಥೆಯಾಗಲೆಂದು ನಾವು ಇಚ್ಛಿಸುತ್ತೇವೆ.

ವಿದೇಶ ವರ್ತಮಾನ.

—ಡ್ಯೂಕ್ ಓಫ್ ಗ್ಲೋಸೆಸ್ಟರ್ ಇವರು ಜಪಾನಿನಿಂದ ಹೊರಟು ಕೆನಡಾ ದೇಶಕ್ಕೆ ತೆರಳಿದರು. ಅವರನ್ನು ಸಂಭ್ರಮದಿಂದ ಜಪಾನಿನ ಪ್ರಜೆಗಳು ಬೀಳ್ಕೊಟ್ಟರು.

—ಲಿಥುವೇನಿಯದ ಪ್ರೈಮಮಿನಿಸ್ಟರನ್ನು ಕೊಲ್ಲಬೇಕೆಂದು ಪ್ರಯತ್ನಿಸಿದ ಪೋಲಿಯಸನೆಂಬ ವಿದ್ಯಾರ್ಥಿಯು ಸಿಕ್ಕಿಬಿದ್ದು, ಆತನಿಗೆ ಮರಣದ ಶಿಕ್ಷೆಯು ವಿಧಿಸಲ್ಪಟ್ಟಿರುತ್ತದೆ. ಈತನು ಗ್ರಬೆಲಸ್ ಎಂಬ ಇನ್ನೊಬ್ಬ ವಿದ್ಯಾರ್ಥಿಯ ಹೆಸರನ್ನು ಸೂಚಿಸಿರುವನು. ಈ ಎರಡನೆಯ ಹುಡುಗನು ಈ ಒಳಸಂಚಿನ ಮುಖ್ಯ ನಾಯಕನಾಗಿದ್ದನಂತೆ.

—ಲಂಡನಿನಲ್ಲಿರುವ ಬುದ್ಧ ಮತದವರು ವೈಶಾಖಮಾಸದ ಹಬ್ಬವನ್ನು ಎಂದಿನಂತೆ ಈ ವರುಷವೂ ಚೆನ್ನಾಗಿ ಆಚರಿಸಿದರು. ಆದು ಊರುಗಳಿಂದ ಪ್ರತಿನಿಧಿಗಳು ಬಂದಿದ್ದರು. ಬುದ್ಧನ ವಿಷಯ ಭಾಷಣಗಳಾದ ಮೇಲೆ, ಬುದ್ಧನನ್ನು ಹೊಗಳುವ ಹಾಡುಗಳು ಹಾಡಲ್ಪಟ್ಟವು. ಆಂಗ್ಲೇಯರೂ ಈ ಸಮಾರಂಭಕ್ಕೆ ಬಹು ಸಂಖ್ಯಾಕರಾಗಿ ಬಂದಿದ್ದರು.

—ಬ್ರಿಟಿಷರ ಒಂದು ವ್ಯಾಪಾರಿ ಮಿಶನು ದಕ್ಷಿಣ ಅಮೇರಿಕದ ಬ್ರೆಜಿಲ್ ಮತ್ತು ಆರ್ಜೆಂಟೈನ್ ದೇಶಗಳನ್ನು ಸಂದರ್ಶಿಸುವದು. ಔದ್ಯೋಗಿಕ, ವ್ಯಾಪಾರ, ಮತ್ತು ಆರ್ಥಿಕ ಸಂಬಂಧಗಳನ್ನು ಇವೆರಡು ದೇಶಗಳೊಳಗೆ ಈ ಮಿಶನು ಬೆಳೆಸುವುದು.

—ಮಾಸಿಕ ಪರೀಕ್ಷೆಗಳು ಗಟ್ಟಿಯಾದುವೆಂದು ಮೆಕ್ಸಿಕೊವಿನ ನೆಶನಲ್ ಯುನಿವರ್ಸಿಟಿಯ ವಿದ್ಯಾರ್ಥಿಗಳು ಗಲಭೆಯನ್ನುಂಟುಮಾಡಿ ೩೦ ವಿದ್ಯಾರ್ಥಿಗಳು ಜಖಮು ಹೊಂದಿದುದಲ್ಲದೆ ಒಬ್ಬ ವಿದ್ಯಾರ್ಥಿಯು ಸತ್ತುಹೋದನು. ಮೆಡಿಕಲ್ ಕೊಲೇಜಿನ ವಿದ್ಯಾರ್ಥಿಗಳೂ ಈ ಗಲಭೆಯಲ್ಲಿ ಸೇರಿದ್ದರು.

—ಜಪಾನಿನಲ್ಲಿ ಅತ್ಯಧಿಕವಾದ ಮಳೆ ಬಂದುದರ ದೆಸೆಯಿಂದ ಐದು ಸಾವಿರ ಮನೆಗಳು ಹಾಳಾಗಿರುವವು. ೩೮ ಸೇತುವೆಗಳು ಮುರಿದು ಹೋಗಿರುವವು. ಹದಿನೆಂಟು ಮಂದಿ ಮನುಷ್ಯರು ಸತ್ತುಹೋಗಿರುವರು.

—ಕೆಲವು ದಿವಸಗಳ ಹಿಂದೆ ಇಂಗ್ಲಾಂಡಿನ ಆಗ್ನೇಯ ಭಾಗದಲ್ಲಿ ಬಿದ್ದ ಸೆಕೆಯು ಕಳೆದ ೨೪ ವರುಷಗಳಿಂದ ಬಿದ್ದಿರಲಿಲ್ಲವಂತೆ.

—ಲಂಡನಿನ ಸ್ಕಾಲ್ ಥಿಯೇಟರಿನಲ್ಲಿ ಪ್ರತಿ ಶನಿವಾರ ದಿನ ಬೆಳಿಗ್ಗೆ ವಿದ್ಯಾಶಿಕ್ಷಣೆಯ ಸಲುವಾಗಿ ಫಿಲ್ಮು ಪ್ರದರ್ಶನವಾಗುತ್ತಿದೆ. ಇನ್ನು ಮುಂದೆ ಶಾಲೆಗಳಲ್ಲಿ ಬಾಯಿಯಿಂದ ಭಾಷಣ ಕೊಡುವ ಬದಲು ಸಿನಿಮಾ ಫಿಲ್ಮುಗಳನ್ನು ಉಪಯೋಗಿಸಬಹುದೆಂದು ವಿದ್ಯಾಮಂತ್ರಿಗಳು ಆಲೋಚಿಸುತ್ತಿರುವರು. ಭೂಗೋಳ, ಚರಿತ್ರೆ, ಮೊದಲಾದ ಶಿಕ್ಷಣಗಳಿಗೆ ಫಿಲ್ಮುಗಳ ಸಹಾಯವನ್ನು ಹೆಚ್ಚಿಸುವರು.

—ಜೂನ್ ೧೩ನೇ ತಾರೀಕಿನ ದಿನ ಅರಸರು ಗುಣಹೊಂದಿದುದರ ಸಲುವಾಗಿ ಕೃತಜ್ಞತೆಯನ್ನು ಸಮರ್ಪಿಸುವ ಸಮಾರಂಭವು ವೆಸ್ಟ್ ಮಿನಿಸ್ಟರಿನಲ್ಲಿ ಜರಗಿಸಲ್ಪಡುವದು. ಇದಕ್ಕೆ ಅರಸರು ಸ್ವತಹಾ ಬರಲಿರುವರು. ಅಂದಿನ ದಿನ ಎಲ್ಲ ಕಡೆಯ ಜನರು ಬೇರೆ ಬೇರೆ ಕಡೆಗಳಲ್ಲಿ ಕೃತಜ್ಞತಾ ವಂದನೆಗಳನ್ನು ಅರ್ಪಿಸಬೇಕೆಂದು ಬಕ್ಕಿಂಗ್‌ಹಾಮ್ ಅರಮನೆಯಿಂದ ಒಂದು ಪ್ರಕಟನೆಯು ಹೊರಡಿಸಲ್ಪಟ್ಟಿರುತ್ತದೆ.

—ಅರಸಿಯಾದ ಮೇರಿಯವರ ೬೨ನೇ ಜನ್ಮದಿನವು ಕಳೆದ ಸೋಮವಾರ ಆಚರಿಸಲ್ಪಟ್ಟಿತು. ಮೇರಿ ರಾಣಿಯವರ ಕುಟುಂಬದವರೆಲ್ಲರೂ ಈ ಸಮಾರಂಭದಲ್ಲಿ ಭಾಗಿಗಳಾಗಿದ್ದರು.

—ಗಣಿ ಕೆಲಸಗಾರರ ಸಹಾಯಾರ್ಥವಾಗಿ ನಿರ್ಮಿಸೋಣಾದ ನಿಧಿಯಲ್ಲಿ ಒಟ್ಟು ೧,೬೩೪,೦೦೦ ಪವನುಗಳು ಜಮೆಯಾಗಿರುತ್ತವೆ. ಇದರಲ್ಲಿ ಹಂಚಲ್ಪಟ್ಟ ಹಣವು ೮೧೧,೦೦೦ ಪವನುಗಳು.

—ಟರ್ಕಿ ರಿಪಬ್ಲಿಕನರು ತಮ್ಮ ಸ್ವಾತಂತ್ರ್ಯದ ದಿನದ ಆರನೇ ವಾರ್ಷಿಕೋತ್ಸವವನ್ನು ಜರಗಿಸಿದರು. ಈ ಸಂದರ್ಭದಲ್ಲಿ ಟರ್ಕಿ ಸರಕಾರದವರು ಹತ್ತುಸಾವಿರ ಮಂದಿ ಕೈದಿಗಳಿಗೆ ಅವರ ಪೂರ್ವ ದುಷ್ಕರ್ಮಗಳ ಬಗ್ಗೆ ಕ್ಷಮೆಯನ್ನು ಕೊಟ್ಟು ಬಿಡುಗಡೆಮಾಡಿದರು.

—[illegible] ವಿಮಾನವು ಹೆಚ್ಚು ದೂರ [illegible] ವಾಯು ಮಂಡಲದಲ್ಲಿಯೇ [illegible]. "[illegible]" ಎಂಬ ಹೆಸರಿನ ವಿಮಾನವು ಈ ವರೆಗೂ ೧೫೦ ತಾಸುಗಳ ವರೆಗೆ ವಾಯುಮಂಡಲದಲ್ಲಿಯೇ ಹಾರಿತ್ತು. ಆದರೆ ಇತ್ತೀಚೆಗೆ "[illegible]" ಎಂಬ ಹೆಸರಿನ ಬೇರೊಂದು ವಿಮಾನವು ೧೬೫ ತಾಸಿನ ವರೆಗೆ ವಾಯು ಮಂಡಲದಲ್ಲಿಯೇ ಹಾರಿ ಹೆಸರು ಪಡೆದಿರುತ್ತದೆ.

—ಇಂಗ್ಲಾಂಡಿನಲ್ಲಿ ಹೊಸ ರೀತಿಯ ಒಂದು ನೈಗೆ ಯಂತ್ರವು ತಯಾರಾಗಿರುತ್ತದೆ. ಈ ಯಂತ್ರವು ಒಂದೇ ಸಮಯದಲ್ಲಿ ಹಲವು ವಿಧದ ಬಟ್ಟೆಗಳನ್ನು ನೇಯುವುದು. ಇಂತಹ ಯಂತ್ರಗಳು ಇಂಗ್ಲಾಂಡಿನಲ್ಲಿ ಇನ್ನೂ ನೂರಾರು ಉಪಯೋಗಿಸಲ್ಪಡುವವಂತೆ.

—ಇಂಗ್ಲಾಂಡಿನಿಂದ ಹಿಂದೂಸ್ಥಾನಕ್ಕೆ ಬರುವಂತಹ ಟಪ್ಪಾಲಿನ ವಿಮಾನವು ಕಳೆದವಾರ ಬಸರದಲ್ಲಿ ಮರುಭೂಮಿಯನ್ನು ದಾಟುವಾಗ ಸ್ವಲ್ಪ ಕೆಡೆಯುಂಟಾಯಿತು. ಅಕಸ್ಮಾತ್ ವಿಮಾನವು ೪೦೦೦ ಅಡಿ ಕೆಳಕ್ಕೆ ಇಳಿಯಿತು. ವಿಮಾನವನ್ನು ನೀರಿನಲ್ಲಿಳಿಸುವ ತಯಾರಿ ಮಾಡುವಾಗ ವಿಮಾನದ ಇಂಜಿನು ಪುನಃ ಸರಿಯಾಗಿ ಅದು ಮೊದಲಿನಂತೆಯೇ ಹಾರತೊಡಗಿತು.

—ಬೊಸ್ಟನ್ ಪಟ್ಟಣದಲ್ಲಿ ಒಂದು ಪಂಗಡದವರು ಪ್ರಮುಖರಾದ ಗಂಡಸರನ್ನು ಹೆಂಗಸರನ್ನೂ ಕದ್ದುಕೊಂಡು ಹೋಗುತ್ತಿರುವರೆಂದು ವಾರ್ತೆಯುಂಟಾಗಿರುತ್ತದೆ. ಒಂದು ಕುಟುಂಬದ ಒಬ್ಬ ಹೆಂಗಸು ಕಳವು ಮಾಡಲ್ಪಟ್ಟಳು. ಕಳ್ಳರಿಂದ ಆ ಕುಟುಂಬದವರಿಗೆ "ನೀವು ನಮಗೆ ೫೦ ಸಾವಿರ ಡೊಲ್ಲರುಗಳನ್ನು ಸಮರ್ಪಿಸಬೇಕು. ಇಲ್ಲದಾದರೆ ನಿಮ್ಮ ಹೆಂಗಸನ್ನು ನಾವು ಕ್ರೂರವಾದ ಮರಣಕ್ಕೆ ಗುರಿಮಾಡುವೆವು." ಎಂದು ಪತ್ರವು ಬಂದಿತು.

—ಇಂಗ್ಲಾಂಡು ಮತ್ತು ವೇಲ್ಸಿನ ಜನ ಸಂಖ್ಯೆಯಲ್ಲಿ ಕಳೆದ ಮೂರು ತಿಂಗಳುಗಳಲ್ಲಿ ೪೪೦೦೦ ಕಡಿಮೆಯಾಗಿರುತ್ತದೆ. ಈ ಮೂರು ತಿಂಗಳುಗಳಲ್ಲಿ ಮದುವೆಯಾದುದು ಕಡಿಮೆ. ಜನನ ಸಂಖ್ಯೆ ಕಡಿಮೆ. ಮರಣಗಳು ಹೆಚ್ಚು. ಹೆಚ್ಚು ಮರಣಗಳಾಗಲು ಇನ್‌ಫ್ಲುಯೆಂಜಾ ರೋಗವೇ ಕಾರಣ. ಮೂರು ತಿಂಗಳಲ್ಲಿ ೨೦೪, ೫೯೩ ಮರಣಗಳಾದವು. ಜನ ಸಂಖ್ಯೆಯಲ್ಲಿ ಆದ ಇಳಿತವು ಒಟ್ಟಾರೆಯ ಮೇಲೆ ಶೇಕಡಾ ೪ ಅಂಶದಷ್ಟು ಆಗಿರುತ್ತದೆ. ಮೂರು ತಿಂಗಳಲ್ಲಾದ ಅನವಶ್ಯಕ ಮರಣಗಳು ೪೪, ೧೧೨ ಹೆಚ್ಚಾಗಿರುತ್ತದೆ.

—ಸ್ಕಾಟಲೇಂಡಿನಲ್ಲಿ ಅನ್ಯಾಯವಾದ ಮದುವೆಗಳು ನಡೆಯುತ್ತಿವೆಯಾದುದರಿಂದ ಆ ಕುರಿತು ವಿಚಾರಣೆಯನ್ನು ನಡೆಸಲು ಒಂದು ಕಮಿಶನನ್ನು ನೇಮಿಸಬೇಕೆಂದು ಸ್ಕಾಟಲೇಂಡ್ ಚರ್ಚಿನ ಜನರಲ್ ಎಸೆಂಬ್ಲಿಯಲ್ಲಿ ನಿರ್ಣಯವಾಗಿರುತ್ತದೆ.

—ಕಳೆದವಾರ ಕೈರೋದಿಗೆ ಹೋಗಿ ತಲಪಿದ ಹಿಂದೂಸ್ಥಾನದ ವಿಮಾನ ಟಪ್ಪಾಲಿನಲ್ಲಿ ಮೂವತ್ತು ಸಾವಿರ ಪತ್ರಗಳಿದ್ದವು. ನಿಶ್ಚಿತ ಸಮಯಕ್ಕಿಂತ ಮೂರು ನಿಮಿಷಗಳಿಗೆ ಅದು ತಡವಾಗಿ ತಲಪಿದ್ದಿತು. ಅದು ಹಾರಿದುದು ಐದು ಸಾವಿರ ಮೈಲುಗಳು.

—ಅಮೇರಿಕೆಯಲ್ಲಿ ಹಿಂದೂಗಳ ಸಂಖ್ಯೆಯು ತುಂಬ ಅಭಿವೃದ್ಧಿಯನ್ನು ಹೊಂದಿರುತ್ತದೆ. ಮುನ್ನೂರು ಸಾವಿರ ಡೊಲ್ಲರುಗಳಿಗೆ ಒಂದು ಕಟ್ಟಡವು ಕೊಂಡುಕೊಳ್ಳಲ್ಪಟ್ಟು, ವಂತಿಗೆಯು ಕೂಡಹಾಕಲ್ಪಡುತ್ತಿದೆ.

—ಹಿಂದೂಸ್ಥಾನದಲ್ಲಿ ಪ್ರಾರಂಭವಾದ ವಿದೇಶಿ ವಸ್ತ್ರ ಬಹಿಷ್ಕಾರ ಚಳವಳದ ದೆಸೆಯಿಂದ ಇಂಗ್ಲಾಂಡಿಗೆ ಬಹಳ ನಷ್ಟವು ಸಂಭವಿಸಿರುತ್ತದೆ. ಏಕೆಂದರೆ ಹಿಂದೀಯರು ಈಗ ಬ್ರಿಟಿಷರ ವಸ್ತ್ರಗಳನ್ನು ಕರಿಸುವದು ತೀರ ಕಡಿಮೆಯಾಗಿರುತ್ತದೆ. ಮೊದಲು ಹತ್ತಿಯನ್ನು ಕಟ್ಟು ಜವಳಿಯನ್ನು ಒಯ್ಯುತ್ತಿದ್ದ ಹಿಂದೂ ವ್ಯಾಪಾರಿಯು ಈಗ ಒಂದೊಂದೇ ಕಟ್ಟು ಜವಳಿಯನ್ನು ಇಂಗ್ಲಾಂಡಿನಿಂದ ತರಿಸಲು ಹಿಂಜರಿಯುತ್ತಿರುವರು.

ಒಳದೇಶ ವರ್ತಮಾನ.

—ಮಥುರೆಯ ಒಂದು ಶಾಲಾಬಾವಿಯ ಹೊರಗಡೆ ೫೦ ಮುಷ್ಟಿಗಳನ್ನು ಬಿಸಿಲಿಗೆ ಒಣಗಹಾಕಿದ್ದರು. ಅಜಾಗ್ರತೆಯಿಂದ ಮದ್ದಿಗೆ ಬೆಂಕಿಹಿಡಿದು ಕಟ್ಟೋಣದೊಳಗಿದ್ದ ಮದ್ದು ಕೂಡ ಒಡೆದುಹೋಗಿ ಕಟ್ಟೋಣವು ಪುಡಿ ಪುಡಿಯಾಗಿ ಕೆಳಕ್ಕುರುಳಿತು. ದೈವವಶಾತ್ ಯಾರಿಗೂ ಪ್ರಾಣನಷ್ಟವುಂಟಾಗಲಿಲ್ಲ.

—ಡಿಲ್ಲಿಯ ಸಾದಿಬಜಾರದ ಸಮೀಪ ಬೆಂಕಿಯ ಅನಾಹುತದಿಂದ ಸುಮಾರು ಒಂದು ಲಕ್ಷ ರೂಪಾಯಿಗಳ ನಷ್ಟವಾದವು. ರಾತ್ರಿ ಹನ್ನೊಂದು ಘಂಟೆಯ ಹೊತ್ತಿಗೆ ಥಕ್ಕನೆ ಒಂದು ಕಟ್ಟೋಣಕ್ಕೆ ಬೆಂಕಿ ಹಿಡಿಯಿತು. ಜನರೆಲ್ಲರೂ ಮಲಗಿದವರೆದ್ದು ಓಡತೊಡಗಿದರು. ಹದಿನೆಂಟು ಕುಟುಂಬಗಳು ಮನೆಯಿಲ್ಲದೆ ಅನಾಥರಾಗಿರುವರು. ಒಂದು ಹುಕ್ಕಾವನ್ನು ಅಜಾಗ್ರತೆಯಿಂದ ಸೇದಿದುದೇ ಈ ಬೆಂಕಿಯು ಉದ್ಭವಿಸಲು ಕಾರಣವಾಯಿತು.

—ಕಲಕತ್ತೆಯ 'ಪ್ರಭಾಸಿ' ಛಾಪಖಾನೆಯಲ್ಲಿ "ಬಂಧನದಲ್ಲಿರುವ ಹಿಂದೂಸ್ಥಾನ"ವೆಂಬ ಪ್ರಕಟನೆಯನ್ನು ಪ್ರಕಟಿಸಿದವರ ಸಂಬಂಧವಾಗಿ ಪೋಲೀಸರು 'ಪ್ರಭಾಸಿ' ಪತ್ರಿಕಾಲಯವನ್ನೂ, 'ಮೋಡರ್ನ್ ರಿವ್ಯೂ' ಪತ್ರಿಕಾಲಯವನ್ನೂ ಹುಡುಕಿದರು. ಈ ಪುಸ್ತಕದ ಪ್ರಕಾಶಕರಾದ ಮತ್ತು ಮುದ್ರಕರಾದ ಮಿ| ಎಸ್. ಕೆ. ದಾಸರವರನ್ನೂ ಕೈದುಮಾಡಿ ದಾಮೀನಿನ ಮೇಲೆ ಬಿಡಲಾಯಿತು. ಪುಸ್ತಕದ ೮೩ ಪ್ರತಿಗಳು ಸಿಕ್ಕಿದುವು.

—ಹಿಂದೀ ವೈಮಾನಿಕನಾದ ಮಿ. ಪಿ. ಎಮ್. ಕಬಲಿಯು ಇಂಗ್ಲಾಂಡಿನಿಂದ ಕರಾಚಿಗೆ ಕ್ಯಾರೋ ಹಾದಿಯಾಗಿ ಹಾರುವದೆಂದು ನಿಶ್ಚಯವಾಗಿದ್ದಿತು. ಆದರೆ ಆ ಹಾದಿಯನ್ನು ತ್ಯಜಿಸಿ ಈಗ ಪೆರಿಸ್, ಮಾರ್ಸೇಲಿಸ್, ಪೀಸಾ, ರೋಮ್, ಟುನಿಸ್, ಟ್ರಿಪೋಲಿ, ಅಬುಕಾರ್, ಗಾಜಾ, ಬಸ್ರಾ, ಈ ಹಾದಿಯಾಗಿ ಕರಾಚಿಗೆ ಬಂದು ತಲಪುವನಂತೆ. ಆಂಗ್ಲ ಯುವತಿಯರು ಮಿ. ಪಿ. ಎಮ್. ಕಬಲಿಯನ್ನು ಪ್ರಶಂಸಿಸಿ ಬರೆದ ಪತ್ರವನ್ನು ಕೊಚ್ಚಿ ಬಿಹಾರಿನ ಮಹಾರಾಣಿಯವರು ಆತನಿಗೆ ಸಮರ್ಪಿಸಿದರು.

— ಮುಂಬಾಯಿಯ ಒಬ್ಬ ಗುಂಡುಮದ್ದಿನ ವ್ಯಾಪಾರಿಗೆ ಪಾರೀಖ ಗಣದ ಒಂದು ಕಾಗದ ಬಂದಿತು. 'ಅಹಮದಾಬಾದಿಗೆ ಗುಂಡು ಮದ್ದನ್ನೂ ಇತರ ಎಲ್ಲಾ ಸಾಮಗ್ರಿಗಳನ್ನೂ ಅಹನು ಹಿಂದೀ ರವಾನಿ ಕಳುಹಿಸಬೇಕು. ಇಲ್ಲದಾದರೆ ಅವನು ವಧಿಸಲ್ಪಡುವನು.' ಎಂದು ಪತ್ರದಲ್ಲಿದ್ದಿತು. ಪೋಲೀಸರಿಗೆ ಈ ವಾರ್ತೆಯು ತಿಳಿಸಲ್ಪಟ್ಟಿತು. ಶೋಧನೆಗೆ ಪ್ರಾರಂಭವಾಯಿತು. ವ್ಯಾಪಾರಿಯಾದ ಅಹೀಜನಿಗೆ ಆಲೋಚಿಸಲು ಏಳು ದಿನಗಳ ಅವಕಾಶ ಕೊಟ್ಟಿರುತ್ತದೆ.

— ಶ್ರೀ ಹಗೆಡೂರ ರಾಮಚಂದ್ರರಾಯರು ಲೈಸನ್ಸು ಪಡೆಯದೇನೆ ಪುನಃ ಒಮ್ಮೆ ಕಟ್ಟೆಯರ ಪತ್ರಿಕೆಯನ್ನು ಹೊರಡಿಸಿದರು. ಪತ್ರಿಕಾ ಪ್ರಕಟನೆಯ ಸ್ಥಳದಲ್ಲಿ ಹಲವು ಮಂದಿಗಳು ನೆರೆದಿದ್ದರು. ಕೆಲವು ಪೋಲೀಸು ಅಧಿಕಾರಿಗಳೂ ಅಲ್ಲಿ ಇದ್ದರು. ಪತ್ರಿಕೆಯು ಪ್ರಕಟಿಸಲ್ಪಟ್ಟೊಡನೆ ಪೋಲೀಸರು ಒಳಹೊಕ್ಕು ಪತ್ರಿಕೆಯ ಪ್ರತಿಗಳನ್ನು ಸ್ವಾಧೀನ ಪಡಿಸಿಕೊಂಡರು. ಶ್ರೀ ರಾಮಚಂದ್ರರಾಯರು ಅಚ್ಚ ಸತ್ಯಾಗ್ರಹಿಯಾಗಿ ಯಾವ ಆಕ್ಷೇಪವನ್ನೂ ಎತ್ತಲಿಲ್ಲ.

— ಬುಂದೇಲಖಂಡ ಎಂಬಲ್ಲಿ ಮುಸಲ್ಮಾನರ ರಾಜಕೀಯ ಪರಿಷತ್ತು ಮೌಲ್ವಿ ಮಹಮದ್ ಯಾಕೂಬರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ತನ್ನ ಭಾಷಣದಲ್ಲಿ "ನಮಗೆ ಸ್ವರಾಜ್ಯವೇ ಬೇಕಾಗಿರುತ್ತದೆ. ಒಂದೊಂದೇ ಜಾತಿಯವರಿಗೆ ಅಧಿಕಾರವು ಹೆಚ್ಚಿರಬಾರದು." ಎಂದು ವಿವರಿಸಿದರು. ಅಮಾನುಲ್ಲಾರವರಿಗೆ ಸಹಾನುಭೂತಿಯನ್ನು ಸೂಚಿಸಿದರು.

— ಮುಂಬಾಯಿಯ ಗಿರಣಿ ಮುಷ್ಕರವು ಮುಂದರಿಯುತ್ತಲೇ ಇದೆ. ರಾಜಿಯಾಗುವ ಸಂಭವವು ತೋರುವುದಿಲ್ಲ. ಕೆಲವರು ಕೆಲಸಕ್ಕೆ ಹೋಗುತ್ತಿರುವರು. ಕೆಲವರು ಕೆಲಸವನ್ನು ಬಿಟ್ಟು ತಮ್ಮ ತಮ್ಮ ಹಳ್ಳಿಗಳಿಗೆ ತೆರಳುತ್ತಿರುವರು. ಒಟ್ಟು ೯೧ ಸಾವಿರ ಮಂದಿ ಕೆಲಸಮಾಡುತ್ತಿರುವರು. ಐದು ಗಿರಣಿಗಳ ಹೊರತು ಉಳಿದ ಎಲ್ಲಾ ಗಿರಣಿಗಳಲ್ಲಿ ಕೆಲಸವು ನಡೆಯುತ್ತಿದೆ.

— ಮುಂಬಾಯಿಯ ಲೆಮಿಂಗ್ಟನ್ ರಸ್ತೆಯ ಒಂದು ಸಿನೆಮಾ ಸಾಮಗ್ರಿಗಳನ್ನು ಸಂಗ್ರಹಿಸಿಡುವ ಮಳಿಗೆಗೆ ಬೆಂಕಿ ಹಿಡಿದು ಮೂವರು ಸತ್ತುಹೋದರು. ಇಬ್ಬರು ಸಿನೆಮಾ ನಟಿಯರಾದ ಅಕ್ಕತಂಗಿಯರು, ಮೂರನೆಯವನು ಒಬ್ಬ ಸಹೋದರಿಯ ಗಂಡನು. ಬೆಂಕಿಯುಂಟಾಗಲು ಕಾರಣವೇನೆಂದು ತಿಳಿಯುವುದಿಲ್ಲ. ಒಟ್ಟು ಇಪ್ಪತ್ತೈದು ಸಾವಿರಕ್ಕೆ ಮಿಕ್ಕಿ ನಷ್ಟವುಂಟಾಗಿರುತ್ತದೆ.

— ದಿವಂಗತ ಲಾಲಾ ಲಜಪತರಾಯರವರ ಸ್ಮರಣಾರ್ಥವಾಗಿ ಕಳೆದ ನವಂಬರ ೧೭ನೇ ತಾರೀಕಿನ ದಿನ ಎಲ್ಲಾ ಶಾಲೆಗಳನ್ನು ಮುಚ್ಚಬೇಕೆಂದು ನೆಲ್ಲೂರು ಮುನಿಸಿಪಾಲಿಟಿಯವರು ಒಂದು ಠರಾವನ್ನು ಮಂಜೂರುಮಾಡಿ ಶಾಲೆಗಳನ್ನು ಮುಚ್ಚಿದ್ದರು. ಹೀಗೆ ರಾಷ್ಟ್ರೀಯ ಪುರುಷರ ಸ್ಮರಣಾರ್ಥವಾಗಿ ಶಾಲೆಗಳನ್ನು ಮುಚ್ಚುವುದು ಅನ್ಯಾಯವಾದುದರಿಂದ ಅಂದು ಮುಚ್ಚಿರುವದರ ಬದಲಿಗೆ ಇನ್ನೊಂದು ರಜಾದಿನದಲ್ಲಿ ಶಾಲೆಯನ್ನು ನಡಿಸಬೇಕೆಂದು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರು ಮುನಿಸಿಪಾಲಿಟಿಯವರಿಗೆ ಹುಕುಮು ಕೊಟ್ಟಿರುವರು.

— ವಿದೇಶಿ ವಸ್ತ್ರ ಬಹಿಷ್ಕಾರ ಕಮಿಟಿಯ ಸಭೆಯು ಮಹಾತ್ಮಾಜಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಇದುವರೆಗೆ ವಿದೇಶಿ ವಸ್ತ್ರ ಬಹಿಷ್ಕಾರಕ್ಕಾಗಿ ಜನರು ಕೈಕೊಂಡ ಕಾರ್ಯವು ತೃಪ್ತಿಕರವೆಂದೂ ವಿದೇಶಿ ವಸ್ತ್ರ ಬಹಿಷ್ಕಾರವು ಇನ್ನಷ್ಟು ಭರದಿಂದ ನಡೆಯುವ ಸಲುವಾಗಿ ಎಲ್ಲ ಕಾಂಗ್ರೆಸ್ ಕಮಿಟಿಗಳವರು ಮನಸಿಟ್ಟು ಪ್ರಯತ್ನಿಸುತ್ತಿರಬೇಕೆಂದೂ ಠರಾವುಗಳಾದವು. ಇದುಮಾತ್ರವಲ್ಲದೆ ಕಾರ್ಯದ ಸಾಫಲ್ಯಕ್ಕಾಗಿ ಊರೂರು ಸಂಚರಿಸಿ, ಮನೆ ಮನೆಗಳನ್ನು ಸಂದರ್ಶಿಸುವಿಕೆ, ಸಭೆಗಳನ್ನು ಜರಗಿಸುವಿಕೆ, ನಗರ ಕೀರ್ತನೆ, ತಿಂಗಳ ಮೊದಲನೆಯ ಆದಿತ್ಯವಾರ ಈ ಕುರಿತು ಹೆಚ್ಚು ಉಮೇದವಾರರಾಗುವಿಕೆ, ಒಕ್ಟೋಬರ ೭ನೇ ತಾರೀಕನ್ನು ವಿದೇಶಿ ವಸ್ತ್ರ ಬಹಿಷ್ಕಾರದ ದಿನವನ್ನಾಗಿ ಆಚರಿಸುವಿಕೆ, ಮೊದಲಾದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಠರಾವುಗಳಾದವು.

— ಉರಗಾಂವ್ ಚಿನ್ನದ ಗಣಿಯಲ್ಲಿ ಕಳೆದ ಸೋಮವಾರ ದಿನ ಬೆಳಿಗ್ಗೆ ಒಮ್ಮೆಯೇ ೫೦೦ ಮಂದಿ ಕೆಲಸಗಾರರು ಮುಷ್ಕರವನ್ನು ಆಚರಿಸಿದರು. ಕಾರಣವೇನೆಂದು ಸರಿಯಾಗಿ ತಿಳಿಯಬರುವುದಿಲ್ಲ.

— ಕೆಲವು ದಿನಗಳ ಹಿಂದೆ ಬಂಗಾಳದ ೧೭ ವರುಷ ಪ್ರಾಯದ ಯುವತಿಯೊಬ್ಬಳು ತನ್ನನ್ನು ತಾನೇ ಸುಟ್ಟು ಆತ್ಮಹತ್ಯವನ್ನು ಮಾಡಿಕೊಂಡುದರ ಸಂಬಂಧವಲ್ಲಿ ಅವಳ ಗಂಡ, ಅತ್ತೆ, ನಾದಿನಿ ಈ ಮೂವರ ಮೇಲೆ ಮೊಕದ್ದಮೆಯಾಗಿ ಮೆಜಿಸ್ಟ್ರೇಟರ ಮುಂದೆ ತರಲ್ಪಟ್ಟರು. ಸಾಕ್ಷಿಗಾರರ ವಿಚಾರಣೆಯ ಸಮಯ ಒಬ್ಬ ಸಾಕ್ಷಿಗಾರನು ಹೇಳಿದುದೇನೆಂದರೆ "ನನಗೆ ಇಬ್ಬರು ಹೆಂಗಸರ ಸ್ವರವು ಕೇಳಿಸಿತು. "ನಾನಿಲ್ಲಿ ಒಂದು ಚಿಮಿಣಿ ಎಣ್ಣೆಯ ಬಾಟಲಿಯನ್ನೂ ಒಂದು ಬೆಂಕಿಪೆಟ್ಟಿಗೆಯನ್ನೂ ಇಟ್ಟಿರುವೆನು. ನಾವು ಗಂಗಾಸ್ನಾನಕ್ಕಾಗಿ ತೆರಳುವೆವು. ನಾವು ಹಿಂದಕ್ಕೆ ಬರುವಾಗ ನಾವು ನಿನ್ನನ್ನು ಜೀವಂತಳಾಗಿರುವುದನ್ನು ಕಾಣದಂತಾಗಬೇಕು." ಎಂದಿದ್ದರು. ಸ್ವಲ್ಪ ಹೊತ್ತಿನ ಮೇಲೆ ಹುಡುಗಿಯು ಅಗ್ನಿಯಿಂದ ಉರಿಸಲ್ಪಟ್ಟು ಸುಡುತ್ತಿದ್ದಳು. ಅವಳಿದ್ದ ಕೋಣೆಯಲ್ಲಿಯೇ ಒಂದು ಸ್ಪಿರಿಟಿನ ಬಾಟಲಿಯಿದ್ದಿತು." ಗಂಡನು ರಿಮಾಂಡಿಗೆ ಒಳಪಡಿಸಲ್ಪಟ್ಟಿರುವನು. ಇಬ್ಬರು ಹೆಂಗಸರೂ ಎರಡೆರಡು ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು.

— ಕನಕಸಭ್ಯಾ ಮತ್ತು ಜಿ. ಪಿಳ್ಳೆ ಎಂಬ ಹೆಸರಿನ ಇಬ್ಬರು ಹಿಂದೂ ಯುವಕರು ಒಂದು ಸಣ್ಣ ಮೋಟಾರಕಾರಿನಲ್ಲಿ ಲೋಕ ಭೂಸಂಚಾರಕ್ಕಾಗಿ ಎಂಟು ತಿಂಗಳ ಹಿಂದೆ ಹೊರಟವರು ಈಗ ಲಂಡನಿಗೆ ಹೋಗಿ ತಲುಪಿರುವರು. ಅವರು ಇದು ವರೆಗೆ ಹದಿನೆಂಟು ಸಾವಿರ ಮೈಲುಗಳ ಪ್ರಯಾಣವನ್ನು ಪೂರೈಸಿರುವರು

— ಲೀಗ್ ಓಫ್ ನೇಶನ್ಸಿನ ಸಪ್ಟಂಬರದ ಅಧಿವೇಶನಗಳಿಗೆ ಹಿಂದೂಸ್ಥಾನದಿಂದ ಸರ್ ಮಹಮದ್ ಹಬೀಬುಲ್ಲಾ, ಕಪುರ್ತಾಲದ ಮಹಾರಾಜರು, ಸರ್ ವಿಲಿಯಮ್ ಎವರ್‌ಗ್ರೀವ್ಸ್, ಸರ್ ಛುನಿಲಾಲ ಮೇಥಾ, ಸರ್ ಜೋಸೆಫ್ ಕೋತ್‌ಬಟ್, ಸಯ್ಯದ್ ರಾಜಾಅಲಿ, ಇವರು ಪ್ರತಿನಿಧಿಗಳಾಗಿ ತೆರಳುವರು.

— ಕೋಲೆರಾ ರೋಗದಿಂದ ಕಲಕತ್ತೆಯಲ್ಲಾಗುವ ಮರಣಗಳ ಸಂಖ್ಯೆಯು ಇನ್ನೂ ಇಳಿದಿರುವುದಿಲ್ಲ. ಕಳೆದವಾರ ೧೭೧ ಮಂದಿಗಳು ಸತ್ತುಹೋದರು.

— ಲಾಹೋರಿನಲ್ಲಿ ಶಿವದಯಾಳನೆಂಬ ಹೆಸರಿನ ೧೮ ವರುಷ ಪ್ರಾಯದ ಯುವಕನು ಗುಂಡಿನಿಂದ ಆರು ಜನರನ್ನು ಹಿಂಸಿಸಿ, ಕೊನೆಗೆ ತನ್ನನ್ನು ತಾನೇ ಕೊಲೆಮಾಡಲು ಪ್ರಯತ್ನಿಸಿದಾಗ ಸಾಧ್ಯವಾಗಲಿಲ್ಲ. ಆತನೀಗ ಆಸ್ಪತ್ರೆಯಲ್ಲಿರುವನು. ಶಿವದಯಾಳನು ಒಬ್ಬ ಹೆಂಗಸಿನೊಡನೆ ವಿಶೇಷ ಸ್ನೇಹದಿಂದ ಇದ್ದನು. ಕಾರಣಾಂತರದಿಂದ ಅವರಿಬ್ಬರೊಳಗೆ ಜಗಳವಾಯಿತು. ಶಿವದಯಾಳನು ತನ್ನ ಯಜಮಾನನ ಜೋಡು ನಳಿಗೆಯ ಕೋವಿಯನ್ನೂ ೭೫ ಗುಂಡುಗಳನ್ನೂ ಕದ್ದು ಹೆಂಗಸಿನ ಮನೆಗೆ ಬಂದನು. ಆತನನ್ನು ನೋಡಿದೊಡನೆಯೇ ಹೆಂಗಸು ಹೆದರಿ ಹತ್ತಿರದ ಮನೆಗೆ ಓಡಿಹೋಗಿ ಅಲ್ಲಿ ಗಲಭೆಯನ್ನುಂಟುಮಾಡಿದಳು. ಇಷ್ಟರಲ್ಲಿ ಶಿವದಯಾಳನು ಗುಂಡಿನಿಂದ ೬ ಮಂದಿ ಪಥಿಕರನ್ನು ಗಾಯಗೊಳಿಸಿದನು. ಈ ವಾರ್ತೆಯನ್ನು ಕೇಳಿ ಸಬ್ ಇನ್ಸ್‌ಪೆಕ್ಟರರು ಆಯುಧಪಾಣಿಗಳಾದ ಪೋಲೀಸರೊಂದಿಗೆ ಅಲ್ಲಿಗೆ ಬಂದು ಹೆಂಗಸಿನ ಮನೆಯನ್ನು ಹೊಕ್ಕು ಯುವಕನನ್ನು ಕೈದುಮಾಡುವಾಗ ಆತನು ಆತ್ಮಹತ್ಯದ ಪ್ರಯತ್ನದಲ್ಲಿದ್ದನು. ಆತನು ಹಣೆಯಲ್ಲಿ ಗುಂಡುಹೊಡೆದು, ವಿಶೇಷವಾಗಿ ಜಖಮು ಹೊಂದಿದನು. ಪೋಲೀಸರು ಆ ಯುವಕನನ್ನೂ, ಗಾಯಹೊಂದಿದ ಇತರ ಆರು ಮಂದಿಗಳನ್ನೂ ಆಸ್ಪತ್ರೆಗೆ ಕೊಂಡೊಯ್ದರು.

— ಕಲಕತ್ತೆಯಲ್ಲಿ ಒಂದೆರಡು ದಿನಗಳ ಹಿಂದೆ ಬಿಸಿಯಾದ ಒಂದು ದಾಖಲಿನ ಕರೆಯು ಬಂದಿತು. ಬೀಡಿ ಅಂಗಡಿಯಲ್ಲಿ ಬೀಡಿಯನ್ನು ಮಾರುತ್ತಲಿದ್ದ ಮುಸಲ್ಮಾನನೊಬ್ಬನು ಥಟ್ಟನೆ ಅಂಗಡಿಯಿಂದ ಹೊರಕ್ಕೆ ಬಂದು, ತಾನು ಬೆಂಕಿಯಿಂದ ಸಾಯುತ್ತಿರುವೆನೆಂದು ಬೊಬ್ಬೆಹೊಡೆಯುತ್ತಾ ಕಯ್ಯಲ್ಲಿರುವ ಕತ್ತರಿಯಿಂದ ತನ್ನನ್ನು ತಾನೇ ಹೊಡೆದುಕೊಂಡನು. ಇದರಿಂದ ಆತನ ತಲೆ ಮತ್ತು ಎದೆಗಳಲ್ಲಿ ಕೆಲವು ಗಾಯಗಳಾದವು. ಆತನನ್ನು ಹಿಡಿಯಲು ಬಂದ ಸಮೀಪದ ಅಂಗಡಿಯವನೊಬ್ಬನೂ ಹೊಡೆಯಲ್ಪಟ್ಟನು. ಮುಸಲ್ಮಾನನು ಆಸ್ಪತ್ರೆಗೆ ಕೊಂಡೊಯ್ಯಲ್ಪಟ್ಟು ಮರುದಿನ ಸತ್ತುಹೋದನು. ಇನ್ನೊಂದೆಡೆಯಲ್ಲಿ ಬೇರೊಬ್ಬ ವ್ಯಕ್ತಿಯು ಹುಚ್ಚನಂತೆ ರಾಜರಸ್ತೆಯಲ್ಲಿ ಓಡಿಬಂದು ಹಲವರನ್ನು ಒಂದು ಕಬ್ಬಿಣದ ಆಯುಧದಿಂದ ಹಿಂಸಿಸಿದನು. ಆತನನ್ನು ಒಡನೆ ಪೋಲೀಸರು ಸ್ವಾಧೀನ ಪಡಿಸಿಕೊಂಡರು.

— ಅಲಹಾಬಾದದ ಕಸ್ಸಬದ ವ್ಯಾಪಾರಿಯೊಬ್ಬನು ಒಬ್ಬ ಹೆಂಗಸಿನ ಕಣ್ಣುಗಳನ್ನು ಪರೀಕ್ಷಿಸಲಿಕ್ಕಾಗಿ ಹೋದವನು ಕಾಣೆಯಾಗಿರುವನು. ಅಂದೇ ರೈಲಿನ ಬಂಡಿಯಲ್ಲಿ ಒಂದು ಶಿರವಿಲ್ಲದ ಮನುಷ್ಯನ ಮೃತದೇಹವು ಕಾಣಸಿಕ್ಕಿದುದರಿಂದ ಆತನ ಕುಟುಂಬದವರಲ್ಲಿ ಇದರಿಂದ ಕೊಂಚ ಗಲಭೆಯುಂಟಾಗಿರುತ್ತದೆ

— ಚಂದ್ರರಾಜನೆಂಬ ಹುಡುಗನು ಮಿ. ಅಬ್ಯಾಸಬನರ ಮೇಲೆ ಹೂಡಿದ ಮೊಕದ್ದಮೆಯಲ್ಲಿ ಹೆಚ್ಚಿಗೆ ಸಾಕ್ಷ್ಯಗಳ ವಿಚಾರಣೆಯಾಯಿತು. ಸ್ಕೂಲಿನ ಅಂಗಡಿಗಳಿಂದ ಗಂಟುಗಳು ಹಾರಿಸಲ್ಪಟ್ಟಿದ್ದುವೆಂದು ಕೆಲವರು ಸಾಕ್ಷಿಗಳನ್ನು ಕೊಟ್ಟರು.

— ಡಾ| ಹರ್ಡೀಕರರ ಭಾಷಣವನ್ನು ನಿಷೇಧಿಸಿ ತುಮಕೂರಿನ ಮೆಜಿಸ್ಟ್ರೇಟರು ಕೊಟ್ಟ ಹುಕುಮಿಗೆ ವಿರೋಧವಾಗಿ, ಡಾ| ಹರ್ಡೀಕರರು ಮಾಡಿದ ಅಪೀಲನ್ನು ತೆಗೆದುಹಾಕಲಾಗಿಯದೆ.

— ಬಂಗಾಳದ ಸಿಲೆಟ್ ಎಂಬಲ್ಲಿನ ಸ್ಕೂಲಿನ ಮುಖ್ಯೋಪಾಧ್ಯಾಯನು ತನ್ನ ವಿದ್ಯಾರ್ಥಿಗಳು ಮಹಾತ್ಮಾಜಿಯವರ ಯಂಗ್ ಇಂಡಿಯಾ ಪತ್ರಿಕೆಯನ್ನು ಓದುವುದಾಗಿ ನಿಷೇಧಿಸಿದನಂತೆ. ಇದು ಆತನ ಸ್ವಂತ ಬುದ್ಧಿಯಿಂದ ಮಾಡಿದುದೋ, ಅಥವಾ ಹಿರೇ ಅಧಿಕಾರಿಗಳ ಸಂದೇಶದ ಮೇಲೆ ಮಾಡಿದುದೋ, ಏನೆಂದು ತಿಳಿಯುವುದಿಲ್ಲ. ಮಹಾತ್ಮಾಜಿಯವರ ಯಂಗ್ ಇಂಡಿಯಾ ಪತ್ರಿಕೆಯು ಪ್ರತಿಯೊಬ್ಬನಿಂದಲೂ ಓದಲು ತಕ್ಕುದಾಗಿರುವಾಗ ಈ ಮುಖ್ಯೋಪಾಧ್ಯಾಯನಿಗೆ ಮಾತ್ರ ಹೀಗೆ ತೋರಿದುದು ಆಶ್ಚರ್ಯವೆನ್ನಬೇಕು.

— ಮಹಾಶಯ ರಾಜಪಾಲರನ್ನು ಕೊಲೆಮಾಡಿದ ಮುಸಲ್ಮಾನ ಹುಡುಗನಿಗೆ ಮರಣ ಶಿಕ್ಷೆಯು ವಿಧಿಸಲ್ಪಟ್ಟಿರುತ್ತದೆ. ಆತನಿಗೆ ಶಿಕ್ಷೆ ವಿಧಿಸಲ್ಪಡುವ ಮೊದಲು ಕಟಕಟೆಯ ಸಮಯ ಹಾಜರಿದ್ದ ಇಬ್ಬರು ಮುಸಲ್ಮಾನ ಜೂರಿಗಳು ಆತನು ತಪ್ಪಿತಸ್ಥನಲ್ಲವೆಂದು ವಾದಿಸಿದರು. ಆದರೆ ಜಾತೀಯ ಸ್ವಾರ್ಥದಿಂದ ಅವರು ಹೀಗೆ ಅನ್ನುತ್ತಿರುವರೆಂದು ಜಡ್ಜರು ಅವರ ಅಭಿಪ್ರಾಯಗಳನ್ನು ನಿರಾಕರಿಸಿದರು.

— ಮೀರತಿನ ಜೈಲಿನಿಂದ ಡೇರಾಡೂನಿನ ಜೈಲಿಗೆ ಕೊಂಡೊಯ್ಯುವಾಗ ಚೌದರಿ ಧರ್ಮವೀರ ಸಿಂಗರೆಂಬವರಿಗೆ ೩ ದಿನಗಳಿಂದ ಕಠಿಣವಾದ ಜ್ವರವು ಬರುತ್ತಿದ್ದಿತಂತೆ. ಅವರೆಷ್ಟು ಕೇಳಿಕೊಂಡರೂ ಅವರ ಕೈಗೆ ಕೋಳಗಳು ಸಿಲುಕಿಸಲ್ಪಟ್ಟವು.

— ಮೀರತಿನ 'ಒಳಸಂಚಿನ ಮೊಕದ್ದಮೆಗೆ ಸರಕಾರದವರು ಒಂದು ಕೋಟಿ ರೂಪಾಯಿಗಳನ್ನು ಸೆಂಕ್ಷನು ಮಾಡಿರುವರಂತೆ. ಇದು ನಿಜವೆಂದು ನಂಬಲು ಮಾತ್ರ ಸರಿಯಾದ ಆಧಾರಗಳಿರುವುದಿಲ್ಲ.

ಪಂಜಾಬಿನ ಸರಕಾರದವರು ಈ ವರುಷ ಕಾಂಗ್ರೆಸ್ ಅಧಿವೇಶನವನ್ನು ನಡೆಸಲು 'ಪಿಂಟೊಪಾರ್ಕ' ಎಂಬ ಹೆಸರಿನ ವಿಶಾಲವಾದ ಸ್ಥಳವನ್ನು ಕೊಡಲು ನಿರಾಕರಿಸಿದುದರ ಕುರಿತಾಗಿ ವಿಚಾರಿಸಲು ಕಾಂಗ್ರೆಸ್ ಸ್ವಾಗತ ಕಮಿಟಿಯ ಒಂದು ಸಭೆ ಜರಗಿತು. ಈಗ ಸರಕಾರದವರಿಂದ ಕೊಡಲ್ಪಟ್ಟ ಉತ್ತರವನ್ನು ಕೊನೆಯದಾಗಿ ಪರಿಗಣಿಸದೆ, ಅದೇ ಸ್ಥಳವನ್ನು ಪಡೆಯಲು ಇನ್ನೂ ಇನ್ನೂ ಪ್ರಯತ್ನ ಮಾಡಬೇಕೆಂದು ನಿರ್ಣಯವಾಯಿತು.

— ಬೆಂಗಳೂರು ಗಲಭೆಯ ಮೊಕದ್ದಮೆಯಲ್ಲಿ ಕಾಲುಗಳನ್ನು ಕಳಕೊಂಡ ಪೈಲ್ವಾನ ಮತ್ತು ರಾಮಯ್ಯ ಎಂಬವರಿಗೆ, ೩೫೦ ರೂಪಾಯಿ ಖರ್ಚು ಮಾಡಿ ಕೃತಕ ಕಾಲುಗಳನ್ನು ಒದಗಿಸಬೇಕೆಂದೂ, ಪ್ರತಿಯೊಬ್ಬರಿಗೆ ತಿಂಗಳಿಗೆ ೧೫ ರೂಪಾಯಿಗಳಂತೆ ಪೆನ್ಶನು ಕೊಡುತ್ತಿರಬೇಕೆಂದೂ ಸರಕಾರದವರು ಸೆಂಕ್ಷನ್ ಮಾಡಿರುವರು.

— ವಿದೇಶಿ ವಸ್ತ್ರ ಬಹಿಷ್ಕಾರವನ್ನು ಬಲಪಡಿಸುವ ಸಲುವಾಗಿ ವಿದೇಶಿ ವಸ್ತ್ರಗಳು ಹೆಚ್ಚಾಗಿ ವಿಕ್ರಯವಾಗುವ ಸ್ಥಳಗಳಲ್ಲಿ ಹಿಂದೂ ಧುರೀಣರು ಸಂಚಾರಮಾಡಬೇಕೆಂದು ವಿದೇಶಿ ವಸ್ತ್ರ ಬಹಿಷ್ಕಾರ ಕಮಿಟಿಯವರು ನಿಶ್ಚಯಿಸಿರುವರು. ಮೊದಲನೆಯ ಸಾರಿ ಪಂಡಿತ ಮದನಮೋಹನ ಮಾಲವೀಯರೂ ಮತ್ತು ಶೇಟ್ ಜಮನಾಲಾಲ ಬಜಾಜರು ಸಿಂಧೂ ದೇಶವನ್ನು ಸಂಚರಿಸುವರು. ಕಮಿಟಿಯ ಸೆಕ್ರೆಟರಿಯವರಾದ ಜಯರಾಮದಾಸ ದೌಲತ್‌ರಾಮರವರು ಅವರನ್ನು ಕೂಡುವರು.

— ಮಂಡಿಗೆರೆಯ ಒಬ್ಬ ಗೃಹಸ್ಥನಿಗೆ ಮದುವೆಯು ನಡೆಯುವಾಗ ವಧೂವರರಿಬ್ಬರೂ ಅಮೂಲ್ಯವಾದ ವಸ್ತ್ರಗಳ ಬದಲು ಖಾದಿ ಬಟ್ಟೆಯನ್ನು ತೊಟ್ಟುಕೊಂಡಿದ್ದರು. ತುಂಬ ಖಾದಿ ಬಟ್ಟೆಯು ಮದುವೆಯ ಸಂದರ್ಭದಲ್ಲಿ ಉಡುಗೊರೆಯ ರೂಪವಾಗಿ ಕೊಡಲ್ಪಟ್ಟಿತು.

— ಕಾವೇರಿ ನದಿಯ ತಟದಲ್ಲಿ ಸಹ್ಯದಲ್ಲಿಯೇ ಒಂದು ವೈದಿಕ ವಿಶ್ವವಿದ್ಯಾಲಯವನ್ನು ತೆರೆಯಲಿರುವರಂತೆ. ಇದಕ್ಕಾಗಿ ಇಷ್ಟರೊಳಗೆ ಒಂದು ಲಕ್ಷ ರೂಪಾಯಿಗಳು ಸಂಗ್ರಹವಾಗಿರುತ್ತವೆ. ಪ್ರಾಯಶಃ ಇದರಲ್ಲಿ ಬ್ರಾಹ್ಮಣರಿಗೆ ಮಾತ್ರ ಪ್ರವೇಶವಿರುತ್ತದೇನೋ!

— ಕಲಕತ್ತೆಯಲ್ಲಿ ಕುಮಾರ ನೃಪೇಂದ್ರ ನಾರಾಯಣ ಸಿಂಹನೆಂಬಾತನ ಇಪ್ಪತ್ತು ಸಾವಿರ ರೂಪಾಯಿಯ ಆಭರಣಗಳು ಕಳವಾಗಿ ಹೋದುವು. ಪೋಲೀಸರು ಆತನ ಮನೆಯ ಸೇವಕರನ್ನು ಕೈದುಮಾಡಿರುವರು.

— ಜೋರಬಾಗಾನ್ ಕೋರ್ಟಿನಿಂದ ಅಲಿಪುರದ ಜೈಲಿಗೆ ಕೊಂಡೊಯ್ಯುತ್ತಿದ್ದ ಐದು ಮಂದಿ ಕೈದಿಗಳು ಓಡುವ ಗಾಡಿಯಿಂದ ಕೆಳಕ್ಕೆ ಹಾರಿ ಪಲಾಯನವನ್ನು ಮಾಡಿದರು. ಮೂವರು ಪುನಃ ಬಹು ಪ್ರಯತ್ನದಿಂದ ಹಿಡಿಯಲ್ಪಟ್ಟರು. ಉಳಿದವರು ಸಿಕ್ಕಿರುವುದಿಲ್ಲ.

ದಕ್ಷಿಣ ಕನ್ನಡ.

ಮಂಗಳೂರು — ಮ| ರಾ| ರಾ| ಕುಳ ರಾಮಣ್ಣ ರೈಗಳ ತಾಲೂಕು ಬೋರ್ಡ್ ಮೆಂಬರಿಕೆಯ ಅವಧಿಯು ಇದೇ ಬರುವ ಜೂನ್ ತಿಂಗಳ ತಾರೀಕು ೭ಕ್ಕೆ ಮುಗಿಯುವುದರಿಂದ ಅವರ ಸ್ಥಾನಕ್ಕೆ ಪುತ್ತೂರು ಕಸಬೆಗೆ ಒಬ್ಬ ಮೆಂಬರನನ್ನು ಚುನಾಯಿಸುವ ವಿಷಯ ಪುತ್ತೂರು ತಾಲೂಕು ಬೋರ್ಡ್ ಪ್ರೆಸಿಡೆಂಟರವರು ಪ್ರಕಟಿಸಿರುತ್ತಾರೆ.

ಕೆಲವು ದಿನಗಳಿಂದ ಇಲ್ಲಿ ಮಳೆಬರಲು ಪ್ರಾರಂಭಿಸಿರುತ್ತದೆ.

ಇದೇ ತಾ ೨-೬-'೨೯ನೇ ರವಿವಾರ ಪ್ರಾತಃಕಾಲ ೭-೩೦ ಘಂಟೆಗೆ ಶ್ರೀಯುತ ಧರ್ಮದೇವಜಿ, ವಿದ್ಯಾ ವಾಚಸ್ಪತಿಯವರು, ಆರ್ಯಸಮಾಜ ಮಂದಿರದಲ್ಲಿ ಯಜ್ಞ, ಈಶ್ವರೋಪಾಸನೆಗಳ ತರುವಾಯ ವೇದೋಪದೇಶ ಮಾಡುವರು. ಧರ್ಮಪ್ರೇಮಿಗಳೆಲ್ಲರಿಗೂ ಸುಸ್ವಾಗತವಿದೆ

ತಾರೀಕು ೨೫-೫-'೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೨೧ ಮರಣಗಳಾದವು. ಈ ಪೈಕಿ ಸನ್ನಿಪಾತ ಜ್ವರದಿಂದ ೧, ಮಲೇರಿಯಾ ಜ್ವರದಿಂದ ೧, ಅತಿಸಾರದಿಂದ ೧, ಶ್ವಾಸಕೋಶದ ರೋಗದಿಂದ ೭, ಇತರ ಎಲ್ಲಾ ಕಾರಣಗಳಿಂದ ೧೧, ಜನನ ಸಂಖ್ಯೆ ೪೧.

ಅಜೆಕಾರು — ಇಲ್ಲಿಯ ನೆರೆಕರೆಯ ಮರ್ಣೆ ಪಡುಕುಡೂರು ಗ್ರಾಮದ ಎಪ್ರಿಲ್ ತಿಂಗಳ ಸರಕಾರಿ ತೀರ್ವೆಯ ರೂ. ೯೭೫-೭-೧೧ನ್ನು ತಾಲೂಕ ಖಜಾನೆಗೆ ಕೊಂಡುಹೋದ ಬಾಲು ಎಂಬ ಉಗ್ರಾಣಿಯು ಹಣ ಸಮೇತ ಕಾಣೆಯಾಗಿದ್ದಾನೆ. ಪೋಲಿಸ್ ತನಿಖೆಯು ನಡೆಯುತ್ತಿದೆ. ಆದರೆ ಅವನು ಇಷ್ಟರ ವರೆಗೆ ಸಿಕ್ಕಲಿಲ್ಲ.

ಶ್ರೀಗಳಾದ ಕೋಟ ರಾಮಕೃಷ್ಣ ಕಾರಂತ್ ಅವರ್ಗಳ್ ಬಿ. ಎ. ಎಲ್. ಎಲ್. ಬಿ. ಎಮ್. ಎಲ್. ಸಿ ಜಿ. ಎ. ಪಾಲ್ಕಾಂಡ, ಬಿ. ಎ. ಎಲ್. ಎಲ್. ಬಿ. ಎಮ್. ಎಲ್. ಸಿ. ಮತ್ತು ಶೀನಭಟ್, ಬಿ. ವಕೀಲ್ ಮಂಗಳೂರಿನವರು ಜಿಲ್ಲಾ ಸಂಚಾರದಲ್ಲಿ ಇಲ್ಲಿಯೂ ಸಹಾ ತಾ| ೯-೫-'೨೯ನೇ ಗುರುವಾರ ಶ್ರೀ. ಕಾರಂತರ ಮಾತ್ರ ಕಾರ್ಕಳ ಇತ್ಯ ವಾಸುದೇವರಾಯರೊಂದಿಗೆ ದಯಮಾಡಿಸಿ ಇಲ್ಲಿಯ ಜನರ ಸ್ಥಿತಿಗತಿಯನ್ನು ಕೇಳಿ ತಾನು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಮಾಡಿದ ಕೆಲಸಗಳನ್ನು ವಿವರವಾಗಿ ಕೂಡಿದ ಸಭಿಕರಿಗೆ ತಮ್ಮ ಸುರಸವಾದ ಭಾಷಣದಲ್ಲಿ ಹೇಳಿದರು. ತದನಂತರ ಮರ್ಣೆ, ಅಂಡಾರು, ಶಿರ್ಲಾಲು, ಕೆರ್ವಾಶೆ, ಕಡ್ತಲ, ಕುಕ್ಕುಜೆ ಗ್ರಾಮಗಳನ್ನು ಸೇರಿಸಿ "ಅಜೆಕಾರು ಯೂನಿಯನ್" ಎಂಬ ವರ್ಗದಾರರ ಸಂಘವನ್ನು ಸ್ಥಾಪಿಸಿ ಹಿಂತಿರುಗಿರುವರು. ಇನ್ನು ಈ ಸಂಘವು ಯಾವ ರೀತಿ ಕೆಲಸ ಮಾಡಲಿದೆ ಎಂದು ನೋಡಬೇಕು.

ಹೊಸದುರ್ಗ — ಇಲ್ಲಿ ಮೋಟರ್ ಕಾರುಗಳ ಯೋಗವಂದು ಇಲ್ಲಿ ಕೂಡಿಯದೆ. ಮಳೆ ಕಾಲ ಮೋಟರ್ ಕಾರುಗಳ ಮನ್ನ ಕಾಣುವುದು ಮಾಲ ಭವೇ!

ಮೋಟರ್ ಬಸ್ಸು ಒಂದೆರಡು ಬ್ಯಾಗೂ ತಪ್ಪಾಲ ಚಲಾವಣೆಯಲ್ಲಿದೆ. ಒಂದು ಲೋರಿ ಬೇಗನೇ ಬರುವದಾಗಿ ಮಾಂತ ಪ್ರಚಾರವಾಗಿಯದೆ. ರಸ್ತೆಗಳ ಭಾಗ್ಯೋದಯ.

ಬೆಡ್ಮಿಂಟನ್ ಟೆನ್ನಿಸ್‌ಗಳ ಗಲಾಟೆಯೇ ಗಲಾಟೆ. ಮದುವೆ ಚಪ್ಪರದಲ್ಲಿ ಹತ್ತು ಮದುಮಕ್ಕಳಿಗೆ ಬರುವ ಆಗುವ ಪದ್ಧತಿಯಂತೆ ಟೀಪಾರ್ಟಿಗಳು ಸಂಗಡವಾಗಿ ತಪ್ಪುವದು. ಜನರು ಲಕ್ಷ್ಮಿಯು 'ಕೋರ್ಟು' ಮತ್ತು 'ಕೊಸವ ಸ್ಥ' ಪಂಗಡದಲ್ಲಿ ತಕ್ಕ ದರಗಳನ್ನು ಬಹಳ ಸೂಕ್ಷ್ಮದಲ್ಲಿ ಹುಡುಕಿ ತಲಮುಟ್ಟಿ ಕೊನೆಯಲ್ಲಿ ಕೊಡುವ ಪಂಗಡಕ್ಕೆ ತಿನ್ನಕೊಟ್ಟು ಹೋದ ಹಾಕಿದಳು.

ಅಜಾನೂರು, ಹೊಸದುರ್ಗ, ನೀಲೇಶ್ವರ ಈ ಮೂರು ಪಂಚಾಯತ ಕೋರ್ಟು ಸರಹದ್ದಿನೊಳಗಿನ ಕೆಲವು ಗ್ರಾಮಗಳನ್ನು ತಪ್ಪೀಲುಮಾಡಿ ಕಾಂಜಂಗಾಡ ಮತ್ತು ಚರ್ವತ್ತೂರಿಂಬಲ್ಲಿ ಎರಡು ಹೆಚ್ಚಿಗೆ ಕೋರ್ಟುಗಳನ್ನು ತೆರೆಯುವರೆ ಮಂಜೂರು ಆಗಿಯದೆ. ಬರುವ ತಿಂಗಳಲ್ಲಿ ಮೆಂಬರರ ಚುನಾವಣೆಯು ಗೊತ್ತಾಗಿದೆ.

ಆದಾಯ ತೆರಿಗೆಯ ಕಾಲಮಿಣಿಸಿನ ವಾಸನೆಗೆ ಹಕ್ಕಿ ತಗೆಯುವರೆ ಪವಣ ಬರುತ್ತದೆ. ಕಾಲಮಿಣಿಸಿನ ಹಣವು ಮೋಟರ ಕಾರುಗಳನ್ನು ಖರೀದಿ ಮಾಡಿ ಮೆಣಸು ಉಂಟಾಗುವ ಸ್ಥಳದ ಸರ್ವಜನಕೆ ಟ್ಯಾಕ್ಸ ಕೋರ್ಟುಗಳಲ್ಲಿ ಹೊಂದಿ ಹಾಕುತ್ತಾ ಇದೆ. ವಿಷಾದಪಡುವ ಸಂಗತಿ.

ಬಂಟವಾಳ — ಇಲ್ಲಿಯ ತಾಲೂಕು ಬೋರ್ಡ್ ಮೆಂಬರಲೊಬ್ಬರ ಸ್ಥಾನವು ಖಾಲಿಯಾದ್ದರಿಂದ ಇಲ್ಲಿಯ ಬಿ. ಎಲ್. ಹಾಮದ್ ಸಾಹೇಬ್, ರಾ. ಸಿಟಿ ಗಣಪತಿ ರಾವ್, ಬಂಟವಾಳ ವಕೀಲ ವೆಂಕಟ್ರಾಯ ಪ್ರಭುಗಳವರೂ ಈ ಮೂರು ಜನರು ಉಮೇದ್ವಾರರಾಗಿ ನಿಂತ

[illegible] ಅಮೃತೇಶ್ವರಿ ವೈದ್ಯಶಾಲಾ

[illegible]

ನಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ

ಶಾಲಾ ಹುಡುಗರಿಗೆ ಬೇಕಾದ

ಗೆರೆ ಹಾಕಿದ ಮತ್ತು ಹಾಕದ ಎಕ್ಸರಸೈಜ ಪುಸ್ತಕಗಳೂ, ಕೋಪಿ ಪುಸ್ತಕಗಳೂ, ಮ್ಯಾಪು ಡ್ರೋಯಿಂಗ್ ಪುಸ್ತಕಗಳೂ, ಡ್ರೋಯಿಂಗ್ ಪುಸ್ತಕಗಳೂ, ಪೆನ್ಸಿಲು ಕಂಪಾಸ್ ಬಾಕ್ಸ, ಶಾಯಿ ಕುಪ್ಪಿ ಮೊದಲಾದ ಸ್ಟೇಶನರಿ ಸಾಮಾನುಗಳೂ ಇವೆ.

ಲೆಜ್ಜರ್, ಜರ್ನಲ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The C. P. G Co., Ltd.,
MANGALORE

Batliwala's Preparations Cover All Your Needs.
A NAME THAT MERIT HAS MADE FAMOUS.

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಜ್ವರ ಮಿಕ್ಸ್ಚರ್ ಪಿಲ್ಸ್ — ಮಲೇರಿಯಾ ಜ್ವರ ಪ್ರಕಾರಕ್ಕೆ, ರೂ. ೧.
ಬಾಟ್ಲಿವಾಲರ ಟಾನಿಕ್ ಪಿಲ್ಸ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಶಕ್ತಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಟೋನ್ ಆಫ್ ಬಾಮ್ — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಕೈರಳ ಮಿಕ್ಸ್ಚರ — ಕಾಂಜಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೀನ ಟಿಕಡಿಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟಿಕಡಿಗಳು ಇರುತ್ತವೆ.
ಬಾಟ್ಲಿವಾಲರ ಬಾಲಕ ಗುಳಿಗೆಗಳು — ಧಾತು ಪುಷ್ಟಿಕರ, ರೂ. ೧—೩—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಜುಲ ಶಕ್ತಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE.

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಡಾ. ಯಚ್. ಎಲ್. ಬಾಟಿವಾಲಾ ಸನ್ಸ್ ಅಂಡ್ ಕೋ. ಲಿಮಿಟೆಡ್.
ಏಜಂಟರು ದೊರೆಯುತ್ತಾರೆ. Sayani Road, P. O. Cadell ad, Bombay. No. 14.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ — ತೀರ್ಥಹಳ್ಳಿ — ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಿಗ್ಗೆ ೯ ಘಂಟೆಗೆ ಹೊರಡುತ್ತಾ ಇದ್ದುದು ಸರಿಯಷ್ಟೆ. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. ೧೫—೪—೧೯೩೫ರ ಆರಾಭ್ಯ ಶಿವಮೊಗ್ಗಾದಿಂದ ಬೆಳಿಗ್ಗೆ ೮ರ ಘಂಟೆಗೆ ಹೊರಡಲು ಏರ್ಪಾಡುಮಾಡಿದೆ.

ತೀರ್ಥಹಳ್ಳಿ — ಸಾಗರರಸ್ತೆ.

ಅನಂತಪುರ—ಸಾಗರಕ್ಕೆ 0—8—0. ತೀರ್ಥಹಳ್ಳಿ—ಸಾಗರಕ್ಕೆ ೨—೮—೦.

ಆರಗ, ಗುಡ್ಡೇಕೊಪ್ಪ, ಕೋಣಂದೂರು, ಹಾದಿಗಲ್, ಹುಂಚದಕಟ್ಟೆ, ರಿಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳಗಳ ದೆಸೆಯಿಂದ ಕಳೆದ ಜೂನ್ ತಾ. ೮ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಕು ೬—೧೧—೧೯೩೪ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾಭಟ್,
ಮಾಲಿಕ,
ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವತ್ತೂ ಅಂಗಡಿ ಉತ್ತಮ ತರದ ಗಡಿಯಾರ, ಫೋಟೋಗಳೂ, ಕ್ಲೋಕುಗಳೂ, ಟೈಮ್‌ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೊನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೊ. — ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರುವುದರಿಂದ ಹೆಚ್ಚಿನ ಸಮಯವು ದೊರಕುವುದು.

ಟ್ಟಾಕಿ. ಓಟದ ಸ್ಪರ್ಧೆಯು ಬರುವ ಜೂನ್ ೯ನೇ ತಾರೀಕಿಗೆ ಬಂಟವಾಳ ಬೋರ್ಡು ಗರ್ಲ್ಸ್ ಶಾಲೆಯಲ್ಲಿಯೂ, ರಾಯಿಯಲ್ಲಿಯೂ, ಕಾವಳಕಟ್ಟೆಯಲ್ಲಿಯೂ ಬೆಳಗಿನಿಂದ ಸಂಜೆ ವರೆಗೆ ನಡೆಯುವದು.

ಕೊಂಬಾಡಿ— ಶ್ರೀ ರಾಮಾಶ್ರಮ ಎಲಿಮೆಂಟರಿ ಶಾಲೆಯ ಅಭಿವೃದ್ಧಿಯ ಸಲುವಾಗಿ ಸದ್ರಿ ಶಾಲಾ ಟ್ರಸ್ಟ್ ಬೋರ್ಡು ಪ್ರೆಸಿಡೆಂಟ್ ರಾ॥ ಕೊಂಬಾಡಿ ಕೃಷ್ಣಯ್ಯ ಶ್ಯಾನುಭಾಗರ ಅಪೇಕ್ಷೆ ಮೇರೆಗೆ ಫರಂಗಿಪೇಟೆ ಶ್ರೀ ರಾಮಾ ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳು 'ಸತೀ ವೀರ ಬಾಲ' ಎಂಬ ನವೀನವಾದ ಸಿನೆಮಾ ಚಿತ್ರದ ಪರಿವರ್ತನೆಯ ನಾಟಕ ಒಂದನ್ನು ಸ್ಥಳ ಸಂಕೋಚದ ತೆರೆಯಿಂದ ತಾರೀಖು ೧೯ ಮತ್ತು ೨೦ ಈ ಎರಡು ದಿನ ಆಡಿ ತೋರಿಸಿದರು. ಪ್ರೇಕ್ಷಕರು ಮಕ್ಕಳ ಈ ನಾಟಕವನ್ನು ನೋಡಿ ತುಂಬಾ ಪ್ರೋತ್ಸಾಹಿಸಿದ್ದಲ್ಲದೆ ಅವರ ಉದಾರಕ್ಕಾಗಿ ಶ್ಲಾಘಿಸಿ ಹರಸಿದರು. ನಾಟಕದಿಂದ ಖರ್ಚು ಕಳೆದು ಉಳಿಯುವ ಹಣ ಅಂದಾಜು ರೂಪಾಯಿ ೧೫೦ನ್ನು ಕಟ್ಟೋಣದ ವಿಸ್ತೀರ್ಣ ಬಗ್ಗೆ ಉಪಯೋಗಿಸುವದಾಗಿ ಕೇಳುತ್ತೇವೆ. ಹೀಗೆಯೇ ಶಾಲೆಗಳೊಳಗೆ ಪರಸ್ಪರ ಸಮ್ಬಂಧವನ್ನು ಬೆಳೆಸುವ ಇಂಥಾ ಕಾರ್ಯಗಳನ್ನು ಇತರ ಕಡೆಗಳಲ್ಲಿಯೂ ಕೈಕೊಳ್ಳುವರಾಗಿ ಹಾರೈಕೆ.

ಫರಂಗಿಪೇಟೆ— ಈ ಸೆಂಟರಿನ ೩ನೇ ಉಪಾಧ್ಯಾಯರ ಸಭೆಯು ತಾ. ೨೫ರಲ್ಲಿ ರಾ॥ ಎಸ್. ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ ತುಂಬೆ ಬೋರ್ಡು ಶಾಲೆಯ ಬಳಿ ಇರುವ ತೋಟದಲ್ಲಿ ಜರಗಿತು. ಗತ ಮೀಟಿಂಗಿನ ನಿರ್ಣಯಗಳನ್ನು ಓದಿ ಹೇಳಿದ್ದು, ತಾಲೂಕು ಸಂಘದ ಸ್ಥಾಪನೆ ವ ನಿರ್ಣಯಗಳನ್ನು ಓದಿ ತಿಳಿಸಿದ್ದು, ಫರಂಗಿಪೇಟೆ ಶಾಲಾ ಅಧ್ಯಾಪಕ ಎಸ್. ಸುಬ್ಬಣ್ಣ ಕಾರಂತರು ೪ನೇ ಕ್ಲಾಸಿನ ಮಕ್ಕಳಿಗೆ ಧ್ರುವ ನಕ್ಷತ್ರದ ಕುರಿತು ಭೂಗೋಳ ಪಾಠದಲ್ಲಿ ಮಾದರಿ ಪಾಠವನ್ನು ಕೊಟ್ಟದ್ದು, ಇವೇ ಮುಂತಾದವುಗಳು ನಡೆದವು. ಉಪಾಧ್ಯಾಯರ ಹೆಚ್ಚಿನ ಗೈರಾಜರಿಯಿಂದಲೂ, ಸಮಯ ಸಂಕೋಚದಿಂದಲೂ ಮಕ್ಕಳ ವೃತ್ತಿ ಮತ್ತು ಹಸ್ತಕಲೆ ಎಂಬವರ ಕುರಿತು ಓದಬೇಕಾದ ಉಪನ್ಯಾಸ ವ ಚರ್ಚೆಗಳನ್ನು ಮುಂದಿನ ಸಭೆಗೆ ಬಾಕಿ ಇಡಲಾಯಿತು.

ಬರುವ ಸಭೆಯನ್ನು ತಾ. ೭-೬-'೩೦ನೇ ಶನಿವಾರ ದಿನ ಫರಂಗಿಪೇಟೆಯಲ್ಲಿ ಜರಗಿಸಬೇಕಾಗಿ ನಿರ್ಣಯಿಸಿ ಬಳಿಕ ಅಧ್ಯಕ್ಷರು ಉಪಾಧ್ಯಾಯರ ಏಳಿಗೆಯ ಕೆಲವು ಸೂತ್ರಗಳನ್ನು ವಿವರಿಸಿ ಭಾಷಣ ಮಾಡಿದ ಮೇಲೆ, ಸದ್ರಿ ಶಾಲಾ ಹೆಡ್‌ಮಾಸ್ಟರ್ ರಾ॥ ಬಿ. ಸುಬ್ರಾಯ ಶೆಟ್ಟಿಯವರಿಂದ ಕೊಡಲ್ಪಟ್ಟ ಉಪಹಾರಾದಿ ಆತಿಥ್ಯಗಳ ನಂತರ ರಾಷ್ಟ್ರಗೀತದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಬೆಳ್ಳಾರೆ— ಇಲ್ಲಿ ಪುತ್ತೂರು ತಾಲೂಕು ಬೋರ್ಡಿನವರಿಂದ ನೂತನವಾಗಿ ಕಟ್ಟಿಸಿದ ಹಾಯರ್ ಎಲಿಮೆಂಟರಿ ಶಾಲಾ ಕಟ್ಟೋಣದ ಪ್ರವೇಶ ಸಮಾರಂಭವೂ, ಶಾಲೆಯ ವಾರ್ಷಿಕ ಉತ್ಸವವೂ ತಾರೀಖು ೩೦-೪-'೩೦ರಲ್ಲಿ ಮಾನ್ಯ ಪುತ್ತೂರು ತಾಲೂಕು ಬೋರ್ಡು ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು.

ಕಾರ್ಯಕ್ರಮದಂತೆ ಬೆಳಿಗ್ಗೆ ಘಂಟೆ ೭ಕ್ಕೆ ಪುರಜನರ ಸೇರುವಿಕೆಯಿಂದ ಶಾಲಾ ಬಾಲಕರ ಭಜನೆಯೊಂದಿಗೆ ಮೆರವಣಿಗೆಯಿಂದ ಪುತ್ತೂರು ಶಾಲಾ ಸ್ಕೌಟ್ ದಳದವರನ್ನು ಎದುರುಗೊಂಡು ನವೀನವಾಗಿ ಕಟ್ಟಿಸಿದ ಶಾಲಾ ಪ್ರವೇಶವನ್ನು ತೆರೆದು, ಬಾಲಕರ ಪಂದ್ಯಾಟಗಳು ನಡೆದ ಮೇಲೆ ಕೂಡಿದ ಸಭಿಕರೆಲ್ಲರಿಗೂ ಯೋಗ್ಯ ಫಲಾಹಾರದಿಂದ ಸತ್ಕರಿಸಲಾಯಿತು.

ತದನಂತರ ಸಂಜೆ ಘಂಟೆ ೪ರಿಂದ ಊರ ಮಹನೀಯರ ವ ಪರ ಊರಿನಿಂದ ಬಿಜ್ಜಯಿಸಿದ ಗೃಹಸ್ಥರ ಮಹಾಸಭೆಯು ನೆರವೇರಿಸಲ್ಪಟ್ಟಿತು. ನೆರದ ಸಭಿಕರ ಪೈಕಿ ಹೆಡ್‌ಮಾಸ್ಟರ್ ಕೆ. ನಾರಾಯಣರಾಯರ ಸೂಚನೆಯನ್ನು ಪಂಡಿತ ಬಿ. ನಾರಾಯಣಶೇಕರರು ಅನುಮೋದಿಸಿದಂತೆ ಮಹಾರಾಜೇಶ್ರೀ ಪುತ್ತೂರು ತಾಲೂಕು ಬೋರ್ಡು ಪ್ರೆಸಿಡೆಂಟ್, ಮೊಳಹಳ್ಳಿ ಶಿವರಾಯರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು.

ಅಧ್ಯಕ್ಷರ ಸೂಚನೆಯಂತೆ ಶಾಲಾ ವರದಿಯನ್ನು ಮತ್ತು ವಿದ್ಯಾರ್ಥಿಗಳ ಊಟದ ಎರಡು ಭವನಗಳ ವರದಿಯನ್ನು ಓದಲಾಯಿತು. ಅನಂತರ ಅಧ್ಯಕ್ಷರಿಂದ ಶಾಲಾ ಬಾಲಕ, ಬಾಲಕಿಯರಿಗೆ ಇನಾಮುಗಳು ಹಂಚಲಾದವು. ಸಭೆಯ ಅನುಮತಿಯಿಂದ ಕೆಲ್ಲರಿವರು ಹಿತಚಿಂತಕರು ಶಾಲೆಯ ಏಳಿಗೆಯ ಕುರಿತು ಬಹಳ ಸಂತೋಷಪಟ್ಟು ಒಬ್ಬರಮೇಲೊಬ್ಬರು ಯೋಗ್ಯ ಭಾಷಣಗಳನ್ನು ಕೊಟ್ಟರು. ಕಡ್ಡಾಯಕ್ಕೆ ಸರಿಯಾಗಿ ಅಧ್ಯಕ್ಷರು ತನ್ನ ಅಸ್ವಸ್ಥತೆಯಿಂದ ಕೂಡಿದ ಸಭಿಕರನ್ನು ಆನಂದಗೊಳಿಸುವಂತೆ ಯೋಗ್ಯ ಭಾಷಣವನ್ನಿತ್ತರು. ಸಭಾಂತ್ಯದಲ್ಲಿ ಪುತ್ತೂರು ಮತ್ತು ಬೆಳ್ಳಾರೆ ಶಾಲಾ ಬಾಲಕರು ದುರ್ಯೋಧನ, ಮ್ಯಾರಲೀಫರ ಎಂಬ ಎರಡು ನಾಟಕಗಳನ್ನು ಆಡಿ ಸಭಿಕರನ್ನು ಆನಂದಗೊಳಿಸಿದರು. ನೆರದ ಸಭಿಕರಿಗೂ ಪುತ್ತೂರು ತಾಲೂಕು ಬೋರ್ಡು ಪ್ರೆಸಿಡೆಂಟ್ ಮತ್ತು ವ್ಯೆಸ್ ಪ್ರೆಸಿಡೆಂಟರಿಗೂ, ಪುತ್ತೂರು ಶಾಲೆಯ ಸ್ಕೌಟ್ ದಳದವರಿಗೂ ವಂದನೆಗಳನ್ನು ಅರ್ಪಿಸಿ ಸಭಾವಿಸರ್ಜನೆಯಾಯಿತು.

ಇಲ್ಲಿಯ ಶಾಲೆಯ ಉಪಯೋಗಾರ್ಥವಾಗಿ ಇದೇ ಬರುವ ಜೂನ್ ತಿಂಗಳ ತಾರೀಖು ೩ರಲ್ಲಿ ಪುತ್ತೂರು ಮತ್ತು ಮಂಗಳೂರು-ಕಲ್ಲಾರಿಂದ ಬೆಳ್ಳಾರೆ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ 'ಸಿತಾಮಹಿಮೆ' ಎಂಬ ನಾಟಕವನ್ನು ಅಭಿನಯಿಸಲ್ಪಡುವುದು. ಮಹಾಜನರೆಲ್ಲರೂ ಉದಾರ ಸಹಾಯವನ್ನು ಮಾಡಬೇಕಾಗಿ ಅಪೇಕ್ಷಿಸುತ್ತೇವೆ.

ಇಲ್ಲಿಯ ಶ್ರೀ ದೇವಿ ಅಮ್ಮನವರ ಗುಡಿಯಲ್ಲಿ ಪ್ರಾದಿನಂತೆ ಜರಗತಕ್ಕ ಕಾರ್ತಿಕ ಹುಣ್ಣಿಮೆ ಪೂಜೆಯು ತಾ. ೨೩-೫-'೩೦ನೇ ದಿನ ಜರಗಿಸಲ್ಪಟ್ಟಿತು. ಈ ವರ್ಷವೂ ಗತವರ್ಷಕ್ಕಿಂತ ಜಾಸ್ತಿಯಾಗಿ ಅಂದರೆ ಸುಮಾರು ೩೫೦ ಕೋಳಿಗಳೂ, ೩೭ ಹಂದಿಗಳೂ ಮರುದಿನ ಬೆಳಿಗ್ಗೆ ತಲೆ ಕಡಿಯಲ್ಪಟ್ಟವು. ಜಗಜ್ಜನನಿಯಾದ ಮುಕಾಂಬಿಕೆಗೆ ಯೋಗ್ಯವಾದ ಪುಷ್ಪ ಕುಂಕುಮಾದಿಗಳ ಪೂಜೆಯನ್ನು ಮಾಡುವ ರೀತಿಯನ್ನೇ ಭಕ್ತರು ಬಿಟ್ಟುಬಿಟ್ಟು, ಕಟುಕರೋಪಾದಿಯಲ್ಲಿ ಬಾಯಿಬಾರದ ಪಕ್ಷಿ ಮೃಗಗಳನ್ನು ತಲೆ ಕಡಿದು ಅರ್ಪಿಸುವುದು ಘೋರ ನ್ಯಾಯವೋ! ಶ್ರೀ ದೇವಿಗೇ ಗೊತ್ತಲ್ಲದೆ ಪ್ರೇಕ್ಷಕರಿಂದ ಹೇಳಲು ಬರುವುದಿಲ್ಲ. ಮಹಾ ಶಕ್ತಿವಂತೆಯಾದ ತಾಯಿಯೇ! ನೀನು ನಿನ್ನ ಭಕ್ತರಿಗೆ ಯೋಗ್ಯ ಸದ್ಬುದ್ಧಿಯನ್ನು ಕೊಟ್ಟು ಮುಂದಕ್ಕಾದರೂ ಇಂಥಾ ಅಪರಾಧಕ್ಕೆ, ಪಾಪಕ್ಕೆ ಗುರಿಯಾಗದಂತೆ ಪ್ರೇರೇಪಿಸುವಿಯಾಗಿ ನಂಬುವೆವು.

ವಿವಿಧ ಸಮಾಚಾರಗಳು.

ವಿದ್ಯಾರ್ಥಿಗಳ ಮದುವೆಯ ನಿಷೇಧ.

ಪಂಜಾಬಿನಲ್ಲಿ ಶಾಲೆಗೆ ಬರುವ ವಿದ್ಯಾರ್ಥಿಗಳಲ್ಲಿ ೧೮ ವರುಷಕ್ಕೆ ಮೊದಲೇ ಮದುವೆಯಾದವರನ್ನು ಶಾಲೆಗೆ ಪ್ರವೇಶವಿಲ್ಲವಂತೆ ಮಾಡುವ ಪ್ರಶ್ನೆಯು ಚೆನ್ನಾಗಿ ಚರ್ಚಿಸಲ್ಪಡುತ್ತಿದೆ. ಅವರು ಮೆಟ್ರಿಕ್ಯುಲೇಶನ್ ಪರೀಕ್ಷೆಗೂ ಕುಳಿತುಕೊಳ್ಳಕೂಡದೆಂಬ ಯೋಜನೆಗಳು ನಡೆಯುತ್ತಿವೆ. ಅಲ್ಲಿಯ ಹಲವು ಶಾಲೆಗಳು ಈ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಪ್ರಕಟನೆಗಳನ್ನು ಕೊಟ್ಟಿರುವದಲ್ಲದೆ ಹಲವು ಕಾಲೇಜುಗಳೂ ಶಾಲೆಯೊಂದಿಗೆ ಸೇರಿ ಇದೇ ರೀತಿಯ ಪ್ರಕಟನೆಗಳನ್ನು ಕೊಟ್ಟಿರುವರು.

ಪಂಜಾಬು ಯುನಿವರ್ಸಿಟಿಯ ಸ್ಕೂಲ್ ಬೋರ್ಡಿನವರು ಈ ಕುರಿತಾಗಿ ವಿಚಾರಮಾಡಲು ಒಂದು ಸಬ್ ಕಮಿಟಿಯನ್ನು ನೇಮಿಸಿರುವರು. ಮೆಟ್ರಿಕ್ಯುಲೇಶನ್ ಮತ್ತು ಎಸ್. ಎಸ್. ಎಲ್. ಸಿ. ಪರೀಕ್ಷೆಗಳಿಗೆ ಹದಿನೆಂಟು ವರುಷಗಳಿಗಿಂತ ಮೊದಲೇ ಮದುವೆಯಾದ ವಿದ್ಯಾರ್ಥಿಗಳು ಕುಳಿತುಕೊಳ್ಳಬಹುದೊ, ಬಾರದೊ ಎಂಬುದೇ ಅವರು ವಿಚಾರಮಾಡುವ ಸಂಗತಿಯು. ಯಾವದಾದರೂ ಮಾನ್ಯತೆಯಾದ ಸ್ಕೂಲಿನಿಂದ ೧೮ ವರುಷಗಳಿಗೆ ಮೊದಲೇ ಮದುವೆಯಾದ ವಿದ್ಯಾರ್ಥಿಗಳನ್ನು ಮೆಟ್ರಿಕ್ಯುಲೇಶನ್ ಅಥವಾ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ೧೯೩೩ನೇ ಇಸವಿಯಿಂದ ಕಳುಹಿಸುವದು ಸರಿಯಲ್ಲವೆಂದು ಈ ಕಮಿಟಿಯವರು ಸೂಚಿಸಿರುವರು. ಬಿನ್ನಗೆ ಹಾಗೆ ಮದುವೆಯಾದ ವಿದ್ಯಾರ್ಥಿಗಳು ಪ್ರದಾದರೆ ೧೯೩೩ನೇ ಇಸವಿಯ ತರುವಾಯ ಅವರು ಪ್ರೈವೇಟ್ ಉಮೇದವಾರರಾಗಿ ಎಸ್. ಎಸ್. ಎಲ್. ಸಿ. ಅಥವಾ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತುಕೊಳ್ಳಬಹುದೆಂದೂ ಕಮಿಟಿಯವರು ಸೂಚಿಸುವರು.

ಲಾಹೋರಿನ ಫೋರ್‌ಮನ್ ಕ್ರಿಶ್ಚನ್ ಕೊಲೇಜಿನವರೂ ಮದುವೆಯಾದ ವಿದ್ಯಾರ್ಥಿಗಳನ್ನು ಇಂಟರ್‌ಮೀಡಿಯೇಟ್ ಕ್ಲಾಸಿಗೆ ಸೇರಿಸಿಕೊಳ್ಳಬಾರದೆಂದು ನಿಶ್ಚಯಿಸಿರುವರಂತೆ.

ಆಲ್ ಇಂಡಿಯಾ ಆಯುರ್ವೇದ ಪರಿಷತ್ತು.

ನಾಸಿಕದಲ್ಲಿ ಆಲ್ ಇಂಡಿಯಾ ಆಯುರ್ವೇದ ವೈದ್ಯರ ೧೯ನೆಯ ಪರಿಷತ್ತು ತಾ. ೧೯ರಿಂದ ೨೩ರ ವರೆಗೆ ನಡೆಯಿತು.

ತಾ. ೧೮ನೇ ದಿನ ಡಾ॥ ಜಿ. ವಿ. ದೇಶಮುಖರು ಸುಮಾರು ೧೫೦೦ ಬಗೆಯ ವನಸ್ಪತಿ ಔಷಧಗಳನ್ನು ಪ್ರದರ್ಶಿಸುವ ಒಂದು ಪ್ರದರ್ಶನವನ್ನು ತೆರೆದರು. ಆಯುರ್ವೇದ ವನಸ್ಪತಿಗಳನ್ನು ಬಹು ಸುಲಭವಾಗಿಯೂ ಕಡಿಮೆ ಕ್ರಯದಲ್ಲಿಯೂ ತರಕೊಳ್ಳಬಹುದಾದುದರಿಂದ ಎಲೋಪತಿ ವೈದ್ಯರು ಆಯುರ್ವೇದ ವಿದ್ಯೆಯನ್ನು ಕಲಿಯುವದೊಳ್ಳೆಯದೆಂದು ಅವರು ಸೂಚಿಸಿದರು. ಎಲ್ಲ ವೈದ್ಯರೂ ದೇಹಶಾಸ್ತ್ರ ಮೊದಲಾದ ಹಲವು ವಿದ್ಯೆಗಳನ್ನು ಕಲಿಯಬೇಕೆಂದೂ ಸೂಚಿಸಿದರು.

ಪರಿಷತ್ತು ತಾ. ೧೯ನೇ ದಿನ ಸಾಯಂಕಾಲ ಪ್ರಾರಂಭಿಸಿತು. ಅಧ್ಯಕ್ಷರಾದ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಪರಿಷನ್ಮಂದಿರವನ್ನು ಪ್ರವೇಶಿಸಿದೊಡನೆ ಸ್ವಯಂಸೇವಕರೂ ಬಾಯ್‌ಸ್ಕೌಟರೂ ಅವರನ್ನು ಜಯಘೋಷದಿಂದ ಆಮಂತ್ರಿಸಿದರು. ಸುಮಾರು ೩೦೦ ಪ್ರತಿನಿಧಿಗಳು ಬೇರೆ ಬೇರೆ ಕಡೆಗಳಿಂದ ಬಂದಿದ್ದರು. ಪ್ರಾರ್ಥನೆಯನ್ನು ಹಾಡಿದ ಮೇಲೆ ಸ್ವಾಗತಾಧ್ಯಕ್ಷರಾದ ವೈದ್ಯಾಚಾರ್ಯ ಕೃಷ್ಣಮೂರ್ತಿ ದೇವಧರರು ಸ್ವಾಗತ ಭಾಷಣವನ್ನು ಸಂಸ್ಕೃತದಲ್ಲಿ ಓದಿದರು. ಸಭಿಕರ ಸೂಚನೆಯಂತೆ ಅಧ್ಯಕ್ಷರು ಉಚ್ಚಾಸನವನ್ನು ಅಲಂಕರಿಸಿದರು. ಪರಿಷತ್ತಿನ ಕಾರ್ಯದರ್ಶಿಯವರಲ್ಲೊಬ್ಬರಾದ ಡಾ॥ ಎ. ಎನ್. ಭೋಯಿಯವರು, ಪರಿಷತ್ತಿಗೆ ಬಾರಲಾಗದವರ ವ್ಯಸನವನ್ನು ಸೂಚಿಸಿ, ಹಲವು ವೈದ್ಯರುಗಳಿಂದ ಬಂದ ಸಂದೇಶಗಳನ್ನು ಓದಿ ಹೇಳಿದರು. ನಂತರ ಅಧ್ಯಕ್ಷರು ತನ್ನ ದೀರ್ಘವೂ, ವಿಷಯಗರ್ಭಿತವೂ ಆದ ಭಾಷಣವನ್ನು ಓದಿದರು. ಈ ಭಾಷಣದಲ್ಲಿ ಸಂಸ್ಕೃತ ಮತ್ತು ಇಂಗ್ಲೀಷ ಭಾಷೆಗಳು ಕೂಡಿ ಇದ್ದವು.

ಪರಿಷತ್ತು ನಡೆದ ಮೂರು ದಿನಗಳಲ್ಲಿ ೩೧ ಠರಾವುಗಳು ಮಂಜೂರಾದವು. ಆಯುರ್ವೇದ ವಿದ್ಯಾಪೀಠ, ಮಹಾಮಂಡಲ ರಚನೆ, ಮೊದಲಾದವುಗಳ ಕುರಿತಾಗಿಯೂ ದೇಶೀಯ ರಾಜರುಗಳು ಆಯುರ್ವೇದವನ್ನು ಪ್ರೋತ್ಸಾಹಿಸಬೇಕಾಗಿಯೂ, ಈ ಕುರಿತಾಗಿ ತಮ್ಮೊಳಗೆ ಸಹಾಯವನ್ನು ಮಾಡಿದವ ಪ್ರಾಂತಿಕ ಸಂಸ್ಥೆಗಳನ್ನು ಅಭಿನಂದಿಸಿಯೂ ಠರಾವುಗಳಾದವು. ವೈದ್ಯರು ಕೊಟ್ಟ ಮೆಡಿಕಲ್ ಸರ್ಟಿಫಿಕೇಟನ್ನು ಸರಕಾರದವರು ಮಂಜೂರು ಮಾಡಬೇಕೆಂದಾಯಿತು. ಈ ಕುರಿತಾಗಿ ಹಲವು ವೈದ್ಯರುಗಳಿಂದ ಕೂಡಿದ ಒಂದು ಕಮಿಟಿಯು ನೇಮಕವಾಯಿತು.

ಒಂದು ಪಬ್ಲಿಸಿಟಿ ಬ್ಯೂರೋವನ್ನು ಸ್ಥಾಪಿಸಬೇಕಾಗಿಯೂ ಆಲ್ ಇಂಡಿಯಾ ಕಮಿಟಿಯವರು ಆಯುರ್ವೇದದ ಕುರಿತು ಮುಖ್ಯ ಮುಖ್ಯ ವಿಷಯಗಳನ್ನು ಪ್ರಕಟಿಸತಕ್ಕದ್ದೆಂದೂ ಆಯಿತು. ಆಯುರ್ವೇದ ವೈದ್ಯರುಗಳಿಗೆ ಸಂಬಂಧಿಸಿದ ಹಲವು ಮುಖ್ಯ ವಿಷಯಗಳ ಕುರಿತಾಗಿ ಚರ್ಚಿಸಲಾಯಿತು. ನಾಲ್ಕು ದಿನಗಳ ಕಾರ್ಯಕ್ರಮಗಳು ಮುಗಿದು ಪರಿಷತ್ತು ಯಶಸ್ವಿಯಾಗಿ ಕೊನೆಗೊಂಡಿತು.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆ.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯ ಕಾರ್ಯಗಳು ಮುಂಬಾಯಿಯಲ್ಲಿ ಕಳೆದ ರವಿವಾರ ಸಾಯಂಕಾಲ ೫ ಘಂಟೆಗೆ ಪ್ರಾರಂಭವಾದವು. ೩೦ ಮೆಂಬರರು ಹಾಜರಿದ್ದರು. ಬಂಗಾಳದಿಂದ ಒಬ್ಬರೇ ಒಬ್ಬರು ಬಂದಿದ್ದರು. ತಮಿಳು ಮತ್ತು ಆಂಧ್ರ ದೇಶದಿಂದ ಹೆಚ್ಚಿಗೆ ಮೆಂಬರರು ಬಂದಿದ್ದರು. ಮತ್ತು ಅಂದಿನ ಕಾರ್ಯಕ್ರಮಗಳಲ್ಲಿ ಅವರೇ ಮುಖ್ಯ ಭಾಗವನ್ನು ವಹಿಸಿದರು. ಡಾ॥ ಅನ್ಸಾರಿ, ಜಮುನಾಲಾಲ ಬಜಾಜ, ವಲ್ಲಭಭಾಯಿ ಪಟೇಲ ಮೊದಲಾದವರೂ ಹಾಜರಿದ್ದರು. ಜವಾಹರಲಾಲರವರ ಸೂಚನೆಯಂತೆ ಹಿಂದೆ ಕಲಕತ್ತೆಯಲ್ಲಿ ನಡೆದ ಸಭೆಯ ಕಾರ್ಯಕ್ರಮಗಳನ್ನು ರಿಕಾರ್ಡು ಮಾಡಲಾಯಿತು. ಕೋಶಾಧಿಕಾರಿಯಾದ ಬಾಬು ಶಿವಪ್ರಸಾದ ಗುಪ್ತರು ವಿದೇಶ ಸಂಚಾರದ ಸಂಬಂಧವಾಗಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬರೆದ ಪತ್ರವನ್ನು ಓದಲಾಯಿತು. ಶ್ರೀ ಸಾಂಬಮೂರ್ತಿಯವರು ಜೈಲಿನಲ್ಲಿರುವುದರಿಂದ ವರ್ಕಿಂಗ್ ಕಮಿಟಿಗೆ ಅವರ ಬದಲು ಡಾ॥ ಪಟ್ಟಾಭಿ ಸೀತಾರಾಮಯ್ಯನವರನ್ನೇ ನೇಮಿಸಬೇಕೆಂದಾಯಿತು. ಸಕಲಸಭಾಸದರನ್ನು ಅಭಿನಂದಿಸಲಾಯಿತು. ತದನಂತರ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಶಿಫಾರಸು ಮಾಡಿದ ಹೊಸ ಕ್ರಮದ ಕಟ್ಟಳೆಗಳ ವಿಷಯವಾಗಿ ಚರ್ಚೆ ನಡೆಯಿತು. "ಯಾವದೇ ಕಾಂಗ್ರೆಸ್ ಕಮಿಟಿಯು ಕ್ರಮಶಿಕ್ಷಣೆಯನ್ನುಲ್ಲಂಘಿಸಿದರೆ ಅದರ ಮೇಲೆ ತಕ್ಕದಾದ ಶಿಕ್ಷೆ ವಿಧಿಸಲು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ ಹಕ್ಕು ಇರತಕ್ಕದ್ದು. ಇದೇ ರೀತಿ ಕಾಂಗ್ರೆಸ್ ಕಮಿಟಿಗೆ ಸಂಬಂಧಿಸಿದ ಯಾವನೊಬ್ಬ ಮೆಂಬರನಾಗಲಿ, ಕಾಂಗ್ರೆಸ್ ನಿರ್ಣಯಕ್ಕೆ ವಿರೋಧವಾಗಿ ನಡೆಸುವದಾಗಲಿ, ಹಣವನ್ನು ದುರುಪಯೋಗಪಡಿಸುವುದಾಗಲಿ, ಮಾಡಿದರೆ, ಆತನ ವಿಷಯವಾಗಿ ತಕ್ಕುದಾದುದನ್ನು ಮಾಡಲು ಆಲ್ ಇಂಡಿಯಾ ಕಮಿಟಿಯವರಿಗೆ ಹಕ್ಕು ಇರತಕ್ಕದ್ದು. ಆಲ್ ಇಂಡಿಯಾ ಕಮಿಟಿಯವರು ಇಲ್ಲದಿರುವಾಗ ವರ್ಕಿಂಗ ಕಮಿಟಿಯವರಿಗೆ ಈ ಹಕ್ಕು ಇರತಕ್ಕದ್ದು." ಎಂದು ಆಗಿದ್ದಿತು. ಬಹಳ ಚರ್ಚೆಯ ಮೇಲೆ ಹಲವು ಬದಲಾವಣೆಗಳಿಂದ ಇದು ಮಂಜೂರಾಯಿತು. ಒಂದು ಕಾಂಗ್ರೆಸ್ ಮೆನ್ಯುವಲನ್ನು ಪ್ರಕಟಿಸಬೇಕೆಂದೂ ಮಂಜೂರಾಯಿತು.

ಪ್ರಾಂತಗಳಲ್ಲಿ ಕಾಂಗ್ರೆಸ್ ಕೆಲಸಗಳನ್ನು ಬಲಪಡಿಸಬೇಕೆಂದು ಗಾಂಧೀಜಿಯವರು ತಂದ ಠರಾವು ಮಂಜೂರಾಯಿತು. ಮಹಾತ್ಮಾಜಿಯವರ ಠರಾವು "ಈಗ ತೋರುವಂತೆ ಸರಕಾರದವರು ಕಾಂಗ್ರೆಸ್ ಧುರೀಣರನ್ನೂ ಮುಖ್ಯ ಧುರೀಣರನ್ನೂ ಕೈದುಮಾಡುವುದೂ ಮನೆಗಳನ್ನು ಹುಡುಕುವುದೂ, ಇದನ್ನು ಇಡೀ ದೇಶವೇ ನಿಷೇಧಿಸುತ್ತಿರಬೇಕು. ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಇದಕ್ಕಾಗಿ ತಮ್ಮಲ್ಲಿ ಹೊಸ ಕಾರ್ಯಕ್ಷೇತ್ರಗಳನ್ನು ಸ್ಥಾಪಿಸಿ ಹುರುಪಿನಿಂದ ಕೆಲಸ ಮಾಡದಿದ್ದಲ್ಲದೆ ಇದು ಸಾಧ್ಯವಾಗಲಾರದು. ಪ್ರಾಂತಿಕ ಕಾಂಗ್ರೆಸ್ ಸಂಸ್ಥೆಗಳಲ್ಲಿ ಪ್ರಾಂತದ ಶೇಕಡಾ ಕಾಲರಷ್ಟಾದರೂ ಜನರು ಮೆಂಬರರಾಗಿರಬೇಕು. ಜಿಲ್ಲೆಯ ಶೇಕಡಾ ಜನರಷ್ಟು ಪ್ರತಿನಿಧಿಗಳಾದರೂ ಇರತಕ್ಕದ್ದು. ಹಳ್ಳಿಯ ಸಂಸ್ಥೆಗಳಲ್ಲಿ ಹಳ್ಳಿಯ ಶೇಕಡಾ ೪ರಷ್ಟು ಜನರಾದರೂ ಮೆಂಬರರಾಗಿರತಕ್ಕದ್ದು. ಮುಂಬಾಯಿ ಮತ್ತು ದಿಲ್ಲಿ ಪ್ರಾಂತಗಳಲ್ಲಿ ಮೆಂಬರರ ಶೇಕಡಾ ೩ಕ್ಕಿಂತ ಕಡಿಮೆಯಾಗಬಾರದು. ಆಗಸ್ಟ ೩೧ರೊಳಗೆ ಈ ಕುರಿತು ನಡೆಯುವ ಪರೀಕ್ಷೆಯಲ್ಲಿ ತೃಪ್ತಿಕರವಾಗಿ ಕಂಡುಬಾರದ ಹಳ್ಳಿ ಸಂಸ್ಥೆಯು ಕಮಿಟಿಯವರಿಂದ ಮಂಜೂರು ಮಾಡಲಾಗಲಿಕ್ಕಿಲ್ಲ. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ಆಗಿಂದಾಗ್ಗೆ ಕೊಡಬಹುದಾದ ಸೂಚನೆಗಳಿಗೆ ಯಾವ ಸಂಸ್ಥೆಯು ಶಿರಬಾಗುವುದಿಲ್ಲವೊ ಅಂತಹ ಸಂಸ್ಥೆಯನ್ನು ತೊಡೆದುಹಾಕಲಿಕ್ಕಿದೆ" ಎಂದು ಮಹಾತ್ಮಾಜಿಯವರು ಹಿಂದೀ ಮತ್ತು ಇಂಗ್ಲೀಷಿನಲ್ಲಿ ಸವಿವರವಾಗಿ ಸೂಚಿಸಿದರು. ಈ ಕುರಿತಾಗಿ ಅವರು ಒಂದು ಭಾಷಣವನ್ನು ಮಾಡಿದರು. ಶ್ರೀ ಶ್ರೀನಿವಾಸ ಅಯ್ಯಂಗಾರರು ಇದನ್ನು ಅನುಮೋದಿಸಿದರು. ಸ್ವಲ್ಪ ಬದಲಾವಣೆಯಿಂದ ಇದು ಮಂಜೂರಾಯಿತು.

ಬಹಿಷ್ಕಾರ ಚಳವಳ.

ವಿದೇಶಿ ವಸ್ತ್ರಬಹಿಷ್ಕಾರ ಚಳವಳವು ಪ್ರಾರಂಭವಾದಂದು ಈಗ ದೇಶದ ಎಲ್ಲ ಕಡೆಗಳಲ್ಲಿಯೂ ಹರಡುತ್ತಲಿದೆ. ಖಾದಿಯ ವಿಕ್ರಯವೂ ಅಂತೆಯೇ ಹೆಚ್ಚುತ್ತಲಿದೆ. ಕಳೆದ ಜನವರಿ ತಿಂಗಳಿಂದ ಮಾರ್ಚ ಆಖೈರು ವರೆಗಿನ ಖಾದಿವಿಕ್ರಯದ ವರದಿಯಿಂದ ಅದು ಶೇಕಡಾ ೩೫ರಷ್ಟು ಹೆಚ್ಚಿರುವುದೆಂದು ತಿಳಿಯಬರುವುದು. ಎಪ್ರಿಲ್ ತಿಂಗಳಲ್ಲಂತೂ ವಿಕ್ರಯವು ಮತ್ತೂ ಹೆಚ್ಚಿರುತ್ತದೆ. ಖಾದಿವಿಕ್ರಯವು ಬಹುವಾಗಿ ಬೆಳೆದುದರಿಂದ ಹಲವು ಖಾದಿ ಭಂಡಾರಗಳಲ್ಲಿ ನೇಯಿಸಿದ್ದಕ್ಕಿಂತಲೂ ಕಡಿಮೆ ವಸ್ತ್ರದ ದಾಸ್ತಾನು ಇರುತ್ತದೆ. ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡು ಮೊದಲಾದ ಸ್ಥಾನಿಕ ಸರಕಾರದವರೂ ಈ ಚಳವಳದ ಕಡೆಗೆ ತುಂಬ ಸಹಾಯವನ್ನು ಮಾಡುತ್ತಿರುವರು. ಹಲವು ಮುನಿಸಿಪಾಲಿಟಿಗಳವರು ತಮ್ಮ ಕೆಲಸಗಾರರ ಉಡುಗೆಗೆ ಖಾದಿಯನ್ನೇ ಉಪಯೋಗಿಸುತ್ತಿರಬೇಕೆಂದು ನಿಶ್ಚಯಿಸಿದ್ದು ಮಾತ್ರವಲ್ಲದೆ ಹಲವು ಮುನಿಸಿಪಾಲಿಟಿಗಳವರು ಖಾದಿಯ ಮೇಲೆ ತೆರಿಗೆಯನ್ನು ಹೊರಿಸುತ್ತಿರುವುದಿಲ್ಲ. ಕೆಲವು ಮುನಿಸಿಪಾಲಿಟಿಗಳವರು ವಿದೇಶಿ ವಸ್ತ್ರಗಳ ಮೇಲೆ ತೆರಿಗೆಯನ್ನು ಹೆಚ್ಚಿಸುವುದರಿಂದ ಖಾದಿಯನ್ನು ಪ್ರೋತ್ಸಾಹಿಸಿರುವರು. ಈ ಮೂರು ತಿಂಗಳುಗಳಲ್ಲಿ ಬಹಿಷ್ಕಾರ ಚಳವಳದ ವಿಷಯವಾಗಿ ನಡೆದ ಕೆಲಸಗಳಲ್ಲಿ ಮುಖ್ಯವಾದುದೆಂದರೆ ಬಂಗಾಳದ ಖಾದಿಪ್ರತಿಷ್ಠಾನದ ಶ್ರೀ ಎಸ್. ಸಿ. ದಾಸಗುಪ್ತರವರು ರಾಷ್ಟ್ರೀಯ ಸಂಘವನ್ನು ಸ್ಥಾಪಿಸಿ, ಹಳ್ಳಿಯ ಜನರು ವಸ್ತ್ರದ ವಿಷಯವಾಗಿ ಸ್ವಾವಲಂಬಿಗಳಾಗುವಂತೆ ಮಾಡಿದುದೇ. ಈ ಸಂಘದ ಕೆಲಸಗಳು ಬಹು ಸುಲಭದಿಂದ ನಡೆಯುತ್ತಿವೆ. ಮೊದಲು ಉತ್ತಮವಾದ ಕೆಲವು ಹಳ್ಳಿಗಳನ್ನು ಆರಿಸುವರು. ಆ ವೇಳೆ ಶ್ರೀ ದಾಸಬಾಬು ಮತ್ತು ಅವರ ಅನುಯಾಯಿಗಳು ಆ ಹಳ್ಳಿಗಳನ್ನು ಸಂದರ್ಶಿಸಿ ಭಾಷಣಗಳನ್ನು ಕೊಡುವರು. ತಾವೇ ನೂಲುಮಾಡಿ ತಾವೇ ವಸ್ತ್ರ ನೆಯ್ದು ಆ ವಸ್ತ್ರಗಳನ್ನು ತಾವು ಧರಿಸಿಕೊಳ್ಳುವುದು ಅಭಿಮಾನಾಸ್ಪದವಾದ ಸಂಗತಿಯೆಂದೂ, ದೇಶೋದ್ಧಾರಕವಾದ ವಿಷಯವೆಂದೂ ಅವರು ಮನಂದಟ್ಟಿಸಿಕೊಡುವರು. ಹಳ್ಳಿಯವರು ಇದಕ್ಕೆ ಒಪ್ಪಿದ ನಂತರ ಅವರೊಳಗಿನಿಂದ ಕೆಲವು ಸ್ವಯಂಸೇವಕರುಗಳನ್ನು ಆರಿಸಿ, ಸಂಘದ ಶಿಕ್ಷಣ ಶಿಬಿರದಲ್ಲಿ ಖಾದಿಯ ಉತ್ಪನ್ನದ ವಿಷಯವಾಗಿ ಅವರಿಗೆ ತಕ್ಕುದಾದ ಶಿಕ್ಷಣವನ್ನು ಕೊಡುವರು. ತರಬೇತಿ ಹೊಂದಿದ ಕೆಲವು ಮಂದಿ ಸ್ವಯಂಸೇವಕರನ್ನು ಯಾವನಾದರೂ ಕಾಂಗ್ರೆಸ್ ಧುರೀಣನ ವಶದಲ್ಲಿ ಹಳ್ಳಿಗಳಲ್ಲಿ ವಿದೇಶಿ ವಸ್ತ್ರಬಹಿಷ್ಕಾರದ ಚಳವಳದ ಪ್ರಚಾರದ ಬಗ್ಗೆ ಕಳುಹಿಸುವರು. ಈ ರೀತಿಯ ಕೆಲಸವು ಈಗಾಗಲೇ ಹಲವು ಹಳ್ಳಿಗಳಲ್ಲಿ ನಡೆಯುತ್ತಲಿದೆ.

ವಿದೇಶಿ ವಸ್ತ್ರಬಹಿಷ್ಕಾರ ಕಮಿಟಿಯವರು ಖಾದಿ ಪ್ರೋತ್ಸಾಹದ ಬಗ್ಗೆ ಮೆಲ್ಲಮೆಲ್ಲನೆ ಹಿಂದೀ ಸ್ವತಂತ್ರ ರಾಜ್ಯಗಳೊಡನೆ ಸಂಬಂಧವನ್ನು ಬೆಳೆಸುತ್ತ ಬರುತ್ತಿರುವರು. ಈ ಕುರಿತಾಗಿ ಮೈಸೂರು ಸರಕಾರದವರು ಕೈಕೊಂಡ ಕೆಲಸವು ವಿಶೇಷ ಅಭಿನಂದನೀಯವಾಗಿದೆ. ಮೈಸೂರಿನಲ್ಲಿ ಈಗ ಕೆಲಸವಿಲ್ಲದ ರೈತರು ಕೈನೂಲು ಮಾಡುವುದನ್ನು ಕಲಿತುಕೊಂಡು ತುಂಬ ಲಾಭಹೊಂದುತ್ತ ಬಂದಿರುವರು. ಇನ್ನು ಮುಂದೆಯೂ ಖಾದಿ ಕೆಲಸವು ಅಲ್ಲಿ ಹೆಚ್ಚು ಹೆಚ್ಚು ಉತ್ಸಾಹದಿಂದ ನಡೆಯಬಹುದೆಂದು ನಂಬಲು ತುಂಬ ಅವಕಾಶವಿರುತ್ತದೆ. ಇನ್ನು ಬರುವ ಅಕ್ಟೋಬರ ತಿಂಗಳ ಎರಡನೆ ತಾರೀಕಿನ ದಿನ ಖಾದಿ ದಾಸ್ತಾನಿನ ಲೆಕ್ಕವನ್ನು ತೆಗೆಯುವರು. ಅಂದು ಮಹಾತ್ಮಾಜಿಯವರ ಜನ್ಮದಿನವು. ಅಂದಿನ ದಿನದಲ್ಲಿ ಲೆಕ್ಕ ತೆಗೆದು ನೋಡಿದಾಗ ತುಂಬ ತೃಪ್ತಿಯ ಪ್ರತಿಫಲವಲ್ಲಿಯೂ ಉಂಟಾಗುವ ರೀತಿಯಲ್ಲಿ ಪ್ರತಿಯೊಂದು ಸಂಸ್ಥೆಯವರೂ ಪ್ರಯತ್ನಿಸುವದು ಅವಶ್ಯವಿದೆ.

CHIKMAGALUR,

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

[illegible] Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಜನರ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲಕ್ಕಾಗಿ ಕಡೂರು (M. S. M Railway) ರೈಲ್ವೆ ಸ್ಟೇಶನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇತರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ವೇಣೂರು, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಶಾಸ್ತ್ರಿ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮುಲಸಾರು, ಕನ್ನನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಅದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡ್ಡಿನ ಉಜ್ರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಮೂಡಿಗೆರೆ 4 ಘಂಟೆಗೆ ಮೂಡಿಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನ್ನಾ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ್ ಗೋವಾ, ಬೆಳಗಾಂ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ವರ್ತಮಾನಕ್ಕೆ ಮೇಲಿನ ವಿಳಾಸಕ್ಕೆ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಪ್ಯೂರಜಿನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂಲ್ಕಿಯವರೆಗೆ ಕರಾವಳಿ ಮಾರ್ಗವಾಗಿಯೂ ಎದುರಾವರೆಗೆ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore S. K.

ಮಲೇರಿಯಾನ

[illegible]

ಯುವಕ ವಿದ್ಯಾರ್ಥಿಯು ಲಕ್ಷ್ಯಕ್ಕೆ ತರತಕ್ಕದ್ದೇ

ದೇಹದ ಆರೋಗ್ಯವೂ ಮೆದುಳಿನ ಬಲವೂ ಇದ್ದ ಯುವಕರಿಗೆ ವಿದ್ಯಾಭ್ಯಾಸವು ಬಹು ಸುಲಭವಾಗಿರುತ್ತದೆ.

ಆದರೆ ದೇಹದ ಆರೋಗ್ಯವು ಕೆಟ್ಟು ಹೋದಲ್ಲಿ ಮೆದುಳಿನ ಬಲವು ಕುಂದಿರುವದು ಸಹಜವೇ. ಅಂಥಾ ಯುವಕರಿಗೆ ವಿದ್ಯಾಭ್ಯಾಸವು ಅತೀ ಕಷ್ಟಕರವಾಗಿದೆ. ಇಂಥಾ ಯುವಕರು ಸದಾ ವಿದ್ಯಾಭ್ಯಾಸದಲ್ಲಿ ತೊಡಗಬೇಕಾದರೆ, ದೇಹವು ಆರೋಗ್ಯವುಳ್ಳದ್ದಾಗಿಯೂ ಮೆದುಳು ಶಕ್ತಿವಂತವಾಗಿಯೂ ಇರಬೇಕು. ಕಂಪೆನಿಯು ಸಿದ್ಧಪಡಿಸಿದ [illegible] ಎಂಬ ಅಮೃತವು ಯುವಕರ ಆರೋಗ್ಯವನ್ನು ಕಾಪಾಡುವದಕ್ಕೂ ಮೆದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತೀ ಗುಣಕಾರಿಯಾಗಿದೆ.

ಕ್ರಯ 8 ಔನ್ಸಿಗೆ ರೂ. 3—8—0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳು.)

ಮೆದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅಹೋರಾತ್ರಿ ತಲೆಮಿಂದ ಬಹಳ [illegible] ಪ್ರಯಾಸದಿಂದ ಓದುವ ಯುವಕರ ತಲೆ ಮೆದುಳು ಬಹು ಬಿಸಿಯಾಗಿ ತಲೆ ಸಿಡಿತ, ಕಣ್ಣು ನೋವು, ದೃಷ್ಟಿಮಾಂದ್ಯ, ಕಿವಿ, ಮೂಗು, ಹಲ್ಲುಗಳ ವಿವಿಧ ರೋಗಗಳು ಹುಟ್ಟುವವು. ಈ ಅಶಕ್ತ ರೋಗಗಳು ಪರಿಹಾರವಾಗುವಂತೆಯೂ ಅಥವಾ ಅಂಥಾ ಅಶಕ್ತ ರೋಗಗಳು ಹುಟ್ಟದಂತೆಯೂ ಅಷ್ಟವಟ್ಯಾದಿ ಮಿಶ್ರಿತವಾದ ತೈಲದ ಉಪಯೋಗವು ಬಲು ಗುಣಕಾರಿಯಾಗಿದೆ. ಬಹಳ ಹೊತ್ತು ಓದುವ ಅಥವಾ ನಿದ್ರೆಗೆಡುವ ಯುವಕರು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಾಕಿಕೊಳ್ಳುವದರಿಂದಲೇ ತಲೆ ಮೆದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವರು.

ಕ್ಲಿಷ್ಟ ಕಾಲದಲ್ಲಿ ಯುಕ್ತ ರೀತಿ ಅನುಸರಿಸುವದು, ಜಾಣ ಯುವಕನ ಬುದ್ಧಿವಂತಿಕೆಯಾಗಿದೆ.

ಕ್ರಯ 8 ಔನ್ಸಿಗೆ ರೂ. ೨—೧೨—೦.

ವಿಶೇಷ ಮಾಹಿತಿಗೂ, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ, ಈ ಹಾರು ಟಪ್ಪಾಲದಾರ ಮತ್ತು ಹೋಮಿಯೋಪತಿ ಮದ್ದುಗಳಿಗೂ ನಮೂನೆ ವಾರು ಪಟ್ಟಿ ಪತ್ರಗಳಿಗೂ ನಮ್ಮ ಮೊತ್ತ ಕಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಲೇರಿಯಾನ ಕಂಪೆನಿ,

ಮಂಗಳೂರು.

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. **ಸಪೋಟಿಲ್ಲಾ.**

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಿಲ್ಲಾ, ದೇರಳೆ, ಕಿತ್ತಳೆ, ದ್ರಾಕ್ಷೆ, ಅಂಜೂರ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲದಿಡುವವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲದಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್‌ಸ್ಟ್ರೀಟ್ ಸೋಮು ಯಾಜಿಯವರಲ್ಲಿ ದೊರೆಯುವವು.

ಕೆ. ಮಂಜಪ್ಪ ಶೆಟ್ಟಿ, ದಿ. ಕೆನರಾ ನರ್ಸರಿ, ವಿಕ್ಟೋರಿಯಾ ಗಾರ್ಡನ್ಸ್, ಕಾಪು ದ. ಕ. 131028 } C/o ಕೆ. ವಾಮನ ಶೆಟ್ಟಿ, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.

ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಅತ್ಯುತ್ತಮವಾದ ಸೌಕರ್ಯಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು.

2 ಜನಪ್ರಿಯರೂ, ಪ್ರತಿಷ್ಠಿತರೂ ಆದ ಡ್ಯಾರೆಕ್ಟರರು.

3 ತುಂಬಾ ಅನುಭವದ ವ್ಯವಸ್ಥಾಪಕ, ವಿಶ್ವಸ್ಯದ ಮತ್ತು ಸೌಹಾರ್ದದ ಆಡಳಿತ,

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಕಮೀಷನ್ನುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ತ ಮತ್ತು ಪಂತ್ರಬಿಯಾದ ಏಜಂಟರುಗಳು ಬೇಕಾಗಿರುವರು.

ಪ್ರಾಸ್ಪೆಕ್ಟಸಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, ಸ್ಪೆಶಿಯಲ್ ಏಜಂಟ್, ಪಕ್ಷಿಕೆರೆ ಗ್ರಾಮ, ಕೊಳಕೆ ತಾಲೂಕು, ದ. ಕ. ಅಥವಾ ಪಿ. ಅಭಯಶಂಕರ ದೇಶಪಾಂಡೆ ಮತ್ತು ಕಂಪೆನಿ, ಮೆನೇಜಿಂಗ್ ಏಜೆಂಟ್ಸ್.

ಮಕ್ಕಳನ್ನು

ಎಲ್ಲ ಸ್ತ್ರೀಯರೂ ಪ್ರೀತಿಸುವರು.

ವಿವಾಹಿತಳಾಗಿ ಶಿಶುವಿಹೀನಳಾಗಿ ಮಕ್ಕಳನ್ನು ಬಯಸುವ ಪ್ರತಿಯೊಬ್ಬ ಸ್ತ್ರೀಗೂ ಮಾತೃತನದ ಸುಖವು ಸಾಧ್ಯವುಂಟು. ಫೆಲೂನಾ ಮಾತ್ರೆಗಳ ಸೇವನೆಯಿಂದ ಸ್ವಾಭಾವಿಕವಾದ ವ್ಯಾಪಾರಕ್ಕೆ ಸಹಾಯವನ್ನುಂಟುಮಾಡಿದೆ.

ಪ್ರಖ್ಯಾತವಾದ ಈ ಸಿದ್ಧೌಷಧವು ಸ್ತ್ರೀಯರ ಮುಖ್ಯ ಇಂದ್ರಿಯಗಳನ್ನು ಸ್ವಚ್ಛಗೊಳಿಸಿ, ಬಲಪಡಿಸುವುದು. ಮೈಯಲ್ಲಿ ನವೀನವಾದ ರಕ್ತವನ್ನು ತುಂಬಿಸುವುದು. ಹೆಂಗಸರಿಗೆ ಸಹಜವಾಗಿರುವ ನೋವುಗಳನ್ನೂ, ಬೇನೆಗಳನ್ನೂ, ಇತರ ಕಾಹಿಲೆಗಳನ್ನೂ ಹೊಡೆದೋಡಿಸುವುದು. ಇಂದ್ರಿಯಗಳ ಅಸ್ವಸ್ಥವಾದ ಚಲನೆಯನ್ನು ಹೋಗಲಾಡಿಸಿ, ಆಂತರಿಕ ಆರೋಗ್ಯವನ್ನು ಒದಗಿಸಿ ಬಲಶಾಲಿಯಾದ ತಾಯಿಯನ್ನಾಗಿ ಮಾಡುವದು.

ನಿಮಗೆ ಮಕ್ಕಳಿಲ್ಲವೆ? ಹಾಗಾದರೆ ನಿಮ್ಮ ಮನೋಭಿಲಾಷೆಯನ್ನು ಹೊಂದಲು ಫೆಲೂನಾ ಮಾತ್ರೆಗಳು ಸಹಾಯಕವಾಗಲಿ.

ಫೆಲೂನಾ ಮಾತ್ರೆಗಳಲ್ಲಿ ಪ್ರಾಣಿಜನ್ಯ ಧಾತುಗಳಿಲ್ಲ. ಅವು ಮಾಡಲ್ಪಡುವಾಗ ಕೈಯಿಂದ ಮುಟ್ಟುವುದೇ ಇಲ್ಲ.



ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸ್‌ಗಳಿಂದಲೂ ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ಮಾರಲ್ಪಡುವವು. ಬಾಟ್ಲಿಗೆ ರೂ. 2—4—0.

ದಿ ರಿಪ್ರಸೆಂಟೇಟಿವ್, ಡ್ಯಾಡಾ ಎಂಡ್ ಕೋ.,

ಪೋಸ್ಟ್ ಬಾಕ್ಸ್ 720, ಮುಂಬಯಿ. 260 ಟ್ರಿನಾ ಬಜಾರ್ ರೋಡ್, ಮದರಾಸ್.

ದಕ್ಷಿಣ ಆಫ್ರಿಕದ ಕೇಪ್ ಟೌನಿನ ಗ್ರೀನ್ ಕೆಮಿಕಲ್ ಕೋ ಲಿಡ್, ಅವರಿಂದ ತಯಾರಿಸಲ್ಪಟ್ಟಿತು. 5

ನೋಟೀಸು.

ಮೂಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನದ ಸಮಸ್ತ ವೋಟರರಿಗೆ ವಿನಂತಿ.

ಸದ್ರಿ ದೇವಸ್ಥಾನದ ವರ್ಷಾವಧಿ ಮಹಾಸಭೆಯು ತಾ. 9—6—'29ಕ್ಕೆ ನಿರ್ಣಯಿಸೋಣಾಗಿರುವ ಸಂಗತಿ ತಾ.24—5—'29ನೇ ಸ್ವದೇಶಾಭಿಮಾನಿ ಪತ್ರಿಕೆಯ ಮೂಲಕ ತಮಗೆಲ್ಲರಿಗೂ ವಿದಿತವಾಗಿದ್ದೀತು. ಅದರಲ್ಲಿ ನಮೂದಿಸಿರುವ ಬಾಬ್ತು ಅದೇ ಮಹಾಸಭೆಯಲ್ಲಿ ಮಂಜೂರಾತಿಯ ಬಗ್ಗೆ ಇಡೋಣಾದ ಒಂದು ವರ್ಷದ ಲೆಕ್ಕ ಪತ್ರಗಳನ್ನು ಕ್ರಮವಾಗಿ ಪರಿಶೋಧಿಸುವ ಅಗತ್ಯವಿರುವುದರಿಂದ ಅವುಗಳನ್ನು ತನಿಕೆ ನೋಡುವ ಬಗ್ಗೆ ಕೂಡಲೇ ನಮಗೆ ಕೊಡಿಸುವಂತೆ ಅಪೇಕ್ಷಿಸಿದ್ದಕ್ಕೆ ಮೆನೇಜರ ಗೈರುಹಾಜರಿ ಸಮ್ಬಂಧ ಅವರು ಬಾರದೆ ಅನುಕೂಲವಿಲ್ಲವಾಗಿ ಜವಾಬು ಸಿಕ್ಕಿದುದರಿಂದಲೂ ಇನ್ನು ಮೆನೇಜರರು ಬಂದು ಆ ಬಳಿಕ ಸದ್ರಿ I ವರ್ಷದ ಲೆಕ್ಕಪತ್ರ ಕ್ರಮವಾಗಿ ಪರಿಶೋಧಿಸುವರೆ ಸಾಕಷ್ಟು ಸಮಯ ಇಲ್ಲದುದರಿಂದ ಕೂಡಾ ಲೆಕ್ಕ ಪತ್ರಗಳ ತನಿಕೆ ಬಗ್ಗೆ ಕನಿಷ್ಟ ಪಕ್ಷ ೨೦ ದಿವಸಗಳ ಮುಟ್ಟಿಗಾದರೂ ಸಮಯ ಸಿಕ್ಕುವ ಹಾಗೆ ಸದ್ರಿ ಲೆಕ್ಕ ಪತ್ರಗಳನ್ನು ಯಾವತ್ತಿನ ದಿನ ನಮಗೆ ತೋರಿಸಲಿಕ್ಕೆ ಅನುಕೂಲವೆಂಬುದನ್ನು ತಿಳಿಸಬೇಕಾಗಿಯೂ, ನಾವು ಸದ್ರಿ ಲೆಕ್ಕಪತ್ರಗಳನ್ನು ತನಿಕೆ ನೋಡಿ ಸಮಾಧಾನಪಡುವ ಪರಿಯಂತರ ಅವುಗಳು ಮಂಜೂರಾಗತಕ್ಕದ್ದಲ್ಲವೆಂತಲೂ ವಗೈರೆ ನಾವು ಹಲವು ಜನ ವೋಟರರು ಮೊಕ್ತೇಸರ ಕಾನ್ಸಿಲಿಗೆ ಟಪ್ಪಾಲ ರಿಜಿಸ್ತ್ರ ಮೂಲಕ ತಿಳಿಸಿರುತ್ತೇವೆ. ಆದುದರಿಂದ ಯಾವನೊಬ್ಬ ವೋಟರನಾಗಲೀ ಸದ್ರಿ ಲೆಕ್ಕಪತ್ರಗಳನ್ನು ಕ್ರಮವಾಗಿ ಸ್ವತಹಾ ತನಿಕೆ ನೋಡದೆ ಅಥವಾ ನಾವು ಅವುಗಳನ್ನು ಪರಿಶೋಧಿಸಿ ಸಮಾಧಾನಪಡುವ ವರೆಗೆ ಸದ್ರಿ ಲೆಕ್ಕಪತ್ರಗಳ ಮಂಜೂರಾತಿಯ ಬಾಬಿನಲ್ಲಿ ತಾತ್ಪರ್ಯ ಕೊಡಬಾರದಾಗಿ ವಿಜ್ಞಾಪಿಸುತ್ತೇವೆ.

ಮೂಲ್ಕಿ, ತಾ. 29-5-'29. | ಮೂಲ್ಕಿ ಚಂದು ಯಾನೆ ವೆಂಕಟ್ರಮಣ ಕಾಮ್ತಿ, ವಗೈರರು. ...

ಪ್ರಚಂಡ ಮಾರಾಟ!!

ಬರುವ ಜೂನ್ 3ರಿಂದ 8ರ ವರೆಗೆ ಬನಿಯನುಗಳ ಮಾರಾಟ!

ಸ್ತ್ರೀಪುರುಷರಿಗೂ, ಬಾಲಕಬಾಲಕಿಯರಿಗೂ ಬೇಕಾಗುವ ಸುಮಾರು 5 ಸಾವಿರ ರೂಪಾಯಿ ಬೆಲೆಬಾಳುವ ಉಡಿಗೆತೊಡಿಗೆಗಳು ಹೇಗೂ ಮಾರಿಯೇ ತೀರಬೇಕಾಮುದರಿಂದ ದರ ತುಂಬಾ ಇಳಿಸಲಾಗಿದೆ.

ಮೊದಲು ಬಂದವರಿಗೆ ಮನವೊಪ್ಪುವ ಉತ್ತಮ ಉಡಿಗೆ ಬೇಕಾದಂತೆ ಚುನಾಯಿಸಿ ಕೊಂಡುಕೊಳ್ಳಲಾಗುತ್ತದೆ.

ಕ್ರಯವು ಅಗ್ಗವಾಗಿರುವುದರಿಂದ ಬೇಗ ಬೇಗನೇ ಮಾರಿಹೋಗುವುದು ನಿಶ್ಚಯ.

ವಿಳಂಬ ಮಾಡದೆ ಆದಷ್ಟು ಮೊದಲಾಗಿ ಬನ್ನಿರಿ!

ದಿ ಕೊಮನ್‌ವೆಲ್ತ್ ಹೊಸಿಯರಿ ಫೆಕ್ಟರಿ,
ಮಂಗಳೂರು.

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಸಾಮಾನುಗಳು ಯಾವಾಗಲೂ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ತಯಾರಾಗಿವೆ ತಯಾರಾಗಿವೆ!.

ಕಾಫಿ ಪ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚೆಕ್ ರೋಲ್ ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರೆ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಶೀಸೆಯಿಂದಲೇ ಗುಣವಾಯಿತು.

ಶ್ರೀಮತಿ ಎಸ್. ಶರಸಮ್ಮ, ಶ್ರೀರಾಜ್ ಎಸ್. ನರಸಯ್ಯ, ಸ್ಪೆಶಲ್ ಮ್ಯಾಜಿಸ್ಟ್ರೇಟ್, ಕಡಪ ಇವರು ಬರೆದಿರುವುದು — ನಿಮ್ಮ ಒಂದು ಸಣ್ಣ ಬಾಟಲ್ ಲೋಧ್ರವನ್ನು ಉಪಯೋಗಿಸಿದ ಮಾತ್ರದಿಂದಲೇ ಗುಣವುಂಟಾಯಿತು. ಒಂದು ದೊಡ್ಡ ಶೀಸೆ ಲೋಧ್ರವನ್ನು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

ಶ್ರೀಮತಿ [illegible] ದೇವಿ, ಮಟ್ಟೂರು, ಇವರು ಬರೆದಿರುವುದು —

ಸ್ವಾಮಿ, ನಾನು ಈಗ ನಿಮ್ಮ ಲೋಧ್ರವನ್ನು ಸೇವಿಸುತ್ತಿದ್ದೇನೆ. ಇದಕ್ಕೆ ಮುಂಚೆ ನನ್ನ ಋತುಕಾಲದಲ್ಲಿ ಬಹಳ ಬಾಧೆಯುಂಟಾಗುತ್ತಿತ್ತು ಮತ್ತು ಕ್ರಮತಪ್ಪಿ ೨೦ ದಿನಗಳೊಳಗಾಗಿಯೇ ಬಹಿಷ್ಟೆಯಾಗುತ್ತಿದ್ದೆನು. ೩ ವರ್ಷಗಳಕಾಲ ಆಂಗ್ಲ ಔಷಧಾಲಯಗಳಲ್ಲಿ ಔಷಧ ಸೇವಿಸಿಯೂ ಪ್ರಯೋಜನವಿಲ್ಲದಿರಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಹೇಳಿದರು. ಆದರೆ ನಾನು ಸಮ್ಮತಿಸಲಿಲ್ಲ. ಅನಂತರ ನಿಮ್ಮ ಪ್ರಸಿದ್ಧವಾದ ಲೋಧ್ರ ಎರಡು ಬಾಟಲ್ ತರಿಸಿ ಸೇವಿಸಿದೆನು. ಅಂದಿನಿಂದ ಕ್ರಮವಾಗಿ ೨೮ ದಿನಕ್ಕೊಂದುಸಲ ಬಾಧೆಯಿಲ್ಲದೆ ಬಹಿಷ್ಟೆಯಾಗುತ್ತ ಸುಖವಾಗಿದ್ದೇನೆ. ಮಿಕ್ಕ ಇತರ ಬಾಧೆಗಳೂ ನಿವೃತ್ತಿಯಾಗಿವೆ. ಪುನಃ ಈಗ ಎರಡು ಬುಡ್ಡಿ ಲೋಧ್ರ ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ಮಾಯವಾಯಿತು.

ಶ್ರೀಮತಿ ಜಯ ಲಕ್ಷ್ಮಮ್ಮ, ಬಾಲಿಕಾ ಪಾಠಶಾಲೆ, ಕುಣಿಗಲ್, ಇವರು ಬರೆದಿರುವುದು —

ಕಳೆದ ಮೂರು ವರುಷಗಳಿಂದಲೂ ನನಗೆ ಋತುವು ಸರಿಯಾಗಿ ಆಗುತ್ತಿಲ್ಲ. ೨ ಅಥವಾ ೩ ತಿಂಗಳಿಗೊಂದುಸಾರಿಯಾಗುತ್ತಿದ್ದೆನು. ಈ ಸಂದರ್ಭಗಳಲ್ಲಿ ಸೊಂಟನೋವು, ತಲೆಶೂಲೆ ನೋವು, ಮತ್ತು ನಿಶ್ಶಕ್ತಿಯುಂಟಾಗಿ ಬಹಳ ಕಷ್ಟಪಡುತ್ತಿದ್ದೆನು. ಈ ಸಮಯದಲ್ಲಿ ತಮ್ಮ 'ಲೋಧ್ರ' ೩ ಬುಡ್ಡಿ ತರಿಸಿ ಸೇವಿಸಿದೆನು. ಅಂದಿನಿಂದ ಈ ಬಾಧೆಗಳೆಲ್ಲವೂ ಮಾಯವಾಗಿ ಸಕಾಲಕ್ಕೆ ಬಹಿಷ್ಟೆಯಾಗುತ್ತ ಶರೀರಾರೋಗ್ಯವನ್ನು ಅನುಭವಿಸುತ್ತಿದ್ದೇನೆ. ಈ ದಿವ್ಯೌಷಧಿಯನ್ನು ನಿಲ್ಲಿಸದೆ ಇನ್ನೂ ಸೇವಿಸಬೇಕೆಂದಿರುವುದರಿಂದ ಇನ್ನೂ ಎರಡು ಬುಡ್ಡಿಗಳ ಕಳುಹಿಸುವುದು. ಸ್ತ್ರೀಯರ ಎಲ್ಲಾ ವ್ಯಾಧಿಗೂ 'ಲೋಧ್ರ'ವು ದಿವ್ಯೌಷಧಿಯೆಂದು ನಾನು ಖಂಡಿತವಾಗಿಯೂ ಹೇಳುತ್ತೇನೆ.

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ: "ಕೇಸರಿ" ಫೋನ್ 3486.

ಏಜಂಟರು — ಪಾ ಕಂಪೆನಿ, (ದಿ ಊಲನ್ ಮಾರ್ಟ್) ಮಂಗಳೂರು.

ನೂತನ ಗ್ರಂಥವು! ನೂತನ ಗ್ರಂಥವು!!

ಕಾಲಕ್ಕೆ ತಕ್ಕ ಗ್ರಂಥ! ನಾಯಿಕಾ ನಾಯಕರು ಕೋರುವ ಗ್ರಂಥ! ಮರ್ಮಗಳನ್ನು ಹೊರಪಡಿಸುವ ಗ್ರಂಥ! ಅತ್ಯಂತವಾಗಿ ಬೇಕಾದ ಗ್ರಂಥ! ನೀವು ಬಹಳ ಕಾಲದಿಂದಲೂ ಬಯಸುತ್ತಿದ್ದ ರಹಸ್ಯ ಗ್ರಂಥವು ಈಗಲೇ ಪ್ರಕಟವಾಗಿರುತ್ತದೆ.

ಗೃಹಸ್ಥಾಶ್ರಮ ರಹಸ್ಯಗಳು.

ಮೊದಲನೆಯ ಮುದ್ರಣ ಹೆಚ್ಚು ಪುಟಗಳುಳ್ಳ ಗ್ರಂಥ, ಅತಿ ಸುಂದರವಾದ ಹಾಫ್‌ಟೋನ್ ಪಟಗಳೊಂದಿಗೆ ಮುದ್ರಿತವಾಗಿರುವ ವಿಚಿತ್ರ ಗ್ರಂಥ.

ಅಂದವಾದ ಮುದ್ರಣ, ಚೆಂದವಾದ ಬೈಂಡು. ಬೆಲೆ ರೂ. 1—8—0

ಮಿತ್ರರೇ! ಸಾವಿರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಪ್ರಬಲಿಸಿರುವ ಅನೇಕ ಶಾಸ್ತ್ರಗಳನ್ನೂ, ಪಾಶ್ಚಾತ್ಯ ತತ್ವಜ್ಞರ ಗ್ರಂಥ ವಿಮರ್ಶೆಗಳನ್ನೂ ಪರ್ಯಾಲೋಚಿಸಿ, ಅವುಗಳ ಮರ್ಮಗಳು ತಕ್ಕ ವ್ಯಾಖ್ಯಾನಗಳೊಂದಿಗೆ ಈ ಗ್ರಂಥವು ಮುದ್ರಿತವಾಗಿದೆ. ಕೂಡಲೇ ಒಂದು ಗ್ರಂಥವನ್ನು ತರಿಸಿಕೊಳ್ಳಿರಿ. ಈ ಗ್ರಂಥದಲ್ಲಿರುವ ವಿಷಯಗಳನ್ನು ತಿಳಿದು ಫಲವನ್ನು ಪಡೆಯಿರಿ!

ಈ ಗ್ರಂಥದಲ್ಲಿರುವ ವಿಷಯಗಳು.

1. ಸನ್ಯಾಸಿಗಳ ಗತಿ ಏನು?
2. ಗೃಹಸ್ಥಾಶ್ರಮವು ಶ್ರೇಷ್ಠವೆಂಬುದು ಹೇಗೆ?
3. ಗೃಹಸ್ಥಾಶ್ರಮದಿಂದ ಮೋಕ್ಷವನ್ನು ಹೊಂದುವುದು ಸಾಧ್ಯ.
4. ಗೃಹಸ್ಥಾಶ್ರಮ ಧರ್ಮಗಳನ್ನು ತಿಳಿಯದಿರುವುದರಿಂದ ಉಂಟಾಗತಕ್ಕ ಹಾನಿ.
5. ಸ್ತ್ರೀಯರ ಆಧಿಕ್ಯ — ಸ್ತ್ರೀಯರ ವಿದ್ಯೆ.
7. ಉಡುಪುಗಳಿಗೂ ಲಜ್ಜೆಗೂ ಇರುವ ಸಂಬಂಧ.
8. ಲಜ್ಜೆಯುಳ್ಳ ವನಿತೆಯೇ ಹೆಚ್ಚು ಆನಂದವನ್ನು ಕೊಡತಕ್ಕವಳು.
9. ಒಂದೊಂದು ದೇಶದಲ್ಲಿಯೂ ಲಜ್ಜೆಯು ಹೇಗೆ ವ್ಯಾಪಿಸಿದೆ?
10. ನಾವು ಏತಕ್ಕಾಗಿ ಉಡುಪನ್ನು ಧರಿಸಬೇಕು
11. ದಿಗಂಬರರಾಗಿರಲು ಕಾರಣವೇನು?
12. ಈಗ ಯಾವ ದೇಶದ ಜನರು ದಿಗಂಬರರಾಗಿರುವರು?
13. ಯಾವ ಯಾವ ದೇಶದಲ್ಲಿ ವಿವಾಹವು ಯಾವ ಯಾವ ರೀತಿಯಲ್ಲಿ ನಡೆಯುತ್ತಿದೆ? ನಿಜವಾದ ವಿವಾಹವು ಯಾವುದು?
14. ಪ್ರೇಮ — ಎಂದರೇನು? ಅನುರಾಗಕ್ಕೂ ಕಾಮಕ್ಕೂ ಇರುವ ಭೇದಗಳು.
15. ದಾಂಪತ್ಯ ವಿಷಯದಲ್ಲಿ ಹೇಗೆ ವಿಜಯವನ್ನು ಪಡೆಯಬಲ್ಲೆವು?
16. ಪತಿಯು ಪತ್ನಿಯನ್ನು ವಶಮಾಡಿಕೊಳ್ಳುವುದು ಹೇಗೆ?
17. ಸತಿಯು ಪತಿಯನ್ನು ವಶಮಾಡಿಕೊಳ್ಳುವುದು ಹೇಗೆ?
20. ಯುವತಿಯ ಅವ್ಯವಸ್ಥಾನಗಳಾವುವು?
21. ಅನೇಕ ಜಾತಿ ಸ್ತ್ರೀಯರ ಲಕ್ಷಣಗಳು.
22. ಸಂಯೋಗಕ್ಕೆ ತಕ್ಕ ಕಾಲವಾವುದು?
23. ಸ್ತ್ರೀ ಪುರುಷರ — ಮರ್ಮಾವಯವಗಳು. ಸ್ಥಿತಿ — ಅವುಗಳ ಉಪಯೋಗ.
24. ಋತುವಿನಿಂದ ಉಂಟಾಗುವ ಲಾಭಾಲಾಭಗಳು ಅದರ ತತ್ವ
25. ಸಂಯೋಗಕಾಲದ ಶೃಂಗಾರ ಚೇಷ್ಟೆಗಳಿಂದ ಉಂಟಾಗುವ ಆನಂದ.
26. ಜೀವಿತದಲ್ಲಿ ಸ್ತ್ರೀಯರು ತಿಳಿಯತಕ್ಕ ವಿಷಯಗಳು.
27. ಕೆಲವು ಸಮಯಗಳಲ್ಲಿ ಯುವತಿಯರು ಸಂಯೋಗಕ್ಕೆ ಸಮ್ಮತಿಸದಿರಲು ಕಾರಣ ಮತ್ತು ಅದರ ನಿವೃತ್ತಿಗೆ ಉಪಾಯಗಳು
28. ಇಷ್ಟಾನುಸಾರವಾಗಿ ಮಕ್ಕಳನ್ನು ಪಡೆಯುವುದು ಹೇಗೆ?
29. ಗರ್ಭದಲ್ಲಿರುವ ಶಿಶುವು ಗಂಡೇ ಹೆಣ್ಣೇ — ಎಂಬುವುದನ್ನು ತಿಳಿಯುವ ಬಗೆ ಹೇಗೆ?
30. ತಮ್ಮ ಇಷ್ಟಾನುಸಾರವಾಗಿಯೇ ಗಂಡು ಅಥವಾ ಹೆಣ್ಣು ಮಗುವನ್ನು ಪಡೆಯುವುದು ಹೇಗೆ?
31. ಗರ್ಭವನ್ನು ಧರಿಸದಿರುವುದಕ್ಕೆ ಉಪಾಯಗಳಾವುವು?
32. ಸುಖಪ್ರಸವವಾಗುವುದಕ್ಕೆ ಅನುಸರಿಸಬೇಕಾದ ಉಪಾಯಗಳು — ಹುಟ್ಟಿದ ಮಗುವನ್ನು ಬೆಳೆಸತಕ್ಕ ಕ್ರಮ.

Moorthy Book Depot,

173, Mint Street, Madras.

— [illegible] —

ಶ್ರೀನಿವಾಸ:— [illegible] ಪುರಾಣದ [illegible] ಮೇಲೆ ಹೇಗೆ [illegible]?

ಶ್ರೋತೃ:— ನಿಮ್ಮ ಪುರಾಣದ [illegible] ಗುರಿಯಾಗುವದಿಲ್ಲ.

ಶ್ರೀನಿವಾಸ:— ಅಷ್ಟೇನೂ ಆಗದಿದ್ದರೂ ಸ್ವಲ್ಪ ಸ್ವಲ್ಪವಾದರೂ ಆಗುತ್ತಿರಬಹುದು.

ಶ್ರೋತೃ:— ಅಹುದು.

... .

ಸಾಲಿಗ:— ಸಾಹುಕಾರರೇ, ನನಗೆ ಬಹಳ ಅಡಚಣೆ ಇದೆ. ೧೦೦ ರೂಪಾಯಿಗಳನ್ನು ಸಾಲಕೊಡಿರಿ. ರೀತಿ ಪ್ರಕಾರ ಬಡ್ಡಿಯನ್ನೂ ಕೊಡುತ್ತೇನೆ.

ಸಾಹುಕಾರ:— ಈಗ್ಗೆ ನನ್ನ ಹತ್ತರ ಹಣವಿಲ್ಲ. ಇದಕ್ಕೆ ಒಂದೆರಡು ತಾಸು ಮೊದಲು ಬಂದಿದ್ದರೆ ಕೊಡುತ್ತಿದ್ದೆನು.

ಸಾಲಿಗ!— ಆಗಲಾದರೂ ಕೊಡುತ್ತಿದ್ದಿರೋ?

ಸಾಹುಕಾರ:— ಓಹೋ! ನಿಶ್ಚಯವಾಗಿ "ಇಲ್ಲ"ವೆಂಬ ಉತ್ತರವನ್ನು ಕೊಡುತ್ತಿದ್ದೆನು.

... .

ರಾಮ:— ಕೃಷ್ಣಾ, ಹರಿಣಾಕ್ಷಿಯರೆಂದು ಯಾರಿಗೆ ಅನ್ನಬೇಕು?

ಕೃಷ್ಣ:— ಹರಿಣಗಳಷ್ಟು ನೇತ್ರಗಳುಳ್ಳವರಿಗೆ.

ರಾಮ:— ಅಂದರೆ?

ಕೃಷ್ಣ:— ಯಾವ ಹೆಂಗಳೆಯರು ಕನ್ನಡಕಗಳನ್ನು ಅಂದರೆ ಉಪನೇತ್ರಗಳನ್ನು ಧರಿಸುತ್ತಾರೋ ಅವರ ನೇತ್ರಗಳಾದರೂ ನಾಲ್ಕು ಇರುತ್ತವೆ. ಹರಿಣಿಯ ಕಂಗಳಾದರೂ ನಾಲ್ಕು ಇರುತ್ತವೆ.

ಮನಮೋಹನ ರಾವ,

ಬಡತನವೇ ಅನಾರೋಗ್ಯದ ಕಾರಣ.

ಸರಿಯಾದ ಆರೋಗ್ಯಕ್ಕೆ ಸಂಪತ್ಸಮೃದ್ಧರಾಗಿರುವುದೇ ಮುಖ್ಯ ಕಾರಣವಾಗಿರುತ್ತದೆ. ಹಿಂದೂ ಜನರ ಅನಾರೋಗ್ಯವು ಮುಖ್ಯವಾಗಿ ಹಿಂದೂಗಳ ಬಡತನದ ಕಾರಣದಿಂದ ಉಂಟಾಗುತ್ತಿದೆ. ನಮ್ಮ ಹಿಂದೂಸ್ಥಾನದಲ್ಲಿ ಮೂಲ ಸಾಮಗ್ರಿಗಳು ಅಸಂಖ್ಯಾತವಾಗಿ ಹುಟ್ಟುವವಾದರೂ, ಆ ಸಾಮಗ್ರಿಗಳು ಬೇರೆ ಕಡೆಗೆ ಹೋಗಿ ನಮ್ಮ ಐಶ್ವರ್ಯವೇ ಅಪಹರಿಸಲ್ಪಡುತ್ತಿದೆ. ಮಿ. ಮೊನಿಯರ್ ವಿಲ್ಲಿಯಮ್‌ರವರು ಹೇಳುವರು. "ಹಿಂದೂಸ್ಥಾನವು ಜಗತ್ತಿನ ಮುಖ್ಯ ಫಲವತ್ತಾದ ಮತ್ತು ಬೆಳೆಯು ದೇಶಗಳಲ್ಲೊಂದಾಗಿದೆ. ಅಲ್ಲಿ ಹುಟ್ಟುವ ಸಾಮಗ್ರಿಗಳಿಗೂ, ಅಲ್ಲಿ ಉತ್ಪನ್ನ ಮಾಡಬಹುದಾದ ಧನಕ್ಕೂ ಮಿತಿಯಿರಲಾರದು." ಹಿಂದೂಸ್ಥಾನದಲ್ಲಿ ಹುಟ್ಟದಿರುವ ವಸ್ತುವಿದೆಯೇ? ಸರ್ವತರದ ಧಾನ್ಯಗಳು ಎಲ್ಲ ವಿಧದ ಎಣ್ಣೆಗಳು, ಸಕ್ಕರೆ, ಚಹಾ, ಕಾಫಿ, ಹೊಗೆಸೊಪ್ಪು ಅಫೀಮು, ಸುಗಂಧ ದ್ರವ್ಯಗಳು, ಲೋಹಗಳು, ವನಸ್ಪತಿಗಳು ಇವೆಲ್ಲವುಗಳೂ ಹಿಂದೂ ದೇಶದಲ್ಲಿ ಉತ್ಪನ್ನವಾಗುತ್ತಿವೆ. ಸಿಲ್ಕು, ಉಣ್ಣೆ, ಹತ್ತಿ ಇವೆಲ್ಲವುಗಳೂ ತುಂಬಾ ಹುಟ್ಟುತ್ತವೆ. ಹಿಂದೆ ಇಲ್ಲಿ ಜಗದ್ವಿಖ್ಯಾತವಾದ ಕೈಗಾರಿಕೆಯು ನಡೆಯುತ್ತಿದ್ದಿತು. ಪ್ರಸಿದ್ಧಿ ಹೊಂದಿದ ಕೈಗಾರಿಕೆಯ ಸಾಮಾನುಗಳು ತಯಾರಿಸಲ್ಪಡುತ್ತಲಿದ್ದವು.

ಹಿಂದೆ ಸರ್ ಥೋಮಸ್ ಮುನ್ರೊವು ಹಿಂದೂಸ್ಥಾನದಲ್ಲಿರುವಾಗ ಜಹಾಂಗೀರನು ರತ್ನಾದಿಕಗಳಿಂದ ತನ್ನ ತುಲಾಭಾರವನ್ನು ಮಾಡಿಸಿ, ಆ ರತ್ನಾದಿಕಗಳನ್ನು ತನ್ನ ಪ್ರಜೆಗಳಿಗೆ ಹಂಚಿದ್ದನಂತೆ. ಹೀಗೆ ಮಾಡಿದುದು ಆತನ ಜನ್ಮ ದಿನದಲ್ಲಿ. ಜಹಾಂಗೀರನು ದುಂದುಗಾರನೆಂದು ಚರಿತ್ರೆಯಲ್ಲಿ ಹೇಳಲ್ಪಟ್ಟಿದೆ. ಆತನ ಕೋಶವು ತುಂಬಿ ತುಳುಕುತ್ತಿದ್ದರೆ ಆತನು ದುಂದುಗಾರಿಕೆಯಿಂದಲಾದರೂ ಅದನ್ನು ಬರಿದುಮಾಡುತ್ತಿದ್ದನು. ಆದರೆ ಪುನಃ ಆತನ ಕೋಶವು ಎಂದಿನಂತೆಯೇ ತುಂಬುತ್ತಿದ್ದಿತು.

ಈಗ ಇಷ್ಟೆಲ್ಲ ಐಶ್ವರ್ಯವೆಲ್ಲ ಎಲ್ಲಿರುತ್ತದೆ. ನಮ್ಮ ಸಂಸ್ಥಾನದ ವಿಷಯವಾಗಿಯೇ ಆಲೋಚಿಸುವುದಾದರೋ ಅಂದಿನ ಐಶ್ವರ್ಯವು ಇಂದೆಲ್ಲಿದೆ? ಇದೆಲ್ಲ ಐಶ್ವರ್ಯವು ಪರರಾಜ್ಯಗಳಿಂದ ಸೆಳೆಯಲ್ಪಟ್ಟಿರುತ್ತದೆ. ಏಕೆಂದರೆ ನಾವು ನಮ್ಮ ವೃತ್ತಿಯಾದ ಕೃಷಿಯನ್ನು ಅಭಿವೃದ್ಧಿಪಡಿಸುವುದಿಲ್ಲ. ಕೈಗಾರಿಕೆಗಳನ್ನು ಪ್ರಾರಂಭಿಸುವ ಬಗ್ಗೆ ಉತ್ಸುಕರಾಗಿಲ್ಲ. ಅದು ಕಾರಣವೇ ನಮ್ಮನ್ನು ಬಡತನವು ಆವರಿಸಿರುತ್ತದೆ. ಬಡತನದ ದೆಸೆಯಿಂದಲೇ ಅನಾರೋಗ್ಯವು ಆಮಂತ್ರಿತವಾಗುತ್ತದೆ.

ವಿಜಾಪೂರ ಪತ್ರ.

(೧)

ಕರ್ನಾಟಕಸ್ಥ ಬಂಧು ಭಗಿನಿಯರೇ,
ಸಪ್ರೇಮ ವಂದನೆಗಳು.

ಜೋಡ ಗುಮಟ, ಗೋಳ ಗುಮಟ, ಮುತ್ತಿನ ಗುಮಟ ಇಬ್ರಾಹಿಮ್ ರೋಜಾ ಮುಂತಾದ ಚಿಕ್ಕ ದೊಡ್ಡ ಇಮಾರತಿಗಳಿಂದಲೂ ಅಲ್ಲಿ ಆದಿಲ್‌ಶಹ ಮುಂತಾದ ರಾಜರ ಆಳಿಕೆಯಿಂದಲೂ ತಾಸಬಾವಡಿ ಗುಂಡ ಬಾವಡಿ ಮುಂತಾದ ಬಾವಡಿಗಳಿಂದಲೂ ಯಾವದು ಜಗತ್ಪ್ರಸಿದ್ಧವಿರುವದೋ ಅಂಥ ವಿಜಾಪುರದಲ್ಲಿ ನಾನು ವಿದ್ಯಾರ್ಥಿ ದೆಶೆಯನ್ನು ೪-೬ ವರ್ಷ ಕಳೆದದ್ದರಿಂದಲೂ ಅನೇಕ ವೇಳೆ ವಿಜಾಪೂರ ಪ್ರವಾಸವು ನನಗೆ ಘಟಿಸಿದ್ದರಿಂದಲೂ, ಘಟಿಸುವದರಿಂದಲೂ ನನಗೆ ಇದರ ವಿಷಯವಾಗಿ ಗೊತ್ತಿದ್ದ ಸಂಗತಿಯನ್ನು ತಿಳಿಸುವದೇ ನನ್ನೀ ಲೇಖದ ಮುಖ್ಯ ಧ್ಯೇಯವಾಗಿದೆ. ಅಂದರೆ ಹಳೇ ಹೊಸ ಕಟ್ಟಡಗಳ, ಹಳೇ ಹೊಸ ವೀರ ಮತ್ತು ಚಾಣ ಜನಗಳ, ಹೊಸ ಹೊಸ ಹೊಸ ಕಾರಖಾನೆಗಳ, ವಸ್ತು ಸಂಗ್ರಹಾಲಯ, ವಾಚನಾಲಯಗಳ, ನಾಟಕಗೃಹ—ಉಪಹಾರಗೃಹ—ಸಿನೇಮಾಗೃಹ ಕಾರಾಗೃಹಗಳ, ನಾನಾ ಸಂಸ್ಥೆಗಳ, ವ್ಯಾಪಾರೋದ್ಯೋಗಗಳ, ಪತ್ರಾಪತ್ರ ಮಾಸಿಕ ಪುಸ್ತಕಗಳ—ಅಚ್ಚು ಕೂಟಗಳ ಮುಂತಾದವುಗಳ ವರ್ಣನೆಯನ್ನು ತಿಳಿಸಬೇಕೆನ್ನುತ್ತೇನೆ.

ಈಗ್ಗೆ ವಿಜಾಪೂರ ಇದು ಜಿಲ್ಲೆಯ ಮುಖ್ಯ ಸ್ಥಳವಿದ್ದು ಬ್ರಿಟಿಷ ಸರಕಾರದ ಅಧೀನದಲ್ಲಿದೆ. ಇದು ರೈಲು ಸೀಮೆಯ ಪಟ್ಟಣವಾದ್ದರಿಂದ ಇಲ್ಲಿಯ ಹವೆಯು ಸಮ ಸೀತೋಷ್ಣವಿರುತ್ತದೆ. ಇಲ್ಲಿಯ ನೀರು ಬಹು ಪಾಚಕವೂ ಬಹು ಸಿಹಿಯಾದದ್ದೂ ಇರುತ್ತದೆ. ಇಲ್ಲಿ ಹಿಂದೂ-ಮುಸಲ್ಮಾನ-ಜೈನ-ಕ್ರೈಸ್ತ ಮುಂತಾದ ಜಾತಿಯ ಜನರು ವಾಸಿಸುತ್ತಾರೆ. ಅವರೆಲ್ಲರಲ್ಲಿ ಹಿಂದೂಗಳೇ ಹೆಚ್ಚಾಗಿದ್ದಾರೆ. ಇಲ್ಲಿಯ ಜನ ಸಂಖ್ಯೆಯು ಒಟ್ಟು ೩೬,೦೦೦ ಇದೆ.

ವಿಜಾಪೂರ ಪಟ್ಟಣದ ಪೂರ್ವ ದಿಗ್ಭಾಗದಲ್ಲಿ ಅರಳೀ ಗಂಟು ಕಟ್ಟುವಂಥ ಮತ್ತು ಹತ್ತಿಯನ್ನು ಅರಳಿಯ ರೂಪಕ್ಕೆ ತರುವಂಥ ಕೆಲವು ಕಾರಖಾನೆಗಳಿರುತ್ತವೆ. ಈ ಕಾರಖಾನೆಗಳ ಉಗಿಯಿಂದ ನಡೆವ ಯಂತ್ರಗಳಿರುತ್ತವೆ; ಮತ್ತು ಈ ಯಂತ್ರಗಳಿಂದ ಹೊರಡುವ ಹೊಗೆಯು ಹೊರ ಬೀಳಲಿಕ್ಕೆ ಕಂಬಗಳನ್ನು ನಿಲ್ಲಿಸಿದ್ದಾರೆ. ಅವು ದೂರಿಂದ ನೋಡುವವರಿಗೆ ಗಗನ ಚುಂಬಿತವಾದ ಗಿರಿ ಶಿಖರಗಳೆಂಬಂತೆ ಕಂಗೊಳಿಸುತ್ತವೆ. ಅವುಗಳ ಶಿರೋಭಾಗದಲ್ಲಿರುವ ಹುನ-ಮಂಶ—ಹರಿಣ—ವಿಳ್ಯಾರಿಯಾ ಮುಂತಾದ ಸೀಸಿನ ಗೊಂಬೆಗಳು ಬಹಳ ಮನೋಹರವಾಗಿರುತ್ತವೆ. ಅವುಗಳ ಮೇಲಿಂದ ಹೊರಬೀಳುವ ಧೂಮ್ರವು ಮೇಘ ವೃಂದದಂತೆ ಪಸರುತ್ತದೆ. ಇರಲಿ, ಈ ಎಲ್ಲ ಕಾರಖಾನೆಗಳಿಂದ ನಮ್ಮ ದೇಶದ ಹತ್ತಿ ಅರೆಯುವ ವಿದ್ಯೆಯೂ, ಉದ್ಯೋಗವೂ ಮುಗ್ಗಿ ಹೋಯಿತೆಂಬುದು ನಿರ್ವಿವಾದವಾಯಿತು. ಈ ಎಲ್ಲ ಕಾರಖಾನೆಗಳ ಯಜಮಾನರು ಬಹುತರವಾಗಿ ಪಾರ್ಸಿ ಜನರೇ ಇದ್ದಾರೆ. ನಮ್ಮ ಭರತ ಖಂಡದಲ್ಲಿ ದೊಡ್ಡ ದೊಡ್ಡ ಸರಿ ಅಂಗಡಿಗಳ ಮಾಲೀಕರೂ ದೊಡ್ಡ ದೊಡ್ಡ ನೂಲುವ ನೆಯ್ಯುವ ಗಿರಣಿಗಳ ಯಜಮಾನರು ಪಾರ್ಸಿಗಳೇ! ಈ ಕಾರಖಾನೆಗಳಲ್ಲಿ ವರ್ಷದಲ್ಲಿ ನಾಲ್ಕೇ ತಿಂಗಳು ಅಂದರೆ ಬೇಸಿಗೆಯ ಕಾಲದಲ್ಲಿ ಮಾತ್ರ ಕೆಲಸ ನಡೆಯುತ್ತದೆ. ಆಗ್ಗೆ ಒಂದೊಂದು ಕಾರಖಾನೆಗಳಲ್ಲಿ ಇನ್ನೂರು ಮುನ್ನೂರು ಜನ ಕೂಲಿಕಾರರು ದುಡಿಯುತ್ತಿರುತ್ತಾರೆ. ಹತ್ತಿಪ್ಪತ್ತು ಜನ ಕಾರಕೂನರು ಲೆಕ್ಕ ಬರೆಯುತ್ತಿರುತ್ತಾರೆ. ಘಾಸಿನ ಗಾಡಿಯವರಂತೂ ಹಗಲು-ರಾತ್ರಿಯನ್ನದೆ ಒಂದೇ ಸವನೆ ಕಾರಖಾನೆಯಿಂದ ಸ್ಟೇಶನಕ್ಕೂ ಸ್ಟೇಶನದಿಂದ ಕಾರಖಾನೆಗೂ ತಮ್ಮ ಗಾಡಿಗಳನ್ನು ತಿರುಗಿಸುತ್ತಿರುತ್ತಾರೆ. ಈ ಕಾರಖಾನೆಗಳ ಬೈಲು ಭೂಮಿಯಲ್ಲಿ ಅರಳೀ ಗಂಟುಗಳು ಅಸಂಖ್ಯಾತವಾಗಿ ಬಿದ್ದಿರುತ್ತವೆ. ಬೇಸಿಗೆಯ ಕಾಲವು ಮುಗಿಯಿತೆಂದರೆ ತೀರಿತು. ಕಾರಕೂನರ-ವ್ಯವಸ್ಥಾಪಕರ ಹೊರತು ಬೇರೆ ಜನರು ಇಲ್ಲಿ ಹಣಿಕೆ ಸಹ ಹಾಕುವದಿಲ್ಲ. ಉದ್ಯೋಗವಿಲ್ಲದ ಮನುಷ್ಯನ ಹತ್ತರ ಅಥವಾ ಕಾರಖಾನೆಗಳ ಹತ್ತರ ಯಾರು ಬರಬೇಕು? ಅರಳೀ ಗಂಟುಗಳೂ-ಹತ್ತಿ ಕಾಳುಗಳೂ ಇಲ್ಲದಂತಾಗುವದರಿಂದ ಕಾರಖಾನೆಗಳು ವೈಧವ್ಯಯುಕ್ತವಾದ ಸ್ತ್ರೀಯಂತೆ ಭಣಗುಟ್ಟುತ್ತಿರುತ್ತವೆ.

(ಮುಂದೆ ಸಾಗುವುದು.)

ಲೇಖಕ: — ಮನೋಹರರಾವ.

ಪಂಡಿತರ ಪರಿಷತ್ತು.

ಮದರಾಸಿದ ಪಂಡಿತರು ಕಳೆದ ೨೩ನೇ ತಾರೀಕಿನ ದಿನ ಒಂದು ಪರಿಷದವನ್ನು ಜರಗಿಸಿ, ಅಸ್ಪೃಶ್ಯತಾ ನಿವಾರಣ, ದೇವಳ ಪ್ರವೇಶ ಮೊದಲಾದವುಗಳನ್ನು ಕುರಿತಾಗಿ ಪಂಡಿತ ಮದನ ಮೋಹನ ಮಾಲವೀಯರೊಡನೆ ಚರ್ಚೆಯನ್ನು ನಡಯಿಸಿದರು. ಅಚ್ಚವಾದ ಸಂಸ್ಕೃತ ಭಾಷೆಯಲ್ಲಿ ಬಹಳ ಹೊತ್ತಿನ ವರೆಗೆ ಚರ್ಚೆಯು ನಡೆಯಿತು. ಕುಮಾರ ತಾತಾಚಾರ್ಯ, ಯದುನಾಥಾಚಾರ್ಯ, ಮಾರ್ಕಂಡೇಯಶರ್ಮ, ಶ್ರೀ. ರಂಗಾಚಾರ್ಯ, ವಿಶ್ವಕ್ಸೇನಾಚಾರ್ಯ, ಸುಬ್ರಹ್ಮಣ್ಯಶಾಸ್ತ್ರಿ ಮೊದಲಾದ ಹಲವು ಹೆಸರು ಪಡೆದ ಪಂಡಿತರುಗಳೇ ಇದರಲ್ಲಿ ಮುಖ್ಯ ಭಾಗವನ್ನು ವಹಿಸಿದ್ದರು.

ದೇವಳ ಪ್ರವೇಶ:—ಚರ್ಚೆಗಾಗಿ ಎತ್ತಲ್ಪಟ್ಟ ಪ್ರಥಮ ಪ್ರಶ್ನೆಯೇ ಪಂಚಮರು ದೇವಾಲಯವನ್ನು ಪ್ರವೇಶಿಸುವಿಕೆ. ಪಂಚಮರು ದೇವಾಲಯಗಳನ್ನು ಪ್ರವೇಶಿಸ ಬಹುದೆಂದು ಹಿಂದೂಶಾಸ್ತ್ರವು ಸಮ್ಮತಿಸುವದೇ ಎಂದು ಕುಮಾರ ತಾತಾಚಾರ್ಯರು ಪಂಡಿತ ಮಾಲವೀಯಜಿಯವರನ್ನು ಪ್ರಶ್ನಿಸಿದರು. ಅದಕ್ಕೆ ಪಂಡಿತಜಿಯವರು ಶಾಸ್ತ್ರಗಳು ಇದಕ್ಕೆ ಸಮ್ಮತಿಸುವವೆಂದು ತಾನು ಅಭಿಪ್ರಾಯಪಡುವುದಿಲ್ಲವೆಂದು ಸೂಚಿಸಿದರು. ತಾತಾಚಾರ್ಯ ಶರ್ಮರು ಪುನಃ ಪ್ರಶ್ನಿಸಿದರು. "ಶಾಸ್ತ್ರಗಳು ಈ ಕುರಿತಾಗಿ ಪೂರ್ಣವಾಗಿ ಸಮ್ಮತಿಸುವವು ಎಂದು ನೀವು ಬಹಿರಂಗವಾದ ಸಭೆಗಳಲ್ಲಿ ಈ ಮೊದಲು ಹೇಳದುದಿಲ್ಲವೆ?" ಅದಕ್ಕೆ ಮಾಲವೀಯರು ತಾನೆಂದಿಗೂ ಹಾಗೆ ಹೇಳಿದುದಿಲ್ಲವೆಂದರು. ಆಗ ಶ್ರೀಮಾನ್ ಯದುನಾಥಾಚಾರ್ಯರು ಪಂಚಮರು ದೇವಳ ಪ್ರವೇಶವನ್ನು ನಿಷೇಧಿಸುವಂತಹ ಶ್ಲೋಕರೂಪವಾದ ಕೆಲವು ಪ್ರಮಾಣ ವಾಕ್ಯಗಳನ್ನು ಉಚ್ಚರಿಸಲಾಗಿ, ಪಂಡಿತಜೀಯವರು ಈ ಶ್ಲೋಕಗಳನ್ನು ಅಚ್ಚಾದ ಯಾವ ದಾದರೂ ಪುಸ್ತಕಗಳಲ್ಲಿ ತೋರಿಸಿದುದಾದರೆ ತಾನು ಆ ವಿಷಯವಾಗಿ ವಿಚಾರಿಸುವೆನೆಂದರು. ಆಗ ಯದುನಾಥಾಚಾರ್ಯರು ತನ್ನ ಮನೆಗೆ ಒಬ್ಬ ಆಳನ್ನು ಕಳುಹಿಸಿ ಕೆಲವು ಪುಸ್ತಕಗಳನ್ನು ತರಿಸಿ ಮಾಲವೀಯರಿಗೆ ತೋರಿಸಿದರು. ತಾನು ಶಾಸ್ತ್ರಗಳ ಈ ನಿರ್ಧಾರದ ವಿಷಯವಾಗಿ ಈ ಅಭಿಪ್ರಾಯವುಳ್ಳವನಾಗಿಲ್ಲವೆಂದ ಮೇಲೆ ಪಂಡಿತರುಗಳಿಗೆ ಕೊಂಚ ಸಮಾಧಾನವಾಯಿತು.

ಚಾಂಡಾಲರಿಗೆ ಮಂತ್ರದೀಕ್ಷೆ—ಇದೇ ಎರಡನೆಯ ಪ್ರಶ್ನೆಯಾಗಿದ್ದಿತು. ಮಾಲವೀಯಜಿಯವರು ಭಾರತದ ಕೆಲವು ವಾಕ್ಯಗಳನ್ನು ಓದಿ ಹೇಳಿ, ನಾಲ್ಕು ವರ್ಣದವರೂ "ಆ ವೇದ" ವನ್ನು ಕೇಳಬಹುದು ಎಂಬುದನ್ನು ಶ್ರುತಪಡಿಸಿದರು. ಅಷ್ಟಾಕ್ಷರಿ ಪಂಚಾಕ್ಷರಿ ಮತ್ತು ಇತರ ಮಂತ್ರಗಳನ್ನು ನಾಲ್ಕು ಜಾತಿಯವರೂ ಕೇಳಲು ಅಧಿಕಾರಿಗಳೆಂಬುದನ್ನು ಅವರು ತನ್ನ ಕೆಲವು ಆಧಾರಗಳಿಂದ ತೋರಿಸಿದರು. ಆಗ ಪಂಡಿತರು "ಆ ವೇದವೆಂದರೆ ಪಂಚಮ ವೇದವೆಂದೆನ್ನಿಸಿಕೊಳ್ಳುವ ಮಹಾಭಾರತವು, ಅದು ಮಾತ್ರವಲ್ಲದೆ ನಾಲ್ಕು ವರ್ಣದವರಿಗೆ ಮಾತ್ರ ಅದನ್ನು ಕೇಳಲಿಕ್ಕೆ ಅಧಿಕಾರವಿದೆಯಲ್ಲದೆ ಚಂಡಾಲರಿಗಿಲ್ಲ" ಎಂದರು. ಶೂದ್ರರು ವೇದಶ್ರವಣವನ್ನು ಮಾಡಲು ಆಗದೆಂಬುದನ್ನು ನಿಷೇಧಿಸುವಂತಹ ಬ್ರಹ್ಮಸೂತ್ರವನ್ನು ವಿಶ್ವಕ್ಸೇನಾಚಾರ್ಯರು ಪಠಿಸಿದರು. ಇದಿಗೆ ಚರ್ಚೆಯಾಗಿ ಶೂದ್ರರು ವೇದ ಮಂತ್ರಗಳನ್ನು ಕೇಳಲಾಗದೆಂದೂ, ಆಗಮ ಮಂತ್ರಗಳನ್ನು ಕೇಳಬಹುದೆಂದೂ ಪರಸ್ಪರರಲ್ಲಿ ಒಪ್ಪಿಗೆಯಾಯಿತು. ಈ ಸಂದರ್ಭದಲ್ಲಿ ಚಾಂಡಾಲರ ವಿಷಯವೇ ಎಲ್ಲರಿಗೆ ಬರಲಿಲ್ಲ. ಪ್ರಸಿದ್ಧಿಹೊಂದಿದ ವೇದಾಂತಿಯೂ ಶ್ರೀ ಮಧ್ವ ಸಾಂಪ್ರದಾಯದ ತಾರ್ಕಿಕನೂ ಆದ ಶ್ರೀನಿವಾಸಾಚಾರ್ಯರೆಂಬವರು, ದ್ವಿಜರು ಮಾತ್ರವಲ್ಲದೆ, ಇತರ ಯಾವ ಹಿಂದೂಗಳೂ, ಅಧ್ಯಯನಕ್ಕಾಗಲಿ, ಶ್ರವಣಕ್ಕಾಗಲಿ, ಅರ್ಹರಲ್ಲವೆಂಬುದನ್ನು ಬಲಪಡಿಸಿದರು. ಅರ್ಥವಾದದ ಆಧಾರದಿಂದ ಪಂಡಿತ ಮಾಲವೀಯಜಿಯವರು ತನ್ನ ಅಭಿಪ್ರಾಯವನ್ನು ಸಾಧಾರವಾಗಿ ರಚಿಸಲು ಪ್ರಯತ್ನಿಸಿದಾಗ, ಒಬ್ಬರು ಪಂಡಿತರುಗಳು, ಅರ್ಥವಾದದ ಆಧಾರಕ್ಕೆ ಬೆಲೆಯಿಲ್ಲವೆಂದೂ, ಶ್ರುತಿ ಮತ್ತು ಸೂತ್ರ ಪ್ರಮಾಣಗಳೇ ಬೇಕಾದವುಗಳೆಂದೂ ನಿಷೇಧಿಸಿದರು.

ಅಸ್ಪೃಶ್ಯತೆ:—ಕೊನೆಯವಾಗಿ ಚರ್ಚಿಸಲ್ಪಟ್ಟ ವಿಷಯವೆಂದರೆ ಅಸ್ಪೃಶ್ಯತೆ. ಕೆಲವು ಮಾತುಕತೆಗಳಾದ ಮೇಲೆ ಪಂಡಿತ ಯದುನಾಥಾಚಾರ್ಯರು, ಚಾಂಡಾಲರು ನಾಲ್ಕು ವರ್ಣದವರೊಂದಿಗೆ ಸೇರಬಾರದೆಂಬುದನ್ನು ಸೂಚಿಸುವಂತಹ ಹಲವು ಶ್ಲೋಕಗಳನ್ನು ಹೇಳಿದರು. ಆಗ ಪಂಡಿತ ಮಾಲವೀಯರವರು, "ಜಾತ್ರೆ, ದೇವಯಾತ್ರೆ, ಮದುವೆ, ತೀರ್ಥ ಮೊದಲಾದ ಸಂದರ್ಭಗಳಲ್ಲಿ ಸ್ಪರ್ಶದೋಷವನ್ನು ಗಣಿಸಬಾರದು ಎಂಬುದನ್ನು ತೋರಿಸುವಂತಹ ಕೆಲವು ಆಧಾರಗಳನ್ನು ಕೊಟ್ಟರು. ತನ್ನ ಅಸ್ಪೃಶ್ಯತೆ ಮತ್ತು ದೇವಳ ಪ್ರವೇಶದ ಅಭಿಪ್ರಾಯವನ್ನು ಬಲಪಡಿಸುವದಕ್ಕಾಗಿಯೇ ಅವರದನ್ನು ಸೂಚಿಸಿದುದು. ಮಾಲವೀಯಜಿಯವರು ಸೂಚಿಸಿದಂತಹ ಸ್ಪರ್ಶದೋಷದ ವಿಷಯವು ಚಾಂಡಾಲ ಸ್ಪರ್ಶಕ್ಕೆ ಸಂಬಂಧಿಸುವದಿಲ್ಲವೆಂದೂ, ಕೇವಲ ಮಿಂದ ಬ್ರಾಹ್ಮಣರು ಮೀಯದ ಬ್ರಾಹ್ಮಣರನ್ನು ಸ್ಪರ್ಶಿಸುವದರ ಕುರಿತಾಗಿದೆಯೆಂದೂ ಪಂಡಿತರು ಚರ್ಚಿಸಿದರು. ಮಾಲವೀಯರು ತಿಳಿಯುವ 'ಮಾಂಸಾಹಾರವನ್ನೂ ಮದ್ಯಪಾನವನ್ನೂ ತ್ಯಜಿಸಿದ ಶುದ್ಧ ಆಚಾರದ ಪಂಚಮರು ದೇವಳವನ್ನು ಪ್ರವೇಶಿಸಬಹುದೆಂದೂ, ಅವರ ಪ್ರವೇಶದಿಂದ ದೇವಳವು ಅಶುದ್ಧವಾಗದೆ ಬದಲು ಪಂಚಮರೇ ಹೆಚ್ಚಾಗಿ ಪವಿತ್ರರಾಗುವರೆಂಬ" ಈ ಭಾವನೆಯು ಶಾಸ್ತ್ರಕ್ಕೆ ತೀರ ವಿರುದ್ಧವೆಂದು ಪಂಡಿತರು ತೋರಿಸಿಕೊಟ್ಟು ಸಂಪ್ರೋಕ್ಷಣೆಯ ಕ್ರಮವನ್ನು ವಿವರಿಸಿ ಹೇಳಿದರು.

"ಶಾಸ್ತ್ರಗಳಲ್ಲಿ ಹಲವು ಸಂದರ್ಭಗಳಲ್ಲಿ ಪಂಚಮರು ದೇವಾಲಯಗಳನ್ನು ಪ್ರವೇಶಿಸುವದನ್ನು ಕಠಿಣವಾಗಿ ನಿಷೇಧಿಸಿ ವಚನಗಳಿವೆ. ನಾನು ಶಾಸ್ತ್ರವನ್ನು ಗೌರವಿಸುವೆನಾದುದರಿಂದ ಇದನ್ನು ಮಾನಿಸಬೇಕಾಗಿದೆ. ಆದರೆ ಯಾವನು ರಾಮನಾಮವನ್ನು ಪಠಿಸುತ್ತಾ ಶುದ್ಧ ಮನಸ್ಯನಾಗಿರುವನೋ ಅತನು ಚಾಂಡಾಲನೇ ಆಗಿದ್ದರೂ ದೇವಾಲಯವನ್ನು ಪ್ರವೇಶಿಸಬಹುದು. ಅದುಕಾರಣ ನಂದನು ಚಾಂಡಾಲನಾಗಿದ್ದರೂ ಇಂದಿಗೂ ಆತನ ವಿಗ್ರಹವನ್ನು ದೇವಾಲಯಗಳಲ್ಲಿ ಇಡುವರು." ಎಂದು ಮಾಲವೀಯರವರು ದನ್ನವಿಸಿಕೊಂಡರು. ಆಗ ವಿಶ್ವಕ್ಸೇನಾಚಾರ್ಯರು ಈ ವಿಷಯಗಳಲ್ಲಿ ಅರ್ಥವಾದದ ಸೂತ್ರಗಳನ್ನು ಮಾನಿಸಲಾಗುವುದಿಲ್ಲವೆಂದೂ, ಅವೆಲ್ಲ ಸುಳ್ಳು ಹೇಳಿಕೆಗಳೆಂದೂ ವಾದಿಸಿದರು. ಪವಿತ್ರವಾದ ಶಾಸ್ತ್ರಗಳು ಭಗವಂತನ ಸ್ವರೂಪದ ಆಜ್ಞೆಗಳೆಂದೂ, ಪಂಚಮರನ್ನು ದೇವಳವನ್ನು ಪ್ರವೇಶಿಸಲು ಬಿಡುವುದರಿಂದ ಪರಿಶುದ್ಧವಾದ ಭಗವಂತನ ಆಜ್ಞೆಗಳನ್ನು ಉಲ್ಲಂಘಿಸಿದಂತಾಗಿ ಪಂಚಮರನ್ನು ಪಾಪಕ್ಕೂ ಪಕ್ಕಾಗಿಸಿದಂತಾಗುವದೆಂದೂ, ನಂದನ ವಿಷಯವಾಗಿ ಹೇಳುವುದಾದರೆ ನಂದನು ದೇವಳ ಪ್ರವೇಶದ ಮೊದಲು ಅಗ್ನಿ ಸಂಸ್ಕಾರದಿಂದ ಪರಿಶುದ್ಧನಾಗಿ ಚಾಂಡಾಲತ್ವವನ್ನು ಕಳಕೊಂಡಿದ್ದನೆಂದೂ, ಪಂಡಿತರು ವಿವರಿಸಿದರು.

ಪರಿಷತ್ತು ಕೊನೆಗಾಣುವ ಸಮಯದಲ್ಲಿ ಕಾಶಿಯ ಕೃಷ್ಣಮಾಚಾರ್ಯರವರು "ಪಂಡಿತರು ಮತ್ತು ಮಾಲವೀಯಜಿಯವರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ, ಮಾಲವೀಯಜಿಯವರನ್ನು ಕಂಡು ಪಂಡಿತರಿಗೆ ಆನಂದವಾಯಿತೆಂದೂ, ಮಾಲವೀಯಜಿಯವರು ಶಾಸ್ತ್ರಗಳನ್ನು ಗೌರವಿಸುವವರಾದುದರಿಂದ ಅವರಿಗೆ ಸಂತೋಷವಾಗುತ್ತದೆಯೆಂದೂ, ಎರಡು ವರ್ಷಗಳ ಹಿಂದೆ ಮಾಲವೀಯರು ಪಂಡಿತರು ಅವರನ್ನು ಚರ್ಚೆಗೆ ಕರೆದಾಗ ಬಹಳ ಹೊತ್ತು ಅವರನ್ನು ಕಾದಿರಿಸಿದಾಗ್ಯೂ ಆ ದಿನ ಅವರ ಭೇಟಿ ಸಿಕ್ಕದುದು ಚೆನ್ನಾಯಿತೆಂದೂ, ಅವರು ಅರ್ಥವಾದದ ಮೇಲೆಯೇ ಆದರಿಸುವದು ಸರಿಯಲ್ಲವೆಂದೂ, ಹಿಂದೂ ಮತದಲ್ಲಿ ಧರ್ಮಶಾಸ್ತ್ರವೇ ಮುಖ್ಯವಾದುದೆಂದೂ" ಸೂಚಿಸಿದರು.

ಪಂಡಿತ ಮಾಲವೀಯಜಿಯವರು ಇನ್ನೂ ಹಲವು ದಿನಗಳ ಚರ್ಚೆಗಾಗಿ ಒಟ್ಟಾಗಬೇಕೆಂದು ಅಧ್ಯಕ್ಷರನ್ನು ಕೇಳಿಕೊಂಡರು.

ಪಂಡಿತ ಮದನ ಮೋಹನ ಮಾಲವೀಯರಿಗೂ, ಇತರರಿಗೂ ಕೃತಜ್ಞತಾ ವಂದನೆಗಳನ್ನು ಅರ್ಪಿಸಿದ ಮೇಲೆ ಪರಿಷತ್ತು ಕೊನೆಗೊಂಡಿತು.

ಮಂಗಗಳ ಆವಶ್ಯಕತೆ.

ಪ್ರಾಣಿಜನ್ಯ ಧಾತುವು ಉಪಯೋಗಿಸಲ್ಪಡುವುದಿಲ್ಲ. ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸರಿಂದಲೂ ಉತ್ತಮ ಫೆಲೂನಾ ಮಾತ್ರೆಗಳು ಮಾರಲ್ಪಡುವವು.

FELUNA PILLS
for females only

9

ದಕ್ಷಿಣ ಕನ್ನಡ ಜಿಲ್ಲೆಯ ಟೀಚರ್ ಮೆನೇಜರರ ಪರವಾಗಿ, ಮಾಡಿಕೊಂಡ ಮನವಿಗೆ ಸರಕಾರದಿಂದ ದೊರೆತ ಉತ್ತರ.

(ಕಳೆದ ತಾ. 19-5-1929ನೇ ಸಂಚಿಕೆಯಿಂದ ಮುಂದರಿಸಿದ್ದು)

(ಲೇಖಕ:—ಕುಂಬಳೆ. ಗೋವಿಂದಯ್ಯ ಸೆಟ್ಟಿ. ಮೆಂಬರ್. ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲ್. ದ. ಕ.)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಥೋಲಿಕ ಸಮಾಜದವರು ಹೊಸತಾಗಿ ತೆರೆಯುವ ಶಾಲೆಗಳ ಮಂಜೂರಾತಿ ಮತ್ತು ದ್ರವ್ಯಸಹಾಯದ ವಿಚಾರದಲ್ಲಿ, ಸರಕಾರವು ದಕ್ಷಿಣ ಕನ್ನಡಾ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿಗೆ ದಯಪಾಲಿಸಿದ, G. O No 104/15-1-29ನೇ ಹುಕುಮಿನ ಸಾರಾಂಶವನ್ನು ಎಲ್ಲಾ ಟೀಚರ್ ಮೆನೇಜರರ ಅವಗಾಹನೆಯ ಬಗ್ಗೆ ಇಲ್ಲಿ ಪ್ರಕಟಿಸಲಾಗಿಯದೆ.

ದಕ್ಷಿಣ ಹಿಂದೂದೇಶದಲ್ಲಿರುವ ಕೆಥೋಲಿಕ ಸಮಾಜದ ಪಾದ್ರಿಗಳಿಂದ, ತಮ್ಮ ಸಮಾಜದ ಮಕ್ಕಳ ಸಂಖ್ಯೆಯು ಸಾಕಷ್ಟು ಸಿಕ್ಕುವ ಸ್ಥಳಗಳಲ್ಲಿ ತಮ್ಮ ಶಾಲೆಗಳನ್ನೇ ಸ್ಥಾಪಿಸುವಂತೆ ಬರಕೊಂಡ ಬಿನ್ನವತ್ತಳೆಯು ಸರಕಾರಕ್ಕೆ ತಲುಪಿಯದೆ. ಇದೂ ಅಲ್ಲದೆ ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಕೆಥೋಲಿಕ ಸಮಾಜದವರು ಸಹಾ, ತಮ್ಮ ಶಾಲೆಗಳನ್ನು ಸ್ಥಾಪಿಸಿದ್ದಲ್ಲಿ ಅವಕ್ಕೆ ಮಂಜೂರಾತಿಯಾಗಲೀ ಗ್ರಾಂಟು ಆಗಲೀ ಸಿಕ್ಕುವುದು ಕಷ್ಟವಾಗುತ್ತದೆಂಬುದಾಗಿ ಬರಕೊಂಡ ಮನವಿಯೂ ತಲುಪಿಯದೆ. ಅದ್ದರಿಂದ ಈ ಸಂಕಷ್ಟಗಳನ್ನು ನಿವಾರಿಸುವ ಬಗ್ಗೆ ಈ ಕೆಳಗಿನ ರೂಲುಗಳನ್ನು ಅನುಸರಿಸಬೇಕಾಗಿ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿಗೆ ಸರಕಾರವು ಸಿಫಾರಸುಮಾಡುತ್ತದೆ.

(1) ಒಂದು ಶಾಲೆಗಿಂತ ಹೆಚ್ಚು ಶಾಲೆಯು ಅಗತ್ಯವಿದ್ದು, ಕೆಥೋಲಿಕ ಮಕ್ಕಳ ಸಂಖ್ಯೆಯು ಸಾಕಷ್ಟು ಇದ್ದ ಸ್ಥಳದಲ್ಲಿ, ಕೆಥೋಲಿಕರು ತಮ್ಮ ಶಾಲೆಯನ್ನೊಂದು ಹೆಚ್ಚಿಗೆ ತೆರೆದದ್ದಾದರೆ, ಆ ಶಾಲೆಗೆ ಮಂಜೂರಾತಿಯನ್ನು ಸಹಾಯ ಧನವನ್ನೂ ಕೊಡಬೇಕು. ಅಂಥಾ ಶಾಲೆಗೆ ಕೆಥೋಲಿಕರಲ್ಲದ ಮಕ್ಕಳನ್ನು ದಾಖಲುಮಾಡಿಕೊಳ್ಳುವ ವಿಷಯದಲ್ಲಿ, ವಿದ್ಯಾಲಯದ ಆಫೀಸರರೂ, ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿನವರೂ ಸಮೀಪದಲ್ಲಿರುವ ಇತರ ಶಾಲೆಗಳಿಗೆ ತೊಂದರೆಯುಂಟಾಗದಂತೆ ವರ್ತಿಸತಕ್ಕದ್ದು.

(2) ಒಂದು ಶಾಲೆಗಿಂತ ಹೆಚ್ಚು ಶಾಲೆಯು ಬೇಕೆನ್ನುವುದು ಅನಾವಶ್ಯಕವಾಗಿ ಕಂಡ ಸ್ಥಳದಲ್ಲಿ ಕೆಥೋಲಿಕರು ತಮ್ಮದೊಂದು ಶಾಲೆಯನ್ನು ಹೆಚ್ಚಿಗೆ ತೆರೆದದ್ದಾದರೆ, ಆ ಶಾಲೆಗೆ ಬರೇ ಕೆಥೋಲಿಕರನ್ನು ಮಾತ್ರ ದಾಖಲುಮಾಡಿಕೊಳ್ಳುವ ಶರ್ತದಿಂದ ಮಂಜೂರಾತಿಯನ್ನು ಕೊಡಬಹುದಲ್ಲದೆ, ಅಲ್ಲಿ ಆ ಶಾಲೆಯು ಅಗತ್ಯವೆಂದು ಕಾಣುವ ವರೆಗೆ ಸಹಾಯಧನವನ್ನು ಕೊಡಲೇ ಬಾರದು.

(3) ಒಂದು ಶಾಲೆಗಿಂತ ಹೆಚ್ಚು ಶಾಲೆಯ ಅಗತ್ಯವೇ ಇಲ್ಲದಿರುವ, ವ ಅಲ್ಲಿ ಇನ್ನೊಂದು ಶಾಲೆಗೆ ಗ್ರಾಂಟು ಕೊಡುವುದರಿಂದ ಸಾರ್ವಜನಿಕ ಹಣವು ವ್ಯರ್ಥವಾಗುವುದೆಂದು ಕಂಡು ಬರುವ ಸ್ಥಳದಲ್ಲಿ, ಕೆಥೋಲಿಕರು ತಮ್ಮ ಸಮಾಜದ ಮಕ್ಕಳಿಗೆ ಹೊಸ ಶಾಲೆಯನ್ನು ತೆರೆದದ್ದಾದರೆ, ಆ ಶಾಲೆಗೆ ಕೆಥೋಲಿಕರ ಮಕ್ಕಳನ್ನು ಮಾತ್ರ ದಾಖಲುಮಾಡಿಕೊಳ್ಳುವ ಶರ್ತದಿಂದ ಮಂಜೂರಾತಿಯನ್ನು ಕೊಡಬಹುದು. ಆದರೆ ಆ ಶಾಲೆಗೆ ಯಾವ ತರದ ಗ್ರಾಂಟನ್ನು ಪಡಿಯಲಿಕ್ಕೂ ಅವರಿಗೆ ಅಧಿಕಾರವಿಲ್ಲ.

ದಕ್ಷಿಣಕನ್ನಡ ಜಿಲ್ಲೆಯ ಎಡ್ಯುಕೇಶನಲ್ ಕೌನ್ಸಿಲು ಪ್ರೆಸಿಡೆಂಟರು, ಈ ನಿಬಂಧನೆಗಳಿಂದ ಯಾವ ತರದ ಕೆಲಸವು ಆಯಿತೆಂದು ವರುಷಾಂತ್ಯದಲ್ಲಿ ಬರೆದುಕೊಳ್ಳಬೇಕಾಗಿ ಅಪೇಕ್ಷಿಸಲಾಗಿಯದೆ.

(*Sd*) J. VENKATANARAYANA
Secretary to Government.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಒ. ಪಿ. ನಂಬ್ರ 23/1929

ನರ್ಸು ಸಾಲಿಯಾನ..................ಅರ್ಜಿದಾರ.

ಮತ್ತು

ಜಾಕಬ ಹೆಂಗ್ಸು ಕೂಡಾ 3 ಜನರು—ಎದ್ರಿಅರ್ಜಿದಾರರು.

ಇವರೊಳಗೆ

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನಂದರೆ:—

ಅರ್ಜಿದಾರನು ತನ್ನ ಸಹೋದರ ಮೃತಪಟ್ಟ ಚೆನ್ನಪ್ಪ ಕೃಷ್ಣ ಸಾಲಿಯಾನನಿಗೆ ಹೊರಗಿನಿಂದ ಬರತಕ್ಕ ಆಯುವೇಜನ್ನು ವಸೂಲು ಮಾಡುವ ಬಗ್ಗೆ ತನಗೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಈ ಕೋರ್ಟಿಗೆ ಮನವಿಮಾಡಿಕೊಂಡಿದ್ದಾನೆ. ಸದ್ರಿ ಅರ್ಜಿಯು ತನ್ಖಿಯ ಬಗ್ಗೆ ತಾರೀಕು 27-6 1929ಕ್ಕೆ ಇಟ್ಟಿಯದೆ. ಈ ಕುರಿತು ಯಾರಾದರೂ ಆಕ್ಷೇಪಿಸುವದಾದರೆ ಈ ಕೋರ್ಟ ಮುಂದೆ ಸದ್ರಿ ತಾರೀಕಿನಲ್ಲಿ ಬೆಳಗ್ಗೆ ಘಂಟೆ 11ಕ್ಕೆ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದು.

11-6-1929

K. L. Kudva,
ಅರ್ಜಿದಾರನ ಕಡೆ ವಕೀಲ್

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕ್ಷಾಂಕ್ಷುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಕ್ಷತ್ರಕ್ಷಯ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಿತ!
ದಶಮೂಲ ಸುಖಪ್ರಸವೌಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಷಂಗಳನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಫುಟವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರೋಗ್ಯ ರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್ತರವಾದ ಬೆಳ್ಳಿ ಪುಡಿವಾರಹಗ್ಗ.

ESTD 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿವಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ನಿ ದಿನದ ಅನುಭವದ ಮೇಲೆ ನಮ್ಮ ಪುಡಿವಾರ ಹಗ್ಗಗಳು ಕೆಲವೆಡೆ ... ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಪುಡಿವಾರ ವ್ಯಾಪಾರಿ,

24-8-'28 ತಿರ್ಪ್ಪತೇಟ್ ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1|- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಔಷಧಾಲಯ,

ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—

ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, Bombay, and Puttur.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ಮುದ್ದತಿ ಆಗುವ ರೂ. 1000/-ದ ಮೇಲ್ಪಟ್ಟ ಮೊಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/ and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to—

Canara Bank Ltd.,
Mangalore, 11—2—1929

K. Venkat Rao,
Secretary

THE PANGAL NAYAK BANK, LTD.

Branch Office Mangalore	Head Office: Udipi, *Established 1920.*	Agency Office Cochin.

Authorised Capital: Rs. 2,00,000-	Paidup Capital: Rs. 1,57,100-
Issued Capital: Rs. 1,75,000-	Reserve and other Funds: Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5%, 6 or 9 months 5¼%, 12, 15, 18 or 21 months 6%; 24 months 6¼% and interest **being payable every 3 months.**

Short Notice Deposits, Cumulative Deposits, and Savings Bank Deposits are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6½% and interest being payable every quarter.

Loans and Advances are made on pledge of valuables, on proper personal securities on reasonable terms; and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
1st March, 1929.

P. Lakshman Nayak,
Offg. Secretary.

ADVERTISE IN OUR WEEKLY.
To Reach the Hearths & Homes
OF INDIA'S MASSES

For Particulars Apply to:

The Manager,
SWADESHABHIMANI,
MANGALORE.

[illegible]

ರಾಜದ್ರೋಹದ ಹುಡುಕಾಟ.

ಲಾಹೋರಿನ ಸುಹರಿಡೆಂಟರಾದ ಸೀಂಡರ್ಸ್ಸರನ್ನು ಯಾರೋ ಕೊಂದುಹಾಕಿದುದರಿಂದ ಸರಕಾರಕ್ಕೆ ಎಲ್ಲೆಲ್ಲಿ ನೋಡಿದರೂ ರಾಜದ್ರೋಹವೇ ಕಂಡುಬರುತ್ತದೆ. ಸರಕಾರದ ಇಷ್ಟು ವಿಸ್ತಾರವಾದ ಸಂಸ್ಥೆಯೂ, ಅವರ ಸಿ. ಐ. ಡಿಗಳ ವಿಭಾಗವೂ ಇದ್ದು ಇನ್ನೂ ರಾಜದ್ರೋಹದ ಬೆದರಿಕೆಯು ಸರಕಾರದ ಮನಃ ಶಾಂತಿಯನ್ನು ಕೆಡಿಸುತ್ತದೆಂಬುದು ಆಶ್ಚರ್ಯ. ಇತ್ತೀಚೆಗೆ ಸರಕಾರದ ರಾಜದ್ರೋಹದ ಅನುಸಂಧಾನವು ಬಹಳ ಜೋರಿನಿಂದ ನಡೆಯುತ್ತಿದೆ. ಲಾಹೋರಿನಲ್ಲಿ ಎಷ್ಟು ಮನೆಗಳು ಈ ಜಪ್ತಿಯ ಕಾಟದಿಂದ ತಪ್ಪಿಕೊಂಡಿವೆ ಎಂದು ಹೇಳಲಾಗುವುದಿಲ್ಲ. ಕಾಂಗ್ರೆಸ್ ಸೆಕ್ರೆಟರಿಗಳ ಮನೆಗಳಂತೂ ಸಿ. ಐ. ಡಿ ಅತಿಥಿಗಳ ಸಂಭ್ರಮದ ಆಗಮನದಿಂದ ಗೌರವಿತವಾಗದೆ ಇರುವುದಿಲ್ಲ. ಇವರು ಹುಡುಕಿದ ಮನೆಗಳ ಸಂಖ್ಯೆಯನ್ನೂ ಇವರು ಕಂಡುಹಾಕಿದ ರಾಜದ್ರೋಹದ ರಾಶಿಯನ್ನೂ ಸರಿಹೋಲಿಸಿದ್ದಾದರೆ ಈ ಅನಾಮಂತ್ರಿತ ಅತಿಥಿಗಳ ವ್ಯಾಪಾರವು ಎಷ್ಟು ಅನ್ಯಾಯಕರವೆಂದು ತೋರಿಬರುವುದು. ಇತ್ತೀಚೆಗೆ ಸರಕಾರವು ಇನ್ನೊಬ್ಬ ರಾಜದ್ರೋಹಿಗಳನ್ನು ಕಂಡುಹಿಡಿದಿರುವರು. ಹಿಂದೂಸ್ಥಾನದಲ್ಲಿ ಇಂಗ್ಲೀಷರ ಆಳುವಿಕೆ ಎಂಬ ಹೆಸರಿನಿಂದ ಅಮೇರಿಕದ ಸಂಡರ್ಲೆಂಡ ಎಂಬವರು ಒಂದು ಪುಸ್ತಕವನ್ನು ಬರೆದಿರುವರು. ಅದನ್ನು ಬಂಗಾಳದಲ್ಲಿ ಮುದ್ರಿಸಿ ಶ್ರೀ ರಾಮಾನಂದ ಚಟರ್ಜಿಯವರು ಪ್ರಕಟಿಸಿರುವರು. ಶ್ರೀ ರಾಮಾನಂದ ಚಟರ್ಜಿಯವರೆಂದರೆ ಲೋಕ ವಿಖ್ಯಾತ ಪತ್ರಿಕಾ ವ್ಯವಸಾಯಿಗಳು; ಮೋಡರ್ನರಿವ್ಯೂ ಎಂಬ ಲೋಕಪ್ರಸಿದ್ಧ ಮಾಸಿಕ ಪತ್ರಿಕೆಯ ಸಂಪಾದಕರು, ಪ್ರವಾಸಿ ಎಂಬ ಶ್ರೇಷ್ಠ ವರ್ಗದ ಬಂಗಾಳಿ ಪತ್ರಿಕೆಯ ಸಂಪಾದಕರು, ಇನ್ನೊಂದು ಹಿಂದೀ ಪತ್ರಿಕೆಗೂ ಅವರು ಸಂಪಾದಕರಾಗಿರುವರು. ಅವರು ರಾಷ್ಟ್ರೀಯ ತೀಕ್ಷ್ಣ ಪಕ್ಷದ ಆಚಾರ ತಾಯರ್ಕ್ಕೆ ಸೇರಿದವರಲ್ಲ. ಬರೆಯುವಾಗ ಪ್ರತಿ ಶಬ್ದವನ್ನೂ ಬಹಳ ಎಚ್ಚರಿಕೆಯಿಂದ ಬರೆಯುವರು. ಜವಾಬ್ದಾರಿಯಿಲ್ಲದ ಲೇಖಗಳನ್ನು ಅವರು ಎಂದಿಗೂ ಪ್ರೋತ್ಸಾಹಿಸುವುದಿಲ್ಲ. ಹಾಗೆಯೇ ಮಿ| ಸಂಡರ್ಲೆಂಡ್ ಎಂಬವರು ಅಮೇರಿಕದ ಸುಪ್ರಸಿದ್ಧ ಲೇಖಕರು; ಆಧಾರವಿಲ್ಲದೆ ಯಾವುದನ್ನೂ ಬರೆಯುವಾರರು; ಅನಾವಶ್ಯಕವಾದ ಶಬ್ದಗಳನ್ನು ಬರೆದು ಹಾಳುಮಾಡುವಾರರು. ಆದರೂ ಮಿಸ್. ಮೇಯೋಳ ಪುಸ್ತಕವು ಸ್ವೇಚ್ಛೆಯಂತೆ ದೇಶದಲ್ಲಿ ಹರಡಬಹುದಾಗುವಾಗ, ಮಿ. ಸಂಡರ್ಲೆಂಡರ ಪುಸ್ತಕವು ಸರಕಾರಕ್ಕೆ ರಾಜದ್ರೋಹಕರವಾಗಿ ಕಂಡಿತು. ಶ್ರೀ ರಾಮಾನಂದ ಚಟರ್ಜಿಯವರು ರಾಜದ್ರೋಹಕ್ಕಾಗಿ ಆಪಾದಿಸಲ್ಪಟ್ಟು, ಕೈದುಮಾಡಲ್ಪಟ್ಟು, ಜಾಮೀನಿನ ಮೇಲೆ ಬಿಡಲ್ಪಟ್ಟರು. ಬ್ರಿಟಿಷ ಸರಕಾರದ ರಾಜದ್ರೋಹವೆಂದರೇನೆಂದು ಇಡೀ ಲೋಕಕ್ಕನೇ ಇದರಿಂದ ತಿಳಿಯುವಂತಾಯಿತು. ಈ ಪುಸ್ತಕದ ಪ್ರತಿಗಳ ಬಗ್ಗೆಯೂ ಅಲ್ಲಲ್ಲಿ ಹುಡುಕಾಟವು ನಡೆಯುತ್ತದೆ. ಶ್ರೀ ಜಮುನಾಲಾಲ ಬಜಾಜರನ್ನು ಈ ಪುಸ್ತಕ ಸರಕಾರಕ್ಕೆ ಒಪ್ಪಿಸಲು ಕೇಳಲಾಯಿತು. ಬಜಾಜರು ಅದನ್ನು ಕೊಡುವುದಿಲ್ಲವೆಂದು ಹೇಳಿದರು. ಅದನ್ನು ಬಲತ್ಕಾರದಿಂದ ತೆಗೆದುಕೊಂಡು ಹೋಗಲಿಕ್ಕಾಗಿ ಅವರ ಮನೆಯ ಜಪ್ತಿ ನಡೆಯಿತು. ಪುಸ್ತಕ ಸಿಕ್ಕಲಿಲ್ಲ. ಈ ರಾಜದ್ರೋಹದ ಹುಡುಕಾಟವು ಎಲ್ಲಿ ವರೆಗೆ ನಡೆಯುವುದೋ!

ಮುಂಬಯಿಯ ಮಜೂರರ ಪರಿಸ್ಥಿತಿ.

ಮುಂಬಯಿಯ ಗಿರಣಿ ಕೈಗಾರಿಕೆಯು ಮುಷ್ಕರಗಳಿಂದ ಇನ್ನೂ ರಕ್ಷಿಸಲ್ಪಟ್ಟಿಲ್ಲವೆಂಬುದು ಬಹಳ ವಿಷಾದಕರವಿದೆ. ಈ ಮುಷ್ಕರವು ಒಂದು ವರುಷಕ್ಕಿಂತಲೂ ಮೇಲ್ಪಟ್ಟು ಪ್ರಾರಂಭವಾಗಿ ಸಂಧಾನವಾಗಿ ಶಾಂತತೆಯು ನೆಲೆಗೊಳ್ಳುವ ಸಂಭವವುಂಟಾದಾಗ ಪುನಃ ಆರಂಭವಾಗಿ, ಧನಿಕವರ್ಗದ ಮತ್ತು ಮಜೂರರ ಸಂಧಿವಿಗ್ರಹದಲ್ಲಿಯೇ ಇದೆಯಲ್ಲದೆ ಪೂರ್ಣ ಶಾಂತತೆಯು ಇನ್ನೂ ನೆಲೆಗೊಂಡಿಲ್ಲ. ದೇಶದ ಅತ್ಯಂತ ಮುಖ್ಯವಾದ ಕೈಗಾರಿಕೆಯು ಈ ರೀತಿಯಲ್ಲಿ ಕೆಡುವುದು ಒಂದು ರಾಷ್ಟ್ರೀಯ ಹಾನಿಯಾಗಿರುತ್ತದೆ. ಇದರಿಂದ ಧನಿಕವರ್ಗದವರು ಬಹಳ ನಷ್ಟಪಡುವುದಲ್ಲದೆ, ಮಜೂರರು ಬಹಳ ಸಂಕಷ್ಟಗಳಲ್ಲಿ ದಿನ ಕಳೆದು ಉಪವಾಸದಿಂದ ಬಳಲಬೇಕಾಗಿದೆ. ಇದು ಮಾತ್ರವಲ್ಲದೆ ಈ ಗಿರಣಿಗಳು ತಯಾರಿಸುತ್ತಿದ್ದ ವಸ್ತ್ರವು ಈಗ ಪರದೇಶದಿಂದಲೇ ಬಂದು ನಮ್ಮ ದೇಶದ ಕೆಲಸಗಾರರನ್ನು ಉಪವಾಸವಿಟ್ಟು ಪರದೇಶದ ಕೆಲಸಗಾರರನ್ನು ಪೋಷಿಸಬೇಕಾಗಿದೆ.

[illegible]

... ಗಳಿಂದ ಹಿಂದಿನ ಮುಷ್ಕರದಲ್ಲಿ ಹೊರಹಾಕಿದ ೬,೦೦೦ ಮಜೂರರನ್ನು ಪುನಃ ಅದೇ ಗಿರಣಿಗಳಲ್ಲಿ ಸೇರಿಸಬೇಕು. (೨) ಮಜೂರ ಯೂನಿಯನ್ನಿಗಾಗಿ ಗಿರಣಿಗಳೊಳಗೆನೇ ಮಜೂರರಿಂದ ಚಂದಾ ವಸೂಲು ಮಾಡಲು ಬಿಡಬೇಕು. (೩) ಮಿಲ್ಲ ಕಮಿಟಿಗಳು ತಮ್ಮ ಕೆಲಸಗಳನ್ನು ನಿರ್ವಹಿಸುವಂತೆ ಸ್ವಾತಂತ್ರ್ಯವಿರಬೇಕು. (೪) ಮುಷ್ಕರಗಳಲ್ಲಿ ಭಾಗತೆಗೆದುಕೊಂಡವರಿಗೆ ಗಿರಣಿ ಮ್ಹಾಲಿಕರು ಪೀಡಿಸುವುದನ್ನು ನಿಷೇಧಿಸಬೇಕು. (೫) ಏಪ್ರೀಲ ಕೂಲಿಯನ್ನು ಗಿರಣಿ ಸೇರದಿದ್ದವರಿಗೂ ಕೊಡಬೇಕು. ಮೊದಲಿನ ಶರ್ತದ ವಿಷಯದಲ್ಲಿ ವಾಡಿಯಾ ಮಿಲ್ಲಿನಲ್ಲಿ ಮೊದಲೇ ಇತರರನ್ನು ತೆಗೆದುಕೊಂಡಾಗಿರುವುದರಿಂದ, ಅದರೊಳಗೆ ಇನ್ನು ಬಿಟ್ಟವರನ್ನು ತೆಗೆದುಕೊಳ್ಳಲಿಕ್ಕಾಗದಿದ್ದರೂ ಇತರ ಗಿರಣಿಗಳಲ್ಲಿ ಅವರಿಗೆ ಕೆಲಸ ಸಿಕ್ಕುವಂತೆ ಮಾಡಬಹುದಾಗಿ ಗಿರಣಿ ಮ್ಹಾಲಿಕರು ಹೇಳಿರುವರು. ಏಪ್ರಿಲ್ ಕೂಲಿಯನ್ನು ಕೆಲಸಕ್ಕೆ ಪುನಃ ಸೇರಿದ ಏಳು ದಿನಗಳೊಳಗೆ ಕೊಡುವುದಾಗಿಯೂ ಅವರು ಒಪ್ಪಿರುವರು. ಉಳಿದ ಶರ್ತಗಳು ಇಂತಹ ದೊಡ್ಡ ಮುಷ್ಕರವನ್ನು ಮುಂದುವರಿಸುವಷ್ಟು ಮುಖ್ಯವಾಗಿಲ್ಲ. ಆದರೂ ಮಹಾತ್ಮಾ ಗಾಂಧಿಯವರಿದ್ದ ಒಂದು ಪಂಚಾಯಿತಿಯ ಕಮಿಟಿಗೆ ಈ ವಿವಾದವನ್ನು ಇತ್ಯರ್ಥಕ್ಕಾಗಿ ಒಪ್ಪಿಸಲೆಂದರೆ ಅದಕ್ಕೂ ಮಜೂರರು ಒಪ್ಪುವುದಿಲ್ಲ. ಗಾಂಧಿಯವರು ಕೆಲಸಗಾರರ ವಿರುದ್ಧವಿರುವರೆಂಬ ಭಾವನೆಯು ಮಜೂರ ಧುರೀಣರಿಂದ ಹಬ್ಬಿಸಲ್ಪಡುತ್ತಿದೆ. ಜವಾಬ್ದಾರಿಯುಳ್ಳದ ಕೆಲವರು ಮಜೂರ ಧುರೀಣತ್ವವನ್ನು ಅಪಹರಿಸಿ ಮಜೂರರಿಗೂ, ಕೈಗಾರಿಕೆಗೂ, ಧನಿಕವರ್ಗದವರಿಗೂ ಮಾಡುವ ನಷ್ಟಕ್ಕೆ ಪರಿಮಿತಿಯಿಲ್ಲ. ಜನರು ಇದಕ್ಕೆ ಬೇಗನೇ ಎಚ್ಚರವಾದರೆ ಉತ್ತಮವಿತ್ತು.

ಎಸೆಂಬ್ಲಿ ಬೊಂಬು.

ಎಸೆಂಬ್ಲಿಯಲ್ಲಿ ಬೊಂಬು ಎಸೆದ ಭಗತ್‌ಸಿಂಗ್ ಮತ್ತು ದತ್ತ ಎಂಬಿಬ್ಬರಿಗೂ ಆಜನ್ಮ ಶಿಕ್ಷೆಯಾಯಿತು. ಎಸೆಂಬ್ಲಿಯಲ್ಲಿ ಬೊಂಬು ಎಸೆದ ಬಗ್ಗೆ ಅವರಿಗೆ ಶಿಕ್ಷೆಯಾದುದರಲ್ಲಿ ಇವರೊಡನೆ ಸಹಾನುಭೂತಿಯನ್ನು ತೋರಿಸಲು ಕಾರಣವಿಲ್ಲ. ಅವರ ಕೆಲಸವು ದೇಶದ ಮೇಲಿನ ಪ್ರೇಮದಿಂದಲೇ ಪ್ರೇರಿತವಾದುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಆ ಪ್ರೇರಣೆಯು ತಪ್ಪು ರೀತಿಯಲ್ಲುಂಟಾಯಿತೆಂದು ಈಗಿನ ಯುವಕರಿಗೆ ಎಚ್ಚರಿಸಬೇಕಾಗಿದೆ. ಅದೇ ಸಮಯದಲ್ಲಿ ಸರಕಾರವೂ ಈ ಪ್ರಕರಣದಿಂದ ತಿಳಿಯಬೇಕಾದ ಮುಖ್ಯ ವಿಷಯವಿದೆ. ಅವರು ಕೋರ್ಟಿಗೆ ಕೊಟ್ಟ ಸ್ಟೇಟಮೆಂಟಿನ ಕೆಲವಂಶವನ್ನು ಜಡ್ಜರು ತೆಗೆದುಹಾಕಿರುವರಾದರೂ, ಮತ್ತು ಕೆಲವಂಶಕ್ಕೆ ಜಡ್ಜರು ಅತ್ಯಂತ ಕ್ಷಣಿಯ ಉದ್ದೇಶವನ್ನು ಕಲ್ಪಿಸಿ ವಿಶ್ವಾಸಾರ್ಹವಲ್ಲವೆಂದು ಹೇಳಿರುವರಾದರೂ, ಆ ಇಡೀ ಸ್ಟೇಟಮೆಂಟು ಸರಕಾರದ ಅವಗಾಹನೆಗೆ ಉತ್ತಮ ವಿಷಯವಾಗಿರುತ್ತದೆ. ದೇಶದಲ್ಲಿ ಉಂಟಾಗುವ ಕ್ರಾಂತಿಕಾರಕ ಭಾವನೆಯ ಚಿಹ್ನೆಯನ್ನು ತೀಕ್ಷ್ಣವಾಗಿ ಸರಕಾರದ ಮತ್ತು ಜಗತ್ತಿನ ಲಕ್ಷ್ಯಕ್ಕೆ ತಾವು ತರಲು ಈ ಕಾರ್ಯವನ್ನು ಮಾಡಿರುವೆವಲ್ಲದೆ, ಯಾರನ್ನಾದರೂ ಕೊಲ್ಲುವ ಉದ್ದೇಶದಿಂದ ಮಾಡಿದುದಲ್ಲ; ಮಾನವ ಪ್ರಾಣವು ತಮಗಾದರೂ ಪವಿತ್ರವಿದೆ; ಕೊಲ್ಲುವ ಇಚ್ಛೆ ಇದ್ದರೆ ಬೊಂಬನ್ನು ಸುಲಭವಾದ ಇನ್ನೊಂದು ಪ್ರದೇಶಕ್ಕೆಸೆಯಬಹುದಿತ್ತು; ಬೊಂಬುಗಳು ಹಾನಿಕರವಾಗದ ಹಾಗೆ ರಚಿಸಲ್ಪಟ್ಟಿದ್ದವು. ಮೊದಲಾಗಿ ಅವರು ಹೇಳಿದುದನ್ನು ನಂಬಬೇಕಾಗುತ್ತದೆ. ದೇಶದ ತರುಣ ಪ್ರವೃತ್ತಿಯು ಹಾನಿಕರವಾದ ಈ ಮಾನಸಿಕತೆಗೆ ಬಾರದಂತೆ ಹಿಂದೀ ಧುರೀಣರು ಪ್ರಯತ್ನಿಸುವಾಗ, ಸರಕಾರವೂ ಧುರೀಣರ ನ್ಯಾಯವಾದ ರಾಷ್ಟ್ರೀಯ ಚಳವಳವನ್ನು ನಿರೋಧಿಸಿ ತರುಣರನ್ನು ಉತ್ತೇಜಿಸುತ್ತಿದೆ. ಯಾವ ಜನಾಂಗವನ್ನೂ ಇನ್ನೊಂದು ಜನಾಂಗವು ಬಹುಕಾಲದ ವರೆಗೆ ದಬ್ಬಾಳಿಸಲಾರದು. ಹಾಗೆ ದಬ್ಬಾಳಿಸಲಾರಂಭಿಸಿದರೆ ದಬ್ಬಾಳಿಸಲ್ಪಟ್ಟವರ ಮಾನಸಿಕತೆಯೂ ಕೆಡದೆ ಇರಲಾರದು. ಭಗತ್‌ಸಿಂಗ್ ಮತ್ತು ದತ್ತ ಇವರ ಸ್ಟೇಟಮೆಂಟು ಇದರ ಪ್ರತ್ಯಕ್ಷ ನಿದರ್ಶನವಾಗಿದೆ. ಇವರು ಕೊಟ್ಟ ಎಚ್ಚರಿಕೆಯನ್ನು ಸರಕಾರವು ಮನಸ್ಸಿಗೆ ಕೊಂಡುಹೋಗುವುದು ಅವಶ್ಯವಿದೆ.

ಎಸೆಂಬ್ಲಿ ಕೇಸು ಮುಗಿಯುವಾಗ ಲಾಹೋರಿನ ಕೇಸಿಗೆ ಪ್ರಾರಂಭವಾಗುವುದು. ಇದು ಸಾಮಾನ್ಯವಾದುದಲ್ಲ. ಮೆಜಿಸ್ಟ್ರೇಟರ ಮುಂದೆ ನಾಲ್ಕು ತಿಂಗಳೂ, ಸೆಶನ್ ಕೋರ್ಟಿನಲ್ಲಿ ಆರು ತಿಂಗಳೂ ವಿಚಾರಣೆ ನಡೆಯಲಿರುವುದಂತೆ. ಈ ಕೇಸಿಗೆ ಸಂಬಂಧಿಸಿದ ಹನ್ನೊಂದು ಸಾವಿರ ಪತ್ರಗಳು ಕೋರ್ಟಿಗೆ ದಾಖಲಾಗಲ್ಪಡುವವಂತೆ.

ಟಿಪ್ಪಣಿಗಳು.
NOTES.

ಮೌಲಾನಾ ಅಫರ್ ಅಲಿಖಾನರು ... ದಿಂದ ಹಣವನ್ನು ಸಂಗ್ರಹಿಸಿ ಅಮಾನುಲ್ಲಾರವರ ಸಹಾಯಕ್ಕೆಂದು ಬಂದಿದ್ದರು. ಅದು ತನಗೆ ತಲುಪಿದುದರ ಬಗ್ಗೆ ನಾದಿರ ಅಮೀರರು ಮಿ| ಅಲಿಖಾನರಿಗೆ ವಿಶೇಷ ಕೃತಜ್ಞತೆಯನ್ನು ಸೂಚಿಸಿ ಪತ್ರ ಬರೆದಿರುವರು.

* * * *

ಆದರೆ ಈ ಹಣವನ್ನು ತಾನು ಸ್ವಂತದ ಬಗ್ಗೆ ಉಪಯೋಗಿಸಲಾರೆನೆಂದೂ, ಯುರೋಪಿನಲ್ಲಿ ವಿದ್ಯಾಭ್ಯಾಸವನ್ನು ಹೊಂದುತ್ತಿರುವ ಅಫಘಾನ ವಿದ್ಯಾರ್ಥಿಗಳ ಬಗ್ಗೆ ಅದನ್ನು ವಿನಿಯೋಗಿಸುವುದಾದರೆ ಮಾತ್ರ ಸ್ವೀಕರಿಸುವೆನೆಂದೂ, ಪತ್ರದಲ್ಲಿ ತಿಳಿಸಿರುವರಂತೆ.

* * * *

ತಾನು ಕಷ್ಟಪಡದೆ ತನ್ನ ಪ್ರಜೆಗಳಿಗೂ ಕಷ್ಟಪಡಿಸದೆ ಹೊಂದಿದ ಹಣವನ್ನಾದರೂ ತನ್ನೊಬ್ಬನ ಸಲುವಾಗಿ ಖರ್ಚು ಮಾಡಲು ಒಪ್ಪದ ಅಮಾನುಲ್ಲಾಖಾನರ ಆ ಉದಾರ ಮಾನಸಿಕತೆಯೆಲ್ಲಿ! ತಮ್ಮ ಪ್ರಜೆಗಳು ಬಹು ಕಷ್ಟಪಟ್ಟು ದುಡಿದ ಹಣವನ್ನು ತಮ್ಮ ವಿಲಾಸ ಸಾಮಗ್ರಿಗಳಿಗೂ, ಯುರೋಪು ಸಂಚಾರಕ್ಕೂ, ನೀರಿನಂತೆ ವ್ಯಯಿಸುವ ಹಿಂದೀ ರಾಜರುಗಳ ಮಾನಸಿಕತೆಯೆಲ್ಲಿ?

• • •

ಹಲವು ವರುಷಗಳಿಂದ ಮಂಗಳೂರು ಶ್ರೀ ವೆಂಕಟರಮಣ ದೇವಸ್ಥಾನದಿಂದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವು ದೊರಕುತ್ತಿತ್ತು. ಆದರೆ ಈ ವರುಷ ಇಷ್ಟರ ವರೆಗೂ, ಆ ಬಗ್ಗೆ ಯಾವ ಪ್ರಕಟಣೆಯಾದುದೂ ಕಂಡುಬರುವುದಿಲ್ಲ. ಬಡ ವಿದ್ಯಾರ್ಥಿಗಳ ಗ್ರಹಚಾರವೋ ಅಥವಾ ಶ್ರೀ ವೆಂಕಟರಮಣನ ಬಡತನವೋ ತಿಳಿಯದು.

• • • •

ಅಂತಾದರೂ ಶ್ರೀವೆಂಕಟರಮಣನು ಕಾಸು ಕಳ್ಳನಲ್ಲವೆ?

• • •

ಶ್ರೀ ಮದನಂತೇಶ್ವರನಿಗೆ ಕೇವಲ ಶನಿದೆಸೆ ಹಿಡಿದಿರುತ್ತದೆ. ಮನುಷ್ಯರಿಗೆ ಮಾತ್ರವಲ್ಲ; ಕಲಿಯುಗದಲ್ಲಿ ದೇವರಿಗೂ ಶನಿದೆಸೆಯ ಈ ಸಂಕಟವು ಇದ್ದೇ ಇದೆ.

• • • •

ಮುಂಬಯಿಯ ಮುಷ್ಕರಗಳು ನಿಲ್ಲುವ ಯೋಗವು ಇನ್ನೂ ಬಂದಿಲ್ಲವೆನ್ನಬೇಕಾಗಿದೆ. ಒಮ್ಮೆಗೆ ನಿಲ್ಲುವ ಮುಷ್ಕರಗಳು ಪುನಃ ಪುನಃ ಪ್ರಾರಂಭವಾಗುತ್ತಲೇ ಇವೆ.

• • •

ಸೆಸೂನ್ ಗಿರಣಿಯಲ್ಲಿ ಉಂಟಾದ ಮುಷ್ಕರವು ಒಮ್ಮೆಗೆ ಶಾಂತವಾಗಿತ್ತು. ಕೆಲಸದವರು ದಿನವಹಿ ಸಂಬಳವನ್ನು ನಿರೀಕ್ಷಿಸಿದರು. ಅಧಿಕಾರಿಗಳು ತಿಂಗಳುಗಟ್ಟಲೆ ಸಂಬಳವನ್ನು ಕೊಡಲು ನಿಶ್ಚಯಿಸಿದವರು. ಒಡನೆ ಮುಷ್ಕರಕ್ಕೆ ಪ್ರಾರಂಭಿಸಿ— ಅಸಂಖ್ಯಾತ ಕೆಲಸಗಾರರು ಮನೆಗೆ ತೆರಳಿದರು.

• • • •

ಮುಷ್ಕರ ಶಾಂತತೆಯ ಬಗ್ಗೆ ಗವರ್ನರ ಧೊರೆಗಳೇ ಮಧ್ಯವರ್ತಿಗಳಾಗುವರಂತೆ. ಇದರ ಫಲಿತಾಂಶವೇನೆಂಬುದನ್ನು ನೋಡಲಿಕ್ಕಿದೆ.

• • • •

ನಮ್ಮ ಜಿಲ್ಲೆಯ ಯಾವ ತಾಲೂಕು ಬೋರ್ಡಿನವರೂ, ಯಾವತರದ ಹಣದ ಅಡಚಣೆ ಇದ್ದರೂ ರೈತರಿಂದ ವಸೂಲಾಗುವ ತೀರ್ವೆಯ ಮೇಲೆ ಮೂರು ಕಾಸಿನ ಅಧಿಕಾಂಶವನ್ನು ವಿಧಿಸಲಿಲ್ಲ. ಆದರೆ ಉಡುಪಿ ತಾಲೂಕು ಬೋರ್ಡಿನವರು ಮಾತ್ರ ಈ ಮೂರು ಕಾಸಿನ ಲಾಭವನ್ನು ಮಾಡಿಕೊಂಡರು.

• • • •

ಇನ್ನು ಉಡುಪಿ ತಾಲೂಕು ಬೋರ್ಡಿನಲ್ಲಿ ವಿದ್ಯಾಭ್ಯಾಸದ ಕೊರತೆಯು ಎಂದಿಗೂ ಇರಲಿಕ್ಕಿಲ್ಲ.

* * *

ಉಪಾಧ್ಯಾಯರಿಗೆ ಮಾತ್ರ 'ಇಲ್ಲ ಉಪ್ಪಡ ಬಲ್ಲ ತಪ್ಪಡು' ಎಂಬ ತುಳು ಗಾದೆಯಂತೆಯೇ ಸರಿ.

* * *

ಎಸೆಂಬ್ಲಿ ಬೊಂಬು ಕೇಸಿನ ಗಲಾಟೆಯು ಸದ್ಯಕ್ಕೆ ಮುಗಿಯಿತು. ಕೈದಿಗಳಿಬ್ಬರಿಗೂ ಜನ್ಮಠಾಪು ಶಿಕ್ಷೆ. ಕೊಲೆಗಾರರಿಗೂ ಕೂಡ ಹಲವೊಮ್ಮೆ ಶಿಕ್ಷೆಯೇ ಆಗದಿರುವಾಗ, ಕೊಲೆ ಮಾಡಬೇಕೆಂಬ ಒಂದಿಷ್ಟು ಉದ್ದೇಶವಾದರೂ ಇರದ ಈ ಯುವಕರಿಗೆ ಕಠಿಣವಾದ ಶಿಕ್ಷೆಯೇ ಲಭಿಸಿತು. ಇನ್ನೀಗ ಅವರ ಅಪೀಲಾಗಲಿದೆಯಂತೆ.

ಶಾಲಿವಾಹನ ಶಕೆ ೧೮೫೧ನೆಯ ವಿಭವಸಂವತ್ಸರದ ಜ್ಯೇಷ್ಠ ಶು|| ೯ ಶನಿವಾರದಿಂದ ವಿಭವ ಸಂವತ್ಸರದ ಜ್ಯೇಷ್ಠ ಶು|| ೧೪ ಶುಕ್ರವಾರದ ವರೆಗಿನ ಪಂಚಾಂಗ.

(ಗ್ರೀಷ್ಮರ್ತು ವೃಷಭ (ದೇವ))

ತಾರೀಖು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ಶುಕ್ಲಯೋಗ	ಸೂರ್ಯ. ಉ	ಅಸ್ತ
15	ಶನಿ	೯	೫೫.೪೬	ಉತ್ತರಾ	೧೨.೩೨	೧	6. 6	6.55
16	ರವಿ	೧೦	೫೫.೩೨	ಹಸ್ತಾ	೧೪.೧೬	೨	6. 6	6.56
17	ಸೋಮ	೧೧	೫೬.೩೧	ಚಿತ್ರಾ	೧೫.೧೪	೩	6. 6	6.56
18	ಮಂಗಳ	೧೨	೫೯. ೨	ಸ್ವಾತಿ	೧೮.೩೨	೪	6 6	6.56
19	ಬುಧ	೧೩	೬೦. ೦	ವಿಶಾಖಾ	೨೨.೪೬	೫	6 7	6.56
20	ಗುರು	೧೩	೨.೩೧	ಅನುರಾಧಾ	೨೫.೧೬	೬	6. 7	6.57
21	ಶುಕ್ರ	೧೪	೬.೪೬	ಜ್ಯೇಷ್ಠಾ	೨೮.೧೬	೭	6. 7	6.57

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ.
7	89— 7	76— 1	0—87	—
8	85— 0	75— 4	2—13	—
9	85— 7	73— 8	2—37	—
10	86— 0	75— 4	0—36	—
11	86— 1	75— 3	0—86	—
12	87— 8	75— 8	0—28	—
13	87— 6	73— 4	0—24	—

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಮುಸ್ಕಿ ...	6 – 14	7 – 6
ಗೋಧು ...	6 – 4	6 – 10
ರಾಗಿ ...	5 – 9	6 –
ಊರ ಅನ್ವರ್ ಬೆಳ್ತಿಗೆ ...	7 – 0	7 – 5
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ ...	12 – 0	12 – 8
ಸಾಗು ...	5 – 12	6 – 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	6 – 4	6 – 0
ಗೋಧಿ ಗೋಣಿ ೧ಕ್ಕೆ ...	15 – 12	20 – 0
ಹುರುಳಿ ಗೋಣಿ ೧ಕ್ಕೆ ...	7 – 6	9 – 8
ಕಡಲೆ ಗೋಣಿ ೧ಕ್ಕೆ ...	15 – 8	16 – 8
ತೊಗರಿ ಗೋಣಿ ೧ಕ್ಕೆ ...	14 – 8	17 – 8
ತೊಗರಿಬೇಳೆ ಗೋಣಿ ೧ಕ್ಕೆ ...	18 – 8	27 – 0
ಉದ್ದು ಗೋಣಿ ೧ಕ್ಕೆ ...	16 – 0	18 – 0
ಹೆಸರು ಗೋಣಿ ೧ಕ್ಕೆ ...	14 – 8	16 – [illegible]
ಊರು ಬೆಲ್ಲ ಖಂಡಿ ೧ಕ್ಕೆ ...	70 – 0	–
ಉಪ್ಪು ಗೋಣಿ ೧ಕ್ಕೆ ...	4 – 6	4 – 14
ಬೊಬ್ರು ಖಂಡಿ ೧ಕ್ಕೆ ...	90 – 0	95 –
ಹೊಸ್ತ ಹಿಂಡಿ ಖಂಡಿ ೧ಕ್ಕೆ ...	32 – 0	–
ಎಳ್ಳಿಂಡಿ ಖಂಡಿ ೧ಕ್ಕೆ ...	40 – 0	–
ಹೊಸ್ತ ಎಣ್ಣೆ ಮಣ ೧ಕ್ಕೆ ...	6 – 8	7 – 0
ಎಳ್ಳೆಣ್ಣೆ ಮಣ ೧ಕ್ಕೆ ...	7 – 12	8 – 4
ಹರಳೆಣ್ಣೆ ಪಟ್ಟಿಗೆ ೧ಕ್ಕೆ ...	7 – 13	9 – 4
ಮೋರಿಸ ಸಕ್ಕರೆ ಮಣ ೧ಕ್ಕೆ ...	3 – 10	3 – 11
ಹೊಸ ಮೆಣಸು ...	5 – 4	6 – 8
ಸಾಸಿವೆ ಮುಡಿ ೧ಕ್ಕೆ ...	8 – 8	–
ಕೊತ್ತಂಬರಿ ಮುಡಿ ೧ಕ್ಕೆ ...	3 – 12	4 – 0
ಸೇಲಮ್ ಶಾಳ ಖಂಡಿ ೧ಕ್ಕೆ ...	355 – 0	365 – 0
ಬೆಳಗೋಡು ಅಡಿಕೆ ಖಂಡಿ ೧ಕ್ಕೆ ...	160 – 0	–
ಕಾಳುಮೆಣಸು ಖಂಡಿ ೧ಕ್ಕೆ ...	420 – 0	425 – 0
ಮೆಂತ್ಯೆ ಮಣ ೧ಕ್ಕೆ ...	60 – 0	66 –
ಗೇರುಬೀಜ ಮುಡಿ ೧ಕ್ಕೆ ...	3 – 6	3 – 8
ಕಲ್ಬಾಡ ಖಂಡಿ ೧ಕ್ಕೆ ...	45 – 0	50 – 0
ಹಿಂಡ್ಯು ಸಗಡು ಮಣ ೧ಕ್ಕೆ ...	18 – 0	18 – 4
ಹಿಂಡ್ಯು ಬಾತ್ರಗೆಟು ಮಣ ೧ಕ್ಕೆ ...	– 0	26 – 0
ಹುಣಸೆಹಣ್ಣು ಸೇರು ೧ಕ್ಕೆ ...	15 – 4	–
ಹಿಪ್ಪೇ ಸಗಡು ಮಣ ೧ಕ್ಕೆ ...	17 – 0	17 – 8
ಜವಸು ೧ಕ್ಕೆ ...	13–9–6	–
ಹುಣ್ಸೆಹುಳಿ ಖಂಡಿ ೧ಕ್ಕೆ	30 – 0	37 – 8

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೊತ್ತವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅವ್ಯರ್ಥವಾಗಿರುತ್ತದೆ.

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಬಂಧಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ ಮಂಗಳೂರು ಬಿವಣೆ ಮಾತ್ರ.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಗ್ರಾಯವಾಗಲಿ ಅಂಚೆಯಾಸಲು ಆಗಲಿ

ಇಲ್ಲದೆ ಮಹತ್ತಾಗಿ ಕೊಡಲ್ಪಡುವ ಆಯುರ್ವೇದ ಸಾರಸಂಗ್ರಹ ರೂಪವಾಗಿರುವ ಭಾಷೆಗಳಲ್ಲಿ ಪ್ರಕಟಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಪೂರ್ತಿಯಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧಿಗಳನ್ನನುಸರಿಸುವುದೇ ದಾರಿ. ಹಾಗಿಲ್ಲದಿದ್ದರೆ ಅದರಲ್ಲಿ ಹೇಳಿರುವ ಉಪಾಯವನ್ನು ಮಾಡುವದು ಮತ್ತೊಂದೇ ದಾರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಜೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ ಸುಂದರವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ ನಮ್ಮ ಲೋಕಪ್ರಸಿದ್ಧವಾದ ಟಾನಿಕ್ಕೆಂಬುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು. ಈ ಮಾತ್ರೆಗಳು ಮಲಬಂಧ ಮೊದಲು ನಪುಂಸಕತ್ವದವರೆಗಿನ ವ್ಯಾಧಿಗಳನ್ನು ಪರಿಹರಿಸುತ್ತವೆ.

ಡಿ. ಜೂಲಿನ್ ಮಾರ್ಟಿನ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(೧೯೨೨ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ ೧೮೬೦ನೇ ಇಸವಿಯ XXIನೇ ಆಕ್ಟಿನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಶುದ್ಧ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ "ಫಾರ್ಮಸಿ"ಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟವಾಗಿ ಹುಟ್ಟುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತದೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ ನಮ್ಮಲ್ಲಿ ತಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,

ಡೊಂಗರಕೇರಿ, ಮಂಗಳೂರು.

ಅನುಕ್ರಮಣಿಕೆ.

[illegible]

ಕಾಂಗ್ರೆಸ್ಸಿನ [illegible]

[illegible] ೨

[illegible] ೪

[illegible] ೧೧

ವರ್ತಮಾನ ಸಂಗ್ರಹಗಳು

[illegible] ವರ್ತಮಾನ ೬-೭

ದಕ್ಷಿಣ ಕನ್ನಡ—ಮಂಗಳೂರು, ಹೊಸಮಗ್ಗ, ಕೊಕ್ಕಡ, ಸುಳ್ಯ ೭

ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ತೊಟೇಜರರ ಪರವಾಗಿ, ಮಾಡಿ

ಕೊಂಡ ಮನವಿಗೆ ಸರಕಾರದಿಂದ ದೊರೆತ ಉತ್ತರ. . . ೨

ಮಂಗಳೂರು ದಕ್ಷಿಣ ಕನ್ನಡ ಅದ್ವೈತ ಸಮಿತಿಯ

ಕಿರಿಯ ಸಹಕಾರಗಳು, ... ೯

ಉಡುಪಿ ಬೋರ್ಡ್ ಹೈಸ್ಕೂಲ್ ಶಾಲೆಯಲ್ಲಿ ಜರಗಿದ ಉಡುಪಿ ತಾಲೂಕು,

ಬೋರ್ಡ್ ಅಧ್ಯಾಪಕರ ಮಹಾಸಭೆಯ ಪ್ರೊಸೀಡಿಂಗ್ಸು . . ೧

ಎ. ಬಿ. ಶೆಟ್ಟಿ ಪ್ರಶ್ನೋತ್ತರಗಳು. ೧೧

ಹಿಂದೀಯರ ದಾರಿದ್ರ್ಯ ನಿವಾರಣೆ. ೧೨

(ಕಥೆ) ಆಶಯೊಸೆಯ ಪರಿಣಾಮ. . . . . ೧೪.

ಸ್ವದೇಶಾಭಿಮಾನಿ.

ತಾರೀಕು ೧೪ನೇ ಶುಕ್ರವಾರ ಜೂನ್ ೧೯೨೯.

ಕಾಂಗ್ರೆಸ್ಸಿನ ಪ್ರಾಬಲ್ಯ.

ಕಾಂಗ್ರೆಸ್ ಕ್ಷೇತ್ರದೊಳಗೆ ಆಗಾಗ ಸಹಜವಾಗಿ ಉಂಟಾಗುವ ಒಡಕು, ಭಿನ್ನಾಭಿಪ್ರಾಯಗಳನ್ನು ಪರ್ಯಾಲೋಚಿಸಿ, ಇನ್ನು ಕಾಂಗ್ರೆಸ್ಸಿಗೆ ಜನರ ಮೇಲಿದ್ದ ಹಿಡಿತವು ಸಡಿಲಾಯಿತೆಂದು ಕಾಂಗ್ರೆಸ್ಸಿಗೆ ಸೇರದೆ ಇರುವವರು ಬಹಳ ಅತ್ಯಸಂತೋಷದಿಂದಲೂ, ತೃಪ್ತಿಯಿಂದಲೂ ಹೇಳುತ್ತಿರುವರು. ಕಾಂಗ್ರೆಸ್ಸು ದೇಶದ ರಾಜಕೀಯ ವಾತಾವರಣದಲ್ಲಿ ಅತ್ಯಂತ ಪ್ರಬಲವಾದ ಶಕ್ತಿಯಾಗಿರುತ್ತದೆಯೆಂದೂ, ಹಿಂದೂಸ್ಥಾನಕ್ಕೆ ಯಾವುದೊಂದು ಕಿಂಚಿತ್ ರಾಜಕೀಯ ಲಾಭವು ಉಂಟಾಗಿರುವುದಾದರೆ ಅದು ಕಾಂಗ್ರೆಸ್ಸಿನ ಮಹತ್ವದ ಕಾರಣದಿಂದಾಗಿದೆಯೆಂದೂ, ಕಾಂಗ್ರೆಸ್ಸಿನ ಈ ವಿಶಾಲ ಸಂಸ್ಥೆಯು ಇಲ್ಲವಾಗುತ್ತಿದ್ದರೆ ಹಿಂದೀಯರಿಗೆ ಹಿಂದೂಸ್ಥಾನದಲ್ಲಿ, ದಕ್ಷಿಣ ಆಫ್ರಿಕದಲ್ಲಿ ಸಿಕ್ಕುವುದಕ್ಕಿಂತ ಹೆಚ್ಚು ಮಾನ್ಯತೆಯು ಸಿಕ್ಕುತ್ತಿರಲಿಲ್ಲವೆಂದೂ ಕಾಂಗ್ರೆಸ್ಸಿಗೆ ಸೇರದ ಈ ಜನರು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡರೆ ಒಳ್ಳೆಯದಿತ್ತು. ಭಿನ್ನಾಭಿಪ್ರಾಯಗಳಿಲ್ಲದ ಸಂಸ್ಥೆಯು ಇಡೀ ಲೋಕದಲ್ಲಿಯೇ ಇರಲಾರದು; ಹಾಗೆಯೇ ಅಂತಃಕಲಹಗಳಿಲ್ಲದ ಸಂಸ್ಥೆಯೂ ಇರಲಾರದು. ಆದರೆ ಈ ಭಿನ್ನತೆಗಳನ್ನೆಲ್ಲಾ ಒಟ್ಟುಗೂಡಿಸಿ, ಒಂದೇ ಉದ್ದೇಶಕ್ಕಾಗಿ ಏಕೀಕರಿಸುವ ಶಕ್ತಿಯೊಂದು ಕಾಂಗ್ರೆಸ್ಸಿನಲ್ಲಿದೆ; ಅದು ಈ ವರೆಗೆ ತನ್ನ ಪ್ರಯತ್ನಗಳನ್ನು ಯಶಸ್ವಿಯಾಗಿ ನೆರವೇರಿಸಿಯದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು.

೧೯೨೦-೨೧ನೇ ಇಸವಿಯಲ್ಲಿ ನೂತನ ಕಾರ್ಯಕ್ರಮದ ಆವೇಶದಿಂದ ಉತ್ತೇಜಿತವಾಗಿ ದೇಶವು ಕಾಂಗ್ರೆಸ್ಸನ್ನು ಜನಜನಿತವಾಗಿ ಮಾಡಿತು. ಅದೇ ಉತ್ತೇಜಿತತೆಯು ಯಾವಾಗಲೂ ಇರಬೇಕೆಂದರೆ ಅದು ಸಾಧ್ಯವಾಗದ ಮಾತಾಗಿದೆ. ಉತ್ತೇಜಿತತೆಯು ಸದಾಕಾಲವೂ ಇರಲಾರದು. ಉತ್ಕ್ರಾಂತಿಯು ವರ್ಷಗಟ್ಟಲೆಯಲ್ಲಿ ಬೆಳೆಯುತ್ತಾ ಬರಲಾರದು. ಆದುದರಿಂದ ಕಾಂಗ್ರೆಸ್ಸಿನಲ್ಲಿ ಜನರಿಗೆ ಆ ಸಮಯದಂತೆ ಅಷ್ಟು ಆಸಕ್ತಿಯೂ, ಉತ್ಸಾಹವೂ ಇರಲಾರದು. ಆದರೆ ಕಾಂಗ್ರೆಸ್ಸಿನ ಮೇಲೆ ಆಗ ಉಂಟಾದ ಅಭಿಮಾನವು ಮಾತ್ರ ಕುಂದಲಿಲ್ಲ. ಕಾಂಗ್ರೆಸ್ಸಿನೊಳಗೆ ಊನತೆಗಳು ಉಂಟಾಗುವುದು ಸ್ವಾಭಾವಿಕವಿದೆ. ಏಕೆಂದರೆ ಅದರೊಳಗೆ ಸೇರಿದವರು ತಮ್ಮ ಸ್ವೇಚ್ಛೆಯಿಂದ ಅದರೊಳಗಿರುವರಲ್ಲದೆ, ಅದರಿಂದ ತಮಗೆ ದುಡ್ಡಿನ ಲಾಭವಾಗುತ್ತದೆಂದಲ್ಲ. ಕಾಂಗ್ರೆಸ್ಸಿಗೆ ತನ್ನ ನಿಯಮಗಳನ್ನು ಬಲಾತ್ಕಾರದಿಂದ ಪಾಲಿಸುವ ಅಧಿಕಾರವಿಲ್ಲ. ಅಂತಹ ಅಧಿಕಾರವಿರುವ ಸರಕಾರದಲ್ಲಿಯೂ ಕೂಡ ಒಡಕುಗಳು ಉಂಟಾಗುತ್ತಿರುವುದನ್ನು ನೋಡಿದರೆ, ಈಗ ಕಾಂಗ್ರೆಸ್ಸಿನಲ್ಲಿ ಆಗಾಗ ತೋರಿಬರುವ ಒಡಕುಗಳು ಸ್ವಾಭಾವಿಕವೇ ಆಗಿವೆ.

ಕಾಂಗ್ರೆಸಿನ ಧುರೀಣರು ಒಂದೊಂದು ಬಾರಿ ತಪ್ಪಿ ಹೋಗುವರೇನೂ ನಿಜ. ಆದರೆ ಜನತೆಯ ಸ್ಥಿರವಾದ ಅಭಿಮಾನ [illegible] ಅಸೆಂಬ್ಲಿ ಮತ್ತು [illegible] ಕೌನ್ಸಿಲು ಚುನಾವಣೆಗಳನ್ನು ನೋಡಿದರೆ [illegible] ಸ್ಪಷ್ಟವಾಗುವುದು. ಕಾಂಗ್ರೆಸ್ಸಿನ ಪ್ರತಿನಿಧಿಗಳು ಈ ಕೌನ್ಸಿಲುಗಳಿಗೆ ಮತ್ತಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿಸಲ್ಪಟ್ಟಿರುವರು. ಸೈಮನ್ ಕಮಿಶನಿಗೆ ಅನುಕೂಲವಾದವರು ಹಲವರು ಚುನಾಯಿಸಲ್ಪಟ್ಟಿಲ್ಲ. ಇದನ್ನು ನೋಡಿದರೂ ಜನರಿಗೆ ಕಾಂಗ್ರೆಸ್ಸಿನ ಮೇಲಿನ ಅತಿಶಯವಾದ ಅಭಿಮಾನವು ವ್ಯಕ್ತಪಡುವುದು.

ಕಾಂಗ್ರೆಸ್ಸಿನ ಈ ಪ್ರಾಬಲ್ಯವು ಕುಂದದಂತೆ ನೋಡಿಕೊಳ್ಳುವುದು ಕಾಂಗ್ರೆಸ್ ಧುರೀಣರ ಕರ್ತವ್ಯವಿದೆ. ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯಿಂದ ಮೊನ್ನೆ ಮಂಜೂರಾದ ಠರಾವು, ಸ್ವರಾಜ್ಯ ಪಕ್ಷೀಯರು ಅಸೆಂಬ್ಲಿ ಮತ್ತು ಕೌನ್ಸಿಲು ಅಧಿವೇಶನಗಳಲ್ಲಿ ಹಾಜರಿರಬಾರದೆಂಬ ಅನುಜ್ಞೆಯನ್ನು ಪಾಲಿಸಬೇಕೋ, ಅಥವಾ ವಿರೋಧವಾಗಿ ನಡೆಯಬೇಕೋ ಎಂಬುದನ್ನು ಕೆಲವು ಕೌನ್ಸಿಲ್ ಧುರೀಣರು ಇನ್ನೂ ಆಲೋಚಿಸುತ್ತಲೇ ಇದ್ದಾರೆ. ವರ್ಕಿಂಗ್ ಕಮಿಟಿಯ ನಿರ್ಧಾರದ ವಿಷಯದಲ್ಲಿ ನಾವು ಅವರನ್ನು ಅಭಿನಂದಿಸಲಾರೆವು. ಆದರೆ ಠರಾವು ಒಂದು ಬಾರಿ ಮಂಜೂರಾದ ಮೇಲೆ ಅದನ್ನು ರದ್ದುಪಡಿಸುವ ತನಕ ಅದಕ್ಕೆ ವಿಧೇಯವಾಗಿ ನಡೆಯುವುದರಲ್ಲೇ ಒಂದು ಸಂಸ್ಥೆಯ ಶಕ್ತಿಯು ಇರುವುದು. ಆದುದರಿಂದ ಕಾಂಗ್ರೆಸ್ಸಿನ ಹಿತವನ್ನು ಲಕ್ಷಿಸಿ ಎಲ್ಲಾ ಸ್ವರಾಜ್ಯ ಪಕ್ಷೀಯರೂ ಆ ಅನುಜ್ಞೆಯನ್ನು ಪಾಲಿಸಿ, ಅಗತ್ಯವೆಂದು ತೋರಿದರೆ ಅದನ್ನು ತೆಗೆದುಹಾಕಿಸಲು ಯತ್ನಿಸಬೇಕು.

ಸರಿಯಾದ ಧೋರಣವನ್ನಿಟ್ಟುಕೊಳ್ಳುವುದೂ, ದೇಶದ ಹಿತವೊಂದನ್ನೇ ಧ್ಯೇಯವಾಗಿಟ್ಟುಕೊಳ್ಳುವುದೂ, ಶಿಸ್ತನ್ನು ಸರಿಯಾಗಿ ನಡೆಸುವುದೂ, ಇವು ಕಾಂಗ್ರೆಸ್ ಪ್ರಾಬಲ್ಯದ ಮೂಲತಳಹದಿಯಾಗಿವೆ. ಇವನ್ನು ಪ್ರತಿ ಒಬ್ಬನೂ ಪಾಲಿಸಬೇಕು. ಸಂಸ್ಥೆಯ ಅಸ್ತಿತ್ವವೂ, ವ್ಯಕ್ತಿಯ ಉದ್ದೇಶವೂ ಇವುಗಳ ಮೂಲಕ ಮಾತ್ರವೇ ಸಾಧ್ಯವಾಗಿರಬಹುದಲ್ಲದೆ ಬರೇ ನಿರಂಕುಶ ಸ್ವತಂತ್ರ ವರ್ತನಕ್ಕೆ ಮನಸ್ಸಾಕ್ಷಿಯ ಸಾಕ್ಷಿಯನ್ನಿಟ್ಟು ನಡೆಯುವುದರಿಂದಲ್ಲ.

ವಿದೇಶ ವರ್ತಮಾನ.

—ಬರ್ಲಿನಿನಲ್ಲಿ ಒಬ್ಬ ಕೋಟ್ಯಾಧಿಪತಿ ಜೋಡಕನನ್ನು ಕೊಲೆ ಮಾಡಿದ ತಪ್ಪಿನ ಮೇಲೆ ೫೪ ಮಂದಿ ಮಾಲ್ಲಿಯವರು ಕೈದುಮಾಡಲ್ಪಟ್ಟು, ಅವರ ವಿಚಾರಣೆಯಾಗುತ್ತಲಿದೆ.

—ಮೌಂಟ್ ವೆಸುವಿಯಸ್ ಶಿಖರದ ಜ್ವಾಲಾಮುಖಿಯು ಈಗ ಸಮಾಧಾನವಾಗಿರುತ್ತದೆ. ಜ್ವಾಲಾಮುಖಿಯಿಂದ ಹೊರಬಿದ್ದ ರಸವು ತಣ್ಣಗಾಗುತ್ತ ಗಟ್ಟಿಯಾಗುತ್ತಲಿದೆ. ಜ್ವಾಲಾಮುಖಿಯಿಂದ ಇದುವರೆಗೆ ೫೦ ಮನೆಗಳು, ೨೫೦ ನಾಶವಾಗಿರುವವು. ಹಲವು ತೋಟಗಳು ಲಾವಾರಸದಿಂದ ಆಚ್ಛಾದಿತವಾಗಿ ನಾಶಹೊಂದಿರುವುವು.

—ಲಿಂಕಶಾಯರಿನ ಹತ್ತಿ ಗಿರಣಿಗಳ ಕೆಲಸಗಾರರ ಸಂಬಳವನ್ನು ಶೇಕಡಾ ೧೨½ರಂತೆ ಇಳಿಸಲು ಅಧಿಕಾರಿಗಳು ಯೋಚಿಸಿರುವರು. ಒತ್ತಾಗಿ ಸಂಬಳವನ್ನು ಇಳಿಸುವುದೇ ಆದರೆ ಕೆಲಸಗಾರರು ಒಂದಿತವಾಗಿಯೂ ಮುಷ್ಕರವನ್ನು ಆಚರಿಸಬೇಕೆಂದು ನಿಶ್ಚಯಿಸಿರುವರು.

—ಹಿಂದೀ ವೈಮಾನಿಕನಾದ ಮಿ. ಚಾವ್ಲಾಯು ಹಿಂದೂಸ್ಥಾನಕ್ಕೆ ಬರಬೇಕೆಂದು ಇಂಗ್ಲೆಂಡಿನಿಂದ ಹೊರಟಿರುವನು.

—ಆಸ್ಟ್ರೇಲಿಯದ ಫ್ರಾನ್ಸಿಸ್ ಮಂತ್ರಿಯವರ ಮಗಳು ಒಂದು ಸಣ್ಣ ವಿಮಾನದಲ್ಲಿ ಕಾಲಕಾ ಬಗದಾದ ಮತ್ತು ಹಿಂದೂಸ್ಥಾನವನ್ನು ಸಂಚರಿಸಬೇಕೆಂದು ಹೊರಟಿರುವಳು. ಕಳೆದ ಶುಕ್ರವಾರ ಅವಳು ಬಯನ್ಸ್ ಎಂಬಲ್ಲಿಗೆ ತಲುಪಿದಳು.

—ಹಿಂದೂಸ್ಥಾನದ ಸ್ತ್ರೀಯರ ವಿಷಯವಾಗಿ ಸರ್ ಜೋನ್ ಸೈಮನರ ಹೆಂಡತಿಯು ಫಿಲಾಡೆಲ್ಫಿಯದ ಒಂದು ಸ್ಥಳದಲ್ಲಿ ಉಪಹಾರದ ಸಮಯದಲ್ಲಿ ಭಾಷಣವನ್ನು ಕೊಟ್ಟರು. ಎಂದಿನವರೆಗೆ ತಮ್ಮ ದರಿದ್ರತನದ ಜವಾಬ್ದಾರಿಯನ್ನು ಹಿಂದೂ ಸ್ತ್ರೀಯರು ಮನಃಪೂರ್ವಕವಾಗಿ ತೆಗೆದುಕೊಳ್ಳುವದಿಲ್ಲವೋ, ಅಂದಿನವರೆಗೆ ಹಿಂದೂಸ್ಥಾನದ ಮುಕ್ತತೆಯು ಪರರಾಷ್ಟ್ರಗಳ ಕಣ್ಣು ಮುಂದೆ ಬರದು ತೋರಲಾರದೆಂದರು. ಹಿಂದೀ ಸ್ತ್ರೀಯರು ಅತಿಶಯ ಪ್ರಶಂಸೆಗೆ ಅರ್ಹರಿರುವರು, ಎಂದು ಹೇಳಿದಾಗಿ, ವಿವರಿಸಿ, ಹಿಂದೂ ಸ್ತ್ರೀಯರು ತನ್ನನ್ನು ಆದರಿಸಿದುದಕ್ಕಾಗಿ ತನ್ನ ಕೃತಜ್ಞತೆಯನ್ನು ಸೂಚಿಸಿದರು.

—ಮೊಸ್ಕೋ ಪಟ್ಟಣದಲ್ಲಿ ನಾಸ್ತಿಕರ ಪರಿಷತ್ತು ಜರಗಿತು. ಜರ್ಮನಿ, ಫ್ರಾನ್ಸ್, ಬೆಲ್ಜಿಯಮ್, ಸ್ವಿಸ್, ಜೆಕೊಸ್ಲೋವಕಿಯಾ ಮುಂತಾದ ದೇಶಗಳಿಂದ ೬೦೦ ಮಂದಿ ಪ್ರತಿನಿಧಿಗಳು ಈ ಪರಿಷತ್ತಿಗೆ ಬಂದಿದ್ದರು.

—ಸನ್ನಿಹದಲ್ಲಿಯೇ ನೂರು ಜನಗಳಿಗೆ ಕೂರಬಹುದಾದ ಕಾರು ಬ್ರಿಟನಿನಲ್ಲಿ ತಯಾರು ಮಾಡಲ್ಪಡುವದಂತೆ. ಈ ಕಾರು ಬಹು ಸಂಖ್ಯಕವಾಗಿ ತಯಾರಿಸಲ್ಪಡುವದು. ಇದು ಒಂದು ಗೆಲನ್ ಪೆಟ್ರೋಲಿಗೆ ೫೦ ಮೈಲುಗಳಂತೆಯೂ, ಒಂದು ಘಂಟೆಗೆ ೬೦ ಮೈಲುಗಳಂತೆಯೂ ಓಡುವದು. ಇದರ ಹೆಸರು 'ಮಿವರ್' ಎಂದು.

—ಚೀನಾ ದೇಶಕ್ಕೆ ಬಂದು ಕ್ರಿಸ್ತ ಮತವನ್ನು ಬೋಧಿಸುತ್ತಿದ್ದ ಕೆಲವು ಮಿಶನರಿಗಳನ್ನು ದರೋಡೆ ಕೋರರು ವಶಪಡಿಸಿಕೊಂಡಿರುವರು.

—ಕೊಲೊಂಬೋವಿನಲ್ಲಿ ಒಂದು ಹೊಸ ಆಯುರ್ವೇದ ಕಾಲೇಜು ತೆರೆಯಲ್ಪಟ್ಟಿರುತ್ತದೆ. ಗವರ್ನರರೇ ಅದನ್ನು ತೆರೆದರು.

—[illegible] ಎಂಬ [illegible] ಇವರು [illegible] ಹೊರಟಿರುವ [illegible] ಮಧ್ಯ [illegible] ಯಿಂದ [illegible] ಒಂದು [illegible] ಕಮಿಶನರು [illegible] ಜಾಗೆಯೊಳಗೆ [illegible] ಇದನ್ನು [illegible] ಪಡಿಸಿರುವನು.

—ಸಿಲೋನಿನ ಅರಿಸ್ಟಲ್ ಎಂಬ ಒಂದು ಸ್ಥಳದಲ್ಲಿ ಕೆಲವು ಯುವಕರು ಜುಗಾರಾಡುತ್ತಿದ್ದರು. ಥಟ್ಟನೆ ಇವರಲ್ಲಿ ಜಗಳಕ್ಕೆ ಪ್ರಾರಂಭವಾಯಿತು. ಒಬ್ಬನು, ಇನ್ನೊಬ್ಬ ಯುವಕನ ಕಾಲನ್ನು ತಿವಿದನು. ಈ ಯುವಕನು ಇನ್ನಿಬ್ಬರ ಸಹಾಯದಿಂದ ತನ್ನನ್ನು ಹೊಡೆದವನಿಗೆ ಚೂರಿಯಿಂದ ಹೊಡೆದನು. ಇಷ್ಟು ವಿಶೇಷವಾಗಿ, ಮೂವರಿಂದ ಹೊಡೆಯಲ್ಪಟ್ಟ ಆ ಮನುಷ್ಯನು ಸಾಯುವ ಸ್ಥಿತಿಯಲ್ಲಿರುವಾಗ, ಈ ಮೂವರೂ ಆತನ ಶರೀರದ ಸಮೀಪದಲ್ಲಿ ಮೊಣಕಾಲೂರಿ ಆತನ ಗಾಯಗಳಿಂದ ಬರುವ ರಕ್ತವನ್ನು ಥಟ ಥಟನೆ ಕುಡಿದರಂತೆ. ವಿಚಾರಣೆಯು ನಡೆಯುವಾಗ ನೆತ್ತರು ಕುಡಿದವರಲ್ಲಿ ಕಿರಿಯವನು, ತಾನು ಕಳಕೊಂಡ ನೆತ್ತರನ್ನು ಪುನಃ ಶರೀರದಲ್ಲಿ ತುಂಬಿಸಿಕೊಳ್ಳುವ ಸಲುವಾಗಿ, ಎರಡು ಬಾಟಲಿ ನೆತ್ತರನ್ನು ಕುಡಿದುದು ನಿಜವೆಂದು ಒಪ್ಪಿದನು.

—ಜುಲಾಯಿಯಲ್ಲಿ ದಕ್ಷಿಣ ಆಫ್ರಿಕದಲ್ಲಿ ಒಂದು ವಿಜ್ಞಾನ ಪರಿಷತ್ತು ಜರಗುವದು. ಇದಕ್ಕೆ ಅಧ್ಯಕ್ಷರಾಗಲು ಸರ್ ಜಗದೀಶ ಚಂದ್ರ ಬೋಸರವರು ಒಪ್ಪಿಕೊಂಡಿರುವರು. ಇದರಿಂದ ದಕ್ಷಿಣ ಆಫ್ರಿಕದಲ್ಲಿರುವ ಹಿಂದೂಗಳೆಲ್ಲರೂ ಅತ್ಯಾನಂದಿತರಾಗಿರುವರು.

—ಇಟಲಿಯ ಆಂಗ್ಲನಾದ ಫೋರ್ಡ್ ಎಂಬಾತನು ಆರು ತಿಂಗಳುಗಳ ಸಂಚಾರದ ಮೇಲೆ ಹೊರಟಿರುವನು. ಆತನು ಕೆಲವು ದಿನಗಳ ಹಿಂದೆ ಜರ್ಮನಿಯ ಬರ್ಲಿನ್ ನಗರವನ್ನು ಸಂದರ್ಶಿಸಿದನು. ಅಲ್ಲಿ ವಿಶೇಷವಾದ ಸ್ವಾಗತವು ಆತನಿಗೆ ಕೊಡಲ್ಪಟ್ಟಿತು. ಮಾರ್ಗದ ಬದಿಗಳಲ್ಲಿ ಜನರು ಕಿಕ್ಕಿರಿದು ಆತನು ಮಾರ್ಗದಲ್ಲಿ ಹಾದುಹೋಗುವಾಗ ಜಯಘೋಷವನ್ನು ಮಾಡಿದರು.

—ಅರಸರ ಅಸ್ವಸ್ಥತೆ ಕಡಿಮೆಯಾಗುತ್ತ ಬರುತ್ತಿದೆ. ದಿನೇದಿನೇ ಅವರ ಆರೋಗ್ಯವು ಅಭಿವೃದ್ಧಿ ಹೊಂದುತ್ತ ಬರುತ್ತಿದೆ.

—ಹಿಂದೀ ವೈಮಾನಿಕನಾದ ಮಿ. ಚಾವ್ಲಾಯ ವಿಮಾನದ ಮ್ಯಾಗ್ನೆಟೋ ಎಂಬ ಯಂತ್ರಭಾಗವು ಹಾಳಾದುದರಿಂದ ಆತನು ಕಳೆದ ಶನಿವಾರ ಲಾಯನ್ಸ್ ಮತ್ತು ಮಾರ್ಸೇಲ್ಸ್ ಇವುಗಳ ನಡುವೆ ಇಳಿದು ಹಾಳಾದ ಯಂತ್ರಭಾಗವನ್ನು ಸರಿಮಾಡಿ, ಪುನಃ ಹಾರಬೇಕಾಯಿತು.

—ಇಂಗ್ಲೆಂಡಿನಲ್ಲಿ 'ರೊಕೆಟ್ ಶಿಪ್' ಎಂಬ ಹೆಸರಿನ ಹೊಸತರದ ನಾವೆಗಳನ್ನು ತಯಾರಿಸಲಿರುವರು. ಈ ನಾವೆಯು ಗಂಟೆಗೆ ೨೦೦ ಮೈಲುಗಳಿಂತ ಹೆಚ್ಚು ಓಡಬಲ್ಲದೆಂದು ಅಂದಾಜು ಮಾಡಲಾಗಿದೆ. ಮೊದಲಿನ ಕಲೆಗೆ ಬರೇ ಐದೇ ದಿನಗಳಲ್ಲಿ ಪ್ರಯಾಣ ಮಾಡಲು ಅನುಕೂಲವಾದ ಹಾಗಾಯಿತು.

—ವಿಯನ್ನಾದಲ್ಲಿ ಗೇಟಾ ಜೋಸ್ಟಿಕ್ ಎಂಬಾತನು ೭೩ ತಾಸುಗಳವರೆಗೆ ನಿಲ್ಲದೆ ಹಾರ್ಮೋನಿಯಮವನ್ನು ಬಾರಿಸಿ ಹೆಸರು ಪಡೆದಿರುವನು. ಈ ಮೊದಲು ೭೩ ತಾಸುಗಳಿಗಿಂತ ಹೆಚ್ಚಿಗೆ ಯಾರೂ ಬಾರಿಸಿರಲಿಲ್ಲ.

—ನ್ಯೂಯಾರ್ಕ್ ಎಂಬಲ್ಲಿ ಒಬ್ಬ ವಿಜ್ಞಾನಶಾಸ್ತ್ರಜ್ಞನ ೧೪ ವರುಷ ಪ್ರಾಯದ ಮಗನು ಒಂದು ಸಣ್ಣ ಆಟದ ಉಗಿಹಡಗವನ್ನು ತಯಾರಿಸಿದನು. ಅದನ್ನು ಆತನು ೮ ವರುಷಗಳಿಗೆ ಇನ್ನೂರು ಮಾಡಿದ್ದನು. ಒಂದೊಂದು ಸಲ ಸ್ವಿಮ್ಮಿಂಗ್ ಬಾತ್ ನೀರಿನಲ್ಲಿ ದಿನ ತಿಂಗಳು ಆತನು ಓಡಿಸುತ್ತಿದ್ದನು. ಈ ಹಡಗವನ್ನು ಆತನು ಕೆರೆಗಳಲ್ಲಿಯೂ ಕೊಳಗಳಲ್ಲಿಯೂ ಓಡಿಸುತ್ತಿದ್ದನು. ಒಂದು ದಿನ ಹಡಗವು ಒಂದು ಕೊಳದಲ್ಲಿ ಓಡುತ್ತಿದ್ದಾಗ ಮುಳುಗಿ ಹೋಯಿತಂತೆ. ಹುಡುಗನಿಗೆ ಇನ್ಶೂರೆನ್ಸ್ ಕಂಪೆನಿಯವರು ಎಂಟು ಸಾವಿರಗಳನ್ನು ಕೊಟ್ಟಿದ್ದರು.

—ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕ್ ಸಮುದ್ರಗಳನ್ನು ಶೋಧನೆ ಮಾಡಲು ಹೋಗಿದ್ದವರು ವಾಯರ್‌ಲೆಸ್ ಟೆಲಿಗ್ರಾಫಿಯ ಮೂಲಕ ಪರಸ್ಪರ ಮಾತನಾಡಿಕೊಳ್ಳುತ್ತಿರುವರಂತೆ. ಅವರೊಳಗಿರುವ ದೂರ ಹದಿನೆರಡು ಸಾವಿರ ಮೈಲುಗಳು. ಇಷ್ಟು ದೂರದ ವರೆಗೆ ವಾಯರ್‌ಲೆಸ್ ಸಹಾಯದಿಂದ ಇದುವರೆಗೆ ಯಾರೂ ಮಾತನಾಡಿರಲಿಲ್ಲ.

ಒಳದೇಶ ವರ್ತಮಾನ.

—ಮುಂಬಾಯಿ ಸಂಸ್ಥಾನದ ಮದ್ಯಪಾನ ನಿಷೇಧದ ಪರಿಷತ್ತು ಕಾರಿಕಲ್ ೧೫ ಮತ್ತು ೧೬ನೇ ದಿನಗಳಲ್ಲಿ ಸರ್ ಪುರುಷೋತ್ತಮದಾಸ ಠಾಕೂರದಾಸರವರ ಅಧ್ಯಕ್ಷತೆಯಲ್ಲಿ ಜರಗುವದು. ಹಲವು ಕಡೆಗಳಿಂದ ಹಲವು ಪ್ರತಿನಿಧಿಗಳು ಬರಲಿರುವರು. ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ಒಂದೇ ರೀತಿಯ ನಿಷೇಧಕಾರ್ಯವು ತೊಡಗಲ್ಪಟ್ಟು ಗವರ್ನರರನ್ನು ಕಾಣಲು ಈ ಕುರಿತು ಒಂದು ನಿಯೋಗವನ್ನು ಕಳುಹಿಸುವ ಯೋಜನೆಯು ಈ ಪರಿಷತ್ತಿನಲ್ಲಿ ಚರ್ಚಿಸಲ್ಪಡುವದು.

—ಮುಂಬಾಯಿಯ ಯುರೋಪಿಯನ ಜನರಲ್ ಆಸ್ಪತ್ರೆಯಲ್ಲಿ ಅಮಾನುಲ್ಲಾರವರ ಪತ್ನಿಯಾದ ಸೋರಿಯಾ ರಾಣಿಯವರು ಒಂದು ಹೆಣ್ಣು ಶಿಶುವನ್ನು ಪ್ರಸವಿಸಿರುವರು. ಶಿಶುವೂ, ಅದರ ತಾಯಿಯೂ ಪೂರ್ಣ ಆರೋಗ್ಯದಲ್ಲಿರುವರಂತೆ.

—ಮಧುರೆಯಲ್ಲಿ ಅಲಗಿರಿಸ್ವಾಮಿ ನಾಯಡು ಎಂಬ ಪೋಲೀಸ ಜವಾನನೊಬ್ಬನು ಒಬ್ಬ ಹೆಂಡ ಕುಡಿಕನ ಕ್ರೋಧಕ್ಕೆ ಬಲಿಬಿದ್ದನು. ಪೋಲೀಸನು ರಾತ್ರಿ ಹೊತ್ತು ಮಾರ್ಗದಲ್ಲಿ ಗಸ್ತುಹೊಡೆಯುತ್ತಿದ್ದನು. ಆ ಸಮಯ ಇಬ್ಬರು ಮಹಮ್ಮದೀಯರು ಮಾರ್ಗದಲ್ಲಿ ಕಂಡಾಬಟ್ಟೆ ವರ್ತಿಸುವುದನ್ನು ಕಂಡು ಸುಮ್ಮನೆ ಹೋಗಬೇಕಾಗಿ ಪೋಲೀಸಿನವನು ಹಲವು ಸಲ ಅವರಿಗೆ ತಿಳಿಸಿದನು. ಆದರೆ ಆತನ ಮಾತುಗಳು ಯಾವ ಪ್ರಯೋಜನಕ್ಕೂ ಬೀಳದೆ ಪೋಲೀಸರನ್ನು ಅವರು ದೂರತೊಡಗಿದರು. ಮಾತುಗಳಿಂದ ಗುದ್ದಾಟಕ್ಕೆ ತೊಡಗಿ, ಇಬ್ರಾಹಿಮನೆಂಬ ಹೆಸರಿನ ಒಬ್ಬ ಮುಸಲ್ಮಾನನು ಪೋಲೀಸನ ಬಲಕಿವಿಯನ್ನು ಬಾಯಿಯಿಂದ ಕಚ್ಚಿ ಕಿವಿಯುಂಗುರ ಸಮೇತವಾಗಿ ಕಿವಿಯ ತುಂಡನ್ನು ನುಂಗಿಬಿಟ್ಟನಂತೆ. ಪೋಲೀಸನು ಬೇರೆ ಪೋಲೀಸರ ಸಹಾಯದಿಂದ ಇವರಿಬ್ಬರನ್ನು ಕೈದುಮಾಡಿದನು.

— [illegible] ತಿಂಗಳ ವರೆಗೆ [illegible] ಬೆಂಗಳೂರಿನ ಮಹಾರಾಜಾ ಮತ್ತು [illegible] ಗಿರಣಿಗಳ [illegible]. ಸರಕಾರದ [illegible] ಮುದ್ದೂರ್‌ಗಳಿಂದಲೇ ಮುಖ್ಯ [illegible] ಮತ್ತು ಗಿರಣಿ ಅಧಿಕಾರಿಗಳು ಕೂಲಿಗಾರರ ಸೌಕರ್ಯದ ಬಗ್ಗೆ ಇನ್ನು ಮುಂದೆ ಚೆನ್ನಾಗಿ ನೋಡಿಕೊಳ್ಳುವರು.

— ಮುಂಬಾಯಿ ತಾಜಮಹಾಲ ಹೋಟೇಲಿನಲ್ಲಿ ಅಫಘಾನದ ಮಾಜಿ ಅರಸರಾದ ಅಮಾನುಲ್ಲರವರ ಪತ್ನಿಯವರು ಒಂದು ಹೆಣ್ಣು ಕೂಸನ್ನು ಪ್ರಸವಿಸಿರುವರು.

— ರಂಗೂನಿನ ಜೈಲೊಂದರಲ್ಲಿ ಜನ್ಮಾಂತ್ಯದ ವರೆಗಿನ ಶಿಕ್ಷೆಯನ್ನು ಅನುಭವಿಸಬೇಕೆಂದು ವಿಧಿಸಲ್ಪಟ್ಟು ಬಂಧಿತನಾಗಿದ್ದ ಕೊಲೆಪಾತಕಿಯೊಬ್ಬನು, ತನ್ನ ಕೋಣೆಯಲ್ಲಿಯೇ ಇರುವ ಇನ್ನೊಬ್ಬ ಕೈದಿಯ ಮೇಲೆ ಬಿದ್ದು, ಉಳಿಯಿಂದ ಆತನನ್ನು ತಿವಿದು ಕೊಂದುಹಾಕಿರುವನು.

— ಮೀರತಿನ ಒಳಸಂಚಿನ ಮೊಕದ್ದಮೆಯಲ್ಲಿ ಕೈದಿಗಳಾಗಿರುವ ಮಿ| ನಿಂಬಕರ ಮತ್ತು ಜೋಗ್ಳೇಕರ್ ಇವರು ಲಂಡನಿನಲ್ಲಿರುವ ಶ್ರೀಮತಿ ಸರೋಜಿನಿ ನಾಯ್ಡುಗಳವರಿಗೆ ತಂತಿಯನ್ನು ಕೊಟ್ಟಿರುವರು. “ಮಂತ್ರಿಗಳನ್ನೂ ಪಾರ್ಲಿಮೆಂಟ್ ಮೆಂಬರರನ್ನೂ ಕಂಡು, ಮೀರತಿನ ಮೊಕದ್ದಮೆಯು ಮುಂಬಾಯಿ ಅಥವಾ ಕಲಕತ್ತೆಯಲ್ಲಿ ಜೂರಿಗಳ ಮುಂದೆ ವಿಚಾರಿಸಲ್ಪಡುವಂತೆ ಪ್ರಯತ್ನಿಸಿರಿ” ಎಂದು ತಂತಿಯಲ್ಲಿತ್ತು. ಈಗ ಕೈದಿಗಳಿಗೆ ಒಳ್ಳೇ ಸೌಕರ್ಯಗಳು ಒದಗಿಸಲ್ಪಡುತ್ತಲಿವೆಯಂತೆ. ಅವರ ಅಡಿಗೆಯನ್ನು ಬೇಯಿಸಲು ಮೂವರು ನೇಮಿಸಲ್ಪಟ್ಟಿರುವರು. ತುಂಬ ಪತ್ರಿಕೆಯೂ ಕೊಡಲ್ಪಡುತ್ತಿದೆ. ಸಾಯಂಕಾಲ ಚೆಂಡಾಡಲು ಅವರಿಗೆ ಅನುಕೂಲವಿರುತ್ತದೆ. ರಾತ್ರಿ ಬಹಿರಂಗವಾದ ಸ್ಥಳದಲ್ಲಿ ಮಲಗಿಕೊಳ್ಳಲು ಅವಕಾಶವಿದೆ.

— ಕಳೆದ ಶನಿವಾರ ರಾತ್ರಿ ಮೀರತಿನ ಜೈಲಿನಲ್ಲಿ ಬಂಧಿಸಲ್ಪಟ್ಟ ಒಬ್ಬ ಕೈದಿಯು ರಕ್ವಾಲಿಯವನು ಹಾಜರಿರುವ ಸಮಯದಲ್ಲೇ ಕಿಟಕಿಯ ಗೂಟಗಳನ್ನು ಕಳಚಿ ಪಲಾಯನಮಾಡಿರುವನು. ಆತನು ಪಲಾಯನ ಮಾಡಲು ಪ್ರಯತ್ನಿಸುವಾಗ ಉಳಿದ ಕೈದಿಗಳು ಗೊಂದಲವನ್ನೆಬ್ಬಿಸುವಮಾಡಿದರು. ಒಡನೆ ರಕ್ವಾಲಿಯವನು ಅಲ್ಲಿಗೆ ಹೋಗಿ ನೋಡಲಾಗಿ ಹಾಕಿದ ಬೀಗವು ಹಾಗೆಯೇ ಇದ್ದಿತು. ಗೂಟಗಳು ಕಳಚಲ್ಪಟ್ಟದ್ದನ್ನು ಆತನು ಕಂಡಿರಲಿಲ್ಲ. ರಕ್ವಾಲಿಯವನನ್ನು ಕೆಲಸದಿಂದ ತೆಗೆದು ಅನಾಮತಿನಲ್ಲಿಟ್ಟಿರುವರು.

— ಲಾಹೋರಿನಲ್ಲಾದ ಸೋಂಡರ್ಸರ ಕೊಲೆಯ ಸಂಬಂಧವಾಗಿ ಸಿ. ಐ. ಡಿ.ಗಳು ಕಲಕತ್ತೆಯ ಕೆಲವು ಮನೆಗಳನ್ನು ಶೋಧಿಸಿ, ಫಣಿಭೂಷಣ ಘೋಷ ಮತ್ತು ವೈಜನಾಥ ಸಿಂಗ ಎಂಬಿಬ್ಬರನ್ನು ಕೈದುಮಾಡಿರುವರು. ಮತ್ತು ಅವರು ಲಾಹೋರಿಗೆ ಕಳುಹಿಸಲ್ಪಟ್ಟಿರುವರು.

— ರಂಗೂನಿನಲ್ಲಿ ಕೆಲವು ಬರ್ಮೀಯರು ಇಬ್ಬರು ಹಿಂದೂ ಪೋಲೀಸರನ್ನು ಕೊಲೆಮಾಡಿರುವರು. ಒಬ್ಬನು ಜಗಳವಾದ ಸ್ಥಳದಲ್ಲಿಯೇ ಮೃತಪಟ್ಟನು. ಒಬ್ಬನು ಆಸ್ಪತ್ರೆಯಲ್ಲಿ ಮೃತಪಟ್ಟನು. ಪೋಲೀಸರು ರಸ್ತೆಯ ಸಮೀಪದ ಮನೆಯೊಂದರಲ್ಲಿ ಜಗಳವಾಗುವಾಗ ಅದನ್ನು ಸಮಾಧಾನ ಪಡಿಸಲು ಹೋಗಿದ್ದರು. ಪೋಲೀಸರ ಮೇಲೆಯೇ ಮನೆಯವರು ಹಿಡಿದು ಬಿದ್ದರು.

— ಕಳೆದ ಒಕ್ಟೋಬರ ತಿಂಗಳ ರಾತ್ರಿ ಇಬ್ಬರು ಚೀನೀಯರು ಮೋಟಾರುಕಾರಿನಲ್ಲಿ ಕುಳಿತು ಹೋಗುತ್ತಿರುವಾಗ ಗಸ್ತು ಹೊಡೆಯುತ್ತಿದ್ದ ಪೋಲೀಸನು ಮೋಟಾರುಕಾರಿನಲ್ಲಿ ಬೆಳಕಿಲ್ಲವೆಂದು ಅವರನ್ನು ತಡೆದನು. ಅವರು ಏನಾದರೂ ಬಕ್ಷೀಸನ್ನು ಕೊಟ್ಟರೆ ಅವರನ್ನು ಬಿಡುವೆನೆಂಬದಾಗಿ ನೆನಸಿ ಸ್ಟೇಶನಿಗೆ ಅವರನ್ನು ಕರದೊಯ್ಯುತ್ತಿದ್ದನು. ಅವರೇನೂ ಕೊಡುವುದರಲ್ಲಿರಲಿಲ್ಲ. ಅದುಕಾರಣ ಸಿಟ್ಟಿನಿಂದ ಕ್ರೂರವಾಗಿ ಅವರನ್ನು ಹಿಂಸಿಸಿದನು. ಆತನ ಮೇಲೆ ಮೊಕದ್ದಮೆಯಾದುದರಿಂದ ಆರು ತಿಂಗಳುಗಳ ಕಠಿಣ ಸಜೆಯು ಆತನಿಗೆ ವಿಧಿಸಲ್ಪಟ್ಟಿರುತ್ತದೆ.

— ಸಂಯುಕ್ತ ಪ್ರಾಂತದ ಜೈಲ ಕಮಿಟಿಯವರು ಕೈದಿಗಳ ಕೆಲಸದ ಬಗ್ಗೆ ಚರಕವನ್ನು ಉಪಯೋಗಿಸುತ್ತಬೇಕೆಂದು ನಿಶ್ಚಯಿಸಿರುವರು. ಕೈದಿಯು ನೂತ ನೂಲನ್ನು ಆಲ್ ಇಂಡಿಯಾ ಸ್ಪಿನ್ನರ್ಸ್ ಎಸೋಸಿಯೇಶನವರಿಗೆ ಮಾರುವರು. ಮಾರಿ ಬಂದ ಹಣದಲ್ಲಿ ಹತ್ತಿಯ ಕ್ರಯವನ್ನು ಕಳೆದು ಬಾಕಿಯಾಗುವ ಹಣವನ್ನು ನೂಲನ್ನು ನೂತ ಕೈದಿಗನೇ ಕೊಡುವರು.

— ಚಿತಗಾಂಗಿನಲ್ಲಿ ವಿಶೇಷವಾದ ಮಳೆಯ ದೆಸೆಯಿಂದ ನೆರೆಬಂದು ಜನರ ಪ್ರಾಣನಷ್ಟವೂ ಧನನಷ್ಟವೂ ಉಂಟಾಗಿರುತ್ತದೆ. ಈ ತರದ ಹಾವಳಿಯು ಎಂದೆಂದಿಗೂ ಮರೆತುಹೋಗದ ರೀತಿಯದಾಗಿರುತ್ತದೆ.

— ಕಾಂಗ್ರೆಸ್ ಸ್ವಾಗತ ಮಂಡಳಿಗೆ ಹೆಚ್ಚು ಹೆಚ್ಚು ಮೆಂಬರರನ್ನು ಕೂಡಿಸುವ ಸಲುವಾಗಿ ಕಾಂಗ್ರೆಸ್ ಧುರೀಣರು ಸಿಮ್ಲಾ, ಮೊದಲಾದ ಮುಖ್ಯ ಮುಖ್ಯ ಸ್ಥಳಗಳಲ್ಲಿ ಸಂಚರಿಸುತ್ತಲಿರುವರು.

— ಮಹಮದ್ ಆಜಮ್ ಖಾನನೆಂಬಾತನು ಲಾಹೋರಿನಲ್ಲಿ ಒಂದು ದೊಡ್ಡ ಗೋಣಿಯ ಮೂಟೆಯನ್ನು ಹೊತ್ತುತಂದು, ಒಬ್ಬ ವ್ಯಾಪಾರಿಯಲ್ಲಿ ಒಂದು ದೊಡ್ಡ ಕಬ್ಬಿಣದ ಟ್ರಂಕಿಗೆ ಬೆಲೆಮಾಡಿದನು. ಬೆಲೆಮಾಡಿ ಪೆಟ್ಟಿಗೆಯನ್ನು ಕೊಂಡುಕೊಂಡು ತನ್ನ ಮೂಟೆಯನ್ನು ಪೆಟ್ಟಿಗೆಯೊಳಗಿಟ್ಟು ಬೀಗಹಾಕಿ, ವ್ಯಾಪಾರಿಯ ಕೈಯಲ್ಲಿ ಐದು ರೂಪಾಯಿಗಳ ನೋಟನ್ನು ಕೊಟ್ಟು ಚಿಲ್ಲರೆಯನ್ನೂ, ಪೆಟ್ಟಿಗೆಯನ್ನೂ ಸ್ವಲ್ಪ ಸಮಯದ ತರುವಾಯವೇ ಕೊಂಡುಹೋಗುವೆನೆಂದನು. ವ್ಯಾಪಾರಿಗೆ ಸಂಶಯವಾದುದರಿಂದ ಆತನದಕ್ಕೆ ನಿರಾಕರಿಸಿದನು. ಆಜಮಖಾನನು ಪೆಟ್ಟಿಗೆಯನ್ನು ಹೊತ್ತು ಹಾದಿಯಲ್ಲಿ ಹೋಗುತ್ತಿರುವಾಗ ಒಬ್ಬ ಪೋಲೀಸ ಕಾನ್ಸಟೇಬಲನು ಆತನನ್ನು ಪೋಲೀಸ್ ಠಾಣೆಗೆ ಕೊಂಡೊಯ್ದು ಟ್ರಂಕನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಒಬ್ಬ ಹೆಂಗಸಿನ ಶವವಿದ್ದಿತು. ಅದು ತನ್ನ ತಾಯಿಯದೆಂದೂ, ತನ್ನ ತಾಯಿಯು ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುವಾಗ ಸತ್ತಳೆಂದೂ, ಅಧಿಕಾರಿಗಳು ತನಗೆ ಶವವನ್ನು ಕೊಡಲೊಪ್ಪದುದರಿಂದ ತಾನು ಅದನ್ನು ಹುಗಿದ ಸ್ಥಳದಿಂದ ಕಳವುಮಾಡಿ ತರಬೇಕಾಯಿತೆಂದೂ ಆಜಮಖಾನನು ತಿಳಿಸಿರುವನು. ಈ ವಿಷಯದಲ್ಲಿ ತನಿಖೆಯು ನಡೆಯುತ್ತಲಿದೆ.

— ಈ ವರುಷ ಲಾಹೋರಿನಲ್ಲಿ ಜರಗುವ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಲು ಮುಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಮಹಾತ್ಮಾಜಿ, ವಲ್ಲಭಭಾ. ಪಟೇಲ, ಜವಾಹಿರಲಾಲ ನೆಹರು ಇವರುಗಳ ಹೆಸರುಗಳನ್ನು ಸೂಚಿಸಿರುವರು. ಪ್ರತಿಯೊಂದು ಪ್ರಾಂತದಿಂದ ಒಬ್ಬೊಬ್ಬ ಮೆಂಬರನಿರುವ ಕಮಿಟಿಯನ್ನು ನೇಮಿಸಿ, ವಿದೇಶಿ ವಸ್ತ್ರ ಬಹಿಷ್ಕಾರವನ್ನು ಚೆನ್ನಾಗಿ ಕೈಕೊಳ್ಳುವಂತೆ ಕಮಿಟಿಯವರು ನಿಶ್ಚಯಿಸಿರುವರು.

— ಖರಗಪುರದ ಒಂದು ದೇವಾಲಯದೊಳಗಡೆ ನಾಲ್ಕು ಮಂದಿ ಸಾಧುಗಳೂ, ಒಬ್ಬ ಹುಡುಗನೂ, ಒಬ್ಬ ಮಿಠಾಯಿ ವ್ಯಾಪಾರಿಯೂ ಕಳೆದ ಆದಿತ್ಯವಾರ ರಾತ್ರಿ ಕೊಲೆಯಲ್ಪಟ್ಟರು. ಜಾತೀಯ ಕಲಹವೇ ಇದರ ಕಾರಣವಾಗಿರುತ್ತದೆ. ಇಬ್ಬರು ಈ ಸಲುವಾಗಿ ಕೈದುಮಾಡಲ್ಪಟ್ಟಿರುವರು. ರಾತ್ರಿ ಇಡೀ ಪೋಲೀಸರು ಶಾಂತಿಸ್ಥಾಪನೆಯ ಬಗ್ಗೆ ತಿರುಗಾಡಿದರು.

ದಕ್ಷಿಣ ಕನ್ನಡ.

ಮಂಗಳೂರು: — ಮಂಗಳೂರಿನಲ್ಲಿ ಸಧ್ಯದಲ್ಲಿಯೇ ಸ್ಥಾಪಿಸಲ್ಪಡುವ ಗವರ್ನಮೆಂಟ್ ಟ್ರೇಡ್ ಸ್ಕೂಲಿನ ಮಾಹಿತಿ ಪತ್ರವನ್ನು ಈ ಸಂಚಿಕೆಯ ಪುರವಣಿಯಾಗಿ ಕೊಟ್ಟಿರುವೆವು.

ನಮ್ಮ ಚಕ್ರವರ್ತಿಗಳ ಜನ್ಮದಿನೋತ್ಸವದ ಸಂದರ್ಭದಲ್ಲಿ ಇಲ್ಲಿಯ ವಕೀಲರಾದ ದ| ಶ್ರೀ| ಗೊಲ್ಲರಕೇರಿ ಕೃಷ್ಣರಾಯರ ಪುತ್ರಿಯವರಿಗೆ ಕೈಸರಿ ಹಿಂದ್ ಪದಕವು ದೊರಕಿರುತ್ತದೆ. ಇವರು ಶ್ರೀ| ಬೆನಗಲ್ ಸಂಜೀವರಾಯರ ಪತ್ನಿಯವರು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರ ಬರುವ ಸಾಧಾರಣ ಸಭೆಯು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಇದೇ ಜೂನ್ ತಾ. ೨೦ನೇ ಗುರುವಾರ ಸಾಯಂಕಾಲ ಘಂಟೆ ೩-೩೦ಕ್ಕೆ ಜರಗುವುದು.

ತಾರೀಖು ೮-೬-೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೧೯ ಮರಣಗಳೂ ೪೨ ಜನನಗಳೂ ಆದುವು. ಮರಣಗಳ ಪೈಕಿ ಟೈಫಾಯಿಡಿನಿಂದ ೩, ಶ್ವಾಸಕೋಶದ ರೋಗಗಳಿಂದ ೫, ಇತರ ಎಲ್ಲಾ ಕಾರಣಗಳಿಂದ ೧೧, ಕಿರು ಮರಣಗಳು ೬.

ಎಲ್ಲಾ ಜಾತಿಯ ಮತ್ತು ಎಲ್ಲಾ ಮತದ ಸ್ತ್ರೀಯರು ಸ್ವತಂತ್ರ ಜೀವನ ಮತ್ತು ಸಮಾಜ ಸೇವೆಯನ್ನು ಕಲಿತುಕೊಳ್ಳಲು ಮಂಗಳೂರಿನಲ್ಲಿ ಈಶ್ವರಾನಂದ ಮಹಿಳಾ ಸೇವಾಶ್ರಮವು ತೆರೆಯಲ್ಪಟ್ಟಿರುವದು. ಈಗ ಸದ್ಯಕ್ಕೆ ಸಂಕ್ಷಿಪ್ತ ಶಿಕ್ಷಣ ಸೂಲಗಿತ್ತಿತನ, ನರ್ಸಿಂಗ್ ಇವು ಕಲಿಸಲ್ಪಡುವವು. ಉಳಕೊಳ್ಳುವ ಮತ್ತು ಶಿಕ್ಷಣದ ಖರ್ಚು [illegible] ನೋಡಿಕೊಳ್ಳಲ್ಪಡುವವು, ಆದರೆ ಖರ್ಚನ್ನು ಧರ್ಮವಾಗಿಯಾಗಲಿ ಸ್ವಲ್ಪವಾಗಲಿ ಕೊಡಲು ಅನುಕೂಲವಿದ್ದವರು ಕೊಡುವರೆಂಬ ನಿರೀಕ್ಷಣೆಯಿದೆ. ಕಲಿತು ತಯಾರಾದ ನಂತರ ಅವರು ಕೆಲಸಮಯದ ವರೆಗೆ ಸೇವಾಶ್ರಮದ ಕೆಲಸವನ್ನು ಮಾಡುವರೆಂಬ ನಿರೀಕ್ಷೆಯಿದೆ. ಈ ಸಮಯ ಅವರ ಖರ್ಚನ್ನು ಸೇವಾಶ್ರಮದವರು ವಹಿಸಿಕೊಳ್ಳುವರು.

ಈಗ ಸದ್ಯಕ್ಕೆ ಈ ಸೇವಾಶ್ರಮವು ಇಲ್ಲಿಯ ನೇಶನಲ್ ಹುಡುಗಿಯರ ಶಾಲೆಯ ಕಟ್ಟಡದ ಒಂದು ಭಾಗದಲ್ಲಿ ತೆರೆಯಲ್ಪಟ್ಟು ಪೂನಾ ಸೇವಾ ಸದನದಲ್ಲಿ ಅನುಭವ ಹೊಂದಿದ ಶ್ರೀಮತಿ ರಮಾ ಬಾಯಿ ಭಾಗವತರವರೇ ಇದರ ಸುಪರಿಂಟೆಂಡೆಂಟರಾಗಿರುವರು. ಶಿಕ್ಷಣ ಮತ್ತು ಇತರ ವಿಷಯಗಳಲ್ಲಿ ತಕ್ಕ ನಿಬಂಧನೆಗಳಿರುತ್ತವೆ. ಮಂಗಳೂರಿನ ಪ್ರಾಮುಖ್ಯ ಸ್ತ್ರೀಪುರುಷರೇ ಆಡಳಿತ ಕಮಿಟಿಯವರಾಗಿದ್ದು, ಜಿಲ್ಲೆಯ ಮುಖ್ಯ ಜನರ ಸಹಾನುಭೂತಿಯು ಇದರ ಕಡೆಗಿರುತ್ತದೆ. ನಿಯಮಿತ ಸಂಖ್ಯೆಯಲ್ಲಿ ಖರ್ಚುಕೊಡುವ ಬೋರ್ಡರರಿಗೂ ವ್ಯವಸ್ಥೆಯಿದೆ. ಪ್ರವೇಶದ ಬಗ್ಗೆ ಅರ್ಜಿಯನ್ನು (ಪ್ರತ್ಯುತ್ತರದ ಬಗ್ಗೆ ಟಪ್ಪಾಲು ಸ್ಟಾಂಪು ಸಮೇತ) ಗೌರವ ಸುಪರಿಂಟೆಂಡೆಂಟು, ಈಶ್ವರಾನಂದ ಮಹಿಳಾ ಸೇವಾಶ್ರಮ, ನೇಶನಲ್ ಗರ್ಲ್ಸ್ ಸ್ಕೂಲ್, ಕೊಡಿಯಾಲ್‌ಬೈಲ್ ಪೋಸ್ಟ್, ಮಂಗಳೂರು, ಇವರಿಗೆ ಕಳುಹಿಸತಕ್ಕದ್ದು.

ಹೊಸದುರ್ಗ: — ಹೊಸ ಪಂಚಾಯತ ಕೋರ್ಟುಗಳ ಮೆಂಬರರ ಚುನಾವಣೆಯು ಮ. ರಾ. ರಾ. ಹೊಸದುರ್ಗ ಡೆಪ್ಯುಟಿ ತಹಸಿಲ್ದಾರರವರ ಅಧ್ಯಕ್ಷತೆಯಲ್ಲಿ ಹೊಸದುರ್ಗ, ಕಾಞಂಗಾಡು ಮತ್ತು ಅಜಾನೂರು ಗ್ರಾಮಗಳಲ್ಲಿ ಬೇರೆ ಬೇರೆ ತಾರೀಖುಗಳಲ್ಲಿ ಪ್ಲ್ಯಾನ್ ಮಾಡಿದ ಪ್ರಕಾರ ಕ್ಲಪ್ತ ಸಮಯಕ್ಕೆ ಜರಗಿತು. ಕೂಡಿದ ನಿವಾಸಿಕರಲ್ಲಿ ಒಂದೇ ಮತವಿದ್ದ ಸಮ್ಮಂಧ ಓಟುಗಳ ಗಲಾಟೆಗೆ ಎಡೆಯೇ ಇರಲಿಲ್ಲ.

ಕೊಕ್ಕರಣೆ: — ಈ ಸೆಂಟರಿನ ಉಪಾಧ್ಯಾಯರ ಜೂನ್ ತಿಂಗಳ ಸಭೆಯು, ತಾ. ೧-೬-'೨೯ನೇ ಶನಿವಾರ, ಬೇಳಾರ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ, ಉಡುಪಿ ರೇಂಜಿನ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಮ| ರಾ| ರಾ| ಕೆ. ಲಕ್ಷ್ಮಣ ಭಟ್ಟಜೀ, ಅವರ್ಗಳ್ ಬಿ. ಎ. ಎಲ್. ಟಿ.,ಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಡಾ| ಎಸ್. ಟಿ. ಮಾಧವರಾವ್, ಆಯುರ್ವೇದ ವಿದ್ವಾನ್, ಜಿ. ವ್ಯಾ. ಸೋಮಯಾಜಿಯವರೂ ಅಲ್ಲದೆ ಮದರಾಸು ಕ್ರಿಶ್ಚಿಯನ್ ಕಾಲೇಜಿನ, ಸಂಸ್ಕೃತ ಪಂಡಿತರಾದ [illegible] ಯು. ವಿ ಕಟಕೃಷ್ಣರಾಯರೂ ಚಿತ್ತೈಸಿ, ಸಭೆಯ ಕಾರ್ಯಗಳಲ್ಲಿ ತುಂಬಾ ಸಹಭಾಗಿಯಾಗಿದ್ದುದು ಬಹಳ ಸಂತೋಷಕರ. ಮತ್ತು ಗ್ರಾಮದ ಸಜ್ಜನಸ್ಥರನೇಕರು ನೆರೆದಿದ್ದರು. ಕಾರ್ಯಕ್ರಮದಂತೆ ಬಾಲಾಬಾಲಕರಿಂದ ದೇವತಾ ಪ್ರಾರ್ಥನೆಯಾಗಿ ಗತ ಮೀಟಿಂಗಿನ ವರದಿಯನ್ನು ಓದಲಾಯಿತು. ಆ ಬಳಿಕ [illegible] ಕುರಿತು ಉಪನ್ಯಾಸವೂ ಮುಗಿಯಲಾಗಿ ಸಭಿಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದರು. ಆ ನಂತರ ಹಲವು ಇತರ ಕಾರ್ಯಕ್ರಮಗಳು ಮುಗಿದು ಅಧ್ಯಕ್ಷರ ಭಾಷಣವಾಯಿತು. ಆಮೇಲೆ ಉಡುಪಿ ರೇಂಜಿನ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಮ| ರಾ| ರಾ| ಕೆ ಲಕ್ಷ್ಮಣ ಭಟ್ಟಜೀಯವರನ್ನು, ಇದೇ ರೇಂಜಿನಲ್ಲಿ ಕಾಯಂ ಮಾಡಿಸಿದರೆ ಶಾಲೆಗಳ ವೃದ್ಧಿಯಾದೀತೆಂದೂ, ಆ ಬಗ್ಗೆ ಎಲ್ಲರೂ ದೇವತಾ ಪ್ರಾರ್ಥನೆಯನ್ನು ಮಾಡಿದರು. ನಂತರ ಅಧ್ಯಕ್ಷರವರಿಗೂ, ಸಭೆಗೆ ಚಿತ್ತೈಸಿದ ಗೃಹಸ್ಥರಿಗೂ ಧನ್ಯವಾದಗಳನ್ನರ್ಪಿಸಿ, ಸಭೆಯು ಅಂತ್ಯವಾಯಿತು.

ಸುಳ್ಯ: — ಇಲ್ಲಿಯ ಗ್ರಾಮಪಂಚಾಯತಿನಿಂದ ಆಡು ಮತ್ತು ದನಗಳು ಸಾಕಿದರೆ ಒಂದೊಂದಕ್ಕೆ ಪರವಾನಗಿಯಿಂಕೆಯೂ, ತೆಂಗು ತಾಳ ಮರಗಳು ಮಾರ್ಕೆಗೆ ಕೊಟ್ಟರೆ ೧ಕ್ಕೆ ೮ ಆಣೆಯಂತೆಯೂ ತೆರಿಗೆ ಹೇರಲ್ಪಡುವದೆಂದು ಅಲ್ಲಲ್ಲಿ ನೋಟೀಸುಗಳು ಹಚ್ಚಿಯದೆ.

ಮಳೆಯು ಬಹು ಜೋರಾಗಿ ಬರುತ್ತದೆ. ಹೊಳೆ, ಹಳ್ಳ ಮತ್ತು ಗದ್ದೆಗಳು ನೀರಿನಿಂದ ತುಂಬಿಹೋಗಿವೆ.

ವಿವಿಧ ಸಮಾಚಾರಗಳು.

ಕನಸಿನ ನಿಜತ್ವ

‘ಕನಸಿನಲ್ಲಿ ಕಂಡುದು ನಿಜವಾಗಿಯೂ ಸಂಭವಿಸುವುದು’ ಎಂದು ಕೆಲವರು ಅನ್ನುವದು ನಿಜವೇ ಆಗಿರುತ್ತದೆಂದು ಮಿ. ಜೆ. ಡಬ್ಲ್ಯು. ಡುನ್ನೆ ಎಂಬಾತನ ಉದಾಹರಣೆಯಿಂದ ಖಚಿತವಾಗುವದು. ಡುನ್ನೆಯು ಪ್ರತಿ ದಿನ ಬೆಳಿಗ್ಗೆ ಹಾಸಿಗೆಯನ್ನು ಬಿಟ್ಟು ಎದ್ದೊಡನೆ ಹಿಂದಿನ ರಾತ್ರಿ ತನಗೆ ಬಿದ್ದ ಕನಸುಗಳನ್ನು ನೆನಪುಮಾಡಿಕೊಂಡು ಒಂದು ಪುಸ್ತಕದಲ್ಲಿ ಬರೆದಿಡುವ ಪದ್ಧತಿಯಿದ್ದಿತು. ಆತನನಿಗೆ ಬಿದ್ದ ಕನಸುಗಳಲ್ಲಿ ಕೆಲವು ಹಿಂದೆ ನಡೆದುಹೋದವುಗಳಾಗಿದ್ದವು. ಹಲವು ಮುಂದೆ ನಡೆಯುವಂತಹವುಗಳಾಗಿದ್ದವು. ಇದೇ ರೀತಿ ಮಿ| ಗ್ಲೆನ್ನಿಡಿಬ್ಬೀ ಎಂಬಾತನು ಕೂಡಾ ತನಗೆ ಬೀಳುತ್ತಿದ್ದ ಕನಸುಗಳ ಸಾರಾಂಶವನ್ನು ಸಂಗ್ರಹಿಸಿ ಇಡುತ್ತಿದ್ದನು. ಒಂದು ವರುಷ ಜುಲೈ ೨೧ನೇ ತಾರೀಕಿನ ದಿನ ಆತನಿಗೆ ಬಿದ್ದ ಕನಸಿನ ಸಾರಾಂಶವಿದು — “ಒಂದು ರಸ್ತೆ; ಅದರ ಮಧ್ಯದಲ್ಲಿ ನಾನಿರುವೆನು. ಸುತ್ತುಮುತ್ತಲೂ ಯಾರೂ ಇರುವುದಿಲ್ಲ. ಬಲಬದಿಯ ರಸ್ತೆಯಿಂದ ಒಂದು ಮೋಟಾರುಕಾರು ಓಡಿಬಂದು ನನ್ನನ್ನು ಸಮೀಪಿಸುವುದು, ಕಾರಿನ ಮುಂದಣ ಚಕ್ರಗಳು ನನ್ನಿಂದ ಬರೇ ಒಂದು ಇಂಚು ದೂರವಿರುವವು” ಇಷ್ಟೇ ಆತನ ನೆನಪಿನಲ್ಲಿದ್ದುದು. ಆಗಸ್ಟ ೨೧ನೇ ತಾರೀಕಿನ ದಿನ ಬೆಳಿಗ್ಗೆ ೯ ಘಂಟೆಗೆ ಕನಸಿನಲ್ಲಿ ಕಂಡಂತೆ ಗ್ಲೆನ್ನಿಡಿಬ್ಬೀಯು ಕ್ವೀನ್ ವಿಕ್ಟೋರಿಯಾ ಮತ್ತು ಕೆನ್ನನ್ ರಸ್ತೆಗಳು ಕೂಡುವಲ್ಲಿ ಏಕಾಕಿಯಾಗಿ ನಿಂತುಕೊಂಡಿದ್ದನು. ಹತ್ತು ನಿಮಿಷಗಳ ವರೆಗೆ ಆ ಸ್ಥಳದಲ್ಲಿ ಯಾವ ವಾಹನವಾದರೂ, ಯಾವ ವ್ಯಕ್ತಿಯಾದರೂ ಬರಲಿಲ್ಲ. ಒಡನೆ, ಆತನಿಗೆ ತನಗೆ ಒಂದು ತಿಂಗಳ ಹಿಂದೆ ಬಿದ್ದ ಕನಸಿನ ನೆನಪಾಯಿತು. ಎಡಬದಿಯಿಂದ ಥಟ್ಟನೆ ಒಂದು ಮೋಟಾರುಕಾರು ಬಂದು, ಆತನು ನಿಂತ ಕಡೆಗೆ ಓಡಿಬಂದಿತು. ಆತನು ಮಾರ್ಗದಿಂದ ಹಿಂದಕ್ಕೆ ಸರಿಯುವಷ್ಟರಲ್ಲಿ ಅದು ಆತನನ್ನು ತೀರ ಸಮೀಪಿಸಿತು. ಕನಸಿನ ನಿಜತ್ವದ ಒಂದು ಉದಾಹರಣೆಯಿದು.

ಅದೇ ವ್ಯಕ್ತಿಗೆ ಜುಲೈ ೨೭ನೇ ತಾರೀಕಿನ ದಿನ ಇನ್ನೊಂದು ಕನಸು ಬಿದ್ದಿತು. “ಕತ್ತಲೆಯ ಒಂದು ಕೋಣೆ, ಗೋಡೆಗಳಲ್ಲೆಲ್ಲ ಚಿತ್ರಗಳನ್ನು ತೂಗಾಡಿಸಿದೆ. ತನ್ನ ಬಳಿಗೆ ಒಬ್ಬ ಹೆಂಗಸಿರುವಳು. ನಾವು ಒಳಗೆ ಹೋಗಲು ಟಿಕೇಟು ಪಡಕೊಂಡಿರುವೆವು. ಒಳಗೆ ಹೋಗಿ ಹೊರಗೆ ಬಂದ ಮೇಲೆ ತನಗೆ ಅದುವರೆಗೆ ಕಾಣಸಿಕ್ಕದಂತಹ ಕೋಣೆಯೊಂದು ಗೋಚರವಾಗುತ್ತಿದ್ದಿತು”. ಇದೇ ರೀತಿ ಆಗಸ್ಟ ತಿಂಗಳ ೪ನೇ ತಾರೀಕಿನ ದಿನ ಅಕಸ್ಮಾತ್ ಆತನು ಒಬ್ಬ ಸ್ನೇಹಿತನೊಡಗೂಡಿ ‘ರಾಯಲ್ ಎಕೆಡೆಮಿ’ಯನ್ನು ಕಾಣಲಿಕ್ಕಾಗಿ ಹೋದನು. ಅಲ್ಲಿಗೆ ಆತನು ಅದುವರೆಗೆ ಹೋಗಿರಲಿಲ್ಲ. ಅಲ್ಲಿಯೂ ಸ್ವಪ್ನದಲ್ಲಿ ಕಂಡಂತೆ ಸುತ್ತಲೂ ಚಿತ್ರಪಟಗಳನ್ನು ತೂಗಹಾಕಿದ್ದರು. ಆಗ ಆತನಿಗೆ ಕೆಲವು ವಾರಗಳ ಹಿಂದೆ ಬಿದ್ದ ಕನಸಿನ ನೆನಪಾಯಿತು. ಇದು ಎರಡನೆಯ ಉದಾಹರಣೆಯಾಗಿದೆ.

ಅಫಘಾನದ ಪರಿಸ್ಥಿತಿ

ಮಾಜಿ ಅಮೀರರಾದ ಅಮಾನುಲ್ಲಾಖಾನರು ಅಫಘಾನಿಸ್ಥಾನದಿಂದ ಹೊರಟುಹೋಗಿರುವರಾದರೂ, ಅವರ ಬದಲು ತಾನು ಎಂದು ಬಂದ ಬಾಚಾ ಇ ಸಾಕೋನ ವಿರೋಧವಾಗಿ ಕಾದಾಡಬೇಕೆಂದು ಗುಲಾಮ ನಾಬಿಖಾನರು ನಿಶ್ಚಯಿಸಿರುವರು. ಒಮ್ಮೆಗೆ ಗುಲಾಮ ನಾಬಿಖಾನರು ಯುದ್ಧ ಮಾಡಿ ಬಾಚಾ ಸಾಕೋನನ್ನು ಸೋಲಿಸಿದಾದರೆ ನಾಬಿಖಾನರು ಅಮಾನುಲ್ಲಾಖಾನರನ್ನು ಅಫಘಾನಿಸ್ಥಾನಕ್ಕೆ ಹಿಂದಕ್ಕೆ ಕರೆಸಿ, ಅವರನ್ನು ಸಿಂಹಾಸನದ ಮೇಲೆ ಕೂರಿಸುವರೆಂಬುದು ಖಂಡಿತವಾಗಿದೆ. ಸರದಾರ ಅಲಿಅಹಮದಜಾನರವರು ಕಾಬೂಲಿಗೆ ತರಲ್ಪಟ್ಟರೆಂದೂ, ಬಾಚಾಸಾಕೋನ ಅನುಜ್ಞೆಯ ಮೇರೆಗೆ, ತಲೆಗೂ ಕಾಲಿಗೂ, ಯಾವ ಆಚ್ಛಾದನವನ್ನೂ ಮಾಡದೆ ಕಾಬೂಲಿನ ರಸ್ತೆಗಳಲ್ಲಿ ಕೊಂಡೊಯ್ಯಲ್ಪಟ್ಟರೆಂದೂ ವಾರ್ತೆ.

ಗುಲಾಮ ನಾಭಿಖಾನರೆಂದರೆ ಮೋಸ್ಕೋದಲ್ಲಿ ಹಿಂದೆ ಅಫಘಾನ ಮಂತ್ರಿಯಾಗಿದ್ದವರು. ಗೋರಬಂದ ತಗ್ಗಿನಲ್ಲಿ ಕಾಬೂಲಿನ ಸೈನಿಕರಿಗೆ ತೊಂದರೆಯನ್ನು ಕೊಡುತ್ತಿದ್ದ ಹಜಾರಾ ಸೈನಿಕರು ಗುಲಾಮ ನಾಬಿಖಾನರನ್ನು ಸೇರಿಕೊಂಡು ಅವರಿಗೆ ವಿಧೇಯರಾಗಿ ವರ್ತಿಸುತ್ತಿರುವರು.

ರಷ್ಯಿಯನರ ಎರೋಪ್ಲೇನುಗಳು ಜಾನಕ್ಯಾದ ಎಂಬ ಸ್ಥಳದಲ್ಲಿ ಬಾಂಬು ಬಿಸಾಡಿದರೆಂದೂ ರಷ್ಯಿಯನರ ಮೇಲೆ ಈ ಕಾರಣದಿಂದ ಅಫಘಾನರ ದ್ವೇಷವು ಹೆಚ್ಚುತ್ತಿದೆಯೆಂದೂ ಒಂದು ಅಫಘಾನಿ ಪತ್ರಿಕೆಯು ಬರೆಯುತ್ತಿರುವದು.

ನಾದಿರಖಾನರೂ ಅವರ ಸಹೋದರರೂ ಜನದ ಅಭಾವದಿಂದ ಇದುವರೆಗೆ ವಿಜಯಿಗಳಾಗಿರಲಿಲ್ಲ. ಈಗ ಅಫಘಾನದ ದಕ್ಷಿಣ ಮತ್ತು ಪೂರ್ವ ಪ್ರಾಂತಗಳಿಂದ ಅವರಿಗೆ ಕೊಂಚ ಸಹಾಯವು ಲಭಿಸುತ್ತದೆ. ಮೂರು ಕಡೆಗಳಿಂದಲೂ ಅವರು ಸದ್ಯದಲ್ಲಿಯೇ ಕಾಬೂಲನ್ನು ಆಕ್ರಮಿಸುವರೆಂದು ನಂಬಲಾಗಿದೆ.

ಸಯ್ಯದ್ ಹುಸ್ಸೇನನ ಮರಣದಿಂದ ಬಾಚಾಸಾಕೋವಿಗೆ ಬಹಳ ವ್ಯಸನವುಂಟಾಗಿರುತ್ತದೆ. ಗಿಲ್‌ಜಾ ಸೈನ್ಯದವರು ಯಾವ ಕಡೆಗೆ ಸೇರಬಹುದೆಂಬುದನ್ನು ಇನ್ನೂ ನಿರ್ಣಯಿಸಲು ಸಾಧ್ಯವಿರುವುದಿಲ್ಲ.

ಅಮಾನುಲ್ಲಾಖಾನರು ಮಿಂಚಿನ ವೇಗದಿಂದ ಕಂದಹಾರನ್ನು ಬಿಟ್ಟು ಹೇಗೆ ಹೊರಟುಹೋದರೆಂಬುದರ ಬಗ್ಗೆ ಈಗ ಕೆಲವು ಸೂಚನೆಗಳು ಸಿಕ್ಕುತ್ತಲಿವೆ. ಕಲತ್ ಇ ಗಿಲ್‌ಜ್ಯಾಯಲ್ಲಿ ಅಮಾನುಲ್ಲರು ಮೊದಲು ವಿಜಯಿಗಳಾಗಿದ್ದರೂ ಅನಂತರ ಅವರು ಸೋಲಿಸಲ್ಪಟ್ಟು ಅಲ್ಲಿಂದ ಓಡಿಹೋಗಬೇಕಾಯಿತು. ಅವರು ಅತಿ ತ್ವರಿತದಿಂದ ಪಲಾಯನ ಮಾಡಿದುದು ವ್ಯಾಪಾರಿಗಳಿಗೆ ಬಹಳೇ ಆಶ್ಚರ್ಯವನ್ನುಂಟುಮಾಡುತ್ತಲಿದೆ.

ಅಮಾನುಲ್ಲಾರವರು ತಾರೀಖು ೨೨ನೇ ದಿನ ಕಲತ್ ಇ ಗಿಲಜಾಯಿಯಿಂದ ಹೊರಟು ೨೩ಕ್ಕೆ ಮುಕಮಂದಿಗೆ ತಲುಪಿದರು. ಅಲ್ಲಿ ಅಲಿಅಹಮದಖಾನರೊಂದಿಗೆ ಮಾತನಾಡಿ ಅವರನ್ನು ಕಲತ್ ಇ ಗಿಲಜಾಯಿಗೆ ಕಳುಹಿದರು. ಅಲ್ಲಿಂದ ಅದೇ ದಿನ ರಾತ್ರಿ ಹೊರಟು ಮುಂದೆ ಬಾಬಾಗಿಗೆ ತೆರಳಲಾಗಿ ಕಂದಹಾರಿನಿಂದ ಹೊರಟ ಅವರ ಪಕ್ಷದ ಜನರು ಅವರನ್ನು ಮೊದಲೇ ನಿಶ್ಚಯಿಸಿದಂತೆ ಬಂದು ಕೂಡಿದರು. ಅಲ್ಲಿಂದ ಎಲ್ಲಿಯೂ ನಿಲ್ಲದೆ ಸೀದಾ ಚಮಾನಿಗೆ ಹೊರಟುಹೋದರು. ಅವರ ಪಲಾಯನವು ಯಾರಿಗೂ ತಿಳಿಯದಂತೆ, ಗುಪ್ತವಾಗಿಯೇ ಇಡಲ್ಪಟ್ಟಿದ್ದಿತು. ಹೋಗು

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಹೊಸ, ಕಾಂಜಂಗಾಡ (ದ. ಕ.)
ಸೌತ್ ಇಂಡಿಯನ್ ಕಾಂಜಂಗಾಡ (S.I.R.)

[illegible] ವೈದ್ಯ ಶಾಖೆಗಳಲ್ಲಿ ಮುಖ್ಯವಾಗಿ [illegible] ... ಶ್ರೀ [illegible] ... ಇವರಿಂದ [illegible] ... ಎಲ್ಲಾ ತರದ [illegible] ... ರೋಗಿಗಳು ... ಚಿಕಿತ್ಸೆ ಇರುವದಾದರೆ ಆ ಐವರ ಮತ್ತು [illegible] ... ಎಲ್ಲಾ ... ಔಷಧಿಗಳನ್ನು ... ವೈದ್ಯಶಾಲೆಯು ... ಒದಗು ... ವ್ಯವಹಾರ ನಡಿಸಲಾಗುವುದು.

ವಾರದ ಪ್ರತಿ ಶನಿವಾರ ದಿವಸ ರೋಗಿಗಳನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಹೊಸ, ಕಾಂಜಂಗಾಡ (ದ. ಕ.)

Batliwalla's Preparations Cover All Your Needs.
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್, ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಸ್ಚರ್ ಪಿಲ್ಸ್ – ಮಲೇರಿಯಾ ಜ್ವರ ಪರಿಹಾರ. ರೂ. ೧.
ಬಾಟ್ಲಿವಾಲರ ಬಾಲಾಮೃತ – ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಟಾನಿಕ್ ಅಲ್ ಪಿಲ್ಸ್ – ಕಡಿಮೆ ..., ನಾತ ಎದೆನೋವು, ಈ ಎಲ್ಲಾ ತರದ ರೋಗಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಸ್ಚರ್ – ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೈನ ಟೇಬ್ಲೆಟುಗಳು – ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು – ಧಾತು ಪುಷ್ಟಿಕರ. ರೂ. ೧–೩–೦. ರೂ. ೧–೪–೦. ೧–೧೨–೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦–೬–೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦–೬–೦. LIBERAL DISCOUNT TO TRADE

ಕಾರ್ಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ.
ಡಾ. ಯಚ್. ಎಲ್. ಬಾಟಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
Sayani Road, P. O. Cadell ad, Bombay. No. 14.

ಶಾಲಾ ಹುಡುಗರಿಗೆ ಬೇಕಾದ

ಗೆರೆ ಹಾಕಿದ ಮತ್ತು ಹಾಕದ ಎಕ್ಸರಸೈಜ ಪುಸ್ತಕಗಳೂ, ಕೋಪಿ ಪುಸ್ತಕಗಳೂ, ಮ್ಯಾಪು ಡ್ರೋಯಿಂಗ್ ಪುಸ್ತಕಗಳೂ, ಡ್ರೋಯಿಂಗ್ ಪುಸ್ತಕಗಳೂ, ಪೆನ್ಸಿಲು ಕಂಪಾಸ್ ಬಾಕ್ಸ, ಶಾಯಿ ಕುಪ್ಪಿ ಮೊದಲಾದ ಸ್ಟೇಶನರಿ ಸಾಮಾನುಗಳೂ ಇವೆ.

ಲೆಜ್ಜರ್, ಜರ್ನಲ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ – ತೀರ್ಥಹಳ್ಳಿ – ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಿಗ್ಗೆ ೯ ಘಂಟೆಗೆ ಹೊರಡುತ್ತಾ ಇದ್ದದ್ದು ಸರಿಯಷ್ಟೆ. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. ೧೫–೪–೧೯೩೦ರ ಆರಭ್ಯ ಶಿವಮೊಗ್ಗಾದಿಂದ ಬೆಳಿಗ್ಗೆ ಏಳರ ಘಂಟೆಗೆ ಹೊರಡಲು ಏರ್ಪಾಡುಮಾಡಿದೆ.

ತೀರ್ಥಹಳ್ಳಿ – ಸಾಗರರಸ್ತೆ.

ಅನಂತಪುರ—ಸಾಗರಕ್ಕೆ 0—8—0. ತೀರ್ಥಹಳ್ಳಿ—ಸಾಗರಕ್ಕೆ ೨—೮—೦,

ಆರಗ, ಗುಡ್ಡೇಕೊಪ್ಪ, ಕೋಣಂದೂರು, ಕಾಡಿಗಲ್, ಹುಂಚದಕಟ್ಟೆ, ರಿಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವೀಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳಗಳ ದೆಸೆಯಿಂದ ಕಳೆದ ಜೂನ್ ತಾ. ೮ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಖು ೬—೧೧—೧೯೩೦ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾಭಟ್,
ಮಾಲಿಕ,
ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.



The C. P. C. Co., Ltd.,
MANGALORE.

The Kanara Watch House Udipi, S. K.

ಗ್ಯಾರಂಟಿಯುಳ್ಳ ವಾಚುಗಳು! ೮೬೬ ೬೮೬೬೬೬

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತರಹದ ವಾಚುಗಳೂ, ಕ್ಲೋಕುಗಳೂ, ಟ್ಯಾಬ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟ್ಯಾಬ್‌ಪೀಸು, ಫೋನೋಗ್ರಾಫ್, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡದೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ. – ನಮ್ಮ ಸಾಲು ನೂತನವಾಗಿರುವವುಗಳಿಗೆ ಎರಡು ವರ್ಷಗಳ ಗ್ಯಾರಂಟಿಯೂ ... ಕೊಡುವ ... ಸರಿಯಾದ ಸಮಯವು ದೊರಕುವುದು.

ವಾಗ್ಯ ತನ್ನ ಪಡೆಯಿಂದ ಮುಖ್ಯಸ್ಥನಾಗ್ಯೆ ಸಹಾಯವಾದಂತೆ ಅವರು ಜಾಡಿಯಲ್ಲಿ ಲಂಗ್ವಾರ್ ಮತ್ತು ಲಿಂಗೋನ್ ಸಂಗಗಳು [illegible]

ಕಾಬೂಲ್ [illegible] ದಿನ ಕಾಬೂಲಿನ ಅಧಿಕಾರಿಗಳು ಕಂದಹಾರಿಗೆ ವಿಮಾನಗಳನ್ನು ಕಳುಹಿಸಿ, 'ಕಾಫಿರ ಅರಸರು ತೆರಳಿದ್ದರು. ಇನ್ನು ಯುದ್ಧದ ಅವಶ್ಯಕತೆ ಇರುವುದಿಲ್ಲ' ಎಂಬ ನೋಟೀಸುಗಳನ್ನು ಹಂಚಿದ್ದರು. ಅಮಾನುಲ್ಲರವರು ತೆರಳಿದೊಡನೆಯೇ, ಅವರ ಕೈಕೆಳಗಿನ ಸೈನಿಕರೂ ಚದರಿಹೋದರು.

ಗೋಜಬಂದ ಹತ್ತಿನಲ್ಲಿರುವ ಬಾಚಾಸಾಕೋವಿನ ಮಿತ್ರ ಸೈನ್ಯದವರ ಮೇಲೆ ಗುಲಾಮ್ ನಾಭಿಖಾನರು ಬೋಂಬುಗಳನ್ನು ಬಿಸಾಡಿ ಅವರನ್ನು ಹಿಂತಿಸಿದರು. ತನ್ನೊಡನೆ ಒಂದು ಜಿಗಾರ್ಡಿನಲ್ಲಿ ಒಟ್ಟಾಗಿ ಅರಸುತನದ ಚರ್ಚೆಯನ್ನು ತಿಳ್ಸಿ ಅವರ ಇತ್ಯರ್ಥವನ್ನು ಮಾಡಿಕೊಳ್ಳಬೇಕೆಂದು ಬಾಚಾಸಾಕೋವು ನಾದಿರಖಾನರಿಗೆ ಸೂಚಿಸಿರುವನು. ನಾದಿರಖಾನರು ಇದಕ್ಕೆ ನಿರಾಕರಿಸಿರುವರು. ಜಿರ್ಗಾ ನಡಿಸಿ, ಇತ್ಯರ್ಥ ಮಾಡಿಕೊಳ್ಳುವ ಮೊದಲು ಬಾಚಾ-ಇ-ಸಾಕೋವು ಸಿಂಹಾಸನವನ್ನು ಬಿಟ್ಟು ತೆರಳಬೇಕೆಂದು ನಾದಿರಖಾನರು ಸೂಚಿಸಿರುವರು.

ಪೇಶಾವರದಲ್ಲಿರುವ ಅಮಾನುಲ್ಲಾಖಾನರ ವ್ಯಾಪಾರಿ ಏಜಂಟನೊಡನೆ ಸುಮಾರು ಹದಿನೆರಡು ಲಕ್ಷದ ವರೆಗೆ ಅಫಘಾನಿ ಹಣ ಇರುವುದಂತೆ. ತಾನು ನಾದಿರಖಾನರಿಗೆ ಸಹಾಯ ಮಾಡುವೆನೆಂದೂ, ಸಹಾಯದಿಂದ ನಾದಿರಖಾನರು ವಿಜಯಿಯಾದರೆ ಸಿಂಹಾಸನಕ್ಕೆ ದುರಾನಿ ಅರಸು ಮನೆತನದವರು ಉಮೇದುವಾರರಾದಾಗ ಅವರಿಗೆ ಸಹಾಯ ಕೊಡುವೆನೆಂದು ಬರಹಮೂಲಕ ಪ್ರತಿಜ್ಞೆಯನ್ನು ಮಾಡಬೇಕೆಂದೂ ಆತನು ಸೂಚಿಸುವನು.

ಲೋಗಾರ ಹತ್ತಿನಲ್ಲಿ ಅರಸನನ್ನು ನಿಶ್ಚಯಿಸುವ ಸಲುವಾಗಿ ಜನರಲ್ ನಾದಿರಖಾನರು ಒಂದು ದೊಡ್ಡ ಜಿರ್ಗಾವನ್ನು ನಡೆಯಿಸುವರು. ಅರಸುತನಕ್ಕೆ ಗಯಾಜುದ್ದಿನ ಗಿಲಜಾಯಿಯೂ ಒಬ್ಬ ಉಮೇದುವಾರನಾಗಿರುವನು.

ಬಾಚಾ-ಇ-ಸಾಕೋವನ್ನು ಕೊಡುವ ವಿಷಯವಾಗಿ ಗಿಲಜಾಯಿ ಸೈನ್ಯದವರು ದ್ವಯಾಭಿಪ್ರಾಯವುಳ್ಳವರಾಗಿರುವರು. ಸೈನ್ಯದ ಸಣ್ಣ ಭಾಗವು ಬಾಚಾ-ಇ-ಸಾಕೋವಿನ ಸಹಾಯಕ್ಕೆ ನಿಶ್ಚಯಿಸಿರುವರು. ಹೆಚ್ಚಿನವರು, ಗಿಲಜಾಯಿಯೇ ಅಧಿಕಾರಿಯಾಗಬೇಕೆಂದೂ, ಅದು ಸಾಧ್ಯವಾಗದೆ ಹೋದರೆ ತಾವು ನಾದಿರಖಾನರಿಗೆ ಸಹಾಯಮಾಡಬೇಕೆಂದೂ ನಿಶ್ಚಯಿಸಿರುವರು.

ಅಮಾನುಲ್ಲಾ ಮತ್ತು ಅವರ ಕಡೆಯ ಜನರು ಇದೇ ತಿಂಗಳ ೨೨ನೆಯ ತಾರೀಕಿನ ದಿನ 'ಎಸ್. ಎಸ್. ಮುಲ್ತಾನ್' ಎಂಬ ಹಡಗವನ್ನು ಹತ್ತಿ ಮುಂಬಾಯಿಯಿಂದ ಇಟಲಿಗೆ ಹೊರಟು ಹೋಗುವರು.

ಕಂದಹಾರಿಗೆ ಕಾಬೂಲಿನಿಂದ ಬಂದ ಒಂದು ವಿಮಾನವು ಆಕ್ರಮಿಸು ನಾದಿರಖಾನ ಮತ್ತು ಹಬೀಬುಲ್ಲಾ ಇವರೊಳಗೆ ರಾಜಿಸಂಧಾನಕ್ಕೆಯಾಗಿರುತ್ತದೆಂದು ಸೂಚಿಸುವ ನೋಟೀಸುಗಳನ್ನು ಹಂಚಿತು.

ಕಾಬೂಲು ಸರಕಾರದವರ ಕೈಕೆಳಗೆ ಜನರಲ್ ಮಹಮೂದ ಸಾಮಿ ಪಾಶಾ ಎಂಬಾತನು ಹೊಸ ಕಮಾಂಡರನಾಗಿರುವನು. ಇದರಿಂದ ಸಯದ್ ಹುಸೇನನು ಸತ್ತನೆಂಬುದು ಸರಿಯೆಂದು ನಂಬಲು ಕಾರಣವಾಗುತ್ತದೆ.

ಕಂದಹಾರಿನಲ್ಲಿ ಆಹಾರ ಸಾಮಗ್ರಿಗಳಿಗೆ ಬರ ಬಿದ್ದಿರುತ್ತದೆ, ಸನ್ನಿವಲ್ಲಿಯೇ ಲೂಟಿಯು ನಡೆಯುತ್ತದೆಂದು ತಿಳಿಯಲ್ಪಟ್ಟಿದೆ.

ಎಸೆಂಬ್ಲಿ ಬೊಂಬು ಕೈದಿಗಳ ವಿಚಾರಣೆ

ಎಸೆಂಬ್ಲಿ ಬೋಂಬು ಕೈದಿಗಳ ವಿಚಾರಣೆಯ ಸಮಯ ಪಂಡಿತ ಮದನಮೋಹನ ಮಾಲವೀಯರವರು ತನ್ನ ಸಾಕ್ಷ್ಯವನ್ನು ಕೊಟ್ಟರು. ಒಂದು ಬೋಂಬು ಸರ್ ಜೋರ್ಜ್ ಶ್ಯುಸ್ಟರ ಸಮೀಪವೇ ಬಿದ್ದುದೆಂದೂ ಸರಕಾರಿ ಮೆಂಬರರೆಲ್ಲ ಹೊರಗೆ ಹೋದಂತೆ ತನಗೆ ನೆನಪಿದೆಯೆಂದೂ, ಎರಡನೆಯ ಬೋಂಬು ಸರಕಾರಿ ಮೆಂಬರರ ಬೆಂಚಿನ ಹಿಂದೆ ಬಿದ್ದುದೆಂದೂ ಹೇಳಿದರು. ಆಗ ತಾನು ಜಮುನಾ ಹೊಂದಿದವರ ಕಡೆಗೇ ಲಕ್ಷ್ಯವನ್ನು ಕೇಂದ್ರೀಕರಿಸಿರುವುದರಿಂದ ಏನಾಯ್ತೆಂದು ಸಾಕ್ಷಿಸಲಾರೆನೆಂದು [illegible] ಹೇಳಿದರು. ಸರಿಯಾಗಿ ಬರುತ್ತಿಲ್ಲವೆಂದೂ, ಬೋಂಬು ಬಿಸಾಡಲ್ಪಟ್ಟ ಮೇಲೆ ಕೆಂಪು ಪತ್ರಗಳೂ ಬಿಸಾಡಲ್ಪಟ್ಟಿದ್ದುವೆಂದೂ ಹೇಳಿದರು. ಕೈದಿಗಳ ಕಡೆಯ ವಕೀಲರು ಕೈದಿಗಳು ತಪ್ಪಿಲ್ಲವೆಂದು ರುಜುಪಡಿಸಲು ಪ್ರಯತ್ನಿಸಿದರು. ಕೊಡಿದ ಎಸೆಂಬ್ಲಿಯಲ್ಲಿ ಹೆಚ್ಚಿನವರು ಕೈದಿಗಳು ಯಾರನ್ನು ಕೊಲ್ಲಲು ಉದ್ದೇಶಿಸಿರಲಿಲ್ಲವೆಂದೂ, ಕೇವಲ ಸ್ವಲ್ಪ ಗೊಂದಲವನ್ನುಂಟುಮಾಡಬೇಕೆಂಬುದೇ ಅವರ ಉದ್ದೇಶವಾಗಿತ್ತೆಂದೂ, ಆದುದರಿಂದ ಅವರು ತಪ್ಪಿತಸ್ಥರಲ್ಲವೆಂದೂ ವಾದಿಸಿದರು. ಜಜಮೆಂಟನ್ನು ಮುಂದರಿಸಿದರಾಯಿತು. ಅಂದಿನ ದಿನ ಕೋರ್ಟನ್ನು ಪ್ರವೇಶಿಸಿದೊಡನೆ ಕೈದಿಗಳಿಬ್ಬರೂ ಮುಂದೆ ಹೋದರು. ಭಗತ್‌ಸಿಂಗನು ಒಂದೆರಡು ಸಲ ಬೆಂಚಿನ ಮೇಲೆ ಆಯಾಸದಿಂದ ಕುಳಿತುಕೊಂಡುದೂ ಉಂಟು.

ಎಸೆಂಬ್ಲಿ ಬೋಂಬು ಕೇಸಿನ ವಿಚಾರಣೆಯಾಗಿ ಸೆಶನ್ ಜಡ್ಜರು ಇಬ್ಬರು ಕೈದಿಗಳಿಗೂ ಜೀವಾವಧಿ ಶಿಕ್ಷೆಯನ್ನು ವಿಧಿಸಿದರು. ಒಡನೆಯೇ ಭಗತಸಿಂಗ ಮತ್ತು ದತ್ತ ಇವರಿಬ್ಬರೂ, 'ಲೋಂಗ್ ಲಿವ್ ರೆವೊಲ್ಯೂಶನ್,' ಎಂದು ಮೊದಲಾಗಿ ಹಿಂದಿನಂತೆಯೇ ಘೋಷವನ್ನು ಮಾಡಿದರು.

ತಾ. ೨೫-೫-೧೯೨೯ರಲ್ಲು ಉಡುಪಿಬೋರ್ಡು ಮೈನ್ ಶಾಲೆಯಲ್ಲಿ ಜರಗಿದ ಉಡುಪಿ ತಾಲೂಕು ಬೋರ್ಡು ಅಧ್ಯಾಪಕರ ಮಹಾ ಸಭೆಯ ಪ್ರೊಸಿಡಿಂಗ್ಸು.

ಈ ದಿನ ಸಾಯಂ ೪ ಘಂ ೧೫ಗೆ ಮಾ. ರಾ. ರಾ. ಎ. ಯಸ್. ಕಾರಟ ಅವರ್ಗಳ್ ಬಿ. ಎ. ಎಲ್. ಟಿ (ಡಿ. ಬೋ ಮೆಂಬರ್) ಇವರ ಅಧ್ಯಕ್ಷತೆಯಲ್ಲಿ ಉಡುಪಿ ತಾಲೂಕುಬೋರ್ಡು ಅಧ್ಯಾಪಕರ ಮಹಾ ಸಭೆಯು ಜರಗಿತು. ೧೫೦ ಮಂದಿ ಉಪಾಧ್ಯಾಯರೂ ಉಪಾಧ್ಯಾಯಿನಿಯರೂ ಹಾಜರಿದ್ದರು. ಸಭಾಕಾರ್ಯಾರಂಭದಲ್ಲಿ ಅಧ್ಯಕ್ಷ ಮಹಾಶಯರು ನಮ್ಮ ಶ್ರೀಮಾನ್ ಮ ರಾ ರಾ ಜ. ಜೋಜ ಚಕ್ರವರ್ತಿಯವರು ಇತ್ತೀಚೆಗೆ ಸಂಪೂರ್ಣ ಕ್ಷೇಮಹೊಂದಿದುದಕ್ಕಾಗಿ ಶ್ರೀದೇವರಿಗೆ ಈ ಮಹಾ ಸಭೆಯ ಕಡೆಯಿಂದ ಕೃತಜ್ಞತಾ ಪೂರ್ವಕದ ಪ್ರಾರ್ಥನೆ ಮಾಡಿ ತಜ್ಞಾಪಕಾರ್ಥವಾಗಿ ಮಹಾ ಸಭೆಯು ಒಂದು ನಿಮಿಷ ಮೌನದಿಂದ ಇದ್ದು ತಟಸ್ಥವಾಗಿತ್ತು. ತರುವಾಯ ಕಾರ್ಯದರ್ಶಿಯವರು ಗತಸಭೆಯ ಪ್ರೊಸಿಡಿಂಗ್ಸನ್ನು ಓದಿದರು. ಅನಂತರ ಶ್ರೀಯುತ ನಾರಾಯಣ ಸ್ವಾಮಿ ಅವರ ಸೂಚನೆಯಂತೆ ಮೊಸ್ಟ ಉಡುಪಿ ತಾಲೂಕು ಬೋರ್ಡಿನವರು ಮೂಲ ವಿದ್ಯಾಭ್ಯಾಸದ ಅಭಿಮಾನದಿಂದಲೂ ಉಪಾಧ್ಯಾಯರ ಮೇಲಿನ ಅನುರಾಗದಿಂದಲೂ ೧ ರೂಪಾಯಿಗೆ ೧೫ ಪೈಯಂತೆ ವಿದ್ಯಾಕರವನ್ನು ಏರಿಸಿ ಬೋರ್ಡಿಗೆ ಇದ್ದ ಹಣದ ಕೊರತೆಯನ್ನು ಪರಿಹರಿಸಿಕೊಂಡು ವಿದ್ಯಾಕಾರ್ಯನಿರ್ವಾಹಕ್ಕೆ ತೊಡಕುಗಳುಂಟಾಗದಂತೆ ಮಾಡಿದ ಹಂಚಿಕೆಗಾಗಿ ಸಂಘದ ಪರವಾಗಿ ಕೃತಜ್ಞತೆಯನ್ನು ಅರ್ಪಿಸಲಾಯಿತು.

ಸಂಘದ ನಿಯಮ ನಿಬಂಧನೆಗಳ ಕುರಿತು ತಾಲೂಕು ಬೋರ್ಡು ಪ್ರೆಸಿಡೆಂಟರಿಂದ ಬರೆದು ಬಂದ ಪತ್ರ ಓದಲಾಯಿತು. ಆಡಳಿತ ಕಮಿಟಿಯವರು ಆ ಕುರಿತು ಸ್ಪಷ್ಟಪಡಿಸಿದ ಅಭಿಪ್ರಾಯವನ್ನೇ ಊರ್ಜಿತವಿಟ್ಟು ಮಂಜೂರುಮಾಡಲಾಯಿತು.

೧. ಇತರ ತಾಲೂಕುಗಳಲ್ಲಿಯೂ ಬೋರ್ಡು ಶಾಲಾ ಅಧ್ಯಾಪಕರ ಸಂಘಗಳು ರಚಿಸಲ್ಪಡುವಂತೆಯೂ ಹಾಗೆಯೇ ಜಿಲ್ಲಾ ಸಂಘವನ್ನು ರಚಿಸಲ್ಪಡುವಂತೆಯೂ ಪತ್ರವ್ಯವಹಾರವನ್ನು ನಡಿಸುವುದಕ್ಕೂ ತತ್ಸಂಬಂಧ ಯಾವತ್ತೂ ಕಾರ್ಯವನ್ನು ಉದ್ಯೋಗಿಸುವುದಕ್ಕೂ ಕಾರ್ಯದರ್ಶಿಯರಿಗೆ ಅಧಿಕಾರಕೊಡುವುದು.

೨ ಈ ಸಂಘವನ್ನು ಮದ್ರಾಸು ಪ್ರಾಂತಿಕ ಸಂಘದೊಡನೆ ಸಂಯೋಗಿಸುವಂತೆ ನಿರ್ಣಯಿಸಲಾಯಿತು.

೩ ಶಾಲಾ ಅಧ್ಯಾಪಕರ ಪರವಾಗಿ ಈ ಸಂಘದ ಕಡೆಯಿಂದ ಒಂದು ಪತ್ರಿಕೆಯನ್ನು ಹೊರಡಿಸುವುದು ಮತ್ತು ಉಡುಪಿ ತಾಲೂಕು ಬೋರ್ಡು ಅಧ್ಯಾಪಕರ ಕುಟುಂಬ ಸಹಾಯಕ ಫಂಡನ್ನು ಏರ್ಪಡಿಸುವುದು ಈ ಕುರಿತು ಆಲೋಚಿಸಿ ತಮ್ಮ ಅಭಿಪ್ರಾಯವನ್ನು ಬರುವ ಮಹಾ ಸಭೆಯ ಮುಂದೆ ಇಡುವಂತೆ ಕೆಳಗಿನವರು ಇರುವ ಒಂದು ಕಮಿಟಿಯನ್ನು ನಿರ್ಮಿಸಲಾಯಿತು.

೧ ಮಾ. ರಾ ರಾ ಎ ಯಸ್. ಕಾರಟ್ ಅವರ್ಗಳ್ ಬಿ. ಎ, ಯಲ್. ಟಿ. ಪ್ರೆಸಿಡೆಂಟ್.
೨ ,, ಎಚ್. ಶೇಷಗಿರಿ ನಾವಡ, ಜತೆಕಾರ್ಯದರ್ಶಿ
೩ ,, ಮಟ್ಟಿ ಗೋವಿಂದ್ರಾವ್ } ಮೆಂ..
೪ ,, ಎಚ್. ದೇವು ಶೆಟ್ಟಿ, ಬಿಜಾಡಿ
೫ ,, ಎಚ್. ಲಕ್ಷ್ಮಣ ಪೈ
೬ ,, ಯಹ. ಎ ನಾರಾಯಣರಾವ್
೭ ಶ್ರೀಮತಿ ಆರ್. ಸ್ವಾಮಿನ್.

೫ ಪ್ರಕೃತ ಈ ಸಂಘದ ಬಗ್ಗೆ ಪ್ರೊವಿಡೆಂಟ್ ಫಂಡು ಪುಸ್ತಕ ಒಂದನ್ನು ಮಾತ್ರ ತರಿಸಬಹುದು ಎಂದು ನಿರ್ಣಯಿಸಲಾಯಿತು.

೬ ಬೋರ್ಡು ಶಾಲಾ ಅಧ್ಯಾಪಕರ ಸಂಬಳದ ದರವನ್ನು ಏರಿಸುವ ಕುರಿತು ಅದರಿಂದ ಮುಂದಿನ ಯಾವ ನಿರ್ಣಯಿಸಿದ ಕೆಳಗೆ ಕಾಣ್ಕ ಯಂತೆ, ಇರುವುದನ್ನು ಅದರೂ, ಮಾನ್ಯ ತಾಲೂಕು ಬೋರ್ಡಿನವರು ಕೊಡಲು ಬಿಡಾರ್ ಚಿತ್ತದಿಂದ ಒಪ್ಪಬೇಕೆಂದು ಈ ಸಭೆಯು ಪ್ರಾರ್ಥಿಸುತ್ತದೆಂದೂ ಆ ಬಗ್ಗೆ ಮನೋರಿಯಲ್ ಕಳುಹಿಸಿ ಮುಂದಿನ ಕಾರ್ಯ ನಿರ್ವಹಿಸುವುದಕ್ಕೂ ಆಡಳಿತ ಮಂಡಲಿಗೆ ಅಧಿಕಾರ ಕೊಟ್ಟಿದೆಂದೂ ನಿರ್ಣಯಿಸಲಾಯಿತು.

೭ ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆಯನ್ನು ೧೦ ರಿಂದ ೧೫ಕ್ಕೆ ಏರಿಸಿ ಈ ಕೆಳಗಿನ ಸದಸ್ಯರನ್ನು ಸರ್ವ ಸಮ್ಮತಿಯಿಂದ ಆರಿಸಲಾಯಿತು.

೧ ಮಾ. ರಾ ರಾ ಮಟ್ಟಿ ಗೋವಿಂದ ರಾವ್ (Joint Secretary)
೨ ,, ಎಚ್. ಲಕ್ಷ್ಮಣ ಪೈ.
೩ ,, ಬಿ. ರಾಮಣ್ಣ ಶೆಟ್ಟಿ.
೪ ,, ಬಿ. ಶ್ರೀನಿವಾಸ ರಾವ್.
೫ ,, ಯು. ಎ. ರಾಮ ರಾವ್.

೮ ಆಡಳಿತ ಮಂಡಲಿಯ ಸಭೆಯು ತಿಂಗಳು ಒಂದಕ್ಕೆ ಆಗುವಂತೆ ನಿರ್ಣಯಿಸಲಾಯಿತು.

ಮದ್ಯಪಾನ ನಿಷೇಧ ಪರಿಷತ್ತು ಮುಂಬಾಯಿಯಲ್ಲಿ ಸರ್ ಪುರುಷೋತ್ತಮದಾಸ ಠಾಕೂರದಾಸರ ಅಧ್ಯಕ್ಷತೆಯಲ್ಲಿ ನಡೆಯಿತು. ಮಿ ನಟರಾಜನವರವರೇ ಸ್ವಾಗತಾಧ್ಯಕ್ಷರಾಗಿದ್ದರು. ಸ್ವಾಗತಾಧ್ಯಕ್ಷರು ತನ್ನ ಸ್ವಾಗತ ಭಾಷಣದಲ್ಲಿ ಮುಂಬಯಿ ಸರಕಾರದಿಂದ ಮದ್ಯಪಾನ ನಿಷೇಧ ಕಾರ್ಯಕ್ಕೆ ಬಹಳ ಸಹಾಯವಿರಬಹುದೆಂದು ನುಡಿದರು. ಏಕೆಂದರೆ ಮುಂಬಯಿ ಪಕ್ಷದವರಲ್ಲಿ ಹೆಚ್ಚಿನವರು ಮದ್ಯಪಾನವನ್ನು ಪೂರ್ಣವಾಗಿ ನಿಷೇಧಿಸಿದವರು. ಹಿಂದೂಸ್ಥಾನದ ಧುರೀಣರೆಲ್ಲರೂ ಮದ್ಯಪಾನ ನಿಷೇಧದ ಸಲುವಾಗಿ ಪ್ರಯತ್ನಿಸುತ್ತಿರಬೇಕೆಂದು ಕೇಳಿಕೊಂಡರು. ಅಧ್ಯಕ್ಷರು ತನ್ನ ಅಧ್ಯಕ್ಷ ಭಾಷಣದಲ್ಲಿ "ಮದ್ಯಪಾನ ನಿಷೇಧಕಾರ್ಯದ ಸಾಫಲ್ಯತೆಗೆ ಹೇರಳ ಹಣವು ಬೇಕಾಗುವದು. ಆದರೆ ಮದ್ಯಪಾನದಿಂದ ಹಿಂದೂಗಳು ಹಾಳಾಗುವದಂತೆಯೂ ಅವಕಾಶವಿರಲಾಗದು. ಸರಕಾರದವರು ಈ ರೀತಿಯಾಗಿ ಮನಃಪೂರ್ವಕವಾಗಿ ಪ್ರಯತ್ನಿಸುತ್ತಿರಬೇಕು." ಎಂದು ವಿವರಿಸಿದರು. ಕಟ್ಟಕಡೆಗೆ ಈ ಕೆಳಗಿನ ಠರಾವು ಪರಿಷತ್ತಿನವರಿಂದ ಅಂಗೀಕರಿಸಲ್ಪಟ್ಟಿತು. "ಮದ್ಯಪಾನ ನಿಷೇಧಕಾರ್ಯದ ಅವಧಿಯ ಕಡೆಗೆ ಸರಕಾರದವರು ಲಕ್ಷ್ಯವಿಟ್ಟು, ಪ್ರಾಂತಿಕ ಸರಕಾರಗಳೊಡನೆಯೂ, ಹಿಂದೀ ರಾಜ್ಯಗಳೊಡನೆಯೂ ಸಹಕರಿಸಿ ಇಂಡಿಯಾ ಸರಕಾರದವರು ನಿಷೇಧ ಚಳವಳವನ್ನು ಕೈಕೊಂಡು ಅದನ್ನು ಮುಂದೆ ಸಾಗಿಸುತ್ತಿರಬೇಕು" ಊರುಗಳಲ್ಲಿ ಮದ್ಯ ತಯಾರಿಸುವಿಕೆಯನ್ನು ಆರಿಸಿ, ಮಾಡಬೇಕೆಂಬ ನಿರ್ಣಯವೂ ಉಂಟಾಯಿತು.

ಲೇಬರ್ ಸರಕಾರವೂ ಹಿಂದೂಸ್ಥಾನವೂ

ಇಂದಿನ ಲೇಬರ್ ಸರಕಾರದ ದೆಸೆಯಿಂದ ಹಿಂದೂಸ್ಥಾನಕ್ಕೆ ಏನು ಹಿತವಾಗುತ್ತದೆ ಎಂದು ನೆನಸಲು ಅವಕಾಶವಿರುತ್ತದೆ. ಸ್ಯಾಮುಯೆಲ್ ಕಮಿಷನಿನ ಸಂಬಂಧದಲ್ಲಿ ಹಿಂದೂಸ್ಥಾನದ ಕೇಳಿಕೆಗಳನ್ನು ತೃಪ್ತಿ ಪಡಿಸಲು ಯೋಚನೆಯು ನಡೆಯುತ್ತಿದೆ. ಸ್ಯಾಮುಯೆಲ್ ಕಮಿಷನರ ರಿಪೋರ್ಟೂ ಇನ್ನೂ ಪ್ರಕಟವಾಗದ ಹಿಂದೂಸ್ಥಾನಕ್ಕೆ ಡೊಮಿನಿಯನ್ ಸ್ಟೇಟಸ್ ಬಗ್ಗೆ ಪ್ರಕಟನೆಯು ತಮ್ಮ ಸಮಿತಿಯೊಂದಿಗೆ ಸೇರಬೇಕಾದದ್ದು ಎಂಬುದು ತಿಳಿದುಬಂದಿದೆ. ಹಿಂದೀಯರ ಸಹಕಾರವು ಸಿಕ್ಕುವ ತನಕ ಇನ್ನಾವುದೂ ಆಗದೆಂದೂ ಮಿ. ವೆಜ್ಜವುಡ್ ಬೆನ್ನರಿಗೆ ತಿಳಿದಿದೆ. ಸೈಮನ್ ಕಮಿಷನಿನ ರಿಪೋರ್ಟಿನ ವಿಚಾರಣೆಯು ನಡೆಯಬೇಕೆಂದೂ ಅದರ ತರುವಾಯ ಮುಗಿದ ಮೇಲೆ ಅದರ ಹಿಂದೂಸ್ಥಾನದ ಕಾನೂನಿನ ಬಗ್ಗೆ ನಿರ್ಧರಿಸಲು ಅನುಕರಿಸುವರು. ಮಿ ಸ್ಪ್ರಿಂಗ್‌ವಾಲ್ ಮೇಕ್‌ಡೊನಾಲ್ಡರು ಹಿಂದೂ ಧುರೀಣ ಪ್ರತಿನಿಧಿಗಳೊಡನೆ ಪರಿಷತ್ತಿನಲ್ಲಿ ಈ ವಿಷಯವಾಗಿ ಅವರು ಸೂಚನೆಯನ್ನು ಮಾಡುವರು. ಕಲಕತ್ತೆಯಲ್ಲಿ ನಡೆದ ಕಾಂಗ್ರೆಸ್ಸಿನಲ್ಲಿ ನಿಶ್ಚಯಿಸಲ್ಪಟ್ಟ ಅವಧಿಯು ಮುಂದುವರಿಸಲ್ಪಡಬೇಕೆಂದು ಅವರ ವಕ್ತವ್ಯವಿದೆ. "ಮ್ಯಾಂಚೆಸ್ಟರ್ ಗಾರ್ಡಿಯನ್" ಎಂಬ ಪತ್ರಿಕೆಯು ಮಿ. ವೆಜ್ಜವುಡ್ ಬೆನ್ನರು ಮಹತ್ವದ ಕಾರ್ಯವನ್ನು ಮಾಡಬೇಕೆಂದೂ, ವಿಚಾರ ಮಾಡಿದ ಮೊದಲ ಹೆಜ್ಜೆಯನ್ನು ಇಡಬೇಕೆಂದೂ, ಹಿಂದೀಯರೊಡನೆ ಸಮಾನವಾಗಿ ಸ್ವತಂತ್ರ ಸರಕಾರದ ಸ್ಥಾಪನೆಗಾಗಿ ಸಹಕರಿಸುವ ಅಭಿಪ್ರಾಯವನ್ನೂ ಸೂಚಿಸಿದೆ. ಹಿಂದೀ ಧುರೀಣರೊಡನೆ ಚರ್ಚಿಸಲು ಉದ್ದೇಶಿಸಿದುದರಿಂದ ಹಿಂದೂಗಳಿಗೆ ಅತಿಶಯ ಸಂತೋಷವಾಗುವುದೆಂದು ಪತ್ರಿಕೆಯು ಅಭಿಪ್ರಾಯಪಡುವದು.

ಮಿ. ವೆಜ್ಜವುಡ್ ಬೆನ್ನರೂ, ಇಂಡಿಯಾ ಕೌನ್ಸಿಲಿನವರೂ, ಇಂಡಿಯನ್ ಸೆಂಟ್ರಲ್ ಕಮಿಟಿಯವರನ್ನು ಕಳೆದ ಗುರುವಾರ ಸ್ವಾಗತಿಸಿದರು. ಹಿಂದೀ ಧುರೀಣರೊಡನೆ ಒಟ್ಟಾಗಿ ಚರ್ಚಿಸಬೇಕೆಂದೂ, ಹಿಂದೂಗಳ ಮನಸ್ಸನ್ನು ನೋಯಿಸಬಾರದೆಂದೂ, ಅವರಿಗೆ ಮಾನಭಂಗವಾಗದಂತೆ ಜಾಗ್ರತೆಯಿಂದ ವರ್ತಿಸಬೇಕೆಂದೂ, ಈಗಿನ ಲೇಬರ ಸರಕಾರದವರ ಆಲೋಚನೆಯಿರಬಹುದೆಂದು, ಮಿ. ಜಿ. ಕೆ. ದೇವಧರರು ಅಭಿಪ್ರಾಯಪಡುವರು. ಈಗಿನ ಸ್ಯಾಮುಯೆಲ್ ಸಮಿತಿಯಿಂದ ಹಿಂದೂಗಳಿಗೂ ಆಂಗ್ಲೇಯರೊಳಗೂ, ನಡುವೆ ಇರುವ ಪ್ರತಿಬಂಧವು ವಿಶಾಲವಾಗಿ ಬೆಳೆದುದರಿಂದ ಈಗಿನ ಸರಕಾರದಿಂದ ಅದು ಸಂಕುಚಿತವಾಗಬಹುದೆಂದು ನೆನಸಲು ಅವಕಾಶವಿದೆಯೆಂದು ಮಿ ದೇವಧರರೇ ಅಭಿಪ್ರಾಯಪಡುವರು.

ಶ್ರೀ ಎ. ಬಿ. ಶೆಟ್ರಿ ಕೌನ್ಸಿಲು ಪ್ರಶ್ನೋತ್ತರಗಳು.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಉತ್ತರ:—ಯಾವ ಡಿಸ್ಟ್ರಿಕ್ಟ್ ಬೋರ್ಡಿನವರೂ ಇಷ್ಟರತನಕ ವ್ಯವಸ್ಥಿತ ಯೋಜನೆಯನ್ನು ಸ್ವೀಕರಿಸಿರುವದಿಲ್ಲ. ಈ ಕುರಿತು ಕಾರ್ಯಕ್ರಮಗಳನ್ನು ಕೇಳಲಾಗಿದೆ. (೨) ಸರಕಾರಕ್ಕೆ ಗೊತ್ತಿಲ್ಲ. ಈ ಸಂಬಂಧವಾಗಿ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರುಗಳನ್ನು ಕೇಳಲಾಗಿದೆ. (೩) ಈ ವಿಷಯಕ್ಕೆ ತಕ್ಕ ವಿಚಾರವನ್ನು ಬಜೆಟಿನಲ್ಲಿ ಮಾಡುವವನ್ನು ಮಟ್ಟಿಗೆ ಅದು ಮುಂದುವರಿದಿರುವುದಿಲ್ಲ.

ಶ್ರೀ ಎ. ಬಿ. ಶೆಟ್ರಿ:—ಗ್ರಾಮ ಸಂಘಟನೆಯ ಯೋಜನೆಯನ್ನು ಕಾರ್ಯಕ್ಕೆ ಹಚ್ಚುವುದಕ್ಕಾಗಿ ಯಾವ ಡಿಸ್ಟ್ರಿಕ್ಟ್ ಬೋರ್ಡಿನವರಾದರೂ ಸರಕಾರದೊಡನೆ ಸಹಾಯ ಕೇಳಿರುವರೇ?

ಮಾನ್ಯ ಡಾಕ್ಟರ್ ಸುಬ್ಬರಾಯನವರು:—ನನ್ನ ತಿಳುವಳಿಕೆ ಮಟ್ಟಿಗೆ ಇಲ್ಲ. ಈ ಕುರಿತು ಇತರ ಮೆಂಬರರು ಹೆಚ್ಚಿನ ಪ್ರಶ್ನೆಗಳನ್ನು ಹಾಕಿದಾಗ ಗ್ರಾಮ ಸಂಘಟನೆಯ ಪ್ರಶ್ನೆಯು ಹೆಚ್ಚು ಮುಂದುವರಿದಾಗ ಆ ಕುರಿತು ಬಜೆಟಿನಲ್ಲಿ ಹಣ ಮಂಜೂರು ಮಾಡುವ ವಿಚಾರ ಮಾಡಲಾಗುವುದೆಂದೂ ಇಷ್ಟರ ವರೆಗೆ ಯಾವ ಡಿಸ್ಟ್ರಿಕ್ಟ್ ಬೋರ್ಡಿನವರೂ ಈ ವಿಷಯಕ್ಕಾಗಿ ಹಣ ಕೇಳಿರುವುದಿಲ್ಲೆಂದೂ ಮಂತ್ರಿಗಳು ಹೇಳಿದರು.

ಎಲ್ಲಾ ಜಾತಿಮತಗಳ ಹುಡುಗರಿಗೆ ಒಂದೇ ಶಾಲೆಯ ಪ್ರೋತ್ಸಾಹ

ಲೋಕಲ್ ಸೆಲ್ಫ್ ಗವರ್ನಮೆಂಟ್ ಮಂತ್ರಿಗಳೊಡನೆ ಪ್ರಶ್ನೆ:—(೧) ಎಲ್ಲಾ ಜಾತಿಮತಗಳ ಹುಡುಗರು ಒಂದೇ ಶಾಲೆಗಳಲ್ಲಿ ಕಲಿಯುವಂತೆ ಪ್ರೋತ್ಸಾಹಿಸುವುದು ಸರಕಾರದ ಈಗಿನ ಧೋರಣೆಯೇ? (೨) ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರ ಇತ್ತೀಚಿನ ಪರಿಷತ್ತಿನಲ್ಲಿ ಶಿಕ್ಷಣ ಮಂತ್ರಿಗಳು ಈ ವಿಷಯದಲ್ಲಿ ಕೊಟ್ಟ ಅಭಿಪ್ರಾಯಗಳು ಈ ಧೋರಣೆಗೆ ಸೂಚಕವಾಗಿರುವವೇ? (೩) ೧೯೨೭ನೇ ಇಸವಿ ಜನವರಿ ತಾ ೧೫ನೇ ನಂಬ್ರ ೧೦೮ನೇ ಸರಕಾರಿ ಹುಕುಂ, ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲು ಕೆಥೋಲಿಕರನ್ನು ಸ್ವಂತ ಶಾಲೆಗಳಿಗೆ ರಿಕೊಗ್ನಿಶನ್ ಮತ್ತು ಗ್ರಾಂಟ್ ಪಡೆಯ ಬಾರದೇಕೆ ಎಂದು ನಿರ್ಣಯಿಸುವುದೇ?

ಉತ್ತರ:—(೧) ಸಾಧ್ಯವಿದ್ದಷ್ಟು ಮಟ್ಟಿಗೆ ಹೌದು. (೨) ರೋಮನ್ ಕೆಥೋಲಿಕರ ಕೆಸೊಲ್ ಲೋ ಪ್ರಕಾರ ರೋಮನ್ ಕೆಥೋಲಿಕ್ ತಂದೆತಾಯಿಗಳು ಕೆಥೋಲಿಕ್ ಶಾಲೆಗಳಿಗೇ ತಮ್ಮ ಮಕ್ಕಳನ್ನು ಕಳುಹಿಸಬೇಕೆಂದೂ ಮತ್ತು ದಕ್ಷಿಣ ಕನ್ನಡ ರೋಮನ್ ಕೆಥೋಲಿಕರಿಗೆ ಹಾದು ಹೋಗುವ ಪ್ರಾಥಮಿಕ ಶಾಲೆಗಳಿಗೆ ಗ್ರಾಂಟ್ ಪಡೆಯಲು ಕಷ್ಟವಾಗುವುದೆಂದೂ ಸರಕಾರವು ಮನದ ಸಿದ್ಧಿವರದಿಂದ ಕೆಲವು ಶರ್ತಗಳ ಮೇರೆಗೆ ಕೆಥೋಲಿಕ್ ಶಾಲೆಗಳಿಗೆ ರಿಕೊಗ್ನಿಶನ್ ಕೊಡಬೇಕೆಂದು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿಗೆ ಸೂಚಿಸಲಾಗಿದೆ.

ಶ್ರೀ ಎ. ಬಿ. ಶೆಟ್ರಿ:—ಈ ಪ್ರಶ್ನೆಗೆ ಉತ್ತರದ ದೃಷ್ಟಿಯಿಂದ ಬೇರೆ ಬೇರೆ ಸಮಾಜಗಳ ಬಾಲಕರು ಒಂದೇ ಶಾಲೆಯಲ್ಲಿ ಕಲಿಯುವಂತೆ ಸರಕಾರವು ಪ್ರೋತ್ಸಾಹಿಸುವುದಾದರೂ ಹೇಗೆ?

ಮಾನ್ಯ ಡಾಕ್ಟರ್ ಸುಬ್ಬರಾಯನವರು:—ರೋಮನ್ ಕೆಥೋಲಿಕರು ಧಾರ್ಮಿಕ ವಿರೋಧವನ್ನು ಮುಂದೆ ಹಾಕಿದರು. ಸರಕಾರವು ಆ ಕುರಿತು ಗಮನಿಸಬೇಕಾಗಿದೆ.

ಶ್ರೀ ಕೆ. ಆರ್. ಕಾರಂತರು:—ಕೆಥೋಲಿಕ್ ಶಾಲೆಯು ಕೆಥೋಲಿಕರ ಮಕ್ಕಳಿಗಾಗಿಯೇ ಆಗಿರುವುದೇ? ಮತ್ತು ಇತರ ಶಾಲೆಗಳಿರುವ ಸ್ಥಳದಲ್ಲಿ ಲೋಕಲ್ ಬೋರ್ಡುಗಳು ಬೇರೆ ಶಾಲೆಗಳನ್ನು ತೆರೆಯುವಂತೆ ನಿರ್ಬಂಧಿಸಲ್ಪಡುವುದೇ?

ಮಾನ್ಯ ಡಾಕ್ಟರ್ ಸುಬ್ಬರಾಯನವರು:—ಇಲ್ಲ. ಕೆಥೋಲಿಕರಿಗಾಗಿಯೇ ಒಂದು ಶಾಲೆ ತೆರೆಯಬೇಕಾದುದನ್ನು ಕೆಥೋಲಿಕರು ಹುಡುಗರನ್ನೆ ಮಾತ್ರ ಹಾಗೆ ಮಾಡಲಾಗುವುದು. ಇಲ್ಲವಾದರೆ ಕೆಥೋಲಿಕರ ಮಕ್ಕಳೂ ಲೋಕಲ್ ಬೋರ್ಡುಗಳು ನಡೆಸುವ ಸರ್ವಸಾಧಾರಣ ಶಾಲೆಗಳಿಗೇ ಹೋಗತಕ್ಕದ್ದು.

ಶ್ರೀ ಕೆ. ಆರ್. ಕಾರಂತರು:—ಒಂದು ಸ್ಥಳದಲ್ಲಿರುವ ಬೋರ್ಡ್ ಶಾಲೆಯನ್ನು ಕೆನೊನ್ ಲೋ ಪ್ರಕಾರ ಆಯಾ ಕೆಥೋಲಿಕರ ಮಕ್ಕಳಿಗಾಗಿಯೇ ಆ ಪಕ್ಷದಲ್ಲಿ ಇತರ ಸ್ಥಳದಲ್ಲಿ ಲೋಕಲ್ ಬೋರ್ಡುಗಳ ಶಾಲೆ ತೆರೆಯುವುದನ್ನು ಅಲ್ಲಿ ಮೊದಲೇ ಇರುವ ಕೆಥೋಲಿಕ್ ಶಾಲೆ ಇರುವುದೆಂಬುದರಿಂದ ವಿರೋಧಿಸಲಾಗುವುದೇ? ಎಂಬುದು ನನ್ನ ಪ್ರಶ್ನೆ.

ಮಾನ್ಯ ಡಾಕ್ಟರ್ ಸುಬ್ಬರಾಯನವರು:—ಇಲ್ಲ. ಕೆಥೋಲಿಕರ ಶಾಲೆ ಸರ್ವಸಾಧಾರಣ ಪ್ರವೇಶವಿಲ್ಲದಿದ್ದರೆ ಅಲ್ಲಿ ಸ್ವಾಭಾವಿಕವಾಗಿ ಇನ್ನೊಂದು ಶಾಲೆಯನ್ನು ತೆರೆಯಲಾಗುವದು.

ಗ್ರಾಮ ಉದ್ಯೋಗಸ್ಥರಿಗೆ ಜಮಾಬಂದಿ ಭತ್ತೆಯನ್ನೀಯುವಿಕೆ.

ರೆವಿನ್ಯೂ ಮೆಂಬರೊಡನೆ ಪ್ರಶ್ನೆ:—(೧) ಕೃಷ್ಣಾ ಪ್ರದೇಶದಲ್ಲಿ ಗ್ರಾಮ ಉದ್ಯೋಗಸ್ಥರಿಗೆ ಜಮಾಬಂದಿ ಭತ್ತೆ ಕೊಡುವುದನ್ನು ನಿಲ್ಲಿಸುವದರಿಂದ ಸರಕಾರಕ್ಕೆ ಪ್ರತಿ ವರ್ಷ ಉಳಿಯುವ ಆದಾಯವೆಷ್ಟು? (೨) ಜಮಾಬಂದಿ ಭತ್ತೆಗಳನ್ನು ಪುನಃ ಕೊಡಬೇಕೆಂದು ಸರಕಾರಕ್ಕೆ ವಿನಂತಿಯು ಮನವಿ ಬಂದಿರುವುದೇ? (೩) ಇನ್ನು ಮುಂದಾದರೂ ಈ ಭತ್ತೆಯನ್ನು ಕೊಡುವ ಆಲೋಚನೆಯು ಸರಕಾರಕ್ಕಿದೆಯೋ?

ಉತ್ತರ:—(೧) ರೂ. ೨,೦೫,೬೦೦. (೨) ಸರಕಾರಕ್ಕೆ ಯಾವ ಮನವಿಯೂ ಬಂದಿರುವುದಿಲ್ಲ. (೩) ಪಟೇಲ ಶ್ಯಾನುಭೋಗರು ಗಳ ಸಂಬಳವನ್ನು ಮೊದಲಿನ್ನಂತೆಯೇ ಮಾಡುವುದರಿಂದ ನಾಕಷ್ಟು ಉಳಿತಾಯವುಂಟಾದರೆ ಸರಕಾರವು ಜಮಾಬಂದಿ ಭತ್ತೆಯನ್ನೀಯುವ ಕುರಿತು ಆಲೋಚಿಸುವುದು.

ಶ್ರೀ ಎ. ಬಿ. ಶೆಟ್ರಿ:—ಪಟೇಲ ಶ್ಯಾನುಭೋಗರ ಸಂಬಳವನ್ನು ಮೊದಲಿನಂತೆಯೇ ಉಂಟಾದ ಅಧಿಕ ಖರ್ಚಿನ ಕುರಿತು ಪರಿಶೀಲಿಸಲಾಗಿದೆಯೋ? ಹಾಗಾದರೆ ಅದರ ಫಲಿತಾಂಶವೇನು?

ಮಾನ್ಯ ಸರ್, ನೋರ್ಮನ್ ಮಾರ್ಜೋರಿಬ್ಯಾಂಕರು:—ಈ ಕುರಿತು ಈಗ ಪರಿಶೀಲನೆ ನಡೆಯುತ್ತಿದೆ. ಪರಿಶೀಲನೆಯು ಇಷ್ಟರ ತನಕ ಮುಗಿದಿರುವುದಿಲ್ಲ.

ಹೊಸದುರ್ಗ ಅಮೃತೇಶ್ವರಂ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದ ವೈದ್ಯ ಶಾಖೆಗಳಲ್ಲಿ ಮುಖ್ಯವಾಗಿ ಸರಕಾರದಿಂ [illegible] ಪ್ರಸಿದ್ಧರಾದ ವೈದ್ಯಶ್ರೀ ವೈದ್ಯರತ್ನ ಪರಮೇಶ್ವರ ಮೂಸರವರು [illegible]

[illegible]

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಂ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

ಶಾಲಾ ಹುಡುಗರಿಗೆ ಬೇಕಾದ

ಗೆರೆ ಹಾಕಿದ ಮತ್ತು ಹಾಕದ ಎಕ್ಸರಸೈಜ ಪುಸ್ತಕಗಳೂ, ಕೋಪಿ ಪುಸ್ತಕಗಳೂ, ಮ್ಯಾಪು ಡ್ರೋಯಿಂಗ್ ಪುಸ್ತಕಗಳೂ, ಡ್ರೋಯಿಂಗ್ ಪುಸ್ತಕಗಳೂ, ಪೆನ್ಸಿಲು ಕಂಪಾಸ್ ಬಾಕ್ಸ, ಶಾಯಿ ಕುಪ್ಪಿ ಮೊದಲಾದ ಸ್ಟೇಶನರಿ ಸಾಮಾನುಗಳೂ ಇವೆ.

ಲೆಜ್ಜರ್, ಜರ್ನಲ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



The C. P. C. Co., Ltd,
MANGALORE.

Batliwala's Preparations Cover All Your Needs.
A NAME THAT MERIT HAS MADE FAMOUS.

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ, ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಜನ್ಯು ಮಿಕ್ಸ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಕ. ರೂ. ೧.
ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೋಲ್ ಆಟ್ ಬಾಮ್ — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೆ ಔಷಧ ಆಣೆ ೧೨.
ಬಾಟ್ಲಿವಾಲರ ಟೈಫಿಯಡ ಮಿಕ್ಸ್ಚರ — ಕಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೀನ ಟೀಕಿಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೀಕಿಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ವಿಕ್ರಯಕ್ಕೆ ದೊರೆಯುತ್ತದೆ. ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
ವಿಜಂಟರು ಬೇಕಾಗಿದ್ದಾರೆ. Sayani Road, P. O. Cadell ad, Bombay. No. 14.

ಬಿ. ಎಸ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ — ತೀರ್ಥಹಳ್ಳಿ — ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಿಗ್ಗೆ ೯ ಘಂಟೆಗೆ ಹೊರಡುತ್ತಾ ಇದ್ದುದು ಸರಿಯಷ್ಟೆ. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. ೧೫—೪—೧೯೩೪ರ ಆರಭ್ಯ ಶಿವಮೊಗ್ಗಾದಿಂದ ಬೆಳಿಗ್ಗೆ ೮ವರೆ ಘಂಟೆಗೆ ಹೊರಡಲು ಏರ್ಪಾಡು ಮಾಡಿದೆ.

ತೀರ್ಥಹಳ್ಳಿ — ಸಾಗರ ರಸ್ತೆ.

ಅನಂತಪುರ — ಸಾಗರಕ್ಕೆ 0—8—0. ತೀರ್ಥಹಳ್ಳಿ — ಸಾಗರಕ್ಕೆ ೨—೮—೦.

ಆರಗ, ಗುಡ್ಡೇಕೊಪ್ಪ, ಕೋಣಂದೂರು, ಹಾದಿಗಲ್, ಹುಂಚದಕಟ್ಟೆ, ರಿಪ್ಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪ್ಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳಗಳ ದೆಸೆಯಿಂದ ಕಳೆದ ಜೂನ್ ತಾ. ೬ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಕು ೬—೧೧—೧೯೩೪ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾ ಭಟ್,
ಮಾಲಿಕ,
ಬಿ. ಎಸ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಅಂಟಿಸಿ ಉತ್ತಮ ತರದ ಗಡಿಯಾರಗಳು, ಪ್ಲೋಕುಗಳೂ, ಕ್ಲೋಕುಗಳೂ, ಟೈಮ್ ಪೀಸುಗಳೂ, ಎಲಿಕ್ಟ್ರಿಕ್ ಮತ್ತು ಪೆಟ್ರೋಮೇಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮಾಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.
ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ವರ್ತಮಾನಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ. — ನಮ್ಮ ವಾಚು ರಿಪೇರಿಯವರುಗಳಿಗೆ ಎರಡು ವರ್ಷಗಳಿಗೂ ಮೇಲ್ಪಟ್ಟ ಅನುಭವ ಇದ್ದುದರಿಂದ ತೃಪ್ತಿಯಾಗಿ ಕೆಲಸ ಮಾಡಿಸುವುದರಿಂದ ಸಾಯಿಸಿದ ಸಮಯವು ದೊರಕುವುದು.

— [illegible] ಸಂದರ್ಭದಲ್ಲಿ [illegible] ಎಂಬ [illegible] ಸ್ವದೇಶೀ ಸೇವೆಗೆ [illegible] ಸ್ವೀಕರಿಸಲಾರನೆಂದೂ, [illegible] ಒಂದು ಪತ್ರ ಬರೆದು ಅವರು [illegible] ಕಳುಹಿಸಿರುವರು.

— ಮುಂಬಾಯಿಯಲ್ಲಿ ಸಿ. ಐ. ಡಿಗಳು ತಮ್ಮ ಸಂಬ್ರಗಳಿಗೆ [illegible] ರೀತಿಯ ಕಳ್ಳರಿಂದ ಕದಿಯಲ್ಪಟ್ಟ ಸಾಮಾನುಗಳನ್ನು ಒಂದು ಭದ್ರವಾದ ಕೋಣೆಯಲ್ಲಿ ಸಂಗ್ರಹಿಸಿಟ್ಟಿದ್ದರು. ಸಿಲ್ಕು ಸೀರೆಗಳೂ, ಆಭರಣಗಳೂ ಇದ್ದುವು. ಅವುಗಳನ್ನು ಯಾರೋ ಕಳ್ಳರು ಬಂದು ಅಪಹರಿಸಿರುವರಂತೆ. ಆ ಭದ್ರವಾದ ಕೋಣೆಯ ಕಿಂಡಿಯ ಚೌಕಟ್ಟು [illegible] ಸಲಿಗೆಗಳು ಎಳೆಯಲ್ಪಟ್ಟಿದ್ದುವು. 'ಮಳೆ ಬರುವ ಸಮಯವನ್ನು ಕಳ್ಳರು ಸಾಧಿಸಿಕೊಂಡರು. ಕೇವಲ ಕೆಲವೇ ಈ ಕಳ್ಳರ ಉದ್ದೇಶವಾಗಿರಲಾರದೆಂದು ನಂಬಲಾಗಿಯದೆ.

— ಮುಂಬಾಯಿ 'ನ್ಯೂಸ್ಪಾರ್ಕ್' ಎಂಬ ವಾರ ಪತ್ರಿಕೆಯ ಸಂಪಾದಕನೂ, ಗಿರಣಿ ಕಾಮಗಾರ ಯೂನಿಯನಿನ ವ್ಯಾಸ್ ಚೇಯರ್ ಮೇನನೂ ಆಗಿರುವ ಬಿ. ಹಚ್ಚಿನ್ ಸನ್ ಎಂಬಾತನು ನಾಗಪುರದಲ್ಲಿ ಕೈದು ಮಾಡಲ್ಪಟ್ಟು ಮೀರತಿಗೆ ಕೊಂಡೊಯ್ಯಲ್ಪಟ್ಟನು. ಮೀರತ್ತಿನಿಂದ ಆತನಿಗೆ ಜಾಮೀನು ದೊರೆತ್ತಿತಂತೆ.

— 'ನ್ಯೂಸ್ಪಾರ್ಕ್' ಪತ್ರಿಕೆಯ ಸಂಪಾದಕನನ್ನು ಕೈದು ಮಾಡಿದ ಮೇಲೆ ಮುಂಬಾಯಿಯ ಪೋಲೀಸರು ಆತನ ಆಫೀಸನ್ನೂ ನಿವಾಸಗೃಹವನ್ನೂ ಎರಡು ತಾಸುಗಳ ವರೆಗೆ ಶೋಧಿಸಿದರು. ಅವರಿಗೆ ಕೆಲವು ಪತ್ರಿಕೆಯ ಪ್ರತಿಗಳೂ, ಬೇರೆಯವರಿಂದ ಛಾಪಿಸಲ್ಪಟ್ಟ 'ಕೊಮ್ಯುನಿಸ್ಟ್' ಎಂಬ ವಿಷಯವಾದ ಒಂದು ಪ್ರಕಟಣೆಯೂ ದೊರೆತಿವೆ.

— ಪಂಡಿತ ಮದನ ಮೋಹನ ಮಾಲವೀಯರು ಕರಾಚಿಗೆ ತಲುಪಿದರು. ಅಲ್ಲಿ ಜನರು ಅವರನ್ನು ಆರು ಕುದುರೆಗಳಿಂದ ಎಳೆಯಲ್ಪಡುವ ಒಂದು ಗಾಡಿಯ ಮೇಲೆ ಕುಳ್ಳಿರಿಸಿ ವಿಶೇಷವಾದ ಮೆರವಣಿಗೆಯನ್ನು ನಡೆಸಿದರು. ರಾಷ್ಟ್ರೀಯ ಧ್ವಜಾರೋಹಣದ ಸಮಾರಂಭವನ್ನು ಮಾಲವೀಯರವರು ಕರಾಚಿಯಲ್ಲಿ ಜರಗಿಸಿದರು.

— ಮಹಾತ್ಮಾಜಿಯವರು ನೈನೀತಾಲದಲ್ಲಿ, ಸುಮಾರು ೩ ಸಾವಿರ ಮಂದಿ ಸ್ತ್ರೀಯರಿದುರು ಖಾದಿಯ ಮಹತ್ವದ ಕುರಿತಾಗಿ ಭಾಷಣವಿತ್ತರು. ಸ್ತ್ರೀಯರು ಅವರಿಗೆ ೭೦೦ ರೂಪಾಯಿಗಳ ಒಂದು ನಿಧಿಯನ್ನು ಸಮರ್ಪಿಸಿದುದು ಮಾತ್ರವಲ್ಲದೆ ಆಭರಣಗಳನ್ನೂ, ಇತರ ನಗದಿ ಹಣವನ್ನೂ ಅರ್ಪಿಸಿದರು.

— ಮುಂಬಾಯಿಯ ಕಾಂಗ್ರೆಸ್ ಕಮಿಟಿಯವರು, ಈಗಣ ಮುಷ್ಕರವು ನ್ಯಾಯರಹಿತವೆಂದೂ, ಮಜೂರ ಧುರೀಣರು ಅದನ್ನು ಮುಂದರಿಸಲು ಬಿಟ್ಟದ್ದು ಅವರ ತಪ್ಪೆಂದೂ, ನೋಟೀಸುಗಳನ್ನು ಪ್ರಕಟಿಸಿರುವರು. ಮುಷ್ಕರಗಾರರೊಂದಿಗೆ ಸಹಾನುಭೂತಿಯು ಸೂಚಿಸಲ್ಪಟ್ಟು ಅವರು ಬೇಗನೇ ಕೆಲಸಕ್ಕೆ ಪ್ರಾರಂಭಮಾಡಬೇಕೆಂದು ನೋಟೀಸಿನಲ್ಲಿರುತ್ತದೆ. ಮುಷ್ಕರದ ಇತ್ಯರ್ಥವನ್ನು ನಡಿಸಲು ಮಹಾತ್ಮಾಜಿಯವರನ್ನಾಗಲಿ, ಪಂಡಿತ ಮೋತಿಲಾಲ ನೆಹರುಗಳವರನ್ನಾಗಲಿ, ಆಮಂತ್ರಿಸಬೇಕೆನ್ನುವರು. ಸರಕಾರಿ ಸಹಾಯವನ್ನು ಪಡೆಯಬೇಕೆಂಬ ಗಿರಣಿ ಅಧಿಕಾರಿಗಳ ಮತವನ್ನು ಖಂಡಿಸುವರು.

— ಕಲಕತ್ತೆಯಲ್ಲಿ ಪೋಲೀಸರು ಆರ್ಯ ಸಮಾಜ ಮಂದಿರವನ್ನೂ, ವಿದ್ಯಾಸಾಗರ ಕಾಲೇಜಿನ ವಿದ್ಯಾರ್ಥಿಯಾದ ತ್ರಿವೇದಿಯೆಂಬಾತನ ಗೃಹವನ್ನೂ ಹುಡುಕಿದರು. ಮಿ. ತ್ರಿವೇದಿಯ ಗೃಹದಲ್ಲಿ ಆತನಿಂದ ಬರೆಯಲ್ಪಟ್ಟ ಹಲವು ಪುಸ್ತಕಗಳು ದೊರೆತುವು. ತ್ರಿವೇದಿಯನ್ನು ಪೋಲೀಸು ಠಾಣೆಗೆ ಕೊಂಡೊಯ್ದು ಅಲ್ಲಿ ಕೆಲವು ವಿಷಯವಾಗಿ ಪ್ರಶ್ನಿಸಲ್ಪಟ್ಟು ಬಿಡುಗಡೆಹೊಂದಿದನು

— ನಭಾ ಮಹಾರಾಣಿಯವರು ಸದ್ಯದಲ್ಲಿಯೇ ಉದಕಮಂಡಕ್ಕೆ ಬಂದು ಎರಡು ತಿಂಗಳುಗಳ ವರೇಗೆ ಅಲ್ಲಿ ಉಳಕೊಳ್ಳಲಿರುವರು.

— ಸಿಂಧೂ ದೇಶದಲ್ಲಿ ಕೆಲವು ಸಮಯಗಳಿಂದ ಆಗಾಗ ಕೊಲೆಗಳು ನಡೆಯುತ್ತಲಿವೆ. ಇತ್ತೀಚೆಗೆ ನರುಮಾಲ್ ಭೂಜುಮಾಲನೆಂಬ ದೊಡ್ಡ ಜವಿನ್ದಾರನೊಬ್ಬನೂ, ಆತನ ಸೇವಕನೊಬ್ಬನೂ, ಹಲವು ಮಾನವರಿಂದ ವಧಿಸಲ್ಪಟ್ಟಿರು. ಮತದ್ವೇಷವೇ ಈ ಕೊಲೆಗಳ ಕಾರಣವಾಗಿರುವುದಂತೆ.

— ಮೀರತಿನ ಒಳಸಂಚಿನ ಮೊಕದ್ದಮೆಯಲ್ಲಿ ಕೈದಿಗಳಾಗಿರುವ ಮಜೂರ ಧುರೀಣರು ಮಿ. ರೀಮ್ಸೆ ಮೆಕ್ಡೊನಾಲ್ಡ ಇವರಿಗೆ, "ಮೀರತಿನ ಮೊಕದ್ದಮೆಯು, ಮೀರತಿನಲ್ಲಿ ವಿಚಾರಿಸಲ್ಪಡದೆ, ದೊಡ್ಡ ಪಟ್ಟಣದಲ್ಲಿ ವಿಚಾರಿಸಲ್ಪಡುವಂತೆ ಪ್ರಯತ್ನಿಸಬೇಕೆ"ಂದು ತಂತಿ ಬಿಟ್ಟಿರುವರು.

— ಅಮಾನುಲ್ಲರವರ ಪತ್ನಿಯವರು ಮುಂಬಾಯಿ ಆಸ್ಪತ್ರೆಯಲ್ಲಿ ಒಂದು ಹೆಣ್ಣು ಶಿಶುವನ್ನು ಪ್ರಸವಿಸಿದ್ದರಷ್ಟೆ. ಹಿಂದೂಸ್ಥಾನದಲ್ಲಿ ಈ ಶಿಶುವು ಜನಿಸಿದುದೆಂಬುದನ್ನು ಸದಾ ಕಾಲವೂ ಸ್ಮರಿಸುವ ಸಲುವಾಗಿ ಅಮಾನುಲ್ಲರವರು ಈ ಶಿಶುವಿಗೆ 'ಹಿಂದಿಯಾ' ಎಂಬ ಹೆಸರನ್ನಿಟ್ಟಿರುವರು.

— ಮೊಹರಮಿನ ಮೆರವಣಿಗೆಯ ಸಮಯ ಕಲಕತ್ತೆಯಲ್ಲಿ ಸ್ವಲ್ಪ ಗೊಂದಲವುಂಟಾಯಿತು. ಗೊಂದಲವುಂಟಾದುದು ಹಿಂದೂಮುಸಲ್ಮಾನರೊಳಗಲ್ಲ. ಎರಡು ಪಕ್ಷದ ಮುಸಲ್ಮಾನರೊಳಗನೇ. ಒಬ್ಬರ ಮೇಲೊಬ್ಬರು ಅಧಿಕಾರವನ್ನು ತೋರಿಸಬೇಕೆಂಬುದೇ ಅವರ ಜಗಳದ ಕಾರಣ. ಜಗಳದ ದೆಸೆಯಿಂದ ಸುಮಾರು ಹತ್ತು ಮಂದಿಗೆ ಗಾಯವಾಯಿತು. ಸಕಾಲದಲ್ಲಿ ಪೋಲೀಸರು ಬಂದು ಮುಟ್ಟಿದುದರಿಂದ ಜಗಳವು ಶಾಂತವಾಯಿತು. ಈ ಸಲುವಾಗಿ ಪೋಲೀಸರು ಹದಿನೆರಡು ಮಂದಿಯನ್ನು ಕೈದುಮಾಡಿದರು.

— ಕಳೆದ ಮೇ ತಿಂಗಳಿನಲ್ಲಿ ಮುಂಬಾಯಿಯಲ್ಲಾದ ಗಲಭೆಯ ಸಮಯ, ಯಾವ ಕಡೆಯಲ್ಲಿಯೂ, ಐವರಿಗಿಂತ ಹೆಚ್ಚು ಮಂದಿಗಳು ಒಟ್ಟುಗೂಡಿ ಚರ್ಚಿಸುತ್ತಿರಬಾರದೆಂದು ಹುಕುಮು ಕೊಡಲ್ಪಟ್ಟಿದ್ದಿತು. ಆ ಹುಕುಮನ್ನು ರದ್ದುಪಡಿಸದೆ ಇನ್ನೊಂದು ಪಕ್ಷಕ್ಕೆ ಮುಂದರಿಸಲಾಗಿತ್ತು. ಈಗ ಆ ಹುಕುಮನ್ನು ಈ ತಿಂಗಳ ಅಖೈರಿಯ ವರೆಗೆ ಮುಂದರಿಸಿಟ್ಟಿರುವರು.

— ಮುಂಬಾಯಿಯ, ಸೆಂಟ್ ಜೋರ್ಜ್ ಆಸ್ಪತ್ರೆಯಲ್ಲಿ ಸೋರಿಯಾ ರಾಣಿಯವರು ಪ್ರಸವಿಸಿದಾಗ ಆಸ್ಪತ್ರೆಯ ನೌಕರರು ತನ್ನ ಸಲುವಾಗಿ ವಿಶೇಷ ಕಷ್ಟಪಟ್ಟುದರ ಬಗ್ಗೆ ಸೋರಿಯಾ ರಾಣಿಯವರು ನೌಕರರಿಗೆ ಹಣವನ್ನೂ, ಇತರ ಅಮೂಲ್ಯವಾದ ರತ್ನಖಚಿತಗಳಾದ ಆಭರಣಗಳನ್ನೂ ಉಚಿತವಾಗಿ ಕೊಟ್ಟಿರುವರು.

— ಮಿ. ಸೊಂಡರ್ಸ್ಸರ ಕೊಲೆಯ ಸಂಬಂಧವಾಗಿ ಲಲಿತ ಮುಖರ್ಜಿ ಎಂಬ ವೈದ್ಯ ಪರೀಕ್ಷೆಗೆ ಕಲಿಯುವ ವಿದ್ಯಾರ್ಥಿಯೊಬ್ಬನು ಅಲಹಾಬಾದದ ಆತನ ಮನೆಯಲ್ಲಿ ಕೈದುಮಾಡಲ್ಪಟ್ಟು ಲಾಹೋರಿಗೆ ತರಲ್ಪಟ್ಟಿರುವನು.

— ಬಂಗಾಳದ ಪ್ರಸಿದ್ಧ ಲೇಖಕನಾದ ಹೇಮೇಂದ್ರ ಪ್ರಸಾದ ಘೋಷರೆಂಬವರು ಒಂದು ವಿಷ್ಣುವಿನ ಪ್ರತಿಮೆಯನ್ನು ಕಂಡುಹಿಡಿದಿರುವರು. ಕಲಕತ್ತೆಯ ಹೊರಭಾಗದಲ್ಲಿ ಅದು ಸಿಕ್ಕಿತಂತೆ. ನಿಂತುಕೊಂಡ ಚತುರ್ಭುಜಾಕೃತಿಯು ಮತ್ತು ಶೃಂಗಾರವಾದ ಕಪ್ಪು ಶಿಲೆಯ ಪ್ರತಿಮೆ. ಇದು ಹದಿನೊಂದನೆಯ ಶತಮಾನದ ಪ್ರತಿಮೆಯೆಂದು ತಿಳಿಯಲ್ಪಟ್ಟಿದೆ.

ದಕ್ಷಿಣ ಕನ್ನಡ.

ಸ್ವೀಕಾರ:— ತುಳುವ ಮಹಾಸಭೆಯ ವಾರ್ಷಿಕ ವಿಮರ್ಶೆ ಹಿಂದಣಿಂದ.

ಮ. ರಾ. ನಗರ ಶ್ರೀನಿವಾಸರಾಯರ ಪ್ರಕಟಣೆಯನ್ನು ಈ ಸಂಚಿಕೆಯ ಪುರವಣಿಗೆಯಾಗಿ ಇಟ್ಟಿರುವೆವು.

ಮಂಗಳೂರು:— ಇದೇ ತಾ. ೨೩ನೇ ಆದಿತ್ಯವಾರ ೨–೩೦ ಘಂಟೆಗೆ ಆರ್ಯ ಸಮಾಜ ಮಂದಿರದಲ್ಲಿ ಸಂಧ್ಯಾ, ಹವನಾದಿಗಳ ತರುವಾಯ ಶ್ರೀಮತಿ ವಸಂತಿ ದೇವಿ (ಮಿಸೆಸ್ ವಿ. ಜ. ಶೈ) ಯವರು ಧರ್ಮೋಪದೇಶವನ್ನು ಮಾಡುವರು. ಸರ್ವರಿಗೂ ಸುಸ್ವಾಗತವಿದೆ.

ಹಿಂದೀ ಭಾಷೆಯನ್ನು ಕಲಿಯಲು ಇಚ್ಛಿಸುವವರು ಶ್ರೀಯುತ ಪಂಡಿತ ಧರ್ಮದೇವಜಿ, ವಿದ್ಯಾವಾಚಸ್ಪತಿಯವರಿಗೆ ತಮ್ಮ ಹೆಸರುಗಳನ್ನು ಕೊಟ್ಟಲ್ಲಿ ಬೇಗನೇ ಹಿಂದೀ ಕ್ಲಾಸು ತೆರೆಯಲಾದೀತು. ಸರ್ವರ ಅನುಕೂಲತೆಗಳನ್ನು ತಿಳಿದು, ಆವಶ್ಯಕತಾನುಸಾರವಾಗಿ ಪಠನ ಸಮಯವೂ ಸ್ಥಳವೂ ಹಿಂದಿನಿಂದ ಸೂಚಿಸಲ್ಪಡುವುದು. ರಾಷ್ಟ್ರ ಭಾಷಾಭಿಮಾನಿಗಳೆಲ್ಲರೂ ತಮ್ಮ ಹೆಸರುಗಳನ್ನು ಬೇಗನೆ ತಿಳಿಸುವರಾಗಿ ಕೇಳುತ್ತೇವೆ.

ಶ್ರೀ ಬಿ. ಶಿವರಾಯರು ಮಂಗಳೂರಿನ ಪ್ರಿನ್ಸಿಪಾಲ್ ಜಡ್ಜರಾಗಿ ನೇಮಕ ಹೊಂದಿರುವರು.

ಕಳೆದ ತಾರೀಕು ೧೪ನೇ ದಿನ ನಡೆದ ಮುನಿಸಿಪಾಲಿಟಿಯ ಸಭೆಯಲ್ಲಿ ಬೋಳಾರಿನಲ್ಲಿ ಆಯುರ್ವೇದಿಕ ಔಷಧಾಲಯ ಒಂದನ್ನು ತೆರೆಯಬೇಕೆಂದು ಮಂಜೂರಾಗಿರುತ್ತದೆ.

ಮದರಾಸ್ ಸರ್ಕಲಿನ ಡಿವಿಜನಲ್ ಟೆಲಿಗ್ರಾಫ್ ಇಂಜನಿಯರರಾದ ಮಿ. ಬಿ. ಫರ್ನಿಯರವರು ಸಬ್ ಡಿವಿಜನಲ್ ಆಫೀಸರ್ ಸ್ಟೈನರವರೊಂದಿಗೆ ಇಲ್ಲಿ ಬಂದಿದ್ದರು. ಇಲ್ಲಿ ಏರ್ಪಡಿಸಲ್ಪಡುತ್ತಿರುವ ಟೆಲಿಫೋನಿನ ಪರೀಕ್ಷೆಗಾಗಿ ಅವರು ಬಂದುದು.

ನಮ್ಮ ಜಿಲ್ಲೆಯವರಾಗಿ ಈಗ ಮುಂಬಾಯಿಯಲ್ಲಿರುವ ಶ್ರೀ ದಿವಾನ ಬಹದೂರ್ ಎ. ಕೆ. ಪೈಯವರ ದ್ವಿತೀಯ ಪುತ್ರಿ ಶ್ರೀಮತಿ ಸುಶೀಲಾ ಬಾಯಿಯವರು ಮುಂಬಾಯಿ ಯುನಿವರ್ಸಿಟಿಯ ಎಮ್. ಎ. ತರಗತಿಯಲ್ಲಿ ಪಾಸಾಗಿರುವರು. ಗೌಡಸಾರಸ್ವತ ಬ್ರಾಹ್ಮಣರಲ್ಲಿ ಸ್ತ್ರೀಯರು ಹೀಗೆ ಉತ್ತೀರ್ಣರಾದುದು ಇದೇ ಮೊದಲು.

ಈ ವರುಷದ ಮೋಹರಮ್ ಹಬ್ಬಕ್ಕೆ ಯಾವತರದ ದ್ವೇಷವೂ ಇಲ್ಲದೆ ಶಾಂತತೆಯಿಂದ ಕೊನೆಗಂಡಿತು.

ಮೈಸೂರಿನ ಪ್ರೊಫೆಸರ್ ಸೇತುರಾವ್, ಇವರು ಸಾಳಿ ಇಲ್ಲಿಯ ಗಣಪತಿ ಹೈಸ್ಕೂಲಿನ ಸಭಾಸದನದಲ್ಲಿ ಜರಗಿಸುವ ಅಭಿನಯಗಳ ಪ್ರದರ್ಶನಗಳ ಪ್ರಕಟನಾ ನೋಟೀಸುಗಳನ್ನು ಈ ಸಂಚಿಕೆಯ ಪುರವಣಿಯಾಗಿ ಕೊಟ್ಟಿರುವೆವು. ಮಹಾತ್ಮಾಗಾಂಧಿ ಮೋತಿಲಾಲನೆಹರು ಮೊದಲಾದ ಮಹಾಪುರುಷರು ಇವರು ಮುಂದೆ ದೊಡ್ಡ ಫಿಲ್ಮ್ ಸ್ಟಾರ್ (Film Star) ಆಗುವರೆಂದು ಅಭಿಪ್ರಾಯ ಪಟ್ಟಿರುವುದರಿಂದ ಮಹಾಜನರು ಈ ಅಪೂರ್ವ ಸಂದರ್ಭವನ್ನು ಕಳಕೊಳ್ಳಲಾಗದೆಂದು ಸೂಚನೆ.

ಉಡುಪಿ:— ಇದೇ ತಾ. ೭ರ ಲಾಗಾಯತು ಮಳೆಯು ಬಹಳ ನಿಧಾನವಾಗಿದ್ದು ಬಿಸಿಲೂ ಸೆಕೆಯೂ ಜಾಸ್ತಿಯಾಗಿದೆ. ಇದೇ ಮಾರ್ಚ ತಿಂಗಳಲ್ಲಿ ಜರಗಿದ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶವಾಗಿ ವಿದ್ಯಾರ್ಥಿಗಳ ಸರ್ಟಿಫಿಕೇಟು ಪುಸ್ತಕಗಳು ಬಂದಿರುತ್ತಾ, ಸ್ಥಳೀಯ ಬೋರ್ಡ ಹೈಸ್ಕೂಲಿನ [illegible] ಮಂದಿಗಳಲ್ಲಿ [illegible] ಮತ್ತು ಕ್ರಿಶ್ಚನ್ ಹೈಸ್ಕೂಲಿನ [illegible]ರಲ್ಲಿ ೨೨ ಮಂದಿ ಪಾಸಾಗಬಹುದಾಗಿ ತಿಳಿದುಬಂದಿದೆ; ಈ ವರ್ಷದ ಮಟ್ಟಿಗೆ ಇಂಗ್ಲಿಷಿನಲ್ಲಿ ಬಹಳೇ ಮಂದಿ ತೇರ್ಗಡೆ ಹೊಂದಿರಲು, ಇಷ್ಟು ಮಂದಿ ಪಾಸಾಗಬಹುದಾದುದು ಸ್ತುತ್ಯವೇ ಸರಿ; ಅದರಲ್ಲೂ ಕ್ರಿಶ್ಚನ್ ಹೈಸ್ಕೂಲಿನ VIನೇ ದರ್ಜೆಯನ್ನು ಇದೇ ಪರೀಕ್ಷೆಗೆ ಕಳುಹಿಸಿದ್ದಲ್ಲಿ ೨೨ ಮಂದಿ ತೇರ್ಗಡೆಹೊಂದಿರುವುದು ವಿಶೇಷ. ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ಇಲ್ಲಿನ "ಖಾದಿನಿಲಯ"ದ ಮೂಲಕವಾಗಿ ಸುಮಾರು ರೂ. ೧೪೦೦ ರ ಖಾದಿಯು ಮಾರಾಟವಾಗಿರುವುದೆಂದು ತಿಳಿಯಬರುತ್ತದೆ. ಖಾದಿಯು ಬೇಕಾದಂತೆ ಒದಗಿಸಿಕೊಳ್ಳಲಾಗುತ್ತಿದ್ದರೆ ಮತ್ತಷ್ಟು ಮಾರಾಟವಾಗುತ್ತಿತ್ತು.

ಈ ಊರು ಬಹಳ ದೊಡ್ಡದಾಗಿ ಮಂಗಳೂರಿಗೆ ಎರಡನೇ ಪಟ್ಟಣವೆನ್ನಿಸಿಕೊಳ್ಳುತ್ತದೆ. ಇಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಅನೇಕ ಮಂದಿ ಹುಡುಗಿಯರು ಇರುವರು. ಇಲ್ಲಿ ಹುಡುಗರಿಗಾಗಿ ಎರಡು ಹೈಸ್ಕೂಲುಗಳು ಇವೆ. ಆದರೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಯಾವ ತರದ ಅನುಕೂಲತೆಯೂ ಇರುವುದಿಲ್ಲ. ಪ್ರಾಯಭರಿತರಾದ ಹುಡುಗಿಯರು, ಹುಡುಗರೊಡನೆ ಕಲಿಯುವುದಕ್ಕೆ ಅಂಜುತ್ತಾರೆ. ಮಂಗಳೂರಿಗೆ ಬಂದು ಕಲಿಯುವದಕ್ಕೆ ಹೇರಳ ಹಣವು ಬೇಕಾಗುವುದು. ಆದುದರಿಂದ ಈಗ ಉಡುಪಿಯಲ್ಲಿರುವ ಹುಡುಗಿಯರ ಹಾಯರ್ ಎಲಿಮೆಂಟ್ರಿ ಶಾಲೆಯನ್ನು ತೆಗೆದು ಹೈಸ್ಕೂಲನ್ನು ಮಾಡಿದರೆ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕಿನ ಹೆಣ್ಣು ಮಕ್ಕಳಿಗೆ ಬಹಳ ಸಹಾಯವಾದಂತಾಗುವುದರಲ್ಲಿ ಸಂದೇಹವಿಲ್ಲ.

ಮೂಲ್ಕಿ:— ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ಸಂಘದ ಪಾಲ್ಗನೇ ಸಭೆಯು ಮ. ರಾ. ರಾ. ಕೆ. ನರಹರಿ ಶಾಸ್ತ್ರಿ ಅವರ್ಗಳವರ ಅಧ್ಯಕ್ಷತೆಯಲ್ಲಿ ಇದೇ ಕಳೆದ ತಾರೀಕು [illegible] ಶನಿವಾರ ಅಪರಾಹ್ನ [illegible] ಶಾಲೆಯಲ್ಲಿ ನೆರೆಯಿತು. ಅಧ್ಯಕ್ಷರ ಚುನಾವಣೆ, ದೇವತಾಪ್ರಾರ್ಥನೆ, ಇತ್ಯಾದಿ ನಡೆದ ಬಳಿಕ "ಹಳ್ಳಿವಾಸ ಮತ್ತು ಪಟ್ಟಣವಾಸ"ಗಳ ಕುರಿತು ಮೆಂಬರರಲ್ಲಿ ಯೋಗ್ಯ ಚರ್ಚೆನಡೆಯಿತು. ಇದಾದ ಬಳಿಕ ಕೂಡಿದ ಮಹನೀಯರ ಪೈಕಿ ಮ. ರಾ. ರಾ. ಬಿ. ಭೋಜರಾವ್ ಅವರ್ಗಳವರು ಚಲೋದಾದ ಒಂದೆರಡು ಮಾತುಗಳಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆ ಮೇಲೆ ಮುಂದಣ ಸಭೆಯನ್ನು ಜರಗಿಸುವ ದಿವಸ, ವಿಷಯ ಇತ್ಯಾದಿಗಳ ನಿರ್ಣಯವಾದ ಬಳಿಕ ಅಧ್ಯಕ್ಷ ಮಹಾಶಯರ ಸುರಸವಾದ ಭಾಷಣವು ನಡೆದು ಉಪಕಾರ ಸ್ಮರಣೆ, ರಾಜಗೀತ ಇತ್ಯಾದಿಗಳು ಆದ ನಂತರ ಅಂದಿನ ಸಭೆಯು ಅಂತ್ಯಗೊಂಡಿತು.

ಇಲ್ಲಿಯ ಯೂನಿಯನ್ ಕ್ಲಬ್ಬಿನ ಹದಿನೈದನೇ ವರ್ಷವರ್ಧಂತ್ಯುತ್ಸವವೂ, "ದಿವಂಗತ ಡಾಕ್ಟರ್ ಬೋಳ ಶ್ಯಾಮರಾಯರ" ಜನ್ಮದಿನಾಚರಣೆ ಸಮಾರಂಭವೂ, ಅತೀ ವಿಜೃಂಭಣೆಯಿಂದ ಕಳೆದ ತಾ. ೧೬–೬–೨೯ನೇ ಆದಿತ್ಯವಾರ ಅಪರಾಹ್ನ ಘಂಟೆ ೪ಕ್ಕೆ ಜರಗಿತು. ಅಂದು ಮ. ರಾ. ರಾ. ಕೆ. ಆರ್. ಕಾರಂತ ಅವರ್ಗಳ್ ಬಿ. ಎ. ಯಲ್. ಯಲ್. ಬಿ. ಯಂ. ಯಲ್. ಸಿ. ಇವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಸಭಾಸದನವು ಚಿತ್ರವಿಚಿತ್ರಗಳಿಂದ ಮನೋಹರವಾಗಿ ಕಂಗೊಳಿಸುತ್ತಿದ್ದಿತು. ಸೂಚೀಪತ್ರದಲ್ಲಿ ಕಾಣಿಸಿದಂತೆ ಮೊದಲನೆದಾಗಿ ರಾ ಯಚ್. ಟಿ. ಶ್ರೀಧರರಾಯರು "ದಿವಂಗತ ಡಾಕ್ಟರ್ ಬೋಳ ಶಾಮರಾಯರ" ಜನ್ಮಚರಿತ್ರೆಯನ್ನು ಓದಿ ಹೇಳಲು, ರಾ| ಕೆ. ಯು. ಪೈ. ಬಿ. ಎ. ರವರು ಸದ್ರಿ ಡಾಕ್ಟರರಲ್ಲಿ ಅಡಕವಾಗಿದ್ದ ಅಮೂಲ್ಯ ಉದಾರಬುದ್ಧಿಯನ್ನು ಕುರಿತು ಸುರಸವಾಗಿ ವಿವರಿಸಿ ಹೇಳಿದರು. ನಂತರ ರಾ. ಕೆ. ಮೊಮತಿಪ್ಪ, (Forest Range Officer on leave) ಸಂಸ್ಥೆಯ ಸರಾಗವಾದ ಅಭಿವೃದ್ಧಿಯನ್ನು ಸ್ವೀಕರಿಸಿ, ಈ ಬಗೆಯ ಸುಸ್ಥಿತಿಗೆ ಸಂಸ್ಥೆಯ ಚಾಲಕರನ್ನು ಕೊಂಡಾಡಿ, ಸಂಸ್ಥೆಗೆ ಅಭ್ಯುದಯವನ್ನು ಬಯಸಿ ಅಭಿನಂದನವನ್ನು ಸೂಚಿಸಿದರು. ಇದಾಗಲು ಕ್ಲಬ್ಬಿನ ಗೌರವ ಕಾರ್ಯದರ್ಶಿ ರಾ| ಭೋಜರಾಯರವರು ಇದೇ ಕಳೆದ ಮೇ ತಾ. ೩೧ಕ್ಕೆ ಅಂತ್ಯವಾಗುವ ವಾರ್ಷಿಕವರದಿಯನ್ನು ಓದಿ ಸಭೆಯ ಮುಂದಿಡಲು, ಇದು ನಿರಾಕ್ಷೇಪಣೀಯವಾಗಿ ಅಂಗೀಕರಿಸಲಾಯಿತು. ಅಂದಿನ ಸಮಾರಂಭಕ್ಕೆ ಜಯವನ್ನು ಕೋರಿಬಂದ ಸ್ವಸ್ತಿವಾಚನಾಪತ್ರಗಳನ್ನು ಓದಿಹೇಳಲಾಯಿತು. ಅನಂತರ ಹೊಸ ವರ್ಷದ ಆಡಳಿತ ಸಭೆ, ಕಾರ್ಯಕಾರಿ ಮಂಡಲ ಇತ್ಯಾದಿಗಳ ಚುನಾವಣೆಯು ನಡೆಯಲು, ಸನ್ಮಾನ್ಯ ಅಧ್ಯಕ್ಷರು ಸಂಸ್ಥೆಯ ವಿವಿಧ ಕಾರ್ಯಕಲಾಪಗಳ ಕುರಿತು ಪ್ರಶಂಸಿಸಿ, ಸಂಸ್ಥೆಯ ಮುಂದಿನ ಅಭ್ಯುದಯಕ್ಕೆ ಅನೇಕ ಹಿತಸೂಚನೆಗಳನ್ನು ಕೊಟ್ಟು, ತಮ್ಮ ಸ್ವಾರಸ್ಯವಾದ ಭಾಷಣವನ್ನು ಅಂತ್ಯಪಡಿಸಿ, ಸಭಾಕಾರ್ಯವನ್ನು ವಿಸರ್ಜಿಸಿದರು. ರಾ| ಕೆ. ನರಹರಿ ಶಾಸ್ತ್ರಿಗಳು ಮಾನನೀಯ ಅಧ್ಯಕ್ಷರ ಕೊರಳಿಗೆ ಹೂವಿನ ಹಾರಹಾಕಿ ಸತ್ಕರಿಸಿದರು. ಕಡೆಗೆ ಕ್ಲಬ್ಬಿನ ಗೌರವ ಕಾರ್ಯದರ್ಶಿಯವರು ಅಧ್ಯಕ್ಷ ಮಹಾಶಯರಿಗೂ, ಕೂಡಿದ ಸಭಿಕರಿಗೂ, ಸಂಸ್ಥೆಯ ಉತ್ಕರ್ಷತೆಗೆ ಸಹಾಯಮಾಡಿದ ಎಲ್ಲಾ ಮಹನೀಯರಿಗೂ ಧನ್ಯವಾದಗಳನ್ನು ಅರ್ಪಿಸಲು, ಕೂಡಿಬಂದ ಎಲ್ಲಾ ಅತಿಥಿ ಅಭ್ಯಾಗತರನ್ನು ಫಲಾಹಾರ ತಾಂಬೂಲಾದಿ ಉಪಚಾರಗಳಿಂದ ಸತ್ಕರಿಸಿಯಾದ ಮೇಲೆ ಅಂದಿನ ಸಂತೋಷ-ಸಮಾರಂಭವು ಕೊನೆಗೊಂಡಿತು.

ತೋಕೂರು ಜೋಗಟ್ಟೆ:— ತೋಕೂರು, ಬಾಳ, ಕಲವಾರು, ಕೆಂಜಾರು, ಈ ಗ್ರಾಮಗಳಿಗೆ ಕೇಂದ್ರಸ್ಥಾನವಾಗಿರುವ ಜೋಗಟ್ಟೆ ಎಂಬಲ್ಲಿ ಅವಿದ್ಯಾವಂತರ ಮಕ್ಕಳ ಬಗ್ಗೆ ಲೇಬರ್ ಡಿಪಾರ್ಟ್‌ಮೆಂಟಿನಿಂದ ಒಂದು ಶಾಲೆಯನ್ನು ಇದೇ ತಿಂಗಳ ತಾ. ೧೭ರಲ್ಲಿ ತೆರೆದಿರುತ್ತದೆ. ಶಾಲೆ ನಡೆಯುವದಕ್ಕೋಸ್ಕರ ಹಂಚು ಹಾಕಿದ ಕಟ್ಟೋಣವನ್ನು ರಾಜೇಶ್ರೀ ಸಾಹುಕಾರ್ ಜೋಗಟ್ಟೆ ಅಲಿಬ್ಯಾರಿಗಳವರು ಉಚಿತ ಮನಸ್ಸಿನಿಂದ ಬಿಟ್ಟುಕೊಟ್ಟಿರುತ್ತಾರೆ. ಈ ಶಾಲಾ ಕಟ್ಟಡದಲ್ಲಿ ಈಗ ಸುಮಾರು ೨೫ ಮಕ್ಕಳ ವಿದ್ಯಾಭ್ಯಾಸವು ಒಬ್ಬ ಅಧ್ಯಾಪಕರಿಂದ ನಡಿಸಲ್ಪಡುತ್ತದೆ.

ಬಂಟ್ವಾಳ:— ಇಲ್ಲಿ ಬಂಟವಾಳ ಬೋರ್ಡ್ ಹುಡುಗರ ಶಾಲೆಯಲ್ಲಿ ಜೂನ್ ತಿಂಗಳ ತಾ. ೮ಕ್ಕೆ ಬಂಟ್ವಾಳ ಬೋರ್ಡು ಶಾಲಾ ಉಪಾಧ್ಯಾಯರಾದ ಮ. ರಾ. ಕೊರಗ ಮೆಂಡನರ ಅಧ್ಯಕ್ಷತೆಯಲ್ಲಿ ಬಂಟವಾಳ ಸೆಂಟರಿನ ಉಪಾಧ್ಯಾಯರ ಸಭೆ ಜರಗಿತು. ದೇವರ ಪ್ರಾರ್ಥನೆ ಆದೊಡನೆ ಕಳೆದ ಸಾರಿ ಮೀಟಿಂಗಿನ ವರದಿ ಅಸಿಸ್ಟೆಂಟ್ ಸೆಕ್ರೆಟರಿ ಎನ್. ವಾಸುದೇವ ರಾಯರು ಓದಿದರು. ನಂತರ ಗೂಡಿನ ಬಳಿ ಬೋರ್ಡು ಶಾಲೆಯ ಅಸಿಸ್ಟೆಂಟ್ ಮಾಸ್ತರ್ ಕೆ. ಕೇಶವಯ್ಯನವರು ೩ನೇ ದರ್ಜೆ ಮಕ್ಕಳಿಗೆ ಲೇಖನದ ಚಿನ್ಹೆ ಎಂಬ ಪಾಠಕೊಟ್ಟರು. ನಂತರ ಸಂಘದ ಸೆಕ್ರೆಟರಿಯವರಾದ ರಾ. ಎಮ್. ಜಿ. ಬಗಳಿರವರು ಮದ್ರಾಸು ಪ್ರಾವಿನ್ಸಿಯಲ್ ಎಲಿಮೆಂಟರಿ ಸಂಘದ ಮೀಟಿಂಗಿನ ವರದಿಯನ್ನು ಸಂಕ್ಷೇಪವಾಗಿ ಓದಿಹೇಳಿದರು. ಬೇರೆ ಬೇರೆ ಸರ್ಕಲಾರುಗಳನ್ನು ಓದಿಹೇಳಿದರು. ಈಗ ನಡೆಯುವ ಎಮಲ್ಗಮೇಶನ್ ಕೋಎಜ್ಯುಕೇಶನಿನ ವಿಷಯ ಸ್ವಲ್ಪ ಮಟ್ಟಿಗೆ ಪ್ರಸ್ತಾಪಿಸಿ ಚರ್ಚಿಸಲಾಯಿತು. ಬರುವ ಮೀಟಿಂಗು ಇದೇ ಬೋರ್ಡು ಶಾಲೆಯಲ್ಲಿ ಜುಲಾಯಿ ತಾ. ೧೩ಕ್ಕೆ ಎಂದು ನಿಶ್ಚಯಿಸಲಾಯಿತು. ಮುಂದಿನ ಮೀಟಿಂಗಿಗೆ ಜರಗತಕ್ಕ ಪಾಠಗಳ ವಿಷಯ ನಿಶ್ಚಯಿಸಿ ಪ್ರೆಸಿಡೆಂಟರವರ ಸುರಸ ಭಾಷಣವಾಯಿತು. ಸಭಾ ಸತ್ಕಾರ ಯಥಾಪ್ರಕಾರವಾಗಿದ್ದು ನಂತರ ತಿರಿಗಿ ನಮ್ಮ ಮಹಾರಾಜರಿಗುಂಟಾದ ದೇಹಾಲಸ್ಯದ ವಿಷಯದಲ್ಲಿ ಗುಣವಾಗಲೆಂದು ಭಗವಂತನನ್ನು ಪ್ರಾರ್ಥಿಸಿ ರಾಜಗೀತ ಹಾಡಿ ಸಭೆಮುಕ್ತಾಯವಾಯಿತು.

ಕೇದಿಗೆ:— ಇಲ್ಲಿ ಕೆಲವು ವರ್ಷಗಳ ಮೊದಲು ವೆಗ್ಗದಿಂದ ಕೆಲವು ಮೈಲು ದೂರ ದೇವಸ್ಥಾನಕ್ಕೆ ರಾಜಮಾರ್ಗ ಕಡಿಸಿ ಪ್ರಖ್ಯಾತರಾದ ಕೊಂಡ ಕೆ. ಶಿವರಾಮರವರು ಅವರ ಗ್ರಾಮದ ಕೆಲವು ತೋಟಗಳಿಗೆ ಸುಮಾರು ೧೫೦ ಫೂಟ್ ಉದ್ದದ ಶಿಲೆಕಲ್ಲಿನ ಪಾಪುಗಳನ್ನು ಸಾವಿರಾರು ರೂಪಾಯಿ ಖರ್ಚುಮಾಡಿ ಹಾಕಿಸಿದರು. ಇವರಂತೆ ಬಂದೊಟ್ಟು ವೆಂಗುರನವರು ಕೂಡಾ ಪ್ರಖ್ಯಾತರಾಗಿ ಕೊಂಡಿದ್ದಾರೆ.

[illegible]

[illegible] Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

[illegible] Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) [illegible] ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ [illegible] ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರ 10-30ಕ್ಕೆ ವೈಸರಾಯ ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಸುತ್ತ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕಣ್ಣನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಿನ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ವೈಸರಾಯ ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ [illegible] ನಿರಾತಂಕವಾಗಿ ಸೇರಿ ಚಿಕ್ಕಮಗಳೂರಲ್ಲಿ ಸಾಯಂಕಾಲ 4 ಘಂಟೆಗೆ ಮೂಡಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ [illegible] ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು [illegible] ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಾಪುರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ. ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೆಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ವರ್ತಮಾನಕ್ಕೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಪ್ಯಾರಜಾನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪ್ರಮುಖ ಸ್ಥಳಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಕ್ಕೆ ಉಡುಪಿಗೆ [illegible] ಮಾರ್ಗವಾಗಿಯೂ [illegible] ಮಾರ್ಗವಾಗಿಯೂ [illegible] ಒಂದೇ ತಿಕೀಟಿನಿಂದ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಉಡುಪಿಗೆ ತಲಪಿರಿ.

ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಐದೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.
'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.
ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.
ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವದಕ್ಕೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.
ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.
ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗೆಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.
ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವದು.

Secretary,
The Canara Public Conveyance Co., Ltd., Mangalore S. K.

ಮಲೇರಿಯಾನ [illegible]

ಯುವಕ ವಿದ್ಯಾರ್ಥಿಯ ಲಕ್ಷ್ಯಕ್ಕೆ ತಕ್ಕೊಳ್ಳುವಂಥದೇ

ದೇಹದ ಆರೋಗ್ಯವೂ ಮೆದುಳಿನ ಬಲವೂ ಇದ್ದ ಯುವಕರಿಗೆ ವಿದ್ಯಾಭ್ಯಾಸವು ಬಹು ಸುಲಭಕರವಾಗಿರುವದು.

ಆದರೆ ದೇಹದ ಆರೋಗ್ಯವು ಕೆಟ್ಟು ಹೋದಲ್ಲಿ ಮೆದುಳ ಬಲವು ಕುಂದಿರುವದು ಸಹಜವೇ. ಅಂಥಾ ಯುವಕರಿಗೆ ವಿದ್ಯಾಭ್ಯಾಸವು ಅತೀ ಕಷ್ಟಕರವಾಗಿದೆ. ಇಂಥಾ ಯುವಕನು ತನ್ನ ವಿದ್ಯಾಭ್ಯಾಸದಲ್ಲಿ ತೇರ್ಗಡೆಯಾಗಬೇಕಾದರೆ, ದೇಹವು ಆರೋಗ್ಯವುಳ್ಳದ್ದಾಗಿಯೂ ಮೆದುಳು ಶಕ್ತಿ ವಂತವಾಗಿಯೂ ಇರಬೇಕು. ಕಂಪೌಂಡು ಸಿರಪ್ ಸಾಲಿಸಿವನ ಎಂಬ ಅದ್ಭುತವು ಯುವಕನ ಆರೋಗ್ಯವನ್ನು ಕಾಪಾಡುವದಕ್ಕೂ ಮೆದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತೀ ಗುಣಕಾರಿಯಾಗಿದೆ.

ಕ್ರಯ 8 ಔನ್ಸಿಗೆ ರೂ. 3—8—0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳಿವೆ.)

ಮೆದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅಹೋ ರಾತ್ರಿ ತಲೆಮಂದೆ ಬಡಕೊಂಡು ಪ್ರಯಾಸದಿಂದ ಓದುವ ಯುವಕನ ತಲೆ ಮೆದುಳು ಬಹು ಬಿಸಿಯಾಗಿ ತಲೆ ಸಿಡಿತ, ಕಣ್ಣು ನೋವು, ದೃಷ್ಟಿಮಾಂದ್ಯ ಕಿವಿ, ಮೂಗು, ಹಲ್ಲುಗಳ ವಿವಿಧ ರೋಗಗಳು ಹುಟ್ಟುವವು. ಈ ಅವಸ್ತು ರೋಗಗಳು ಪರಿಹಾರವಾಗುವಂತೆಯೂ ಅಥವಾ ಅಂಥಾ ಅವಸ್ತು ರೋಗಗಳು ಹುಟ್ಟದಂತೆಯೂ ಅದ್ಭುತಪ್ರದ ಪಿತ್ತ ಶಮನ ತೈಲದ ಉಪಯೋಗವು ಬಲು ಗುಣಕಾರಿಯಾಗಿದೆ. ಬಹಳ ಹೊತ್ತು ಓದುವ [ಅಥವಾ ನಿದ್ದೆ ಕೆಡುವ ಯುವಕನು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಾಕಿಕೊಳ್ಳುವದರಿಂದಲೇ ತಲೆ ಮೆದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವದು.

ಕ್ಷಿಪ್ರ ಕಾಲದಲ್ಲಿ ಯುಕ್ತ ರೀತಿ ಅನುಸರಿಸುವದು, ಚಾಣ ಯುವಕನ ಬುದ್ಧಿವಂತಿಕೆಯಾಗಿದೆ.

ಕ್ರಯ 8 ಔನ್ಸಿಗೆ ರೂ. 3—12—0.

ವಿಶೇಷ ಮಾಹಿತಿಗೂ, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ ಈ ನಾರು ಟಿಕ್ಕು ಲವಣಗಳ ಮತ್ತು ಹೊಮಿಯೊಪತಿ ಮದ್ದುಗಳಿಗೂ ನಮೂನೆ ವಾರು ಪಟ್ಟಿ ಚಿಕ್ಕಗಳಿಗೂ ನಮ್ಮ ದೊಡ್ಡ ಕೆಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಲೇರಿಯಾನ ಕಂಪೆನಿ,
ಮಂಗಳೂರು.

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಿಲ್ಲಾ, ಪೇರಳೆ, ಕಿತ್ತಳೆ, ದ್ರಾಕ್ಷಿ, ಅಂಜೂರ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್‌ಸ್ಟ್ರೀಟ್ ಸೋಮು, ಯಾಜಿಯವರಲ್ಲಿ ದೊರೆಯುವವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ಬಿಜೈ ಗಾರ್ಡನ್ಸ್, ಕಾಪು ಮೇಳ, 131028	C/o	ಕೆ. ವಾಮನ ಶೆಣೈ, ಶಾರದಾ ಔಷಧಶಾಲೆ, ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.

ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಅತ್ಯುತ್ತಮವಾದ ಸೌಕರ್ಯಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು.

2 ಜನಪ್ರಿಯತರೂ, ಪ್ರತಿಷ್ಠಿತರೂ ಆದ ಡೈರೆಕ್ಟರರು.

3 ಹುಂಬಾ ಅನುಭವದ ವ್ಯವಸ್ಥಾಪಕ, ವಿಶ್ವಾಸಯುಕ್ತ ಮತ್ತು ಸೌಹಾರ್ದದ ಆಡಳಿತ,

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಕರಾರುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ತ ಮತ್ತು ಪಂಡಿತ ಏಜಂಟರುಗಳು ಬೇಕಾಗಿರುವರು.

ಪ್ರಾಸ್ಪೆಕ್ಟಸಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶೀನಾಥ ಭಟ್ಟ, ಸ್ಪೆಷಿಯಲ್ ಏಜಂಟ್, ಪಕ್ಷಿಕೆರೆ ಗ್ರಾಮ, [illegible] ದ. ಕ.	ಅಥವಾ	ಪಿ. ಅಭಯಶಂಕರ ದೇಶಪಾಂಡೆ ಮತ್ತು ಕಂಪೆನಿ, ಮೆನೇಜಿಂಗ್ ಏಜಂಟ್ಸ್.

ಚರಕವನ್ನು ಪುನಃ ಕಂಡುಹಿಡಿದುದು.

ಅನೇಕ ಧಾರ್ಮಿಕ ಚರಕಾ ಸಂಘದ ಕಾರ್ಯಗಳನ್ನು ವಿವೇಚಿಸುತ್ತಿದ್ದ ಒಬ್ಬ ಸ್ನೇಹಿತನು ತಮಿಳುನಾಡಿನ ಉತ್ತುಕುಳಿಯಲ್ಲಿನ ಖಾದಿ ಕೇಂದ್ರವನ್ನು ಪರಿಶೋಧಿಸಿ ಹೇಳುವುದೇನೆಂದರೆ— “ಉತ್ತುಕುಳಿಯು ಖಾದಿ ಉತ್ಪನ್ನಕ್ಕೆ ಭಾರಿಯ ಸ್ಥಳವಾಗಿದೆ; ಕೈನೂಲುವುದು ಮತ್ತು ನೇಯುವುದು ಇಲ್ಲಿ ಬಹಳವಾಗಿದೆ. ಇಲ್ಲಿ ಸುಮಾರು ೧೦೦೦ ಮಂದಿ ನೂಲುವವರಿದ್ದಾರೆ; ನೆರೆಕರೆಯ ಹಳ್ಳಿಗಳಲ್ಲೆಲ್ಲಾ ಸಂಚಾರವಾಡಿ ಅವರಲ್ಲನೇಕರನ್ನು ಅವರವರ ಮನೆಗಳಲ್ಲೇ ಕಂಡಿರುತ್ತೇನೆ. ಪ್ರತಿ ದಿನವೂ ಅವರ ಕೆಲಸವನ್ನು ನೋಡಿದಂತೆ ನೀವು ಚರಕವನ್ನು ಹೇಗೆ ಪುನಃ ಕಂಡುಹಿಡಿದಿರೆಂಬುದಾಗಿ ಆಶ್ಚರ್ಯವು ಹೆಚ್ಚುತ್ತಲೇ ಇದೆ. ಚರಕವನ್ನು ಯಥಾರ್ಥವಾಗಿ ಹೇಗೆ ಮತ್ತು ಎಲ್ಲಿ ಕಂಡುಹಿಡಿದಿರೆಂಬುದಾಗಿ ‘ಯಂಗ್ ಇಂಡಿಯಾ’ ಪತ್ರದಲ್ಲಿ ದಯವಾಡಿ ಪ್ರಕಟಿಸುವಿರಾ ಎಂದು ಅರಿಕೆ ಮಾಡಲು ಕುತೂಹಲವುಳ್ಳವನಾದೆನು. ಅದು ಎಷ್ಟು ಅಲ್ಪವಾದುದೆಂದು ಹಾಗು ಎಷ್ಟು ಮಹತ್ವವಾದುದೆಂದು ಏಕಕಾಲದಲ್ಲೆ ನನಗೆ ಅನಿಸುತ್ತದೆ; ಆಗಲೇ ‘ಹನಿಕೂಡಿ ಹಳ್ಳ’ ಎಂಬ ನಾಣ್ಣುಡಿಯ ಸತ್ಯವೂ ಮನಸ್ಸಿಗೆ ಹೊಳೆಯುವುದು. ನೀವೇ ಹಿಂದೀಯರಿಗೆ ನೂಲುವಂತೆ ಪ್ರೇರೇಪಿಸಿದುದೂ ನಿಮ್ಮ ದೆಸೆಯಿಂದಲೇ ಹಿಂದೀಯರು ನೂಲುವಂತೆ ಬಲಾತ್ಕಾರಪಡಿಸಲ್ಪಟ್ಟಿದ್ದಾರೆಂದೂ ಹೇಳುವುದು ಸರಿಯಲ್ಲ. ಹಳ್ಳಿ ಹಳ್ಳಿಗಳಲ್ಲಿ ವಾಸವಾಗಿರುವ ಮಿಲಿಯಗಟ್ಟಲೆಯ ಜನರೇ ನಿಮ್ಮನ್ನು ಹಾಗೆ ತಮ್ಮ ಯೋಜಂಟನನ್ನಾಗಿ ಮಾಡಿದರೆಂದರೆ ಸರಿಯಾಗುವುದು. ದಿನನಿತ್ಯವೂ ಮುದಿಹೆಂಗಸರೂ ತರುಣಿಯರೂ ಗುಂಪು ಗುಂಪಾಗಿ ತಮ್ಮ ನೂಲನ್ನು ವಿಕ್ರಯಿಸುವುದಕ್ಕಾಗಿ ಬರುತ್ತಿರುವುದನ್ನು ನೋಡುತ್ತಿದ್ದೇವೆ; ತಂತಮ್ಮ ಬೆಲೆಬಾಳತಕ್ಕ ನೂಲನ್ನು ಕಂಕುಳಲ್ಲಿರಿಸಿಕೊಂಡು, ಹಸನ್ಮುಖಿಯರಾಗಿ ಬರುತ್ತಿರುವುದನ್ನು ನೋಡಿ ಯಾರಿಗೆ ಆಹ್ಲಾದವಾಗದಿರುವುದು! ವಿದೇಶಿ ಅಮಾನುಷ ವ್ಯಾಪಾರೀ ಪದ್ಧತಿಯಿಂದ ನಾಶವಾಗಿದ್ದ ನಮ್ಮ ಜೀವಕಳೆಗಳನ್ನು ಖಾದಿಯು ಪುನಃ ಕಳೆದುಂಬುತ್ತಿರುವುದು. ಜಗವು ನಿಮ್ಮ ಕೆಲಸ ಕಾರ್ಯಗಳಲ್ಲಿ ಖಾದಿಯನ್ನು ಒಂದಾನೊಂದು ದಿನ ಅತೀ ಮಹತ್ವದ್ದೆಂದು ಅಂಗೀಕರಿಸಲಿರುವುದೆಂಬುದು ಈಗಲೇ ನನಗೆ ನಿಶ್ಚಯವಾಗಿದೆ”.

ಕಷ್ಟಪಟ್ಟೂ ತುಂಬ ಊಟಕ್ಕೆ ಸಿಕ್ಕದಿರುವ ಮಿಲಿಯಗಟ್ಟಲೆ ದರಿದ್ರರೇ ನಾನು ಚರಕವನ್ನು ತಿರಿಗಿ ಕಂಡುಹಿಡಿಯುವಂತೆ ಮಾಡಿಯದೆಂದು ನನ್ನ ಸ್ನೇಹಿತನು ಹೇಳಿದುದು ಯಥಾರ್ಥವೇ ಆಗಿದೆ. ೧೯೦೮ರಲ್ಲಿ ಲಂಡನಿನಲ್ಲಿ ನಾನು ಇದನ್ನು ಕಂಡುಹಿಡಿದುದಾಗಿದೆ. ನಾನು ದಕ್ಷಿಣ ಅಫ್ರಿಕದ ಒಂದು ಡೆಪ್ಯುಟೇಶನಿನೊಡನೆ (ಮನವಿದಾರರೊಡನೆ) ಅಲ್ಲಿಗೆ ಹೋಗಿದ್ದೆನು. ಆಗಲೇ ವಿದ್ಯಾರ್ಥಿಗಳಿತ್ಯಾದಿ ಹಿಂದೀ ಯಥಾರ್ಥವಾದಿಗಳೊಡನೆ ಸಂಪರ್ಕಮಾಡಿದೆನು. ಹಿಂದೀಯರ ಸ್ಥಿತಿಗತಿಗಳ ಬಗ್ಗೆ ಅನೇಕ ಸಂಭಾಷಣೆಗಳು ನಡೆದುವು; ಆಗ ನೂಲುವ ರಾಟೆಯ ಹೊರತು ಸ್ವರಾಜ್ಯ ಸಾಧ್ಯವಾಗದೆಂದು ನನಗೆ ಹಠಾತ್ತಾಗಿ ಕಂಡುಬಂತು. ಪ್ರತಿಯೊಬ್ಬರೂ ನೂಲುವುದು ಅವಶ್ಯವಿದೆಯೆಂದು ನಾನು ತಿಳಿದಿದ್ದೆನು. ಆದರೆ ಆಗ ನನಗೆ ನೂಲುವ ರಾಟೆ ಮತ್ತು ನೇಯುವ ಕೈಮಗ್ಗಗಳೊಳಗಿನ ಭೇದ ಗೊತ್ತಿರಲಿಲ್ಲ; ಅನೇಕ ಸಂದರ್ಭಗಳಲ್ಲಿ ನೂಲುವ ರಾಟೆಯೆಂದು ಕೈಮಗ್ಗದ ಹೆಸರನ್ನೇ ಉಪಯೋಗಿಸಿದ್ದೆನು.

ನನಗೆ ನೂಲುವ ರಾಟೆಯ ವಿಷಯ ಅಭಿಪ್ರಾಯವಾಗಿತ್ತೊ, ಈಗಲೂ ಅದೇ ರೀತಿಯ ಅಭಿಪ್ರಾಯವಿದೆ. ಸದ್ಯ ವಕೀಲರು, ವೈದ್ಯರು ಮೊದಲಾದವರು ತ್ಯಾಗರೀತಿಯಲ್ಲಿ ನೂಲುತ್ತಿರುವರಲ್ಲದೆ, ಈ ಚಳವಳವನ್ನು ಸುವ್ಯವಸ್ಥಿತಗೊಳಿಸುತ್ತಿರುವರು. ಆದರೆ ಮಿಲಿಯಗಟ್ಟಲೆಯ ಜನರನ್ನು ಅವರ ನಿಸ್ಸಹಾಯಕ ಮೌಢ್ಯದಿಂದ ಜಾಗ್ರತಗೊಳಿಸಲು ಸಾಕಷ್ಟು ಮಂದಿ ಇಲ್ಲವೆಂಬುದೇ ವಿಷಾದದ ಸಂಗತಿಯಾಗಿದೆ; ಬಹುಪಕ್ಷ ಜನರು ಇನ್ನೂ ಸುಮ್ಮಗೆ ಬೇರೆ ಇದ್ದುಬಿಟ್ಟಿರುವರು; ತಮ್ಮೆದುರು ಪ್ರಜ್ವಲಿತವಾಗಿರುವ ಮಹದಾಪತ್ತಿಗಿಂತಲೂ ಮಹತ್ವದ್ದು ಇನ್ನೊಂದು ಸಂಭವಿಸುವುದನ್ನು ಕಾದು ನೋಡುತ್ತಿರುವರೋ ಎಂದು ತೋರುತ್ತಿದೆ. ಬಹುಶಃ ಮಿಲಿಯಗಟ್ಟಲೆ ಜನರ ವಿನಾಶವಾಗಿ ತನ್ಮೂಲಕವಾದರೂ ಉಳಿದವರಲ್ಲಿ ಜಾಗ್ರತಿಯುಂಟಾಗುವುದೋ ಎಂದು ಕಾಯುತ್ತಿರುವಂತಿದೆ. ಅದು ಹೇಗಿದ್ದರೂ ಹಸಿದು ಬಳಲುತ್ತಿರುವ ಮಿಲಿಯಾವಧಿ ಜನರು ಸ್ವರಾಜ್ಯದ ಹೊಳಹನ್ನಾದರೂ ಅನುಭವಿಸಿದ ಹೊರತು ಯಥಾರ್ಥವಾದ ಸ್ವರಾಜ್ಯವು ಲಭಿಸಲಿಕ್ಕಿಲ್ಲ. ಅವರೊಳಗೆ ಮತ್ತು ಅವರ ರಕ್ತವನ್ನು ಹೀರಿಕೊಂಡೆಂಬಂತೆ ಜೀವಿಸಿಕೊಂಡಿರುವ ನಮ್ಮೊಳಗೆ ಪರಸ್ಪರ ಹೊಕ್ಕುಬಳಕೆಯಾದ ಹೊರತು ಅವರಲ್ಲಿ ಸ್ವರಾಜ್ಯಾನುಭವವು ಮೊಳೆಯಲಿಕ್ಕಿಲ್ಲ.

೧೯೦೮ರಲ್ಲಿ ನೂಲುವ ರಾಟೆಯು ಮನಸ್ಸಿಗೆ ಹೊಳೆದಿತ್ತಾದರೂ, ೧೯೧೮ರಲ್ಲಿ ಮಾತ್ರ ಮೂರು ವರುಷಗಳ ಶೋಧ ಹೋರಾಟದ ತರುವಾಯವೇ ಅದು ಕಾರ್ಯರೂಪಕ್ಕೆ ಬಂದಿತು. ಖಾದಿಯ ಪ್ರಥಮ ಪ್ರತಿಜ್ಞೆಯು ೧೯೧೯ರಲ್ಲಿ ಕೈಕೊಳ್ಳಲ್ಪಟ್ಟಿತು. ೧೯೨೧ರಲ್ಲಿ ನೂಲುವ ರಾಟೆಯು ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಸ್ಥಳದೊರಕಿಸಿಕೊಂಡಿತು. ಅಂದಿನಿಂದ ಈ ಖಾದೀ ಚಳವಳವು ದಿನೇ ದಿನೇ ಪ್ರವರ್ಧಿಸುತ್ತ, ಸದ್ಯ ಆ ಕಾರ್ಯಕ್ರಮದಲ್ಲಿ ಎರಡು ಸಾವಿರಕ್ಕೆ ಮಿಗಿಲಾದ ಪ್ರಚಾರಕರೂ ಎಪ್ಪತ್ತು ಸಾವಿರಕ್ಕೆ ಮಿಗಿಲಾದ ಕೈನೂಲುವವರೂ ಕೆಲಸಮಾಡುತ್ತಿರಲು ಎಷ್ಟೊಂದು ಮಂದಿಯಲ್ಲಿ ಸ್ವರಾಜ್ಯಾನುಭವವು ಮೂಡುತ್ತಿರುವುದಿಲ್ಲ! ಪಟ್ಟಣವಾಸದ ವ್ಯಾಮೋಹದಿಂದ ನಾವು ಮುಕ್ತರಾದೆವೆಂದರೆ, ಒಂದಿಷ್ಟು ಸಾಂಘಿಕವಾದ ಮನಃಪೂರ್ವಕವಾದ ಮತ್ತು ಪ್ರಾಮಾಣಿಕವಾದ ಪ್ರಯತ್ನದಿಂದ ಕೆಲಸ ಮಾಡಿದ್ದೇ ಆದರೆ, ಎಷ್ಟು ಸುಲಭವಾಗಿ ಹಿಂದೂದೇಶದ ಪ್ರತಿಯೊಂದು ಮನೆಗೂ ಈ ನೂಲುವ ರಾಟೆಯ ಬೋಧವನ್ನು ಮುಟ್ಟಿಸಿ ಜನರನ್ನು ಜಾಗ್ರತಗೊಳಿಸಬಹುದೆಂದು ನಾವೇ ಆಲೋಚಿಸಿ ತಿಳಿಯಬಹುದು. ಒಂದು ಚರಕದಿಂದುಂಟಾಗುವ ಪ್ರಯೋಜನವನ್ನು ಮಿಲಿಯದಿಂದ ಗುಣಿಸಿದ್ದೇ ಆದರೆ ಅದೆಷ್ಟು ಮಹತ್ವದ್ದಾಗುವುದೆಂದು ಖಾದಿಯಲ್ಲಿ ತೀರ ಅವಿಶ್ವಾಸವುಳ್ಳವನಿಗೂ ಶ್ರದ್ಧೆಯುಂಟಾಗದಿರದು. ಒಂದು ವೇಳೆ ಹಾಗೆ ಭಾವಿಸಲಿಕ್ಕೆ ಆತನು ಒಪ್ಪದಿರಬಹುದು. ಮತ್ತು “ನೀವು ಹೇಳುವುದೇನೂ ಗಣಿತ ರೀತಿಯಲ್ಲಿ ಸರಿ, ಆದರೆ ಕಾರ್ಯರೂಪದಲ್ಲಿ ತೀರ ಅಸಾಧ್ಯವೆಂದು” ಹೇಳಬಹುದು. ಮನಸ್ಸಿದ್ದಷ್ಟೆ ಮಾತ್ರ ಒಂದು ಕುದುರೆಯನ್ನು ನೀರು ಕುಡಿಯುವಂತೆ ಮಾಡಬಹುದಾದಂತೆ, ನಿಜವಾಗಿ ನೂಲುವುದನ್ನು ಕಲಿಯತಕ್ಕವನು ತಕ್ಕಷ್ಟು ತಾಳ್ಮೆಯುಳ್ಳವನಾಗದೇ; ಸ್ವಲ್ಪದರಲ್ಲಿ ಎದೆಗುಂದಬಾರದು. ನೂಲುವ ರಾಟೆಯು ಇನ್ನೂ ಶೋಧಹೊಂದುತ್ತಲೇ ಇದೆಯೆಂದು ಈ ಸ್ನೇಹಿತನು ಯಥಾರ್ಥವಾಗಿ ಹೇಳಿದಂತೆ ಈಗ ಹಿಂದೀಯರಲ್ಲಿ ಆ ಬಗ್ಗೆ ತಮ್ಮ ಸರ್ವಸ್ವವನ್ನು—ಜೀವವನ್ನು ಕೂಡ—ಹೋಮ ಮಾಡುವಂತಹ ಕೆಲವು ಕೆಲಸಗಾರರಿರುತ್ತಾ, ಅಂತಹ ಶೋಧವು ಪೂರ್ತಿಗೊಳ್ಳುವ ಒಂದು ದಿನವು ಒಂದೇ ಬರುವುದೆಂದು ನನ್ನ ನಂಬಿಗೆ.

ವಂದೇ ಮಾತರಂ!

‘ಯಂಗ್ ಇಂಡಿಯಾ’

ವಿಜಾಪೂರ ಪತ್ರ.

(ಕಳೆದ ೩ನೇ ತಾರೀಕಿನ ಪೇ ಅಂಕಿನಿಂದ ಮುಂದೆ ಸಾಗಿರುತ್ತದೆ.)

ಈ ಕಾರಖಾನೆಗಳ ಹತ್ತಿರವೇ ಒಂದು ಎಣ್ಣೆಯ ಗಿರಣಿ ಇದೆ. ಇದು ಕೆಲಜನ ಪಾಲಕರಿಂದ ನಡೆಯುತ್ತಿದೆ. ಇದರಲ್ಲಿ ಎಲ್ಲಿಯೂ ಉಗಿಯಿಂದ ನಡೆಯುವ ಯಂತ್ರವಿದೆ. ಈ ಯಂತ್ರದ ಕೌಶಲ್ಯವು ನೋಡತಕ್ಕಂಥಾದ್ದಿರುತ್ತದೆ. ಇದು ಪಂಡಿತರನ್ನೂ ಪಾಮರರನ್ನೂ ಕೂಡಿಯೇ ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ. ಇಂಥ ಯಂತ್ರಗಳಿಂದಲೇ ನಮ್ಮ ದೇಶದ ಗಾಣಿಗರ ಉದ್ಯೋಗವು ಮುಳುಗಿಹೋಗಿರುತ್ತದೆಂಬುದು ನಿಶ್ಚಯವಾದ ಮಾತು. ಯಂತ್ರದೇವನು ಇನ್ನೂ ಯಾರಾರ ಗೋಣು ಯಾವಾವ ರೀತಿ ಮುರಿಯುತ್ತಾನೋ ಏನೋ! ಈ ಗಿರಣಿಯಲ್ಲಿ ಎಷ್ಟೋ ಜನ ವಿದ್ಯಾರ್ಥಿಗಳು ವೇತನವಿಲ್ಲದೆ ದುಡಿದು ಯಂತ್ರದ ಗೊತ್ತುವಳಿಯನ್ನು ಮಾಡಿಕೊಂಡು ೨ನೇ ಗ್ರೇಡ ೩ನೇ ಗ್ರೇಡ ಎಂಜನಿಯರಿಂಗ ಪರೀಕ್ಷೆಯನ್ನು ಪಾಸಾಗುತ್ತಾರೆ. ಇಲ್ಲಿ ದಿನಾಲೂ ನೂರಾರು ಜನರು ಕೂಲಿಕಾರರು ದುಡಿಯುತ್ತಾರೆ; ಮತ್ತು ಇಲ್ಲಿ ಕುಸುಬೀ ಎಣ್ಣೆ, ಶೇಂಗಾದ ಎಣ್ಣೆ, ಕೊಬ್ಬರಿ ಎಣ್ಣೆ ಮುಂತಾದ ಎಣ್ಣೆಗಳು ಹುಟ್ಟುತ್ತವೆ; ಮನೆಗಳ ಗೋಡೆಗಳೂ—ಕಟ್ಟಿಗೆ ಕಬ್ಬಿಣ ಮುಂತಾದ ಸಾಮಾನುಗಳಿಗೂ ಹಚ್ಚುವ ಉತ್ತಮ ಪ್ರಕಾರದ ಬಣ್ಣಗಳು ತಯಾರಾಗುತ್ತವೆ; ಹೊಲಗಳಿಗೂ ತೋಟಗಳಿಗೂ ಹಾಕುವ ಗೊಬ್ಬರವೂ ಸಿದ್ಧವಾಗುತ್ತವೆ; ಇಲ್ಲಿ ದಿನಾಲೂ ಎಣ್ಣೆ ತೆಗೆಯುವ ಸಲುವಾಗಿ ನೂರಾರು ಕುಸುಬಿ ಚೀಲಗಳನ್ನೂ ಬೇರೆ ಬೇರೆ ತರದ ಕಾಳುಗಳನ್ನೂ ನುರಿಸುತ್ತಾರೆ; ಗೊಬ್ಬರ ಸಿದ್ಧಗೊಳಿಸುವ ಸಲುವಾಗಿ ಖಂಡಗಗಟ್ಟಲೆ ದನಗಳ ಮತ್ತು ಮನುಷ್ಯರ ಎಲುಬುಗಳನ್ನು ನುರಿಸುತ್ತಾರೆ. ಯಂತ್ರವೇ ಯಂತ್ರ. ಅದಕ್ಕೇನು! ಖಂಡಗಗಟ್ಟಲೆ ಕೆಲಸಮಾಡಲಿಕ್ಕೆ ಯಾವಾಗಲೂ ಸಿದ್ಧವಿರುತ್ತವೆ; ದಣುವಿಲ್ಲ; ಬೇಸರಿಕೆ ಇಲ್ಲ.

ಈ ಗಿರಣಿಯ ಎದುರಿನಲ್ಲಿಯೇ ಎಮ್. ಎಸ್. ಎಮ್. ರೈಲ್ವೆ ಕಂಪನಿಯ ಸ್ಟೇಶನು ಇರುತ್ತದೆ. ಇದು ಅಷ್ಟು ದೊಡ್ಡದೂ ಅಲ್ಲ; ಸಣ್ಣದೂ ಅಲ್ಲ. ಈ ಸ್ಟೇಶನಕ್ಕೆ ಹಗಲಿನಲ್ಲಿಯೂ ೩-೪ ಗಾಡಿಗಳೂ ರಾತ್ರಿಯಲ್ಲಿಯೂ ೩-೪ ಗಾಡಿಗಳೂ ಗದಗಿನಿಂದ ಸೋಲಾಪುರಕ್ಕೂ ಸೋಲಾಪುರದಿಂದ ಗದಗಿಗೂ ಹೋಗುವ ಸಲುವಾಗಿ, ಬರುವ ಸಲುವಾಗಿ, ಹೋಗುತ್ತವೆ, ಬರುತ್ತವೆ. ಹಗಲಿನಲ್ಲಿ ಗಾಡಿಗಳು—ಮನುಷ್ಯರು ಕೂಡ್ರುವ ಗಾಡಿಗಳು ಬಂದಾಗ್ಯೂ, ವರ್ತಮಾನ ಪತ್ರಗಳನ್ನು ಮಾರಾಟ ಮಾಡುವವರ ಕೂಗಾಟದಿಂದಲೂ, ಕಂಪನಿಯ ನೌಕರರು ಆಗಾಗ್ಗೆ ಬಾರಿಸುವ ತಮ್ಮ ಸಂಕೇತದ ಘಂಟಾನಾದದಿಂದಲೂ ಬರಹೋಗುವ ಜನರ ಕಲಕಲಾಟದಿಂದಲೂ ಸ್ಟೇಶನದ ಶೋಭೆಯು ಒಳ್ಳೇ ರಮಣೀಯವಾಗಿರುತ್ತದೆ; ರಾತ್ರಿಯಲ್ಲಿಯಾದರೂ ಇದೇ ಪ್ರಕಾರದ ಶೋಭೆಯು ಇರುತ್ತದೆ. ಆದರೆ ಅಗ್ಗೆ ವೃತ್ತಪತ್ರ ಮಾರಾಟ ಮಾಡುವವರ ಕೂಗಾಟವು ಮಾತ್ರ ಇರುವುದಿಲ್ಲ. ಗಾಡಿಗಳು ಹೋದ ಬಳಿಕ ಪ್ರಯಾಣಿಕರು ತಮ್ಮ ತಮ್ಮ ವ್ಯವಸ್ಥಿತ ಕಾರ್ಯಗಳಿಗೂ ಊರುಗಳಿಗೂ ಹೋಗುವದರಿಂದ ಸ್ಟೇಶನು ನಿಬ್ಬಣ ಜರೆದುಹೋದ ಮನೆಯಂತೆ ಭಣಭಣವೆನಿಸುತ್ತದೆ. ೧ನೇ ವರ್ಗದ ೨ನೇ ವರ್ಗದ ಪ್ರಯಾಣಿಕರ ಸಲುವಾಗಿ, ಇಳಕೊಳ್ಳಲಿಕ್ಕೆ ಕಂಪನಿಯವರು ಒಂದು ಮನೆಯನ್ನು ಕಟ್ಟಿಸಿದ್ದಾರೆ. ಅಲ್ಲಿ ನೆಲದ ಮೇಲೆ ಚಿತ್ರವಿಚಿತ್ರವಾದ ಹಾಸಿಗೆಯನ್ನು ಹಾಸಿರುತ್ತಾರೆ. ಬೆತ್ತದಿಂದ ಹೆಣೆದ ಖುರ್ಚಿ, ಮೇಜುಗಳನ್ನೂ ಸುಂದರವಾದ ನಿಲುಗನ್ನಡಿಯನ್ನೂ ಇಟ್ಟಿರುತ್ತಾರೆ; ನಯನ ಮನೋಹರವಾದ ಗಾಜಿನ ಪಾತ್ರೆಗಳನ್ನೂ ಚೀನಿಮಣ್ಣಿನ ಕಪ್ಪು ಬಸಿಗಳನ್ನೂ ಇಟ್ಟಿರುತ್ತಾರೆ. ಆದರೆ ಮೂರನೇ ವರ್ಗದ ಪ್ರಯಾಣಿಕರ ಸ್ಥಿತಿಗತಿಯು ತೀರ ಶೋಚನೀಯವಾಗಿರುತ್ತದೆ. ಅವರಿಗೆ ಗಾಳಿಗೋಪುರದಂಥ ಒಂದು ಬಯಲು ಮನೆಯು ಇರುತ್ತದೆ; ಅಲ್ಲಿ ಮಲಗಿಕೊಳ್ಳಲಿಕ್ಕೆ ಅಥವಾ ಕೂಡ್ರಲಿಕ್ಕೆ ಹಾಸಿಗೆಗಳು ಇರುವದಿಲ್ಲ; ಅಡಿಗೆಮಾಡಿಕೊಳ್ಳಲಿಕ್ಕೆ ಭಾಂಡೆಗಳು ಸಿಗುವದಿಲ್ಲ. ಇದರ ಮೇಲಿಂದ ಶ್ರೀಮಂತರ ಸೌಕರ್ಯಗಳಿಗೂ ಬಡವರ ಸೌಕರ್ಯಗಳಿಗೂ ಎಷ್ಟು ಹೆಚ್ಚುಕಡಿಮೆ ಇರುತ್ತದೆಂದು ತಾನೇ ಗೊತ್ತಾಗುತ್ತದೆ.

ಯಸ್ಯಾಸ್ತಿ ವಿತ್ತಂ ಸನರಃ ಕುಲೀನಃ ।
ಸಪಂಡಿತಃ ಸಶ್ರುತವಾನ್ ಗುಣಜ್ಞಃ ॥
ಸಏವ ವಕ್ತಾ ಸಚದರ್ಶನೀಯಃ ।
ಸರ್ವೇ ಗುಣಾಃ ಕಾಂಚನಮಾಶ್ರಯಂತೇ ॥ ೧ ॥

ಎಂಬ ಮಾತು ಸುಳ್ಳೇ! (ಅಲ್ಲ)

— ಹಾಸ್ಯಲಹರಿ. —

ಬಸಪ್ಪ:— ರಾಯರೇ, ನಿಮಗೆ ನೌಕರಿ ಹತ್ತಿತೇನು?

ಭಗವಂತ:— ಟ್ರೇಡಮಾರ್ಕ ಬದಲಿಸಿದ ಹೊರತು ನೌಕರಿಯು ಹೇಗೆ ಹತ್ತುತ್ತದೆ.

ಬಸಪ್ಪ:— ಟ್ರೇಡಮಾರ್ಕ ಅಂದರೇನು?

ಭಗವಂತ:— ನಾನು ಈಗ ಬ್ರಾಹ್ಮಣನಿದ್ದೇನೆ. ನನ್ನ ಟ್ರೇಡಮಾರ್ಕ ಜನಿವಾರ, ಚಂಡಿಕೆ, ಮುಂತಾದವು ಇರುತ್ತವೆ. ಅವನ್ನು ಬದಲಿಸಬೇಕು, ಅಂದರೆ ಮಹಮ್ಮದೀಯನಾಗಿ ಗಡ್ಡಗಳನ್ನು ಬೆಳಸಬೇಕು. ಇಲ್ಲವೆ ಕ್ರಿಸ್ತಧರ್ಮಾನುಯಾಯಿಯಾಗಿ ಹ್ಯಾಟು ಬೂಟುಗಳನ್ನು ಹಾಕಿಕೊಳ್ಳಬೇಕು. ನೌಕರಿಯು ಹಾ! ಹಾ! ಎನ್ನುವದರೊಳಗೆ ದೊರಕುತ್ತದೆ.

X X X X Z X X

ಕಲ್ಲಪ್ಪ:— ನಾಗಾ ನಿನಗೆ ಬರೆಯಲಿಕ್ಕೆ ಬರುತ್ತದೇನು?

ನಾಗಪ್ಪ:— ನಾನು ನಿನ್ನಂತೆ ಪಾಟಿಯ ಮೇಲಾಗಲಿ, ಕಾಗದದ ಮೇಲಾಗಲಿ ಬರೆಯುವವನಲ್ಲ. ಕವಡಿಯನ್ನು ಕಾಸಿ ದನಗಳ ಮನುಷ್ಯರ ಮೈ ಮೇಲೆ ಬರೆಯುತ್ತೇನೆ. ಅಂದ ಮೇಲೆ ನನಗೂ ಬರೆಯಲಿಕ್ಕೆ ಬಂದಂತಾಯಿತೋ ಇಲ್ಲೋ ನೀನೇ ನೋಡು.

X X X X X X X

ಭೀಮ:— ಗೋವಿಂದಾ, ಈ ಜಗತ್ತಿನಲ್ಲಿ ಅತ್ಯಂತ ತೇಜಃಪುಂಜ ವಸ್ತು ಯಾವದು?

ಗೋವಿಂದ:— ಸೂರ್ಯಬಿಂಬ.

ಭೀಮ:— ಅಲ್ಲ.

ಗೋವಿಂದ:— ಯಾವದು.

ಭೀಮ:— ಕಣ್ಣು. ಕಣ್ಣು ಇಲ್ಲದಿದ್ದರೆ ಎಂಥ ತೇಜಃಪುಂಜ ವಸ್ತುವಿದ್ದರೂ ಏನಾಗುವದು? ಕಣ್ಣು ತೇಜವುಳ್ಳದ್ದಾಗಿದ್ದರೆ ಎಲ್ಲವೂ ತೇಜವೇ.

X X X X X X X

ಶ್ಯಾಮ:— ಕೃಷ್ಣಾ, ಈಗ್ಗೆ ಎಲ್ಲ ಕರ್ನಾಟಕಸ್ಥರೂ ಕನ್ನಡ ವಾಙ್ಮಯ ಗಂಗೆಯು ಘೋ ಘೋ ಎಂದು ಹರಿಯಲಿ ಎಂದು ಇಚ್ಛಿಸುತ್ತಿರುವರು. ಆದರೆ ಈ ಗಂಗೆಗೆ ಮಹಾಪೂರವು ಬಂದು ಜನರು ಹರಿದುಕೊಂಡು ಹೋಗುವುದಿಲ್ಲವೇನು?

ಕೃಷ್ಣ:— ಅದೇಕೆ ಹರಿದುಕೊಂಡು ಹೋಗುತ್ತಾರೆ. ಗ್ರಂಥಕಾರರು ಕನ್ನಡದಲ್ಲಿ ಗ್ರಂಥಗಳನ್ನು ಬರೆಯುವದು ಬಿಡಬೇಕು. ಓದುಗರು ಓದುವದನ್ನು ಬಿಡಬೇಕು. ಅಂದರೆ ಕನ್ನಡ ವಾಙ್ಮಯ ಗಂಗೆಯು ಬತ್ತಿ ಹೋಗುತ್ತದೆ. ಇಷ್ಟೇ ಅಲ್ಲ. ಅದರಲ್ಲಿ ಕುಡಿಯಲಿಕ್ಕೆ ಗುಟುಕು ನೀರು ಸಿಕ್ಕರೆ ನನಗೆ ಕೇಳು.

ಮನಮೋಹನ ರಾವ.

ಔಷಧದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಶೀಸೆಯಿಂದಲೇ ಗುಣವಾಯಿತು.

ಶ್ರೀಮತಿ ಎಸ್. ಕನಕಮ್ಮ, ಕೇರಾಫ್ ಎನ್. ನರಸಯ್ಯ, ಗ್ರಾಮ ಮ್ಯಾಜಿಸ್ಟ್ರೇಟ್, ಕದಿರಿ ಇವರು ಬರೆದಿರುವುದು — ನಿಮ್ಮ ಒಂದು ಸಣ್ಣ ಬಾಟಲ್ ಲೋಧ್ರವನ್ನು ಉಪಯೋಗಿಸಿದ ಮಾತ್ರದಿಂದಲೇ ಗುಣವುಂಟಾಯಿತು. ಒಂದು ದೊಡ್ಡ ಶೀಸೆ ಲೋಧ್ರವನ್ನು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

ಶ್ರೀಮತಿ ಇಂದಿರಾಕ್ಷಮ್ಮಾಳ್ ದೇವಿ, ಮಟ್ಟೂರು, ಇವರು ಬರೆದಿರುವುದು—

ಸ್ವಾಮಿ, ನಾನು ಈಗ ತಮ್ಮ ಲೋಧ್ರವನ್ನು ಸೇವಿಸುತ್ತಿದ್ದೇನೆ. ಇದಕ್ಕೆ ಮುಂಚೆ ನನ್ನ ಋತುಕಾಲದಲ್ಲಿ ಬಹಳ ಬಾಧೆಯುಂಟಾಗುತ್ತಿತ್ತು ಮತ್ತು ಕ್ರಮತಪ್ಪಿ ೨೦ ದಿನಗಳೊಳಗಾಗಿಯೇ ಬಹಿಷ್ಟೆಯಾಗುತ್ತಿದ್ದೆನು. ೩ ವರ್ಷಗಳಕಾಲ ಇಂಗ್ಲಿಷ್ ಔಷಧಾಲಯಗಳಲ್ಲಿ ಔಷಧ ಸೇವಿಸಿದರೂ ಪ್ರಯೋಜನವಿಲ್ಲದಿರಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಹೇಳಿದರು. ಆದರೆ ನಾನು ಸಮ್ಮತಿಸಲಿಲ್ಲ. ಆಮೇಲೆ ತಮ್ಮ ಪ್ರಸಿದ್ಧವಾದ ಲೋಧ್ರ ಎರಡು ಬಾಟಲ್ ತರಿಸಿ ಸೇವಿಸಿದೆನು. ಅಂದಿನಿಂದ ಕ್ರಮವಾಗಿ ೨೮ ದಿನಕ್ಕೊಂದುಸಲ ಬಾಧೆಯಿಲ್ಲದೆ ಬಹಿಷ್ಟೆಯಾಗುತ್ತ ಸುಖವಾಗಿದ್ದೇನೆ. ಮಿಕ್ಕ ಇತರ ಬಾಧೆಗಳೂ ನಿವೃತ್ತಿಯಾಗಿವೆ. ಪುನಃ ಈಗ ಎರಡು ಬುಡ್ಡಿ ಲೋಧ್ರ ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ಮಾಯವಾಯಿತು.

ಶ್ರೀಮತಿ ಜಯಲಕ್ಷ್ಮಮ್ಮ, ಬಾಲಿಕಾ ಪಾಠಶಾಲೆ, ಕುಣಿಗಲ್, ಇವರು ಬರೆದಿರುವುದು —

ಕಳೆದ ಮೂರು ವರುಷಗಳಿಂದಲೂ ನನಗೆ ಋತುವು ಸರಿಯಾಗಿ ಆಗುತ್ತಿಲ್ಲ. ೨ ಅಥವಾ ೩ ತಿಂಗಳಿಗೊಂದುಸಾರಿಯಾಗುತ್ತಿದ್ದೆನು. ಆ ಸಂದರ್ಭಗಳಲ್ಲಿ ಸೊಂಟನೋವು, ಹೊಟ್ಟೆ ನೋವು ಮತ್ತು ನಿಶ್ಶಕ್ತಿಯುಂಟಾಗಿ ಬಹಳ ಕಷ್ಟಪಡುತ್ತಿದ್ದೆನು. ಈ ಸಮಯದಲ್ಲಿ ತಮ್ಮ 'ಲೋಧ್ರ' ೨ ಬುಡ್ಡಿ ತರಿಸಿ ಸೇವಿಸಿದೆನು. ಅಂದಿನಿಂದ ಈ ಬಾಧೆಗಳೆಲ್ಲವೂ ಮಾಯವಾಗಿ ಸಕಾಲಕ್ಕೆ ಬಹಿಷ್ಟೆಯಾಗುತ್ತ ಶರೀರಾರೋಗ್ಯವನ್ನು ಅನುಭವಿಸುತ್ತಿದ್ದೇನೆ. ಈ ದಿವ್ಯೌಷಧಿಯನ್ನು ನಿಲ್ಲಿಸದೆ ಇನ್ನೂ ಸೇವಿಸಬೇಕೆಂದಿರುವುದರಿಂದ ಇನ್ನೂ ಎರಡು ಬುಡ್ಡಿಗಳ ಕಳುಹಿಸುವುದು. ಸ್ತ್ರೀಯರ ಎಲ್ಲಾ ವ್ಯಾಧಿಗೂ 'ಲೋಧ್ರ'ವು ದಿವ್ಯೌಷಧಿಯೆಂದು ನಾನು ಖಂಡಿತವಾಗಿಯೂ ಹೇಳುತ್ತೇನೆ.

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 — ತಂತಿ: "ಕೇಸರಿ" — ಫೋನ್ 3486.

ಏಜಂಟರು — ಪಾ ಕಂಪೆನಿ, (ದಿ. ಊಲನ್ ಮಾರ್ಟ್) ಮಂಗಳೂರು.

NOTICE.

Mr. Uppur Koraga Marakala, holder of our Policy No. 1043 having notified that he has either lost or misplaced his Policy and having requested to issue a duplicate thereof in his favour, notice is hereby given that a duplicate Policy will be issued to him by the Company should there be no objection recorded in our office to our doing so within a month of the issue of this notice.

J. L. Mehta.
Manager,
Bombay Life Assurance Co., Ltd.
BOMBAY.

ಪ್ರಕಟಣೆ.

ಈ ತಿಂಗಳಿನ ೮ನೇ ತಾರೀಖು ಸಪ್ಟಂಬರ ತಿಂಗಳ ಆಖೈರಿಯ ವರೆಗೆ ಕಲ್ಯಾಣಪುರದಲ್ಲಿ ನಾವು ನಮ್ಮಿಂದ ಅಧಿಕಾರ ಹೊಂದಿದ ನಮ್ಮ ಜನರಿಂದಲೂ, ಲೈಸನ್ಸ್ ಹೊಂದಿದ ಕಂಟ್ರಾಕ್ಟರುಗಳಿಂದಲೂ, ಧೂಪದ ಹಣ್ಣುಗಳ ತಿರುಳನ್ನು ಸ್ವೀಕರಿಸುವೆವು. ಡಿಸ್ಟ್ರಿಕ್ಟ್ ಮತ್ತು ತಾಲೂಕು ಮೊದಲಾದ ಸ್ಥಳೀಯ ಬೋರ್ಡುಗಳಿಗೆ ಒಳಗಾಗಿರುವ ಮರಗಳಿಂದ ತೆಗೆಯಲ್ಪಟ್ಟ ಹಣ್ಣುಗಳು ಸ್ವೀಕರಿಸಲ್ಪಡಲಾರವು. ನಮ್ಮ ಕೋಠಿಗೆ ಮಾಲನ್ನು ತಲುಪಿಸಿದೊಡನೆ ಹಣವು ನಗದಾಗಿ ಕೊಡಲ್ಪಡುವದು. ಒಪ್ಪಂದದ ಶರ್ತಗಳನ್ನೂ ವಿಶೇಷ ಮಾಹಿತಿಯನ್ನೂ ನಮ್ಮ ಡಿಪೋ ಆಫೀಸರರಿಂದಾಗಲಿ, ಕಲ್ಯಾಣಪುರದಲ್ಲಿರಿಸಲ್ಪಟ್ಟ ನಮ್ಮ ಕುಪ ಆಫೀಸಿನಿಂದಾಗಲೀ ತಿಳಕೊಳ್ಳಬಹುದು.

(sd) W. J. Segar,
Managing Director,
Messrs. Malabar Estates Ltd.
TELLICHERRY.

NOTICE.

Milagres Secondary School, MANGALORE.

June 19/1929

Applications are invited from Secondary trained teacher for the Milagres Secondary School. Apply personally to the Manager.

E. L. Mathias
Manager.

ಇದಕ್ಕೆ ಪ್ರತಿಯಾಗಿ, ನನ್ನ ಮೇಲೆ ಈ ರೀತಿಯ ದುರಾರೋಪಣೆಗಳನ್ನು ಮಾಡುತ್ತಿರುವ ಬಂಟರ ಆ ಪಂಗಡಿಗರು, ನನ್ನ ಮಸೂದೆಯನ್ನೇ ನೆವ ಮಾಡಿ, ದುರ್ಭಾವನೆಗಳನ್ನು ಉದ್ರೇಕಿಸುವುದಕ್ಕೆ ಪ್ರಯತ್ನಿಸುವರೆಂದರೆ ಅದು ತಪ್ಪಾದೀತೇ?

ಮಸೂದೆಯು ಪ್ರಕಟಿತವಾದ ಮೇಲೆ ನನಗೆ ಉಪಯುಕ್ತ ವಿಮರ್ಶೆಗಳು ಬಂದಿವೆ. ಉದಾಹರಣೆಗಾಗಿ, ಬಂಟಸಮಾಜದ ಪ್ರಸಿದ್ಧ ಗೃಹಸ್ಥರಾದ, ಮಾಜಿ ತಾಲೂಕು ಬೋರ್ಡು ಮೆಂಬರರಾದ ಶ್ರೀ. ಕೌಡೂರು ಶ್ರೀನಿವಾಸ ಹೆಗ್ಗಡೆಯವರು, ಮಸೂದೆಯು ನವಯುಗದಲ್ಲಿ ಬಂದ ಸ್ವಲ್ಪ ಸಮಯದಲ್ಲಿ, ಮಸೂದೆಯ ಮೂಲತತ್ವವಾದ ಕವರು ಪ್ರಕಾರದ ಪಾಲು (Branch Partition)ನ್ನು ಅಂಗೀಕರಿಸಿ ಕಾಗದ ಬರೆದರು. ಅದೇ ವೇಳೆ, ಹಿರಿಯರ ಪ್ರಮಾಣ, ಅವಿಭಕ್ತವಾಗಿರುವಂತೆ ಮಾಡುವ ವಿಧಾನ, ಇತ್ಯಾದಿಗಳನ್ನು ಕುರಿತು ಯೋಗ್ಯ ಸೂಚನೆಗಳನ್ನು ಕೊಟ್ಟರು.

ಮಲಬಾರಿನಿಂದಲೂ ಅಭಿಪ್ರಾಯಗಳೂ ನನ್ನೆಡೆಗೆ ಬಂದಿವೆ. ಶ್ರೀ. ಪಿ ಕೇಶವ ಮೇನನ್, ಬಿ. ಎ, ರಿಟಾಯರ್ಡ್ ಎಕ್ಸೈಜ್ ಅಸಿಸ್ಟಂಟ್ ಆಫೀಸರ, ಕಲ್ಲಿಕೋಟೆ ಇವರ ಬಂದ ಒಂದು ಉದಾಹರಣೆಯನ್ನು ಕೊಡುತ್ತೇನೆ; ಅವರು ಮಸೂದೆಯು ಬಹುಕಾಲದಿಂದ ಆವಶ್ಯಕವಾಗಿತ್ತು. ವಿಷಯವೆಂದೂ ಅದು ಬಹಳ ಶಾಂತವಾದ ವ್ಯಕ್ತಿಯುಳ್ಳದೆಂದೂ ಮಲಬಾರಿನ "ನಿವಾಸಿಗಳಾದ ನಾವು ಈ ಮಸೂದೆಯು ಜಾಗ್ರತೆಯಾಗಿ ಕೌನ್ಸಿಲಿನಲ್ಲಿ ಯಶಸ್ವಿಯಾಗಿ ಮಂಜೂರಾತಿಯನ್ನು ಪಡೆಯುವುದೆಂದು ನಿರೀಕ್ಷಿಸುತ್ತೇವೆ" ಎಂಬದಾಗಿಯೂ ಬರೆಯುತ್ತಾರೆ. ನಾನು ಯಾರ ಪ್ರೇರಣೆಯಿಂದ ಈ ಮಸೂದೆಯನ್ನು ತಯಾರಿಸಿದೆನೋ ಅಂಥವರಾದ ಶ್ರೀ ಎಂ. ಕೆ. ನಂಬಿಯಾರ್ ಬಿ. ಎ., ಬಿ. ಎಲ್. ಇವರು ಕೂಡ, ಮಸೂದೆಯು ಬಲು ಶಾಂತಸ್ವಭಾವದ್ದಾಗಿದೆ; ಅವರೂ ಅದು ಬಿಲ್ಲಿನ ವಿಚಾರಣೆಗಾಗಿ ನೇಮಿಸಲ್ಪಡುವ ನಿಯಮಿತ ಸಮಿತಿ (Select Commmittee)ಯಿಂದ ಹೊರ ಬೀಳುವಾಗ ಬೇಕಾದ ತಿದ್ದುಪಡಿಗಳನ್ನು ಮಾಡಿಕೊಳ್ಳಬಹುದೆಂದು ಅಭಿಮತಪಡುತ್ತಾರೆ.

ಸಶೇಷ.

[illegible] ಅಳಿಯಸಂತಾನದ ಕಟ್ಟಿನ ಹಿಸೆಯ ಮಸೂದೆ.

(ಲೇಖಕ — ಕೆ. ಆರ್. ಕಾರಂತ, ಎಮ್. ಎಲ್. ಸಿ.)

ಮೇಲಿನ ವಿಷಯವಾಗಿ ನನ್ನಿಂದ ರಚಿತವಾದ ಮಸೂದೆಯು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಅದನ್ನು ಬಂಟರ ಯಾದವರ ಸಂಘಟಿತ ಮಹಾಸಭೆಯ ಸ್ವಾಗತಾಧ್ಯಕ್ಷರು ಖಂಡನೆ ಮಾಡಿರುವರಲ್ಲದೆ ಆ ಬಗ್ಗೆ ಮಹಾಸಭೆಯಲ್ಲಿ ಖಂಡನರೂಪವಾದ ನಿರ್ಣಯವೂ ಮಾಡಲಾಗಿದೆ. ಈ ಕುರಿತಾಗಿ ನನ್ನ ಅಭಿಪ್ರಾಯಗಳನ್ನು ನೀವು ಪ್ರಕಟಪಡಿಸಿದರೆ ನಾನು ಕೃತಜ್ಞನಾಗಿರುವೆನು.

ನನ್ನ ಮಸೂದೆಯ ವಿಷಯವಾಗಿಯೂ ನನ್ನ ವಿಷಯವಾಗಿಯೂ ಮಾತಾಡುವಾಗ ಸ್ವಾಗತಾಧ್ಯಕ್ಷರಾದ ಶ್ರೀ. ಹಂದಾಡಿ ರಾಮಣ್ಣ ಶೆಟ್ಟರು ಯಾವ ನಿಂದಾತ್ಮಕ ಭಾಷೆಯನ್ನು ಉಪಯೋಗಿಸಿದರೋ ಅದೇ ಭಾಷೆಯಲ್ಲಿ ನಾನು ಉತ್ತರಕೊಡುವುದಿಲ್ಲ. ಅದರ ಬದಲಾಗಿ ಅವರ ಭಾಷಣದ ಯೋಗ್ಯತೆಯನ್ನೂ ಮಹಾಸಭೆಯ ನಿರ್ಣಯವನ್ನೂ ಮಾತ್ರ ಇಲ್ಲಿ ಚರ್ಚಿಸುವೆನು.

ಅವರ ಮೊದಲಿನ ಆಕ್ಷೇಪವು ಈ ಕೆಳಗಿನದೆಂದು ತೋರುತ್ತದೆ: — ನಾನು ಸ್ವತಃ ಅಳಿಯಸಂತಾನ ಕಟ್ಟಿನ ಬಳಕೆಯಲ್ಲಿ ಇಲ್ಲದವನಾದುದರಿಂದ ಆ ಸಂಬಂಧವಾಗಿ ಮಸೂದೆಯನ್ನು ತರುವುದಕ್ಕೆ ನಾನು ಸಮರ್ಥನಲ್ಲ. ಅಳಿಯಸಂತಾನ ಕಟ್ಟಿಗೆ ಸೇರಿದ, ಮತ್ತು ಅವರ ಪೂರ್ವಾಪರಗಳಲ್ಲಿ ತಜ್ಞರಾದ ಶ್ರೀ. ಎ. ಬಿ. ಶೆಟ್ಟಿ, ಎಮ್. ಎಲ್. ಸಿ. ಇವರೆ ಮಸೂದೆಯನ್ನು ತರುವುದಕ್ಕೆ ಸಮರ್ಥರು. ಇಂತಹ ಆಕ್ಷೇಪಣೆಯು ಬರುವಾಗ, ನಾನು ಈ ಮಸೂದೆಯನ್ನು ರಚಿಸುವುದಕ್ಕೆ ಯಾವುದು ಕಾರಣವಾಯಿತು? ಎಂಬೀ ವಿಷಯವನ್ನು ವಿವರಿಸಿದರೆ ಲೇಸು. ಸುಮಾರು ೧೯೨೭ನೆಯ ಆಗೋಸ್ತು ತಿಂಗಳಲ್ಲಿ ಮಂಗಳೂರಿನ ಎಡ್ವೋಕೇಟರಾದ ಶ್ರೀ. ಎಮ್. ಕೆ. ನಂಬಿಯಾರರು, ಮರುಮಕ್ಕತಾಯಂ ಕಟ್ಟಿನಲ್ಲಿ ಬದಲಾವಣೆಗಳಾಗುವುದು ಆವಶ್ಯವೆಂದೂ, ಆ ಬಗ್ಗೆ ಕೊಚ್ಚಿ ಸಂಸ್ಥಾನದಲ್ಲಿ ಜಾರಿಗೆ ಬಂದ ಮಸೂದೆಯಂತಹ ಮಸೂದೆಯೊಂದನ್ನು ಮದ್ರಾಸು ಕೌನ್ಸಿಲಿನಲ್ಲಿ ತರುವುದು ಆವಶ್ಯವೆಂದೂ ನನ್ನೊಡನೆ ಹೇಳಿದರು. ಆಗ ನಾನು ಶ್ರೀ. ಶೆಟ್ಟರ ಪ್ರಸ್ತಾಪವನ್ನು ಎತ್ತಿದೆನು; ಆದರೆ ಅವರು, ತಾನು ಶ್ರೀ. ಶೆಟ್ಟರೊಂದಿಗೆ ಇದರ ಕುರಿತು ಎಷ್ಟೋ ಸಲ ಆಡಿದುದಾಗಿಯೂ ಶ್ರೀ. ಶೆಟ್ಟರು ಇಂತಹ ಮಸೂದೆಯನ್ನು ತರುವ ಸಂಭವವಿಲ್ಲವಾಗಿಯೂ ಹೇಳಿದರು; ನಾನಾದರೂ ಇದು ಯೋಗ್ಯ ಸುಧಾರಣೆಯೆಂದೂ ಆ ಕುರಿತು ಕೆಲಸ ಮಾಡಬೇಕಾದುದು ಯೋಗ್ಯವೆಂದೂ ಭಾವಿಸಿದುದಲ್ಲದೆ, ಆದಷ್ಟು ತೀವ್ರವಾಗಿಯೇ ನಾನೊಂದು ಮಸೂದೆಯನ್ನು ತಯಾರಿಸುತ್ತೇನೆಂದು ಮಾತು ಕೊಟ್ಟೆನು. ತಿಂಗಳು ಕಳೆದಂತೆ ಈ ಕುರಿತು ಕೆಲವು ಮಹನೀಯರು ಆಗ್ರಹಪೂರ್ವಕವಾಗಿ ಮಸೂದೆಯನ್ನು ತೀವ್ರವೇ ತರುವುದರ ಆವಶ್ಯಕತೆಯನ್ನು ತಿಳಿಸಿದರು. ನಾನು ಬಂಟರ ಪ್ರತಿನಿಧಿ ಮಾತ್ರವಲ್ಲ, ಮರುಮಕ್ಕತ್ತಾಯಂ ಮತ್ತು ಅಳಿಯಸಂತಾನ ಕಟ್ಟನ್ನು ಅನುಸರಿಸುವ ಎಷ್ಟೋ ಸಾವಿರ ಬಂಟರಲ್ಲದ ಇತರ ಜಾತಿಯವರ ಪ್ರಾತಿನಿಧ್ಯವನ್ನು ವಹಿಸಿರುವೆನೆಂಬುದನ್ನು ಶ್ರೀ. ರಾಮಣ್ಣ ಶೆಟ್ಟರು ನೆನಪಿನಲ್ಲಿಡುವುದು ಒಳ್ಳೆಯದು. ನನಗೆ ಜನರ ಅಪ್ರೀತಿ ಬರುವುದೆಂಬ ಕಾರಣದಿಂದ ಈ ಕರ್ತವ್ಯವನ್ನು ಬಿಡಲಾಗುವುದಿಲ್ಲ. ಕರ್ತವ್ಯದಿಂದ ತಪ್ಪಿಸಿಕೊಂಡು ಕೇವಲ ಸ್ಥಾನವನ್ನೇ ಗಟ್ಟಿಮಾಡುವುದೂ ಎಂದೂ ನನ್ನ ಗುರಿಯಾಗಿರಲಿಲ್ಲ. ಇದಿಷ್ಟು ಮಸೂದೆಯ ವೃತ್ತಾಂತ. ಇನ್ನು ಜ್ಞಾನದ ಮಟ್ಟಿಗಾದರೋ ಇಂತಹ ಮಸೂದೆಯನ್ನು ರಚಿಸುವುದಕ್ಕೆ ಬೇಕಾದಷ್ಟು ಅಳಿಯಸಂತಾನ ಕಟ್ಟಿನ ಜ್ಞಾನವು ನನಗಿದೆ. ಶ್ರೀಯುತ ರಾಮಣ್ಣ ಶೆಟ್ಟರಿಗೆ ತಾಲೂಕು ಬೋರ್ಡಿನ ಅಧ್ಯಕ್ಷರಾಗಿ, ಆಡಳಿತ ನಡಿಸಲು ವಿದ್ಯೆ, ಲೋಕಲ್ ಬೋರ್ಡುಗಳ ಮಸೂದೆ, ಅಲ್ಲದೆ ಇದಕ್ಕೆ ಸಂಬಂಧಿಸಿದ ಇನ್ನೂ ನೂರು ವಿಷಯಗಳಲ್ಲಿ ಎಷ್ಟು ಮಾಹಿತಿಯಿದೆಯೋ ಎಷ್ಟು ಅನುಭವವಿದೆಯೋ, ಅಷ್ಟು ಪರಿಜ್ಞಾನವಾದರೂ ಅಳಿಯಸಂತಾನ ಕಟ್ಟಿನ ವಿಷಯವಾಗಿ ನನಗಿದೆಯೆಂದು ಶ್ರೀ. ಶೆಟ್ಟರಾದರೂ ಒಪ್ಪಿಕೊಳ್ಳಬೇಕು. ಅಳಿಯಸಂತಾನ ಕಾನೂನು ಯಾರೊಬ್ಬರ ಸ್ವಂತ ಸೊತ್ತಾಗಿಲ್ಲ. ಹೆಚ್ಚೇಕೆ? ಅದು ಶ್ರೀ ಶೆಟ್ಟರ ಒಬ್ಬರ ಹಕ್ಕೂ ಅಲ್ಲ. ಕಳೆದ ಅನೇಕ ವರ್ಷಗಳಿಂದ ಕೊಚ್ಚಿಯಲ್ಲಿ ಜಾರಿಗೆ ಬಂದಿರುವ ಮಸೂದೆಯ ಮಾದರಿಯಲ್ಲಿಯೇ ನನ್ನ ಮಸೂದೆಯು ರಚಿತವಾಗಿದೆ. ನನ್ನ ಅಜ್ಞಾನದ ಮೂಲಕ ಯಾವುದಾದರೂ ದೋಷಗಳು ಮಸೂದೆಯಲ್ಲಿದ್ದರೆ, ಅವುಗಳನ್ನು ತೋರಿಸಿದ್ದಲ್ಲಿ ಸಂತೋಷಪೂರ್ವಕವಾಗಿ ತಿದ್ದಿಕೊಳ್ಳಬಹುದು.

ಶೆಟ್ಟರ ಇನ್ನೊಂದು ಆರೋಪಣೆಯೆಂದರೆ, ಇದು ಬಂಟರ ಸಮಾಜದಲ್ಲಿ ಒಡಕು ಹುಟ್ಟಿಸುವುದಕ್ಕೆ ಸಮಯ ಸಾಧಿಸಿ ನಾನು ಮಾಡಿದ ಉಪಾಯ ಎಂಬುದು. ಮೊದಲಾಗಿ ಈ ಮಸೂದೆಯು ಎರಡು ಜಿಲ್ಲೆಗಳಲ್ಲಿರುವ ಬಂಟರಿಗಲ್ಲದೆ ಅನೇಕ ಜಾತಿಗಳಿಗೂ ಸಂಬಂಧಿಸಿದೆ. ಇದರಲ್ಲಿ ಮಲಬಾರಿನ ಮಾಪಿಳ್ಳೆಗಳಂತಹ ಪ್ರಬಲ ಜಾತಿಯವರ ಸಮಾವೇಶವೂ ಇದೆ. ಎರಡನೆಯದಾಗಿ ಶ್ರೀ. ರಾಮಣ್ಣ ಶೆಟ್ಟರು ವಸ್ತುಸ್ಥಿತಿಗಳನ್ನು ತಿಳಿದುಕೊಳ್ಳುವುದಕ್ಕೆ ಸ್ವಲ್ಪವಾದರೂ ಪ್ರಯತ್ನಿಸುತ್ತಿದ್ದರೆ, ನ್ಯಾಯಪರವಾಗಿ ಆಡುತ್ತಿದ್ದರು; ಅಲ್ಲದೆ ತಮ್ಮ ಭಾಷಣದಲ್ಲಿ ಕೊಟ್ಟಂತಹ ಅವಸರದ ಅಭಿಪ್ರಾಯಗಳನ್ನು ಕೊಡುತ್ತಿರಲಿಲ್ಲ, ಎಂಬುದನ್ನು ಕೆಳಗಿನ ತಾರೀಕುಗಳ ವಿವರದಿಂದ ತಿಳಿಯಬಹುದು: — ಮಸೂದೆಯನ್ನು ತರಲು ಒಪ್ಪಿಗೆ ಕೊಡಬೇಕೆಂದು ಗವರ್ನರ ಜನರಲ್ಲರಿಗೆ ನಾನು ಮನವಿ ಮಾಡಿಕೊಂಡ ತಾರೀಕು ೨೧—೯—೧೯೨೭. ಒಪ್ಪಿಗೆ ಸಿಕ್ಕಿದ ತಾರೀಕು ೨೩—೧೧—೧೯೨೮. ಕೂಡಲೇ ಮಸೂದೆಯು ಸಾರ್ವಜನಿಕ ವಿಮರ್ಶೆಗಾಗಿ ಮದ್ರಾಸಿನ 'ಹಿಂದೂ' ಪತ್ರಿಕೆಯಲ್ಲಿ ಪ್ರಕಟಿತವಾಯಿತು. ಅಲ್ಲದೆ ಸ್ಥಳೀಯ ವಾರಪತ್ರಿಕೆಗಳಲ್ಲಿಯೂ ಪ್ರಸಿದ್ಧವಾಯಿತು. ಬಂಟರ ಸಮಾಜದ ಪತ್ರಿಕೆಯಾಗಿದ್ದ, ಶ್ರೀ. ಎ. ಬಿ. ಶೆಟ್ಟಿ ಇವರ ಸಂಪಾದಕತ್ವದಲ್ಲಿ ಹೊರಡುವ 'ನವಯುಗ'ದಲ್ಲಿ ಈ ಮಸೂದೆಯನ್ನೂ ಅದರ ಉದ್ದೇಶಗಳನ್ನೂ ಹೇತುಗಳನ್ನೂ ಜಿಲ್ಲೆಯ ಮಾತೃಭಾಷೆಯಾದ ಕನ್ನಡದಲ್ಲಿ ೨೨—೧೨—೧೯೨೮ರಲ್ಲಿ ಮುದ್ರಿಸಲಾಯಿತು. ಈ ರೀತಿಯಲಿ ಮಸೂದೆಯು ಪ್ರಸಿದ್ಧವಾದ ಅನಂತರವೇ ಕಳೆದ ವರ್ಷದ ಬಂಟರ ಸಭೆಯು ಜರಗಿದುದು. ಆಗ ಆ ಮಸೂದೆಯನ್ನು ಅಲಕ್ಷಿಸಿ, ಈಗ ಮಾತ್ರ ಅದರಲ್ಲಿ ಹೆಚ್ಚು ಗಮನ ಕೊಟ್ಟು ನನ್ನ ಮೇಲೆ ಚುನಾವಣೆಯ ದುರುದ್ದೇಶಗಳ ಆರೋಪಣೆಯನ್ನು ಮಾಡುವುದಾದರೂ ಏಕೆ?

ಅತಿಯಾಸೆಯ ಪರಿಣಾಮ

(ಕಥೆ)

ಹಾರಾಡಿ ... ಕೃ.

(ಮುಂದುವರಿದುದು)

ಗುರುತಿಸಲ್ಪಟ್ಟ ಗೆರೆಯನ್ನು ಕಂಡು ಜನಾರ್ಧನನು "ಅಯ್ಯಾ, ನೀವು ಮಾಡಿದ ಗುರುತು ಬಹಳ ಎತ್ತರವಾಯಿತು. ಇನ್ನೆರಡು ಮೊಳ ಕೆಳಗೆ 'ಗ್ಯಾಸ್‌ಲೈಟ'ನ್ನು ಇಡುವುದು ಉತ್ತಮವು. ಇಲ್ಲವಾದರೆ ಕಾಪ್ಪಕ್ಕೆ ಆಕಸ್ಮಾತ್ತಾಗಿ ಎಲ್ಲಿಯಾದರೂ ಬೆಂಕಿ ತಗಲಿದರೆ!" ಎಂದು ಹೇಳಿದನು.

"ಎಲ್ಲವೂ ನಾನು ಸೂಚಿಸಿದಂತೆಯೇ ಆಗಲಿ. 'ಗ್ಯಾಸಲೈಟು' ನಾನು ಗುರುತು ಹಾಕಿದ ಸ್ಥಳದಲ್ಲೇ ಇಡಲ್ಪಡಲಿ. ಹದಿನಾಲ್ಕು ಲೈಟಿನ ಆ ಲ್ಯಾಂಪು ಮಾತ್ರ ಬಲಗಡೆಯಲ್ಲಿ ತೂಗಿಸಲ್ಪಡಬೇಕು" ಎನ್ನುತ್ತ ವಸಂತ ಭಟ್ಟರು ತನ್ನ ಮನೆಗೆ ಪ್ರಸ್ಥಾನ ಮಾಡಿದರು.

— ೩ —

ಜನಾರ್ಧನನು ಮಾತ್ರ ಆ ಇಡೀ ರಾತ್ರಿಯನ್ನು ಅಪಾರ ಧಾವನೆಯಲ್ಲೇ ಕಳೆದನು. ನಾಲ್ಕು ಪಾಲು ಹೆಚ್ಚಿಗೆ ಮೌಲ್ಯವನ್ನು ಕಾಣಿಸಿ ಲೆಕ್ಕಗಳನ್ನು ಸಿದ್ಧಗೊಳಿಸುವುದೇಕೆ? ವಕೀಲರೇನಾದರೂ ಕಾರ್ಖಾನೆಯನ್ನು ಹಸ್ತಾಂತರಿಕಗೊಳಿಸುವ ಯೋಚನೆಯಲ್ಲಿರುವರೇ? ಹಸ್ತಾಂತರಗೊಳಿಸುವುದಾದರೆ 'ಗ್ಯಾಸ್‌ಲೈಟ'ನ್ನು ಕೊಂಡುಕೊಳ್ಳುವುದೇಕೆ? ಗ್ಯಾಸ್‌ಲೈಟನ್ನೂ ಹದಿನಾಲ್ಕು ಲೈಟಿನ ದೀಪವನ್ನೂ ಅವರು ಗುರುತಿಸಿದ ಸ್ಥಳದಲ್ಲೇ ಇಡಬೇಕೆಂಬುದರ ಮರ್ಮವೇನು? ಜನಾರ್ಧನನು ಎಷ್ಟು ನಿಪುಣನಾದರೂ ಈ ವಿಷಯವೆಲ್ಲ ಆತನಿಗೆ ಅಭೇದ್ಯ ಸಮಸ್ಯೆಯಾಗಿಯೇ ಉಳಿಯಿತು. ಹೀಗೆ ವಿವಿಧ ರೀತಿಯಲ್ಲಿ ಭಾವಿಸಿ ಭಾವಿಸಿ ಆತನು ನಿದ್ರಿಸಿದನು.

ಯಥಾ ಸಮಯದಲ್ಲಿ ಕಾರ್ಖಾನೆಯಲ್ಲಿ 'ಗ್ಯಾಸ್‌ಲೈಟು'ನ ವ್ಯವಸ್ಥೆಯಾಯಿತು. ವಸಂತ ಭಟ್ಟರು ಪ್ರತಿ ದಿನವೂ ಸಿದ್ಧಗೊಳಿಸಲ್ಪಟ್ಟ ಲೆಕ್ಕವನ್ನು ನೋಡಿ ಹೋಗುತ್ತಿದ್ದರು. ಮಧ್ಯ ಮಧ್ಯದಲ್ಲಿ ಜನಾರ್ಧನನು ತನ್ನ ಯಜಮಾನನನ್ನು ಮೆಚ್ಚಿಸುವುದಕ್ಕಾಗಿ ಒಂದೊಂದು ವಸ್ತುವಿಗೆ ಎಂಟು ಪಾಲು, ಆರು ಪಾಲು ಮೌಲ್ಯವನ್ನು ಹೆಚ್ಚಿಗೆ ಕಾಣಿಸಿ ಲೆಕ್ಕವನ್ನು ತೋರಿಸ ಲಾರಂಭಿಸಿದನು. ಈ ರೀತಿಯಲ್ಲಿ ಸಾಧಾರಣ ಒಂದು ಮಾಸದೊಳಗೆ ಇಡೀ ಕಾರ್ಖಾನೆಯಲ್ಲಿರುವ ವಸ್ತುಗಳ ಲೆಕ್ಕವು ಸಿದ್ಧವಾದಂತಾಯಿತು. ಎಲ್ಲಾ ವಸ್ತುಗಳ ಬೆಲೆಯೂ ಭವನದಲ್ಲಿ ಸಂಗ್ರಹೀತವಾಗಿರುವ ಕಾಪ್ಪದ ಬೆಲೆಯೂ ಕೂಡಿ ನಾಲ್ವತ್ತು ಸಾವಿರ ರೂಪಾಯಿ ಮೌಲ್ಯವು ಲೆಕ್ಕದ ಪುಸ್ತಕದಲ್ಲಿ ತೋರಿಸಲ್ಪಟ್ಟಿತು. ಅಂದಿನಿಂದ ವಸಂತ ಭಟ್ಟರು ಸರ್ವ ಲೆಕ್ಕದ ಪುಸ್ತಕಗಳನ್ನೂ ತನ್ನ ಸ್ವಾಧೀನವೇ ಮನೆಯಲ್ಲಿಟ್ಟುಕೊಂಡರು. ಕಾರ್ಖಾನೆಯಲ್ಲಿ ಆ ದಿವಸದಿಂದ ಲೆಕ್ಕಕ್ಕೆ ಒಂದು ಕಂಡು ಪುಸ್ತಕವಿಡಲ್ಪಟ್ಟಿತು. ಅದರಲ್ಲಿ ಕಾಣಿಸಿದಂತೆ ನಾಲ್ಕಾರು ಪಾಲು ಹೆಚ್ಚಿಗೆ ಮೌಲ್ಯವನ್ನು ತೋರಿಸಿ ನವೀನವಾಗಿ ಸಿದ್ಧಗೊಳಿಸಲ್ಪಟ್ಟ ಲೆಕ್ಕದ ಪುಸ್ತಕದಲ್ಲಿ ಪ್ರತಿನಿತ್ಯವೂ ಉಲ್ಲೇಖಿಸುವ ವ್ಯವಸ್ಥೆಯಾಯಿತು. ಈ ರೀತಿಯ ವ್ಯವಸ್ಥೆಯನ್ನು ನೋಡಿ ಜನಾರ್ಧನನು ವಸಂತ ಭಟ್ಟರನ್ನು ಕುರಿತು "ಸ್ವಾಮಿ, ಹೀಗೆ ಸುಳ್ಳು ಲೆಕ್ಕ ಪತ್ರವನ್ನಿಡುವುದೇಕೆಂಬುದು ನನಗೆ ತಿಳಿಯುವುದಿಲ್ಲ" ಎಂದನು. ಅದಕ್ಕೆ ವಸಂತ ಭಟ್ಟರು "ಅನ್ಯರಿಗೆ ನಮ್ಮಲ್ಲಿ ಹೆಚ್ಚು ಮೌಲ್ಯದ ವಸ್ತುಗಳಿವೆ ಎಂಬುದಾಗಿ ತೋರಿಸುವುದೇ ಈ ರೀತಿಯ ಲೆಕ್ಕಗಳ ಉದ್ದೇಶವು. ವ್ಯವಸಾಯದಲ್ಲಿ ತುಂಬಾ ನಷ್ಟವಾಗಿದೆ. ಈ ವ್ಯಾಪಾರದಲ್ಲೂ ಏನೂ ನಷ್ಟವಾಗದಂತೆ ಜಾಗ್ರತೆಯಿರಲಿ" ಎಂದು ಹೇಳಿದರು.

— ೪ —

ಈ ರೀತಿಯಲ್ಲಿ ಎರಡು ಮೂರು ಮಾಸಗಳು ಕಳೆದು ಹೋದುವು. ಒಂದು ದಿವಸ ವಕೀಲ್ ವಸಂತ ಭಟ್ಟರು ತನ್ನ ಗೃಹದ ಚಾವಡಿಯಲ್ಲಿ ಒಂದು ಆರಾಮ ಕುರ್ಚಿಯಲ್ಲಿ ಒರಗಿ ಅವುದೋ ಒಂದು ವಾರ್ತಾ ಪತ್ರಿಕೆಯನ್ನು ಓದಿನೋಡುತ್ತಿದ್ದರು. ಆಗ ಸಾಧಾರಣ ಅಪರಾಹ್ನ ನಾಲ್ಕು ನಾಲ್ಕೂವರೆ ಗಂಟೆಯಾಗಿರಬಹುದು. ಅವರ ಗೃಹದ ಇದಿರಲ್ಲಿರುವ ರಾಜಪಥದಲ್ಲಿ ಒಂದೊಂದೇ ಗಾಡಿಯು ಹೋಗುತ್ತಿತ್ತು. ಅವರು ಹಾಗೆ ಒಂದರ ಹಿಂದೆ ಒಂದಾಗಿ ಹೋಗುವ ಆ ಗಾಡಿಗಳನ್ನೆಲ್ಲಾ ನೋಡುತ್ತಿದ್ದರು. ಹೀಗೆ ಅನೇಕ ಗಾಡಿಗಳು ಆ ರಾಜಪಥದಲ್ಲಿ ಹೋದ ಬಳಿಕ ಒಂದು ಅಂದವಾದ 'ಮೋಟಾರ್ ಕಾರು' ಅವರ ಮನೆಯ ಬಾಗಿಲಲ್ಲಿ ಬಂದು ನಿಂತುಕೊಂಡಿತು. 'ಮೋಟಾರ್ ಕಾರಿ'ನಲ್ಲಿ ಶ್ವೇತವರ್ಣದ ಧೊರೆಯೊಬ್ಬನಿದ್ದನು. ಧೊರೆಯ ಕೈಯಲ್ಲಿ ಒಂದು ಪತ್ರವಿತ್ತು. 'ಮೋಟಾರ್ ಕಾರಿ'ನ ಹಿಂದಿನ ಆಸನದಲ್ಲಿ ಒಬ್ಬ ಕೃಷ್ಣ ವರ್ಣದ ಪುರುಷನಿದ್ದನು. 'ಮೋಟಾರ್ ಕಾರು' ಬಂದು ವಸಂತ ಭಟ್ಟರ ಮನೆಯ ಮುಂಭಾಗದಲ್ಲಿ ನಿಂತೊಡನೆಯೇ ಆ ಶುದ್ಧ ಕಪ್ಪು ಛಾಯೆಯ ವ್ಯಕ್ತಿಯು ಒಮ್ಮೆ ನಗಾಡಿದನು. ಸಂಪೂರ್ಣ ಕಪ್ಪಾಗಿರುವ ಆ ಮುಖ ಮಂಡಲದಲ್ಲಿ ಆತನ ಹಲ್ಲುಗಳು ಅಮಾವಾಸ್ಯೆಯ ರಾತ್ರಿಯಲ್ಲಿ ಮಿಂಚು ಮಿಂಚಿದಂತೆ ತೋರಿದುವು. ಆತನಿಗೆ ಮುಖದ ಮೇಲೆ ಮೊಸಗೆಗಳಿದ್ದರೂ ಮುಖದ ಕಪ್ಪು ಛಾಯೆಯು ಅತಿಶಯವಾಗಿದ್ದುದರಿಂದ ಅವುಗಳು ಸ್ಪಷ್ಟವಾಗಿ ತೋರುತ್ತಿರಲಿಲ್ಲ. 'ಮೋಟಾರ್ ಕಾರಿ'ನಲ್ಲಿದ್ದ ಪುರುಷರಿಬ್ಬರೂ ಕೆಳಕ್ಕೆ ಇಳಿದು ತಮ್ಮ ತಮ್ಮೊಳಗೆ ಫ್ರೆಂಚ್ ಭಾಷೆಯಿಂದ ಏನನ್ನೋ ಮಾತನಾಡಿಕೊಂಡರು. ಆದುದರಿಂದ ಆ ಶ್ವೇತ ವರ್ಣದ ಧೊರೆಯು ಫ್ರಾನ್ಸ್ ದೇಶದವನಾಗಿರಬೇಕು. ಆತನೊಡನೆ ಬಂದಿದ್ದ ಕೃಷ್ಣ ವರ್ಣದ ವ್ಯಕ್ತಿಯು ಧೊರೆಯ 'ಇಂಟರ್ ಪ್ರೀಟರ್' ಅಥವಾ ಭಾಷಾಂತರಕಾರನಾಗಿರಬೇಕು. ಆ ಪುರುಷರಿಬ್ಬರೂ 'ಕಾರಿ'ನಿಂದ ಕೆಳಕ್ಕಿಳಿದೊಡನೆಯೇ ವಸಂತ ಭಟ್ಟರು ಚಾವಡಿಯಿಂದ ಕೆಳಕ್ಕಿಳಿದು ಅತಿಥಿಗಳಿಬ್ಬರಿಗೂ ಅಭಿವಾದನ ಮಾಡಿದರು. ಒಡನೆಯೇ ಧೊರೆಯು ವಸಂತ ಭಟ್ಟರನ್ನು ಕುರಿತು ಫ್ರೆಂಚ್ ಭಾಷೆಯಲ್ಲಿ ಹೀಗೆ ಹೇಳಿದರು. "Monsieur Comment vous portez vous? (ಸ್ವಾಮಿ, ನೀವು ಕ್ಷೇಮವಾಗಿರುವಿರಾ?) J'ai recu la lettre que vous avez ecrit hier (ನೀವು ನಿನ್ನೆ ಉಲ್ಲೇಖಿಸಿದ ಪತ್ರವು ನನಗೆ ದೊರಕಿಯದೆ) Sovez-vous qui suis, ge? (ನಾನಾರೆಂಬುದು ನಿಮಗೆ ತಿಳಿಯಿತೇ?) Je suis une homme de la "Humbug Fire Insurance Co., (ನಾನು 'ಹಂಬಗ್ ಫಾಯರ್' ಇನ್ಶೂರೆನ್ಸ್ ಕಂಪೆನಿಯ ಒಬ್ಬ ಪ್ರತಿನಿಧಿಯಾಗಿರುವೆನು) Mon nom est Monsieur Billet Rouge. (ನನ್ನ ನಾಮವು 'ಮಿಸ್ಟರ್ ಬಿಯ್ಯೆತ್ ರೂಜ್' ಎಂದಾಗಿದೆ) S'il Vous plait nous vous admettons. (ನಿಮಗೆ ಇಷ್ಟವಿದ್ದರೆ ನಿಮ್ಮನ್ನು ನಮ್ಮ ಫಾಯರ್ ಇನ್ಶೂರೆನ್ಸ್ ಕಂಪೆನಿಗೆ ಸೇರಿಸಿಕೊಳ್ಳುವೆವು.) Mais d'abord je verrai votre boutique et montrez votre liste du chose (ಆದರೆ ಪ್ರಥಮದಲ್ಲಿ ನಾನು ನಿಮ್ಮ ಕಾರ್ಖಾನೆಯನ್ನು ನೋಡಬೇಕಾಗಿದೆ. ಮತ್ತು ನೀವು ನಿಮ್ಮಲ್ಲಿ ಸಿದ್ಧವಾಗಿರುವ ಎಲ್ಲಾ ವಸ್ತುಗಳ ಪಟ್ಟಿಯನ್ನೂ ಲೆಕ್ಕವನ್ನೂ ತೋರಿಸಿರಿ) Je Saurais les prix de les chose. (ನಿಮ್ಮ ಆ ಎಲ್ಲಾ ವಸ್ತುಗಳ ಮೌಲ್ಯವು ನನಗೆ ತಿಳಿಯಬೇಕಾಗಿದೆ) J'aime a avoir votre boulique pour quarante mille Rupees. (ನಾನು ನಿಮ್ಮ ಕಾರ್ಖಾನೆಯನ್ನು ೪೦೦೦೦ ರೂಪಾಯಿಗಳಿಗೆ ಇನ್ಶೂರು ಮಾಡಲು ಒಪ್ಪುವೆನು)"

ಅದಕ್ಕೆ ವಕೀಲ್ ವಸಂತ ಭಟ್ಟರು "ನನ್ನ ಕಾರ್ಖಾನೆಯ ಲೆಕ್ಕಪತ್ರಗಳೆಲ್ಲವೂ ಇಲ್ಲೇ ಇವೆ. ಅದರಲ್ಲಿ ಎಲ್ಲಾ ವಸ್ತುಗಳ ವಿವರವೂ ಮೌಲ್ಯವೂ ಕಾಣಿಸಲ್ಪಟ್ಟಿದೆ. ಇನ್ನು ಕಾರ್ಖಾನೆಗೆ ಹೋಗುವ ಆಗತ್ಯವೇನು?" ಎಂದರು. ಧೊರೆಯೊಡನೆ ಬಂದಿದ್ದ ಆ ಕೃಷ್ಣಕಾಯದ ಮಹಾಶಯನು ವಸಂತ ಭಟ್ಟರ ಅಭಿಪ್ರಾಯವನ್ನು ತಿಳಿದು "ಹಾಗಾದರೂ ಒಮ್ಮೆ ಅದನ್ನು ನೋಡದೆ ಇನ್ಶೂರು ಮಾಡುವುದಕ್ಕೆ ಸಾಧ್ಯವಿದೆಯೇ? ಥಕ್ಕನೆ ನಿಮಗೆ ಅಗ್ನಿಯಿಂದ ನಷ್ಟವುಂಟಾದರೆ ನಾಳೆ ಕಂಪೆನಿಯವರು ಹಣವನ್ನು ಕೊಡಬೇಕಲ್ಲವೇ?" ಎಂದು ಹೇಳುತ್ತ ವಸಂತ ಭಟ್ಟರಿಗೆ ಕೈಸನ್ನೆಯಿಂದ ಹೊರಕ್ಕೆ ಬರ ಹೇಳಿದನು. ಇಬ್ಬರೂ ಹೊರಕ್ಕೆ ಹೋದೊಡನೆ ಆ ಕೃಷ್ಣಛಾಯೆಯ ಮಹಾಶಯನು ವಸಂತ ಭಟ್ಟರೊಡನೆ "ಭಟ್ಟರೇ, ಎಲ್ಲವೂ ರೂಪಾಯಿಯ ಆಟವಾಗಿದೆ. ರೂಪಾಯಿ ಇದ್ದರೆ ಏನು ಬೇಕಾದರೂ ಮಾಡಲು ಸಾಧ್ಯವಿದೆ. ಐವತ್ತು ರೂಪಾಯಿ ಇತ್ತ ಬರಲಿ: ನಾನೆಲ್ಲವನ್ನೂ ನಿಮಗೆ ಅನುಕೂಲವಾಗಿ ಮಾಡಿಸಿ ಬಿಡುತ್ತೇನೆ ನೋಡಿರಿ. ಇನ್ನೊಂದು ಕಡೆಯಲ್ಲಿ ಎರಡು ಕಟ್ಟಡಗಳನ್ನು ಅಗ್ನಿವಿಮೆಗೆ ಸೇರಿಸುವ ಕೆಲಸವಿದೆ. ಆದುದರಿಂದ ಆ ಸ್ಥಳಕ್ಕೆ ಹೋಗಲು ವಿಳಂಬವಾಗುತ್ತೆ. ಇಲ್ಲಿ ವಿಳಂಬ ಮಾಡಲು ಸಾಧ್ಯವಿಲ್ಲ. ಎಂದು ಒತ್ತಾಯ ಪಡಿಸಿ, ನಿಮ್ಮ ಲೆಕ್ಕಪತ್ರಗಳಲ್ಲಿ ತೋರುವಂತೆಯೇ ನಾಲ್ವತ್ತು ಸಾವಿರ ರೂಪಾಯಿಗಳಿಗೆ ನಿಮ್ಮ ಕಾರ್ಖಾನೆಯನ್ನು ಅಗ್ನಿವಿಮೆಗೆ ಸೇರಿಸುವೆನು" ಎಂದು ಹೇಳಿದನು. ವಸಂತ ಭಟ್ಟರು ಇದಕ್ಕೆ ಒಪ್ಪಿಕೊಂಡರು. ಆ ಕೂಡಲೇ ಅವರ ಆ ಕಾಷ್ಠದಿಂದಲೇ ನಿರ್ಮಿತವಾದ ಆ ವಿಸ್ತಾರವಾದ ಗೃಹವು 'ಹಂಬಗ್ ಫಾಯರ್ ಇನ್ಶೂರೆನ್ಸ್ ಕಂಪೆನಿ'ಯಲ್ಲಿ ನಾಲ್ವತ್ತು ಸಾವಿರ ರೂಪಾಯಿಗಳಿಗೆ ಇನ್ಶೂರು ಮಾಡಲಾಯಿತು. ವಸಂತ ಭಟ್ಟರು ತಾನು ವಾರ್ತಾ ಪತ್ರಿಕೆಗಳನ್ನು ಓದಿ ನೋಡಿದುದು ಈಗ ಸಾರ್ಥಕವಾದಂತಾಯಿತು ಎಂಬದಾಗಿ ತನ್ನ ಮನಸ್ಸಿನಲ್ಲೇ ಭಾವಿಸಿಕೊಂಡರು.

— ೫ —

ಕಾರ್ಖಾನೆಯನ್ನು 'ಹಂಬಗ್ ಫಾಯರ್ ಇನ್ಶೂರೆನ್ಸ್ ಕಂಪೆನಿ'ಯಲ್ಲಿ ಇನ್ಶೂರು ಮಾಡಿ ಸಾಧಾರಣ ಹತ್ತು ತಿಂಗಳುಗಳಾದುವು. ಈಗ ವಸಂತ ಭಟ್ಟರು ಕಾರ್ಖಾನೆಗೆ ಪ್ರತಿನಿತ್ಯವೂ ಹೋಗಿ ಬರುವುದು ಕಡಮೆಯಾಯಿತು. ಒಂದು ದಿವಸ ರಾತ್ರಿ ವಸಂತ ಭಟ್ಟರು ತನ್ನಷ್ಟಕ್ಕೇನೇ ಯೋಚಿಸಿ ಒಂದು ಹಂಚಿಕೆಯನ್ನು ಕಂಡು ಹಿಡಿದರು. ಮರು ದಿನ ಅವರು ಒಂದು ಅಂಗಡಿಗೆ ಹೋಗಿ 'ಗ್ಯಾಸಲೈಟು'ಗಾಗಿ ೨೮ ನಂಬ್ರದ ಬರ್ನರನ್ನು ಕ್ರಯಕ್ಕೆ ಕೊಂಡುಕೊಂಡು ಬಂದರು. ಮತ್ತು ಕಾರ್ಖಾನೆಗೆ ಜನ ಕಳುಹಿಸಿ ಜನಾರ್ಧನನನ್ನು ತನ್ನ ಮನೆಗೆ ಬರುವಂತೆ ಮಾಡಿದರು. ಜನಾರ್ಧನನು ಮನೆಗೆ ಬಂದೊಡನೆಯೇ "ನೋಡು, ಜನಾರ್ಧನಾ ನೀನಿಂದು ಒಂದು ಕೆಲಸಕ್ಕಾಗಿ ಬೈಲೂರುವರೇಗೆ ಹೋಗಿ ಬರಬೇಕು. ಅಲ್ಲಿ ನನ್ನ ಸಹೋದರಮಾವ ಶಂಕರ ಭಟ್ಟರಿದ್ದಾರೆ. ಅವರಲ್ಲಿಂದ ಪತ್ರಗಳಿಲ್ಲದೆ ಅನೇಕ ದಿವಸಗಳಾದುವು. ಅವರಲ್ಲಿ ಎಲ್ಲರೂ ಕ್ಷೇಮವಾಗಿದ್ದಾರೋ ಎಂಬುದನ್ನು ಈ ಕೂಡಲೇ ಹೋಗಿ ತಿಳಿದುಕೊಂಡು ಬರಬೇಕು" ಎಂದು ವಸಂತ ಭಟ್ಟರು ಹೇಳಿದರು.

"ಪತ್ರವನ್ನು ಬರೆದು ತಿಳಿದುಕೊಳ್ಳಲಾಗದೇ?" ಎಂದು ಜನಾರ್ಧನನು ಪ್ರಶ್ನಿಸಿದನು.

"ಅದಾಗದು, ಅದಾಗದು, ನೀನೀಗಲೇ ಹೊರಟು ಹೋಗು" ಎಂದು ವಸಂತ ಭಟ್ಟರು ಉತ್ತರವಿತ್ತರು. ಜನಾರ್ಧನನು ಆ ಕೂಡಲೇ ಬೈಲೂರಿಗೆ ಹೊರಟು ಹೋದನು. ಆಗ ಅಪರಾಹ್ನ ಐದು ಘಂಟೆಯಾಗಿರಬಹುದು.

ಸೂರ್ಯಾಸ್ತಮಯವಾದ ಕೂಡಲೇ ವಸಂತಭಟ್ಟರು ಆ ದೊಡ್ಡ ಬರ್ನರನ್ನು ಹಿಡಿದುಕೊಂಡು ಕಾರ್ಖಾನೆಗೆ ಹೋಗಿ ಅಲ್ಲಿ ಮೇಲೆ ತೂಗಿಸಲ್ಪಟ್ಟಿರುವ ಗ್ಯಾಸುದೀಪಕ್ಕೆ ಅದನ್ನು ಸಿಕ್ಕಿಸಿ ಆ ದೀಪವನ್ನು ಉರಿಸಿದನು. ಗ್ಯಾಸಿನ ಉಷ್ಣದಿಂದ ಮೇಲಿರುವ ಹಲಿಗೆಗಳ ಬಣ್ಣವು ಪರಿವರ್ತಿತವಾಗಿ ಒಂದೆರಡು ಗಂಟೆಯೊಳಗೆ ಹಲಗೆಯೊಳಗಿಂದ ಹೊಗೆಯು ಹೊರಡಲಾರಂಭವಾಯಿತು. ಹಾಗೆಯೇ ರಾತ್ರಿಯಾಯಿತು. ವಸಂತಭಟ್ಟರು ಸೇವಕರನ್ನೆಲ್ಲಾ ಬಿಟ್ಟು ಕಾರ್ಖಾನೆಯ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿ ಮನೆಗೆ ತೆರಳಿದರು. ಮನೆಗೆ ಬರುವಾಗ ಆ ಗ್ಯಾಸು ದೀಪವನ್ನು ನಂದಿಸುವುದಕ್ಕೆ ನೆನಪಿರಲಿಲ್ಲ. ಹಾಗೆಯೇ ಬಂದಿದ್ದರು. ಗ್ಯಾಸು ದೀಪವು ಕಾರ್ಖಾನೆಯಲ್ಲಿ ಉರಿಯುತ್ತಲೇ ಇತ್ತು. ಆ ದಿವಸ ಭಯಂಕರವಾದ ಉಷ್ಣವಿತ್ತು. ಮೊದಲೇ ಆ ಮಾಸವು ವೈಶಾಖ ಮಾಸವಾಗಿತ್ತು. ಅದರಲ್ಲೂ ಹತ್ತು ಹದಿನೈದು ದಿವಸಗಳು ಕಳೆದುಹೋದರೂ ಒಂದೇ ಒಂದು ಸಾರಿ ವೃಷ್ಟಿಯು ಸುರಿಯದಿದ್ದುದರಿಂದ ಉಷ್ಣವು ಇನ್ನಷ್ಟು ಭಯಂಕರವಾಗಿತ್ತು. ವಸಂತಭಟ್ಟರು ಒಂದು ಆರಾಮ ಕುರ್ಚಿಯಲ್ಲಿ ಕುಳಿತುಕೊಂಡು ಏನನ್ನೋ ಭಾವಿಸುತ್ತಿದ್ದರು. ಅವರ ಬಾಯಿಯಲ್ಲಿ ಮಾತಿಲ್ಲ. ಚಕ್ಷುಗಳಿಗೆ ನಿದ್ರೆಯಿಲ್ಲ, ವದನಕ್ಕೆ ಕಾಂತಿಯಿಲ್ಲ. ನಿರ್ನಿಮೇಷ ನೇತ್ರಗಳಿಂದ ಉತ್ತರ ದಿಕ್ಕಿನಲ್ಲಿ ಆಕಾಶವನ್ನೇ ದಿಟ್ಟಿಸುತ್ತ ಮಧ್ಯಮಧ್ಯದಲ್ಲಿ ದೀರ್ಘ ನಿಶ್ವಾಸವನ್ನು ಬಿಡುತ್ತಿದ್ದರು. ಈ ರೀತಿಯಲ್ಲಿ ಹದಿನೆರಡು ಗಂಟೆ ಹೊಡೆದುಹೋಯಿತು. ಅಷ್ಟರಲ್ಲಿ ಉತ್ತರ ದಿಕ್ಕಿನಲ್ಲಿ ಆಕಾಶದಲ್ಲಿ ದೊಡ್ಡ ಪ್ರಕಾಶವು ತೋರಿಬಂದಿತು. ಆ ಪ್ರಕಾಶವು ಕ್ರಮಕ್ರಮವಾಗಿ ಉಜ್ವಲವಾಗಿ ತೋರಿಬಂದಿತು. ವಸಂತ ಭಟ್ಟರು ಮಾತ್ರ ಸಂತೋಷದಿಂದ ನಸುನಗುತ್ತ ನಗಾಡುತ್ತ ಆ ಪ್ರಕಾಶವನ್ನೇ ನೋಡುತ್ತ ಆರಾಮ ಕುರ್ಚಿಯಿಂದ ಎದ್ದು ಮನೆಯೊಳಕ್ಕೆ ಹೋದರು.

ಸಶೇಷ.

ಮ್ಯಾನೇಜರು:— ಆರಬಸ್ಥಾನದಲ್ಲಿ ಉಸುಬಿನ ಮೈದಾನಗಳು (ಮರಳುಗಾಡುಗಳು) ಇಲ್ಲದಂತೆ ಮಾಡಬೇಕಾದರೆ ಏನು ಮಾಡಬೇಕು?

ಅಹಮ್ಮದ:— ಅಲ್ಲಿ ಘನ ಸಮುದ್ರವು ಹರಿಯುವಂತೆ ಮಾಡಬೇಕು.

X X X X X X X

ಸುಲ್ತಾನ:— ಮಹಮ್ಮದಾ, ಹೊಟ್ಟೆ ತೊರಕೊಳ್ಳಲಿಕ್ಕೆ (ತುಂಬಿಸಿಕೊಳ್ಳಲಿಕ್ಕೆ) ಏನು ಉಪಾಯ ಮಾಡಬೇಕು?

ಮಹಮ್ಮದ:— ಬೇಲಿಯ ಮೇಲೆ ಬೀಳಬೇಕು; ಇಲ್ಲವೆ ಕುದಗೋಲನ್ನು ನುಂಗಬೇಕು.

X X X X X X X

ಬಂಡೆಪ್ಪ:— ಸೋಮಾ, ಈ ಪುಸ್ತಕವನ್ನು ಓದುವದರಿಂದ ನಿನಗೇನು ತಿಳಿಯಿತು?

ಸೋಮಪ್ಪ:— ಇವರಲ್ಲಿ ಏನದೆ ಎಂಬುದು ನನ್ನ ಬುದ್ಧಿಗೆ ನಿಲುಕಲೊಲ್ಲದು.

ಬಂಡೆಪ್ಪ:— ಹಾಗಾದರೆ ಈ ಉದ್ದನ್ನ ಕೋಲನ್ನಾದರೂ ಚಕ್ಕೋ (ಕೋಲು ಕೊಡುತ್ತಾನೆ) ಈಗಲಾದರೂ ನಿಲುಕುತ್ತದೋ.

ಸೋಮಪ್ಪ:— ನಿನ್ನ ಮೂರ್ಖತನಕ್ಕೆ ಬೆಲೆ ಇಲ್ಲದಂತಾಯಿತು.

ಮನಮೋಹನ ರಾವ್.

ESTABLISHED 1876.

M. Ganapaya & Sons,

AYURVEDIC PHYSICIAN.

Car Street, MANGALORE, S. Kanara.

(೫೦ ವರುಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ — ಔಷಧಗಳು.) —

1. ಅಶೋಕಾರಿಷ್ಟ ಮತ್ತು ಮಾತ್ರೆ—

ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಇಲ್ಲದಿರುವಿಕೆ, ಮಾಸಿಕ ಸ್ತ್ರಾವ, ಮಾಸಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಂಗ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರ್ತಿಸುವುದು.

ಒಂದು ಬಾಟಲಿ ಔಷಧಕ್ಕೆ ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣಿ—

ಗಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ಸ್ವಲ್ಪ ದಿನದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲೆಜ್ವರದಿಂದ ಬಾಧಿಸಲ್ಪಟ್ಟು ಹಲವು ತರದ ಔಷಧಿಗಳನ್ನು ಉಪಯೋಗಿಸಿ, ಗುಣಹೊಂದದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ ಬಾಟ್ಲಿಯೊಂದಕ್ಕೆ 1-8-0, 3 ಬಾಟ್ಲಿಗೆ 4-2-0.

ಇವುಗಳಲ್ಲದೆ ಮಲೇರಿಯಾ ಗುಟಿಕೆ, ಜ್ವರಗಡ್ಡೆಯ ಮೇಲೆ ಸ್ನಂದನ ವಟಿ, ಬಾಲಗ್ರಹ ಗುಟಿಕೆ, ಶ್ವಾಸಕುಠಾರ ಗುಟಿಕೆ, ಇಚ್ಛಾಭೇದಿ ಗುಟಿಕೆ, ಚ್ಯವನ ಪ್ರಾಶಾವಲೇಹ, ಧಾತುಪುಷ್ಟಿ ಲೇಹ, ಚಂದನಾಸವ ಮತ್ತು ಮಾತ್ರೆಗಳು ಇವೇ ಮೊದಲಾದ ಸಮಸ್ತ ಔಷಧಗಳೂ ದೊರೆಯುವವು. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಬೇಕೆಂದಿದ್ದೀರೋ? ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ಕುರಿತಾದ ಐದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. ೧; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ ೪ ಮಾತ್ರ; ಪ್ರತಿ ತಿಂಗಳ ಫಲಾಫಲದ ವಿಚಾರವುಳ್ಳ ಒಂದು ವರುಷದ ಜಾತಕ ಫಲ ರೂ. ೫; ಐದು ವರ್ಷದ ಫಲ ರೂ. ೭॥; ಪ್ರತಿ ಹಪ್ತೆಯ ವಿಚಾರವುಳ್ಳ ಒಂದು ವರ್ಷದ ಫಲ ರೂ. ೧೦. ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ರೂ. ೫, ಟ. ಖ. ಆಣೆ ೪; ನಿಮಗಾಗಿಯೇ ಬೇರೆ ಜಾದಾ ತಾಯಿತಕ್ಕೆ ರೂ. ೫೦.

ಆಂಧ್ರ ಪತ್ರಿಕೆ—(ತೆಲುಗು ದೈನಿಕ ಪತ್ರಿಕೆ) ಮದ್ರಾಸು ತಾ. 8-2-1924ರಲ್ಲಿ ಬರೆದುದು – ತಿರುತ್ತಾಣಿಯಲ್ಲಿನ ಹನುಮಾನ್ ಜ್ಯೋತಿಷಾಲಯದ ಹನುಮಾನುದಾಸಿ ವಿ. ಕೆ. ಶಠಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. ಇದು 1923ನೇ ಇಸವಿ ನವಂಬರು ತಾ. ೧೫ರಲ್ಲಿ ಬರೆಯಲ್ಪಟ್ಟಿತು. ಅದರಲ್ಲಿ ಮಹಾತ್ಮಾಜಿಯವರು 1924ನೇ ಇಸವಿ ಫೆಬ್ರುವರಿ ತಾ. 5ರಲ್ಲಿ 7 ಘಂಟೆಗೆ ಕಾರಾಗೃಹದಿಂದ ಮುಕ್ತರಾಗುವರೆಂದು ಬರೆದಿತ್ತು. ಅದರಲ್ಲಿ ಹೇಳಿದಂತೆಯೇ ನಡೆದಿದೆ. ಇದುಕಾರಣ ಈ ಜೋಯಿಸ್ಯರ ಅದ್ಭುತ ಶಕ್ತಿಸಾಮರ್ಥ್ಯಗಳನ್ನು ಸರ್ವರೂ ಪರೀಕ್ಷಿಸಲು ನಾವು ಶಿಫಾರಸು ಮಾಡುತ್ತೇವೆ.

V. K. Satagopachariar,
Hanuman Astrological Office,
TIRUTTANI, CHITTOOR DISTRICT,
Madras Presidency.

ವಿ. ಕೆ. ಶಠಗೋಪಾಚಾರ್ಯರ್,
ಹನುಮಾನ್ ಎಸ್ಟ್ರಲೋಜಿಕಲ್ ಆಫೀಸ್,
ತಿರುತ್ತಾಣಿ, ಚಿತ್ತೂರು ಜಿಲ್ಲಾ,
ಮದರಾಸು ಸಂಸ್ಥಾನ.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ಕಾಣಾಗಿಯೇ ತಿಳಿಯುವುದು.

☞ ಫೆರ್ರೊಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3-4-0 ಮಾತ್ರ.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು ಖಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು
ಡೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡಾ.

[illegible]

[illegible] ಕುಂಕುಮಕ್ಕೂ [illegible] ನಂತರ ವಿದೇಶದ ಕೆಮಿಕಲ್‌, ಮತ್ತು [illegible] ಗಳೂ, ದಪ್ಪರುಗಳೂ ವಿವಿಧ ಸ್ವಾದಿಷ್ಟ [illegible] ಬಾಟಲಿಗಳೂ ಹೊಸತಾಗಿ ತರಿಸುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಯಾರಾಗಿವೆ! ತಯಾರಾಗಿವೆ!!

ಎರಡನೇ ಮತ್ತು ಮೂರನೇ ದರ್ಜೆಯ

ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds ವಜ್ರಗಳು **Diamonds**

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಯೋಗ್ಯಕ್ರಯಕ್ಕೆ, ಏಂಟವರ್ಪಿನಿಂದ ಬರುವ ವಜ್ರಗಳು — ಮಾರಾಟಕ್ಕಿವೆ. —

ಬೋಳೆ ಮಂಗೇಶ ರಾವ್.
ಮಂಗಳೂರು

ತಯಾರಾಗಿವೆ ತಯಾರಾಗಿವೆ!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚೆಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds! Diamonds!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಚುನ್ನಾಕ (first quality Selected) ಏಂಟ್‌ವರ್ಪಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

‘ಅಂಬಾ ತಾಯಿತ್’

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ ‘ತಾಯಿತ್’ ನಂದಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧॥ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೫೦೦ ರೂಪಾಯಿ ವರೆಗೆ, ಧೃವೀಕಶಕ್ತಿಯು, ಒಂದು ಸಾರಿ ಧರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
ಸಕ್ಕಬೈಲ್ ಪೋಸ್ಟು [illegible]

Edited Printed & Published by V. S. Kamath. at the M. T. A SHARADA PRESS, MANGALORE.

ವರ್ಷ ಒಂದಕ್ಕೆ ರೂಪಾಯಿ 2-0-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೩. | ಮಂಗಳೂರು, ತಾ. ೨೮ನೇ ಶುಕ್ರವಾರ ಜೂನ್ ೧೯೨೯. | (28 – 6 – '29.) | ಸಂಚಿಕೆ ೨೬.

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊಪ್ರೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. | **Branches:—COONDAPOOR. Mangalore.**

ಹೆಡ್ ಆಫೀಸು:— ಉಡುಪಿ. | ಶಾಖೆ:— ಕುಂದಾಪುರ. ಮಂಗಳೂರು

ನಿಯಮಿತ ಮೂಲಧನ ರೂ. 3,50,000-

1. ಶೇರುದಾರರಿಗೆ ಮಾರಿದ ಮತ್ತು ಎತ್ತಿದ ಮೂಲಧನ ರೂ. 2,25,000-
2. ತೆತ್ತು ಬಂದ ಮೂಲಧನ ರೂ. 2,12,680-
3. ರಿಸರ್ವ ವಗೈರೆ ಫಂಡುಗಳು ರೂ. 1,26,700-
4. ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ್ದು ರೂ. 3,34,218-5-0

Statement of Affairs of the Canara Banking Corporation Udipi, Limited as on 31st May 1929

CAPITAL AND LIABILITIES.			PROPERTY AND ASSETS		
1	Paid up Capital	Rs. 2,21,380-0-0	1	Premises Building Furniture &c.	Rs. 9,265-0-0
2	Reserve and other contingent funds	„ 1,26,700-0-0	2	Investments on G. P. Notes at cost	„ 3,34,218-5-0
3	Deposits	„ 16,7[illegible],321-3-11	3	Investments on Approved Securities	„ 18,11,552-0-4
4	Due to Bankers on a/c of Overdraft and Loan a/c	„ [illegible]	4	Bills for collection as per Contra	„ 37,0[illegible]-3-10
5	Sundry Persons' a/c for Bills for collection as per Contra	„ 37,069-3-10	5	Cash in hand & with Bankers.	„ [illegible]
6	Sundries including P & L items	„ 4[illegible],083-12-[illegible]	6	Sundries	[illegible],872-2-0
	Total	22,46,422-6-11		Total	22,46,422-6-11

Office of the Corporation, UDIPI, 14 – 6 – '29. | **N. ANANDA RAO,** *Secretary.*

ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು:— [illegible]

ದಂತಮಂಜನ:— [illegible]

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬ್ಬಾ.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ತಾನದಲ್ಲೆಲ್ಲ [illegible] ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದ[illegible] ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ, ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪನಿ,

ಗಿರಗಾಂವ, ಮುಂಬಯಿ.

ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

ಶ್ರೀ ಸರಸ್ವತೀ ಭಂಡಾರ.

1.	ಸಚಿತ್ರ ರಾಮಾಯಣ ಕಥಾ ಸಂಗ್ರಹ	[illegible]–0
2.	[illegible]	0–2–0
3.	[illegible]	[illegible]
4.	[illegible]	2–0–0
5.	[illegible]	3–[illegible]
6.	[illegible]	–12–0
7.	[illegible]	[illegible]
8.	[illegible]	–12–0
9.	[illegible]	[illegible]
10.	[illegible]	–4–[illegible]
11.	[illegible]	[illegible]
12.	[illegible]	–3–0
13.	[illegible]	–12–[illegible]
14.	[illegible]	1–8–[illegible]
15.	ಇಂಡಿಯನ್ ಪಿನಲ್ ಕೋಡ್	2–8–0
16.	[illegible] ಪ್ರೊಸೀಜರ್ ಕೋಡ್	3–0–0
17.	[illegible] ಕೋಡ್	1–0–0

ಈ ಪುಸ್ತಕಗಳಲ್ಲದೆ ನಮ್ಮಲ್ಲಿ [illegible] ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾಲೆಗಳಿಗೆ ಬಹಳ ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕಿರುತ್ತವೆ.

ವಿಳಾಸ — **ಶ್ರೀ ಸರಸ್ವತೀ ಭಂಡಾರ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು, [illegible] ರೋಡ್, ಬೆಂಗಳೂರು ಸಿಟಿ

ಪತ್ರವ್ಯವಹಾರ

[illegible]

[illegible] ಉಪಾಧ್ಯಾಯರು ಉಡುಪಿ ತಾಲೂಕು ಬೋರ್ಡು [illegible] ಮೇಲೆ ಸ್ಥಳೀಯ [illegible]ಯರಿಗೆ ತೆಗೆದ ಆಕ್ಷೇಪಣೆಗಳು [illegible] ಪ್ರಕಟವಾಗಿರುವ ಅಭ್ಯಾಸವನ್ನು ಅವರ ಕ್ಷಮೆ [illegible] ಕೇಳಿಕೊಳ್ಳುತ್ತೇನೆ.

[illegible] ಇವರು [illegible] ಕರೆದ ದೀಕ್ಷೆಯ ಅಂಶವನ್ನು ಮಾತ್ರ ಕೇಳ [illegible] ದಯವಾಗುವ ಶಿಕ್ಷೆಯ ಅಂಶವನ್ನು ಕೇಳದಿದ್ದುದು [illegible]. [illegible] ಶಾಲೆಗಳಲ್ಲದ ಹಳ್ಳಿಗಳಿಂದಲೂ ಸರಕಾರವು [illegible] ಇವರು ಗ್ರಾಂಟನ್ನು ಪಡೆಯುವುದು [illegible]. ಆದರೆ ಇವರ ತಕ್ಕದಂತೆ ಮಕ್ಕಳಿಲ್ಲದ ಒಬ್ಬ [illegible] ಕೊಡುವ ತೀರ್ಮಾನದ ಅಂಶವನ್ನು ವಿದ್ಯಾಶಿರವನ್ನು [illegible] ಬಹುದು. ಸರಕಾರವು ಇದೇ ಜಿಲ್ಲೆಯಿಂದಲೂ ಪ್ರಾಂತದಿಂದಲೂ ತೀರ್ಮಾನಿಸಿ ಜಿಲ್ಲೆಯ ಮತ್ತು ಪ್ರಾಂತ ಕೇಂದ್ರಗಳಲ್ಲಿ ಮಾತ್ರ ಹೈಸ್ಕೂಲ ಮತ್ತು ದಿಕ್ಕ ವಿದ್ಯಾಲಯಗಳನ್ನು ಸ್ಥಾಪಿಸುವುದರಿಂದಲೂ, ಅಂಥಾ ವಿದ್ಯಾಲಯಗಳು ಈ ಉಪಾಧ್ಯಾಯರ ಹಳ್ಳಿಯಲ್ಲಿಲ್ಲದುದರಿಂದಲೂ, ಈ ಮಹಾಶಯರು ತಮ್ಮ ಹಳ್ಳಿಯ ಶಾಲೆಗೆ ಬೇಕಾದ ಆ ಅಂಶವನ್ನು ಕೂಡ ಕೇಳಬಹುದಾಗಿ ಸೂಚನೆ.

೨. ಉಪಾಧ್ಯಾಯರೇ ಆಗಿರುವ ಈ ಖಾಸಗಿ ಶಾಲಾ ಉಪಾಧ್ಯಾಯರ ಮೇನೇಜರುಗಳು ತಮ್ಮದೊಂದು ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸಿದ್ದನ್ನು ಮಾತ್ರ ಇವರು ಯಾಕೆ ಮರೆತರು? ಅಂಥಾ ಸಂಸ್ಥೆಯ ಆವಶ್ಯಕತೆಯು ಉಪಾಧ್ಯಾಯ ಮೇನೇಜರುಗಳಿಗೆ ದಿಕ್ಕುಂಟಾಯಿತು? ಈ ಸಂಸ್ಥೆಗೆ ಸೇರಲಿಚ್ಛೆಯುಳ್ಳ ಬೋರ್ಡು ಉಪಾಧ್ಯಾಯರನ್ನು ಅವರು ಸೇರಿಸಿಕೊಳ್ಳುವರೆ? ಅಥವಾ ಅವರಲ್ಲಿ ಬೋರ್ಡು ಉಪಾಧ್ಯಾಯರು ಸೇರಿದರೆ ಅದು ಅಶುದ್ಧವಾಗುವದೆ? ಬೋರ್ಡು ಶಾಲೆಗಳ ಎಲ್ಲಾ ಉಪಾಧ್ಯಾಯರು ಖಾಸಗಿ ಶಾಲಾ ಉಪಾಧ್ಯಾಯರಂತೆಯೇ ಮೂಲ [illegible] ಅಧ್ಯಾಪಕರ ಸಂಸ್ಥೆಗಳ ಸದಸ್ಯರಾಗಿದ್ದು ಸಂಘದ ನಿಯಮಗಳಂತೆ ವರ್ತಿಸಿ ಅವರೊಡನೆ ಸರ್ವ ಕಾರ್ಯಕ್ರಮಗಳಲ್ಲಿಯೂ ಸಹಭಾಗಿಗಳಾಗಿದ್ದುದು ಈ ಉಪಾಧ್ಯಾಯರಿಗೆ ತಿಳಿದಿಲ್ಲವಾದುದರಿಂದ ಇವರು ಈ ಲೇಖದಲ್ಲಿಯೇ ಇಲ್ಲವಾಗಿ ಭಾವಿಸಬೇಕಾಗುತ್ತದೆ. ಖಾಸಗಿ ಶಾಲಾ ಮೇನೇಜರು ಹೆಚ್ಚಿಗೆ ಗ್ರಾಂಟನ್ನು ಪಡೆದು ಹೆಚ್ಚು ಹೆಚ್ಚು ಲಾಭ ಪಡೆಯುವಂತೆ ತಮ್ಮ ಸಂಘದಿಂದ ಪ್ರಯತ್ನಿಸುವರು. ಆದರೆ ಖಾಸಗಿ ಶಾಲೆಯ ಕೆಲವು ಉಪಾಧ್ಯಾಯರು ತಮ್ಮ ಯೋಗ್ಯಾಯೋಗ್ಯತೆಗಳನ್ನು ಮರೆತು ಟ್ರೈನಿಂಗ್ ಶಾಲೆಯನ್ನು ಸೇರುವ ಒಂದೇ ಉದ್ದೇಶದಿಂದ ೩ ರೂಪಾಯಿ ಸಂಬಳದಲ್ಲಿ ಕೆಲಸಮಾಡಿ ೮ ರೂಪಾಯಿಗೆ ರಶೀದಿ ಕೊಟ್ಟು ವರ್ಷಾಂತ್ಯದಲ್ಲಿ ಗ್ರಾಂಟು ಬಂದೊಡನೆ ಮೆನೇಜರರಿಂದ ಇದೇ ವರ್ಷದ ಆ ತಿಂಗಳುಗಳ ೩ ರೂಪಾಯಿಗಳನ್ನು ಕೂಡ ಪಡೆಯಲು ಸಾಧ್ಯವಾಗದೆ ಕೋರ್ಟುಗಳ ವರೆಗೂ ಹೋಗಿ ಅಲ್ಲಿ ತಮ್ಮ ಚರಿತ್ರೆಯನ್ನು ಬಹಿರಂಗವಾಗಿ ಬಿಚ್ಚ ಬೇಕಾಗುವದು. ಇದರಿಂದವರು ಇದೇ ಉಪಾಧ್ಯಾಯ ವೃಂದದ ಗೌರವಕ್ಕೆ ಕಳಂಕವನ್ನು ತರುವರು. ಇಂಥಾ ಸ್ಥಿತಿಯನ್ನು ಸುಧಾರಿಸಲು ಖಾಸಗಿ ಶಾಲಾ ಉಪಾಧ್ಯಾಯರು ಕೂಡ ತಮ್ಮ ಸಂಸ್ಥೆಗಳನ್ನು ಸ್ಥಾಪಿಸಿ ತಮ್ಮ ಅಭಿವೃದ್ಧಿಯನ್ನು ಸಾಧಿಸುವುದು ಹಿತಕರವಲ್ಲದೆ ಬೋರ್ಡು ಶಾಲಾ ಉಪಾಧ್ಯಾಯರು ಸಾಂಘಿಕವಾಗಿ ಪ್ರಯತ್ನ ಮಾಡುವುದನ್ನು ಮತ್ಸರಿಸುವುದು ಕೇವಲ ಅಲ್ಪ ಬುದ್ಧಿ ಸೂಚಕವಾಗಿದೆ.

೩. ನಮ್ಮ ಸಂಘದ ಅಧ್ಯಕ್ಷರಾಗಿ ಆಯೋಗ ಪತ್ರವನ್ನು ಮಾಡಿದ ರಾ। ಕೆರಟರವರಿಗೆ ಈ ಉಪಾಧ್ಯಾಯ ಮಹಾಶಯರ ಸೂಚನೆಯೂ ಸಮಯೋಚಿತವಾಗಿದೆ. ಆದರೆ ಈ ಮಹಾಶಯರು ತಮ್ಮ ನಿದ್ರೆಯಿಂದ ಮುಂದೆ ಬಂದಿದ್ದರೆ ರಾ। ಕೆರಟರು ಈಗ ಇನ್ನು ಮುಂದೆ ವಹಿಸಿಕೊಳ್ಳುವ ಸರ್ವ ಕಾರ್ಯಗಳಲ್ಲಿಯೂ ಇವರ ಬುದ್ಧಿವಾದವನ್ನು ಬಯಸುತ್ತಿದ್ದರು.

೪. ಹಿರಿಯರು ಮಾಡಿಟ್ಟ ಬಹು ದಾನ ಧರ್ಮ ಆಸ್ತಿಯಿದ್ದು ಇಲ್ಲದೆ ಹೊಟ್ಟೆಗೆ ಮಾತ್ರ ೫ ೬ ರೂಪಾಯಿ ಸಂಬಳದಲ್ಲಿ ಕೆಲಸಮಾಡಿ ಕೈಗಳಲ್ಲಿ ವಸ್ತ್ರ ಪುಸ್ತಕಗಳನ್ನು ಹಿಡಿದು ಕಚೇರಿಯಲ್ಲಿ ಕೂತುಕೊಳ್ಳುವ ಸಂದರ್ಭವು ಸಿಕ್ಕಿ ಹಳ್ಳಿಯ ಜನರಿಂದ "ಮಾಸ್ಟರ್" ಎಂದು ಕರೆಯಲ್ಪಡುವ ಗೌರವಾಸ್ಪದ ಪದವಿಯಲ್ಲಿರುವ ಹಳ್ಳಿಯ ಉಪಾಧ್ಯಾಯರಿಗೆ ತಾಲೂಕು ಬೋರ್ಡು ಅಧ್ಯಾಪಕರ ಬವಣೆಯೂ ಅವಚಿಂತೆಯೂ ಕಂಡು ಬಾರದಿದ್ದುದು ಸಹಜ. ಆದುದರಿಂದ ನಮ್ಮ ಮಕ್ಕಳಿಗೆ ಮಾತೃ ವಿದ್ಯಾಭ್ಯಾಸವು ಈ ಉಪಾಧ್ಯಾಯರ ವೃತ್ತಿಯಿಂದ ಆಗತಕ್ಕದಲ್ಲ.

೫. ಕೇಡೆಯ ಬದಲಾಗಿ ಉಪಾಧ್ಯಾಯರನ್ನೇ ನೇಮಿಸುವಂತೆ ತಾಲೂಕು ಬೋರ್ಡಿಗೆ ಉಪದೇಶಿಸುವುದಕ್ಕಿಂತಲೂ ಇವರು ಬನಾವಣೆಗೆ ನಿಂತು ತಾಲೂಕು ಬೋರ್ಡಿಗೆ ಸೇರ ಸಾಧ್ಯವಿದ್ದರೆ ಅಧ್ಯಕ್ಷರೂ ಆಗಿ ಇಂಥಾ ಮಹತ್ವದ ಸೂಚನೆಗಳನ್ನು ಕಾರ್ಯರೂಪಕ್ಕೆ ತಂದು ತಮ್ಮ ಘನ ಗಂಭೀರ ತಲೆಯೊಳಗಿರುವುದೇನೆಂಬುದನ್ನು ಪ್ರದರ್ಶನಕ್ಕೆ ಪ್ರದರ್ಶಿಸಬಹುದಿತ್ತು. ಹಾ. ಎ. ಶಾಲೆಗಳಲ್ಲಿ ಕಸಗುಡಿಸುವುದು ಮಾತ್ರ ಒಂದು ಕೆಲಸವಾಗಿಯೂ ಬೇರೆ ಕೆಲಸಗಳೇ ಇಲ್ಲವಾಗಿಯೂ ಭಾವಿಸುವನ್ನು ವಿದ್ಯಾಭ್ಯಾಸದಲ್ಲಿ ಈ ಉಪಾಧ್ಯಾಯರು ತಮ್ಮ ಸಂಪೂರ್ಣ ಜ್ಞಾನಸಂಚಯವನ್ನು ತಮ್ಮ ಕೈಕೆಳಗಿರುವ ಮಕ್ಕಳಿಗೆ ಬೋಧಿಸಿದರೆ ಆ ಮಕ್ಕಳ ಮುಂದಿನ ಮಾನಸಿಕತೆಯ ಪರಿಣಾಮವೇನೋ ತಿಳಿದವರೇ ತಿಳಿಯಬಲ್ಲರು. ಆದುದರಿಂದ ಹೇದೇವರೇ! ಉಪಾಧ್ಯಾಯ ವೃಂದವನ್ನು ಮುಂದಿನ ಜನಾಂಗವನ್ನು ಇಂಥಾ ಉಪಾಧ್ಯಾಯರ ಸಹವಾಸದಿಂದ ಬೇಗನೆ ತಪ್ಪಿಸು.

ಉಡುಪಿ ತಾ. ಬೋ. ಉಪಾಧ್ಯಾಯ.

ಬಾರಕೂರು

ಬಾರಕೂರು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ವಿಷಯವಾಗಿ ಸ್ವದೇಶಾಭಿಮಾನಿಯ ೨೧—೬—೧೯೨೯ರ ಸಂಚಿಕೆಯಲ್ಲಿ ಆರೋ ಒಬ್ಬ ಬಾತ್ಮೀದಾರನು ಪ್ರಕಟಿಸಿದ ಬಾತ್ಮಿಯನ್ನು ಓದಿನೋಡಿ ನಾವು ಬಹಳ ದುಃಖಿತರೂ ಆಶ್ಚರ್ಯಸ್ತಿತರೂ ಆಗಿರುವೆವು. ಆ ಬಾತ್ಮಿಯನ್ನು ಸರಿಯಾಗಿ ಓದಿನೋಡಿದರೆ ಬಾತ್ಮೀದಾರನು ಬಾತ್ಮಿಯನ್ನು ಬರೆಯುವ ಕಾಲದಲ್ಲಿ ಆವ ಸ್ಥಿತಿಯಲ್ಲಿದ್ದನೆಂಬುದು ಖಂಡಿತವಾಗಿ ಹೇಳಲಾಗುವುದಿಲ್ಲ. ಬತ್ತಾರೆ ಬಾತ್ಮಿಯಿಂದ ಆತನ ಲಿಚಿತ್ರಕಲ್ಪನೆಯೂ ಸಂಕುಚಿತ ದೃಷ್ಟಿಯೂ [illegible] ಅವರ್ಣನೀಯ. [illegible] ಶಾಲೆಯ [illegible] ಬೇಕು ಎಂಬುದಾಗಿ ಆತನೆಯು ಸಾಧಿಸುತ. ಈ ಕಾಲದಲ್ಲಿ ಬಾರಕೂರು ನಂಥಾ ಪ್ರಾಮುಖ್ಯ ಸ್ಥಳಗಳಲ್ಲಿ ಕೇವಲ ಚೆನ್ನಾಗಿ ವಿದ್ಯಾಭ್ಯಾಸವನ್ನು ಕೊಡುವ ಈ ಹಾಯರ್ ಎಲಿಮೆಂಟರಿ ಶಾಲೆಯೂ ಬಾತ್ಮೀದಾರನ ಸಂಕೋಚ ದೃಷ್ಟಿಗೆ ಅಧಿಕವಾಗಿ ತೋರುತ್ತದಂತೆ! ಬೋರ್ಡಿನಲ್ಲಿ ವಿದ್ಯಾಭ್ಯಾಸಕ್ಕಾಗಿ ಖರ್ಚಾಗುವ ಹಣವನ್ನು ಉಳಿಸುವುದಕ್ಕಾಗಿ ಬಾತ್ಮಿದಾರನು ಬೋರ್ಡು ಶಾಲೆಯನ್ನೇ ಮುಚ್ಚಿಬಿಡುವುದು ಯುಕ್ತವು ಎಂಬುದಾಗಿ ಸೂಚಿಸುತ್ತಾನೆ! ಇಂಥ ಇನ್ನು ನಾಲ್ಕಾರು ಬಾತ್ಮೀದಾರರು ನಮ್ಮ ಜಿಲ್ಲೆಯಲ್ಲಿ ಮುಂದೆ ಬಂದುದಾದರೆ ನಮ್ಮ ಜಿಲ್ಲೆಯು ವಸ್ತುಸ್ಥಿತಿಗೆ ಇಳಿಯಲು ಇನ್ನು ಹೆಚ್ಚು ದಿವಸಗಳು ಬೇಕಾಗಿಲ್ಲ. ಬಾತ್ಮೀದಾರನ ಈ ವಿಧದ ಅವ್ಯವಸ್ಥಿತ ಅಭಿಪ್ರಾಯಗಳಿಗಾಗಿ ನಾವು ವಿಷಾದಪಡಬೇಕಾಗಿದೆ. ಇದು ಕೇವಲ ಬಾತ್ಮೀದಾರನ ಸಂಕೋಚಭಾವವನ್ನು ವಿಚಿತ್ರ ಕಲ್ಪನೆಯನ್ನು ತೋರಿಸುವುದಲ್ಲದೆ ಮತ್ತೇನನ್ನೂ ತೋರಿಸುವುದಿಲ್ಲ. ನಮ್ಮ ವಾಚಕಮಹಾಶಯರು ಈ ಬಾತ್ಮಿಯು ಬಾರಕೂರು ಎಂಬ ಹೆಸರಿನಿಂದ ಬಂದುದರಿಂದ ಅದೇನಾದರೂ ಬಾರಕೂರು ಅಥವಾ ಅಲ್ಲಿನ ಪ್ರಮುಖರ ಅಭಿಪ್ರಾಯವೆಂಬುದಾಗಿ ತಿಳಿಯಲಾಗದು.

"ಬಾರಕೂರು ನಿವಾಸಿ"

ಶ್ರೀ ಕಾಶೀಕ್ಷೇತ್ರದಲ್ಲಿ ಉಡುಪಿ ಸಾರ್ವಜನಿಕ ಮಠ

ಕೆಳಗೆ ಪ್ರಕಟಿಸಿರುವ ವಿಚಾರ ಕರ್ನಾಟಕದಿಂದ ಅದರಲ್ಲಿಯೂ ನಮ್ಮ ಜಿಲ್ಲೆಯಿಂದ ಕಾಶಿಯಾತ್ರೆಯನ್ನು ಬೆಳಸುವವರಿಗೆ ಹೆಚ್ಚಿನ ಪ್ರಯೋಜನಕಾರಿಯಾದುದಾದುದರಿಂದ ತಮ್ಮ ಪತ್ರಿಕೆಯಲ್ಲಿ ಇದನ್ನು ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಕಾಶೀಕ್ಷೇತ್ರವು ದೊಡ್ಡ ಪಟ್ಟಣವಾಗಿರುತ್ತದೆ. ಹಿಂದೀ ಭಾಷೆಯನ್ನು ಕೂಡಾ ತಿಳಿಯದ ನಮ್ಮ ಜಿಲ್ಲೆಯವರಿಗೆ ಅಲ್ಲಿ ವಾಸ್ತವಿಸುವ ಸ್ಥಳ ನಿರ್ಣಯಿಸಿಕೊಂಡು ಅಲ್ಲಿ ಮಾಡಬೇಕಾದ ಯಾತ್ರಾವಿಧಿಗಳನ್ನು ನಡಿಸುವದೇಕಾದ ಅನುಭವಪಡೆಯುವುದು ಕಷ್ಟವಾಗುತ್ತದೆ. ಅದರಲ್ಲಿಯೂ "ಪಂಡ"ರ (ಪುರೋಹಿತರ) ಕೈಯಲ್ಲಿ ಸಿಕ್ಕಿದರೆ ಅವರ ಉಪದ್ರವು ಬಹಳ ಹೆಚ್ಚಾಗಿರುತ್ತದೆ. ಈ ತೊಂದರೆ ನಿವಾರಣಾರ್ಥವಾಗಿ ನಮ್ಮ ಜಿಲ್ಲೆಯಿಂದ ಅನೇಕ ವರ್ಷಗಳ ಹಿಂದೆ ಕಾಶಿಗೆ ಹೋಗಿ ತಮ್ಮ ಸಾಮರ್ಥ್ಯದಿಂದ ವ್ಯಾಪಾರ ಸ್ಥಿತಿಯಲ್ಲಿ ಉತ್ಕೃಷ್ಟತೆಗೆ ಬಂದಿರುವ ಉಡುಪಿ ಶಿರೋಮಣಿ ನಾರಾಯಣಾಚಾರ್ಯರು ಒಂದು ಸಾರ್ವಜನಿಕ ಮಠ ಸ್ಥಾಪನೆಮಾಡಿರುವರು. ಯಾವ ಫಲಾಪೇಕ್ಷೆಯೂ ಇಲ್ಲದೆ ಯಾತ್ರಿಕರ ಸೌಕರ್ಯಕ್ಕಾಗಿಯೇ ಸಾವಿರಗಟ್ಟಲೆ ರೂಪಾಯಿ ಖರ್ಚುಮಾಡಿ ನಿರ್ಮಿಸಿದ ಈ ಕೆಲಸಕ್ಕೋಸ್ಕರ ಶ್ರೀ ನಾರಾಯಣಾಚಾರ್ಯರನ್ನು ಎಷ್ಟು ಸ್ತುತಿಸಿದರೂ ಸಾಲದು. ಶ್ರೀ ಕಾಶೀಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ವಾಸ್ತವಿಸಿಕೊಂಡು ಬರುವ ಕಾಲದಲ್ಲಿ ಇವರು ಯಾತ್ರಿಕರಿಗೆ, ಅದರಲ್ಲಿಯೂ ನಮ್ಮ ಜಿಲ್ಲೆಯವರಿಗೆ ಅಲ್ಲಿಯ "ಪಂಡ"ರು (ಪುರೋಹಿತರು) ಗಳು ಕೊಡುವ ಉಪದ್ರವನ್ನು ನೋಡಿ ಅದನ್ನು ಹೋಗಲಾಡಿಸುವರೆಯೂ, ಅಲ್ಲದೆ ಉಳಕೊಳ್ಳುವರೆ ಅನುಕೂಲ ಸ್ಥಳವಿಲ್ಲದೆ ಅನುಭವವಿಲ್ಲದ ಯಾತ್ರಿಕರಿಗೆ ಆಗುವ ಕಷ್ಟವನ್ನು ನಿವಾರಿಸುವರೆಯೂ, ಅವರು ಈ ಮಠವನ್ನು ನಿರ್ಮಿಸಿದ್ದಾಗಿರುತ್ತದೆ. ಈ ಮಠವು ಕಾಶೀಪಟ್ಟಣದ ಸಾಧಾರಣ ಮಧ್ಯಸ್ಥಳವಾದ ಚೌಕಂಬದಲ್ಲಿ ಪಂಚಗಂಗಾ ಘಾಟಿಯ ಸಮೀಪದಲ್ಲಿ ಹೊಸತಾಗಿ ಕೊಂಡುಕೊಂಡಿರುವ ಭವ್ಯವಾದ ಮನೆಯಲ್ಲಿ ಏರ್ಪಾಡಾಗಿಯದೆ. ಕಟ್ಟೋಣವು ಮೂರು ಉಪ್ಪರಿಗೆಗಳಿಂದ ಕೂಡಿದ್ದು ಎಷ್ಟು ಯಾತ್ರಿಕರು ಒಮ್ಮೆಯೇ ಬಂದರೂ ಸಾಕಷ್ಟು ಸ್ಥಾನ ಕೂಲಿಕೆಯಿಂದ ಕೂಡಿದೆ. ಕಟ್ಟೋಣವನ್ನು ನಿರ್ಮಲವಾಗಿಯೂ ಇಟ್ಟಿರುತ್ತಾರೆ. ಅಲ್ಲದೆ ಪಂಚಗಂಗಾ ಘಾಟಿಯು ಅತ್ಯಂತ ಸಮೀಪದಲ್ಲಿರುವದರಿಂದ ಗಂಗಾ ಸ್ನಾನಕ್ಕೆ ಬಹಳ ಅನುಕೂಲ. ಇದಲ್ಲದೆ ಸ್ಥಳವು ಪಟ್ಟಣದ ಮಧ್ಯದೇಶವಾದ್ದರಿಂದ ಎಲ್ಲಾ ದೇವಸ್ಥಾನಗಳಿಗೆ ಹೋಗಿ ದೇವರ ದರ್ಶನಮಾಡಲಿಕ್ಕೂ ಅನುಕೂಲವಾಗಿರುತ್ತದೆ. ಚಕ್ರತೀರ್ಥಸ್ನಾನವು ಮತ್ತು ದೇವಸ್ಥಾನವಾದ ಶ್ರೀ ಕಾಶಿವಿಶ್ವನಾಥ ದೇವಸ್ಥಾನವೂ ಸಮೀಪದಲ್ಲಿಯೇ ಇರುತ್ತದೆ.

ಅಲ್ಲದೆ ಯಾತ್ರಿಕರಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಟ್ಟು ಕ್ಷೇತ್ರವಿಧಿಮಾಡಿಸಿ, ಯಾತ್ರೆಯನ್ನು ಸಾಂಗಗೊಳಿಸುವರೆ ಬೇಕಾದ ಅನುಕೂಲತೆ ಸಹಾ ಏರ್ಪಡಿಸಿ ಮಾಡಿರುತ್ತಾರೆ. ಯೋಗ್ಯರೂ ವಿದ್ವಾಂಸರೂ ಆದ ಶ್ರೀ ಕಡ್ತಿಲ ವಾಸುದೇವಾಚಾರ್ಯರು ಪೂಜಾಗಳೂ ಈ ಮಠದಲ್ಲಿಯೇ ಇರುವುದರಿಂದ ಯಾವ ಕೆಲಸಕ್ಕೂ ತೊಂದರೆಯಿಲ್ಲ. ಇವರಿಗೆ ಸ್ಥಳವನ್ನೂ ಕ್ರಿಯಾ ಕ್ರಮಗಳೂ ಕೂಡಾ ಚೆನ್ನಾಗಿ ಅನುಭವವಿದೆ. ಒಳ್ಳೇ ಗುಣವಂತರೂ ಆಗಿದ್ದಾರೆ. ಯಾತ್ರಿಕರಿಗೆ ಯಾವ ತೊಂದರೆಯನ್ನೂ ಕೊಡದೆ ಅವರ ಕ್ಷೇತ್ರವಿಧಿಗಳನ್ನು ನಡಿಸುತ್ತಿರುವದು ಮನಸ್ಸಿಗೆ ತುಂಬಾ ಸಂತೋಷವಾಗುತ್ತದೆ. ಇತರ ಯಾತ್ರಾ ಸ್ಥಳಗಳಲ್ಲಿ ಅಥವಾ ಕಾಶಿಯಲ್ಲಿಯೇ ಇತರ ಪುರೋಹಿತರು "ಆ ದಾನ ಕೊಡಬೇಕು, ಈ ದಾನ ಕೊಡಬೇಕು, ಸಂಕಲ್ಪ ಮಾಡಬೇಕು," ಇತ್ಯಾದಿ ತೊಂದರೆ ಕೊಡುತ್ತಿರುವುದನ್ನು ಕಂಡವರಿಗೆ ಇವರ ಕ್ರಮವು ಆನಂದ ಉಂಟುಮಾಡುತ್ತದೆ. ಯಾತ್ರಿಕರಿಗೆ ತನ್ನಿಂದ ಕೂಡಿದ ಸಹಾಯ ಮಾಡಿ ಅವರು ಕೊಟ್ಟದ್ದನ್ನು ತೆಗೆದುಕೊಂಡು ತೃಪ್ತರಾಗಿರುವರು.

ಈಚೆಗೆ ಕಾಶಿಗೆ ಹೋದಲ್ಲಿ ನಾನು ಈ ಮಠದಲ್ಲಿ ಉಳಕೊಂಡಿದ್ದೆನು. ಯಾವ ವಿಚಾರದಿಂದ ನೋಡಿದರೂ ಇದು ಅತ್ಯಂತ ಅನುಕೂಲ ಸ್ಥಳವೆಂದು ನನಗೆ ಸ್ವತಃ ಅನುಭವವಾಗಿದೆ. ಕೈಯಿಂದ ಸಾವಿರಾರು ರೂಪಾಯಿ ಖರ್ಚುಮಾಡಿ ಯಾವ ಫಲಾಪೇಕ್ಷೆಯನ್ನೂ ಮಾಡದೆ ಶ್ರೀ ನಾರಾಯಣಾಚಾರ್ಯರು ಮಾಡಿರುವ ಈ ಏರ್ಪಾಡು ಸ್ತುತ್ಯವೆಂದು ಇನ್ನೊಮ್ಮೆ ಹೇಳಬೇಕಾಗಿಯದೆ. ಈ ಅನುಕೂಲತೆಯನ್ನು ನಮ್ಮ ಕಡೆಯಿಂದ ಹೋಗುವವರು ಸ್ವೀಕರಿಸಿದರೆ ಶ್ರೀ ನಾರಾಯಣಾಚಾರ್ಯರಿಗೂ ತುಂಬಾ ಸಂತೋಷ.

ಇಲ್ಲಿ ಇನ್ನೊಂದು ಸೂಚನೆ, ಶ್ರೀ ಕಾಶಿಯಂತೆಯೇ ನಮ್ಮ ಜಿಲ್ಲೆಯಿಂದ ಪ್ರಯಾಗ, ಗಯೆ, ಮತ್ತು ಹರಿದ್ವಾರಕ್ಕೆ ಈಚೆಗೆ ಹೆಚ್ಚಿಗೆ ಜನ ಯಾತ್ರಿಕರು ಪ್ರಯಾಣ ಬೆಳಸುತ್ತಿರುವರು. ಅಲ್ಲಿ ಈ ಅನುಕೂಲತೆಗಳಿಲ್ಲ. ಹರಿದ್ವಾರದಲ್ಲಿ 'ಮದ್ರಾಸಿ ಧರ್ಮಶಾಲಾ' ಅನುಕೂಲವಾಗಿರುವುದಾದರೂ ಅದು ಕರ್ನಾಟಕಸ್ಥರದಲ್ಲ. ನಮ್ಮವರೆಲ್ಲರಿಗೂ ಸ್ಥಳ ದೊರಕಲಾರದು. ಪ್ರಯಾಗ ಮತ್ತು ಗಯೆಯಲ್ಲಿ ನಮ್ಮವರಿಗೆ ಅನುಕೂಲವಾಗಿ ಸಾರ್ವಜನಿಕ ಸಂಸ್ಥೆಯೇ ಇಲ್ಲ. ಪ್ರಯಾಗದಲ್ಲಿ ನಮ್ಮ ಉಡುಪಿ ಶ್ರೀ ಕೃಷ್ಣಾಪುರ ಮಠದವರು ತಮಗಿದ್ದ ಮಠವನ್ನು ಕೂಡಾ ಮುಸಲಗೀಗೆ ಕೊಟ್ಟು ಇದ್ದ ಸ್ಥಳವನ್ನು ಕೂಡಾ ಕಳಕೊಂಡಿದ್ದಾರೆ. ಈ ಕೊರತೆಯನ್ನು ಹೋಗಲಾಡಿಸುವರೆ ಶ್ರೀ ಶಿರೋಮಣಿ ನಾರಾಯಣಾಚಾರ್ಯರು ಹಾಕಿ ಕೊಟ್ಟಿರುವ ಮೇಲುಪಂಕ್ತಿಯನ್ನು ನಮ್ಮ ಮಠಾಧಿಕಾರಿಗಳೂ ಐಶ್ವರ್ಯವಂತರೂ ಅನುಸರಿಸುತ್ತಿದ್ದರೆ ಯಾತ್ರಿಕರಿಗೆ ಬಹಳ ಉಪಕಾರವಾಗುತ್ತಿತ್ತು.

ಮಂಗಳೂರು,
21 — 6 — '29.

ಕೆ. ಆರ್. ಆಚಾರ್,
ಎಂ. ಎ., ಎಲ್. ಎಲ್. ಬಿ.,
ವಕೀಲ್.

ದೇವರು.

150 ರೂಪಾಯಿಗಳ ಬಹುಮಾನವುಳ್ಳ ಸ್ಪರ್ಧೆಯ ಪ್ರಬಂಧಗಳು.

(ಕನ್ನಡ ಭಾಷೆಯಲ್ಲಿ.)

ಈ ಮೇಲಿನ ವಿಷಯದಲ್ಲಿ ದ್ವೈತ, ಅದ್ವೈತ ಮತ್ತು ಶೈವ ಈ ಮೂರು ಧರ್ಮ ರೀತಿ ಆಯಾಯ ಮತಧರ್ಮಪ್ರೇಮಿಗಳು ಪ್ರಬಂಧವನ್ನು ಬರೆಯಬಹುದು. ಪ್ರತಿಯೊಂದು ಧರ್ಮದ ಯೋಗ್ಯ ಪ್ರಬಂಧಕ್ಕೆ ಪ್ರತ್ಯೇಕವಾಗಿ ೫೦ ರೂಪಾಯಿ ಅಥವಾ ಆ ಮೌಲ್ಯದ ಸಣ್ಣ ಗೊಯಾರ ಬಹುಮಾನವಾಗಿ ಕೊಡಲ್ಪಡುವುದು.

ಪ್ರಬಂಧದಲ್ಲಿ (೧) ದೇವರ ಅಸ್ತಿತ್ವ (೨) ದೇವರ ವಿವರಣೆ (೩) ದೇವರಿಗೂ ಲೋಕಕ್ಕೂ ಇರುವ ಸಂಬಂಧ (೪) ದೇವರಿಗೂ ಆತ್ಮನಿಗೂ ಇರುವ ಸಂಬಂಧ (೫) ಮತ್ತು ಭೇದ. ದೇವರನ್ನು ಯಾವ ರೀತಿಯಿಂದ ನಂಬಿ ಭಜಿಸಬೇಕು, ಮತ್ತು ಅದರಿಂದ ಉಂಟಾಗುವ ಫಲ ಮೊದಲಾದ ವಿಷಯಗಳನ್ನು ಆಧಾರಪೂರ್ವಕವಾಗಿಯೂ ಅನುಭವ ಮತ್ತು ರೂಢಿ ದೃಷ್ಟಾಂತಗಳಿಂದಲೂ ಬೇರೆ ಬೇರೆ ಉಪಾಯೋಕ್ತಿಗಳಿಂದಲೂ ಪುಷ್ಟೀಕರಿಸಿ ಸಕಾರಣಗಳನ್ನು ಕೊಟ್ಟು ಬರೆಯುವ ಶೈಲಿಯು ಸುಲಭವಿರಬೇಕು. ಸಂಸ್ಕೃತ ಶ್ಲೋಕಗಳನ್ನು ಕೊಟ್ಟರೆ ಅವುಗಳ ಅರ್ಥವನ್ನು ಸಂಕ್ಷೇಪದಲ್ಲಿಯಾದರೂ ಬರೆಯಬೇಕು.

ಪ್ರಬಂಧವು ಅರ್ಧ ಶಾವಿನ ೨೦ ಪುಟಗಳಿಗೆ ಕಡಿಮೆಯಾಗದೆಯೂ ೫೫ ಪುಟಗಳಿಗೆ ಮೀರದೆಯೂ ಇರತಕ್ಕದ್ದು; ಮತ್ತು ಪ್ರತಿ ಪುಟದಲ್ಲಿ ೨೫ ಪಂಕ್ತಿಗಳಿಗೆ ಕಡಿಮೆಯಾಗದೆಯೂ ಪ್ರತಿ ಪಂಕ್ತಿಯಲ್ಲಿ ೩೦ ಅಕ್ಷರಗಳಿಗೆ ಕಡಿಮೆಯಾಗದೆಯೂ ಇರಬೇಕು. ಅಲ್ಲದೆ ಅಕ್ಷರಗಳು ಎಂಕವಾಗಿ ವಾಚಕರಿಗೆ ಸುಗಮವಾಗಿರಬೇಕು. ಪ್ರಬಂಧಗಳು ಇದೇ ಬರುವ ನವಂಬರ ತಿಂಗಳ ತಾರೀಕು ೩೦ರ ಒಳಗೆ ಇಲ್ಲಿ ಸ್ಥಳಕ್ಕೆ ಬಂದು ತಲಪಬೇಕು. ಫಲಿತಾಂಶವು ಜನವರಿ ತಿಂಗಳಲ್ಲಿ ತಿಳಿಸಲಾಗುವದು. ಪ್ರತಿಯೊಂದು ಧರ್ಮದ ಪ್ರಬಂಧಗಳು ಸಂಬಂಧಪಟ್ಟ ಯೋಗ್ಯ ಪರಿಶೋಧಕ ಮಂಡಳಿಯಿಂದ ಪರೀಕ್ಷಿಸಲ್ಪಡುವದು. ಪರೀಕ್ಷಕರ ಬಹುಮತದ ಪ್ರಕಾರ ಬಹುಮಾನವು ಸಲ್ಲುವುದು. ಇವರ ನಿರ್ಣಯವೇ ಅಂತ್ಯದ ಸಿದ್ಧಾಂತವಾಗುವುದು.

ಬರೆಯುವ ಪ್ರಬಂಧದಲ್ಲಿ ಕಳುಹಿಸಿಕೊಡುವವರ ಹೆಸರನ್ನು ಬರೆಯಕೂಡದು. ಪ್ರತ್ಯೇಕ ಒಂದು ಪತ್ರದಲ್ಲಿ ಅವರ ಹೆಸರು ವಿಳಾಸಗಳನ್ನು ಬರೆದು ಪ್ರಬಂಧದ ಜೊತೆಯಲ್ಲಿ ಕಳುಹಿಸಿಕೊಡಬೇಕು.

ಫಲಿತಾಂಶವು ಹೊರಬಿದ್ದನಂತರ ಬಹುಮಾನ ಸಿಕ್ಕದ ಪ್ರಬಂಧಗಳು ಹಿಂತಿರುಗಿ ಕಳುಹಿಸಲ್ಪಡಬೇಕಾದರೆ ಸ್ಟಾಂಪು ಕಳುಹಿಸಬೇಕು. ಮತ್ತು ಟಪ್ಪಾಲು ಮೂಲಕ ಕಳುಹಿಸಿಕೊಡತಕ್ಕ ಪ್ರಬಂಧಗಳು ಎಲ್ಲಿಯಾದರೂ ಗೈರುವಿಲೆಯಾದರೆ ಅದಕ್ಕೆ ನಾವು ಜವಾಬ್ದಾರರಲ್ಲವೆಂದು ತಿಳಿಯಬೇಕು.

ಈದು ಕೇವಲ ಧರ್ಮ ಪ್ರಭಾವನೆಗೋಸ್ಕರವಾದುದರಿಂದ ಇಂಥಾ ವಿಷಯದಲ್ಲಿ ಲೇಖಕರು ಅನ್ಯೋನ್ಯ ದೂಷಣ ಬುದ್ಧಿಯಿಂದ ಯಾ ವೈಷಮ್ಯ ದೃಷ್ಟಿಯಿಂದಲೂ ಪ್ರಬಂಧಗಳನ್ನು ಬರೆಯಕೂಡದು. ಮಹಾಶಯರಾದ ವಿದ್ವಾಂಸರು ಕೇವಲ ಪೂಜ್ಯ ಬುದ್ಧಿಯಿಂದಲೂ ಧರ್ಮದೃಷ್ಟಿಯಿಂದಲೂ ಈ ಸ್ಪರ್ಧೆಯಲ್ಲಿ ಭಾಗಿಯಾಗಲು ಮತ್ತು ಆ ರೀತಿ ವರ್ತಿಸುವರಾಗಿ ಕೋರಿಕೆ.

ಪ್ರಬಂಧಗಳನ್ನು ಡಿ. ಶಂಕರನಾರಾಯಣ ಶಾಸ್ತ್ರಿ, ಕನ್ನಡ ಪ್ರಬಂಧಗಳ ಸ್ಪರ್ಧೆಯ ಕಾರ್ಯದರ್ಶಿ ಧರ್ಮಸ್ಥಳ ಪೋಸ್ಟು ದಕ್ಷಿಣಕನ್ನಡಾ ಈ ವಿಳಾಸಕ್ಕೆ ಬರೆದು ಕಳುಹಿಸತಕ್ಕದ್ದು.

ಧರ್ಮಸ್ಥಳ, [illegible] (Sd) D. Manjaya Heggade,
Dharmastala, S. Kanara.

ಸೂಚನೆ:— ಇದೇ ವಿಷಯದಲ್ಲಿ ಕೆಲವು ತಿಂಗಳ ಮೊದಲು ಒಂದು ಪ್ರಕಟನೆಯು ಕೊಡಲ್ಪಟ್ಟಿತ್ತು. ಆದರೆ ವಿಷಯವು ಬಹಳ ಗಹನವಾದುದರಿಂದಲೂ ಸಮಯವು ಸಂಕೋಚವಾದುದರಿಂದಲೂ ಕೆಲವು ಪ್ರಬಂಧಗಳು ಮಾತ್ರ ಬರೆಯಲ್ಪಟ್ಟು ಬಂದಿದ್ದವು. ಆದರೆ ಎಲ್ಲರಿಗೂ ಅವಕಾಶ ಸಿಕ್ಕಿ ಹೆಚ್ಚಾಗಿ ಪ್ರಬಂಧಗಳು ಬರೆಯಲ್ಪಡಬೇಕೆಂಬ ಅಪೇಕ್ಷೆಯಿಂದ ಈ ಎರಡನೇ ಪ್ರಕಟನೆಯನ್ನು ಕೊಟ್ಟದ್ದಾಗಿದೆ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕಲಂಕಲುಮ ತೈಲ—ಇದು ಪೂರ್ವದಲ್ಲಿ ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಪ್ಪಂಗಳಲ್ಲಿ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಿತ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ಸಹಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಆದರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ಕಂಟನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಪುಟವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚನಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

[illegible] "[illegible]" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ಪಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್. ಮಂಗಳೂರು.

ESTABLISHED JULY 1906.   1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, Bombay, and Puttur.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಬೊಂಬಾಯಿ ಪುತ್ತೂರು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years; 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ವ್ಯಾಧಿ ಆಗುವ ರೂ. 1000/-ದ ಮತ್ತು ಮೇಲ್ಪಟ್ಟ ಠೇವಣಾತಿಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/ and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to

Canara Bank Ltd.
Mangalore, 11—2—1929

K. Venkat Rao,
Secretary

THE PANGAL NAYAK BANK, LTD.

Branch Office Mangalore. | Head Office: Udipi. *Established 1920.* | Agency Office Cochin.

Authorised Capital: Rs. 2,00,000-	Paidup Capital: Rs. 1,57400-
Issued Capital: Rs. 1,75,000-	Reserve and other Funds: Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5%, 6 or 9 months 5½%, 12, 15, 18 or 21 months 6¼, 24 months 6½% and interest being payable every 3 months.

Short Notice Deposits, Cumulative Deposits, and **Savings Bank Deposits** are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6½% and interest being payable every quarter.

Loans and Advances are made on pledge of valuables, on proper personal securities on reasonable terms; and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
1st March, 1929.

P. Lakshman Nayak,
Offg. Secretary.

ಮುದಲ್ತರವಾದ ಬೆಳ್ಳಿ ಪುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ನಿಂಗಿನ ಅನುಭವದ ಮೇಲೆ ನಮ್ಮ ಪುಡಿದಾರ ಹಗ್ಗಗಳು ಕೆಲಸ ಸ್ವಚ್ಛವಾಗಿಯೂ, ದಾರ [illegible] ಬಲ್ಲಿಯೂ, ಸರಿಕಿನ [illegible] ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ಬಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಜಂಗಮ ವ್ಯಾಪಾರಿ,

24-8-'38   [illegible] (ದಕ್ಷಿಣ [illegible]).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1|- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಔಷಧಾಲಯ,

ನಂ. 26, ಬ್ರಾಡ್ವೇ, ಮದರಾಸು.

ಏಜಂಟರು—

ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

ADVERTISE IN OUR WEEKLY.

To Reach the Hearths & Homes

OF INDIA'S MASSES

For Particulars Apply to:

The Manager,
SWADESHABHIMANI,
MANGALORE.

ಮೊನ್ನೆ ಶ್ರೀಕೃಷ್ಣಾಷ್ಟಮಿ ದಿನ ದಾವಣಗೆರೆಯಲ್ಲುಂಟಾದ ಹಿಂದೂ-ಮುಸಲ್ಮಾನ ಕಲಹಗಳು ಮೈಸೂರಲ್ಲಿ ಮಿ। ಮಿರ್ಜಾರವರು ದಿವಾನ್ ಪದವಿಗೆ ಬಂದ ಮೇಲೆ ಬೆಂಗಳೂರಿನಲ್ಲಿ ನೋಡಿದ ದೃಶ್ಯವಾದ ವಿಷ ಬೀಜದ ಪರಿಣಾಮ ಮಾತ್ರವಾಗಿದೆ. ಮೈಸೂರಲ್ಲಿ ಮುಸಲ್ಮಾನ ಆಳುವಿಕೆಯಲ್ಲಿ ಹಿಂದೂ ದಿವಾನರಾಗಿದ್ದರು; ಹಿಂದೂ ಆಳುವಿಕೆಯಲ್ಲಿ ಹಿಂದೂ ದಿವಾನರಾಗಿದ್ದರು. ಆದರೆ ಈಗಿನ ಹಿಂದೂ ಆಳುವಿಕೆಯ ಮುಸಲ್ಮಾನ ದಿವಾನರಿಗೇನೇ ಈ ಹಿಂದೂ-ಮುಸಲ್ಮಾನ ಕಲಹಗಳು ಸಂಭವಿಸಲು ಬಾಕಿ ಇಡಲ್ಪಟ್ಟಿದ್ದುವೆಂಬುದು ಈಗಿನ ರಾಜನೀತಿಯ ಮೇಲಿನ ಶೋಕಾತ್ಮಕ ಟೀಕೆಯಾಗಿರುತ್ತದೆ. ದಿವಾನರು ಬಹುತು ದೊಡ್ಡ ತಾತ್ವಿಕರೆಂಬುದಕ್ಕೆ ಅವರ ಭಾಷಣಗಳು ಸಾಕ್ಷಿಕೊಡುವುವಾದರೂ ಅವರ ಹಲ ಕೆಲವು ವರ್ತನಗಳು ರಾಜನೀತಿಜ್ಞನ ತಾಳ್ಮೆಯನ್ನು ತೋರಿಸುವುದಕ್ಕಿಂತಲೂ ಮೊಗಲಾಯಿ ಪೌರುಷವನ್ನೇ ವ್ಯಕ್ತಪಡಿಸುತ್ತವೆಯೆಂದು ಇಷ್ಟೊಂದು ಅನುಭವದ ಮೇಲೂ ಮೊನ್ನೆ ಅವರು ಪ್ರತಿನಿಧಿ ಸಭೆಯಲ್ಲಿ ತೋರಿಸಿದ ವರ್ತನದಿಂದ ತಿಳಿಯುವುದು. ಅಂತಹ ಮನೋವೃತ್ತಿಯು ಮೈಸೂರಿನ ಭವಿತವ್ಯತೆಯನ್ನು ತನ್ನ ಕಿರು ಬೆರಳಿನಿಂದ ಸೂತ್ರ ಸಂಚಾಲಿತವಾಗಿ ಮಾಡಲು ಅಧಿಕೃತವಾಗಿರುವ ವರೆಗೆ ಮೈಸೂರು ಸುಖವನ್ನು ಕಾಣಲಾರದು. ಕಾರ್ಯತಃ ಈ ದಾವಣಗೆರೆ ಗಲಭೆಗಳೂ ಆ ನಿರಂಕುಶ ಮಾನಸಿಕತೆಯ ಪರಿಣಾಮ ಮಾತ್ರವಾಗಿರುತ್ತವೆ. ದಾವಣಗೆರೆಯಲ್ಲಿ ಆದ ಗಲಭೆಗಳು ಭಯಂಕರವಾದವುಗಳಾಗಿವೆ. ಬೆಂಗಳೂರಿನ ಗಲಭೆಗಳಿಂದ ಸರಕಾರಕ್ಕೆ ಅನುಭವ ಉಂಟಾಗಬೇಕು, ಅಲ್ಲದೆ ಗಣಪತಿ ಉತ್ಸವದ ಸಮಯದಲ್ಲಿ ದಾವಣಗೆರೆಯಲ್ಲುಂಟಾದ ಕಲಹದ ವಿಚಾರವೂ ಸರಕಾರಕ್ಕೆ ಗೊತ್ತಿರಬೇಕು. ಆ ಮೇಲೆ ದಾವಣಗೆರೆಯಲ್ಲಿ ಮೊಹರಮ್ಮಿಗಾಗಿ ನಡೆದ ಮುಸಲ್ಮಾನರ ಸನ್ನಾಹಗಳೂ ಸರಕಾರೀ ಅಧಿಕಾರಿಗಳಿಗೆ ತಿಳಿದಿರಬೇಕು. ಹಾಗಾದರೂ ಅಧಿಕಾರಿಗಳು ಏಕ ಪಕ್ಷೀಯವಾಗಿ ವರ್ತಿಸಿದುದೂ, ಗಲಭೆಗಳಿಗೆ ಎಡೆಕೊಟ್ಟುದೂ ನೋಡಿದರೆ, ಮೈಸೂರು ಅಧಿಕಾರಿಗಳ ಕಾರ್ಯದಕ್ಷತೆಯ ಬಗ್ಗೆ ಬಹಳ ಅನುಮಾನ ಪಡಬೇಕಾಗುತ್ತದೆ. ಬೆಂಗಳೂರು ಗಲಭೆಯಿಂದ ಕಲಿಯಬೇಕಾದ ಪಾಠಗಳನ್ನು ಕಂಡು ಹಿಡಿಯುವ ಬಗ್ಗೆ ವಿಶ್ವೇಶ್ವರಯ್ಯ ಕಮಿಟಿಯು ನೇಮಕವಾಯಿತು. ಆ ಕಮಿಟಿಯು ಬಹಳ ಪ್ರಯಾಸಪಟ್ಟು ವಿಚಾರಣೆಗಳನ್ನು ನಡಸಿ ತನ್ನ ತೀರ್ಮಾನಗಳನ್ನು ಕೊಟ್ಟಿತು. ಸರಕಾರವು ಆ ಕಮಿಟಿಯ ತೀರ್ಮಾನಗಳಿಂದ ಪಾಠಕಲಿಯಬೇಕಿತ್ತು. ಆದರೆ ಮಿ। ಮಿರ್ಜಾರವರ ಸ್ವಾಭಿಮಾನ ಮನಸ್ಸಿತೆಯು ಅವನ್ನು ಒಪ್ಪಲಾರದಾಯಿತು. ಮೈಸೂರಿನ ಹಿಂದೂ-ಮುಸಲ್ಮಾನ ಸಂಬಂಧವನ್ನು ಅನ್ಯೋನ್ಯತೆಯ ಕಡೆಗೆ ಒಯ್ಯಬಲ್ಲ ಒಂದು ಸಂದರ್ಭವೇ ಮೈಸೂರ ಸರಕಾರದಿಂದ ತಿರಸ್ಕೃತವಾಯಿತು. ದಾವಣಗೆರೆಯ ಗಲಭೆಗಳ ಜವಾಬ್ದಾರಿಯು ಮೈಸೂರ ಸರಕಾರದ ಆ ಕೃತ್ಯದ ಮೇಲೆಯೇ ಕೂಡಿಕೊಂಡಿರುತ್ತದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಮೈಸೂರು ಮಹಾರಾಜರ ಕೀರ್ತಿಮಾನವಾದ ಸರಕಾರವು ಪುನಃ ಪುನಃ ಕಳಂಕಿತವಾಗುವುದನ್ನು ನೋಡಿ ಯಾರಿಗೂ ಎದೆಯೊಡೆಯದಿರದು.

ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹೋಗುವುದು.

ಹಿಂದೂಸ್ಥಾನದಲ್ಲಿ ಉಮೇದ್ವಾರರಾಗುವವರು ಬಹು ಮಂದಿ. ಈಗ ಕೌನ್ಸಿಲುಗಳೂ, ಎಸೆಂಬ್ಲಿಗಳೂ ಪಕ್ಷಗಳ ವ್ಯವಸ್ಥೆಯಿಂದ ವಿಭಾಗಿಸಲ್ಪಟ್ಟಿರುವುದರಿಂ ಉಮೇದ್ವಾರರು ತಮ್ಮ ತಮ್ಮ ಪಕ್ಷವನ್ನು ಸ್ಪಷ್ಟವಾಗಿ ಹೇಳಿ ಮತಗಳನ್ನು ಕೇಳಿಕೊಳ್ಳಬೇಕಾಗಿದೆ. ದೇಶದಲ್ಲಿ ಕಾಂಗ್ರೆಸ್ಸಿನ ಪ್ರಾಬಲ್ಯವು ಹೆಚ್ಚಿರುವುದರಿಂದ ಕಾಂಗ್ರೆಸ್ಸಿನ ಹೆಸರಿನಲ್ಲಿ ಉಮೇದ್ವಾರರಾಗಲು ಇಚ್ಛಿಸುವವರು ಎಷ್ಟೋ ಮಂದಿ ಇರುವರು. ಜನ್ಮತಃ ಖಾದಿಯನ್ನೇ ಕಾಣದವರು, ಖಾದಿ ಉಡುಪನ್ನು ತೊಟ್ಟು ಓಟು ಕೊಡಿ ಎಂದು ಮನೆ ಮನೆ ತಿರುಗಿದುದು ಯಾರೂ ಮರೆತಿರಲಿಕ್ಕಿಲ್ಲ. ಇದನ್ನೆಲ್ಲ ನೋಡಿದರೆ ಉಮೇದ್ವಾರರು ಉದ್ದೇಶ ಪೂರ್ವಕವಾಗಿಯೇ ಮತದಾರರನ್ನು ಮೋಸಗೊಳಿಸಲಿಕ್ಕೆ ಯತ್ನಿಸುತ್ತಾರೆಂದು ತಿಳಿಯಬರುವುದು. ಹಿಂದೀ ಚುನಾವಣೆಯಲ್ಲಿ [illegible] ಯಾಗಿರುತ್ತದೆ. ವಿದ್ಯಾವಂತ ಮಂಡಳಿಯಿಂದಲೇ ಇಂತಹ ದ್ರೋಹ ಕೃತ್ಯಗಳು ನಡೆಯುವುದು ಬಹಳ ದುಃಖಕರ. ಈ ವಿಷಯದಲ್ಲಿ ಬ್ರಿಟಿಷ ಉಮೇದ್ವಾರರನ್ನು ಆದರ್ಶವಾಗಿ ತೆಗೆದುಕೊಳ್ಳಬಹುದು. ಈ ಬಾರಿಯ ಬ್ರಿಟಿಷ ಚುನಾವಣೆಯಲ್ಲಿ ಜೊವಿಟ್ಟ ಎಂಬವರು ಲಿಬರಲ್ ಪಕ್ಷದವರಾಗಿ ಉಮೇದ್ವಾರರಾದರು; ಲೇಬರ್ ಪಕ್ಷದ ಬೆಂಬಲವಿದ್ದು ಚುನಾಯಿಸಲ್ಪಟ್ಟರು, ಲೇಬರ್ ಪಕ್ಷವು ಅವರನ್ನು ಎಟೋರ್ನಿ ಜನರಲ್‌ರಾಗಿ ನೇಮಿಸಿತು ಮತ್ತು ಆ ನೇಮಕವನ್ನು ಸ್ವೀಕರಿಸಿ ಜೊವಿಟರು ಮಜೂರ ಪಕ್ಷವನ್ನು ಸೇರಿದರು; ಇದಕ್ಕೆ ಸ್ಥಳೀಕ ಲಿಬರಲ್ ಪಕ್ಷದ ಸಮ್ಮತಿಯೂ ಇತ್ತು. ಆದರೆ ಕೆಲವು ಲಿಬರಲ್ ಪಕ್ಷೀಯರು ಜೊವಿಟರನ್ನು ದ್ರೋಹಿಗಳೆಂದು ನಿಂದಿಸಲು, ಜೊವಿಟರು ತನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು, ಪುನಃ ಚುನಾವಣೆಗೆ ನಿಲ್ಲಲು ನಿರ್ಧರಿಸಿದರು; ಸ್ಥಳೀಕ ಲಿಬರಲ್ ಪಕ್ಷವು ಬಹುಮತದಿಂದ ಅವರ ರಾಜೀನಾಮೆಯನ್ನು ಹಿಂತೆಗೆದುಕೊಳ್ಳಬೇಕಾಗಿ ಕೇಳಿಕೊಂಡಿತು. ಇದರಿಂದ ಪಕ್ಷೀಯ ಭಕ್ತಿಯು ಹೇಗೆ ಬ್ರಿಟಿಷರೊಳಗೆ ಬೇರೂರಿ ಇದೆ ಎಂದು ತಿಳಿಯುವುದು. ಹಿಂದೂಸ್ಥಾನದ ಹಲವು ಕೌನ್ಸಿಲುಗಳಲ್ಲಿ ಕಾಂಗ್ರೆಸ್ಸಿನ ಪ್ರತಿಜ್ಞಾ ಪತ್ರಿಕೆಗೆ ಸಹಿ ಹಾಕಿ ಚುನಾಯಿಸಲ್ಪಟ್ಟು, ಆ ಮೇಲೆ ತಾವು ಕಾಂಗ್ರೆಸ್ಸು ಪಕ್ಷವೇ ಅಲ್ಲವೆಂದೂ, ರಾಜೀನಾಮೆ ಕೊಡಲಿಕ್ಕೆ ತಾವು ಜವಾಬ್ದಾರರೇ ಅಲ್ಲವೆಂದೂ ಹೇಳಿ, ತನ್ನ ಸ್ಥಾನದಲ್ಲಿ ಭದ್ರವಾಗಿ ಕೂತುಕೊಂಡವರೆಷ್ಟೋ ಮಂದಿ ಇರುತ್ತಾರೆ. ಅವರಲ್ಲಿಯೂ ಮಂತ್ರಿಪದವಿಯಂತಹ ಪದವಿಗಳು ದೊರೆತರೆ ಅವರು ಸರಕಾರಕ್ಕೆ ಬೇಕಾದುದನ್ನು ಮಾಡಿಕೊಡಲು ಸಿದ್ಧರಾಗಿರುತ್ತಾರೆ. ಇಂತಹರು ಜೊವಿಟ್ಟರು ಹಾಕಿದ ಮೇಲ್ಪಂಕ್ತಿಯನ್ನು ಅನುಸರಿಸಿದರೆ ದೇಶಕ್ಕೆ ಬಹಳ ಒಳ್ಳೆದಾಗುತ್ತಿತ್ತು.

ಸರಕಾರದ ಪ್ರತಿಫಲ ತಿರಸ್ಕಾರ.

ಸ್ಯಾಮನ್ ಸಮಿತಿಯು ಹಿಂದೀ ಸರಕಾರದ ಭಾವೀ ಸಂಘಟನೆಯನ್ನು ನಿರ್ಣಯಿಸುವರೇ ನೇಮಿಸಲ್ಪಟ್ಟ ಕೂಡಲೆ ಅದರಲ್ಲಿ ಹಿಂದೀಯರನ್ನು ಸೇರಿಸಿಲ್ಲವೆಂದು ಹಿಂದೂಸ್ಥಾನದ ಎಲ್ಲಾ ಪಕ್ಷಗಳಿಂದಲೂ ನಿಷೇಧವು ವ್ಯಕ್ತಗೊಳಿಸಲ್ಪಟ್ಟಿತು. ಹಿಂದೀಯರಿಲ್ಲದೆ ಇಂಗ್ಲೆಂಡು ಸ್ವತಂತ್ರವಾಗಿ ಹಿಂದೂಸ್ಥಾನದ ಮೇಲೆ ತೀರ್ಮಾನಕ್ಕೆ ಕೂತುಕೊಂಡದೆಯೆಂದೂ, ಹಿಂದೀಯರು ಈ ಅವಮಾನಕರವಾದ ಸಮಿತಿಯನ್ನು ಒಪ್ಪಬಾರದೆಂದೂ, ಸ್ಯಾಮನರೊಡನೆ ತೀವ್ರ ಅಸಹಕಾರವನ್ನೂ, ಅವರೊಡನೆ ಬಹಿಷ್ಕಾರವನ್ನೂ ಆಚರಿಸಬೇಕಾಗಿಯೂ ಸಮಸ್ತ ಪಕ್ಷಗಳೂ ನಿರ್ಧರಿಸಿದುವು. ಅಂತಹ ವೀರ ಠರಾವಿಗೆ ಕೈಹಾಕಿದ ಪಕ್ಷಗಳಲ್ಲಿ ಜಸ್ಟೀಸ್ ಪಕ್ಷವೂ ಒಂದು. ಆದರೆ ಸ್ಯಾಮನ್ ಸಮಿತಿಯು ಸಮಾನ ಅಧಿಕಾರದಿಂದ ತಮ್ಮ ಸಮಿತಿಗಳನ್ನು ಚುನಾಯಿಸಲು ಕೌನ್ಸಿಲುಗಳಿಗೂ ಎಸೆಂಬ್ಲಿಗೂ ಅಧಿಕಾರ ಕೊಟ್ಟ ಮೇಲೆ ಹಿಂದೀಯರ ಮಾನ ಉಳಿಯಿತೆಂದು ಕೆಲವರು ರಾಜಭಕ್ತಿ ಪ್ರೇರಿತರಾಗಿ ಸಹಕಾರವನ್ನು ಕೊಡಬಹುದಾಗಿ ಎಣಿಸಿದರು. ನಮ್ಮ ಪ್ರಾಂತ್ಯದ ಜಸ್ಟೀಸ್ ಪಕ್ಷವೂ ಹಿಂದೂಸ್ಥಾನಕ್ಕೆ ಸ್ಯಾಮನ್ ಸಮಿತಿಯು ದಾನ ಮಾಡಿದ ಮರ್ಯಾದೆಯನ್ನು ನಿರಾಕರಿಸಲಾರದೆ ಹೋಯಿತು. ಹಿಂದೂಸ್ಥಾನದ ಕಾಂಗ್ರೆಸ್ ಪಕ್ಷವೂ, ಮೊಡರೇಟ್ ಪಕ್ಷವೂ ಈ ನೂತನ ಸಮಾನತೆಯು ಸೋಗು, ಸಾಕ್ಷ್ಯಕ್ಕೆ [illegible] ಯುಕ್ತಿ [illegible] ಮಾತ್ರ [illegible]. ಇದರಲ್ಲಿ ನಿಜವಾದ ಸಮಾನತೆಯೂ ಇಲ್ಲ, ಇದರಿಂದ ಯಾವುದೊಂದು ಲಾಭವೂ ಇಲ್ಲವೆಂದು ಹೇಳಿದರು. ಈಗ ನೋಡಿದರೆ ಇದೆಲ್ಲವೂ ನಿಜವಾಗಿ ಕಂಡುಬರುವದು. ಎಸೆಂಬ್ಲಿ ಮತ್ತು ಕೌನ್ಸಿಲ್ ಆಫ್ ಸ್ಟೇಟಿನ ಪರವಾಗಿ ಚುನಾಯಿಸಲ್ಪಟ್ಟ ಸೆಂಟ್ರಲ್ ಸ್ಯಾಮನ್ ಕಮಿಟಿಯ ಅಧ್ಯಕ್ಷರಾಗಿರುವ ಸರ್ ಶಂಕರನ್ ನಾಯರರು ತಮ್ಮ ನಿರಾಶೆಯನ್ನು ಈಗ ವ್ಯಕ್ತಗೊಳಿಸಿರುವರು. ಸ್ಯಾಮನ್ ಕಮಿಶನಿನ ಅಭಿಪ್ರಾಯವೇನೆಂದಾಗಲಿ, ಅವರು ರಿಪೋರ್ಟನ್ನು ಯಾವ ರೀತಿಯಲ್ಲಿ ಬರೆಯುವರೆಂದಾಗಲಿ ತನಗೆ ಗೊತ್ತಿಲ್ಲವೆಂದು ನಾಯರರು ಹೇಳುತ್ತಿರುವರು. ಸ್ಯಾಮನ್ ಕಮಿಶನ್ನು ಸೆಂಟ್ರಲ್ ಕಮಿಟಿಯ ಹೇಳಿಕೆಗಳನ್ನು ಕೇಳುವರೇ ಮಾತ್ರವಲ್ಲದೆ, ತಮ್ಮ ಅಭಿಪ್ರಾಯವನ್ನು ಸೆಂಟ್ರಲ್ ಕಮಿಟಿಯೊಡನೆ ವಿನಿಯಮಗೊಳಿಸುವುದಿಲ್ಲ. ಮತ್ತು ಸ್ಯಾಮನ್ ಕಮಿಶನ್ನಿನ ರಿಪೋರ್ಟಿಗೂ ಸೆಂಟ್ರಲ್ ಕಮಿಟಿಯ ರಿಪೋರ್ಟಿಗೂ ಯಾವ ಸಂಬಂಧವೂ ಇರದೆ, ಸ್ಯಾಮನ್ ಕಮಿಶನ್ನು ಸ್ವತಂತ್ರವಾಗಿ ತಮ್ಮ ವರದಿಯನ್ನು ಬರೆದು ಪಾರ್ಲಿಮೆಂಟಿಗೆ ಒಪ್ಪಿಸುವರು. ಸೆಂಟ್ರಲ್ ಕಮಿಟಿಯೂ ತನ್ನ ರಿಪೋರ್ಟನ್ನು ಬರೆದು—ಯಾರಿಗೂ ಕಳುಹಿಸದೆ—ಹೇಗೂ ವೇಸ್ಟ್‌ಪೇಪರ್ ಬಾಸ್ಕೆಟನ್ನು ತುಂಬಬಹುದು. ಇದೀಗ ಶಂಕರನ ನಾಯರರ ಹೇಳಿಕೆಯ ಸಾರಾಂಶವು. ಇದೀಗ ಸಹಕಾರದಿಂದ ಹಿಂದೂಸ್ಥಾನಕ್ಕೆ ಲಾಭವಾದ ದೊಡ್ಡ ತಿರಸ್ಕಾರ. ಸಹಕಾರವಾದಿಗಳಿಗೆ ಇನ್ನಾದರೂ ತೃಪ್ತಿಯಾಗಲಿ.

ನೋಟಗಳು
NOTE...S

ಕಲಕತ್ತೆಯಲ್ಲಿ ಒಬ್ಬ ಪೋಲೀಸನಿಗೆ ಆರು ತಿಂಗಳುಗಳ ಕಠಿಣ ಸಜೆಯು ವಿಧಿಸಲ್ಪಟ್ಟಿರುತ್ತದೆ. ಆತನ ಅಪರಾಧವು ಮತ್ತೇನಿಲ್ಲ. ರಾತ್ರಿ ಹೊತ್ತು ಒಬ್ಬ ವ್ಯಾಪಾರಿಯ ಕಿಸೆಯಿಂದ ೫೦ ರೂಪಾಯಿ ಮೌಲ್ಯದ ಒಂದು ತಾಯಿತವನ್ನೂ, ಒಂದು ರೂಪಾಯಿಯನ್ನೂ ಕಳವು ಮಾಡಿದುದು.

• • • •

ಹೊಲದ ರಕ್ಷಣೆಗಾಗಿ ಬೇಲಿಯನ್ನು ಹಾಕಿದಾಗ್ಗೆ ಬೇಲಿಯೇ ಹೊಲಮೇದಂತೆ' ಎಂಬ ಗಾದೆಗನುಸಾರವಾಗಿ ಜನತೆಯಲ್ಲಿ ಉಂಟಾಗುವ ಕಳವುಗಳನ್ನು ತಡೆಗಟ್ಟಲು ಪೋಲೀಸರನ್ನು ನೇಮಿಸಿದಾಗ, ಪೋಲೀಸರೇ ಚೋರರ ಗುರುಗಳಾಗುವುದು ಆಶ್ಚರ್ಯದ ಸಂಗತಿಯಾಗಿದೆ.

• • • •

ಲಾಹೋರದ ಒಳಸಂಚಿನ ಮೊಕದ್ದಮೆಯಲ್ಲಿ ಪೋಲೀಸರ ಹುಡುಕಾಟವು ಹೇಗೂ ಕೊನೆಗಂಡ ಹಾಗಾಯಿತು. ಪೋಲೀಸರು ಒಟ್ಟಾರೆ ೩೦ ಮಂದಿಗಳನ್ನು ಕೈದುಮಾಡಿರುವರು. ಎಂಟು ಕೈದಿಗಳೂ ಇವರಲ್ಲಿ ಕೂಡಿರುವರು. ಕೈದಿಗಳ ಜೊತೆ ಪೋಲೀಸರಿಗೆ ಹಲವು ಪುಸ್ತಕಗಳೂ ಪತ್ರಗಳೂ ದೊರೆತಿರುವವಂತೆ.

• • •

ಈ ಕೇಸಿನ ವಿಚಾರಣೆಯು ಆರು ತಿಂಗಳ ಸಮಯ ನಡೆಯಲಿರುವದಂತೆ. ಫಲಿತಾಂಶವೇನೆಂದು ನೋಡಲಿದೆ.

• • • •

ಒಂದೆರಡು ತಿಂಗಳುಗಳಿಂದ ಹಿಂದೂದೇಶದಲ್ಲಿ ಬ್ರಿಟಿಷ ವಸ್ತ್ರ ಬಹಿಷ್ಕಾರದಿಂದ ಬ್ರಿಟನ್ನಿನ ಮುಖ್ಯ ಮುಖ್ಯ ಕೈಗಾರಿಕೆಯ ಪಟ್ಟಣಗಳಾದ ಮೆಂಚೆಸ್ಟರ, ಲೆಂಕೆಶಾಯರ ಮೊದಲಾದ ಕಡೆಗಳಲ್ಲಿನ ಹಲವು ಗಿರಣಿಗಳು ಮುಚ್ಚಲ್ಪಟ್ಟಿವೆಯಂತೆ.

• • •

ಬಹಿಷ್ಕಾರವನ್ನು ಇನ್ನೂ ಚೆನ್ನಾಗಿ ನಡೆಸಿದುದಾದರೆ ಸಧ್ಯದಲ್ಲಿಯೇ ಹಿಂದೂಗಳಿಗೆ ಸಂಪೂರ್ಣ ಜಯವು ದೊರಕುವುದರಲ್ಲಿ ಆವ ಸಂದೇಹವೂ ತೋರುವುದಿಲ್ಲ.

• • • •

ದಾವಣಗೆರೆಯ ಹಿಂದೂಮುಸಲ್ಮಾನ ಕಲಹದಲ್ಲಿ ಮುಸಲ್ಮಾನರೇ ಮೊದಲಾಗಿ ಹಿಂದೂಗಳ ಮೇಲೆ ಬಿದ್ದರೆಂದು ಕೆಲವು ಕಾರಣಗಳಿಂದ ತಿಳಿಯುವುದು. ಮುಸಲ್ಮಾನರ ಹೇಳಿಕೆಯಿಂದ ಹಿಂದೂಗಳೇ ತಪ್ಪುಗಾರರೆಂದು ಊಹಿಸಬೇಕಾಗಿದೆ.

• • •

ತಪ್ಪು ಯಾರದೇ ಆಗಿರಲಿ. ಇಂತಹ ಜಾತೀಯ ಕಲಹಗಳಿಂದ ಆ ಜಾತಿಗಳೊಳಗೆ ಮಾತ್ರವಲ್ಲದೆ ಇಡೀ ರಾಷ್ಟ್ರಕ್ಕೇನೇ ವಿಶೇಷ ಹಾನಿ.

• • • •

ಜುಗಾರಿ ನಂಬ್ರದಲ್ಲಿ ಹಿಡಿಯಲ್ಪಟ್ಟ ಕೆಲವರಿಗೆ, ಇಲ್ಲಿಯ ಬೆಂಚ್ ಕೋರ್ಟಿನಲ್ಲಿ ಶಿಕ್ಷೆ ವಿಧಿಸಲ್ಪಟ್ಟಿತಂತೆ. ಇನ್ನೂ ಇನ್ನೂ ಜುಗಾರಾಡುವವರು ಪಟ್ಟಣದಲ್ಲಿರುವರಾದರೆ, ಇದರಿಂದಲಾದರೂ ಜಾಗರೂಕರಾಗಲಿ!

• • • •

ಮುಂಬಾಯಿಯಲ್ಲಿ ನಾರಾಯಣಶಂಕರ ಮೆಹತೆ ಎಂಬ ೧೮ ವರುಷ ಪ್ರಾಯದ ಯುವಕನಿಗೆ ಮದುವೆಯು ನಿಶ್ಚಯವಾಗಿತ್ತು. ತನ್ನ ಮದುವೆಯ ಸಮಯ ನಡೆಸುವ ದೀವಟಿಗೆಗೆ ಉಪಯೋಗಿಸುವ ಸಲುವಾಗಿ, ಗಂಧಕ ಮತ್ತು ಕ್ಲೋರೇಟ್ ಒಫ್ ಪೊಟೇಶ ಇವುಗಳನ್ನು ಬೆರಸುತ್ತಿದ್ದನು.

• • • •

ಆದರೆ ಅಕಸ್ಮಾತ್ ಇವುಗಳಿರಡರ ಭಯಂಕರ ಸ್ಫೋಟವಾಗಿ ಅಗ್ನಿಜ್ವಾಲೆಯಿಂದ ಯುವಕನ ಸರ್ವಾಂಗವೂ ಸುಟ್ಟು ಹೋಗಿ ಆತನು ಆಸ್ಪತ್ರೆಗೆ ಕಳುಹಿಸಲ್ಪಟ್ಟನು. ಅಲ್ಲಿಯೇ ಮೃತಪಟ್ಟನು.

• • •

ಉಡುಪಿಯಲ್ಲಿ ಬಂಟರ ಯಾನೆ ನಾಡವರ ಸಂಘದ ಸಭೆ ಸೇರಿದ್ದ ತರ, ಪ್ರಾರಂಭವಾಗಿದೆ ಅಳಿಯಸಂತಾನ ಕಟ್ಟಿನ ಚರ್ಚೆ

• • • •

ಪತ್ರಿಕೆಗಳಲ್ಲಂತೂ ಪುಟ ಮೀರದೆ ಬರುತ್ತಿವೆ. ಈಗ ಉತ್ತರಗಳು ಪ್ರಾರಂಭ. ನೀವಲ್ಲಾ ನಾನು, ನಾನಲ್ಲಾ ನೀವು. ಚರ್ಚೆ ಪ್ರಾರಂಭ.

ಶಾಲಿವಾಹನ ಶಕ ೧೮೫೧ನೆಯ ವಿಭವಸಂದ ಜ್ಯೇಷ್ಠ ಬ ೭ ಶನಿವಾರದಿಂದ ವಿಭವ ಸಂವತ್ಸರದ ಜ್ಯೇಷ್ಠ ಬ೧೪ ಶುಕ್ರವಾರದ ವರೆಗಿನ ಪಂಚಾಂಗ.

(ಗಣಿತನೆಯ ಮಿಥುನ (ಕಾರ್ತಿಕ)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ರವಿ	ಸೂರ್ಯ. ಉ	ಸೂರ್ಯ. ಅಸ್ತ
29	ಶನಿ	೭	೩೦.೦೪	ಪೂ. ಭಾ.	೭. ೨	೧೫	6. 9	6.59
30	ರವಿ	೮	೨೫.೩೨	ಉ. ಭಾ.	೬.೪೧	೧೬	6. 9	6.59
1	ಸೋಮ	೯	೫೫.೩೦	ರೇವತಿ	೭. ೨	೧೭	6. 9	6.59
2	ಕುಜ	೧೦	೨೫.೩೫	ಅಶ್ವಿನಿ	೫.೦೪	೧೮	6.10	6.59
3	ಬುಧ	೧೧	೧೬.೨	ಭರಣಿ	೨.೪೬	೧೯	6 10	6.59
4	ಗುರು	೧೨	೧೧.೫೮	ರೋಹಿಣಿ	[illegible]	೨೦	6.10	6.59
5	ಶುಕ್ರ	೧೪	೩.೨೮	ಕೃತ್ತಿಕಾ	೫೧.೪೪	೨೧	6.11	6.59

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಶಾಖ) Maximum ಹೆಚ್ಚು	Minimum ಕಡಿಮೆ	Rainfall. ಮಳೆ ದಿನದ ಮಳೆ	ವಾರದ ಒಟ್ಟು ಮಳೆ
21	79—0	74—6	3—80	—
22	87—9	74—4	1—70	—
23	86—8	72—9	4—99	—
24	85—0	73—9	1—60	—
25	81—1	73—2	3—75	—
26	83—8	71 7	4—70	—
27	83—7	71—8	1—75	—
				22—29

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಸಿ	...	6—14	7—6
ಗಾಡ್ಡು	...	6—4	6—10
ಕ್ವಾಪಿ	...	5—9	6—
ಮೂರ ಅನ್ನರ್ ಬೆಳ್ತಿಗೆ	...	7—0	7—8
ರಂಗೂನು ಬೆಳ್ತಿಗೆ ಗೋಣಿ ಗಳ್ಸೆ	...	12—0	12—3
ಸುಗ್ಗಿ	...	5—12	6—8
ಎಣ್ಣೂರು ಬೆಳ್ತಿಗೆ ಮುಡಿ ಗಳ್ಸೆ	...	6—4	6—0
ಗೋದಿ ಗೋಣಿ ಗಳ್ಸೆ	...	15—12	20—0
ಹುರುಳಿ ಗೋಣಿ ಗಳ್ಸೆ	...	7—6	9—8
ಅವರೆ ಗೋಣಿ ಗಳ್ಸೆ	...	15—8	16—8
ತೊಗರಿ ಗೋಣಿ ಗಳ್ಸೆ	...	14—8	17—8
ಕಡಲೆಬೇಳೆ ಗೋಣಿ ಗಳ್ಸೆ	...	18—8	27—0
ಉದ್ದು ಗೋಣಿ ಗಳ್ಸೆ	...	16—0	16—0
ಹೆಸರು ಗೋಣಿ ಗಳ್ಸೆ	...	14—8	16—0
ಊರು ಬೆಲ್ಲ ಖಂಡಿ ಗಳ್ಸೆ	...	70—0	—
ಉಪ್ಪು ಗೋಣಿ ಗಳ್ಸೆ	...	4—5	4—14
ಕೊಬ್ಬರಿ ಖಂಡಿ ಗಳ್ಸೆ	...	90—0	95—
ಕೊಬ್ಬರಿ ಹಿಂಡಿ ಖಂಡಿ ಗಳ್ಸೆ	...	30—0	—
ಎಳ್ಳಿಂಡಿ ಖಂಡಿ ಗಳ್ಸೆ	...	40—0	—
ಕೊಬ್ಬರಿ ಎಣ್ಣೆ ಮುಡಿ ಗಳ್ಸೆ	...	6—8	7—0
ಎಳ್ಳೆಣ್ಣೆ ಮುಡಿ ಗಳ್ಸೆ	...	7—12	8—4
ಹರಳೆಣ್ಣೆ ಬೆಳ್ತಿಗೆ ಗಳ್ಸೆ	...	7—12	8—4
ಮೋರಿಸ ಸಕ್ಕರೆ ಮುಡಿ ಗಳ್ಸೆ	...	3—10	3—11
ಹೊಸ ಮೆಣಸು	...	5—10	6—8
ಸಾಸಿವೆ ಮುಡಿ ಗಳ್ಸೆ	...	8—8	—
ಕೊತ್ತಂಬರಿ ಮುಡಿ ಗಳ್ಸೆ	...	3—12	4—0
ಕೋಟಿಕ್ ಕಾಫಿ ಖಂಡಿ ಗಳ್ಸೆ	...	355—0	370—0
ಅಳಿಗೋಟು ಅಡಿಕೆ ಖಂಡಿ ಗಳ್ಸೆ	...	160—0	—
ಕಾಳುಮೆಣಸು ಖಂಡಿ ಗಳ್ಸೆ	...	425—0	430—0
ಯೇಲಕ್ಕಿ ಮುಡಿ ಗಳ್ಸೆ	...	50—0	56—
ಗೇರುಬೀಜ ಮುಡಿ ಗಳ್ಸೆ	...	3—8	3—10
ಶುಂಠಿ ಖಂಡಿ ಗಳ್ಸೆ	...	45—0	50 0
ಕಾಂಬ್ರು ತಗಡು ಮುಡಿ ಗಳ್ಸೆ	...	18—0	18—4
ಕಾಂಬ್ರು ಪಾತ್ರಗಳು ಮುಡಿ ಗಳ್ಸೆ	...	—0	26—0
ಚೀನಿಬೆಳ್ಳಿ ಸೀಸು ಗಳ್ಸೆ	...	15—4	—
ಹಿತ್ತಾಳೆ ತಗಡು ಮುಡಿ ಗಳ್ಸೆ	...	17—0	17—8
ಜವನು ಗಳ್ಸೆ	...	13—12	—
ಮುಂಡೆಹಾರ ಖಂಡಿ ಗಳ್ಸೆ		30—0	37—8

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಇಂಜಿಗೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅವ್ಯರ್ಥವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಕಂದುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜೆಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಹೋಲ್‌ಸೇಲ್ ಫಾರ್ಮಸಿ
ಮಂಗಳೂರು ಟವನ್ ಹಾಲ್ ಹತ್ತಿರ.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಸ್ವಯವಾಗಲಿ ‖ ಅಂಚೆಹಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯುರ್ವೇದ ಸಾರಸಂಗ್ರಹರೂಪವಾಗಿರುವ ೨ ಭಾಷೆಗಳಲ್ಲಿ ಛಾಪಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಜಾಗ್ರತೆಯಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧಿಗಳನ್ನು ಸರಿಯಾಗಿ ನಡೆಯುವದೇ ದಾರಿ. ಹಾಗಿಲ್ಲವಿದ್ದರೆ ಅದರಲ್ಲಿ ಹೇಳಿರುವ ಉಪಾಯವನ್ನು ಮಾತ್ರ ಮತ್ತೊಂದೇ ದಾರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಜೈನಾ ಬಜಾರು, ಮದ್ರಾಸು

ಉಚಿತ! ಉಚಿತ!!

372 ಪುಟಗಳುಳ್ಳ ಸುಂದರವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ, ನಮ್ಮ ಲೋಕಪ್ರಸಿದ್ಧವಾದ ಟಾನಿಕ್ಕೆಂಬುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವವು. ಈ ಮಾತ್ರೆಗಳು, ಮಲಬಂಧ ಮೊದಲು ನಪ್ಪುಂಸಕತ್ವವರೆಗಿನ ವ್ಯಾಧಿಗಳನ್ನು ಪರಿಹರಿಸುತ್ತವೆ.

ಡಿ. ಗೂಲನ್ ಮಾರ್ಟ್, ಮಂಗಳೂರು,

ಪವಿತ್ರ ಖಾದಿ! ಬಡವರ ಖಾದಿ!!

ಶುದ್ಧ ಖಾದಿಯನ್ನೇ ವಿಕ್ರಯಿಸುವುದಾಗಿ ಅ. ಭಾ. ಚ. ಸಂಘದಿಂದ ಸರ್ಟಿಫಿಕೇಟು ಹೊಂದಿರುವ ಮತ್ತು ಇದೇ ಎಪ್ರಿಲ್ ತಾ. 3ರಲ್ಲಿ ತೆರೆಯಲಾದ

"ಖಾದಿ ನಿಲಯ"ವು

ಎಲ್ಲಾ ಉಪಯೋಗಗಳಿಗಾಗುವ ಸರ್ವ ನಮೂನೆ ಫ್ಯಾಶನಿಗಾಗುವ ನಾಜೂಕು ಖಾದಿಯನ್ನು ಸಂಗ್ರಹಿಸಿರುತ್ತದೆ. ದೇಶಬಾಂಧವರು ಮಹಾತ್ಮಾ ಗಾಂಧಿಯವರು ಈ ವರ್ಷದ ಮಟ್ಟಿಗೆ ಕೈಕೊಂಡಿರುವ ಒಂದೇ ಒಂದಾದ ಪ್ರಧಾನ ಪ್ರಚಾರ ಕಾರ್ಯವಾಗಿಟ್ಟಿರುವ

ಈ ಪವಿತ್ರ ಖಾದಿಯನ್ನು

ಬಳಕೆಗೆ ತರಲು ಸುಸಂದರ್ಭವು ಇದೇ! ತ್ವರೆಮಾಡಿರಿ!!

ವಂದೇ ಮಾತರಂ !!

ವಿಳಾಸ—ಖಾದಿ ನಿಲಯ,
(ವ್ಯವಸ್ಥಾಪಕರು, ಪೈ ಮತ್ತು ಕಂಪೆನಿ),
ಸಂತೆಕಟ್ಟೆ ಬಳಿ, ಉಡುಪಿ, ದ. ಕ.

[illegible]
ಮುಖ್ಯ ಸುದ್ದಿಗಳು. . . . ೫
[illegible] — [illegible], ಚಿಕ್ಕಬಳ್ಳಾಪುರ, ಮುಂಡೇಶ್ವರ, [illegible] . . . ೭
[illegible] . . . ೭-೯
[illegible] ವಿದ್ಯಾಭ್ಯಾಸದಲ್ಲಿ ಖರ್ಚು ಉಳಿಸುವ ಏನುಲ್ಗಮೇ [illegible] ಸ್ಕೀಮ್ . . . ೯
[illegible] ಮತ್ತು ಅಳಿಯಸಂತಾನದ ಕಟ್ಟಿನ ಹಿಸೆಯ [illegible] . . . ೧೨
ಸರಕಾರಿ ಆಸ್ಪತ್ರೆಗಳಲ್ಲಿನ ಡಾಕ್ಟರರು, ಕಾರಾಗೃಹ ಆವರಣದ ಸುಧಾರಣೆ . . . ೧೧
[illegible] ಪರಿಣಾಮ. (ಕತೆ) . . . ೧೪
ಪತ್ರವ್ಯವಹಾರ, ೨ . . . ೨

ಸ್ವದೇಶಾಭಿಮಾನಿ.

ತಾರೀಕು ೨೮ನೇ ಶುಕ್ರವಾರ ಜೂನ್ ೧೯೨೯.

ಸಹ ವಿದ್ಯಾಭ್ಯಾಸ.

ಹಿಂದೇ ಸಂಚಿಕೆಯ ಇನ್ನೊಂದು ಭಾಗದಲ್ಲಿ, ಮದರಾಸು ಪ್ರಾಂತದೊಳಗಿನ ಪ್ರಾಥಮಿಕ ವಿದ್ಯಾಭ್ಯಾಸದ ಮುಂದಿನ ಸುಧಾರಣೆಗಳನ್ನು ವಿವರಿಸಿ ಒಂದು ಲೇಖನ ಕೊಡಲ್ಪಟ್ಟಿದೆ. ಶಾಲೆಗಳ ಸಂಖ್ಯೆಗಳನ್ನು ಕಡಿಮೆಮಾಡಿ, ಪ್ರಾಥಮಿಕ ವಿದ್ಯಾಭ್ಯಾಸದ ಖರ್ಚನ್ನು ಉಳಿಸುವುದೇ ಈಗಿನ ಈ ಸುಧಾರಣೆಗಳ ಉದ್ದೇಶವಾಗಿರುತ್ತದೆ. ಹಿಂದೂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕೆ ಅನಾವಶ್ಯಕ ಖರ್ಚು ಹೆಚ್ಚಾಗುತ್ತದಾಗಿ ಯಾರೂ ನೆನಸಿರಲಿಲ್ಲ; ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದೇ ಪ್ರಾಥಮಿಕ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಕೈಕೊಂಡವರ ಮೊದಲಿನ ಪ್ರಯತ್ನವಾಗಿತ್ತು. ಈಗಿನ Amalgamation ಸ್ಕೀಮಿನ ಪ್ರಕಾರ ನಿರ್ಬಲ ಶಾಲೆಗಳನ್ನು ಪ್ರಬಲವಾದ ಒಂದೇ ಶಾಲೆಯಲ್ಲಿ ಕೇಂದ್ರೀಕರಿಸುವುದು ಸಾಮಾನ್ಯವಾಗಿ ಒಳ್ಳೆಯದೇ ಎಂದು ತೋರಿದರೂ ಕಾರ್ಯದಲ್ಲಿ, ಹಿಂದೂಸ್ಥಾನದ ಪ್ರಾಥಮಿಕ ವಿದ್ಯಾಭ್ಯಾಸವು ಗಮನಿಸಬೇಕಾದ ಹಲವು ವೈಶಿಷ್ಟ್ಯಗಳ ಕಾರಣದಿಂದ ಪ್ರಾಥಮಿಕ ವಿದ್ಯಾಭ್ಯಾಸದ ಸ್ಥಿತಿಯು ಮತ್ತೂ ಕೆಡಲಿಕ್ಕಿರುತ್ತದೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ ಸಹ ವಿದ್ಯಾಭ್ಯಾಸ ಕ್ರಮವನ್ನು ಜ್ಯಾರಿಗೆ ತರಲಿರುವುದು. ಈಗಿನ ಸುಧಾರಣೆಯ ಆತುರತೆಯ ಗೊಂದಲದಲ್ಲಿ ಹಿತಾಹಿತದ ವಿಚಾರವನ್ನು ಯಾರೂ ಮಾಡುವುದಿಲ್ಲ. ಸಹ ವಿದ್ಯಾಭ್ಯಾಸದ ಪ್ರಶ್ನೆಯು ಇನ್ನೂ ವಾದದಲ್ಲಿಯೇ ಇದೆಯಲ್ಲದೆ ತೀರ್ಮಾನಿತ ಪ್ರಶ್ನೆಯಾಗಿಲ್ಲ. ಬಾಲಕ ಬಾಲಕಿಯರನ್ನು ಒಂದೇ ತರಗತಿಗಳಲ್ಲಿ ಸೇರಿಸಿ ವಿದ್ಯಾಭ್ಯಾಸವನ್ನೀಯುವುದು ಹಿತಕರವಾಗಿರಲಾರದು. ಈ ಕ್ರಮವು ಪ್ರಚಾರದಲ್ಲಿರುವ ಪಾಶ್ಚಾತ್ಯದೇಶಗಳಲ್ಲೇ ಇದರ ಉಪಕಾರತೆಯ ವಿಷಯದಲ್ಲಿ ಸಂದೇಹವುಂಟಾಗಿರುತ್ತದೆ.

ಹುಡುಗಿಯರ ಶಾಲೆಗಳ ವಿದ್ಯಾಭ್ಯಾಸ ಕ್ರಮಕ್ಕೂ ಹುಡುಗರ ಶಾಲೆಗಳ ವಿದ್ಯಾಭ್ಯಾಸ ಕ್ರಮಕ್ಕೂ ಈಗಲೇ ಬಹಳ ಭೇದವಿರುತ್ತದೆ. ಹುಡುಗಿಯರ ಶಾಲೆಗಳ ವಿದ್ಯಾಭ್ಯಾಸ ಕ್ರಮವನ್ನು ಪ್ರತ್ಯೇಕವಾದ ರೀತಿಯಲ್ಲಿಯೇ ಮಾಡುವ ಅವಶ್ಯಕತೆಯು ಕಂಡು ಬಂದಿರುವಾಗ ಅದನ್ನು ಹುಡುಗರ ವಿದ್ಯಾಭ್ಯಾಸದೊಂದಿಗೆ ಕೂಡಿಸುವ ವಿಪಾರದಿನ ಅಹಿತವು ಪ್ರತ್ಯಕ್ಷವಾಗಿ ಕಾಣುವುದು. ಅಲ್ಲದೆ, ಪ್ರಕೃತ ಹಿಂದೂಸ್ಥಾನದ ಹುಡುಗಿಯರ ಶಿಕ್ಷಣವು ಅರ್ಜನೆಯನ್ನು ಉದ್ದೇಶಿಸುವುದಿಲ್ಲ. ಹೊಲಿಗೆ ಗಾಯನ, ಮೊದಲಾದ ವೈಶಿಷ್ಟ್ಯಗಳನ್ನೂ, ಉಪಾಧ್ಯಾಯಿನಿಯರಿಂದುಂಟಾಗುವ ವಿದ್ಯಾ ವಾತಾವರಣವನ್ನೂ, ಹುಡುಗಿಯರ ವಿದ್ಯಾಭ್ಯಾಸವನ್ನು ಕೆಡಿಸದೆ, ವಿದ್ಯಾಭ್ಯಾಸ ಕ್ರಮದಿಂದ ತೆಗೆದು ಹಾಕಲಾಗುವುದಿಲ್ಲ. ಹಾಗಾದರೂ ಡಿಸ್ಟ್ರಿಕ್ಟ ಎಜ್ಯು [illegible] ಸಿಕ್ಕಿ ಕಡಿಮೆಯಾಗಿರುವುದು ಬಹಳ ಅವಸರದ ಅಭ್ಯಾಸಗಳ ಅಭಿವೃದ್ಧಿಯನ್ನು [illegible].

[illegible] ಹುಡುಗಿಯರ ವಿದ್ಯಾಭ್ಯಾಸದ ಅಭಿವೃದ್ಧಿಯನ್ನು ಬಯಸುವುದಾದರೂ, ಈ ಸಹವಿದ್ಯಾಭ್ಯಾಸದಿಂದ ಹುಡುಗಿಯರ ವಿದ್ಯಾಭ್ಯಾಸವು ಧಕ್ಕನೆ ಕಡೆಹೊಂದಬಹುದು. ಏಕೆಂದರೆ ಪ್ರಥಮತಃ ಸಹವಿದ್ಯಾಭ್ಯಾಸಕ್ಕೆ ಒಪ್ಪಿಗೆಯಿತ್ತು ಹುಡುಗಿಯರನ್ನು ಶಾಲೆಗೆ ಕಳುಹಿಸುವವರು ಇರುವುದು ಬಹಳ ಕಡಿಮೆ ಮಂದಿ. ಹಾಗೆ ಕಳುಹಿಸಿದರೂ, ಹುಡುಗಿಯರು ವಿವಾಹ ವಯಸ್ಸಿಗೆ ಬಂದ ಕೂಡಲೇ ಹುಡುಗಿಯರನ್ನು ಶಾಲೆಗೆ ಕಳುಹಿಸದೆ ಇರುವ ಅವಶ್ಯಕತೆಯು ಹಿರಿಯರಿಗೆ ಬೀಳುವುದು. ಹೀಗಾಗಿ ಸುಧಾರಕರ ಅವಸರದ ಆತುರತೆಯಿಂದ ಸಹವಿದ್ಯಾಭ್ಯಾಸವನ್ನು ಪ್ರಚಲನೆಗೆ ತಂದರೆ ಜಿಲ್ಲೆಯ ಸ್ತ್ರೀವಿದ್ಯಾಭ್ಯಾಸವೇ ಹಿಂದೆ ಬೀಳುವ ಸಂಭವವಿರುತ್ತದೆ.

ಸಹವಿದ್ಯಾಭ್ಯಾಸವು ಐಚ್ಛಿಕವಾಗಬೇಕಲ್ಲದೆ ಕಡ್ಡಾಯದ್ದಾಗಬಾರದು. ಸಹವಿದ್ಯಾಭ್ಯಾಸದಲ್ಲಿ ವಿಶ್ವಾಸವಿದ್ದವರು ತಮ್ಮ ಹುಡುಗಿಯರನ್ನು ಹುಡುಗರ ಶಾಲೆಗೆ ಕಳುಹಿಸಲಿಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ. ಆದರೆ ಸಹವಿದ್ಯಾಭ್ಯಾಸದ ಅವಶ್ಯಕತೆಯನ್ನು ಕಾಣದವರಿಂದ ಸ್ತ್ರೀವಿದ್ಯಾಭ್ಯಾಸದ ಲಾಭದಿಂದ ವಂಚಿಸುವುದು ನ್ಯಾಯವಾಗಲಾರದು. ಮೊದಲೇ ನಮ್ಮ ದೇಶದಲ್ಲಿ ಸ್ತ್ರೀ ವಿದ್ಯಾಭ್ಯಾಸವು ಬಹಳ ಕಡಿಮೆ ಇರುತ್ತದೆ. ಇಂತಹ ಕ್ರಾಂತಿಕಾರಕ ಬದಲಾವಣೆಗಳಿಂದ ಅದು ಮತ್ತೂ ಹಿಂದೆ ಸರಿಯುವುದೆಂಬುದರಲ್ಲಿ ಸಂದೇಹವಿಲ್ಲ.

ಇನ್ನು Amalgamation Schemeನ ವಿಷಯ ಒಂದು ಮಾತು ಹೇಳಬೇಕಾಗಿದೆ. ಪ್ರಾಥಮಿಕ ಶಾಲೆಗಳೆಂದರೆ ಬರೇ ಚಿಕ್ಕ ವಯಸ್ಸಿನವರ ವಿದ್ಯಾಭ್ಯಾಸಕ್ಕಾಗಿಯಾಗಿದೆ! ನಿರ್ಬಲವಾದ ಹಲವು ಶಾಲೆಗಳ ಬದಲಿಗೆ ಬಲವಾದ ಒಂದೇ ಶಾಲೆಯು ಉತ್ತಮ ವಿದ್ಯಾಭ್ಯಾಸವು ಕೊಡುವುದೆಂದು ಒಪ್ಪುವುದಾದರೂ, ಅಂತಹ ಬಲವಾದ ಶಾಲೆಗಳು ದೊಡ್ಡ ಕ್ಷೇತ್ರವನ್ನಾವರಿಸಿ, ದೂರದ ಹುಡುಗರಿಗೆ ಶಾಲೆಗೆ ಹೋಗಲು ಅಸಾಧ್ಯವಾಗುವುದು. ಈಗಲೇ ಶೇಕಡಾ ೧೫ರಂತೆ ಮಾತ್ರವೇ ಹುಡುಗರು ವಿದ್ಯಾಭ್ಯಾಸವನ್ನು ಹೊಂದಿ ಉಳಿದ ಶೇಕಡಾ ೮೫ ಮಂದಿ ನಿರಕ್ಷರಕುಕ್ಷಿಗಳಾಗಿರುವರು. Amalgamationನಿಂದ ಈ ಪರಿಸ್ಥಿತಿಯು ಮತ್ತೂ ಕೆಡುವುದು. ಪ್ರಾಥಮಿಕ ವಿದ್ಯಾಭ್ಯಾಸದ ಪ್ರಚಾರಕ್ಕಾಗಿ ಹಿಂದಿನ ಮಂತ್ರಿಗಳು ಪಾತ್ರೋರವರು ಒಳ್ಳೆಯ ಕಾರ್ಯಕ್ರಮವನ್ನು ರಚಿಸಿದ್ದರು. ಮೇಲಿನ Amalgamation Scheme ಜ್ಯಾರಿಗೆ ಬರುವುದಾದರೆ ಪಾತ್ರೋರವರ ಕಾರ್ಯಕ್ರಮದಿಂದ ಹಿಂತೆರಳಿದಂತಾಗುವುದು. ಈ ಸಂದರ್ಭದಲ್ಲಿ ಈಗಿನ ಮಂತ್ರಿಗಳು ಭಾರವಾದ ಜವಾಬ್ದಾರಿಯನ್ನು ಹೊರಬೇಕಾಗುವುದು.

ವಿದ್ಯಾ ಇಲಾಖೆಯ ಅಧಿಕಾರಿಗಳೂ, ಡಿಸ್ಟ್ರಿಕ್ಟ ಎಜ್ಯುಕೇಶನಲ್ ಕೌನ್ಸಿಲೂ, ಲೋಕಲ್ ಬೋರ್ಡುಗಳೂ ಸರಕಾರದ ಈ ಹೊಸ ಸೂಚನೆಯನ್ನು ಪುನಃ ಚೆನ್ನಾಗಿ ಪರಿಶೀಲಿಸಿ ತಮ್ಮ ನಿಷೇಧವನ್ನು ವ್ಯಕ್ತಪಡಿಸಬೇಕಾಗಿ ಆಶಿಸುತ್ತೇವೆ.

ವಿದೇಶ ವರ್ತಮಾನ.

— ನವೆಂಬರ ತಿಂಗಳಿನಲ್ಲಿ ಹಿಂದೂದೇಶಕ್ಕೆ ಬ್ರಿಟನಿಂದ ೪೦ ಮಂದಿ ಯುರೋಪಿಯನ ವಿದ್ಯಾರ್ಥಿಗಳು ಸಂಚಾರದ ಬಗ್ಗೆ ಬರುವರು. ಛಪ್ಪನ್ನ ತಿಂಗಳಲ್ಲಿ ಅವರು ಹಿಂದಿರುಗುವರು. ಅವರೊಡನೆ ಒಬ್ಬ ಸ್ಟ್ಯಾಫ ಅಧಿಕಾರಿಯೂ ಒಬ್ಬ ಉಪಾಧ್ಯಾಯನೂ ಇರುವರು. ಇವರು ಕಲಕತ್ತಾ, ಮುಂಬಯಿ, ಆಗ್ರಾ, ಡಿಲ್ಲಿ, ಬನಾರಸ್ ಮೊದಲಾದ ಮುಖ್ಯ ಸ್ಥಳಗಳನ್ನು ಸಂದರ್ಶಿಸುವರು. ಪ್ರತಿ ಒಬ್ಬ ವಿದ್ಯಾರ್ಥಿಗೆ ೧೫೦ ಪವನುಗಳು ಬೇಕಾಗಬಹುದೆಂದು ಅಂದಾಜುಮಾಡಲಾಗಿದೆ. ಜುಲೈ ತಿಂಗಳಲ್ಲಿ ಶಾಲೆಬಿಡುವ ವಿದ್ಯಾರ್ಥಿಗಳೂ, ಈ ವರುಷ ಶಾಲೆಗೆ ಬಾರದೆ ಬರುವ ವರುಷ ಅದೇ ಶಾಲೆಗೆ ಹೋಗಬೇಕೆಂದು ನೆನಸುವ ವಿದ್ಯಾರ್ಥಿಗಳೂ ಈ ರೀತಿ ಸಂಚಾರ ಹೊರಡುವರು.

— ೧೯೨೭ನೇ ಇಸವಿಯಲ್ಲಿ ಜ್ಯಾಹೀರಾತುಗಳ ಪ್ರಕಟಣೆಗಾಗಿ ಯುನೈಟೆಡ್ ಸ್ಟೇಟ್ಸ ೧೫೦ ಮಿಲಿಯ ಡೊಲ್ಲರುಗಳನ್ನು ಖರ್ಚುಮಾಡಿತು. ಇದರ ಅರೆವಾಸಿ ಹಣವು ವಾರ್ತಾಪತ್ರಿಕೆಗಳ ಬಗ್ಗೆ ವಿನಿಯೋಗಿಸಲ್ಪಟ್ಟಿತು. ಪತ್ರಿಕೆಗಳಲ್ಲಿ ಪ್ರಕಟಿಸುವುದರಿಂದ ಬಹಳ ಲಾಭವಿದೆಯೆಂದು ನ್ಯೂಯೋರ್ಕ ಪಟ್ಟಣದ ಹಾರ್ವರ್ಡ ಯುನಿವರ್ಸಿಟಿಯ ಪ್ರೊಫೆಸರ್ ಕೋಪಲೇಂಡ್ ಎಂಬವರು ಅಭಿಪ್ರಾಯಪಡುವರು.

— ಜೋಹಾನ್ಸಬರ್ಗನಲ್ಲಿ ಒಬ್ಬ ಯುರೋಪಿಯನನು ಒಬ್ಬ ಆಫ್ರಿಕದ ಹದಿನೆಂಟು ವರುಷ ಪ್ರಾಯದ ಮಗಳನ್ನು ವಧಿಸಿದ ಬಲುವಾಗಿ ಕೈದುಮಾಡಲ್ಪಟ್ಟಿದ್ದನು. ಹುಡುಗಿಯು ತನ್ನ ಪ್ರಾಣರಕ್ಷಣೆಯ ಬಗ್ಗೆ ಪ್ರತಿಸ್ಪರ್ಧೆಯೊಡನೆ ಬಹುಸಮಯದ ವರೆಗೆ ಒದ್ದಾಡಿದ್ದಳೆಂಬುದರ ಬಗ್ಗೆ ರುಜುವಾತುಗಳು ದೊರಕಿರುತ್ತವೆ.

— ನ್ಯೂಜಿಲೇಂಡಿನಲ್ಲಿ ಭೂಕಂಪದ ದೆಸೆಯಿಂದ್ದ ತುಂಬ ಹಾವಳಿಯುಂಟಾಗಿರುತ್ತದೆ. ಪರ್ವತಗಳು ಕುಸಿದು ಅವುಗಳ ಅಡಿಯಲ್ಲಿರುವ ಮನೆಗಳೆಲ್ಲವೂ ಹೂಗಿಹೋಗಿವೆ.

[illegible] ಅವರ ಗಾಢಾಲಿಂಗನವನ್ನು [illegible].

— ನಮ್ಮ ಯುವರಾಜರು ಅವರ ಕ್ರೀಡೆ ಅಶ್ವವನ್ನು ಅಲಂಕರಿಸಿದರು, ಅವರು [illegible] ಬರಲಿಲ್ಲ.

— ನಮ್ಮ ಚಕ್ರವರ್ತಿಯವರು ಜುಲೈ ೭ನೇ ತಾರೀಕಿನ ದಿನ ಬೆಳಿಗ್ಗೆ ಹದಿನೊಂದು ಘಂಟೆಗೆ 'ಥೇಂಕ್ಸ್ ಗಿವಿಂಗ್' ಸಮಾರಂಭವನ್ನು ಆಚರಿಸುವರೆಂದೂ ಹಿಂದೂಸ್ಥಾನದ ಬೇರೆಬೇರೆ ಕಡೆಗಳಲ್ಲಿ ಅದೇ ಸಮಯ ಅದೇ ಸಮಾರಂಭವನ್ನು ಆಚರಿಸುತ್ತಿರಬೇಕೆಂದೂ ವೈಸರಾಯರಿಗೆ ಸೂಚನೆಯು ಬಂದಿರುತ್ತದೆ. ನೆಲಂಬೂರಿನ ಒಬ್ಬ ಸಾವುಕಾರನಾದ ಹಾಸನಬಹದೂರ ಅಲಿದಿನನೆಂಬಾತನು ಈ ಸಮಾರಂಭದ ಬಗ್ಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿರುವನು. ಈ ಹಣವು ಬಡವರಾದ ಮುಸಲ್ಮಾನ ಹುಡುಗರಿಗೆ ವಿದ್ಯಾರ್ಥಿವೇತನಗಳನ್ನು ಕೊಡುವದರ ಬಗ್ಗೆ ವಿನಿಯೋಗಿಸಲ್ಪಡುವದು.

— ಡಬ್ಲಿನಿನ ಏಮ ಜೇಮ್ಸ ಎಂಬಾತನು ಒಂದು ಬೆಟರಿಯನ್ನು ನಿರ್ಮಿಸಿರುವನು. ಒಳಗಿರುವ ವಿದ್ಯುಚ್ಛಕ್ತಿಯ ಸಹಾಯದಿಂದಲೇ ಆ ಬೆಟರಿಯು, ಒಂದು ರೈಲುಬಂಡಿಯನ್ನು ಅರುವತ್ತು ಮೈಲು ದೂರದ ವರೆಗೆ ಎಳೆಯುವುದಂತೆ.

— ಇಜಿಪ್ತದ ಪ್ರಧಾನಿಯವರು ಲಂಡನಿಗೆ ತಲಪಿದರು. ಲಂಡನಿನಲ್ಲಿ ಅವರನ್ನು ಮಿ. ರಮ್ಸೆ ಮೆಕ್ಡೊನಾಲ್ಡರು ಅವರನ್ನು ಸ್ವಾಗತಿಸಿದರು. ಆಕ್ಸ್‌ಫೋರ್ಡ ಯುನಿವರ್ಸಿಟಿಯವರು ಅವರಿಗೆ 'ಡಾಕ್ಟರ್ ಓಫ್ ಸಿವಿಲ್ ಲೋ' ಎಂಬ ಬಿರುದನ್ನು ಕೊಡಲಿರುವರು.

— ೧೯೨೮ನೇ ಇಸವಿಯಲ್ಲಿ ಇಡೀ ಜಗತ್ತಿನಲ್ಲಿ ೧,೩೨೩,೦೦೦ ಬೇರಲು ಕ್ರೂಡ್ ಪೆಟ್ರೋಲ್ ಎಣ್ಣೆಯು ಉತ್ಪತ್ತಿಯಾಯಿತು. ೧೯೨೭ನೇ ಇಸವಿಗಿಂತ ಇದು ಶೇಕಡಾ ೯ರಷ್ಟು ಹೆಚ್ಚಿರುತ್ತದೆ.

— ಕೊಲೊಂಬಿಯ ಎಂಬಲ್ಲಿ ಕ್ವಿಲೇಸ್ ಎಂಬ ನದಿಯು ಹರಿದುಹೋಗುತ್ತಿರುವಾಗ ಒಂದು ಎತ್ತರವಾದ ಭೂ ಪ್ರದೇಶವು ಅದಕ್ಕೆ ಎದುರಾಗಿ, ನದಿಯು ಅಸ್ತವ್ಯಸ್ತವಾದಿ ಹರಿದುದರಿಂದ ಸವಿಲ್ಲೆ ಎಂಬ ಪಟ್ಟಣದೊಳಗೆ ನೀರು ಬಂದು ನಾಲ್ವತ್ತು ಮಂದಿ ಸತ್ತುಹೋದರು. ನೂರಾರು ಜನರು ಗಾಯ ಹೊಂದಿದರು.

— ಲಂಕಾಶಾಯರಿನ ಗಿರಣಿಗಳಲ್ಲಿ ಕೆಲಸವು ಬಹಳ ಕಡಿಮೆಯಾಗಿರುವುದರಿಂದ ಅಧಿಕಾರಿಗಳು ನೂಲುವವರ ಸಂಬಳವನ್ನು ಶೇಕಡಾ ೧೨ರಷ್ಟು ಇಳಿಸಬೇಕೆಂದು ಯೋಚಿಸಿರುವರು. ಹೀಗೆ ಸಂಬಳವನ್ನು ಇಳಿಸಿದರೆ ಅದರ ಬಂದಿಶವೆಂದೇ ಮುಷ್ಕರವನ್ನು ಆಚರಿಸಬೇಕೆಂದು ಕೆಲಸಗಾರರು ನಿಶ್ಚಯಿಸಿರುವರು. ಮುಷ್ಕರವಾಗುವುದು, ಇಲ್ಲವೆ ಗಿರಣಿಗಳು ಮುಚ್ಚಲ್ಪಡುವುದು, ಇವೆರಡರಲ್ಲಿ ಒಂದು ನಿಶ್ಚಯವಾಗಿಯೂ ಸಂಭವಿಸಬಹುದೆಂದು ಊಹಿಸಲಾಗಿದೆ.

— ಲಂಡನ್ನಿನ ಒಂದು ಮೃಗಾಲಯದಿಂದ ಒಂದು ಸಿಂಹವು ತಪ್ಪಿಸಿಕೊಂಡು ಹೋಗಿ ಪಟ್ಟಣದ ಜನರನ್ನು ಹೆದರಿಸಿ ಬಿಟ್ಟಿತು. ಗೂಡಿನಿಂದ ಹೊರಗೆ ಬಂದ ಮೇಲೆ ಅರ್ಧ ತಾಸಿನ ವರೆಗೆ ಮಾರ್ಗದ ಬದಿಯಲ್ಲಿ ಅಲೆದಾಡಿಕೊಂಡಿತು. ಅದರ ಪಾಲಕನು ಅದನ್ನು ಹಿಡಿಯ ಬಂದಾಗ ಓಡಿಹೋಗಿ ಹಾದಿಯಲ್ಲಿ ಸಿಕ್ಕಿದ ಒಂದು ದನವನ್ನು ಕೊಂದುಹಾಕಿತು, ಒಬ್ಬ ಮನುಷ್ಯನನ್ನು ಅಟ್ಟಿಕೊಂಡುಹೋಯಿತು. ಆ ಸಂದರ್ಭದಲ್ಲಿ ಇತರರು ಪ್ರಯತ್ನಪಟ್ಟು ಗುಂಡು ಹೊಡೆದು ಸಿಂಹವನ್ನು ಕೊಂದುಹಾಕಿದರು.

— ಪ್ರೆಸಿಡೆಂಟ ಹೂವರರು ಮಿ. ಸಸ್ ಡಿ. ಪ್ರಿಸ್ಟ ಎಂಬ ನಿಗ್ರೋ ಹೆಂಗಸೊಬ್ಬಳನ್ನು ಸತ್ಕರಿಸಿದುದರಿಂದ ವಾಶಿಂಗಟನಿನ ರಾಜಕೀಯ ಮತ್ತು ಸಾಮಾಜಿಕ ವಂಗಡಗಳಲ್ಲಿ ಕುಂಬಳಿನ್ನಾಭಿಪ್ರಾಯವಿದ್ದಿರುತ್ತದೆ.

ಒಳದೇಶ ವರ್ತಮಾನ.

— ಸಂಯುಕ್ತ ಸಂಸ್ಥಾನದ ಅಲ್ಮೋರಾ ಎಂಬಲ್ಲಿ ಮಹಾತ್ಮಾಜಿಯವರು ಒಂದು ಮೋಟಾರು ಕಾರಿನಲ್ಲಿ ಕುಳಿತು ಹೋಗುತ್ತಿರುವಾಗ ಅಕಸ್ಮಾತ್ತಾಗಿ ಒಬ್ಬ ಮನುಷ್ಯನು ಅವರ ಕಾರಿನ ಅಡಿಯಲ್ಲಿ ಬಿದ್ದನು. ಒಡನೆ ಮಹಾತ್ಮಾಜಿಯವರು ಕಾರಿನಿಂದ ಹೊರಗೆ ಹಾರಿದರು. ಗಾಯ ಹೊಂದಿದ ಆ ಮನುಷ್ಯನನ್ನು ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಮಹಾತ್ಮಾಜಿಯವರಿಗೆ ಇದರಿಂದ ಬಹಳ ವ್ಯಥೆಯುಂಟಾಗಿರುತ್ತದೆ. ಈ ಸಲುವಾಗಿ ಅವರು ಉಪವಾಸವನ್ನು ಆಚರಿಸುತ್ತಿರುವರು.

— ಕಾನಪುರ ಮುನಿಸಿಪಾಲಿಟಿಯವರು ಖಾದಿ ಕೈಗಾರಿಕೆಯನ್ನು ಪ್ರೋತ್ಸಾಹಿಸುತ್ತಲಿರುವುದು ಅಭಿನಂದನೀಯ. ಅವರು ಕೈಯಿಂದಲೇ ನೈದ, ಕೈಯಿಂದಲೇ ನೂಲುಮಾಡಿದ ಖಾದಿಯ ಮೇಲಿನ ತೆರಿಗೆಯನ್ನು ತೆಗೆದುಹಾಕಿರುವರು. ಇದರಿಂದಾದ ನಷ್ಟವನ್ನು ತುಂಬಿಸಿಕೊಳ್ಳುವ ಸಲುವಾಗಿ ಮುನಿಸಿಪಾಲಿಟಿಯೊಳಗೆ ತರಿಸಲ್ಪಡುವ ವಿದೇಶಿ ವಸ್ತ್ರಗಳ ಮೇಲೆ ಸುಂಕವನ್ನು ಹೆಚ್ಚಿಸಬೇಕೆಂದು ನಿಶ್ಚಯಿಸಿರುವರು.

ಕಳೆದ ೧೫ನೇ ತಾರೀಕಿನ ದಿನ ಹೌರಾ ಪಟ್ಟಣದ ಶ್ರೀ ರಾಧಾಕೃಷ್ಣ ಹತ್ತಿ ಗಿರಣಿಯ ೧೪೦ ಮಂದಿ ನೇಕಾರರು ಮುಷ್ಕರವನ್ನು ಆಚರಿಸಿದರು. ಸಂಬಳವನ್ನು ಸರಿಯಾಗಿ ಕೊಡಲಿಲ್ಲವೆಂಬುದೇ ಈ ಮುಷ್ಕರದ ಕಾರಣ.

— ಹಿಂದೀ ವೈಮಾನಿಕನಾದ ಮಿ. ಚಾವಲಾಯು ಹಿಂದೂಸ್ಥಾನಕ್ಕೆ ಬಂದ ಮೇಲೆ ಅವನಿಗೆ ಕೊಡಲ್ಪಡುವ ಸ್ವಾಗತದಲ್ಲಿ, ವ್ಯಾಪಾರಿ ಮಂಡಲದೊಡನೆ ತಾವೂ ಸಹಕರಿಸಬೇಕೆಂದು ಮುಂಬಾಯಿ ಕೊರ್ಪೊರೇಶನಿನವರು ನಿಶ್ಚಯಿಸಿರುವರು.

— ಕಲಕತ್ತೆಯ ಸಮೀಪದ ನೀಲಾ ಎಂಬಲ್ಲಿ ಹಿಂದೂ ಮುಸಲ್ಮಾನರು ಹೊಡೆದಾಡಿಕೊಂಡುದರಿಂದ ನಾಲ್ವರು ಕೈದುಮಾಡಲ್ಪಟ್ಟಿರುವರು. ಇಕ್ಕಡೆಯವರು ಅಟ್ಟಿಂಗಿಯ ಚೂರುಗಳನ್ನೂ, ಸೋಡಾ ನೀರಿನ ಬಾಟಲಿಗಳನ್ನೂ ಉಪಯೋಗಿಸಿದ್ದರು. ಹಲವು ಜನರು ಗಾಯ ಹೊಂದಿದರಾದರೂ ಯಾರೂ ಸತ್ತಿಲ್ಲ.

— ಕರಾಚಿಯಿಂದ ಲಂಡನಿಗೆ ಹಾರಿಹೋಗುತ್ತಿರುವ ವಿಮಾನ ಟಪ್ಪಾಲಿಗೆ ಇನ್ನು ಮುಂದೆ ಕೊಲೊಂಬೊದಿಂದ ಸಂಬಂಧವು ಹುಟ್ಟುವದು. ಕೊಲೊಂಬೊದಿಂದ ಕರಾಚಿಗೆ ಟಪ್ಪಾಲು ಕ್ಷಿಪ್ರದಲ್ಲಿ ಹೋಗಲು ಹವಾ ಇತ್ಯಾದಿ ಬೇಕಾದುದರಿಂದ ಲಂಡನಿನಿಂದ ಹೋಗುವ ವಿಮಾನವು ಕೊಲೊಂಬೊದಿಂದ ಹೊರಟ ಕರಾಚಿಯನ್ನು ಹಾದು ಲಂಡನಿಗೆ ಹೋಗುವದು. ವಿಮಾನವು ಕೊಲೊಂಬೊದಿಂದ ಕರಾಚಿಗೆ ತೆರಳಲು ಕೇವಲ ಒಂದೂವರೆ ದಿನಗಳ ಸಮಯ ಮಾತ್ರವೇ ಬೇಕಾಗುವದು.

— ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ ಕೆಲಸವು ಚೆನ್ನಾಗಿ ನಡೆಯುತ್ತಲಿದೆ. ೩೫ ಜಿಲ್ಲಾ ಕಮಿಟಿಗಳವರು ೧೦ ಸಾವಿರಕ್ಕೆ ಮಿಕ್ಕಿ ಕಾಂಗ್ರೆಸ್ ಮೆಂಬರರನ್ನು ಕೂಡಹಾಕಿರುವರು.

— ಸೊಂಡರ್ಸರ ಕೊಲೆ ಮೊದಲಾದವುಗಳ ಕುರಿತಾಗಿ ಪೋಲೀಸರ ಹುಡುಕಾಟವು ಇನ್ನೂ ಮುಗಿದಿಲ್ಲ. ಸೊಂಡರ್ಸರ ಕೊಲೆಯ ಸಂಬಂಧವಾಗಿ ಇದುವರೆಗೆ ೧೮ ಮಂದಿ ಕೈದುಮಾಡಲ್ಪಟ್ಟಿರುವರು. ಇವರೆಲ್ಲರೂ ಪೋಲೀಸರ ಬಂಧನದಲ್ಲಿರುವರು. 'ಪ್ರತಾಪ' ಎಂಬ ಪತ್ರಿಕೆಯ ಸಂಪಾದಕನಾದ ಮಹಾಶಯ ಕೃಷ್ಣನ್ ಎಂಬಾತನ ಮಗನೂ ಕೈದುಮಾಡಲ್ಪಟ್ಟು ಹತ್ತು ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ಬಿಡಲ್ಪಟ್ಟಿದ್ದನು. ಜಾಮೀನಿನ ಮೇಲಿರುವಾಗಲೇ ಆತನು ಎಫ್. ಎ. ಪರೀಕ್ಷೆಯಲ್ಲಿ ಉತ್ತೀರ್ಣನಾದನು.

— ಎಸೆಂಬ್ಲಿ ಬಾಂಬು ಕೇಸಿನಲ್ಲಿ ಶಿಕ್ಷೆ ವಿಧಿಸಲ್ಪಟ್ಟ ಭಗತ್‌ಸಿಂಗ್ ಮತ್ತು ದತ್ತ ಇವರಿಬ್ಬರ ಕಡೆಯ ವಕೀಲರು ಹೇಳುವದೇನೆಂದರೆ:– ನಾನು ಕೈದಿಗಳನ್ನು ಸಂದರ್ಶಿಸಿದೆನು. ಕಿರುಕೋಣೆಗಳಿಂದ ಅವರು ಹೊರಗೆ ಬಿಡಲ್ಪಟ್ಟಿದ್ದರು. ಕೈದಿನವರು ಕೊಟ್ಟ ಆಹಾರವನ್ನು ತಿನ್ನದೆ ಇದ್ದುದಕ್ಕಾಗಿಯೂ, ಜೈಲಿನ ಕೆಲಸಗಳನ್ನು ಮಾಡದೆ ಇದ್ದುದಕ್ಕಾಗಿಯೂ ಅವರಿಗೆ ಸಂಕೋಲೆಗಳನ್ನು ತೊಡಿಸಿದ್ದರಂತೆ. ಇದಕ್ಕಾಗಿ ಇಬ್ಬರೂ ೯ ದಿವಸದಿಂದ ನೀರನ್ನು ಹೊರತು ಬೇರೆ ಯಾವುದನ್ನೂ ಮುಟ್ಟಿರಲಿಲ್ಲ. ದತ್ತನೊಂದಿಗೆ ಹೀಗೆ ವರ್ತಿಸುವದು ಸರಿಯಲ್ಲವೆಂದೂ ಆಹಾರವನ್ನು ಉಂಡರೆ ಸಾವನ್ನು ಆಮಂತ್ರಿಸಿದಂತಾಗುವದೆಂದೂ ನಾನು ಹೇಳಿದಾಗ, ತನ್ನ ಮರಣದಿಂದ ಉಳಿದ ಕೈದಿಗಳ ಅವಸ್ಥೆಯು ಸರಿಯಾಗಬಹುದೆಂದು ಉತ್ತರವಿತ್ತನು.

— ಗಾಂಧೀಜಿಯವರ ಕಾರಿನಡಿಯಲ್ಲಿ ಬಿದ್ದಿದ್ದ ಮನುಷ್ಯನು ಒಂದೆರಡು ದಿನಗಳ ತರುವಾಯ ಆಸ್ಪತ್ರೆಯಲ್ಲಿ ಸತ್ತುಹೋದನು. ಆತನು ಹುಚ್ಚುಮನುಷ್ಯನು. ಗಾಂಧೀಜಿಯವರ ಪಾದಗಳನ್ನು ಹಿಡಿಯಬೇಕೆಂದು ಆತನು ಬಂದಿದ್ದಾಗ ಮೋಟಾರು ಕಾರಿನಡಿಯಲ್ಲಿ ಬಿದ್ದಿದ್ದನು. ಸಾಯುವಾಗ ತನ್ನ ಸಾವಿಗೆ ತಾನೇ ಕಾರಣನೆಂದು ಆತನು ಸ್ಟೇಟ್‌ಮೆಂಟು ಕೊಟ್ಟಿದ್ದನು.

— ಥಾನಾ ಜಿಲ್ಲೆಯ ಪಾಲಗಾರ ತಾಲೂಕಿನಲ್ಲಿ ಕರಗೆಯನ್ನು ಏರಿಸುವರಿಂದ ಇದಕ್ಕೆ ವಿರೋಧವಾಗಿ ಹೋರಾಡಲೇಬೇಕೆಂದು ಪಾಲಗಾರ ತಾಲೂಕಿನ ಕೃಷಿಕರು ಸಭೆಕೂಡಿ ನಿಶ್ಚಯಿಸಿರುವರು. ಅದಕ್ಕಾಗಿ ಪ್ರತಿಯೊಂದು ವಾರ್ಡಿನಲ್ಲಿ ಒಂದೊಂದು ಕಮಿಟಿಯನ್ನು ನಿಶ್ಚಯಿಸಿರುವರು. ಈಗ ಹೊರಿಸಿದ ಕರಗೆಯು ವಿಶೇಷವಾದುದರಿಂದ ಇದನ್ನು ತಗ್ಗಿಸಬೇಕಾದರೆ ಸತ್ಯಾಗ್ರಹದ ಆಚರಣೆಯಲ್ಲದೆ ಬೇರೆ ಉಪಾಯವೇ ಇರುವದಿಲ್ಲವೆಂದು ಶ್ರೀ ಜಮನಾದಾಸ ಮೆಹ್ತರವರು ಅಭಿಪ್ರಾಯಪಡುವರು. ಪಾಲಗಾರದವರು ಸತ್ಯಾಗ್ರಹವನ್ನು ಕೈಕೊಳ್ಳುವದಾದರೆ ತಾನು ಅವರ ನಾಯಕನಾಗಿ ಪಾಲಗಾರದಲ್ಲಿಯೇ ಉಳಕೊಳ್ಳುವೆನೆನ್ನುವರು.

— ಫಂಡಾಪುರದಲ್ಲಿ ಒಂದು ಮೋಟಾರ್ ಲಾರಿಯು ಓಡುವ ರೈಲಿನೊಂದಿಗೆ ಢಿಕ್ಕಿ ಬಡೆದು ನಾಲ್ವರು ಸತ್ತುಹೋದರು. ಒಂಭತ್ತು ಜನರಿಗೆ ಜಖಮುಂಟಾಗಿರುತ್ತದೆ.

— ಪಂಡಿತ ಮೋತಿಲಾಲರು ವಿಶ್ರಾಂತಿಗೆ ಪ್ರಥಮತಃ ಬಿಹಾರಕ್ಕೂ, ಸಮಯ ಹಾಳರಾಲು ವಿಹಾರಕ್ಕೆ ಹೊರಟುಹೋಗುವರು. ಅವರು ಕೈದಿಗಳನ್ನು ಕಂಡು ಅವರ ಕಡೆ ಮಾತಾಡುವರು.

— ಬಂಗಾಳ ಮತ್ತು ಅಸ್ಸಾಮದಲ್ಲಿ ನೆರೆಯಿಂದ ವಿಶೇಷ ನಷ್ಟ ಉಂಟಾಗಿರುತ್ತದೆ. ನವಾಬ್ ಮುಸರ್ರಫ್ ಹುಸೇನರು ೫೦೦ ರೂಪಾಯಿಗಳನ್ನು ಪೀಡಿತರಾದ ಜನರ ಸಹಾಯದ ಬಗ್ಗೆ ಅಸ್ಸಾಮದ ಗವರ್ನರರಿಗೆ ಕಳುಹಿಸುವರು. ಇದರಿಂದ ತನಗೆ ವಿಶೇಷ ತೃಪ್ತಿಯುಂಟಾಗುತ್ತದೆಂದೂ ವ್ಯಾಸರಾಯರು ತಿಳಿಸುವರು.

— ಹಿಂದೂ ವೈಮಾನಿಕನಾದ ಕಬೀರನು ಹಿಂದೂಸ್ಥಾನಕ್ಕೆ ಬಂದು ತಲುಪಿದ ಮೇಲೆ ಆತನಿಗೆ ಸ್ವಾಗತವನ್ನು ಕೊಟ್ಟು ಮಾನಸತ್ಕಾರವನ್ನು ಮಾಡಬೇಕೆಂದು ಅಹಮದಾಬಾದ ಮುನಿಸಿಪಾಲಿಟಿಯವರು ಯೋಚಿಸಿರುವರು.

— ಮೊಹರಮಿನ ಸಮಯ ಮನ್ಮಮೋಹನಸಿಂಗ್ ಎಂಬಲ್ಲಿ ಎರಡು ಮುಸಲ್ಮಾನ ಪಕ್ಷಗಳೊಳಗೆ ಜಗಳವಾಗಿ ಕೆಲವು ತಲೆಗಳು ಮುರಿಯಲ್ಪಟ್ಟವು. ಹಲವು ಜನರಿಗೆ ಜಖಮುಂಟಾಗಿರುತ್ತದೆ.

— ಕಲಕತ್ತೆಯಲ್ಲಿ ಕೇಶವ ಪ್ರಸಾದ ಮತ್ತು ಸರೋಜ ಪ್ರಸಾದ ಎಂಬಿಬ್ಬರು ಒಂದು ದೊಡ್ಡ ಕಂಪೆನಿಯನ್ನಿಟ್ಟು ಕಮಿಶನಿನ ಮೇಲೆ ವ್ಯಾಪಾರವನ್ನು ಮಾಡುತ್ತಿದ್ದರು. ಆದರೆ ಕಮಿಶನ್ ಏಜಂಟರಿಂದ ಅವರು ಪಡೆದ ಮಾಲುಗಳನ್ನು ಪಡೆದು ದುರುಪಯೋಗ ಮಾಡುತ್ತಿದ್ದುದು ಇದುವರೆಗೆ ಯಾರಿಗೂ ತಿಳಿದಿರಲಿಲ್ಲ. ಈಗ ಅವರ ಗುಟ್ಟು ಬಯಲಾಗಿ ಅವರು ಪೋಲೀಸರ ಕೈಗೆ ಸಿಕ್ಕಿಬಿದ್ದಿರುವರು.

— ಮದರಾಸಿನ ಗವರ್ನರರಾದ ಲೋರ್ಡ್ ಗೋಶೆನರವರು ವ್ಯಾಸರಾಯರ ಸಿಮ್ಲಾಕ್ಕೆ ತೆರಳುವರು.

— ಇಂಗ್ಲೆಂಡಿನ ಇಂಡಿಯಾ ವಿಮಾನ ಸರ್ವಿಸಿನ ಕಳೆದ ಮೂರು ತಿಂಗಳುಗಳ ಕೆಲಸಗಳ ಬಗ್ಗೆ ಪೂರ್ಣ ತೃಪ್ತಿಯು ಸೂಚಿಸಲ್ಪಟ್ಟಿರುತ್ತದೆ. ಇನ್ನು ಮುಂದೆ ವಿಮಾನಗಳನ್ನು ಇನ್ನಷ್ಟು ಬೇಗನೇ ಹಾರುವಂತೆ ಮಾಡಲಾಗುವುದು.

— ಸಂಯುಕ್ತ ಸಂಸ್ಥಾನದ ಗವರ್ನರರು ಬರುವ ತಿಂಗಳ ೨ನೇ ತಾರೀಕಿನಿಂದ ೮ನೇ ತಾರೀಕಿನ ವರೆಗೆ ಮೀರತನ್ನು ಸಂದರ್ಶಿಸುವರು.

— ರಂಗೂನಿನಲ್ಲಿ ಮೂವರು ಬರ್ಮಾಯರು ಲಾಠಿ ಮತ್ತು ಬಡಿಗೆಗಳನ್ನು ಹಿಡಿದು ಒಬ್ಬ ಪೋಲೀಸ ಇನ್ಸ್‌ಪೆಕ್ಟರನನ್ನು ಆಕ್ರಮಿಸಿದರು. ಇನ್ಸ್‌ಪೆಕ್ಟರನು ಅತ್ಯಾಶ್ಚರ್ಯಕರ ಸಾವಿನಿಂದ ತಪ್ಪಿಸಿಕೊಂಡನು. ಆತನು ಗುಂಡು ಹೊಡೆದು ಒಬ್ಬಿಬ್ಬರನ್ನು ಗಾಯಗೊಳಿಸಿದನು.

— ವ್ಯಾಸರಾಯರವರು ಇದೇ ೨೯ನೇ ತಾರೀಕಿನ ದಿನ ಮುಂಬಾಯಿಯಿಂದ ಇಂಗ್ಲಂಡಿಗೆ ಹೊರಟುಹೋಗುವರು.

— ಮಿ. ಕೃಷ್ಣ ಮತ್ತು ಮಿ. ಓಯಾಂಬಾಲ ಅಶ್ವಿನಿ ಎಂಬಿಬ್ಬ ಯುವಕರು ಮೇ ೧೬ನೇ ತಾರೀಕಿನ ದಿನ ಬಗ್ಗಿತ್ತನ್ನು ಸ್ಕೇಟಿಂಗಿನ ಮೇಲೆ ಪ್ರವಾಸಮಾಡಲು ಹೊರಟವರು ಒಂದೆರಡು ದಿನಗಳ ಹಿಂದೆ ಕಲಕತ್ತೆಗೆ ತಲುಪಿದರು. ಆಗ್ರಾ ಎಂಬಲ್ಲಿ ಮಧ್ಯರಾತ್ರಿಯ ಸಮಯ ಅವರಿಗೆ ಒಂದು ದರೋಡೆಕಾರರ ತಂಡದ ಭೇಟಿಯಾಯಿತು. ಆದರೆ ಇವರಿಬ್ಬರೂ ಸ್ಕೌಟರಂತೆ ಉಡುಪು ಧರಿಸಿದ ಪೋಲೀಸರೆಂದು ಹೆದರಿ ದರೋಡೆಕಾರರು ಓಡಿಹೋದರಂತೆ. ಇವರು ೧೬ ವರುಷಗಳ ವರೆಗೆ ೬೭ ಸಾವಿರ ಮೈಲು ಸಂಚರಿಸುತ್ತ ದಿನಕ್ಕೆ ೩೦ ಮೈಲುಗಳಂತೆ ಪ್ರಯಾಣಮಾಡುವರು.

ದಕ್ಷಿಣ ಕನ್ನಡ.

ಮಂಗಳೂರು:— ಕಳೆದ ಆದಿತ್ಯವಾರ ಇಲ್ಲಿ ಇತ್ತೀಚಿಗೆ ಹೊಸತಾಗಿ ಸ್ಥಾಪಿಸಲ್ಪಟ್ಟ ಮಂಗಳೂರು ಸಿಟಿ ಆರ್ಯಸಮಾಜ ಮಂದಿರದಲ್ಲಿ ಐದು ಜನ ರೋಮನ್ ಕೆಥೋಲಿಕ್ ಕ್ರೈಸ್ತರ ಒಂದು ಕುಟುಂಬಕ್ಕೆ ಆರ್ಯ ಧರ್ಮದೀಕ್ಷೆಯನ್ನು ಕೊಡಲಾಯಿತು. ಇವರು ಇನ್ನೂ ಬಿಲ್ಲವ ಜಾತಿಯವರು. ಸುಮಾರು ಹನ್ನೆರಡು ವರ್ಷಗಳ ಮೊದಲು ಈ ಕುಟುಂಬದ ಹಿರಿಯಳು ಮೂಲ್ಕಿ ಬಳಿ ಕರಂದರೆ ಗ್ರಾಮದಲ್ಲಿ ಗಂಡನ ಮನೆಯಲ್ಲಿದ್ದಾಗ, ತನ್ನ ಗಂಡನೂ ಇಬ್ಬರು ಗಂಡು ಮಕ್ಕಳೂ ವಾಂತಿಭೇದಿ ರೋಗದಿಂದ ಮೃತರಾಗಿ ಹೋಗಲು, ಆಕೆಯು ಸಂತಾನ ಕಟ್ಟು ಪ್ರಕಾರ ಗಂಡನ ಮನೆಯಿಂದ ಹೊರದೂಡಲ್ಪಟ್ಟಳು. ಅಲ್ಲಿ ಯಾರಿಂದಲೂ ಯಾವ ಒಂದು ಸಹಾಯ ದೊರೆಯದೆ ಹೋದ್ದರಿಂದ ಸುರತ್ಕಲ್ ಇಗರ್ಜಿಯಲ್ಲಿ ತನ್ನ ಎರಡು ಮಕ್ಕಳ್ ಹೆಣ್ಣು ಮಕ್ಕಳೊಂದಿಗೆ ರೋಮನ್ ಕೆಥೋಲಿಕ್ ಮತವನ್ನವಲಂಬಿಸಬೇಕಾಯಿತು. ಇವರ ಶುದ್ಧಿ ಸಂಸ್ಕಾರದ ಸಮಯ ಎಲ್ಲಾ ಜಾತೀಯ ಸುಮಾರು ನೂರು ಸ್ತ್ರೀಪುರುಷರು ನೆರೆದು ಬಂದಿದ್ದರು. ತಮ್ಮ ಸ್ವಧರ್ಮ ಪ್ರವೃತ್ತಿಗಾಗಿ ಪಶ್ಚಾತ್ತಾಪ ಪಡುತ್ತಿದ್ದ ಇವರ ಅಪೇಕ್ಷೆ ಪ್ರಕಾರ ಶ್ರೀಯುತ ಮೋಹನಪ್ಪ ತಿಂಗಳಾಯರು ಶ್ರೀ ಬಾಲಕೃಷ್ಣ ಸ್ವಾಮಿ ಮತ್ತು ಶ್ರೀಯುತ ಕೃಷ್ಣನವರ ಸಹಕಾರದಿಂದ ಸಂಸ್ಕಾರವನ್ನು ಜರಗಿಸಿ ಅವರಿಗೆ ಧರ್ಮೋಪದೇಶವನ್ನು ಕೊಟ್ಟರು. ತರುವಾಯ ಶ್ರೀಮುತ ಗಳವರ [illegible] ಸಂಘಟನ ಮತ್ತು ಶುದ್ಧಿಯ ಆವಶ್ಯಕತೆಯನ್ನು ತೋರಿಸಿ ಭಾಷಣಕೊಟ್ಟರು. ಶುದ್ಧಿ ಹೊಂದಿದವರು ಸಮಾಜದ ಧರ್ಮಪ್ರಚಾರನಿಧಿಗೆ ರೂಪಾಯಿ ಎರಡು ದಾನವಾಗಿ ಕೊಟ್ಟರು ಮತ್ತು ಸಭಿಕರೆಲ್ಲರಿಗೂ ಫಲತಾಂಬೂಲಾದಿಗಳನ್ನು ಹಂಚಿದರು.

ಸಿದ್ಧಕಟ್ಟೆ— ಇದು ಮಂಗಳೂರು ತಾಲೂಕಿನ ಸಂಗಬೆಟ್ಟು ಗ್ರಾಮದಲ್ಲಿದೆ. ಇಲ್ಲಿ ಕಳೆದ ಮೇ ತಿಂಗಳ ವರೆಗೆ ಒಂದು ಇಗರ್ಜಿ ಶಾಲೆಯು ಇತ್ತು. ಈಗ ಇಗರ್ಜಿಯವರು ಈ ಶಾಲೆಯನ್ನು ಮುಚ್ಚಿರುವರು. ಈ ಗ್ರಾಮದಲ್ಲಿ ಬೇರೆ ಯಾವ ಶಾಲೆಯಾಗಲೀ ಬೋರ್ಡ ಶಾಲೆಯಾಗಲೀ ಇರುವದಿಲ್ಲ. ಇದರಿಂದ ಈ ಗ್ರಾಮದ ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗಿದೆ. ಆದುದರಿಂದ ಮಂಗಳೂರು ತಾಲೂಕು ಬೋರ್ಡಿನವರು ಇಲ್ಲಿ ಒಂದು ಬೋರ್ಡ ಶಾಲೆಯನ್ನು ಕೂಡಲೇ ತೆರೆಯುವುದಾದರೆ ಮಕ್ಕಳ ವಿದ್ಯೆಗೆ ಸಹಾಯವಾದೀತು.

ಮಂಜೇಶ್ವರ— ಇಲ್ಲಿ ಕೆಲವು ವರುಷಗಳ ಹಿಂದೆ ಕಾಸರಗೋಡು ತಾಲೂಕು ಬೋರ್ಡಿನವರು ಒಂದು ಹಾಯರ್ ಎಲಿಮೆಂಟರಿ ಶಾಲೆಯನ್ನು ತೆರೆದಿದ್ದರು. ಇಲ್ಲಿಯ ಶ್ರೀ ಮದನಂತೇಶ್ವರ ದೇವಸ್ಥಾನದವರ ಹಾಯರ್ ಎಲಿಮೆಂಟರಿ ಶಾಲೆಯನ್ನು ಇಟ್ಟಿದ್ದನೆಯ ಬೋರ್ಡಿನವರು ಶಾಲೆಯನ್ನು ಮುಚ್ಚಿದರು. ಹಾಗೆಯೇ ಶಾಲೆಯನ್ನೂ ಮುಚ್ಚಿದರು. ಈಗ ಶ್ರೀ ಮದನಂತೇಶ್ವರ ದೇವಸ್ಥಾನದ ಶಾಲೆಯನ್ನು ಮುಚ್ಚಿದ್ದರಿಂದ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಲಿಯುತ್ತಿದ್ದ ಸುಮಾರು ೩೦೦ ಮಂದಿ ಮಕ್ಕಳನ್ನು ದಾರಿಯಲ್ಲಿ ಹಾಕಿದಂತಾಯಿತು. ಕುಂಬಳೆ ಮತ್ತು ಮಂಗಳೂರು ಇಲ್ಲದೆ ಈ ಮಧ್ಯದಲ್ಲಿ ಬೇರೆ ಹಾಯರ್ ಎಲಿಮೆಂಟರಿ ಶಾಲೆ ಇರುವದಿಲ್ಲ. ಆದುದರಿಂದ ಕಾಸರಗೋಡು ತಾಲೂಕು ಬೋರ್ಡಿನವರು ಬೇಗನೆ ಉದ್ಯಾವರ ಎಲಿಮೆಂಟರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯಾಗಿ ಮಾಡಿದರೆ ಅವರಿಗೆ ಆ ಪ್ರದೇಶದವರ ಕೃತಜ್ಞತೆ ಬರಬಹುದು. ಮಂಜೇಶ್ವರದಲ್ಲಿ ತೆರೆದರೆ ಯಾವದೊಂದು ನಷ್ಟವು ಬಾರದು. ಆದುದರಿಂದ ಉದ್ಯಾವರದಲ್ಲಿಯೇ ಹಾಯರ್ ಎಲಿಮೆಂಟರಿ ಶಾಲೆಯನ್ನು ತೆರೆಯುವುದು ಉತ್ತಮ. ಹಾಗಿ ಸ್ವಲ್ಪ ಗ್ರಾಮದ ಮಕ್ಕಳ ವಿದ್ಯಾಭ್ಯಾಸವು ಆಧರಿಸಿಕೊಂಡಿದ್ದರೆ ಬೇರೆ ಮಕ್ಕಳ ವಿದ್ಯಾಭಿವೃದ್ಧಿಗೆ ಎಷ್ಟು ಹಾನಿಕರವಾಗಿದೆ ಎಂಬುದನ್ನು ಶ್ರೀ ಮದನಂತೇಶ್ವರ ಹಾಯರ್ ಎಲಿಮೆಂಟರಿ ಶಾಲೆಯ ಸ್ಥಿತಿಯನ್ನು ನೋಡಿ ಮನಗಾಣಬೇಕಾಗಿದೆ. ಈ ಶ್ರೀ ಮದನಂತೇಶ್ವರ ಹಾಯರ್ ಎಲಿಮೆಂಟರಿ ಶಾಲೆಯನ್ನು ನಡೆಸಿ ನಮ್ಮ ಜಿಲ್ಲಾ ಎಜ್ಯುಕೇಶನಲ್ ಆಫೀಸರರು ಎಮಲ್ಗಮೇಶನ್ ಸ್ಕೀಮಿನ ಪ್ರಕಾರ ಮಂಜೇಶ್ವರದಲ್ಲಿರುವ ಮತ್ತು ಉದ್ಯಾವರ ಹುಡುಗರ ಹುಡುಗಿಯರ ಶಾಲೆಗಳನ್ನು ಇದಕ್ಕೆ ಎಮಲ್ಗಮೇಟ್ ಮಾಡಬಹುದೆಂದು ಶಿಫಾರಸು ಮಾಡಿದ್ದರಂತೆ. ಈಗ ಅವರು ಮಂಜೇಶ್ವರ ಎಮಲ್ಗಮೇಶನ್ ಸ್ಕೀಮನ್ನು ರದ್ದುಪಡಿಸಿ ರಿಪೋರ್ಟನ್ನು ಮಂಡಿಸಿದ್ದಾರೆ ಎನ್ನುವರು. ಈ ವಿಷಯವನ್ನು ಜಿಲ್ಲಾ ಎಜ್ಯುಕೇಶನ್ ಆಫೀಸರರಿಗೆ ಕೂಡಲೇ ತಿಳಿಸುವುದು ಉತ್ತಮ.

ಬಂಟವಾಳ— ಕಯ್ಯಮುತ್ತಾರಿನಿಂದ [illegible] ಇಲ್ಲಿಗೆ ಬಂದಿದ್ದ ಶಿವರಾಮ ೯ ವರುಷ ಪ್ರಾಯದ ಒಬ್ಬ ಅಯ್ಯರರ ಹುಡುಗನನ್ನು ಇಲ್ಲಿಯ ಪೋಲೀಸರು ಹಿಡಿದು ಮಂಗಳೂರಿಗೆ ಕಳುಹಿಸಿಕೊಟ್ಟಿರುವರು.

ಇಲ್ಲಿಯ ಬೋರ್ಡ್ ಹುಡುಗಿಯರ ಶಾಲೆಯ ೩ನೇ ವರ್ಗ ಕಲಿಸುತ್ತಿದ್ದ ಉಪಾಧ್ಯಾಯಿನಿಯನ್ನು ಕಳ್ಳನೆ ಇಲ್ಲಿಂದ ಬೆಳ್ತಂಗಡಿಗೆ ವರ್ಗಮಾಡಿರುವುದರಿಂದಲೂ ಇಲ್ಲಿಗೆ ವರ್ಗಮಾಡಿದ ಉಪಾಧ್ಯಾಯಿನಿಗೆ ಅಸ್ವಸ್ಥದಿಂದ ಇಲ್ಲಿಗೆ ಬಾರದಿರುವುದರಿಂದಲೂ ಶಾಲೆಯಲ್ಲಿ ಕಲಿಸುವರಿಗೆ ಬಹಳ ತೊಂದರೆಯಾಗಿರುವುದರಿಂದಲೂ ರಾಜಶ್ರೀ ಮಂಗಳೂರು ತಾಲೂಕು ಬೋರ್ಡ್ ಪ್ರೆಸಿಡೆಂಟರವರು ಇಂಗ್ಲಿಷು ಚೆನ್ನಾಗಿ ಬಲ್ಲ ಸೌಮ್ಯದಿಂದಿರುವ ಒಬ್ಬ ಉಪಾಧ್ಯಾಯಿನಿಯನ್ನು ಬೇಗನೇ ಕಳುಹಿಸಿದರೆ ಉತ್ತಮವಿತ್ತು.

ಇಲ್ಲಿ ಮಹಾಜನ ಕ್ಲಬ್ ಇತ್ತೀಚಿಗೆ ಸ್ಥಾಪಿಸಲ್ಪಟ್ಟಿದೆ. ಹಳೆಯ ಯೂನಿಯನ್ ಕ್ಲಬ್ ಹಳೆ ಮಾಪಿಳ್ಳಾ ಬೋರ್ಡ್ ಶಾಲೆಯಲ್ಲಿ ನಡೆಯುತ್ತಿದೆ.

ಮೂಲ್ಕಿ— ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ಕರ್ಣ ಸಂಘದ ೫ನೆಯ ಸಭೆಯು ಮಾರಾ ಫೋರೆಸ್ಟ್ ರೇಂಜ್ ಆಫೀಸರರಾದ ಕೆ. ದೂಮಪ್ಪ ಸೆಟ್ಟರವರ ಅಧ್ಯಕ್ಷತೆಯಲ್ಲಿ ಇದೇ ಕಳೆದ ತಾ. ೨೨-೬-'೨೯ನೇ ಶನಿವಾರ ಪೂರ್ವಾಹ್ನ ಗಂಟೆ ೮-೩೦ಕ್ಕೆ ಇದೇ ಶಾಲೆಯಲ್ಲಿ ನೆರೆದು ಬಂತು.

ಕುಂಬಳೆ— ಇಲ್ಲಿಯ ಪಂಚಾಯತ ಕೋರ್ಟು ಮೆಂಬರರ ಚುನಾವಣೆ ನಡೆಯಿತು. ಈಗಿನ ಇಲೆಕ್ಷನಿನಲ್ಲಿ ಸಹಾ ಮೊದಲಿನವರೇ ಪ್ರೆಸಿಡೆಂಟರಾಗಲಿರುವದೆಂದು ಊಹಿಸಲಾಗಿದೆ.

ವಿವಿಧ ಸಮಾಚಾರಗಳು.

ಅಮಾನುಲ್ಲಾರವರ ಪಯಣ.

ಅಮಾನುಲ್ಲಾಖಾನರೂ ಸೋರಾಯಾ ರಾಣಿಯವರೂ ಕಳೆದ ಶನಿವಾರ 'ಮುಲ್ತಾನ' ಹಡಗವನ್ನು ಹತ್ತಿ ಮುಂಬಾಯಿಯಿಂದ ಇಟಲಿಗೆ ಹೊರಟು ಹೋದರು. ತನ್ನೊಂದಿಗೆ ಬಂದ ತನ್ನ ಅಧಿಕಾರಿಗಳನ್ನು ಮಿತ್ರರನ್ನೂ ಬಿಟ್ಟು ಹೋಗುವಾಗ ಅಮಾನುಲ್ಲಾರು ಬಹು ದುಃಖವನ್ನು ಸೂಚಿಸಿದರು. ತನ್ನವರನ್ನು ಒಬ್ಬೊಬ್ಬರನ್ನೇ ಆಲಿಂಗಿಸಿಕೊಳ್ಳುವಾಗ ಅವರ ಕಣ್ಣುಗಳಿಂದ ದುಃಖಾಶ್ರುಗಳುದುರುತ್ತಿದ್ದವು. ಅಮಾನುಲ್ಲಾರವರ ಕೈಗಳಿಗೆ ವ್ಯಾಪಾರದ ಮಂತ್ರಿಯಾಗಿದ್ದ ಸರದಾರ ಸರೀಖಾನರು ಮೊದಲಾಗಿ ಅಮಾನುಲ್ಲಾರವರ ಪಾದಗಳನ್ನು ಚುಂಬಿಸಲು ಪ್ರಯತ್ನಿಸಿದಾಗ ಅಮಾನುಲ್ಲಾರವರು ಇದಕ್ಕೆ ಅವಕಾಶಕೊಡಲಿಲ್ಲ. ಅಮಾನುಲ್ಲಾರವರು ೯-೪೫ ಕ್ಕೆ ಹಡಗವು ಧಕ್ಕೆಯಿಂದ ಹೊರಟು ಹೋದೊಡನೆ ಅವರ ಸಂಗಾತಿಗಳೆಲ್ಲ ಕಣ್ಣೀರು ಸುರಿಸಿದರು. ಅಂದು ಬೆಳಗ್ಗೆ ೧೦ ಘಂಟೆಗೆ ಅಮಾನುಲ್ಲಾರವರೂ ಇನ್ನು ೧೫ ಮಂದಿಗಳೂ ಮೋಟಾರು ಕಾರಿನಲ್ಲಿ ಧಕ್ಕೆಗೆ ಬಂದಿದ್ದರು. ಒಡನೆಯೇ ಸ್ಟೀಮರನ್ನು ಹತ್ತಿದರು. ಸ್ಟೀಮರಿನವರು ಅವರ ಬಗ್ಗೆ ವಿಶೇಷವಾದ ತಯಾರಿಗಳನ್ನು ಮಾಡಿದ್ದರು. ಮುಂಬಾಯಿ ಗವರ್ನರರು ಅಮಾನುಲ್ಲಾಖಾನರಿಗೆ, ಅವರ ಪಯಣವು ಸುಖಪ್ರದವಾಗಲೆಂದು ಬಯಸಿ ಒಂದು ವಾರ್ತೆಯನ್ನು ಕಳುಹಿಸಿದ್ದರು. ಈ ವಾರ್ತೆಯನ್ನು ಚೀಫ್ ಸೆಕ್ರೆಟರಿಯವರು, ಮುಂಬಾಯಿಯ ಕಲೆಕ್ಟರರೂ ಅವರ ಸನ್ನಿಧಿಗೆ ತಂದರು. ಅಮಾನುಲ್ಲಾರವರು ಮಾರ್ಸೇಲ್ಸಿಗೆ ಹೋಗಿ ಅಲ್ಲಿಂದ ಭೂಮಾರ್ಗವಾಗಿ ರೋಮಿಗೆ ಹೋಗುವರು. ಇಟಲಿಯಲ್ಲಿ ತಾವು ವಾಸಿಸುವ ಸ್ಥಳವನ್ನು ನಿರ್ಧರಿಸುವ ವರೆಗೆ ಅವರು ರೋಮಿನಲ್ಲಿಯೇ ಉಳಕೊಳ್ಳುವರು. ಇನಾಯತುಲ್ಲಾ ಮತ್ತು ಅವರೊಂದಿಗಿದ್ದವರು ಇದೇ ೨೦ನೇ ತಾರೀಕಿನ ದಿನ ಮುಂಬಾಯಿಯಿಂದ ಪರ್ಶಿಯಕ್ಕೆ ಹೊರಟು ಹೋಗುವರು. ಇಟಲಿಗೆ ಹೊರಟು ಹೋಗಬೇಕಾದರೆ ಅಮಾನುಲ್ಲಾರು ತನ್ನೊಂದಿಗಿದ್ದ ಆಫಘಾನರಿಗೆ ೧೧,೦೦೦ ರೂಪಾಯಿಗಳನ್ನು ಇನಾಮು ಕೊಟ್ಟರು. ಸ್ವಲ್ಪ ಹಣವನ್ನು ಮಾತ್ರವೇ ತನ್ನೊಂದಿಗೆ ಒಯ್ದುಕೊಂಡಿದ್ದರು.

ಲಾಹೋರಿನ 'ಜಮೀಂದಾರ್' ಪತ್ರಿಕೆಯ ಸಂಪಾದಕನಾದ ಮೌಲಾನಾ ಜಫರ್ ಅಲಿಖಾನರವರು ಮುಂಬಾಯಿಗೆ ಬಂದು ಅಮಾನುಲ್ಲಾರವರ ಭೇಟಿಯನ್ನು ಪಡೆದಿದ್ದರು. 'ತನ್ನೊಂದಿಗೆ ಸಹಕರಿಸುವರ ಬಗ್ಗೆ ಹಿಂದೂಸ್ಥಾನದ ಮುಸಲ್ಮಾನರಿಗೆ ಕೃತಜ್ಞನಿದ್ದೇನೆ. ಇನ್ನಾದರೂ ನನ್ನ ಜನರು ಸ್ಥಿತಿಯನ್ನು ಸರಿಪಡಿಸಬಹುದೆಂದು ನನಗೆ ನಂಬಿಗೆ ಇದೆ. ನಾನು ಜಾರಿಗೆ ತಂದ ಸುಧಾರಣಾ ಬೀಜವು ಬೇಗನೇ ಮೊಳೆತು ಫಲಿಸುವದೆಂದು ನಾನು ತಿಳಿದಿದ್ದೆನು. ನಾನು ಜನರಲ್ ನಾದಿರಖಾನರಿಗೆ ಯಾವ ನಷ್ಟವನ್ನೂ ಉಂಟುಮಾಡದಿರುವಾಗ ಅವರು ನನಗೆ ಏನು ಸಹಾಯಗಳನ್ನು ಮಾಡುವದೆಂದು ನನಗೆ ತೋರದು' ಎಂದು ಅಮಾನುಲ್ಲಾಖಾನರು ಅವರೊಡನೆ ವಿವರಿಸಿದರು. ಪರದೇಶಗಳಲ್ಲಿರುವ ಅಫಘಾನ ವಿದ್ಯಾರ್ಥಿಗಳ ವಿದ್ಯಾಸಹಾಯಕ್ಕಾಗಿ ಅಮಾನುಲ್ಲಾಖಾನರು ೩೭,೦೦೦ ರೂಪಾಯಿಗಳನ್ನು ಸ್ವೀಕರಿಸಿದರು. ತಾನು ವಿಶೇಷ ಹಣದಂತಲ್ಲದಿದ್ದರೂ ಪರದೇಶಗಳಲ್ಲಿರುವ ಅಫಘಾನಿ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗದಂತೆ ತಾನು ನೋಡಿಕೊಳ್ಳುವೆನೆಂದು ಅವರು ಸೂಚಿಸಿದರು.

ಕೆಲವು ದಿನಗಳಿಂದ ಕಾಬೂಲು ಆಕ್ರಮಿಸಲ್ಪಡುತ್ತಲಿದೆಯೆಂದು ವಾರ್ತೆಯಿದೆ. ಆದರೆ ಇದು ಖಂಡಿತವೆಂದು ನಂಬಲು ಆಧಾರಗಳು ದೊರಕುವದಿಲ್ಲ.

ಅಫಘಾನಿಸ್ಥಾನದ ಸುದ್ದಿ.

ಜನರಲ್ ನಾದಿರಖಾನರು ಜಲಾಲಾಬಾದಿನಲ್ಲಿ ತಮ್ಮ ಸೈನ್ಯಗಳನ್ನು ಮಾಡುತ್ತಲಿದ್ದಾಗ ಬಾಚಾ-ಇ-ಸಾಕೋನು ಆಕಸ್ಮಿಕವಾಗಿ ನಾದಿರಖಾನರನ್ನು ಆಕ್ರಮಿಸಬೇಕೆಂದು ಸಿದ್ಧತೆಗಳನ್ನು ಮಾಡಿದ್ದನು. ಆದರೆ ಕಾಬೂಲಿನ ಕಡೆಯಿಂದ ಜನಾನೆಗೆ ಬಂದ ಪ್ರತಿನಿಧಿಗಳು ಕಾಬೂಲಿಗೆ ಹಿಂದಿರುಗಿ ಬಾಚಾನ ಸೈನ್ಯವು [illegible] ತಿಳಿಸಿದರೆಂದೂ [illegible] ರಾತ್ರಿ ಸಮಯದಲ್ಲಿ ನಾದಿರಖಾನರ ಮೇಲೆ ಬೀಳಬೇಕೆಂದು ಬಾಚಾ-ಇ-ಸಾಕೋನ ಸೈನ್ಯವು ಹೊರಟಿತು. ಆದರೆ ನಾದಿರಖಾನರಿಗೆ ಇದೆಲ್ಲ ಸಂಗತಿಗಳು ತಿಳಿದು ವಿರೋಧಿಯು ಎಲ್ಲಾ ರೀತಿ ಆಕ್ರಮಿಸಲು ಬೇಕಾಗುವಂತಹ ಸಿದ್ಧತೆಗಳನ್ನು ಅವರು ಗುಟ್ಟಿನಿಂದ ಮಾಡಿದರು. ಸಾಕೋವಿನ ಸೈನ್ಯವು ಬಂದೊಡನೆ ನಾದಿರಖಾನರ ಸೈನ್ಯವು ಅವರ ಮೇಲೆ ಬಿದ್ದಿತು. ಸಾಕೋವಿನ ಸೈನ್ಯವು ಓಡಿಹೋಗಲು ಪ್ರಯತ್ನಿಸಿದಾಗ, ನಾದಿರಖಾನರ ಸೈನ್ಯದವರ ಬಲಾತ್ಕಾರದ ದೆಸೆಯಿಂದ ಅವರು ಸೋಲನ್ನು ಒಪ್ಪಬೇಕಾಯಿತು. ಬಾಚಾ-ಇ-ಸಾಕೋವಿನ ಕಡೆಯ ೧೫೦೦ ಸೈನಿಕರು ವಧಿಸಲ್ಪಟ್ಟರು. ೫೦೦ ಮಂದಿ ಸೆರೆ ಹಿಡಿಯಲ್ಪಟ್ಟರು. ೪೦೦ ಕುದುರೆಗಳೂ, ಗುಂಡುಗಳೂ, ಗುಂಡು ಮದ್ದು, ೩೦ ಸಾವಿರ ರೂಪಾಯಿಯ ಮೊಬಲಗೂ ನಾದಿರಖಾನರಿಗೆ ದೊರೆಯಿತು. ನಾದಿರಖಾನರ ಕಡೆಯ ಮೂವರು ಗಂಡಸರೂ, ಇಬ್ಬರು ಹೆಂಗಸರೂ ವಧಿ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಷನ್ ಕಾಂಞಂಗಾಡ (S.I.R.)

[illegible]

ಶಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್, ಕಾಂಞಂಗಾಡ (ದ. ಕ.)

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಜಿಗ್ಯು ಮಿಕ್ಸ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಣ. ರೂ. ೧.

ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಅಣೆ ೧೪.

ಬಾಟ್ಲಿವಾಲರ ಕಿಂಗ್ ಆಫ್ ಬಾಮ್ — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಅಣೆ ೧೨.

ಬಾಟ್ಲಿವಾಲರ ಡ್ಯುರಿಯಾ ಮಿಕ್ಸ್ಚರ್ — ಕಾಲರಾ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಅಣೆ ೧೪

ಬಾಟ್ಲಿವಾಲರ ಕ್ವಿನೇನ ಟೇಬ್ಲೆಟುಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ ರೂ. ೧—೮—೦ ರೂ. ೧—೪—೦. ೧—೧೨—೦.

ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ — ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

ಏಜಂಟರು ದೊರೆಯುತ್ತಾರೆ. — Sayani Road, P. O. Cadell ad, Bombay. No. 14.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ — ತೀರ್ಥಹಳ್ಳಿ — ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಿಗ್ಗೆ ೯ ಘಂಟೆಗೆ ಹೊರಡುತ್ತಾ ಇದ್ದುದು ಸರಿಯಷ್ಟೆ. ಪ್ರಯಾಣಿಕರ ಅನುಕೂಲಕ್ಕಾಗಿ ತಾ. ೧೫—೪—೧೯೩೪ರ ಲಾಗಾಯ್ತು ಶಿವಮೊಗ್ಗಾದಿಂದ ಬೆಳಿಗ್ಗೆ ೮ರ ಘಂಟೆಗೆ ಹೊರಡಲು ಏರ್ಪಾಡು ಮಾಡಿದೆ.

ತೀರ್ಥಹಳ್ಳಿ — ಸಾಗರರಸ್ತೆ.

ಆನಂದಪುರ — ಸಾಗರಕ್ಕೆ 0—8—0. ತೀರ್ಥಹಳ್ಳಿ — ಸಾಗರಕ್ಕೆ ೨—೮—೦.

ಆರಗ, ಗುಡ್ಡೇಕೊಪ್ಪ, ಕೋಣಂದೂರು, ಹಾದಿಗಲ್, ಹುಂಚದಕಟ್ಟೆ, ರಿಪ್ಪನ್‌ಪೇಟೆ ಮತ್ತು ಆನಂದಪುರ ಮಾರ್ಗವಾಗಿ

ರಿಪ್ಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳಗಳ ದೆಸೆಯಿಂದ ಕಳೆದ ಜೂನ್ ತಾ. ೮ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಕು ೬—೧೧—೧೯೩೪ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾ ಭಟ್,

ಮಾಲಿಕ,

ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

ಶಾಲಾ ಹುಡುಗರಿಗೆ ಬೇಕಾದ

ಗೆರೆ ಹಾಕಿದ ಮತ್ತು ಹಾಕದ ಎಕ್ಸರಸ್ಯಾಜ ಪುಸ್ತಕಗಳೂ, ಕೋಪಿ ಪುಸ್ತಕಗಳೂ, ಮ್ಯಾಪು ಡ್ರೋಯಿಂಗ್ ಪುಸ್ತಕಗಳೂ, ಡ್ರೋಯಿಂಗ್ ಪುಸ್ತಕಗಳೂ, ಪೆನ್ಸಿಲು ಕಂಪಾಸ್ ಬಾಕ್ಸ, ಶಾಯಿ ಕುಪ್ಪಿ ಮೊದಲಾದ ಸ್ಟೇಶನರಿ ಸಾಮಾನುಗಳೂ ಇವೆ.

ಲೆಜ್ಜರ್, ಜರ್ನಲ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

The Kanara Watch House Udipi, S. K.

ಗ್ಯಾರಂಟಿಯುಳ್ಳ ವಾಚುಗಳು! [illegible]

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಅಂಸಿನ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸಗಳೂ, ಎಲೆಕ್ಟ್ರಿಕ್ ಸುತ್ತು ಬೆಡೊಮೆಟ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲೋಕು, ಟೈಮಪೀಸು, ಫೊನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೆ. — ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.



Liveliness-zip-pep-you get that all the time from an "Exide" because it is built into it.

Care and thought ... discrimination in the select... the experience of thousands ... have made

Exide

THE LONG-LIFE BATTERY

The C. P. C. Co. Ltd.

MANGALORE.

ಸ್ವಳ್ಳಿದ್ದು. ಮುನ್ನದೆ ಸಮಯಾಗಿ ಬಾಚಾ-ಇ-ಸಾಕ್ಕೋವಿನ ಕಡೆಯಿಂದ ಮೂವತ್ತು ಸಾವಿರ ಮಂದಿ ಸೈನಿಕರು ಬಂದಿದ್ದರು. ಕಾಬೂಲಿನ ದಾಯರ್ ಈಗ ಬೇರೆಯಾದುದುಗಳು ಹಾಳುಮಾಡಲ್ಪಟ್ಟಿರುತ್ತವೆ. ಸರದಾರ ಅಲಿ ಅಹಮದಖಾನರವರು ಏನಾಗಿದೆ ಹೊಂದಿರುವರೋ ಎಂಬ ವಿಷಯವು ಸರಿಯಾಗಿ ತಿಳಿಯಬರುವುದಿಲ್ಲ. ನಾದಿರಖಾನರು ಕಾಬೂಲನ್ನು ಆಕ್ರಮಿಸಲು ಸಿದ್ಧತೆಗಳನ್ನು ಮಾಡುತ್ತಲೇ ಇರುವರು. ಅವರ ಒಬ್ಬ ಸಹೋದರನಾದ ಶಹಾವಲಿಖಾನನೆಂಬಾತನು ಗಿಲ್‌ಜ್ಯಾಯಿವರ ನಾಯಕನಾಗಿರವನು. ಇನ್ನೊಬ್ಬ ಸಹೋದರನಾದ ಶಿರಾಗಾಖಾನನೆಂಬಾತನು ಜಲಾಲಾಬಾದಿಗೆ ಪ್ರಯಾಣವಾಗಿರುವನು. ಅಲ್ಲಿ ಶಿನವಾರಿಗಳ ಸೈನ್ಯವನ್ನು ಒಟ್ಟುಗೂಡಿಸಿ ಆತನು ಕೂಡ ಕಾಬೂಲನ್ನು ಆಕ್ರಮಿಸುವನು. ಈ ರೀತಿ ಎಲ್ಲ ಸಹೋದರರು ಒಂದೇ ಆಲೋಚನೆಯುಳ್ಳವರು. ಅದು ಹೊರತು ಗುಲಾಮ ನಾಬಿಖಾನರು ಪ್ರತ್ಯೇಕವಾಗಿ ಕಾಬೂಲನ್ನು ಆಕ್ರಮಿಸಬೇಕೆಂದು ಇನಿಯಲು ಪಾದಿರಖಾನರು ಅವರಿಗೆ ತಿಳಿಸಿರುವರು. ನಾಲೂವು ದಿಕ್ಕುಗಳಿಗೆ ಎದುರಾಗಲು ಸಿದ್ಧತೆಗಳನ್ನು ಈ ಮೊದಲೇ ಮಾಡಿರುವನಂತೆ. ಗಿಲ್‌ಜಾಯಿಗಳು ಕಂದಹಾರ ಪಟ್ಟಣವನ್ನು ಮುತ್ತಿದರೆಂದು ಈ ಮೊದಲು ವಾರ್ತೆ ಬಂದಿತ್ತು. ಆದರೆ ಇದು ತೀರ ಸುಳ್ಳಂತೆ. ಕಲಾತ್-ಇ-ಗಿಲ್‌ಜ್ಯಾಯಿಯ ಬಳಿ ಹಬೀಬುಲ್ಲನ ಸೈನ್ಯವನ್ನು ಸುತ್ತುವರಿದಿದ್ದಾರೆಂದೂ ತಿಳಿದು ಬರುತ್ತದೆ. ಪೇಷಾವರದಲ್ಲಿ ಅವರ ಮೊನಚಿಕೆಯನ್ನು ಬರಲಾಯಿಸಲು ಸಾಧ್ಯವಾಗದೆ ಹೋದುದರಿಂದ ಬಾಚಾ-ಇ-ಸಾಕೋವಿನ ವ್ಯಾಪಾರ ಏಜಂಟನಾದ ಇಮಾಮ್‌ದೀನನು ಪೇಷಾವರದಲ್ಲಿ ವ್ಯಾಪಾರವನ್ನು ತೆರೆಯುವ ಆಲೋಚನೆಯನ್ನು ಬಿಟ್ಟು ಅಬ್ಬೋಟಾಬಾದಿಗೆ ಹೊರಟು ಹೋಗಿದ್ದನು. ಅಲ್ಲಿಂದ ಆತನು ಕಾಬೂಲಿಗೆ ಹೋಗುವನಂತೆ.

• • •

ಗಂಡಸಾದ ಹೆಂಗಸು.

ಬಲೂಚಿಸ್ಥಾನದ ಒಬ್ಬ ಹೆಂಗಸು ಗಂಡಸಿನ ರೂಪವನ್ನು ತಾಳಿ ಇದುವರೆಗೆ ಜೀವನವನ್ನು ನಡೆಸಿರುವ ಪ್ರತಿಯೊಬ್ಬರಿಗೂ ಆಶ್ಚರ್ಯವನ್ನುಂಟುಮಾಡುವಂತಹುದಾಗಿದೆ. ಹನ್ನೊಂದನೇ ವರುಷದಲ್ಲಿ ಆಕೆಯು ಗಂಡನಿಂದ ಓಡಿಹೋಗಿ ತಾನು ಮೊದಲು ಯಾರಲ್ಲಿ ಕೆಲಸಕ್ಕಿದ್ದಳೋ ಆತನ ಹೆಂಡತಿಯನ್ನು ಮದುವೆಯಾಗಿ, ಕೊನೆಗೆ ಅವಳನ್ನು ತ್ಯಜಿಸಿ, ಗಾರ್ಗಾನೇ ಇಸವಿಯ ಮಾರಿ ಗಲಭೆಯಲ್ಲಿ ಗಾಯಹೊಂದಿದಳು. ಆಸ್ಪತ್ರೆಗೆ ಕೊಂಡ್ಯೊಯ್ದ ಮೇಲೆಯೇ ಆಕೆಯು ಸ್ತ್ರೀಯೆಂಬ ಸಂಗತಿಯು ಕಂಡುಹಿಡಿಯಲ್ಪಟ್ಟಿತು. ಇಂಡಿಯಾ ಸರಕಾರದಿಂದ ಅವಳಿಗೀಗ ಜಖಮು ಹೊಂದಿದ ಸೈನಿಕರಿಗೆ ಸಿಕ್ಕುವಂತಹ ಪೆನ್‌ಶನು ಸಿಕ್ಕುತ್ತಿದೆ.

ಗಡಿಪ್ರಾಂತ್ಯದಲ್ಲಿರುವ ಹನಾ ಎಂಬ ಪಟ್ಟಣದಲ್ಲಿ ಅವಳೀಗ ಪೂರ್ಣ ಬ್ರಹ್ಮಚರ್ಯದಲ್ಲಿ ವಾಸಿಸುವಳು. ಮೇಲೆ ಹೇಳಿದ ಸಂಗತಿಗಳು ನಿಜವೆಂದು ಹಲವರಿಂದ ದೃಢಪಡಿಸಲ್ಪಟ್ಟಿವೆ. ಬಲೂಚಿಸ್ಥಾನದ ಕರೀಗ ಜಹಾಲಿನ ಒಬ್ಬ ಹಳ್ಳಿಯಲ್ಲಿರುವ ಸಲೀಮನೆಂಬಾತನೇ ಆಕೆಯ ತಂದೆ. ತಂದೆಯು ಆಕೆಗೆ ೧೧ ವರುಷ ಪ್ರಾಯವಾದೊಡನೆ ಕೊಪ್ಪ ಖ್ಯಾಂತದ ಗಾಫೂರನೆಂಬೊಬ್ಬ ಕಮ್ಮಾರನಿಗೆ ಮದುವೆಮಾಡಿ ಕೊಟ್ಟನು. ಗಂಡನು ಅವಳನ್ನು ಕೊಪ್ಪಪ್ರಾಂತಕ್ಕೆ ಕರಕೊಂಡು ಹೋದನು. ಆದರೆ ಅವಳಿಗೆ ಆಗಿನ ಜೀವನವು ಏನೊಂದೂ ರುಚಿಸದೆ ಒಬ್ಬ ಹುಡುಗನ ವೇಷವನ್ನು ಧರಿಸಿ ಮದುವೆಯಾದ ಆರೇ ದಿನಗಳಲ್ಲಿ ಆಕೆಯು ಗಂಡನನ್ನು ತ್ಯಜಿಸಿ ಓಡಿಹೋದಳು. ಬೋಸ್ಸನಿಗೆ ಹೋಗಿ ಕಮಾಲನೆಂಬ ಹೆಸರಿನಿಂದ ಕುರಿ ಮೇಯಿಸುವ ವೃತ್ತಿಯಲ್ಲಿ ಸೇರಿಕೊಂಡಳು. ನಾಲ್ಕೈದು ತಿಂಗಳುಗಳವರೆಗೆ ಈ ಕೆಲಸವನ್ನು ಮಾಡಿ ತರುವಾಯ ಮುಲ್ತಾನಿಗೆ ಹೋಗಿ ಒಬ್ಬ ಮುಸಲ್ಮಾನನೊಡನೆ ಕೆಲಸಕ್ಕೆ ಇರತಕ್ಕದ್ದಾಯಿತು. ತನ್ನ ಯಜಮಾನನ ಸಲುವಾಗಿ ಕೆಲವು ಸಾಮಾನುಗಳನ್ನು ಪರವೂರಿನಿಂದ ತರುವ ಬಗ್ಗೆ ರೈಲಿನಲ್ಲಿ ಕುಳಿತು ಹೋಗುತ್ತಿರುವಾಗ, ಅಲ್ಲಿ ಆಕೆಗೆ ತನ್ನ ಮೊದಲನೆಯ ಯಜಮಾನನ ಹೆಂಡತಿಯ ಭೇಟಿಯಾಯಿತು. ಈ ಎರಡನೆಯ ಹೆಂಗಸು ಕಮಾಲನನ್ನು ಮೋಹಿಸಿದುದರಿಂದ ಅವರಲ್ಲಿ ಮದುವೆಯು ಒಪ್ಪಂದವಾಯಿತು. ಮದುವೆಯಾದ ಮೇಲೆ ದಿನಗಳು ಸುಖವಾಗಿ ಕಳೆದುವು. ಕೆಲವು ದಿನಗಳೊಳಗೆ ಆಕೆಗೆ ಗಡಿಪ್ರಾಂತದಲ್ಲಿ ಒಬ್ಬ ಸೈನಿಕನ ಕೆಲಸ ಸಿಕ್ಕಿದುದರಿಂದ ಮನೆಯನ್ನು ತ್ಯಜಿಸಿ ಹೋಗಬೇಕಾಯಿತು. ಗಾರ್ಗಾನೇ ಇಸವಿಯಲ್ಲಿ ನಡೆದ ಮಾರಿ ಗಲಭೆಯಲ್ಲಿ ಆಕೆಯು ತುಂಬಾ ಜಖಮು ಹೊಂದಿದಳು. ತಲೆಗೆ ಪೆಟ್ಟಾಯಿತು. ಶರೀರಕ್ಕೆ ಅತ್ಯಧಿಕ ಗಾಯಗಳಾದುವು. ಕೈಯ ರಕ್ತವು ಪಟ್ಟಿನಿಂದ ಸೀಳಿಹೋಯಿತು. ಅವಳನ್ನು ಆಸ್ಪತ್ರೆಗೆ ಕೊಂಡ್ಯೊಯ್ದರು. ಅಲ್ಲಿ ಆಕೆಯ ರಹಸ್ಯವು ಬಯಲಾಯಿತು. ಆಕೆಯು ಹೆಂಗಸೆಂಬುದು ಪ್ರಕಟವಾಯಿತು. ಅವಳಿಗೀಗ ತಿಂಗಳಿಗೆ ಐವತ್ತು ರೂಪಾಯಿಗಳ ಪೆನ್‌ಶನು ಸಿಕ್ಕುತ್ತಿದೆ.

• • •

ದಾವಣಗೆರೆಯ ದಾವಾನಲ.

ದಾವಣಗೆರೆಯು ಮೈಸೂರು ಸಂಸ್ಥಾನಕ್ಕೆ ಸೇರಿರುವುದಾಗಿದ್ದು ೧೮ ಸಾವಿರ ಜನರು ಅಲ್ಲಿ ವಾಸಿಸುವರು. ವ್ಯಾಪಾರವು ಅಲ್ಲಿ ಚೆನ್ನಾಗಿ ಅಭಿವೃದ್ಧಿ ಹೊಂದಿ, ಇನ್ನೂ ಅಭಿವೃದ್ಧಿಹೊಂದುತ್ತಾ ಬರುತ್ತಿದ್ದಿತು. ಇಂತಹ ದಾವಣಗೆರೆಯಲ್ಲಿ ಕಳೆದ ಮೊಹರಮಿನ ಸಮಯ ಹಿಂದೂ ಮುಸಲ್ಮಾನರೊಳಗೆ ಭಯಂಕರವಾದ ಜಗಳವುಂಟಾಗಿ ಘೋರವಾದ ಸಿರಪರಾಧಿಗಳಾದ ಹಿಂದೂಗಳು ಮೃತ್ಯುವಿಗೆ ತುತ್ತಾದರು. ೫೦ ಮಂದಿಗಿಂತ ಹೆಚ್ಚಿಗೆ ಜನರು ಪೆಟ್ಟು ತಿಂದರು. ಕಳೆದ ಗಣಪತಿ ಮಹೋತ್ಸವದ ಸಮಯದಲ್ಲಿಯೂ ಇದೇ ರೀತಿ ಜಾತೀಯ ವೈಮನಸ್ಯದಿಂದ ಆ ಪಟ್ಟಣದ ಶಾಂತತೆಗೆ ಒಮ್ಮೆ ಭಂಗವುಂಟಾಗಿದ್ದಿತು. ಸರಿಯಾದ ಶಾಂತತೆಯುಂಟಾಯಿತೆಂದು ತೋರಿಬಂದಿತಾದರೂ, ಒಳಗಿನ ಆ ಅಗ್ನಿಯು ಹೊಂದಿರಲಿಲ್ಲ. ಅದು ಪುನಃ ಕಳೆದ ಮೊಹರಮಿನ ಸಮಯದಲ್ಲಿ ಪ್ರಜ್ವಲಿಸಿತು. ಅಂಗಡಿಗಳ ಸುಲಿಗೆಯಾಯಿತು. ವಸ್ತ್ರಗಳು ದಹಿಸಲ್ಪಟ್ಟುವು. ಈ ಸಂದರ್ಭದಲ್ಲಿ ಶಾಂತಿಸ್ಥಾಪನೆಯ ಬಗ್ಗೆ ಅಲ್ಲಿ ಪ್ರಯತ್ನಪಡಬೇಕಾಗಿದ್ದ ಸಬ್ ಡಿವಿಜನಲ್ ಅಧಿಕಾರಿಯೇ ಅಲ್ಲಿಂದ ತೆರಳಿದ್ದರು.

ಹಿಂದೂ ಮುಸಲ್ಮಾನರ ಕಲಹವು ಹೇಗೆ ಪ್ರಾರಂಭವಾಯಿತೆಂದು ಸರಿಯಾಗಿ ತಿಳಿಯಬರುವದಿಲ್ಲ. ಮೊದಲಾಗಿ ಮುಸಲ್ಮಾನರು ಹಿಂದುಗಳ ಮೇಲೆ ಬಿದ್ದಿದ್ದರಂತೆ. ಕೆಲವು ಮುಸಲ್ಮಾನರ ಹೇಳಿಕೆಯಂತೆ ಮೊಹರುಮಿನ ದಿನ ಹಿಂದೂಗಳು ಮೊಹರಮ್ ಮೆರವಣಿಗೆಯನ್ನು ಪೂರ್ಣವಾಗಿ ಬಹಿಷ್ಕರಿಸಿದುದು ಮಾತ್ರವಲ್ಲದೆ, ಮೆರವಣಿಗೆಗೆ ಹೋಗಲೆಳಸುವ ಕೆಲವು ಗಾಯಕರನ್ನೂ, ಸಂಗೀತಗಾರರನ್ನೂ ತಡೆಗಟ್ಟಿದ್ದರು. ಇದು ಹೊರತು

ಹಲವು ಧರ್ಮೀಯ ಮನೆಗಳನ್ನು ಪ್ರವೇಶಿಸಿ ಅಮೂಲ್ಯವಾದ ವಸ್ತುಗಳನ್ನು ಹೊರಕ್ಕೆ ತಂದು ಬಹಿರಂಗವಾದ ಮಾರ್ಗದಲ್ಲಿ ಸುಟ್ಟುಹಾಕಿದ್ದರು. ಮೆರವಣಿಗೆಯ ಸಮಯ ಹಿಂದೂಗಳು ಮುಸಲ್ಮಾನರನ್ನು ಆಕ್ರಮಿಸಿದುದರಿಂದ ಪೋಲೀಸರು ಗುಂಡು ಹಾರಿಸುವ ಆವಶ್ಯಕತೆಯುಂಟಾಗಿ ಇಬ್ಬರು ಸತ್ತರು. ಹಲವರು ಜಖಮು ಹೊಂದಿದರು. ಅಂದು ರಾತ್ರಿ ಮತ್ತು ಯಾವ ಆಶಾಂತತೆಯೂ ಇರಲಿಲ್ಲ. ಮರುದಿನ ಬೆಳಿಗ್ಗೆ ಹಿಂದೂಗಳು ಆಸ್ಪತ್ರೆಯಲ್ಲಿರುವ ತಮ್ಮ ಬಂಧುಗಳನ್ನು ಕಾಣುವ ಸಲುವಾಗಿ ಹೋಗಿದ್ದಾಗ ಒಬ್ಬ ಮುಸಲ್ಮಾನ ಪೋಲೀಸನು ಏನೊಂದೂ ಆಲೋಚಿಸದೆ ಹಿಂದುಗಳ ಎದುರಿಗೆ ಬಂದು ತಮ್ಮ ವಿಜಯದ ಕುರಿತಾಗಿ ಹೊಗಳಿಕೊಳ್ಳಹತ್ತಿದನು. ಒಡನೆಯೇ ಹಿಂದೂಗಳು ಸಿಟ್ಟಿಗೆದ್ದು ಆತನನ್ನು ಹೊಡೆದರು. ಇದರಿಂದಲೇ ಹಿಂದೂಗಳು ಕೃಷ್ಣರಾಜಗಡೆ ಊರಲ್ಲಿರುವ ಮುಸಲ್ಮಾನರ ಒಡವೆ ವಸ್ತುಗಳನ್ನು ಹಾಳುಮಾಡಿ, ಪಳ್ಳಿಗಳೊಳಗೆ ನುಗ್ಗಿ, ಮಸೀದಿಯ ಪವಿತ್ರವಾದ ಪುಸ್ತಕಗಳನ್ನು ಸುಟ್ಟುಹಾಕಿದರು, ಹಂದಿ ಮೊದಲಾದ ಪ್ರಾಣಿಗಳ ಶಿರಸ್ಸನ್ನು ಮಸೀದಿಯ ಎದುರು ಕಡಿದರು. ಒಟ್ಟಾರೆಯ ಮೇಲೆ ಆದ ಮರಣಗಳು ನಾಲ್ಕು.

ಎಲಿಮೆಂಟರಿ ವಿದ್ಯಾಭ್ಯಾಸದಲ್ಲಿ ಖರ್ಚು ಉಳಿಸುವ ಎಮಲ್ಗಮೇಶನ್ ಮತ್ತು ಕೊ ಎಜ್ಯುಕೇಶನ್ ಸ್ಕೀಮ್.

ಮದರಾಸು ಸಂಸ್ಥಾನದ ಪ್ರತಿ ಒಂದು ಹಳ್ಳಿಯಲ್ಲಿಯೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಪ್ರತಿ ಒಂದು ಹಳ್ಳಿಯಲ್ಲಿಯೂ ಶಾಲೆಗಳನ್ನು ಇಟ್ಟಿರುವರು. ಕೆಲವು ಗ್ರಾಮಗಳಲ್ಲಿ ಎರಡು ಮೂರು ಶಾಲೆಗಳೂ ಸ್ಥಾಪಿಸಲ್ಪಟ್ಟಿರುವವು. ಈಗ ನೋಡುವಾಗ ಖರ್ಚು ಹೆಚ್ಚಾಗುತ್ತಾ ಬಂತು. ಖರ್ಚಿಗೆ ಬೇಕಾಗುವಷ್ಟು ಹಣವು ದೊರೆಯುವುದಿಲ್ಲ. ಆದುದರಿಂದ ಖರ್ಚು ಕಡಿಮೆ ಮಾಡುವುದಕ್ಕಾಗಿ ಒಂದು ಹೊಸ ಉಪಾಯವನ್ನು ಮದರಾಸು ಸರಕಾರದವರು ಕಂಡು ಹಿಡಿದಿರುವರು. ಈ ಉಪಾಯಕ್ಕೆ ಎಮಲ್ಗಮೇಶನ್ ಮತ್ತು ಕೊ ಎಜ್ಯುಕೇಶನ್ ಸ್ಕೀಮ್ ಎಂದು ಹೆಸರು. ಎಮಲ್ಗಮೇಶನ್ ಅಂದರೆ ಹುಡುಗರ ಬೇರೆ ಶಾಲೆಗಳಿರುವ ಊರುಗಳಲ್ಲಿಯೂ ಹಳ್ಳಿಗಳಲ್ಲಿಯೂ ಅಂಥಾ ಶಾಲೆಗಳನ್ನು ಒಟ್ಟು ಕೂಡಿಸುವುದು ಮತ್ತು ಬಲವಾದ ಒಂದೇ ಶಾಲೆಯನ್ನು ಇಟ್ಟು ವಿದ್ಯಾಭ್ಯಾಸವನ್ನು ಒಳ್ಳೇ ರೀತಿಯಲ್ಲಿ ಕೊಡುವುದು. ಕೊ ಎಜ್ಯುಕೇಶನ್ ಅಂದರೆ ಸಾಧಾರಣ ೫ನೇ ಇಯತ್ತೆಯ ವರೆಗೆ ಹುಡುಗಿಯರಿಗೂ ಹುಡುಗರಿಗೂ ಒಂದೇ ಎಲಿಮೆಂಟರಿ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಕೊಡುವುದು ಮತ್ತು ೫ನೇ ಇಯತ್ತೆಯ ವರೆಗೆ ಇರುವ ಹುಡುಗಿಯರ ಶಾಲೆಗಳನ್ನು ತೆಗೆದು ಹಾಕುವುದು.

ಈ ಹುಕುಂಮಿಗೆ ಅನುಸಾರವಾಗಿ ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾ ಇಲಾಖಾ ಅಧಿಕಾರರು ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಸಂಚರಿಸಿ ಯಾವ ಯಾವ ಶಾಲೆಗಳನ್ನು ತೆಗೆಯಬಹುದು ಯಾವ ಯಾವ ಹುಡುಗಿಯರ ಶಾಲೆಗಳನ್ನು ಮುಚ್ಚಬಹುದು ಎಂದು ರಿಪೋರ್ಟನ್ನು ಕಳುಹಿಸಿರುವರು. ಇದರ ವಿಷಯ ತಾಲೂಕು ಬೋರ್ಡುಗಳ ಹತ್ತಿರವೂ, ಖಾಸಗಿ ಶಾಲೆಗಳ ಮೆನೇಜರರ ಹತ್ತಿರವೂ ಶಾಲೆಗಳನ್ನು ಒಟ್ಟು ಕೂಡಿಸುವುದರ ವಿಷಯವೂ ಕೇಳಿರುವರು. ತಾಲೂಕು ಬೋರ್ಡು ಪ್ರೆಸಿಡೆಂಟುಗಳು ಆಯಾ ಬೋರ್ಡು ಶಾಲೆಗಳ ಉಪಾಧ್ಯಾಯರ ಹತ್ತಿರ ನಿಮ್ಮ ಶಾಲೆಯನ್ನು ಮುಚ್ಚಲಿಕ್ಕೆ ಏನಾದರೂ ಆಕ್ಷೇಪವಿದೆಯೋ ಎಂದು ಕೇಳುವರು.

ಮೇಲಿನ ಸಂಗತಿಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಬೋರ್ಡು ಶಾಲೆಗಳು ಕಡಿಮೆಯಾಗುವವು. ಅನೇಕ ಬೋರ್ಡು ಎಲಿಮೆಂಟರಿ ಶಾಲೆಗಳು ಕಡಿಮೆಯಾಗುವುದರಿಂದ ಎಲಿಮೆಂಟರಿ ವಿದ್ಯಾಭ್ಯಾಸದ ಭಾರವನ್ನು ವಹಿಸಿಕೊಂಡಿರುವ ಬೋರ್ಡುಗಳಿಗೂ ಕೆಲಸ ಕಡಿಮೆಯಾಗುವುದು.

ತಾಲೂಕು ಬೋರ್ಡುಗಳನ್ನು ಕಡಿಮೆ ಮಾಡಬಹುದು.

ತಾಲೂಕು ಬೋರ್ಡುಗಳಿಗೆ ಈಗ ಮುಖ್ಯವಾಗಿರುವ ಕೆಲಸವು ಪ್ರಾಥಮಿಕ ಶಾಲೆಗಳ ಆಡಳಿತೆ. ಬೋರ್ಡು ಶಾಲೆಗಳ ಸಂಖ್ಯೆಯು ಕಡಿಮೆಯಾಗುವುದರಿಂದ ತಾಲೂಕು ಬೋರ್ಡುಗಳಿಗಿರುವ ಕೆಲಸವು ಬಹಳ ಕಡಿಮೆಯಾಗುವುದು. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ೬ ತಾಲೂಕು ಬೋರ್ಡುಗಳನ್ನು ತೆಗೆದು ಮೂರು ತಾಲೂಕು ಬೋರ್ಡುಗಳನ್ನು ಮಾತ್ರವೇ ಇಟ್ಟರೆ ಸಾಕಾಗುವುದು. ಉಡುಪಿ ತಾಲೂಕು ಬೋರ್ಡನ್ನು ತೆಗೆದು ಉಡುಪಿ, ಕುಂದಾಪುರ ತಾಲೂಕು ಬೋರ್ಡುಗಳನ್ನು ಒಂದೇ ಬೋರ್ಡಾಗಿ ಮಾಡಿ ಕುಂದಾಪುರವನ್ನು ಈ ಬೋರ್ಡಿನ ಹೆಡ್‌ಕ್ವಾರ್ಟರ್ಸಾಗಿ ಮಾಡಬಹುದು. ಮಂಗಳೂರು ಮತ್ತು ಕಾರ್ಕಳ ತಾಲೂಕು ಬೋರ್ಡುಗಳನ್ನು ಒಂದಾಗಿ ಮಾಡಿ ಮಂಗಳೂರು ತಾಲೂಕು ಬೋರ್ಡು ಎಂದು ಹೆಸರಿಡಬಹುದು. ಉಪ್ಪಿನಂಗಡಿ ತಾಲೂಕು ಬೋರ್ಡು ಮತ್ತು ಕಾಸರಗೋಡು ತಾಲೂಕು ಬೋರ್ಡುಗಳನ್ನು ಒಂದಾಗಿ ಮಾಡಿ ಕಾಸರಗೋಡು ತಾಲೂಕು ಬೋರ್ಡಾಗಿ ಮಾಡಬಹುದು. ಹೀಗೆ ೬ ತಾಲೂಕು ಬೋರ್ಡುಗಳನ್ನು ತೆಗೆದು ಮೂರು ತಾಲೂಕು ಬೋರ್ಡುಗಳಾಗಿ ಮಾಡುವುದರಿಂದ ಮೂರು ತಾಲೂಕು ಬೋರ್ಡು ಸಿಬ್ಬಂದಿ ಖರ್ಚು ಉಳಿಯುವುದು. ಮೆಂಬರರಿಗೆ ಕೊಡುವ ಭತ್ತೆಯು ಒಂದಕ್ಕೆ ಅರ್ಧ ಪಾಲಷ್ಟು ಕಡಿಮೆಯಾಗುವುದು.

ಜೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರರ ಇಸವುಗಳನ್ನು ತೆಗೆದು ಹಾಕಬಹುದು.

ಶಾಲೆಗಳ ಸಂಖ್ಯೆಯು ಕಡಿಮೆಯಾಗುವುದರಿಂದ ಇನ್ಸ್‌ಪೆಕ್ಟರ್ ಕೆಲಸವು ಕಡಿಮೆಯಾಗುವುದು. ಆದುದರಿಂದ ಈಗ ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಲ್ಲಾ ಜ್ಯೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರುಗಳ ಇಸಮುಗಳನ್ನು ತೆಗೆದು ಹಾಕಿ ಡಿಪ್ಯುಟಿ ಇನ್ಸ್‌ಪೆಕ್ಟರರನ್ನು ಮಾತ್ರವೇ ಇಟ್ಟರೆ ಸಾಕಾಗುವುದು. ಇದರಿಂದ ಸಂಬಳಕ್ಕೂ ನಂತರ ಪೆನ್‌ಶನಿಗೂ ಅವರ ಸೇವೆಗಳಿಗೂ, ಭತ್ತೆಗೂ ಕೊಡುವ ಹಣವು ಉಳಿಯುವುದು.

ಕೆನರಾರೇಂಜಿನ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟ್ರೆಸಿನ ಇಸಮನ್ನು ತೆಗೆದುಹಾಕಬಹುದು.

ಈಗ ಈ ಜಿಲ್ಲೆಯ ೬ ತಾಲೂಕುಗಳಲ್ಲಿ ಸಾಧಾರಣ ೭೫ ಹುಡುಗಿಯರ ಶಾಲೆಗಳು ಇರಬಹುದು. ಹೊಸ ಕೊ-ಎಜ್ಯುಕೇಶನ್ ಸ್ಕೀಮಿನ ಪ್ರಕಾರ ಸಾಧಾರಣ ೫೦ ಹುಡುಗಿಯರ ಶಾಲೆಗಳನ್ನು ಹುಡುಗರ ಶಾಲೆಗಳೊಂದಿಗೆ ಕೂಡಿಸುವುದರಿಂದ ಹುಡುಗಿಯರ ಶಾಲೆಗಳ ಸಂಖ್ಯೆಯು ಸಾಧಾರಣ ೨೫ ಮಾತ್ರವೇ ಉಳಿಯುವುದು. ೨೫ ಶಾಲೆಗಳಿಗಾಗಿ ಒಬ್ಬ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟ್ರೆಸ್ ಅಗತ್ಯವಿಲ್ಲ. ಆದುದರಿಂದ ಕೆನರಾ ಗರ್ಲ್ಸ್ ರೇಂಜನ್ನು ತೆಗೆದು ಹಾಕಿ ಇದನ್ನು ಮೊದಲಿದ್ದಂತೆಯೇ ಕೆನಾನೂರ್ ರೇಂಜಿಗೆ ಕೂಡಿಸಬಹುದು. ಇದರಿಂದ ಒಬ್ಬ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟ್ರೆಸ್, ಇವರ ಮೈಲೇಜ್, ಅವರ ಸಿಬಂಧಿ ಖರ್ಚು ಮುಂತಾಗಿ ಎಲ್ಲಾ ಉಳಿಯುವುದು.

ಆದುದರಿಂದ ಎಮಲ್ಗಮೇಶನ್ ಮತ್ತು ಕೊ-ಎಜ್ಯುಕೇಶನಿನಿಂದ ಶಾಲೆಗಳ ಸಂಖ್ಯೆಯು ಕಡಿಮೆಯಾಗುವುದು. ಆದರೆ ಅವುಗಳ ಸ್ಥಿತಿಯು ಅಭಿವೃದ್ಧಿಯಾಗುವುದು. ತಾಲೂಕು ಬೋರ್ಡುಗಳ ಸಂಖ್ಯೆಯು ಕಡಿಮೆಯಾಗಿ ಬೇರೆ ಹಣವು ಉಳಿಯುವುದು. ಉಪಾಧ್ಯಾಯರು ತಾಲೂಕು ಬೋರ್ಡು ಆಫೀಸಿಗೆ ಹೋಗಿ ಕೊಡುವ ಉಪದ್ರವು ಕಡಿಮೆಯಾಗುವುದು. ಉಪಾಧ್ಯಾಯರಿಂದ ತಾಲೂಕು ಬೋರ್ಡಿಗೆ ಇರುವ ಬಾಧೆಯು ಕಡಿಮೆಯಾಗುವುದು. [illegible] ಕೆಲಸವು ಕಡಿಮೆಯಾಗುವುದು. ಜ್ಯೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರರ ಇಸಮುಗಳನ್ನು ತೆಗೆದು ಹಾಕಿ ಬಂತಾಗುವುದು. ಡಿಪ್ಯುಟಿ ಇನ್ಸ್‌ಪೆಕ್ಟ್ರೆಸಿನ ಇಸಮು ಕಡಿಮೆಯಾಗಿ ಹೇರಳ ಹಣವು ಉಳಿಯುವುದು. ಒಂದು ಜಿಲ್ಲೆಯಲ್ಲಿ ಇಷ್ಟು ಹಣವು ಉಳಿಯುವಾಗ ೨೬ ಜಿಲ್ಲೆಗಳಲ್ಲಿ ಲಕ್ಷಾಂತರ ರೂಪಾಯಿ ಉಳಿಯುವವು. ಈ ಲಕ್ಷಾಂತರ ರೂಪಾಯಿಯನ್ನು ಎಲಿಮೆಂಟರಿ ಶಾಲೆಗಳ ಉದ್ಧಾರಕ್ಕಾಗಿ ಖರ್ಚುಮಾಡುವದಕ್ಕೆ ಸಿಕ್ಕಿ ಪ್ರಾಥಮಿಕ ವಿದ್ಯಾಭ್ಯಾಸವು ಉತ್ತಮ ರೀತಿಯಲ್ಲಿ ನಡೆಯುವದು.

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನ ಇನ್ಸ್ಪೆಕ್ಟರ್ ಮಹಿಳೆ ಮೆಂಬರರನ್ನು ತೆಗೆದುಹಾಕಬಹುದು.

ಗಂಡಸರ ಬೇರೆ ಹೆಂಗಸರ ವಿವರಗಳಿಗಾಗಿಯೂ ವಿದ್ಯಾಭಿವೃದ್ಧಿಗಾಗಿಯೂ [illegible] ವಿದ್ಯಾ ಇಲಾಖೆ ಕೆಲವು ಸ್ತ್ರೀಯರು ಸರಕಾರಕ್ಕೆ ಮನವಿಮಾಡಿ ಸಾಧ್ಯವಾದ ಕೆಲಸಗಳಲ್ಲಿ ಸ್ತ್ರೀಯರೂ ಇರಬೇಕೆಂದು ವಾದಿಸಿದರು. ಇದಕ್ಕನುಸಾರವಾಗಿ ಸ್ತ್ರೀ ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನಲ್ಲಿ ಇಬ್ಬರು ಸ್ತ್ರೀ [illegible] ಈಗಿನ ಕೊ-ಎಜ್ಯುಕೇಶನ್ ಸ್ಕೀಮಿನ ರಿಪೋರ್ಟು ಕೌನ್ಸಿಲಿಗೆ ಬಂದ [illegible] ಈ ಮಹಿಳೆ [illegible] ತಮ್ಮ ಮಕ್ಕಳನ್ನು ಹುಡುಗರ ಒಟ್ಟಿಗೆ ಓದ್ಲು ಕಳಿಸುವುದಕ್ಕೆ ಕಳುಹಿಸಬಹುದು ಎಂಬ ಅಭಿಪ್ರಾಯವನ್ನು ಕೊಡುವುದರಲ್ಲಿ [illegible] ಇದು ಅರ್ಥವೇನೆಂದರೆ ೫ನೇ ಇಯತ್ತೆ ವರೆಗೆ ಇರುವ ಎಲ್ಲಾ ಹುಡುಗಿಯರ ಶಾಲೆಗಳನ್ನು ಮುಚ್ಚಬಹುದು ಎಂಬುದೇ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರಿನ ಹೊರಗಿರುವ ಹುಡುಗಿಯರ ಶಾಲೆಗಳಲ್ಲಿ ಎರಡು ಮೂರು ಮಾತ್ರವೇ ಹಾಯರ್ ಎಲಿಮೆಂಟರಿ ಶಾಲೆಗಳು. ಉಳಿದವುಗಳೆಲ್ಲವೂ ೪ನೇ ಅಥವಾ ೫ನೇ ಇಯತ್ತೆ ವರೆಗೆ ಕಲಿಸುವ ಲೋವರ್ ಎಲಿಮೆಂಟರಿ ಹುಡುಗಿಯರ ಶಾಲೆಗಳು. ಇವುಗಳನ್ನೆಲ್ಲಾ ಮುಚ್ಚಲಿಕ್ಕೆ ಈ ಕೋ ಎಜ್ಯುಕೇಶನ್ ಕೌನ್ಸಿಲ್ ಹುಡುಗಿಯರ ವಿದ್ಯಾಭ್ಯಾಸ ಮೊಟಕಿನಿಂದ ತೋರುತ್ತಾ ಇದೆ. ಆದುದರಿಂದ ಈ ಎಜ್ಯುಕೇಶನ್ ಕೌನ್ಸಿಲಿನಲ್ಲಿರುವ ಇಬ್ಬರು ಮಹಿಳೆ ಮೆಂಬರರ ಇಸಮನ್ನು ತೆಗೆದು ಹಾಕಿ ಇವರ ಬದಲಾಗಿ ಇಬ್ಬರು ಗಂಡಸರ ಮೆಂಬರರನ್ನೇ ನೇಮಿಸಬಹುದು. ಅಥವಾ ಎರಡು ಮೆಂಬರ ಸ್ಥಾನಗಳನ್ನೇ ತೆಗೆದು ಹಾಕಬಹುದು.

ಕಾಸರಗೋಡು ತಾಲೂಕು ಬೋರ್ಡಿನವರು ಬೇಗನೆ ಉದ್ಯಾವರ ಎಲಿಮೆಂಟರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯಾಗಿ ಮಾಡಿದರೆ ಅವರಿಗೆ ಅಭಿನಂದನಾರ್ಹರೆಂದು [illegible] ಮಂಜೇಶ್ವರದಲ್ಲಿ ತೆರೆದ [illegible] ಆದುದರಿಂದ ಉದ್ಯಾವರದಲ್ಲಿಯೇ ಹಾಯರ್ ಎಲಿಮೆಂಟರಿ ಶಾಲೆ [illegible] ತೆರೆಯುವುದು ಉತ್ತಮ. ಖಾಸಗಿ ಶಾಲೆಗಳ ಮೇಲೆ ಗ್ರಾಮದ ಮಕ್ಕಳ ವಿದ್ಯಾಭ್ಯಾಸವು ಅವಲಂಬಿಸಿದೆ. [illegible] ಸ್ತ್ರೀ [illegible] ಹಾಯರ್ ಎಲಿಮೆಂಟರಿ ಶಾಲೆಯ ಸ್ಥಿತಿಯನ್ನು ನೋಡಿ [illegible] ಹಾಯರ್ ಎಲಿಮೆಂಟರಿ ಶಾಲೆ [illegible] ಜಿಲ್ಲಾ ಎಜ್ಯುಕೇಶನಲ್ ಅಧಿಕಾರಿಗಳು ಎಮಲ್ಗಮೇಶನ್ ಸ್ಕೀಮಿನ ಪ್ರಕಾರ ಮಂಜೇಶ್ವರದಲ್ಲಿರುವ ಮತ್ತು ಉದ್ಯಾವರ [illegible] ಶಾಲೆಗಳನ್ನು [illegible] ಮಂಜೇಶ್ವರ ಎಮಲ್ಗಮೇಶನ್ ಸ್ಕೀಮನ್ನು [illegible] ಉತ್ತಮ. ಕಾಸರಗೋಡು ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರು ಈ ವಿಷಯವನ್ನು ಜಿಲ್ಲಾ ಎಜ್ಯುಕೇಶನ್ ಅಧಿಕಾರಿಗಳಿಗೆ ತಿಳಿಸುವುದು ಉತ್ತಮ.

Grafted Mango plants genuine & of the best variety are sold at moderate rates at Hildaleville, Urwa.

ಉತ್ತಮ ಕಸಿಮಾವಿನ ಸಸಿಗಳು, ಸಾಧಾರಣ ದರದಲ್ಲಿ ಉರ್ವಾ-ಹಿಲ್‌ಡೇಲ್‌ವಿಲ್ಲನಲ್ಲಿ ಮಾರಲ್ಪಡುತ್ತವೆ.

[illegible] Public Conveyance Motor Service.
CHIKMAGALUR.
[illegible]ಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

[illegible] ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದ್ರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಗಂಟೆ ಅವಕಾಶ ಕೊಟ್ಟು 7¼ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜ್ರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟಯಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜ್ರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಮಧ್ಯಾಹ್ನ 4 ಘಂಟೆಗೆ ಮೂಡಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೆಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರಾಯಿಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಪ್ಯಾರಜಾನ್ ಸಾಹೇಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕಂಬಳ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಶೋಭಿತ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore S. K.

ಮಲೇರಿಯಾನ ಸರ್ವಜ್ವರಸಂಹಾರಿ

ಯುವಕ ವಿದ್ಯಾರ್ಥಿಯು ಲಕ್ಷ್ಯಕ್ಕೆ ತಕೊಳ್ಳಬಾರದೇ

ದೇಹದ ಆರೋಗ್ಯವೂ ಮನಸ್ಸಿನ ಬಲವೂ ಇದ್ದ ಯುವಕರಿಗೆ ವಿದ್ಯಾಭ್ಯಾಸವು ಬಹು ಸುಲಭಕರವಾಗಿರುವುದು.

ಆದರೆ ದೇಹದ ಆರೋಗ್ಯವು ಕೆಟ್ಟು ಹೋದಲ್ಲಿ ಮನಸ್ಸಿನ ಬಲವು ಕುಂದಿರುವದು ಸಹಜವೇ. ಅಂಥಾ ಯುವಕರಿಗೆ ವಿದ್ಯಾಭ್ಯಾಸವು ಅತೀ ಕಷ್ಟಕರವಾಗಿದೆ. ಇಂಥಾ ಯುವಕರು ಸಹಾ ವಿದ್ಯಾಭ್ಯಾಸದಲ್ಲಿ ಶೀಘ್ರ ಮುಂದುವರಿಯಬೇಕಾದರೆ, ದೇಹವು ಆರೋಗ್ಯವುಳ್ಳದ್ದಾಗಿಯೂ ಮನಸ್ಸು ಶಕ್ತಿವಂತವಾಗಿಯೂ ಇರಬೇಕು. ಕಂಪೌಂಡು ಸಿರಪ್ಪು ಸಾರಸಪರಿಲ್ಲ ಎಂಬ ಅಮೃತವು ಯುವಕರ ಆರೋಗ್ಯವನ್ನು ಕಾಪಾಡುವದಕ್ಕೂ ಮೆದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತೀ ಗುಣಕಾರಿಯಾಗಿದೆ.

ಕ್ರಯ 8 ಬಿಲ್ಲೆಗೆ ರೂ. 3—8—0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳು)

ಮೆದುಳು ಯಾತರಿಂದ ತಂಪಾದೀತು?

ವಸಂತ ಕಾಲದಲ್ಲಿ ಅಹೋ ರಾತ್ರಿ ಕಲಿಯುತ್ತ ಬರಳೊಂದು ಪ್ರಯಾಸದಿಂದ ಓದುವ ಯುವಕನ ತಲೆ ಮೆದುಳು ಬಹು ಬಿಸಿಯಾಗಿ ತಲೆ ಸಿಡಿತ, ಕಣ್ಣು ನೋವು, ಜ್ಞಾಪಕಶಕ್ತಿ ಕಡಿಮೆ, ಮೂಗು, ಹಲ್ಲುಗಳ ವಿವಿಧ ರೋಗಗಳು ಹುಟ್ಟುವವು. ಈ ಅವಸ್ತು ರೋಗಗಳು ಪರಿಹಾರವಾಗುವಂತೆಯೂ ಅಥವಾ ಅಂಥಾ ಅವಸ್ತು ರೋಗಗಳು ಹುಟ್ಟದಂತೆಯೂ ಅಕ್ಷಯ ಪಿತ್ತಶಮನ ತೈಲವು ಉಪಯೋಗವು ಬಲು ಗುಣಕಾರಿಯಾಗಿದೆ. ಬಹಳ ಹೊತ್ತು ಓದುವ (ಅಥವಾ ಕಷ್ಟ ಕೆಲಸ) ಮಾಡುವ ಯುವಕನು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಾಕಿಕೊಳ್ಳುವದರಿಂದಲೇ ತಲೆ ಮೆದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವದು.

ಗ್ರೀಷ್ಮ ಕಾಲದಲ್ಲಿ ಯುಕ್ತ ರೀತಿ ಅನುಸರಿಸುವದು, ಬಾಲ ಯುವಕರ ಬುದ್ಧಿವಂತಿಕೆಯಾಗಿದೆ.

ಕ್ರಯ 3 ಬಿಲ್ಲೆಗೆ ರೂ. ೨—೧೨—೦.

ವಿಶೇಷ ಮಾಹಿತಿಗೂ, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ, ಈ ನಾವು ಟಿಕ್ಕು ಲಪಾಗರ ಮತ್ತು ಹೋಮಿಯೋಪತಿ ಮದ್ದುಗಳಿಗೂ ನಮೂನೆ ಮಾದರಿ ಪ್ರತಿ ಚಿತ್ರಗಳಿಗೂ ನಮ್ಮ ದೊಡ್ಡ ಕೆಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಲೇರಿಯಾನ ಕಂಪೆನಿ,
ಮಂಗಳೂರು.

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪ್ಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪ್ಪೋಟಿಲ್ಲಾ, ಪೇರಳೆ, ಚಿಕ್ಕುಳಿ, ದ್ರಾಕ್ಷೆ, ಅಂಜೂರ, ದಾಳಿಂಬೆ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವುವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಗ್ಗದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್‌ಸ್ಟ್ರೀಟ್ ಸೋಮ ಯಾಜಿಯವರಲ್ಲಿ ದೊರೆಯುವುವು.

ಕೆ ಮಂಜಪ್ಪ ಶೆಟ್ಟಿ ದಿ. ಕೆನರಾ ನರ್ಸರಿ, ಬಿಕರ್ನಕಟ್ಟೆ, ಕುಲಶೇಖರ ದ. ಕ. 131028	ಕೆ ವಾಮನ ಶೆಣೈ C/o ಕಾರಿಡಾ ಫಾರ್ಮಸಿ, ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.
ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ,
ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಅತ್ಯುತ್ತಮವಾದ ಸೌಕರ್ಯಗಳನ್ನು ಒದಗಿಸುವಂಥ ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು.

2 ಜನಪ್ರಿಯರೂ, ಪ್ರತಿಷ್ಠಿತರೂ ಆದ ಡೈರೆಕ್ಟರರು.

3 ತುಂಬಾ ಅನುಭವದ ವ್ಯವಸ್ಥಾಪಕ, ದಕ್ಷತೆಯ ಮತ್ತು ಸೌಹಾರ್ದದ ಆಡಳಿತ,

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು,

ಉದಾರವಾದ ಕರಾರುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ಥ ಮತ್ತು ಪರಿಶ್ರಮಿಯಾದ ಏಜೆಂಟರುಗಳು ಬೇಕಾಗಿರುವರು.

ಪ್ರಶ್ನೆಗಳಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, ಸ್ಪೆಷಿಯಲ್ ಏಜೆಂಟ್ ಪಕ್ಷಕ್ಷೆ ಗ್ರಾಮ, ಕೊಣ್ಣೂರು ಪೋಸ್ಟ್, ದ. ಕ,	ಪಿ. ಅಭಯಶಂಕರ ದೇಶಪಾಂಡೆ ಅಥವಾ ಮತ್ತು ಕಂಪೆನಿ, ಮೆನೇಜಿಂಗ್ ಏಜೆಂಟ್ಸ್.

ಔಷಧದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಶೀಸೆಯಿಂದಲೇ ಗುಣವಾಯಿತು.

ಶ್ರೀಮತಿ ಎನ್. ಕನಕಮ್ಮ, ಶೇಖರ್ ಎಸ್. ವರಸಯ್ಯ, ಗ್ಯಾರು ಮ್ಯಾಜಿಸ್ಟ್ರೇಟ್, ಇವರು ಬರೆದಿರುವುದು — ನಿಮ್ಮ ಒಂದು ಸಣ್ಣ ಬಾಟಲ್ ಲೋಧ್ರವನ್ನು ಉಪಯೋಗಿಸಿದ ಮಾತ್ರದಿಂದಲೇ ಗುಣವಾಯಿತು. ಒಂದು ದೊಡ್ಡ ಶೀಸೆ ಲೋಧ್ರವನ್ನು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

ಶ್ರೀಮತಿ ಇಂದಿರಾಕುಮಾರಿ ದೇವಿ, ಮಟ್ಟೂರು, ಇವರು ಬರೆದಿರುವುದು—

ಸ್ವಾಮಿ, ನಾನು ಈಗ ನಿಮ್ಮ ಲೋಧ್ರವನ್ನು ಸೇವಿಸುತ್ತಿದ್ದೇನೆ. ಇದಕ್ಕೆ ಮುಂಚೆ ನನ್ನ ಋತುಕಾಲದಲ್ಲಿ ಬಹಳ ಬಾಧೆಯುಂಟಾಗುತ್ತಿತ್ತು ಮತ್ತು ಕ್ರಮವಾಗಿ ೨೦ ದಿನಗಳಿಗೊಮ್ಮೆ ಬಹಿಷ್ಠೆಯಾಗುತ್ತಿದ್ದೆನು. ೨ ವರ್ಷಗಳ ಕಾಲ ಆಂಗ್ಲ ಔಷಧಾಲಯಗಳಲ್ಲಿ ಔಷಧಿ ಸೇವಿಸಿಯೂ ಪ್ರಯೋಜನವಿಲ್ಲದಿರಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಹೇಳಿದರು. ಆದರೆ ನಾನು ಸಮ್ಮತಿಸಲಿಲ್ಲ. ಅನಂತರ ತಮ್ಮ ಪ್ರಸಿದ್ಧವಾದ ಲೋಧ್ರ ಎರಡು ಬಾಟಲ್ ತರಿಸಿ ಸೇವಿಸಿದೆನು. ಅಂದಿನಿಂದ ಕ್ರಮವಾಗಿ ೨೮ ದಿನಕ್ಕೊಂದು ಸಲ ಬಾಧೆಯಿಲ್ಲದೆ ಬಹಿಷ್ಠೆಯಾಗುತ್ತ ಸುಖವಾಗಿದ್ದೇನೆ. ಮಿಕ್ಕ ಇತರ ಬಾಧೆಗಳೂ ನಿವೃತ್ತಿಯಾಗಿವೆ. ಪುನಃ ಈಗ ಎರಡು ಬುದ್ದಿ ಲೋಧ್ರ ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ಮಾಯವಾಯಿತು.

ಶ್ರೀಮತಿ ಜಯ ಲಕ್ಷ್ಮಮ್ಮ, ಬಾಲಿಕಾ ಪಾಠಶಾಲೆ, ಕುಣಿಗಲ್, ಇವರು ಬರೆದಿರುವುದು —

ಕಳೆದ ಮೂರು ವರುಷಗಳಿಂದಲೂ ನನಗೆ ಋತುವು ಸರಿಯಾಗಿ ಆಗುತ್ತಿಲ್ಲ. ೨ ಅಥವಾ ೩ ತಿಂಗಳಿಗೊಂದು ಸಾರಿಯಾಗುತ್ತಿದ್ದೆನು. ಈ ಸಂದರ್ಭಗಳಲ್ಲಿ ಸೊಂಟನೋವು, ಕಿಬ್ಬೊಟ್ಟೆ ನೋವು, ಮತ್ತು ನಿಶ್ಶಕ್ತಿಯುಂಟಾಗಿ ಬಹಳ ಕಷ್ಟಪಡುತ್ತಿದ್ದೆನು. ಈ ಸಮಯದಲ್ಲಿ ತಮ್ಮ 'ಲೋಧ್ರ' ೨ ಬುದ್ದಿ ತರಿಸಿ ಸೇವಿಸಿದೆನು. ಅಂದಿನಿಂದ ಈ ಬಾಧೆಗಳೆಲ್ಲವೂ ಮಾಯವಾಗಿ ಸಕಾಲಕ್ಕೆ ಬಹಿಷ್ಠೆಯಾಗುತ್ತ ಶರೀರಾರೋಗ್ಯವನ್ನು ಅನುಭವಿಸುತ್ತಿದ್ದೇನೆ. ಈ ದಿವ್ಯೌಷಧಿಯನ್ನು ನಿಲ್ಲಿಸದೆ ಇನ್ನೂ ಸೇವಿಸಬೇಕೆಂದಿರುವುದರಿಂದ ಇನ್ನೂ ಎರಡು ಬುದ್ದಿ ಕಳುಹಿಸುವುದು. ಸ್ತ್ರೀಯರ ಎಲ್ಲಾ ವ್ಯಾಧಿಗೂ 'ಲೋಧ್ರ'ವು ದಿವ್ಯೌಷಧಿಯೆಂದು ನಾನು ಖಂಡಿತವಾಗಿಯೂ ಹೇಳುತ್ತೇನೆ.

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 — ತಂತಿ: «ಕೇಸರಿ» — ಫೋನ್ 3486.

ಏಜಂಟರು — ಕಾ ಕಂಪೆನಿ, (ದಿ ಊಲನ್ ಮಾರ್ಟ್) ಮಂಗಳೂರು.

ಮರುಮಕ್ಕತ್ತಾಯಂ ಮತ್ತು ಅಳಿಯಸಂತಾನದ ಕಟ್ಟಿನ ಹಿಶೆಯ ಮಸೂದೆ.

(ಲೇಖಕ: — ಕೆ. ಆರ್. ಕಾರಂತ, ಎಮ್. ಎಲ್. ಸಿ)

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಮಸೂದೆಯನ್ನು ತಯಾರಿಸುವಾಗ ನಾನು ಶ್ರೀ ಎ. ಬಿ. ಶೆಟ್ಟರಲ್ಲಿ ವಿಚಾರಿಸಿಕೊಳ್ಳಲಿಲ್ಲ — ಎಂಬ ಇನ್ನೊಂದು ಪ್ರವಾದವು ಸಮಂಜಸವಾಗಿಲ್ಲ. ನಾನು ಶ್ರೀ ಶೆಟ್ಟರು ಯಾವ ರಾಜಕೀಯ ಪಕ್ಷಕ್ಕೆ ಸೇರಿರುವರೋ ಅದಕ್ಕೆ ಸೇರಿದವನಲ್ಲ; ಅವರ ರಾಜಕೀಯಾಭಿಪ್ರಾಯಗಳು ಬೇರೆ; ನನ್ನವು ಬೇರೆ. ಅವರು ಮಂತ್ರಿ ಪಕ್ಷದವರು, ನಾನು ವಿರೋಧ ಪಕ್ಷೀಯನು. ನನ್ನ ಠರಾವುಗಳ ವಿಷಯವಾಗಿ ಅವರು ಹಿಂದೆ ವರ್ತಿಸಿದ ವಿಧಾನವು ಸುಸೂತ್ರವಾಗಿಲ್ಲ. ಹಿಂದೆ ನಾನು ಜೈನ ದಾರಂಬರ್ದ ಬಿಲ್ಲನ್ನು ತಂದಿದ್ದೆ. ಈ ಮಸೂದೆಗೆ ಜೈನ ಜಾತಿಯ ಸಾರ್ವಜನಿಕ ಸಮ್ಮತಿ ಇದ್ದ ವಿಷಯವು ಅನಂತರ ಸ್ಪಷ್ಟವಾಗಿದ್ದು ಈಗ ಅದು ಕಾನೂನಾಗಿರುತ್ತದೆ. ಈ ಮಸೂದೆಯು ಕೌನ್ಸಿಲಿನೊಳಗೆ ಪ್ರವೇಶಿಸಿದಾಗ ಶ್ರೀ ಶೆಟ್ಟರು ಮಾಡಿದ ಭಾಷಣವು ಅದನ್ನು ಸಂಪೂರ್ಣ ವಿರೋಧಿಸುವಂತಿತ್ತು. ೧೯೩೦ನೇ ಇಸವಿಯ ಮಾರ್ಚಿ ತಿಂಗಳಲ್ಲಿ ನಾನೊಂದು ಸಣ್ಣ ಸೂಚನೆಯನ್ನು ಕೌನ್ಸಿಲಿನಲ್ಲಿ ತಂದೆನು. ಅದರ ಪ್ರಕಾರ ಅವರಿಗೆ ವಿಂದರು ೫೦ ರೂಪಾಯಿಗಿಂತ ಹೆಚ್ಚಿನ ಕಸಗಳನ್ನು ವಸೂಲುಮಾಡಬಾರದೆಂದಿತ್ತು. ಇನ್ನು ಮುಂದೆ ೧೦೦ ರೂಪಾಯಿಯ ವರೆಗಿನ ಕಸಗಳನ್ನು ಮಂಜೂರು ಮಾಡುವ ಸರಕಾರದವರು ವಹಿಸಬೇಕೆಂಬುದೇ ಆ ಮಸೂದೆಯ ವಿಷಯವಾಗಿತ್ತು. ಈ ಸಂಬಂಧವಾಗಿ ಮಹಾಜನರಿಗೆ ಎಷ್ಟು ಕಷ್ಟಗಳಿವೆಯೆಂಬುದಾಗಿ ಯಾರೂ ಊಹಿಸಿಕೊಳ್ಳಬಹುದು. ಆ ಸೂಚನೆಯು ಕೌನ್ಸಿಲಿನಲ್ಲಿ ಬಹುಮತವನ್ನು ಹೊಂದಿತು. ನನ್ನ ಕಟ್ ಮೋಷನಿಗೆ ಸಮ್ಮತಿ ಕೊಡುತ್ತಿದ್ದರೆ ಮಂತ್ರಿ ಮಂಡಲವೇನೂ ಮುರಿದು ಬೀಳುತ್ತಿರಲಿಲ್ಲ. ಏಕೆಂದರೆ ಅದು ರಿವರ್ನ್ಯೂ ಖಾತೆಗೆ ಸೇರಿದ್ದು. ಕಳೆದ ಎಪ್ರಿಲ್ ತಿಂಗಳಿಂದ ಸರಕಾರದವರು ಈ ಸೂಚನೆಯನ್ನು ಅಂಗೀಕರಿಸಿಲ್ಲದೆ ಅದನ್ನು ಜಾರಿಗೆ ತಂದಿರುವರು. ಇಂತಹ ಸೂಚನೆಯ ಮೇಲೆ ಮತಗಣನೆಯಾಗುವಾಗ ಮಂತ್ರಿಪಕ್ಷದಲ್ಲಿ ಕೆಲವು ಪ್ರಮುಖರು ಕೂಡಾ ಅನುಕೂಲವಾಗಿ ಮತಕೊಟ್ಟರು. ಶ್ರೀ ಶೆಟ್ಟರು ತಟಸ್ಥರಾಗಿದ್ದರು. ಆ ಪ್ರಕಾರ ಕೌನ್ಸಿಲಿನೊಳಗಿನ ಕಾರ್ಯಕ್ರಮಗಳ ಸಂಬಂಧವಾಗಿ ನಾನು ಶೆಟ್ಟರಿಂದ ಬೋಧನೆಯನ್ನು ಹೊಂದದಿದ್ದರೆ ಅದಕ್ಕೆ ಕ್ಷಮೆ ಇರಲಿ. ಬಂಟರ ಮಹಾಸಭೆಯು ನನ್ನ ಮಸೂದೆಯನ್ನು ವಿರೋಧಿಸುವುದಕ್ಕೆ ಮೇಲಿನದಷ್ಟೇ ಕಾರಣವಾಗಿದ್ದರೆ — ಬೇರಾವ ಕಾರಣಗಳನ್ನೂ ಸಭಾಕಾರ್ಯಕ್ರಮವು ತೋರಿಸುವುದಿಲ್ಲ — ಇಂತಹ ಸ್ಥಿತಿಗಾಗಿ ನಾನು ವ್ಯಸನಪಡಬೇಕಾಗಿದೆ.

ಮಹಾ ಸಭೆಯಲ್ಲಿ ಹಾಜರಿದ್ದ ಕೆಲವು ಮಹನೀಯರಿಂದ ಮದ್ರಾಸು ಕೌನ್ಸಿಲಿನ ಮಾಜಿ ಸದಸ್ಯರಾದ ಶ್ರೀ. ಜಿ. ನಾಗಪ್ಪ ಹೆಗ್ಗಡೆಯವರು ನನ್ನ ಮಸೂದೆಯನ್ನು ಸಮರ್ಥಿಸಿದರೆಂದು ತಿಳಿಯುತ್ತದೆ. ಸಭಾ ಕಾರ್ಯಕ್ರಮದಲ್ಲಿ ಈ ವಿಷಯವು ಕಾಣುವುದಿಲ್ಲ. ಇದಲ್ಲದೆ ಯಾವ ಮಹನೀಯರು ಸಭೆಯಲ್ಲಿ ನನ್ನ ಮಸೂದೆಯನ್ನು ನಿರ್ದಾಕ್ಷಿಣ್ಯವಾಗಿ ಖಂಡನೆ ಮಾಡಿದರೋ ಅವರು ಖಾಸಗಿ ಮುಂದೆ ನನ್ನ ಮಸೂದೆಯ ಒಂದು ಪ್ರತಿಯಾದರೂ ಓದಲಿಲ್ಲವೆಂದು ಸಭೆಯಲ್ಲಿ ಹಾಜರಿದ್ದವರಿಂದಲೇ ಕೇಳುತ್ತೇನೆ. ಮಸೂದೆಯ ಯೋಗ್ಯತಾಯೋಗ್ಯತೆಗಳು ಹೇಗೂ ಇರಲಿ, ಅದನ್ನು ಸರ್ವಪ್ರಕಾರದಿಂದಲೂ ಖಂಡಿಸಲೇ ಬೇಕೆಂದು ಯೋಚಿಸಿದ್ದ ಅವರಿಗೆ ಬಿಲ್ಲಿನಲ್ಲಿರುವ ವಿಷಯಗಳು ಏನೆಂದು ಬಹುಶಃ ಅವಶ್ಯವಾಗಿ ಕಾಣಲಿಲ್ಲ.

ಮಸೂದೆಯ ಗುಣಾವಗುಣಗಳನ್ನು ಸ್ವಾಗತಾಧ್ಯಕ್ಷರಾಗಲಿ, ಮಹಾಸಭೆಯ ಅಧ್ಯಕ್ಷರಾಗಲಿ ಪ್ರಸ್ತಾಪಿಸಲಿಲ್ಲ. ಅಮೂಲಾಗ್ರವಾಗಿ ಆ ಮಸೂದೆಯು ದೋಷಪೂರಿತವೆಂದು ಅವರ ಭಾವನೆಯಾಗಿರಬೇಕು. ಹೇಗಿದ್ದರೂ ಈ ರೀತಿಯ ಸ್ವಭಾವವು ಶ್ರೇಯಸ್ಕರವಲ್ಲ. ಮಸೂದೆಯು ಸರ್ವಸಂಪೂರ್ಣವೆಂದಾಗಲಿ, ಅದಕ್ಕೆ ಬಹು ಜನಸಮ್ಮತಿ ಇದೆಯೆಂದಾಗಲಿ ನಾನು ಹೇಳುವುದಿಲ್ಲ. ಇದು ವಾದಾಸ್ಪದವಾದ ಮಸೂದೆ; ಹೀಗಾಗಿ ಮತಭೇದಗಳು ಇರುವುದು ಸ್ವಾಭಾವಿಕ. ಹಿಂದಿನ ಮತಸಂಸ್ಕರಣ ಕಾನೂನು ಮಂಜೂರಾದಾಗ, ಸ್ವಪ್ರಯೋಜನ ಸಾಧಕರು ಹೇಗೆ ಬೊಬ್ಬೆಯನ್ನೆಬ್ಬಿಸಿದರೋ ಅದೇ ರೀತಿಯಲ್ಲಿ ಈ ಮಸೂದೆಯ ವಿಷಯವಾಗಿ ಗಲಭೆ ಎಬ್ಬಿಸಲೂ ಸಾಕು. ಆದರೆ ಕೆಲವೇ ವರ್ಷಗಳ ಹಿಂದೆ, ಬಂಟ ಸಮಾಜದ ಕೆಲಮಂದಿ ಗೃಹಸ್ಥರಾದರೂ ಮಸೂದೆಯ ಮುಖ್ಯ ತತ್ವವಾದ 'ವಿಭಾಗಯೋಗ್ಯತೆ'ಯನ್ನು ಕುರಿತು ಅನುಕೂಲಾಭಿಪ್ರಾಯವುಳ್ಳವರಾಗಿದ್ದಂತೆ ತೋರುತ್ತದೆ. ಆದುದರಿಂದ ಈ ಸಮಸ್ಯೆಯನ್ನು ಅಲಕ್ಷಿಸುವದರ ಬದಲಾಗಿ ಚೆನ್ನಾಗಿ ಉದ್ಘಾಟನೆಮಾಡಬೇಕಾಗಿದೆ. ನನ್ನ ಮಸೂದೆಯ ಮುಖ್ಯ ತತ್ವಗಳು ಇವು: — ಕೆಲಸಂದರ್ಭಗಳಲ್ಲಿ ಒಂದು ತವಾಡಿನವರು ಕುಟುಂಬದ ಆಸ್ತಿಯಲ್ಲಿ ಪಾಲನ್ನು ಕೇಳಬಹುದು. ತಿರುವಾಂಕೋಡಿನಲ್ಲಿರುವಂತೆ ಪ್ರತಿ ವ್ಯಕ್ತಿಯು ತಲೆಪ್ರಕಾರ ಹಿಶೆಯನ್ನು ಕೇಳುವುದಿಲ್ಲ. ಅಂತಹ ವಿಭಾಗದಲ್ಲಿ ಪ್ರತಿ ತವರಿಗೆ ಅದರಲ್ಲಿರುವ ಜನ ಸಂಖ್ಯೆಯ ಪ್ರಕಾರ ಹಿಶೆ ಸಿಕ್ಕುವುದು. ಈ ವಿಷಯವಾಗಿ ತವರುಗಳ ಸಂಖ್ಯೆ ಪ್ರಕಾರ ಪಾಲಾಗಬೇಕಲ್ಲದೆ ಜನ ಸಂಖ್ಯೆಯ ಪ್ರಕಾರ ಆಗಬಾರದಾಗಿ ಯೋಗ್ಯ ಸೂಚನೆಗಳು ಬಂದಿವೆ. ಯಾವುದಾದರೊಂದು ಕುಟುಂಬಕ್ಕೆ ವಿಭಾಗವು ಬೇಡವಾದಲ್ಲಿ ಹಾಗೆಯೇ ಅದನ್ನು ಕೆಲವು ಸಂದರ್ಭದಲ್ಲಿ ರಜಿಸ್ಟ್ರಿಮಾಡುವುದಕ್ಕೂ, ವಿಭಾಗ ಆಗಬೇಕೆಂದು ಮುಂದೆ ಕುಟುಂಬದವರು ವಿಭಾಗವಮಾಡಿಸುವಂತೆ ಇದರಲ್ಲಿ ಅನುಕೂಲತೆಗಳಿವೆ. ಮಸೂದೆಯಲ್ಲಿ ಇಂತಹ ಮತ್ತು ಇತರ ಬದಲಾವಣೆಗಳನ್ನು ಮಾಡಬೇಕಾದರೆ ಮೊದಲು ಮಸೂದೆಗೆ ಕೌನ್ಸಿಲಿನಲ್ಲಿ ಪ್ರವೇಶ ದೊರೆಯಬೇಕು. ಏಕೆಂದರೆ ಮಸೂದೆಯನ್ನು ಯಾವ ಸ್ವರೂಪದಲ್ಲಿ ತರುವುದಕ್ಕೆ ಅಪ್ಪಣೆಯು ದೊರಕಿದೆಯೋ ಅದೇ ಸ್ವರೂಪದಲ್ಲಿ ಅದರ ಪ್ರವೇಶವಾಗಬೇಕು. ಮಸೂದೆಯು ಕೌನ್ಸಿಲಿನಲ್ಲಿ ಯಾವಾಗ ಬರುವುದೆಂದು ನಾನು ಹೇಳಲಾರೆನು. ಏಕೆಂದರೆ ಬಹುಕಾಲ ಮಸೂದೆ ತರುವುದಕ್ಕೆ ಗವರ್ನರರ ಅಪ್ಪಣೆಯನ್ನು ನಿರೀಕ್ಷಿಸಲಾಯಿತು. ಕೌನ್ಸಿಲಿನಲ್ಲಿ ಮಸೂದೆಯನ್ನು ತರುವುದಕ್ಕೆ ಅವಕಾಶ ಕೇಳುವ ಸೂಚನೆ ಕೊಡುವಾಗ ಮಸೂದೆಗೆ ಒಪ್ಪಿಗೆ ಕೊಡುವ ವಿಷಯವು ವಿಚಾರಿಸಲಾಗುವುದೆಂದು ಇದೇ ಕಳೆದ ವೇಳೆಗೆ ಉತ್ತರ ದೊರೆಯಿತು. ನಾನು ಬರುವ ಕೌನ್ಸಿಲಿನಲ್ಲಿಯೇ ಮಸೂದೆಯ ಬಗ್ಗೆ ಸೂಚನೆ ಕೊಡುತ್ತಿದ್ದೆನು. ಆದರೆ ಮುಂದೆ ಬೇರೆ ಅಪ್ಪಣೆಯಾಗುವ ವರೆಗೆ ಕ್ಲಿಯರ್ ಭಾಗ ವಹಿಸಬಾರದೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಆಜ್ಞೆಯಾಗಿದೆ. ಈ ಮಧ್ಯೆ ನನ್ನ ಸಹೋದ್ಯೋಗಿಗಳಾದ ಶ್ರೀ ಕೆ. ಮಾಧವನ್ ನಾಯರ್, ಎಂ. ಎಲ್. ಸಿ. ಇವರು ನನ್ನ ಮಸೂದೆಗಿಂತ ಹೆಚ್ಚು ವ್ಯಾಪಕವಾದ ಇನ್ನೊಂದು ಮಸೂದೆಯನ್ನು ತಯಾರಿಸಿ ಸರಕಾರದವರ ಅಪ್ಪಣೆಗೆ ಕಳುಹಿಸಿದ್ದಾರೆ, ಅದು ಮರುಮಕ್ಕತ್ತಾಯಂ ಮತ್ತು ಅಳಿಯ ಸಂತಾನಕ್ಕೆ ಸಂಬಂಧಿಸಿದ ವಿವಾಹ, ವಿಭಾಗ, ಅದಲತ್ತು, ದತ್ತು ಸ್ವೀಕಾರ, ಇತ್ಯಾದಿ ವಿಷಯಗಳನ್ನು ಒಳಕೊಂಡಿದೆ. ಮಲೆಯಾಳದವರ ಅಗತ್ಯಗಳಿಗನುಸಾರವಾಗಿ ನಾಯರರ ಮಸೂದೆಯು ಸಿದ್ಧವಾಗಿಯೇ ಇದೆ. ಎರಡೂ ಮಸೂದೆಗಳೂ ಏಕಕಾಲದಲ್ಲಿ ಕೌನ್ಸಿಲಿನಲ್ಲಿ ಬಂದರೆ ಅವರಿಗೆಷ್ಟೋ ಪ್ರಯೋಜನವಾಗಬಹುದು. ಆಗ ಎರಡು ಮಸೂದೆಗಳೂ ಒಂದೇ ಕೌನ್ಸಿಲಿನ ಒಂದೇ ವಿಮರ್ಶಕ ಮಂಡಳಿಗೆ (Select Committee) ಒಪ್ಪಿಸಲ್ಪಡುವವೆಂದೂ, ಎಲ್ಲಾ ವಿಧದ ಅಭಿಪ್ರಾಯಗಳ ಪ್ರಕಟನೆಗೆ ಅವಕಾಶ ದೊರೆವುದೆಂದೂ, ಈಗ ವ್ಯಾಖ್ಯಾನಮಾಡಬೇಕೆಂದಿರುವ ಅಳಿಯ ಸಂತಾನ ಕಟ್ಟಿಗೆ ಒಳಪಟ್ಟ ಮಲಬಾರಿನ ಮತ್ತು ದಕ್ಷಿಣ ಕನ್ನಡದ ಮುಸಲ್ಮಾನ ಮತ್ತು ಹಿಂದೂ ಮೆಂಬರರಿಗೂ ಅದರಲ್ಲಿ ಅವಕಾಶ ದೊರೆವುದೆಂದೂ ನನ್ನ ನಿರೀಕ್ಷೆಯಿದೆ. ವಿಮರ್ಶಕ ಮಂಡಳಿಯು ಈ ಜಿಲ್ಲೆಗಳಲ್ಲಿ ಸಂಚಾರಮಾಡಿ, ಎಲ್ಲಾ ರೀತಿಯ ಅಭಿಪ್ರಾಯಗಳನ್ನು ತಿಳಿದುಕೊಂಡು ವಿಷಯಗಳನ್ನು ಚೆನ್ನಾಗಿ ಮಥಿಸಿದ ಅನಂತರವೇ ಮಸೂದೆಯು ಕಾನೂನಿಗೆ ಪರಿಣಮಿಸುವುದು.

ತನ್ಮಧ್ಯೆ ಈ ಕಟ್ಟುಗಳನ್ನಾಚರಿಸುವ ಜಾತಿಯವರಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದು ಏನೆಂದರೆ — ನಿಷ್ಪಕ್ಷಪಾತ ದೃಷ್ಟಿಯಿಂದ ಈ ಮಸೂದೆಯನ್ನು ಪರಿಶೀಲಿಸಿ, ಬೇಕಾದ ಸಲಹೆಗಳನ್ನು ಕೊಡತಕ್ಕದ್ದು. ಯಾವ ಕಟ್ಟಿನ ವಿಷಯವಾಗಿ ಜನರಲ್ಲಿ ಅತೃಪ್ತಿ ಇದೆಯೋ ಅದನ್ನು ಸರ್ವಪ್ರಕಾರದಿಂದಲೂ ಸುಧಾರಿಸಲು ಪ್ರಯತ್ನಿಸಬೇಕು. ಎಲ್ಲವೂ ಸರಿ ಎಂದರೆ ವಸ್ತುಸ್ಥಿತಿಯನ್ನು ಅಲಕ್ಷಿಸಿದಂತೆ ಆಗುವುದು. ಮದ್ರಾಸು ಹೈ ಕೋರ್ಟಿನ ಮುಖ್ಯ ಜಡ್ಜರಾಗಿದ್ದ ಮತ್ತು ವಿಚಕ್ಷಣ ಹ್ಯಾ ಕೋರ್ಟ್ ಚೀಫ್ ಜಡ್ಜರಾಗಿಯೂ, ಅಳಿಯ ಸಂತಾನದ ಪರಿಜ್ಞಾನವುಳ್ಳವರಾಗಿಯೂ ಇದ್ದ ಸರ್. ಮುರ್ರೇ ಕೌಟ್ಸ್ ಟ್ರೋಟರ್ — ಇವರು ಅಳಿಯ ಸಂತಾನದ ವಿಷಯದಲ್ಲಿ ಸ್ವಾಭಿಪ್ರಾಯಗಳನ್ನು ಕೊಡುವಂತೆ ಮದ್ರಾಸು ಸರಕಾರದವರಿಂದ ಪ್ರಾರ್ಥಿತರಾದಾಗ ಈ ರೀತಿಯಲ್ಲಿ ಹೇಳಿದರು, — ಅಳಿಯ ಸಂತಾನ ಮತ್ತು ಮರುಮಕ್ಕತ್ತಾಯ ಎಂಬ ಎರಡು ಕಟ್ಟುಗಳೂ ಮಾನಾಸ್ಪದ ಅನಾಗರಿಕತೆಯ ಕುರುಹುಗಳಾಗಿವೆ. ಹೊರತು ಅಂಥ ಜನಸಮಾಜದ ಯಾವ ಅಂಶವಾದರೂ ಆಗಲಿ, — ಅವುಗಳಿಂದ ವಿಮೋಚನೆ ಹೊಂದಬೇಕೆಂದು ಅಭಿಪ್ರಾಯಪಟ್ಟರೆ ಅವರ ಅಭಿಮತವನ್ನು ಕೈಗೂಡಿಸಬೇಕೆಂದು ನನ್ನ ಅಭಿಪ್ರಾಯ. ಇನ್ನೊಬ್ಬ ಹೈ ಕೋರ್ಟು ಜಡ್ಜರಾಗಿದ್ದ ಶ್ರೀ. ಶೇಷಗಿರಿ ಅಯ್ಯರರು ಈ ರೀತಿಯಲ್ಲಿ ಹೇಳಿದರು: — ಅಭಿವೃದ್ಧಿ ಹೊಂದಬೇಕೆಂದಿರುವವರಿಗೆ ಅಳಿಯ ಸಂತಾನ ಅಥವಾ ಮರುಮಕ್ಕತ್ತಾಯಂ ಕಟ್ಟುಗಳು ಸಂಪೂರ್ಣ ಆತಂಕಗಳಾಗಿವೆ. ಅಳಿಯಸಂತಾನ ಕಟ್ಟಿನವರೇ ಆಗಿದ್ದು ಹೈ ಕೋರ್ಟು ಜಡ್ಜರಾಗಿದ್ದ ಕೃಷ್ಣನ್ ಇವರು ಹೀಗೆಂದರು: — ಅಳಿಯ ಸಂತಾನ ಅಥವಾ ಮರುಮಕ್ಕತ್ತಾಯಂ ಕಟ್ಟುಗಳಿಂದ ಅಸ್ವಾಭಾವಿಕತೆಯನ್ನೂ ಮಲಬಾರಿನಲ್ಲಿ ಅದು ಇದರಿಂದುಂಟಾಗುವ ದುಷ್ಪರಿಣಾಮಗಳು ಯಾವುವೆಂದು ನನಗೆ ಚೆನ್ನಾಗಿ ತಿಳಿದಿವೆ.

ಇಂಥವರ ಮಾತುಗಳನ್ನೂ ವಸ್ತುಸ್ಥಿತಿಯನ್ನೂ ಅಲ್ಲಗಳೆದು ಎಲ್ಲವೂ ಚೆನ್ನಾಗಿದೆಯೆಂದು ಯಾವ ಪರಿವರ್ತನೆಯೂ ಬೇಡವೆಂದೂ ಹೇಳುವವರು ಧೀರರೇ ಸರಿ. ಇನ್ನೊಂದು ಪ್ರಶ್ನೆಯೆಂದರೆ ನನ್ನ ಮಸೂದೆಯು ಸಂಬಂಧಪಟ್ಟ ಜಾತಿಗಳಲ್ಲಿ ಬಹುಮಂದಿಯ ಆದರಕ್ಕೆ ಪಾತ್ರವಾಗುವುದೇ ಎಂಬುದು. ಅಂತಹ ವಿಚಾರಣೆಯು ನಡೆದಾಗ, ಬಂಟರ ಸಮಾಜದಲ್ಲಿಯೂ ಬಹುಜನರು — ಮಸೂದೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗಿದ್ದರೂ — ಈ ಮಸೂದೆಯು ಬೇಕೆಂದು ಹೇಳುವವರೇ ಎಂದು ನಾನು ತೋರಿಸಬಲ್ಲೆನು. ಆಗ, ಅಳಿಯ ಸಂತಾನ ಕಟ್ಟಿನ ಪೂರ್ಣ ಅಧಿಕಾರಿಗಳೆಂದು ತೋರಿಸಲ್ಪಡುವ ಶ್ರೀ ಶೆಟ್ಟರಿಗೆ, ಬಂಟರ ಸಮಾಜಕ್ಕೆ ಬೇಕಾದರೆ, ಆ ಸಮಾಜವನ್ನು ಬಿಲ್ಲಿನ ವ್ಯಾಪನೆಯಿಂದ ಹೊರಪಡಿಸುವುದಕ್ಕೆ ಸುಸಂದರ್ಭ. ಆದರೆ ಯಾರಿಗೆ ಮಸೂದೆ ಬೇಕೋ ಆ ಜಾತಿಯವರ ಬಗ್ಗೆಗಾಗಿ ನಾನು ಮಾಡುವ ಕೆಲಸಗಳನ್ನು ನಿಲ್ಲಿಸುವುದು ಅಸಾಧ್ಯ. ಈ ಮಧ್ಯೆ ಶ್ರೀ ಶೆಟ್ಟರಾದರೂ ತಮ್ಮ ಸ್ವಂತ ಒಂದು ಬಿಲ್ಲನ್ನು ತಯಾರಿಸಿ ಕೌನ್ಸಿಲಿನ ಮುಂದೆ ಇಡಬಾರದೆಂಬ ಅಥವಾ ಇದನ್ನು ಖಂಡಿಸುವ ಜವಾಬ್ದಾರಿಯನ್ನು ಅನ್ಯರಿಗೆ ಬಿಟ್ಟುಕೊಡದೆ ಈ ವಿಷಯವಾಗಿ ಸ್ವಾಭಿಪ್ರಾಯಗಳನ್ನು ಕೊಡಬಾರದೆಂಬ ನಿರ್ಬಂಧವಾದರೂ ಏನು?

AUM

Rs. 2,20,000

distributed

IN 200 CASH LOANS

from

Rs. 1000 to Rs. 10,000

without

INTEREST AND SECURITY

by

MONTHLY DRAWINGS.

WANTED.

An energetic and influential Agent and Superintendent of Agencies in every unrepresentated Taluk and District throughout India on a monthly remuneration of *Rs 50/-* and *Rs. 250/-* respectively to represent the UNIVERSAL MUTUAL AID & POOR HOUSES ASSOCIATION LTD., MADRAS.

For further particulars and prospectuses please apply with TWO ANNAS POSTAGE STAMP TO:—

Mr. M. L. Nagannah,

Chief Organizer,

289, Thambuchetty St. MADRAS.

ಸರಕಾರಿ ಆಸ್ಪತ್ರೆಗಳಲ್ಲಿನ ಡಾಕ್ಟರರು.

ಖಾಸಗಿ ಚಿಕಿತ್ಸೆ [illegible]!

(ವೈದ್ಯಕೀಯ ಖಾತೆಗಾಗಿ ರೂ. ೬,೫೦,೭೦೦ರಷ್ಟು ಬಜೆಟಿನಲ್ಲಿ ಮಂಜೂರು ಮಾಡಬೇಕೆಂದಾಗ ಶ್ರೀ ಸತ್ಯಮೂರ್ತಿಯವರು ಸರಕಾರಿ ಡಾಕ್ಟರರು ಖಾಸಗಿ ಚಿಕಿತ್ಸೆ ನಡಿಸಬಾರದೆಂಬ ವಿಷಯವನ್ನು ಚರ್ಚಿಸಲು ರೂ. ೧೦೦ ಕಡಿಮೆಮಾಡಿ ತಂದ ಸೂಚನೆಯ ಕುರಿತು ಶ್ರೀ ಎ. ಬಿ. ಶೆಟ್ಟಿ ಮಾಡಿದ ಭಾಷಣ.)

ಕಳೆದ ವರ್ಷ ಬಜೆಟಿನ ಚರ್ಚೆಯ ಸಂದರ್ಭದಲ್ಲಿ ಸರಕಾರಿ ವೈದ್ಯರು ಖಾಸಗಿ ಚಿಕಿತ್ಸೆ ನಡಿಸದಂತೆ ಮಾಡುವ ಕುರಿತು ವಿಸ್ತಾರವಾಗಿ ಮಾತಾಡಿದ್ದೆನು. ಸರಕಾರಿ ವೈದ್ಯರಿಗೆ ಖಾಸಗಿ ಚಿಕಿತ್ಸೆ ನಡಿಸುವ ಕುರಿತು ಕೊಡಲ್ಪಟ್ಟಿರುವ ಸ್ವಾತಂತ್ರ್ಯವನ್ನವರು ದುರುಪಯೋಗಿಸುವರೆಂಬ ಆರೋಪದ ಕುರಿತು ನಾನು ಕೌನ್ಸಿಲಿನಲ್ಲಿ ಮಾಡಿರುವ ಪ್ರಶ್ನೆಯ ನಂತರ ಆ ವಿಷಯದಲ್ಲಿ ಮಾನ್ಯ ಮಂತ್ರಿಗಳೊಡನೆ ಪತ್ರವ್ಯವಹಾರ ನಡೆದುದರ ಪರಿಣಾಮವಾಗಿ ಸರ್ಜನ್ ಜನರಲರು ಸಿವಿಲ್ ಮೆಡಿಕಲ್ ಕೋಡಿನಲ್ಲಿ ಆ ಸಂಬಂಧವಾಗಿರುವ ನಿಯಮಗಳನ್ನು ಸರಕಾರಿ ವೈದ್ಯರ ಗಮನಕ್ಕೆ ತಂದು, ಸದರಿ ನಿಯಮಗಳನ್ನಾದರೂ ಉಲ್ಲಂಘಿಸಿದಲ್ಲಿ ಕಠಿಣ ಕಾರ್ಯ ಕೈಕೊಳ್ಳಲಾಗುವದೆಂದು ಗುಪ್ತ ಸರ್ಕ್ಯುಲರನ್ನು ಕಳುಹಿಸಿರುವರು. ಆ ವಿಷಯಕವಾಗಿ ಬಹಿರಂಗವಾದ ಸರಕಾರಿ ಹುಕುಮೊಂದನ್ನು ಜ್ಯಾರಿಮಾಡುವುದು ಒಳ್ಳೇದಾಗಿದ್ದಿತು. ಇದರಿಂದ ಸರಕಾರಿ ಡಾಕ್ಟರರು ಎಷ್ಟರಮಟ್ಟಿಗೆ ಖಾಸಗಿ ಚಿಕಿತ್ಸೆ ನಡಿಸಬಹುದೆಂಬ ನಿಯಮಗಳನ್ನು ಜನರು ತಿಳಿಯುವಂತಾಗಿ ಅವುಗಳ ಉಲ್ಲಂಘನೆಯನ್ನು ಸಾರ್ವಜನಿಕ ಅಭಿಪ್ರಾಯವು ಫಲಕಾರಿಯಾಗಿ ತಡೆಗಟ್ಟಬಹುದು. ಅನೇಕ ಕಾರಣಗಳಿಂದ ಖಾಸಗಿ ಚಿಕಿತ್ಸೆಯನ್ನು ರೋಗಪರೀಕ್ಷೆಗೆ ಮಾತ್ರ ನಿರ್ಬಂಧಿಸುವುದು ಅವಶ್ಯವಾಗಿದೆ. ಇಂಥಾ ನಿರ್ಬಂಧದಿಂದ ಸರಕಾರಿ ವೈದ್ಯರು ಆಸ್ಪತ್ರೆಗಳ ತಮ್ಮ ನ್ಯಾಯವಾದ ಕೆಲಸಕ್ಕೆ ಚೆನ್ನಾಗಿ ಗಮನಕೊಡುವಂತಾಗುತ್ತದೆ. ಇದರಿಂದ ಸರಕಾರಿ ಡಾಕ್ಟರರು ತಮಗೆ ದೊರೆಯುವ ಅನುಕೂಲತೆಗಳಿಂದ, ಖಾಸಗಿ ವೈದ್ಯರೊಡನೆ ಪೋಟಿಮಾಡಿ ಹೆಚ್ಚಿನ ಖಾಸಗಿ ಚಿಕಿತ್ಸೆಯನ್ನೆಲ್ಲಾ ತಮ್ಮ ಹಕ್ಕಿನದಾಗಿ ಮಾಡಿಕೊಳ್ಳದಂತಾಗುತ್ತದೆ. ಹೀಗೆ ಸ್ವತಂತ್ರ ವೈದ್ಯಕೀಯ ವೃತ್ತಿಯವರು ಹೆಚ್ಚಿನ ಚಿಕಿತ್ಸಾನುಕೂಲತೆಯನ್ನು ಪಡೆಯಬಹುದು. ಮತ್ತು ನಮ್ಮ ತರುಣರು ಅಧಿಕ ಸಂಖ್ಯಾತರಾಗಿ ವೈದ್ಯಕೀಯ ಶಿಕ್ಷಣ ಪಡೆಯಹೋಗಿ ಖಾಸಗಿ ಚಿಕಿತ್ಸಕರಾಗಿ ಕೆಲಸಮಾಡುವಂತೆ ಪ್ರೋತ್ಸಾಹಕೊಟ್ಟಂತಾಗುವುದು. ಈ ವಿಧದ ಪ್ರೋತ್ಸಾಹದಿಂದ ಸ್ವತಂತ್ರ ಚಿಕಿತ್ಸೆ ನಡಿಸುವವರ ಸಂಖ್ಯೆಯನ್ನು ಹೆಚ್ಚಿಸಿ, ಇತರ ದೇಶಗಳಂತೆ ಅವರೇ ವೈದ್ಯಕೀಯ ಚಿಕಿತ್ಸೆಗೆ ಸಂಪೂರ್ಣ ಜವಾಬ್ದಾರಿಯಾಗಿ ಮಾಡಲ್ಪಟ್ಟು, ಸರಕಾರವು ತನ್ನ ನ್ಯಾಯುತವೂ ಶ್ರೇಷ್ಠವಾಗಿರುವ ಸಾರ್ವಜನಿಕ ಆರೋಗ್ಯವನ್ನು ಹೆಚ್ಚಿಸುವ ಕುರಿತು ಏಕಾಗ್ರವಾಗಿ ಕೆಲಸ ಮಾಡಲೆಡೆಯಾಗುವುದು.

ಕಾರಾಗೃಹ ಆಡಳಿತದ ಸುಧಾರಣೆ.

(ಕಾರಾಗೃಹಗಳ ಮೇಲ್ವಿಚಾರಣೆಗಾಗಿ ಬಜೆಟಿನಲ್ಲಿ ರೂ. ೩೭,೬೦೦ ಮಂಜೂರು ಮಾಡುವ ಸಂದರ್ಭದಲ್ಲಿ ಅವುಗಳ ಸುಧಾರಣೆ ಮತ್ತು ಕೈದಿಗಳನ್ನು ಒಳ್ಳೇ ರೀತಿಯಿಂದ ನೋಡುವ ಕುರಿತು ಚರ್ಚಿಸಲು ಶ್ರೀ ಎ. ಬಿ. ಶೆಟ್ಟಿ ರೂ. ೧೦೦ ಕಡಿಮೆ ಮಾಡಿ ಸೂಚನೆ ತಂದು ಮಾಡಿದ ಭಾಷಣ.)

ಪ್ರೊಬೇಶನ್ ಆಕ್ಟಿನ ಅವಶ್ಯಕತೆ.

ಮದ್ರಾಸ್ ಪ್ರಾಂತದ ಪ್ರಕೃತದ ಕಾರಾಗೃಹಗಳ ಆಡಳಿತದಲ್ಲಿ ಮುಖ್ಯ ಸುಧಾರಣೆಗಳು ಕೆಲವು ನಡೆದಿರುತ್ತವೆ. ಮತ್ತು ಜೈಲ್ ಕಮಿಟಿಯು ಮಾಡಿರುವ ಹೆಚ್ಚಿನ ಶಿಫಾರಸುಗಳು ಇಲ್ಲಿ ಸ್ವೀಕರಿಸಲ್ಪಟ್ಟಿವೆ. ಆದರೆ ಕ್ರಿಮಿನಲ್ ಕಾನೂನು ವ್ಯವಹಾರ ಮತ್ತು ಕಾರಾಗೃಹ ಆಡಳಿತವು ಇನ್ನೂ ತನಕ ಸಾಕಷ್ಟು ಸುಧಾರಿಸಲ್ಪಟ್ಟಿರುವುದಿಲ್ಲ. ನಮ್ಮ ಪ್ರಾಂತದ ಕಾರಾಗೃಹಗಳ ಇನ್ಸ್‌ಪೆಕ್ಟರ್ ಜನರಲಾಗಿರುವ ಲೆಪ್ಟನೆಂಟ ಕರ್ನಲ್ ಕೆಮರೋನ್‌ರವರು ಈ ವಿಷಯದಲ್ಲಿ ಪ್ರಾಗತಿಕ ಅಭಿಪ್ರಾಯವುಳ್ಳವರಾಗಿರುವರೆಂಬುದು ಸಂತೋಷ ವಿಷಯವಿದೆ. ಇವರು ನಮ್ಮ ಪ್ರಕೃತದ ಆಡಳಿತವು ಎಷ್ಟು ಮಾತ್ರಕ್ಕೂ ಆದರ್ಶನೀಯವಿರುವುದಿಲ್ಲೆಂದಿರುವರು. ಸಾರ್ವಜನಿಕ ಹಣವನ್ನು ಕ್ರಮತಪ್ಪಿ ವೆಚ್ಚಮಾಡದೆ, ಹಿಂದೂದೇಶದ ಕಾರಾಗೃಹ ಆಡಳಿತವನ್ನು, ಕೈದಿಗಳನ್ನು ಕಡಿಮೆಮಾಡುವ ಉದ್ದೇಶದಿಂದ ಆಧುನಿಕ ದಂಡನಾ ಕ್ರಮದಂತೆ ಸುಧಾರಿಸುವುದರಲ್ಲಿ ಹೆಚ್ಚಿನ ಕೆಲಸಮಾಡಬಹುದು. ನಾನಾ ವಿಧದ ಕೈದಿಗಳಿರುವರು: ದೀರ್ಘ ಮತ್ತು ಅಲ್ಪಕಾಲ ಶಿಕ್ಷೆಯನ್ನನುಭವಿಸುವವರು, ತರುಣ ಅಪರಾಧಿಗಳು, ಮತ್ತು ಕಳ್ಳತನಗಾರಿಕೆಯ ಅಭ್ಯಾಸವೇ ಆಗಿರುವವರೇ ಮೊದಲಾದವರನ್ನು ದಾರಿಗೆ ಹಚ್ಚಲು ಪರಿಣಾಮಕಾರಿಯಾಗಿ ಕೈಕೊಳ್ಳಬೇಕಾದ ಕಾರ್ಯದ ವಿಷಯದಲ್ಲಿ, ಕೈದಿಗಳನ್ನು ನಿವಾರಿಸುವ ಮತ್ತು ಕಡಿಮೆಮಾಡುವ ಕುರಿತು ಟಿಪ್ಪಣಿಯೊಂದನ್ನು ಬರೆದು ಕೆಲವು ಸೂಚನೆಗಳನ್ನು ಮಾಡಿರುವರು. ನಮ್ಮ ಕಾರಾಗೃಹಗಳಲ್ಲಿರುವ ಹೆಚ್ಚಿನ ಕೈದಿಗಳು ಅಲ್ಪಕಾಲ ಶಿಕ್ಷೆ ಪಡೆಯುವ ಪ್ರಥಮ ಅಪರಾಧಿಗಳಿರುವರು. ನಮಗೆ ದೊರಕಿರುವ ಕಾರಾಗೃಹಗಳ ಆಡಳಿತ ವರದಿಯ ಕಡೆಯಾಗಿನ ವರ್ಷದಲ್ಲಿ ೧೨,೯೯೩ ಶಿಕ್ಷೆಗಳು ಅಂದರೆ ಒಟ್ಟು ಶಿಕ್ಷೆಗಳ ೫೦ನೇ ಅಂಶವು ೬ ತಿಂಗಳುಗಳಿಗಿಂತ ಕಡಿಮೆಯಾಗಿವೆ. ಇವುಗಳಲ್ಲಿ ೧೩೮೮ನ್ನು ಮಾತ್ರ ಕ್ರಿಮಿನಲ್ ಪ್ರೊಸೀಜರ್ ಕೋಡಿನ ೫೬೨ನೇ ಸೆಕ್ಷನಿನ ಮೇರೆಗೆ ಪರೀಕ್ಷಾರ್ಥವಾಗಿ ಬಿಡುಗಡೆಮಾಡಲಾಗಿದೆ. ಆದಾಗ್ಯೂ ಇವರು ಪೋಲೀಸ್ ಮೇಲ್ವಿಚಾರಣೆಯಲ್ಲಿರದೆ ಯೋಗ್ಯರಾದ ಪ್ರೊಬೇಶನ್ ಆಫೀಸರರ ಅಧೀನರಾಗಿರಬೇಕೆಂಬುದೇ ನಾವು ಕೋರುವುದಾಗಿದೆ. ಪ್ರೊಬೇಶನ್ ಆಕ್ಟಿಂದಾಗದೆ ಇಂತಹ ಪ್ರೊಬೇಶನ್ ಆಫೀಸರರನ್ನು ನೇಮಿಸಲು ಸರಕಾರಕ್ಕೆ ಸಾಧ್ಯವಿಲ್ಲ. ಈ ಪ್ರೊಬೇಶನ್ ಪದ್ಧತಿಯು ನಾಗರೀಕದೇಶಗಳಲ್ಲಿ ಅನುಸರಿಸಲ್ಪಟ್ಟಿರುವ ಅತ್ಯಂತ ಪ್ರಮುಖ್ಯ ಕಾರಾಗೃಹ ಸುಧಾರಣೆಗಳಲ್ಲೊಂದಾಗಿದೆ. ಇಂಗ್ಲೆಂಡಿನಲ್ಲಿ ೧೯೦೭ರಲ್ಲಿಯೇ ಈ ಪ್ರೊಬೇಶನ್ ಆಕ್ಟನ್ನು ಮಂಜೂರು ಮಾಡಿರುವರು. ಅಂದಿನಿಂದ ಇಂಗ್ಲೆಂಡಿನವರು ಅದನ್ನು ಹೆಚ್ಚೆಚ್ಚಾಗಿ ಉಪಯೋಗಿಸುತ್ತ ಬಂದರು. ೧೯೩೨ರಲ್ಲಿ ಆ ಆಕ್ಟಿನ ಮೇರೆಗೆ ೪೦ ಸಾವಿರವನ್ನು ಜನರು ನಡೆಸಲ್ಪಟ್ಟಿರುವರು. ಆ ಇಂಗ್ಲೀಷ್ ಆಕ್ಟಿನ ರೀತಿಯ ಪ್ರೊಬೇಶನ್ ಆಕ್ಟೊಂದನ್ನು ಇಲ್ಲಿಯೂ ಜ್ಯಾರಿಗೆ ತರುವ ಅವಶ್ಯಕತೆಯನ್ನು ಕಾರಾಗೃಹಾಡಳಿತದ ವರದಿಗಳಲ್ಲಿ ಆಗಾಗ್ಗೆ ವ್ಯಕ್ತಗೊಳಿಸಲಾಗಿದೆ. ನಮ್ಮಲ್ಲಿ ಪ್ರೊಬೇಶನ್ ಆಕ್ಟು ಜ್ಯಾರಿಯಲ್ಲಿದ್ದಿದ್ದರೆ ೧೩೮೮ಕ್ಕಿಂತಲೂ ಅತಿ ಹೆಚ್ಚಿನವರಿಗೆ ಅದರ ಪ್ರಯೋಜನವನ್ನು ದೊರಕಿಸಿಕೊಡುವಂತಾಗುತ್ತಿತ್ತು. ಸರಿಯಾಗಿ ನಡಿಸಲ್ಪಡುವ ಪ್ರೊಬೇಶನ್ ಆಕ್ಟಿನಿಂದ ಅಲ್ಪಾವಧಿ ಶಿಕ್ಷೆವಿಧಿಸಲ್ಪಟ್ಟ ಪ್ರಥಮ ಕೈದಿಗಳನ್ನು ದುಷ್ಕೃತ್ಯಗಳ ಜೀವನದಿಂದ ಸಂರಕ್ಷಿಸಬಹುದಲ್ಲದೆ ಸರಕಾರಕ್ಕೂ ಅವರನ್ನು ಜೈಲಿಗೆ ಹಾಕುವ ವೆಚ್ಚವು ಉಳಿದಂತಾಗುವುದು. ಈ ವಿಷಯದಲ್ಲಿ ಇಂಡಿಯಾ ಸರಕಾರವು ಕಾನೂನೊಂದನ್ನು ಮಾಡುವ ಯೋಚನೆಯಲ್ಲಿದೆಯೆಂದು ತಿಳಿದುಬರುತ್ತದೆ. ಇನ್ನು ಮುಂದೆ ಹೆಚ್ಚಿನ ವಿಳಂಬ ಮಾಡದೆ ಈ ಕುರಿತು ಕಾನೂನನ್ನು ಮಾಡುವ ಅವಶ್ಯಕತೆಯನ್ನು ಮಾನ್ಯ ಲಾ ಮೆಂಬರರು ಸರಕಾರದ ಗಮನಕ್ಕೆ ತರುವರೆಂದು ನಂಬುತ್ತೇನೆ.

ನಿಸ್ಸಾಲ ಕಳ್ಳರುಗಾರರಿಗೆ ಪ್ರತ್ಯೇಕ ವಸಾಹತು

ಎರಡನೇದಾಗಿ ಮನೋದೌರ್ಬಲ್ಯವುಳ್ಳವರ ಕುರಿತು ವಿಚಾರಿಸುವ. ಇಂಥವರು ಕಳ್ಳರ ಸರಹದ್ದಿನಲ್ಲಿರುವರೆಂದೆಣಿಸಲ್ಪಡುತ್ತಾರೆ. ಅವರು ಉಪದ್ರಕಾರಕರಿದ್ದು ಕಾರಾಗೃಹದಿಂದ ಹೊರಬಿಡಲ್ಪಟ್ಟರೆ ತಮ್ಮ ಸಂಬಂಧಿಕರಿಂದ ವರ್ಜಿಸಲ್ಪಡುತ್ತಾರೆ. ತಮ್ಮ ಜೀವನ ಸಾಗಿಸಲು ಅವರಿಗೆ ಅಸಾಧ್ಯವಾದುದರಿಂದ ಅವರು ಪುನಹ ಕಾರಾಗೃಹಕ್ಕನೇ ಸೇರುವರು. ಕಾರಾಗೃಹಗಳ ಇನ್ಸ್‌ಪೆಕ್ಟರ್ ಜನರಲರ ಅಭಿಮತದಂತೆ ಈ ತರಗತಿಯ ಕೈದಿಗಳು ನಿರಂತರವಾಗಿ ಪ್ರತ್ಯೇಕವಾಗಿರಿಸಲ್ಪಟ್ಟು ಸಂಸ್ಥಾನದಲ್ಲಿ ನಡಸಲ್ಪಡುವ ಅವಶ್ಯಕತೆಯುಳ್ಳವರಿರುತ್ತಾರೆ. ಸಾಧ್ಯವಿದ್ದಷ್ಟು ಬೇಗ ಈ ವಿಷಯಕ್ಕೂ ಲಾ ಮೆಂಬರರು ಗಮನಕೊಡುವರೆಂದು ನಾನು ಆಶಿಸುತ್ತೇನೆ. ಇಂಥವರನ್ನು ಪ್ರತ್ಯೇಕಿಸಿ ಅಗತ್ಯವಿರುವ ರೀತಿಯಲ್ಲಿ ಅವರನ್ನು ನೋಡುವಂತೆ ಸತ್ತಮಾಡಿ ಕಂಡುಹಿಡಿಯುವ ತಜ್ಞರು ನಮಗೆ ಬೇಕಾಗಿದ್ದಾರೆ. ಕಳ್ಳರು ಮಾಡುವ ಅಭ್ಯಾಸವೇ ಆಗಿರುವ ತರಗತಿಯವರು ಅಪರಾಧಿಗಳ ಸಂಖ್ಯೆಯಲ್ಲಿ ಶೇಕಡಾ ೫೦ರಷ್ಟಿರುತ್ತಾರೆ. ಇವರಲ್ಲಿ ಎಂದೂ ಸರಿದಾರಿಗೆ ಬಾರದ ಒಂದು ಜಾತಿಯವರಿರುತ್ತಾರೆ. ಅವರಿಗೆ ಯಾವ ಶಿಕ್ಷೆಯು ಭಯವೂ ಇಲ್ಲ. ಅವರನ್ನು ಯಾವ ತರದ ಸದುಪಾಯದಿಂದಲೂ ಸರಿಮಾರ್ಗಕ್ಕೆ ಹಚ್ಚುವುದು ಅಸಾಧ್ಯವು. ಅವರು ಪೋಲೀಸರಿಗೆ ನಿರಂತರವೂ ಆತುರಕ್ಕೆ ಕಾರಣಭೂತರಾಗಿರುತ್ತಾರೆ. ಕೋರ್ಟುಗಳು ಅವರ ಕುರಿತು ಹತಾಶವಾಗಿರುತ್ತವೆ. ಸಾರ್ವಜನಿಕರಿಗೆ ಅವರು ಉಪದ್ರಕಾರಿಗಳಾಗಿರುತ್ತಾರೆ. (ಸಶೇಷ)

ಫೆಲೂನಾ

ಹೆಂಗಸರಿಗೂ ಹುಡುಗಿಯರಿಗೂ ಮಾತ್ರ

ಖಂಡಿತ ಗುಣಕಾರಿಯಾದ ಔಷಧಿ.

ಸರ್ವಸಾಮಾನ್ಯವಾದ ಅರಿಷ್ಟಗಳಿಗಿಂತಲೂ ಫೆಲೂನಾ ಮಾತ್ರೆಗಳು ವಿಶೇಷ ಗುಣಕಾರಿಯಾಗಿವೆ. ನಿಜವಾದ ಆರೋಗ್ಯದ ಮುಖ್ಯಸ್ಥಳವಾದ ಇಂದ್ರಿಯಗಳನ್ನು ಅವು ಪುಷ್ಟಪಡಿಸಿ, ಸರಿಪಡಿಸಿ, ಬಲಪಡಿಸಿ, ಇಂದ್ರಿಯ ವ್ಯಾಪಾರಗಳು ಚೆನ್ನಾಗಿ ನಡೆಯುವಂತೆ ಮಾಡುವವು. ಕೆಲವು ಸಮಯದ ವರೆಗೆ ಫೆಲೂನಾ ಮಾತ್ರೆಗಳನ್ನು ಸೇವಿಸುವುದರಿಂದ, ಬಳಲಿದ ಹೆಂಗಸು, ಅಥವಾ ಶಕ್ತಿಹೀನ ಹುಡುಗಿಯು ಶಕ್ತಿವಂತಳಾಗುವಳು. ಆರೋಗ್ಯವು ತುಂಬಿಕೊಳ್ಳುವುದು. ಸೇವನೆಯು ಮುಂದರಿಯುತ್ತಿರುವಷ್ಟಕ್ಕೂ, ಪ್ರಕೃತಿಸ್ವಭಾವ ಕ್ರಮಕಾಲದಂತೆ ಇಂದ್ರಿಯಗಳು ಕೆಲಸಮಾಡುವವು. ಫೆಲೂನಾ ಮಾತ್ರೆಗಳ ಸಹಾಯದಿಂದಲೇ ಇವೆಲ್ಲ ಪ್ರಯೋಜನವುಂಟಾಗುವುದು.

ಫೆಲೂನಾ ಮಾತ್ರೆಗಳನ್ನು ಸೇವಿಸುವ ಹೆಂಗಸರೂ, ಹುಡುಗಿಯರೂ, ಅಂತರಿಕ ಆರೋಗ್ಯವನ್ನು ಚೆನ್ನಾಗಿ ಅನುಭವಿಸುವರು. ಅದು ಮುಖದಲ್ಲಿ ಆರೋಗ್ಯದರ್ಶಕವು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಔಷಧ ವ್ಯಾಪಾರಿಗಳಲ್ಲೂ, ಸ್ಟೋರ್‌ಗಳಲ್ಲೂ, ಬಾಟಲ್ 1ಕ್ಕೆ ರೂ. 2 - 4 - 0ರಂತೆ ಮಾರಲ್ಪಡುವವು. ವ್ಯಾಪಾರದ ಷರತ್ತುಗಳಿಗೆ ಇವರಿಗೆ ಬರೆಯಿರಿ —

ದಿ ರಿಪ್ರಸೆಂಟೇಟಿವ್, ಪೋಸ್ಟ್ ಬಾಕ್ಸ್, 7[illegible], ಮುಂಬಾಯಿ.

ದಾದಾ ಎಂಡ್ ಕೋ., ಚ್ಯಾನಾ ಬಜಾರ್ ರೋಡ್, ಮದರಾಸು.



15A

ಅತಿಯಾಶೆಯ ಪರಿಣಾಮ

(ಕತೆ)

ಹಾರಾಡಿ ಲಕ್ಷ್ಮಣ ಶೈ.

(ಮುಂದುವರಿದುದು)

— ೬ —

ಪ್ರಾತಃಕಾಲದಲ್ಲಿ ಕಾರ್ಖಾನೆಯಲ್ಲಿ ಕೆಲಸಮಾಡುವ ಸೇವಕರೂ ಬಂದು ವಸಂತ ಭಟ್ಟರೊಡನೆ "ಸ್ವಾಮಿ, ಸರ್ವ ನಾಶವಾಯಿತು! ಕಾರ್ಖಾನೆಯೆಲ್ಲಾ ಬೂದಿಯಾಯಿತು!" ಎಂದು ಅಳುತ್ತ ಹೇಳಿದರು. ದೈಲೂರಿಗೆ ಹೋಗಿದ್ದ ಜನಾರ್ಧನನು ಕಾರ್ಖಾನೆಯು ಸುಟ್ಟು ಬೂದಿಯಾದುದನ್ನು ಕಂಡು ತಲೆಯನ್ನು ಬಡಿದುಕೊಂಡು ಗೋಳಿಟ್ಟನು. ವಸಂತ ಭಟ್ಟರು ಕಾರ್ಖಾನೆಗೆ ಹೋಗಿ ಬೂದಿಯ ರಾಶಿಯನ್ನು ನೋಡಿದರು, ಕೆಲವು ನಿಮಿಷ ಅತ್ತಿತ್ತ ತಿರುಗಾಡಿದರು, ಆದರೆ ಏನೂ ಮಾತನಾಡಲಿಲ್ಲ. ಅವರ ಮುಖದಲ್ಲಿ ವ್ಯಸನದ ಚಿಹ್ನೆಯಾದರೂ ತೋರಿ ಬರುತ್ತಿರಲಿಲ್ಲ. ವಸಂತ ಭಟ್ಟರ ಚಿತ್ತದಲ್ಲಿ ಏನೊಂದೂ ಚಿಂತೆಯಿಲ್ಲದಿದ್ದುದನ್ನು ಕಂಡು ಸಂದೇಹದಿಂದ ಜನಾರ್ಧನನು "ಅಯ್ಯಾ ಈ ಕಾರ್ಖಾನೆಯನ್ನು ನೀವು ಇನ್ಶ್ಯೂರು ಮಾಡಲಿಲ್ಲವೇ?" ಎಂದು ಪ್ರಶ್ನಿಸಿದನು.

"ನಾಲ್ವತ್ತು ಸಾವಿರ ರೂಪಾಯಿಗಳಿಗೆ ಇದನ್ನು ಇನ್ಶ್ಯೂರು ಮಾಡಿರುವೆನು." ಎಂದು ಭಟ್ಟರು ಉತ್ತರ ಕೊಟ್ಟರು.

"ಇನ್ಶ್ಯೂರು ಕಂಪೆನಿಯ ಹೆಸರೇನು?" ಎಂದು ಜನಾರ್ಧನನು ಪ್ರಶ್ನಿಸಿದನು.

"ಅದರ ಹೆಸರು 'ಹಂಬಗ್ ಫಾಯರ್ ಇನ್ಶ್ಯೂರೆನ್ಸ್ ಕಂಪೆನಿ'ಯೆಂದಾಗಿದೆ" ಎಂದು ಭಟ್ಟರು ಉತ್ತರವಿತ್ತರು.

"ಅಯ್ಯಾ, ನೀವಿದನ್ನು ಮಾಡುವಿರೆಂಬುದನ್ನು ನಾನು ಮುಂಚೆಯೇ ತಿಳಿದುಕೊಂಡಿರುವೆನು" ಎಂದು ಜನಾರ್ಧನನು ಹೇಳಿದನು.

"ಅವುದನ್ನು?" ಎಂದು ಭಟ್ಟರು ಪ್ರಶ್ನಿಸಿದರು.

"ಇನ್ನು ಬಿಚ್ಚಿ ಹೇಳಬೇಕೇ? ತಿಳಿಯಲಿಲ್ಲವೇ? ಈ ಲಂಕಾ ಕಾಂಡದ ಕೆಲಸವನ್ನು! ವಸ್ತುಗಳ ಬೆಲೆಯನ್ನು ನಾಲ್ಕು ಪಾಲು ಹೆಚ್ಚಿಸಿ ಲೆಕ್ಕದ ಪುಸ್ತಕಗಳಲ್ಲಿ ಕಾಣಿಸಬೇಕೆಂಬುದಾಗಿ ಹೇಳಿದುದೇಕೆ? ನೀವು ಕಂಪೆನಿಗೆ ಮೋಸಮಾಡುವುದಕ್ಕಾಗಿ ಹೀಗೆ ಮಾಡಿದುದೆಂಬುದನ್ನು ನಾನು ಕಂಪೆನಿಯವರಿಗೆ ತಿಳಿಸುವೆನು" ಎಂದು ಜನಾರ್ಧನನು ಉತ್ತರಕೊಟ್ಟನು.

ಈ ಮಾತನ್ನು ಕೇಳಿದೊಡನೆಯೇ ವಸಂತ ಭಟ್ಟರ ಮುಖವು ಬಿಳಿಚಿಹೋಯಿತು. ಜನಾರ್ಧನನು ಹೇಳುವುದೇನೆಂಬುದು ಅವರಿಗೆ ತಿಳಿಯಿತು. ಇವರ ಕುಯುಕ್ತಿಯು ಕಂಪೆನಿಗೆ ತಿಳಿದು ಬಂದರೆ ತಪ್ಪಿಕ್ಕೆ ಗುರಿಯಾಗಬೇಕಾದೀತಲ್ಲವೇ? ತಾನು ಜನಾರ್ಧನನನ್ನು ಕಾರ್ಖಾನೆಯ ಮೆನೇಜರನಾಗಿ ನೇಮಿಸಿದುದಕ್ಕೆ ಭಟ್ಟರು ತನ್ನನ್ನು ತಾನೇ ದೂರಿಕೊಂಡರು. ಇನ್ನು ಮಾತನಾಡಿ ಪ್ರಯೋಜನವೇನು? ಆ ಮೇಲೆ ಭಟ್ಟರು ಜನಾರ್ಧನನನ್ನು ಕುರಿತು "ಜನಾರ್ಧನಾ, ನೀನು ಅನಾವಶ್ಯಕವಾಗಿ ತೊಂದರೆಗೊಳಿಸಬೇಡ. ಇಗೋ, ಈ ಐದು ರೂಪಾಯಿಯ ನೋಟು ನಿನಗೆ. ಇದನ್ನು ಚೀಲದಲ್ಲಿ ಹಾಕಿಕೊಂಡು ಸುಮ್ಮಗೆ ಮನೆಗೆ ನಡೆ" ಎಂದು ಹೇಳಿದರು.

ಅದಕ್ಕೆ ಜನಾರ್ಧನನು "ಎಷ್ಟು? ಐದು ರೂಪಾಯಿಯೇ? ಐನೂರು ರೂಪಾಯಿಗಳ ಕೆಳಗಿನ ಮಾತಾಗದು. ಕೊಡುವುದಾದರೆ ಐನೂರು ರೂಪಾಯಿಗಳನ್ನು ಕೊಡಬೇಕು. ಐನೂರು ರೂಪಾಯಿಗಳಿಗೆ ಒಂದೇ ಒಂದು ಪೈ ಕಡಮೆಯಾದರೆ ನಾನು ತೆಗೆದುಕೊಳ್ಳುವವನಲ್ಲ. ಅಷ್ಟು ನೀವು ಕೊಡದಿದ್ದರೆ ನಿಮ್ಮ ವಂಚನೆಯ ಕಾರ್ಯವನ್ನು ಪ್ರಕಟಗೊಳಿಸುವೆನು" ಎಂದನು.

ವಸಂತ ಭಟ್ಟರು ಭೀತ ಸ್ವರದಿಂದ "ಜನಾರ್ಧನಾ, ನನ್ನೊಡನೆ ಇದ್ದುದೆಲ್ಲವೂ ಹೋಯಿತು. ಈಗ ನಾನು ನಿನಗೆ ಐನೂರು ರೂಪಾಯಿಗಳನ್ನು ತಂದುಕೊಡುವುದೆಲ್ಲಿಂದ?" ಎಂದು ಪ್ರಶ್ನಿಸಿದರು.

"ಇಷ್ಟವಿದ್ದರೆ ಕೊಡಿರಿ. ಇಲ್ಲವಾದರೆ ನನಗೆ ಕಂಪೆನಿಯವರೇ ಕೊಡುವರು" ಎಂದು ಜನಾರ್ಧನನು ಹೇಳಿದನು.

ವಸಂತ ಭಟ್ಟರು ದೀನಭಾವದಿಂದ "ಅಪ್ಪಾ ನನ್ನೊಡನೆ ಇನ್ನೇನೂ ಉಳಿದಿಲ್ಲ. ನೀನು ಇನ್ನು ನನಗೆ ತೊಂದರೆಕೊಡಬೇಡ" ಎಂದು ಹೇಳಿದರು.

ಆದರೆ ಜನಾರ್ಧನನೆಂದರೆ ಸಾಮಾನ್ಯ ಪುರುಷನಲ್ಲ. ವಸಂತ ಭಟ್ಟರು ದೀನಭಾವದಿಂದ ಹೇಳುತ್ತಿರುವುದನ್ನು ಕೇಳಿದರೆ ಎಂಥಾ ಕಲ್ಲೆದೆಯಾದರೂ ಕರಗಿ ನೀರಾಗಬೇಕು. ಜನಾರ್ಧನನು ಮಾತ್ರ ಭಟ್ಟರು ಆವ ರೀತಿಯಲ್ಲಿ ಹೇಳಿದರೂ ಒಪ್ಪಲಿಲ್ಲ. ಆತನು "ಹಾಗಾದರೆ ನೀವು ಈ ಮುಂಚೆ ಬ್ಯಾಂಕಿನಲ್ಲಿ ಹಣವಿಟ್ಟ ಬಾಬ್ತು ನಿಮಗೆ ಬರಬೇಕಾದ ಬಡ್ಡಿಯಿದೆ. ಅದು ಸಾಧಾರಣ ಐನೂರು ರೂಪಾಯಿಯಾಗುತ್ತದೆ. ಅದನ್ನು ನನಗೆ ಕೊಡಿಸಿರಿ" ಎಂದು ಹೇಳಿದನು.

ಆ ಮೇಲೆ ವಸಂತ ಭಟ್ಟರು ಬ್ಯಾಂಕಿನಿಂದ ತನಗೆ ಬರಬೇಕಾದ ಬಡ್ಡಿಯನ್ನು ಜನಾರ್ಧನನಿಗೆ ಕೊಡುವುದೆಂದರೆ ಜನಾರ್ಧನನು ಕೂಡಲೇ ಮೂಡಬಿದಿರೆಗೆ ಹೋಗುವುದಾಗಿಯೂ, ಕಾರ್ಖಾನೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಗುಪ್ತವಾಗಿ ಇಡುವುದಾಗಿಯೂ ನಿಶ್ಚಯವಾಯಿತು. ನಿಶ್ಚಿತವಾದಂತೆ ಮರುದಿವಸ ವಸಂತ ಭಟ್ಟರೂ ಜನಾರ್ಧನನೂ ಬ್ಯಾಂಕಿಗೆ ಹೋದರು. ಅಲ್ಲಿ ವಸಂತ ಭಟ್ಟರಿಗೆ ಬಡ್ಡಿಯ ಬಾಬ್ತು ಬರಬೇಕಾದ ಹಣವನ್ನು ಬ್ಯಾಂಕಿನವರಿಂದ ಪಡೆದುಕೊಂಡು ಜನಾರ್ಧನನಿಗೆ ಕೊಟ್ಟದ್ದಾಯಿತು. ಹಣವು ದೊರೆತೊಡನೆಯೇ ಜನಾರ್ಧನನು 'ಮೋಟಾರ್ ಬಸ್ಸ'ನ್ನು ಹತ್ತಿಕೊಂಡು ಮೂಡಬಿದಿರೆಗೆ ಹೊರಟು ಹೋದನು. ವಸಂತ ಭಟ್ಟರು ಮನೆಗೆ ಹೊರಟರು. ಪಥದಲ್ಲಿ ಬರುತ್ತಿರುವಾಗ ವಾರ್ತಾ ಪತ್ರಿಕೆಗಳನ್ನು ಮಾರುವ ಹುಡುಗನೊಬ್ಬನು ಅವರಿಗೆ ಸಿಕ್ಕಿದನು. ಭಟ್ಟರು ಒಂದು ದೈನಿಕ ಪತ್ರಿಕೆಯನ್ನು ಕೊಂಡುಕೊಂಡರು. ಅದರ ಎರಡನೆಯ ಪುಟವನ್ನು ನೋಡುವಾಗ ಈ ವಾರ್ತೆಯು ತೋರಿ ಬಂದಿತು:—

"ವಂಚನೆಯ ವಿಮೆಯ ಕಂಪೆನಿ"

"ಗ್ರೇಟ್ ಹಂಬಗ್ ವಿಮೆಯ ಕಂಪೆನಿ" ಎಂಬ ಹೆಸರಿನ ಸಂಘವೊಂದರ ಜಾಹೀರಾತುಗಳು ಹಲವು ವರ್ತಮಾನ ಪತ್ರಿಕೆಗಳಲ್ಲೆಲ್ಲ ಪ್ರಕಾಶಿತವಾಗಿದ್ದುವು. ಈಗ ಕೇಳುವಾಗ ಆ ಹೆಸರಿನ ಕಂಪೆನಿಯೇ ಇಲ್ಲವೆಂಬುದಾಗಿ ತಿಳಿದು ಬಂದಿದೆ. ಪತ್ರಿಕೆಗಳಲ್ಲಿ ಪ್ರಕಟಿತವಾದ ಆ ಕಂಪೆನಿಯ ಪರಿಚಾಲಕರ, ಮತ್ತು ಸದಸ್ಯರ ಹೆಸರುಗಳೆಲ್ಲವೂ ಕೇವಲ ಕಲ್ಪಿತವಾದವುಗಳೆಂಬುದಾಗಿ ವಾರ್ತೆಯು ಬಂದಿರುತ್ತದೆ. ಆ ಕಂಪೆನಿಯ ಕಾರ್ಯಾಲಯವೆಲ್ಲಿದೆ ಎಂಬುದು ಯಾರಿಗೂ ತಿಳಿದಿಲ್ಲ. ಆದರೂ ಕಂಪೆನಿಯ ಪ್ರತಿನಿಧಿಗಳೆಂಬುದಾಗಿ ಇಬ್ಬರು 'ಮೋಟಾರ್ ಕಾರು'ಗಳಲ್ಲಿ ಸಂಚರಿಸಿ ಜನರಿಗೆ ಮೋಸಮಾಡುತ್ತಿರುವರು. ಇಂಥವರ ವಿಷಯದಲ್ಲಿ ಪತ್ರಿಕೆಯನ್ನೋದುವ ಮಹಾಶಯರೆಲ್ಲರೂ ಜಾಗ್ರತೆಯಿಂದಿರಬೇಕು. ಸಂದೇಹ ತೋರಿದೆಡೆಯಲ್ಲಿ ಯುಕ್ತ ಅಧಿಕಾರಿಗಳಿಗೆ ತಿಳಿಸಿ ಬಿಡುವುದುತ್ತಮ."

ಈ ವಾರ್ತೆಯನ್ನು ಓದಿದೊಡನೆಯೇ ವಸಂತ ಭಟ್ಟರಿಗೆ ಚತುರ್ದಿಕ್ಕುಗಳಲ್ಲಿಯೂ ಅಂಧಕಾರವು ತೋರಿತು. ತಾನು ಇನ್ನು ಮಾಡುವುದೇನೆಂಬುದು ಅವರಿಗೆ ತಿಳಿಯಲಿಲ್ಲ. ಅವರು ತನ್ನಷ್ಟಕ್ಕೆ "ಅಯ್ಯೋ, ವಿಧಿಯೇ, ನಾನು ನನ್ನ ಯಾಚಕನಾಗಬೇಕಾಯಿತಲ್ಲ! ನನ್ನ ದುರ್ಗತಿಯೇ!!! ಅತಿಯಾಶೆಯಿಂದ ಸರ್ವ ನಾಶವಾಯಿತು. ನನ್ನ ಧನವೂ ಹೋಯಿತು. ಮಾನವೂ ಹೋಯಿತು. ಪ್ರತಿಷ್ಠೆಯೂ ಮಾಯವಾಯಿತು. ಸತ್ಕೀರ್ತಿಯೂ ಲೋಪವಾಯಿತು." ಎಂದು ದುಃಖಪಟ್ಟರು. ಅವರು ಇಡೀ ಜೀವಮಾನವನ್ನು ಅಸುಖದಲ್ಲೇ ಕಳೆಯಬೇಕಾಯಿತು!

— ಸಂಪೂರ್ಣ —

'ಬರಗಾಲವು ನಿವಾರಣೆಯಾಗುವದೆಂತು?'

ಈ ಜಗತ್ತಿನಲ್ಲಿ ಹುಟ್ಟಿಬೆಳೆದ ಪ್ರತಿಯೊಬ್ಬ ಮನುಷ್ಯನು ಕೀರ್ತಿಯನ್ನೂ, ದುಡ್ಡನ್ನೂ, ಸೌಖ್ಯವನ್ನೂ ಗಳಿಸಬೇಕೆಂದು ಇಚ್ಛಿಸುತ್ತಾನೆ. ಇಚ್ಛಿತ ಕಾರ್ಯವು ನೆರವೇರುವ ಸಲುವಾಗಿ ಬೇರೆ ಬೇರೆ ತರದ ಜನರು, ಬೇರೆ ಬೇರೆ ತರದ ಉದ್ಯೋಗವನ್ನು ಕೈಕೊಳ್ಳುತ್ತಾರೆ. ಯಾರು ಕೆರೆ, ಕಾಲುವೆಗಳನ್ನು ಕಟ್ಟಿಸಿ, ಪ್ರಸಿದ್ಧಿಗೆ ಬಂದರೆ, ಯಾರು ಗುಡಿ-ಗುಂಡಾರಗಳನ್ನು ಕಟ್ಟಿಸಿ ಪ್ರಸಿದ್ಧಿಗೆ ಬರುತ್ತಾರೆ. ಅದರಂತೆ ನಮ್ಮ ಜಿಲ್ಲೆಯ (ವಿಜಾಪೂರ ಜಿಲ್ಲೆಯ) ಮಿ| ಕಲೆಕ್ಟರ ಸಾಹೇಬ ನಾಯಕ ಇವರು "ಬರಗಾಲ ನಿವಾರಣ ಫಂಡು" ಎಂಬ ಒಂದು ಸಂಸ್ಥೆಯನ್ನು ತೆಗೆದಿದ್ದಾರೆ! ಇವರು ಕೈಕೊಂಡ ಕಾರ್ಯವೇನೋ ಸ್ತುತ್ಯವಿದೆ. ಆದರೆ ಅದರಿಂದ ನಮ್ಮ ಲಾಭವೇನೂ ಆಗದೆ ಹಾನಿಯೇ ಆಗಹತ್ತಿದೆ. ಬರಗಾಲವು ನಿವಾರಣ ಆಗುವ ಬದಲು ಅದಕ್ಕೆ ಪುಟವು ಕೊಟ್ಟಂತೆಯೇ ಆಗುತ್ತದೆ. ಅದು ಹ್ಯಾಗೆಂದರೆ—

ನಮ್ಮ ಹತ್ತಿರ ಯಾವ ಪದಾರ್ಥಗಳು ಇರುವುದಿಲ್ಲವೋ ಆ ಪದಾರ್ಥಗಳು ಕೊಂಡುಕೊಂಡರೂ ನಮ್ಮ ದೇಶದಲ್ಲಿ ಸಿಗುವದಿಲ್ಲವೋ, ಅಂಥ ಜಿನಸುಗಳನ್ನಾಗಲಿ, ಅಥವಾ ಪ್ರಾಣಿಗಳನ್ನಾಗಲಿ ಪರದೇಶಗಳಿಂದ ಕೊಂಡುಕೊಳ್ಳುವುದು ಯುಕ್ತವಿರುತ್ತದೆ. ಆದರೆ ಮೇಲೆ ಹೇಳಿದಂಥ ಸ್ಥಿತಿಗೆ ವೈಪರೀತ್ಯವಾಗಿ ನಡೆದರೆ, ನಮಗೆ ಹಾನಿಯುಂಟೂ ಆಗುವದಲ್ಲದೆ, ನಾವು ಮೂರ್ಖರೆಂಬ ನಾಮಾಭಿಧಾನವನ್ನು ಧರಿಸುತ್ತೇವೆ. ನಮ್ಮ ದೇಶಗಳಲ್ಲಿ ಆಕಳು, ಕೋಣ, ಹೋರಿಗಳು ದೊರಕುವದಿಲ್ಲವೋ? ದೊರಕೇ ದೊರಕುತ್ತವೆ. ಆದರೆ ಮಿ| ನಾಯಕ ಸಾಹೇಬರು ವಿಲಾಯತಿಗಳಿಂದ ಆಕಳು-ಕೋಣ-ಹೋರಿಗಳನ್ನು ತರಿಸಲಿಕ್ಕೆ ಹೇಳುತ್ತಾರೆ. ಇದೆಲ್ಲಿಯ ನ್ಯಾಯ? ಒಟ್ಟಿನ ಮೇಲೆ ಯಂತ್ರ ತಂತ್ರ ಮುಂತಾದವುಗಳಿಂದ ಪರದೇಶಗಳಿಗೆ ನಮ್ಮ ದೇಶದಿಂದ ಅಪಾರವಾದ ದ್ರವ್ಯ ಈ ಮೊದಲೆ ಹೋಗುತ್ತಿದೆ. ಇನ್ನು ಪಶು-ಪಕ್ಷಿಗಳನ್ನಿಷ್ಟು ತರಿಸಿ ಮಿ| ನಾಯಕ ಸಾಹೇಬರು ಪರದೇಶಿಯರ ಕರೆಯನ್ನು ಮತ್ತಷ್ಟು ತುಂಬಬೇಕೆಂದು ಮಾಡಿದಂತೆ ತೋರುತ್ತದೆ. ಇದರಿಂದ ನಮ್ಮ ದೇಶದ ಆರ್ಥಿಕ ಸ್ಥಿತಿಯು ಹೀನಸ್ಥಿತಿಗೆ ಬರುವದಿಲ್ಲವೋ? ನಮ್ಮ ದೇಶದಲ್ಲಿನ್ನ ಪ್ರಾಣಿಗಳು ದಿನದಿನಕ್ಕೆ ಸಂಖ್ಯೆ ಕಡಿಮೆಯಾಗಿ ಕಳೆದುಕೊಂಡು, ಈ ಮೇಲೆ ಪರದೇಶಗಳಿಂದ ಪ್ರಾಣಿಗಳನ್ನು ತರಿಸೋಣವಂತೆ! ನಮ್ಮ ದೇಶದ ಗೋವುಗಳು ಮೊದಲು ಕಟುಕರ ಕತ್ತರಿಯೊಳಗಿಂದ ಪಾರಾದರೆ ಸಾಕು.

ಯಾವದೇ ಕಾರ್ಯವಾಗಲಿ, ದುಡ್ಡಿಲ್ಲದೆ ಹೊರತಂತೂ ಕೊನೆಗಾಣುವದೇ ಇಲ್ಲವಷ್ಟೆ! ಇದರ ಸಲುವಾಗಿ ಮಿ| ನಾಯಕ ಸಾಹೇಬರು ಜನರಿಗೆ ಹಕ್ಕಿನ ಹಾಕಿ ತಾವು ತೆಗೆದ ಫಂಡಿಗೆ ದುಡ್ಡನ್ನು ತರಹಾಕಹತ್ತಿದ್ದಾರೆ. ಘಂಟಾಗಲಿ, ದಾನವಾಗಲಿ, ಧರ್ಮವಾಗಲಿ, ಉಂಟಾದ ಸಮಾಧಿಯಿಂದ ಜನತೆಯು ಕಡೆಯಿಂದ ಇರಕೊಳ್ಳುವದು ಮಾನ್ಯವಿರುತ್ತದೆ. ಆದರೆ ನಮ್ಮ ದೇಶವು ಈಗ ಬರದಿಂದ ಪಾರಾಗದೆ ನರಳುತ್ತಿದ್ದರೂ ಫಂಡನ್ನು ನಮ್ಮ ಜನರಿಂದ ತೆಗೆದುಕೊಳ್ಳುವದು ಅತ್ಯಂತ ಅಂಥವಾದ್ದಾಗಿದೆ ಪಾಪವೂ ಹೌದು. "ಬರಗಾಲದಲ್ಲಿ ಅಧಿಕ ಮಾಸವೆಂಬಂತೆ" ಇದರಿಂದ ನಮಗೆ ಒಕ್ಕೇ ತ್ರಾಸವಾಗಿರುತ್ತದೆ. ಅವರು ಮನಸ್ಸಿನಲ್ಲಿ "ಅಪ್ಪಾ ದೇವರೆ, ನಾವೇ ಉಪವಾಸ ಸಾಯುವ ಹೊತ್ತಿನಲ್ಲಿ ಫಂಡನ್ನು ಎಲ್ಲಿಂದ ಕೊಡಬೇಕು?" ಎಂದು ಉದ್ಗಾರ ತೆಗೆಯುತ್ತಾರೆ. ಮಿ| ನಾಯಕ ಸಾಹೇಬರು ನಮ್ಮ ದೇಶಕ್ಕೆ ಹಿತಮಾಡಬೇಕೆಂದು ಬಯಸುತ್ತಿದ್ದರೆ, ಸರಕಾರ ಖಾತೆಯಲ್ಲಿರುವ ಪಿಚರನ್ನು ಕಡಿಮೆ ಮಾಡಿ, ಆ ಉಳಿದ ದುಡ್ಡನ್ನು ತಾವು ತೆಗೆದ ಫಂಡಿಗೆ ಯಾಕೆ ಕೊಡಬಾರದು? ಅಂದರೆ ಮಿಲಿಟರಿ ಖಾತೆಯ ಖರ್ಚು ಪೊಲೀಸ ಖಾತೆಯ ಖರ್ಚು ಯಾಕೆ ತಗ್ಗಿಸಬಾರದು?

ದೇಶದಲ್ಲಿ ಮಳೆ ಬೆಳೆ ಮುಂತಾದವು ಇಲ್ಲದ್ದರಿಂದಲೇ ಬರಗಾಲವು ಬೀಳುತ್ತದೆಂತಲ್ಲ. ಇಂಥ ಪ್ರಸಂಗದಿಂದ ಬಿದ್ದ ಬರವಾದರೂ ವರ್ಷ ಎರಡು ವರ್ಷ ಮೂರು ವರ್ಷ ಹೀಗೆ ಇರುತ್ತದೆ. ಬಹುದಿನಗಳ ವರೆಗೆ ಎಂದೂ ಇರಲಾರದು. ರಾಜಕೀಯ ಕಾರಣದಿಂದ ಸಂಭವಿಸಿದರೆ ಮಾತ್ರ ಬಹುದಿನಗಳ ವರೆಗೆ ಇರುತ್ತದೆ. ನಮ್ಮ ದೇಶದಲ್ಲಿ ಬರಗಾಲವಿದ್ದು ಬಹುದಿನಗಳಾದವು. ಇದಕ್ಕೆ ಮಳೆ-ಬೆಳೆ ಇಲ್ಲದ ಕಾರಣವಲ್ಲದೆ, ಪರದೇಶದಿಂದ ನಮ್ಮ ದೇಶಕ್ಕೆ ಬರುವ ಪಕ್ಕಾ ಮಾಲೂ, ನಮ್ಮ ದೇಶದಿಂದ ಪರದೇಶಕ್ಕೆ ಹೋಗುವ ಕಚ್ಚಾ ಮಾಲೂ, ಭಾರತವಾಸಿಗಳೂ ಆಂಗ್ಲರೂ ಎಂಬ ಭೇದಭಾವವೂ ಕಾರಣೀಭೂತವಾಗಿರುತ್ತವೆ. "ಬೇನೆ ಒತ್ತಟ್ಟಿಗೆ ಬರೆ ಒತ್ತಟ್ಟಿಗೆ" ಎಂಬಂತೆ ಬರಬೀಳುವುದು ಒಂದು ಕಾರಣದಿಂದ, ನಿವಾರಣೆಯಾಗುವುದು ಮತ್ತೊಂದು ಕಾರಣದಿಂದ. ಅಂದಬಳಿಕ ಅದು ನಿವಾರಣೆಯಾಗುವ ಬಗೆ ಎಂತು? ಮಹಾತ್ಮಾ ಗಾಂಧಿಯವರು "ಖಾದಿಯೇ ಸ್ವರಾಜ್ಯದ ಹಾದಿಯು! ಖಾದಿಯೇ ಸತ್ಯಯುಗದ ಪತಾಕೆಯು! ಖಾದಿಯನ್ನು ಧರಿಸಿದರೆ ಬಡಬಗ್ಗರ ಮನೆಗಳ ಮೇಲೆ ಬಂಗಾರದ ಮಳೆಯನ್ನು ಸುರಿಸಿದಂತಾಗುತ್ತದೆ!" ಎಂದು ಹೇಳಿದಂತೆ, ಖಾದಿಯನ್ನು ಧರಿಸಿ, ಪರದೇಶಿ ಅರಿವೆಯನ್ನು ಬಹಿಷ್ಕರಿಸಿಯೂ, ಸ್ವದೇಶಿ ವಸ್ತುಗಳನ್ನು ಉಪಯೋಗಿಸಿ, ಪರದೇಶಿ ವಸ್ತುಗಳನ್ನು ಬಹಿಷ್ಕರಿಸಿಯೂ ಶಾಂತತೆಯಿಂದ ಸರಕಾರದವರ ಕೂಡ ಅಸಹಕಾರದಿಂದ ನಡೆಯುವದೇ ಬರಗಾಲದ ನಿವಾರಣೆಗೆ ಉತ್ತಮವಾದ ಉಪಾಯವಿದೆ, ಬೇರೊಂದು ಉಪಾಯವಿಲ್ಲವೆಂಬುದು ನಿಶ್ಚಿತವು, ಖಂಡಿತವು, ಸತ್ಯವು.

ಮನಮೋಹನರಾವ.

ESTABLISHED 1876.

M. Ganapaya & Sons,

AYURVEDIC PHYSICIANS.

Car-Street ═══ MANGALORE, ═══ S. Kanara

(53 ವರುಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ
— ಔಷಧಗಳು.) —

1. ಅಶೋಕಾರಿಷ್ಟ ಮತ್ತು ಮಾತ್ರೆ—

ಹೆಂಗಸರ ಮುಟ್ಟಿನ ದೋಷಗಳು, ಮುಟ್ಟು ಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತಹ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರೈಸುವುದು.

ಒಂದು ಬಾಟಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣಿ—

ಘಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ಕ್ಷಣಮಾತ್ರದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲೆಜ್ವರದಿಂದ ಬಾಧಿಸಲ್ಪಟ್ಟು ಹಲವು ತರದ ಔಷಧಿಗಳನ್ನು ಉಪಯೋಗಿಸಿ, ಗುಣಹೊಂದದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ ಬಾಟ್ಲಿಯೊಂದಕ್ಕೆ 1-8-0, 3 ಬಾಟ್ಲಿಗೆ 4-2-0.

ಇವುಗಳಲ್ಲದೆ ಮಲೇರಿಯಾಗುಟಿಕೆ, ಜ್ವರಗಡ್ಡೆಯ ಮೇಲೆ ಸ್ತಂಭನ ವಟಿ, ಬಾಲಗ್ರಹ ಗುಟಿಕೆ, ಶ್ವಾಸಕಾಸ ಗುಟಿಕೆ, ಇಚ್ಛಾಭೇದಿ ಗುಟಿಕೆ, ಚ್ಯವನ ಪ್ರಾಶಾವಲೇಹ, ಧಾತುಪುಷ್ಟಿ ಲೇಹ, ಚಂದನಾಸವ ಮತ್ತು ಮಾತ್ರೆಗಳು ಇವೇ ಮೊದಲಾದ ಸಮಸ್ತ ಔಷಧಗಳು ದೊರೆಯುವವು. ಹೆಚ್ಚಿನ ವರ್ತಮಾನಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಬೇಕೆಂದಿರುವಿರಾ? ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆದ ವೇಳೆಯನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ತಿಳಿಸುವ ಮೂರು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. ೧; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ ೪ ಮಾತ್ರ. ಪ್ರತಿ ತಿಂಗಳ ಫಲಗಳನ್ನು ವಿಚಾರಪೂರ್ವಕ ಒಂದು ವರುಷದ ಜಾತಕ ಫಲ ರೂ. ೩; ಐದು ವರ್ಷದ ಫಲ ರೂ. ೬; ಪ್ರತಿ ವಿಷಯ ವಿಚಾರಪೂರ್ವಕ ಒಂದು ವರ್ಷದ ಫಲ ರೂ. ೧೦. ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ರೂ. ೩ ಟ. ೫ ಆಣೆ ೪; ನಿಮಗಾಗಿಯೇ ಬೇರೆ ಜಾದೂ ತಾಯಿತಕ್ಕೆ ರೂ. ೫೦.

ಆಂಧ್ರ ಪತ್ರಿಕೆ—(ತೆಲುಗು ದೈನಿಕ ವಾರ್ತಾಪತ್ರಿಕೆ) ಮದ್ರಾಸು ತಾ. 3-2-1924ರಲ್ಲಿ ಬರೆದುದು—ತಿರುತ್ತಣಿಯಲ್ಲಿನ ಹನೂಮಾನ್ ಜ್ಯೋತಿಷಾಲಯದ ಪಂಡಿತ ವಿ. ಕೆ. ಶಠಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. ಅದು 1923ನೇ ಇಸವಿ ನವಂಬರು ತಾ. ೧೩ರಂದು ಬರೆಯಲ್ಪಟ್ಟು ಅದರಲ್ಲಿನ ತಾತ್ಪರ್ಯವು 1924ನೇ ಇಸವಿ ಫೆಬ್ರವರಿ ತಾ. 5ರಲ್ಲಿ 7 ಘಂಟೆಗೆ ಕಾರಾಗೃಹದಿಂದ ಮಹಾತ್ಮಾಗಾಂಧಿಯವರು ಬಿಡಲ್ಪಡುತ್ತಾರೆ. ಅದರಲ್ಲಿ ಹೇಳಿದಂತೆಯೇ ನಡೆದಿದೆ. ಇದರಿಂದ ಈ ಜ್ಯೋತಿಷ್ಯರ ಅದ್ಭುತ ಶಕ್ತಿಸಾಮರ್ಥ್ಯಗಳನ್ನು ಸರ್ವರೂ ಗ್ರಹಿಸಲು ನಾವು ಶಿಫಾರಸು ಮಾಡುತ್ತೇವೆ.

V. K. Satagopachariar,
Hanuman Astrological Office,
TIRUTTANI, CHITTOOR DISTRICT,
Madras Presidency.

ವಿ. ಕೆ. ಶಠಗೋಪಾಚಾರ್ಯರ್,
ಹನುಮಾನ್ ಎಸ್ಟ್ರೊಲೋಜಿಕಲ್ ಆಫೀಸ್,
ತಿರುತ್ತಣಿ, ಚಿತ್ತೂರು ಜಿಲ್ಲಾ,
ಮದರಾಸು ಸಂಸ್ಥಾನ.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

☞ ಫೆರ್ರೊಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3—4—0 ಮಾತ್ರ.

ಪೇಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು

ಉಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು
ಡೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡ.

ಪ್ರಕಟವಾದವು. ಪ್ರಕಟವಾದವು!

ಶಾಲಾ ಹುಡುಗರಿಗೂ ಇತರರಿಗೂ ಬೇಕಾಗುವ ತರದವಿಧದ ಕೋಪಿಗೆ, ಮತ್ತು ಸಾಧಾ ಪೆನ್ಸಿಲುಗಳನ್ನು, ಪಟ್ಟಿಗಳೂ ವಿವಿಧ ಸ್ಯಾಜಿನಪ್ರಕಾರ ಇಂಕ್ ಬಾಟಲಿಗಳೂ, ಹೊಸತಾಗಿ ತರಿಸಿರುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಯಾರಾಗಿವೆ! ತಯಾರಾಗಿವೆ!!

ಎರಡನೇ ಮತ್ತು ಮೂರನೇ ದರ್ಜೆಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ

ತಿಳುವಳಿಕೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds ವಜ್ರಗಳು Diamonds

BOLA MANGESH ROW & CO.,
MANGALORE.

Agents & Direct importers of Superior Daimonds of Antwerp

ಯೋಗ್ಯ ಕ್ರಯಕ್ಕೆ, ಹೊಂಟ್‌ವರ್ಪಿನಿಂದ ತರಿಸುವ ವಜ್ರಗಳು

— ಮಾರಾಟಕ್ಕಿವೆ. —

ಬೋಳ ಮಂಗೇಶ ರಾವು.
ಮಂಗಳೂರು

ತಯಾರಾಗಿವೆ ತಯಾರಾಗಿವೆ.

ಕಾಫಿ ಪ್ಲೆಂಟರರಿಗೂ, ತೋಟಿದವರಿಗೂ

ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ಕ್ರಯಕ್ಕೂ, ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds! Diamonds!!

Ramachandra Krishna Shet
DONGERKERY, MANGALORE.

ಅತ್ಯುತ್ತಮ ಕುಂದಿಲ್ಲದ ಜಾತಿಯ (first quality Selected) ಎಂಟ್‌ವರ್ಪಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧॥ ರೂಪಾಯಿ ೨ನೇ ನಂಬ್ರ ೫ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೨೦೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ಧರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ಹೆಂಗಿನಮನೆ,
ನೆಕ್ಕಿಲ್ ಪೋಸ್ಟು ಕಡೂರ್ ಜಿಲ್ಲೆ

Edited Printed & Published by V. S. Kamath. at the M. T. A SHARADA PRESS, MANGALORE.

ಮುಂಗಡ ಚಂದಾ:— ವರ್ಷ ಒಂದಕ್ಕೆ ರೂಪಾಯಿ 2—0—0 Registered No. M. 489 ಟಪ್ಪಾಲು ಹಾಸಲು ಸೇರಿ ರೂಪಾಯಿ 2—18—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು । ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಮ್ । ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ । ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥ ೧ ॥
ದೊರೆಯುಲಹುದಮರತ್ವಗಳು ಸಾ । ಗರವ ಮಥಿಸಲು ಸುರರಿಗವರಿಂ । ಕರುಣವಾಯಿತೆ! ಮತ್ತೆ ವಿಷವ ಸುಮುಖ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಸ್ವಸ್ಥರ ತೆರದಿ ಕುಳಿತರೆ ತೆರಳ ಬಲ್ಲರೆ! ಕೊರೆಯು ಧೀರರು ನಿಶ್ಚಿತಾರ್ಥದನು ॥ ೧ ॥

ಪುಸ್ತಕ ೨೩: ಮಂಗಳೂರು, ತಾ. ೫ನೇ ಶುಕ್ರವಾರ ಜುಲಾಯಿ ೧೯೨೯. (5—7—29.) ಸಂಚಿಕೆ ೨೭

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR. Mangalore**

ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ. ಮಂಗಳೂರು.

ನಿಯಮಿತ ಮೂಲಧನ ರೂ. 3,50,000-

1. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ವಿಕ್ರಿದ ಮೂಲಧನ ರೂ. 2,25,000-
2. ತೆತ್ತು ಬಂದ ಮೂಲಧನ ರೂ. 2,12,630-
3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 1,26,700-
4. ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 3,84,218-5-0.

Statement of Affairs of the Canara Banking Corporation Udipi, Limited as on 31st May 1929

CAPITAL AND LIABILITIES.

1	Paid up Capital	Rs. 2,21,380—0—0
2	Reserve and other contingent funds	„ 1,26,700-0-0
3	Deposits	„ 16,75,321-3-11
4	Due to Bankers on ac of Overdraft and Loan a/c	„ [illegible]
5	Sundry Persons' a/c for Bills for collection as per Contra	„ 37,9[illegible]-3-10
6	Sundries including P & L items	„ 40,083-12-[illegible]
	Total	22,46,422-8-11

PROPERTY AND ASSETS

1	Premises Building, Furniture &c.	Rs. 9,265-0-0
2	Investments on G. P. Notes at cost	„ 3,84,218-5-0
3	Investments on Approved Securities	„ 18,11,552-[illegible]-4
4	Bills for collection as per Contra	„ 37,9[illegible]-3-10
5	Cash in hand & with Bankers.	„ 51,545-13-9
6	Sundries	1,872-2-0
	Total	22,46,422-8-11.

Office of the Corporation, UDIPI. 14—6—'29. **N. ANANDA RAO**, *Secretary*.

ಅಮೃತಾಂಜನ.

[illegible] ಡಬ್ಬಿಗೆ ಆಣೆ 11, ಟ. ಖ. ಬೇರೆ.

ರಿಂಗ್ ವರ್ಮ್ ಮುಲಾಮು:— [illegible] ಡಬ್ಬಿಗೆ ಆಣೆ 6, ಟ. ಖ. ಬೇರೆ.

ದಂತಮಂಜನ:— [illegible] ಡಬ್ಬಿಗೆ ಆಣೆ 4, ಟ. ಖ. ಬೇರೆ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

ಡೋಂಗರ

ಡೋಂಗರರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

ಶ್ರೀ ಸರಸ್ವತೀ ಭಂಡಾರ.

1	ಸಚಿತ್ರ ರಾಮಾಯಣ ಕಥಾ ಸಂಗ್ರಹ	1—8—0
2	ಮದನಮೋಹನ ರಾಜ'ಚರಿತ್ರೆ	0—12—0
3.	ಮಾಧವೀ ಕಂಕಣ	[illegible]—0—0
4.	ವಿಧ್ಯಾಮಂದಿರ ಕಥೆಗಳು.	2—0—0
5.	ಮಹಾಭಕ್ತ ವಿಜಯ.	3—[illegible]—0
6	ಶೃಂಗಾರ ಕುತೂಹಲ ಕಥೆಗಳು.	—12—0
7.	ಮಂದ ಭೀಮಾ	[illegible]
8.	ವಿಮಲಾ ದೇವಿ	—12—0
9	ಸೌಭಾಗ್ಯ ಲಕ್ಷ್ಮಿ	[illegible]—8—0
10.	ಧರ್ಮ ಸಾಮ್ರಾಜ್ಯಂ	1—4—0
11.	ರಾಮ ರಾಜ್ಯ	—12—0
12.	ಆನಂದ ಮಠ	1—12—0
13.	ಶಾಮನ್ನ ತಿಲೋತ್ತಮೆ	0—12—0
14	ವಚನ ಭಾರತ	1—8—0
15.	ಇಂಡಿಯನ್ ಪಿನಲ್ ಕೋಡ್	2—8—0
16	ಕ್ರಿಮಿನಲ್ ಪ್ರೊಸಿಜರ್ ಕೋಡ್	3—0—0
17.	ಲ್ಯಾಂಡ್ ರೆವೆನ್ಯೂ ಕೋಡ್	1—0—0

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ ಇನ್ನೂ ಸಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೋರ್ಟುಗಳಲ್ಲಿ ಉಪಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕಿರುತ್ತವೆ.

ವಿಳಾಸ —

ಶ್ರೀ ಸರಸ್ವತೀ ಭಂಡಾರ.
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು, ಬಂದರ್ ರೋಡ್, ಮಂಗಳೂರು

ಪತ್ರವ್ಯವಹಾರ.

ಉಡುಪಿ ತಾಲೂಕು ಬೋರ್ಡು ಉಪಾಧ್ಯಾಯರಿಗೆ [illegible] ಪ್ರತ್ಯುತ್ತರ.

ಈ ದಿವಸದ [illegible] ಉತ್ತರ ಬರೆದ ಖಾಸಗಿ ಶಾಲಾ ಉಪಾಧ್ಯಾಯರಿಗೆ [illegible] ಹೆಚ್ಚಾಗಿ ತಿಳಿದಿವೆ ಎಂದು ಅವರು ಬರೆದ ಆಕ್ಷೇಪಣೆಗಳಿಂದಲೇ ವ್ಯಕ್ತವಾಗುತ್ತದೆ. ಅವರು ಇದ್ದ ಸಂಗತಿಯನ್ನು ಇದ್ದಂತೆಯೇ ಬರೆಯಲಿಲ್ಲ. ಹೊಂಚು ನ್ಯಾಯವನ್ನು ಬರೆಯಲಿಲ್ಲ. ಅವರ ಮಾನಸಿಕತೆಯು ಸ್ವಾರ್ಥರಹಿತವಾಗಿದೆ.

[illegible] ಅಂಶವು ಗ್ರಾಂಟಿನ ರೂಪದಲ್ಲಿ ಜಿಲ್ಲಾ ಎಜ್ಯುಕೇಶನ್ ಕೌನ್ಸಿಲಿನ ಮುಖಾಂತರ ಖಾಸಗಿ ಶಾಲೆಗಳಿಗೆ ಸಿಕ್ಕುತ್ತದೆ. ಮಕ್ಕಳ್ಳುಳ್ಳವರು ಲೆಂಡಸ್ಸಿನ ಅಂಶವನ್ನು ಮಾರ್ಗದ ರೂಪದಲ್ಲಿಯೂ [illegible] ರೂಪದಲ್ಲಿಯೂ ಭಾವಿಕೆರೆಗಳ ರೂಪದಲ್ಲಿಯೂ, ಮದ್ದಿನ ರೂಪದಲ್ಲಿಯೂ ಹೀಂದಲ್ಲೆ ಮಕ್ಕಳಿದ್ದವರು ಪಡೆಯುವಂತೆ ಅವರೂ ಮಕ್ಕಳಿಲ್ಲದವರೂ ಪಡೆಯುತ್ತಾರೆ. ಹಳ್ಳಿಗಳಲ್ಲಿ ಕೊಡುವ ವಿದ್ಯೆಯು ಎಲಿಮೆಂಟರಿ ತರಬ್ಬ. ಆದುದರಿಂದ ಎಲಿಮೆಂಟರಿ ಮಟ್ಟಿನ ಗ್ರಾಂಟಿನ ಅಂಶವು ಹಳ್ಳಿಗಳಿಗೆ ಸಿಕ್ಕುತ್ತವೆ. ವಿಶ್ವವಿದ್ಯಾಲಯಕ್ಕೆ ಫೀಜು [illegible] ವನ್ನು ಮಾತ್ರ ಉಪಯೋಗಿಸುವದಿಲ್ಲ. ಬೇರೆಬೇರೆ ವಿಧಾನಗಳಿಂದ ಧರ್ಮ ಸಹಾಯವು ವಿಶ್ವವಿದ್ಯಾಲಯಗಳಿಗೆ ಸಿಕ್ಕುತ್ತದೆ.

ಉಪಾಧ್ಯಾಯ ಮೆನೇಜರರ ಸಂಘ—ಈ ಸಂಘ ಸ್ಥಾಪನೆ ಮಾಡಲು ಕಾರಣವೇನಂದರೆ ಶಾಲೆಗಳಿಗೆ ಗ್ರಾಂಟನ್ನು ಹಂಚುವ ಕೆಲಸವು ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನವರದ್ದಾಗಿದೆ. ಈ ಕೌನ್ಸಿಲಿನಲ್ಲಿ ೬ ತಾಲೂಕು ಬೋರ್ಡುಗಳ ಪರವಾಗಿ ಪ್ರತಿ ಒಂದು ತಾಲೂಕು ಬೋರ್ಡಿನ ಪ್ರೆಸಿಡೆಂಟರೂ, ಒಬ್ಬ ಮೆಂಬರರೂ ಇರುವರು. ಮುನಿಸಿಪಾಲಿಟಿಯ ಪರವಾಗಿ ಅವರ ಚೆಯರ್‌ಮೆನರೂ, ಮೆಂಬರರೂ ಇರುವರು. ಇನ್ನು ಖಾಸಗಿ ಶಾಲೆಗಳ ಪರವಾಗಿ ಮಿಶನ್ ಸಂಘಗಳು ಬಹಳ ಬಲವಾಗಿನ್ನು ಅವರ [illegible] ಪ್ರತಿನಿಧಿಗಳು ಈ ಎಜ್ಯುಕೇಶನ ಕೌನ್ಸಿಲಿನಲ್ಲಿರುವರು. ಇದರಲ್ಲಿಯೂ ಕೆಥೋಲಿಕ್ ಮಿಶನ್ ಸಂಘದ ಕಡೆಯವರು ಬೇರೆ, ಪ್ರೊಟೆಸ್ಟಾಂಟ ಮಿಶನ್ ಸಂಘದ ಕಡೆಯವರು ಬೇರೆ, ಸರ್ವೆಂಟ್ಸ್ ಓಫ್ ಇಂಡಿಯಾ ಸೊಸೈಟಿಯ ಕಡೆಯವರು ಬೇರೆ ಇರುವರು. ಇವರು ತಮ್ಮ ಶಾಲೆಗೆ ಹೆಚ್ಚು ಉತ್ತಮ ತರದ ಶಾಲೆಗಳು ಎಲ್ಲಿಯೂ ಇಲ್ಲವೆಂದು ಕೌನ್ಸಿಲಿನ ಮುಂದೆ ತರುತ್ತಿರುವರು. ಇನ್ನು ದೇವಸ್ಥಾನದವರೆ, ಬಸ್ತಿಕರೆ, ಗಾಡ [illegible] ಕುಟುಂಬದವರು ಇಟ್ಟ ಶಾಲೆಗಳ ಮುಂತಾದ ದೊಡ್ಡ ಸಂಸ್ಥೆಗಳ ಕಡೆಯ ಪ್ರತಿನಿಧಿಗಳು ಇನ್ನೂ ಕೌನ್ಸಿಲಿನೊಳಗೆ ಬರಲಿಲ್ಲ. ಇನ್ನು ಈ ಖಾಸಗಿ ಶಾಲೆಗಳಲ್ಲಿ ಉಪಾಧ್ಯಾಯರೇ ಶಾಲೆಯ ಉಪಾಧ್ಯಾಯರೂ, ಮೆನೇಜರರೂ ಆಗಿರುವ ಶಾಲೆಗಳು ಇವೆ. ಇವರಿಗೆ ಕೌನ್ಸಿಲಿನಲ್ಲಿ ಪ್ರಾತಿನಿಧ್ಯವೇ ಇರಲಿಲ್ಲ. ಆದದ್ದರಿಂದ ಅಂಥಾ ಉಪಾಧ್ಯಾಯ ಮೆನೇಜರರುಗಳು ಸರಕಾರಕ್ಕೆ ಮನವಿಮಾಡಿ ತಮಗೂ ಕೌನ್ಸಿಲಿನಲ್ಲಿ ಪ್ರಾತಿನಿಧ್ಯವನ್ನು ಕೊಡಬೇಕೆಂದು ಮದರಾಸು ಸಂಸ್ಥಾನದ [illegible] ಜಿಲ್ಲೆಗಳಿಂದಲೂ ಮನವಿಮಾಡಿದರು. ಅದಕ್ಕೆ ಮದರಾಸು ಸರಕಾರದವರು ಪ್ರತಿ ಜಿಲ್ಲೆಯಲ್ಲಿ ನಿಮ್ಮದೊಂದೊಂದು ಸಂಘ ಸ್ಥಾಪನೆಮಾಡಿದರೆ ನೀವು ಸಹ ಇದ್ದೀರಿ ಎಂದು ನಮಗೆ ಗೊತ್ತಾಗುತ್ತದೆ. ನಿಮ್ಮ ಕಡೆಯಿಂದ ಇಬ್ಬರು ಪ್ರತಿನಿಧಿಗಳನ್ನು ಚುನಾಯಿಸ ಕಳುಹಿಸಿ ಎಂದು ಉತ್ತರವು ದೊರಕಿತು. ಅದಕ್ಕಾಗಿ ಈ ಸಂಘವನ್ನು ಸ್ಥಾಪನೆಮಾಡಲು ಕಾರಣವಾಯಿತು.

ಸರಕಾರದಿಂದ ಗ್ರಾಂಟು ಕೌನ್ಸಿಲಿಗೆ ಬಂದೊಡನೆಯೇ ೬ ಬೋರ್ಡುಗಳ ಮತ್ತು ಮುನಿಸಿಪಾಲಿಟಿಗಳಿಗೆ ಸರಕಾರದವರು ಕೊಟ್ಟ ಹಣವನ್ನು ತಿರುಪತಿದೇವರ ಮುಡುಪಿನಂತೆ ಅವರದ್ದೆಂದು ಒಂದೇ ಒಂದು ಪೈ ಅತ್ತ ಈಚೆ ಆಗದಂತೆ ಅವರಿಗೆ ಕೌನ್ಸಿಲಿನವರು ವಹಿಸಿಕೊಡುವರು. ಆದುದರಿಂದ ಬೋರ್ಡು ಶಾಲೆಗಳ ಮೆನೇಜರರಾಗಿರುವ ತಾಲೂಕು ಬೋರ್ಡು ಪ್ರೆಸಿಡೆಂಟರುಗಳು ತಮಗೆ ಅಷ್ಟು ಗ್ರಾಂಟು ಕೊಡಬೇಕು ಇಷ್ಟು ಗ್ರಾಂಟು ಕೊಡಬೇಕೆಂದು ಒಂದೇ ಒಂದು ಮಾತು ಎತ್ತುವ ಆಗತ್ಯವಿಲ್ಲ. ಇನ್ನು ಖಾಸಗಿ ಶಾಲೆಗಳ ಪರವಾಗಿ ಬಂದ ಸರಕಾರದ ಗ್ರಾಂಟಿನ ವಿಷಯ ಮಾತ್ರ ಚರ್ಚೆಯಾಗುತ್ತದೆ. ಇದರಲ್ಲಿ ಒಂದೇ ಹಳ್ಳಿಯಾದರೂ ಅನ್ಯದೇಶಗಳ ವಿಷಯಗಳಿಗೆ ಸಾಧಾರಣವಾದ ಹೆಚ್ಚು ಪಾಲು ಹೋಗುತ್ತದೆ. ಯಾಕೆಂದರೆ ಅವರ ಧೋರಣೆಯು ಅವರ ಶಾಲೆಗಳ ವಿಷಯ ಹೆಚ್ಚಿಗೆ ಚರ್ಚೆಮಾಡಿದರೆ ಎಬೆಕಟೆಗೆ (ಮಯಾರ್ದೆ ಕೃತುಕ್ಕೆ) ವಿರೋಧ. ನಂತರ ದೇಶಿಯ ಮಿಶನ ಸಂಘಗಳು ಎರಡನೆ ಪಕ್ಷದವರು. ಇವರ ಪ್ರತಿನಿಧಿಗಳು ಹೆಚ್ಚು ಕಲಿತ ವಿದ್ವಾಂಸರು. ಅವರ ಶಾಲೆಗಳ ಗ್ರಾಂಟಿನ ಚರ್ಚೆ ಹೇಸಂಗೆ ಮಾತ್ರ. ದೇವಸ್ಥಾನ, ಬಸ್ತಿ ಮುಂತಾದ ಶಾಲೆಗಳ ವಿಷಯ ಆ ಶಾಲೆಗಳು ಒಳ್ಳೇ ರೀತಿಯಲ್ಲಿ ನಡೆಯುತ್ತವೆಯೆಂದು ವಿದ್ಯಾಇಲಾಖಾ ಅಧಿಕಾರಿ ರಿಪಾರ್ಟುಗಳಿವೆ. ಎಲ್ಲರಿಗೂ ಹಂಚಿ ಉಳಿದ ಅಂಶವು ಉಪಾಧ್ಯಾಯರು ಮೆನೇಜರರಾಗಿದ್ದ ಶಾಲೆಗಳಿಗೆ ಸಿಕ್ಕುವ ವಾಡಿಕೆಯು ಈ ಟೀಚರ್ ಮೆನೇಜರರ ಸಂಘಸ್ಥಾಪನೆ ಯಾಗಿ ಅವರ ಪ್ರತಿನಿಧಿಗಳು ಕೌನ್ಸಿಲಿಗೆ ಹೋಗುವ ವರೆಗೆ ನಡೆಯುತ್ತಿತ್ತು. ಈಗ ಎಲ್ಲರೂ ಒಂದೇ ಶಾಲೆಯ ಮಕ್ಕಳಂತೆ ಬಂದಷ್ಟನ್ನು ಹಂಚಿ ಕೊಳ್ಳುತ್ತಾರೆಂದು ಮೂಲದಿಂದ ಕೇಳಬರುತ್ತದೆ. ಈ ಸಂಸ್ಥೆ ಹುಟ್ಟಲು ಇದೇ ಕಾರಣ, ತಿಳಿಯಿರಿ.

ಬೋರ್ಡು ಶಾಲಾ ಉಪಾಧ್ಯಾಯರನ್ನು ಈ ಸಂಸ್ಥೆಗೆ ಸೇರಿಸಿಕೊಂಡು ಪ್ರಯೋಜನವಿಲ್ಲ. ಯಾಕೆಂದರೆ, ಇದು ಶಾಲಾ ಮೆನೇಜರರ ಸಂಘವಾಗಿದೆ. ಬೋರ್ಡು ಶಾಲೆಯ ಉಪಾಧ್ಯಾಯರಾಗಲೀ, ಇತರ ಖಾಸಗಿ ಶಾಲೆಗಳ ಉಪಾಧ್ಯಾಯರಾಗಲೀ, ಅವರು ಉಪಾಧ್ಯಾಯರು ಮಾತ್ರವೇ ಆಗಿರುವರು. ಮೆನೇಜರುಗಳಲ್ಲ. ಬೋರ್ಡು ಶಾಲಾ ಮೆನೇಜರರು ಆಯಾ ತಾಲೂಕು ಬೋರ್ಡುಗಳ ಪ್ರೆಸಿಡೆಂಟರುಗಳು, ಮುನಿಸಿಪಾಲಿಟಿ ಶಾಲೆಗಳ ಮೆನೇಜರರು ಮುನಿಸಿಪಲ್ ಚೆಯರ್‌ಮೆನರು, ಬೋರ್ಡು ಮುನಿಸಿಪಾಲಿಟಿ ಶಾಲೆಗಳ ಉಪಾಧ್ಯಾಯರುಗಳ ಹಿತವನ್ನು ಸಾಧಿಸುವದಕ್ಕಾಗಿ ಇವರು ಎಜ್ಯುಕೇಶನ್ ಕೌನ್ಸಿಲಿನಲ್ಲಿ ಪ್ರತಿನಿಧಿಗಳಾಗಿರುವರು. ಬೋರ್ಡು ಶಾಲೆಗಳ ಉಪಾಧ್ಯಾಯರು ಮೂಲ [illegible] ಅಧ್ಯಾಪಕರ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದು ಬಹಳ ಸಂತೋಷ [illegible] ಸಂಘದ [illegible] ಬೋರ್ಡು ಉಪಾಧ್ಯಾಯರು [illegible] ಯನ್ನು ಸೇರಿ ಹಿಗ್ಗುತ್ತಿರುವರು. ಉಪಾಧ್ಯಾಯ ಮೆಂಬರ್ [illegible] ವನ್ನು ತರುವ ಉಪಾಧ್ಯಾಯರು ಖಾಸಗಿ ಶಾಲೆಗಳಲ್ಲಿಯೂ [illegible] ಬೋರ್ಡು ಶಾಲೆಗಳಲ್ಲಿಯೂ ಇದ್ದಾರೆ. ಕೈಹಿಂಗೆ ಬೋರ್ಡು [illegible] ಅಂದ ಹೋಗಬೇಕೆಂದರೆ ತಾಲೂಕು ಬೋರ್ಡು ಪ್ರೆಸಿಡೆಂಟರುಗಳ [illegible] ಮೆಂಬರರುಗಳ ಬಾಗಿಲನ್ನು, ಅವರ ಸ್ನೇಹಿತರ ಬಾಗಿಲನ್ನು ಕಾಯುವ ಬೋರ್ಡು ಶಾಲಾ ಉಪಾಧ್ಯಾಯರು ಎಷ್ಟೋ ಮಂದಿ ಇದ್ದಾರೆ. ಕೈಹಿಂಗೆ ಅಗಿ ಹಿರಿ ಕೆಲಸ ಸಿಕ್ಕಿ ಕಾಯಂ ಆದ ಮೇಲೆ ಇದಲ್ಲ ಮರಿತು ಹೋಗುತ್ತದೆ.

ಸಂಘದ ಅಧ್ಯಕ್ಷರು—ನಿಮ್ಮ ಸಂಘದ ಅಧ್ಯಕ್ಷರಾಗಿರುವ ಶ್ರೀಯುತ ಕಾರಂತರವರು ಅಧಿಕಾರ ತಪ್ಪನ್ನು ಮಾಡಿದ್ದಾರೆಂದು ಬರೆವದು ಸರಿಯಲ್ಲ. ಖಾಸಗಿ ಶಾಲಾ ಉಪಾಧ್ಯಾಯರ ಸಂಘಕ್ಕೇ ಬೋರ್ಡು ಶಾಲಾ ಉಪಾಧ್ಯಾಯರಿಗೆ ಇರಬಾರದು ಎಂಬ ಧ್ಯೇಯವಿಲ್ಲ. ಬೋರ್ಡು ಶಾಲಾ ಉಪಾಧ್ಯಾಯರು ತಮ್ಮಕ್ಕೆ ದೇಶಸೇವೆಯನ್ನು ಮಾಡಿಕೊಂಡಿರುವ ಶ್ರೀಕಾರಂತರವರನ್ನು ನಿಮ್ಮ ಧ್ಯೇಯಕ್ಕೆ ವಿರೋಧವಾಗಿ ನೀವು ಖಾಸಗಿ ಶಾಲಾ ಉಪಾಧ್ಯಾಯರಾದ ಅವರನ್ನು ಕರೆತಂದು ನಿಮ್ಮ ಸಂಘದ ಅಧ್ಯಕ್ಷರನ್ನಾಗಿ ಮಾಡಿದ್ದನ್ನು ನೋಡಿದರೆ ಅಧಿಕಾರ ತಪ್ಪನ್ನು ಮಾಡಿದವರು ಉಡುಪಿ ಬೋರ್ಡು ಶಾಲಾ ಉಪಾಧ್ಯಾಯರೇ ಆಗಿದ್ದೀರಿ ಎಂದು ಹೇಳಬೇಕಾಗಿದೆ. ಏಕೆಂದರೆ ಪ್ರತಿ ಒಂದು ಸಂಸ್ಥೆಗೂ, ಪತ್ರಿಕೆಗೂ, ಸಂಘಕ್ಕೂ, ಒಂದು ಧ್ಯೇಯವಿರಲೇಬೇಕು. ಮತ್ತು ಆ ಧ್ಯೇಯಕ್ಕೆ ಅನುಸಾರವಾಗಿಯೇ ಕೆಲಸ ನಡೆಸಬೇಕಲ್ಲದೆ ಅದಕ್ಕೆ ವಿರೋಧವಾಗಿ ನಡೆಸುವುದು ಸರಿಯಲ್ಲವೆಂದು ಲೋಕದಲ್ಲಿರುವ ಅನೇಕ ಸಂಸ್ಥೆಗಳನ್ನು ನೋಡಿದರೆ ತಿಳಿಯುವದು. ನಾವು ಯಾರಿಂದಲೂ ಈಗ ನಿರುಗೆ ಬರೆಯಲು ಸಮಯವಲ್ಲ. ನಾವಿಬ್ಬರೂ ಸ್ವಾರ್ಥ ಎಂಬ ಕಕ್ಕಲೆಯಲ್ಲಿ ಸಿಲುಕಿ ವಾಗ್ವಾದ ಮಾಡುತ್ತಾ ಇದ್ದೇವೆ. ಬೋರ್ಡು, ಖಾಸಗಿ, ಎಲ್ಲಾ ಒಂದೇ. ಎಲ್ಲರೂ ಎಲಿಮೆಂಟರಿ ಶಾಲಾ ಉಪಾಧ್ಯಾಯರು. ಒಂದೇ ಕೆಳವ ಮಾತೆಯ ಪುತ್ರರು ಕೆಳವ ಮಾತೆಯ ಉದ್ಧಾರಕ್ಕಾಗಿ ಕೆಲಸಮಾಡುವವರು, ಎಂಬ ಜ್ಞಾನವು ನಮ್ಮಿಬ್ಬರಲ್ಲಿ ಮೂಡಿದ ಮೇಲೆ ನಾವೂ ನೀವೂ ರಾಜ್ಯಕ್ಕೆ ಕಾಂಟರರೂ ಒಂದು ದಿನ ಉಡುಪಿ ಪುಷ್ಕರಿಣಿತೀರದಲ್ಲಿ ಕೂಡಿ ಮಾತನಾಡಿ ನೆಗಾದ ಸಂತೋಷದಿಂದ ಇರಬಹುದು. ನಮ್ಮ ಮನಸ್ಸಿನಲ್ಲಿ ಇದ್ದುದನ್ನೆಲ್ಲ ನಾವು ಹೊರಗೆ ಹಾಕುತ್ತೇವೆ. ನಿಮ್ಮ ಮನಸ್ಸಿನಲ್ಲಿದ್ದುದನ್ನು ನೀವು ಹೊರಗೆ ಹಾಕಿ ಮುಂದೆ ಸರಿಯುವ.

ಮಾಸ್ಟರ್—ಎಂದು ಹಳ್ಳಿಯವರು ಬೋರ್ಡು ಶಾಲಾ ಉಪಾಧ್ಯಾಯರಿಗೂ ಹೇಳುತ್ತಾರೆ. ಖಾಸಗಿ ಶಾಲಾ ಉಪಾಧ್ಯಾಯರಿಗೂ ಹೇಳುತ್ತಾರೆ. ಅದು ಒಂದು ವಿಶೇಷ ಆಗಾಯುವದಿಲ್ಲ. ಅದು ಹಳ್ಳಿಯವರ ಸ್ವಭಾವ. ನಾವು ಹಳ್ಳಿಯವರಿಗೆ ಬರಹ ಕಲಿಸಿ ಅವರ ಉದ್ಧಾರವನ್ನು ಮಾಡಿದ ಮಾಸ್ತರ್ ಎಂದು ಹೇಳಿಸಬೇಕು. ಅಸ್ಪೃಶ್ಯ ಉಪಾಧ್ಯಾಯರು ಖಾಸಗಿ ಶಾಲೆಗಳಲ್ಲಿಯೂ ಇದ್ದಾರೆ. ಬೋರ್ಡು ಶಾಲಾ ಉಪಾಧ್ಯಾಯರಲ್ಲಿಯೂ ಇದ್ದಾರೆ. ಬೋರ್ಡು ಶಾಲಾ ಉಪಾಧ್ಯಾಯರ ಮಕ್ಕಳಿಗೆ ಸಂಬಳ ಮಾಫಿಯಿಂದ ಕಲಿಸಲಿಕ್ಕೆ ಖಾಸಗಿ ಶಾಲಾ ಉಪಾಧ್ಯಾಯರ ಮಕ್ಕಳಿಗೂ, ತಾಲೂಕು ಬೋರ್ಡಿನ ಪೇದೆಗಳ ಮಕ್ಕಳಿಗೂ ಧರ್ಮಾರ್ಥವಾಗಿ ಕಲಿಸುತ್ತಾರೆಯೋ?

ಬೇಡಿ—ತಾಲೂಕು ಬೋರ್ಡಿಗೆ ಸಹಕರಿಸುವನ್ನು ಕೊಡದಕ್ಕೆ ಆಯಾ ತಾಲೂಕು ಬೋರ್ಡಿನ ಸರಹದ್ದಿನಲ್ಲಿ ವಾಸಿಸುವ ಪ್ರತಿಯೊಬ್ಬನಿಗೂ ಹಕ್ಕು ಇದೆ. ಪತ್ರಿಕೆಗಳಿಗೆ ಹಕ್ಕಿದೆ. ವೋಟರರಿಗೆ ಹಕ್ಕಿದೆ. ನೂತನ ಕೊಡಬೇಕಾದರೆ ತಾಲೂಕು ಬೋರ್ಡು ಪ್ರೆಸಿಡೆಂಟರೋ, ಮೆಂಬರರೋ, ಆಗಬೇಕೆಂಬ ಅವಶ್ಯಕತೆಯಿಲ್ಲ. ಸರಕಾರದ ಆದಾಯವು ಹೆಚ್ಚಾದ ಮೇಲೆ ನಿಮಗೂ ಬೇರೆ ಇದರಲ್ಲೆ ಸರಕಾರದಿಂದ ಗ್ರಾಂಟು ಸಿಕ್ಕೀತು. ನಮಗೂ ಸಿಕ್ಕೀತು. ಖಾಸಗಿ ಶಾಲಾ ಉಪಾಧ್ಯಾಯರಾಗಲೀ ಸಂಸ್ಥೆಯವರಾಗಲೀ ಸಹಾಯಬೇಕೆಂದು ದೇವರ ಹತ್ತಿರ ಬೇಡಿಕೊಂಡರೆ ಪ್ರಯೋಜನವಿಲ್ಲ. ಒಬ್ಬರು ಸತ್ತರೆ ಹಲವು ಮಂದಿ ಹುಟ್ಟುವರು. ಒಂದೇ ಲೇಖನದೊಳಗೆ ಕಾಣಿಸಿಕೊಡಲಿಲ್ಲ. ಉಪಾಧ್ಯಾಯರಾಗಿ ಈ ಕೆಲಸ ಮಾಡುವುದು ಅವರಿಗೆ ಸರಿಕಾಣದು.

"ನಿಷ್ಪಕ್ಷಪಾತಿ"

ಅಖಿಲ ಕರ್ನಾಟಕ
ತೃತೀಯ ಹಿಂದೀ-ಪ್ರಚಾರ ಸಮ್ಮೇಲನ.
ಮೈಸೂರು.

ಕರಪತ್ರ ೧.

ಹಿಂದೀ ಭಾಷೆಯನ್ನು ದಕ್ಷಿಣ ಹಿಂದುಸ್ಥಾನದಲ್ಲಿ ಪ್ರಚಾರ ಮಾಡು[illegible] ೧೯೧೮ನೆಯ ಇಸವಿಯಲ್ಲಿ ಮದ್ರಾಸಿನಲ್ಲಿ "ದಕ್ಷಿಣ ಭಾರತ ಹಿಂದೀಪ್ರಚಾರ ಸಭಾ" ಎಂಬ ಸಂಸ್ಥೆಯು ಸ್ಥಾಪಿತವಾಗಿ ತದ್ವಾರಾ ತಮಿಳು, ತೆಲುಗು, ಕೇರಳ, ಕರ್ನಾಟಕ ಪ್ರಾಂತಗಳಲ್ಲಿ ಅವಿಚ್ಛಿನ್ನವಾದ ಕಾರ್ಯವು ಸಾಗುತ್ತಿರುವದು ಎಲ್ಲರಿಗೂ ತಿಳಿದ ವಿಷಯವು. ದೇಶಾದ್ಯಂತ ಸಭೆಯವರು ತಮ್ಮ ಅಧೀನದಲ್ಲಿ ತರಬೇತಾದ ಪ್ರಚಾರಕರನ್ನು ನಾಲ್ಕು ಪ್ರಾಂತಗಳಿಗೆ ಕಳುಹಿಸಿ ಇಂದಿಗೂ ಸಹಸ್ರಾವಧಿ ವಿದ್ಯಾರ್ಥಿಗಳನ್ನು ಬೆಳ್ಳಿಸುತ್ತಿರುವರು. ಇತ್ತೀಚೆಗೆ ಈ ವಿಧವಾದ ಪ್ರಚಾರಕಾರ್ಯದಲ್ಲಿ ಪ್ರಗತಿಯ ಪ್ರಗತಿಯನ್ನು ಗೊತ್ತುಹಚ್ಚಿ ಹೊಸ ವಿಚಾರಗಳನ್ನು ಮತ್ತು ಸ್ಫೂರ್ತಿಯ ಅಧಿಕ ಸ್ಪೂರ್ತಿಯನ್ನು ಸಂಪಾದಿಸುವದಕ್ಕಾಗಿ ಪ್ರತಿಯೊಂದು ಪ್ರಾಂತದಲ್ಲಿಯೂ ವಾರ್ಷಿಕ ಸಮ್ಮೇಲನವು ನೆರವೇರಿಸಲ್ಪಡುತ್ತಿದೆ. ಅಖಿಲ ಕರ್ನಾಟಕ್ಕೆ ಅನ್ವಯಿಸತಕ್ಕ ಅಂತಹ ಸಮ್ಮೇಳನದ ಪ್ರಥಮಾಧಿವೇಶನವು ಬೆಂಗಳೂರಿನಲ್ಲಿ ೧೯೨೭ನೆಯ ವರ್ಷ ಮಹಾತ್ಮಾಗಾಂಧಿಯವರ ಅಧ್ಯಕ್ಷತೆಯಲ್ಲಿ ಜರಗಿತು. ದ್ವಿತೀಯಾಧಿವೇಶನವು ಮರುವರ್ಷ ಧಾರವಾಡದಲ್ಲಿ ಪಂಡಿತ ಹರಿಭಾವ್ [illegible] ಸಮಕ್ಷಮ ಸಾಂಗಗೊಂಡಿತು. ತೃತೀಯಾಧಿವೇಶನವು ಈ ವರ್ಷ ಬರುವ ಆಗಸ್ಟ್ ತಿಂಗಳ ಅಂತ್ಯದೊಳಗೆ ರಾಜಧಾನಿಯಲ್ಲಿ ನೆರವೇರಬೇಕಾಗಿ ನಿಶ್ಚಯವಾಗಿದೆ.

ವ್ಯವಸ್ಥಾಪಕ ಪತ್ರ. [illegible]

[illegible] ಈ ತಿಂಗಳು [illegible] ತಾರೀಖು [illegible] ರೂ [illegible] ಉತ್ಸವದಂದು [illegible] ಮ [illegible] ಶ್ರೀ ರಾಜರ [illegible] ವನ್ನು ನಡೆಸಿದರು. ದಾವಣಗೆರೆಯಲ್ಲಿ ನಡೆದ [illegible] ವನ್ನು [illegible] ರು [illegible] ಅದಕ್ಕೆ [illegible] ಆ ವಿಷಯದ ಮುಖ್ಯಾಂಶವು ಈ ವಿಷಯವು ಚರ್ಚಿಸಲ್ಪಟ್ಟಿತು. ಅದ್ದರಿಂದ ಸರಕಾರ ವಿಷಯದಲ್ಲಿಯೂ, ಅಧಿಕಾರಿಗಳು ಸುಂದು [illegible] ಜನಗಳನ್ನು ಕೊಂಡ ವಿಷಯದಲ್ಲಿಯೂ ಜನಗಳಿಗೆ ನ್ಯಾಯವಾಗಿರತಕ್ಕ ವಿಷಯಗಳಲ್ಲಿಯೂ ಇದಕ್ಕೆ ಮುಖ್ಯವಾದ [illegible] ಗಳ ವಿಷಯದಲ್ಲಿಯೂ ಪ್ರಶ್ನೆಗಳು ಹಾಕಲ್ಪಟ್ಟವು. ಕೌನ್ಸಿಲ್ ಎಲೆಕ್ಷನ್ ಮೆಂಬರುಗಳಾದ ಮಿ|| ಬಾಲಸುಂದರಮಯ್ಯರ್‌ರವರು ಅಧಿಕಾರಿಗಳ ರಿಪೋರ್ಟನ್ನು ಆಧಾರವಾಗಿಟ್ಟುಕೊಂಡು ಅಧಿಕಾರಿಗಳು ದಬ್ಬಾಳಿಕೆ ನಡೆಸಿ ಯಾಗಿ ನಡೆದುದರಿಂದಲಾಗಿಯೂ, ಸರಕಾರಕ್ಕೆ ಜನಗಳಲ್ಲಿಯೂ ಕೆಲವರು ಕಾರಣಭೂತರೆಂಬುದಾಗಿಯೂ ಅಪ್ಪಣೆಕೊಡಿಸಿದರು. ಇದನ್ನು ವಿಚಾರಣೆ ಮಾಡುವುದಕ್ಕೆ ಒಂದು ಸರಿಯಾದ ಕಮಿಟಿಯು ಏರ್ಪಾಡಾಗಬೇಕೆಂದು ಸೂಚಿಸಲ್ಪಟ್ಟಿತು. ಅದಕ್ಕೆ ಸರ್ಕಾರದವರು ಒಪ್ಪಿದರು. ಈ ಕಮಿಟಿ ಮೆಂಬರುಗಳು ನಿಷ್ಪಕ್ಷಪಾತಿಗಳಾಗಿರಬೇಕು. ಇವರು, ಹಿಂದೂ ಪಕ್ಷಪಾತಕ್ಕೆ ಮಹಮ್ಮದೀಯ ಪಕ್ಷಪಾತ, ಎರಡನ್ನೂ ಹೊಂದಬಾರದು. ಮುಖ್ಯವಾದುದು ಹಿಂದೂಗಳಾಗಲಿ, ಮಹಮ್ಮದೀಯರಾಗಲಿ ಅವರನ್ನು ನೋಡದೆ ಅಪರಾಧಿಗಳಾರೋ ಅವರ ಮೇಲೆ ಬಂದಿರತಕ್ಕ ಅಪವಾದಗಳ ಮೇಲೆ ಏನು ರುಜುವಾತುಗಳು ಬರುತ್ತದೋ ಅವನ್ನು ಕೇಳ್ವಾರ್ ಮಾಡಿ ಈ ಗಲಾಟೆಗೆ ನಿಜವಾದ ಕಾರಣಭೂತರ್ಯಾರೋ ಅವರ ತಪ್ಪುಗಳ ಮೇಲೆ ಶಿಕ್ಷೆಯನ್ನು ಎಲ್ಲರೂ ನ್ಯಾಯಯುತವಾಗಿಯೂ, ನಿರ್ದಾಕ್ಷಿಣ್ಯವಾಗಿಯೂ ಮುಖ್ಯ ನಿಗ್ರಹಕ್ಕೆ ತಕ್ಕ ಸಲಹೆಗಳನ್ನು ಕೊಡಬೇಕು. ಹೀಗೆ ಮಾಡತಕ್ಕ ಶಕ್ತಿಯುಳ್ಳವರು ಹಿಂದೂಗಳಲ್ಲಾಗಲಿ, ಮಹಮ್ಮದೀಯರಲ್ಲಾಗಲಿ, ಇದ್ದರೆ ಅವರನ್ನು ಈ ಕಮಿಟಿಗೆ ನಿಯಮಿಸಬಹುದು. ಅಂಥಾ ಶಕ್ತಿಯುಳ್ಳವರು ಹಿಂದೂಗಳಲ್ಲಿಯೂ ಮಹಮ್ಮದೀಯರಲ್ಲಿಯೂ ಇಲ್ಲವೆಂದು ನಾನು ಹೇಳುವದಿಲ್ಲ. ಶ್ರೀಕಾಮಾಸಿಗೆ ಸಮಾನವಾದ ಹಿಂದೂವನ್ನು ನಿಯಮಿಸಬಾರದು, ಮಹಮ್ಮದಿಗೆ ಸಮಾನವಾದ ಮಹಮ್ಮದೀಯನನ್ನು ನಿಯಮಿಸಬಾರದು. ಗಾಂಧಿ, ನಿಷ್ಪಕ್ಷಪಾತಿಯೆಂದು ಹೇಳತಕ್ಕ ಮಹನ್ನು ಧೀಯರಾಗಿರುವರು ಮಹಮ್ಮದನು ನಿಷ್ಪಕ್ಷಪಾತಿಯೆಂದು ಹೇಳತಕ್ಕ ಹಿಂದೂಗಳಿರುವರು. ಇಂಥಾ ದೌರ್ಭಾಗ್ಯವು ಜನಗಳಲ್ಲಿರುವುದರಿಂದ ಈ ಕಮಿಟಿಗೆ ಹಿಂದೂ ಸಂಘದವರೂ ಮಹಮ್ಮದೀಯ ಸಂಘದವರೂ ಸೇರದೆ ಇರತಕ್ಕ ಇಂಡಿಯನ್ ಅನುಭವವಿರತಕ್ಕ ನಿಷ್ಪಕ್ಷಪಾತರಾದ ಯುರೋಪಿಯನ್ನರನ್ನು ನಿಯಮಿಸುವುದು ಉತ್ತಮ. ನಮ್ಮ ದೇಶೀಯರಲ್ಲೇ ನಿಯಮಿಸಬೇಕೆಂದು ಶ್ರೀಮನ್ಮಹಾರಾಜರವರ ಅಭಿಪ್ರಾಯ ಇರುವ ಪಕ್ಷದಲ್ಲಿ ನಮ್ಮ ರಿಟೈರ್ಡ್ ಚೀಫ್ ಜಡ್ಜಿಗಳಾದ ಮ|| ರಾ|| ಕೆ. ಯಸ್. ಚಂದ್ರಶೇಖರ ಅಯ್ಯರವರನ್ನೂ, ನಮ್ಮ ರಿಟೈರ್ಡ್ ಕೌನ್ಸಿಲರ್ ಗಳಾದ ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟರವರನ್ನೂ, ನಮ್ಮ ರಿಟೈರ್ಡ್ ಪೋಲಿಸ್ ಇನ್ಸ್‌ಪೆಕ್ಟರ್ ಜನರಲ್ ರವರಾದ ಮಿ|| ಶ್ರೀಕಂಠೇಶ್ವರ ಅಯ್ಯರ್‌ರವರನ್ನೂ, ನಮ್ಮ ರಿಟೈರ್ಡ್ ಕೌನ್ಸಿಲರುಗಳಾದ ಮಿ|| ಕೆ. ಚಾಂದಿಯವರನ್ನೂ, ನಮ್ಮ ಚೀಫ್ ಕೋರ್ಟಿನ ರಿಟೈರ್ಡ್ ಪ್ಯೂನಿ ಜಡ್ಜಿಗಳಾದ ಮ|| ಆ ಸಬ್ಬಾಜ ರಾಯರವರನ್ನೂ, ಮೈಸೂರಿನ ಸುಪ್ರಸಿದ್ಧ ರಾಯರುಗಳಾಗಿದ್ದ ರಾವ್ ಬಹದ್ದೂರ್ ಯಂ. ಸಿ. ರಂಗೈಯ್ಯಂಗಾರ್‌ರವರನ್ನೂ ಈ ಸ್ಪೆಶಲ್ ಕಮಿಟಿಯ ಸದಸ್ಯರುಗಳನ್ನಾಗಿ ಮಾಡಿದರೆ ನಿರ್ದಾಕ್ಷಿಣ್ಯವಾದ ರಿಪೋರ್ಟು ಬರಬಹುದೆಂದು ಪ್ರಜಾ ವರ್ಗದವರಾದ ಕೆಲವರ ಅಭಿಪ್ರಾಯವಿರುತ್ತದೆ. ಶ್ರೀಮನ್ಮಹಾರಾಜರವರು ಈ ವಿಷಯವನ್ನು ಪರ್ಯಾಲೋಚಿಸಿ ತಕ್ಕ ಏರ್ಪಾಡುಗಳನ್ನು ಮಾಡುವರೆಂದು ನಾವು ನಂಬಿದ್ದೇವೆ.

ಮೈಸೂರು ನಿವಾಸಿ.

ಸ್ವಾಗತ ಸಮಿತಿಯು ಆಗಲೇ ಸ್ಥಾಪಿತವಾಗಿ ಮೈಸೂರು ವಿಶ್ವವಿದ್ಯಾಲಯದ ಪ್ರೊಫೆಸರ್ ಎ. ಆರ್. ವಾಡಿಯಾ, ಎಂ. ಎ. ಬಾರ್-ಅಟ್-ಲಾ ರವರು ಪ್ರಧಾನರಾಗಿಯೂ, ಧರ್ಮಪ್ರಕಾಶ ಡಿ. ಜಮುನಯ್ಯನವರ್ ಜಯರ್ಮನ್‌ರಾಗಿಯೂ ಚುನಾಯಿಸಲ್ಪಟ್ಟಿದ್ದಾರೆ. ಸಮ್ಮೇಲನದ ಅಧ್ಯಕ್ಷ ಪದವಿಗೆ ದೇಶ ಭಕ್ತ ಪಂಡಿತ ಮೋತೀಲಾಲನೆಹರು, ಮಾಲವೀಯರು, ಆನಂದಿ ಪ್ರೆಸಿಡೆಂಟ್ ಪಟೇಲ್, ಸರ್ ಎಂ. ವಿಶ್ವೇಶ್ವರಯ್ಯನವರು ಮತ್ತು ಸರ್ ಕೆ. ವೆಂಕಟರತ್ನಂ ಇವರ ಹೆಸರುಗಳು ಸೂಚಿತವಾದ ಮಹನೀಯರು ಬರುವರು. ಕನ್ನಡಿಗರು ಈ ಸಮ್ಮೇಲನದಲ್ಲಿ ಭಾಗಿಗಳಾಗಿ ತಮ್ಮೆಯ ಕಾರ್ಯದ ಪ್ರಧಾನ ಅಂಗವೆನಿಸಿರುವ ರಾಷ್ಟ್ರಭಾಷಾಪ್ರಚಾರದಲ್ಲಿ, ತಾವು ಅನ್ಯಪ್ರಾಂತದವರಿಗಿಂತ ಹಿಂದುಳಿದಿಲ್ಲ ಎಂದು ತೋರಿಸಬೇಕಾಗಿದೆ. ಆದುದರಿಂದ ರಾಷ್ಟ್ರಭಾಷಾನುರಾಗಿಗಳಾದ ಯೋಗ್ಯರು ಉದಾರ ಮನಸ್ಸಿನಿಂದ ಪ್ರತ್ಯಕ್ಷವಾಗಿ ಸ್ವಾಗತ ಸದಸ್ಯರಾಗಿಯಾಗಲಿ ಅಥವಾ ಪ್ರತಿನಿಧಿಗಳಾಗಿಯಾಗಲೀ ಸಹಕರಿಸಬೇಕೆಂದು ವಿನಂತಿ.

೨೦-೬-೧೯೨೯. ಸ್ವಾಗತ ಸಮಿತಿ ಕಛೇರಿ ಶಿವರಾಂ ಪೇಟೆ, ಮೈಸೂರು.	ಎಂ. ವಿ. ಜಂಬುನಾಥನ್, M. A. B. S. C., ಜಮುನಾಪ್ರಸಾದ ಶ್ರೀವಾಸ್ತವ, (ಮಂತ್ರಿಗಳು) ಪಂಡಿತ ಸಿದ್ಧನಾಥ ಪಂತ, (ಸ್ವಾ. ಸ. ಸಮಿತಿ)

Grafted Mango plants genunine & of the best variety are sold at moderate rates at Hildaleville, Urwa.

ಉತ್ತಮ ಕಸಿಮಾವಿನ ಸಸಿಗಳು ಸಾಧಾರಣ ದರದಲ್ಲಿ ಉರ್ವಾ-ಹಿಲ್‌ಡೇಲ್‌ವಿಲ್ಲದಲ್ಲಿ ಮಾರಲ್ಪಡುತ್ತವೆ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅತ್ಯಂತಾಕರ್ಷಕ ತೈಲ—ಇದು ಪುನರ್ವಸು ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಶ್ವಂಗಳ್ಳ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ, ಕ್ಷಯರೋಗ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಿತ
ದಶಮೂಲ ಸುಖಪ್ರದಔಷಧಿ

ಬಾಣಂತಿಯರ ಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಕಸ [illegible] ಕೂಡಲೇ ಹೊರಗೆ ಹಾಕಿ ಪ್ರಸವದಿಂದ ಸ್ಥಳಾಂತರವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಳವಿಗೆ ತರುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವದು.

ಕ್ರಯ ಬಾಟ್ಲಿ 1ಕ್ಕೆ 2—0—0. ಪೋಸ್ಟೇಜು ವಗೈರೆ ಬೇರೆ.

[illegible]

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮೊದಲ್‌ತರವಾದ ಬೆಳ್ಳಿ ಪುಡಿದಾರಗಳ್ಳ.

ESTD. 1896.

[illegible] ಬೆಳ್ಳಿ ಪುಡಿದಾರಗಳು [illegible] ವ್ಯಾಪಾರಿಗಳ [illegible] ಬೆಳ್ಳಿ ದಾರಕ್ಕೆ ಸ್ವಂತ ತಯಾರಿ [illegible]

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಹರಾವು ವ್ಯಾಪಾರಿ,

24—8—28 ಕನ್ನಡ [illegible] (ದಕ್ಷಿಣ ಕನ್ನಡ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1/- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, Bombay, and Puttur.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ ಕುಂದಾಪುರ ಬೊಂಬಾಯಿ ಪುತ್ತೂರು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ರಿಜರ್ವ್ ಮತ್ತು ಇತರ ಫಂಡುಗಳು. 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793—6—0
Rates of interest on fixed deposits at Head Office and Branch 6¼% for 2 Years	ಹೆಡ್ ಆಫೀಸು ಬ್ರಾಂಚುಗಳಲ್ಲಿ ಕಾಯಂ ಠೇವಣಿಗೆ 2 ವರುಷಗಳಿಗೆ ಶೇಕಡಾ 6¼
6% „ 1 Year	1 ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ಇಡುವ ರೂ. 1000/-ದ ಮತ್ತು ಮೇಲಿನ ಠೇವಣಿಗಳಿಗೆ ಬಡ್ಡಿ ಶೇಕಡಾ 6¼.

Current Account Deposits received and interest allowed on daily balance of Rs. 50/ and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to

Canara Bank Ltd.
Mangalore, 11—2—1929

K. Venkat Rao,
Secretary

THE PANGAL NAYAK BANK, LTD.

Branch Office Mangalore	Head Office: Udipi *Established 1920*	Agency Office Cochin

Authorised Capital Rs. 2,00,000-	Paidup Capital Rs. 1,57400-
Issued Capital Rs. 1,75,000-	Reserve and other Funds Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:—for 3 months 5%, 6 or 9 months 5¼% 12, 15, 18 or 21 months 6%, 24 months 6¼% and **interest being payable every 3 months.**

Short Notice Deposits, Cumulative Deposits and **Savings Bank Deposits** are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6½% and interest being payable every quarter.

Loans and Advances are made on pledge of valuables, on proper personal securities on reasonable terms and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
1st March 1929.

P. Lakshman Nayak,
Offg. Secretary.

ADVERTISE IN OUR WEEKLY.
To Reach the Hearths & Homes
OF INDIA'S MASSES

For Particulars Apply to

The Manager,
SWADESHABHIMANI,
MANGALORE.

ವಿದೇಶಿ ಮದ್ಯ.

ಸರಕಾರದ ಮದ್ಯಪಾನ ನಿಷೇಧಪರವಾದ ಧೋರಣದ ವಿಷಯವಾಗಿ ನಾವು ಹಲವು ಬಾರಿಗೂ ಈ ಪುಠಗಳಲ್ಲಿ ತರ್ಕಿಸಿರುವೆವು. ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರುವುದು ಈಗಿನ ಸರಕಾರಕ್ಕೆ ಎಂದೂ ಒಪ್ಪಿತವಾಗದ ವಿಷಯವೆಂದು ಎಲ್ಲರೂ ಬಲ್ಲರು. ಅದರಿಂದ ಉಂಟಾಗುವ ಆಯವನ್ನು ಬಿಟ್ಟುಕೊಟ್ಟರೆ ಹಲವು ಪ್ರಜಾಹಿತ ಕೆಲಸಗಳಿಗೆ ದುಡ್ಡು ಸಿಕ್ಕಲಾರದೆಂಬುದೇ ಸರಕಾರದ ತರ್ಕ. ಅದು ಹೇಗೂ ಇರಲಿ, ವಿದೇಶೀ ಮದ್ಯವನ್ನು ಸರಕಾರವು ಪ್ರೋತ್ಸಾಹಿಸುವ ಈ ಗುಟ್ಟಿನ ಧೋರಣವ್ಯೇನೆನ್ನಬೇಕು. ಕಲ್ಕತ್ತದ ರೆವರೆಂಡ್ ಎಂಡರ್ಸನ್ನರೆಂಬವರೇ ಈ ವಿಷಯವಾಗಿ ಸರಕಾರವನ್ನು ಕಠಿಣವಾಗಿ ಖಂಡಿಸಿ ಬರೆಯುವರು. ಸರ್. ಪುರುಷೋತ್ತಮ ದಾಸರು ಎಸೆಂಬ್ಲಿಯಲ್ಲಿ ೧೯೨೩-೨೪ ಮತ್ತು ೧೯೨೭-೨೮ರಲ್ಲಿ ಖರ್ಚಾದ ವಿದೇಶಿ ಮದ್ಯದ ವಿವರವನ್ನು ಕೇಳಿದರು. ಕೆಳಗಿನ ಪಟ್ಟಿಯು ಅವರಿಗೆ ಕೊಡಲ್ಪಟ್ಟಿತು.

	೧೯೨೩-೨೪	೧೯೨೭-೨೮	
ಬೀರ್	೩,೮೪೬,೯೭೬	೪,೪೯೯,೮೭೪	ಗೆಲನ್.
ವ್ಯಾನ್	೨೨೫,೯೯೬	೩೦೪ ೧೪೧	,,
ಸ್ಪಿರಿಟ್ಸ್	೧,೩೭೦,೨೪೯	೧,೪೭೪,೩೮೮	,,
ಡಿನೇಚರ್ಡ್ ಸ್ಪಿರಿಟ್ಸ್	೩೬೩,೩೮೮	೯೦೧,೧೨೫	,,

ಮೇಲಿನ ಅಂಕೆಗಳು ವಿದೇಶಿ ಮದ್ಯವು ಯಾವ ರೀತಿಯಲ್ಲಿ ಪರದೇಶದಿಂದ ಆಮದಾಗುತ್ತಿದೆ ಎಂದು ತೋರಿಸುವುವು. ಆದರೆ ದೇಶದೊಳಗೆ ಖರ್ಚಾಗುವ ವಿದೇಶಿ ಮದ್ಯವು ಇಷ್ಟೇ ಅಲ್ಲ. ವಿದೇಶೀ ಮದ್ಯವನ್ನು ತಯಾರಿಸುವ ದೊಡ್ಡ ಕಂಪೆನಿಗಳು ಹಿಂದೂಸ್ಥಾನದಲ್ಲಿಯೂ ಇವೆ. ಇವು ಕ್ರಮವಾಗಿ ವಿದೇಶಿ ಮದ್ಯವನ್ನು ಮಾರುತ್ತವೆ. ಇವರಿಗೆ ಪ್ರೋತ್ಸಾಹ ಕೊಡಲಿಕ್ಕಾಗಿ ಪ್ರಾಂತಿಕ ಸರಕಾರವು ಇವರಿಗೆ ತೆರಿಗೆಯಲ್ಲಿ ರಿಯಾಯತಿಯನ್ನು ಮಾಡಿಯದೆ. ೧೯೨೫-೨೬ರಲ್ಲಿ ಸರಕಾರದಿಂದ ನೇಮಕವಾದ ಎಕ್ಸೈಜ್ ಕಮಿಟಿಯು ಈ ಧೋರಣವನ್ನು ಕಲ್ಪಿಸಿತು. "ದೇಶೀ ಜನರೊಳಗೆ ವಿದೇಶೀ ಮದ್ಯವನ್ನು ನಿತ್ಯದ ಉಪಯೋಗದ ವಸ್ತುವಾಗಿ ಮಾಡಲು ಬಿಡುವುದು ಸರಕಾರದ ಧೋರಣವಲ್ಲ. ಯುರೋಪಿಯನ್, ಯುರೋಶಿಯನ್, ಪಾರ್ಸಿ ಅಥವಾ ವಿದೇಶಿ ಮದ್ಯವನ್ನುಪಯೋಗಿಸುವ ಇತರರು ಇರುವ ಸ್ಥಳಗಳಲ್ಲಿ ಮಾತ್ರವೇ ಅದರ ವಿಕ್ರಯವು ಮಾಡಗೊಡಲ್ಪಡುವುದು." ಆದರೆ ಈ ಧೋರಣವು ಎಷ್ಟರಮಟ್ಟಿಗೆ ಪಾಲಿಸಲ್ಪಟ್ಟಿಯದೆಂದು ಈಗಿನ ವಿಕ್ರಯವನ್ನೂ, ಸ್ವದೇಶೀ ಕಂಪೆನಿಗಳು ದೇಶದಲ್ಲಿಯೇ ವಿದೇಶಿ ಮದ್ಯವನ್ನು ತಯಾರಿಸಲು ಅವರಿಗೆ ಸಿಕ್ಕುವ ಸರಕಾರಿ ಪ್ರೋತ್ಸಾಹವನ್ನೂ ನೋಡಿದರೆ ತಿಳಿಯುವುದು. ಪರದೇಶದಿಂದ ಬರುವ ಮದ್ಯಕ್ಕೆ [illegible] ತೆರಿಗೆಯು ಇರುವಾಗ ದೇಶದಲ್ಲಿ ತಯಾರಾಗುವ ವಿದೇಶೀ ಮದ್ಯಕ್ಕೆ [illegible] ತೆರಿಗೆಯು ಇರುತ್ತದೆ. ಪ್ರಜೆಗಳು ಮದ್ಯಪಾನ ನಿಷೇಧವು ಬೇಕೆಂದು ದೊಬ್ಬಿಟ್ಟರೂ ಸರಕಾರವು ಉದ್ದೇಶಪೂರ್ವಕವಾಗಿ ಮದ್ಯಪಾನವನ್ನು ಪ್ರೋತ್ಸಾಹಿಸುವುದನ್ನು ನೋಡಿದರೂ, ಸರಕಾರದ ಸಿಹಿಯಾದ ಮಾತುಗಳಲ್ಲಿ ವಿಶ್ವಾಸವಿಡಲು ಕಾರಣವಿಲ್ಲ. ಒಂದು ಬಾರಿ ಮದ್ಯಪಾನದ ಆದಾಯವನ್ನು ಸರಕಾರಕ್ಕೆ ಬಿಟ್ಟುಕೊಡಲಿಕ್ಕೆ ಸಾಧ್ಯವಿಲ್ಲವೆಂದಾದರೆ, ಅದು ಹೆಚ್ಚಾಗದಂತಾದರೂ ನೋಡಲಿಕ್ಕೆ ಸಾಧ್ಯವಿರಬೇಕು. ಆದರೆ ಮೇಲಿನ ಅಂಕೆಗಳನ್ನು ನೋಡಿದರೆ ಸರಕಾರಕ್ಕೆ ಅದನ್ನು ಕಡಿಮೆಮಾಡುವ, ಕಡೆಯಪಕ್ಷಕ್ಕೆ ಹೆಚ್ಚಾಗದ ಹಾಗೆ ನೋಡುವ ಆಲೋಚನೆಯೇ ಇಲ್ಲವೆಂದು ಸ್ಪಷ್ಟವಾಗುವುದು.

ಬ್ರಿಟಿಷ ಮಜೂರ ಪಕ್ಷದ ಧೋರಣ

ಬ್ರಿಟಿಷ ಚುನಾವಣೆಗಳು ಮುಗಿದ ಮೇಲೆ ಬ್ರಿಟಿಷ ಪಾರ್ಲಿಮೆಂಟು ಮೊದಲಬಾರಿ ಈ ತಿಂಗಳ ೨೫ ರಲ್ಲಿ ಕೂಡಿತು. "ರಾಜರ ಭಾಷಣ" King's Address ಎಂಬ ಹೆಸರಿನಲ್ಲಿ ಮಜೂರ ಪಕ್ಷದ ಧೋರಣವು ವಿವರಿಸಲ್ಪಟ್ಟಿತು. ಆದರೆ ಮಿ. ಮೆಕ್ಡೊನಾಲ್ಡರು ಒಪ್ಪಿಕೊಂಡಂತೆ ಪಾರ್ಲಿಮೆಂಟಿನ ಇತರ ಪಕ್ಷಗಳು ಒಟ್ಟಾಗಿನಲ್ಲಿ ಸರಕಾರವೂ ಸೋಲಿಸಲ್ಪಡುವುದೆಂಬುದನ್ನು ನಾವು ಬಲ್ಲೆವು; ಆದುದರಿಂದ [illegible] ಎಂದು ಮಾತಿನ ಮೇಲಿನ ಮಜೂರ ಧೋರಣ ಆದರಿಸ ಬರುತ್ತದೆ. ಮಜೂರ ಪಕ್ಷವು ಸ್ವಪಕ್ಷದ ಧೋರಣವನ್ನು ರಚಿಸಲಾರದೆಂಬುದು ಸ್ಪಷ್ಟವಿದೆ. "ರಾಜರ ಭಾಷಣವೂ ಧೋರಣದ ಇದ್ದೇ ಅಭಾವವನ್ನು ತೋರಿಸುತ್ತಿತ್ತು. ವಾದಾತ್ಮಕ ವಿಷಯವು ಏನೂ ಇರಲಿಲ್ಲ. ವಾದಾತ್ಮಕ ವಿಷಯಗಳನ್ನೆತ್ತಿದಾಗ, ಅವುಗಳ ಕಡೆಗಿನ ತಮ್ಮ ನಿಶ್ಚಯವಾದ ಧೋರಣವನ್ನು ಸ್ಪಷ್ಟೀಕರಿಸದೆ, "ಇತರ ಪಕ್ಷಗಳೊಡನೆ ಮಂತ್ರಾಲೋಚನೆಗೂ" ಎಡೆ ಇಡಲ್ಪಟ್ಟಿದೆ. ಬಾಲ್ಡವಿನ್ನರು ಈ ಭಾಷಣದ ಅಧಿಕಾಂಶಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟಿದ್ದಾರೆ, ಈಗಿನ ಮಂತ್ರಿಗಳು ಯುನೈಟೆಡ್ ಸ್ಟೇಟ್ಸಿಗೆ ಹೋಗುವುದು ಒಳ್ಳೆಯದೇ ಎಂದು ಬಾಲ್ಡವಿನ್ನರು ಹೇಳಿದರಲ್ಲದೆ, ನಿರುದ್ಯೋಗ ನಿವಾರಣೆಯ ಕಡೆಗಿನ ಸರಕಾರದ ಪ್ರಯತ್ನಗಳಿಗೆ ತಮ್ಮ ಪೂರ್ಣ ಬೆಂಬಲವಿದೆ ಎಂದು ಹೇಳಿದರು. ಸರಕಾರ ಪಕ್ಷವು ಬಹುಮತದಲ್ಲಿಲ್ಲವೆಂಬುವನ್ನು ಮೆಕ್ಡೊನಾಲ್ಡರ ನೆನಪಿಗೆ ತರಲು ಅವರು ಮರೆಯಲಿಲ್ಲ. ಆದರೆ ಮೆಕ್ಡೊನಾಲ್ಡರ ಮತ್ತು ಬಾಲ್ಡವಿನ್ನರ ಭಾಷಣಗಳಿಂದ ಹಿಂದೀ ರಾಜಕೀಯಜ್ಞರು ಮನಸ್ಸಿಗೆ ತಂದುಕೊಳ್ಳಬೇಕಾದ ಒಂದು ಅತ್ಯಂತ ಮುಖ್ಯವಾದ ವಿಷಯವೆಂದರೆ ಅವರ ಪಕ್ಷಸ್ವಾರ್ಥಕ್ಕಿಂತಲೂ, ಅಧಿಕಾರ ಸ್ವಾರ್ಥಕ್ಕಿಂತಲೂ ಹೆಚ್ಚಿನದಾದ ದೇಶಹಿತದ ಸ್ವಾರ್ಥ. ಅಂತಹ ಆದರ್ಶ ಸ್ವಾರ್ಥ ಎಲ್ಲಾ ದೇಶಗಳಲ್ಲಿಯೂ ಇರುವುದಿಲ್ಲ. ಆದುದರಿಂದಲೇ ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟು ಮೂಲಕ ಸರಕಾರವು ಚೆನ್ನಾಗಿ ನಡೆಯುವಾಗ ಇತರ ದೇಶಗಳಲ್ಲಿ ಅಂತಹ ಸರಕಾರ ಸಂಘಟನವು ಕಷ್ಟಸಾಧ್ಯವಾಗುತ್ತದೆ. ರಾಜಭಾಷಣದಲ್ಲಿ ಹಿಂದೂಸ್ಥಾನದ ಉಲ್ಲೇಖವೇ ಇರಲಿಲ್ಲ. ಇದು ಹಿಂದೂಸ್ಥಾನಕ್ಕೆ ಹಿತವೋ ಅಹಿತವೋ ಎಂದು ಹೇಳಲಾಗುವುದಿಲ್ಲ. ಮೆಕ್ಡೊನಾಲ್ಡರಿಗೆ ಬಹುಮತವಿಲ್ಲದಿರುವಾಗ ಹಿಂದೂಸ್ಥಾನದ ವಿಷಯದಲ್ಲಿ ಸ್ಥಿರವಾದ ಧೋರಣವನ್ನು ಕೈಕೊಳ್ಳಲಾಗಲಿಕ್ಕಿಲ್ಲ. ಆದುದರಿಂದ ಹಿಂದೂಸ್ಥಾನದ ವಿಷಯ ರಾಜಭಾಷಣದಲ್ಲಿ ಉಲ್ಲೇಖವಿರದ ಕಾರಣದಿಂದ ಅದನ್ನು [illegible] ಲೆಕ್ಕಿಸಬೇಕಾಗುವುದಿಲ್ಲ. ಆದರೆ ನಿರುದ್ಯೋಗ ನಿವಾರಣೆಯ ಉದಾರ ಯೋಜನೆಗಳು ಹಿಂದೂಸ್ಥಾನದ ಮಟ್ಟಿಗೆ ಸ್ವಲ್ಪ ಚಿಂತನೀಯವಿವೆ. ಅಧೀನ ರಾಜ್ಯಗಳ ಆರ್ಥಿಕ ಅಭ್ಯುನ್ನತಿ, ಕೃಷಿಸ್ಥಿತಿಯ ಅಭಿವೃದ್ಧಿ, ಮುಂತಾದ ಉದಾರಯೋಜನೆಗಳಲ್ಲಿ ಹಿಂದೂಸ್ಥಾನವು ಎಷ್ಟರ ಮಟ್ಟಿಗೆ ಸೇರಿಯದೆ ಎಂದು ಇನ್ನು ನೋಡಬೇಕಷ್ಟೆ. ಇದನ್ನು ನೋಡುವಾಗ ಚುನಾವಣೆಯ ಸಮಯದಲ್ಲಿ ಮಿ. ಸ್ನೋಡನರು ಮಜೂರಪಕ್ಷದ ಪರವಾಗಿ ಹಿಂದೀಯ [illegible] ಕೊಳ್ಳುವ ಶಕ್ತಿ ಹೆಚ್ಚಿ ಇಂಗ್ಲೆಂಡಿನ ನಿರುದ್ಯೋಗ ನಿವಾರಣೆಯ ಉಪಾಯವನ್ನು ಸೂಚಿಸಿದ ನೆನಪಾಗುತ್ತದೆ.

ವಿಶ್ವಕುಟುಂಬಕ್ಕೆ ಅಮೇರಿಕದಲ್ಲಾದ ಅವಮಾನ.

ಕವಿವರ್ಯರಾದ ಶ್ರೀ ರವೀಂದ್ರನಾಥ ಠಾಕೂರರಿಗೆ ಕೆಲವು ಸಮಯದ ಹಿಂದೆ ಅಮೇರಿಕದಲ್ಲಾದ ಅವಮಾನದ ಕತೆಯು ಎಲ್ಲರಿಗೂ ತಿಳಿದಿರಬಹುದು. ರವೀಂದ್ರರು ಮದ್ರಾಸಿಗೆ ಬಂದ ತಿಂಗಳ ೨೪. ಕ್ಕೆ ಸ್ವದೇಶ ಪ್ರವಾಸವನ್ನು ಮುಗಿಸಿ, ತಲ್ಪಿದರು. ಈ ಅವಮಾನದ ವಿವರವನ್ನು ಅವರಿಂದಲೇ ತಿಳಿಯಲಾಗಿದೆ. ಅವರು ಹೀಗೆ ಹೇಳುತ್ತಾರೆ—"ಅಧಿಕಾರಿಗಳು ತಾನು ತನ್ನ ಪತ್ರಗಳೊಂದಿಗೆ ಆಫೀಸಿಗೆ ಬರಬೇಕೆಂದು ಹೇಳಿದ ಮೇರೆಗೆ, ಎಷ್ಟು ಘಂಟೆಗೆ ಬರಬೇಕೆಂದು ಕೇಳಿ, ಅದೇ ಸಮಯಕ್ಕೆ ಆಫೀಸಿಗೆ ಹೋದೆ. ಅರ್ಧ ಘಂಟೆ ಕಾದಿದ್ದ ಬಳಿಕ ಒಬ್ಬ ಆಫೀಸರರು ಬಂದು ನನ್ನನ್ನು ನೋಡಿ ನೋಡದಂತೆ ಮಾಡಿ ಹೋದರು. ಸ್ವಲ್ಪ ಸಮಯದ ಮೇಲೆ ತನ್ನನ್ನು [illegible] ಕರೆದು ತಲೆಯಲ್ಲಿ ಇದ್ದದ್ದೇ ಒಂದು ಕುರ್ಚಿ ತೋರಿಸಿದರು. ಅಮೇರಿಕದಲ್ಲಿ ಇರಲಿಕ್ಕೂ ವಿಚಾರಿಸಿ, [illegible] ಸಾಕಷ್ಟು ಹಣವಿದೆಯೋ ಎಂದು ಕೇಳಿ, ಇಲ್ಲವಾದರೆ ಕಠಿಣ ಶಿಕ್ಷೆಯಾಗುವುದೆಂದು ಎಚ್ಚರಿಸಿದರು. ಒಂದು ಬಾರಿ ಅಮೇರಿಕದ ಭೇಟಿಯನ್ನೇ ರದ್ದು ಮಾಡಬೇಕಾಗಿ ಆಲೋಚಿಸಿದೆ. ಆದರೆ ಪೈಲ್ ಟಿಕೇಟು ಮೊದಲೇ ಪಡೆದಿದ್ದರಿಂದ [illegible] ಲೊಸ್ ಎಂಜೆಲಿಸ್ ಎಂಬಲ್ಲಿಗೆ ಹೋದೆ. ಎಲ್ಲ ಏಶ್ಯಾಖಂಡದ ಜನರಿಗೂ ಇದೇ ಅವಮಾನವಾಗುವುದೆಂದು ಅಲ್ಲಿ ನನಗೆ ತಿಳಿಯಬಂತು. ತಾನು ಏಶ್ಯಾಖಂಡದ ಪ್ರತಿನಿಧಿಯಾದುದರಿಂದ, ಸ್ವತ್ತಿಸರವಾಗಿ ಆ ಅವಮಾನವನ್ನು ಸಹಿಸಿದೆನಾದರೂ ಏಶ್ಯಾಖಂಡಕ್ಕಾದ ಅವಮಾನವನ್ನು ಸಹಿಸಲಾರದೆ ನಾದುದರಿಂದ ಅಲ್ಲಿಂದ ಹೊರಟು ಬಂದೆ." ಲೋಕಶಾಂತಿಯ ಉದಾರ ತತ್ವಗಳಿಗಾಗಿ ಹೆಣಗಾಡುವ ಅಮೇರಿಕದ ಪಾರಮಾರ್ಥಿಕತೆ ಇದು. ಮುಖ್ಯವಾಗಿ Might is Right ಎಂಬ ಆಂಗ್ಲೋಕ್ತಿಯಂತೆ ಹಿಂದೂಸ್ಥಾನವು ಸಶಕ್ತವಾಗದೆ ಅದಕ್ಕೆ ಮರ್ಯಾದೆಯು ಸಿಕ್ಕಲಾರದು.

ನೋಟಗಳು
NOTE...S.

ಕಲಕತ್ತೆಯಲ್ಲಿ ಅತ್ತೆಸೊಸೆಯವರ ಜಗಳದಿಂದ ಕೆಲವು ಸಮಯದ ಹಿಂದೆ ಅತ್ತೆಯ ಮತ್ತು ಗಂಡನ ಬಾಧೆ ತಡೆಯಲಿಕ್ಕಾಗದೆ,—ಸೊಸೆಯು ಪ್ರಾಣತ್ಯಾಗ ಮಾಡಿಕೊಂಡಿದ್ದಳು. ಹುಡುಗಿಯ ಕಡೆಯವರು ಕೇಸು ನಡೆಸಿ, ಅತ್ತೆಗೆ ಮತ್ತು ಸತ್ತ ಹುಡುಗಿಯ ಗಂಡನಿಗೆ ಒಂಭತ್ತು ತಿಂಗಳ ಶಿಕ್ಷೆ. ಸೊಸೆಯು ಜಗಳ, ಅತ್ತೆಗೆ ಜೈಲು.

• • • •

ಬಂಗಾಲದಲ್ಲಿ ದಿನದಿನದಂತೆ ಅತ್ತೆ ಸೊಸೆಯ ಜಗಳದಿಂದ ಮದುವೆಯಾದ ಹುಡುಗಿಯರು ಪ್ರಾಣತ್ಯಾಗ ಮಾಡುವ ವರ್ತಮಾನ ಇದ್ದೇ ಇದೆ. ಇದು ಹಿಂದೂ ಪ್ರ್ಯಾವೇಟ್ ಲಾ.

• • • •

ತಗಡೂರ್ ರಾಮಚಂದ್ರರಾಯರ ಕಣಿಯರ ಪತ್ರಿಕೆ ಇನ್ನೊಂದು ಸಲ ಹೊರಡಿಯೂ ಆಯಿತು. ಪೋಲೀಸರು ತೆಗೆದು ಕೊಂಡೂ ಆಯಿತು. ಇನ್ನು ಕಣಿಯರ ಪತ್ರಿಕೆಯ ಮೇಲಿನ ಹೊಸ ಆಕ್ಟು ನೋಡಲಿದೆ.

• • • •

ಚೀನಾ ದೇಶದಲ್ಲಿ ಮೋಟಾರನ್ನು ಅತಿ ಜೋರಿನಿಂದ ಓಡಿಸುವ ಡ್ರ್ಯಾವರರಿಗೆ ಒಂದು ನವೀನತರದ ಶಿಕ್ಷೆ.

• • •

ದೊಡ್ಡದೊಂದು ಹಲಗೆಗೆ ನಡುವಿನಲ್ಲಿ ಒಂದು ತೂತನ್ನು ತೆಗೆದು ಅದನ್ನು ಕುತ್ತಿಗೆಗೆ ಸಿಲುಕಿಸಿ, ಒಂದು ಇಡೀ ದಿನ ಪೇಟೆಯಲ್ಲಿ ಮೆರವಣಿಗೆ ಮಾಡಿಸುವರು. ಮೆಲ್ಲ ಮೆಲ್ಲನೆ ನಡೆಸಲಿಕ್ಕೆ ಕಲಿಸುವರು.

• • • •

ಮರ್ಯಾದೆಯ ಜನರಿಗೆ ಇಷ್ಟೇ ಸಾಕಲ್ಲವೇ.

• • •

[illegible] ಒಬ್ಬ ಹೆಣ್ಣು ಹೆಣ್ಣು ಮುದುಕನಿಗೆ ಮದುವೆಯಾದಳು. ಆಕೆಯು ವಿಚಿತ್ರಿಯಾದಳು. ಆತನು ಹುಚ್ಚನಂತಾದನು. ಹೆಣ್ಣು ಕೊಡಲಾರೂ ಒಪ್ಪಲಿಲ್ಲ.

• • •

[illegible] ಒಬ್ಬ ಹುಡುಗನಿಗೆ ಸೀರೆಯುಡಿಸಿ, ಹುಚ್ಚ ಮುದುಕನಿಗೆ ಮದುವೆ ಮಾಡಿಸಿದರು. ಶೋಭನ [illegible] ಮದುಗನ ನಿಜರೂಪವು ಮುದುಕನಿಗೆ ತಿಳಿದು [illegible] ನಾಚಿಕೆಯಿಂದ ಓಡಿ ಹೋದನಂತೆ.

• • • •

ಇದೀಗ ಮುದುಕನ ವಿವಾಹಾಪೇಕ್ಷೆಗೆ ತಕ್ಕ ಶಾಸ್ತಿ.

•

ಪೂನಾ ಜಿಲ್ಲೆಯ ಶಾಲಘಾರ ತಾಲೂಕಿನಲ್ಲಿ ತೆರಿಗೆಯನ್ನೇರಿಸಿದುದು ಕಾರಣ ಸಮ್ಮದಲ್ಲಿಯೇ ಸತ್ಯಾಗ್ರಹ ನಡೆಯಲಿರುವದಂತೆ.

• • • •

[illegible] ವಲ್ಲಭಭಾಯಿ ಪಟೇಲರಂತೆ [illegible] ಶ್ರೀ ಜಮನಾಲಾಲ ಮೋಧಾರವರು ಮುಂದಕ್ಕೆ ಬಂದಿರುವರು.

• • • •

ಬಾರ್ಡೋಲಿಯಂತೆಯೇ ಇದೂ ವಿಜಯಿಗಳಾಗಲೆಂದು ನೆನೆಸುತ್ತೇವೆ.

ಶ್ರೀ ಪುಂಡರೀಕ ಬಾಳಿಗರು.

[illegible] ವರ್ಷಗಳ ದೀರ್ಘ ಸೇವೆಯೊಡನೆ ಶ್ರೀ. ಬಂಟ್ವಾಳ ಪುಂಡರೀಕ ಬಾಳಿಗರು ಮಂಗಳೂರು ಕೆನರಾ ಹೈಸ್ಕೂಲಿನ ಅಧ್ಯಾಪಕ ಕೆಲಸದಿಂದ ನಿವೃತ್ತರಾದರು. ವಿದ್ಯಾಭ್ಯಾಸ ಹೊಂದಿದವರಿಗೆ ಲಾಭಕರವಾದ ಸರಕಾರೀ ಹುದ್ದೆಗಳು ಸುಲಭವಾಗಿ ಸಿಕ್ಕುತ್ತಿದ್ದ ಆ ಹಳೇ ದಿನಗಳಲ್ಲಿ ಸ್ವಾರ್ಥತ್ಯಾಗದಿಂದ ಇವರು ಈ ಶಾಲೆಯನ್ನು ಸೇರಿದರು. ಇವರ ಅಧ್ಯಾಪಕ ಪ್ರತಿಭೆಯ ಶ್ರೇಷ್ಠತೆಯನ್ನು ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇವರ ಕೈಕೆಳಗೆ ವಿದ್ಯಾಭ್ಯಾಸವನ್ನು ಹೊಂದಿದ ಸಾವಿರಾರು ಮಂದಿ ತರುಣರೂ ವೃದ್ಧರೂ ತಮ್ಮ ಈಗಿನ ಜೀವನದೊಳಗಿನ ಅನುಭವದೊಡನೆ ಹೇಳಬಲ್ಲರು. ಇಂತಹ ಆತ್ಮತ್ಯಾಗಿಗಳು ಇಲ್ಲದಿದ್ದರೆ ಕೆನರಾ ಹೈಸ್ಕೂಲು ಈ ದಿನ ಅದಕ್ಕಿರುವ ಪ್ರಸಿದ್ಧಿಯನ್ನು ಪಡೆಯುತ್ತಿರಲಿಲ್ಲ. ಇನ್ನು ಇವರು ತಮ್ಮ ವೃದ್ಧಾಪ್ಯದೊಳಗಿಂದ ತರುಣ ವಿದ್ಯಾರ್ಥಿಗಳನ್ನು ಪ್ರೇರಿಸುವಂತೆ ಇವರಿಗೆ ದೀರ್ಘಾಯುವಾಗಲಿ ಎಂದು ಬಯಸುವೆವು.

ಶಾಲಿವಾಹನ ಶಕ ೧೮೫೧ನೆಯ ವಿಭವಸಂದ ಜ್ಯೇಷ್ಠ ಬ॥ ೧೪ ಶನಿವಾರದಿಂದ ವಿಭವ ಸಂ॥ರದ ಆಷಾಢ ಶು॥ ೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೯ನೆಯ ಮಿಥುನ (ಜಾತೆ೯ಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶ್ರಾದ್ಧತಿಥಿ	ಸೂರ್ಯ ಉ	ಸೂರ್ಯ ಅಸ್ತ
6	ಶನಿ	●	[illegible]	ಆರ್ದ್ರಾ	[illegible]	[illegible]	6. 1	7 0
7	ರವಿ	೧	[illegible]	ಪುನರ್ವಸು	[illegible]	[illegible]	6.11	7 0
8	ಸೋಮ	[illegible]	[illegible]	ಪುಷ್ಯ	[illegible]	[illegible]	6 11	[illegible]
9	ಕುಜ	[illegible]	[illegible]	ಆಶ್ಲೇಷಾ	[illegible]	[illegible]	6 12	7.
10	ಬುಧ	[illegible]	[illegible]	ಮಘಾ	[illegible]	[illegible]	6 12	7
11	ಗುರು	[illegible]	[illegible]	ಪುಬ್ಬಾ	[illegible]	[illegible]	6 12	7
12	ಶುಕ್ರ	[illegible]	[illegible] ೧	ಉತ್ತರಾ	[illegible]	[illegible]	6 12	7.

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿವಸ ಮಳೆ	ವಾರದ ಜುಮಲಾ ಮಳೆ
21	79— 0	74— 6	3—80	—
22	87— 9	74— 4	1—70	—
23	86— 8	72— 9	4—99	—
24	85— 0	73— 9	1—60	—
25	81— 1	73— 2	3—75	—
26	83— 8	71— 7	4—70	—
27	83— 7	71— 3	1—75	—
				22—29

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ.	ಆ.	ವರೆಗೆ ರೂ.	ಆ.
ಮೆಣಸು	...	7	—	7 —	[illegible]
ಗೇರುಬೀಜ	...	6 —	4	6	12
ಶುಂಠಿ	...	5 —	0	8 —	
ಊರ ಅಕ್ಕಿ ಬೆಲ್ತಿಗೆ	...	7 —	[illegible]	7 —	[illegible]
ರಂಗೂನು ಬೆಲ್ತಿಗೆ ಗೋಣಿ ಒಕ್ಕೆ		12 —		13 —	[illegible]
ಸುಗ್ಗಿ		5 —	12	6	[illegible]
ಎಣ್ಣೆ ನ. ಬೆಲ್ತಿಗೆ ಮುಡಿ ಒಕ್ಕೆ	...	6 —	4	6 —	[illegible]
ಗೋದಿ ಗೋಣಿ ಒಕ್ಕೆ	...	15 —	12	20 —	
ಹುರುಳಿ ಗೋಣಿ ಒಕ್ಕೆ		7 —	[illegible]	[illegible]	[illegible]
ಕಡಲೆ ಗೋಣಿ ಒಕ್ಕೆ	...	15 —	[illegible]	[illegible]	[illegible]
ಹೆಸರು ಗೋಣಿ ಒಕ್ಕೆ		14 —	[illegible]	[illegible]	[illegible]
ಹೆಸರುಬೇಳೆ ಗೋಣಿ ಒಕ್ಕೆ		18 —	[illegible]	27 —	[illegible]
ಉದ್ದು ಗೋಣಿ ಒಕ್ಕೆ		15 —	0	16 —	0
[illegible] ಗೋಣಿ ಒಕ್ಕೆ		14 —	[illegible]	18 —	0
[illegible] ಬಲ್ಲ ಖಂಡಿ ಒಕ್ಕೆ	...	70 —		—	
ಉಪ್ಪು ಗೋಣಿ ಒಕ್ಕೆ		4 —	5	4 —	14
ಕೊಬ್ಬರಿ ಖಂಡಿ ಒಕ್ಕೆ		90 —	0	95	
ಕೊಬ್ಬರಿ ಹಿಂಡಿ ಖಂಡಿ ಒಕ್ಕೆ	...	30 —	[illegible]		
ಎಳ್ಳಿಂಡಿ ಖಂಡಿ ಒಕ್ಕೆ	...	40 —	[illegible]		
ಕೊಬ್ಬರಿ ಎಣ್ಣೆ ಮುಡಿ ಒಕ್ಕೆ		6 —	[illegible]	7 —	0
ಎಳ್ಳೆಣ್ಣೆ ಮುಡಿ ಒಕ್ಕೆ		7 —	12	[illegible]	4
ಹರಳೆಣ್ಣೆ ಪೆಟ್ಟಿಗೆ ಒಕ್ಕೆ	...	7 —	12	[illegible]	4
ಮೋರಿಸ ಸಕ್ಕರೆ ಮುಡಿ ಒಕ್ಕೆ		3 —	10	3	
ಜೋನಿ ಬೆಲ್ಲ	...	5 —	10	6 —	[illegible]
ಸಾಸಿವೆ ಮುಡಿ ಒಕ್ಕೆ	...	8 —	8	—	
ಕೊತ್ತಂಬರಿ ಮುಡಿ ಒಕ್ಕೆ	..	3 —	12	[illegible]	0
ಸೇಲಮ್ ಕಾಫಿ ಖಂಡಿ ಒಕ್ಕೆ		370 —	0	376 —	0
ಚಿಕ್ಕಮಗಳೂರು ಅಡಿಕೆ ಖಂಡಿ ಒಕ್ಕೆ	...	160 —	0	—	
ಕಾಳುಮೆಣಸು ಖಂಡಿ ಒಕ್ಕೆ	...	425 —	0	430 —	0
ಯೇಲಕ್ಕಿ ಮುಡಿ ಒಕ್ಕೆ	...	50 —	0	56 —	
ಗೇರುಬೀಜ ಮುಡಿ ಒಕ್ಕೆ		3 —	[illegible]	3 —	10
ಹತ್ತಿಬೀಜ ಖಂಡಿ ಒಕ್ಕೆ		45 —	0	50 —	0
ತಾಮ್ರ ತಗಡು ಮಣ ಒಕ್ಕೆ	...	18 —	0	18 —	4
ತಾಮ್ರ ಪಾತ್ರೆಗಳು ಮಣ ಒಕ್ಕೆ	...	—	0	24 —	0
ಚೀನಿಬೆಳ್ಳಿ ಸೇರು ಒಕ್ಕೆ	...	16 —	4	—	
ಹಿತ್ತಾಳೆ ತಗಡು ಮಣ ಒಕ್ಕೆ	..	17 —	0	17 —	8
ಸತುವು ಒಕ್ಕೆ	...	13 —	12	—	
ಜುಮಾಸಾರೀ ಖಂಡಿ ಒಕ್ಕೆ		30 —	0	37 —	8

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ಡಾಂಕಬೇದಿಗೆ ಸಿದ್ಧೌಷಧ)

[illegible] ವನ್ನು ಸ್ವಾಧೀನಕ್ಕೆ ಕರುತ್ತದೆ. ಸೀಸೆ 1ಕ್ಕೆ ರೂ. 1—0—0

ಲಕ್ಷ್ಮೀವಿಲಾಸರಸ.

([illegible])

[illegible] ಸೀಸೆ 1ಕ್ಕೆ ರೂ. 1—0—0

ಶ್ರೀನಿವಾಸ ತೈಲ.

[illegible] ಸೀಸೆ 1ಕ್ಕೆ ರೂ. 0—8—0.

"ವಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[illegible] ಮೈಸೂರು.

ಏಜೆಂಟರು — ಆತ್ಮಾರಾಮ ಸೋಮಯ್ಯ ಮತ್ತು ಕಂಪೆನಿ, [illegible] ಮಂಗಳೂರು. [illegible]

ಸ್ವದೇಶೀ ಪಾಠ ಉಚಿತ! ಉಚಿತ!!

[illegible]

1929ನೇ ಇಸವಿಯ ಡೈರಿ

ವೈದ್ಯವಿದ್ಯಾ

[illegible]

ರಾಜವೈದ್ಯ ನಾರಾಯಣಜಿ ಕೇಶವಜಿ,

1/34 ಕೈನಾ ಬಜಾರು, ಮದ್ರಾಸು.

ಮದನಮಂಜರಿ ಮಾತ್ರೆಗಳು

[illegible]

ಡಿ. ಗೂಲಪ್ ಮಾರ್ಕೆಟ್, ಮಂಗಳೂರು.

ಪವಿತ್ರ ಖಾದಿ! ಬಡವರ ಖಾದಿ!!

[illegible] ಸರ್ಟಿಫಿಕೇಟು ಹೊಂದಿರುವ ಮತ್ತು ಇದೇ [illegible] ತೆರೆಯಲಾದ

"ಖಾದಿ ನಿಲಯ"ವು

ಎಲ್ಲಾ ಉಪಯೋಗಗಳಿಗಾಗುವ ಸರ್ವ ನಮೂನೆ ಪ್ಯಾಟರ್ನಗಳಾಗುವ [illegible]

ಖಾದಿಯನ್ನು ಸಂಗ್ರಹಿಸಿರುತ್ತದೆ. ದೇಶಬಾಂಧವರು ಮಹಾತ್ಮಾ

ಗಾಂಧಿಯವರು ಈ ವರ್ಷದ ಮಟ್ಟಿಗೆ ಕೈಕೊಂಡಿರುವ

ಒಂದೇ ಒಂದಾದ ಪ್ರಧಾನ ಪ್ರಚಾರ ಕಾರ್ಯವಾಗಿಟ್ಟಿರುವ

ಈ ಪವಿತ್ರ ಖಾದಿಯನ್ನು

ಬಳಕೆಗೆ ತರಲು ಸುಸಂದರ್ಭವು ಇದೇ! ತ್ವರೆಮಾಡಿರಿ!!

ವಂದೇ ಮಾತರಂ!!

ವಿಳಾಸ— ಖಾದಿ ನಿಲಯ,

(ವ್ಯವಸ್ಥಾಪಕರು, ಪೈ ಮತ್ತು ಕಂಪೆನಿ),

ಸಂತೆಕಟ್ಟೆ, ಪೋ, ಉಡುಪಿ, ದ. ಕ.

[illegible]

[illegible] . . . [illegible]

[illegible] . . . [illegible]

[illegible] . . . [illegible]

[illegible] . . . ೧೧

[illegible] ಸಂಗ್ರಹಗಳು

[illegible] . . . ೬-೩

ದಕ್ಷಿಣ ಕನ್ನಡ—ಮಂಗಳೂರು, ಅಳಕಾರು, ಗುರ್ಪುರ . . . ೩

[illegible] ಸಮಾಚಾರಗಳು . . . ೭

ಮರುಮಕ್ಕಳ್ತಾಯಂ ಮತ್ತು ಅಳಿಯಸಂತಾನದ ಕವಲಿನ ಪಾಲಿನ ಹಕ್ಕು . . . ೯

ಶ್ರೀ. ಕಾರಂತರ ತನ್ನ ಅಳಿಯ ಸಂತಾನದ ಮಸೂದೆಯ ಪ್ರತಿಪಾದನೆ . . . ೧೧

ತುಪ್ಪದಿಂದ ಹುಟ್ಟ ರಾಡುಮ (ಕತೆ) . . . ೧೩

ಪತ್ರವ್ಯವಹಾರ, ೧ . . . ೨

ಸ್ವದೇಶಾಭಿಮಾನಿ.

ತಾರೀಕು ೫ನೇ ಶುಕ್ರವಾರ ಜೂಲೈ ೧೯೨೯.

ಮೈಸೂರಿನ ರಾಜಕಾರಣ.
THE MYSORE POLITICS.

ಮೈಸೂರಿನ ರಾಜಕೀಯ ಪರಿಸ್ಥಿತಿಯು ದಿನದಿಂದ ದಿನ ಕೆಡುತ್ತಾ ಬರುತ್ತಿದೆ. ಯಾವ ರಾಜ್ಯವು ಒಂದು ಸಮಯದಲ್ಲಿ ರಾಮರಾಜ್ಯವೆಂದು ನಾಮಕರಣವನ್ನು ಹೊಂದಿ ಇತರ ಎಲ್ಲಾ ಹಿಂದೀ ರಾಜ್ಯಗಳಿಗೆ ಆದರ್ಶವಾಗಿ ತೋರಿಸಲ್ಪಡುತ್ತಿದ್ದಿತೋ ಅಂತಹ ರಾಜ್ಯವನ್ನು ಈ ದಿನ ಬೇಸರದಿಂದ ಕಾಣಬೇಕಾಗಿದೆ. ಪ್ರಜಾಸಮೃದ್ಧಿಯನ್ನೇ ಅನವರತವೂ ನಿರೀಕ್ಷಿಸುತ್ತ ರಾಜ್ಯಾಡಳಿತದ ಮೇಲೆ ತನ್ನ ಚಿಂತೆಯನ್ನು ಕೊಡುತ್ತಿದ್ದ ಶ್ರೀಮನ್ಮಹಾರಾಜರಾದರೂ ಈ ಬಾರಿ ಸುಮ್ಮಗೆ ಇದ್ದು ರಾಜ್ಯದೊಳಗಿನ ವಿಶೃಂಖಲತೆಯನ್ನೂ ಚೇತನಹರಣವನ್ನೂ ನೋಡಿ ಅಲಕ್ಷ್ಯದಿಂದಿದ್ದಾರೆ. ಇದು ಪ್ರಜೆಗಳ ದೌರ್ಭಾಗ್ಯವಲ್ಲದೆ ಮತ್ತೇನು!

ಬೆಂಗಳೂರು ಗಲಾಟೆಗಳ ನಂತರ ಹಿಂದೂ-ಮುಸಲ್ಮಾನ ಸಂಬಂಧಗಳ ಹುಟ್ಟಿಗೆ ಶಾಂತತೆಯು ನೆಲಸಬಹುದೆಂದು ನಾವು ಆಶಿಸಿದ್ದೆವು. ಹಾಗೂ ವಿಶ್ವೇಶ್ವರಯ್ಯ ಸಮಿತಿಯ ನೇಮಕವೂ ನಮ್ಮ ಆ ಆಶಾವಾದಕ್ಕೆ ಬೆಂಬಲವನ್ನೀಯಿತು. ಆದರೆ ದೇವರು ಕೊಟ್ಟರೂ ಪೂಜಾರಿ ಬಿಡ. ಬೆಂಗಳೂರು ಗಲಭೆಯ ತಾತ್ಕಾಲಿಕ ಗಲಿಬಿಲಿ ಮತ್ತು ಹೆದರಿಕೆಯ ಮಧ್ಯದಲ್ಲಿ ಸರಕಾರವು ವಿಶ್ವೇಶ್ವರಯ್ಯ ಸಮಿತಿಯ ನೇಮಕಕ್ಕೆ ಒಪ್ಪಿಗೆಯನ್ನು ಕೊಟ್ಟಿತಾದರೂ, ಮಹಾರಾಜರ ಈ ದಾನವು ಪ್ರಜಾಹಿತಕ್ಕೆ ಬಾರದಂತೆ ಮಾಡಲು ಮೈಸೂರು ಸರಕಾರಕ್ಕೆ ಮತ್ತೆ ಸಾಕಷ್ಟು ಸಮಯವೂ ಆಲೋಚನೆಯೂ ಸಿಕ್ಕಿತು.

ಸರಕಾರದ ಈ ನಿರಂಕುಶ ಪ್ರವೃತ್ತಿಗೆ ಸರಿಯಾಗಿಯೇ ವಿಶ್ವೇಶ್ವರಯ್ಯ ಸಮಿತಿಯ ಸದಸ್ಯರು ವರ್ತಿಸಿದರು. ಸಮಿತಿಯ ವರದಿಂಚನ ಮತ್ತು ಪ್ರಕಟಣೆ ವರೆಗೆ ಸುಮ್ಮನಿದ್ದ ಕೆಲವರು, ಮತ್ತೆ ಆ ವರದಿಗೆ ತಮ್ಮ ಒಪ್ಪಿಗೆ ಇಲ್ಲವೆನ್ನಲಿಕ್ಕೆ ಆರಂಭಿಸಿದರು. ತಮಗೆ ಮಹಾರಾಜರಿಂದ ಕೊಡಲ್ಪಟ್ಟ ಆ ಮಹತ್ವದ ಕೆಲಸವನ್ನು ನಿರ್ವಹಿಸಲಿಕ್ಕೆ ಶಕ್ತಿ ಸಾಕಾಗಲಿಲ್ಲವೆಂಬುದಕ್ಕೆ ಇದೇ ನಿದರ್ಶನವಾಯಿತು.

ವಿದ್ಯಾವಂತರಾದವರಾದರೂ ಹಲವು ಮಹನೀಯರು ಸರಕಾರದ ಬೆಂಬಲಕ್ಕೆ ಹೋಗಿ ಆತ್ಮಾಭಿಮಾನದ ಅಭಾವವನ್ನು ವ್ಯಕ್ತಗೊಳಿಸುವುದು ತೀರಾ ಶೋಚನೀಯ. ದಬ್ಬಾಳಿಕೆಯ ನಿರಂಕುಶ ಕೈಯೇ ಮೇಲೆತ್ತಲ್ಪಟ್ಟು ಆಧುನಿಕ ಸಂಸ್ಕೃತಿಯನ್ನೇ ಅಲ್ಲಗಳೆಯಬಿಚ್ಚಿಸುವ ಅಧಿಕಾರವೇ ದೇವದತ್ತವಾದ ಪೂಜನೀಯ ವಿಷಯವೆಂದು ತಮ್ಮ ಧರ್ಮಭಕ್ತಿ [illegible]ಸಲು ತಯ್ಯಾರಿರುವವರು ಎಷ್ಟೋ ಮಂದಿ, ರಾಜಭಕ್ತಿಯ ತಪ್ಪು ಗ್ರಹಿಕೆಯಲ್ಲಿ ಮೈಸೂರಿನ ಅಭಿವೃದ್ಧಿಯನ್ನೇ ಮೇಲಧಿಕಾರದ ಕೈಯೊಳಗೆ ಬಲಿಯೂಯುವವರೂ ಹಲವು ಮಂದಿ. ಮೇಲೆ ಪಕ್ಷಸ್ವಾರ್ಥದಿಂದಲೋ, ಜಾತೀಯ ದ್ವೇಷದಿಂದಲೋ, ದಬ್ಬಾಳಿಕೆಯ ಕೈಯೊಳಗೆ ಪೀಡಿಸಲ್ಪಡುವವರನ್ನು ನೋಡಿ ಸಂತೋಷಿಸಿ ಅಧಿಕಾರಿಗಳ ಹೊಗಳು ಭಟ್ಟರಾಗುವವರು ಹಲವು [illegible] ಮತ್ತು ಇಂತಹ ಶಿಕ್ಷಣಪಡೆದವರ ದುರ್ಬಲತೆಯನ್ನು ಸಾಧಿಸುತ್ತಿವೆ.

[illegible] ಎಸೆಂಬ್ಲಿ ಮತ್ತು ಕೌನ್ಸಿಲುಗಳ [illegible] ಇಡಿಯದ ಕೌನ್ಸಿಲುಗಳನ್ನು ಪ್ರಾಮುಖ್ಯತೆಯನ್ನು [illegible]ವಿಲ್ಲ. ಚುನಾಯಿಸಲ್ಪಡದೆ ಅಧಿಕಾರದ ಆಧಾರದಿಂದ ಅಧ್ಯಕ್ಷನ ಖುರ್ಚಿಯನ್ನು ತುಂಬಿಸಿ ಬಿಡುವ ದಿವಾನರ ವರ್ತನವಾದ ಜವಾಬ್ದಾರಿ ಸರಕಾರವನ್ನು ಧ್ಯೇಯವಾಗಿಟ್ಟುಕೊಳ್ಳಲಿಕ್ಕೆ ಕೂಡಾ ಬಿಡುವಂತಿಲ್ಲ. ದಿವಾನರು ಬರೇ ಮುಸಲ್ಲೀನಿಯ ದರ್ಪದಿಂದಲೇ ಆಳಲು ಯತ್ನಿಸುವಂತೆ ತೋರುತ್ತಿದೆಯಲ್ಲದೆ ಪ್ರಜೆಗಳ ವಿಶ್ವಾಸವನ್ನು ಸಂಪಾದಿಸಲು ಪ್ರಯತ್ನಿಸುವುದಿಲ್ಲ. ದಿವಾನ-ಅಧ್ಯಕ್ಷರ ತಾಳ್ಮೆ ಕೂಡಾ ದೊಡ್ಡದಿಲ್ಲವೆಂದು ಮೊನ್ನೆ ನಡೆದ ಒಂದು ಘಟನೆಯಿಂದ ತಿಳಿದುಬರುವುದು. ರಾಜಭಕ್ತಿ-ಮತ್ತು ಅಧಿಕಾರಿಯ ಭಯ—ಇವುಗಳಿಂದಲೇ ತುಂಬಿಹೋದ ಪ್ರಜೆಗಳಲ್ಲಿ ಇಂತಹ ಎಸೆಂಬ್ಲಿ—ಕೌನ್ಸಿಲುಗಳನ್ನು ಕೊಟ್ಟು ಈ ಎಸೆಂಬ್ಲಿ-ಕೌನ್ಸಿಲಿಗೆ ಇಂತಹ ಅಧ್ಯಕ್ಷರನ್ನು ಕೊಟ್ಟರೆ ಜವಾಬ್ದಾರಿ ಸರಕಾರವನ್ನು ಸ್ವಪ್ನಪ್ರಾಯವಾಗಿ ಕಾಣಬೇಕಾಗುವುದು.

ಸರ್. ಎಮ್. ವಿಶ್ವೇಶ್ವರಯ್ಯನವರ ದೃಢವಾದ ಆಳುವಿಕೆಯಿಂದ ಮೈಸೂರು ಲೋಕದ ಮುಂದೆ ಬಂದಿತು. ರಾಜಭಕ್ತಿ-ಮತ್ತು ಅದಕ್ಕಿಂತಲೂ ಮೇಲಿನದಾದ ಪ್ರಜಾಪ್ರೇಮ ಇವೆರಡರಿಂದ ಅವರು ಮೈಸೂರಿನ ಅಭಿವೃದ್ಧಿಯ ಮಾರ್ಗಗಳ ಶೋಧನೆಯನ್ನು ಮಾಡಿದರು. ಇದಕ್ಕಾಗಿ ಅವರು ಹಲವು ಮೈಸೂರು ಜನರ ಟೀಕೆಗೆ ಪಾತ್ರರಾಗಬೇಕಾಯಿತು. ಆದರೆ ಅವರ ಪ್ರಯತ್ನಗಳೂ ಕೆಲಸಗಳೂ ಚಿರಸ್ಥಾಯಿಯಾದುವು. ಈಗಿನ ದಿವಾನರೂ ಅಂತ ಚಿರಯಶಸ್ಸನ್ನು ಸಂಪಾದಿಸುವರೇ ಯಾವುದೊಂದು ಕೆಲಸವನ್ನಾದರೂ ಮಾಡಿರುವರೇ? ಈಗಿನ ದಿವಾನರು ಈ ಪ್ರಶ್ನೆಗೆ ಉತ್ತರವನ್ನು ಕೊಡಲಿಕ್ಕೆ ಸ್ವಲ್ಪ ಆತ್ಮಶೋಧವನ್ನು ನಡಸುವುದು ಅಗತ್ಯವಿದೆ.

ವಿದೇಶ ವರ್ತಮಾನ.

— ಇಂಗ್ಲಾಂಡಿನಲ್ಲಿ [illegible] ಬಹಳ [illegible]ಯಾಗುತ್ತಿದೆ, ಇಂಗ್ಲಾಂಡಿನ ಬೆಳೆಗೆ ಇದರಿಂದ ವಿಶೇಷ ನಷ್ಟವು ಉಂಟಾಗಿರುತ್ತದೆ.

— [illegible] ತುರ್ಕಿಸ್ಥಾನದ ಪತ್ತಿಯ ಬೆಳೆಗೆ ಮಿಡತೆಗಳ ದೆಸೆಯಿಂದ ವಿಶೇಷ ನಷ್ಟವುಂಟಾಗಿರುವುದರಿಂದ ರಷ್ಯಾದವರು ಪತ್ತಿಕೈಗಾರಿಕೆಗೆ ಇಜಿಪ್ತುದೇಶದಿಂದ ಹತ್ತಿಯನ್ನು ತರಿಸಲು ನಿಶ್ಚಯಿಸಿರುವರು.

— [illegible] ಸರಕಾರದವರು ಎಮ್‌ಸ್ಟರ್‌ಡಾಮಿನಿಂದ ಬಟೇವಿಯದ ವರೆಗೆ ಟಪ್ಪಾಲು ವಿಮಾನವನ್ನಿಡಲು ಯೋಚಿಸಿರುವರು. ಮೊದಲನೆಯ ವಿಮಾನವು ಎಮ್‌ಸ್ಟರ್‌ಡಾಮಿನಿಂದ [illegible] ಹದಿನೆರಡನೇ ತಾರೀಕಿಗೆ ಹೊರಡುವದು. [illegible] ಬಟೇವಿಯದಿಂದ ಹಿಂದಕ್ಕೆ ಹೊರಡುವುದು.

— [illegible] ವಾಕ್ಯದಲ್ಲಿರುವ ಶಿಷ್ಯರ [illegible] ಔಷಧಾಲಯಕ್ಕೆ ಮಧ್ಯರಾತ್ರಿ ಸಮಯದಲ್ಲಿ [illegible] ಹತ್ತಿ [illegible] ಲಕ್ಷ ರೂಪಾಯಿಗಳ ಮಾಲು ಸುಟ್ಟುಹೋಯಿತು. [illegible] ಆ ಸಮಯದಲ್ಲಿ ಕಾಣಲಿಲ್ಲ.

— [illegible] ಆಯುಧಗಳನ್ನು [illegible] ಕಳುಹಿಸಿದರು.

— [illegible] ಇರುವರೆಗೆ [illegible] ಸಾವಿರ ಮೈಲು [illegible] ಭೂಪ್ರದೇಶವು [illegible] ಎಂಬಾತನಿಂದ [illegible] ಕಂಡುಹಿಡಿಯಲ್ಪಟ್ಟಿರುತ್ತದೆ.

— [illegible] ಆರೋಗ್ಯದ ಸಲುವಾಗಿ '[illegible] ಫಂಡ್' ಎಂಬ ಹೆಸರಿನ ಸ್ಥಾಪಿತವಾದ ನಿಧಿಯಲ್ಲಿ ಇದುವರೆಗೆ [illegible] ಸಾವಿರ ಪವನುಗಳು ಜಮೆಯಾಗಿರುತ್ತವೆ. [illegible] ಮಹಾರಾಣಿ[illegible]ಯವರು ಇದಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಟ್ಟಿರುವರಂತೆ.

— ಜಪಾನಿನ ಪತ್ತಿಯ [illegible]ಗಳಲ್ಲಿ ಮೊದಲು ರಾತ್ರಿ ಕೆಲಸವು ನಡೆಯುತ್ತಿತ್ತು. ಇನ್ನು ಮುಂದೆ ರಾತ್ರಿ ೧೧ [illegible] ಘಂಟೆಯ ವರೆಗೆ [illegible]. ಈ ವರ್ಷ ಪ್ರಾಯದ ಕೆಳಗಿನ [illegible] ಕೆಲಸಮಾಡತಕ್ಕದ್ದಲ್ಲವೆಂದು ಒಂದು ಕಾನೂನು ನಿರ್ಮಿತವಾಗಿರುತ್ತದೆ.

— ಐಯರ್ಲಾಂಡಿನ ನೇಶನಲ್ ಯೂನಿವರ್ಸಿಟಿಯ ಒಬ್ಬ ವಿದ್ಯಾರ್ಥಿಯು ವಿದ್ಯುಚ್ಛಕ್ತಿಯ ಸಹಾಯದಿಂದ ರೈಲು ಬಂಡಿಯನ್ನು ಓಡಿಸಲು [illegible] ಕಂಡುಹಿಡಿದಿರುವನು. ಹೀಗೆ ರೈಲು ಓಡಿಸಲು, ಈಗಿನ ಕ್ರಮಕ್ಕಿಂತ ಹತ್ತು ಪಾಲು ಖರ್ಚು ಕಡಿಮೆಯಾಗುವದಂತೆ.

— ಇಂಗ್ಲಿಷ ವಿದ್ಯಾರ್ಥಿಗಳು ಹಿಂದೂಸ್ಥಾನವನ್ನು ಸಂಚರಿಸಬಾರದೇಕೆಂದು ಮಾಡಿದ [illegible] ಲೋರ್ಡ [illegible] ಸದಭಿಪ್ರಾಯವನ್ನೇ ಸೂಚಿಸಿರುವರು. ೧೯[illegible] ವರ್ಷ ಪ್ರಾಯದೊಳಗಿನ ಹುಡುಗರೇ ಸಂಚಾರಕ್ಕೆ ಹೊರಟು ಹಿಂದೀಯರ ವಿಷಯವಾದ ಪ್ರತಿಯೊಂದು ಸಂಗತಿಯನ್ನೂ ಅರಿತುಕೊಳ್ಳುವರು. ರಾಜಧಾನಿಯಲ್ಲಿಯೂ ಸಂಸ್ಥಾನಗಳಲ್ಲಿಯೂ ಇವರು [illegible] ಸಮಯ ಉಳಕೊಂಡು ಕೃಷಿಯ ಪರಿಸ್ಥಿತಿಗಳನ್ನು ಕಂಡುಕೊಳ್ಳುವರು.

— ಬರ್ಲಿನ ಭಿಕ್ಷುಕರು ತಮ್ಮದೇ ಒಂದು ಪತ್ರಿಕೆಯನ್ನು ಹೊರಡಿಸುತ್ತಿರುವರಂತೆ. ಈ ಪತ್ರಿಕೆಗೆ 'ಭಿಕ್ಷುಕರ ಪತ್ರಿಕೆ' ಎಂದು ಹೆಸರು. ವಾರದಲ್ಲಾದ ಮದುವೆಗಳು, ಮರಣಗಳು, ಮೊದಲಾದವುಗಳು ವಿವರವಾಗಿ ಈ ಪತ್ರಿಕೆಯಲ್ಲಿ ಸೂಚಿಸಲ್ಪಡುವವು. ಇದುಮಾತ್ರವಲ್ಲದೆ ಯಾವನು ಧರ್ಮಿಷ್ಠ, ಭಿಕ್ಷುಗಳಿಗೆ ಯಾವನ [illegible] ತೆರೆದಿರುವದು, ಅಂತಹ ಧರ್ಮಿಷ್ಠನು ಯಾವ ಸಮಯದಲ್ಲಿ [illegible] ಎಂಬ ಸಂಗತಿಯು ಅದರಲ್ಲಿದೆ.

— ಫಿಲ್ಲಡೆಲ್ಫಿಯ ಎಂಬಲ್ಲಿ ಒಂದು ಕಾರಖಾನೆಯು ನಿರ್ಮಿಸಲ್ಪಡುತ್ತಲಿದೆ. ಇದರ ಗೋಡೆಗಳಿಗೆ ಒಂದೇ ಬಣ್ಣವನ್ನು ಬಳೆಯುವದಿಲ್ಲ. ಬೇರೆ ಬೇರೆ ಬಣ್ಣಗಳನ್ನು ಬಳೆಯುವರು. ಅದೇ ರೀತಿ ಅಲ್ಲಿಯ ಯಂತ್ರಸಾಮಗ್ರಿಗಳಿಗೂ ವಿವಿಧ ಬಣ್ಣಗಳ ಬರೆಗಳನ್ನೆಳೆಯುವರು. ಅಲ್ಲಿ ಕೆಲಸಮಾಡುವವರು ಒಂದೇ ಬಣ್ಣದ ಉಡುಪನ್ನು ಧರಿಸದೆ ಬೇರೆ ಬೇರೆ ಬಣ್ಣದ ಉಡುಪನ್ನು ಧರಿಸಬೇಕಾಗುವದಂತೆ.

— ಡಿ. ಅಲೈನ ಜರ್ಬೊಲ್ಟ್ನೆಂಬವನು ನಾಲ್ವತ್ತು ಅಡಿ ಉದ್ದದ ಒಂದು ದೋಣಿಯಲ್ಲಿ ಕುಳಿತು ಭೂಸಂಚಾರವನ್ನು ಮಾಡಿ ಮುಗಿಸಿರುವನು. ಕೆಂಪ್ಸ್ ಎಂಬಲ್ಲಿಂದ ಆತನು ನ್ಯೂಯೋರ್ಕಿಗೆ ಹೊರಟುಹೋದನು. ೩೦೦೦ ಮೈಲುಗಳ ದೂರವನ್ನು ಆತನು ೭೨ ದಿನಗಳಲ್ಲಿ ಕ್ರಮಿಸಿದನು. ಮೂರು ಸಲವೆ ಆತನಿಗೆ ಬಿರುಗಾಳಿಯು ತಡೆಗಟ್ಟಿತು. ಒಮ್ಮೆ ಆತನ ಕೂಡೆ ಇದ್ದ ನೀರು ಮುಗಿದ ಕಾರಣ ಒಂದೇ ತಪ್ಪಿಯಂತೆ ನೀರು ಕುಡಿದು ಆತನು ಹಲವು ದಿನಗಳನ್ನು ಕಳೆದನ್ನನಂತೆ. ಹತ್ತು ದಿನಗಳ ವರೆಗೆ ಆತನೊಮ್ಮೆ ನಗ್ನನಾಗಿಯೇ ಇದ್ದನು. ಕಳೆದ ನವಂಬರ ತಿಂಗಳಿನಲ್ಲಿ ಸ್ಟೈಟ್ ವಿನ್ಸೆಂಟ್ ಎಂಬಲ್ಲಿ ಆತನ ದೋಣಿಯು ಒಡೆದುದರಿಂದ ಅದನ್ನು ಸರಿಮಾಡುತ್ತ ಹಲವು ತಿಂಗಳುಗಳ ವರೆಗೆ ಆತನು ಅಲ್ಲಿಯೇ ಇರಬೇಕಾಯಿತು. ಆಗ ಆತನು ತನ್ನ ಚರಿತ್ರೆಯನ್ನೂ ಬರೆದಿಟ್ಟನು. ಈಗ ಆತನು ಫ್ರಾನ್ಸ್ ದೇಶಕ್ಕೆ ತಲಪಿರುವನು.

ಒಳದೇಶ ವರ್ತಮಾನ.

— ವ್ಯಾಸರಾಯರು ಇಂಗ್ಲಾಂಡಿಗೆ ಹೊರಟುಹೋಗುವ ಸಂದರ್ಭದಲ್ಲಿ ಕೈಸರಾಯಿಯವರ ಪರವಾಗಿ ರಾಜಾ ಬಿಜಯಸಿಂಗ ಮದೋರಿಯಾ ಎಂಬವರು ಅವರಿಗೆ, ಸುಖಪ್ರಯಾಣವು ಲಭಿಸಲೆಂದು ಬಯಸಿ ವಾರ್ತೆಯನ್ನು ಕಳುಹಿಸಿರುವರು. ಅದರ [illegible] ಹಲವು ಕಾಯಸಕ್ತರಾಗಿರುವ [illegible] ತಮ್ಮ [illegible] ಸಮಾಜವನ್ನು ಮರೆಯಲಾರರೆಂದೂ ವಾರ್ತೆಯಲ್ಲಿ ಸೂಚಿಸಲ್ಪಟ್ಟಿರುತ್ತದೆ.

— ಎಸೆಂಬ್ಲಿ ಬಾಂಬು ಕೈದಿಗಳಾದ ಮಿ. ಭಗತ್‌ಸಿಂಗ್ ಮತ್ತು ದತ್ತ ಇವರಿಬ್ಬರೂ ಲಾಹೋರಿನಲ್ಲಿ ಬಂಧನದಲ್ಲಿರುವರು. ಇಬ್ಬರೂ ಕಳೆದ [illegible] ದಿನಗಳಿಂದ ಉಪವಾಸವನ್ನು ಕೈಕೊಂಡಿರುವರಂತೆ. ಸೆಂಟ್ರಲ್ ಜೈಲಿನ ಅಧಿಕಾರಿಗಳು ಪತ್ತನು ಆಹಾರವನ್ನು ತೆಗೆದುಕೊಳ್ಳುವಂತೆ ಎಷ್ಟೋ ಪ್ರಯತ್ನಗಳನ್ನು ಮಾಡಿದರು. ಆದರೆ ಅವರ ಪ್ರಯತ್ನಗಳು ಫಲಿಸಲಿಲ್ಲ.

— [illegible] ಪತ್ರ [illegible]ವನ್ನು ನಾಡಲು ಹೊರಟಿರುವ ಶೇಟ್ ಜಮುನಾಲಾಲ ಬಜಾಜರೂ, ಪಿ. ಜಯರಾಮದಾಸ ದೌಲತರಾಮರವರೂ ಸಂಚಾರದಲ್ಲಿ ಭಾಷಣಗಳನ್ನು ಮಾಡುತ್ತಿರುವರು.

— ದಿಲ್ಲಿಯಲ್ಲಿ ಒಬ್ಬ ವ್ಯಕ್ತಿಯು ಕೆಂಪು ಕಾಗದಗಳ ಮೇಲೆ ಅಕ್ಷರಗಳನ್ನು ಬರೆದು ಜನರಿಗೆ [illegible] ಹೆದರಿಕೆಯನ್ನು ಹುಟ್ಟಿಸಿದನಂತೆ. ಆತನನ್ನು ಹಿಡಿದು ಕೈದುಮಾಡುವ ಸಲುವಾಗಿ ಎಡಿಶನಲ್ ಡಿಸ್ಟ್ರಿಕ್ಟ ಮೆಜಸ್ಟ್ರೇಟರು ವಾರಂಟುಗಳನ್ನು [illegible] ಪೋಲೀಸರ ವಶಕೊಟ್ಟಿರುವರು.

— [illegible] ಗಲಭೆಗಳಾಗಲು, [illegible] ಆರ್ಯಸಮಾಜದವರು [illegible]ಯನ್ನು ಉದ್ರೇಗಗೊಳಿಸುವಂತಹ ಭಾಷಣಗಳನ್ನು ಮಾಡಿದುದೇ ಕಾರಣವೆಂದು ಒಬ್ಬ ಮುಸಲ್ಮಾನ ಮ[illegible]ರೆನ್ನುವರು. [illegible] ಆರ್ಯಸಮಾಜದವರ [illegible]ಗಳನ್ನು ತಡೆಗಟ್ಟಬೇಕೆಂದು ಅವರು ಕೇಳುವರು. ಪೋಲೀಸ ಕಮಿಶನರ ಅಭಿಪ್ರಾಯದಂತೆ ಕೆಲವು [illegible] ಭಾಷಣವನ್ನು ಕೊಟ್ಟ[illegible] ಜಗಳವು [illegible] ಆ [illegible] ಎರಡೂ [illegible] ಹಿತವಾಗುತ್ತದೆಂದೂ ವ್ಯಕ್ತವಾಗುವದು.

— [illegible] ಸಮೀಪದಲ್ಲಿರುವ ಒಂದು ಹಳ್ಳಿಯಲ್ಲಿ [illegible] ತನ್ನ ಪ್ರಾಯಕ್ಕಿಂತ ಹೆಚ್ಚಾದ [illegible] ನನ್ನು [illegible] ಆಹಾರವನ್ನು ಕೊಟ್ಟು ತನ್ನ ಗಂಡನನ್ನು ಕೊಂದಿದ್ದಳು. ಅವಳ [illegible] ವಿಚಾರಣೆಯಾಗಿ ಅವಳಿಗೂ, ಅವಳ ಪ್ರಿಯನಿಗೂ, [illegible] ಶಿಕ್ಷೆಯನ್ನು ವಿಧಿಸಿರುವರು.

೧೯[illegible]ನೇ ಇಸವಿಯ ಒಂದು ಕಾನೂನಿನ ಮೂಲಕವಾಗಿ, ಜಿಲ್ಲೆಯ ಆರೋಗ್ಯ ಇಲಾಖೆಯ ಉದ್ಯೋಗಸ್ಥರು, ಅಧಿಕವಾಗಿ ಮದ್ಯವನ್ನು ಕುಡಿಯುವದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ಜನರಿಗೆ ಬೋಧಿಸಬೇಕಾಗಿತ್ತು. ಇನ್ನು ಮುಂದಕ್ಕೆ ಈ ಉದ್ಯೋಗಸ್ಥರು ಮದ್ಯಪಾನವನ್ನು ಪೂರ್ಣವಾಗಿ ನಿಷೇಧಿಸುವಂತೆ ಭಾಷಣಗಳನ್ನು ಕೊಡಬೇಕೆಂದಾಗಿರುತ್ತದೆ.

ಗಿರಣಿ ಅಧಿಕಾರಿಗಳ ಒಂದು ಡೆಪ್ಯುಟೇಶನು ವ್ಯಾಸರಾಯಿ ದೊರೆಗಳ ಭೇಟಿಯನ್ನು ಪಡೆಯಿತು. ಮಿ| ಮೋಡಿಯವರೇ ಡೆಪ್ಯುಟೇಶನ ನಾಯಕರಾಗಿದ್ದರು. ಜಪಾನಿನಿಂದ ಕೈಗಾರಿಕೆಯ ಸಾಮಾನುಗಳು ಹಿಂದೂಸ್ಥಾನಕ್ಕೆ ವಿಶೇಷವಾಗಿ ತರಿಸಲ್ಪಡುವದರಿಂದ ಹಿಂದೂಸ್ಥಾನದ ಕೈಗಾರಿಕೆಗೆ ತಡೆಯುಂಟಾಗಿರುತ್ತದೆಂದೂ, ಹಿಂದೂಸ್ಥಾನದ ಕೈಗಾರಿಕೆಯ ರಕ್ಷಣೆಗೆ ಏನಾದರೂ ವ್ಯವಸ್ಥೆಮಾಡಬೇಕೆಂದೂ, ಆಮದಿನ ಮೇಲೆ ಸುಂಕವನ್ನು ಏರಿಸಬೇಕೆಂದೂ ಮಿ| ಮೋಡಿಯವರು ಹೇಳಿದರು. ಈ ಕುರಿತಾಗಿ ತಾನು ಆಲೋಚಿಸುವೆನೆಂದು ವ್ಯಾಸರಾಯರವರು ಹೇಳಿದರು.

— ಮುಂಬಾಯಿಯಲ್ಲಿ ಕಳೆದ ಸೋಮವಾರ ಪುನಃ ಒಮ್ಮೆ ಗಲಭೆಯುಂಟಾಯಿತು. ಗಿರಣಿ ಕಾಮಗಾರ ಯೂನಿಯನಿನ ಸ್ವಯಂಸೇವಕರೂ ನಂಬಿಗಸ್ಥ ಕೆಲಸಗಾರರೂ ಹೊಡೆದಾಡಿಕೊಂಡರು. ಕೆಲಸಗಾರರ ಸಂಖ್ಯೆಯೇ ಹೆಚ್ಚಾಗಿದ್ದಿತಾದುದರಿಂದ ಅವರು ಜಯಶಾಲಿಗಳಾದರು, ಸಕಾಲದಲ್ಲಿ ಪೋಲೀಸರು ಬಂದು ತಲಪಿದರು. ಐದು ಮಂದಿ ಸ್ವಯಂ ಸೇವಕರು ಕೈದುಮಾಡಲ್ಪಟ್ಟರು. ಹೀಗೆ ಬೇರೆ ಒಂದೆರಡು ಕಡೆಗಳಲ್ಲಿಯೂ ಗಲಭೆಯುಂಟಾಯಿತು.

—ಲಾಹೋರಿನ ಸಮೀಪ [illegible] ಎಂಬ ಹಳ್ಳಿಯಲ್ಲಿ ಬೆಂಕಿಯುಂಟಾಗಿ ಇಡೀ ಹಳ್ಳಿಯೇ ಸುಟ್ಟುಹೋಯಿತು. ಒಂದೆರಡು ಮನೆಗಳು ಮಾತ್ರ ಸುಡದೆ ಉಳಿದುವು.

—ದಿಲ್ಲಿಯಲ್ಲಿ ಒಂದು ಚಮತ್ಕಾರಿಕವಾದ ಆಭರಣಗಳ ಕಳವು ನಡೆಯಿತು. ಕಳ್ಳನು ಒಬ್ಬ ಬ್ರಾಹ್ಮಣ ಹೆಂಗಸಿನ ಮನೆಗೆ ಹೋಗಿ, ತನ್ನ ಯಜಮಾನನು ಆಕೆಯನ್ನು ಔತಣಕ್ಕೆ ಕರೆದಿರುವನೆಂದು ಹೇಳಿದನು. ಹೆಂಗಸು ಇದನ್ನು ನಂಬಿ ತನ್ನ ಆಭರಣಗಳನ್ನು ಧರಿಸಿ ಆತನ ಹಿಂದೆಯೇ ಹೊರಟಳು. ಆಭರಣಗಳನ್ನು ಧರಿಸಬಾರದೆಂದೂ ಆಭರಣಗಳನ್ನು ಧರಿಸಿದರೆ, ಅವಳು ಧನಿಕಳೆಂದು ಯೋಚಿಸಿ, ತನ್ನ ಯಜಮಾನನು ಅವಳಿಗೆ ದಕ್ಷಿಣೆಯನ್ನು ಕೊಡಲಾರನೆಂದೂ ಕಳ್ಳನು ಹೆಂಗಸಿಗೆ ತಿಳಿಸಿದನು. ಅದುಕಾರಣ ಹೆಂಗಸು ಎಲ್ಲ ಆಭರಣಗಳನ್ನು ತೆಗೆದು ಒಂದು ಪೆಟ್ಟಿಗೆಯಲ್ಲಿಟ್ಟು ಕಳ್ಳನ ಹಿಂದೆಯೇ ನಡೆದಳು. ಕಳ್ಳನ ಯಜಮಾನನ ಮನೆಯನ್ನು ತಲುಪಿದೊಡನೆ ಕಳ್ಳನು ಅವಳ ಮನೆಗೆ ಹೋಗಿ ಸುಲಭದಲ್ಲಿಯೇ ಪೆಟ್ಟಿಗೆಯನ್ನು ಕಳವುಮಾಡಿ ಪಾರಾದನು. ಪೋಲೀಸರು ಆತನನ್ನೀಗ ಹುಡುಕುತ್ತಿರುವರು.

—ಈ ವರುಷ ಲಾಹೋರಿನಲ್ಲಿ ನಡೆಯುವ ಕಾಂಗ್ರೆಸ್ ಸಭೆಗೆ ಪಂಜಾಬ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಮಹಾತ್ಮಾಜೀ, ಪಂಡಿತ ಜವಾಹಿರಲಾಲನೆಹರು, ಮಿ. ಸುಭಾಷಚಂದ್ರಬೋಸ್, ಮಿ. ವಲ್ಲಭಭಾಯಿ ಪಟೇಲ್, ಮೌಲಾನಾ ಅಜಾದ್, ಇವರಲ್ಲಿ ಯಾರಾದರೊಬ್ಬರು ಅಧ್ಯಕ್ಷರಾಗಬೇಕೆಂದು ಸೂಚಿಸುವರು. ಇದೇ ರೀತಿ ಮಧ್ಯಪ್ರಾಂತದ ಮರಾಠಿ ಕಮಿಟಿಯವರೂ ಅಭಿಪ್ರಾಯಪಡುವರು. ಕಾಂಗ್ರೆಸ್ ನಡೆಯಲು ಯಾವ ಸ್ಥಳವನ್ನು ಆರಿಸಬಹುದೆಂದು ಸ್ವಾಗತ ಕಮಿಟಿಯವರು ಆಲೋಚನೆಯಲ್ಲಿಯೇ ಇರುವರು. ನಾಲ್ಕೈದು ಸ್ಥಳಗಳು ಇದುವರೆಗೆ ಆರಿಸಲ್ಪಟ್ಟಿರುತ್ತವೆ. ಮಿಂಟೋಪಾರ್ಕಿನ ವಿಷಯವು ಹತಾಶರಾಗದೆ, ಅದನ್ನು ಹೊಂದುವ ಪ್ರಯತ್ನಗಳೂ ನಡೆಯುತ್ತಲಿವೆ.

ದಕ್ಷಿಣ ಕನ್ನಡ.

ಮಂಗಳೂರು:—ದಿವಂಗತ ಶ್ರೀ ಅಮ್ಮೆಂಬಳ ಸುಬ್ರಾಯ ಪೈಯವರ ಪುತ್ರ ಶ್ರೀ ಬಾಲಕೃಷ್ಣ ಪೈಯವರು ಕ್ಷಯರೋಗದ ನಿಮಿತ್ತವಾಗಿ ಕಾಸರಗೋಡಿನಲ್ಲಿ ಕಳೆದ ತಾ. ೨೮ನೇ ಶುಕ್ರವಾರ ಮರಣಹೊಂದಿದರೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ.

ಮಂಗಳೂರು ತಾಲೂಕು ಬೋರ್ಡಿನ ಬರುವ ಸಾಧಾರಣ ಸಭೆಯು ತಾಲೂಕು ಬೋರ್ಡು ಆಫೀಸಿನಲ್ಲಿ ಇದೇ ಬರುವ ೯ನೇ ಮಂಗಳವಾರ ಅಪರಾಹ್ನ ಘಂಟೆ ೩ಕ್ಕೆ ಜರಗುವದು.

ಶ್ರೀ ಕೆ. ಆರ್. ಕಾರಂತ, ಎಮ್. ಎಲ್. ಸಿ ಯವರು ಇದೇ ಬರುವ ೯ನೇ ಮಂಗಳವಾರ ಸಾಯಂ ಘಂಟೆ ೫-೩೦ಕ್ಕೆ, ಥಿಯೊಸೊಫಿಕಲ್ ಲೋಜಿನಲ್ಲಿ 'ನಾಗರೀಕ ಜೀವನದ ಕೆಲವು ಮಾರ್ಗಗಳು' ಎಂಬುದರ ಕುರಿತಾಗಿ ಭಾಷಣವನ್ನೀಯುವರು. ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳವರು ಅಧ್ಯಕ್ಷರಾಗುವರು. ಸರ್ವರಿಗೂ ಸುಸ್ವಾಗತವಿರುತ್ತದೆ.

ತಾರೀಕು ೨೯-೬-೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೨೪ ಮರಣಗಳಾದವು. ಈ ಪೈಕಿ ಸಿಡುಬಿನಿಂದ ೪, ಅತಿಸಾರದಿಂದ ೨, ಶ್ವಾಸಕೋಶದ ರೋಗಗಳಿಂದ ೬, ಜನನ ಸಮಯ ಮರಣ ೧, ಇತರ ಎಲ್ಲಾ ಕಾರಣಗಳಿಂದ ೧೧. ಜನನ ಸಂಖ್ಯೆ ೬೨.

ಇಲ್ಲಿಯ ಕೆನರಾ ಹ್ಯಾಸ್ಕೂಲಿನ ಉಪಾಧ್ಯಾಯರಾದ ಶ್ರೀ ಬಂಟವಾಳ ಪುಂಡರೀಕ ಬಾಳಿಗರವರು ಇದೇ ಜುಲೈ ೧ನೇ ತಾರೀಕಿಗೆ ಕೆಲಸದಿಂದ ನಿವೃತ್ತರಾಗಿ, ಅವರ ಬದಲು ಶ್ರೀ ಎಮ್. ವಾಸುದೇವ ಪ್ರಭು ಎಮ್. ಎ. ಎಲ್. ಟಿ. ಯವರು ಉಪಾಧ್ಯಾಯರಾಗಿ ಸೇರಿರುವರು. ಶ್ರೀ. ಬಿ. ಪುಂಡರೀಕ ಬಾಳಿಗರವರು ಶಾಲೆಯು ಸ್ಥಾಪಿಸಲ್ಪಟ್ಟಂದಿನಿಂದ ಸೇರಿದ ಉಪಾಧ್ಯಾಯರಲ್ಲಿ ಒಬ್ಬರಾಗಿರುವರು.

ಇದೇ ಬರುವ ಆದಿತ್ಯವಾರ (ತಾ. ೭-೭-'೨೯) ಸಾಯಂಕಾಲ ೫ ಗಂಟೆಗೆ ಇಲ್ಲಿನ ಮಹಿಳಾ ಸಮಾಜದಲ್ಲಿ ಮದ್ರಾಸಿನ [illegible] ಪ್ರಚಾರ ಸಭೆಯ ಹಿಂದೀ ಪ್ರಚಾರಕರಾದ ಶ್ರೀಯುತ ಪಂಡಿತ ದೇವದೂತಜೀಯವರು 'ಸ್ತ್ರೀಯರೂ ರಾಷ್ಟ್ರೀಯ ಸೇವೆಯೂ' ಎಂಬುದರ ಕುರಿತು ಭಾಷಣ ಮಾಡುವರು. ಶ್ರೀಮತಿ ವಸಂತೀ ದೇವಿಜೀಯವರು ಅಧ್ಯಕ್ಷಸ್ಥಾನವನ್ನು ವಹಿಸುವರು. ಎಲ್ಲಾ ಸ್ತ್ರೀಯರಿಗೆ ಸ್ವಾಗತವಿದೆ.

ಅಜೆಕಾರು:— ವರಂಗ ಪಡುಕುಡೂರು ಗ್ರಾಮದ ತೀರ್ಥವನ್ನು ಹಿಡಕೊಂಡು ಎರಡು ತಿಂಗಳಿಂದ ಕಾಣೆಯಾದ ಬಾಲು ಎಂಬ ಉಗ್ರಾಣಿಯು ಮೊನ್ನೆ ಸಿಕ್ಕಿರುವನು. ಪೋಲೀಸರು ಅವನನ್ನು ಕೈದು ಮಾಡಿರುವರು.

ತಾ. ೨೫-೫-'೨೯ರಲ್ಲಿ ನಕ್ರೇರಬೇಂಕ ಎಂಬವನು ಪಯ್ಯಾರು ಬೆಟ್ಟನಲ್ಲಿರುವ ಮರದಲ್ಲಿ ಹಲಸಿನಕಾಯಿ ಕೊಯ್ಯಲು ಹತ್ತಿದವನು, ಅಕಸ್ಮಾತ್ ಕೈತಪ್ಪಿ, ಕೆಳಗೆ ಬಿದ್ದು ಮೃತಪಟ್ಟಿರುವನು.

ಮಳೆಗಾಲ. ಊರಲ್ಲಿ ಎಲ್ಲರೂ, ಕೃಷಿ, ಬೇಸಾಯದಲ್ಲಿ ಮಗ್ನರಾಗಿರುವರು.

ಗುರುಪುರ:—ಇದೇ ಕಳೆದ ತಾ. ೨೪-೬-'೨೯ರಲ್ಲು ಇಲ್ಲಿಯ ಮೂಳೂರು ಪಂಚಾಯತ ಕೋರ್ಟು ಮೆಂಬರರ ಪೈಕಿ ತನ್ನ ಮೆಂಬರಿಕೆಗೆ ರಾಜಿನಾಮೆ ಕೊಟ್ಟ ಎ. ಎನ್. ವೆಂಕಪ್ಪಯ್ಯನವರ ಸ್ಥಾನಕ್ಕೆ ಇನ್ನೊಬ್ಬ ಮೆಂಬರನ ಚುನಾವಣೆಯು ರಾ| ಮಂಗ್ಳೂರ ತಾಲೂಕು ತಹಸಿಲ್ದಾರರವರಿಂದ ನಡಿಸಲ್ಪಟ್ಟು ಸದ್ರಿ ಸ್ಥಾನಕ್ಕೆ ಉಮೇದುವಾರರು ಯಾರೂ ಇಲ್ಲದ್ದರಿಂದ ಎ. ಎನ್. ವೆಂಕಪ್ಪಯ್ಯನವರೇ ತಿರಗಿ ಸದ್ರಿ ಕೋರ್ಟಿನ ಮೆಂಬರರಾಗಿ ಚುನಾಯಿಸಲ್ಪಟ್ಟರು.

ಇತ್ತಲಾಗೆ ಈ ಪಂಚಾಯತ ಕೋರ್ಟು ಯೋಗ್ಯ ರೀತಿಯಿಂದ ನಡಿಸಲ್ಪಟ್ಟು ಹಲವು ವ್ಯಾಜ್ಯಗಳು ಯೋಗ್ಯ ರೀತಿಯಿಂದ ತೀರ್ಮಾನಿಸಲ್ಪಡುತ್ತವೆ. ಇಂಥಾ ಪಂಚಾಯತ ಕೋರ್ಟಿಗೆ ಬೇಕಾದ ಸಾಹಿತ್ಯಗಳು ಈ ವರೇಗೆ ಕೊಡದೆ ಇದ್ದದ್ದು ಬಹಳ ಶೋಚನೀಯ.

ಮೂಡಬಿದರೆಯ ಪಂಚಾಯತ ಕೋರ್ಟು ಪ್ರೆಸಿಡೆಂಟರೂ ತಾಲೂಕು ಬೋರ್ಡು ಉಪಾಧ್ಯಾಯರ ಪೈಕಿಯಲ್ಲಿ ಯೋಗ್ಯರೂ ಆಗಿದ್ದ ಶಿಶ್ಶಿಲಬೈಲು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಹೆಡ್ಮಾಸ್ತರರಾಗಿದ್ದ ಆರ್. ಎಸ್. ಬಾಗಿಲ್ತೋಡಿಯವರ. ಕಳೆದ ತಿಂಗಳಲ್ಲಿ ತನ್ನ ಉಪಾಧ್ಯಾಯ ವೃತ್ತಿಯಿಂದ ನಿವೃತ್ತರಾದರು. ಕಲಿಸುವಿಕೆಯಲ್ಲಿ ಈಗಲೂ ಅವರಲ್ಲಿ ಒಳ್ಳೇ ಯೋಗ್ಯತೆಯಿದ್ದರೂ ಅವರ ಅಸ್ವಸ್ಥದ ಸಂಬಂಧ ಕೆಲಸದಿಂದ ನಿವೃತ್ತರಾಗಬೇಕಾಯಿತು. ಇದರಿಂದ ಅವರ ಶಿಷ್ಯವರ್ಗಕ್ಕೂ ಅವರ ಸ್ನೇಹಿತರಿಗೂ ಅತ್ಯಂತ ವಿಷಾದವಾಗಿದೆ.

ವಿವಿಧ ಸಮಾಚಾರಗಳು.

ಸಮ್ಮತಿ ವಯಸ್ಸು

ಸಮ್ಮತಿ ವಯಸ್ಸಿನ ನಿರ್ಣಯದ ಬಗ್ಗೆ ನೇಮಕವಾದ ಕಮಿಟಿಯವರ ವರದಿಯು ಈಗ ಇಂಡಿಯಾ ಸರಕಾರದವರಿಗೆ ಅರ್ಪಿಸಲ್ಪಟ್ಟಿರುತ್ತದೆ [illegible]. ತಿಂಗಳ ಅಪ್ಪರಿಯೊಳಗೆ ಅದು ಪ್ರಕಟವಾಗುವುದು. ಸಮ್ಮತಿ ವಯಸ್ಸನ್ನು ನಿರ್ಣಯಿಸುವುದೇ ಕಮಿಟಿಯ ಕಾರ್ಯವಾಗಿತ್ತು. ಆದರೂ, ಸರಿಯಾದ ನಡವಳಿಕೆಯುಂಟಾಗಲು ಒಂದು ಕಾನೂನು ಮಂಜೂರು ಮಾಡಲ್ಪಟ್ಟು ಕಾನೂನು ಸಮ್ಮತವಾದ ಪ್ರಾಯಕ್ಕಿಂತ ಮೊದಲೇ ಮದುವೆ ಮಾಡುವ ಅಪರಾಧಿಗಳಿಗೆ ಶಿಕ್ಷೆ ವಿಧಿಸುವಿಕೆಯು ಅಗತ್ಯವೆಂದು ಕಮಿಟಿಯವರು ಕಂಡುಹಿಡಿದಿರುವರು. ಈ ಸಲುವಾಗಿ ಕಮಿಟಿಯವರು ಅನೇಕ ಸಾಕ್ಷ್ಯಗಳನ್ನು ವಿಚಾರಿಸಿ ೧೪ನೇ ವಯಸ್ಸು ಸಮ್ಮತಿ ವಯಸ್ಸಾಗಿ ಶಿಫಾರಸು ಮಾಡಿರುವರು. ಇದಕ್ಕೆ ವಿರೋಧವಾಗಿ ಮದುವೆಯು ಸಣ್ಣ ಪ್ರಾಯದಲ್ಲಿಯೇ ನಡೆದುದಾದರೆ ಹುಡುಗಿಯು ೧೫ ವರುಷಕ್ಕೆ ಮೇಲ್ಪಟ್ಟವಳಾದರೆ ಕೋರ್ಟಿನವರ ಒಪ್ಪಿಗೆಯಿಂದ ಅವರಿಗೆ ಕ್ಷಮೆಯೂ ದೊರೆಯಬೇಕೆಂದೂ, ೧೪ರಿಂದ ೧೫ ವರುಷದೊಳಗಿನ ಹುಡುಗಿಯರಿಗೆ ಮದುವೆ ಯಾದರೆ ಒಂದು ವರುಷದ ಕಾರಾಗೃಹ ಶಿಕ್ಷೆಯನ್ನು ಅನುಭವಿಸಬೇಕಾದೀತೆಂದೂ ಕಮಿಟಿಯವರು ಅಭಿಪ್ರಾಯಪಡುವರು.

ಕಮಿಟಿಯವರು ಮಾಡುವ ಮತ್ತೊಂದು ಮುಖ್ಯವಾದ ಸೂಚನೆಯಿದೆ. ಅದಾವುದೆಂದರೆ ಪ್ರತಿಯೊಂದು ಮದುವೆಯ ಸಂಗತಿಯೂ ಆ ಕಾರಣಕ್ಕೆ ನೇಮಿಸಲ್ಪಡುವ ರಿಜಿಸ್ಟ್ರಾರರಿಗೆ ತಿಳಿಸಲ್ಪಟ್ಟು ಅದು ರಿಜಿಸ್ಟರುಮಾಡಲ್ಪಡಬೇಕೆಂಬುದು. ಈ ರೀತಿ ಮದುವೆಯನ್ನು ರಿಜಿಸ್ಟರು ಮಾಡುವುದರಿಂದ ಮದುವೆಯಾದ ವಧೂವರರ ಪ್ರಾಯವು ತಿಳಿಯುವದು. ಕಾನೂನಿಗೆ ಸರಿಯಾಗಿ ನಡೆಯಬೇಕೆಂಬ ಹೆದರಿಕೆಯು ಜನರಲ್ಲಿ ಹುಟ್ಟುವುದು. ಇಲ್ಲಿಯಾರು ಅಪರಾಧಿಗಳೆಂಬುದು ಬೇಗನೆ ಕಂಡುಹಿಡಿಯಲ್ಪಟ್ಟು ಶಿಕ್ಷೆಯು ಸುಲಭವಾಗಿ ಕೊಡಲ್ಪಡುವುದಕ್ಕಾಗುವುದು.

ತಕ್ಕವಾದ ಸಂದರ್ಭಗಳಲ್ಲಿ ಮದುವೆಯ ಪ್ರಾಯಕ್ಕೆ ವ್ಯತಿರಿಕ್ತವಾಗಿ ನಡೆಯುವವರನ್ನು ಬಿಟ್ಟುಬಿಡಬಹುದೆಂಬ ಸೂಚನೆಯಿರುತ್ತದೆ. ಆದರೆ ಸಮ್ಮತಿವಯ ಕಮಿಟಿಯವರು ಈ ಸೂಚನೆಯನ್ನು ನಿಷೇಧಿಸುವರು. ಒಮ್ಮೆಗೆ ಧಾರಾಗಡೆಯನ್ನು ಮಾಡುವದಾದರೂ [illegible] ಒಪ್ಪಿಗೆ ಅಗತ್ಯವೆಂದೂ, ೧೫ ವರುಷ ಮೊದಲೇ ಹುಡುಗಿಯರಿಗೆ ಮದುವೆ ಮಾಡುವದಾದರೆ ಆಗ ಧಾರಾಗಡೆಯು ಅಸಾಧ್ಯವೆಂದೂ ಅವರು ಅಭಿಪ್ರಾಯಪಡುವರು.

ಭಗತ್‌ಸಿಂಗ್ ಮತ್ತು ದತ್ತರ ದಿನ.

ಮಿ. ಭಗತ್‌ಸಿಂಗ್ ಮತ್ತು ದತ್ತ ಇವರಿಬ್ಬರಿಗೂ ಸಹಾನುಭೂತಿಯನ್ನು ಸೂಚಿಸುವ ಸಲುವಾಗಿ ಲಾಹೋರಿನ ಮೋರಿಗೇಟಿನ ಹೊರಗೆ ಸುಮಾರು ಹತ್ತುಸಾವಿರ ಮಂದಿಗಳು ಕಳೆದ ಆದಿತ್ಯವಾರ ಸಭೆಕೂಡಿದರು. ಮಿ. ದತ್ತ ಮತ್ತು ಭಗತ್‌ಸಿಂಗ್ ಇವರಿಬ್ಬರೂ ಕಳೆದ ೨೩ ದಿನಗಳಿಂದ ಉಪವಾಸವನ್ನಾಚರಿಸುತ್ತಿರುವರಂತೆ. ಈ ಸಭೆಗೆ ಸರದಾರ [illegible] ಸಿಂಗರವರೇ ಅಧ್ಯಕ್ಷರಾಗಿದ್ದರು.

ಸಭೆಯ ಆದಿಯಲ್ಲಿ ಅತ್ಯಂತ ಉತ್ಸಾಹವು ಪ್ರದರ್ಶಿಸಲ್ಪಟ್ಟಿತು. ಮಿ. ದತ್ತ ಮತ್ತು ಭಗತ್‌ಸಿಂಗ್ ಇವರಿಬ್ಬರ ಜಯಿಸ್ಯಂ ಸಾವಿರ ಕಂಠಗಳು ನೆರೆದವರಲ್ಲಿ ಹಂಚಲಾದವು. ಲಾಹೋರದ 'ಒಳಸಂಚಿನ ಮೊಕದ್ದಮೆ'ಯ ಡಿಫೆನ್ಸ್ ಫಂಡಿಗೆ ಉದಾರ ಸಹಾಯವನ್ನು ಮಾಡಬೇಕೆಂದೂ, ಪ್ರತಿಯೊಬ್ಬರೂ ಖಾದಿಯನ್ನೇ ಧರಿಸಬೇಕೆಂದೂ ಭಾಷಣಗಳು ನಡೆದುವು. ಕಾರಾಗೃಹಗಳ ಸಂಬಂಧವಾಗಿ ಮಾತ. ಬಂದ ಪಂಜಾಬಿನ ಕಾರಾಗೃಹಗಳೆಂದರೆ ಪ್ರತ್ಯಕ್ಷ ನರಕವೆಂದೂ, ಈ ಸ್ಥಿತಿಯನ್ನು ಹೋಗಲಾಡಿಸುವ ಸಲುವಾಗಿಯೇ ಎಸೆಂಬ್ಲಿ ಬಾಂಬು ಕೈದಿಗಳು ಉಪವಾಸವನ್ನು ಆಚರಿಸುತ್ತಿರುವರೆಂದೂ ಭಾಷಣಗಳು ನಡೆದುವು. ಇಬ್ಬರು ಕೈದಿಗಳಿಗೂ ಸಹಾನುಭೂತಿಯನ್ನು ಸೂಚಿಸುವ ಒಂದು ಠರಾವು ಅಂಗೀಕರಿಸಲ್ಪಟ್ಟಿತು. ಸಭೆಯು ಪ್ರಾರಂಭವಾದೊಡನೆ ಬಿಳಿಬಟ್ಟೆಯಿಂದ ಸುತ್ತಿದ ಒಂದು ಚೆಂಡಿನಂತಹ ಕಟ್ಟು ಕಾಣಿಸಿತು. ಸಭೆಯ ನಡುವಿಗೆ ಬಿಸಾಡಲ್ಪಟ್ಟುದರಿಂದ ಒಬ್ಬನಿಗೆ ಏಟಾಯಿತು. ಒಡನೆ ಸಭಿಕರೆಲ್ಲರಿಗೆ ಸಿಟ್ಟುಬಂತು. ಅಧ್ಯಕ್ಷರು ಕೋಲಿನಿಂದ ಆ ಚೆಂಡನ್ನು ಕೈಯಲ್ಲಿ ಹಿಡಿದು ನೋಡಲಾಗಿ ಅದು ಅಪಾಯರಹಿತವಾದುದೆಂದು ತಿಳಿದುಬಂದಿತು. ಯಾರು ಈ ಚೆಂಡನ್ನು ಸಭೆಯ ಮಧ್ಯಕ್ಕೆ ಬಿಸಾಡಿದರೆಂಬ ಸಂಗತಿಯು ಇನ್ನೂ ತಿಳಿದುಬಂದಿಲ್ಲ. ಈ ಕಟ್ಟಿನ ಚೆಂಡು ಎರಡು ಸೇರು ಭಾರವಾಗಿದ್ದಿತು. ಇದರ ಏಟಿನಿಂದ ಮೂವರು ಗಾಯಹೊಂದಿದರಂತೆ. ಇಬ್ಬರು ಶೋಚನಾವಸ್ಥೆಯಲ್ಲಿ ಇರುವರು.

ಹೆಂಗಸರ ಸಾಹಸ.

ಒಂದೆರಡು ತಿಂಗಳುಗಳ ಹಿಂದೆ ಪಣ್ಯನಗರವೆಂಬಲ್ಲಿ ಹೆಂಗಸರು ಪೋಲೀಸ ಅಧಿಕಾರಿಗಳನ್ನು ಲಕ್ಷಿಸದೆ ತಮ್ಮ ಸಾಹಸವನ್ನು ಪ್ರದರ್ಶಿಸಿದುದು ಬಹು ಅಭಿನಂದನೀಯವಿದೆ. ಪಣ್ಯನಗರವು ಅಹಮದ ನಗರ ಜಿಲ್ಲೆಯ ಒಂದು ಪಟ್ಟಣವು. ಕಳೆದ ಎಪ್ರಿಲ್ ೨೩ನೇ ತಾರೀಕಿನ ದಿನ ಹನುಮಜಯಂತಿ ಉತ್ಸವವನ್ನು ಅಲ್ಲಿ ಎಂದಿನಂತೆಯೇ ಆಚರಿಸಬೇಕಾಯಿತು. ವರುಷ ವರುಷವೂ ಹನುಮಜಯಂತಿಯ ದಿನ ದೇವಸ್ಥಾನದಿಂದ ಉತ್ಸವವು ಹೊರಡುವ ಸಾಂಪ್ರದಾಯವಿದ್ದಿತು. ಉತ್ಸವವು ಮುಸಲ್ಮಾನರ ಮಸೀದಿಯನ್ನು ಹಾದುಹೋಗಬೇಕಾಗಿದ್ದಿತು. ಮುಸಲ್ಮಾನರು ಇದಕ್ಕೆ ಆತಂಕಿಸಿದುದರಿಂದ ಎರಡು ತಿಂಗಳುಗಳ ವರೆಗೆ ದೇವಸ್ಥಾನದಿಂದ ಮೂರು ಮೈಲುಗಳ ವಿಸ್ತೀರ್ಣದ ವರೆಗೆ ಯಾವ ತರದ ಮೆರವಣಿಗೆಯನ್ನೂ ಆಚರಿಸಬಾರದೆಂದು ಡಿಸ್ಟ್ರಿಕ್ಟ ಕಲೆಕ್ಟರವರು ಹುಕುಮು ಕೊಟ್ಟಿದ್ದರು. ಮತ್ತು ಮೆರವಣಿಗೆಯು ನಡೆದು ಜಗಳವುಂಟಾಗದಂತೆ ಅಧಿಕಾರಿಗಳು ನೂರು ಮಂದಿ ಆಯುಧಪಾಣಿಗಳಾದ ಪೋಲೀಸರನ್ನು ತರಿಸಿ ದೇವಳದ ಸಮೀಪ ನಿಲ್ಲಿಸಿದ್ದರು. ಹನುಮಜಯಂತಿ ದಿನ ಪೋಲೀಸರು ದೇವಳದ ಸುತ್ತಲೂ ಬಂದು ನಿಂತರು. ಜಳಗಾಗಬೇಕಾದರೆ ಅಂದಿನ ಪೂಜೆ ಮೊದಲಾದವುಗಳು ದೇವಳದ ಒಳಗಡೆಯಲ್ಲಿಯೇ ನಡೆದವು. ಸೂರ್ಯೋದಯದ ಸಮಯದಲ್ಲಿ ಉತ್ಸವ ಹೊರಡುವ ಪದ್ಧತಿಯಾಗಿದ್ದರೂ ಪೋಲೀಸರ ನಿಷೇಧವಿದ್ದುದರಿಂದ ಹಾಗೆ ಉತ್ಸವವು ಹೊರಡಲಿಲ್ಲ.

ಸುಮಾರು ಹತ್ತು ಘಂಟೆಯ ಸಮಯ ೨೦೦ ಮಂದಿ ಸ್ತ್ರೀಯರು ದೇವಳಕ್ಕೆ ಬಂದು ದೇವರ ಪ್ರತಿಮೆಯನ್ನು ಹೊತ್ತು ಹೊರಕ್ಕೆ ಬಂದು ಉತ್ಸವಕ್ಕೆ ಹೊರಡುವ ರಥದಲ್ಲಿ ಕುಳ್ಳಿರಿಸಿದರು. ಪೋಲೀಸರು ಅವರನ್ನು ಗದರಿಸಿ, ಅವರನ್ನು ಕೈದುಮಾಡುವುದಾಗಿಯೂ, ಅವರ ಮೇಲೆ ಮೊಕದ್ದಮೆ ಮಾಡುವುದಾಗಿಯೂ ಸೂಚಿಸಿದರು. ಆದರೆ ಇಂತಹ ಬೆದರಿಕೆಗೆ ಹೆಂಗಸರು ಹೆದರಲಿಲ್ಲ. ಒಡನೆಯೇ ಹೆಂಗಸರ ಸಂಖ್ಯೆಯು ಒಂದು ಸಾವಿರಕ್ಕೆ ಏರಿತು. ಸಬ್‌ಡಿವಿಜನಲ್ ಮೆಜಿಸ್ಟ್ರೇಟರೂ ಇತರ ಆಫೀಸರರೂ ಅಲ್ಲಿಗೆ ಬಂದು ಹೆಂಗಸರನ್ನು ತಡೆಯಲು ಪ್ರಯತ್ನಿಸಿದಾಗ ನಿಷ್ಫಲವಾಯಿತು. ಕೆಲವು ಹೆಂಗಸರು ರಥವನ್ನು ಎಳೆದು ಪೋಲೀಸರಿಗೆ ದಿಗಿಲುಂಟಾಗುವಂತೆ ಮಾಡಿದರು. ಮೆರವಣಿಗೆಯು ಹೊರಡಿಯೇ ಬಿಟ್ಟು ಮುಂದರಿಯಿತು. ಹೆಂಗಸರ ಧೈರ್ಯ ಸಾಹಸಗಳನ್ನು ನೋಡಿ ಚಕಿತರಾದ ಪೋಲೀಸರು ತಟಸ್ಥರಾಗಿಯೇ ನಿಂತುಬಿಟ್ಟರು. ಆದರೆ ಅಧಿಕಾರಿಗಳು ಮಾರ್ಗದ ಒಂದೆಡೆಯಲ್ಲಿ ಒಂದು ಗಾಡಿಯನ್ನು ಅಡ್ಡವಾಗಿ ಅದರ ಹಿಂದೆ ಪೋಲೀಸ ದಳವನ್ನು ನಿಲ್ಲಿಸಿ ಮೆರವಣಿಗೆಗೆ ತಡೆಗಟ್ಟಿದರು.

ರಥವು ರಥಸ್ಥಾನದಿಂದ ಬಂದುಬಿಟ್ಟಿತು. ತಡೆಯನ್ನು ನೋಡಿದೊಡನೆಯೇ ಹೆಂಗಸರು ರಥವನ್ನು ನಿಲ್ಲಿಸಿ ಪೋಲೀಸರೊಡನೆ ಯುದ್ಧಕ್ಕೆ ನಿಂತರು. ಹೆಂಗಸರೊಡನೆ ಗಂಡಸರು ೩-೪ ಇದ್ದರು. ಅವರನ್ನವರು ಉತ್ಸವಕ್ಕಾಗಿ ತಂದಿದ್ದರು. ಈ ದಂಡಿಯನ್ನು ಅವರು ಪೋಲೀಸರ ಕಟ್ಟುಗಳ ಕಡೆಗೆ ಎಸೆದುದರಿಂದ ಪೋಲೀಸರಿಂದ ಕಡ್ಡಿ ಬಿಡಲಾಗಲಿಲ್ಲ. ಆದುದರಿಂದ ಅವರು ಹಿಂದರಿಯಬೇಕಾಯಿತು. ಅಲ್ಲಿಂದ ಉತ್ಸವವು ಸಂಭ್ರಮದಿಂದ ಹೊರಟಿತು. ಮಸೀದಿಯನ್ನು ಮುಂದೆ ಹೋದರೂ ಏನೂ ಗಲಾಟೆ ನಡೆಯಲಿಲ್ಲ. ಪಟ್ಟಣದ ಎಲ್ಲ ಜಾತಿಯವರು ಹೆಂಗಸರನ್ನು ಗೌರವಿಸಿ, ಸ್ವಾಗತೀಕರಿಸಿದರು. ಉತ್ಸವವು ದೇವಳಕ್ಕೆ ಹಿಂದಿರುಗಿದ ಮೇಲೆ ಅಲ್ಲಿ ಮರುದಿವಸ ಒಂದು ಸಭೆ ನಡೆದು ಹೆಂಗಸರನ್ನು ಅಭಿನಂದಿಸಲಾಯಿತು.

ಮರುಮಕ್ಕತಾಯಂ ಮತ್ತು ಅಳಿಯಸಂತಾನದ ಕವಲಿನ ಪಾಲಿನ ಬಿಲ್ಲು.

ಮರುಮಕ್ಕತಾಯಂ ಮತ್ತು ಅಳಿಯಸಂತಾನ ಕಟ್ಟುಗಳನ್ನು ಆಚರಿಸುವವರು ಅನುಸರಿಸುವ ಪಾಲಿನ ಕಾನೂನನ್ನು ತಿದ್ದುಪಡಿಮಾಡಿ ಸ್ಪಷ್ಟಪಡಿಸುವುದು. [illegible] ಮತ್ತು ಆ ಆಕ್ಟನ್ನು ಮಂಜೂರು ಮಾಡಲಿಕ್ಕೆ ಗವರ್ನರ್ ಜನರಲ್ ಮತ್ತು ಗವರ್ನರರ ಸಮ್ಮತಿಯು ದೊರೆತಿರುವುದರಿಂದ ಈ ಕೆಳಗೆ ಕಾಣಿಸಿದಂತೆ ವಿಧಿಸೋಣವಾಗಿದೆ.

ಒಂದನೆಯ ಪರಿಚ್ಛೇದ

ಮೂಲ ವಿವರಣೆಗಳು:—

೧ ಈ ಆಕ್ಟು ಮರುಮಕ್ಕತ್ತಾಯಂ ಮತ್ತು ಅಳಿಯಸಂತಾನದ ಕವಲಿನ ಪಾಲಿನ ಆಕ್ಟು [illegible] ಎಂದು ಕರೆಯಲ್ಪಡುವುದು.

ಇದು ಇಡೀ ಮದ್ರಾಸು ಸಂಸ್ಥಾನಕ್ಕೆ ವ್ಯಾಪಿಸಿರುತ್ತದೆ.

ಮದ್ರಾಸು ಸಂಸ್ಥಾನದಲ್ಲಿ ಖಾಯಂ ವಾಸಿಸಿಕೊಂಡಿದ್ದು ಮರುಮಕ್ಕತ್ತಾಯಂ ಯಾ ಅಳಿಯಸಂತಾನದ ಕಟ್ಟುಗಳನ್ನು ಆಚರಿಸುವವರಿಗೂ ಸಂಸ್ಥಾನದ ಹೊರಗೆ ವಾಸಿಸಿಕೊಂಡಿದ್ದು ಈ ಕಟ್ಟುಗಳನ್ನು ಆಚರಿಸುವವರ ಸ್ಥಿರ ಆಸ್ತಿಗಳಿಗೂ ಈ ಆಕ್ಟು ಅನ್ವಯಿಸುತ್ತದೆ.

ಇದು [illegible] ನೆ ಇಸವಿಯ [illegible] ತಾರೀಖು [illegible] ಜಾರಿಗೆ ಬರತಕ್ಕದ್ದು.

೨. ಈ ಆಕ್ಟಿನಲ್ಲಿ ವಿಷಯ ಯಾ ಸಂದರ್ಭಗಳಲ್ಲಿ ವಿರೋಧಾರ್ಥ ಬಾರದಿದ್ದಲ್ಲಿ,

(i) 'ಕೋರ್ಟು' ಎಂದರೆ ಒಂದು ತರವಾಡಿನ ಸ್ಥಿರ ಆಸ್ತಿಗಳು ಯಾ ಅವುಗಳ ಒಂದಂಶ [illegible] ಜಿಲ್ಲೆಯ [illegible] ವ್ಯಾಜ್ಯಗಳ [illegible] ಕೋರ್ಟು ಎಂದು ತಿಳಿಯಬೇಕು.

(ii) 'ತವಾಡು' ಎಂದರೆ ಮರುಮಕ್ಕತಾಯಂ ಯಾ ಅಳಿಯಸಂತಾನದ ಕಟ್ಟುಗಳ ಆಚರಣೆಗೆ ಒಳಪಟ್ಟ ಆಸ್ತಿಯಲ್ಲಿ ಹಕ್ಕಿರುವ ಒಂದು ಅವಿಭಕ್ತ ಕುಟುಂಬ ಎಂಬರ್ಥ.

ಆದರೆ ಒಂದೇ ತವಾಡಿಗೆ ಸಂಬಂಧವಾಗಿದ್ದು, ಆ ಇಡೀ ತವಾಡಿಗೆ ಸೇರಬಹುದ ಆಸ್ತಿಯನ್ನು ಮರುಮಕ್ಕತ್ತಾಯಂ ಯಾ ಅಳಿಯಸಂತಾನ ಕಟ್ಟಿನಂತೆ ಅನುಭವಿಸುತ್ತಿರುವ ತಾವಳಿಯ ಕೆಲವು ಮಂದಿಯು ಅಂತಹ ಆಸ್ತಿಯ ಮಟ್ಟಿಗೆ ಒಂದು ತವಾಡೆಂದು ಗಣಿಸಲ್ಪಡುವರು.

(iii) 'ತವಳಿ' ಎಂದರೆ ಒಂದು ತವಾಡಿನ ಸ್ತ್ರೀ ಸದಸ್ಯಳಿಂದ ಯಾ ಜೀವಂತವಿದ್ದ ಒಂದು ಹೆಂಗಸು ಮತ್ತು ಅಂಥವಳು ಇದ್ದರೆ ಅವಳ ಸಂತಾನದವರ ಅಥವಾ ಒಟ್ಟು ಗುಂಪು.

ಎರಡನೆಯ ಪರಿಚ್ಛೇದ.

ವಿಭಾಗ.

ಹಿಸೆಹೊಂದಲು ಹಕ್ಕಿರುವ ಕವಲು:—೩. ಕೆಳಗೆ ಕೊಟ್ಟಿರುವ ಶರತುಗಳಂತೆ, ಪ್ರತಿಯೊಂದು ಕವಲಿನವರಿಗೂ ತವಾಡಿನಿಂದ ಬೇರೆಯಾಗುವದಕ್ಕೂ ತವಾಡಿನ ಆಸ್ತಿಗಳಿಂದ ಹಿಸೆಯನ್ನು ವಿಭಾಗ ಹೊಂದಿಕೊಳ್ಳುವದಕ್ಕೂ ಅಧಿಕಾರವಿರುವುದು.

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

[illegible] (ದ. ಕ.)

[illegible] (S.L.R.)

[illegible] ಕ್ಷಣ ಶ್ರೀ ವೈದ್ಯ ರತ್ನ [illegible] ... [illegible]

ಮೆ ನೇ ಜ ರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
[illegible] (ದ. ಕ.)

ಶಾಲಾ ಹುಡುಗರಿಗೆ ಬೇಕಾದ

ಗೆರೆ ಹಾಕಿದ ಮತ್ತು ಹಾಕದ ಎಕ್ಸರಸೈಜ ಪುಸ್ತಕಗಳೂ, ಕೋಪಿ ಪುಸ್ತಕಗಳೂ, ಮ್ಯಾಪು ಡ್ರೋಯಿಂಗ್ ಪುಸ್ತಕಗಳೂ, ಡ್ರೋಯಿಂಗ್ ಪುಸ್ತಕಗಳೂ, ಪೆನ್ಸಿಲು ಕಂಪಾಸ್ ಬಾಕ್ಸ, ಶಾಯಿ ಕುಪ್ಪಿ ಮೊದಲಾದ ಸ್ಟೇಶನರಿ ಸಾಮಾನುಗಳೂ ಇವೆ.

ಲೆಜ್ಜರ್, ಜರ್ನಲ್ಸ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ತಯಾರಿದೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಶಾರದಾ ಛಾಪಖಾನೆ.
ರಥಬೀದಿ, ಮಂಗಳೂರು.



FOR VIGOUR

Liveliness-zip-pep-you get that all the time from an "Exide" because it is built into it.
Care and thought in the design—keen discrimination in the selection of material and the experience of thousands of users have made

Exide
THE LONG-LIFE BATTERY
The C. P. C. Co. Ltd.
MANGALORE.

Batliwalla's Preparations Cover All Your Needs.
A NAME THAT MERIT HAS MADE FAMOUS.

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ, ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ [illegible] — [illegible] ರೂ. ೧.
ಬಾಟ್ಲಿವಾಲರ [illegible] — [illegible] ಔಷಧ ಆಣೆ ೧೪.
ಬಾಟ್ಲಿವಾಲರ [illegible] — [illegible] ಔಷಧ ಆಣೆ ೧೨.
ಬಾಟ್ಲಿವಾಲರ [illegible] — [illegible] ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ [illegible] — [illegible] ೧ ಬಾಟ್ಲಿಯಲ್ಲಿ ೧೦೦ [illegible]
ಬಾಟ್ಲಿವಾಲರ [illegible] — [illegible] ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ [illegible] ಔಷಧ. ರೂ. ೦—೬—೦
ಬಾಟ್ಲಿವಾಲರ [illegible] ರೂ. ೦—೬—೦. LIBERAL DISCOUNT TO TRADE

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell ad, Bombay. No. 14.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ — ತೀರ್ಥಹಳ್ಳಿ — ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಗ್ಗೆ [illegible] ಘಂಟೆಗೆ ಹೊರಡುತ್ತಾ ಇದ್ದುದು ಸರಿಯಷ್ಟೆ. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. [illegible] ರಿಂದ ಶಿವಮೊಗ್ಗಾದಿಂದ ಬೆಳಗ್ಗೆ [illegible] ಘಂಟೆಗೆ ಹೊರಡಲು ಏರ್ಪಾಡುಮಾಡಿದೆ.

ತೀರ್ಥಹಳ್ಳಿ — ಸಾಗರರಸ್ತೆ.

ಅನಂತಪುರ — ಸಾಗರಕ್ಕೆ 0—8—0. ತೀರ್ಥಹಳ್ಳಿ — ಸಾಗರಕ್ಕೆ ೨—೮—೦,

ಆರಗ, ಗುಡ್ಡೇಕೊಪ್ಪ, ಕೋಣಂದೂರು, ಹಾದಿಗಲ್, ಹುಂಚದಕಟ್ಟೆ, ರಿಪ್ಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪ್ಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳಗಳ ದೆಸೆಯಿಂದ ಕಳೆದ ಜೂನ್ ತಾ. [illegible] ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಕು [illegible] ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾ ಭಟ್,
ಮಾಲಿಕ,
ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! [illegible]

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಎಲ್ಲಾ ವಿಧದ ಉತ್ತಮ ತರಗತಿಯ ವಾಚುಗಳೂ, ಕ್ಲೋಕುಗಳೂ, ಟೈಮ್‌ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆದೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಸೂ. ಸೂ. — ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.

'ಲೋಧ್ರ'ದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಶೀಸೆಯಿಂದಲೇ ಗುಣವಾಯಿತು.

ಶ್ರೀಮತಿ ಎನ್. ಕನಕಮ್ಮ, ಕೇರಾಫ್ ಎನ್. ನರಸಯ್ಯ, ಗ್ರಾಮ ಮ್ಯಾಜಿಸ್ಟ್ರೇಟ್, ... ಇವರು ಬರೆದಿರುವುದು— ನಿಮ್ಮ ಒಂದು ಸಣ್ಣ ಬಾಟಲ್ ಲೋಧ್ರವನ್ನು ಉಪಯೋಗಿಸಿದ ಮಾತ್ರದಿಂದಲೇ ಗುಣವುಂಟಾಯಿತು. ಒಂದು ದೊಡ್ಡ ಶೀಸೆ ಲೋಧ್ರವನ್ನು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

ಶ್ರೀಮತಿ ಇಂದಿರಾಕುಮಾರಿ ದೇವಿ, ಮಟ್ಟೂರು, ಇವರು ಬರೆದಿರುವುದು—

[illegible]

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ಮಾಯವಾಯಿತು.

ಶ್ರೀಮತಿ ... ಲಕ್ಷ್ಮಮ್ಮ, ಬಾಲಿಕಾ ಪಾಠಶಾಲೆ, ... ಇವರು ಬರೆದಿರುವುದು—

[illegible]

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ: "ಕೇಸರಿ" ಫೋನ್ 3486.

ಏಜಂಟರು—ಪಾ ಕಂಪೆನಿ, (ದಿ ಊಲನ್ ಮಾರ್ಟ್) ಮಂಗಳೂರು.

ಆದರೆ ಅಂತಹ ಸಂದರ್ಭದಲ್ಲಿ, ಒಂದು ಕವಲಿನಲ್ಲಿ ಪ್ರಾಯಪ್ರಭುತ್ವ ಬಾರದ ಇಬ್ಬರೇ ಮೆಂಬರರಿದ್ದರೆ ಅವರಿಬ್ಬರ ಸಮ್ಮತಿಯೂ, ಇಬ್ಬರಿಗಿಂತ ಹೆಚ್ಚು ಪ್ರಾಯಪ್ರಭುತ್ವ ಮೆಂಬರರಿದ್ದರೆ ಅವರಲ್ಲಿ ಬಹುಮತಸ್ಥರ ಸಮ್ಮತಿಯೂ ಇರಲು ಅವಶ್ಯ.

ಕವಲಿನ ಮೆಂಬರರೆಲ್ಲಾ ಪ್ರಾಯಬಾರದವರೇ ಆಗಿದ್ದರೆ ವಿಭಾಗವನ್ನು ವಿಧಾಯಿಸುವ ಅಧಿಕಾರವು ಕೋರ್ಟಿಗೆ ಸೇರಿರುತ್ತದೆ.

ಅಲ್ಲದೆ, ಒಂದು ತರ್ವಾಡಿನಲ್ಲಿ ಪ್ರಾಯ ಬಂದ ಒಬ್ಬನೇ ಮೆಂಬರನಿದ್ದು ಉಳಿದವರೆಲ್ಲಾ ಮೈನರರಾಗಿದ್ದರೆ ಪ್ರಾಯಬಂದ ಮೆಂಬರನಿಗೆ ಪಾಲು ಕೇಳುವ ಹಕ್ಕಿರುವುದಿಲ್ಲ.

ಪಾಲಿನ ನಿರ್ಣಯ:—೪. ವಿಭಾಗ ಮಾಡುವಾಗ ಒಂದು ಕವಲಿಗೆ ದೊರೆಯುವ ಆಸ್ತಿಯು ಆ ಕವಲಿನ ಮೆಂಬರರ ಸಂಖ್ಯೆಯ ಮೇಲೆ ಇರುವುದು; ಅದೇ ತರ್ವಾಡಿನ ಆಸ್ತಿಯನ್ನು ಎಲ್ಲಾ ಜೀವಂತ ಮೆಂಬರರೊಳಗೆ ಸರಿಯಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟೆಷ್ಟು ಬರುವುದೋ ಅಷ್ಟು ಪ್ರತಿಯೊಬ್ಬನಿಗೂ ಬರುವಂತೆ ಆ ಕವಲಿನವರು ಒಟ್ಟು ಹಿಸೆಯನ್ನು ಹೊಂದುವರು.

ಪಾಲಾಗುವ ಮೊದಲು ಯಾರಿಗೂ ಪ್ರತ್ಯೇಕವಾದ ಹಕ್ಕಿಲ್ಲ:—೫. ಹಿಸೆಯಾಗುವ ಮೊದಲು ಯಾವ ಕವಲಿಗೇ ಆಗಲಿ ಆಸ್ತಿಯ ಮೇಲೆ ನಿಶ್ಚಿತವಾದ ಪ್ರತ್ಯೇಕವಾದ ಹಕ್ಕಿರುವುದಿಲ್ಲ; [illegible] ಯಲ್ಲಿ ಆಸ್ತಿಯಾಗಕಲ್ಲ ಅಥವಾ ಪರಾಧೀನವಾದುವ ಹಕ್ಕುಗಳಾಗಲಿ, ಪರಂಪರೆಯಿಂದ ಭೋಗಿಸುವ ಬಾಧ್ಯತೆಯಾಗಲಿ ಇರುವುದಿಲ್ಲ.

ಮೂರನೆಯ ಪರಿಚ್ಛೇದ.

ಅವಿಭಕ್ತ ಕುಟುಂಬಗಳು:—

೬. (i) ಯಾವ ತರ್ವಾಡಿನವರೇ ಆಗಲಿ, ಈ ಆಕ್ಟಿನ ಎರಡನೆಯ ವಿಭಾಗದ ವ್ಯಾಪನೆಯಿಂದ ಮುಕ್ತರಾಗಬೇಕೆಂದು ಬಯಸಿದರೆ, ಈ ಆಕ್ಟನ್ನು ಮಂಜೂರು ಮಾಡಿದ ಒಂದು ವರ್ಷದೊಳಗೆ ತಮ್ಮ ತರ್ವಾಡನ್ನು ಅವಿಭಕ್ತವಾಗಿ ರಿಜಿಸ್ಟ್ರಿಮಾಡಲು ಕೋರ್ಟಿಗೆ ಅರ್ಜಿ ಮಾಡತಕ್ಕದ್ದು.

(ii) ಅಂತಹ ಅರ್ಜಿಯನ್ನು ತರ್ವಾಡಿಗೆ ಸೇರಿದ ಪ್ರತಿಯೊಂದು ಕವಲಿನ ೩ ಪಾಲಿಗೆ ಕಡಿಮೆಯಾಗದ ಪ್ರಾಯಪ್ರಭುತ್ವ ಮೆಂಬರರು ಮಾಡಿರಬೇಕು.

(iii) ಅಂತಹ ಅರ್ಜಿಯು ಬಂದೊಡನೆ ಅರ್ಜಿಯ (ii)ನೆಯ ಉಪನಿಯಮದಂತೆ ಕವಲಿನ ಬಹು ಸಂಖ್ಯೆಯವರ ದಸ್ಕತನ್ನು ಹೊಂದಿದ್ದುದಾದರೆ ಆ ತರ್ವಾಡನ್ನು ಅವಿಭಕ್ತ ಎಂದು ರಿಜಿಸ್ಟ್ರಿಮಾಡುವುದು; ಹಾಗೆ ಇಲ್ಲದಿದ್ದರೆ, ಅದನ್ನು ತೆಗೆದುಹಾಕುವುದು.

ಅವಿಭಕ್ತತೆಯನ್ನು ರದ್ದುಪಡಿಸುವುದು:—೭. (i) ಅವಿಭಕ್ತವೆಂದು ರಿಜಿಸ್ಟ್ರಿ ಮಾಡಲ್ಪಟ್ಟ ತರ್ವಾಡಿನವರು ಈ ಪರಿಚ್ಛೇದದಲ್ಲಿರುವ ನಿಯಮಾವಳಿಗಳಿಂದ ವಿಮೋಚನೆಯನ್ನು ಪಡೆಯಬೇಕೆಂದಿದ್ದರೆ, ಆ ಬಗ್ಗೆ ತರ್ವಾಡಿಗೆ ಸೇರಿದ ಪ್ರತಿಯೊಂದು ಕವಲಿನ ಪ್ರಾಯಪ್ರಭುತ್ವ ಮೆಂಬರರಲ್ಲಿ ೩ ಪಾಲಿನವರ ದಸ್ಕತುಗಳನ್ನುಳ್ಳ ಒಂದು ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು.

(ii) ಅಂತಹ ಅರ್ಜಿಯು ಬಂದೊಡನೆ ಈ ನಿಯಮದ (i)ನೆಯ ಉಪನಿಯಮದಂತೆ, ಅದಕ್ಕೆ ತರ್ವಾಡಿನ ಬಹು ಮಂದಿ ಮೆಂಬರರ ಸಮ್ಮತಿಯೂ ಸಹಿಯೂ ಉಂಟೆಂದಾದರೆ, ತರ್ವಾಡಿನ ಅವಿಭಕ್ತತೆಯನ್ನು ರದ್ದುಪಡಿಸಬಹುದು; ಹಾಗಿಲ್ಲದಿದ್ದರೆ ಅರ್ಜಿಯನ್ನು ತೆಗೆದುಹಾಕಬಹುದು.

ಆದರೆ ಹೀಗೆ ತೆಗೆದುಹಾಕಿದ ಅರ್ಜಿಯು ಮುಂದೆ ಎಂದಾದರೂ ವಿಭಾಗ ಮಾಡಬೇಕಾದ ಅರ್ಜಿಗೆ ಪ್ರತಿಬಂಧಕವಾಗಲಾರದು.

ವ್ಯವಹಾರಗಳ ನ್ಯಾಯಬದ್ಧತೆ:—೮. ಈ ವಿಭಾಗದಲ್ಲಿ ಉಕ್ತವಾದ ಎಲ್ಲಾ ವ್ಯವಹಾರಗಳು ಕಾನೂನಿನ ಪ್ರಕಾರ ನಡೆಯುವಂಥವುಗಳೆಂದು ಭಾವಿಸಲ್ಪಡುವವು; ಸಾಧ್ಯವಾದಷ್ಟರ ಮಟ್ಟಿಗೆ ಈ ವ್ಯವಹಾರಗಳೂ "ಸಿವಿಲ್ ಪ್ರೊಸೀಜರ್ ಕೋಡಿ"ನಂತೆ ನಡೆಯುವವು.

ರಿಜಿಸ್ಟ್ರಿಯನ್ನಿಡುವುದು, ಮತ್ತು ನಕಲುಗಳನ್ನು ಕೊಡುವುದು:—೯. ಈ ಪರಿಚ್ಛೇದದಲ್ಲಿರುವ ನಿಯಮಗಳ ಪ್ರಕಾರ ಮಾಡಲ್ಪಡುವ ಅರ್ಜಿಗಳ ಮತ್ತು ಅವುಗಳ ಮೇಲೆ ಮಾಡಿದ ಆಜ್ಞೆಗಳ ರಿಜಿಸ್ಟರನ್ನು ಕೋರ್ಟಿನವರು ಇಡತಕ್ಕದ್ದು, ಅವುಗಳ ಮಂಜೂರಿ ನಕಲುಗಳನ್ನು ಅಪೇಕ್ಷಿಸಿ ಅರ್ಜಿ ಮಾಡುವವರಿಗೆ ಅವನ್ನು ಕೊಡತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ವಿವರ.

ಮರುಮಕ್ಕತ್ತಾಯ ಪದ್ಧತಿಯು ಕೇರಳದ ಮಲಬಾರಿನಲ್ಲಿಯೂ, ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲೂಕಿನ ಕೆಲವು ಭಾಗಗಳಲ್ಲಿಯೂ, ಅಳಿಯಸಂತಾನ ಕಟ್ಟಿನ ಕಾನೂನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ರೂಢಿಯಲ್ಲಿರುತ್ತವೆ. ಈ ಎರಡೂ ಪದ್ಧತಿಗಳ ಪ್ರಕಾರ ಆಸ್ತಿಯು ಮೇಲಿನ ಮಾದರಿ, ಪಕ್ಷ 'ಸ್ತ್ರೀ' ಮೂಲಕವಾಗಿ ಬರುತ್ತದೆ. ಒಂದು ಅವಿಭಕ್ತ ಕುಟುಂಬ ಅಥವಾ ತರವಾಡಿನೊಳಗೆ ಒಬ್ಬಳು ತಾಯಿ, ಆಕೆಯ ಗಂಡು ಮತ್ತು ಹೆಣ್ಣು ಮಕ್ಕಳು ಮತ್ತು ಇದೇ ಪ್ರಕಾರದಲ್ಲಿ ಹೆಣ್ಣು ಮಕ್ಕಳ ಸಂತಾನದವರು ಸೇರಿರುವರು. ಒಬ್ಬ ಗಂಡಸಿನ ಮಕ್ಕಳು ಅವನ ತಂದೆಯ ತರವಾಡಿನ ಮೆಂಬರರಾಗುವದಿಲ್ಲ. ಅವರು ಅವರ ತಾಯಿಯ ತರವಾಡಿಗೆ ಸೇರಿದವರಾಗುತ್ತಾರೆ. ಒಂದು ತರವಾಡಿನೊಳಗಣ ಜೀವಂತಳಾಗಿರುವ ಒಬ್ಬ ಹೆಂಗಸು ಮತ್ತು ಮೇಲೆ ವಿವರಿಸಿದ ರೀತಿ ಅವಳ ಸಂತತಿಯವರು ಕೂಡಿರುವ ಒಂದು ಭಾಗ ಯಾನೆ ಕವಲಿಗೆ 'ತಾವಳಿ' ಎಂದು ಹೆಸರು. ಇಂತಹ ಹೆಂಗಸು ಮರಣಪಟ್ಟ ಮೇಲೆ ಒಂದಕ್ಕಿಂತ ಹೆಚ್ಚು 'ತಾವಳಿ'ಗಳು ಉಂಟಾಗಬಹುದು. ತರವಾಡಿನ ಪ್ರಾಮುಖ್ಯ ಲಕ್ಷಣವೆಂದರೆ ಅದರ 'ಅವಿಭಕ್ತತೆ'. ಪ್ರಾಯಪ್ರಭುತ್ವವಾದ ಕುಟುಂಬದ ಎಲ್ಲಾ ಮೆಂಬರರು ಒಟ್ಟಿಗೆ ಕೂಡದ ವಿನಾ ಆಸ್ತಿಗಳನ್ನು ಪಾಲುಮಾಡಿಕೊಳ್ಳಲಾಗುವುದಿಲ್ಲ. ಕುಟುಂಬದ ಆಸ್ತಿಯಿಂದ ಪೋಷಣೆಯನ್ನು ಪಡೆಯಲಿಕ್ಕೆ ಮೆಂಬರರಿಗೆ ಹಕ್ಕು ಇದೆ. ಸಾಮಾನ್ಯವಾಗಿ ಆಸ್ತಿಯ ಆಡಳಿತೆಯು ಮಲಬಾರಿನಲ್ಲಿ ಹಿರೇ ಗಂಡಸಿನಲ್ಲಿಯೂ ಕನ್ನಡಾ ಜಿಲ್ಲೆಯಲ್ಲಿ ಗಂಡಸಾಗಲೀ ಹೆಂಗಸಾಗಲೀ ಹಿರೇ ಮೆಂಬರನ (ರ)ಲ್ಲಿಯೂ ಇರುವಂಥಾದ್ದು. ಕಿರೇ ಮೆಂಬರರ ಪೋಷಣೆಯ ಜವಾಬ್ದಾರಿಗೆ ಒಳಪಟ್ಟು ಕುಟುಂಬದ ಆಸ್ತಿಗಳ ಉತ್ಪತ್ತಿಯ ಮೇಲೆ ಆಡಳಿತೆದಾರನ(ಳ)ಗೆ ಸರ್ವಾಧಿಕಾರ ಇದೆ. ಆಡಳಿತೆಯ ಅವ್ಯವಸ್ಥೆ, ದುರುಪಯೋಗ, ಮೋಸವಾದ ದೊಡ್ಡ ಅಪಾದನೆಗಳನ್ನು ರುಜುಪಡಿಸಲು ಸಾಮರ್ಥ್ಯವಿದ್ದಲ್ಲಿ ಯಜಮಾನನನ್ನು ಕೋರ್ಟು ಮುಖಾಂತರ ಪದಚ್ಯುತಮಾಡುವ ಹಕ್ಕು ಕಿರೇ ಮೆಂಬರರಿಗೆ ಇದೆ. ಆದರೆ ಅವನ (ಆಡಳ್ತೆದಾರ) ಕೈಸೇರಿರುವ ಕುಟುಂಬದ ಉತ್ಪತ್ತಿಯ ಲೆಕ್ಕ ಕೇಳುವ ಅಧಿಕಾರ ಅವರಿಗಿಲ್ಲ.

[illegible] ಕೊಲ್ಲಂ ಗಣನೆಯ XIIIನೇ ಕೊಲ್ಲಂ

[illegible] IIನೇ [illegible]

[illegible]

ಕೆ. ಆರ್. ಕಾರಂತ, ಬಿ. ಎ. ಎಲ್. ಎಲ್. ಬಿ.

ಎಮ್. ಎಲ್. ಸಿ.

ಕೊಡಿಯಾಲಬೈಲ್.

ಒಟ್ಟು.

ರೂ. 2,20,000

ನ್ನು

ರೂಪಾಯಿ 1000ದಿಂದ 10,000 ವರೆಗಿನ

200 ನಗದಿ ಸಾಲಗಳಾಗಿ

ಜಾಮೀನು ಮತ್ತು ಬಡ್ಡಿ ವಿರಹಿತವಾಗಿ

ತಿಂಗಳುಗಟ್ಟಲೆ ಕಂತುಗಳಾಗಿ ಕೊಡಲ್ಪಡುವುವು.

ಬೇಕಾಗಿರುವರು.

ಹಿಂದೂಸ್ಥಾನದ ಪ್ರತಿಯೊಂದು ತಾಲೂಕು ಮತ್ತು ಜಿಲ್ಲೆಯಲ್ಲಿ ದಿ ಯುನಿವರ್ಸಲ್ ಮ್ಯುಚುವಲ್ ಪ್ರಿಡ್ ಎಂಡ್ ಪ್ರೊವಿಡ್ ಹೌಸಸ್ ಎಸೋಸಿಯೇಶನ್ ಲಿಮಿಟೆಡ್, ಇದರ ಪ್ರತಿನಿಧಿಯಾಗಿ ವರ್ತಿಸಲು ಉತ್ಸಾಹಿಯೂ ನಿಪುಣನೂ ಆದ ಏಜಂಟನೂ, ಸುಪರಿಂಟೆಂಡೆಂಟನೂ ಬೇಕಾಗಿರುವರು. ತಿಂಗಳು ಸಂಬಳ ರೂ. 50. ರೆಮ್ಯುನರೇಶನ್ ರೂ. 250.

ವಿಶೇಷ ಮಾಹಿತಿಗೆ ಎರಡಾಣೆ ಸ್ಟಾಂಪಿನೊಂದಿಗೆ ಈ ಕೆಳಗಿನವರಿಗೆ ಬರೆಯಿರಿ.

Mr. M. L. Nagannah,
Chief Organizer,
289, Thambuchetty St. MADRAS.

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

ಟೆಲಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರಕ್ಕೆ 10-30ಕ್ಕೆ ಬೈಕೂರು ಗಡಿಗೆ 11-45ಕ್ಕೆ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಕುಂಬಳೆ, ಕಣ್ಣನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಬೈಕೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ್ ಗೋವಾ, ಬೆಳಗಾಂ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೇಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಪ್ಯಾರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆಂದಿರುವಿರಾದರೆ ಪ್ರತಿದಿನವೂ ಮೂರಾವರ್ತಿ ಕರಾವಳಿ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಶರಾವತಿ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore S. K.

ಮಲೇರಿಯಾನ ಸರ್ವಜ್ವರಸಂಹಾರಿ

ಯುವಕ ವಿದ್ಯಾರ್ಥಿಯು ಲಕ್ಷ್ಯಕ್ಕೆ ತಕೊಳ್ಳಬಾರದೇ?

ದೇಹದ ಆರೋಗ್ಯವೂ ಮೆದುಳಿನ ಬಲವೂ ಇದ್ದ ಯುವಕನಿಗೆ ವಿದ್ಯಾಭ್ಯಾಸವು ಬಹು ಸುಲಭಕರವಾಗಿರುವುದು.

ಆದರೆ ದೇಹದ ಆರೋಗ್ಯವು ಕೆಟ್ಟು ಹೋದಲ್ಲಿ ಮೆದುಳಿನ ಬಲವು ಕುಂದಿರುವದು ಸಹಜವೇ. ಅಂಥಾ ಯುವಕನಿಗೆ ವಿದ್ಯಾಭ್ಯಾಸವು ಅತೀ ಕಷ್ಟಕರವಾಗಿದೆ. ಇಂಥಾ ಯುವಕನು ಸಹಾ ವಿದ್ಯಾಭ್ಯಾಸದಲ್ಲಿ ತೇರ್ಗಡೆಹೊಂದಬೇಕಾದರೆ, ದೇಹವು ಆರೋಗ್ಯವುಳ್ಳದ್ದಾಗಿಯೂ ಮೆದುಳು ಶಕ್ತಿವಂತವಾಗಿಯೂ ಇರಬೇಕು. ಕಂಪೌಂಡು ಸಿರಪ್ಪು ಸಾಲಿಸಿದ ಎಂಬ ಔಷಧವು ಯುವಕನ ಆರೋಗ್ಯವನ್ನು ಕಾಪಾಡುವದಕ್ಕೂ ಮೆದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತೀ ಗುಣಕಾರಿಯಾಗಿದೆ.

ಕ್ರಯ 8 ಔನ್ಸಿಗೆ ರೂ. 3 – 8 – 0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳಿವೆ.)

ಮೆದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅಹೋ ರಾತ್ರಿ ಕಲಿತಂತ ಬರಕೊಂಡು ಪ್ರಯಾಸದಿಂದ ಓದುವ ಯುವಕನ ತಲೆ ಮೆದುಳು ಬಹು ಬಿಸಿಯಾಗಿ ತಲೆ ನೋವು, ಕಣ್ಣು ನೋವು, ನಿದ್ರೆಯಿಲ್ಲ, ಕಿವಿ, ಮೂಗು, ಹಲ್ಲುಗಳ ವಿವಿಧ ರೋಗಗಳು ಹುಟ್ಟುವವು. ಈ ಆವತ್ತು ರೋಗಗಳು ಪರಿಹಾರವಾಗುವದಕ್ಕೆಯೂ ಅಥವಾ ಅಂಥಾ ಆಪತ್ತು ರೋಗಗಳು ಹುಟ್ಟದಂತೆಯೂ ಆಯುರ್ವೇದ ಚಿಕಿತ್ಸೆಯ ತೈಲದ ಉಪಯೋಗವು ಬಹು ಗುಣಕಾರಿಯಾಗಿದೆ. ಬಹಳ ಹೊತ್ತು ಓದುವ (ಅಥವಾ ಸಿದ್ಧ ಕೆಲಸದ) ಯುವಕರು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಾಕಿಕೊಳ್ಳುವದರಿಂದಲೇ ತಲೆ ಮೆದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವದು.

ಸ್ಕೂಲು ಕಾಲದಲ್ಲಿ ಮೆದುಳಿಗೆ ಆಯಾಸವಾಗುವದು, ಅದರಿಂದ ಯುವಕರ ಉನ್ನತಿಗೆ ತಡೆಯಾಗಿದೆ.

ಕ್ರಯ 4 ಔನ್ಸಿಗೆ ರೂ. 1 – 8 – 0

ವಿಶೇಷ ವಿವರಗಳು, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ, ಆಯುರ್ವೇದ ಮದ್ದು ಅಂಗಡಿಗಳ ಮತ್ತು ಹೋಮಿಯೋಪತಿ ಮದ್ದುಗಳಿಗೂ ನಮೂನೆ ಮತ್ತು ಕ್ರಯಪಟ್ಟಿಗಳಿಗೂ ನಮ್ಮ ಮೊತ್ತ ಕೆಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಲೇರಿಯಾನ ಕಂಪೆನಿ,
ಮಂಗಳೂರು.

ದಿ ಕೆನರಾ ನರ್ಸರಿ.

ಕಸಿ ಮಾವಿನ ಗಿಡಗಳು. ಸಪ್ಪೋಟಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪ್ಪೋಟಾ, ಪೇರಳೆ, ಚಿಕ್ಕು, ದ್ರಾಕ್ಷಿ, ಅಂಜೂರ, ದಾಳಿಂಬೆ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು, ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್ ಸ್ಟ್ರೀಟ್ ಸೋಮನಾಥೇಶ್ವರದಲ್ಲಿ ದೊರೆಯುವವು.

ಕೆ ಮಾಧವಣ್ಣ ಶೆಟ್ಟಿ, ದಿ ಕೆನರಾ ನರ್ಸರಿ, ಬಸ್ರೂರು ನೆಲ್ಲಿಕಟ್ಟೆ, ಕುಂದಾಪುರ.
ಕೆ. ವಾಮನ ಶೆಣೈ, C/o ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.
ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ,
ಲಿಮಿಟೆಡ್, ಪೂನಾ ಸಿಟಿ.

1 ಕಾಯಿದೆ ಪ್ರಕಾರ ವಿಮೆಯ ಲಾಭದಾಯಕವಾದ ಮತ್ತು ಅತ್ಯುತ್ತಮ ಶರತ್ತುಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು,

2 ಜನಪ್ರಿಯತೆ, ಪ್ರಸಿದ್ಧತೆ ಇದ್ದ ಡೈರೆಕ್ಟರರು.

3 ತುಂಬಾ ಅನುಭವದ ವ್ಯವಸ್ಥಾಪಕ, ನಿಶ್ಚಯದ ಮತ್ತು ಬಲವಾದ ಆಧಾರ.

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಶರ್ತುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ತ ಮತ್ತು ಪರಿಶ್ರಮಿಯಾದ ಏಜಂಟರುಗಳು ಬೇಕಾಗಿರುವರು

ಪ್ರಾಸ್ಪೆಕ್ಟಸಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, ಸ್ಪೆಶಿಯಲ್ ಏಜಂಟ್, ಅಕ್ಕಸಾಲೆ ಗ್ರಾಮ, ಕುಂದಾಪುರ ತಾಲೂಕು ದ. ಕ.
ಅಥವಾ
ಪಿ. ಅಭಯಶಂಕರ ದೇಶಪಾಂಡೆ ಮುಖ್ಯ ಕಂಪೆನಿ, ಮೆನೇಜಿಂಗ್ ಏಜಂಟ್.

ಶ್ರೀ. ಕಾರಂತರ ತಕ್ಕ ಅಳಿಯಸಂತಾನ ಮಸೂದೆಯ ಪ್ರತಿಪಾದನೆ.

ಅಳಿಯ ಕಟ್ಟನ್ನಾಚರಿಸುವ ಜನತೆಯ ಮೇಲೆ ಅದೇಕೋ ವಿಶೇಷ ವಾತ್ಸಲ್ಯವಿಟ್ಟು ಸದ್ರಿ ಕಟ್ಟನ್ನು ಸುಧಾರಿಸುವ ಆತುರದಿಂದ ಕಾನೂನೊಂದನ್ನು ಜ್ಯಾರಿಗೆ ತರುವುದರ್ಕಾಗಿ ಶ್ರೀ. ಕಾರಂತರು ಕೈಕೊಂಡಿರುವ ವಿಧಾನದ ಕುರಿತು ಸಶಾಸ್ತ್ರವಾದ ಖಂಡನೆ, ಅವರು ತರಲಿರುವ ಮಸೂದೆಯ ಉದ್ದೇಶಗಳ ಸಂಬಂಧವಾಗಿ ಉಡುಪಿಯ ಬಂಟರ ಯಾನೆ ನಾಡವರ ಪರಿಷತ್ತಿನ ಸ್ವಾಗತಕಮಿಟಿ ಅಧ್ಯಕ್ಷರಾಗಿ, ಉಡುಪಿ ತಾಲೂಕು ಬೋರ್ಡು ಪ್ರೆಸಿಡೆಂಟರಾದ ಶ್ರೀ. ಎಚ್. ರಾಮಯ ಶೆಟ್ರು ವ್ಯಕ್ತಪಡಿಸಿರುವ ಅಭಿಪ್ರಾಯಗಳಿಂದ ಅವರು ತೀವ್ರವೇದನೆ ಪಟ್ಟು ಉರಿದೆದ್ದಂತಿದೆ. ಅವರೀಗ ತನ್ನ ಘೋಷಣೆಯನ್ನು ಪ್ರತಿಪಾದಿಸಹೊರಟು ಸುದೀರ್ಘ ಪತ್ರವ್ಯವಹಾರವನ್ನು ಮದ್ರಾಸಿನ ದೈನಿಕ ಇಂಗ್ಲಿಷ್ ಪತ್ರಿಕೆಗಳಲ್ಲಿಯೂ, ಅದರ ಭಾಷಾಂತರಗಳನ್ನು ಸ್ಥಳೀಕ ಕನ್ನಡ ಪತ್ರಿಕೆಗಳಲ್ಲಿಯೂ ಪ್ರಕಟಿಸಿರುವರು. ಶ್ರೀ. ಎಚ್. ರಾಮಯ ಶೆಟ್ರು ತನ್ನನ್ನು ಪ್ರತಿಪಾದಿಸಿಕೊಳ್ಳಲು ಸಶಕ್ತರೇ ಇರುವುದರಿಂದ ಅವರ ಪರವಾಗಿ ನಾನು ದಂಡಧಾರಿಯಾಗಬೇಕಾಗಿಲ್ಲ. ಶ್ರೀ. ಕಾರಂತರು ಮತ್ತು ಅವರ ಕೆಲವು ಮಂದಿ ಸಹವ್ಯವಸಾಯಿಗಳು ನನ್ನ ವಿಷಯದಲ್ಲಿ ಜನರ ಮನಕೆಡಿಸಲು ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಮಾಡುತ್ತಾ ಬರುತ್ತಿರುವ ಕೆಲವು ವಿಷಯಗಳು ನನ್ನ ಗಮನಕ್ಕೆ ಬಂದಿರುವವಾದರೂ ಆ ಕುರಿತು ಪ್ರಸ್ತಾಪಿಸಲು ಇದು ಸ್ಥಳವಲ್ಲ.

ಶ್ರೀ. ಕಾರಂತರು ಈ ಚರ್ಚೆಗೆ ಉದ್ದೇಶಪೂರ್ವಕವಾಗಿ ನನ್ನ ಹೆಸರನ್ನೆಳೆದು, ಅವರಿಂದ ರಚಿತವಾದ ಸದ್ರಿ ಮಸೂದೆಯ ಕುರಿತು ನನ್ನ ಸಲಹೆಯನ್ನು ಪಡೆಯಲು ಅವರು ಅಲಕ್ಷ್ಯಸಿರುವುದೇಕೆಂಬುದನ್ನು ವಿವರಿಸಲು ಪ್ರಯತ್ನಿಸಿರುತ್ತಾರೆ. ಕೌನ್ಸಿಲಿನಲ್ಲಿ ನನ್ನ ಧೋರಣೆಯು ಸದಾ ಅವರಿಗೆ ವಿರೋಧಪರವಾಗಿರುವುದೆಂಬುದನ್ನು ಅವರು ಎರಡು ಉದಾಹರಣೆಗಳನ್ನಿತ್ತು ವಿಶದಪಡಿಸಿರುವರು. ಆದರೆ ಅವರು ಫಾರೆಸ್ಟ್ ಸಂಕಷ್ಟಗಳ ಕುರಿತು ವಿಚಾರಿಸಲು ಕಮಿಟಿಯೊಂದನ್ನೇರ್ಪಡಿಸಬೇಕೆಂದು ತಂದ ಸೂಚನೆಯಂತಹ ಸಂದರ್ಭಗಳಲ್ಲಿ ನಾನು ಭಾಷಣ, ಓಟುಗಳ ಬೆಂಬಲವಿತ್ತಿರುವುದನ್ನು ಅದೇಕೋ ಅನುಕೂಲವಾಗಿ ಮರೆತುಬಿಟ್ಟಿರುತ್ತಾರೆ. ಜೈನ ಪಾರಂಪರ್ಯ ಮಸೂದೆಯ ಕುರಿತು ನನ್ನ ಭಾಷಣವು ಅದರ ಮೇಲೆ ತಪ್ಪೇರು ಹೊಯ್ಯುವಂಥಾದಿದ್ದು ಅದು ಕೌನ್ಸಿಲಿನಲ್ಲಿ ಮಂಜೂರಾಗದಂತೆ ತಡೆಗಟ್ಟುವ ಉದ್ದೇಶವುಳ್ಳದಾಗಿದ್ದಿತೆಂಬ ಶ್ರೀ. ಕಾರಂತರ ಆರೋಪವು ಅತ್ಯನುಚಿತವಾದುದೆಂದರೆ ಅನುಚಿತ ಕಡಿಮೆಯ ಮಾತು. ನಾನು ಈ ಬಿಲನ್ನು ವಿರೋಧಿಸಿರುವ ಮಾತಂತಿರಲಿ. ಲೋ ಮೆಂಬರರಾದ ಮಾನ್ಯ ಕೃಷ್ಣನ್ ನಾಯರರು ಇದನ್ನು ವಿರೋಧಿಸಲಿದ್ದಾಗ ದಕ್ಷಿಣ ಕನ್ನಡದ ಜೈನರೆಲ್ಲರೂ ಇಂತಹ ಕಾನೂನೊಂದರ ವಿಷಯದಲ್ಲಿ ಒಮ್ಮತವುಳ್ಳವರಾಗಿರುವರೆಂದು ಹೇಳಿ ಅವರನ್ನು ಹಾಗೆ ಮಾಡದಂತೆ ಪ್ರೇರೇಪಿಸಿದೆನು. ಈ ಬಿಲಿಗೆ ಸಂಬಂಧಪಟ್ಟ ಮತಸಮುದಾಯದವರು ಮೆಂಬರರೊಬ್ಬರಿಗೆ ಅದನ್ನು ತರಲು ನಿಶ್ಚಿತ ಆಜ್ಞೆಯನ್ನೀಯದೆ ಅಥವಾ ಅವರದನ್ನು ಚುನಾವಣೆಯ ಪ್ರಶ್ನೆಯಾಗಿ ಮಾಡದೆ ಜೈನರಿಗನ್ವಯಿಸುವ ಸಾಮಾಜಿಕ ಕಾನೂನನ್ನು ಜೈನೇತರ ಮೆಂಬರೊಬ್ಬರು ತರುವ ವಿಷಯವು ಮಾನ್ಯ ಕೃಷ್ಣನ್ ನಾಯರರಿಗೆ ಸರಿತೋರಲಿಲ್ಲ. ಅಂದಮೇಲೆ ಶ್ರೀ. ಕಾರಂತರ ಉದ್ದೇಶವು ನನ್ನ ಕುರಿತು ಜೈನರಲ್ಲಿ ದುರಭಿಪ್ರಾಯವನ್ನುಂಟುಮಾಡುವುದೆಂದೇ ಹೇಳಬೇಕಾಗುತ್ತದೆ. ಮಾಜಿ ಕೌನ್ಸಿಲು ಮೆಂಬರರಾದ ಶ್ರೀ. ಧರ್ಮಸ್ಥಳ ಹೆಗ್ಗಡೆಯವರೇ ಈ ಮಸೂದೆಯ ಕರ್ತರಿದ್ದು ನಾನವರಿಗೆ ಸಹಾಯ ಮಾಡುವೆನೆಂದು ವಚನವಿತ್ತಿರುವುದಕ್ಕೆ ಅವರೇ ಸಾಕ್ಷಿಯಿರುವರು. ಶ್ರೀ. ಮಂಜಯ ಹೆಗ್ಗಡೆಯವರಿಗೆ ಸಾಕಷ್ಟು ಸಮಯವಿದ್ದರೆ ಅವರೇ ಈ ಮಸೂದೆಯು ಕೌನ್ಸಿಲಿನಲ್ಲಿ ಮಂಜೂರಾಗುವಂತೆ ನೋಡುತ್ತಿದ್ದರು. ನಾನು ಶ್ರೀ. ಹೆಗ್ಗಡೆಯವರಿಗೆ ವಚನಕೊಟ್ಟಂತೆಯೇ ನಡೆದಿರುವೆನು. ಅಷ್ಟು ಮಾತ್ರವಲ್ಲದೆ ಶ್ರೀ. ಕಾರಂತರು ಕಾಂಗ್ರೆಸಿನ ಕರೆಯ ಮೇರೆಗೆ ಕೌನ್ಸಿಲಿನ ಹೊರಗೆ ಒಳಗೆ ನಲಿದಾಡುತ್ತಾ ಈ ಮಸೂದೆಯನ್ನು ವಿಳಂಬಿಸಿ ಜೈನರಲ್ಲಿ ಜುಗುಪ್ಸೆಯನ್ನುಂಟುಮಾಡುತ್ತಿದ್ದಾಗ, ಸದ್ರಿ ಮಸೂದೆಯನ್ನು ನಾನೇ ಕೌನ್ಸಿಲಿನಲ್ಲಿ ತರಲು ಮುಂದೆ ಬಂದಿದ್ದೆನು. ಮಾತಿನಿಂದಾಗಲಿ ಕಾರ್ಯದಿಂದಾಗಲಿ ನಾನು ಜೈನ ಪಾರಂಪರ್ಯ ಮಸೂದೆಯನ್ನು ವಿರೋಧಿಸಲೆಳಸಿರುವೆನೆಂದು ಹೇಳುವುದು ಕ್ಷುದ್ರ ಅಬದ್ಧವಚನವಾಗಿದೆ.

ಮರ್ಮಕ್ಕತ್ತಾಯ ಮತ್ತು ಅಳಿಯಸಂತಾನ ಕಾನೂನನ್ನು ಸುಧಾರಿಸಲು ಶ್ರೀ ಕಾರಂತರ ಇನ್ನೊಂದು ಮಸೂದೆಯು ಸಿದ್ಧವಿದ್ದು ಅದು ಸರಕಾರದ ಅಪ್ಪಣೆಯನ್ನು ಕಾದಿರುವುದೆಂದು ತಿಳಿಸಲ್ಪಟ್ಟಾಗ ಮಾನ್ಯ ಕೃಷ್ಣನ್ ನಾಯರರು ಬಹಳ ಸೋಜಿಗಪಟ್ಟರು. ಯಾಕೆಂದರೆ ಮಲಬಾರಿನಲ್ಲಿ ಯಾರಾದರೂ ಅಂತಹ ಮಸೂದೆಯನ್ನು ತರಲು ಶ್ರೀ. ಕಾರಂತರನ್ನು ಕೇಳಿಕೊಂಡಿದ್ದುದು ಅವರಿಗೆ ತಿಳಿದಿರಲಿಲ್ಲ. ಈ ಬಿಲಿನ ವಿಷಯದಲ್ಲಿ ಮಾನ್ಯ ಕೃಷ್ಣನ್ ನಾಯರರ ಸಲಹೆ ಕೇಳುವ ಮಾತಂತಿರಲಿ, ಆ ಪ್ರಸ್ತಾಪವನ್ನಾದರೂ ಎತ್ತುವಷ್ಟರ ವಿನಯಪರತೆಯೂ ಶ್ರೀ. ಕಾರಂತರಲ್ಲಿರಲಿಲ್ಲ. ಅನೇಕ ವರ್ಷಗಳಿಂದ ಮಲಬಾರಿನ ಜನತೆಯ ಪರವಾಗಿ ಕೌನ್ಸಿಲಿನಲ್ಲಿ ಪ್ರತಿನಿಧಿಯಾಗಿರುವ ಸುಪ್ರಸಿದ್ಧ ಮರ್ಮಕತ್ತಾಯ ಕುಟುಂಬಿಕರಾಗಿ ಕೌನ್ಸಿಲಿನಲ್ಲಿ ಪ್ರಮುಖ ಸದಸ್ಯರಾಗಿರುವ ಮಾನ್ಯ ಕೃಷ್ಣನ್ ನಾಯರರಂಥವರೊಡನೆ ತನ್ನ ಮಸೂದೆಯ ಸುದ್ದಿಯನ್ನೆತ್ತಲೂ ಶ್ರೀ. ಕಾರಂತರು ಅಲಕ್ಷ್ಯಸಿರುವಾಗ, ನನ್ನೊಡನೆ ಆ ಕುರಿತು ಅಭಿಪ್ರಾಯ ಕೇಳದುದಕ್ಕಾಗಿ ಕಾರಣಗಳನ್ನು ವಿವರಿಸಲು ಅಥವಾ ನೆವನಗಳನ್ನು ಮುಂದೊಡ್ಡಲು ಹವಣಿಸಬೇಕೆ? ನನ್ನ ವಿಷಯವಂತಿರಲಿ. ಆ ಮಸೂದೆಯ ಸಂಬಂಧವಾಗಿ ದಕ್ಷಿಣ ಕನ್ನಡದ ಅಳಿಯಸಂತಾನ ಕುಟುಂಬಗಳ ಪ್ರಮುಖ ಜನರ ಅಭಿಮತ ಪಡೆಯಲು ಗಮನಿಸಿರುವರೇ? ತಾನು ಇಂತಹ ಮಸೂದೆಯನ್ನು ತಯಾರಿಸಿ ಅದನ್ನು ಕೌನ್ಸಿಲಿನಲ್ಲಿ ತರಲು ಅಪ್ಪಣೆ ಪಡೆಯುವುದಕ್ಕಾಗಿ ವೈಸರಾಯರ ಮತ್ತು ಗವರ್ನರರ ಬಳಿಗೆ ಕಳುಹಿಸಿರುವೆನೆಂಬ ವಿಷಯವನ್ನು, ಶ್ರೀ. ಕಾರಂತರು ಆ ಕುರಿತು ಸ್ವಲ್ಪ ಪ್ರಚಾರಮಾಡಲು ಗಮನಕೊಡುವ ಮೊದಲು ಅವರಾರಾದರೂ ತಿಳಿದಿದ್ದರೇ?

ಇನ್ನು ಈ ಮಸೂದೆಯ ವಿಷಯದಲ್ಲಿ ಶ್ರೀ. ಕಾರಂತರ ಓರ್ವ ಮಂಗಳೂರಿನ ವಕೀಲ ಸ್ನೇಹಿತರ ಹೊರತು ಅಳಿಯ ಸಂತಾನದ ಯಾವ ಪ್ರಾಮುಖ್ಯ ವ್ಯಕ್ತಿ ಅಥವಾ ಸಂಸ್ಥೆಗಳವರಾದರೂ ಇಂತಹ ಮಸೂದೆಯೊಂದನ್ನು ತರಲು ಅವರೊಡನೆ ಕೇಳಿಕೊಂಡಿಲ್ಲವೆಂಬುದು ಅವರ ಪತ್ರವ್ಯವಹಾರದಿಂದಲೇ ವ್ಯಕ್ತವಾಗುವುದು. ಅದರಿಂದ ಬಂಟರ ಯಾನೆ ನಾಡವರ ಸಂಘದವರು ಇತ್ತಲಾಗಿ ಉಡುಪಿಯಲ್ಲಿ ಜರಗಿದ ತಮ್ಮ ಪರಿಷತ್ತಿನಲ್ಲಿ, ತಮಗಾಗಿ ಒಂದು ಕಾನೂನನ್ನು ಮಾಡಲು ಈ ರೀತಿಯಲ್ಲಿ ಮುಂದೆ ಬಂದಿರುವ ಶ್ರೀ. ಕಾರಂತರ ಅಸಂಧಾವವನ್ನು ನಿಷೇಧಿಸಿ ಮಂಜೂರುಮಾಡಿರುವ ನಿರ್ಣಯವು ನ್ಯಾಯವಾದುದೇ ಸರಿ. ಈ ಪರಿಷತ್ತಿನ ಅಧ್ಯಕ್ಷರೂ, ಸ್ವಾಗತ ಕಮಿಟಿಯ ಅಧ್ಯಕ್ಷರೂ, ಸಂಘದ ಕೆಲವು ಪ್ರಮುಖ ಮೆಂಬರರೂ ಶ್ರೀ. ಕಾರಂತರ ವರ್ತನೆಯ ಕುರಿತು ತಮ್ಮ ಕೋಪವನ್ನೂ ವಿರೋಧವನ್ನೂ ಪ್ರಕಟಿಸಿರುವರು. ಆದರೂ ಶ್ರೀ. ಕಾರಂತರು ತನ್ನ ಮಸೂದೆಯನ್ನು ಮುಂದೊತ್ತಿಯೇ ಬಿಡುವೆನೆಂದು ಬೆದರಿಕೆ ಹಾಕುತ್ತಾರೆ. ಅಳಿಯಸಂತಾನವನ್ನನುಸರಿಸುವ ಜನರ ಕುರಿತು ಅವರು ಇಷ್ಟೊಂದು ಆತುರಪಡುತ್ತಿರುವುದೇಕೆ? ಶ್ರೀ. ಕಾರಂತರ ಆಶ್ರಯವಿಲ್ಲದೆನೆ ನಮ್ಮ ಜನರು ತಮ್ಮ ದಾರಿಯನ್ನು ತಾವೇ ನೋಡಿಕೊಳ್ಳಬಲ್ಲರು. ತಮ್ಮ ಕಾರ್ಯಕಲಾಪಗಳಲ್ಲಿ ಶ್ರೀ. ಕಾರಂತರು ಅನಪೇಕ್ಷಿತರಾಗಿ ಕೈಹಾಕುವುದು ಅವರಿಗಿಷ್ಟವಿಲ್ಲ. ಶ್ರೀ. ಕಾರಂತರಿಗೆ ಬಹಳ ಕಡಿಮೆ ಸಂಬಂಧ ಮತ್ತು ಸಹಾನುಭೂತಿಯುಳ್ಳ ಇತರ ಸಾಮಾಜಿಕರಿಗನ್ವಯಿಸುವ ಪದ್ಧತಿ ಕಾನೂನುಗಳನ್ನು ಸುಧಾರಿಸುವ ಆಲೋಚನೆಮಾಡುವ ಮೊದಲು, ತನ್ನ ಜಾತಿ ಬಂಧುಗಳಿಗೇನೇ ಅನ್ವಯಿಸುವ, ಅಸಹ್ಯಕರ್ತುಕತನ, ಅನ್ಯಾಯ ಸಂಕಷ್ಟಗಳಿಗಾಸ್ಪದವಾದ ಹಿಂದು ಲೋವನ್ನು ಸಾಧ್ಯವಿದ್ದರೆ ಸುಧಾರಿಸಲೆತ್ನಿಸಲಿ. ಮದ್ರಾಸಿನ ಶ್ರೀಗಳಾದ ಜಯಕರ ಕೇಳ್ಕರ ಪ್ರಭೃತಿಗಳು ಹಿಂದು ಲೋ ಸುಧಾರಣೆಗಾಗಿ ಬದ್ಧಕಂಕಣರಾಗಿರುವಾಗ, ಶ್ರೀ. ಕಾರಂತರು ಅದೇಕೋ ಆ ಕುರಿತು ನಿರಾಸಕ್ತರಾಗಿರುತ್ತಾರೆ. ಶ್ರೀ. ಕಾರಂತರೇ ಮೊದಲಾದವರ ಪ್ರತಿಪಾದಕ ಪತ್ರಿಕೆಯೆನಿಸಿರುವ ರಾಷ್ಟ್ರಬಂಧುವು ಕಾಲಕಾಲಕ್ಕೆ ಕಣ್ಣು ಮುಚ್ಚಿಕೊಂಡಿರುವಂತಿದೆ. ಅಳಿಯ ಸಂತಾನ ಸುಧಾರಣೆಯ ಕುರಿತು ಉತ್ಕೃಷ್ಟ ಅಗ್ರಲೇಖ ಉಪಾಗ್ರಲೇಖಗಳನ್ನು ಬರೆಯುವುದರಲ್ಲಿ ಅದೇಕೋ ಹೆಚ್ಚಿನ ಆಸಕ್ತಿ ತೋರಿಸುವುದಾದರೂ ತನಗೆ ಪ್ರತ್ಯಕ್ಷವಾಗಿ ಅನ್ವಯಿಸುವ ಹಿಂದು ಸುಧಾರಣೆಯ ಸಂಬಂಧವಾಗಿ ಚಕಾರ ಶಬ್ದವೆತ್ತುವುದಿಲ್ಲ.

ಶ್ರೀ. ಕಾರಂತರಂತಹ ಕಾಂಗ್ರೆಸ್ ಸದಸ್ಯರು ಕಾಯಿದೆಗಳನ್ನು ಜ್ಯಾರಿಗೆತರಲು ಇಷ್ಟೊಂದು ಉತ್ಸಾಹ ತೋರಿಸುತ್ತಿರುವುದು ಬಲು ಚೋದ್ಯವೆನ್ನಿಸುತ್ತದೆ. ಕಾಂಗ್ರೆಸ್ ಸದಸ್ಯರು ಕೌನ್ಸಿಲುಗಳನ್ನು ಮುರಿಯುವುದಕ್ಕಾಗಿ ಅಥವಾ ಕೌನ್ಸಿಲುಗಳು ಅಪ್ರಯೋಜಕವೆಂದು ಪ್ರದರ್ಶಿಸುವುದಕ್ಕಾಗಿ ಅವುಗಳನ್ನು ಪ್ರವೇಶಿಸಿರುವರೆಂದು ಜನರು ಭಾವಿಸುವಂತಾಗಿದೆ. ಆದರೆ ಶ್ರೀ. ಕಾರಂತರು ಪದವಿ ಸ್ವೀಕಾರಕ್ಕೆ ವಿರೋಧಿಯೆಂದು ಹೇಳಿಕೊಳ್ಳುವರಾದರೂ, ಕೌನ್ಸಿಲುಗಳು ಪ್ರಯೋಜನಕಾರಿಗಳಿವೆಯೆಂದು ನಿಜವಾದ ನಂಬಿಕೆಯುಳ್ಳವರಾಗಿರುವಂತಿದೆ. ಅವರು ಹೊಸ ಕಾನೂನುಗಳನ್ನು ತರಲು ಆತುರಗೊಂಡು ಕೌನ್ಸಿಲಿನಿಂದ ಸಾಧ್ಯವಾದಷ್ಟು ಪ್ರಯೋಜನವನ್ನು ಪಡೆಯಲು ತವಕಪಡುತ್ತಿರುವರು. ಇತ್ತಲಾಗೆ ತಾನೆ ಅವರು ಜಿಲ್ಲೆಯಲ್ಲೆಲ್ಲಾ ಸಂಚರಿಸುತ್ತಾ ಕೌನ್ಸಿಲಿನಲ್ಲಿ ಮತ್ತು ಆ ಮೂಲಕ ಏನೆಲ್ಲಾ ಕಾರ್ಯಗಳನ್ನು ನೆರವೇರಿಸಿರುವೆನೆಂಬುದನ್ನು ಜನತೆಗೆಲ್ಲಾ ತಿಳಿಸಿ, ಅನಿಮಿತ್ತವಾಗಿ ತನ್ನನ್ನು ಇನ್ನೊಮ್ಮೆ ಕೌನ್ಸಿಲಿಗೆ ಕಳುಹಿಸಬೇಕೆಂದು ಕೇಳಿಕೊಂಡಿರುವರು. ಶ್ರೀ. ಕಾರಾಂತರು ಹೀಗೆ ಕೌನ್ಸಿಲು ಮುರಿಯುವ ಸೋಗನ್ನು ಬಿಟ್ಟು ತನ್ನ ನಿಜ ಮನೋವೃತ್ತಿಯನ್ನು ಪ್ರಕಟಪಡಿಸುತ್ತಾ ಬರುವುದು ಅಭಿನಂದನೀಯವೇ ಸರಿ. ಆದರೆ ಅವರ ಕಾರ್ಯೋತ್ಸಾಹವು ಹದಮೀರಿರುವಂತಿದೆ. ಈ ಹುರುಪಿನಿಂದ ಅವರು ಲೋಕವನ್ನೇ ಸುಧಾರಿಸಲು ಕಟಿಬದ್ಧರಾಗಿರುವರು. ಅವರು ಸ್ವಾವಲಂಬನೆ ಸ್ವಯಂನಿರ್ಣಯದ ಪ್ರತಿಪಾದಕರಿರುವರಾದರೂ, ತಮಗೋಸ್ಕರವಾಗಿ ಯಾವ ಮಸೂದೆಯನ್ನಾದರೂ ತರಲು ಕೇಳದಿರುವ ಜನತೆಯ ಮೇಲೆ ಕಾನೂನೊಂದನ್ನು ಹೊರಿಸಬೇಕೆಂದಿದ್ದಾರೆ. ಯಾರೂ ಹೇಳದೆ ಕೇಳದೆ ಕಾನೂನೊಂದನ್ನು ತಾನು ತರಲೆತ್ನಿಸಿದುದಕ್ಕಾಗಿ ಸಂಬಂಧಪಟ್ಟ ಜನರು ಕೃತಜ್ಞರಾಗಿರುವುದಿಲ್ಲೆಂದು ಅವರು ಮುನಿಸಾಗಿದ್ದಾರೆ. ಈ ಬಿಲಿಗೆ ಸಂಬಂಧಪಟ್ಟ ಜನತೆಯ ಅಭಿಪ್ರಾಯವನ್ನು ಕೇಳದೆ, ಅಥವಾ ಮೊದಲಾಗಿ ಅವರ ಒಪ್ಪಿಗೆ ಮತ್ತು ಸಮರ್ಥನೆಯನ್ನು ಪಡೆಯದೆ ಶ್ರೀ. ಕಾರಾಂತರಂತಹ ಪ್ರಜಾಸತ್ತಾವಾದಿಯು ಕಾನೂನೊಂದನ್ನು ಈ ರೀತಿ ತರುವ ಯೋಜನೆಮಾಡುವುದೆಂದರೆ ವಿಚಿತ್ರವೆನಿಸುವುದಿಲ್ಲವೇ? ಶ್ರೀ. ಕಾರಾಂತರು ನಿಜವಾಗಿಯೂ ಎಲ್ಲಾ ತರಗತಿಯ ಜನರಿಗೂ ವಿಧಿನಿಯಮಗಳನ್ನು ಮಾಡಿಕೊಟ್ಟಿರುವ ಮನುವಂಶ ಸಂಭೂತರು. ಅಪವಿತ್ರರಾದ ನಮಗೆ ಅವರನ್ನು ಕೇಳಲು ಅಥವಾ ಅವರ ಕೈ ತಡೆಯಲು ಯಾವ ಅಧಿಕಾರವಿದೆ? ಆದರೆ ನಾವೀಗ ಜೀವಿಸುವ ಯುಗವೇ ಬೇರೆಯೆಂಬುದನ್ನು ಅವರು ಮರೆತಿರುವಂತಿದೆ.

ಎ. ಬಿ. ಶೆಟ್ಟಿ.

ನೋಟೀಸು.

THE

Canara Bank Ltd., Mangalore.

ದಿ ಕೆನರಾ ಬ್ಯಾಂಕು ಲಿಮಿಟೆಡ್ ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬ್ಯಾಂಕಿನಿಂದ ಆಭರಣಗಳ ಆಧಾರದ ಮೇಲೆ ಪಡೆದ ಸಾಲಗಳ ಮುದ್ದತಿನೊಳಗೆ ಕೊಡದೆ ಇದ್ದುದರಿಂದಲೂ, ಸದರೀಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಸದರೀಯವರು ಕಾಣಸಿಕ್ಕದಿಲ್ಲವಾಗಿ ವಾಪಾಸು ಬಂದದ್ದರಿಂದಲೂ, ಸದರಿ ಸದರಿ ಆಭರಣಗಳನ್ನು ಇದೇ ತಿಂಗಳ ತಾ. 26ನೇ ಶುಕ್ರವಾರ ಮಧ್ಯಾಹ್ನ 12 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಬೆಲ್ಚಾರ [illegible] ಶ್ರೀನಿವಾಸಯ್ಯ. ಅಡವಿಟ್ಟ ತಾರೀಕು 3[illegible]-1-'27, ಸಾಲದ ಮೊಬಲಗು 1[illegible]0-0-0, ಏಲಂ ತಾರೀಕು ವರೆಗೆ ಬಾಕಿ ಬಡ್ಡಿ ವ ಖರ್ಚು 16-[illegible].

ಪರ್ಕಳ [illegible] ವೆಂಕಟ್ರಮಯ್ಯ, ಅಡವಿಟ್ಟ ತಾರೀಕು 3[illegible]-4-'2[illegible], ಸಾಲದ ಮೊಬಲಗು 85-0-0, ಏಲಂ ತಾರೀಕು ವರೆಗೆ ಬಾಕಿ ಬಡ್ಡಿ ವ ಖರ್ಚು 5-6-2.

[illegible] ತಾ. [illegible]-'27, ಸಾಲದ ಮೊಬಲಗು 3[illegible]-0, ಏಲಂ ತಾರೀಕು ವರೆಗೆ ಬಾಕಿ ಬಡ್ಡಿ ವ ಖರ್ಚು 19-4-[illegible], [illegible] ಅಡವಿಟ್ಟ ತಾರೀಕು [illegible]-1-'27, ಸಾಲದ ಮೊಬಲಗು 1[illegible]-0, ಏಲಂ ತಾರೀಕು ವರೆಗೆ ಬಾಕಿ ಬಡ್ಡಿ ವ ಖರ್ಚು [illegible]-4-[illegible].

[illegible] ಅಡವಿಟ್ಟ ತಾರೀಕು 3[illegible]-'28, ಸಾಲದ ಮೊಬಲಗು 130-0-0, ಏಲಂ ತಾರೀಕು ವರೆಗೆ ಬಾಕಿ ಬಡ್ಡಿ ವ ಖರ್ಚು 7-[illegible].

ಇದೇ ಕಳೆದ ಮೇ ತಿಂಗಳ ತಾ 3ನೇ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಿದ ನೋಟೀಸಿಗೆ ಅನುಸಾರವಾಗಿ ಕೆಂಜಾರು ಗ್ರಾಮದ ಬಾಬು ಭಂಡಾರಿ ಅಳಿಯ ನಾರಾಯಣ ಭಂಡಾರಿಯು ಅಡವಿಟ್ಟ ನಗಗಳು ತಾ. 21-5-'29ರಲ್ಲಿ ಬಹಿರಂಗವಾಗಿ ಏಲಂಮಾಡಿ ಹುಟ್ಟಿ ಬಂದ ರೂಪಾಯಿ 104ರಲ್ಲಿ ಬ್ಯಾಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ವಗೈರೆ ರೂಪಾಯಿ 65-2-0 ವಜಾಮಾಡಿ ಬಾಕಿ ರೂಪಾಯಿ 38-14-0 ಸದರಿಯವರ ವಾರೀಸುದಾರರು ಅವರ ಹಕ್ಕಿನ ಸಂಗ್ತಿ ಬ್ಯಾಂಕಿಗೆ ಸಮಾಧಾನಪಡಿಸಿಕೊಂಡು ಹೋಗತಕ್ಕದ್ದೆಂತಲೂ, ಹಾಗೆ ಕೊಂಡು ಹೋಗುವ ವರೇಗೆ ಸದರಿ ಐವೇಜು ಅಮಾನತ್ತಿನಲ್ಲಿ ಇಟ್ಟಿರುವದಾಗಿಯೂ, ಅದಕ್ಕೆ ಬಡ್ಡಿ ಸಿಕ್ಕಲಿಕ್ಕಿಲ್ಲವಾಗಿಯೂ, ಈ ಮೂಲಕ ತಿಳಿಸಲಾಗುತ್ತದೆ.

ಕೆನರಾ ಬ್ಯಾಂಕು ಲಿಮಿಟೆಡ್,
ಮಂಗಳೂರು
ತಾ. 3-7-1929.

K. Vonkat Rao,
ಸಕ್ರೆಟರಿ.

ಹೆಂಗಸಿನ ವಿಲಕ್ಷಣ ಅವಶ್ಯಕತೆಗೆ.

ಹೆಂಗಸಿನ ಆರೋಗ್ಯಕ್ಕೆ ಇರುವ ಅರ್ತಿಗಳನ್ನು ಫೆಲೂನಾ ಮಾತ್ರೆಗಳು ಹೋಗಲಾಡಿಸುವವು. ಹೆಂಗಸರಲ್ಲಿ ಸ್ವಾಭಾವಿಕವಾಗಿಯೇ ಉಂಟಾಗುತ್ತವೆಂದೂ, ಅವು ಹೋಗಲಾರವೆಂದೂ, ನಂಬಿಗೆಯನ್ನು ಇದುವರೆಗೆ ಹುಟ್ಟಿಸಿರುವ ಹೆಂಗಸಿನ ಬೇನೆಗಳು ಫೆಲೂನಾದಿಂದ ಸುಳ್ಳೆನಿಸಲ್ಪಟ್ಟವೆ. ಆಯಾಸವನ್ನುಂಟುಮಾಡುವ ಬೇನೆಗಳು, ತಲೆಸಿಡಿತ, ಕೈಕಾಲು ಸೆಳೆತ, ಅಶಕ್ತತೆ ಇವುಗಳು ಅಂತರಿಕ ಕೋಮಲ ಇಂದ್ರಿಯಗಳನ್ನು ಶುಚಿಪಡಿಸಿ, ಬಲಪಡಿಸುವ ಔಷಧಿಯ ಅಭಾವದಿಂದಲೇ ಉಂಟಾಗುವವು. ರಕ್ತದ ಶಕ್ತಿ, ಇಂದ್ರಿಯಗಳ ಸಂಯೋಗ, ಜೀರ್ಣಶಕ್ತಿ ಇವುಗಳ ಮೇಲೆಯೇ ಉತ್ತಮ ಆರೋಗ್ಯವು ಅವಲಂಬಿಸುವದು. ಹೆಂಗಸರಿಗೆ ಮಾತ್ರವಾಗಿರುವ ಫೆಲೂನಾ ಮಾತ್ರೆಗಳು ಶಕ್ತಿವರ್ಧಕ ಮಾತ್ರವಲ್ಲ, ಅವು ಒಳಗಿನ ಕೋಮಲವಾದ ಇಂದ್ರಿಯಗಳನ್ನು ಶುಚಿಪಡಿಸಿ ಬಲಗೊಳಿಸುವವು. ಹೊಸ ಹುರುಪೇ ಮೈಯಲ್ಲಿ ಉಂಟಾಗುವುದು, ಬಳಲಿದ ಹೆಂಗಸು ಪ್ರತಿ ದಿನ ಆನಂದಿತಳಾಗುವಳು. ಅವಳ ಬಳಲುವಿಕೆಯ ಸ್ಥಾನವನ್ನು ಉತ್ತೇಜನವು ಆಕ್ರಮಿಸುವುದು. ಹೊಳಪುಳ್ಳ ಕಣ್ಣುಗಳು ಜೀವನದಲ್ಲಿರುವ ಆಸಕ್ತಿಯನ್ನು ತೋರುವವು. ಅಂತರಿಕ ಆರೋಗ್ಯದ ಬಾಹ್ಯಸೂಚನೆಗಳೇ ಇವು ಆಗಿರುತ್ತವೆ. ಫೆಲೂನಾ ಸೇವಿಸುವ ಹೆಂಗಸಿನಿಂದ ಆನಂದವು ಹೊರಹೊಮ್ಮುವದು.

ಅಶಕ್ತರಾದ ತಾಯಿಗಳಿಗೂ ಫೆಲೂನಾ ಮಾತ್ರೆಗಳು ಅಮೂಲ್ಯವಾದವುಗಳು. ಅವರ ಮನೋಭೀತಿಯನ್ನು ತಡೆಯುವ ಆ ದಿನಕ್ಕೆ ಸಿದ್ಧರಾಗುವಂತೆ ಅವರನ್ನು ಮಾರ್ಪಡಿಸಿ ಸಿದ್ಧಗೊಳಿಸುವವು.

FELUNA PILLS
for females only

ಮಾರಾಟ ಮಾಡುವವರಲ್ಲಿ
ದೊರೆಯುವದು ... ಅಥವಾ,
... ಎಂಡ್ ಕೋ,
...

13A

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. 64/28 2A 58 1929.

ಸೀತಾರಾಮ ಯಾನೆ ಬಾಬಣ್ಣ ನಾಯ್ಕ—ಅರ್ಜಿದಾರ

ಮೃತ ಲೀಲಾಬಾಯಿ ನಾಯ್ಕಸಾನಿಯ ಮಕ್ಕಳಾದ ಮುಕ್ಕು ಸುನಂದ 1, ಪ್ರೇಮ 1, ಸರೋಜಾ 1 ಮತ್ತು ಪುಷ್ಪಾವತಿ 1 ಕೂಡ ಇವರ ಬಗ್ಗೆ ತನ್ನನ್ನು ಗಾರ್ಡಿಯಾನನಾಗಿ ನೇಮಿಸಬೇಕೆಂದು ಅರ್ಜಿದಾರನು ದಾಖಲುಮಾಡಿದ ಸದರಿ ಅರ್ಜಿಯು ತನ್ನ ಬಗ್ಗೆ ತಾ. 16—7—1929ಕ್ಕೆ ಇಟ್ಟದೆ. ಆಕ್ಷೇಪವುಳ್ಳವರು ತಾ. 16—7—29ಕ್ಕೆ ಸದರಿ ಕೋರ್ಟಿನ ಮುಂದೆ ಗಂಟೆ 11ಕ್ಕೆ ಆಕ್ಷೇಪಣೆಯನ್ನು ಜಾಹೀರುಮಾಡತಕ್ಕದ್ದು.

G. Upendra Prabhu,
Vakil for Petitioner,

ಪ್ರಕಟಣೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. No 44 28

ಲಕ್ಷ್ಮಿ, ಮುಕ್ತಸರ್, ಗಾರ್ಡಿಯನ್ ಪದ್ಮನಾಭಭಟ್ಟ— ಅರ್ಜಿದಾರ.

ಸದರಿ ಅರ್ಜಿದಾರಳ ತಂದೆ ಸರ್ವೋತ್ತಮ ಯಾನೆ ಶ್ರೀನಿವಾಸ ಉಪಾಧ್ಯನು ತಾ 18—10—26ರಲ್ಲು ಉಡುಪಿಯಲ್ಲಿ ಮೃತಪಟ್ಟು ಆತಗೆ ಬರತಕ್ಕ ಸಾಲವಸೂಲಿ ಕುರಿತು 39, 1925ನೇ ಆಕ್ಟಿನ Xನೇ ಭಾಗದ ಪ್ರಕಾರ ತನಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ತಾ. 19—10—'28ಲ್ಲು ಅರ್ಜಿಮಾಡಿದ್ದಾಳೆಂದು ಈ ಮುಂಚೆ ಪ್ರಕಟಿಸಿಯದೆ. ಸದರಿ ಅರ್ಜಿಯು ಎದ್ರಿರಿಗೆ ನೋಟೀಸು ಜ್ಯಾರಿಯಾಗದ ಸಂಬಂಧ ಇದೇ ತಿಂಗಳ ತಾ. 29—6—29ಕ್ಕೆ ತನಿಖೆಗೆ ಇಟ್ಟದೆ. ಆಕ್ಷೇಪಣೆಗಳು ಯಾರದ್ದಾದರೂ ಇದ್ದಲ್ಲಿ ಸದರಿ ಕೋರ್ಟಿನ ಮುಂದೆ ಆ ದಿವಸ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ

ನೋಟೀಸು.

ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ಆಡಳ್ತೆ ಕುರಿತು ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನ ಕೃಸು ನಂಬ್ರ 5/1927ನೇ ವ್ಯಾಜ್ಯದಲ್ಲಿ ತೀರ್ಮಾನವಾದ ಸ್ಕೀಮಿನ ಮೇರೆಗೆ ವ ಮ.ದ್ರಾಸ 'ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಆಕ್ಟಿಗೆ ಅನುಸಾರವಾಗಿ ಕೂಡ ಜೆಂಟಲ್ ಕಮಿಟಿಯವರು ಮೂರು ಜನ ಟ್ರಸ್ಟಿಗಳನ್ನು ನೇಮಕ ಮಾಡುವದೆ ನಿಶ್ಚಯಿಸಿ ಇರುವದರಿಂದ ಗೌಡ ಸಾರಸ್ವತ ಬ್ರಾಹ್ಮಣರ ಪೈಕಿ ಸದರಿ ಟ್ರಸ್ಟಿಗಳ ಸ್ಥಾನಕ್ಕೆ ನೇಮಿಸಲ್ಪಡುವದೆ ಅಪೇಕ್ಷಿಸುವವರು ತಾರೀಖು 15—7—29ರ ವರೆಗೆ ಸದರಿ ಕಮಿಟಿಯ ಪ್ರೆಸಿಡೆಂಟರವರಿಗೆ ಅರ್ಜಿಮಾಡತಕ್ಕದ್ದು.

ಮಂಗಳೂರು, ತಾ. 2-7-'29. } ಪಿ. ಆರ್. ರಂಗನಾಥ ಪುಂಜ, ಪ್ರೆಸಿಡೆಂಟ್.

ತಕ್ಕದ್ದು.

ಉಡುಪಿ, ತಾ. 26-6-'29. } M. Ramakrishna Rao, B.A B.L. Vakil for Petr. Udipi.

ತುಚ್ಛನಿಂದ ಹುಚ್ಚರಾದುದು

(ಕಥೆ)

ಹಾಕಾಡಿ ಲಕ್ಷ್ಮ್ಯಮ್ಮ

(ಸೂಚನೆ—ಇದು ಕಲ್ಪಿತ ಕಥೆಯಾದುದರಿಂದ ಇದರಲ್ಲಿರುವ ಸರ್ವ ವ್ಯಕ್ತಿನಾಮಗಳೂ ಕಲ್ಪಿತವಾದುವುಗಳೇ)

ವೈಶಾಖ ಮಾಸವು. ಉಡುಪಿಯ ಪರ್ಯಾಯ ಜಾತ್ರೆಗೆ ಇನ್ನು ಹೆಚ್ಚು ದಿವಸಗಳುಳಿಯಲಿಲ್ಲ. ಆ ಪ್ರಸಿದ್ಧ ಜಾತ್ರೆಗಾಗಿ ಹಲವು ಊರುಗಳಿಂದಲೂ ಜನರು ಬಂದು ಅಲ್ಲಲ್ಲಿ ಭೋಜನ ಗೃಹಗಳಲ್ಲಿ ಉಳಕೊಂಡಿರುವರು. ಸಮಯವು ಸಾಧಾರಣ ನಾಲು ನಾಲ್ಕೂವರೆ ಘಂಟೆಯಾಗಿರಬಹುದೇನೋ. ಉಡುಪಿ ಪಟ್ಟಣದ ಅತಿ ದಕ್ಷಿಣ ದಿಕ್ಕಿನ ಕೇರಿಯೊಂದರಲ್ಲಿ ಅಂದವಾದ ಒಂದು ಚಿಕ್ಕ ಮನೆ ಇದೆ. ಆ ಗೃಹದ ದ್ವಾರದಲ್ಲಿ ಒಬ್ಬ ಸ್ತ್ರೀಯು ನಿಂತುಕೊಂಡು ಪಥದ ಕಡೆಗೆ ನೋಡುತ್ತಲಿದ್ದಾಳೆ. ಆಕೆಯು ಬಹು ಸಮಯದಿಂದಲೂ ಅಲ್ಲೇ ನಿಂತುಕೊಂಡಿದ್ದಳು. ಅಷ್ಟರಲ್ಲಿ ಧೊರೆಗಳಂತೆ ಚೊಕ್ಕಟವಾದ ರೀತಿಯಲ್ಲಿ ಉಡುಪನ್ನು ಧರಿಸಿಕೊಂಡಿದ್ದ ಪುರುಷನೊಬ್ಬನು ಅಲ್ಲಿಗೆ ಬಂದನು. ಅತನನ್ನು ಕಂಡು ಆಕೆಯು "ರಂಗಾ, ಒಳ್ಳೆ ಕೆಲಸ ಮಾಡಿದೆ. ನಿನ್ನ ನೆನಪಿಗೆ ನಾನೇನು ಹೇಳಬೇಕು? ಇಲ್ಲವಾದರೆ ಹೋಗುವಾಗ ಬರುವಾಗ ಒಂದೇ ಒಂದು ಕೈಯಾದರೂ ಕೊಟ್ಟು ಹೋಗಬೇಡವೆ?" ಎಂದಳು.

ಅದಕ್ಕೆ ರಂಗರಾಯನು "ಸಾಕು, ಸಾಕು, ಹೋಗು, ಒಳಕ್ಕೆ ಹೋಗು" ಎಂದ ಮೇಲೆ ಇಬ್ಬರೂ ಗೃಹದೊಳಕ್ಕೆ ಪ್ರವೇಶಮಾಡಿದರು.

ಗೃಹದ ಬಾಗಿಲು ಎಷ್ಟೋ ಸಮಯದಿಂದ ತೆರೆದೇ ಇದ್ದಿತು. ಗೃಹದ ಸೌಂದರ್ಯದ ವಿಷಯದಲ್ಲಿ ಹೆಚ್ಚೇನೂ ಬರೆಯಲಾರೆವು. ಅದು ಹಂಚು ಹೊದಿಸಿದ ಒಂದು ಚಿಕ್ಕ ಕಟ್ಟಡವಾಗಿದ್ದಿತು. ಗೃಹದೊಳಕ್ಕೆ ಒಂದು ಮಂಚದ ಮೇಲೆ ಒಂದು ಹಲ್ಲವು ತೋರುತಿತ್ತು. ಮತ್ತೊಂದೆಡೆಯಲ್ಲಿ ಒಂದು ಪೆಟ್ಟಿಗೆ, ಕೆಲವು ಪಾತ್ರೆಗಳು, ಕೈ ಮುರಿದ ಒಂದು ಕುರ್ಚಿ, ಒಂದು ಮೇಜು, ಮೇಜಿನ ಮೇಲೊಂದು ಕನ್ನಡಿ—ಇಷ್ಟೆಲ್ಲಾ ಇದ್ದುವು. ಗೋಡೆಗಳಲ್ಲಿ ಅಂದವಾದ ರವಿವರ್ಮನ ಕೆಲವು ಚಿತ್ರಗಳು ತಂಗೋಳಿಸುತ್ತಿದ್ದುವು. ಮೇಜಿನ ಮೇಲೆ ಒಂದು ವಸ್ತ್ರವು ಮುಚ್ಚಲ್ಪಟ್ಟಿತ್ತು. ಆ ವಸ್ತ್ರದ ಮೇಲೆಲ್ಲಾ ವಿಚಿತ್ರವಾದ ಕಸೂತಿಯ ಕೆಲಸ ಮಾಡಲ್ಪಟ್ಟಿತ್ತು.

ರಂಗರಾಯನು ಆ ಕೈಮುರಿದ ಕುರ್ಚಿಯ ಮೇಲೆ ಕುಳಿತುಕೊಂಡು ಆ ಸ್ತ್ರೀಯೊಡನೆ "ಸುಂದರಿ, ಇಗೋ, ಬೀಸಣಿಗೆಯಿದೆ, ಇದರಿಂದ ಸ್ವಲ್ಪ ಗಾಳಿಯನ್ನು ಬೀಸುವುದಿಲ್ಲವೇ? ಬಹಳ ಸೆಕೆಯಾಗುತ್ತದೆ" ಎಂದನು.

"ಇಸ್ಸಿ, ರಂಗಾ, ನೀನೇನು ಜಹಾಂಗೀರ ಚಕ್ರವರ್ತಿಯಾಗಿರುವೆಯಾ? ನೀನೇ ಗಾಳಿ ಬೀಸಿಕೊಳ್ಳಬಾರದೇ? ಪ್ರಾತಃಕಾಲದಲ್ಲಿ ಒಂದಿಷ್ಟು ಗಂಜಿಯನ್ನು ಮಾತ್ರ ಕುಡಿದಿದ್ದೆನು. ಆದೀಗ ಜೀರ್ಣವಾಗಿ ಎಲ್ಲಿ ಹೋಯಿತೋ ಏನೋ! ಆ ಮೇಲೆ ಇಷ್ಟರ ವರೆಗೆ ಹೊಟ್ಟೆಗೆ ಏನೂ ದೊರಕಲಿಲ್ಲ. ತಿನ್ನುವಾ ಎಂದರೆ ಮನೆಯಲ್ಲಿ ಏನಾದರೂ ಉಂಟೇ? ಇಲ್ಲ. ರಂಗಾ ನನಗೆ ನೀನು ನಿಜವಾಗಿಯೂ ಈ ರೀತಿಯಲ್ಲಿ ಕಷ್ಟ ಕೊಡಬಾರದು. 'ಕಷ್ಟ ಕೊಟ್ಟರೆ ನಿನಗೆ ಖಂಡಿತವಾಗಿಯೂ ಒಳ್ಳೇದಾಗು'ವುದೆಂಬುದಾಗಿ ಭಾವಿಸಬೇಡ. ಸುಖವಾಗಿ ನನ್ನ ಮನೆಯಲ್ಲಿದ್ದ ನನ್ನನ್ನು ಒಪ್ಪಿಸಿ ನನ್ನೊಡನೆ ಇದ್ದ ಸಮಸ್ತ ಆಭರಣಗಳನ್ನೂ ಮಾರಿ ಈಗ ನೀನು ನನಗೆ ಈ ರೀತಿಯಲ್ಲಿ ಕಷ್ಟ ಕೊಡುತ್ತಿರುವೆಯಲ್ಲವೇ?" ಎಂದು ಆ ಸ್ತ್ರೀಯು ಹೇಳಿದಳು. ಈ ಮಾತುಗಳನ್ನು ಕೇಳಿದೊಡನೆ ರಂಗರಾಯನ ಮನಸ್ಸು ಕರಗಿತು. ಅತನು ನಾನಾ ರೀತಿಯಲ್ಲಿ ಮೃದುವಚನಗಳನ್ನಾಡಿ ಅವಳ ಮನಸ್ಸಿನಲ್ಲಿ ನಾಟಿರುವ ಕಷ್ಟಗಳನ್ನು ಮರೆಯಿಸಲು ಯತ್ನಿಸಿದನು. ಎಷ್ಟಾದರೂ ಸ್ತ್ರೀಯಲ್ಲವೇ? ರಂಗರಾಯನ ಸಿಹಿ ಮಾತುಗಳಿಗೆ ಆಕೆಯು ಮನಸೋತು ಇನ್ನಷ್ಟು ಪ್ರೇಮವನ್ನು ತೋರಿಸಿದಳು. ಆಗ ರಂಗರಾಯನು ಆಕೆಯ ಕೈಯಲ್ಲಿ ಒಂದು ರೂಪಾಯಿ ಕೊಟ್ಟು "ಹೋಗು, ಇಬ್ಬರಿಗೆ ಬೇಕಾದಷ್ಟು ಕಾಫಿ, ಸಜ್ಜಿಗೆ, ರೊಟ್ಟಿ, ಹಲ್ವ, ಮತ್ತು ಮೈಸೂರುಪಾಕ ಇಷ್ಟೆಲ್ಲಾ ತೆಗೆದುಕೊಂಡು ಬಾ. ಈಗಲಾದರೂ ಸಂತೋಷದಿಂದ ಒಂದಿಷ್ಟು ಆಹಾರವನ್ನು ತೆಗೆದುಕೊಳ್ಳುವಾ" ಎಂದನು.

ರಂಗರಾಯನೂ ಸುಂದರಿಬಾಯಿಯೂ ಮುಂಚೆ ಮಂಗಳೂರಿನಲ್ಲಿದ್ದರು. ಅಲ್ಲಿ ಅತನಿಗೆ ಬರವಣಿಗೆಯ ಕಸಬು ಇತ್ತು. ಹೊಟ್ಟೆಪಾಡಿಗಾಗಿ ಸುಳ್ಳು ಸುಳ್ಳು ಪ್ರಾಮಿಸರಿ ನೋಟುಗಳನ್ನೂ ದಸ್ತಾವೇಜುಗಳನ್ನೂ ಬರೆಯಲು ಪ್ರಾರಂಭಿಸಿದುದರಿಂದ ಅತನನ್ನು ಸರ್ವರೂ ದ್ವೇಷಿಸತೊಡಗಿದರು. ಎಲ್ಲಿಯಾದರೂ ಶ್ರೀಮಂತರೊಳಗೆ ಜಗಳಗಳು ಬಿದ್ದು ಅವರೊಳಗೆ ಪಕ್ಷಗಳು ಉಂಟಾದೊಡನೆಯೇ ಒಂದು ಪಕ್ಷದವರು ಮತ್ತೊಂದು ಪಕ್ಷದವರನ್ನು ಸೋಲಿಸಬೇಕೆಂದು ಸುಳ್ಳು ಸುಳ್ಳು ನೋಟುಗಳನ್ನು ಮಾಡಿಸುವ ಪದ್ಧತಿಯು ಕೆಲವು ಸಮಯ ತೋರಿಬಂದಿತ್ತು. ಅದಕ್ಕಾಗಿ ಒಂದು ಪಕ್ಷದವರು ರಂಗರಾಯನಿಗೆ ಬೇಕಾದಷ್ಟು ಹಣ ಕೊಟ್ಟು ಕರೆದುಕೊಂಡು ಹೋಗಿ ತಮಗೆ ಬೇಕಾಗಿದ್ದುದನ್ನು ಮಾಡಿಸಿಕೊಳ್ಳುತ್ತಿದ್ದರು. ಇವನ ಈ ಗುಣಗಳು ಮಂಗಳೂರಿನವರಿಗೆ ಸರಿತೋರಲಿಲ್ಲ. ಹೀಗಾಗಿ ಅವರೊಡನೆ ಅತನಿಗೆ ದ್ವೇಷವು ಬೆಳೆಯಿತು. ಆದುದರಿಂದ ರಂಗರಾಯನೂ ಸುಂದರಿಬಾಯಿಯೂ ಮಂಗಳೂರನ್ನು ಬಿಟ್ಟು ಉಡುಪಿಗೆ ಬಂದರು. ಇಲ್ಲಿಯವರಿಗೆಲ್ಲರಿಗೂ ರಂಗರಾಯನು ದೊಡ್ಡ ವಂಚಕನೆಂಬುದು ತಿಳಿದಿತ್ತು. ಸುಂದರಿಯು ರಂಗರಾಯನ ಪತ್ನಿಯಾಗಿರಬೇಕೆಂದು ಸರ್ವರೂ ಭಾವಿಸಿರುವರು. ಅವರೊಳಗೆ ಎಂಥಾ ಸಂಬಂಧವೇ ಇರಲಿ. ನಾವೀಗ ಆ ವಿಷಯ ಮಾತನಾಡುತ್ತ ಕುಳಿತುಕೊಳ್ಳಲಾರೆವು. ರಂಗರಾಯನಿಗೆ ಈಗ ಜೀವನಕ್ಕೆ ವಂಚನೆಯೊಂದಲ್ಲದಿದ್ದರೆ ಅನ್ಯ ಉಪಾಯವಿಲ್ಲ.

ರೂಪಾಯಿ ದೊರೆತೊಡನೆಯೇ ಸುಂದರಿಯು ರಂಗರಾಯನು ಅಪೇಕ್ಷಿಸಿದ ತಿಂಡಿಯನ್ನೂ ಕಾಫಿಯನ್ನೂ ಕೊಂಡು ಬಂದಳು. ತಿಂಡಿಯನ್ನು ತಿನ್ನುತ್ತಿರುವಾಗ ಸುಂದರಿಯು "ಅದೆಲ್ಲಾ ಇರಲಿ. ಇಂದು ನಿನ್ನೆಯ ಯತ್ನಗಳೆಂದೇನಾಯಿತು?" ಎಂದು ಪ್ರಶ್ನಿಸಿ ರಂಗರಾಯನ ಜೇಬಿನಲ್ಲಿ ಕೈ ಹಾಕಿ ಒಂದು ನೋಟುಗಳ ಗಂಟನ್ನೂ, ಕೆಲವು ಆಭರಣಗಳನ್ನೂ, ಒಂದು ಸುವರ್ಣ ಸರಪಣಿಯನ್ನೂ, ಒಂದು ಅಂದವಾದ ಬೆಳ್ಳಿ ವಾಚನ್ನೂ ಹೊರಕ್ಕೆ ತೆಗೆದು ಮೇಜಿನ ಮೇಲೆ ಹಾಕಿದಳು. ಆ ಮೇಲೆ ಸವಿಸ್ಮಯದಿಂದ "ಇಂದೀಗ ಯಾರ ಮನೆಯನ್ನು ನೆಲಸಮಮಾಡಿ ತಂದು ಬಿಟ್ಟೆ?" ಎಂದು ಪ್ರಶ್ನಿಸಿದಳು.

"ಸುಮ್ಮನಿರು, ಸುಮ್ಮನಿರು, ಈಗ ಆ ತಿಂಡಿಯನ್ನು ಮುಗಿಸು. ಆ ಮೇಲೆ ಇದೆಲ್ಲ ಹೇಗೆ ದೊರೆಯಿತೆಂಬುದನ್ನು ಹೇಳುವೆನು" ಎಂದು ಅತನು ಉತ್ತರವಿತ್ತನು.

ಇಬ್ಬರೂ ಮೇಜಿನ ಮೇಲೆ ತಮ್ಮ ಮುಂದೆ ಇಟ್ಟಿರುವ ಪಾತ್ರೆಗಳನ್ನು ಬರಿದು ಮಾಡಿದ ಮೇಲೆ ಸುಂದರಿಬಾಯಿಯು ಒಂದು ಹರಿವಾಣದಲ್ಲಿ ತಾಂಬೂಲವನ್ನಿಟ್ಟು ರಂಗರಾಯನ ಮುಂದೆ ಆ ಹರಿವಾಣವನ್ನು ಇರಿಸಿದಳು. ರಂಗರಾಯನು ವೀಳ್ಯವನ್ನು ಜಗಿಯುತ್ತಾ ಆ ನೋಟಿನ ಕಟ್ಟು, ಭಂಗಾರದ ಸರಪಣಿಯೂ, ಆಭರಣಾದಿಗಳೂ ಹೇಗೆ ದೊರೆಯಿತೆಂಬುದರ ಕುರಿತು ಮಾತನಾಡಲಾರಂಭಿಸಿದನು:—"ನಿನ್ನೆ ಎಲ್ಲೆಲ್ಲಿ ಸಂಚರಿಸಿದರೂ ಏನೊಂದೂ ದೊರೆಯದೆ ಬಳಿಕ ಹತಾಶನಾಗಿ ಅಜ್ಜರಕಾಡಿನ ಗುಡ್ಡೆಯಲ್ಲಿ ಒಂದು ಕಲ್ಲಿನ ಮೇಲೆ ಹೋಗಿ ಕುಳಿತುಕೊಂಡೆನು. ಸ್ವಲ್ಪ ಸಮಯದ ಮೇಲೆ ಇಬ್ಬರು ಸುಂದರ ಬಾಲಕರು ಅದೇ ಸ್ಥಳಕ್ಕೆ ಬಂದು ನನಗಿಂತ ತುಸು ದೂರ ಕುಳಿತುಕೊಂಡು ಮಾತನಾಡಲಾರಂಭಿಸಿದರು. ಹಲವು ಬೇರೆ ಬೇರೆ ವಿಷಯಗಳ ಕುರಿತು ಅವರು ಮಾತನಾಡಿಕೊಂಡ ಮೇಲೆ ಅವರಲ್ಲಿ ಒಬ್ಬ ಯುವಕನು 'ನೀನು ನಾಳೆ ಬುಧವಾರ ಮೋಟಾರ್ ಸ್ಟೇಶನಿನಲ್ಲಿ ಕಾದು ಕುಳಿತುಕೊಳ್ಳಬೇಕು' ಎಂದನು. ಮತ್ತೊಬ್ಬ ಯುವಕನು 'ಅದೇನು? ಮೋಟಾರ್ ಸ್ಟೇಶನಿನಲ್ಲಿ ಎಂಥಾ ಕಾರ್ಯವಿದೆ?' ಎಂದು ಪ್ರಶ್ನಿಸಿದನು. ಪ್ರಥಮ ಯುವಕನು 'ನಾಳೆ ನನ್ನ ಮಾವಯ್ಯನವರು ಮದ್ರಾಸಿನಿಂದ ಮಂಗಳೂರಿಗೆ ಬಂದು ಅಲ್ಲಿಂದ ಮಧ್ಯಾಹ್ನದ ಮೋಟಾರ್ ಬಸ್ಸಿನಲ್ಲಿ ಉಡುಪಿಗೆ ಬರುತ್ತೇನೆಂಬುದಾಗಿ ಬರೆದಿರುವರು. ಉಡುಪಿಯಲ್ಲಿ ಈಗ ನನ್ನ ಮನೆ ಇರುವ ಸ್ಥಳವನ್ನು ಅವರು ಅರಿಯರು. ಅಷ್ಟೇ ಅಲ್ಲದೆ ನನ್ನ ಮದುವೆಯಾದಂದಿನಿಂದ ಅವರು ಉಡುಪಿಗೆ ಬರಲೂ ಇಲ್ಲ. ಈಗ ಅವರು ಸ್ವಲ್ಪ ಅಸ್ವಸ್ಥರಾಗಿದ್ದಾರಂತೆ. ಆದುದರಿಂದ ನಾನು ಮೋಟಾರ್ ಸ್ಟೇಶನಿಗೆ ಹೋಗಬೇಕಾಗಿದೆ. ಆದರೆ ನಾನು ಒಂದು ಕಷ್ಟಕ್ಕೆ ಗುರಿಯಾದೆನಲ್ಲಾ!' ಎಂದು ಹೇಳಿದನು.

"ಎಂಥಾ ಕಷ್ಟವಪ್ಪಾ?" ಎಂದು ದ್ವಿತೀಯ ಯುವಕನು ಪ್ರಶ್ನಿಸಿದನು.

ಅದಕ್ಕೆ ಪ್ರಥಮ ಯುವಕನು "ನನ್ನ ಶ್ವಶುರನಿಗೆ ನನ್ನ ಪರಿಚಯವಿಲ್ಲ. ಅವರು ನನ್ನನ್ನು ಈ ತನಕ ನೋಡಲಿಲ್ಲ, ನಾನೂ ಅವರನ್ನು ಈ ತನಕ ಕಾಣಲಿಲ್ಲ. ನಮ್ಮಿಬ್ಬರ ಪರಿಚಯವು ಈ ತನಕ ಕಾಗದ ಪತ್ರಗಳ ಮೂಲಕವೇ ಆಗಿದೆ. ಅವರಿಗೆ ನನ್ನ ವಿವಾಹದ ಸಮಯದಲ್ಲಿ ಬರಲು ಸಾಧ್ಯವಾಗಲಿಲ್ಲ. ವಿವಾಹವನ್ನು ನಿಶ್ಚಯಿಸಿದ ಬಳಿಕ ಅವರೊಂದು ಕಾರ್ಯಕ್ಕಾಗಿ ವಿಲಾಯತಿಗೆ ತೆರಳಿದರು. ವಿವಾಹದ ಸಮಯದಲ್ಲಿ ಅವರಿಗೆ ಅಲ್ಲಿಂದ ಹೊರಡಲು ಸಾಧ್ಯವಾಗಲಿಲ್ಲ. ವಿವಾಹದ ದಿವಸವನ್ನು ಮುಂದರಿಸಲು ಸಾಧ್ಯವಾಗದೆ ಅವರಿಲ್ಲದ ಸಮಯದಲ್ಲಿ ವಿವಾಹವನ್ನು ಜರಗಿಸಲೇಬೇಕಾಯಿತು. ವಿವಾಹವಾದಂದಿನಿಂದ ಒಮ್ಮೆಯಾದರೂ ಅವರು ಇಲ್ಲಿಗೆ ಬರಲಿಲ್ಲ. ಹೀಗಾಗಿ ನಮಗೆ ಪರಸ್ಪರ ಪರಿಚಯವಿಲ್ಲ. ನಿನ್ನೆ ದೊರಕಿದ ಪತ್ರದಲ್ಲಿ ಅವರು ಹೀಗೆ ಬರೆದಿರುವರು—'ನಾನು ನಾಳೆ ಪ್ರಾತಃಕಾಲದಲ್ಲಿ ಸೌತ್ ಇಂಡಿಯನ್ ರೈಲಿನಲ್ಲಿ ಮಂಗಳೂರಿಗೆ ಬಂದು ತಲ್ಪಿದೊಡನೆಯೇ 'ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ'ಯ ಮಧ್ಯಾಹ್ನದ ಬಸ್ಸಿನಲ್ಲಿ ಉಡುಪಿಗೆ ಬಂದು ತಲುಪುವೆನು. ನನಗೆ ನಿನ್ನ ಗೃಹವೆಲ್ಲಿದೆ ಎಂಬುದು ತಿಳಿಯದಿದ್ದುದರಿಂದ ನೀನು 'ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ'ಯ ಸ್ಟೇಶನಿನ ಗೇಟಿನ ಬಳಿಯಲ್ಲಿ ಕಾದು ಕುಳಿತುಕೊಳ್ಳಬೇಕು. ನಿನ್ನ ಪರಿಚಯಕ್ಕಾಗಿ ನೀನು ನಿನ್ನ ಕೊರಳಿಗೆ ಒಂದು ಕೆಂಪು ಕರವಸ್ತ್ರವನ್ನೂ, ಸೊಂಟಕ್ಕೆ ಒಂದು ಹಸುರು ವರ್ಣದ ಶಾಲನ್ನೂ ಕಟ್ಟಿಕೊಳ್ಳಬೇಕು. ಇಲ್ಲವಾದರೆ ಪರಿಚಯವಾಗಲಾರದು.' ಆದುದರಿಂದ ಮಾವಯ್ಯನವರೊಡನೆ ನಾನು ಹೇಗೆ ಮಾತಾಡಬೇಕೆಂಬ ಕ್ರಮವು ನನಗೆ ತಿಳಿಯುವುದಿಲ್ಲ. ನನ್ನ ಚಿಕ್ಕಂದಿಯ ವಿದ್ದರೆ ಇಷ್ಟೆಲ್ಲಾ ಕಷ್ಟವಿಲ್ಲವಿತ್ತು. ಅವರೀಗ ತೀರಿಹೋಗಿದ್ದಾರೆ. ಆದುದರಿಂದ ಆ ಭಾರವೆಲ್ಲಾ ನನ್ನ ಮೇಲೆಯೇ ಬಿದ್ದಿದೆ. ಇದು ಮಾತ್ರವಲ್ಲ. ಮಾವಯ್ಯನವರು ಪತ್ರದಲ್ಲಿ ತಾನು ತನ್ನ ಪರಿಚಯಕ್ಕಾಗಿ ಕೆಂಪು ರುಮಾಲನ್ನು ಧರಿಸಿಕೊಳ್ಳುತ್ತೇನಾಗಿಯೂ ಸೊಂಟದಲ್ಲಿ ಒಂದು ಕೆಂಪು ಶಾಲು ಕಟ್ಟಲ್ಪಡುವುದಾಗಿಯೂ ಬರೆದಿರುವರು. ಆದುದರಿಂದ ಅದನ್ನು ಕಂಡ ಕೂಡಲೇ ಅವರ ಪರಿಚಯವಾಗುವುದು" ಎಂದು ಉತ್ತರವಿತ್ತನು.

"ಹಾಗಾದರೆ ಇನ್ನೆಂಥ ಕಷ್ಟವಿದೆ? ಈಗ ಪರಿಚಯಕ್ಕೆ ಏನೊಂದೂ ತೊಡಕಿಲ್ಲದಂತಾಯಿತಲ್ಲವೇ?" ಎಂಬುದಾಗಿ ಆ ದ್ವಿತೀಯ ಯುವಕನು ಹೇಳಿದನು. ಹೀಗೆ ಇವರೊಳಗೆ ಮಾತುಕತೆಗಳಾದ ಮೇಲೆ ಸಂಧ್ಯಾಕಾಲವು ಉತ್ತೀರ್ಣವಾಯಿತು. ಯುವಕರಿಬ್ಬರೂ ತಾವು ಕುಳಿತುಕೊಂಡ ಸ್ಥಾನದಿಂದೆದ್ದು ತಮ್ಮ ತಮ್ಮ ಗೃಹಗಳಿಗೆ ಪ್ರಸ್ಥಾನ ಮಾಡಿದರು. ಆ ಸಮಯದಲ್ಲಿ ನನ್ನ ತಲೆಯಲ್ಲಿ ಅದ್ಭುತವೇ ಒಂದು ಕಲ್ಪನೆಯು ವಿದ್ಯುತ್ಪ್ರವಾಹದ ಹಾಗೆ ಮಿಂಚಿತು. ಆಗ ನಾನು ಅಲಕ್ಷ್ಯಭಾವದಿಂದ ಆ ಯುವಕರ ಹಿಂದೆಯೇ ಹೊರಟೆನು. ಸ್ವಲ್ಪ ದೂರ ನಡೆದ ಮೇಲೆ ಆ ಯುವಕರಿಬ್ಬರೂ ಬೇರೆ ಬೇರೆಯಾದರು. ಒಬ್ಬನು ಬಲದಕ್ಕೆಯ ದಾರಿಯಿಂದ ಮನೆಗೆ ಹೋದನು. ಮತ್ತೊಬ್ಬನು ಸಂತೆಕಟ್ಟೆಯ ರಸ್ತೆಯ ದಾರಿಯನ್ನು ಹಿಡಿದನು. ನಾನು ಸಂತೆಕಟ್ಟೆಯ ರಸ್ತೆಯಲ್ಲಿ ಹೋಗುತ್ತಿರುವ ಆ ಪ್ರಥಮ ಯುವಕನ ಹಿಂದೆಯೇ ನಡೆದು ಹೋಗಿ ಅತನ ಮನೆಯನ್ನು ಮುಟ್ಟಿದೆನು. ಆ ಮನೆಯು ಇರುವುದು ಸಂತೆಕಟ್ಟೆ ಬಳಿಯಲ್ಲಿರುವ ಒಂದು ಸಣ್ಣ ಓಣಿಯಲ್ಲಿ. ಗೃಹವೇನೋ ಪ್ರಕಾಂಡವಾದುದು. ಅದರ ಎದುರು ಭಾಗದಲ್ಲಿ ವಿಸ್ತಾರವಾದ ಜಗಲಿಯಿದೆ. ನಾನು ಆ ಜಗಲಿಯ ಮೇಲೆ ಕುಳಿತುಕೊಂಡೆನು. ತುಸು ಹೊತ್ತಾದ ಮೇಲೆ ಆ ಮನೆಯ ಕೆಲಸದವನೊಬ್ಬನು ಒಂದು ಬೀಡಿ ಕಟ್ಟನ್ನೂ ಒಂದು [illegible]ಯನ್ನು ಹಿಡಿದುಕೊಂಡು ಆ ಜಗಲಿಗೆ ಬಂದನು. ಅಲ್ಲಿಗೆ ಬಂದೊಡನೆಯೇ ಒಂದು ಮೂಲೆಯಲ್ಲಿ ಕುಳಿತುಕೊಂಡು ಆ [illegible]ಯನ್ನು ಸೇದಲಾರಂಭಿಸಿದನು.

ನಾನು ಸಾಧ್ಯವಾದಷ್ಟು ನಿಧಾನವಾಗಿ ಎದ್ದು ಹೋಗಿ ಮೆಲ್ಲನೆ ಆ ಕೆಲಸದವನ ಹತ್ತಿರಕ್ಕೆ ಹೋಗಿ ನನಗೊಂದು ವೀಳ್ಯದೆಲೆಯನ್ನೂ ಸ್ವಲ್ಪ ಸುಣ್ಣವನ್ನೂ ತಂದು ಕೊಡಬೇಕಾಗಿ ಕೇಳಿದೆನು. ಅತನದನ್ನು ತಂದುಕೊಟ್ಟನು. ಅಷ್ಟರಲ್ಲಿ ಮನೆಯೊಳಗಿಂದ ಅದೇ ಯುವಕನು 'ಅನಂತಾ' ಎಂದು ಕರೆದನು. ಅನಂತನು ಒಳಕ್ಕೆ ಹೋದನು. ಒಳಕ್ಕೆ ಹೋದೊಡನೆಯೇ ಮನೆಯ ಹೊರಗಿನ ಕೋಣೆಯ ಬಾಗಿಲನ್ನು ತೆರೆದು ಅದರಲ್ಲೊಂದು ದೀಪವನ್ನು ಹಚ್ಚಬೇಕಾಗಿ ಆ ಯುವಕನ ಅನುಜ್ಞೆಯಾಯಿತು. ಅದೇ ಪ್ರಕಾರವಾಗಿ ದೀಪವನ್ನು ಹಚ್ಚಿದೊಡನೆಯೇ ಕೆಲಸದವನಾದ ಅನಂತನು ನನ್ನ ಸಮೀಪವೇ ಬಂದು ಕುಳಿತುಕೊಂಡನು. ಅಲ್ಪಕ್ಷಣದ ಮೇಲೆ ಆ ದೀಪ ಹಚ್ಚಲ್ಪಟ್ಟ ಕೋಣೆಯಲ್ಲಿ ಆ ಯುವಕನು ಒಂದು 'ಹಾರ್ಮೋನಿಯಮ್' ವಾದನದ ಪೆಟ್ಟಿಗೆಯನ್ನು ಬಾರಿಸಿ "ಇನ್ನೇಕೆ ಉಪದೇಶವನು ಅತಿಮುಕ್ತನಾಗಿರುವಾತನು ವಿಶ್ವಂಥ ಮಾತನುಡಿವೆ? ಜಾತಕೀ ಮಾತನ್ನ [illegible] ಹೃದಯದೊಳು ನಿಂತವು [illegible] ಜಾತೆ!" ಎಂಬ ಹಾಡನ್ನು ಹಾಡಲು ಪ್ರಾರಂಭಿಸಿದನು.

ಸಶೇಷ

ESTABLISHED 1876.

M. Ganapaya & Sons,

AYURVEDIC PHYSICIANS.

Car-Street, MANGALORE, S. Kanara.

(೫೦ ವರುಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ
— ಔಷಧಗಳು.) —

1. ಅಶೋಕಾರಿಷ್ಟ ಮತ್ತು ಮಾತ್ರೆ—

ಹೆಂಗಸರ ಮುಟ್ಟಿನ ದೋಷಗಳು, ಮುಟ್ಟು ಸ್ರಾವವು ಹೆಚ್ಚು ಕಡಿಮೆಯಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಪ್ರದರ, ಮಲಬದ್ಧತೆ, ಬಿಳಿಜ್ವರ, ರಕ್ತಹೀನತೆ, ಕೈಕಾಲು ಸೆಳೆತ, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಅತೀ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಉಂಟಾದ ಅನಾರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರೈಸುವದು.

ಒಂದು ಬಾಟಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣಿ—

ಗಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ಕ್ಷಣಮಾತ್ರದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಜ್ವರದಿಂದ ಉಂಟಾದ ನಾನಾತರದ ವ್ಯಾಧಿಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲೇರಿಯದಿಂದ ಬಾಧಿಸಲ್ಪಟ್ಟು ಹಲವು ತರದ ಔಷಧಿಗಳನ್ನು ಉಪಯೋಗಿಸಿ, ಗುಣಹೊಂದದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ ಬಾಟ್ಲಿಯೊಂದಕ್ಕೆ 1-8-0, 3 ಬಾಟ್ಲಿಗೆ 4-2-0.

ಇವುಗಳಲ್ಲದೆ ಮಲೇರಿಯಾ ಗುಳಿಗೆ, ಜ್ವರಗಜ್ಜೆಯ ರೋಗಿ ಸ್ತಂಭದ ವಟಿ, ಬಾಲಗ್ರಹ ಗುಳಿಗೆ, ಕಾಸಕುಠಾರ ಗುಳಿಗೆ, ಅಶ್ವಗಂಧಿ ಗುಳಿಗೆ, ಚ್ಯವನ ಪ್ರಾಶಾವಲೇಹ, ಧಾತುಪುಷ್ಟಿ ಲೇಹ, ಚಂದನಾಸವ ಮತ್ತು ಮಾತ್ರೆಗಳು ಇವೇ ಮೊದಲಾದ ಸಮಸ್ತ ಔಷಧಗಳೂ ದೊರೆಯುವವು. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಲಿಚ್ಛೆಯಿದೆಯೇ? ನಿಮಗೆ ತಿಳಿಯಬೇಕಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ಕಂಡಿತವಾದ ಐದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. [illegible] ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ [illegible] ಮಾತ್ರ. ಪ್ರತಿ ತಿಂಗಳ ಕಾಲಂಶದ ವಿಚಾರವುಳ್ಳ ಒಂದು ವರುಷದ ಜಾತಕ ಫಲ ರೂ. [illegible] ಐದು ವರ್ಷದ ಫಲ ರೂ. [illegible] ಪ್ರತಿ ಪತ್ರಿಯ ವಿಚಾರವುಳ್ಳ ಒಂದು ವರ್ಷದ ಫಲ ರೂ. [illegible] ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ರೂ. [illegible] ಆಣೆ [illegible] ನಿಮಗಾಗಿಯೇ ಬೇರೆ ಮಾಡಿದ ತಾಯಿತಕ್ಕೆ ರೂ. ೫೦.

ಆಂಧ್ರ ಪತ್ರಿಕೆ—(ತೆಲುಗಿ ದೈನಿಕ ವಾರಪತ್ರಿಕೆ) ಮದ್ರಾಸ ತಾ. 8-2-1924ರಲ್ಲಿ ಬರೆದುದು.—ತಿರುತ್ತಾಣಿಯಲ್ಲಿನ ಹನುಮಾನ್ ಜ್ಯೋತಿಷಾಲಯದ ಹನುಮಾನುದಾಸ ವಿ. ಕೆ. ಶಠಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. ಇದು 1923ನೇ ಇಸವಿ ನವಂಬರು ತಾ. [illegible] ಪ್ರಕಟವಾಯಿತು. ಅದರಲ್ಲಿ ಮಹಾತ್ಮಾಜಿಯವರು 1924ನೇ ಇಸವಿ ಫೆಬ್ರವರಿ ತಾ. [illegible] ಕಾರಾಗೃಹದಿಂದ ಮುಕ್ತರಾಗುವರೆಂದು ಬರೆದಿತ್ತು. ಅದರಲ್ಲಿ ಹೇಳಿದಂತೆಯೇ ನಡೆದುದರಿಂದ ಈ ಜೋಯಿಸರ ಅದ್ಭುತ ಶಕ್ತಿಸಾಮರ್ಥ್ಯಗಳನ್ನು ಸರ್ವರೂ ಪರೀಕ್ಷಿಸಲು ನಾವು ಶಿಫಾರಸು ಮಾಡುತ್ತೇವೆ.

V. K. Satagopachariar,
Hanuman Astrological Office,
TIRUTTANI, CHITTOOR DISTRICT.
Madras Presidency.

ವಿ. ಕೆ. ಶಠಗೋಪಾಚಾರ್ಯರ್,
ಹನುಮಾನ್ ಎಸ್ಟ್ರೋಲೋಜಿಕಲ್ ಆಫೀಸ್,
ತಿರುತ್ತಾಣಿ, ಚಿತ್ತೂರು ಜಿಲ್ಲಾ,
ಮದ್ರಾಸು ಸಂಸ್ಥಾನ.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

☞ ಫೆರ್ರೋಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3-4-0 ಮಾತ್ರ.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು

ಖಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು
ಡೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡ.

[illegible] ಸ್ಕೂಲು [illegible]

ಶಾಲಾ ಹುಡುಗರಿಗೂ ಇತರರಿಗೂ ಬೇಕಾಗುವಂತಹ ವಿದವಿಧದ ಕೋಪಿಂಗ, ಮತ್ತು ಸಾದಾ ಪೆನ್ಸಿಲುಗಳೂ, ರಬ್ಬರುಗಳೂ ವಿವಿಧ ಸ್ಯಾಂಪಿನ ಸ್ಟ್ರೆಷಲ ಇಂಕ್ ಬಾಟಲಿಗಳೂ, ಹೊಸತಾಗಿ ತರಿಸಿರುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಯಾರಾಗಿವೆ! ತಯಾರಾಗಿವೆ!!

ಎರಡನೇ ಮತ್ತು ಮೂರನೇ ದರ್ಜೆಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds ವಜ್ರಗಳು **Diamonds**

Bola Shirinivas Rao,
C/o BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಎಂಟ್ವರ್ಪ್ ಯಿಂದ ನೇರ ತರಿಸುವ ಜರ್ಮೋ ವಜ್ರಗಳು.

— ಮಾರಾಟಕ್ಕಿವೆ. —

ಬೋಳ ಶ್ರೀನಿವಾಸ ರಾವ್,
C/o ಬೋಳ ಮಂಗೇಶ ರಾವ್,
ಮಂಗಳೂರು.

ತಯಾರಾಗಿವೆ ತಯಾರಾಗಿವೆ!

ಆಫೀಸ್ ಕ್ಲೆಂಟರರಿಗೂ, ಕೋರ್ಟಿನವರಿಗೂ

ಬೇಕಾಗುವಂತಹ

ಚೆಕ್ ರೋಲ್‌ಗಳು

ಮೂರು ಸ್ಯಾಂಪಿನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೇನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds Diamonds!!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಜುನ್ನಾತ (first quality Selected) ಎನ್ ಎಸ್ಟ್ವರ್ಪಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

‘ಅಂಬಾ ತಾಯಿತ್’

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ ‘ತಾಯಿತ್’ ಸಂದಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೯॥ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೫೦೦ ರೂಪಾಯಿ ವರೆಗೆ. ದೃಷ್ಟಿಶಕ್ತಿಯೂ, ಒಂದು ಸಾರಿ ಪರಿಶೋಧಿಸಿದರೆ ನಿಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
ಸಕಲೇಶಪುರ [illegible]

Edited Printed & Published by V. S. Kamath, at the M. T. A SHARADA PRESS, MANGALORE.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ | ಗರದ ಮಥನದಲು ಸುರನಿಗದರಿಂ | ತಣಿವವಾಯಿತೆ! ಮತ್ತೆ ವಿಷದ ಸಂಘಟ ಬರುತಿರುವ ॥
ಗರಲಕವರಂಜಿದರೆ! ಸುಧೆಯನು | ಪಡೆತು ಕೃತ್ಯದ ತೆರದಿ ಕಳೆಕರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೩. ಮಂಗಳೂರು, ತಾ. ೧೨ನೇ ಶುಕ್ರವಾರ ಜುಲಾಯಿ ೧೯೨೯. (12 – 7 – 29.) ಸಂಚಿಕೆ ೨೮

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR. Mangalore**

ಹೆಡ್ ಆಫೀಸು: — ಉಡುಪಿ. ಶಾಖೆ: — ಕುಂದಾಪುರ. ಮಂಗಳೂರು.

ನಿಯಮಿತ ಮೂಲಧನ ರೂ. 3,50,000-

1. ಶೇರು ಕೊಳ್ಳಲಿಕ್ಕೆ ಅರ್ಪಿಸಿದ ಮತ್ತು ವಿಕ್ರಿತ ಮೂಲಧನ ರೂ. 2,25,000-
2. ತೆತ್ತು ಬಂದ ಮೂಲಧನ ರೂ. 2,12,630-
3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 1,26,700-
4. ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 3,84,218-5-0-

Statement of Affairs of the Canara Banking Corporation Udipi, Limited as on 31st May 1929

	CAPITAL AND LIABILITIES.			PROPERTY AND ASSETS	
1	Paid up Capital	Rs. 2,21,380-0-0	1	Premises Building Furniture &c.	Rs 9,265-0-0
2	Reserve and other contingent funds	„ 1,26,700-0-0	2	Investments on G. P. Notes at cost	„ 3,84,218-5-0
3	Deposits	„ 16,75,321-3-11	3	Investments on Approved Securities	„ 18,[illegible]
4	Due to Bankers on ac of Overdraft and Loan a/c	„ 3,38,968-4-6	4	Bills for collection as per Contra	„ 37,[illegible]
5	Sundry Persons' a/c for Bills for collection as per Contra	„ 37,969-3-10	5	Cash in hand & with Bankers.	„ [illegible]45-[illegible]
6	Sundries including P & L items	„ 46,083-12-8	6	Sundries	1,372-2-[illegible]
	Total	22,46,422-8-11		Total	22,4[illegible],422-[illegible]

Office of the Corporation, UDIPI, 14 – 6 – '29.

N. ANANDA RAO, *Secretary*

ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು: — [illegible]

ದಂತಮಂಜನ: — [illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.

ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

ಶ್ರೀ ಸರಸ್ವತೀ ಭಂಡಾರ.

1.	ಸಚಿತ್ರ [illegible] ಕಥಾ ಸಂಗ್ರಹ	[illegible]–0
2.	[illegible] ರಾಜ ಚರಿತ್ರೆ	0–2–[illegible]
3.	[illegible]	[illegible]
4.	ವಿದ್ಯಾಮಂದಿರ ಕಥೆಗಳು	[illegible]–0
5.	[illegible] ವಿಜಯ	[illegible]–0
6.	[illegible]	[illegible]
7.	[illegible]	[illegible]
8.	ವಿಮಲಾ ದೇವಿ	[illegible]
9.	ಸೌಭಾಗ್ಯ [illegible]	[illegible]
10.	ಧರ್ಮ [illegible]	[illegible]
11.	ರಾಮ ರಾಜ್ಯ	[illegible]–0
12.	ಆನಂದ ಮಠ	[illegible]–2–0
13.	ಲಾವಣ್ಯ [illegible]	[illegible]–0
14	ವಚನ ಭಾರತ	[illegible]
15.	ಇಂಡಿಯನ್ ಪೀನಲ್ ಕೋಡ್	[illegible]–8–[illegible]
16	ಕ್ರಿಮಿನಲ್ ಪ್ರೊಸಿಜರ್ ಕೋಡ್	[illegible]
17.	ಲ್ಯಾಂಡ್ ರೆವೆನ್ಯೂ ಕೋಡ್	1–0–0

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ ಇನ್ನೂ ಸಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

[illegible] ಇಡಲು ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಹಾಜರಿರುತ್ತವೆ.

ವಿಳಾಸ —

ಶ್ರೀ ಸರಸ್ವತೀ ಭಂಡಾರ.
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

"ನಿಷ್ಪಕ್ಷಪಾತಿ"ಗಳಿಗೊಂದು ಮಾತು.

[illegible] ನಿಷ್ಪಕ್ಷಪಾತಿಗಳೆಂಬ [illegible] ಉಪಾಧ್ಯಾಯರ [illegible] ಅರ್ಥವೇ ತಿಳಿಯಲಿಲ್ಲ. [illegible] ಖಾಸಗಿ ಶಾಲೆಗಳಿಗೆ ಗ್ರಾಂಟಿನ ರೂಪದಿಂದ ಸಹಾಯ ಮಾಡುವ ಸಂಬಂಧವು, ಈ ಮಹಾಶಯರ ಅಜ್ಞಾನವನ್ನು ಸೂಚಿಸುತ್ತದೆ. [illegible] ಈ ನಿಷ್ಪಕ್ಷಪಾತ ಅರ್ಥವೇ ನಮಗೆ ತಿಳಿಯಲಿಲ್ಲ.

ಉಪಾಧ್ಯಾಯರ ಹಿತೋಪದೇಶಕರ ಸಂಘ:— ಇದರಲ್ಲಿ ವಿಸ್ತರಿಸಿ ಬರೆಯುವಷ್ಟು [illegible] ಕಾರ್ಯ ನಿರ್ವಹಣವನ್ನು [illegible] ಕೇಳಿದರೆ ಉತ್ತಮವಿತ್ತು. ಅಂತಹ [illegible] ಹಿತೋಪದೇಶಕರು ತಮ್ಮ ಏಳಿಗೆಯನ್ನು ಸಾಧಿಸಲು ಸ್ಥಾಪಿಸಿದ ಸಂಸ್ಥೆಯಂತೆಯೇ ನಮ್ಮ ಮೇಲಾಧಿಕಾರಿಗಳಾದ ಡಿಸ್ಟ್ರಿಕ್ಟ್ ಬೋರ್ಡಿನವರ ನಮ್ಮ ಏಳಿಗೆಯನ್ನು ಸಾಧಿಸಲು ನಮ್ಮ ಸಂಸ್ಥೆಯನ್ನು ಸ್ಥಾಪಿಸಿದ್ದಾಗಿರುತ್ತದೆ. ಇದರಲ್ಲಿ ಖಾಸಗಿ ಶಾಲಾ ಉಪಾಧ್ಯಾಯರನ್ನು ಸೇರಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಮೂಲ ಶಾಲಾ ಅಧ್ಯಾಪಕ ಸಂಘವನ್ನು ಸ್ಥಾಪಿಸಲು ಬೋರ್ಡು ಉಪಾಧ್ಯಾಯರಿಂದ ಸಾಹಸ ಪಟ್ಟದ್ದರಿಂದ ಅವರು ಸಂಘದ ಸದಸ್ಯರಾದುದಕ್ಕೆ "ಈ ನಿಷ್ಪಕ್ಷಪಾತಿ"ಗಳು ಯಾವ ಪರವಾಗಿ ಉಪಕಾರ ಸ್ಮರಣೆ ಮಾಡುವರು? 'ಖಾಸಗಿ ಶಾಲಾ ಉಪಾಧ್ಯಾಯರು ಎಲಿಮೆಂಟರಿ ಶಾಲಾ ಉಪಾಧ್ಯಾಯರ ಏಳ್ಗೆಯನ್ನು ನೋಡಿ ಹಿಗ್ಗುತ್ತಿರುವರಾದರೆ ಬೋರ್ಡು ಶಾಲಾ ಉಪಾಧ್ಯಾಯರು ತಮ್ಮ ಸ್ಥಿತಿಗತಿಗಳನ್ನು ಸುಧಾರಿಸುವ ಪ್ರಯತ್ನಗಳಲ್ಲಿ ಮಗ್ನರಾಗಲು ಯತ್ನಿಸುತ್ತಿಲ್ಲ. ಬೋರ್ಡು ಉಪಾಧ್ಯಾಯರು ಟ್ರೈನಿಂಗ್ ಶಾಲೆಯನ್ನು ಸೇರುವ ಮುಂಚೆ ಅನೇಕ ದಾಗಿಲುಗಳನ್ನು ಕಾಯುವವರಾದರೂ ಖಾಸಗಿ ಶಾಲಾ ಕೆಲವು ಉಪಾಧ್ಯಾಯರಂತೆ ೩ ವರ್ಷ ಸಂಬಳಕ್ಕೆ ೮ ರೂಪಾಯಿಗೆ ರಶೀದಿಕೊಡುವ ಮತ್ತು ಇನ್ನಿತರ ಅಗೌರವಿತ ಕೆಲಸಗಳನ್ನು ಮಾಡುವುದಿಲ್ಲ.'

ಸಂಘದ ಅಧ್ಯಕ್ಷರು:— ರಾ. ಶೇಷಗಿರಿರಾಯರನ್ನು ಅಧ್ಯಕ್ಷರನ್ನಾಗಿ ಮಾಡಿದ ಬೋರ್ಡು ಶಾಲಾ ಸಂಘವು ತಪ್ಪು ಮಾಡಿದಂತೆ ನಿಮ್ಮ ದೃಷ್ಟಿಯಲ್ಲಿ ತೋರುವುದಾದರೆ, ಮೂಲ ಶಾಲಾ ಅಧ್ಯಾಪಕರ ಪರವಾ ಸಂಘಕ್ಕೆ ಸೆಕೆಂಡರಿ ಶಾಲೆಯ ಅಧ್ಯಾಪಕರನ್ನು ಕಾರ್ಯದರ್ಶಿಯರನ್ನಾಗಿ ಮಾಡುವಾಗ ಆ ನಿಮ್ಮ ದೃಷ್ಟಿಯು ಎಲ್ಲಿದ್ದಿತು? ಆ ಸಂಸ್ಥೆಗೂ ಒಂದು ಧ್ಯೇಯವಿಲ್ಲವೇ? ನೀವು ಯಾರೆಂದು ನಾವು ತಿಳಿದಿರುವೆವು. ವಾಚಕರು ತೀಯು ಇರಬಹುದು. ನಾವಿದ್ದವರು ಸ್ವಾರ್ಥವೆಂಬ ಕತ್ತಲೆಯಲ್ಲಿ ನಾಗ್ಯಾವ ಮಾಡುವುದಾಗಿ ನೀವು ತಿಳಿಯಬಹುದು. ನೀವಿರುವ ಕತ್ತಲೆಯಿಂದ ನಾವಿರುವ ಬೆಳಕು ನಿಮಗೆ ಕಾಣಲಾರದು. ನಮ್ಮ ಉದ್ಧಾರವೇ ನಮ್ಮ ದೇಶದ ಉದ್ಧಾರ. ಈ ಜ್ಞಾನವು ನಮ್ಮಲ್ಲಿ ಮುಂಚೆಯೇ ಮೂಡಿರುವುದರಿಂದ ನಾವೂ ನೀವೂ ರಾ. ಶೇಷಗಿರಿರಾಯರ ಉದ್ದೇಶದಲ್ಲಿ ಅನೇಕ ಸಲ ಕಾಣದೆ ನೇಗಾಡಿ ಮಾತಾಡಿರುವವು. ಅವನ್ನು ನೀವು ಮರೆತಿರಬಹುದು. ನಮ್ಮ ಮಕ್ಕಳಿಗೆ ಧರ್ಮಾರ್ಥ ಶಿಕ್ಷಣ ಕೊಡಿಸುವಂತೆ ನಮ್ಮ ಅಧಿಕಾರಿಗಳನ್ನು ನಾವು ಕೇಳಿಕೊಂಡಿರುವಾಗ ನೀವು ಕಣ್ಣು ಕಾಣದೆ ನಿಮ್ಮ ಮನಸ್ಸಿನ ರೂಢಿಯ ಕೇಳಿದರೆ ನಾವು ಮತ್ಸರಿಸುವುದಿಲ್ಲ.

ಬೇಡಿ:— ಪತ್ರಿಕೆಗಳೂ, ಪುಸ್ತಕಗಳೂ, ಡಾ. ಟ್ರೈನಿಂಗ್ ಸೂಚನೆಯನ್ನು ಕೊಡುವನ್ನು ಹಕ್ಕುದಾರ ಡಾ. ಬೊ ಸಭೆಯಲ್ಲಿ ಆ ಸೂಚನೆಗಳನ್ನು ಕಾರ್ಯರೂಪಕ್ಕೆ ತರುವ ಹಕ್ಕಿಲ್ಲ. ಅದಕ್ಕಾಗಿಯೇ ಖಾಸಗಿ ಶಾಲಾ ಉಪಾಧ್ಯಾಯರಿಗೆ ತಾಲೂಕ, ಬೋರ್ಡು, ಸೇರಲು ನಾವು ಸೂಚಿಸಿಲ್ಲ. ಟ್ರೈನಿಂಗ್ ಶಾಲೆಗಳಲ್ಲಿ ಪ್ರವೇಶ ದೊರೆಯುವುದು. ಆಯಾ ಡಾ. ಬೋರ್ಡಿನ ಆರ್ಥಿಕ ಸ್ಥಿತಿಯ ಮೇಲೆಯೇ ಹೊಂದಿಕೊಂಡಿರುವುದರಿಂದ ಅದಕ್ಕಾಗಿ ನಿಮ್ಮಂತೆ ಸರಕಾರದ ಗ್ರಾಂಟಿನ ಬಯಸುವುದೇನಿಲ್ಲ. ಬಿದ್ದರೆ ಹೆಚ್ಚು ಹಣವಿರಲು ಸರಕಾರಕ್ಕೆ ಅರ್ಜಿಯನ್ನು ಕೊಡಬೇಕಾಗುತ್ತಿಲ್ಲ. ಮನಸ್ಸು ಮಾತ್ರ ಇದ್ದರೆ ಸಾಕು. ಇದು ನಿಮಗೆ ತಿಳಿಯದ ಹೊರತಾಗಿಲ್ಲ. ಅದರಿಂದಲೇ ನಿಮಗೂ ಈಗ ಸರಕಾರದ ಗ್ರಾಂಟಿನ ಕೃಪೆಯ ಸಂಪೂರ್ಣ ದೊರಕುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಖಾಸಗಿ ಶಾಲಾ ಉಪಾಧ್ಯಾಯರು ನಿಮ್ಮಂತೆ ಕಾಲ ಕಳೆಯುತ್ತ ಪಕ್ಕದ ನಮ್ಮ ಬೇಕಾದ ಪ್ರಚಾರ ಕೊಡುವ ನೀವು ಕೃಪೆಮಾಡಬೇಕಾಗಿದೆ. ಇನ್ನು ಮುಂದಾದರೂ ಇಂಥಾ ಲೇಖನಗಳಿಂದ ಪತ್ರಿಕೆಗಳ ಅಮೂಲ್ಯ ಸ್ಥಳವನ್ನು ಕೆಡಿಸದೆ, ನಿಮ್ಮ ಭಾರವನ್ನು ಇನ್ನು ಎತ್ತಿಸದೆ ಇಲ್ಲಿಗೆ ಮುಗಿಸುವಂತೆ ನಮ್ಮ ಪ್ರಾರ್ಥನೆ ಇರುತ್ತದೆ.

ಉಡ್ಪಿ ತಾ ಬೊ. ಉಪಾಧ್ಯಾಯ.

ಕಳೆದ ವಾರದ ನೆರೆಯೂ, ಡಿಸ್ಟ್ರಿಕ್ಟ ಬೋರ್ಡು ಕಡವುಗಳೂ.

ಮಾನ್ಯ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಸನ್ನಿಧಾನಕ್ಕೆ,

ಅಯ್ಯಾ,

ಕಳೆದ ವಾರದಲ್ಲಿ ಸರ್ವಸಾಧಾರಣವಾಗಿ ಎಲ್ಲಾ ಕಡೆಗಳಲ್ಲಿಯೂ ನೆರೆ ಬಂದಿರುವ ಸಂಗತಿಯು ತಮಗೆ ತಿಳಿದಿರಬಹುದು. ನಾನು ಉಡ್ಪಿಯಿಂದ ಮಂಗಳೂರಿಗೆ ಮುಖ್ಯ ದಾರಿಯಾಗಿ ಬರುತ್ತಿದ್ದೆನು. ಬರುವಾಗ ಉದ್ಯಾವರ ಕಡವನ್ನು ದಾಟಿ, ಮೂಲ್ಕಿ, ಪಾವಂಜೆ, ಕೂಳೂರು ಕಡವುಗಳನ್ನು ದಾಟಿ ಬಂದೆನು. ಪ್ರತಿ ಬಾರಿ ಕಡವಿನಲ್ಲಿಯೂ ಒಂದಾಣೆ ಪ್ರಕಾರ ಕೊಡುತ್ತಾ ಬಂದೆನು. ಅದರಂತೆಯೇ ನನ್ನ ಜೊತೆಯಲ್ಲಿ ಕಡವಿನವರಿಗೂ ಒಂದಾಣೆಯನ್ನು ಕೊಟ್ಟಿದ್ದೆ. ಅದು ಅಲ್ಲ, ನಾಲ್ಕಾಣೆ ಪ್ರಕಾರ ಈ ಕಡವಿಗೆ ಕೊಡಬೇಕಾಗಿ ಕೇಳಿದರು. ನಾನು ಎಷ್ಟಕ್ಕೂ ನಾಲ್ಕಾಣೆಯನ್ನು ಕೊಡಲೊಪ್ಪಲಿಲ್ಲ. ಇದೇ ಪ್ರಕಾರ ಪ್ರಯಾಣಿಕರಾಗಿ ನಾನೂ ನನ್ನ ಸಂಗಾತ ಬಂದವರೂ ನಾಲ್ಕಾಣೆ ಪ್ರಕಾರ ಕಡವಿನ ಸಾಹೇಬರಿಗೆ ಕೊಟ್ಟು ಅಂತೂ ಮಂಗಳೂರನ್ನು ಸೇರಬೇಕಾಯಿತು.

[illegible] ಈ ಕಡವಿನ [illegible] ಸಾಹೇಬರು [illegible] ಕಡವಿನವರಿಗೆ ಇರುವುದೇ? [illegible] ಈ ರೀತಿಯಲ್ಲಿ ದುಡ್ಡು ಕೊಡಬೇಕಾದರೆ [illegible] ಸರಿಯಾದ ಸಂಗತಿಯು ತಿಳಿಯಲಾರದು. ಅದು ಅಲ್ಲದೆ ನೆರೆ ಬರುವಾಗ ಕಡವಿನ ದಾಗಿಲನ್ನು ಬಿಟ್ಟು ಆಚಿನ ಸೆಡ್ಡಗಳಲ್ಲಿ ನೆರೆಯ ನೀರು ತುಂಬಿದರೆ ಅದು ಒಂದು ಕಡವಿಗೆ ಸೇರುತ್ತದೋ? ಈ ಕಡವಿನ ಸಾಹೇಬರು ಈ ರೀತಿಯಲ್ಲಿ ಜನರಿಂದ ಅನ್ಯಾಯವಾಗಿ ದುಡ್ಡನ್ನು ಸುಲಿಯಲಿಕ್ಕೆ ಕಾರಣವೇನೆಂಬುದು ತಿಳಿಯಲಾರದು. ನೆರೆ ಇರಲಿ, ಇಲ್ಲದಿರಲಿ, ಕಡವಿನ ಗುತ್ತಿಗಾರರಿಗೆ ನಿಯಮಿತ ದರಗಳು ನಿಶ್ಚಯಿಸಲ್ಪಟ್ಟಿವೆ.

ಇದೂ ಅಲ್ಲದೆ ಸ್ವಲ್ಪ ಚರ್ಚೆಮಾಡಿ, ಕೊಟ್ಟ ದುಡ್ಡಿಗೆ ರಶೀದಿಯನ್ನು ಕೇಳಿದರೆ ತನಗೆ ಈ ಮನುಷ್ಯನಿಂದ ಅಪಾಯ ಬರುವಂತೆ ತೋರಿದರೆ ಅಂಥವರಿಂದ ಅರ್ಧಾಣೆಯನ್ನೇ ವಸೂಲು ಮಾಡುತ್ತಿರುವರು. ಹೀಗಿರುತ್ತಾ ಬಡ ಪ್ರಯಾಣಿಕರಿಂದ ನಾಲ್ಕಾಣೆ ಪ್ರಕಾರ ವಸೂಲು ಮಾಡುವುದು ಯಾವ ನ್ಯಾಯ ನೀತಿಗನುಸಾರವಾಗಿ ಎಂದು ತಿಳಿಯುವುದಿಲ್ಲ.

ಆದುದರಿಂದ ಈ ವಿಷಯದಲ್ಲಿ ತಾವು ಕೂಲಂಕಷ ವಿಚಾರವನ್ನು ನಡಿಸಿ, ಅಂಥಾ ಅತ್ಯಾಚಾರಗಳು ಇನ್ನು ಮುಂದಕ್ಕೆ ನಡೆಯದಂತೆ ನೋಡಿ ಈಗ ನಡೆದು ಹೋದ ವಿಚಾರದಲ್ಲಿ ಸದ್ರಿ ಕಡವುದಾರರಿಗೆ ತಕ್ಕದಾದ ಎಚ್ಚರಿಕೆಯನ್ನು ಕೊಟ್ಟು ಈ ಪತ್ರಿಕೆಯ ಮೂಲಕವಾಗಲೀ ಇನ್ನಿತರ ಪತ್ರಿಕೆಗಳ ಮೂಲಕವಾಗಲೀ ತಮ್ಮ ಹುಕುಮನ್ನು ಜನರಿಗೆ ತಿಳಿಸುವರಾಗಿ ನಂಬಿದ್ದೇನೆ.

(ಪ್ರಯಾಣಿಕ)

[illegible] ತ್ರೆಯ ಸರ್ಜನ್ ಮತ್ತು ಫಿಜೀಸಿಯನರಂತಹ ತರಬೇತಾದ ತಜ್ಞರು ನೇಮಿಸಲ್ಪಡಬೇಕು.

ಬಿಡುಗಡೆ ಹೊಂದಿದ ಕೈದಿಗಳಿಗೆ ಸಹಾಯ.

ಕೊನೆಯದಾಗಿ, ಬಿಡುಗಡೆಮಾಡಲ್ಪಟ್ಟ ಕೈದಿಗಳ ಕುರಿತು ನಂತರದ ಜಾಗ್ರತೆಯ ಕುರಿತು ನಾನು ಸ್ವಲ್ಪ ಮಾತಾಡಬೇಕೆಂದಿರುವೆನು. ಬಂಧವಿಮುಕ್ತ ಬಂಧಿಗಳ ಸಹಾಯಕ ಸಂಘವು ಮದ್ರಾಸಿನಲ್ಲಿಯೂ ಅದರ ಶಾಖೆಗಳು ಪ್ರಾಂತದ ಇತರ ಕಡೆಗಳಲ್ಲಿಯೂ ಇವೆಯೆಂಬುದು ನಿಜ. ಬಿಡುಗಡೆ ಹೊಂದಿದ ಕೈದಿಗಳಿಗೆ ನಿವಾಸದ ಏರ್ಪಾಡು ಮತ್ತು ಪ್ರೊಬೇಶನ್ ಆಫೀಸರುಗಳು ಈ ಸಂಘವು ಸಾಕಷ್ಟು ಒಳ್ಳೇ ಕೆಲಸಮಾಡುತ್ತಿರುತ್ತದೆ. ಆದರೆ ಇದರ ವರದಿಯ ವರ್ಷದಲ್ಲಿ ಬಿಡುಗಡೆ ಹೊಂದಿದ ೧೫,೦೦೦ ಬಂದಿಗಳಲ್ಲಿ ೧೧೦೦ ಮಂದಿ ಮಾತ್ರ ಈ ಸಂಘದಿಂದ ಸಹಾಯಪಡೆದಿರುವರೆಂದು ತಿಳಿದುಬರುತ್ತದೆ. ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಕೆಲಸಮಾಡಲಿದೆ. ತಪ್ಪಿತನವನ್ನು ಕಡಿಮೆ ಮಾಡುವುದಕ್ಕಾಗಿ ಅಪರಾಧಿಗೆ ಸಹಾಯಮಾಡುವ ಯೋಗ್ಯ ಏರ್ಪಾಡೊಂದು ಅತ್ಯಾವಶ್ಯಕವಾದುದರಿಂದ ಸರಕಾರವು ಈ ಕೆಲಸವನ್ನು ದಿನ್ ಸರಕಾರಿ ವ್ಯವಸ್ಥೆಗೇನೇ ಸಂಪೂರ್ಣವಾಗಿ ಬಿಟ್ಟುಬಿಡಬಾರದು. ಪ್ರಾಂತದ ಬೇರೆ ಕಡೆಗಳಲ್ಲಿ ಈ ಸಂಘದ ಶಾಖೆಗಳನ್ನು ಸ್ಥಾಪಿಸಿ ನಡೆಸುವುದರಲ್ಲಿ ಸರಕಾರವು ಉತ್ತೇಜನ ಕೊಡಬೇಕು. ಡಿಸ್ಟ್ರಿಕ್ಟ್ ಅಧಿಕಾರಿಗಳು ಈ ಕೆಲಸದಲ್ಲಿ ಆಸಕ್ತಿ ತೆಗೆದುಕೊಳ್ಳುವಂತೆ ಸರಕಾರವು ನೋಡಬೇಕು. ಕೆಲಸಗಾರರಿಗೆ ಬೇಕಾದ ಇತರ ಜನರಿಗೆ ಮಾದರಿಯಾಗಿ ಸಾಧ್ಯವಾದಾಗಲೆಲ್ಲಾ ಸರಕಾರವೇ ಮಾಜಿ ಕೈದಿಗಳಿಗೆ ಉದ್ಯೋಗವನ್ನೀಯಬೇಕು. ಇಂಗ್ಲೆಂಡಿನಲ್ಲಿ ಈ ಕೆಲಸವನ್ನು ಇತರ ಜನೋಪಕಾರಿ ಸಂಸ್ಥೆಗಳು ಯಶಸ್ವಿಯಾಗಿ ನಡಿಸುತ್ತಿದ್ದರೂ ಸರಕಾರವು ಅವುಗಳಿಗೆ ಮಂದ್ರಾಸ್ ಪ್ರಾಂತಕ್ಕಿಂತಲೂ ಹೆಚ್ಚಿನ ಸಹಾಯವನ್ನೀಯುತ್ತದೆ.

ನಾನು ಇಷ್ಟರ ವರೆಗೆ ಹೇಳಿರುವುದನ್ನೆಲ್ಲಾ ಸಂಕ್ಷೇಪವಾಗಿ ಹೇಳುವುದಾದರೆ ನಮ್ಮ ಕಾರಾಗೃಹಗಳ ಆಡಳಿತವನ್ನು ಸುಧಾರಿಸಬೇಕಾದರೆ ಈ ಕೆಳಗಿನ ಏರ್ಪಾಡುಗಳು ಅವಶ್ಯವಾಗಿವೆ. (೧) ಅಷ್ಟೊಂದು ಹಾನಿಕಾರಕವಲ್ಲದ ಅಪರಾಧ ಮಾಡುವವರಿಗೆ ಯೋಗ್ಯ ರೀತಿಯಲ್ಲಿ ನಡಿಸಲ್ಪಡುವ ಪ್ರೊಬೇಶನ್ ಪದ್ಧತಿ. (೨) ಸುಧಾರಿಸಲ್ಪಡುವ ಆಶೆಗಡಿಯುವ ತಪ್ಪಿತನಗಾರರನ್ನು ತಜ್ಞರ ನೋಟ್ಟದಡಿಯಲ್ಲಿ ಸಂಸ್ಕಾರ ರೂಪದಲ್ಲಿ ನಡಿಸುವುದು. (೩) ಅಪರಾಧ ಮಾಡುವ ಅಭ್ಯಾಸವೇ ಆಗಿರುವ ನಿಸ್ಸೀಲ ತಪ್ಪಿತನಗಾರರಿಗೆ ಮತ್ತು ಎಂದೂ ಸುಧಾರಿಸಲಾಗದ ಮನುಷ್ಯರಿಗೆ ಕಾಯಮಾದ ವಸಾಹತಿನ ವ್ಯವಸ್ಥೆ. (೪) ಬಿಡುಗಡೆ ಹೊಂದಿದವರಿಗೆ ಯೋಗ್ಯರೀತಿಯ ಸಹಾಯದ ಏರ್ಪಾಡು. ಈ ಸುಧಾರಣೆಗಳನ್ನು ಜ್ಯಾರಿಗೆ ತಂದಲ್ಲಿ, ಅವುಗಳ ಪರಿಣಾಮವಾಗಿ ಅಪರಾಧ, ಕಾರಾಗೃಹವಾಸಿಗಳ ಸಂಖ್ಯೆ, ಮತ್ತು ಪೋಲೀಸ್ ಮತ್ತು ಜೈಲುಗಳ ಬಜೆಟ್ ವೆಚ್ಚ ಕಡಿಮೆಯಾಗಿ ನಮ್ಮ ಕಾರಾಗೃಹಗಳನ್ನು ಇತರರಿಗೆ ಅನುಕರಣೀಯ ಆದರ್ಶವಾಗುವಂತೆ ಮಾಡಬಹುದೆಂದು ನನಗೆ ದೃಢವಿದೆ. ಮಾನ್ಯ ಲೋ ಮೆಂಬರರು ದೇಶದ ಒಳ್ಳೆತನವನ್ನು ಸಾಧಿಸಿ ಚಿರಕೀರ್ತಿಯನ್ನು ಪಡೆಯಲು ಇದೀಗ ಸುಸಂದರ್ಭವಿರುತ್ತದೆ. ಅವರಿದನ್ನು ಮಾಡುವರೇ?

ಕಾರಾಗೃಹದ ಆಡಳಿತದ ಸುಧಾರಣೆ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದುದು.)

ಈ ತಪ್ಪಿತನಗಾರರನ್ನು ನೋಡುವ ಈಗಿನ ರೀತಿಯು ಅಪ್ರಯೋಜಕ ಮತ್ತು ಅಶಾಸ್ತ್ರೀಯವೆಂದು ಕಾರಾಗೃಹಗಳ ಇನ್ಸ್‌ಪೆಕ್ಟರ್ ಜನರಲರು ನಿವೇದಿಸಿರುತ್ತಾರೆ. ಅನೇಕ [illegible] ರೀತ ದೇಶಗಳವರು ಇಂತಹ ತಪ್ಪಿತನಗಾರರ [illegible] ನಿವಾರಿಸಲು ಅವರನ್ನು ನಿರಂತರ ಪ್ರತ್ಯೇಕವಿರಿಸುವ ಒಂದಲ್ಲೊಂದು ಪದ್ಧತಿಯನ್ನನುಸರಿಸಿರುವರು. ಇದೇ ರೀತಿ ನಾವೂ ಇಂತಹ ಅಪರಾಧಿಗಳನ್ನು ಕಾಯಮಾಗಿ ಪ್ರತ್ಯೇಕವಾಗಿರಿಸುವ ಏರ್ಪಾಡು ಮಾಡಬೇಕೆಂದು ಇನ್ಸ್‌ಪೆಕ್ಟರ್ ಜನರಲರು ಸೂಚಿಸಿರುವರು. ಈ ತರಗತಿಯ ಕೈದಿಗಳನ್ನು ಅವರ ದುಷ್ಕರ್ಮಗಳಿಗಾಗಿ ಶಿಕ್ಷೆ ಮಾಫಿಮಾಡಿ ಸಮಾಜಕ್ಕವರು ನಿರುಪದ್ರವಿಗಳೆಂದು ಕೊಂಡು ಅವರನ್ನು ಬಿಡುಗಡೆಮಾಡಿ ಇಚ್ಛಾನುಸಾರ ಬಿಡುವುದರಿಂದ ಪ್ರಯೋಜನವಿಲ್ಲ. ಬರ್ಮದಲ್ಲಿ ಇಂತಹ ಕೈದಿಗಳು ಬಿಡುಗಡೆಯ ಚೀಟು ಪಡೆದು ಬಿಡಲ್ಪಟ್ಟಾಗ ಸ್ವಾವಲಂಬಿಗಳಾಗಿ ನಿವಾಸಮಾಡಲು ಪ್ರೋತ್ಸಾಹಿಸಲ್ಪಟ್ಟು ಇವರಿಗಾಗಿ ಒಂದು ದ್ವೀಪದಲ್ಲಿ ಪ್ರತ್ಯೇಕ ವ್ಯವಸಾಯ ವಸಾಹತನ್ನು ಏರ್ಪಡಿಸಿರುವರೆಂದು ತಿಳಿದುಬರುತ್ತದೆ. ಸರಕಾರವು ಕಾರಾಗೃಹಗಳ ವರದಿಯನ್ನು ವಿಮರ್ಶಿಸುವಾಗ, ಮೇಲೆ ನಮೂದಿಸಿರುವ ಅಪರಾಧಿಗಳನ್ನು ನಿಗ್ರಹಿಸುವ ಸರಿಯಾದ ವ್ಯವಸ್ಥೆಮಾಡಿದಲ್ಲಿ ತಪ್ಪಿತನಗಾರರ ವೃತ್ತಿಯನ್ನು ಕಡಿಮೆಮಾಡಬಹುದೆಂಬ ಇನ್ಸ್‌ಪೆಕ್ಟರ್ ಜನರಲರ ಅಭಿಪ್ರಾಯಕ್ಕೊಪ್ಪುತ್ತದೆ. ಆದರೆ ಈ ವಿಷಯದಲ್ಲಿ ಅದು ಕಾರ್ಯವನ್ನೇನೂ ಕೈಕೊಂಡಿರುವುದಿಲ್ಲ. ಮಾನ್ಯ ಲೋ ಮೆಂಬರರು ಈ ಕುರಿತು ಲಕ್ಷ್ಯಕೊಡುವರು. ಈ ತರಗತಿಯ ತಪ್ಪಿತನಗಾರರನ್ನು ಹತೋಟಿಗೆ ತರುವ ಯೋಗ್ಯವಾದೊಂದು ವ್ಯವಸ್ಥೆಯನ್ನು ಬೇಗನೆ ಮಾಡಿ, ತಪ್ಪಿತನಗಾರ ವೃತ್ತಿಯನ್ನು ಕಡಿಮೆ ಮಾಡಿ ಜನತೆಯನ್ನು ಇಂತಹ ನಿಷ್ಫಲ ದುಷ್ಕಾರ್ಯಗಳ ಕಾಟದಿಂದ ರಕ್ಷಿಸಬೇಕು.

ತರಬೇತಾದ ಕಾರಾಗೃಹ ಅಧಿಕಾರಿಗಳ ಆವಶ್ಯಕತೆ

ನಮ್ಮ ಜೈಲುಗಳಲ್ಲಿ ಅಪರಾಧಿಗಳನ್ನು ನೋಡಲು ಯೋಗ್ಯ ರೀತಿಯ ಜನರಿಲ್ಲದಿರುವುದರಲ್ಲಿ ಎಷ್ಟೊಂದು ಒಳ್ಳೆಯದಾದ ಮತ್ತು ಸದುದ್ದೇಶವುಳ್ಳ ತಪ್ಪಿತನಗಾರ ಸುಧಾರಣಾ ಪದ್ಧತಿಯೂ ನಿಷ್ಫಲವಾಗುವುದು. ನಮ್ಮ ಕಾರಾಗೃಹಾಧಿಕಾರಿಗಳು ಅಪರಾಧಿಗಳನ್ನು ಸುಧಾರಿಸಿ ಒಳ್ಳೆಯ ನಾಗರೀಕರನ್ನಾಗಿ ಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸುವುದಿಲ್ಲ. ಅವರು ಅಪೇಕ್ಷಿಸುವುದೆಂದರೆ ತಮ್ಮ ನಿಶ್ಚಯ ನಿಮಿತ್ತ ಕೆಲಸಮಾಡಿ ಕೈದಿಗಳಿಂದ ನಿರ್ಬಂಧದಿಂದ ಕೆಲಸಮಾಡಿಸಿ, ಶಿಸ್ತನ್ನು ಸರಿಯಾಗಿರಿಸಿ, ಸಾಧ್ಯವಾದಷ್ಟು ಕಡಿಮೆ ಮಂದಿ ತಪ್ಪಿಸಿಕೊಂಡು ಹೋಗದಂತೆ ನೋಡುವುದಕ್ಕೆ ಮಾತ್ರ. ಇವುಗಳಿಗಾಗಿ ಅವರು ಕ್ರಮಗಳ ಮತ್ತು ಬಲಾತ್ಕಾರದ ಪ್ರತೀಕಾರಗಳನ್ನು ಅವಲಂಬಿಸುತ್ತಾರೆ. ಕಾರಾಗೃಹವಾಸಿಗಳ ಮತ್ತು ಕಾರಾಗೃಹಾಧಿಕಾರಿಗಳ ಮಧ್ಯೆ ಸಹಾನುಭೂತಿಪರ ಮಾನವ ಸಂಪರ್ಕವು ಅತಿ ಕಡಿಮೆಯಾಗಿರುತ್ತದೆ. ವೈಜ್ಞಾನಿಕ ದೃಷ್ಟಿಯ ಸುಧಾರಣೆಗಳಂತೆ ಅಪರಾಧವೂ ಶಾಸ್ತ್ರೀಯವಾಗಿ ನಿರ್ವಹಿಸಬೇಕಾದರೆ ನಮ್ಮ ಕಾರಾಗೃಹಗಳಲ್ಲಿ ತರಬೇತಾದ ಸ್ತ್ರೀಪುರುಷರು ಅಧಿಕಾರದಲ್ಲಿರುವುದು ಅತ್ಯಾವಶ್ಯಕವು. ಕಾರಾಗೃಹಗಳಲ್ಲಿ ಉದ್ಯೋಗಕ್ಕೆ ಆರಿಸಲ್ಪಡುವವರು ತಮ್ಮ ಕೆಲಸಕ್ಕೆ ನೇಮಿಸಲ್ಪಡುವ ಮೊದಲು ಪ್ರಥಮ ತರಬೇತಿಯನ್ನು ಪಡೆದುಕೊಳ್ಳಬೇಕೆಂದು ಕಾರಾಗೃಹಗಳ ಇನ್ಸ್‌ಪೆಕ್ಟರ್ ಜನರಲರು ಸೂಚಿಸಿರುವರಲ್ಲದೆ ಗವರ್ನಮೆಂಟು ಮದರಾಸಿನ ಇತರ ಇನ್ಸ್‌ಪೆಕ್ಟರ್ ಜನರಲರ ಪರಿಷತ್ತಿನಲ್ಲಿ ಪ್ರತಿ ಪ್ರಾಂತ್ಯದ ಸೆಂಟ್ರಲ್ ಜೈಲಿಗೆ ಸಂಬಂಧಿಸಿಯೇ ಸೆಂಟ್ರಲ್ ಟ್ರೈನಿಂಗ್ ಶಾಲೆಯೊಂದನ್ನು ಸ್ಥಾಪಿಸುವ ಕುರಿತು ವಿಚಾರಿಸಿರುವರು. ಇಂಗ್ಲೆಂಡಿನಲ್ಲಿ ಅಸಿಸ್ಟೆಂಟ್ ಜೈಲರರ ಉದ್ಯೋಗಕ್ಕೆ ಸೇರಬೇಕಾದರೆ ಉಮೇದ್ವಾರರುಗಳು ಜೈಲಿನಲ್ಲಿ ಆರಂಭದ ತರಬೇತಿಯನ್ನು ಪಡೆದು ತಾವು ಸದ್ರಿ ಕೆಲಸಕ್ಕೆ ಅರ್ಹರೆಂದು ಜೈಲ್ ಸುಪರಿಂಟೆಂಡೆಂಟರಿಂದ ಸರ್ಟಿಫಿಕೇಟ್ ಪಡೆಯತಕ್ಕದ್ದು. ನಂತರ ಸಂಸ್ಥೆಯಲ್ಲಿಯೂ ಈ ಉಮೇದ್ವಾರರುಗಳು ೬ ತಿಂಗಳ ತರಬೇತಿಯನ್ನು ಪಡೆಯತಕ್ಕದ್ದು. ಬರ್ಮದಲ್ಲಿ ಇತ್ತೀಚೆಗಷ್ಟೆ ಕಾರಾಗೃಹಗಳಿಗೊಂದು ಶಾಲೆಯನ್ನು ಏರ್ಪಡಿಸಿರುವರು. ಅನೇಕ ವಿಷಯಗಳಲ್ಲಿ ಇತರ ಪ್ರಾಂತಗಳಿಗಿಂತ ಮುಂದುವರಿದ ಮದ್ರಾಸು ಈ ಕುರಿತು ಹಿಂದುಳಿಯಬೇಕೇ? ನಮ್ಮ ಜೈಲುಗಳಲ್ಲಿರುವ ಜೈಲರ್ ಸಬ್‌ಓವರ್‌ಸೀಯರ ತರಬೇತಿಗಾಗಿ ನಮಗೊಂದು ಶಾಲೆಯು ಅತ್ಯಾವಶ್ಯಕವು. ವಸ್ತುತಃ ಎಲ್ಲಾ ಕಾರಾಗೃಹಾಧಿಕಾರಿಗಳೂ ಅತ್ಯಾಧುನಿಕ ದಂಡಶಾಸ್ತ್ರಕ್ರಮಗಳಲ್ಲಿ ತರಬೇತಿಯನ್ನು ಪಡೆಯಬೇಕಾಗಿದೆ. ನಮ್ಮ ಕಾರಾಗೃಹಗಳು ಸುಧಾರಿಸಲ್ಪಡಬೇಕಾದರೆ ಅವುಗಳಲ್ಲಿ ಆಸ್ಪ

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಕಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯು ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಶ್ಯಪಮಿಶ್ರಾ:
ದಶಮೂಲ ಸುಖಪ್ರವಔಷಧಿ
ಬಾಣಂತಿಯರ ಸಖ್ಯಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಪ್ರಸವ ಎಂಬೀ ಮೂರು ಗುಣಗಳು ಆಶ್ಚರ್ಯಕರಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಷವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರತ್ಯೇಕವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಪ್ರಸವ ಗುಣದಿಂದ ಬಾಣಂತಿಯು ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ನಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ತಿಳುವಳಿಕೆಗೆ "ಆಯುರ್ವೇದ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ಸ. ಕನ್ನಡ.

ಮುದರ್ತರವಾದ ಬೆಳ್ಳಿ ಪುಡಿದಾರಹಗ್ಗ.

Estd 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ಹಿರಿಯ ಅನುಭವದ ನೇಕಾರರು ಪುಡಿದಾರ ಹಗ್ಗಗಳ ಶುದ್ಧ ಶೈಲಿಯನ್ನೂ, ದಾರದ ನಯವನ್ನೂ, ನೂತನ ನಾನಾಪ್ರಕಾರದ ಚಿತ್ರ ಹಾಕಿರುವದನ್ನೂ ಹೊಸದಾಗಿ ಮಾಡಿದ್ದಾರೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿಕೊಂಡರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರಿ,
24-4-'29 ಶಿವ್ನಪೇಟೆ ರೋಡು (ದಕ್ಷಿಣ ಕನ್ನಡ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು
ಆತಂಕನಿಗ್ರಹ ಮಾತ್ರೆಗಳನ್ನು
ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1- ಮಾತ್ರ.
ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ
ಬರೆಯಿರಿ —

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, Bombay, and Puttur

ಬ್ರಾಂ. ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಬೊಂಬಾಯಿ ಮತ್ತು ಪುತ್ತೂರು

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ರಿಸರ್ವ ಮತ್ತು ಇತರ ಫಂಡುಗಳು. 3,88,000—0—0
Amount invested on G. P. Notes Rs. 680,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 680,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಠಾಯಂ ಡಿಪಾಸಿಟುಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ಮ್ಯಾದೆ ಇರುವ ರೂ. 1000/-ವ ಮೇಲ್ಪಟ್ಟ ಸೀಸನ್ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5 - during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice

For further particulars please apply to

Canara Bank Ltd.
Mangalore, 9—7—1929

K. Venkat Rao,
Secretary.

THE PANGAL NAYAK BANK, LTD.

Branch Office Mangalore	Head Office: Udipi. *Established 1920.*	Agency Office Cochin

Authorised Capital: Rs. 2,00,000-	Paidup Capital: Rs. 1,60200-
Issued Capital: Rs. 1,75,000-	Reserve and other Funds Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5%, 6 or 9 months 5¼%, 12, 15, 18 or 21 months 5½%, 24 months 6% and interest being payable every 3 months.

Short Notice Deposits, Cumulative Deposits, and Savings Bank Deposits are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6¼% and interest being payable every quarter.

Loans and Advances are made on pledge of valuables, on proper personal securities on reasonable terms; and every other description of Banking business transacted.

Further information may be had on application to the Secretary *at the* Head Office *or to the* Agent *at the* Branch.

Office of the Bank
15th June, 1929.

P. Lakshman Nayak,
Offg. Secretary.

ADVERTISE IN OUR WEEKLY.
To Reach the Hearths & Homes
OF INDIA'S MASSES

For Particulars Apply to:

The Manager,
SWADESHABHIMANI,
MANGALORE.

[illegible]ಗಳು

ಸಿನೆಮಾದಲ್ಲಿ ನೂತನ ಸುಧಾರಣೆ.

ಹಿಂದೂಸ್ಥಾನದಲ್ಲಿ ಸಿನೆಮಾ ಫಿಲ್ಮುಗಳು ಪ್ರಚಾರಕ್ಕೆ ಬರುವ ಮೊದಲೇ ಯುರೋಪ ಅಮೇರಿಕಾದಲ್ಲಿ ಹೊಸ ಬಗೆ ಛಾಯಚಿತ್ರಗಳಾಗಿವೆ. ಹಳೆತರದ ಫಿಲ್ಮುಗಳು ಬರೇ ಚಿತ್ರಗಳನ್ನು ಮಾತ್ರ ತೋರಿಸುತ್ತಿದ್ದುವು. ಮಾತುಗಳನ್ನು ಕಿವಿಗಳಿಂದ ಕೇಳುವ ಬದಲಿಗೆ ಕಣ್ಣುಗಳಿಂದ ಓದಬೇಕಾಗಿತ್ತು. ಹಿಂದೂಸ್ಥಾನದಲ್ಲಿ ತಯಾರಾಗುವ ಎಲ್ಲಾ ಫಿಲ್ಮುಗಳು ಇದೇ ತರದ್ದಾಗಿವೆ. ಆದರೆ ಇತ್ತೀಚೆಗೆ ಯುರೋಪು ಅಮೇರಿಕದಲ್ಲಿ ಮಾತುಗಳನ್ನು ಚಿತ್ರಗಳನ್ನು ನೋಡುವುದರೊಡನೆಯೇ ಕೇಳಬಹುದು. ಇದರಿಂದ ಪರದೆಯಲ್ಲಿ ನೋಡುವ ಘಟನೆಗಳು ನಿಜವಾಗಿ ನಡೆಯುವ ಘಟನೆಗಳನ್ನು ನೋಡಿದಂತೆಯೇ ಆಗುವುದು. ಇವುಗಳ ಪ್ರಚಾರವು ಹೆಚ್ಚಾಗಿ ಈಗ ಹಿಂದಿನ ನಮೂನೆಯ ಫಿಲ್ಮುಗಳು ತೋರಿಸುವ ಸಿನೆಮಾ ಕಂಪೆನಿಗಳ ಪ್ರೇಕ್ಷಕರ ಸಂಖ್ಯೆಯು ಕಡಿಮೆಯಾಗಿದೆ. ಆ ನಮೂನೆಯ ಫಿಲ್ಮುಗಳನ್ನು ತಯಾರಿಸುವ ಕಂಪೆನಿಗಳ ಲಾಭವೂ ಕಡಿಮೆಯಾಗಿ ಆ ಕಂಪೆನಿಗಳು ನೂತನ ಸುಧಾರಣೆಗಳ ಫಿಲ್ಮನ್ನು ತಯಾರಿಸುವ ಯಂತ್ರ ಸಾಮಗ್ರಿಯನ್ನು ಸಂಗ್ರಹಿಸಿ ನೂತನ ಫಿಲ್ಮುಗಳನ್ನೇ ತಯಾರಿಸುವರು. ಸ್ವಲ್ಪ ಸಮಯದೊಳಗೆ ಪ್ರಾಯಶಃ ಹಳೇ ಪದ್ಧತಿಯ ಫಿಲ್ಮುಗಳ ತಯಾರಿಯೇ ನಿಂತುಹೋಗಬಹುದು. ಈ ಪರಿಸ್ಥಿತಿಯು ಹಿಂದೀಯ ಕೈಗಾರಿಕೆಗೆ ಒಂದು ದೊಡ್ಡ ಬಾಧೆಯಾಗಲಿಕ್ಕಿದೆ. ಹಿಂದೂಸ್ಥಾನದಲ್ಲಿ ಫಿಲ್ಮುಗಳ ಕಂಪೆನಿಗಳು ಬರೇ ಹತ್ತು ವರ್ಷದ ಈಚೆಗೆ ಆರಂಭವಾದವು. ಆರಂಭವಾದಂದಿನಿಂದ ಇಂತಹ ಕಂಪೆನಿಗಳ ಸಂಖ್ಯೆಯು ಹೆಚ್ಚುತ್ತಾ ಇದೆಯಲ್ಲದೆ ಈ ಸಂಖ್ಯೆಯ ಏರುವಿಕೆಯ ಮಾನದಲ್ಲಿ ಫಿಲ್ಮುಗಳ ಉತ್ಕೃಷ್ಟತೆಯು ಹೆಚ್ಚಿಲ್ಲ. ಪಾಶ್ಚಾತ್ಯರಲ್ಲಿ ಪೂರ್ಣತೆಗೊಂಡ ಅಭಿನಯಕಲೆಯು ಹಿಂದೂಸ್ಥಾನದಲ್ಲಿ ಇನ್ನೂ ಶೈಶವದಲ್ಲಿಯೇ ಇದೆ. ಫೊಟೋಗ್ರಾಫಿಯೂ ಇನ್ನೂ ಪೂರ್ಣತೆಗೆ ಬಂದಿಲ್ಲ. ಹಿಂದೀ ಫಿಲ್ಮುಗಳ ಸ್ಥಿತಿಯೇ ಹೀಗಿರುವಾಗ ಈ ನೂತನ ಸುಧಾರಣೆಯು ಹಿಂದೀ ಕೈಗಾರಿಕೆಯನ್ನೂ ಮತ್ತೂ ಹಿಂದೆ ಹಾಕಬಹುದು. ಈಗಾಗಲೇ ನೂತನ ಫಿಲ್ಮುಗಳು ಬಂದರು. ಸಿನೆಮಾ ಮಂದಿರಗಳಲ್ಲಿ ಪ್ರದರ್ಶಿಸಲ್ಪಡಲಾರಂಭವಾಗಿವೆ. ಈ ನೂತನ ಸುಧಾರಣೆಯಲ್ಲದೆ ಇನ್ನೂ ಎರಡು ಸುಧಾರಣೆಗಳು ಬೇಗನೇ ಬರುವ ಸಂಭವವಿದೆ. ಮೊದಲನೆಯದಾಗಿ ಚಿತ್ರಗಳನ್ನು ಸ್ವಾಭಾವಿಕ ಬಣ್ಣಗಳಲ್ಲಿ ತೋರಿಸುವುದು. ಎರಡನೆಯದಾಗಿ ಚಿತ್ರಗಳು ಪರದೆಯ ಮೇಲಿನದವು ಎಂದು ಕಾಣದ ಹಾಗೆ ಪರದೆಯ ಬದಲಿಗೆ ಗಾಜನ್ನು (Ground glass) ಉಪಯೋಗಿಸಿ, ಚಿತ್ರಗಳ ಎತ್ತರ ಅಗಲವಲ್ಲದೆ ಉದ್ದ (in three dimensions)ದಲ್ಲಿ ಸಹ ಕಾಣುವಂತೆ ಮಾಡುವುದು. ಈ ಸುಧಾರಣೆಗಳು ಪ್ರಚಾರಕ್ಕೆ ಬಂದರೆ ಸಿನೆಮಾದೊಳಗಿನ ಕೃತ್ರಿಮವೆಲ್ಲವೂ ಮಾಯವಾಗುವುದು. ಹಿಂದೀ ಫಿಲ್ಮ ಕಂಪೆನಿಗಳು ವಿಲಾಯತಿಯ ಈ ಕಠಿಣವಾದ ಸ್ಪರ್ಧೆಯನ್ನು ಲಕ್ಷಿಸಿ ಫಿಲ್ಮ ಸುಧಾರಣೆಗಳನ್ನು ಪಾಶ್ಚಾತ್ಯರೊಡನೆಯೇ ಮಾಡಿಕೊಳ್ಳುವುದು ಅಗತ್ಯವಿದೆ

ಕೌನ್ಸಿಲರು ಯಾರಿಗೆ ಜವಾಬ್ದಾರರು?

ಎಂದು "ನವಯುಗ"ವು ಕೌನ್ಸಿಲರ ಜವಾಬ್ದಾರಿಯನ್ನು ತೋರಿಸಲು ಪ್ರಯತ್ನಿಸುತ್ತಿದೆ. ನವಯುಗವು ಯಾವುದೊಂದು ಪ್ರತ್ಯೇಕ ಪಕ್ಷದ ಸಮರ್ಥನಕ್ಕೆ ಹೊರಟಿಲ್ಲವಾದರೂ ಕಾಂಗ್ರೆಸ್ ಪಕ್ಷದ ಖಂಡನದ ಸಂದರ್ಭಗಳನ್ನು ಕಳೆದುಕೊಳ್ಳುವುದಿಲ್ಲ. ಕಾಂಗ್ರೆಸ್ ಕಾರ್ಯಗಳಲ್ಲಿ ಖಂಡನೀಯ ವಿಷಯಗಳಿಲ್ಲ; ಅಥವಾ ಇದ್ದರೂ ಖಂಡಿಸಬಾರದು; ಎಂದು ನಾವು ಹೇಳುವವರೇ ಅಲ್ಲ. ಕಾಂಗ್ರೆಸ್ ಕಾರ್ಯಗಳ ಖಂಡನವನ್ನು ಕೆಲವಟ್ಟಿಗೆ ನಾವಾದರೂ ಮಾಡಿಯೇ ಇರುವೆವು. ಆದರೆ ನವಯುಗವು ಕಾಂಗ್ರೆಸ್ಸಿನೊಳಗಿಂದ ಹುಡುಕಲು ಯತ್ನಿಸುವ ದೋಷಗಳು ಹಲವು ಬಾರಿ ನಿಜವಾದ ದೋಷಗಳಾಗಿಲ್ಲವೆನ್ನಬೇಕಾಗುತ್ತದೆ. ಮೇಲಿನ ಜವಾಬ್ದಾರಿಯ ಹುಡುಕಾಟವೂ ಯಾವ ದೇಶದಲ್ಲಿಯೂ ಇರದ ರಾಜನೀತಿಯ ಸಮರ್ಥನವಾಗಿರುತ್ತದೆ; ಅರ್ಥಾತ್ ಸ್ವತಂತ್ರ ಪಕ್ಷ-ಎಂದರೆ ಯಾವ ಪಕ್ಷಕ್ಕೂ ಸೇರದ ವೈಯಕ್ತಿಕ ಧೋರಣದ ವಿಮಾಂಸೆಯಾಗಿರುತ್ತದೆ. ಚುನಾಯಿತ ಕೌನ್ಸಿಲರು ಮತದಾರರಿಗೆ ಜವಾಬ್ದಾರರೆಂಬುದೇನೋ ನಿಜ. ಆದರೆ ಮತದಾರರ ರಾಜಕೀಯ ಧೋರಣವನ್ನು ವ್ಯವ[illegible] ಯಾವ ಧೋರಣೆಯು ಪ್ರತಿ ಪ್ರಶ್ನೆಯುಳ್ಳ [illegible] ಗಿದೆ. ನಿಜವಾಗಿ ನೋಡಿದರೆ ಮತದಾರರ ಜವಾಬ್ದಾರಿಯನ್ನು ಕಾಂಗ್ರೆಸ್ಸಿನವರು ಹೊರುವಷ್ಟು ಇತರರು ಹೊತ್ತಿಲ್ಲ. ಏಕೆಂದರೆ ಕಾಂಗ್ರೆಸ್ಸು ಮೊದಲಿಂದಲೇ ಒಂದು ಧೋರಣವನ್ನು ಕೈಕೊಂಡಿರುತ್ತದೆ. ಆ ಧೋರಣದ ಕಡೆಗೆ ಪ್ರಚಾರಕಾರ್ಯ ಮಾಡಿ ಮತದಾರರನ್ನು ಒಲಿಸಿಕೊಂಡಿರುತ್ತದೆ; ಮತ್ತು ಆ ಧೋರಣವನ್ನು ಸ್ಪಷ್ಟವಾಗಿ ಸೂಚಿಸಿಯೇ ಚುನಾವಣೆಗೆ ನಿಂತು ಚುನಾಯಿಸಲ್ಪಟ್ಟಿದ್ದಾರೆ. ಕೌನ್ಸಿಲಿಗೆ ಹೋಗುವುದು ಹೊರಬರುವುದು ಇವು ಕಾಂಗ್ರೆಸಿನ ನೂತನ ಕ್ರಾಂತಿಕಾರಕ ಧೋರಣವಲ್ಲ; ಇದಕ್ಕಾಗಿ ರಾಜೀನಾಮೆ ಕೊಟ್ಟು ಮತದಾರರ ಅಭಿಪ್ರಾಯಗಳನ್ನು ತಿಳಿಯುವ ಆವಶ್ಯಕತೆಯಿಲ್ಲ. ಯಾವ ಪಕ್ಷದ ಧೋರಣದ ಪಾಲನೆಗಾಗಿ ಮತದಾರರು ಪ್ರತಿನಿಧಿಗಳನ್ನು ಚುನಾಯಿಸಿದ್ದಾರೆ ಆ ದೇ ಪಕ್ಷದ ಶಿಸ್ತಿಗೆ ಅನುಸಾರವಾಗಿ ಅವರು ನಡೆದರೆ ಮತದಾರರ ಅಭಿಪ್ರಾಯಗಳನ್ನು ಗಣಿಸದೆ ಇದ್ದಂತಾಗುವುದಿಲ್ಲ. ಹಾಗೆಯೇ ನವಯುಗವು ಕಾಂಗ್ರೆಸ್ಸಿಗೆ ಕೊಟ್ಟಿರುವ ತ್ರಿಶಂಕು ಸ್ವರ್ಗವು ಅದರ ಇಚ್ಛೆಯದ್ದಾಗಲಿ, ಅದು ಹೊಂದಿದ್ದಾಗಲಿ ಆಗಿರುವುದಿಲ್ಲ. ಅದು ನವಯುಗದ ಬರೇ ಕಲ್ಪನೆಯದ್ದಾಗಿದೆ. ಕಾಂಗ್ರೆಸು ಕೌನ್ಸಿಲರುಗಳ ಮುಂದಿನ ನಡವಳಿಕೆ ಬಗ್ಗೆ ಒಂದು ಬಾರಿ ವರ್ಕಿಂಗ್ ಕಮಿಟಿಯು ಒಂದು ನಿರ್ಣಯವಾಗಿರುವುದಾದರೂ. ಅದು ಈಗ ಪುನರಾಲೋಚಿಸಲ್ಪಡುತ್ತಲಿದೆ. ಅದಕ್ಕಾಗಿ ಪ್ರಾಂತಿಕ ಕೌನ್ಸಿಲು ಕಮಿಟಿಗಳಿಗೂ ಆಮಂತ್ರಣವಿದೆ. ವರ್ಕಿಂಗ್ ಕಮಿಟಿಯ ನಿರ್ಣಯವನ್ನು ತೆಗೆದುಹಾಕುವ ಅವಶ್ಯ ಬಿದ್ದರೆ ಇನ್ನೂ ನಡೆಯುವ ಮೀಟಿಂಗಿನಲ್ಲಿ ಅದನ್ನು ತೆಗೆದುಹಾಕಲೂ ಬಹುದು. ಆ ಕಾರಣದಿಂದ ಕಾಂಗ್ರೆಸ್ಸಿನ ಪ್ರತಿಷ್ಠೆಗೆ ಕೊರತೆಯಾಗಲಾರದು.

ನೆರೆ ಸಮಯವೇ ಕಡವು ಕಂಟ್ರಾಕ್ಟರರಿಗೆ ಲಾಭ

ಈ ವರ್ಷ ಇಷ್ಟರೊಳಗೇನೇ ಎಂದಿಗಿಂತಲೂ ಬಹಳ ಜಂಜಾವಳೆ ಹೆಚ್ಚು ಬಿದ್ದಿರುತ್ತದೆ. ಇದು ನಮ್ಮ ಜಿಲ್ಲೆಯ ಅದೃಷ್ಟವೊ ದುರದೃಷ್ಟವೊ, ಮುಂದಿನ ಮಳೆ ನೋಡಿ ಹೇಳಬೇಕು. ಆದರೆ ಇದು ಕಡವಿನ ಕಂಟ್ರಾಕ್ಟರರ ಅದೃಷ್ಟವೆಂದೇನೊ ಸ್ಪಷ್ಟವಾಗಿ ಹೇಳಬಹುದು. ಪ್ರತಿ ಕಡವಿನಲ್ಲಿಯೂ ಕಂಟ್ರಾಕ್ಟರರದೇ ಪ್ರತ್ಯೇಕ ದೋಣಿ ಇರಬೇಕೆಂದು ಕ್ರಮವಿದ್ದರೂ, ಡಿಸ್ಟ್ರಿಕ್ಟ ಬೋರ್ಡಿನ ಒಂದು ಬಡಕು ಹಂಗಿನ ಹೊರತು ಕಂಟ್ರಾಕ್ಟರರ ಪಾಡಿಯಲ್ಲಿ ಬಹುದಾದುದೇನೂ ಕಡವುಗಳಲ್ಲಿರುವುದಿಲ್ಲ. ಒಂದು ಪಕ್ಷಕ್ಕೆ ಅಧಿಕಾರಿಗಳು ನೋಡಲು ಬರುವರೆಂದರೆ ಸವಾರಿ ದೋಣಿಗಳಿಗೆಲ್ಲಾ ಕಡವು ಕಂಟ್ರಾಕ್ಟರನ ಸಂಬಂಧವಿರುತ್ತದೆ. ಕಡವು ಕಂಟ್ರಾಕ್ಟರನಿಗೂ ಸವಾರಿ ದೋಣಿಗಳಿಗೂ ಯಾವ ಸಂಬಂಧವೂ ಪ್ರಯಾಣಿಕರಿಗೆ ಗೊತ್ತಿರುವುದಿಲ್ಲ. ಸಹಜವಾದ ಸಮಯದಲ್ಲಿ ಕಂಟ್ರಾಕ್ಟರನ ಕಾನೂನು ಪ್ರಕಾರದ ಮೂರು ಪೈಯನ್ನೂ ಆರು ಪೈಯನ್ನೂ ಕೊಟ್ಟು ಸವಾರಿ ದೋಣಿಯಲ್ಲಿ ಕುಳಿತು ದೋಣಿಯವನಿಗೆ ಕೊಡುವ ದುಡ್ಡನ್ನು ಕೊಟ್ಟು ಹೋಗೂ ಪಾರಾಗಬೇಕು. ಮೋಟರು ಪ್ರಯಾಣದ ದೊಡ್ಡವರಿಗೇನೂ ಈ ಪಾವತಿ ಅರ್ಧಾಣೆ ದೊಡ್ಡದಲ್ಲ. ಹತ್ತಿರದ ಹಳ್ಳಿಗಳ ಬಡ ಜನರಿಗೆ ಮತ್ತು ಶಾಲೆಗೆ ಹೋಗುವ ಚಿಕ್ಕ ಮಕ್ಕಳಿಗೆ ಈ ಸವಾರಿ ದೋಣಿಗಳ ತೊಂದರೆ ಹೇಳ ತೀರದು. ನಿತ್ಯದ ಸ್ಥಿತಿ ಹೀಗಿದ್ದರೂ, ನೆರೆಬಂದ ಸಮಯದ ಸ್ಥಿತಿಯೇ ಬೇರೆ. ಸವಾರಿ ದೋಣಿಯವನ ಹೆಚ್ಚಿನ ಶ್ರಮಕ್ಕಾಗಿ ಅವನಿಗೆ ಹೆಚ್ಚು ಕೊಡುವ ಏನೇನು ಹೇಗೂ ಕೊಡಲೇಬೇಕು. ಅದರೊಡನೆ ಕಡವಿನ ಕಂಟ್ರಾಕ್ಟರನ ದರವೂ ಏರುತ್ತದೆ. ಯಾವ ಕಾನೂನಿನಿಂದ ಅವನದನ್ನು ತೆಗೆದುಕೊಳ್ಳುತ್ತಾನೊ ಅವನಿಗೇ ಗೊತ್ತು. ಸ್ವಲ್ಪ ಗೊತ್ತಿದ್ದವರು ಹೆದರಿಸಿದರೆ ಸುಮ್ಮಗಾಗಿ ಕ್ರಮಪ್ರಕಾರದ ದುಡ್ಡನ್ನು ತೆಗೆದು ಬಂದಿಷ್ಟು ಬೈದು ಬಿಡುವನು. ಕೆಲವರು ತಕ್ರಾರು ಬೇಡವೆಂದು ಕೇಳಿದ ಅರ್ಧಾಣೆಯನ್ನೊ, ಆಣೆಯನ್ನೊ ಕೊಟ್ಟೇ ಹೋಗಿ ಬಿಡುವರು. ಬಡವರು, ಪಾಪದವರು ಉಪಾಯವಿಲ್ಲದೇನೇ ಕೊಡುವರು. ಒಂದೊಂದು ಸರ್ತಿ ತಕ್ರಾರು ಉಂಟಾಗಿ ಹೊಳೆಯ ಹತ್ತಿರ ಪ್ರಯಾಣಿಕರಿಗೆ ಅರ್ಧ ಘಂಟೆ ಮುಕ್ಕಾಲು ಘಂಟೆ ವರೆಗೆ ಹೋಗಲಿಕ್ಕೆ ಬಿಡದೆ ಇರುವುದೂ ಇದೆ. ಈ ತರದ ಪ್ರಯಾಣದ ಅಡಚಣೆಯು ಡಿಸ್ಟ್ರಿಕ್ಟ ಬೋರ್ಡಿನ ಗಮನಕ್ಕೆ ಬಂದದೊ ಇಲ್ಲವೆಂದು ಗೊತ್ತಿಲ್ಲ. ಪ್ರಯಾಣಿಕರಿಗೆ ಉಂಟಾಗುವ ಈ ತರದ ತೊಂದರೆಗಳನ್ನು ನಿವಾರಿಸುವ ಬಗ್ಗೆ ಡಿಸ್ಟ್ರಿಕ್ಟ ಬೋರ್ಡಿನವರು ಕಡವು ಕಂಟ್ರಾಕ್ಟರದಾರರಿಗೆ ಎಚ್ಚರಿಕೆಯನ್ನು ಕೊಡುವುದು ಅವಶ್ಯವಿದೆ. ಇಲ್ಲವಾದರೆ ಹಲವು ಬಡವರು ವ್ಯಥಾನಷ್ಟಕ್ಕೆ ಬೀಳಬೇಕಾಗುತ್ತದೆ.

ನೋಟಗಳು.
NOTE...S.

ಹತ್ತಿರವಾಗುತ್ತಾ ಬಂದವು— ಮದುವೆಯ ಕಾನೂನಿನ ದಿನಗಳು. ಮದ್ರಾಸಿನಲ್ಲಿ ಮಾತ್ರ ಕೆಲವರಿಗೆ ಗಾಬ್ರಿ ಉಂಟಾಗಿದೆ. ಕೆಲವರು ಪ್ರಾಣ ಕಳಕೊಳ್ಳಲಿಕ್ಕೂ ಸಿದ್ಧ.

ಮುಂದಕ್ಕೆ ಜಾರಿಗೆ ಬರುವ ಸಮ್ಮತಿವಯಸ್ಸು ಮತ್ತು ವಿವಾಹ ಪದ್ಧತಿಯ ಕಾನೂನು ಸ್ತ್ರೀಯರಿಗೆ ೧೪ರಿಂದ ೧೬ರ ವರೆಗೆ ಎಂದು ಇಡಬೇಕೆಂದು ಕಮಿಟಿಯವರ ಸೂಚನೆ. ಸೂಚನೆಯಂತೆ ಈಗ ನಡಿಯುತ್ತಾ ಇದೆ.

• • • •

ಮಂಗಳೂರಿಗೆ (Pipe water supply) ಕೊಳವೆಗಳ ಮುಖಾಂತರ ನೀರು ಒದಗಿಸುವುದಕ್ಕಾಗಿ ಹಣ ಮುನಿಸಿಪಾಲಿಟಿಯಲ್ಲಿ ಕಡಿಮೆ ಬಿದ್ದದೆ. ಹಣ ಎಲ್ಲಿಂದ ಯಾವ ನಮೂನೆಯಲ್ಲಿ ಸಂಗ್ರಹಿಸಬಹುದೆಂದು ಯೋಚನೆ.

• • • •

ಮುನಿಸಿಪಾಲಿಟಿಯವರು ಆಲೋಚಿಸಿದ ಅಭಿಪ್ರಾಯವನ್ನು ಬಹಿರಂಗವಾಗಿ ಪತ್ರಿಕೆಗಳಲ್ಲಿ ಜನರ ಅಭಿಪ್ರಾಯಗಳ ಬಗ್ಗೆ ಪ್ರಕಟಣೆ.

• •

ಪ್ರಕಟಣೆ ಮತ್ತೇನಿಲ್ಲ, ಒಂದು ಹೊಸ ತೆರಿಗೆ ಜಾರಿಗೆ ತರುವ ಆಲೋಚನೆ. ಅದರ ಹೆಸರು 'ನೀರು ತೆರಿಗೆ.'

• • • •

ಈಗ ಇರುವ ತೆರಿಗೆಗಳನ್ನು ವಸೂಲು ಮಾಡಲು ಮುನಿಸಿಪಾಲಿಟಿಯವರಿಗೆ ಇಡಿ ಒಂದು ವರ್ಷ ಸಾಕಾಗುವುದಿಲ್ಲ

• • • •

ನೀರು ತೆರಿಗೆ, ಆ ತೆರಿಗೆ, ಈ ತೆರಿಗೆ ಎಂದು ಇನ್ನೂ ಹೆಚ್ಚಿಸುತ್ತಾ ಹೋದರೆ, ಮುಂದಕ್ಕೆ ವಾರಂಟು ಆಫೀಸರರ ಒದಲು ಒಬ್ಬ ಮೆಜಿಸ್ಟ್ರೇಟರನ್ನು ಸರಕಾರು ಮಾಡಿದರಾಯಿತು.

• • •

ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಸ್ಕೀಮಿನ ಕ್ರಮ ಜಾರಿಗೆ ತರಲಿದ್ದಾರೆ. ಎಂಡೊಮೆಂಟ ಪ್ರೆಸಿಡೆಂಟರು ಟ್ರಸ್ಟಿಗಳ ಅರ್ಜಿಗಳನ್ನು ಕರೆದಿರುತ್ತಾರೆ. ಮುಂದಕ್ಕೆ ವೆಂಕಟ್ರಮಣನ ಕಾರುಬಾರು ಘಂಟೆ ಪ್ರಕಾರ.

• • •

ಮಂಗಳೂರು ಮುನಿಸಿಪಾಲಿಟಿಯವರ ಮಾರ್ಗ ದುರುಸ್ತಿ ಸಂಬಂಧವಾಗಿದೆ (ತಿಲೆ) ಜಲ್ಲಿ ಕಲ್ಲು ಹಾಕುವಲ್ಲಿ ಮಣ್ಣು ಸರಿಯಾಗಿ ಹಾಕುವರೆ ಒಂದು ಸೂಚನೆ.

• • • •

ಮಂಗಳೂರು ಕೆನರಾ ಗರ್ಲ್ಸ ಸ್ಕೂಲಿನಲ್ಲಿ ಒಂದು ಕ್ಲಾಸನ್ನು ಹೆಚ್ಚಿಸಿ, ಒಬ್ಬ ಹೆಡ್ಮಾಸ್ಟರನ್ನು ನೇಮಿಸಿದ್ದಾರೆ. ಹೆಣ್ಣುಕ್ಕಳ ತಂಡೆಗೆ ತಿಳಿದಿರುವುದೆ ಎಂಬದೊಂದು ಪ್ರಶ್ನೆ.

• • •

ಕಳೆದ ಹಲವು ವರ್ಷಗಳಿಂದ ಶನಿದಸೆ ಹಿಡಿದು ಬಾಕಿ ಬಿದ್ದ ನೇತ್ರಾವತಿ ಸಂಕದ ಕೆಲಸ ಪೂರ್ತಿಯಾಯಿತು. ಈಗ ಜಲಾವರೆಗೆ ಬಿಟ್ಟು ಕೊಟ್ಟಿರುವರು.

• • • •

ಕಳೆದ ಬಾರಿ ಮುಖ್ಯ ಮಂತ್ರಿಗಳು ಮಂಗಳೂರಿಗೆ ಬಂದರು ಜಾವಾರಾವಿ ಘಾಟಿ ರಸ್ತೆ ನೋಡಿದರು. ಎಲ್ಲಾ ಮಾಡುತ್ತೇನಾಗಿ ಹೋದರು.

• • • •

ಡಿಸ್ಟ್ರಿಕ್ಟ ಬೋರ್ಡಿನವರು ಸೂಚಿಸಿದಂತೆ, ಹಣ ಸೆಂಕ್ಷನ್ ಆದ ಕುರಿತು ಇನ್ನೂ ಕಾಣುವುದಿಲ್ಲ.

• • • •

ಮಾರ್ಗ ದುರುಸ್ತಿ ಬೋರ್ಡಿನವರಿಗೆ ಪೂರೈಸುವ ರೀತಿಯಲ್ಲಿ ನಡಿಯುತ್ತಾ ಇದೆ ಮಂತ್ರಿಗಳು ಮದ್ರಾಸಿನಲ್ಲಿ, ಬೋರ್ಡಿನವರು ಮಂಗಳೂರಿನಲ್ಲಿ

• • • •

ಕಳೆದ ವಾರದ ನೆರೆಯ ಸಂಬಂಧವಾಗಿ ನದಿ ಕಿನಾರೆಯಲ್ಲಿ ವಾಸಿಸುವವರಿಗೆ ಕೊಂಚ ನಷ್ಟವಾದರೂ ನಮ್ಮ ಡಿಸ್ಟ್ರಿಕ್ಟ ಬೋರ್ಡ ಕಡವುದಾರರಿಗೆ ಕಿಂಚಿತ್ ಲಾಭವಾಗಿರುವುದು. ಹೀಗೆ ಹೆಚ್ಚಿನ ಲಾಭ ಗಳಿಸಲು ಕಡವುದಾರರಿಗೆ ಯಾವ ಕಾನೂನು ಇರುವುದು? ಇಲ್ಲವಾದರೆ 'ಹಂ ಕರ್‍ಸೋ ಕ್ಯಾದ್' ಎಂತಾಗಬೇಕು. ಈ ವಿಷಯದಲ್ಲಿ ನಮ್ಮ ಡಿ. ಬೋರ್ಡಿನವರು ಏನು ಮಾಡ್ಯಾರು?

ಅಲ್ಲದೆ ಸವಾರಿ ದೋಣಿಯ ಕ್ರಮವು ಪ್ರಚಾರಕ್ಕೆ ಬಂದಂದಿನಿಂದ ಹೆಚ್ಚಿನ ಕಡವುಗಳಲ್ಲಿ ಸಣ್ಣ ದೋಣಿಗಳೇ ಇವೆ. ಇವುಗಳು ನೀರಿನಲ್ಲಿ ಮಗುಚಿ ಬೀಳುವ ಹೆದರಿಕೆಯೂ ಇರುತ್ತದೆ. ಆದುದರಿಂದ ಪ್ರತಿ ಕಡವಿನಲ್ಲಿಯೂ ಯೋಗ್ಯವಾದ ದೊಡ್ಡ ದೋಣಿಗಳೂ ಇರುವಂತೆ ನೋಡಿಕೊಳ್ಳುವುದು ಅವಶ್ಯವಿದೆ.

ಶಾಲಿವಾಹನ ಶಕೆ ೧೮೫೧ನೆಯ ವಿಭವಸಂವತ್ಸರದ ಆಷಾಢ ಶು ೭ ಶನಿವಾರದಿಂದ ವಿಭವ ಸಂವತ್ಸರದ ಆಷಾಢ ಶು ೧೩ ಶುಕ್ರವಾರದ ವರೆಗಿನ ಪಂಚಾಂಗ.

(ಸೂರ್ಯನು ಮಿಥುನ (ಕಾರ್ಕಟ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ	ಅಸ್ತ
13	ಶನಿ	೭	[illegible]	ಹಸ್ತಾ	[illegible]	[illegible]	6.12	7 0
14	ರವಿ	೮	[illegible]	ಚಿತ್ರಾ	[illegible]	೪೦	6.13	6 59
15	ಸೋಮ	೯	[illegible]	ಸ್ವಾತಿ	[illegible]	[illegible]	6 13	6 59
16	ಮಂಗಳ	೧೦	[illegible]	ವಿಶಾಖಾ	[illegible]	೧	6 13	6.59
17	ಬುಧ	೧೧	[illegible]	ಅನುರಾಧಾ	[illegible]	೨	6 13	6 59
18	ಗುರು	೧೨	[illegible]	ಜ್ಯೇಷ್ಠಾ	[illegible]	೪	6.14	6.59
19	ಶುಕ್ರ	೧೩	[illegible]	ಮೂಲಾ	[illegible]	೬	6.14	6 59

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಶಾಖ) Maximum ಹೆಚ್ಚಾದುದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಹಿಂದಿನ ಒಟ್ಟು ಮಳೆ
5	83— 2	76— 1	0—37	—
6	86— 7	73— 9	3—10	—
7	81— 2	72— 9	2—23	—
8	78— 3	72— 9	5—50	—
9	78— 0	73— 3	1—95	—
10	80— 4	73 - 3	0—55	—
11	83— 0	75— 5	0—40	—
				95 — 75

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ.	ಆ.	ವರೆಗೆ ರೂ.	ಆ.
ಮುಸ್ಸ ...	7	0	7	8
ಉದ್ದು ...	6	4	6	12
ರಾಗಿ ...	6	9	6	—
ಊರ ಅಪ್ಪರ್ ಬೆಳ್ತಿಗೆ ...	7	0	7	10
ರಂಗೂನು ಬೆಳ್ತಿಗೆ ಗೋಣಿ ಒಕ್ಕೆ ...	12	—	13	0
ಸುಗ್ಗಿ ...	5	12	6	6
ಎಲ್ಲೂರು ಬೆಳ್ತಿಗೆ ಮುಡಿ ಒಕ್ಕೆ ...	6	4	6	[illegible]
ಗೋಧಿ ಗೋಣಿ ಒಕ್ಕೆ ...	15	12	20	0
ಹುರುಳಿ ಗೋಣಿ ಒಕ್ಕೆ ...	7	6	8	[illegible]
ಕಡಲೆ ಗೋಣಿ ಒಕ್ಕೆ ...	15	8	16	8
ತೊಗರಿ ಗೋಣಿ ಒಕ್ಕೆ ...	14	8	15	8
ತೊಗರಿಬೇಳೆ ಗೋಣಿ ಒಕ್ಕೆ ...	18	8	27	0
ಉದ್ದು ಗೋಣಿ ಒಕ್ಕೆ ...	15	0	16	0
ಹೆಸರು ಗೋಣಿ ಒಕ್ಕೆ ...	14	8	16	[illegible]
ಸಾದಾ ಬೆಲ್ಲ ಖಂಡಿ ಒಕ್ಕೆ ...	70	0	74	[illegible]
ಉಪ್ಪು ಗೋಣಿ ಒಕ್ಕೆ	4	5	4	14
ಕೊಬ್ರಿ ಖಂಡಿ ಒಕ್ಕೆ	90	0	95	
ಕೊಬ್ರಿ ಹಿಂಡಿ ಖಂಡಿ ಒಕ್ಕೆ ...	29	0	30	
ಎಳ್ಳಿಂಡಿ ಖಂಡಿ ಒಕ್ಕೆ ...	35	0	37	8
ಕೊಬ್ರಿ ಎಣ್ಣೆ ಮಣ ಒಕ್ಕೆ ...	6	8	7	0
ಎಳ್ಳೆಣ್ಣೆ ಮಣ ಒಕ್ಕೆ	7	14	8	4
ಚಿಮಣಿಎಣ್ಣೆ ಪೆಟ್ಟಿಗೆ ಒಕ್ಕೆ ...	7	12	8	4
ಮೋರಿಸ ಸಕ್ಕರೆ ಮಣ ಒಕ್ಕೆ ...	3	12	3	[illegible]
ಹೊಸ ಮೆಣಸು ...	5	10	6	[illegible]
ಸಾಸಿವೆ ಮುಡಿ ಒಕ್ಕೆ .	8	8	—	
ಕೊತ್ತಂಬರಿ ಮುಡಿ ಒಕ್ಕೆ ...	3	12	[illegible]	0
ನೇಟಿವ್ ಕಾಫಿ ಖಂಡಿ ಒಕ್ಕೆ ...	370	0	375	[illegible]
ಹೆಗ್ಗೋಟು ಅಡಕೆ ಖಂಡಿ ಒಕ್ಕೆ	160	0	—	
ಕಾಳುಮೆಣಸು ಖಂಡಿ ಒಕ್ಕೆ ...	425	0	430	0
ಯೇಲಕ್ಕಿ ಮಣ ಒಕ್ಕೆ ...	60	0	66	—
ಗೇರುಬೀಜ ಮುಡಿ ಒಕ್ಕೆ ...	3	11	3	12
[illegible] ಖಂಡಿ ಒಕ್ಕೆ ...	45	0	50	0
ತಾಮ್ರ ತಗಡು ಮಣ ಒಕ್ಕೆ ...	18	0	18	4
ತಾಮ್ರದ ಪಾತ್ರೆಗಳು ಮಣ ಒಕ್ಕೆ ...	—		24	0
[illegible] ಸೇರು ಒಕ್ಕೆ ..	16	4	—	
ಹಿತ್ತಾಳೆ ತಗಡು ಮಣ ಒಕ್ಕೆ ...	17	0	17	8
ಸತುವು ಒಕ್ಕೆ ...	13	12	—	
ಹುಣಸೆಹುಳಿ ಖಂಡಿ ಒಕ್ಕೆ	30	0	37	8

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಕ್ಷಯಕ್ಕೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಕ್ಷಯ ರೋಗಿಗಳ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತದೆ. ಕ್ಷಯಕ್ಕೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅವ್ಯರ್ಥವಾಗಿರುತ್ತದೆ.

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಕ್ಷಯ ರೋಗಿಯ ಪ್ರತಿಸಂಯುಗಳಿಗೂ, ಗಡ್ಡೆಗೂ ಶೀಘ್ರವಾದ ಔಷಧ. ಸೀಸೆ 1ಕ್ಕೆ ರೂ. 0—8—0.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಮಾಶ್ರಮದ ವೈದ್ಯಶಾಲಾ, ಮೈಸೂರು.

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್ ಆಫೀಸ್, ಸೀತಾರಾಮಾಶ್ರಮ ವೈದ್ಯಶಾಲಾ, ಮೈಸೂರು.

ಏಜಂಟರು —

ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು. ಬಂದರ್ ರಸ್ತೆ.

ವಂದೇ ಮಾತರಂ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ | ಅಂಚೆಯಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯುರ್ವೇದ ಸಾರಸಂಗ್ರಹ ರೂಪವಾಗಿರುವ ಭಾಷೆಗಳಲ್ಲಿ ಪ್ರಕಟಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಪ್ರತಿಯೊಬ್ಬರೂ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧವಾಗಿ ನಡೆಯುವುದೇ ದಾರಿ. ಕಾಗದ ಬರೆದು ತರಿಸಿಕೊಳ್ಳಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮುಂಬಯಿ.

ಉಚಿತ! ಉಚಿತ!!

512 ಪುಟಗಳುಳ್ಳ ಸುಂದರವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ ನಮ್ಮ ಲೋಕಪ್ರಸಿದ್ಧವಾದ ಶಾನಿಕ್ಯೆಂಬುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಈ ಮಾತ್ರೆಗಳು ಧಾತುವೃದ್ಧಿ ಮಾಡುವುದಲ್ಲದೆ ನರಗಳ ದೌರ್ಬಲ್ಯವನ್ನು ನಿವಾರಿಸುತ್ತದೆ.

ವಿ. ಗೂಲಸ್ ನಾಯರ್ ... ಮಂಗಳೂರು.

ಪವಿತ್ರ ಖಾದಿ! ಬಡವರ ಖಾದಿ!!

ಶುದ್ಧ ಖಾದಿಯನ್ನೇ ವಿಕ್ರಯಿಸುವುದಾಗಿ ಅ. ಭಾ. ಚ. ಸಂಘದಿಂದ ಸರ್ಟಿಫಿಕೇಟು ಹೊಂದಿರುವ ಮತ್ತು ಇದೇ ಏಪ್ರಿಲ್ ತಾ 1ರಲ್ಲಿ ತೆರೆಯಲಾದ

"ಖಾದಿ ನಿಲಯ"ವು

ಎಲ್ಲಾ ಉಪಯೋಗಗಳಿಗಾಗುವ ಸರ್ವ ನಮೂನೆ ಫ್ಯಾಶನುಗಳಾಗುವ ನಾಜೂಕ ಖಾದಿಯನ್ನು ಸಂಗ್ರಹಿಸಿರುತ್ತದೆ. ದೇಶಬಾಂಧವರು ಮಹಾತ್ಮಾ ಗಾಂಧಿಯವರು ಈ ವರ್ಷದ ಮಟ್ಟಿಗೆ ಕೈಕೊಂಡಿರುವ ಒಂದೇ ಒಂದಾದ ಪ್ರಧಾನ ಪ್ರಚಾರ ಕಾರ್ಯವಾಗಿಟ್ಟಿರುವ

ಈ ಪವಿತ್ರ ಖಾದಿಯನ್ನು

ಬಳಕೆಗೆ ತರಲು ಸುಸಂದರ್ಭವು ಇದೇ! ತ್ವರೆಮಾಡಿರಿ!!

ವಂದೇ ಮಾತರಂ!!

ವಿಳಾಸ — ಖಾದಿ ನಿಲಯ,

(ವ್ಯವಸ್ಥಾಪಕರು, ಪೈ ಮತ್ತು ಕಂಪೆನಿ),

ಸಂತೆಕಟ್ಟೆ ಬಳಿ, ಉಡುಪಿ, ದ. ಕ.

[illegible]

[illegible]	[illegible]
[illegible]	[illegible]
[illegible]	[illegible]
[illegible]	,,
[illegible] ಸಂಸ್ಥೆಗಳು	
[illegible]	[illegible]
[illegible] — ಮಂಗಳೂರು, ಗುರ್ಪುರ, ಉಡುಪಿ, [illegible]	[illegible]
[illegible] ವರ್ತಮಾನಗಳು,	೯
ಬಂಟ್ವಾಳದಲ್ಲಿ ಸೆರೆಯ ಹಾವಳಿ	,,
ಸಿನೇಮಾ [illegible]	೧೧
ಹುಚ್ಚರಿಂದ ಹುಚ್ಚರಾದುದು (ಕಥೆ)	೧೨
ಪತ್ರವ್ಯವಹಾರ,	,,
ಆರೋಗ್ಯದ ಆದೇಶದ ಸುಧಾರಣೆ.	,,

ಸ್ವದೇಶಾಭಿಮಾನಿ.

ತಾರೀಕು ೧೨ನೇ ಶುಕ್ರವಾರ ಜೂಲೈ ೧೯೨೯.

ಸ್ತ್ರೀ ಪುನರ್ವಿವಾಹ.

ಸ್ತ್ರೀಯರ ವಿಷಯವಾದ ಅನೇಕ ಸಮಸ್ಯೆಗಳು ಕೆಲವು ವರ್ಷಗಳ ಹಿಂದೆ ಉಂಟುಮಾಡುತ್ತಿದ್ದಷ್ಟು ವಿರೋಧವನ್ನು ಈಗ ಉಂಟುಮಾಡುವುದಿಲ್ಲವೆಂಬುದು ಸಮಾಧಾನಕರವಿದೆ. ಹಿಂದು ಸಮಯದಲ್ಲಿ ಹುಡುಗಿಯರಿಗೆ ಅಕ್ಷರಾಭ್ಯಾಸದ ಆವಶ್ಯಕತೆ ಇದೆ ಎಂದು ಹೇಳುವುದೇ ಕಷ್ಟವಿತ್ತು; ಆದರೆ ಈಗ ಹುಡುಗಿಯರನ್ನು ಸ್ವೇಚ್ಛೆಯಿಂದ ಶಾಲೆಗೆ ಕಳುಹಿಸುವರು. ಹಾಗೆಯೇ 'ಅಷ್ಟವರ್ಷಾತ್ ಭವೇತ್ ಕನ್ಯಾ' ಎಂದು ಹುಡುಗಿಗೆ ಹತ್ತು ವರ್ಷವಾಗುವ ಮೊದಲೇ ಮದುವೆ ಮಾಡದಿದ್ದರೆ ಸ್ವಜಾತಿ ವರ್ಗದಲ್ಲಿ ದೊಡ್ಡ ಅಪಯಶಸ್ಸು ಬರುವ ದಿನಗಳಿದ್ದುವು. ಈಗ ಹದಿನೆಂಟು ವರ್ಷ ಪ್ರಾಯವಾದರೂ ಹೆದರಿಕೆ ಇರುವುದಿಲ್ಲ. ಹಾಗೆಯೇ ಸಹಗಮನದ ಉಚ್ಛ ತತ್ವಗಳಿಂದ ತುಂಬಿದ ದಿನಗಳೂ ಹಿಂದೂಸ್ಥಾನದಲ್ಲಿದ್ದುವು; ವಿಧವಾ ವಿವಾಹವೆಂದು ಕೇಳಿದ ಕೂಡಲೇ 'ಶಾಂತಂ ಪಾಪಂ' ಎಂದು ಕಿವಿಮುಚ್ಚಿಕೊಳ್ಳದವರು ಆ ಸಮಯದಲ್ಲಿ ಯಾರೂ ಇರಲಿಲ್ಲ. ಈಗ ಅಷ್ಟರಮಟ್ಟಿನ ಭಯಂಕರತೆಯು ಈ ಪ್ರಶ್ನೆಯಲ್ಲಿ ಯಾರೂ ಕಾಣುವುದಿಲ್ಲ.

ಹಿಂದೂ ಮತದ ಪೌರೋಹಿತ್ಯ ಪ್ರಾಧಾನ್ಯದಿಂದ ತತ್ವತಃ ಎಷ್ಟೇ ಹಿತವು ಉಂಟಾಗಿದ್ದರೂ, ಅದೇ ಪ್ರಾಧಾನ್ಯವು ಜನಾಂಗವನ್ನು ಅವನತಿಗೆ ಎಳೆದುದಲ್ಲದೆ ಹಿಂದೂ ಮತವನ್ನೇ ನೂತನ ನೂತನ ಆಚಾರಗಳ ನಿರ್ಜೀವ ರಚನೆಯಾಗಿ ಮಾಡಿತು. ಈ ಹಲವು ಆಚಾರಗಳಲ್ಲಿ ತತ್ವಗಳ ಮಹತ್ವವು ತೋರುವುದಾದರೂ ಅವುಗಳಲ್ಲಿ ನಿಂದನೀಯವಾದ ಪೌರೋಹಿತ್ಯ ಸ್ವಾರ್ಥವು ಭಯಂಕರವಾಗಿ ಕಾಣುವುದು. ಇದರಿಂದಲೇ ಜ್ಞಾನಕ್ಕೆ ಎಲ್ಲೆ ಕಟ್ಟಲ್ಪಟ್ಟಿತು. ಮಾನುಷತ್ವಕ್ಕೆ ಬಂಧನಗಳೂ ಕಲ್ಪಿಸಲ್ಪಟ್ಟವು. ಯಾವ ನ್ಯಾಯವೂ ಸಮಾನತೆಯೂ ಎಲ್ಲಾ ತತ್ವಗಳಿಂದ ಮಾನಿಸಲ್ಪಟ್ಟವೆಯೊ ಅವುಗಳೇ ಹಿಂದೂ ಮತದ ಆಚಾರ ರಚನೆಗಳಿಂದ ಬಹಿಷ್ಕೃತವಾದುವು.

ವಿಧವಾ ಪುನರ್ವಿವಾಹದ ಪ್ರಶ್ನೆಯಾದರೂ ಇಂತಹ ಸಮಾನತೆಯನ್ನು ಅಲ್ಲಗಳೆಯುವ ಆಚಾರವಾಗಿರುತ್ತದೆ. ದಂಪತಿ ಜೀವನವು ಪವಿತ್ರವಾಗಿರಬೇಕೆಂಬುದರಲ್ಲಿ ಯಾರೂ ಅನ್ಯಥಾ ಹೇಳಲಾರರು. ಆದರೆ ಆ ಪವಿತ್ರತೆಯು ಸ್ತ್ರೀಗೆ ಎಷ್ಟೋ ಪುರುಷನಿಗಾದರೂ ಅಷ್ಟೇ ಎಂದು ಹಿಂದೂಮತದ ತತ್ವಗಳು ಕಂಠೋಕ್ತವಾಗಿ ಸಾರುವುವಾದರೂ, ಪೌರೋಹಿತ್ಯ ವಿಧಾನವು ಪುರುಷನ ವಿಶೃಂಖಲತೆಯನ್ನು ಪೋಷಿಸುತ್ತಲೂ, ಸ್ತ್ರೀಯನ್ನು ಶಾಸಿಸುತ್ತಲೂ ಇದೆ. ಇದರಿಂದಲೇ ಮೆಲ್ಲನೆ ಹಿಂದೂ ಗೃಹಜೀವನವು ಅಸಾರವಾಯಿತೆನ್ನಲು ಸಂದೇಹವಿಲ್ಲ. ಪೌರೋಹಿತ್ಯ ವಿಧಾನವು ಹೇಗಿದ್ದರೂ, ದಂಪತಿ ಜೀವನವು ಸ್ತ್ರೀಪುರುಷನ ಮಾನಸಿಕತೆಯ ಮೇಲೆಯೇ ಹೊಂದಿರುವುದರಿಂದ, ಗಂಡಹೆಂಡಿರು ಸುಖವಾಗಿರುವ ವರೆಗೆ ಯಾವ ಬಾಧೆಯೂ ಇರುವುದಿಲ್ಲ. ಆದರೆ ಹೆಂಡತಿಯು ಸತ್ತ ಕ್ಷಣವೇ ಗಂಡನಿಗೆ ಪುನರ್ವಿವಾಹಕ್ಕೆ ಒಪ್ಪಿಗೆ ಕೊಡುತ್ತಲೂ, ಗಂಡ ಸತ್ತ ಕೂಡಲೇ ಹೆಂಡತಿಗೆ ಆಜೀವ ಸನ್ಯಾಸವನ್ನು ಬಲಾತ್ಕಾರ [illegible]

ಪೌರೋಹಿತ್ಯ ಆಚಾರವು [illegible] ಗಳಲ್ಲಿ [illegible] ಸನ್ಯಾಸವು ನಿಸರ್ಗವಿರುದ್ಧವಾದುದೆಂದು ಅನುಭವದಿಂದ ತಿಳಿಯಲಾಯಿತು; ಮುಂಡನ ಮೊದಲಾದ ರೂಪ-ಅಪಹರಣದಿಂದಲಾದರೂ ತರುಣಿಯ ಹೃದಯದೊಳಗಿನ ನಿಸರ್ಗದ ಕರೆಯನ್ನು ದಮನಿಸಲಾಗುವುದಿಲ್ಲವೆಂದು ತಿಳಿಯಲಾಯಿತು. ಇದರಿಂದಲಾದರೂ ಹಿಂದೂಸಮಾಜವು ಪಾಠವನ್ನು ಕಲಿಯಬೇಕಿತ್ತು. ಆದರೆ ಪೌರೋಹಿತ್ಯ ಸ್ವಾರ್ಥದ ಪಾತಕೀಕೃತ್ಯವೆಯು ಇದರಿಂದ ಇನ್ನೂ ಉಕ್ಕೇರಿತು. ಸಹಗಮನದ ನೂತನ ಶುಷ್ಕ ಸಂಹಿತೆಯ ವಿಧಾನವು ಕಂಡುಹಿಡಿಯಲ್ಪಟ್ಟಿತು. ಪತಿಜೀವನದಲ್ಲಿ ಸಂಪೂರ್ಣ ದಾಸ್ಯ, ಪತಿನಷ್ಟದಲ್ಲಿ ರೂಪದ ಅಪಹರಣ, ಅದು ಸಾಲದೆ ಸಾಯುವ ತನಕ ಸನ್ಯಾಸ ದೀಕ್ಷೆ; ಇಷ್ಟು ವಿಧಾನವೂ ಸಾಕಾಗದೆ ಸಹಗಮನದ ಆಚಾರ. ಹಿಂದೂಮತದಲ್ಲಿ ಸ್ತ್ರೀಸಮಾಜವನ್ನು ದಬ್ಬಾಳಿಸಲು ಮಾಡಿದ ಈ ವಿಧಾನಗಳ ಚರಿತ್ರೆಯು ಹಿಂದೂ ಸಮಾಜದ ಕಾನೂನು ವಿಧಾಯಕರ ಮೇಲಿನ ಅತ್ಯಂತ ತೀಕ್ಷ್ಣವಾದ ಟೀಕೆಯಾಗಿರುತ್ತದೆ.

ಶಾಸ್ತ್ರಗಳಲ್ಲಿ ಏನು ಹೇಳಿದೆಯೆಂದು ಹುಡುಕಾಡಿ ವಾದ ವೆಬ್ಬಿಸುವುದು ನಮ್ಮ ಕರ್ತವ್ಯವಲ್ಲ. ಶ್ರುತಿಸ್ಮೃತಿಗಳೊಳಗಿನ ವೇದೋಪನಿಷದುಗಳೊಳಗಿನ ಶಬ್ದಗಳ ಅಕ್ಷರಗಳನ್ನು ಎತ್ತಿ ಹಿಡಿದು ಶಾಸ್ತ್ರಸಿದ್ಧಾಂತವನ್ನು ಮಾಡುವುದರಲ್ಲಿ ನಮಗೆ ವಿಶ್ವಾಸವಿರುವುದಿಲ್ಲ. ಆದರೆ ಯಾವುದೊಂದು ಮತತತ್ವವಾಗಲಿ, ಮತಾಚಾರವು ಸಮಾಜದ ಹಿತಚಿಂತನೆಯಿಂದ ಮಾಡಲ್ಪಟ್ಟಿಯದೆಂದೂ, ಅಂತಹ ಹಿತವನ್ನು ಕಾಣದ ಮತಾಚಾರಗಳು ಮಾನನೀಯವಲ್ಲವೆಂದೂ ನಾವು ಧಾರಾಳವಾಗಿ ಹೇಳಬಲ್ಲೆವು. ಈಗಿನ ಮತಾಚಾರಗಳ ಸುಧಾರಣೆಗಳನ್ನು ನಾವು ಕೇಳಿಕೊಳ್ಳುವಾಗ ಇದೇ ಮಾನದಿಂದಲೇ ನಾವು ತರ್ಕಿಸಲೆಳಸುವೆವು.

ಹಿಂದೂಮತ ತತ್ವಗಳಲ್ಲಿ ಸನ್ಯಾಸಕ್ಕೆ ಎಷ್ಟೋ ಮಹತ್ವವಿದೆ. ಇಂತಹ ಪವಿತ್ರ ಸನ್ಯಾಸವನ್ನು ಪಾಲಿಸಲು ಸಾಮಾನ್ಯರಿಂದ ಸಾಧ್ಯವೇ ಇಲ್ಲವೆಂದು ಹಿಂದೂ ಮತತತ್ವಗಳೇ ಒಪ್ಪುತ್ತಿವೆ. ವಿಶ್ವಾಮಿತ್ರಾದಿಗಳ ತಪೋಭಂಗ ಮೊದಲಾದ ಪುರಾಣೇತರ ಕಥೆಗಳೂ ಈ ಸನ್ಯಾಸದ ಸಾಮಾನ್ಯರ ಮಟ್ಟಿಗಿನ ಅನೈಸರ್ಗಿಕತೆಯನ್ನು ಸಾರುತ್ತಿವೆ. ಅಂತಹ ಕಠಿಣ ಸನ್ಯಾಸವನ್ನೇ ಹಿಂದೂ ಸಾಂಪ್ರದಾಯಗಳು ಸ್ತ್ರೀಯರ ಮೇಲೆ ವಯೋಭೇದವನ್ನು ನೋಡದೆ ಹೊರಿಸುತ್ತಿವೆ.

ವಿಧವಾ ಜೀವನವು ಹಿಂದೂಸ್ಥಾನದಲ್ಲಿ ಯಾವ ರೀತಿಯಿಂದ ನಡೆಯುತ್ತಿದೆಯೆಂದು ಸಾಮಾನ್ಯವಾಗಿ ಎಲ್ಲರಿಗೂ ತಿಳಿಯದೇನು. ಪ್ರೌಢ ವಯಸ್ಸಿನಲ್ಲಿ ವಿಧವೆಯಾದವರು ಹೆಚ್ಚಾಗಿ ಪವಿತ್ರ ಜೀವನವನ್ನೇ ಸಾಗಿಸುವರು. ಈ ಮಟ್ಟಿಗೆ ಹಿಂದೂ ವಿಧವೆಯ ಪಾವಿತ್ರ್ಯವನ್ನು ಸರಿಗಟ್ಟುವ ಸ್ತ್ರೀಯರು ಪ್ರಪಂಚದಲ್ಲಿ ಇನ್ನೆಲ್ಲಿಯೂ ಇಲ್ಲ. ಆದರೆ ಸಂಸಾರವೇನೆಂದು ತಿಳಿಯುವ ಮೊದಲೇ ವಿಧವೆಯಾದವರ ವಿಷಯವಾಗಿ ಇಷ್ಟು ಧೈರ್ಯದಿಂದ ಹೇಳಬರುವಂತಿಲ್ಲ. ತಾರುಣ್ಯದ ಕರೆಯನ್ನು ಮತದ ಆಚಾರಗಳು ಬಂಧಿಸಲಾರವು. ಈ ಕಾರಣವಾಗಿ ಎಷ್ಟೋ ಹಿಂದೂ ಗೃಹಗಳಲ್ಲಿ ವ್ಯಭಿಚಾರಗಳು ನಡೆಯುತ್ತಲೇ ಇರುತ್ತವೆ.

ಈ ವಿಷಯವಾದ ಎಷ್ಟೋ ದುಃಖಾತ್ಮಕ ಘಟನೆಗಳನ್ನು ನಾವು ಅಲ್ಲಲ್ಲಿ ಕಾಣುವೆವು. ಎಷ್ಟೋ ಕಡೆಗಳಲ್ಲಿ ಬಾಲಹತ್ಯೆ ಮೊದಲಾದ ಅಸತ್ಕೃತ್ಯಗಳು ನಡೆದೂ, ಅವುಗಳಲ್ಲಿ ಕೆಲವು ಪೋಲೀಸ್ ಕೈಯೊಳಗೆ ಹೋಗಿ ತನ್ನ ಪತನವನ್ನು ಮುಚ್ಚಿಡಲೆಳಸಿದ ಬಾಲಿಕೆಯು ಬಹಿರಂಗ ತಿರಸ್ಕಾರಕ್ಕೂ ಶಿಕ್ಷೆಗೂ ಪಾತ್ರವಾಗಿ ತನ್ನ ಇಡೀ ಜೀವಮಾನವನ್ನೇ ಕಳಕೊಂಡುದೂ, ಸರ್ವಸಾಮಾನ್ಯವಾಗಿ ತಿಳಿದ ವಿಷಯ. ತರುಣ ವಯಸ್ಸಿನ ಹುಡುಗಿಯರನ್ನು ಬರೇ ಮತಾಚಾರದಿಂದ ಸನ್ಯಾಸಕ್ಕೆ ಪ್ರೇರಿಸಲು ಪ್ರಯತ್ನಿಸುವುದರಿಂದ ಉಂಟಾಗುವ ಅನರ್ಥಗಳು ಇವೇಯಾಗಿವೆ. ಇಂತಹ ಅನರ್ಥವು ಮಹಾತ್ಮಾಜೀಯವರ ಪವಿತ್ರ ಆಶ್ರಮದಲ್ಲಿಯೂ ಉಂಟಾದುದನ್ನು ನೋಡಿದರೆ, ಮತಾಚಾರಕ್ಕಿಂತಲೂ ಹೆಚ್ಚಾಗಿ ಮಾನಿಸಬೇಕಾದ ನಿಸರ್ಗವೊಂದಿದೆ ಎಂದು ತಿಳಿದುಬರುವುದು.

ತರುಣ ಸ್ತ್ರೀಯರ ಅಭಿಪ್ರಾಯವು ಈ ವಿಷಯದಲ್ಲಿ ಹೆಚ್ಚೆಚ್ಚು ಸ್ಪಷ್ಟವಾಗುತ್ತಾ ಬರುತ್ತಿದೆ. ವಿಧವೆಯಾಗಿ ಏಕಾಂತವನ್ನು ಸಹಿಸಲಾರದೆ ಮದುವೆಯಾಗಲೆಂದು ಮುಂದಾಗುವ ವಿಧವೆಯರ ಸಂಖ್ಯೆಯು ಹೆಚ್ಚುತ್ತಾ ಬರುತ್ತಿದೆ. ಹಿಂದೂ ಸಮಾಜವು ಇಂತಹರನ್ನು ದೂರ ಮಾಡಿ ಸಮಾಜ ವಿಶೃಂಖಲತೆಯನ್ನು ಹೆಚ್ಚಿಸುವ ಬದಲಿಗೆ, ತನ್ನ ಆಚಾರಗಳನ್ನೇ ತಿದ್ದುಪಡಿಗೊಳಿಸಿದರೆ ಸಮಾಜಕ್ಕೆ ಹೆಚ್ಚಿನ ಹಿತವಿದೆ.

ವಿದೇಶ ವರ್ತಮಾನ.

— [illegible] ಆದರೆ [illegible] ಇಲ್ಲ.

— ನೋರ್ವೆ ದೇಶದ [illegible] ವರುಷ ಪ್ರಾಯದ ಯುವಕನೊಬ್ಬನು ಸಣ್ಣದೊಂದು ಹದಿನಾರು [illegible] ಮೋಟಾರ ಬೋಟಿನಲ್ಲಿ ಮಹಾಸಾಗರವನ್ನು ದಾಟಲು ಹೊರಟಿರುವನಂತೆ.

— ನೂರು ಮಂದಿ ಪ್ರಯಾಣಿಕರು ಕುಳಿತುಕೊಳ್ಳಬಹುದಾದಂತಹ ಒಂದು ವಿಮಾನವು ಜರ್ಮನಿಯಲ್ಲಿ ತಯಾರಾಗುತ್ತಿದೆ. ಹದಿನಾರು ಇಂಜಿನುಗಳ ಸಹಾಯದಿಂದ ಅದು ನಡೆಯುತ್ತದೆ. ಅದರಲ್ಲಿ ಮೂರು ಒಂದರಮೇಲೊಂದರಂತೆ ವಿಭಾಗಗಳಿವೆ. ಅತಿಯ [illegible] ವಿಭಾಗದಲ್ಲಿ ಪೆಟ್ರೋಲು ಮೊದಲಾದವುಗಳನ್ನು [illegible] ಇಡುವರು. ನಡುವಿನದರಲ್ಲಿ ಪ್ರಯಾಣಿಕರು ಕುಳಿತುಕೊಳ್ಳುವರು. ಮೇಲಿನದರಲ್ಲಿ ಇಂಜಿನು ಇರುವವು.

— ಕಳೆದ ಶನಿವಾರ ಲಂಡನಿನಿಂದ ಹಿಂದೂಸ್ಥಾನಕ್ಕೆ ಹೊರಟ ಟಪ್ಪಾಲು ವಿಮಾನದಲ್ಲಿ ೨೫ ಸಾವಿರ ಪತ್ರಗಳಿರುವವು. ಇವುಗಳ ಹೊರತು ಹದಿನಾಲ್ಕು ಮಂದಿ ಪ್ರಯಾಣಿಕರೂ ಇರುವರು.

— ಯುನೈಟೆಡ್ ಸ್ಟೇಟ್ಸಿನಲ್ಲಿ ಮದ್ಯಪಾನ ನಿಷೇಧದ ಸಲುವಾಗಿ ಕೆಲಸಮಾಡುವವರಿಬ್ಬರು ಹೆರಿಸನೆಂಬ ರೈತನ ಮನೆಗೆ ಹೋಗಿ ಆತನ ಮನೆಯಲ್ಲಿ ಮದ್ಯವಿರುವುದೇ ಎಂದು ಹುಡುಕುವಾಗ ಅವಸರದಿಂದ ಹೆರಿಸನನ್ನೂ ಆತನ ಹೆಂಡತಿಯನ್ನೂ ಕೊಂದುಹಾಕಿದರು. ತಾವು ತಮ್ಮಲ್ಲಿದ್ದ ಮದ್ಯದ ವಿಷಯವಾಗಿ ತಿಳಿಸಿ, ಕ್ಷಮೆ ಬೇಡಲು ಹೋಗುವಾಗ ತಮ್ಮನ್ನು ಕೊಂದುಹಾಕಿದರೆಂದು ಹೆರಿಸನೂ ಆತನ ಹೆಂಡತಿಯೂ ಸಾಯುವಾಗ ಹೇಳಿರುವರು. ವಾರಾಂಟು ಸಹಾಯವಿಲ್ಲದೆ ಇವರಿಬ್ಬರೂ ಮದ್ಯದ ಶೋಧನಾರ್ಥವಾಗಿ ಹೊರಟಿದ್ದರು.

— ಅಮಾನುಲ್ಲಾ ಮತ್ತು ಸೋರಿಯಾ ರಾಣಿಯವರು ಮಾಸ್ಕೋಗೆ ಬಂದು ತಲುಪಿರುವರು. ಅಲ್ಲಿನ ಅಫಘಾನ ಪ್ರಜೆಗಳು ಇವರನ್ನು ಸ್ವಾಗತೀಕರಿಸಿದರು. ಅಲ್ಲಿ ಕೆಲವು ದಿನ ಉಳಕೊಂಡು ತದನಂತರ ಅವರು ರೋಮಿಗೆ ಹೊರಟುಹೋಗುವರು. ಮಾಸ್ಕೋನಿವಾಸಿಯವರು ಅವರಿಗೆ ಸ್ವಾಗತವನ್ನು ಸೂಚಿಸಿ ಸಂತೋಷದಿಂದ ತಂತಿಯನ್ನು ಬಿಟ್ಟಿರುವರಂತೆ.

— ಹಂಗೇರಿಯಾದ [illegible] ಎಂಬ ಸಣ್ಣ ಹಳ್ಳಿಯ ಶಾಲೆಯ ಉಪಾಧ್ಯಾಯನು ಮೂವತ್ತು ಮಂದಿ ವಿದ್ಯಾರ್ಥಿಗಳನ್ನು ಕರೆದು ಬುಡಾಪೆಸ್ಟ್ ಎಂಬ ದೊಡ್ಡ ಪಟ್ಟಣವನ್ನು ನೋಡಬರಲು ಹೊರಟನು. ರೈಲು ಹತ್ತುವಾಗ ಒಬ್ಬ ಹುಡುಗನು [illegible] ತಡವಾಗಿ ಹಿಂದಕ್ಕೆ ಉಳಿದನು. ಆ ಹುಡುಗನು ಬರುವಾಗ ರೈಲು ಬಿಟ್ಟಿದ್ದಿತು. ಉಪಾಧ್ಯಾಯನು ಬುಡಾಪೆಸ್ಟ್ ಪಟ್ಟಣವನ್ನು ವಿಶೇಷವಾಗಿ ಹೊಗಳಿ, ವಿದ್ಯಾರ್ಥಿಗಳನ್ನು [illegible] ಅದನ್ನು ನೋಡಿಯೇ ತೀರಬೇಕೆಂಬ ಆಶೆಯು ಬಲವಾಗಿ ಹುಡುಗನು ಓಡತೊಡಗಿದನು. ಪ್ರಾತಃಕಾಲ ನಾಲ್ಕು ಘಂಟೆಯ ಸಮಯ ಹೊರಟ ಬಾಲಕನು ಮರುದಿನ ರಾತ್ರಿ ಎಂಟು ಘಂಟೆಯ ಹೊತ್ತಿಗೆ ಹೊರಟ ಸ್ಥಳದಿಂದ ೧೨೦ ಮೈಲುಗಳ ದೂರದಲ್ಲಿದ್ದ ತನ್ನ ಸಂಗಾತಿಗಳನ್ನು ಸೇರಿದನು. ೧೨೦ ಮೈಲುಗಳನ್ನು ಬರೇ [illegible] ಘಂಟೆಗಳೊಳಗೆ ಓಡಿದ [illegible] ಚಿಕ್ಕ ಬಾಲಕನ ಕಾರ್ಯವು ಪ್ರಶಂಸಾರ್ಹವಾದುದು.

— ಅರಸರು ಆಸ್ಪತ್ರೆಯಲ್ಲಿ ಬಿಟ್ಟು ಗುಣಹೊಂದಿದುದರ ಸಲುವಾಗಿ, ಕಳೆದ ಆದಿತ್ಯವಾರ ಬ್ರಿಟನಿನ ಎಲ್ಲಾ ಕಡೆಗಳಲ್ಲಿಯೂ ಸಂತೋಷ ಸಮಾರಂಭವನ್ನು ಆಚರಿಸಲಾಯಿತು.

— ನ್ಯೂಯೋರ್ಕಿನ ಒಬ್ಬ ವಿಜ್ಞಾನ ಶಾಸ್ತ್ರಜ್ಞನು ಸತ್ತ ಮೇಲೆ ಮನುಷ್ಯನನ್ನು ಬದುಕಿಸುವ ಬಗ್ಗೆ ಶೋಧಗಳನ್ನು ನಡೆಸುತ್ತಿರುವನು. ಒಬ್ಬ [illegible] ಆತನ ಮಗನು [illegible] ಸತ್ತಿದ್ದನು. ಆತನು ಸತ್ತ [illegible] ಕೆಲವು ನಿಮಿಷಗಳ ವರೆಗೆ ಆತನು ಬದುಕಿರುವಂತೆ ಮಾಡಿ [illegible] ಈ ಬಗ್ಗೆ ಪ್ರಯತ್ನಿಸುತ್ತಿರುವನು.

— ಇನ್ನು ಮುಂದೆ ತಯಾರಿಸುವ [illegible] ಫಿಲ್ಮುಗಳಲ್ಲಿ [illegible] ಅಭಿವೃದ್ಧಿಯಾಗುವದು. [illegible] ಮಾಡುವರು.

ಏಪ್ರಿಲ್ [illegible]ದಲ್ಲಿ ಇಂಗ್ಲಾಂಡಿನಿಂದ ಕರಾಚಿಗೆ ಮಧ್ಯದಲ್ಲಿ ಎಲ್ಲಿಯೂ ನಿಲ್ಲದೆ ಹಾರಿದ ಜೋನ್ಸ್ ವಿಲಿಯಮ್ಸ್ ಎಂಬಾತನು ಸಧ್ಯದಲ್ಲಿಯೇ [illegible] ಮಧ್ಯದಲ್ಲೆಲ್ಲಿಯೂ ನಿಲ್ಲದೆ ಹಾರಲಿರುವನು.

— [illegible] ಒಂದು ಹೊಸ ಕಾನೂನನ್ನು ಮಾಡಿರುವನು. ತನ್ನ ಪ್ರಜೆಗಳು ಮನೆಯಲ್ಲಿಯೇ ತಯಾರಿಸಿದ ವಸ್ತ್ರದಿಂದ ಮಾಡಿದ ಉಡುಪನ್ನು ಧರಿಸಬೇಕೆಂದು ಅವನ ಆಜ್ಞೆ. ಮತ್ತು ಎಲ್ಲರೂ ಒಂದೇ ತರದ ಉಡಿಗೆಯನ್ನು ಉಡಬೇಕಂತೆ. ಮನೆ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಇದು ತುಂಬಾ ಸಹಾಯಕ.

— ಈಗ ಇಟೆಲಿಯಲ್ಲಿರುವ ವಿಮಾನಗಳು ಇಂಗ್ಲಾಂಡಿನಲ್ಲಿರುವ ವಿಮಾನಗಳಿಗಿಂತ ಎಷ್ಟೋ ಹೆಚ್ಚಾಗಿವೆ. ಸಧ್ಯದಲ್ಲಿಯೇ ಇಟೆಲಿಯಲ್ಲಿ ಇನ್ನೂ ಹಲವು ವಿಮಾನಗಳನ್ನು ತಯಾರಿಸಬೇಕೆಂದು ಯೋಚಿಸಿರುವರು. ಆಗ ಇಟೆಲಿಯು ವಿಮಾನಗಳ ಮಟ್ಟಿಗೆ ಇಡೀ ಜಗತ್ತಿನಲ್ಲಿ ಮೊದಲನೆಯ ರಾಜ್ಯವಾಗುವದು. ೧೯೩೧ನೇ ಇಸವಿಯೊಳಗೆ ಈಗ ಯೋಚಿಸಿರುವ ವಿಮಾನಗಳ ತಯಾರಿಯು ಇಟೆಲಿಯಲ್ಲಿ ಪೂರ್ಣವಾಗುವದು.

— ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯ ಚೆಯರ್‌ಮೆನರಾದ ಮಿ. ಮೆಕ್ಸ್‌ಟನರವರಿಗೆ ಚುನಾವಣೆಯ ಖರ್ಚು ಬರೇ [illegible] ಪವನುಗಳು ಮಾತ್ರ ತಗಲಿದ್ದುವು. ಇತರರಿಗೆ ಸಾವಿರಗಟ್ಟಲೆ ಪವನುಗಳು ಖರ್ಚಾಗುವಾಗ ಇವರ ಖರ್ಚು ಇಷ್ಟು ಕಡಿಮೆಯಾದುದು ಆಶ್ಚರ್ಯವೆನ್ನಿಸುವಂತಾದುದಾದರೂ ಕಾರಣವು ಬೇರೆಯಲ್ಲ. ಇತರರಂತೆ ಅವರು ಮುದ್ರಣದ ಬಗ್ಗೆ ಹಣವನ್ನು ಖರ್ಚುಮಾಡದೆ ಬಹಿರಂಗವಾದ ಸ್ಥಳದಲ್ಲಿ ಭಾಷಣಗಳನ್ನು ಖರ್ಚಿಲ್ಲದೆ ಮಾಡುತ್ತಾ ತನ್ನ ಕಾರ್ಯವನ್ನು ಸಾಧಿಸಿಕೊಂಡರು.

ಸ್ವದೇಶ ವರ್ತಮಾನ.

— ಕವಿ ರವೀಂದ್ರನಾಥ ಟಾಗೋರರವರು ಕಳೆದ ಶುಕ್ರವಾರ ಅಮೇರಿಕೆಗೆ ಹೊರಟರು. ಅವರನ್ನು ಅಲ್ಲಿ ಚೆನ್ನಾಗಿ ಸ್ವಾಗತೀಕರಿಸಿದರು. ಕವಿ ರವೀಂದ್ರರು ತನ್ನ ಆರೋಗ್ಯವನ್ನು ಬಹಳವಾಗಿ ಅಭಿವೃದ್ಧಿಪಡಿಸಿ ಕೊಂಡಿರುವರು.

— ಬರಿಸಾಲದ ಸೆರೆಮನೆಯಲ್ಲಿ ಶ್ರೀ ಸತೀಂದ್ರನಾಥ ಸೇನರೆಂಬವರು ಕಳೆದ ೫೫ ದಿನಗಳಿಂದ ಉಪವಾಸವನ್ನಾಚರಿಸುತ್ತಿರುವರು. ಒಂದೆರಡು ವಾರಗಳಿಂದ ಇದೇ ರೀತಿ ಇನ್ನು ಹತ್ತು ಹದಿನೆರಡು ಮಂದಿ ಕೈದಿಗಳು ಆಹಾರವನ್ನು ತೆಗೆದುಕೊಳ್ಳದೆ ಇರುವರು. ಸತೀಂದ್ರನಾಥ ಸೇನರೊಡನೆ ಭೇಟಿಯನ್ನು ಪಡೆಯಲು ಅಲ್ಲಿನ ಧುರೀಣರಿಗೆ ಅನುಮತಿಯು ದೊರೆತಿಲ್ಲ.

— ನಾಗಪುರ ಕಾಂಗ್ರೆಸ್ ಕಮಿಟಿಯವರು ವಿದೇಶಿ ವಸ್ತ್ರ ಬಹಿಷ್ಕಾರವನ್ನು ಚೆನ್ನಾಗಿ ನಡೆಯಿಸುತ್ತಿರುವರು. ಅವರು ವಿದೇಶಿ ವಸ್ತ್ರವನ್ನು ಕೊಂಡು ಹಾಕಿ ಖಾದಿ ವಸ್ತ್ರವನ್ನು ಮಾರುತ್ತಿರುವರು. ಸ್ವದೇಶಿಯನ್ನೇ ಬಳಕೆಗೆ ತರುವ ಸಲುವಾಗಿ ಕಳೆದ ಎರಡು ತಿಂಗಳುಗಳಿಂದ ಅಲ್ಲಿ ಹಲವು ಸಭೆಗಳು ನಡೆದುವು.

— ಬುರ್ದ್ವಾನ್ ಎಂಬಲ್ಲಿ ಒಂದೆರಡು ದಿನಗಳ ಹಿಂದೆ ೨೫ ಮಂದಿ ಯಾತ್ರಿಕರನ್ನು ಕೊಂಡೊಯ್ಯುತ್ತಿದ್ದ ಒಂದು ಮೋಟಾರ ಬಸ್ಸು ಒಂದು ರೈಲ್ವೆ ಇಂಜಿನಿಗೆ ಢಿಕ್ಕಿ ಹೊಡೆದು ಹದಿಮೂರು ಮಂದಿಗೆ ಜಖಮುಂಟಾಗಿರುತ್ತದೆ.

— ಕಲಕತ್ತೆಯಲ್ಲಿ ಪ್ರತಿಮಾದಾಸಿ ಎಂಬ ೨೪ ವರುಷ ಪ್ರಾಯದ ವಿಧವೆಯನ್ನು ಅವಳ ಗಂಡನ ಅಣ್ಣನು ಸುಟ್ಟುಕೊಂದಿರುವನು. ಅವಳ ವಸ್ತ್ರಗಳನ್ನು ಚಿಮಣಿ ಎಣ್ಣೆಯಿಂದ ತೊಯಿಸಿ, ಅವಳನ್ನು ಒಂದು ಕೋಣೆಯಲ್ಲಿ ಹಾಕಿ ಅಲ್ಲಿ ಅವಳ ವಸ್ತ್ರಗಳಿಗೆ ಬೆಂಕಿಯನ್ನು ಕೊಟ್ಟನಂತೆ. ಈ ಕುರಿತು ಮೊಕದ್ದಮೆಯಾಗಿ ವಿಚಾರಣೆಯಾಗುವಾಗ, ಈ ವಿಧವೆಯು ಅಲ್ಲಿಯ ಒಬ್ಬ ಜಮೀನುದಾರನನ್ನು ಪ್ರೀತಿಸುತ್ತಿದ್ದಳೆಂದು ತಿಳಿದು ಬಂತು. ಅವರು ಪರಸ್ಪರ ಬರೆದುಕೊಂಡ ಪತ್ರಗಳನ್ನು ಕೋರ್ಟಿನಲ್ಲಿ ಓದಲಾಯಿತು. ಅವಳಿಗೆ ಮನೆಯನ್ನು ಬಿಟ್ಟು ಹೋಗಬೇಕೆಂದು ಆಶೆ ಇದ್ದಿತೆಂದು ಆ ಪತ್ರಗಳಿಂದ ವ್ಯಕ್ತವಾಗುತ್ತಿತ್ತು.

— ಕಲಕತ್ತೆಯ ಸಮೀಪವಿರುವ ಒಂದೆರಡು ನೂಲಿನ ಗಿರಣಿಗಳಲ್ಲಿ ಕೆಲಸದ ಸಮಯವನ್ನು ಹೆಚ್ಚಿಸಿದರೆಂದು, ಕೆಲಸಗಾರರು ಮುಷ್ಕರವನ್ನು ಆಚರಿಸಿದರು. ೫೫ ತಾಸುಗಳ ೫ ದಿನಗಳ ಬದಲು ೬೦ ತಾಸುಗಳ ೬ ದಿನಗಳನ್ನಾಗಿ ಅಧಿಕಾರಿಗಳು ಬದಲಾವಣೆಯನ್ನು ಮಾಡಿದ್ದರು. ಮುಷ್ಕರ ಉಂಟಾದರೂ ಯಾವತರದ ಗಲಭೆಯೂ ಉಂಟಾಗಲಿಲ್ಲ.

— ಮಹಾತ್ಮಾಜಿಯವರ ಕುಮೋನ ಪ್ರಾಂತ್ಯದ ಸಂಚಾರವು ಪೂರ್ಣ ಯಶಸ್ವಿಯಾಗಿ ನಡೆಯಿತಾದರೂ, ಅಲಮೋರಾದಲ್ಲಾದ ಒಂದು ಅವಘಡವು ಮಾತ್ರ ಕಳಂಕವನ್ನುಂಟುಮಾಡಿರುವುದು. ನೈನಿತಾಲ ಮತ್ತು ಅಲಮೋರದಲ್ಲಿ ಒಟ್ಟು ೨೨,೫೦೦ ರೂಪಾಯಿಗಳು ಸಂಗ್ರಹವಾಗಿರುತ್ತವೆ. ಸಂಯುಕ್ತ ಪ್ರಾಂತದ ಸರಕಾರದ ಕಡೆಯವರ ಗುಪ್ತ ಪೋಲೀಸರು ಮಹಾತ್ಮಾಜಿಯವರನ್ನು ಪ್ರತಿಯೊಂದು ಕಡೆಗಳಲ್ಲಿಯೂ ಅನುಸರಿಸಿ ಅವರ ಚರ್ಯೆಗಳೆಲ್ಲವನ್ನು ತಿಳಕೊಂಡಿದ್ದರು.

— ವಿದೇಶಿ ವಸ್ತ್ರಬಹಿಷ್ಕಾರದ ಸಲುವಾಗಿ ಪೇಶಾವರದಲ್ಲಿ ಒಂದು ಬಹಿರಂಗವಾದ ಸಭೆ ಜರಗಿತು. ವಿದೇಶಿ ವಸ್ತ್ರವನ್ನು ತ್ಯಜಿಸಿ ಖಾದಿಯನ್ನೇ ಸ್ವೀಕರಿಸಬೇಕೆಂಬ ನಿರ್ಣಯವಾಯಿತು. ಇನ್ನು ವ್ಯಾಪಾರಿಗಳು ವಿದೇಶಿ ವಸ್ತ್ರಗಳನ್ನು ಮಾರುವುದನ್ನು ನಿಲ್ಲಿಸಿ, ಸಾಧ್ಯವಿರುವಷ್ಟರ ಮಟ್ಟಿಗೆ ಸ್ವದೇಶಿ ವಸ್ತ್ರಗಳ ವ್ಯಾಪಾರವನ್ನೇ ಮಾಡಬೇಕೆಂದೂ ನಿರ್ಣಯವಾಯಿತು.

— ಶ್ರೀ ಭಗತ್‌ಸಿಂಗನು ಉಪವಾಸವನ್ನು ಆಚರಿಸಲು ಪ್ರಾರಂಭಿಸಿ ಕಳೆದ ಸೋಮವಾರಕ್ಕೆ ೨೨ ದಿನಗಳಾದುವು. ಮೂಗಿನ ಮೂಲಕ ಆತನಿಗೆ ಆಹಾರವನ್ನು ಕೊಡಬೇಕೆಂದುಮಾಡಿದ ಬಲಾತ್ಕಾರವು ನಿಷ್ಪ್ರಯೋಜಕವಾಯಿತು. ಭಗತ್‌ಸಿಂಗನ ತಂದೆಯು ಮಗನ ಭೇಟಿಯನ್ನು ಪಡೆಯಲು ಬಂದಿದ್ದರು. ಅವರೊಂದಿಗೆ ಡೆಪ್ಯುಟಿ ಜೈಲರನೂ ಹಾಜರಿದ್ದನು. ತಂದೆಯನ್ನು ನೋಡಿದೊಡನೆ ಭಗತ್‌ಸಿಂಗನು ಎದ್ದುನಿಲ್ಲಲು ಪ್ರಯತ್ನಿಸಿದಾಗ ಸಾಧ್ಯವಾಗದೆ ಧೊಪ್ಪನೆ ಬಿದ್ದುಬಿಟ್ಟನು. ಏಕೆಂದರೆ ಆತನು ಬಹು ಕ್ಷೀಣನಾಗಿರುವನು. ಮಿ॥ ಸೌಂಡರ್ಸನ ಕೊಲೆಯ ಸಂಬಂಧವಾಗಿ ಭಗತ್‌ಸಿಂಗನನ್ನು ಲಾಹೋರಿಗೆ ಕರೆದೊಯ್ದರು. ಆತನ ಸುತ್ತಲೂ ಅಸಂಖ್ಯಾತ ಪೋಲೀಸರಿದ್ದರು.

— ಮಹಾತ್ಮಾಜಿಯವರು ಸಪ್ಟಂಬರ ೨ನೇ ತಾರೀಕಿನ ಸುಮಾರಿಗೆ ತನ್ನ ಸಂಯುಕ್ತಪ್ರಾಂತದ ಸಂಚಾರವನ್ನು ಪ್ರಾರಂಭಿಸುವರು.

— ಸದ್ಯದಲ್ಲಿಯೇ ಲೋರ್ಡ ಪೀಲರವರು ಹಿಂದುಸ್ಥಾನವನ್ನು ಸಂದರ್ಶಿಸಲಿರುವರು.

— ಮುಂಬಾಯಿಯ ಡೆಪ್ಯುಟಿ ಪೋಲೀಸ್ ಇನ್ಸ್‌ಪೆಕ್ಟರನೊಬ್ಬನು ಸರಕಾರಕ್ಕೆ ಸಂಬಂಧಿಸಿದ ೭೫೦ ರೂಪಾಯಿಗಳ ವಿಷಯವಾಗಿ ವಂಚನೆಯನ್ನು ನಡೆಸಿದುದರ ಬಗ್ಗೆ ಆತನಿಗೆ ಒಂದು ದಿನದ ಸಾದಾ ಸಜೆಯೂ ೨೫೦ ರೂಪಾಯಿ ಜುಲುಮಾನೆಯೂ ವಿಧಿಸೋಣಾಯಿತು.

— ಮುಂಬಾಯಿಯ ಗಿರಣಿ ಗಲಭೆಗಳು ಇನ್ನೂ ಮುಗಿದಿಲ್ಲ. ಬೇರೆಬೇರೆ ಸ್ಥಳಗಳೊಳಗೆ ಹೊಡೆದಾಟಗಳು ನಡೆಯುತ್ತಲೇ ಇವೆ. ಮುಷ್ಕರಗಾರರೂ ಪೋಲೀಸರೂ ಹೊಡೆದುಕೊಂಡರು. ಇದು ಹೊರತು ಭಯ್ಯಾ ಎಂಬ ಹೆಸರಿನವರೂ ಕೆಲವು ಮುದ್ರಾಸಿಗಳೂ ಜಗಳಮಾಡಿಕೊಂಡು ಹಲವರಿಗೆ ಜಖಮುಂಟಾಯಿತು. ಈ ಕುರಿತಾಗಿ ಗಿರಣಿ ಕಾಮಗಾರ ಸಂಘದ ಹತ್ತು ಮಂದಿ ಸ್ವಯಂ ಸೇವಕರು ಕೈದುಮಾಡಲ್ಪಟ್ಟಿರುವರು.

— ಅರಕಾನ ಎಂಬಲ್ಲಿ ನೆರೆಯ ದೆಸೆಯಿಂದ ವಿಶೇಷ ಹಾವಳಿಯುಂಟಾಗಿರುವುದರಿಂದ ಅಲ್ಲಿಯ ಸರಕಾರದವರು ಪೀಡಿತರಾದ ಜನರ ಸಹಾಯದ ಬಗ್ಗೆ ಒಂದು ಲಕ್ಷ ರೂಪಾಯಿಗಳಿಗೆ ಮೀರಿದ ಹಣವನ್ನು ಸೆಂಕ್ಷನುಮಾಡಿರುವರು.

— ಬರ್ಮಾದ ಇನ್‌ಸೇನ್ ಎಂಬ ಪಟ್ಟಣದಲ್ಲಿರುವ ಸರಕಾರಿ ವಿದ್ಯಾಗಿಳ ಶಾಲೆಯ ಇಂಜಿನಿಯರಿಂಗ್ ಶಾಖೆಯ ೧೨೦ ಮಂದಿ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಲ್ಲೊಬ್ಬನ [illegible]ಯನ್ನು ತಿಳಿಸಿ ಪ್ರಿನ್ಸಿಪಾಲರಿಗೆ ಒಂದು ಪತ್ರವನ್ನು ಬರೆದಿದ್ದರು. ಅವರು ಪ್ರಿನ್ಸಿಪಾಲರಿಂದ ಯಾವ ಉತ್ತರವೂ ಬಾರದ ಪ್ರಯುಕ್ತ ಅವರೆಲ್ಲರೂ ಶಾಲೆಯಿಂದ ಹೊರಗೆ ಬಂದು ಆಡಳಿತ ಕಮಿಟಿಯವರಿಗೆ ಈ ಸಂಗತಿಯನ್ನು ಬರೆದು ತಿಳಿಸಿದರು. ಆಡಳಿತ ಕಮಿಟಿಯವರು ಬಾರದಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ತಿರು ಶಾಲೆಗೆ ಬಂದುದಾದರೆ ಈ ಕುರಿತಾಗಿ ವಿಚಾರಣೆಯನ್ನು ನಡಿಸುವರೆಂದು ಬರೆದಿರುವರು. ಆದರೆ ವಿದ್ಯಾರ್ಥಿಗಳಾರೂ ಶಾಲೆಗೆ ಹಾಜರಾಗಿಲ್ಲ.

— ಲಾಹೋರಿನ ಒಳಸಂಚಿನ ಮೊಕದ್ದಮೆಯ ಸಂಬಂಧದಲ್ಲಿ ಕೊಲೊನೆಲ್‌ಗಂಜದ ಬಾಬು ಜತೀಂದ್ರನಾಥ ಸನ್ಯಾಲನೆಂಬಾತನನ್ನು ಕೈದು ಮಾಡಿರುವರು. ಈತನು ಅಲಹಾಬಾದದ ಇಂಡಿಯನ್ ಪ್ರೆಸ್ಸಿನ ಕೆಲಸಗಾರನು. ಈತನ ಇಬ್ಬರು ಸಹೋದರರು ಕಾಕೋರಿ ಮೊಕದ್ದಮೆಯ ಸಂಬಂಧದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವರು.

— ಕೆನಡಾ, ಜಪಾನ, ಇಂಡೋಚೈನಾ, ಮೊದಲಾದ ಕಡೆಗಳಲ್ಲಿ ತನಗೆ ವಿಶೇಷ ಸ್ವಾಗತವು ಲಭಿಸಿತೆಂದು ಕವಿ ರವೀಂದ್ರರು ವ್ಯಕ್ತಪಡಿಸುವರು. ಡಾ। ಸನ್‌ಯೇಟ್‌ಸೇನರ ಸಂಸ್ಕಾರ ಸಮಾರಂಭಕ್ಕೆ ಅವರಿಗೆ ಆಮಂತ್ರಣವಿದ್ದಿತು. ಆರೋಗ್ಯವು ಸರಿಯಾಗಿ ಇಲ್ಲದುದರಿಂದ ಅವರು ಹೋಗಲಿಲ್ಲ. ಇಂಡೋಚೈನದ ಗವರ್ನರರು ಅವರ ಭೇಟಿಯನ್ನು ಪಡೆದು ಆಫೀಸಿಯಲ್ ಪ್ರಕಟಣೆಗಳನ್ನೂ ಐತಿಹಾಸಿಕ ಚಿತ್ರಗಳನ್ನೂ ಶಾಂತಿನಿಕೇತನಕ್ಕೆ ಒದಗಿಸುವುದಾಗಿ ಪ್ರತಿಜ್ಞೆಮಾಡಿರುವರು.

ಬೆಂಗಳೂರಿನಲ್ಲಿ ಶ್ರೀ ತಗಡೂರು ರಾಮಚಂದ್ರರಾಯರು ಪತ್ರಿಕಾ ಕಾನೂನಿಗೆ ವಿರೋಧವಾಗಿ ವರ್ತಿಸಿದುದರ ಬಗ್ಗೆ ಸಿಟಿ ಮೆಜಿಸ್ಟ್ರೇಟರು ಅವರಿಗೆ ೧೫ ದಿನಗಳ ಸಾದಾ ಸಜೆ ಮತ್ತು ೨೫೦ ರೂಪಾಯಿಗಳ ಜುಲುಮಾನೆಯನ್ನು ವಿಧಿಸಿದರು. ಅವರು ಜುಲುಮಾನೆ ತೆರಲು ಕೇಳದುದರಿಂದ ಅವರನ್ನು ಜೈಲಿಗೆ ಕರೆದೊಯ್ದರು.

— ಇನ್ನೊಬ್ಬ ಸತ್ಯಾಗ್ರಹಿಯಾದ ರಾಮಾನುಜನ್ ಎಂಬವರು ಸರಕಾರದ ಅಪ್ಪಣೆಯನ್ನು ಪಡೆಯದೆ ಸಾಧ್ವಿ ಪತ್ರಿಕೆಯನ್ನು ಹೊರಡಿಸಿದರು. ಆದರೆ ಪೋಲೀಸರು ಪತ್ರಿಕೆಯ ಪ್ರತಿಗಳನ್ನು ಸ್ವಾಧೀನಪಡಿಸಿಕೊಳ್ಳಲಿಲ್ಲ.

— ಸಿರಾಜಗಂಜದಲ್ಲಿ ಅಲಭೂಜಾ ಸರಕಾರನೆಂಬ ೧೪ ವರುಷ ಪ್ರಾಯದ ಮುಡುಗನು ಈ ವರುಷದ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತು ಮೊದಲನೇ ತರಗತಿಯಲ್ಲಿ ಉತ್ತೀರ್ಣನಾಗಿರುವನು. ಆತನ ಮುಖ್ಯ ವಿದ್ಯೆ ಕಲಿಯಲು [illegible] ಫಲದಾಯಕವೆಂಬುದರ ಬಗ್ಗೆ ಅವನಿಗೆ ಉದಾಹರಣೆಯನ್ನು ಕೊಡಲು ಆತನು ಕಳೆದ ವರುಷ ಪರೀಕ್ಷೆಗೆ ಕುಳಿತು ಉತ್ತೀರ್ಣನಾಗದೆ, ಈ ವರುಷ ಕುಳಿತು ಉತ್ತೀರ್ಣನಾದನು.

ಮೂರು ವರುಷಗಳ ಸಾಧನೆಯಿಂದ ಪಂಜಾಬಿನಲ್ಲಿ ಈಗ ೧೧೬ ಸ್ತ್ರೀ ಸಂಘಗಳು ಸ್ಥಾಪಿಸಲ್ಪಟ್ಟಿವೆ. ೨೬೯೦ ಮಹಿಳಾ ಮೆಂಬರರು ಇದ್ದಾರೆ. ಈ ಸಂಘಗಳಿಗೆ ಒಟ್ಟು ೪೬,೨೮೫ ರೂಪಾಯಿಯ ನಿಧಿಯು ಇರುವುದು.

ದಕ್ಷಿಣ ಕನ್ನಡ.

ಮಂಗಳೂರು: — ಇಲ್ಲಿಯ ಸಿಟಿ ಆಸ್ಪತ್ರೆಯ [illegible] ದಲ್ಲಿ ಕಳೆದ ಆದಿತ್ಯವಾರ [illegible] ಇನ್ನೊಂದು ರೋಮನ್ ಕೆಥೋಲಿಕ್ ಕ್ರೈಸ್ತ [illegible] ಸಂಸ್ಕಾರ ನಡೆಯಿತು. ಇವರು ಜನ್ಮತಃ [illegible] ಜಾತಿಯವರಾಗಿದ್ದು ಮೊದಲು ಮೂಲ್ಕಿ [illegible] ಎಂಬಲ್ಲಿ ವಾಸಿಸುತ್ತಿದ್ದವರು. ಇವರಲ್ಲಿ ಹಿರಿಯರಾದವರಿಗೆ ಹದಿಮೂರು ವರ್ಷಗಳ ಮೊದಲು ಕಠಿಣ ಕಾಯಿಲೆಯು ಪ್ರಾಪ್ತವಾದಾಗ ತಂತ್ರ ಮಂತ್ರ, ಭೂತ ಮತ್ತು ಗ್ರಾಮದೇವತೆಗಳ ಉಪದ್ರವೆಂದು ಬಲಿಯ, ಭಟ್ಟರು ಮತ್ತು ಮಂತ್ರವಾದಿಗಳು [illegible] ವಿಧವಿಧದ ಕುಂಕುಮ, ತಾಯಿತ್, ಅನ್ನ ಬಲಿಗಳನ್ನು ಕೊಟ್ಟರೂ ಗುಣವಾಗದೆ ಕಾಯಿಲೆಯು ವೃದ್ಧಿಯಾಗುತ್ತಾ ಬಂತು.

ಆಗ ಒಬ್ಬ ಕ್ರೈಸ್ತನು ಬಂದು, ನೀನು ಇಗರ್ಜಿಗೆ ಹೋಗಿ ಕ್ರೈಸ್ತ ಮತಕ್ಕೆ ಸೇರಿದರೆ ಯಾವ ದೇವತೆ ಭೂತಗಳ ಉಪದ್ರವೂ ಬರಲಿಕ್ಕಿಲ್ಲ. ಮತ್ತು ಕಾಯಿಲೆಯೂ ಸಹ ಗುಣವಾಗುವುದೆಂದು ಬೋಧಿಸಿದನು. ಇದಕ್ಕಾಗಿ ಸುರತ್ಕಲ್ ಇಗರ್ಜಿಗೆ ಒಯ್ಯಲ್ಪಟ್ಟು, ರೋಮನ್ ಕೆಥೋಲಿಕ್ ಮತದೀಕ್ಷೆಯನ್ನು ಕೊಂಡು ಅಲ್ಲಿ ಕೊಟ್ಟ ಔಷಧಿಯಿಂದ ಗುಣಹೊಂದಿದಳು. ತರುವಾಯ ತನ್ನ ಮಕ್ಕಳುಮರಿಗಳಿಗಾದರೂ ಆ ಭೂತಪಿಶಾಚಗಳ ಉಪದ್ರ ತಟ್ಟಬಾರದೆಂದು ಅವರನ್ನು ಅಲ್ಲಿಗೆ ಕರೆಯಿಸಿ ಕ್ರೈಸ್ತ ಮತಕ್ಕೆ ಸೇರಿಸಿದಳು. ಸಮಾಜದ ಉತ್ಸಾಹೀ ಸದಸ್ಯರಾದ ಶ್ರೀಯುತ [illegible] ಬಾಲಕೃಷ್ಣನಾಯಕರ ಬೋಧನೆಯಿಂದ ಮತ್ತು ಸಾಧನೆಯಿಂದ ಇವರಲ್ಲಿ ಸ್ವಧರ್ಮಜ್ಞಾನವುಂಟಾಗಿ ತಮ್ಮ ತಪ್ಪಿಗೆ ಪಶ್ಚಾತ್ತಾಪಪಟ್ಟು ಆರ್ಯಧರ್ಮದೀಕ್ಷೆಯನ್ನು ಹೊಂದಿದರು. ಶುದ್ಧಿ ಆದವರು ಸಮಾಜಧರ್ಮಪ್ರಚಾರ ನಿಧಿಗೆ ಎರಡು ರೂಪಾಯಿ ದಾನವಾಗಿ ಕೊಟ್ಟರು.

ಇಲ್ಲಿಯ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರಾದ ಮಿ॥ ಕೆ. ಡಿ. ವರ್ಗೀಸರವರಿಗೆ ಕೆನರಾ ಜಿಲ್ಲೆಗೆ ವರ್ಗವಾಗಿರುತ್ತದೆ.

ಈ ದಿನ, ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದವರು ಇದೇ ತಾ. ೨೦ರಲ್ಲಿ ಕೆನರಾ ಹೈಸ್ಕೂಲಿನಿಂದ ನಿವೃತ್ತರಾದ ಶ್ರೀ. ಬಿ. ಪುಂಡರೀಕ ಬಾಳಿಗರನ್ನು ಉಪಹಾರ ಪಾರ್ಟಿಯಿಂದ ಸತ್ಕರಿಸುವರು.

ತಾರೀಕು ೬—೭—'೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೨೦ ಮರಣಗಳೂ, ೪೯ ಜನನಗಳೂ ಆಗಿರುವವು.

ದಕ್ಷಿಣ ಕನ್ನಡ ಜಿಲ್ಲಾ ಹೆಲ್ತ್ ಎಂಡ್ ವೆಲ್‌ಫೇರ್ ಎಸೋಸಿಯೇಶನಿನ ಸಾಧಾರಣ ಸಭೆಯು ಇದೇ ಕಳೆದ ಜೂನ್ ೧೪ನೇ ತಾರೀಕಿನ ದಿನ ಜರಗಿ, ೧೯೨೭-೨೮ನೇ ಇಸವಿಯ ವರದಿಯು ಅಂಗೀಕೃತವಾಯಿತು. ಕೆಲವು ತಿದ್ದುಪಡಿಗಳಿಂದ ಈ ಮೊದಲು ರಚಿಸಿದ ಕಾನೂನುಗಳು ಮಂಜೂರು ಮಾಡಲ್ಪಟ್ಟವು. ಎಸೋಸಿಯೇಶನನ್ನು ಸಂಘಗಳ ರಿಜಿಸ್ಟ್ರೇಶನ್ ಆಕ್ಟ ಪ್ರಕಾರ ರಿಜಿಸ್ಟ್ರಮಾಡಬೇಕೆಂದಾಗಿ, ಇತರ ಕೆಲವು ನಿರ್ಣಯಗಳ ತರುವಾಯ, ಕಾರ್ಯನಿರ್ವಾಹಕರನ್ನು ಆರಿಸೋಣಾಯಿತು.

ಇಲ್ಲಿಯ ಆಯುರ್ವೇದ ಮುನಿಸಿಪಲ್ ಧರ್ಮಾಸ್ಪತ್ರೆಯಲ್ಲಿ ಕಳೆದ ಜೂನ್ ತಿಂಗಳಲ್ಲಿ ೩೧೪ ಹಿಂದೂ, ೧೪೧ ಪ್ರಾಟೆಸ್ಟೆಂಟರು ಸೇರಿ ಕ್ರಿಸ್ಟ ನರೂ ಮತ್ತು ೪೧ ಮುಸ್ಲಿಮ್ ಜನರು ಕೂಡಿ ೪೯೬ ಹೊಸ ರೋಗಿಗಳು ಚಿಕಿತ್ಸೋಪಚಾರವನ್ನು ಹೊಂದಿದ್ದರು. ರೋಗಿಗಳ ದಿನವಹಿ ಸರಾಸರಿ ಹಾಜರು ೯೨·೬ ಆಗಿತ್ತು. ಒಂದೇ ದಿವಸದಲ್ಲಿ ಅಂದರೆ ತಾ. ೧೧—೬—'೨೯ರಲ್ಲಿ ಹೆಚ್ಚಾಗಿ ಹಾಜರಾದ ಸಂಖ್ಯೆ ೧೨೨.

ಮಂಗಳೂರು ರೇಂಜಿನ ಹೆಲ್ತ್ ಇನ್ಸ್‌ಪೆಕ್ಟರರಾದ ಕೆ. ಯನ್ ರಾಮಸ್ವಾಮಿ ಅಯ್ಯರರು ಟ್ರೈನಿಂಗ್ ಬಗ್ಗೆ ಮದ್ರಾಸಿಗೆ ಹೋದುದರಿಂದ ಅವರ ಸ್ಥಾನದಲ್ಲಿ ಫಸ್ಟ್‌ಕ್ಲಾಸ್ ವೆಕ್ಸಿನೇಟರ್ ಎಲ್. ಎಸ್. ಶಾಸ್ತ್ರೀನರನ್ನು ಆಕ್ಟಿಂಗ್ ಹೆಲ್ತ್ ಇನ್ಸ್‌ಪೆಕ್ಟರರನ್ನಾಗಿ ನೇಮಿಸಿಯದೆ.

ಪ್ರತಿ ಭಾನುವಾರವೂ ಬೆಳಗ್ಗೆ ೮—೩೦ ಘಂಟೆಗೆ ಕೊಡಿಯಾಲಬೈಲಿನಲ್ಲಿರುವ ಥಿಯೊಸಾಫಿಕಲ್ ಲಾಜಿನಲ್ಲಿ ಮ॥ ರಾ॥ ರಾ॥ ಜೆ. ಕೃಷ್ಣಮೂರ್ತಿಯವರ "ಬಂಧವಿಮುಕ್ತಜೀವನ" ಎಂಬ ಪುಸ್ತಕವು ಓದಲ್ಪಡುವುದು.

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಶ್ರೀ ಕೆ. ಆರ್. ಶಂಕರರು ಇಲ್ಲಿಯ ಥಿಯೋಸೊಫಿಕಲ್ ಲೋಜಿನಲ್ಲಿ ಕಳೆದ ಮಂಗಳವಾರ ತೊಡಬೇಕಾಗಿತ್ತ ಭಾಷಣವನ್ನು ಇದೇ ೧೪ನೇ ಆದಿತ್ಯವಾರ ಮಾಡುವರು.

ಉಡುಪಿ: — ಕಳೆದ ಜೂನ್ ತಿಂಗಳೊಂದರಲ್ಲಿ ಇಲ್ಲಿನ 'ಖಾದಿ ನಿಲಯ'ದಿಂದ ೨೩೬ [illegible] ಖಾದಿಯು ವಿಕ್ರಯವಾಯಿತು.

ಒಂದು ವಾರದ ವರೆಗೆ ಭಾರಿಯ ಮಳೆಯಿಂದ ಕಳೆದ ಗುರುವಾರ ಶುಕ್ರವಾರ ಮತ್ತು ಶನಿವಾರದ ವರೆಗೆ ನೆರೆ ತುಂಬಿದ್ದ ಹೊಳೆಗಳಲ್ಲಿ ನೀರು ಸ್ವಲ್ಪ ಕಡಿಮೆಯಾಗಿದೆ; ಮಳೆಯೂ ಸ್ವಲ್ಪ ಸಮಾಧಾನದಿಂದ ಬರುತ್ತದೆ. ತಾ. ೯ನೇ ಮಂಗಳವಾರ ಕೃಷ್ಣಾಪುರ ಮಠದ ಆನೆಯು ಮಾವುತನಿಂದ ತಪ್ಪಿಸಿ ಓಡಿಹೋದುದನ್ನು ನಾಯಂಕಾಲದೊಳಗೆ ಹಿಡಿದು ಬಂಧನದಲ್ಲಿರಿಸಿರುತ್ತದೆ.

ಗುರುಪುರ — ಇಲ್ಲಿ ಮೂಳೂರು ಪಂಚಾಯತಿಯು [illegible] ನಿಂದ [illegible] ಪಂಚಾಯತಿಯು ಸ್ಥಾಪಿಸಲ್ಪಟ್ಟು ಸರಕಾರದಿಂದ [illegible] [illegible] ಆ ವರೆಗೆ [illegible] ಪಂಚಾಯತಿಗೆ ಸರಕಾರದಿಂದ ಕೊಡಲ್ಪಡುವ [illegible] ಹಲವು [illegible] ಈ ವರೆಗೆ [illegible] ಈ ಪಂಚಾಯತಿಯಿಂದ ಯಾವ ಕೆಲಸವೂ [illegible] ಆಗಲಿಲ್ಲ. ಇಂಥಾ ಪಂಚಾಯತಿಗಳನ್ನು ಸ್ಥಾಪಿಸುವುದರಿಂದ ಏನು ಪ್ರಯೋಜನವಿರುವುದು ಅರಿತು.

ಈ ಪಂಚಾಯತಿಯು ಸ್ಥಾಪಿಸಲ್ಪಟ್ಟಂದಿನಿಂದ [illegible] [illegible] [illegible] [illegible] ನರಮಾನವರಂತೆ ನೋಡುವುದು ದೌರ್ಭಾಗ್ಯ.

ಕಳೆದ ತಾ. ೭ರಲ್ಲಿ ಬಂದ ನೆರೆಯಿಂದ ರೈತರ ಬೆಳೆಯೂ, ಅವರ [illegible] ವ್ಯಾಪಾರಕ್ಕೂ ಅವನತಿಯು ಕೊಟ್ಟಿತು. [illegible] ಉಂಟಾಗಿದೆ. ಕೆಲವು ದೊಡ್ಡ ದೊಡ್ಡ ಕಟ್ಟಡಗಳ ಶಿಥಿಲ ಹೋಗಿವೆ. ಮನೆಗಳೂ ಬಿದ್ದಿವೆ. ಒಟ್ಟಾರೆ ಈ ನೆರೆಯಿಂದ [illegible] [illegible] [illegible] ನಷ್ಟವುಂಟಾಗಿಯದೆ.

ಇಲ್ಲಿಯ [illegible] [illegible] [illegible]

[illegible] [illegible] [illegible] ಕೆಲವು [illegible] [illegible]

ಪಾಣೆಮಂಗಳೂರು: — [illegible] ಇಲ್ಲಿ ನೆರೆ ಬರಲಿಲ್ಲ. ಇಲ್ಲಿಯ [illegible] ಕಾರ್ಯಕ್ರಮ [illegible] ತಿಂಗಳಿಗೆ [illegible] [illegible] ಬಡಾವಣೆಗೆ [illegible] ತಲ್ಪಲಿಲ್ಲ.

ಇಲ್ಲಿ ಕಳೆದ ವರುಷ ಕೇಳಿದಂತೆ ಈ ವರುಷವೂ ಒಂದು ಹೈಸ್ಕೂಲ್ ಎಲಿಮೆಂಟರಿ ಶಾಲೆಯನ್ನು ತೆರೆದಿರುವರು. ಇಲ್ಲಿ ಒಂದು ಪೋಸ್ಟ್ ಆಫೀಸು, ಟೆಲಿಗ್ರಾಫ್ ಆಫೀಸು ಅಗತ್ಯವಿದೆ. ಬಂಟವಾಳ ಪೋಸ್ಟ್ ಆಫೀಸಿನಲ್ಲಿರುವ ಒಬ್ಬನೇ ಪೋಸ್ಟ್ ಮಾಸ್ತರನು [illegible] ಪೋಸ್ಟ್ [illegible] [illegible] [illegible] ತಿಳಿದಿಲ್ಲ. ಟೆಲಿಗ್ರಾಫ್ [illegible] ಈ [illegible] ದಾಟಿ ಹೋಗುತ್ತದೆ. ಪೋಸ್ಟ್ ಆಫೀಸು ಇದಕ್ಕೆ ಯೋಗ್ಯವಾದ ಕಟ್ಟಡಗಳೂ ಇವೆ. ಒಂದೆರಡು ಟೆಲಿಗ್ರಾಫ್ [illegible] ತಿಳಿಸಬೇಕಾಗಿದೆ. ಇದಕ್ಕೆ ವಿಶೇಷ ಖರ್ಚಿಲ್ಲ.

[illegible] ಹಾಗೆ ಈ ರಸ್ತೆಯ ಎರಡು ಪಾರ್ಶ್ವಗಳಲ್ಲಿಯೂ ಮೂರು ಅಡಿ ಎತ್ತರವಾದ ಕಲ್ಲಿನ ಗೋಡೆಯನ್ನು ಅವಶ್ಯ ತ್ವರೆಯಲ್ಲಿ ಕಟ್ಟಿಸಿ ಮೇಲೆ ವಿವರಿಸಿದ ಅಪಾಯಗಳಿಂದ ತಪ್ಪಿಸಬೇಕಾಗಿ ನಂಬುತ್ತೇವೆ. ಇತಿ,

'ಬೆಕ್ಸ್ ಫೆಯರ್'

ಮಂಗಳೂರು ಕಸಬಾ ಬಜಾರ ಪಂಚಾಯ್ತಿ ಕೋರ್ಟಿನ ಅಭಿಲಾಷೆ.

ಅಯ್ಯಾ,

ಈ ಕೋರ್ಟಿನ ಪ್ರೆಸಿಡೆಂಟರು ವಿಕ್ರಯ ಸಲಾಉಗಳನ್ನು ಕೊಡುವರೆ ಅನೇಕ ಸಮಯವನ್ನು ತೆಗೆಯುತ್ತಾರೆ. ಅಲ್ಲದೆ ಕಕ್ಷಿಗಾರರಿಗೆ ಬಹಳ ತೊಂದರೆ ಸಹಾ ಕೊಡುತ್ತಾರೆ. ಇದು ಯಾವುದಕ್ಕೋಸ್ಕರ ಎಂಬ ಸಂಗತಿ ತಿಳಿಯುವುದಿಲ್ಲ. ಅಲ್ಲದೆ ದಯಾಳು ಸರಕಾರದವರು ಇವರ ನ್ಯಾಯ [illegible] ಬಡ ಕಕ್ಷಿಗಾರರಿಗೆ ಬಹಳ ಉಪಕಾರವಾಗುತ್ತಿತ್ತು. ಇದಕ್ಕೆ ಸಂಬಂಧಪಟ್ಟ ಮೇಲಾಧಿಕಾರಿಗಳು ಇವರ ಕಡೆ [illegible] ಈ ಪ್ರಕಾರದಲ್ಲಿ ಮಾಡುವ ಕೋರ್ಟುಗಳನ್ನು ಮಾಡಿಸಿ ಬಡ ಕಕ್ಷಿಗಾರರ. ಈ ಕೋರ್ಟಿನಲ್ಲಿ ಪಡುವ ಕಷ್ಟವನ್ನು ನಿವಾರಿಸಬೇಕಾಗಿ ಬಡ ಕಕ್ಷಿಗಾರನ ದೀನ ವಿನಂತಿ.

ಇಂತಿ, ಬಡ ಕಕ್ಷಿಗಾರ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅವ್ಯಕ್ತಾತಂಕುಮ ತೈಲ—ಇದು ಪೂರ್ವಕಾಲ ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಾಣಿವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಕ್ಷಯ, ಕಾಸ, ಶ್ವಾಸ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಗರ್ಭಿಣಿಯರ ಮಿತ್ರ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಷವನ್ನು ಹೊರಗೆ ಹಾಕಿ ಪ್ರಸವದಿಂದ ಶಿಥಿಲವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ಗ ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಚಿಕಿತ್ಸಾ ಮಾಹಿತಿಗೆ "ಆಯುರ್ವೇದ ರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಸ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ಪ್ರತಿದಾರಹಗ್ಗ.

ESTD 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪ್ರತಿದಾರಗಳು ತಯಾರು ಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ಹಿಂದಿನ ಅನುಭವದ ಮೇಲೆ ನಮ್ಮ ಪ್ರತಿದಾರ ಹಗ್ಗಗಳು ಕೆಲಸಕ್ಕೆ ದಕ್ಷಿಣದಲ್ಲಿಯೂ, ಮಾರ್ವಾಡಿ ದೇಶದಲ್ಲಿಯೂ, ನಿರ್ಜನ ನಾಡಿನಲ್ಲಿಯೂ ದಕ್ಷಿಣ ಹಿಂದೂಸ್ಥಾನದಲ್ಲಿ ಹೆಸರು ಪಡೆದವಾಗಿವೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪ್ರತಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫ ವ್ಯಾಪಾರಿ,
24-8-'28 ಚಿನ್ನಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೀ ರೂಪ್ಯಾ 1- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು—
ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, Bombay, and Puttur

ಬ್ರಾಂ. ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ ಕುಂದಾಪುರ ಬೊಂಬಾಯಿ ಮತ್ತು ಪುತ್ತೂರು

Authorised and fully paid up Capital Rs. 300,000–0–0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—
Reserve and other sinking Funds „ 3,88,000–0–0	ಕ್ಷೇಮನಿಧಿ ಮತ್ತು ಇತರ ಫಂಡುಗಳು 8,88,000—0—0
Amount invested on G. P. Notes Rs. 680,793–6–0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 680,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡಲಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ಇರುವ ರೂ. 1000/-ದ ಮೇಲ್ಪಟ್ಟ ಸೀಸನ್ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice

For further particulars please apply to

Canara Bank Ltd.
Mangalore, 9—7—1929.

K. Venkat Rao,
Secretary.

THE PANGAL NAYAK BANK, LTD.

Branch Office Mangalore	Head Office: Udipi. *Established 1920*	Agency Office Cochin

Authorised Capital: Rs. 2,00,000-	Paidup Capital: Rs. 1,60200-
Issued Capital: Rs. 1,75,000-	Reserve and other Funds Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5%. 6 or 9 months 5¼%. 12, 15, 18 or 21 months 6%, 24 months 6¼% and interest **being payable every 3 months.**

Short Notice Deposits, Cumulative Deposits and **Savings Bank Deposits** are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6½% and interest being payable every quarter.

Loans and Advances are made on pledge of valuables, on proper personal securities on reasonable terms; and every other description of Banking business transacted

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
15th June, 1929.

P. Lakshman Nayak,
Offg. Secretary.

ADVERTISE IN OUR WEEKLY

To Reach the Hearths & Homes

OF INDIA'S MASSES

For Particulars Apply to:

The Manager,
SWADESHABHIMANI,
MANGALORE.

ಮಂಗಳೂರಿಗೆ ನೀರಿನ ಸರಬರಾಯಿ.

ಈ ಬಗ್ಗೆ ಮಂಗಳೂರು ಮುನಿಸಿಪಾಲಿಟಿಯು ಕೊಟ್ಟ ವ್ಯಾಖ್ಯಾನವನ್ನು ಬಹಿರಂಗ ಕಡೆಯಲ್ಲಿ ಪ್ರಕಟಿಸಿದ್ದೇವೆ. ದೊಡ್ಡ ದೊಡ್ಡ ಶಹರುಗಳಲ್ಲಿರುವಂತೆ ಮಂಗಳೂರಿಗೂ ನಳಿಗೆಗಳ ಮೂಲಕ ಸುಲಭವಾದ ನೀರನ್ನು ಕೊಡುವುದು ಒಳ್ಳೆಯದೇ. ಆದರೆ ಈ ಬಗ್ಗೆ ತಗಲುವ ಖರ್ಚು ಮತ್ತು ಅದರಿಂದ ಪ್ರಕೃತ ಉಂಟಾಗಬಹುದಾದ ಲಾಭ ಇವೆರಡೂ ಸಮತುಲ್ಯವಾಗುವುದೇ ಎಂಬುದು ಮುಖ್ಯ ಪ್ರಶ್ನೆ. ಮುನಿಸಿಪಾಲಿಟಿಯು ಅಂದಾಜು ಕಟ್ಟಿರುವ ಪ್ರಕಾರ ಮೂಲ ಖರ್ಚು ೭,೪೦,೦೦೦. ವರ್ಷಾವಧಿ ಖರ್ಚು ೪,೫೦೦. ಇದರಿಂದ ೬೦,೦೦೦ ಜನರಿಗೆ ನೀರು ಸಿಗುವುದು. ಮೂಲ ಖರ್ಚಿನಲ್ಲಿ ಅರೆವಾಸಿ ಖರ್ಚನ್ನು ಸರಕಾರವು ವಹಿಸಿಕೊಳ್ಳಬಹುದೆಂಬುದೊಂದು ಆಶೆ. ಉಳಿದ ಖರ್ಚಿಗಾಗಿ ಸಾಲವೆತ್ತಬೇಕು. ಸಾಲವನ್ನೂ ಬಡ್ಡಿಯನ್ನೂ ಸಲಾಯಿಸುವರೆ ಮತ್ತು ನೀರನ್ನು ಒದಗಿಸುವರೆ ವರ್ಷಾವಧಿ ಖರ್ಚು ಕೂಡಾ ರೂ. ೩೦,೩೨೦ನ್ನು ಮುನಿಸಿಪಾಲಿಟಿಯು ಪ್ರತಿ ವರ್ಷ ತೆರಬೇಕು. ಇದಕ್ಕಾಗಿ ಮನೆ ಬಾಡಿಗೆಯ ಮೇಲೆ ಶೇಕಡಾ ೪½ಯಂತೆ ಹೆಚ್ಚಿನ ತೆರಿಗೆ ಹೊರಿಸಬೇಕು. ಇವೇ ಇದೀ ಸರಬರಾಯಿಯ ಅಂದಾಜು ಖರ್ಚಿನ ಪಟ್ಟಿಯಾಗಿದೆ. ಈ ಖರ್ಚಿನಿಂದ ಈಗ ಲಾಭವೆಷ್ಟೆಂದು ಲೆಕ್ಕ ಮಾಡುವ. ಮಂಗಳೂರು ಶಹರಿಗೆ ಕಳ್ಳ ಮಟ್ಟಿಗೆ ಎಲ್ಲಾ ಕಡೆಯಲ್ಲಿಯೂ ಬಾವಿಗಳಿವೆ. ಮಳೆ ಆರಂಭವಾದಂದಿನಿಂದ ಮಾರ್ಚ್ ತಿಂಗಳ ವರೆಗೆ ಎಲ್ಲಿಯೂ ನೀರಿನ ಕೊರತೆ ಇರುವುದಿಲ್ಲ. ಎಪ್ರಿಲ್ ಮತ್ತು ಮೇ ತಿಂಗಳು ಮತ್ತು ಮಳೆ ಬರಲಿಕ್ಕೆ ತಡವಾದರೆ ಜೂನ್‌ನಲ್ಲಿ ಏಳೆಂಟು, ಹೆಚ್ಚಾದರೆ ಹದಿನೈದು ದಿನ ನೀರಿನ ತೊಂದರೆ ಇರುತ್ತದೆ. ಹೀಗೆ ೫ರಿಂದ ೫½ ತಿಂಗಳು ನೀರಿನ ಕೊರತೆ ಇದೆ. ಇವುಗಳಲ್ಲಿ ಹೆಚ್ಚಿನ ಬಾವಿಗಳಲ್ಲಿ ಮೇ ಪ್ರಾರಂಭದ ವರೆಗೂ ನೀರು ಇರುತ್ತದೆ. ಸರಿಯಾಗಿ ಬತ್ತಿ ಹೋಗುವ ಬಾವಿಗಳ ಸಂಖ್ಯೆಯು ಶೇಕಡಾ ಹದಿನೈದಕ್ಕೆ ಮೀರಲಾರದು. ಶೇಕಡಾ ಹದಿನೈದು ಬಾವಿಗಳು ಬರೇ ಒಂದು ತಿಂಗಳು ಬತ್ತಿ ಉಂಟಾಗುವ ತೊಂದರೆಗಳಿಗಾಗಿ ಮಂಗಳೂರು ಈಗಿನ ತನ್ನ ಆರ್ಥಿಕ ಸ್ಥಿತಿಯಲ್ಲಿ ನೀರಾವರಿ ಕೆಲಸಗಳಲ್ಲಿ ಕೈಹಾಕುವುದು ಹಿತಕಾರಿಯೇ? ಎಂದು ಮಂಗಳೂರಿನವರು ಆಲೋಚಿಸುವುದು ಉತ್ತಮ. ಅಂದಾಜು ಖರ್ಚು ಅಂದಾಜಿನಷ್ಟೇ ನಿಲ್ಲುವುದಿಲ್ಲ. ಕೆಲಸ ಪ್ರಾರಂಭವಾದ ಮೇಲೆ Revised Estimates ಎಂದು ಬರುತ್ತವೆ. ಅಂದಾಜು ಕಟ್ಟಿದಂತೆ ನೀರು ಸಿಗದಿದ್ದರೆ ಪುನಃ ಹೊಸ ಖರ್ಚುಗಳಿಗೆ ಕೈಹಾಕಬೇಕಾಗುತ್ತದೆ. ಮೂಲ ಖರ್ಚು ೭,೪೦,೦೦೦ ಇದ್ದದ್ದು ೧೦ ಲಕ್ಷಕ್ಕೆ ಏರಲಾರದೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ವರ್ಷಾವಧಿ ಖರ್ಚು ೪,೫೦೦ರಷ್ಟು ಕಡಿಮೆಯಾಗಬಹುದೆಂದು ಒಪ್ಪಲಾರೆವು. ಹೀಗಾಗಿ ಮುನಿಸಿಪಾಲಿಟಿಗೆ ಸರಕಾರದ ಸಹಾಯ ಸಿಕ್ಕಿದರೂ ವರ್ಷಾವಧಿ ಜಮಲಾ ಖರ್ಚು ಅರ್ಧ ಲಕ್ಷದಷ್ಟು ನಿಲ್ಲಬಹುದೆಂದು ಊಹಿಸಿದರೆ ತಪ್ಪಾಗದು. ಹಾಗೆ ಖರ್ಚಿಗೆ ಕೈಯಿಕ್ಕಿ ೬೦,೦೦೦ ಜನರಿಗೆ ಹಲವಾರು ಬುಗ್ಗೆಯಿಂದ ನೀರನ್ನು ಬಿತ್ತಿಸುವಾಗ, ಮಂಗಳೂರಿಗೆ ಅವಶ್ಯವಿದ್ದ ಸಮಯದಲ್ಲಿಯೇ, ಅಂದರೆ ಮೇ ತಿಂಗಳಲ್ಲಿಯೇ ನೀರು ಅಲ್ಲಿಯೂ ಕಡಿಮೆಯಾಗಿ ಹೋದೀತೋ ಎಂಬ ಸಂದೇಹವನ್ನು ಇಮ್ಮಿಂದೂಮ್ಮೆಯೇ ನಿವಾರಿಸಲಾಗುವುದಿಲ್ಲ. ಆದುದರಿಂದ ಮಂಗಳೂರು ಮುನಿಸಿಪಾಲಿಟಿಯು ಬರೇ ಆಧುನಿಕ ಸೌಕರ್ಯಗಳ ಡಂಭಕ್ಕೆ ಬಲಿಗಾಗುವ ಮೊದಲು ಈ ಪ್ರಶ್ನೆಯನ್ನು ಚೆನ್ನಾಗಿ ಆಲೋಚಿಸುವುದಾಗಿ ಆಶಿಸುತ್ತೇವೆ. ಪಟ್ಟಣದ ನೈರ್ಮಲ್ಯ ಮೊದಲಾದ ಹಲವು ಅತ್ಯಾವಶ್ಯಕ ವಿಷಯಗಳು ಅರ್ಧ ಆಲೋಚನೆಯಲ್ಲಿಯೇ ನಿಂತವುಗಳನ್ನು ಮೊದಲು ಮೇಲೆ ತೆಗೆದು, ನೀರಿನ ಸರಬರಾಯಿಯ ಪ್ರಶ್ನೆಯನ್ನು ಕೆಲವು ವರ್ಷಗಳಿಗೆ ಹಿಂದೆ ಹಾಕುವುದು ಒಳ್ಳೆಯದೆಂದು ನಮಗೆ ಅನ್ನಿಸುತ್ತದೆ.

ಬಹಿಷ್ಕಾರದ ಪರಿಣಾಮ.

ಸ್ವದೇಶೀ ಚಳವಳಿಯು ಬಂಗಾಳ ವಿಭಜನೆಯ ಕಾಲದಲ್ಲಿ ಆರಂಭವಾಯಿತು. ಈ ಚಳವಳಿಕ್ಕೆ ಆಗಿಂದಾಗ್ಗೆ ಪುನ್ಹೀಕರಣವು ದೊರೆತಿದೆ. ಕಳೆದ ಕಾಂಗ್ರೆಸ್ಸು ಅಧಿವೇಶನದಲ್ಲಿ ಸ್ವದೇಶಿಗೆ ಪ್ರೋತ್ಸಾಹವೂ ವಿದೇಶಿಗೆ ಬಹಿಷ್ಕಾರವೂ ನಿರ್ಧರಿಸಲ್ಪಟ್ಟಿತು. ಮುಖ್ಯವಾಗಿ ಬ್ರಿಟಿಷ ವಸ್ತು ಬಹಿಷ್ಕಾರಕ್ಕೆ ಒಳ್ಳೇ ಪ್ರೋತ್ಸಾ[illegible] [illegible] ವಸ್ತು ಶಿಥಿಲಪಡಿಸಿದರೆ ಬ್ರಿಟಿಷರ ವ್ಯಾಪಾರದಲ್ಲಿಯೂ ಕನ್ನಡಕ್ಕೆ ಸಡಿಲಾಗುವುದೆಂದೇ ಹಿಂದೀ ಮುಖಂಡರು ಅನ್ನುವರು. ಅಂತೆಯೇ ಮಹಾತ್ಮಾ ಗಾಂಧಿಜಿಯವರ ವಿರೋಧವಿದ್ದರೂ ಬ್ರಿಟಿಷ ವಸ್ತು ಬಹಿಷ್ಕಾರವು ಕಾಂಗ್ರೆಸ್ಸಿನಲ್ಲಿ ಮಂಜೂರಾತಿಯನ್ನು ಹೊಂದಿತು. ಕಾರ್ಯತಃ ಬರೇ ಸ್ವದೇಶಿಗಿಂತಲೂ ಬ್ರಿಟಿಷ ವಸ್ತು ಬಹಿಷ್ಕಾರವು ಹೆಚ್ಚು ಕಾರ್ಯಕಾರಿಯಾಗಲು ಕಾರಣವಿದೆ. ಏಕೆಂದರೆ ಸ್ವದೇಶಿಯು ಹಿಂದೀಯರ ಈಗಿನ ಅವಶ್ಯಕತೆಗಳನ್ನು ಪೂರ್ಣವಾಗಿ ಪೂರೈಸಲಾರದು. ಆದರೆ ಬ್ರಿಟಿಷರಿಂದ ಹಿಂದೂಸ್ಥಾನಕ್ಕೆ ಬರುವ ಎಲ್ಲಾ ಸಾಮಾನುಗಳನ್ನು ಇತರ ದೇಶಗಳಿಂದ ತರಿಸಬಹುದು. ಆದುದರಿಂದ ಹಿಂದೀಯರೆಲ್ಲರೂ ಒಂದೇ ಮನಸ್ಸು ಮಾಡಿದರೆ ಬ್ರಿಟಿಷ ಸಾಮಾನುಗಳು ಹಿಂದೂಸ್ಥಾನಕ್ಕೆ ಬಾರದಂತೆಯೇ ಮಾಡಬಹುದು. ಕಾಂಗ್ರೆಸ್ಸಿನ ಈ ಧೋರಣವು ತಕ್ಕಮಟ್ಟಿಗೆ ಕಾರ್ಯಕಾರಿಯಾಗುತ್ತಾ ಬರುತ್ತಿದೆ. ಹಿಂದೂಸ್ಥಾನದ ಹತ್ತಿ ಗಿರಣಿಗಳ ಕೈಗಾರಿಕೆಯು ಮಜೂರ ಮುಷ್ಕರಗಳಿಂದ ಕ್ಷೀಣಿಸಿದರೂ, ಆ ಮೂಲಕ ಇಂಗ್ಲೆಂಡು ಆಶಿಸಿದ ಪ್ರಯೋಜನವನ್ನು ಅದು ಹೊಂದಲಿಲ್ಲ. ಪ್ರತಿಯಾಗಿ ಇಂಗ್ಲೆಂಡಿನ ಹತ್ತಿ ಗಿರಣಿಗಳ ಕೆಲಸವೂ ಕಡಿಮೆಯಾಗುತ್ತಾ ಬಂದು ನಿರುದ್ಯೋಗವು ಹೆಚ್ಚುತ್ತಾ ಬರುತ್ತಿದೆ. ೧೯೨೯ನೇ ಇಸವಿಯಿಂದ ಇಂಗ್ಲೆಂಡಿನಿಂದ ರಫ್ತಾಗುವ ಹತ್ತಿ ಸಾಮಾನುಗಳು ಕಡಿಮೆಯಾಗಲಾರಂಭವಾದುವು. ವರ್ಷವೂ ಕಡಿಮೆಯಾಗುತ್ತಾ ಬಂದು ಈಗ ಗಿರಣಿ ವ್ಯಾಪಾರಿಗಳಿಗೆ ಬಹಳ ಕಷ್ಟಕಾಲವು ಬಂದಿರುತ್ತದೆ. ಮಜೂರರ ಸಂಬಳವನ್ನಿಳಿಸಬೇಕಾಗಿ ಗಿರಣಿ ವ್ಯಾಪಾರಿಗಳ ಸೂಚನೆ ಇದೆ. ಹಾಗೆ ಕಡಿಮೆಮಾಡಲಿಕ್ಕೆ ಕೂಡದೆಂದು ಮಜೂರರ ಪಕ್ಷವು ಹೇಳುತ್ತಿದೆ. ಇಂಗ್ಲೆಂಡಿನ ಹತ್ತಿ ಗಿರಣಿಗಳ ಈ ಪರಿಸ್ಥಿತಿಗೆ ಹಿಂದೂಸ್ಥಾನದ ಬಹಿಷ್ಕಾರ ಚಳವಳಿಯೇ ಬಹು ಮಟ್ಟಿಗೆ ಕಾರಣವೆಂದು ಅವರೇ ಒಪ್ಪುತ್ತಾರೆ. ಇದನ್ನು ನೋಡಿಯಾದರೂ ಹಿಂದೀಯರು ಬಹಿಷ್ಕಾರದ ಪ್ರಾಮುಖ್ಯತೆಯನ್ನು ತಿಳಿಯಬಹುದು. ಹಲವು ರಾಷ್ಟ್ರಗಳ ರಾಜಕೀಯ ಸುಧಾರಣೆಗಳ ಚಳವಳಿಗಳಲ್ಲಿ ಬಹಿಷ್ಕಾರವು ಪ್ರಮುಖ ಭಾಗವನ್ನು ವಹಿಸಿಯದೆ. ಈಜಿಪ್ತ, ಐರ್ಲೆಂಡು, ಚೀನಾ ಇವುಗಳು ಬಹಿಷ್ಕಾರದ ಮೂಲಕವೇ ಪ್ರಬಲವಾದ ಪ್ರತಿರೋಧಿ ರಾಷ್ಟ್ರಗಳನ್ನು ಸಂಧಿಗೆ ಒಪ್ಪುವಂತೆ ಮಾಡಿದ್ದಾರೆ. ಬಹಿಷ್ಕಾರ ಚಳವಳಿಯೇ ವಂಗವಿಭಜನೆಯನ್ನು ರದ್ದುಪಡಿಸಲು ಕಾರಣವಾಗಿದೆ. ಹೀಗೆ ಲೋಕೇತಿಹಾಸವನ್ನೇ ನೋಡಿದರೂ ಬಹಿಷ್ಕಾರ ಚಳವಳಿಯು ಪರಿಣಾಮಕಾರಿಯಾದ ಒಂದು ಉಪಕರಣವಾಗಿ ಕಂಡುಬಂದಿರುತ್ತದೆ. ಹಿಂದೀಯರಿಗೆ ಅನುಭವ ಮೂಲಕ ಸಿಕ್ಕಿರುವ ಈ ಪಾಠವನ್ನು ಮರೆಯದಿರುವುದು ಅವಶ್ಯವಿದೆ.

ಹಿಂದೂಸ್ಥಾನವೂ ಬರ್ಮಾ ಪ್ರಾಂತ್ಯವೂ.

ಬರ್ಮಾ ಪ್ರಾಂತ್ಯವನ್ನು ಇಂಗ್ಲೀಷರು ಹಿಂದೂಸ್ಥಾನದ ಖರ್ಚಿನಿಂದ ಗೆದ್ದು ತಮ್ಮ ಕೈವಶಮಾಡಿಕೊಂಡರು. ಆ ಮೇಲೆ ಬರ್ಮಾವು ಹಿಂದೂಸ್ಥಾನದ್ದೇ ಒಂದು ಪ್ರಾಂತ್ಯವಾಗಿ ಎಣಿಸಲ್ಪಟ್ಟಿತು. ಈಗ ಕೂಡ ಅದು ಹಿಂದೂಸ್ಥಾನದ ಒಂದಂಶವಾಗಿ ಪರಿಗಣಿಸಲ್ಪಡುತ್ತಿದೆ. ಬರ್ಮಾದಲ್ಲಿ ನೈಸರ್ಗಿಕ ಸಂಪತ್ತು ಬಹಳವಿದೆ. ಸೀಮೆ ಎಣ್ಣೆಯ ದೊಡ್ಡ ಗಣಿಗಳು ಅಲ್ಲಿವೆ. ವಿಲಾಯತಿ ಕಂಪೆನಿಗಳು ಈ ಗಣಿಗಳನ್ನು ತಮ್ಮ ಕೈಯಲ್ಲಿ ಮಾಡಿಕೊಂಡು ಬಹಳ ಲಾಭವನ್ನು ಹೊಂದುತ್ತಿವೆ. ಹಿಂದೀ ವ್ಯಾಪಾರಸ್ಥರೂ ಬರ್ಮಾದೇಶಕ್ಕೆ ಹೋಗಿ ಅಲ್ಲಿ ನೆಲಸಿ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಾರೆ. ಹಿಂದೀಯರು ಬರ್ಮೀಯರೊಡನೆ ಸುಲಭವಾಗಿ ಕಲೆಯಬಲ್ಲರಾದುದರಿಂದ ಬ್ರಿಟಿಷರಿಗೆ ಹಿಂದೀಯರು ದೊಡ್ಡ ಪ್ರತಿಸ್ಪರ್ಧಿಗಳಾಗಿ ಕಂಡುಬಂದಿದ್ದಾರೆ. ಈ ಕಾರಣದಿಂದ ಬ್ರಿಟಿಷರು ಬರ್ಮೀಯರನ್ನು ಹುರಿಗೊಳಿಸಿ ಹಿಂದೀಯರ ವಿರೋಧವಾಗಿ ಚಳವಳಿಕ್ಕೆ ಪ್ರೋತ್ಸಾಹಕೊಟ್ಟು ಬರ್ಮಾದೇಶವು ಹಿಂದೂಸ್ಥಾನದಿಂದ ಪ್ರತ್ಯೇಕವಾಗುವಂತೆ ಪ್ರಯತ್ನಿಸುತ್ತಾರೆ. ಈ ವರೆಗೆ ಹಿಂದೀಯರೂ ಬರ್ಮೀಯರೂ ಒಂದೇ ದೇಶದವರೆಂಬ ಬಂಧುಭಾವನೆ ಇದ್ದರು. ಈ ನೂತನ ಪ್ರೇರಣೆಗಳಿಂದ ಬ್ರಿಟಿಷರು ಹಿಂದೀಯರ ಮತ್ತು ಬರ್ಮೀಯರೊಳಗೆ ಭೇದ ಹುಟ್ಟಿಸಿ, ಹಿಂದೀಯರನ್ನು ಹೊರಹಾಕಿ ಬರ್ಮೀಯರ ಆರ್ಥಿಕ ಸಂಪತ್ತಿಯನ್ನು ಏನೊಂದು ತಡೆಯಿಲ್ಲದ ತಾವೇ ಬಳಕಾಳುವ ಸಾಧನೆಯಲ್ಲಿ ಬ್ರಿಟಿಷರು ಇರುತ್ತಾರೆ. ಬರ್ಮೀಯರು ಈ ಬಲೆಗೆ ಹೇಗೆ ಬೀಳುವರೊ ನೋಡಬೇಕು.

ಸೂಚನೆಗಳು
NOTES

ದಿಲ್ಲಿಯ ಎಸೆಂಬ್ಲಿಯ ಬಾಂಬು ಎಸೆತ ನಂಬ್ರ ಮುಗಿದು, ಇಬ್ಬರಿಗೆ ಜನ್ಮಾಂತರ ಶಿಕ್ಷೆ. ಇದರಿಂದ ಎಸೆಂಬ್ಲಿಯ ಬಾಂಬು ನಂಬ್ರ ಮುಗಿಯಿತು. ಈಗ ಇವರ ಮತ್ತು ಇನ್ನೂ ಇತರರ ಮೇಲೆ ಲಾಹೋರ ಬಾಂಬು ನಂಬ್ರ.

• • • •

ಜನ್ಮಾಂತರ ಶಿಕ್ಷೆ ಹೊಂದಿದವರು ಜೈಲಿನಲ್ಲಿ ಆಹಾರ ತೆಗೆದುಕೊಳ್ಳದೆ, ಒಬ್ಬರಿಗೆ ನಡಿಯಲು ಶಕ್ತಿ ಇಲ್ಲ. ಇನ್ನೊಬ್ಬರಿಗೆ ಏಳಲು ಶಕ್ತಿ ಇಲ್ಲ. ಲಾಹೋರಿನ ನಂಬ್ರ ವಿಚಾರಣೆ ಮುಂದರಿಸೋಣಾಯಿತು.

• • • •

ಈರ್ವರೂ ಇನ್ನೂ ಕೆಲವು ದಿವಸ ಉಪವಾಸ ಕೈಕೊಂಡರೆ ಶಿಕ್ಷೆಯಿಂದ ಪರಿಹಾರ ಆಗುವರು

• • • •

ಬೆಂಗಳೂರಿನ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಿತ್ರ ಹೊಸ ಮಾದರಿ ನಾಟಕಗಳು ನಡೆಯಲು ಪ್ರಾರಂಭಿಸಿದ್ದಾವೆ ವಿಶೇಷ ಮತ್ತೇನಿಲ್ಲ. ಪತ್ರಿಕೆಯ ಸುದ್ದಿಗಾರರಿಗೆ ಕ್ರಮವಾದ ಧೈರ್ಯವನ್ನು ಧರಿಸಲು ಕಲಿಸುವುದು.

• • • •

ಅಧ್ಯಾಪಕ ಖಾನರ ಮತ್ತು ಆ ರಾಯರ ಈ ರಾಯರ ಮಾನನಷ್ಟದ ಮೊಕದ್ದಮೆಗಳು ನಡಿಯುತ್ತಾ ಇವೆ. ನಂಬ್ರದ ಕಸಬು ವಿಶೇಷವಾಗಿ ಮ್ಯಾಜಿಸ್ಟ್ರೇಟರು ಬರೆಯುವ ಕಾಗದ ಮುಗಿಯುತ್ತಾ ಬಂತು.

• • • •

ಮೈಸೂರು ಸರಕಾರಕ್ಕೆ ವಾರ ಪತ್ರಿಕೆಗಳೆಲ್ಲಾ ಬಾಧಿಸುವ ನಕ್ಷತ್ರಗಳಾಗಿ ಕಾಣುತ್ತಿವೆ. ಪತ್ರಿಕೆಯವರು ಬರಿಯುವುದು ದೇಶ ಮಾತನಾಡಿದರೆ ಬಾಯಿಗೆ ಬೀಗ.

• • • •

ಮಂಗಳೂರಿಗೊಂದು ಸಿಟಿ ಆರ್ಯ ಸಮಾಜ ಸಂಘ ಏರ್ಪಡಿಸಿದ್ದಾರೆ. ಅನೇಕರು ಜಾತಿ ಬಿಟ್ಟವರು ಪುನಹ ಆರ್ಯ ಸಮಾಜಕ್ಕೆ ಸೇರುತ್ತಿರುವರು. ಹೆಚ್ಚಾಗಿ ಕ್ರೈಸ್ತರು ಹಿಂದುಗಳಾಗುತ್ತಾರೆ. ಸಮಾಜದವರು ಹಗಲು ರಾತ್ರೆ ಕಾಯುತ್ತಿರುವರು.

• • • •

ನಂದುರಬಾರದಲ್ಲಿ ಒಬ್ಬ ಅರಿವೇ ವ್ಯಾಪಾರಿಯು ತನ್ನ ಕೆಲವು ಕೋರ್ಟಿನ ಕೆಲಸಗಳನ್ನು ಸಾಧಿಸಿ ಕೊಳ್ಳುವದರ ಬಗ್ಗೆ ಕೋರ್ಟಿನ ಒಬ್ಬ ಕೆಲಸಗಾರನೊಬ್ಬನಿಗೆ ಎರಡು ರೂಪಾಯಿ ಲಂಚಕೊಟ್ಟನು.

• • • •

ಲಂಚ ಕೊಟ್ಟ ಸಾಹುಕಾರನು ಪಡಕೊಂಡದ್ದು ಮೂರು ತಿಂಗಳಕಠಿಣ ಶಿಕ್ಷೆ, ಮುನ್ನೂರು ರೂಪಾಯಿ ಜುರುಮಾನೆ ಲಂಚ ತೆಗೆದುಕೊಂಡ ಕೆಲಸಗಾರನಿಗೆ ಮೂರು ತಿಂಗಳುಗಳ ಕಠಿಣ ಸಜೆ.

• • • •

ಸಾವಿರಗಟ್ಟಲೆ ರೂಪಾಯಿ ಲಂಚ ತಿನ್ನುವ ಮೇಲಾಧೀಶರರ ಲಂಚ ಮಾಫಿ. ಸ್ವಲ್ಪ ಸಂಬಳ ಕಡಿಮೆ ದೊರಕುವ ಕೆಲಸಗಾರನ ಲಂಚಕ್ಕೆ ನಂಬ್ರ.

ಗೋವಾ ಸೋಡ್ತಿ.

ಗೋವಾ ಸೋಡ್ತಿಗಳು ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲಿ ಬಹಳವಾಗಿ ಪ್ರಚಾರದಲ್ಲಿವೆ. ಅಲ್ಲಲ್ಲಿ ಬಡ್ಡಿಬ್ಬರಿಗೆ ರೂಪಾಯಿ ಸಿಕ್ಕಿಯದೆಂದು ಸಾವಿರಾರು ಜನರು ತಮ್ಮ ದುಡ್ಡನ್ನು ಕಳಕೊಳ್ಳುತ್ತಾರೆ ಈ ಸೋಡ್ತಿಯು ಮುಂಬಯಿಯಲ್ಲಿಯೂ ಬಹಳ ಚಲಾವಣೆಯಲ್ಲಿದೆ. ಇತ್ತೀಚೆಗೆ ಈ ಸೋಡ್ತಿ ಚೀಟುಗಳ ಮಾರಾಟದೊಳಗಿನ ದೊಡ್ಡ ಮೋಸವು ಅಲ್ಲಿ ಕಂಡುಹಿಡಿಯಲ್ಪಟ್ಟಿದೆ. ಕೆಲವರು ಒಂದು ಪ್ರತ್ಯೇಕ ಮುದ್ರಣಾಲಯವನ್ನಿಟ್ಟು ಗೋವಾ ಸೋಡ್ತಿಯ ಚೀಟುಗಳನ್ನು ತಾವೇ ಮುದ್ರಿಸಿ ಫೋರ್ಜರಿ ಮಾಡಿ ಮಾರುತ್ತಿದ್ದರು. ಈ ಮೋಸವು ಈಗ ಹೊರಬಿದ್ದು ಕೆಲವರಿಗೆ ಶಿಕ್ಷೆಯಾಯಿತು. ಸುಲಭದಲ್ಲಿ ಲಾಭ ಮಾಡಿಕೊಳ್ಳಲು ಹೊರಡುವವರು ಸ್ವಲ್ಪ ಎಚ್ಚರವಾಗಿರುವುದೊಳ್ಳೇಯದು.

ಶಾಲಿವಾಹನ ಶಕೆ ೧೮೫೧ನೆಯ ವಿಭವಸಂವತ್ಸರದ ಆಷಾಢ ಶು. ೧೪ ಶನಿವಾರದಿಂದ ವಿಭವ ಸಂವತ್ಸರದ ಆಷಾಢ ಬ. ೫ ಶುಕ್ರವಾರದ ವರೆಗಿನ ಪಂಚಾಂಗ.

(ಗಣಿತರೀತಿಯ ಕಲಾಪಟ್ಟಿ (ಅಲ್ಲ))

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ	ಸೂರ್ಯ ಅಸ್ತ
20	ಶನಿ	೧೪	೪೪.೪೪	ಪೂ. ಷಾ	೩೦. ೦	೫	6.14	6.59
21	ರವಿ	●	೪೯.೧೪	ಉ. ಷಾ	೫. ೧	೬	6.15	6.58
22	ಸೋಮ	೧	೫೩.೩೨	ಶ್ರ. ಷಾ.	೧೧.೧೪	೭	6.15	6.58
23	ಮಂಗಳ	೨	೫೭.೪೬	ಶ್ರವಣ	೧೬.೩೨	೮	6.15	6.58
24	ಬುಧ	೩	೬೧.೪೪	ಧನಿಷ್ಠಾ	೨೧. ೦	೯	6.16	6.58
25	ಗುರು	೪	೫೯.೩೨	ಶತಭಿಷ	೨೪.೧೬	೧೦	6.16	6.58
26	ಶುಕ್ರ	೫	೫೯. ೧	ಪೂ. ಭಾ.	೨೬.೧೪	೧೧	6.16	6.57

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಶಾಖ) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ
12	86— 2	76— 9	0—37	—
13	85— 4	74— 0	0—57	—
14	87— 0	75— 2	0—56	—
15	87— 2	76— 8	0—15	—
16	87— 8	79— 5	0—02	—
17	86— 5	75— 1	0—34	—
18	86— 5	78— 2	0—12	—
				97—89

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಅ.	ವರೆಗೆ ರೂ. ಅ.
ಮಕ್ಕಿ ...	7— 0	7— 8
ಗೋಧಿ ...	6— 0	6— 8
ರಾಗಿ ...	5— 9	6— 2
ಊರ ಅವಲ್ ಬೆಳ್ತಿಗೆ ...	7— 0	7—10
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ ...	12— [illegible]	13— 0
ಸುಗ್ಗಿ ...	5—12	6— 6
ಎಳ್ಳು ಬೆಳ್ತಿಗೆ ಮುಡಿ ೧ಕ್ಕೆ ...	6— 4	6— 9
ಗೋಧಿ ಗೋಣಿ ೧ಕ್ಕೆ ...	15—12	20— 0
ಹುರುಳಿ ಗೋಣಿ ೧ಕ್ಕೆ ...	7— 6	9— 8
ಕಡಲೆ ಗೋಣಿ ೧ಕ್ಕೆ ...	15— 8	16— 8
ತೊಗರಿ ಗೋಣಿ ೧ಕ್ಕೆ ...	14— 8	16—8
ತೊಗರಿಬೇಳೆ ಗೋಣಿ ೧ಕ್ಕೆ ...	18— 8	27— 0
ಉದ್ದು ಗೋಣಿ ೧ಕ್ಕೆ ...	15— 0	16 0
ಹೆಸರು ಗೋಣಿ ೧ಕ್ಕೆ ...	14— 8	16— 0
ಊರು ಬೆಲ್ಲ ಖಂಡಿ ೧ಕ್ಕೆ ...	70— 0	74 0
ಉಪ್ಪು ಗೋಣಿ ೧ಕ್ಕೆ ...	4— 5	4—14
ಕೊಬ್ರಿ ಖಂಡಿ ೧ಕ್ಕೆ ...	90— 0	95—
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	29— 0	30—
ಎಳ್ಳಿಂಡಿ ಖಂಡಿ ೧ಕ್ಕೆ ...	35— 0	37— 8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	6— 8	7— 0
ಎಳ್ಳೆಣ್ಣೆ ಮಣ ೧ಕ್ಕೆ ...	7—12	8— 4
[illegible] ಬೆಳ್ತಿಗೆ ೧ಕ್ಕೆ ...	7—12	8— 4
ಮೋರಿಸ್ ಸಕ್ಕರೆ ಮಣ ೧ಕ್ಕೆ ...	3—12	3—13
[illegible] ಮೆಣಸು ...	5—10	6— 8
ಸಾಸಿವೆ ಮುಡಿ ೧ಕ್ಕೆ ...	8— 8	—
ಕೊತ್ತುಂಬರಿ ಮುಡಿ ೧ಕ್ಕೆ ...	3—12	[illegible] 0
[illegible] ಚಾಲಿ ಖಂಡಿ ೧ಕ್ಕೆ ...	365— 0	370— 0
ಕಾಳುಮೆಣಸು ಖಂಡಿ ೧ಕ್ಕೆ ...	435— 0	450— 0
[illegible] ಮಣ ೧ಕ್ಕೆ ...	47— 0	55—
[illegible] ಮುಡಿ ೧ಕ್ಕೆ ...	3—11	3—12
[illegible] ಖಂಡಿ ೧ಕ್ಕೆ ...	42— 8	45— 0
[illegible] ಮಣ ೧ಕ್ಕೆ ...	18— 0	18— 4
[illegible] ಮಣ ೧ಕ್ಕೆ ...	— 0	24— 0
[illegible] ೧ಕ್ಕೆ ...	15— 4	—
[illegible] ಮಣ ೧ಕ್ಕೆ ...	17— 0	17—
[illegible] ೧ಕ್ಕೆ ...	13—12	— 8
[illegible] ಖಂಡಿ ೧ಕ್ಕೆ	30— 0	37— 8

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತವೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ಹಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಕೈಕಾಲ್ಸೆಳೆಯುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅತ್ಯುತ್ತಮವಾಗಿರುತ್ತದೆ. ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂಧುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ ಮಂಗಳೂರು. ಬಂದರ್ ರೋಡ್.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಗ್ರಾಯವಾಗಲಿ ಅಂಚೆಯಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯುರ್ವೇದ ಸಾರಸಂಗ್ರಹ ರೂಪವಾಗಿರುವ ೫ ಭಾಷೆಗಳಲ್ಲಿ ಪ್ರಕಟಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಪೂರ್ತಿಯಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧಿಗಳಿಗನುಸಾರವಾಗಿ ನಡೆಯುವರೇ ಸಾಕು. ಹಾಗಿಲ್ಲದಿದ್ದರೆ ಅದರಲ್ಲಿ ಹೇಳಿರುವ ಉಪಾಯವನ್ನು ಮಾಡತಕ್ಕದ್ದು. ಈ ಪುಸ್ತಕಕ್ಕಾಗಿ ಇಂದೇ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಜೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ ಸುಂದರವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ ನಮ್ಮ ಲೋಕಪ್ರಸಿದ್ಧವಾದ ಟಾನಿಕ್ಕೆಂಬುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವವು. ಈ ಮಾತ್ರೆಗಳು ಮಲಬಂಧ ಮೊದಲು ನಪುಂಸಕತ್ವದವರೆಗಿನ ವ್ಯಾಧಿಗಳನ್ನು ಪರಿಹರಿಸುತ್ತವೆ.

ಡಿ. ಗುಲಬ್ ಮಾರ್ಟ್, ಮಂಗಳೂರು.

ತಿಳಿಯದೇ ಧಾತುಕ್ಷಯವಾಗಿ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮಧ್ಯ ತಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು ದೊರೆಯದೇ ನಿರುತ್ಸಾಹ ನಿರಾಶೆಗಳು ಹುಟ್ಟುತ್ತವೆ. ಅಂಥ ಮನುಷ್ಯರ ಧಾತು ಕ್ಷಯರೋಗವು ಹೋಗಿಸಿ, ಪೂರ್ಣ ಪುರುಷತ್ವವನ್ನು ಕೊಡುವಂತಹದ್ದು.

ವೈದ್ಯರಾಜ ಶ್ರೀ ಕೇಶವಶಾಸ್ತ್ರೀ ಪುರಜಕರ ಇವರ.

ಶಕ್ತಿ ಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತ ಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ.

ಇದರ ಉಪಯೋಗದಿಂದ [illegible] ಶರೀರ, [illegible] ಮನಸ್ಸು, [illegible] ಸ್ವಭಾವ, [illegible] ಹೆಚ್ಚಿಸುವುದು, [illegible] ಅಜೀರ್ಣ, [illegible] ಇಂದ್ರಿಯದ [illegible] ಪಿತ್ತವಿಕಾರ, ಅಗ್ನಿಮಾಂದ್ಯ, ನಿದ್ರಾನಾಶ, ಮಲಾವರೋಧ, [illegible] ಎಲ್ಲ ರೀತಿಯ ಮೂತ್ರರೋಗ ಮೊದಲಾದ ಎಲ್ಲ [illegible] ಮೊದಲಾದ [illegible] ವೃದ್ಧಿಯಾಗಿ ಇಂದ್ರಿಯವನ್ನು [illegible] ದೇಹದಲ್ಲಿ [illegible] ಹುಟ್ಟುತ್ತದೆ. [illegible] ಸಂಸಾರಸುಖವು ಸಿಗುತ್ತದೆ. ಹೆಂಗಸರ [illegible] ಮೊದಲಾದ [illegible] ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು [illegible] ಅರ್ಧತೊಲೆ [illegible] ಅರ್ಧ ತೊಲೆ ತಕ್ಕೊಂಡು ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು [illegible] ತೊಲೆಯ ವರೆಗೆ ತಕ್ಕೊಳ್ಳಬೇಕು. [illegible] ದಿನಗಳ ವರೆಗೆ ಸಾಕಾಗುವ ೧ ಬಾಟಲಿಗೆ ರೂ. ೧—೪—೦, ೪ ಬಾಟಲಿಗೆ ರೂ. ೪, ೧೨ ಬಾಟಲಿಗೆ ರೂ. ೧೧, ಹಾಗು ೧ ಬಾಟಲಿ ಪ್ರತ್ಯೇಕ. ಅಂಚೆ ಹಾಗು ಪಟ್ಟಿಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ,

ನಿಪ್ಪಾಣಿ, ಜಿಲ್ಲಾ ಬೆಳಗಾಂವಿ.

[illegible]

ಶುದ್ಧಿ — ಮಂಗಳೂರು, ಕಾರ್ಕಳ, ಕಾಸರಗೋಡು,
ಉಡುಪಿ, ಬಸ್ರೂರು, ಗುರ್ಪುರ, ... ೬-೯
[illegible] ಸುಧಾರಣೆಯ ಅವಶ್ಯಕತೆ. . . ೯
[illegible] ಹೊಸ ದೋರಣೆಯ ವಿದ್ಯಾಭ್ಯಾಸ ೧೧
ಹುಟ್ಟಿಂದ ಹುಟ್ಟಿಬಂದುದು : (ಕತೆ) . . . ೧೪
ವರ್ತಮಾನ, ... ೨
[illegible] ದಯೂಬಿಲಿ, ಹಾಸ್ಯಲಹರಿ . . . ೧೨

ಸ್ವದೇಶಾಭಿಮಾನಿ.

ತಾರೀಕು ೧೯ನೇ ಶುಕ್ರವಾರ ಜೂಲೈ ೧೯೨೯.

ಮೌ| ಶೌಕತ್ ಅಲ್ಲಿಯವರ ಹೊಸ ಕೆಲಸ.

ಮೌ| ಶೌಕತ್ ಅಲ್ಲಿಯವರು, ಮೌ| ಮಹಮ್ಮದ ಅಲ್ಲಿಯವರೊಡನೆ ಮಹಾತ್ಮಾ ಗಾಂಧೀಜಿಯವರ ಅತ್ಯಂತ ಸ್ನೇಹಿತ ಬಂಧುಗಳಾಗಿದ್ದು ಅಸಹಕಾರ ಸಮಯದಲ್ಲಿ ಹಿಂದೂ-ಮುಸಲ್ಮಾನರೈಕ್ಯವೆಂಬ ದೊಡ್ಡ ಕಟ್ಟಡವನ್ನು ಹೊರಡಿಸಿದವರಾಗಿರುತ್ತಾರೆ. ಈ ಅಲ್ಲಿ ಬಂಧುಗಳ ಬಲವಿಗಾಗಿ ಮಹಾತ್ಮಾಜೀಯವರು ಸರ್ವಕರದಲ್ಲಿಯೂ ಯತ್ನಿಸಿದ್ದಾರೆ. ಹಿಂದೂ-ಮುಸಲ್ಮಾನ ಐಕ್ಯವನ್ನು ಸಾಧಿಸುವೆನೆಂದು ಗಾಂಧೀಜಿಯವರು ಖಿಲಾಫತ್ತನ್ನು ಸ್ವರಾಜ್ಯ ಸಾಧನೆಯೊಳಗೆ ಸೇರಿಸಿದಿಟ್ಟರು. ಇದರಿಂದ ಮುಸಲ್ಮಾನರ ಭಕ್ತಿಯನ್ನು ರಾಷ್ಟ್ರಭಕ್ತಿಯೊಳಗೆ ಪ್ರೇರಿಸಬೇಕಾಗಿ ಸಂದಿಗ್ಧ ಸಮಯದಲ್ಲಿಯೇ ಖಿಲಾಫತ್ತಿನ ಕಡೆಗೆ ಕಳುಹಿಸಿಬಿಟ್ಟು ಜಾತೀಯತೆಗೆ ಎಂದೂ ಸಿಕ್ಕದ ಪ್ರೋತ್ಸಾಹವನ್ನು ಮಹಾತ್ಮಾಜೀಯವರು ಕೊಟ್ಟು ರಾಷ್ಟ್ರ ಕಾರಣಕ್ಕೆ ಶಾಶ್ವತವಾದ ಹಾನಿಯನ್ನು ತಂದಿಕ್ಕಿದರೆಂದು ಹೇಳಿದರೆ ಮಹಾತ್ಮಾಜೀಯವರ ಭಕ್ತರಿಗೆ ನಮ್ಮ ಮೇಲೆ ಅಸಮಾಧಾನವಾಗಬಹುದಾದರೂ ವಸ್ತುಸ್ಥಿತಿಯು ನಮ್ಮನ್ನು ಪೂರಾ ಪುಷ್ಟೀಕರಿಸುವುದು.

ಈ ದಿನ ಈ ಮೌಲಾನಾ ಬಂಧುಗಳಷ್ಟು ಜಾತೀಯತೆಯ ಸ್ವಾರ್ಥಸಾಧಕರು ಹಿಂದೂಸ್ಥಾನದಲ್ಲಿ ಇನ್ಯಾರೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಇದು ಅವರ ಸ್ವೇಚ್ಛೆಯದ್ದೆಂದು ಹೇಳಲಾಗುವುದಿಲ್ಲ. ಅಸಹಕಾರವು ನಿರ್ಬಲವಾದ ಮೇಲೆ ಧುರೀಣರಾಗಿ ಮೆರೆಯುವಂತಹ ಸಂದರ್ಭಗಳು ಬೇರೆ ಇರಲಿಲ್ಲ. ಮೇಲಾಗಿ ಖಿಲಾಫತ್ತಿನ ಹೆಸರಿನಲ್ಲಿ ಬೆಳೆಸಿ ಹೆಚ್ಚಿಸಿದ ಮುಸಲ್ಮಾನೀ ಜಾತೀಯ ಸ್ವಾರ್ಥವು ಖಿಲಾಫತ್ತಿನ ನಿರ್ಯಾಣದ ಮೇಲೆ ಬೇರೆ ಉದ್ದೇಶಗಳನ್ನು ಕಾಣಲಾಗದೆ ಜಾತೀಯ ಕಲಹಗಳಲ್ಲಿ ಪರ್ಯವಸಾಯಿಯಾಗಿ, ಒಟ್ಟೇ ರಾಷ್ಟ್ರೀಯ ತತ್ವಗಳಿಗೆ ಮುಸಲ್ಮಾನರಲ್ಲಿ ಕೇಳುವವರಾರೂ ಇಲ್ಲದೆ ಹೋಯಿತು. ಈ ಕಾರಣದಿಂದ ಅಲ್ಲಿ ಬಂಧುಗಳ ಧುರೀಣತ್ವವೇ ಕಳೆದುಹೋದಂತಾದುದಲ್ಲದೆ ಅಲ್ಲಿ ಬಂಧುಗಳು ಆರ್ಥಿಕ ಅಡಚಣೆಗಳಲ್ಲಿ ಬಿದ್ದು ನಿಸ್ಸಹಾಯರಾಗಬೇಕಾಯಿತು. ಜಾತೀಯತೆಯ ಸ್ವಾರ್ಥವನ್ನು ಉತ್ತೇಜಕ ಧ್ವನಿಯಲ್ಲಿ ಸಾರುವುದೇ ಕಳೆದುಹೋದ ಧುರೀಣತ್ವವನ್ನು ಪುನಃ ಹೊಂದುವ ಏಕ ಮಾತ್ರ ಉಪಾಯವಾಗಿ ಮೌಲಾನಾ ಬಂಧುಗಳಿಗೆ ತೋರಿತು. ಈ ಸಮಯದಲ್ಲಿಯೇ, ಅತ್ಯಂತ ಹತ್ತಿರದ ಸ್ನೇಹಿತರಾದ ಮೌಲಾನಾ ಗಾಂಧೀಜಿಯವರಿಂದ ದೂರವಾದುದೂ ಒಂದು ಮುಖ್ಯ ಸಂಗತಿಯಾಗಿದೆ. ಆ ಮೇಲೆ ಅಲ್ಲಿ ಬಂಧುಗಳು ಸ್ಪಷ್ಟವಾದ ಜಾತೀಯ ಸ್ವಾರ್ಥದ ಧೋರಣವನ್ನು ಸಾರಲು ತೊಡಗಿದರು. ಫಲತಃ ಮುಸಲ್ಮಾನ ಧುರೀಣತ್ವವೂ ಅವರಿಗೆ ಪುನಃ ಲಭಿಸಿತು.

ದೇಶದ ಧುರೀಣರೆಯ ಮಾನಸಿಕತೆಯು ಇಂತಹ ಕನಿಷ್ಠ ಸ್ಥಿತಿಗೆ ಬರಬೇಕಾಯಿತೆಂಬುದಕ್ಕೆ ನಾವು ಬಹಳ ವಿಷಾದಿಸ [illegible] ಹಿಂದೂ-ಮುಸಲ್ಮಾನರ [illegible] ಮುಗ್ಧರಾದವರು ಈಗ ಅದರ [illegible] ಹಿಂದೂಸ್ಥಾನದ ದೌರ್ಭಾಗ್ಯವಾಗಿದೆ. ಹಿಂದೂಸ್ಥಾನದೊಳಗಿನ ಈಗಿನ ಜಾತೀಯ ಸಂಬಂಧಗಳ ಪರಿಸ್ಥಿತಿಯೂ ಬಹಳ ನಿರಾಶಾಜನಕವಾಗಿರುತ್ತದೆ. ಮುಂಬಯಿಯೊಳಗಿನ ಕಳೆದ ಫೆಬ್ರವರಿಯ ಜಾತೀಯ ಕಲಹಗಳೂ ಈ ಪರಿಸ್ಥಿತಿಯ ಪರಮಾವಧಿಯಾಗಿರುತ್ತದೆ. ಮಜೂರ ಚಳವಳವು ಜಾತೀಯ ಕಲಹವಾಗಿ ಪರಿಣಮಿಸಿದುದು ಹೇಗೆಂಬುದೇ ವಿಚಾರಣೀಯವಿದೆ. ಈ ಕಲಹಗಳ ಘಟನೆಗಳ ವಿಚಾರಣೆ ಬಗ್ಗೆ ಒಂದು ಕಮಿಟಿಯು ನೇಮಕವಾಗಿ ಅದು ಈಗ ಸಾಕ್ಷ್ಯಗಳನ್ನು ತೆಗೆದುಕೊಳ್ಳುತ್ತಿದೆ. ಕೆಲವು ಹಿಂದೂ ಸಾಕ್ಷಿಗಳು ಮುಸಲ್ಮಾನ ಧುರೀಣರ ಮೇಲೂ ಎಲ್ಲಾ ಮುಸಲ್ಮಾನ ಸಾಕ್ಷಿಗಳು ಹಿಂದೂ ಮಹಾಸಭೆ, ಆರ್ಯಸಮಾಜ, ಶುದ್ಧಿ, ಸಂಘಟನ ಚಳವಳಗಳ ಮೇಲೂ ಇದರ ಜವಾಬ್ದಾರಿಯನ್ನು ಹೊರಿಸುತ್ತಿವೆ. ಆದರೆ ಸರಿಯಾಗಿ ವಿಚಾರಿಸಿದ್ದಲ್ಲಿ ಮುಸಲ್ಮಾನರ ವಿಚಿತ್ರವಾದ ಜಾತೀಯ ಸ್ವಾರ್ಥವಲ್ಲವಾದರೆ ಸಾಮಾನ್ಯ ಮಜೂರ ಚಳವಳವು ಜಾತೀಯ ಕಲಹದಲ್ಲಿ ಪರ್ಯವಸಾಯಿಯಾಗಲಾರದು. ಮುಂಬಯಿ ಕಲಹದ ಘಟನೆಗಳನ್ನು ಒಂದರ ಹಿಂದೆ ಒಂದಾಗಿ ಬರೆಯುವುದಾದರೆ—(೧) ಮೊದಲು ಮಜೂರರು ಮುಷ್ಕರ ಹೂಡಿದರು, (೨) ಕಾರಖಾನೆದಾರರು ಪಠಾಣರನ್ನು ನೇಮಿಸಿದರು, (೩) ಪಠಾಣರು ಮಕ್ಕಳನ್ನು ಕದ್ದುಕೊಳ್ಳುತ್ತಾರೆಂಬ ಸುದ್ದಿ ಹೊರಟಿತು, (೪) ಮಜೂರರು ಪಠಾಣರನ್ನು ಹೊಡೆಯತೊಡಗಿದರು, (೫) ಮುಸಲ್ಮಾನರು ಪಠಾಣರ ಪಕ್ಷ ವಹಿಸಿ ಹಿಂದೂಗಳನ್ನು ಹೊಡೆಯತೊಡಗಿದರು.

ಕೇವಲ ಮಜೂರ ಚಳವಳದ ಪರಿಣಾಮವಾಗಿ ಪಠಾಣರ ಮೇಲಿನ ಅತ್ಯಾಚಾರಗಳು ಉಂಟಾಗಿದ್ದವು. ಪಠಾಣರು ಮುಸಲ್ಮಾನರೂ ಮಜೂರರಲ್ಲಿ ಅಧಿಕ ಸಂಖ್ಯಾಕರು ಹಿಂದೂಗಳೂ ಆಗಿರುವರೆಂದು, ಮುಸಲ್ಮಾನರಿಗೆ ಪಠಾಣರ ಮೇಲೆ ಸಹಾನುಭೂತಿಯುಂಟಾಯಿತು. ಮೌ| ಶೌಕತ್ ಅಲ್ಲಿಯವರೂ ಈ ತರದ ಜಾತೀಯ ಪರಿವರ್ತನಕ್ಕೆ ಕಾರಣರಾದರು. "ಮುಸಲ್ಮಾನರನ್ನು ಹಿಂದೂಗಳ ಪ್ರತಿಯಾಗಿ ಸಜ್ಜುಗೊಳಿಸಬೇಕೆಂ" ಮರುದಿನವೇ ಮುಂಬಯಿಯ ಭೆಂಡಿ ಬಜಾರಿನಲ್ಲಿ ಮುಸಲ್ಮಾನರು ಗುಂಪು ಕೂಡಿ ಹಿಂದೂಗಳನ್ನು ಘಾಯಪಡಿಸಲು ಆರಂಭಿಸಿದರು."

ಆದರೂ ದೂರು ಹಿಂದೂಗಳ ಮೇಲೆ. ಮೌ| ಶೌಕತ್ ಅಲ್ಲಿಯವರು ಮುಂಬಯಿ ಗಲಭೆಗಳ ವಿಚಾರಣಾ ಕಮಿಟಿಯ ಮುಂದೆ ಸಾಕ್ಷ್ಯ ಹೇಳುವಾಗ ತಪ್ಪೆಲ್ಲಾ ಹೊರಿಸಿದುದು ಹಿಂದೂ ಮಹಾಸಭೆ, ಆರ್ಯಸಮಾಜ, ಶುದ್ಧಿ, ಸಂಘಟನ ಇವುಗಳ ಮೇಲೆ. ಆದರೆ ಇವೆಲ್ಲವುಗಳೂ ಹುಟ್ಟಿದುದು ಯಾವಾಗ? ಹಿಂದೂ ಮತವು ಹಲವು ಸಮಯದಿಂದ ಮುಸಲ್ಮಾನ ಆಕ್ರಮಣದಿಂದ ಹೊಂದಿದ ಕಷ್ಟಗಳಿಂದ ಈ ಚಳವಳಗಳು ಆತ್ಮರಕ್ಷಣೆಗಾಗಿ ಹುಟ್ಟಿದುವು. ಇದನ್ನು ಹಿಂದೂಸ್ಥಾನದ ಜಾತೀಯ ಚಳವಳಗಳ ಇತಿಹಾಸವನ್ನು ನೋಡಿದರೆ ತಿಳಿಯುವುದು. ಮುಸಲ್ಮಾನರ ಮತಾಂತರ, ತಾಂಜಿಮ್ ಮೊದಲಾದ ತಮ್ಮ ಚಳವಳಗಳನ್ನು ಬಲಪಡಿಸದಿದ್ದರೆ ಮೇಲಿನ ಹಿಂದೂ ಚಳವಳಗಳು ಉಂಟಾಗುತ್ತಲೇ ಇರಲಿಲ್ಲ. ಮುಸಲ್ಮಾನರು ತಮ್ಮ ಚಳವಳಗಳನ್ನು ಬಿಟ್ಟುಕೊಟ್ಟರೆ ಹಿಂದೂಗಳು ತಮ್ಮ ಚಳವಳಗಳನ್ನು ಬಿಟ್ಟುಕೊಡದೆ ಇರಲಾರರು. ಮೌ| ಶೌಕತ್ ಅಲ್ಲಿಯವರು ಮುಂಬಯಿ ಕಮಿಟಿಗೆ ಹೀಗೆ ಹೇಳಿದರು—ನೀವು ಇವೆಲ್ಲಾ ಸಾಕ್ಷ್ಯವನ್ನು ತೆಗೆದುಕೊಂಡ ಮೇಲೆ ಜಾತೀಯ ಕಲಹಗಳನ್ನು ನಿವಾರಿಸಲು ಉಪಾಯಗಳನ್ನು ಸೂಚಿಸದಿದ್ದರೆ ನಾವು ಕೈಕಟ್ಟಿ ಕೂತುಕೊಳ್ಳುವೆನೆಂದು ಎಣಿಸಲಾಗದು. ನಾನು ಮುಸಲ್ಮಾನರನ್ನು ಸುಸಂಘಟಿಸುವ ಆವಶ್ಯಕತೆಯುಂಟಾಗುವುದು. ಮೌ| ಶೌಕತ್ ಅಲ್ಲಿಯವರ ಈ ಬೆದರಿಕೆಯ ಮಾತುಗಳೇ ಇದೀ ಮುಸಲ್ಮಾನ ಸಂಗಡದ ಮನೋವೃತ್ತಿಯನ್ನು ತೋರಿಸುವುದು. ಈ ಬೆದರಿಕೆಯಿಂದ ಏನಾದರೂ ಪ್ರಯೋಜನವಾದೀತೆಂದು ಮೌಲಾನರು ನೆನಸುವುದಾದರೆ, ಅವರು ತಪ್ಪು ಆಲೋಚನೆ ಮಾಡುವರು. ಈ ಬೆದರಿಕೆಗಳನ್ನು ಬಿಟ್ಟು ಅತ್ಯಾಚಾರಗಳಿಂದಲೂ ಹಿಂದೂ ಚಳವಳವನ್ನು ಹಿಂದಿಕ್ಕಲಾಗಿಲ್ಲ.

ಒಟ್ಟಾರೆ ಯಾವಾಗ ಜಾತೀಯ ಚಳವಳಗಳು ಇಂತಹ ಧುರೀಣರಿಂದ ಸ್ವತಂತ್ರವಾಗಿ, ದೂರದರ್ಶಿಗಳೂ, ಉದಾರಮಾನಸಿಕರೂ, ಪರಮತಸಹಿಷ್ಣುಗಳೂ ಆಗಿರುವವರಿಂದ ಅಧಿಕರಿಸಲ್ಪಡುವುವೊ ಆಗ ಮಾತ್ರವೇ ಎರಡೂ ಜಾತಿಗಳಿಗೆ ಹಿತವಿರುವುದು. ಇಲ್ಲವಾದರೆ ಯಾವ ರಾಜತಂತ್ರವು ದೇಶೋ[illegible] ದ್ವಾರದ [illegible] ಹಿಂದೂ [illegible] ಸರ್ಕಾರದಿಂದ [illegible] ಅರ್ಥ ಸ್ವರಾಜ್ಯವು ಹಿಂದೂಸ್ಥಾನದ ಈ ಎರಡೂ ಮುಖ್ಯ ಜಾತಿಗಳ ಜನವನ್ನು ಸುಲಭವಾಗಿ ಸಾಧಿಸಲ್ಪಡುವುದು.

ವಿದೇಶ ವರ್ತಮಾನ.

— ಇಂಗ್ಲೆಂಡಿನ ಯೋರ್ಕಶಾಯರ ಮತ್ತು ಲಿಂಕೆಶಾಯರ ಜಿಲ್ಲೆಗಳಲ್ಲಿ ನೀರು ಬಹಳೇ ಕಡಿಮೆಯಾಗಿರುವುದು. ಇನ್ನು ಒಂದು ತಿಂಗಳೊಳಗೆ ಇದ್ದ ನೀರೆಲ್ಲವೂ ಮುಗಿದು ಕುಡಿಯಲು ನೀರಿಗೆ ತತ್ವಿಯುಂಟಾಗಬಹುದೆಂದು ನಂಬಲಾಗಿಯದೆ. ಆದರೆ ಲಂಡನಿನಲ್ಲಿ ನೀರು ಅಷ್ಟೊಂದು ಕಡಿಮೆಯಾಗಿರುವುದಿಲ್ಲ.

— ಬಾಚಾ-ಇ-ಸಾಕೋವಿನ ಹುಕುಮಿನ ಮೇರೆಗೆ ಸರದಾರ ಅಲಿ ಅಹಮದ ಜಾನರವರು ವಧಿಸಲ್ಪಟ್ಟರೆಂದು ಪೇಶಾವರದಲ್ಲಿ ಬಲವಾದ ವಾರ್ತೆಯಿದೆ. ಜಲಾಲಾಬಾದದಲ್ಲಿ ಬಾಚಾ-ಸಾಕೋನ ವಿಜಂಟನಾಗಿದ್ದ ಮಹಮ್ಮದ ಅಲಿಮಖಾನನು ಕೆಲವು ಶಿನ್ವಾರಿಗಳಿಂದ ವಧಿಸಲ್ಪಟ್ಟಿರುವನು.

— ಅರಸರ ಆರೋಗ್ಯವು ಅಭಿವೃದ್ಧಿ ಹೊಂದಿರುತ್ತದೆ. ಆದರೆ ಇನ್ನೂ ಸ್ವಲ್ಪ ದೋಷವಿರುವ ಕಾರಣ ಎದೆಯ ಬಲಭಾಗದಲ್ಲಿ ಪುನಃ ಆರು ಮಂದಿ ಡಾಕ್ಟರರು ಪರೀಕ್ಷಿಸ ಮಾಡಿರುವರು.

— ಪರ್ಷಿಯದ ಟಾಬ್ರಿಜ ಎಂಬಲ್ಲಿ ವಿಶೇಷವಾದ ನೆರೆಬಂದು ಬಹಳ ನಷ್ಟವುಂಟಾಗಿರುತ್ತದೆ. ಇದುವರೆಗೆ ಎರಡು ಸಾವಿರ ಮನೆಗಳು ಬಿದ್ದುಹೋಗಿರುತ್ತವೆ. [illegible] ಬೀಳುತ್ತಲೇ ಇವೆ. ಹಲವು ಹಳ್ಳಿಗಳು ನಿರ್ನಾಮ ಗೊಳಿಸಲ್ಪಟ್ಟಿವೆ. ಸತ್ತ ಮನುಷ್ಯರ ಸ್ಥಿತಿ ೩೭೫ ಮಂದಿಗಳ ಶವಗಳು ಇದುವರೆಗೆ ದೊರಕಿರುತ್ತವೆ.

— ಲಂಡನಿನಲ್ಲಿ ಒಬ್ಬ ಹಿಂದೂ ಸಾಹುಕಾರನ ಕಾರನ್ನು ಒಬ್ಬ ಹಿಂದೂವು ನಡಿಸಿಕೊಂಡಿದ್ದನು. ಒಂದು ದಿನ ತನ್ನ ಯಜಮಾನನ [illegible] ಒಂದು ಅಪಘಾತವನ್ನು ಮಾಡಿದ್ದಕ್ಕಾಗಿ, ಸಾಹುಕಾರನ ಮೇಲೆ ಮೊಕದ್ದಮೆಯಾಗಿ [illegible] ದಂಡವನ್ನು ಆತನು ತೆರಬೇಕಾಯಿತು. ಆದರೆ ತನ್ನ ಹಣವನ್ನು ಕೊಡಲು ಶಕ್ತನಲ್ಲದ ಆ ಸಾಹುಕಾರನು ಆತ್ಮಹತ್ಯವನ್ನು ಮಾಡಿಕೊಂಡನು. ಹಿಂದೂಗಳಲ್ಲದವರು ಹಿಂದೂಸ್ಥಾನದಲ್ಲಿ ಮೋಟಾರ ಅಪಘಾತಗಳನ್ನು ಮಾಡಿದರೆ ಅವರನ್ನು ಕೇಳುವವರೇ ಇಲ್ಲ.

— ಹಿಂದೂಸ್ಥಾನದಿಂದ ಸನ್ಯಾಸಿಯಾಗಿ ಹೊರಟ ವ್ಯಾಸರಾಯ [illegible] ಲಂಡನಿಗೆ ಹೋಗಿ ತಲುಪಿದರು. ಅವರನ್ನು ಸ್ವಾಗತ [illegible] ಸರಕಾರದ ಪರವಾಗಿ ಮಿ. ವೆಜ್ಜವುಡ್ ಬೆನ್ನರವರು ಅವರನ್ನು ಸ್ವಾಗತಿಸಿರುವರು. [illegible] ಅವರನ್ನು ಪುಷ್ಪಮಾಲೆಗಳಿಂದ ಶೃಂಗರಿಸಿದರು.

— ಸ್ಯಾಮನ್ ಕಮಿಶನ ವರದಿಯು ಡಿಸೆಂಬರ್ ಆಖೈರಿಯೊಳಗೆ ಹೊರಬೀಳಲಾರದೆಂದು ಮಿ. ವೆಜ್ಜವುಡ್ ಬೆನ್ನರ ಹೇಳಿ ಅಂದರೆ ಕಾಂಗ್ರೆಸಿನಿಂದ ನಿಯಮಿಸಲ್ಪಟ್ಟ ಅವಧಿಯ ಅಂತ್ಯದೊಳಗೆ ಡೊಮಿನಿಯನ್ ಸ್ಟೇಟಸಿನ ಕೇಳಿಕೆಯ ವಿಷಯವಾಗಿ ಮಜೂರ ಸರಕಾರವು ಯಾವ ನಿರ್ಧಾರವನ್ನೂ ಮಾಡ [illegible] ನಿಶ್ಚಿತವಾದ ಹಾಗಾಯಿತು.

ಹಿಂದೂ ವೈಮಾನಿಕರಾದ ಮಿ. ಕಟಕರು ಟ್ರಿಪೋಲಿಯಲ್ಲಿ [illegible] ಅಲ್ಲಿ ಇಳಕೊಂಡು ಅಲ್ಲಿಂದ ಪುನಃ ಹಾರಿದರು. ವಿಮಾನದ ಕಾರ್ಬುರೇಟರು ಸ್ವಲ್ಪ ಹಾಳಾದುದರಿಂದ ಟ್ರಿಪೋಲಿಯಿಂದ [illegible] ಮರುಭೂಮಿಯಲ್ಲಿ ಇಳಿಯಬೇಕಾಯಿತು. ಅಲ್ಲಿ ವಿಮಾನವನ್ನು ಬೇಗನೆ ಸರಿಪಡಿಸಿ, ಅತನು ಪುನಃ ಹಾರಿದನು.

— [illegible] ಅವರಲ್ಲದವರೂ [illegible] ಹೊರಟು ತಲಪಿರುವರು.

— ಕಿತ್ತೂರ್ನಾಡಿನಲ್ಲಿ ಬಹು ವಿಶೇಷ ಪ್ರಮಾಣದಲ್ಲಿ ಮಳೆ ಬಿದ್ದುದರಿಂದ, [illegible] ನೆರೆಯು [illegible] ಜಿಲ್ಲೆಯಲ್ಲಿ ಬಂದಿರುತ್ತದೆ. ಮೂವತ್ತು ಹಳ್ಳಿಗಳು [illegible] ಶಾಲೆಗಳೂ ಮನೆಗಳೂ, ಮಂದಿರಗಳೂ ಪೂರಾ ನಾಶವಾಗಿರುತ್ತವೆ. ಸತ್ತವರು ಬಹಳ [illegible] ಅಂದಾಜುಮಾಡಲಾಗಿಯದೆ.

— ಅಮೇರಿಕದಲ್ಲಿ ಒಂದು ಅತಿ ದೊಡ್ಡ ವಿಮಾನವು ತಯಾರಾಗಿರುತ್ತದೆ. [illegible] ಎಂದು, ಇದರಲ್ಲಿ ೨೫ ಮಂದಿ [illegible] ವಿಮಾನವು ನೆಲಕ್ಕೆ ಹಾರಿರುತ್ತದೆ.

— ಪರ್ಷಿಯದ [illegible] ಜಿಲ್ಲೆಯಲ್ಲಿ ಪುನಃ ಒಂದು ಭೂಕಂಪವುಂಟಾಯಿತು. ಕೆಲವು ಹಳ್ಳಿಗಳು ನಾಶಮಾಡಲ್ಪಟ್ಟವು. ಹಗಲು ಹೊತ್ತಿನಲ್ಲಿ ಭೂಕಂಪವುಂಟಾದುದರಿಂದ ನಷ್ಟವು ಅಷ್ಟೊಂದು ಹೆಚ್ಚಾಗಲಿಲ್ಲ.

— ಇಂಗ್ಲಾಂಡಿನಲ್ಲಿ ನಿರುದ್ಯೋಗವು ಹೆಚ್ಚಿರುವುದರಿಂದ ಜನರನ್ನು ಉದ್ಯೋಗಶಾಲೆಗಳನ್ನಾಗಿ ಮಾಡಲು ಸಾಲಕೊಡುವ ೨೫ ಮಿಲಿಯ ಪೌಂಡುಗಳ ಒಂದು ನಿಧಿಯನ್ನು ನಿರ್ಮಿಸುವರು.

— ಅಮಾನುಲ್ಲರವರು ಇಟಲಿಗೆ ತಲುಪಿರುವರು. ಇಟಲಿ ಸರಕಾರದವರು ಅವರ ಇರುವಿಕೆಯ ಬಗ್ಗೆ ಇದುವರೆಗೆ ಯಾವ ಆಕ್ಷೇಪವನ್ನೂ ಎತ್ತಿಲ್ಲ. ಆದರೆ ಬಾಚಾ-ಸಾಕೋವಿನಪ್ಪಲು ಸರಕಾರವು ಸ್ಥಾಪನೆಯಾಗಿ, ಪರರಾಷ್ಟ್ರಗಳ ಮೇಲೆ ಅದರ ಕೈಯಿರುವುದಾದರೆ ಮಾತ್ರ ಅಮಾನುಲ್ಲರವರ ಇರುವಿಕೆಗೆ ಆಗ ಆಕ್ಷೇಪಗಳು ಬರಬಹುದೋ ಏನೆಂದು ಸಂಶಯವಿದೆ.

ಒಳದೇಶ ವರ್ತಮಾನ.

— ಇಡೀ ಹಿಂದೂಸ್ಥಾನದ ಸ್ತ್ರೀಯರ ಶಿಕ್ಷಣಕ್ಕಾಗಿ ಒಂದು ಸಂಘವು ಸ್ಥಾಪಿಸಲ್ಪಟ್ಟಿರುತ್ತದೆ. ಇದಕ್ಕಾಗಿ ಈ ಸಂಘದವರು ಹಣವನ್ನು ಕೂಡಿಸುವರು. ಆಲ್ ಇಂಡಿಯಾ ಸ್ತ್ರೀ ಪರಿಷತ್ತಿನವರು ಪ್ರಚಾರ ಮಾಡುತ್ತಿರುವಷ್ಟಕ್ಕೆ ಅದೇ ರೀತಿ ಶಿಕ್ಷಣವನ್ನು ಅಭಿವೃದ್ಧಿ ಪಡಿಸುವರು. ಲೇಡಿ ಇರ್ವಿನರವರೇ ಇದರ ಪ್ರೆಸಿಡೆಂಟರಾಗಿರುವರು. ಸರೋಜಿನಿ ದೇವಿಯವರೇ ಇದರ ಪ್ರಚಾರಕರು.

— ಲೋಕಮಾನ್ಯ ಬಾಲಗಂಗಾಧರ ತಿಲಕರವರ ಸಂಸ್ಕಾರ ನಡೆ[illegible]ವನ್ನು ಜರಗಿಸಿದ ಮುಂಬಾಯಿಯ ಚೌಪಾಟಿಯಲ್ಲಿ ಅವರ ಸ್ಮಾರಕಕ್ಕಾಗಿ ಅವರ ಪ್ರತಿಮೆಯೊಂದನ್ನು ಸ್ಥಾಪಿಸಬೇಕೆಂಬ ಆಲೋಚನೆಯು ಹದಿನಾರು ವರುಷಗಳ ಹಿಂದೆ ಉಂಟಾಗಿತ್ತು. ಆದರೆ ಕಾರಣಾಂತರಗಳಿಂದ ಅದು ಕೈಕೊಳ್ಳಲ್ಪಟ್ಟಿರಲಿಲ್ಲ. ಮೊನ್ನೆ ತಾನೆ ಮುಂಬಾಯಿಯಲ್ಲಿ ನಡೆದ ಒಂದು ಸಭೆಯಲ್ಲಿ ಈ ತಿಂಗಳು ಆಖೈರಿಯೊಳಗೆ ೫೦ ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ, ಪ್ರತಿಮೆಯನ್ನು ಪ್ರತಿಷ್ಠಿಸಬೇಕೆಂದು ನಿರ್ಣಯವಾಗಿರುತ್ತದೆ. ಹಲವು ಸಾವಿರ ರೂಪಾಯಿಗಳನ್ನು ವಂತಿಗೆಯ ರೂಪದಲ್ಲಿ ಕೊಡುವದಾಗಿ ಸಭೆಯಲ್ಲಿ ಕೂಡಿದ ಹಲವರು ವಾಗ್ದಾನಮಾಡಿದರು.

— ಪಂಜಾಬಿನ ಹೋಶಿಯಾರಪುರದಲ್ಲಿ ಒಂದು ಮದುವೆಯ ಸಮಯದ [illegible] ಊಟದಲ್ಲಿ ವಿಷವು ಮಿಶ್ರವಾಗಿ ಹಲವು ಬ್ರಾಹ್ಮಣರು ಸತ್ತುಹೋದರು. ಒಬ್ಬ ಯುವಕನು ತನ್ನ ಮಗನ ಮದುವೆಯ ಮೊದಲು ಒಂದು ಭೋಜನಕ್ಕಾಗಿ ೪೧ ಮಂದಿಗಳನ್ನು ಆಮಂತ್ರಿಸಿದನು. ಭೋಜನವು ಮುಗಿದೊಡನೆ ೫ ಮಂದಿಗಳು ಸತ್ತುಹೋದರು. ಸ್ವಲ್ಪ ಸಮಯದ ತರುವಾಯ ಮೂವರು ಸತ್ತುಹೋದರು. ಮಾರುದಿನ ಭೋಜನದ ಮೇಲೆ ಇಬ್ಬರು ಸತ್ತುಹೋದರು. ವಾಂತಿಭೇದಿಯ ಕಾರಣದಿಂದ ಹೀಗೆ ಮರಣಗಳುಂಟಾದುವೆಂದು ಕೆಲವರ ಅಭಿಪ್ರಾಯ. ಈ ಬಗ್ಗೆ ಶೋಧನೆಯು ನಡೆಯುತ್ತಿದೆ.

— ಮುಂಬಾಯಿ ಪ್ರಾಂತದ ಕಾಂಗ್ರೆಸ್ ಕಮಿಟಿಯವರು ೫೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಗಿರಣಿಗಳ ಸಮೀಪದಲ್ಲಿಯೇ ಒಂದು ಕಾಂಗ್ರೆಸ್ ಮಂದಿರವನ್ನು ಕಟ್ಟಬೇಕೆಂದು ನಿಶ್ಚಯಿಸಿರುವರು.

— ಸರ್. ತೇಜ ಬಹದೂರ್ ಸಪ್ರೂರವರೊಂದಿಗೆ ಅಭ್ಯಾಸವನ್ನು ಮಾಡಿಕೊಂಡಿದ್ದ ಶ್ರೀಮತಿ ಶ್ಯಾಮಕುಮಾರಿ ನೆಹರು ಎಂಬವಳು ಅಲಹಾಬಾದಿನ ಹೈಕೋರ್ಟಿನಲ್ಲಿ ವಕೀಲಿ ವೃತ್ತಿಯನ್ನು ಮಾಡಲು ತೊಡಗಿರುವಳು. ಉತ್ತರ ಹಿಂದೂಸ್ಥಾನದಲ್ಲಿ ಇವಳೇ ಮೊದಲನೆಯ ಸ್ತ್ರೀ ವಕೀಲಳು. ಮೊದಲಾಗಿ ಅವಳು ಒಂದು ಕೊಲೆಯ ಮೊಕದ್ದಮೆಯಲ್ಲಿ ವ್ಯವಹರಿಸಿ ಇಬ್ಬರನ್ನು ಬಿಡುಗಡೆ ಹೊಂದಿಸಿದಳು. ಅವಳ ಚಾತುರ್ಯದ ಬಗ್ಗೆ ಜಡ್ಜರು ಒಳ್ಳೆಯ ಶಿಫಾರಸು ಮಾಡಿರುವರು.

— ಮಿ| ಭಗತಸಿಂಗ್ ಮತ್ತು ದತ್ತ ಇವರಿಬ್ಬರು ಉಪವಾಸವಿದ್ದುದರ ಬಗ್ಗೆ ಲಾಹೋರಿನ ಸರ್ವರೂ ಸಹಾನುಭೂತಿಯನ್ನು ತೋರಿಸುತ್ತಿರುವರು. ಒಂದೆರಡು ದಿನಗಳ ಹಿಂದೆ ಲಾಹೋರಿನ ವಿದ್ಯಾರ್ಥಿ [illegible] ರಾತ್ರಿ ಸಮಯ ಲಾಹೋರಿನ ಬೀದಿಗಳಲ್ಲಿ ಕೆಂಪು ಪತಾಕೆಗಳನ್ನು ಹಿಡಿದು ಮೆರವಣಿಗೆಯನ್ನು ಮಾಡಿದರು. ಧ್ವಜಗಳಿಗೆ ದತ್ತ ಮತ್ತು ಸಿಂಗರ ಚಿತ್ರಗಳನ್ನು ತೂಗಹಾಕಿದ್ದರು. ಒಂದೆರಡು ತಾಸುಗಳೊಳಗೆ ಇವೆಲ್ಲ ಫಂಡಿಗೆ ೫೦೦ ರೂಪಾಯಿಗಳನ್ನು ಕೊಡಹಾಕಿದರು. ಅನಾರ್ಕಲಿ ಬಜಾರದಲ್ಲಿ ಒಂದು ವಿಶೇಷವು ನಡೆಯಿತು. ಒಬ್ಬ ಆಂಗ್ಲೋ ಇಂಡಿಯಾನನು ಒಂದು ಮನೆಯಲ್ಲಿ ನಿಂತುಕೊಂಡಿದ್ದಾಗ ವಂತಿಗೆಯನ್ನು ಕೂಡ ಹಾಕುವ ಸ್ವಯಂಸೇವಕರು ಆತನನ್ನು ಸಮೀಪಿಸಿ, ವಂತಿಗೆಯನ್ನು ಕೇಳಿದರು. ವಂತಿಗೆಯ ಉದ್ದೇಶವನ್ನು ಕೇಳಿದೊಡನೆ ಆ ಆಂಗ್ಲೋ ಇಂಡಿಯಾನನು ಸಂತೋಷದಿಂದ ಕಿಸೆಯೊಳಗಿನ ಒಂದು ರೂಪಾಯಿಯನ್ನು ತೆಗೆದು ಕೊಟ್ಟುಬಿಟ್ಟನು.

— ಡಿಲ್ಲಿಯಲ್ಲಿ ಇಬ್ಬರು ಹುಡುಗರು ರಿವಾಲ್ವರು ಹಿಡಿದುಕೊಂಡದರ ಬಗ್ಗೆ ಕೈದು ಮಾಡಲ್ಪಟ್ಟರು. ಅವರು ಹದಿನೆರಡು [illegible] ವರಾಗಿದ್ದರು. ಅವರನ್ನು ಕೋರ್ಟಿಗೆ ತರುವಾಗ ಅವರು 'ವಂದೇ ಭಾರತ' ಎಂದು ದೊಡ್ಡದಾಗಿ ಜಯಘೋಷವನ್ನು ಮಾಡಿದರು. ಅವರ ವಿಚಾರಣೆಯು ಇದೇ ಶುಕ್ರವಾರಕ್ಕೆ ಮುಂದರಿಸಲ್ಪಟ್ಟಿದೆ.

— ಲಾಹೋರಿನಲ್ಲಿ ಈ ವರುಷ ನಡೆಯುವ ಕಾಂಗ್ರೆಸ್ಸಿನ ಅಧ್ಯಕ್ಷರಾಗಲು ಗಡಿಪ್ರಾಂತ್ಯದ ಕಾಂಗ್ರೆಸ್ ಕಮಿಟಿಯವರು ಮಹಾತ್ಮಾಜಿಯವರ ಹೆಸರನ್ನು ಸೂಚಿಸಿರುವರು.

— ಪಂಜಾಬಿನಲ್ಲಿ ಕಾಂಗ್ರೆಸ ಕೆಲಸವು ಒಳ್ಳೇ ಭರದಿಂದ ನಡೆಯುತ್ತಲಿದೆ. ಸುಮಾರು ಮೂರು ಸಾವಿರ ಮಂದಿ ಮೆಂಬರರು ಸೇರಿಸಲ್ಪಟ್ಟಿರುವರು.

— ಬರಿಸಾಲದ ಜೈಲಿನಲ್ಲಿ ಮಿ. ಸತೀಂದ್ರಸೇನರು ೫೦ ದಿನಗಳ ಉಪವಾಸವನ್ನಾಚರಿಸಿ ಕೊನೆಗೆ ಉಪವಾಸವನ್ನು ತ್ಯಜಿಸಿರುವರು. ಮಿ. ಸುಭಾಷ ಚಂದ್ರಭೋಸರವರೂ ಬರಿಸಾಲ ಮುನಿಸಿಪಾಲಿಟಿಯ ಪ್ರೆಸಿಡೆಂಟರವರೂ ಕಾರಾಗೃಹಕ್ಕೆ ಹೋಗಿ ಉಪವಾಸವನ್ನು ಬಿಟ್ಟುಬಿಡಬೇಕೆಂದು ಅವರಿಗೆ [illegible]. ಇದಕ್ಕಾಗಿ ಅವರು ಉಪವಾಸವನ್ನು ತ್ಯಜಿಸಿದರು.

— ಮೈಸೂರಿನ ಸಿಟಿ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಸಾಕ್ಷಿಯಾದ ಒಬ್ಬ ಹಿಂದುವು ಟೊಪ್ಪಿಯನ್ನು ಧರಿಸದೆ ತಲೆಗೆ ಶ್ಯಾಲ್ ಮಾಡಿಕೊಂಡು ಬಂದಿದ್ದನು. ತಲೆಗೆ ಟೊಪ್ಪಿಯನ್ನಾಗಲೀ, ಮುಂಡಾಸನ್ನಾಗಲೀ ಧರಿಸದೆ ಬಂದುದು ಆತನ ತಪ್ಪೆಂದು ಮೆಜಿಸ್ಟ್ರೇಟರು ಹೋಗಿ ಟೊಪ್ಪಿಯನ್ನು ಧರಿಸಿ ಬರಬೇಕೆಂದು ಆತನನ್ನು ಮನೆಗೆ ಕಳುಹಿಸಿದರು.

— ಡಾ| ಸತ್ಯಪಾಲರ ವಿಚಾರಣೆಯಾಗಿ ಅವರಿಗೆ ಎರಡು ವರುಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿರುತ್ತದೆ. ಇದು ಹೊರತು ಅವರು ೫೦೦ ರೂಪಾಯಿ ಜುಲುಮಾನೆಯನ್ನು ಕೊಡಬೇಕೆಂದಿರುತ್ತದೆ. ಅವರು ಮಾತ್ರ ಇದರ ಮೇಲೆ ಅಪೀಲು ಮಾಡಲಿರುವರು.

— ಹೊಸ ತರದ ಒಂದು ಚರಕವನ್ನು ತಯಾರಿಸುವವರಿಗೆ ಮಹಾತ್ಮಾಜೀಯವರು ಒಂದು ಲಕ್ಷ ರೂಪಾಯಿಗಳ ಒಂದು ಬಹುಮಾನವನ್ನು ಕೊಡಲಿರುವರಂತೆ. ಕಳೆದ ೭ ವರುಷಗಳಿಂದ ಹೊಸ ಚರಕವನ್ನು ಕಂಡು ಹಿಡಿಯಲು ಹಲವರು ಯತ್ನಿಸಿದರು. ಆದರೆ ಅದು ಇದು ವರೆಗೂ ಸಾಧ್ಯವಾಗಿಲ್ಲ.

— ಈಗ ಇಂಗ್ಲಾಂಡಿನಲ್ಲಿರುವ [illegible] ಎಮ್. ಎಲ್. ಎ. ರವರು ನಮ್ಮ ಸ್ವಾತಂತ್ರ್ಯ ಸಾಧನೆಯ ಬಗ್ಗೆ ಸ್ವರಾಜ್ಯದ ಚಳವಳವನ್ನು ಧುರೀಣರಾಗಿ ಪ್ರಾರಂಭಿಸಬೇಕೆಂದೂ ಆದರೆ ಈಗಿನ ಮಜೂರ ಸರಕಾರದ ಮಂತ್ರಿಗಳಿಗೆ ಮನೋವ್ಯಥೆಯುಂಟಾಗುವ ರೀತಿಯಲ್ಲಿ ಮಾತ್ರ ವರ್ತಿಸಬಾರದೆಂದೂ ಸೂಚಿಸಿರುವರು.

— ಮಹಾಶಾ ರಾಜಪಾಲರನ್ನು ಕೊಲೆಮಾಡಿದ ಇಲಾಮದೀನನಿಗೆ ಮೊದಲು ಫಾಶಿ ಶಿಕ್ಷೆಯು ವಿಧಿಸೋಣಾಗಿತ್ತು. ಇತನು ಲಾಹೋರಿನ ಹೈಕೋರ್ಟಿನಲ್ಲಿ ಅಪೀಲು ಮಾಡಲು ಹೋಗಿದ್ದಾಗ ಜಡ್ಜರು ಅಪೀಲನ್ನು ಸ್ವೀಕರಿಸಲು ನಿರಾಕರಿಸಿದರು. ಆತನ ಪರವಾಗಿ ಮಿ. ಜಿನ್ನಾರವರು ಎಷ್ಟು ವಾದಿಸಿದರೂ ಪ್ರಯೋಜನವಾಗಲಿಲ್ಲ.

— ತಿನ್ನವೆಲ್ಲಿ ಜಿಲ್ಲೆಯ ಮುಕ್ಕೇರಿ ಎಂಬ ಹಳ್ಳಿಯಲ್ಲಿ ಹಗಲು ಹೊತ್ತಿನಲ್ಲಿ ಬೆಂಕಿಯ ದೆಸೆಯಿಂದ ಸುಮಾರು ೩೦೦ ಗುಡಿಸಲುಗಳು ಸುಟ್ಟುಹೋದುವು. ಒಬ್ಬ ಮುದುಕಿಯ ಮನೆಯಲ್ಲಿ ಬೆಂಕಿಯುಪ್ಪತಿಸಿತು. ಮುದುಕಿಯು ಸುಟ್ಟು ಸತ್ತಳು. ಸುಮಾರು ನೂರಾರು ದನಕರುಗಳು ನಾಶವಾಗಿರುತ್ತವೆ. ಗುಡಿಸಲುಗಳೊಳಗೆ ಅಕ್ಕಿಯನ್ನು ಸಂಗ್ರಹಿಸಿಟ್ಟು ಇದ್ದರಿಂದ ಎರಡು ಲಕ್ಷ ರೂಪಾಯಿಗಳಷ್ಟು ನಷ್ಟವುಂಟಾಗಿರುತ್ತದೆ.

— ನೀರಿನ ಸರಬರಾಯಿಯನ್ನು ಹೆಚ್ಚಿಸುವಿಕೆಯ ಸಲುವಾಗಿ ಡಿಲ್ಲಿ ಮುನಿಸಿಪಾಲಿಟಿಯವರು ೫,೮೦,೦೦೦ ರೂಪಾಯಿಯ ಮೊಬಲಗನ್ನು ಸಂಕಲ್ಪ ಮಾಡಿರುವರು.

ದಕ್ಷಿಣ ಕನ್ನಡ.

ಮಂಗಳೂರು: — ಇಲ್ಲಿಯ ಹೊಸ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರಾದ ಶ್ರೀ ಆರ್. ಶಾಂತರವರು ಕಳೆದ ಸೋಮವಾರ ಇಲ್ಲಿಗೆ ಬಂದು ತಲುಪಿರುವರು.

ಇಲ್ಲಿಯ ಸಬ್ ಜಡ್ಜರಾಗಿದ್ದ ಮಿ. ಕೆ. ಎ. ವರ್ಗೀಸರವರಿಗೆ ಉಟಕಾಮಂಡಿಗೆ ವರ್ಗವಾಗಿರುತ್ತದೆ.

ಭಾರತ ಯುವಕ ಸಂಘದ ಪರವಾಗಿ ಇದೇ ತಿಂಗಳ ೨೪ನೇ ಬುಧವಾರದಿಂದ ಗಣಪತಿ ಹೈಸ್ಕೂಲಿನಲ್ಲಿ ಪ್ರತಿ ಬುಧವಾರ ಮತ್ತು ಆದಿತ್ಯವಾರ ಸಾಯಂಕಾಲ ೫|| ಘಂಟೆಗೆ ಹಿಂದೀ ಶಿಕ್ಷಣವನ್ನು ಕೊಡುವರು.

ತಾರೀಕು ೧೩-೭-'೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೩೭ ಮರಣಗಳಾದುವು. ಈ ಪೈಕಿ ಜ್ವರದಿಂದ ೩, ಅತಿಸಾರದಿಂದ ೩, ಕ್ಷಯರೋಗದಿಂದ ೮, [illegible] ೧, ಸಿಡುಬಿನಿಂದ ೧, ಇತರ ಎಲ್ಲಾ ಕಾರಣದಿಂದ ೧೯. ಒಟ್ಟು ಜನನಗಳು ೩೮.

ಕಾರ್ಕಳ — ಸಂಯುಕ್ತ [illegible] ಕಾರ್ಕಳ ಕೂಟ (The Karkal Co-operative Union)ದ ವಾರ್ಷಿಕ ಮಹಾಸಭೆಯು ಇದೇ ಕಳೆದ ತಾ. ೩೦-೬-೨೯ನೇ ಆದಿತ್ಯವಾರ ಅಪರಾಹ್ನ ೩ ಘಂಟೆಗೆ ಜರಗಿತು. ಮುಂದಿನ ವರ್ಷಕ್ಕೆ ಕಾರ್ಯಕರ್ತರನ್ನು ಆರಿಸಿದರು. ಚಾಲ್ತಿ ವರುಷಕ್ಕೆ ಮ. ರಾ. ರಾ. ವಾಸುದೇವಯ್ಯ (ಅಧ್ಯಕ್ಷ), ಕೆ. ಬಾಬುರಾಯ ಪೈ (ಕಾರ್ಯದರ್ಶಿ) ಕೆ. ಸಾಂತಯ್ಯ ಕಾಮತ್, ಪಿ. ರಾಮರಾವ್, ಆರ್. ಕೇಶವ ಪ್ರಭು, ಅಜೆಕಾರ್ [illegible], ಮತ್ತು ಯಸ್. ಮಹಾಬಲ [illegible] ಡೈರೆಕ್ಟರರಾಗಿ ಆರಿಸಲ್ಪಟ್ಟಿರುವರು.

ಕಾಸರಗೋಡು: — ಈ ತಾಲೂಕಿನಲ್ಲಿ ಕೆಲವು ದಿನಗಳಿಂದ ಬಂದ ನೆರೆಯಿಂದುಂಟಾದ ಹಾವಳಿಯ ವಿಷಯ ಏನು ಮಾಡಬೇಕೆಂದು ಆಲೋಚಿಸುವರೆ ತಾ. ೯-೭-೨೯ನೇಲ್ಲಿ ಕಾಸರಗೋಡು ಪಟ್ಟಣದ ಸಭೆಕೂಡಿತು. ಸುಮಾರು [illegible] ಮನೆಗಳು ಬಿದ್ದುಹೋಗಿಯೂ ಹೆಚ್ಚು ವಿಸ್ತಾರದ ಗದ್ದೆಗಳಲ್ಲಿ ಹೊಯಿಗೆ ತುಂಬಿದುದಾಗಿಯೂ ತಿಳಿದುಬಂತು. ನೆರೆಯಿಂದ ನಷ್ಟವನ್ನು ತಯಾರಿಸುವರೆ ಕೆಲವರು ಸ್ವಯಂಸೇವಕರು ಹಳ್ಳಿಗಳಿಗೆ ಹೋಗಿರುತ್ತಾರೆ. ೧೨ ಮಂದಿ ಮೆಂಬರರಿಂದ ಕೂಡಿದ ಒಂದು ಕಮಿಟಿಯನ್ನು ಏರ್ಪಡಿಸಲಾಯಿತು. ಶ್ರೀಯುತ ಮಹಮ್ಮದ ಶಮ್ನಾಡ್ ಯಂ. ಯಲ್. ಸಿ.ಯವರನ್ನು ಅಧ್ಯಕ್ಷರಾಗಿಯೂ, ವಕೀಲ್ ಕಂಬಳೆ ನರಸಿಂಗ ಪ್ರಭುಗಳನ್ನು ಉಪಾಧ್ಯಕ್ಷರಾಗಿಯೂ, ವಕೀಲರಾದ ಯಂ. ಉಮೇಶರಾವ್ ಮತ್ತು ಕೆ. ಸುಂದರಶ್ಯಾಮ ಶೆಟ್ಟಿಯವರನ್ನು ಕಾರ್ಯದರ್ಶಿಯವರಾಗಿಯೂ ಚುನಾಯಿಸಲಾಯಿತು. ನೆರೆಹಾವಳಿಯಿಂದ ಸಂಕಷ್ಟದಲ್ಲಿರುವ ಬಡ ರೈತರಿಗೆ ಸಹಾಯಮಾಡುವ ಬಗ್ಗೆ ಒಂದು ನಿಧಿಯನ್ನು ಏರ್ಪಡಿಸಬೇಕಾಗಿ ನಿರ್ಣಯಿಸಲಾಯಿತು. ನಿರಾಶ್ರಿತರಾದ ಬಡರೈತರಿಗೆ ಕೈಲಾದಷ್ಟು ಸಹಾಯ ಮಾಡಬೇಕಾಗಿ ವಿನಂತಿ.

ಬಂಟವಾಳ — ಇಲ್ಲಿ ನೆರೆಯಿಂದ ಹಾಳಾದ ಮನೆಗಳ [illegible] ಪರಿಹಾರಕ್ಕೆ ಕೂಡಲೇ ಏರ್ಪಾಟಿಗೆ ಇಲ್ಲಿಯ ಡಿಪ್ಯುಟಿ ತಹಸೀಲುದಾರರವರು ಇಂಜಿನಿಯರಿಂಗ್ ಇಲಾಖೆಯವರಿಗೆ ಬರೆದು ನೆರೆ ಬಂದು ಹೋದ ೨-೩ ದಿವಸಗಳಲ್ಲಿಯೇ ಮರಮ್ಮತ್ತು ಮಾಡಿಸಿರುವರು. ಬಿದ್ದು ಹೋದ ಮನೆ ಅಂಗಡಿಗಳ ಲೆಖ್ಖವನ್ನು ಸರಿಯಾಗಿ ಮಾಡಿರುವರಂತೆ.

[illegible]ನೇ ತಾರೀಕು ಆದಿತ್ಯವಾರ [illegible] ಘಂಟೆಗೆ ಜಿಲ್ಲಾ ಕಲೆಕ್ಟರ್ ದೊರೆಗಳು ಪೋಲೀಸ ಸುಪರಿಂಟೆಂಡೆಂಟು ದೊರೆಗಳು ಇಲ್ಲಿಗೆ ಬಂದು ಬಿದ್ದು ಹೋದ ಅಂಗಡಿ ಮನೆ ಮುಂತಾದವುಗಳನ್ನು [illegible] ತಿರುಗಾಡಿ ನೋಡಿದರು. ೧೫ನೇ ತಾರೀಕು ಸೋಮವಾರ ಮಧ್ಯಾಹ್ನ ಡಿಪ್ಯುಟಿ ಕಲೆಕ್ಟರರವರು ಇಲ್ಲಿಗೆ ಬಂದು ಮನೆ ಅಂಗಡಿ ಬಿದ್ದು ಹೋದವರನ್ನು ಒಟ್ಟುಗೂಡಿಸಿ ಎತ್ತರವಾದ ಸ್ಥಳಗಳಲ್ಲಿ ಮನೆಯನ್ನು ಕಟ್ಟಿಸುವುದಾದರೆ ಸಹಾಯವು ದೊರೆಯುತ್ತದೆಂದು ಹೇಳಿದರಂತೆ. ಏನಾದರೂ ರಿಲೀಫ್ ಹಣ ದೊರಕೀತೆಂದು ಕಾದಿದ್ದ ಜನರು ನಿರಾಶರಾಗಿ ಮನೆಗೆ ಹಿಂತಿರುಗಿದರು.

ಅಜ್ಜಾವರ - ತಾ. ೬-೭-'೨೯ನೇ ಶನಿವಾರ ದಿವಸ ನೆರೆನೀರು ತುಂಬಿ ಕಾಂತಮಂಗಲ, ಕುದಿಯಡ್ಕ ಮತ್ತು ನೆಲ್ಲೂರು ಎಂಬ ಸ್ಥಳಗಳಲ್ಲಿ ಸುಮಾರು ೧೫ ಆದಿದ್ರಾವಿಡರ ಮತ್ತು ೬ ಮರಾಟಿ ಜಾತಿಯವರ ಮನೆಗಳು ಆಹುತಿಯಾಗಿದ್ದುವಲ್ಲದೆ ಇತರ ಜಾತಿಯವರ ಕೆಲವು ಮನೆಗಳು ಕೂಡಾ ನಾಶವಾಗಿರುತ್ತವೆ. ಈ ಪೈಕಿ [illegible] ವರ [illegible] ಉಗ್ರಾಣ ಮನೆಸಾಮಾನು ನೆರೆನೀರು ಪಾಲಾದ್ದು ವಿಷಾದಕರ. ಲಕ್ಷ್ಮೀನಾರಾಯಣಯ್ಯರು ತನ್ನ ಸಾಮಾನು ಸಾಗಿಸುವದಕ್ಕಿಂತ ಮುಂದಾಗಿ ಗ್ರಾಮಪಂಚಾಯತ ಕೋರ್ಟಿನ ಮತ್ತು ಸಹಕಾರಿ ಸಂಘದ ರಿಕಾರ್ಡು ವಗೈರೆ ಸಾಗಿಸುತ ವಿಲೆವಾರಿಮಾಡಿ ಕಾಪಾಡಿಕೊಂಡದ್ದು ಶ್ಲಾಘನೀಯವೇ ಸರಿ. ಈ ರಿಕಾರ್ಡು ಮತ್ತು ಸಾಮಾನುಗಳನ್ನು ಸಾಗಿಸುವರೆ ಸಹಾಯಮಾಡಿದ ಸುಳ್ಯ ಯೂನಿಯನ್ ಸುಪ್ರವೈಸರ ರಾ| ಯಂ. ತಿಮ್ಮಾ ರೈಗಳ [illegible]ಸ ಕೂಡಾ ಶ್ರೇಯಸ್ಕರವೇ. ಆದಿ ದ್ರಾವಿಡರ ಮತ್ತು ಮರಾಟಿ ಜಾತಿಯವರ ಮನೆಗಳು ಹೊಳೆ ಬದಿಯಲ್ಲಿದ್ದು ಕೂಡಲೇ ನೀರು ತುಂಬಿ ಹೋಗಿರುವದರಿಂದ ಯಾರಿಗೂ ಸಹಾಯ ಮಾಡುವರೆ ಅನುಕೂಲ ಕೂಡಾ ಆಗದೆ ಇದ್ದುದರಿಂದ ಇವರ ಸಾಮಾನುಗಳು ಕೂಡಾ ನೆರೆ ನೀರಿಗೆ ಆಹುತಿಯಾಗಿರುವದರಿಂದ ಸರಕಾರದವರು ಮತ್ತು ಕಾಂಗ್ರೆಸಿನವರು ಸಹಾಯಮಾಡಿದ್ದರೆ ಬಹು ಉಪಕಾರವಾಗುತ್ತಿತ್ತು.

ಗುರುವುರ — ಇದೇ ಕಳೆದ ತಾ ೧೨-೭ ೨೯ರಲ್ಲಿ ಡಿಸ್ಟ್ರಿಕ್ಟ್ ಲೇಬರ್ ಆಫೀಸರರೂ ಮ ಲೇಬರ್ ಇನ್ಸ್‌ಪೆಕ್ಟರರೂ ಇಲ್ಲಿಯ ಆದಿದ್ರಾವಿಡರ ಎಲಿಮೆಂಟರಿ ಶಾಲೆಯನ್ನು ಸಂದರ್ಶನಮಾಡಿ ಹಿಂದಕ್ಕೆ ಹೋಗಿರುವರು.

ಕೆಲವು ತಿಂಗಳ ಹಿಂದೆ ಕಂದಾವರ ಗ್ರಾಮದ ಒಬ್ಬ ಕ್ರೈಸ್ತನನ್ನು ಕೊಂದ ಮೊಕದ್ದಮೆಯಲ್ಲಿ [illegible] ವರುಷಗಳ ಶಿಕ್ಷೆ ಆಗಿ [illegible] ಹೊಂದಿ ಊರಿಗೆ ಬಂದಿದ್ದ ಉಗ್ರಪ್ಪನೆಂಬ ಬಿಲ್ಲವ ಜಾತಿಯ ಹುಡುಗನು ಸದ್ರಿ ಮೊಕದ್ದಮೆಯಲ್ಲಿ ಮುಖ್ಯ ಸಾಕ್ಷಿಗಾರನಾಗಿದ್ದ [illegible] ಶೆಟ್ಟಿಯೆಂಬವನಿಗೆ ಕೆಲವು ದಿವಸಗಳ ಹಿಂದೆ ಮೆಟ್ಟಿನಿಂದ ಹೊಡೆದು ಜಖಂ ಪಡಿಸಿದ್ದರ ಕುರಿತು ಇಲ್ಲಿಯ ಪಂಚಾಯತ ಕೋರ್ಟಿನಲ್ಲಿ ಸದ್ರಿ ಉಗ್ರಪ್ಪ ಪೂಜಾರಿಯ ಮೇಲೆ ಕ್ರಿಮಿನಲ್ ದಾವಾ ದಾಖಲಾಗಿಯದೆ, ಇದಕ್ಕೆ ಇದೇ ಬರುವ ತಾ ೧೫ ೭-೨೯ಕ್ಕೆ ಮುಂದರಿಸಿಯದೆ. ತೀರ್ಮಾನ ನೋಡಲಿಕ್ಕಿದೆ.

ಶ್ರೀ [illegible] ದೇವಸ್ಥಾನದ ಮೊಕ್ತೇಸರರೊಳಗಿನ ಕಾದಾಟ ಹಳ್ಳಿಗಳ ಪಂಚಾಯತ ಕೋರ್ಟುಗಳಿಗೆ ಕಾಟವಾಗಿ ಪರಿಣಮಿಸಿಯದೆ. ಹಳ್ಳಿಗಳಲ್ಲಿ ಶ್ರೀ ಅಮ್ಮನವರ ಬಾಬ್ತು ವಿಶ್ವಕರ್ಮ ಬ್ರಾಹ್ಮಣರಾದ ಹಳ್ಳಿ ನಿವಾಸಿಗಳ ಕೂಡ ಜನ ಇದ್ದ ಹಣವನ್ನು ಅಭಿವೃದ್ಧಿಪಡಿಸುವದಕ್ಕಾಗಿ (ಮೊಕ್ತೇಸರರೊಳಗಿನ ನ್ಯಾಯಗಳು ತೀರ್ಮಾನವಾಗುವ ತನಕ) ತಮ್ಮ ತಮ್ಮೊಳಗೆ [illegible] ಈ ಕಲಹಗಳಿಗೆ ಕಾರಣವಾಗಿಯದೆ. ಒಂದೆರಡು ವ್ಯಾಜ್ಯಗಳು ಇನ್ನೂ ಇಲ್ಲಿಯ ಪಂಚಾಯತ ಕೋರ್ಟಿನಲ್ಲಿ ದಾಖಲಾಗಿಯದೆ. [illegible]

[illegible]

[illegible]

ಬಾಲಿಕಾ ಪಾಠಶಾಲೆಗಳ ಸುಧಾರಣೆಯ ಅವಶ್ಯಕತೆ.

(ಲೇಖಕ:— [illegible] ಶೆಟ್ಟಿ)

ಕಾಲವು ಗತಿಸಿದಂತೆ ಮನುಷ್ಯನ ಆಚಾರ ವಿಧಿಯ ಮಾರ್ಗಗಳಲ್ಲಿ ಸುಧಾರಣೆ ಹೊಂದುತ್ತಿರುವದು ಪ್ರತ್ಯಕ್ಷವಿರುವದಷ್ಟೆ. [illegible]

[illegible]

ಪ್ರಕೃತ ಪರಿಸ್ಥಿತಿಯಲ್ಲಿ ಹುಡುಗರ ಶಾಲೆಗಳು [illegible] ಬಂದಂತೆ, [illegible] ವೃದ್ಧಿಯೂ [illegible]

([illegible]ನೇ ಪುಟಕ್ಕೆ ಮುಂದುವರಿಸಿಯದೆ.)

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ಸೌತ್ ಕೆನರಾ ಕಾಂಞಂಗಾಡ (S.I.R.)

ಆಯುರ್ವೇದ ವೈದ್ಯ ಶಾಖೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯಶಾಸ್ತ್ರ ಪರೀಕ್ಷೆಯಲ್ಲಿ ಮೊದಲು ತೇರ್ಗಡೆ ಹೊಂದಿ ಪ್ರಸಿದ್ಧರಾದ 'ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮುಸ್ಸಾದ' ಅವರ ಕೃಪೆಯಿಂದ ವಿದ್ಯಾಭ್ಯಾಸ ಮಾಡಿ ಅನುಭವಶಾಲಿಗಳಾದ ಕೆಲವು ವೈದ್ಯರಿಂದ ನಡೆಸಲ್ಪಡುವ ಈ ಸ್ಥಾಪನೆಯಲ್ಲಿ ಸರ್ವ ಕಾಲಗಳಲ್ಲಿಯೂ ರೋಗಿಗಳನ್ನು ಚಿಕಿತ್ಸೆ ಮಾಡಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹ್ಯಗಳು, ಘೃತಗಳು, ಚೂರ್ಣ, ವಟಿಕೆ, ಅರಿಷ್ಟಾಸವಗಳು ಮೊದಲಾದ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಮಿತ ಬೆಲೆಯಲ್ಲಿ ತಯಾರಿರುತ್ತವೆ. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ಪಥ್ಯ ಆಹಾರದ ಕ್ರಮ, ವೃತ್ತಿ ಇವುಗಳನ್ನು ತಿಳಿಸಿದರೆ ಔಷಧಗಳ ಆವಶ್ಯಕತೆ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಇಲ್ಲವರೇ ಎಂಬ ಕಷ್ಟಗಳು ತ್ರೈಯರ ಸಂಗತಿಗಳಲ್ಲಿ ಎಷ್ಟು ಪ್ರಕಟ ಪಡದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ ಮುಂದು ಬಂದು ಸಂದರ್ಭ ನಡೆಯುವ ಸಂಗತಿಗಳಿಗೆ ತಕ್ಕ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ ಔಷಧ ಕೊಡಲ್ಪಡುವುದಲ್ಲದೆ ಅನಾನುಕೂಲವುಳ್ಳ ಗರೀಬರಿಗೆ ಅವರ ಅಗತ್ಯದ ಮದ್ದಿನ ಮಾತ್ರೆಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯವಿರುವವರಿಗೆ ಮದ್ದುಗಳನ್ನು ಒದಗಿಸಿಕೊಡುವರೆ ತಕ್ಕ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

ಶಾಲಾ ಹುಡುಗರಿಗೆ ಬೇಕಾದ

ಗೆರೆ ಹಾಕಿದ ಮತ್ತು ಹಾಕದ ಎಕ್ಸರಸೈಜ ಪುಸ್ತಕಗಳೂ, ಕೋಪಿ ಪುಸ್ತಕಗಳೂ, ಮ್ಯಾಪು ಡ್ರೋಯಿಂಗ್ ಪುಸ್ತಕಗಳೂ, ಡ್ರೋಯಿಂಗ್ ಪುಸ್ತಕಗಳೂ, ಪೆನ್ಸಿಲು ಕಂಪಾಸ್ ಬಾಕ್ಸ, ಶಾಯಿ ಕುಪ್ಪಿ ಮೊದಲಾದ ಸ್ಟೇಶನರಿ ಸಾಮಾನುಗಳೂ ಇವೆ.

ಲೆಜ್ಜರ್, ಜರ್ನಲ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕ ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Liveliness-zip-pep-you get that all the time from an "Exide" because it is built into it.

Care and thought in the design - keen discrimination in the selection of material and the experience of thousands of users have made

Exide
THE LONG-LIFE BATTERY

The C. P. C. Co. Ltd
MANGALORE

Battiwalla's Preparations Cover All Your Needs.
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಬಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಜ್ವರ ಮಿಕ್ಸ್ಚರ್ ಪಿಲ್ಸ್ — ಮಲೇರಿಯಾ ಜ್ವರ ತಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೊಲರ್ ಆಲ್ ಟಾನ್ — ಕಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೆ ಔಷಧ ಆಣೆ ೧೩.
ಬಾಟ್ಲಿವಾಲರ ಡೈರಿಯಾ ಮಿಕ್ಸ್ಚರ್ — ಕಾಲರ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಟೇಬ್ಲೆಟುಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ. ರೂ. ೧—೮—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೩—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೩—೦. LIBERAL DISCOUNT TO TRADE

ಕಾಂನದತ್ತು -CAWASHAPUR, BOMBAY.

ಎಲ್ಲಾ ಕಡೆಗಳಲಿ ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
ಏಜಂಟರು ದೊರೆಯಾಗಿದ್ದಾರೆ. Sayani Road. P. O. Cadell ad, Bombay. No. 14.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ — ತೀರ್ಥಹಳ್ಳಿ — ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಿಗ್ಗೆ ೮ ಘಂಟೆಗೆ ಹೊರಡುತ್ತಾ ಇದ್ದದು ಸರಿಯಷ್ಟೆ. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. ೧೫—೪—೧೯೩೭ರ ಆರಭ್ಯ ಶಿವಮೊಗ್ಗಾದಿಂದ ಬೆಳಿಗ್ಗೆ ೭ವರೆ ಘಂಟೆಗೆ ಹೊರಡಲು ಏರ್ಪಾಡು ಮಾಡಿದೆ.

ತೀರ್ಥಹಳ್ಳಿ — ಸಾಗರರಸ್ತೆ.

ಅನಂತಪುರ—ಸಾಗರಕ್ಕೆ ೦—೪—೦. ತೀರ್ಥಹಳ್ಳಿ—ಸಾಗರಕ್ಕೆ ೨—೮—೦.

ಆರಗ, ಗುಡ್ಡೇಕೊಪ್ಪ, ಕೋಣಂದೂರು, ಹಾರೊಗೊಳ್ಳಿ, ಸುಮಂಗಲಕಟ್ಟೆ, ರಿಪ್ಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪ್ಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳದ ದೆಸೆಯಿಂದ ಕಳೆದ ಜೂನ್ ತಾ. ೮ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಕು ೬—೧೧—೧೯೩೭ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾಭಟ್,
ಮಾಲೀಕ,
ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್: ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತರದ ರಿಸ್ಟು ವಾಚುಗಳೂ, ಕ್ಲೋಕುಗಳೂ, ಟೈಮ್‌ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲೋಕು, ಟೈಮ್‌ಪೀಸ, ಗ್ರಾಮೋಫೋನು ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಹಿತ ರಿಪೇರಿ ಮಾಡಿಕೊಡುವೆವು.
ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೂ. — ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಬಹುಕಾಲ ಸಮಯವು ದೊರಕುವುದು.

ಗಿಸ್ಸ ಬಂದಿರುವುದು ಆನಂದದಾಯಕವಾಗಿದೆ. ಹೀಗೆಂತು ಸರಕಾರದ ಯಾವ ಸಾಹಾಯ್ಯವಿಲ್ಲದೆ ಹುಡುಗಿಯರ ಶಾಲೆಗಳನ್ನು ತೆರೆಯುವ ಕೆಲಸವು ನಡೆದಿತ್ತು. ಆ ಪ್ರಾಮುಖ್ಯ ಧ್ಯೇಯಗಳು ಏರುಧ್ವನಿಸುತ್ತಿದ್ದು ಬರುತ್ತಿರುವುದು ಕಂಡುಬರುತ್ತದೆ. ಒಂದು ಕಾಲದಲ್ಲಿ ಲೋಕಲ್ ಬೋರ್ಡುಗಳಲ್ಲಿ ಶಾಸನವಿದ್ದ ಬಾಲಿಯರಿಗೆ ಶಾಲೆಗೆ ಬರುವುದು ಆಗಿನ ಕಾಲದವರು, ಬಾಲಿಕಾ ಶಾಲೆಗಳನ್ನು ತೆರೆಯುವರೇ ಕಡಿಮೆ ಇದ್ದರು. ಒಂದೆರಡು ವರುಷಗಳಿಂದ ಈಗ ಪ್ರೋತ್ಸಾಹವು ದೊಡ್ಡ ದೊಡ್ಡ ಅನೇಕ ಲೋಕಲ್ ಬೋರ್ಡ ಸಾಹೇಬರಿಂದ ಆರಂಭವಾಗಿ, ಬಡ ಮೇಜರ್ ಮೆನೇಜರರ ವರೆಗೂ ಕಳೆ ಬಂದಿದೆ. ಈ ಹೊಸ ಹುರುಪಿನಿಂದ ತೆರೆಯುವ ಈವೂರ ಬಾಲಿಕಾಪಾಠಶಾಲೆಗಳು, ಸರಕಾರದ ಯಾವ ಧೋರಣವನ್ನು ಅನುಸರಿಸಿದರೆ ಖರೇ ವ್ಯಾಪಾರಿಕ ಮಾರ್ಕೆಟುಗಳಾಗಿ ಪರಿವರ್ತಿತವಾಗಿವೆಯೆಂದರೆ ತಪ್ಪಾಗದು.

ಹುಡುಗರ ಶಾಲೆಗಳಿಗೆ ಒಂದರಿಂದ ಮೂರ್ನಾಲ್ಕರವರೆಗೆ ಕೆಳಗಿನ ವರ್ಗಗಳಲ್ಲಿ ಒಂದು ರೂಲು ಮಾಡಿರಬೇಕೆಂಬ ನಿಯಮದ ಮೇರೆಗೆ ಹೊಸದಾಗಿ ತೆರೆದ ಶಾಲೆಗೂ, ಹಳೇ ಶಾಲೆಗೂ ದೂರದ ವಿಷಯದಲ್ಲಿಯೂ, ಆಗನ್ನಾಗಿದ ಪ್ರದೇಶದಲ್ಲಿಯೂ, ಅನಂದಯಕವಾದ ಶಿಕ್ಷಕರುಗಳಿಂದಾಗಿ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಕೌನ್ಸಿಲಿನ ವರೆಗೂ ಸಾಗುತ್ತಿದೆ. ಏನಂತು ಹೆಚ್ಚುಕಡಿಮೆ ಶಾಲೆಗಳಿಗೆ ಯಾವ ನಿಬಂಧನೆಗಳ ಪ್ರತಿಬಂಧವು ಇಲ್ಲದ್ದರಿಂದ ಬಾಲಿಕಾ ಶಾಲೆ ಎಂದು ನಾಮನಿರ್ದೇಶದಲ್ಲಿರೆ ಕೌನ್ಸಿಲಿನಲ್ಲಿ ಕಳುಹುತ್ತಿ ಮಂಜೂರಾಗುತ್ತಿದ್ದವು. ಏವಂಚ ಹುಡುಗರ ಶಾಲೆಯಲ್ಲಿ ಹುಡುಗಿಯರೂ, ಹುಡುಗರ ಶಾಲೆಯಲ್ಲಿ ಹುಡುಗಿಯರೂ, ಶಿರಿಗಿ, ಹುಡುಗರ ಶಾಲೆಯಲ್ಲಿ ಉಪಾಧ್ಯಾಯಿನಿಯರೂ ಹುಡುಗಿಯರ ಶಾಲೆಯಲ್ಲಿ ಉಪಾಧ್ಯಾಯರೂ, ಹೀಗೆ ಪರಸ್ಪರ ಸಮ್ಮಿಶ್ರವಾಗಿದ್ದರೂ, ನಾಮಭೇದವೊಂದೇ ಪ್ರತ್ಯೇಕತ್ವವನ್ನು ಪಡೆಯುತ್ತಿತ್ತು. ಒಂದು ಬಡಶಾಲೆಯನ್ನು ಹಾಳುಮಾಡಬೇಕೆಂದು ಪ್ರತಿಪಕ್ಷೀಯರಿಗೆ ಮನಸ್ಸಾಗುತ್ತದೆ ತಡ. ಅದೇ ಶಾಲೆಯ ಗಂಡು ಮಕ್ಕಳ ನಡುವೆ ಕೆಲವು ಹೆಣ್ಣುಮಕ್ಕಳನ್ನು ಕೂಡಿಸಿ, ಅದರ ನಮೂದ ದಲ್ಲೇ 'ಹುಡುಗಿಯರ ಶಾಲೆ' ಎಂಬ ನಾಮಕರಣದಿಂದ ಅರ್ಜಿಮಾಡಿದೊಡನೆಯೇ ಯಾವ ಆಕ್ಷೇಪಣೆಗಳೂ ಕಾಣಿಸ ಬೆರೆಯುತ್ತಿದೆ ಮಂಜೂರಾಗುತ್ತಿತ್ತು. ಇದರ ಹಲವು ಮಂದಿ ಹುಡುಗರ ಶಾಲೆಗೆ ಮಂಜೂರಾದ ಸಹಾ, ತಮ್ಮ ಶಾಲೆಯಲ್ಲಿರುವ ಕೆಲವು ಮಕ್ಕಳಿಗೆ 'ಹುಡುಗಿಯರ ಶಾಲೆ' ಎಂಬ ಹೆಸರಿನಿಂದ ಮಂಜೂರಾತಿದೊರೆತು, ಹುಡುಗರ ಶಾಲೆಯೊಳಗಿಂದಲೇ ಹುಡುಗಿಯರ ಶಾಲೆಯೂ ಜನನವಾಗಿ, ಇಮ್ಮಡಿ ಗ್ರಾಂಟನ್ನು ಪಡೆಯಲಿಕ್ಕೆ ಅನುಕೂಲವಾಯಿತು. ಇನ್ನು ಹಲವರು ನಮೂದ ಶಾಲೆಗಳ ಹೊರತೊಂದು 'ಹುಡುಗರ ಶಾಲೆ' ಎಂಬ ಹೆಸರಿನಿಂದ ಮಂಜೂರಾತಿಗಾಗಿ ಡಿಸ್ಟ್ರಿ ಇನ್ಸ್‌ಪೆಕ್ಟರರಿಗೂ, ಅದನ್ನೇ 'ಹುಡುಗಿಯರ ಶಾಲೆ' ಎಂಬ ಹೆಸರಿನಿಂದ ಮಂಜೂರಾತಿಗಾಗಿ ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟರರಿಗೂ, ಪ್ರತ್ಯೇಕ ಅರ್ಜಿಗಳನ್ನು ಕಳುಹಿಸಿ, ಎರಡು ತರದ ಮಂಜೂರಾತಿಗಳನ್ನಾಗಲೀ ಇಲ್ಲವೆ ಹುಡುಗಿಯರ ಶಾಲೆಯ ಮಾನ್ಯತೆಯ ಹಕ್ಕಿನ ಮಂಜೂರಾತಿಯನ್ನಾಗಲೀ ಹೊಂದಲಿಕ್ಕೆ ಪ್ರಾರಂಭಿಸಿದರು. ಡಿಸ್ಟ್ರಿ ಇನ್ಸ್‌ಪೆಕ್ಟರರಿಗೂ ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟರರಿಗೂ ತಂತಮ್ಮ ಕ್ಷೇತ್ರಕ್ಕೆ ಕೆಳಗಿನ ಶಾಲೆಗಳ ಕಾರ್ಯಭಾಗದಲ್ಲಿ, ಪರಸ್ಪರ ಪ್ರತ್ಯಸ್ತವಾದವೆ. ಇದು ಸುವಂಥಾ ಅಗತ್ಯವಿಲ್ಲದಿರುವುದು ಮನೇಜರರ ಇಂಥಾ ಉಪಾಯಗಳಿಗೆ ಬಹುಪಾಲ್ಗೆ ಸಹಕಾರಿಯಾಯಿತು. ಮತ್ತು ಕೆಲವು ಹಳ್ಳಿಗಳಲ್ಲಿ ನಿರ್ಜನವಾದ್ದರಲ್ಲಿರುವ, ಹುಡುಗರ ಮತ್ತು ಹುಡುಗಿಯರ ಹಲವು ಶಾಲೆಗಳು ಒತ್ತಟ್ಟಿಗಿದ್ದರೂ — ಅಲ್ಲಿಯೇ ಕೆಳಗಿನ ಹುಡುಗರ ಶಾಲೆಗಳಲ್ಲಿದ್ದೂ — ಅವುಗಳಲ್ಲಿಯೇ ಶಿರಿಗಿ ಕೆಳಗಿನ ಹುಡುಗಿಯರ ಶಾಲೆಗಳೂ ಉದಯಕ್ಕೆ ಬರಲಾಯಿತು. ಪ್ರಾಯಶಃ ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟರರು ಈ ತರದ ಬಾಲಿಕಾ ಪಾಠಶಾಲೆಗಳಿಗೆ ಪ್ರೋತ್ಸಾಹಿಸುತ್ತಿರುವುದು ಸರ್ವೇದಾಕ್ಷ್ಯಯೋಗ್ಯವಾಗಿದೆ.

ಒಟ್ಟಾರೆ ಹೊಸದಾಗಿ ತೆರೆದ ಬಾಲಿಕಾ ಶಾಲೆಗಳು ಅನಿಶ್ಚಿತವಾಗಿ, ಮೊದಲಿದ್ದ ಹುಡುಗಿಯರ ಶಾಲೆಗಳ ಸಮೀಪವು, ಅಥವಾ ಹುಡುಗರ ಶಾಲೆಯ ಎದುರಿಗೂ, ಇಲ್ಲವೇ ಹುಡುಗರ ಶಾಲೆಯ ಒಳಗೂ, ಹೀಗೆ ಕಂಡಾಬಟ್ಟೆ ನಡೆದಿದ್ದು ಉತ್ತರ ತಾಲೂಕಿನ ಕೆಲವು ಪ್ರಾಂತದಲ್ಲಿ ಹಾ ಹಾ ಅನ್ನುವಂತಾಗಿದೆ. ಅಂಥಾ ವಿವರಣೆಯಾದ ವಾತಾವರಣವನ್ನು ನೋಡುವಾಗ್ಯೆ, ಜಿಲ್ಲೆಯಲ್ಲಿರುವ ಎಲ್ಲಾ ಹುಡುಗರ ಶಾಲೆಯೊಳಗಿಂದಲೇ ಹುಡುಗಿಯರ ಶಾಲೆಗಳುಂಟಾಗಬಹುದೇನೋ. ಇಂಥಾ ವ್ಯಾಪಾರವನ್ನು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನಲ್ಲಿ ಶೀಘ್ರವಾಗಿ ತಡೆಗಟ್ಟದಿದ್ದರೆ, ಈ ಸಾಂಕ್ರಾಮಿಕ ರೋಗವು ಎಲ್ಲಾ ಕಡೆಗೆ ಹಬ್ಬಿ, ವ್ಯಾಪಿಸಿ, ಪ್ರಾಥಮಿಕ ಶಿಕ್ಷಣಕ್ಕಾಗಿ ಸರಕಾರವು ಕೊಡುವ ಹಣವು ದುರ್ವ್ಯಯವಾಗುವುದಲ್ಲದೆ, ಬಡ ಹುಡುಗರ ಶಾಲೆಗಳ ಮನೇಜರರಿಗೆ ಮುಂದಿನ ವರುಷಗಳ ಗ್ರಾಂಟಿನಲ್ಲಿ ಈ ಮುಜಪಿಕ್ಕುರಿಂದಲೂ ವಿಕ್ರಮ ವಾಗುವ ಹೊಡೆತವು ಶಿಕ್ಷೆಂದೇ ನನ್ನ ತಿಳುವಳಿಕೆಗೆ ತೋರುತ್ತಿದೆ.

ಅದ್ದರಿಂದ ಹೊಸದಾಗಿ ತೆರೆದಿರುವ ಬಾಲಿಕಾ ಪಾಠಶಾಲೆಗಳನ್ನು ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟರರು ಮಂಜೂರಾತಿಗಾಗಿ ಶಿಫಾರಸು ಮಾಡುವಾಗಲೂ — ಕೆಳಗಿನ ನಿಯಮ ತಿಂಗಳಿಂದಿನ ನಾನು ಸ್ವತಃ ಸಂದರ್ಭಕ್ಕೆ ಅವುಗಳ ಬಿವರಣೆಗಳನ್ನು ಕೌನ್ಸಿಲಿಗೆ ಬಯಲುಪಡಿಸಿ ಮಂಜೂರಾತಿಯನ್ನು ಕೊಡಬಾರದಾಗಿ ಕಳುಹಿದ್ದೆನು. ನಡೆದಿದ್ದಲ್ಲದೆ, "ಹೊಸದಾಗಿ ತೆರೆಯುವ ಬಾಲಿಕಾ ಪಾಠಶಾಲೆಗಳ ದೋಷದ ಬಗ್ಗೆ" ಎಂಬ ಕುರಿತು ತಾ. ೧೫–೧–೧೯೨೯ರಲ್ಲಿ ಪ್ರತ್ಯೇಕ ಒಂದು ಅರ್ಜಿಯನ್ನು ಕಳುಹಿಸಿ ಆ ಬಗ್ಗೆ ತಕ್ಷಣಕ್ಕೆ ಒಂದು ರೂಲನ್ನು ಮಾಡಬೇಕಾಗಿ ಕೌನ್ಸಿಲನ್ನು ಅಪೇಕ್ಷಿಸಿಕೊಂಡೆನು. ಸದ್ರಿ ಅರ್ಜಿಯ ಪ್ರತಿಯನ್ನು ವಾಚಕರ ಅವಗಾಹನೆಗಾಗಿ ಆ ಸಮಯದ ಸ್ಥಳೀಕ ಕನ್ನಡ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು. ತರುವಾಯ ತಾ. ೨೪–೧–೧೯೨೯ರಲ್ಲಿ ಮುಂಬೈ ನಲ್ಲಿ ನಡೆದ ಪ್ರಾಂತಿಕ ಎಜ್ಯುಕೇಶನಲ್ ಅಧಿಕಾರರ ಪರಿಷತ್ತಿನಲ್ಲಿ, ನೈರ್ಋತ್ಯ ಧೋರಣೆಗಳವರು ಮುತ್ತು ಬಹುಮಾನವಿಟ್ಟ ಮಂತ್ರಿವರ್ಯರಾದರೂ ಭಾಷಣಗಳಲ್ಲಿಯೂ "ಹುಡುಗರು ಹುಡುಗಿಯರಿಗೆ ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸಲು ಸಾಧ್ಯವಿಲ್ಲವೆಂತಲೂ, ಅವರ ಧಿಕ್ಕಾರು ಏಕಪ್ರಕಾರವಾಗಿ ಮುಂದುವರಿಯಬೇಕೆಂತಲೂ, ಅಲ್ಲದಿಂದ ಹಾಯರ್ ಎಲಿಮೆಂಟರಿ ಶಾಲೆಯ ವರೆಗಾದರೂ, ಹುಡುಗಹುಡುಗಿಯರಿಗೆ ಮಿಶ್ರವಿದ್ಯೆಯನ್ನೇ ಯಾಕಾಗದ ಕೊಡಬೇಕೆಂತಲೂ" ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರಿಂದಲೂ, ಮತ್ತು ಎ. ಬಿ. ಶೆಟ್ಟಿ, ಎಸ್. ಎಲ್. ಸಿ. ಯವರಿಗೂ, ಸದರಿ ಮಂತ್ರಿವರ್ಯರಿಗೂ ಆ ನಂತರ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಹುಡುಗರ ಶಾಲೆಗಳೊಳಗೆ ತೆರೆಯುವ ಹುಡುಗಿಯರ ಶಾಲೆಗಳಿಂದ ಪ್ರಾಥಮಿಕ ವಿದ್ಯಾನಿಧಿಯು ದುರ್ವ್ಯಯವಾಗುವ ಸಮ್ಬಂಧ ನಡೆದ ಪ್ರಶ್ನೋತ್ತರಗಳ ಅಭಿಪ್ರಾಯಗಳಿಂದಲೂ, ನಾನು ಮೊದಲೇ ಪ್ರಾರಂಭಿಸಿದ ಕಾರ್ಯಭಾರದಲ್ಲಿ ಬೆಂಬಲ ದೊರೆತು ಹಗುರವಾದ್ದಕ್ಕಾಗಿ, ಅತ್ಯಾನಂದವುಂಟಾಯಿತು.

ಹೊಸದಾಗಿ ತೆರೆಯುವ ಹುಡುಗಿಯರ ಶಾಲೆಗಳ ಬಗ್ಗೆ ಸರ್ವಸಾಮಾನ್ಯವಾದ ರೂಲನ್ನು ತಯಾರಿಸಬೇಕಾಗಿ ನಾನು ತಾರೀಖು ೧೮–೧–೧೯೨೯ರಲ್ಲಿ ಕೌನ್ಸಿಲಿಗೆ ಬರೆದಿರುವ ಅರ್ಜಿಯು ತಾ. ೨೨–೩–೧೯೨೯ರ ಮೀಟಿಂಗಿನಲ್ಲಿ ಇಟ್ಟು, ಆ ಸಮ್ಬಂಧ ತಕ್ಕ ರೂಲನ್ನು ಮಾಡಿ ಕಳುಹಿಸುವರೇ, ಕೌನ್ಸಿಲು ಪ್ರೆಸಿಡೆಂಟರಿಂದ ನನಗೆ ನಂಬ್ರ ೧೪೨/೨೨ ೨–೨೯ನೇ ಹುಕುಂ ಬಂದಿರುವ ಮೇರೆಗೆ, ತಾರೀಖು ೨೮–೪–೧೯೨೯ರಲ್ಲಿ ಹುಡುಗಿಯರ ಶಾಲೆಗಳ ರೂಲನ್ನು — ಸರಕಾರದಿಂದ ನಿರ್ದಿಷ್ಟ ರೂಲು ಜಾರಿಗೆ ಬರುವವರೆಗೆ — ತಯಾರಿಸಿ ಕಳುಹಿಸಿದ್ದೇನೆ. ಆ ರೂಲು ಕೌನ್ಸಿಲಿನಿಂದ ಕೆನರಾ ಗರ್ಲ್ಸ್ ರೇಂಜಿನ ಇನ್ಸ್‌ಪೆಕ್ಟ್ರೆಸ್, ಕೊಡಲ್ಪಡುತ್ತಿರುವರು, ಇವರ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿಯದೆ. ಸದರಿ ರೂಲನ್ನು ವಾಚಕರ ಅವಗಾಹನೆಯ ಬಗ್ಗೆ ಇಲ್ಲಿ ಪ್ರಕಟಿಸಿದ್ದೇನೆ.

(೧) ಸರ್ವಸಾಮಾನ್ಯವಾಗಿ ಹುಡುಗರ ಶಾಲೆಯಲ್ಲಿರುವ ಹುಡುಗಿಯರಿಗೆ ಕಲಿಸುವ ಬಗ್ಗೆ ಪ್ರತ್ಯೇಕ ಏರ್ಪಾಡು ಮಾಡಿಸಿ, ಹುಡುಗಿಯರ ಹುಡುಗಿಯರಿಗೂ, Vನೇ ವರ್ಗದವರೆಗಾದರೂ ಒಂದೇ ಶಾಲೆಯಲ್ಲಿ ಮಿಶ್ರ ವಿದ್ಯಾಭ್ಯಾಸ ಕೊಡಿಸುವುದು ಉತ್ತಮ.

(೨) ಅದರೆ ಪ್ರತ್ಯೇಕ ಹುಡುಗಿಯರ ಶಾಲೆಯನ್ನು ಮಂಜೂರಾತಿ ಮಾಡಬೇಕೆಂದು ಅರ್ಜಿ ಬಂದರೆ, ಆ ಹೊಸ ಹುಡುಗಿಯರ ಶಾಲೆಯು ಅಸ್ತಿತ್ವದಲ್ಲಿರುವ ಹುಡುಗರ ಹುಡುಗಿಯರ ಶಾಲೆಗಳಿಂದ ಕೆಲವು ಫರ್ಲಾಂಗು ದೂರದಲ್ಲಿರಬೇಕು. ಈ ಸಂದರ್ಭದಲ್ಲಿ ಮುಖ್ಯ ಹುಡುಗಿಯರ ಶಾಲೆಯಲ್ಲಿ ಸೇರಿದಾ ಅಕ್ಕೆ ಮಿತಿದಲ್ಲ ಹುಡುಗರನ್ನೂ, ಹುಡುಗರ ಶಾಲೆಯಲ್ಲಿ ಸೇರಿದಾ ಅಕ್ಕೆ ಮಿತಿಯಲ್ಲ ಹುಡುಗಿಯರನ್ನೂ ದಾಖಲು ಮಾಡಿಕೊಳ್ಳಬಹುದು.

(೩) ಒಂದು ಹುಡುಗರ ಶಾಲೆಯ ಸಮೀಪ ಒಂದು ಮೈಲು ಅಂತರದೊಳಗೆ ಪ್ರತ್ಯೇಕ ಒಂದು ಹುಡುಗಿಯರ ಶಾಲೆಯನ್ನು ತೆರೆಯುವುದಾದರೆ, ಅಂಥಾ ಹೊಸ ಶಾಲೆಯಲ್ಲಿ ಹುಡುಗಿಯರ ಸಂಖ್ಯೆಯು ೫೦ಕ್ಕೆ ಕಡಿಮೆಯಾಗಬಾರದು. ಮತ್ತು ಆ ಹುಡುಗಿಯರ ಶಾಲೆಯಲ್ಲಿ ಹುಡುಗರನ್ನೂ, ಸಮೀಪದ ಹುಡುಗಿಯರ ಶಾಲೆಯಲ್ಲಿ ಹುಡುಗಿಯರನ್ನೂ ದಾಖಲು ಮಾಡಿಕೊಳ್ಳಬಾರದು.

(೪) ಈ ನಿಯಮಗಳ ಮಂಜೂರಾತಿಯಾಗಿ ಸೇರಿದಾ ಅಕ್ಕೆ ಮಿತ್ರ ಹುಡುಗಿಯರ ಹುಡುಗರ ಶಾಲೆಗಳಲ್ಲಿ ಕಲಿಸುವ ಕಲಿಸುವ ಬಗ್ಗೆ ಒಬ್ಬ ಉಪಾಧ್ಯಾಯಿನಿಯನ್ನಾದರೂ, ನೇಮಿಸತಕ್ಕದ್ದು. ಇನ್ನು ಮುಂದಕ್ಕೆ ಎಲ್ಲಾ ಹುಡುಗರ ಶಾಲೆಗಳಿಗೂ, ಈ ತರದಿಂದಲೇ ಮಂಜೂರಾತಿ ಕೊಡತಕ್ಕದ್ದು.

(೫) ಈ ರೂಲಿಗೆ ವಿರೋಧವಾಗಿ ತೆರೆದಿರುವ ಶಾಲೆಗಳಿಂದ ಉಳಿದ ಶಾಲೆಗಳಿಗೆ ಬಾಧಕ ತಟ್ಟುತ್ತದೋ ಎಂಬ ವಿಷಯದಲ್ಲಿ ಆಯಾ ರೇಂಜಿನ ಡಿಸ್ಟ್ರಿ ಇನ್ಸ್‌ಪೆಕ್ಟರರ ಮತ್ತು ಆಯಾ ಶಾಲೆಗಳ ಮನೇಜರರ ಅಭಿಪ್ರಾಯಗಳನ್ನು ತಿಳಿಯತಕ್ಕದ್ದು. ಅವರ ಅಭಿಪ್ರಾಯಗಳು ಅಕ್ಷೇಪಕರವಾಗಿ ದ್ದಲ್ಲಿ ಅಂಥಾ ಹೊಸ ಹುಡುಗಿಯರ ಶಾಲೆಗಳನ್ನು ಮಂಜೂರು ಮಾಡಬಾರದು.

೧೯೨೮ - ೨೯ರ ಟೀಚಿಂಗ್ ಗ್ರಾಂಟು.

ಸರಕಾರದಿಂದ ಈ ವರುಷಕ್ಕೆ ಸಿಕ್ಕಿದ ಟೀಚಿಂಗ್ ಗ್ರಾಂಟಿನ ಹಣವು ಸಾಕಾಗದ್ದರಿಂದ, ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನಲ್ಲಿ ಗ್ರಾಂಟು ಹಂಚುವಾಗ ಪ್ರತಿ ಶಾಲೆಗೆ ಸಿಗುವ ಹಣದ ಕಡತ ದಾಖಲೆ ಯಾಯಿತು. ಹೀಗೆ ಕಡಿಮೆಯಾದ ಅಂಶವು ಸರಿದೂಗಬೇಕೆಂದು ಹಿರಿಯ ಶಿಕ್ಷಕರು ಅಭಿಪ್ರಾಯಗಳಿಂದ ಅನೇಕ ಟೀಚರ್ ಮನೇಜರರು ಆಗ್ರಹವಾಗಿ ಸರಕಾರಕ್ಕೆ ಪತ್ರಗಳನ್ನು ಬರೆಯುತ್ತಿರುವರು. ಅದರ ಅವಿಯಾದ ಹಣಕ್ಕಾಗಿ ಮಾನ್ಯ ಪ್ರೆಸಿಡೆಂಟರು ಬರೆದುದರ ಸಲುವಾಗಿ ಸರಕಾರದಿಂದ ದೊರೆತ ನಂಬ್ರ ೯೬೩೫/೮ ೨–೫–೨೯ನೇ ಹುಕುಮಿನಲ್ಲಿ 'ಗ್ರಾಂಟು ಏರಿಸಿದ ಬಳಿಕ, ಪ್ರಕಾರ ಸಿಕ್ಕಿದ ಟೀಚಿಂಗ್ ಗ್ರಾಂಟಿನ ಹಣವು ಈ ಮೊದಲೇ ಸಂಬಂಧಪಟ್ಟಿರುವ ಎಲ್ಲಾ ಜಿಲ್ಲೆಗಳಿಗೆ ಹಂಚಿರುವುದರಿಂದ ಇನ್ನು ಹೆಚ್ಚಿನ ಹಣಕ್ಕೆ ಮಾಡಿಕೊಂಡ ಮನವಿಯನ್ನು ಅಂಗೀಕರಿಸಲಾಗಲಿಲ್ಲ', ಎಂಬದಾಗಿ ಉತ್ತರ ಬಂದಿರುವುದರಿಂದ, ಈ ವರುಷ ಕಡಿಮೆಯಾದ ಟೀಚಿಂಗ್ ಗ್ರಾಂಟಿನ ಅಂಶವು ತಿರಿಗಿ ದೊರೆಯಲಾರದು. ಎಲ್ಲಾ ಟೀಚರ್ ಮನೇಜರರ ಅವಗಾಹನೆ ಬಗ್ಗೆ ಇಲ್ಲಿ ಪ್ರಕಟಿಸಿದ್ದೇನೆ.

ಕುಂದಾಪುರ. ಗಣಪಯ್ಯ ಶೆಟ್ಟಿ.
ಪ್ರೆಸಿಡೆಂಟ್,
ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮನೇಜರರ ಸಂಘ.

ನೋಟೀಸು.

ಕಾರವಾರ ಡಿಸ್ಟ್ರಿ ಮುನ್ಸಿಫ ಕೋರ್ಟಿನಲ್ಲಿ

O. P No 37/1929

ಶಿವಪ್ಪ ಮರಕಾಲ—ಅರ್ಜಿದಾರ

ಮತ್ತು

ಶಂಕರ ಮರಕಾಲ ಕೂಡಾ 2 ಜನರು—ಎದ್ರಿ ಅರ್ಜಿದಾರರು.

ಇವರೊಳಗೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರನು ತನ್ನ ಸಹೋದರ ಇತ್ತಲಿಗೆ ಮೃತಪಟ್ಟ ರಾಮಚಂದ್ರಾಲಕ್ಷ್ಮ ಮರಕಾಲನಿಗೆ ಇನ್ನುರಿನ ಬಾಬ್ತು ಬರತಕ್ಕ ಬಿರೇಜನ್ನು ವಸೂಲು ಮಾಡುವ ಬಗ್ಗೆ ತನಗೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಈ ಕೋರ್ಟಿಗೆ ಮನವಿಮಾಡಿಕೊಂಡಿದ್ದಾನೆ. ಸದ್ರಿ ಅರ್ಜಿಯ ತನಿಖೆಯ ಬಗ್ಗೆ ತಾ.21-8-29ಕ್ಕೆ ಇಟ್ಟಿದೆ. ಯಾರಾದರೂ ಆಕ್ಷೇಪಿಸುವದಾದರೆ ಸದ್ರಿ ತಾರೀಕಿನಲ್ಲಿ ಕೋರ್ಟಿನ ಮುಂದೆ ಬೆಳಗ್ಗೆ ಘಂಟೆ 11ಕ್ಕೆ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ವ್ಯಾಜ್ಯೋಪಯೋಗಮಾಡಿಕೊಳ್ಳತಕ್ಕದ್ದು.

ತಾ. 16—7—1929. Karal. } K L Kubva, Pleader for Petitioner.

ತಿದ್ದುಪಡಿಯಾದ ಲೋಕಲ್ ಬೋರ್ಡು ಮಸವಿದಾ ಆಕ್ಟು. (ಬಿಲ್)

(ತಾಲೂಕು ಬೋರ್ಡುಗಳು ಮಾಯವಾಗುತ್ತವೆ.)

ಲೋಕಲ್ ಬೋರ್ಡ ಆಕ್ಟನ್ನು ಅತ್ಯಗಿಗೆ ತಿದ್ದುಪಡಿಮಾಡುವ ಕೆಲಸವು ಈಗ ಉಪಕಾರಮಂಡಿನಲ್ಲಿ ಕೆಲಸ ನಡೆಸುತ್ತಿರುವ ಮದರಾಸು ಸೆಕ್ರೆಟೆರಿಯಟ್ ಆಫೀಸಿನಲ್ಲಿ ನಡೆಯುತ್ತದೆ. ಮದರಾಸು ಸರಕಾರವು ಉಪಕಾರಮಂಡಿನಿಂದ ಮದರಾಸಿಗೆ ಹೋಗುವಷ್ಟರೊಳಗೆ ಈ ಬಿಲ್ಲು ಊರ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದು. ಈ ಬಿಲ್ಲು ಬರುವ ಆಗೋಸ್ತು ತಿಂಗಳಲ್ಲಿ ಕೂಡಿಬರುವ ನ್ಯಾಯವಿಧಾಯಕ ಸಭೆಯ ಮುಂದೆ ಬರುವುದು.

ಅನೇಕ ಸಂಗತಿಗಳಲ್ಲಿ ಈ ಬಿಲ್ಲು ತಿದ್ದುಪಡಿಯಾದ ಮುನಿಸಿಪಾಲಿಟಿ ಆಕ್ಟಿನ ರೀತಿಯನ್ನೇ ಹೋಲುತ್ತದೆ. ಇಷ್ಟರ ವರೆಗೆ ತಾಲೂಕು ಬೋರ್ಡು ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರುಗಳೂ, ಮೆಂಬರರೂ, ನೋಟೀಸು ಕೊಟ್ಟು ರೆಸೊಲ್ಯೂಶನ್ ಪಾಸ್ ಮಾಡಿ ಜಗಳಾಡಿ ಈ ಸಂಸ್ಥೆಯವರು ಮಾಡಬೇಕಾದ ಕೆಲಸಗಳು ನಾಶಕ್ಕೀಡಾಗುತ್ತಿದ್ದವು. ಶಾಲೆಗಳು, ಮಾರ್ಗಗಳು, ಆಸ್ಪತ್ರೆಗಳು ಇವುಗಳ ಸ್ಥಿತಿಯು ಹಾಳಾಗುತ್ತಿತ್ತು. ಹೊಸ ಬಿಲ್ಲಿನ ಪ್ರಕಾರ ಇವುಗಳ ಆಡಳಿತದ ಜವಾಬ್ದಾರಿಯನ್ನು ತಿದ್ದುವವಿದಕ್ಕೆ ತಿರಿಗಿ ಚುನಾವಣೆ ಮಾಡುವ ಅಧಿಕಾರವನ್ನು ಏವಿಪನರ ಅಧಿಕಾರಿಗೆ ಇತ್ತಿದೆ. ಮುನಿಸಿಪಾಲಿಟಿಗಳಲ್ಲಿ ವೋಟು ಕೊಡುವ ಹಕ್ಕು ಪ್ರಾಪ್ತ ಬಂದ ಗಂಡಸರು ಹೆಂಗಸರಿಗೆ ಕೊಡಲ್ಪಟ್ಟಿದೆ. ಅದರ ಇನ್ನು ಆಗುವ ಲೋಕಲ್ ಬೋರ್ಡುಗಳಲ್ಲಿ ಸರಕಾರಕ್ಕೆ ಕಂದಾಯ ಕೊಡುವ ಪ್ರತಿ ಒಬ್ಬನಿಗೆ ಮಾತ್ರ ಹಕ್ಕು ಕೊಡಲ್ಪಟ್ಟಿದೆ; ಅದು ಒಂದಾನೊಂದಾದರೂ ಬಂತು.

ಇದರ ಪ್ರಕಾರ ಗ್ರಾಮ ಪಂಚಾಯತುಗಳೂ ತಾಲೂಕು ಬೋರ್ಡುಗಳೂ, ಯೂನಿಯನ್ ಬೋರ್ಡುಗಳೂ, ತೆಗೆದು ಹಾಕಲ್ಪಡುವವು. ಗ್ರಾಮ ಪಂಚಾಯತು ಆಕ್ಟ ರದ್ದು ಮಾಡಲ್ಪಡುವದು. ತಾಲೂಕು ಬೋರ್ಡುಗಳ ಬದಲು ಸರ್ಕಲ್ ಬೋರ್ಡುಗಳೂ, ಯೂನಿಯನ್ ಬೋರ್ಡುಗಳ ಬದಲಾಗಿ ಪಂಚಾಯತಿಗಳೂ, ನ್ಯಾಷನಲ್ಸಿಟ ವಿದ್ಯೆ ಡಿಸ್ಟ್ರಿಕ್ಟ್ ಬೋರ್ಡಿಗೆ ಕಳ್ಳಿನ ಮೆಂಬರರನ್ನು ಜಿಲ್ಲೆಯ ವೋಟರರೇ ಚುನಾಯಿಸುವರು. ಅಲ್ಲದೆ ಕೆಲವು ಮೆಂಬರರನ್ನು ಸರ್ಕಲ್ ಬೋರ್ಡುಗಳಿಂದಲೂ, ಪಂಚಾಯತುಗಳಿಂದಲೂ ಚುನಾಯಿಸಲ್ಪಡುವರು. ತೊಡಿನೇಟೆಡ್ ಮೆಂಬರರುಗಳನ್ನು ಡಿಸ್ಟ್ರಿಕ್ಟ ಕಾರ್ಪೊರೇಟರುಗಳಿಂದಲೂ, ಯೂನಿಯನ್ ಮತ್ತು ಎಂಗ್ಲೋ ಇಂಡಿಯನರಿಂದ ಮಾತ್ರವೇ ಚುನಾಯಿಸಲ್ಪಡುವರು.

ವಿ ವಿ ಧ ಸ ಮಾ ಚಾ ರ ಗ ಳು.

ಮುಂಬಾಯಿಯಲ್ಲಿ ಸ್ವದೇಶಿ.

ಸ್ವದೇಶಿ ಹಾವಳಿಗ್ಗೆಗಳನ್ನು ಪ್ರೋತ್ಸಾಹಿಸಬೇಕೆಂದು ಒಂದು ಸಭೆಯು ಮುಂಬಾಯಿ ಕಾರ್ಪೋರೇಶನಲ್ಲಿ ಕಳೆದ ಸೋಮವಾರ ಸೇರಿ ನಡೆಯಿತು. ತನ್ನ ಮುಂದೆ ಕಾರ್ಪೋರೇಶನ್ ಕೆಲಸಕ್ಕೆ ಬೇಕಾಗುವ ಸಾಮಾನು ಸರಂಜಾಮುಗಳು ಸ್ವದೇಶೀ ಉತ್ಪಾದಿತ ವಸ್ತುಗಳಾಗಿರಬೇಕೆಂದು ಕೈಕೊಂಡಿತು. ಇದರಿಂದ ಕಾರ್ಪೊರೇಶನ್ ಕೆಲಸದ ಇದನ್ನು ಆಲೋಚಿಸಿ ಎಂ. ಎಸ್. ರೆಸೊಲ್ಯೂಶನಿಂದ ಮಂಡಿಸಲ್ಪಟ್ಟಿತು. ಹಲವು ಮೆಂಬರರು ಈ ಸೂಚನೆಗೆ ಕೆಲವು ಬದಲಾವಣೆಗಳ ಅವಶ್ಯಕತೆಯನ್ನು ಸೂಚಿಸಿದರು. ಕ್ರಮವಾಗಿ ಕಾರ್ಪೊರೇಶನ್ನಿನ ಸ್ವದೇಶೀ ಎಂದು ಕಲ್ಪಿಸಿದರೆ ನಿರ್ಧರಿಸಲ್ಪಟ್ಟಿತು. ಇದನ್ನು ತರುವ ಪದ್ಧತಿಯಲ್ಲಿ ಕೆಲವು ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ಕಂಡುಬಂದರೂ ಸ್ವದೇಶೀ ವಸ್ತುಗಳನ್ನು ಪ್ರೋತ್ಸಾಹಿಸಬೇಕೆಂಬ ಸೂಚನೆಯು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಜರ್ಮನಿಯ ಜ್ಯೋತಿಷ್ಯ.

ಸರ್ ಜೆಕಬ್ ವಿಲ್ಸನರೆಂಬುವರು ಜರ್ಮನಿಯ ಜ್ಯೋತಿಷ್ಯಜ್ಞನು. ಇವನು ಗ್ರಹಗತಿಗಳ ಆಧಾರದಿಂದ ಭವಿಷ್ಯ ನುಡಿಯುವನು. ಇವನ ನುಡಿಗಳು ಸಾಮಾನ್ಯವಾಗಿ ಸತ್ಯವಾಗುತ್ತಿರುವುದರಿಂದ ಇವನು ಪ್ರಸಿದ್ಧನಾಗಿದ್ದಾನೆ. ಈಗ ಪ್ರಸಿದ್ಧವಾದ ರಾಜಕಾರಣಿಗಳ ಮುಂದೆ ಇವನನ್ನು ಸತ್ಕರಿಸಿದರು. ಅವನ ಕೆಲವು ನುಡಿಗಳ ಉದಾಹರಣೆ ಕರೆದು ಪ್ರಕಟಿಸಿ ಮಹತ್ವದ ವಿಷಯ. ಈ ಜ್ಯೋತಿಷ್ಯನು ಹಿಂದಿನ ರಾಜರುಗಳನ್ನು ಹೊಸ ನಾಯಕರನ್ನು ಪ್ರತಿಷ್ಠೆಗಳನ್ನು ತನ್ನ ಮಂತ್ರಶಕ್ತಿಗೊಳಪಡಿಸಿ ದೇಶದೇಶಗಳ ಯುದ್ಧವನ್ನು ಆಮಂತ್ರಿಸಿದನು. ಇಂತಹ ಜ್ಯೋತಿಷ್ಯನು ಇನ್ನೂ ದೇಶದಲ್ಲಿ ಇದುವರೆಗೆ ಹುಟ್ಟಿರಲಿಲ್ಲವೆಂದು ಸರ್ವರೂ ಅಭಿಪ್ರಾಯಪಡುವರು.

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

ಟೆಲಿಗ್ರಾಮ್: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1). ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕ್ಷೇತ್ರಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ ಕೊಟ್ಟಿಗೆಹಾರಕ್ಕೆ 10-30ಕ್ಕೆ ಬೈಕಾಡು ಗಡಿಗೆ 11-45ಕ್ಕೂ ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ, ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಪಯ್ಯನ್ನೂರು, ಕಣ್ಣನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಬೈಕಾಡು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಾಪೂರ್ ಗೋವಾ, ಬೆಳಗಾಂ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೇಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ. ಸೂರಪ್ಪ ಶೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವವು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವಿರಾದರೆ ಪ್ರತಿದಿನವೂ ಮೂಡಬಿದಿರೆ ಕಾರವಳ ಮಾರ್ಗವಾಗಿಯೂ ಬಂಟವಾಳ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಪೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ಸಂದರ್ಶಿಸಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅನತಿ ಅತ್ಯಂತ ರಮಣೀಯವಾದ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವವರ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಸಾಗರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಹರಿಹರ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore S. K.

ಮಲೇರಿಯಾನ ಸರ್ವಕ್ಷಯಸಂಹಾರಿ

ಯುವಕ ವಿದ್ಯಾರ್ಥಿಗಳು ಲಕ್ಷ್ಯಕ್ಕೆ ತಕ್ಕೊಳ್ಳತಕ್ಕದ್ದೇ

ದೇಹದ ಆರೋಗ್ಯವೂ ಮೆದುಳಿನ ಬಲವೂ ಇದ್ದ ಯುವಕರಿಗೆ ವಿದ್ಯಾಭ್ಯಾಸವು ಬಹು ಸುಲಭಕರವಾಗಿರುವುದು.

ಆದರೆ ದೇಹದ ಆರೋಗ್ಯವು ಕೆಟ್ಟು ಹೋದಲ್ಲಿ ಮೆದುಳಿನ ಬಲವು ಕುಂದಿರುವದು ಸಹಜವೇ. ಅಂಥಾ ಯುವಕರಿಗೆ ವಿದ್ಯಾಭ್ಯಾಸವು ಅತೀ ಕಷ್ಟಕರವಾಗಿದೆ. ಇಂಥಾ ಯುವಕರು ಸಹಾ ವಿದ್ಯಾಭ್ಯಾಸದಲ್ಲಿ ಹೇಗಾದರೂ ಬೇಕಾದರೆ, ದೇಹವು ಆರೋಗ್ಯವುಳ್ಳದ್ದಾಗಿಯೂ ಮೆದುಳು ಶಕ್ತಿ ವಂತವಾಗಿಯೂ ಇರಬೇಕು. ಕಂಪೌಂಡು ಸಿರಪ್ ಹಾಲಿನಿಯನ ಎಂಬ ಅಮೃತವು ಯುವಕರ ಆರೋಗ್ಯವನ್ನು ಕಾಪಾಡುವದಕ್ಕೂ ಮೆದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತೀ ಗುಣಕಾರಿಯಾಗಿದೆ.

ಕ್ರಯ 8 ಔನ್ಸಿಗೆ ರೂ. 3 – 8 – 0.

(ಇದು ಒಂದು ತಿಂಗಳ ವರೆಗೆ ಸೇವಿಸಬೇಕಾಗುವ 64 ಡೋಸುಗಳವು)

ಮೆದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅಹೋರಾತ್ರಿ ಕಲಿಯುವ ಬದಲೊಂದು ಪ್ರಯಾಸದಿಂದ ಓದುವ ಯುವಕರ ತಲೆ ಮೆದುಳು ಬಹು ಕಾಯಿಯಾಗಿ, ತಲೆ ಸಿಡಿತ, ಕಣ್ಣು ನೋವು, ಸ್ಮೃತಿನಾಶ, ನಿದ್ರೆ, ಮೂರ್ಛೆ, ಹುಚ್ಚು ಇವೇ ಮುಂತಾದ ವಿವಿಧ ರೋಗಗಳು ಹುಟ್ಟುವವು. ಈ ಅವಸ್ಥೆ ರೋಗಗಳು ಪರಿಹಾರವಾಗುವದಕ್ಕೆಯೂ ಅಥವಾ ಅಂಥಾ ಅವಸ್ಥೆ ರೋಗಗಳು ಹುಟ್ಟದಂತೆಯೂ ಅಶ್ವಗಂಧಾದಿ ಮಿಶ್ರಕವಾದ ತೈಲದ ಉಪಯೋಗವು ಬಲು ಗುಣಕಾರಿಯಾಗಿದೆ. ಬಹಳ ಹೊತ್ತು ಓದುವ ಅಥವಾ ಕಷ್ಟ ಕೆಲಸ ಮಾಡತಕ್ಕ ಯುವಕರು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಚ್ಚಿಕೊಳ್ಳುವದರಿಂದರೇ ತಲೆ ಮೆದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವರು.

ಶ್ರೇಷ್ಠ ಕಾಲದಲ್ಲಿ ಮುಖ್ಯ ರೀತಿ ಅನುಸರಿಸುವದು, ಬಾಲ ಯುವಕರ ಬುದ್ಧಿವಂತಿಕೆಯಾಗಿದೆ.

ಕ್ರಯ ೧ ಔನ್ಸಿಗೆ ರೂ. ೦ – ೧೨ – ೦

ವಿಶೇಷ ಮಾಹಿತಿಗೂ, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ, ಕಂಪೆನಿಯ ಲಿಸ್ಟು ಬರೆದು ತರಿಸಿ ಮತ್ತು ಹೊಮಿಯೋಪತಿ ಮದ್ದುಗಳಿಗೂ ನಮೂನೆ ಮಾದರಿ ಪಟ್ಟಿ ಬೇಕಾದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಲೇರಿಯಾನ ಕಂಪೆನಿ,
ಮಂಗಳೂರು.

ದಿ ಕೆನರಾ ನರ್ಸರಿ.

ಕಸಿ ಮಾವಿನ ಗಿಡಗಳು. ಸಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಿಲ್ಲಾ, ಪೇರಳೆ, ಚಿಕ್ಕುಳ, ದ್ರಾಕ್ಷೆ, ಅಂಜೂರ, ದಾಳಿಂಬೆ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು, ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹ ಇಲ್ಲದೆ ಚೆನ್ನಾಗಿ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಗ್ಗದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್ ಸ್ಟ್ರೀಟ್ ಸೋಮವಾರದ ದಿವಸದಲ್ಲಿ ದೊರೆಯುವವು.

ಕೆ. ಮಧ್ವರಾಜ ಶೆಟ್ಟಿ ದಿ. ಕೆನರಾ ನರ್ಸರಿ, ಬಜಪೆ ಪೋಸ್ಟ್, ಸಾ. ಕ. 23. 12. 28	C/o ಕೆ. ವಾಮನ ಶೆಟ್ಟಿ ಶಾರದಾ ಫಾರ್ಮಸಿ, ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED. POONA CITY.

ದಿ ಕೊಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ ಸಿಟಿ

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಆಕರ್ಷಕವಾದ ಪೋಲಿಸಿಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀ ಜೀವವಿಮೆ ಕಂಪೆನಿಯು.

2 ಅನಪ್ರಿಂಟರು, ಪ್ರತಿಷ್ಠಿತರೂ ಆದ ಡೈರೆಕ್ಟರರು.

3 ಹುಂಟು ಅನುಭವದ ಮೆನೇಜಿಂಗ್, ವಿಶೇಷಯಾದ ಮತ್ತು ಸೌಹಾರ್ದದ ಆಡಳಿತ.

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಕಮೀಶನುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ತ ಮತ್ತು ಚಟುವಟಿಕೆಯುಳ್ಳ ಏಜಂಟರುಗಳು ಬೇಕಾಗಿರುವರು.

ಪ್ರಾಸ್ಪೆಕ್ಟಸಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, ಸ್ಪೆಶಿಯಲ್ ಏಜಂಟ್ ಹಂಪನಕಟ್ಟೆ, ಮಂಗಳೂರು ದ. ಕ.	ಪಿ. ಅಭಯಶಂಕರ ದೇಸಾಯಿ ಅಥವಾ ಮುಖ್ಯ ಕಂಪೆನಿ, ಮೆನೇಜಿಂಗ್ ಏಜಂಟ್.

ಉಡುಪಿ ತಾಲೂಕು ಬೋರ್ಡಿನ ಹೊಸ ಧೋರಣೆಯ ವಿದ್ಯಾಭ್ಯಾಸ.

ಉಡುಪಿ ತಾಲೂಕುಬೋರ್ಡಿನ ವಿಸ್ತೀರ್ಣದಲ್ಲಿ ೧೯೨೯ನೇ ಇಸವಿ ಮಾರ್ಚ್ ಅಂತ್ಯದಲ್ಲಿ [illegible] ಶಾಲೆಗಳು ಇದ್ದಂತೆ ತಾಲೂಕು ಬೋರ್ಡಿನ ಆಡಳಿತದ ರಿಪೋರ್ಟಿನಲ್ಲಿ ತೋರುತ್ತದೆ. [illegible] ಶಾಲೆಗಳು ಅಂದರೆ ಸಂಖ್ಯೆ [illegible] ಹುಡುಗರ ಶಾಲೆಗಳು ಮತ್ತು [illegible] ಹುಡುಗಿಯರ ಶಾಲೆಗಳ ಜಮಾ ತೋರುತ್ತದೆ. ಸರಕಾರ ಸಹಾಯದಿಂದ ನಡೆಯುವ ಖಾಸಗೀ ಶಾಲೆಗಳ [illegible] ಎಂದು ಸ್ಪಷ್ಟವಾಗುತ್ತದೆ, ಆದರೆ ಮಾರ್ಚ್ ತಿಂಗಳ ನಂತರ ಬೋರ್ಡಿನ ಆಡಳಿತ ರಿಪೋರ್ಟು ಹೊರಬಿದ್ದ ಮೇಲೆ ಈ [illegible] ಶಾಲೆಗಳಲ್ಲಿ ಹುಡುಗರ ಸಂಖ್ಯೆ ಜಾಸ್ತಿ ಇಲ್ಲದುದರಿಂದ ಕೆಲ ಶಾಲೆಗಳನ್ನು ಮುಚ್ಚುವುದು ಒಳ್ಳೇದೆಂದು ತಾಲೂಕು ಇನ್ಸ್‌ಪೆಕ್ಟರರ ಅಭಿಪ್ರಾಯದ ಮೇರೆಗೆ ಶಾಲೆಗಳನ್ನು ಮುಚ್ಚುವ ಸಂಗ್ತಿ ಮೀಟಿಂಗಿನಲ್ಲಿ [illegible] ಮುಚ್ಚಬೇಕೆಂದಾಯಿತು. ಈ ಸಂಗತಿ ಎಷ್ಟು ಕಾಲದಿಂದ ನಡೆಯುತ್ತದೆಂದು ಮೀಟಿಂಗಿನ ಅವಗಾಹನೆಗೆ ಇಲ್ಲದಿದ್ದುದರಿಂದ, ವಿಷಯವನ್ನು ತಿಳಿಯುವದೇ ಅಸಾಧ್ಯವಾಯಿತು. ಅಂತೂ ಹೊಸ ವರುಷದ ಪ್ರಾರಂಭದಲ್ಲಿ [illegible] ಶಾಲೆಗಳನ್ನು ಮುಚ್ಚಿಕೆಂದರೆ ಈಗ ಮುಂಚಿನಂತೆಯೇ [illegible] ಶಾಲೆಗಳು ಇದ್ದ ಹಾಗೆಯೇ ಆಯಿತು. ಆದರೆ ತಾಲೂಕು ಬೋರ್ಡಿನವರು ಈ ಶಾಲೆಗಳನ್ನು ಮುಚ್ಚುವ [illegible]

[illegible]

	Boys	Girls
I	[illegible]	[illegible]
II	[illegible]	[illegible]
III	[illegible]	[illegible]
IV	[illegible]	[illegible]
Above IV	[illegible]	[illegible]

[illegible] (suspend) [illegible] Criminal waste of money [illegible]

(ಸ್ವದೇಶಾಭಿಮಾನಿ)

'ಲೋಧ್ರ'ದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಕಿರೀಸೆಯಿಂದಲೇ ಗುಣವಾಯಿತು.

[illegible]

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

[illegible]

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ವಾಸಿಯಾಯಿತು.

[illegible]

ಕೇಸರಿ ಕುಟೀರಮ್
ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ: "ಕೇಸರಿ" ಫೋನ್ 3486

ಏಜೆಂಟರು — [illegible] ಕಂಪೆನಿ, (ದಿ [illegible] ಮೋಟರ್ಸ್) ಮಂಗಳೂರು.

ಶಿವಾಜಿಯ ದಯಾಶೀಲತೆ.

ಒಂದು ದಿನ ರಾತ್ರಿ ಶಿವಾಜಿಯು ಮಲಗಿದ್ದಾಗ, ಅವನಿಗೆ ಒಂದು ಭಯಂಕರವಾದ ಕನಸನ್ನು ಕಂಡು ಎಚ್ಚರಿದ್ದನು. ಕಣ್ತೆರೆದು ನೋಡುವಾಗ, ಹದಿನಾರು—ಹದಿನೇಳು ವರ್ಷ ಪ್ರಾಯದ ಒಬ್ಬ ಬಾಲಕನು ಕೈಯಲ್ಲಿ ಬಿಚ್ಚಿದ ಕತ್ತಿಯನ್ನು ಹಿಡಿದುಕೊಂಡು ನಿಂತಿದ್ದನು. ಶಿವಾಜಿಯು ತಾನೀಗ ಹೆಚ್ಚು ಸಂಕಟದಲ್ಲಿರುವೆನೆಂದು ತಿಳಿದುಕೊಂಡನು. ಅವನ ಭವಾನಿ ಖಡ್ಗವು ಆಗ ಸಮೀಪದಲ್ಲಿರಲಿಲ್ಲ. ಅದು ದೂರ ಗೂಟದಲ್ಲಿ ತೂಗಹಾಕಲ್ಪಟ್ಟಿತ್ತು. ಅವನು ಕಣ್ತೆರೆದುದನ್ನು ನೋಡಿ ಬಾಲಕನು ಕೂಡಲೇ ಅವನನ್ನು ಕತ್ತಿಯಿಂದ ಕೊಲ್ಲುವುದರಲ್ಲಿದ್ದನು. ಪರಂತು ಆಗಲೇ ಹಿಂದಿನಿಂದ ಯಾರೋ ಬಂದು, ಅವನ ಕೈಯನ್ನು ಹಿಡಿದುಕೊಂಡರು. ಕೈ ಹಿಡಿದವನ ಕಡೆಗೆ ಶಿವಾಜಿಯು ಕೃತಜ್ಞತಾ ಪೂರ್ಣವಾದ ದೃಷ್ಟಿಯಿಂದ ನೋಡಿದನು. ಅವನು ಬೇರೆ ಯಾರೂ ಅಲ್ಲ, ಶಿವಾಜಿಯ ವೀರ ಸೇನಾಪತಿ, ತಾನಾಜಿಯಾಗಿದ್ದನು.

ಬಾಲಕನ ಸಾಹಸವನ್ನು ಕಂಡು ಶಿವಾಜಿಗೆ ಬಹಳ ಆಶ್ಚರ್ಯವಾಯಿತು. ಅವನು ಹೇಳಿದನು—"ನೀನು ಎಷ್ಟು ದೊಡ್ಡ ಅಪರಾಧವನ್ನು ಮಾಡಿರುವೆಯೆಂದು ಗೊತ್ತಿದೆಯೇ?"

ಬಾಲಕನು ಹೇಳಿದನು—"ನಾನು ನನ್ನ ಅಪರಾಧವನ್ನು ಒಪ್ಪಿಕೊಳ್ಳುತ್ತೇನೆ. ತಾವು ಕೊಡುವ ಶಿಕ್ಷೆಯನ್ನು ಅನುಭವಿಸಲಿಕ್ಕೆ ಸಿದ್ಧನಿದ್ದೇನೆ."

ಶಿವಾಜಿಯು ಹೇಳಿದನು—"ಇರಲಿ, ನೀನು ನನ್ನನ್ನು ಕೊಲ್ಲಲಿಕ್ಕೆ ಅಪೇಕ್ಷಿಸಿದುದೇಕೆ? ನಾನು ನಿನಗೆ ಮಾಡಿದ ಹಾನಿ ಏನು?"

ಬಾಲಕನು ಹೇಳಿದನು—"ಮಹಾರಾಜ, ನಾನು ಈ ಹೊಟ್ಟೆಯ ಪಾಡಿಗಾಗಿ ಈ ದೊಡ್ಡ ಪಾಪಕಾರ್ಯವನ್ನು ಮಾಡಲಿಕ್ಕೆ ಸಿದ್ಧನಾಗಿದ್ದೆನು. ತಮ್ಮ ಸೇವಕನಾಗಿದ್ದ ನನ್ನ ತಂದೆಯು ಯುದ್ಧದಲ್ಲಿ ಮೊಗಲರಿಂದ ಕೊಲ್ಲಲ್ಪಟ್ಟನು. ಮನೆಯಲ್ಲಿ ನಾನು ಮತ್ತು ನನ್ನ ತಾಯಿ ಇಬ್ಬರಲ್ಲದೆ ಬೇರೆ ಯಾರೂ ಇಲ್ಲ. ಮೂರು ನಾಲ್ಕು ತಿಂಗಳುಗಳಿಂದ ನಮಗೆ ಹೊಟ್ಟೆ ತುಂಬ ಅನ್ನವು ದೊರೆಯಲಿಲ್ಲ. ನಾನು ತಮ್ಮನ್ನು ಕೊಂದುದಾದರೆ ನನಗೆ ನೂರು ರೂಪಾಯಿಗಳನ್ನು ಕೊಡುವೆನೆಂದು ತಮ್ಮ ಶತ್ರು 'ಸುಭಾನರಾಯ'ನು ನನಗೆ ಹೇಳಿದನು. ನಾನು ಹಣದ ಆಶೆಯಿಂದ ತಮ್ಮನ್ನು ಕೊಲ್ಲಲಿಕ್ಕೆ ಇಲ್ಲಿಗೆ ಬಂದೆನು. ಪರಂತು ಈಶ್ವರನ ಕೃಪೆಯಿಂದ ತಮ್ಮ ವೀರಸೇನಾಪತಿಯು ತಮ್ಮನ್ನು ಬದುಕಿಸಿದನು. ಇನ್ನು ತಾವು ಯಾವ ಶಿಕ್ಷೆಯನ್ನು ಕೊಡುವಿರೋ, ಅದನ್ನು ಅನುಭವಿಸಲಿಕ್ಕೆ ಸಿದ್ಧನಾಗಿದ್ದೇನೆ."

ಬಾಲಕನ ಮಾತುಗಳನ್ನು ಕೇಳಿ ಶಿವಾಜಿಯ ಮನಸ್ಸು ಕರಗಿತು. ಪರಂತು, ಇನ್ನೂ ಹುಡುಗನ ಧೈರ್ಯವನ್ನು ಪರೀಕ್ಷಿಸಬೇಕೆಂದು ಅವನು ತಾನಾಜಿಯೊಂದಿಗೆ ಹೇಳಿದನು. "ತಾನಾಜಿ, ಈ ಹುಡುಗನನ್ನು ಫಿರಂಗಿಯಿಂದ ಹಾರಿಸಿಬಿಡು!"

ಬಾಲಕನು ಸಮಾಧಾನದಿಂದ ಹೇಳಿದನು—"ಮಹಾರಾಜ, ತಾಯಿಯನ್ನು ಕಾಣುವುದಕ್ಕಾಗಿ ತಾವು ನನಗೆ ಒಂದು ಗಂಟೆ ಸಮಯವನ್ನು ಕೊಡಬೇಕು. ನಾನೊಮ್ಮೆ ಅವಳನ್ನು ಕಾಣದಿದ್ದರೆ ಅವಳಿಗೆಷ್ಟು ದುಃಖವಾದೀತೆಂದು ತಮಗೆ ತಿಳಿಯದೇ?"

ಶಿವಾಜಿಯು ಹೇಳಿದನು—"ತಿಳಿಯುತ್ತೇನೆ, ಆದರೆ ನಿನ್ನನ್ನೊಮ್ಮೆ ಬಿಟ್ಟು ಬಿಟ್ಟರೆ ಮರಳಿ ಕೈಗೆ ಸಿಕ್ಕಬಲ್ಲೆಯಾ?

'ಬಾಲಕನು ಹೇಳಿದನು — "ಛತ್ರಪತಿ, ತಾವು ನನ್ನ ಮಾತಿನ ಮೇಲೆ ವಿಶ್ವಾಸವನ್ನಿಡಿರಿ. ಕ್ಷತ್ರಿಯ ಬಾಲಕನು ಎಂದಿಗೂ ಅಸತ್ಯವನ್ನಾಡಲಾರನು. ನಾನು ಒಂದು ಗಂಟೆ ಹೊತ್ತಿನಲ್ಲಿ ಮರಳಿಬಾರದಿದ್ದರೆ ತಾವು ನನ್ನನ್ನು ಕ್ಷತ್ರಿಯ ಬಾಲಕನೆಂದು ತಿಳಿಯುವುದು ಬೇಡ."

ಶಿವಾಜಿಯು ಬಾಲಕನಿಗೆ ಹೋಗಲಿಕ್ಕೆ ಅಪ್ಪಣೆ ಕೊಟ್ಟನು. ಬಾಲಕನು ಹೋದ ಮೇಲೆ ತಾನಾಜಿಯು ಶಿವಾಜಿಯೊಡನೆ ಹೇಳಿದನು—"ಮಹಾರಾಜ, ಈ ಬಾಲಕನು ದೊಡ್ಡ ಶೂರ ವೀರನೆಂದು ಗೊತ್ತಾಗುತ್ತದೆ. ನನಗೆ ಇವನ ಮೇಲೆ ದಯೆಯುಂಟಾಗುತ್ತದೆ."

ಶಿವಾಜಿಯು ಹೇಳಿದನು—"ತಾನಾಜಿ, ನಾನು ಇವನನ್ನು ಕೊಲ್ಲಿಸುವೆನೆಂದು ತಿಳಿದೆಯಾ? ಇಲ್ಲ. ನಾನು ಇವನನ್ನು ಪರೀಕ್ಷಿಸುತ್ತಿದ್ದೇನೆ"

ತಾನಾಜಿಯು ಪ್ರಸನ್ನನಾಗಿ ಹೇಳಿದನು—"ಧನ್ಯ! ಛತ್ರಪತಿ, ತಮ್ಮ ಉದಾರತೆಯು ಧನ್ಯವಾದುದು!"

[illegible] ನೀನು ಇಲ್ಲದಿದ್ದರೆ ನಾನು ಎಂದೋ ಸತ್ತುಹೋಗುತ್ತಿದ್ದೆನು. ನಿನ್ನ ಉಪಕಾರವನ್ನು ನಾನು ಜನ್ಮಾಂತರಕ್ಕೂ ಮರೆಯಲಾರೆ."

ಶಿವಾಜಿಯ ಮಾತುಗಳು ಪೂರೈಸುವುದರೊಳಗಾಗಿ ಆ ಬಾಲಕನು ಬಂದುಬಿಟ್ಟನು. ಶಿವಾಜಿಯು ಕೇಳಿದನು—"ನೀನು ಇಷ್ಟು ಬೇಗನೆ ಹೇಗೆ ಬಂದೆ?"

ಬಾಲಕನು ಹೇಳಿದನು—"ಮಹಾರಾಜ, ನಾನು ಮನೆಗೆ ಹೋದೊಡನೆ ತಾಯಿಯು ನನ್ನನ್ನು ಅಪ್ಪಿಕೊಂಡಳು. ಅವಳಿಗೆ ಎಲ್ಲಾ ಸಂಗತಿಯನ್ನು ಹೇಳಬೇಕೆಂದು ನಿಶ್ಚಯಮಾಡಿಕೊಂಡಿದ್ದೆನು. ಆದರೆ ಅವಳ ಮುಖವನ್ನು ನೋಡಿ ನನಗೆ ಹೇಳಲಿಕ್ಕೆ ಶಕ್ತಿಯೇ ಇಲ್ಲದೆಹೋಯಿತು. ಇವಳಿಗೆ ಸಂಗತಿ ಎಲ್ಲವನ್ನೂ ಹೇಳಿದರೆ ನನ್ನನ್ನು ಹೋಗಬಿಡಲೊಲ್ಲಳು. ಒಂದು ಗಂಟೆಯೊಳಗೆ ಬರುವೆನೆಂಬ ನನ್ನ ಪ್ರತಿಜ್ಞೆಯೂ ಭಂಗವಾಗುವುದು. ಹೀಗೆಂದು ಯೋಚಿಸಿ ಅವಳೊಡನೆ ಯಾವ ವಿಚಾರವನ್ನೂ ಹೇಳದೆ ಬಂದೆನು. ಇನ್ನು ನನ್ನ ತಾಯಿಗೆ ಯಾವ ವಿಧದ ಕಷ್ಟವೂ ಉಂಟಾಗಬಾರದೆಂದು ತಮ್ಮೊಡನೆ ನನ್ನ ಕೊನೆಯ ಪ್ರಾರ್ಥನೆಯಾಗಿದೆ.

ಬಾಲಕನ ಮಾತುಗಳನ್ನು ಕೇಳಿ ಶಿವಾಜಿಯು ಅವನನ್ನು ಅಪ್ಪಿಕೊಂಡು ಹೇಳಿದನು—"ವೀರ ಪುತ್ರ, ನೀನು ಧನ್ಯ! ನಾನು ನಿನ್ನ ಪರೀಕ್ಷೆ ಮಾಡಿದೆನು. ನಿನ್ನ ಅಪರಾಧವನ್ನು ನಾನು ಮೊದಲೇ ಕ್ಷಮೆಮಾಡಿದ್ದೇನೆ."

ಅಷ್ಟು ಕೇಳುತ್ತಲೇ ಬಾಲಕನು ಶಿವಾಜಿಯ ಪಾದಗಳ ಮೇಲೆ ಬಿದ್ದುಬಿಟ್ಟನು. ಸ್ವಲ್ಪ ಹೊತ್ತಿನ ಮೇಲೆ ಶಿವಾಜಿಯು ಹೇಳಿದನು—"ನೀನು ನಿನ್ನ ತಾಯಿಯ ಮೇಲೆ ಎಷ್ಟು ಸ್ನೇಹವನ್ನು ಮಾಡುವಿಯೋ, ಮಾತೃಭೂಮಿಯೊಡನೆಯೂ ಅಷ್ಟೇ ಸ್ನೇಹವನ್ನು ಮಾಡತಕ್ಕದ್ದು. ಅದಕ್ಕೋಸ್ಕರ ಇಂದಿನಿಂದ ನೀನು ನನ್ನ ಸಮೀಪದಲ್ಲಿದ್ದು ದೇಶದ ಸ್ವಾತಂತ್ರ್ಯಕ್ಕಾಗಿ ನನಗೆ ಸಹಾಯಮಾಡುವೆನೆಂದು ಪ್ರತಿಜ್ಞೆ ಮಾಡು."

ಬಾಲಕನು ಹೇಳಿದನು—"ಮಹಾರಾಜ, ತಾವು ನನಗೂ ನನ್ನ ತಾಯಿಗೂ ಜೀವನವನ್ನು ದಾನಮಾಡಿರುವಿರಿ. ಅದುದರಿಂದ ಈ ಜನ್ಮವೆಲ್ಲಾ ತಮ್ಮ ಸೇವೆಯನ್ನು ಮಾಡುತ್ತಿರುವೆನೆಂದು ಪ್ರತಿಜ್ಞೆ ಮಾಡುತ್ತೇನೆ."

ಬಾಲಕನ ಹೆಸರು ಮಾಲೋಜಿರಾಯನೆಂದು. ಇವನು ಅನೇಕ ಯುದ್ಧಗಳಲ್ಲಿ ಶಿವಾಜಿಗೆ ಹೆಚ್ಚು ಸಹಾಯಮಾಡಿದ್ದನು.

ಎನ್. ಎಸ್. ಜೈನಿ.

ಹಾಸ್ಯಲಹರಿ.

ಮಾಸ್ತರ—ನಾನು ನಿನ್ನೆ ತಿಳಿಸಿದ ಇಂಗ್ಲೆಂಡಿನ ಚರಿತ್ರೆಯ ತಿಳಿದಿರುವುದೋ?

ವಿದ್ಯಾರ್ಥಿ—ಹೌದು ತಿಳಿದಿದೆ ನಾನು ಹುಟ್ಟುವ ಪೂರ್ವದಲ್ಲಿ ನನ್ನ ತಂದೆತಾಯಿಗಳೂ ನೀವೂ ಮಂಗಳೂರಿನಲ್ಲಿದ್ದಿರಿ.

• • •

ಗುರುಲಿಂಗ—ಏನ್ರಿ ಶಂಕರಪ್ಪ ಸೆಟ್ರೇ, ನೀವು ಮೊನ್ನೆ ದೇಸಾಯಿಯವರ ಮಗನ ಲಗ್ನಕ್ಕೆ ಹೋಗಿದ್ದಿರಿ. ಲಗ್ನವು ಹೇಗಾಯಿತು?

ಶಂಕರಪ್ಪ—ಲಗ್ನವೇನೊ ಚಲೋ ಆಯಿತು. ಆದರೆ ಊಟದ ಹೊತ್ತಿಗೆ ಊಟ, ನೀರಿನ ಹೊತ್ತಿಗೆ ನೀರು ಮಾತ್ರ ದೊರೆಯಲಿಲ್ಲ; ನಿದ್ದೆಯ ಖರ್ಚು ಮಾತಿನ ಖರ್ಚು ದೇಸಾಯಿಯವರು ಲೂಟಿಮಾಡಿಬಿಟ್ಟರು.

• • • •

ಗುರುಭಟ್ಟ—ಲೋ ಲೋ ಲೋ ಲೋ.

ರಾಮಭಟ್ಟ—ಏ ಅವಿಷ್ಟು ಸೂಳೇ ಮಗನೇ ಹುಚ್ಚಿಲ್ಲ, ಹುಣ್ಣಿವೆ ಇಲ್ಲ; ಹೀಗೇಕೆ ಅವಾಚ್ಯ ಶಬ್ದವನ್ನು ಮಾತಾಡುತ್ತೀ ನಡೆ, ನಮ್ಮ ಅಂಗಡಿಯ ಮುಂದೆ ನಿಲ್ಲಬೇಡ.

ಗುರುಭಟ್ಟ—ಬಾ ಬಾ ಬಾನ ಕೊಡಿರಿ.

ರಾಮಭಟ್ಟ—ಲೋಬಾನ ಬೇಕು ತಕ್ಕೊಂಡು ಹೋಗು (ಸಿಟ್ಟಿನಿಂದ ಕೊಡುತ್ತಾನೆ.)

• • • •

ವೆಂಕಟ—ದಾಸನು ಈಗ ಸಂಸಾರದ ಚಿಂತೆಯನ್ನು ಹೆಚ್ಚಾಗಿ ಹಚ್ಚಿಕೊಂಡಿದ್ದಾನೆ.

ವಾಸುದೇವ—ಅದು ಹೇಗೆ?

ವೆಂಕಟ—ಹೊಲ-ಮನಿ ಅನ್ನುತ್ತಾನೆ, ಎತ್ತುಕತ್ತಿ ಅನ್ನುತ್ತಾನೆ, ಹೆಂಡರು ಮಕ್ಕಳನ್ನುತ್ತಾನೆ, ಮನಿಮಾರು ಅನ್ನುತ್ತಾನೆ.

ವಾಸುದೇವ—ಮನೇಮಾರು ಅನ್ನುತ್ತಾನೆ? ಇದೇ ಏನು ಅವನು ಮಾಡುವ ಸಂಸಾರದ ರೀತಿ? ಇದೆಂಥ ಉಲ್ಟಾ ಸವಸ್ಯಾ!

ಮಂಗಳೂರು ಮುನಿಸಿಪಾಲಿಟಿ.

ನೋಟೀಸು.

ಮಂಗಳೂರಿಗೆ ನೀರನ್ನು ಒದಗಿಸುವದಕ್ಕಾಗಿ ಹಸಮಾರು ಬುಗ್ಗೆಯಿಂದ ನೀರನ್ನು ಶೋಧಿಸುವ ರಚನೆಯು ಈಗ ಸಂಪೂರ್ಣವಾಗಿದೆ. ಈ ಶೋಧನೆಯ ಮೇರೆಗೆ ತಲೆವಂದಕ್ಕೆ ದಿವಸಕ್ಕೆ ಆರು ಗೆಲನ್ ಪ್ರಕಾರ 60,000 ಜನರಿಗೆ ಒದಗಿಸಿಕೊಡ ಬಹುದಾಗುವ ನೀರಿನ ತ್ರಯವನ್ನು ತಯಾರಿಸುವದಕ್ಕೆ 7.4 ಲಕ್ಷ ರೂಪಾಯಿ ಖರ್ಚು ತಗಲುವದಲ್ಲದೆ ಇದನ್ನು ನಡಿಸುವದಕ್ಕಾಗಿ ವರ್ಷಾವಧಿ 4500—0—0ರೂಪಾಯಿ ಖರ್ಚು ಅಂದಾಜುಮಾಡೋಣಾಗಿಯದೆ. ಈ ರಚನೆಯನ್ನು ಸಾಧಿಸುವರೆ ತಗಲುವ ಖರ್ಚಿನ ಅರ್ಧಾಂಶವನ್ನು ಗವರ್ನಮೆಂಟಿನವರು ನೋಡಿಕೊಳ್ಳುತ್ತಾರೆಂದು ಭಾವಿಸಿದರೂ ಮುನಿಸಿಪಲ್ ಕೌನ್ಸಿಲಿನವರು ಉಳಿದ ಅರ್ಧಾಂಶ ಖರ್ಚನ್ನು ಇದಲ್ಲದೆ ವರ್ಷಾವಧಿ ನಡೆಯಿಸುವ ಖರ್ಚನ್ನು ನೋಡಿಕೊಳ್ಳಬೇಕಾಗುವುದು. ಮುನಿಸಿಪಲ್ ಕೌನ್ಸಿಲು ತಮ್ಮ ಪಾಲಿಗೆ ಬೀಳುವ ಅರ್ಧಾಂಶದ (3·7 ಲಕ್ಷ ರೂಪಾಯಿಯ) ಖರ್ಚಿನ ಬಗ್ಗೆ ಸಾಲವನ್ನು ಪಡೆಕೊಂಡು, ಅದನ್ನು ಶೇಕಡಾ 5½ರಂತೆ ಬಡ್ಡಿ ಕೂಡಿಸಿ ಇಪ್ಪತ್ತು ಕಂತುಗಳಿಂದ ಸಲ್ಲಿಸುವದಾದರೂ ವರ್ಷ ಒಂದಕ್ಕೆ ರೂಪಾಯಿ 30,320ನ್ನು ಈ ಸಾಲಕ್ಕಾಗಿ ಒದಗಿಸಿಕೊಡಬೇಕಾಗುವುದು. ಇದಕ್ಕೆ ವರ್ಷಾವಧಿ ನಡೆಯಿಸುವ ಖರ್ಚನ್ನು ಕೂಡಿಸಿದರೆ ಪ್ರತಿ ವರ್ಷಕ್ಕೆ ರೂಪಾಯಿ 34,820 ಖರ್ಚು ತಗಲುವುದು.

ಆದರೆ ಕೌನ್ಸಿಲಿನ ಈಗಿನ ಪರಿಸ್ಥಿತಿ ಪ್ರಕಾರ ಅದರ ಸಾಧಾರಣ ಹುಟ್ಟುವಳಿಯಿಂದ ಎಷ್ಟನ್ನಾದರೂ ಮೇಲೆ ಹೇಳಿದ ಖರ್ಚಿಗೆ ವಿನಿಯೋಗಿಸಲು ಸಾಧ್ಯವಿಲ್ಲವಾದ್ದರಿಂದ ನೀರುತೆರಿಗೆ ಎಂಬ ಒಂದು ಹೊಸ ತೆರಿಗೆಯನ್ನು ಮನೆ ತೆರಿಗೆಯನ್ನು ತೆರುವ ವರ್ಷಾವಧಿ ಬಾಡಿಗೆಯ ಶೇಕಡಾ 4½ರಂತೆ ವಸೂಲು ಮಾಡಬೇಕಾಗುವುದು. ಈ ರಚನೆಗೆ ಹಣ ಒದಗಿಸುವ ಯಾವದಾದರೊಂದು ಹಂಚಿಕೆಯನ್ನು ಕಂಡುಹಿಡಿಯುವ ಮುಂಚಿತವಾಗಿ ಮುಂದೆ ಈ ತೆರಿಗೆಯ ಭಾರವನ್ನು ವಹಿಸಬೇಕಾಗಿರುವ ಮಂಗಳೂರಿನ ಜನರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ನಿಶ್ಚಯಿಸಲಾಗಿದೆ. ಯಾರಿಗಾದರೂ ಈ ವಿಷಯದಲ್ಲಿ ಆಕ್ಷೇಪ ಯಾ ಸೂಚನೆಗಳಾಗಲೀ ಅಥವಾ ಇದರ ಅವಶ್ಯಕತೆ ಹಾಗೂ ಅನಾವಶ್ಯಕತೆಯ ಕುರಿತಾಗಲೀ ಯಾ ಇದಕ್ಕೆ ಬೇಕಾದ ಹಣವನ್ನು ಒದಗಿಸುವದರ ಹೊಸ ವಿಚಾರಗಳಾಗಲೀ ಇದ್ದಲ್ಲಿ ಅಂತವುಗಳನ್ನು 1929ನೇ ಜುಲಾಯಿ ತಿಂಗಳ ಅಂತ್ಯದೊಳಗೆ ತಿಳುಪುವಂತೆ ಕೇಳಿಸಿಕೊಳ್ಳಲ್ಪಟ್ಟಲ್ಲಿ ಅವುಗಳನ್ನು ಕೌನ್ಸಿಲಿನ ನಿರ್ಣಯವನ್ನು ನಿಶ್ಚಯಿಸುವ ಮೊದಲು ಆಲೋಚಿಸಲಾದೀತು.

ಮುನಿಸಿಪಾಲ್ ಆಫೀಸು, ಮಂಗಳೂರು	ಕೆ. ವಿಟ್ಠಲ್ ಶೆಟ್ಟಿ,
ತಾರೀಖು ?—7—1929	ವೈಸ್ ಚೇಯರ್‌ಮೇನ್.

ಪ್ರಕಟಣೆ.

ಕಾರ್ಕಳ ಡಿಸ್ಟ್ರಿಕ್ಟ ಮುನಿಸಿಫ ಕೋರ್ಟನಲ್ಲಿ

O. S. No 106/1929

ಕೆಂಚದ ಸಂಕಪ್ಪಯ್ಯ—ವಾದಿ

ಮತ್ತು

ಅಯ್ಯಣ್ಣ ಭಟ್ಟ ಸಹಾ 18 ಜನರು ಪ್ರತಿವಾದಿರು

ಇವರೊಳಗೆ

ಮೇಲೆ ಕಂಡ ಕಾಣಿಸಿರುವ ವಾದಿಯು ಬಡಗ ಮುಚ್ಚಾರು ಗ್ರಾಮದಲ್ಲಿರುವ ಆಚ್ಚುಕಟ್ಟು ಶ್ರೀರಾಮಚಂದ್ರ ದೇವರ ಭಂಡಾರದ ಕಡೆಯಿಂದ ಗೇಣಿಬಾಕಿ ವಸೂಲು ಬಗ್ಗೆ ದಾವಾ ಮಾಡಿರುತ್ತಾನೆ. ಸದ್ರಿ ದೇವಸ್ಥಾನಕ್ಕೆ ಸಮ್ಮಂಧಪಟ್ಟವರು ಈ ದಾವೆಗೆ ಆಕ್ಷೇಪ ಹೇಳುವವರಿದ್ದರೆ ಇದೇ ಇಸವಿ ಜುಲಾಯಿ ತಿಂಗಳು ತಾ. 19ಕ್ಕೆ ಕಾರ್ಕಳ ಡಿ. ಮು. ಕೋರ್ಟಿನಲ್ಲಿ ಬೆಳಿಗೆ 11 ಘಂಟೆಗೆ ಹಾಜರಾಗಬಹುದು. ತಿಳಿದಿರುವದು.

ಕಾರ್ಕಳ.	EDDYA VASUDEVAIYA B. A., B. L.
ತಾ. 4—7—'29.	Vakil Karkal, South Kanara,
	ವಾದಿಯ ಕಡೆ ವಕೀಲ್

ಪ್ರಕಟಣೆ.

ನನ್ನ ತಮ್ಮ ಭೀಮಭಟ್ಟನು ಪುತ್ತೂರಲ್ಲಿ ನಡಿಸುತ್ತಿದ್ದ ಜೌಳಿವ್ಯಾಪಾರದ ಕುರಿತು ಅತನಿಗುಂಟಾದ ಸಾಲಗಳ ತಗಾದೆ ನಿಮಿತ್ತ ನಾನು ಅತನಿಂದ ಕೆಲವು ಜೌಳಿಗಳನ್ನು ರೂಪಾಯಿ 2000ಕ್ಕೆ ಖಂಡಿತ ಕ್ರಯಕ್ಕೆ ಪಡೆದು ಅತನ ಎಲ್ಲಾ ಸಾಲಗಳನ್ನು ತೀರಿಸುತ್ತೇನೆ. ಪ್ರಕೃತ ಸದ್ರಿ ಜೌಳಿಗಳನ್ನು ವಿಕ್ರಯಿಸುವ ಬಗ್ಗೆ ಮಾತ್ರ ಅದೇ ಜೌಳಿ ಅಂಗಡಿಯಲ್ಲಿ ತಾರೀಕು 12—7—1929ರಿಂದ ನಾನು ಒಂದು ಜೌಳಿ ಶೋವನ್ನು ತೆರೆದಿರುತ್ತೇನೆ. ಅತ್ಯಂತ ಕಮ್ಮಿ ಕ್ರಯಕ್ಕೆ ವಿಕ್ರಯಿಸಿ ಬೇಗನೆ ಸದ್ರಿ ಶೋವು ಅಂತ್ಯಗೊಳಿಸುವ ಪ್ರಯುಕ್ತ ಗಿರಾಕಿಗಳಿಗೆ ಒಳ್ಳೆ ಸುಸಂದರ್ಭ ಒದಗಿರುತ್ತದೆ. ಮರೆಯಬೇಡಿರಿ.

ಸರ್ಪಂಗಳ ಸುಬ್ರಾಯ ಭಟ್ಟ,

ಪುತ್ತೂರು, ದ. ಕ.

ತುಚ್ಛನಿಂದ ಹುಚ್ಚರಾದುದು.

(ಕತೆ)

ಹಾರ್ಕಾಡಿ ಲಕ್ಷ್ಮಣ ಶೈ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಹಾಗಾದೊಡನೆ ಕಲಿಯು ವಿಪರೀತ ದಿಸಿಯಾಗುವುದು. ಕೂಡಲೇ ಮೂರ್ಛೆಯಿಂದ ಬೀಳುವರು. ಆಗ ಪ್ರಾಣ ಹೋಗುವ ಕಾಲಕ್ಕೆ ಕೈ ಕಾಲು ಬಡಿದುಕೊಳ್ಳುವಂತೆ ತನ್ನ ಕೈಕಾಲುಗಳನ್ನು ಬಡಿದುಕೊಂಡು, ನಮಗೆ ಭೀತಿ ಹುಟ್ಟಿಸುವರು. ಹೀಗಾಗಿ ಅವುದರಿಂದೂ ಔಷಧವನ್ನು ಕೊಡಲು ಉಪಾಯವಿಲ್ಲವಾಗಿದೆ" ಎಂದು ಹೇಳಿದೆನು.

ಮಂಗೇಶರಾಯರು "ಇದೇನು ಸರ್ವ ನಾಶ! ಅದಕ್ಕೀಗ ಏನು ಉಪಾಯ ಮಾಡಬಹುದು? ಇದನ್ನೆಲ್ಲಾ ನಾನೀತನಕ ಕೇಳಿಲ್ಲ. ಹಾಗಾದರೆ ಅತನಿಗೆ ಆ ರೋಗವು ತಗಲಿದುದಾವಾಗ?" ಎಂದು ವಿಚಾರಿಸಿದರು.

ಅದಕ್ಕೆ ನಾನು "ಅದಾಗಿ ಆರೇಳು ದಿವಸಗಳಾದುವಷ್ಟೇ. ಇಲ್ಲವಾದರೆ ನಿಮಗೆ ಕಾಗದ ಬಾರದೆ ಇರುತಿದ್ದಿತೇ? ನೀವೇ ಇಲ್ಲಿಗೆ ಬರುತ್ತೀರೆಂದಾಗಿ ಕಾಗದ ಬರೆದಿದ್ದುದರಿಂದ ನಾವು ಪತ್ರವನ್ನು ಬರೆಯದಿರಲು ಕಾರಣವು. ಈ ರೋಗಕ್ಕೆ ಏನುಪಾಯ ಮಾಡಬಹುದೆಂಬುದರ ಕುರಿತು ಚೆನ್ನಾಗಿ ಆಲೋಚಿಸಿ ಉಪಯುಕ್ತವಾದ ಚಿಕಿತ್ಸೆಯನ್ನು ಮಾಡಿಸಬಹುದು. ಈಗ ನೀವು ಮನೆಗೆ ಹೊರಡಿರಿ. ನೀವೀಸಮಯದಲ್ಲಿ ಬಂದುದು ಬಹಳ ಉಪಕಾರವಾಯಿತು. ಇಲ್ಲಿ ನಾವು ಸಹಾಯಶೂನ್ಯರಾಗಿದ್ದೆವು" ಎಂದು ಹೇಳಿದ ಬಳಿಕ ಒಬ್ಬ ಕೂಲಿಯವನನ್ನು ಕರೆದು ಬಸ್ಸಿನಲ್ಲಿರುವ ಅವರ ಪೆಟ್ಟಿಗೆಗಳೆಲ್ಲವನ್ನೂ ಹಾಸಿಗೆಯನ್ನೂ ತೆಗೆಯಿಸಿದೆನು. ಅವುಗಳಲ್ಲಿ ಒಂದು ಪೆಟ್ಟಿಗೆಯು ಮಾತ್ರ ಬಹಳ ಭಾರವಾದುದು. ಮತ್ತೊಂದು ಅಷ್ಟು ಭಾರವಿರಲಿಲ್ಲ. ಇನ್ನೊಂದು ಬಹಳ ಹಗುರವಾಗಿತ್ತು. ಅದರಲ್ಲಿ ಭಾರವಾದ ಪೆಟ್ಟಿಗೆಯನ್ನು ತೋರಿಸಿ ಮಂಗೇಶರಾಯರು "ಈ ಪೆಟ್ಟಿಗೆಯ ವಿಷಯ ಸ್ವಲ್ಪ ಜಾಗ್ರತೆಯಿರಲಿ. ಇದರಲ್ಲಿ ನಾನು ಹಣವನ್ನಿಟ್ಟಿರುವೆನು. ಮದ್ರಾಸಿನಿಂದ ಇಲ್ಲಿ ವರೆಗೆ ನಾನು ಅದನ್ನು ಬಹಳ ಜಾಗರೂಕತೆಯಿಂದ ತಂದಿರುವೆನು. ಮೋಟಾರ್ ಬಸ್ಸುಗಳು ಬದಲಾಯಿಸಬೇಕಾದಲ್ಲಿ, ಸ್ಟೇಶನುಗಳಲ್ಲೂ ಈ ಪೆಟ್ಟಿಗೆಯ ಮೇಲೆ ದೃಷ್ಟಿಯನ್ನಿಟ್ಟಿದ್ದೆನು. ಇಲ್ಲವಾದರೆ ಇಂಥ ಸ್ಥಳಗಳಲ್ಲೇ ಹೆಚ್ಚಾಗಿ ಈ ಪೆಟ್ಟಿಗೆಗಳು ಮಾಯವಾಗುವ ಸಂಭವವು" ಎಂದು ಹೇಳಿದರು.

ಆ ಮೇಲೆ ಬಸ್ಸು ಸ್ಟೇಶನಿನಿಂದ ಹೊರಗೆ ಒಂದು ಗಾಡಿಯನ್ನು ಹತ್ತಿ ಎಲ್ಲರೂ ಪಾಂಡುರಂಗರಾಯನ ಮನೆಗೆ ಬಂದೆವು. ಅಲ್ಲಿ ತಲ್ಪಿದ ಕೂಡಲೇ ಗಾಡಿಯಿಂದಿಳಿದು ಮನೆಯೊಳಕ್ಕೆ ಹೋದೆವು.

ಮಂಗೇಶರಾಯರೂ ಪಾಂಡುರಂಗರಾಯನೂ ದಿವಾನಖಾನೆಯಲ್ಲಿ ಕುಳಿತುಕೊಂಡರು. ದಿವಾನಖಾನೆಯು ಸುಂದರವಾಗಿ ಶೃಂಗರಿಸಲ್ಪಟ್ಟಿತ್ತು. ಗೋಡೆಗಳಲ್ಲೆಲ್ಲಾ ವಿವಿಧವಾದ ಚಿತ್ತಾಕರ್ಷಕ ಚಿತ್ರಗಳು ತೂಗುತ್ತಿದ್ದುವು. ದೊಡ್ಡ ದೊಡ್ಡ ಕನ್ನಡಿಗಳು ನಾಲ್ಕು ಬದಿಗಳಲ್ಲೂ ನಿಲ್ಲಿಸಲ್ಪಟ್ಟಿದ್ದುವು. ಒಂದೆಡೆಯಲ್ಲಿ ಕಾಲಿನಿಂದ ತುಳಿದು ಬಾರಿಸಬಹುದಾದ ಒಂದು ಪೆಟ್ಟಿ ಹಾರ್ಮೋನಿಯಮ್ ಇತ್ತು. ಅಲ್ಲೇ ಹತ್ತಿರದಲ್ಲೊಂದು ಮೇಜು ಇತ್ತು. ಅದರ ಮೇಲೆ ಕೆಲವು ಪುಸ್ತಕಗಳೂ ಒಂದೆರಡು ಫೌಂಟೆನ್‌ಪೆನ್ನುಗಳೂ, ನೋಟುಪೇಪರುಗಳ ಒಂದು ಪ್ಯಾಡೂ ಇದ್ದುವು. ಇನ್ನೂ ಅಲ್ಲಿ ಅಂದವಾದ ನಿತ್ಯೋಪಯೋಗದ ಎಷ್ಟೋ ವಸ್ತುಗಳಿದ್ದುವು.

ನಾನು ಮಂಗೇಶರಾಯರ ಪೆಟ್ಟಿಗೆಗಳನ್ನೂ ಹಾಸಿಗೆಯನ್ನೂ ಆ ದಿವಾನಖಾನೆಯ ಪಾರ್ಶ್ವದಲ್ಲಿರುವ ಕೋಣೆಯಲ್ಲಿರಿಸಿ ಬಾಗಿಲು ಮುಚ್ಚಿಕೊಂಡೆನು.

ಶ್ವಶುರನೂ ಜಾಮಾತನೂ ಆ ದಿವಾನಖಾನೆಯಲ್ಲೇ ಕುಳಿತುಕೊಂಡರು; ಆದರೆ ಇಬ್ಬರ ಬಾಯಿಯಲ್ಲೂ ಮಾತುಗಳಿಲ್ಲ. ಇಬ್ಬರೂ ಮೌನವಾಗಿದ್ದಾರೆ. ಶ್ವಶುರ ಮಹಾಶಯರು ಭಾವಿಸುತ್ತಾರೆ ಜಾಮಾತನು ಹುಚ್ಚನೆಂದು, ಅಳಿಯನು ಭಾವಿಸುತ್ತಾನೆ ಶ್ವಶುರನು ಹುಚ್ಚನೆಂದು. ಇದೇ ರೀತಿಯಲ್ಲಿ ಇಬ್ಬರೂ ಭಾವಿಸುತ್ತ ಚಿಂತಿಸುತ್ತಲಿರುವರು. ಇಬ್ಬರೂ ಮೌನವಾಗಿಯೇ ಕುಳಿತುಕೊಂಡರು.

ಇವರು ಹೀಗೆಯೇ ಕುಳಿತುಕೊಂಡದ್ದರಿಂದ ಗಾಡಿಯಲ್ಲಿದ್ದಾಗಲೂ ಮೌನವಾಗಿದ್ದರೆಂಬುದು ನನಗೆ ಖಚಿತವಾಯಿತು. ನಾನು ಮನೆಗೆ ಬಂದುದು ಮಂಗೇಶರಾಯರ ಸಾಮಾನುಗಳನ್ನು ತುಂಬಿಸಿದ ಬಂಡಿಯಲ್ಲಾದುದರಿಂದ ಇವರಿಬ್ಬರೂ ಗಾಡಿಯಲ್ಲಿ ಏನು ಮಾತಾಡಿಕೊಳ್ಳುವರೋ ಎಂಬ ಅನುಮಾನವಿತ್ತು. ಆದರೆ ಅವರಿಬ್ಬರೂ ಹೀಗೆಯೇ ಕುಳಿತುಕೊಂಡದ್ದನ್ನು ನೋಡಿ ನನ್ನ ಸಂದೇಹವು ನಿವಾರಣವಾಯಿತು. ಅಷ್ಟರಲ್ಲಿ ಅನಂತನು 'ಒಂದು ಸಿಗರೇಟು ಟಿನ್ನ'ನ್ನೂ ಒಂದು ಬೆಂಕಿ ಪೆಟ್ಟಿಗೆಯನ್ನೂ ತಂದು ಮಂಗೇಶರಾಯರ ಇದಿರಲ್ಲಿಟ್ಟನು. ಆಗ ನಾನು ಅನಂತನನ್ನು ಕರೆದು "ಅನಂತಾ ಯಜಮಾನರಿಗೆ ತಡವಾಗುತ್ತದೆ ಈಗ ಎರಡು ಘಂಟೆಯಾಯಿತು. ಅವರ ಸ್ನಾನದ ವ್ಯವಸ್ಥೆಯನ್ನು ಮಾಡಿಸು" ಎಂದೆನು.

ಆ ವೇಳೆ ನಾನು ಮಂಗೇಶರಾಯರನ್ನು ಕಂಡು "ಸ್ವಾಮಿ, ನಿಮ್ಮ ವಸ್ತ್ರಗಳನ್ನು ಬದಲಾಯಿಸಿ ಉಟ್ಟುಕೊಳ್ಳಿ. ಸ್ನಾನಕ್ಕೆ ಸಿದ್ಧವಾಯಿತು" ಎಂದು ಹೇಳಿದೆನು. ಆಗ ಮಂಗೇಶರಾಯರು ನನ್ನ ಕೈಯಲ್ಲಿ ಒಂದು ಬೀಗದಕೈಗಳ ಗೊಂಚಲನ್ನು ಕೊಟ್ಟು "ನನ್ನ ಹಸುರು ಬಣ್ಣದ ಪೆಟ್ಟಿಗೆಯಲ್ಲಿ ನನ್ನ ವಸ್ತ್ರಗಳೂ, ಟೂತ್ ಪೌಡರ್ ಕರಡಿಗೆಯೂ, ಹಲ್ಲುಜ್ಜುವ ಬ್ರಷ್ಷೂ, ಸಾಬೂನು ಪೆಟ್ಟಿಗೆಯೂ, ತಲೆಗೆ ಹಚ್ಚಿಕೊಳ್ಳುವ ಎಣ್ಣೆಯ ಬಾಟ್ಲಿಯೂ ಇವೆ. ಅವುಗಳನ್ನು ತಂದು ಕೊಡಿರಿ" ಎಂದು ಹೇಳಿದರು.

ಆದೇಶಾನುಸಾರವಾಗಿ ನಾನು ಆ ಕೋಣೆಯೊಳಕ್ಕೆ ಹೋಗಿ ಆ ಪೆಟ್ಟಿಗೆಯಲ್ಲಿರುವ ವಸ್ತ್ರಗಳನ್ನು ತೆಗೆದೆನು. ಟೂತ್ ಪೌಡರ್ ಕರಡಿಗೆಯನ್ನೂ, ಬ್ರಷ್ಷನ್ನೂ, ಸಾಬೂನು ಪೆಟ್ಟಿಗೆಯನ್ನೂ ಅನಂತನ ಕೈಯಲ್ಲಿ ಕೊಟ್ಟೆನು.

ಬಳಿಕ ಪೆಟ್ಟಿಗೆಯಿಂದ ತೆಗೆದ ವಸ್ತ್ರಗಳನ್ನು ತೆಗೆದುಕೊಂಡು ನಾನು ಮಂಗೇಶರಾಯರಲ್ಲಿಗೆ ಹೋದೆನು. ಅವರು ತನ್ನ ಕೋಟನ್ನು ತೆಗೆದು ಅದೇ ಪೆಟ್ಟಿಗೆಯಲ್ಲಿರಿಸುವುದಕ್ಕಾಗಿ ನನ್ನೊಡನೆ ಕೊಟ್ಟರು. ಮಂಗೇಶರಾಯರು ನಾನು ಕೊಟ್ಟ ವಸ್ತ್ರಗಳನ್ನುಟ್ಟ ಕೂಡಲೇ ನಾನು ಪಾಂಡುರಂಗರಾಯನೊಡನೆ "ನಿಮ್ಮ ಮಾವನನ್ನು ಆಚೆಕಡೆಗೆ ಕರೆದುಕೊಂಡು ಹೋಗಿರಿ. ಅವರಿಗಿದು ಹೊಸಮನೆಯಾದುದರಿಂದ ಯಾವ ಯಾವ ಸ್ಥಳಕ್ಕೆ ಯಾವ ಯಾವ ಕಡೆಯಿಂದ ಹೋಗಬೇಕೆಂಬ ತಿಳುವು ಇಲ್ಲ" ಎಂದು ಹೇಳಲು ಪಾಂಡುರಂಗರಾಯನು ಮಂಗೇಶರಾಯರನ್ನು ಕರೆದುಕೊಂಡು ಹೋದನು. ಒಂದೆರಡು ನಿಮಿಷಗಳು ಕಳೆದ ಮೇಲೆ ನಾನು ಅನಂತನನ್ನು ಗುಟ್ಟಾಗಿ ಕರೆದು, "ಅನಂತಾ, ಯಜಮಾನರಿಗೆ ಸ್ನಾನಮಾಡುವಾಗಲೂ ಒಂದು ಸಿಗರೇಟು ಬೇಕಾಗುತ್ತದೆ. ಆದುದರಿಂದ ಈ ಸಿಗರೇಟು ಟಿನ್ನನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ನಿಲ್ಲು" ಎಂದು ಹೇಳಿದೆನು.

ಹೀಗೆ ಹೇಳಿದೊಡನೆ ಅನಂತನು ಒಮ್ಮೆ ನನ್ನ ಮುಖವನ್ನೇ ಚೆನ್ನಾಗಿ ನೋಡಿದನು. ನಿನ್ನೆಯೇ ನಾನು ಪಾಂಡುರಂಗರಾಯನ ಹಿಂದೆಯೇ ಒಂದು ಆತನ ಮನೆಯ ಜಗಲಿಯಲ್ಲಿ ಕುಳಿತುಕೊಂಡಾಗ ಆ ಅನಂತನು ನನ್ನೊಡನೆ ಮಾತನಾಡಿದ್ದನು. ನಾನೂ ಅವನೊಡನೆ ಮಾತನಾಡಿದ್ದೆನು. ಆದುದರಿಂದ ನಿನ್ನೆ ಆತನಿಗೆ ನನ್ನ ಸ್ವರದ ಪರಿಚಯವಾಗಿದ್ದಿತು. ನಾನು ಆತನನ್ನು ಕರೆದು ಮಾತನಾಡಿದ ಕೂಡಲೇ ಆತನಿಗೆ ಸ್ವಲ್ಪ ಅನುಮಾನವುಂಟಾಯಿತು. ಆದರೆ ಅನುಮಾನವನ್ನು ಹೋಗಲಾಡಿಸುವುದಕ್ಕೆ ನನ್ನಲ್ಲಿ ಬೇರೆ ಕೆಲವು ವ್ಯತ್ಯಾಸಗಳಾಗಿದ್ದುವು. ತಲೆಯಲ್ಲಿದ್ದ ಉದ್ದುದ್ದ ಕೂದಲನ್ನು ಕತ್ತರಿಸಿಕೊಂಡಿದ್ದೆ. ಮೂಗಿನ ಕೆಳಗಿರುವ ಮೀಸೆಗಳನ್ನು ಅಂದವಾಗಿ ಕತ್ತರಿಸಿ ಅವುಗಳ ಬದಿಗಳನ್ನು ಬೋಳಿಸಿ 'ಫ್ರೆಂಚ್‌ಕಟ್' ಎಂಬ ರೀತಿಯಲ್ಲಿ ಚೂರು ಚೂರು ಮೀಸೆಗಳನ್ನು ಮಾತ್ರ ಇರಿಸಿದ್ದೆ. ಕೂದಲೂ ಮೀಸೆಯೂ ಹ್ರಸ್ವವಾದುದರಿಂದ ನನ್ನ ಪರಿಚಯವನ್ನು ಸುಲಭದಲ್ಲಿ ಮಾಡಿಕೊಳ್ಳಲು ಯಾರಿಗೂ ಅಸಾಧ್ಯವಾಗಬಹುದು. ಆಗ ಆ ಪಾಪದ ಅನಂತನಿಗೆ ಹೇಗೆ ಸಾಧ್ಯವಾಗಬಹುದು? ನನ್ನ ಸ್ವರವನ್ನು ಕೇಳಿ ಆತನು ನನ್ನ ಮುಖದ ಕಡೆಗೆ ನೋಡಿದರೂ ನಿನ್ನೆ ಕಂಡ ಉದ್ದ ಕೂದಲೂ ಉದ್ದ ಮೀಸೆಯೂ ಇಂದು ಇಲ್ಲದಿದ್ದುದರಿಂದ ಆತನು ಸಂದೇಹವನ್ನು ಬಿಟ್ಟು ಬಿಟ್ಟನು. ಕೂಡಲೇ ನಾನು ಹೇಳಿದಂತೆ 'ಸಿಗರೇಟಿನ ಟಿನ್ನ'ನ್ನು ಹಿಡಿದುಕೊಂಡು ಮಂಗೇಶರಾಯರಿರುವಲ್ಲಿಗೆ ಹೋದನು.

"ಈಗಲಾದರೂ ನಾನು ತಲೆಯ ಕೂದಲನ್ನೂ ಮೀಸೆಗಳನ್ನೂ ಕತ್ತರಿಸಿಕೊಂಡ ಕಾರಣವು ತಿಳಿಯಿತೇ?" ಎಂದು ರಂಗರಾಯನು ಪ್ರಶ್ನಿಸಿದನು.

"ಈ ಹೊಟ್ಟೆಗಾಗಿ ಇಂಥ ತುಚ್ಛ ಕಾರ್ಯವನ್ನು ಮಾಡಬೇಕಾಯಿತೆ? ಶ್ವಶುರ ಜಾಮಾತರಿಬ್ಬರಿಗೂ ಹುಚ್ಚುತಾಗಿಸಿದೆ. ಆ ಮೇಲೆ ಏನಾಯಿತು?" ಎಂದು ಸುಂದರಿಬಾಯಿಯು ಆಶ್ಚರ್ಯದಿಂದ ಕೇಳಿದಳು.

ಅದಕ್ಕೆ ರಂಗರಾಯನು "ನಾನು ಅನಂತನು ಸಿಗರೇಟನ್ನು ಕೊಂಡುಕೊಂಡು ಅತ್ತ ಹೋದ ಕೂಡಲೇ ಪೆಟ್ಟಿಗೆಯ ಮುಚ್ಚಳವನ್ನು ತೆರೆದು ಅದರೊಳಗಿದ್ದ ಆ ನೋಟಿನ ಕಟ್ಟನ್ನೂ, ನಾಲ್ಕು ಅಮೂಲ್ಯವಾದ ಆಭರಣಗಳನ್ನೂ ತೆಗೆದು ನನ್ನ ಕಿಸೆಯೊಳಗೆ ತುರುಕಿಸಿಕೊಂಡೆನು. ಮತ್ತು ಮಂಗೇಶರಾಯರ ಕೋಟಿನೊಳಗಿದ್ದ ಆ ಸುವರ್ಣ ಸರಪಣಿಯನ್ನೂ, ವಾಚನ್ನೂ ತೆಗೆದು ಜೇಬಿನೊಳಗೆ ಹಾಕಿಕೊಂಡೆನು. ನಾನು ಇಷ್ಟು ಕೆಲಸವನ್ನು ಮಾಡುತ್ತಿರುವಾಗಲೂ ಅಲ್ಲಿ ಯಾರೂ ಬರಲಿಲ್ಲ. ಆ ಮೇಲೆ ಮೆಲ್ಲನೆ ಅಲ್ಲಿಂದ ಹೊರಟು ಗೃಹಾಭಿಮುಖವಾಗಿ ಪ್ರಸ್ಥಾನ ಮಾಡಿದೆನು. ಆ ನೋಟಿನ ಗಂಟಿನಲ್ಲಿ ಹತ್ತು ಹತ್ತು ರೂಪಾಯಿಗಳ ಎಂಟುನೂರು ನೋಟುಗಳಿವೆ. ಆ ಅಮೂಲ್ಯ ಆಭರಣಗಳ ಮತ್ತು ಸುವರ್ಣ ಸರಪಣಿ ಸಹಿತವಿರುವ ಆ ವಾಚಿನ ಬೆಲೆಯು ಕ್ರಯವು ಸಾಧಾರಣ ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಾಗದು" ಎಂದನು.

"ಜೀವನಕ್ಕಾಗಿ ಈ ಕಾರ್ಯವನ್ನು ಮಾಡಬೇಕಾಯಿತೇ?" ಎಂದು ಸುಂದರಿಬಾಯಿಯು ಪ್ರಶ್ನಿಸಿದಳು.

ಆಗ ರಂಗರಾಯನು "ನೀನಿನ್ನೂ ಆ ಪುರಾಣ ಕಾಲದಲ್ಲೇ ಇರುವೆ. ನೀಚಕೃತ್ಯ, ಅನ್ಯಾಯಕೃತ್ಯ, ವಂಚನೆ ಎನ್ನುತ್ತ ಕುಳಿತುಕೊಂಡರೆ ದ್ರವ್ಯ ಸಂಗ್ರಹಮಾಡಲು ಸಾಧ್ಯವಿದೆಯೇ? ನೀನು ರಾಮಾಯಣ ಮಹಾಭಾರತ ಗ್ರಂಥಗಳನ್ನು ಓದಿ ಅದರಲ್ಲಿರುವ ತತ್ವಗಳನ್ನು ಹಿಡಿದಿರುವೆ. ನೀನು ಹೇಳುವ ರೀತಿಯಲ್ಲಿ ಇಂದು ಪ್ರಪಂಚದಲ್ಲಿ ಎಲ್ಲರೂ ನಡೆಯುತ್ತಿದ್ದರೆ ಅವರ ಗತಿಯೇ [illegible] ಶ್ರೀಮಂತರೆನ್ನಿಸಿ ಧರೆಯೊಳಗೆಲ್ಲ ಮೆರೆಯುವ ಮಹಾಶಯರಲ್ಲಿ ಕೆಲವರು ಶ್ರೀಮಂತರಾದುದು ಹೇಗೆಂದು ನೀನು ಭಾವಿಸುವೆ? ಅವರು [illegible] ವಿವಿಧ ರೀತಿಯಲ್ಲಿ ಅಜ್ಞಾನಿಗಳಾದ ಕೆಲವು ಜನರನ್ನು ವಂಚಿಸಿ ಅವರೊಡನಿದ್ದ ಸರ್ವಸ್ವವನ್ನು ಅಪಹರಿಸಿ ತಾವು ಸ್ವಾಧೀನಪಡಿಸಿಕೊಂಡುದರಿಂದಲೇ ಇಂದು ಅಂಥವರ ವಂಶಜರು [illegible] ಚೆನ್ನಾಗಿ ಮೆರೆಯುತ್ತಿದ್ದಾರೆ. [illegible]" ಎಂದನು.

"ನಿನ್ನೊಡನೆ ಮಾತನಾಡಿದರೆ ನೀನು ಇದೇ ವಿಷಯ [illegible]" ಎಂದು ಸುಂದರಿಬಾಯಿಯು ಪ್ರಶ್ನಿಸಿದಳು.

"ಇನ್ನು ಮಾಡುವುದೇನು? [illegible] ಕ್ಷೇತ್ರದಿಂದ [illegible] ಆ ಅಮೂಲ್ಯ ಆಭರಣಗಳೂ, [illegible] ಪ್ರಯತ್ನ [illegible] ಮಾಡುವುದೇ [illegible]

"ಹಾಗಾದರೆ ಆ ಅಪರಾಧಕ್ಕೆಲ್ಲ ಜಾಮಾತನೇ ಕಾರಣ [illegible] ಆತನು ಅಲ್ಲಿ [illegible] ವಿಷಯದಲ್ಲಿ ಮಾತನಾಡುತ್ತಿದ್ದರೆ ಇಷ್ಟೆಲ್ಲ [illegible]" ಎಂದು ಸುಂದರಿಬಾಯಿಯು [illegible]

ಆತನು [illegible] ಮಾತನಾಡುತ್ತಿದ್ದರೆ ನನ್ನ ಅವಸ್ಥೆಯೇ ಬೇರಾಗುತ್ತಿತ್ತು. [illegible] [illegible] ಸಂಶಯಪಡುವ ಕಾರಣವೇ ಇಲ್ಲ. [illegible] ಆ ಮೇಲೆ [illegible] ಸರಪಣಿಯನ್ನೂ, ಆಭರಣಗಳನ್ನೂ [illegible] ವ್ಯವಸ್ಥೆ ಮಾಡಿದ್ದೇನೆ. [illegible] ಹತ್ತು ಹತ್ತು ರೂಪಾಯಿಯ ನೋಟುಗಳಲ್ಲವೂ [illegible] ಸಾವಿರ ನೋಟುಗಳಾಗಿ [illegible] ಪೋಲೀಸರು [illegible] ಸಂದೇಹ [illegible] ಅವುದರಿಂದಲೂ [illegible] ಮಾಡಲಾರರು. ಇನ್ನು ಪೋಲೀಸರು, [illegible] ಇಲ್ಲಿಗೆ ಬಂದರೂ ಏನು ಪ್ರಯೋಜನ?

—ಸಂಪೂರ್ಣ—

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

ಉಪಯೋಗಿಸಲ್ಪಟ್ಟ ಔಷಧಗಳು.

1. **ಧಾತುಪುಷ್ಟಿ ಲೇಹ**—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ಬರಿಗೆ ಕುಟೀಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಇವೇ ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು. ಕ್ರಯ ದಬ್ಬಿ 1ಕ್ಕೆ ರೂ. 2—8—0. ಮೂರು ದಬ್ಬಿಗಳಿಗೆ ರೂ 7.

2. **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಅಂತರಿಕ ಆರೋಗ್ಯವನ್ನು ಒದಗಿಸಿ ಮನಶ್ಶಾಂತಿಯನ್ನು ಉಂಟುಮಾಡಿದೆ. ಕ್ರಯ 1 ಬಾಟಲಿ ಔಷಧಕ್ಕೂ, ಒಂದು ದಬ್ಬಿ ಮಾತ್ರೆಗೂ ರೂ. 2—4—0. ಮೂರು ಬಾಟಲಿ ಮತ್ತು ದಬ್ಬಿಗಳಿಗೆ ರೂ. 6—4—0.

3. **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ದಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

4. **ಮಲೇರಿಯಾ ನಿವಾರಣ**—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—8—0. 3 ಬಾಟ್ಲಿಗಳಿಗೆ ರೂ. 4—4—0.

5. **ಬಾಲಗ್ರಹ ಗುಟಿಕೆ**—ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10. 3ಕ್ಕೆ ರೂ. 1—12—0.

6. **ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ**—ಬಾಣಂತಿಯರಿಗೆ. ಬಾಟ್ಲಿ 1ಕ್ಕೆ ರೂ. 1—8—0. 3ಕ್ಕೆ 4—4—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕಂತಾ ಔಷಧಿ ಕಳುಹಿಸಲಾಗುವುದು. ಕೆಟಲಾಗು ತರಿಸಿ ನೋಡಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ, ಮಂಗಳೂರು, [illegible]

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಲಿಚ್ಛೆಯುಂಟೇ? ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆದ ಸಮಯವನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ತಿಳಿಸಿಕೊಡುವದು. ಪ್ರಶ್ನೆಗಳಿಗೆ (ಅರೂಢ ಪ್ರಶ್ನೆ) ರೂ. [illegible] ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ [illegible]. ಪ್ರತಿ ತಿಂಗಳ ಕಾಲಾಂತರ ವಿಚಾರವುಳ್ಳ ಒಂದು ವರ್ಷದ ಜಾತಕ ಫಲ ರೂ. [illegible]; ಐದು ವರ್ಷದ ಫಲ ರೂ. [illegible]; ಪ್ರತಿ ಹಸ್ತರೇಖೆ ವಿಚಾರವುಳ್ಳ ಒಂದು ವರ್ಷದ ಫಲ ರೂ. [illegible]. ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ರೂ. [illegible] ಆಣೆ [illegible]; ನಿಮಗಾಗಿಯೇ ಬೇರೆ ಮಾಡಿದ ತಾಯಿತಕ್ಕೆ ರೂ [illegible].

ಆಂಧ್ರ ಪತ್ರಿಕೆ—(ತೆಲುಗು ದೈನಿಕ ವರ್ತಮಾನಪತ್ರಿಕೆ) ಮದ್ರಾಸು ತಾ. [illegible]–1924ರಲ್ಲಿ ಬರೆದುದು. [illegible] ಹನುಮಾನ್ ಜ್ಯೋತಿಷಾಲಯದ ಹನುಮಾನ್ ದಾಸ ವಿ. ಕೆ. ಶಠಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. [illegible] [illegible] ತಾ. [illegible] ಪ್ರಕಟವಾಯಿತು. ಅದರಲ್ಲಿ ಮಹಾತ್ಮರವರು 1924ನೇ ಇಸವಿ ಫೆಬ್ರುವರಿ ತಾ. [illegible]ರಲ್ಲಿ 7 [illegible] ಕಾರಾಗೃಹದಿಂದ ಮುಕ್ತರಾಗುವರೆಂದು ಬರೆದಿತ್ತು. ಅದರಲ್ಲಿ ಹೇಳಿದಂತೆಯೇ ನಡೆದಿದೆ. [illegible] ಈ ಜೋಯಿಸರ [illegible] ಶಕ್ತಿಸಾಮರ್ಥ್ಯಗಳನ್ನು ಸರ್ವರೂ ಪರೀಕ್ಷಿಸಲು ನಾವು ಶಿಫಾರಸು ಮಾಡುತ್ತೇವೆ.

V. K. Satagopachariar,
Hanuman Astrological Office,
TIRUTTANI, CHITTOOR DISTRICT
Madras Presidency.

ವಿ. ಕೆ. ಶಠಗೋಪಾಚಾರ್ಯರ್,
ಹನುಮಾನ್ ಎಸ್ಟ್ರಾಲೋಜಿಕಲ್ ಆಫೀಸ್,
ತಿರುತ್ತಣಿ, ಚಿತ್ತೂರು ಜಿಲ್ಲಾ,
ಮದ್ರಾಸು ಸಂಸ್ಥಾನ.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

☛ ಫೆರ್ರೊಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3—4—0 ಮಾತ್ರ

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು

ಖಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು
ಡೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕಿಂಗ್ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡಾ.

ಪ್ರಕಟಣೆ. **ಪ್ರಕಟಣೆ.**

ಶಾಲಾ ಹುಡುಗರಿಗೂ ಇತರರಿಗೂ ಬೇಕಾಗುವಂತಹ ವಿಧವಿಧದ ಕೋಪಿಂಗ್, ಮತ್ತು ಸಾದಾ ಪೆನ್ಸಿಲುಗಳೂ, ರಬ್ಬರುಗಳೂ ವಿವಿಧ ಬಣ್ಣದ ಸ್ಟೇಷನ ಇಂಕ್ ಬಾಟಲಿಗಳೂ, ಹೊಸತಾಗಿ ತರಿಸಿರುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಯಾರಾಗಿವೆ! ತಯಾರಾಗಿವೆ!!

ಎರಡನೇ ಮತ್ತು ಮೂರನೇ ದರ್ಜೆಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds ವಜ್ರಗಳು **Diamonds**

Bola Shrinivas Rao,
C/o BOLA MANGESH ROW & CO.,
MANGALORE.

Agents & Direct importers of Superior Daimonds of Antwerp

ವಿಲಾಯತಿಯಿಂದ ನೇರ ತರಿಸುವ ಜಹರೀ ವಜ್ರಗಳು.

— ಮಾರಾಟಕ್ಕಿವೆ. —

ಬೋಳ ಶ್ರೀನಿವಾಸ ರಾವ್,
C/o ಬೋಳ ಮಂಗೇಶ ರಾವ್.
ಮಂಗಳೂರು.

ತಯಾರಾಗಿವೆ ತಯಾರಾಗಿವೆ!

ಕಾಫಿ ಪ್ಲಾಂಟರರಿಗೂ, ಕೋರ್ಟಿನವರಿಗೂ ಬೇಕಾಗುವಂತಹ

ಚೆಕ್ ರೋಲ್‌ಗಳು

ಮೂರು ಸ್ಯಾಂಪಲಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬೈಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds Diamonds!!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಜುನ್ನಾತ (first quality Selected) ಎಮ್ ಸ್ಟರ್ಡಾಮಿನಿಂದ ಬರುವ ವಜ್ರಗಳು ಯೋಗ್ಯದರದಲ್ಲಿ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

'ಅಂಬಾ. ತಾಯಿತ್'

ನಿಮ್ಮ ಸುಖವನ್ನು ಕೆಡಿಸುವರು—ಧರಿಸಲು ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ಸಂತೃಪ್ತಿಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧॥ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೫೦೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ಶೆಂಗಿನಮನ್ನೆ,
ಕೆಳಕ್ಕೂರ್ ಪೋಸ್ಟು ಶಿರೂರ್ [illegible]

Edited Printed & Published by V. S. Kamath. at the M. T. A SHARADA PRESS, MANGALORE

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible] ದೇವಾ । ನ ಭೇದತೇ [illegible] ॥ ೧ ॥
[illegible] ॥
[illegible] ॥ ೧ ॥

ಪುಸ್ತಕ ೨೩. | ಮಂಗಳೂರು, ತಾ. ೨೬ನೇ ಶುಕ್ರವಾರ ಜುಲಾಯಿ ೧೯೨೯. | (26 – 7 – '29.) | ಸಂಚಿಕೆ ೩೦

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore.**

ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ. ಮತ್ತು ಮಂಗಳೂರು.

Authorised Capital Rs. 3,50,000- Subscribed & Called up Rs. 2,25,000-

ನಿಯಮಿತ ಮೂಲಧನ ರೂ. 3,50,000- [illegible] ಮೂಲಧನ ರೂ. 2,25,000-

Statement of Affairs of the Canara Banking Corporation Udipi Limited as on 30th June 1929

	Capital and Liabilities.			Property and Assets	
1	Paid up Capital	Rs. 2,21,540-0-0	1	Premises Building Furniture &c.	Rs. 9,205-0-0
2	Reserve and other funds	,, 1,26,700-0-0	2	Investment on G. P. Notes	,, 3,34,218-5-0
3	Deposits	,, 18,38,871-14-10	3	Investment on Approved Securities	,, 19,98,493-15-8
4	Sundries including P & L items	,, 7,5,176-8-5	4	Cash in hand & with Bankes at call	,, 43,403-10-5
5	Due to Bankers on a/c of Overdraft and Loan a/c	,, 1,65,091-14-11	5	Sundries	36,999-7-1
	Total	24,22,380-6-2		Total	24,22,380-6-2

Office of the Corporation, UDIPI, 10–7–'29.

N. ANANDA RAO, *Secretary*

ಅಮೃತಾಂಜನ.

[illegible] ಬೆಲೆ, [illegible]

ರಿಂಗ್‌ವರ್ಮ್ ಮುಲಾಮು:— [illegible] ಡಬ್ಬಿಗೆ ಆಣೆ 6. ಟ. ಖ. ಬೇರೆ.

ದಂತಮಂಜನ:— [illegible] ಡಬ್ಬಿಗೆ ಆಣೆ 2. ಟ. ಖ. ಬೇರೆ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟೀ. ಡೋಂಗರೇ ಕಂಪೆನಿ,

ಗಿರಗಾಂವ, ಮುಂಬಾಯಿ.

ಏಜಂಟರು — ದಿ. [illegible]

ಶ್ರೀ ಸರಸ್ವತೀ ಭಂಡಾರ.

1	ಸಚಿತ್ರ ರಾಮಾಯಣ ಕಥಾ ಸಂಗ್ರಹ	1–[illegible]–0
2	[illegible]	0–2–0
3.	[illegible]	2–[illegible]–0
4.	[illegible]	2–[illegible]–0
5.	[illegible]	3–[illegible]–0
6	[illegible]	[illegible]–12–0
7.	[illegible]	1–[illegible]
8.	[illegible]	1–12–0
9	ಸೌಭಾಗ್ಯ [illegible]	[illegible]
10.	[illegible]	1–4–0
11.	[illegible]	[illegible]–12–0
12.	ಆನಂದ ಮಠ	1–12–0
13.	[illegible]	0–12–0
14.	[illegible]	1–8–0
16.	ಇಂಡಿಯನ್ [illegible]	2–8–0
16	[illegible]	3–0–0
17.	[illegible]	1–0–0

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ ಇನ್ನೂ ಸಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

[illegible] ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ [illegible]

ವಿಳಾಸ— **ಶ್ರೀ ಸರಸ್ವತೀ ಭಂಡಾರ.**

[illegible]

[illegible]

ಪ್ರಾಥಮಿಕ ಶಾಲೆಗಳ ಸುಧಾರಣೆ.

[illegible] ಮತ್ತು ಐದನೇ ತರಗತಿಗಳುಳ್ಳ [illegible] ಶಾಲೆಗಳಲ್ಲಿ [illegible] ಅಲ್ಲದೆ, ಆದರೆ ಆ ಶಾಲೆಗಳಲ್ಲಿ ನಾಲ್ಕನೆ ಮತ್ತು ಐದನೇ ತರಗತಿಯ ಮಕ್ಕಳಿಗೆ ಸ್ವಲ್ಪ ಮಟ್ಟಿಗೆ ಇಂಗ್ಲಿಷ್ ಭಾಷೆಯ ಪರಿಚಯವನ್ನು ಉಂಟುಮಾಡಲು ಸಾಧ್ಯವಿದೆಯೇ? ಹಾಗೆ ರಾಜಭಾಷೆಯನ್ನು ಕಲಿಸುವುದರಿಂದ ಪ್ರಯೋಜನವಾದರುಂಟೇ? ಎಂಬುದನ್ನು ಕೊಂಚ ಪರಿಶೀಲಿಸಿ ನೋಡುವಾ.

ಮೇಲೆ ಸೂಚಿಸಿದ ತರಗತಿಗಳುಳ್ಳ ಶಾಲೆಗಳಲ್ಲಿ ಹಾಯರ್ ಗ್ರೇಡಿನಲ್ಲಿ ತರಬೇತಾದ ಉಪಾಧ್ಯಾಯರು ಎರಡು ಯಾ ಮೂರು ಜನರಿರುವರು. ಇವರಿಗೆ, ನಾಲ್ಕನೆ ಐದನೆ ತರಗತಿಗೆ, ಸಾಕಷ್ಟು ಇಂಗ್ಲಿಷ್ ಭಾಷೆಯ ಜ್ಞಾನವನ್ನು ಒದಗಿಸುವ ಯೋಗ್ಯತೆಯುರುವುದೆಂದು ಧಾರಾಳವಾಗಿ ಹೇಳಬಹುದು. ಆದಪ್ರಯುಕ್ತ ಆ ಹೊಸ ಭಾಷೆಯನ್ನು ಕಲಿಸಲು ಸಾಧ್ಯವಿದೆಯೆಂದಾಯಿತು. ಹೀಗೆ ಮಾಡುವುದರಿಂದ ಪ್ರಯೋಜನವಾದರೂ ಅದೇನೆಂಬ ಪ್ರಶ್ನೆಗೆ ಉತ್ತರವು ಕೂಡಾ, ಎಲ್ಲಾ ಹಾಯರ್ ಎಲಿಮೆಂಟರಿ, ಸೆಕೆಂಡರಿ ಮತ್ತು ಹೈಸ್ಕೂಲುಗಳ ಹೆಡ್‌ಮಾಸ್ತರರಿಗೆ, ಸುಲಭವಾಗಿ ತಿಳಿಯಬಹುದು. ಕಾರಣ ಐದನೇ ತರಗತಿಯಲ್ಲಿ ಎಲ್ಲಾ ಶಾಲೆಗಳಲ್ಲಿ ಹುಡುಗಿಯರು ಹುಡುಗರು, ಮಾನ್ಯ ಶಿಕ್ಷಕಶಿಕ್ಷಕಿಯರ ಸರ್ಟಿಫಿಕೇಟು ಪಡೆಕೊಂಡು, ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು, ಹಿಂದೆ ಸೂಚಿಸಿದ ಶಾಲೆಗಳಲ್ಲಿ ಪ್ರವೇಶವನ್ನ ಬೇಕ್ಕಿಸಿದ್ದಲ್ಲಿ, ಅವರನ್ನು ನಾಲ್ಕನೆ ತರಗತಿಗೆ ಸೇರಿಸಬೇಕೇ ಹೊರತು, ಆರನೆ ತರಗತಿಗೆ ಸೇರಿಸಲಿಕ್ಕಾಗುವುದಿಲ್ಲ. ಕಾರಣ ರಾಜಭಾಷೆಯ ಅಜ್ಞಾನವೇ. ಏಕ್ಕ ಎಲ್ಲಾ ಪಾಠಗಳಲ್ಲಿ ಪ್ರಾಥಮಿಕ ಶಾಲೆಯಿಂದ ಬಂದ ಹುಡುಗರು 'ಟ್ರಾನ್ಸ್' ಶಾಲೆಯ ಮಕ್ಕಳನ್ನು ಬಿಟ್ಟಿಲ್ಲ. ಆದುದರಿಂದ ಪ್ರಾಥಮಿಕ ಶಾಲೆಗಳಲ್ಲಿ ನಾಲ್ಕನೆ ಮತ್ತು ಐದನೆ ಕ್ಲಾಸುಗಳಲ್ಲಿ ರಾ॥ ಯೇಟ್ಸ್ ದೊರೆಗಳ ಇಂಗ್ಲಿಷ್ ಗ್ರಾಮರ್ ಯಾ ಇನ್ನಾವುದಾದರೂ ಯುಕ್ತರೀತಿಯಿಂದ ಕಲಿಸುವ ಏರ್ಪಾಡು ಮಾಡುವುದು ಅತ್ಯಾವಶ್ಯಕ, ಕಾರಣ ವಿದ್ಯಾಭ್ಯಾಸವನ್ನು ಮುಂದುವರಿಸಲಿರುವ ಮಕ್ಕಳು ತಮ್ಮ ಅಮೂಲ್ಯ ಆಯುಷ್ಯದಲ್ಲಿ ಎರಡು ವರುಷಗಳನ್ನು ವ್ಯರ್ಥಗೊಳಿಸದಂತಾಗುವುದು.

ಕೊನೆಯದಾಗಿ ಈ ವಿಷಯದಲ್ಲಿ ವಿದ್ಯಾಖಾತೆಯ ಅಧಿಕಾರರು ಅವರವರ ರೇಂಜಿನ ಎಲ್ಲಾ ಶಾಲೆಗಳಲ್ಲಿ ನಾಲ್ಕನೆ ಐದನೆ ತರಗತಿಗಳಲ್ಲಿ ಇಂಗ್ಲಿಷನ್ನು ಕೂಡಾ ಕಲಿಸಲು ಸೂಚನೆ ಕೊಟ್ಟಲ್ಲಿ, ಎಷ್ಟೋ ವಿದ್ಯಾರ್ಥಿಗಳ ಹೆತ್ತವರಿಗೂ ಕೃತಜ್ಞತೆಗೂ ಪಾತ್ರರಾಗುತ್ತಿದ್ದರು. ಹಾಗೂ ಬಿ. ಎ. ಕಾಲೇಜು, ಕಾ. ಬೋರ್ಡುಗಳೂ, ತಮ್ಮ ಕೈಕೆಳಗಿನ ಮೂಲ ಪಾಠಶಾಲೆಗಳು ಶೀಘ್ರದಲ್ಲಿಯೇ ಈ ವಿಷಯವನ್ನು ಗಮನಿಸುವಂತೆ ಮಾಡಲು ಹಿಂಜರಿಯಲಿಕ್ಕಿಲ್ಲವೆಂದು ಕೋರುವ

'ವಿದ್ಯಾಭಿಲಾಷಿ'

ಬಂಟವಾಳ ಪೇಟೆಯ ಕೊಟ್ರುವನಂಗಡಿ ತುಂಬೆ ಮಾರ್ಗವನ್ನು ಈಗ ದುರುಸ್ತಿ ಮಾಡಲು ಮಾಡಿದ ಎಸ್ಟಿಮೇಟು ಪ್ರಕಾರ ಮಾಡಿದರೆ ಏನೂ ಪ್ರಯೋಜನವಿಲ್ಲ.

ಜಿಲ್ಲಾ ಕಲೆಕ್ಟರ್ ದೊರೆಗಳವರ ಅವಗಾಹನೆ ಬಗ್ಗೆ.

ಕಳೆದ ೧೯೨೩ನೇ ಇಸವಿಯಲ್ಲಿ ಬಂದ ನೆರೆಯಿಂದ ಬಂಟವಾಳ ಊರು ಹಾಳಾದೊಡನೆಯೇ ಇನ್ನು ಮುಂದೆ ನೆರೆಯು ಬಂದರೆ ಊರಿನಿಂದ ತಪ್ಪಿಸಿಕೊಂಡು [illegible] ಒಂದು ಮಾರ್ಗವನ್ನು ಮಾಡಿಸಿಕೊಡಬೇಕೆಂದು ಕೆಲವು [illegible] ಬಂಟವಾಳದಲ್ಲಿಯೇ ಇನ್ನು ಜನರು ಪಟ್ಟ ಕಷ್ಟಗಳನ್ನು [illegible], ಈಗ ಜಿಲ್ಲಾ ಕಲೆಕ್ಟರರಾಗಿಯೂ ಇರುವ ದೊರೆಗಳ [illegible] ಜನರ. ಸ್ವತಹ ಅಂಕಿಮಾಡಿದ್ದರು [illegible] ಮಾಡಿಕೊಡಲು ಸೇತ್ಯಾವತಿಯು ದಾರಿ ಬಿಡಲಿಕ್ಕಿಲ್ಲ. ಸರಕಾರ ಕಡೆಯಿಂದಲೂ ಅವಳೇ ದಾರಿ ಕಟ್ಟುತಿದ್ದಾಳೆ. ಅಯ್ಯನಾಯ್ಕರ ಓಣಿಯಿಂದ ಭಂಡಾರಿಬೆಟ್ಟಿಗೆ ಹೋಗಲು ಸೇತುವೆ ಇದ್ದರೂ ಆ ಸೇತುವೆ ಮುಳುಗಿ ೧೦ ಅಡಿ ನೀರು ಸೇತುವೆ ಮೇಲಿನಿಂದಲೂ ಮೇಲೆ ನಿಲ್ಲುತ್ತದೆ. ಬಡ್ಡಕಟ್ಟೆಯ ಹತ್ತಿರದಿಂದ ಸೇತ್ಯಾವತಿಯ ರಭಸದಿಂದ ಬರುತ್ತಿರುವಳು. ಆ ಕಡೆಯಲ್ಲಿ ಯಾವ ತರದ ದಾರಿಯನ್ನು ಮಾಡಿಕೊಡಲು ಸಾಧ್ಯವೇ ಇಲ್ಲ. ಕೊಟ್ರುವನಂಗಡಿಯಿಂದ ತುಂಬೆಗೆ ಹೋಗುವ ಮಾರ್ಗವು ಸ್ವಲ್ಪ ನೆರೆ ನೀರು ಬಂದೊಡನೆಯೇ ಮುಳುಗುತ್ತದೆ.

ಕೊಟ್ರುವನಂಗಡಿಯನ್ನು ೩ ಅಡಿ ಏರಿಸಿ ಅಲ್ಲಲ್ಲಿ ಸೇತುವೆ ಮಾಡಿಸಿ ಪ್ರಯೋಜನವಿಲ್ಲ.

ಮಧ್ಯಪೇಟೆಯ ಲೆವಲಿಗೂ ಕೊಟ್ರುವನಂಗಡಿಯ [illegible] ಲೆವಲಿಗೂ ಸಾಧಾರಣ ೬ ಅಡಿ ವ್ಯತ್ಯಾಸವಿದೆ. ಅಂದರೆ ಕುದಿಯ ಭಾಗವು ೬ ಅಡಿ ತಗ್ಗಾಗಿದೆ. ಈ ಮಾರ್ಗವನ್ನು ಈಗ ಎಸ್ಟಿಮೇಟು ಮಾಡಿದ ಪ್ರಕಾರ ೩ ಅಡಿ ಏರಿಸಿದರೆ ಕುದಿಯಲ್ಲಿರುವ ಮನೆಗಳ ಅಂಗಳಗಳಿಗೆ ಸಮಸಮವಾಗಿ ಮನೆಯ ನೆಲವಲೆವಲ್ ಮತ್ತು ಮಾರ್ಗದ ಲೆವಲ್ ಸಾಧಾರಣ ಸಮಸಮವಾಗುತ್ತದೆ. ಕೆಲವು ಹಿತ್ತಲುಗಳು ಮಾರ್ಗಕ್ಕಿಂತಲೂ ತಗ್ಗಿನ ಲೆವಲ್ ನಿಲ್ಲುತ್ತವೆ. ಮಾರ್ಗದ ಚರಂಡಿಯ ನೀರು ಹಿತ್ತಲುಗಳಿಗೆ ಹೋಗುವುದು. ಅಥವಾ ಚರಂಡಿಗಳನ್ನು ಕಲ್ಲುಕಟ್ಟಿ ಆಳವಾಗಿ ಮಾಡಬೇಕಾಗುವುದು. ಮೂರು ಅಡಿ ಏರಿಸಿದರೂ ತುಂಬೆ ಕಡೆಗೆ ನೆರೆಯ ಸಮಯ ಹೋಗಲು ಸಾಧ್ಯವೇ ಇಲ್ಲ. ಇನ್ನು ಆರು ಅಡಿ ಏರಿಸಿದರೆ ಆ ಪೇಟೆಯೇ ವ್ಯರ್ಥವಾಗುವುದು. ಮಾರ್ಗವು ಮನೆಗಳ ಒಳಭಾಗಕ್ಕಿಂತ ೩ ಅಡಿ ಮೇಲಕ್ಕೆ ನಿಲ್ಲುವುದು. ಮಾರ್ಗಗಳನ್ನು ಮಾಡಿಸುವುದು ಜನರ ಸೌಕರ್ಯಕ್ಕಾಗಿ. ಮಾರ್ಗಗಳ ಸೌಕರ್ಯಕ್ಕಾಗಿ ಜನರು ಇರುವದಲ್ಲ. ಆದುದರಿಂದ ೬ ಅಡಿ ಮಾರ್ಗವನ್ನು ಏರಿಸಲು ಸಾಧ್ಯವೇ ಇಲ್ಲ. ಆದುದರಿಂದ ಈಗ ಈ ಕೊಟ್ರುವನಂಗಡಿ ತುಂಬೆ ಮಾರ್ಗವನ್ನು ದುರುಸ್ತಿ ಮಾಡುವ ಆಲೋಚನೆಯನ್ನು [illegible]

[illegible]

[illegible] ದಾರಿಯೇ ಹೊಸ ದಾರಿ.

[illegible] ದಾರಿಯು ಒಂದು ಕಡೆಯಿಂದ ಮಧ್ಯಪೇಟೆಗೆ ಕೂಡುತ್ತದೆ; ಇನ್ನೊಂದು ಕಡೆ ಗದ್ದೆಯ ಹತ್ತಿರ ಹೋಗಿರುತ್ತದೆ; ಗದ್ದೆಯ ಹತ್ತಿರವಿರುವ ಕುದಿಯು ಮಧ್ಯಪೇಟೆಯು ಇರುವುದಕ್ಕಿಂತ ಸುಮಾರು ೬ ಅಡಿ ತಗ್ಗಾಗಿದೆ. ಮಾರ್ಗದ ಗದ್ದೆಯು ಕುದಿಗಿಂತ ಗದ್ದೆಗಳು ೩-೪ ಅಡಿ ತಗ್ಗಾಗಿವೆ. ಬಟ್ಟಲ್ಲಿ ಗದ್ದೆಗಳು ಮಧ್ಯಪೇಟೆಗಿಂತ ೧೨ ಅಡಿ ತಗ್ಗಾಗಿವೆ. ಮಧ್ಯಪೇಟೆಗೆ ನೀರು ಬರುವಾಗ ಬಡ್ಡಕಟ್ಟೆ, ಅಕ್ಕರೆಬೆಟ್ಟು, ಬಿಎನ್‌ಕೇರಿ, ಹೊಸಪೇಟೆಯ ಅರ್ಧಭಾಗ, ಕೊಟ್ರುವನಂಗಡಿ, ಅಯ್ಯನಾಯ್ಕರ ಓಣಿ ಅರ್ಧ, ಬಂಗ್ಲೆಬಾಗಿಲು ವರೆಗೆ ಪೂರಾ ನೀರು ತುಂಬುತ್ತದೆ. ಆಗ ಮಾರ್ಕೇಟು ಮಾರ್ಗದಲ್ಲಿ ಸ್ವಲ್ಪ ನೀರು ಮೊತ್ತವೇ ನಿಲ್ಲುತ್ತದೆ. ಕುದಿಯು ಮಾತ್ರವೇ ಮುಳುಗುತ್ತದೆ. ಆದುದರಿಂದ ಬಂಟವಾಳ ನಿವಾಸಿಕರಾದ ಸುಮಾರು ೩ ಸಾವಿರ ಜನಂಗೆ ಹೊರಗೆ ಹೋಗಲು ಇದು ಒಂದು ದಾರಿಯು ಮಾತ್ರವೇ ಕಾಣುತ್ತದೆ. ಈಗಲೂ ನೆರೆಯ ಸಮಯ ದೋಣಿಯಲ್ಲಿ ಕೂಡ ತುಂಬೆಗೆ ಹೋಗಲು ಈ ದಾರಿಯಿಂದ ಮಾತ್ರವೇ ಸಾಧ್ಯವಿದೆ. ಆದುದರಿಂದ ಈ ಮಾರ್ಕೇಟು ಮಾರ್ಗದಿಂದ ಸುಮಾರು ೩೦೦ ಅಡಿ ಉದ್ದವಾದ ಒಂದು ಸೇತುವೆಯನ್ನು ಗದ್ದೆಯ ಸಮತಟ್ಟಿನಿಂದ ೨೫ ಅಡಿ ಎತ್ತರಮಾಡಿ ಕಟ್ಟಿಸಿ ಮಧ್ಯಪೇಟೆಯಿಂದ ಮಾರ್ಕೇಟು ಮಾರ್ಗವನ್ನು ಸೇತುವೆಯ ಸಮತಟ್ಟಿಗೆ ದಕ್ಷಿಣ ದಿಕ್ಕಿಗೆ ತುಂಬಿಸಿ ಸಂಕದ ಉತ್ತರ ದಿಕ್ಕಿಗೆ ಮಾರ್ಗವನ್ನು ತುಂಬೆಯಲ್ಲಿ ರಾ॥ ಶ್ರೀನಿವಾಸ ಮಲ್ಯರ ಅಂಗಡಿಯ ಹತ್ತಿರ ಕೂಡಿಸಿದರೆ ಜನರು ಹೆದರಿಕೆಯಿಲ್ಲದೆ ಮಧ್ಯಪೇಟೆಯಿಂದ ತುಂಬೆಗೆ ಹೋಗಲು ಸಾಧ್ಯವಾಗುವುದು. ಇಲ್ಲಿ ನೀರಿನ ಸೆಳವು ಇದೆ ಎಂದು ಕೆಲವರು ವಾದಿಸಬಹುದು. ಮಾರ್ಗವನ್ನು ತುಂಬಿಸಿ ಇಕ್ಕಟ್ಟಾದ ಮೋರಿಗಳನ್ನು ಕಟ್ಟಿಸಿದರೆ ಮಾತ್ರವೇ ನೀರಿನ ಸೆಳೆತ ಉಂಟಾಗುವುದು. ಇಲ್ಲದಿದ್ದರೆ ಉಂಟಾಗಲಿಕ್ಕಿಲ್ಲ. ೩೦೦ ಅಡಿ ಅಗಲದ ದಾರಿ ಬಿಟ್ಟರೆ ನೀರು ಸರಾಗವಾಗಿ ಹರಿದು ಹೋಗಲು ಅವಕಾಶವಿದೆ. ಮರಮಟ್ಟುಗಳು ಬರುತ್ತವೆಂದು ಕೆಲವರು ವಾದಿಸಬಹುದು; ಆದರೆ ಮರಗಳೂ ಈ ದಾರಿಯಾಗಿ ಬರುವುದೇ ಇಲ್ಲ. ಬಂದರೂ ಸೇತುವೆಯನ್ನು ೨೫ ಅಡಿ ಎತ್ತರಮಾಡುವುದರಿಂದ ಎಂಥಾ ದೊಡ್ಡ ನೆರೆಗೂ ಮರಗಳು ಸೇತುವೆಯ ಅಡಿಯಿಂದಲೇ ಹೋಗಬಹುದು. ಈ ಸೇತುವೆಗೆ ಪಾಣೆಮಂಗಳೂರು ಸೇತುವೆಗೆ ಹಾಕಿದ ಕಂಬಿಯಿಂದ ಹಿಂದೆ ಉಪಯೋಗಿಸಿದ ೬೦ ಅಡಿ ಉದ್ದದ ಸಮಾನವಾದ ೩ ಗರ್ಡರುಗಳನ್ನು ಉಪಯೋಗಿಸಿದರೆ ನೀರು ಹೋಗುವ ದಾರಿಯೂ ಅಗಲವಾಗುವುದು. ಆಚೆ ಈಚೆ ಎರಡು ಕಂಬಗಳು, ನಡುವಿನಲ್ಲಿ ಎರಡು ಕಂಬಗಳು, ಹೀಗೆ ನಾಲ್ಕು ಕಂಬಗಳನ್ನು ಮಾತ್ರವೇ ಹಾಕಿಸಿದರೆ ಸಾಕಾಗುವುದು.

ಆದುದರಿಂದ ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ತಿಳಿಸಿ ಈಗ ಮಾಡಿರುವ ಆಲೋಚನೆಯನ್ನು ನಿಲ್ಲಿಸಿ ಮಾರ್ಕೇಟು ದಾರಿಯಾಗಿ ಹೊಸ ಎಸ್ಟಿಮೇಟು ಮಾಡಿಸಿ ಈ ಸೇತುವೆ ಮಾರ್ಗ ಮಾಡಿಸುವಂತೆ ಮಾಡಿಸಿದರೆ ಕಲೆಕ್ಟರ ದೊರೆಗಳಿಗೆ ಬಂಟವಾಳ ನಿವಾಸಿಕರ ಮೇಲಿರುವ ಪ್ರೀತಿಯು ಆಚಂದ್ರಾರ್ಕವಾಗಿ ಉಳಿಯುವುದು. ಈ ಸೇತುವೆ ಮಾರ್ಗಕ್ಕೆ ಈ ಮಹನೀಯರ ಹೆಸರನ್ನೇ ಕೊಟ್ಟರೆ ಅವರ ನೆನಪು ಶಾಶ್ವತವಾಗಿ ಉಳಿಯುವುದು. ಜಿಲ್ಲೆಯನ್ನು ರಿಜಿಸ್ಟ್ರಿ ಆಫೀಸು ಮುಂತಾದವುಗಳನ್ನು ಜೋಡು ಮಾರ್ಗಕ್ಕೆ ವ್ಯರ್ಥವಾದ ಊರಿನ ನಿವಾಸಿಕರನ್ನು ರಕ್ಷಿಸಿದಂತಾಗುವುದಿಲ್ಲ. ಸರಕಾರಿ ರಿಕಾರ್ಡುಗಳನ್ನು ಮಾತ್ರವೇ ರಕ್ಷಿಸಿದಂತಾಯಿತು. ಆದುದರಿಂದ ಜಿಲ್ಲಾ ಕಲೆಕ್ಟರ್ ದೊರೆಗಳವರು ಸರಕಾರಿ ರಿಕಾರ್ಡುಗಳನ್ನು ಊರಿನ ವ್ಯಾಪಾರಸ್ಥರನ್ನು ಇತರ ನಿವಾಸಿಕರನ್ನು ರಕ್ಷಿಸುವಂತೆ ಈ ಮಾರ್ಕೇಟು ರಸ್ತೆಯನ್ನು ತುಂಬೆ ಮಾರ್ಗಕ್ಕೆ ಕೂಡಿಸಿದರೆ ಇನ್ನು ಮುಂದೆ ಆಗತಕ್ಕ ಬಂಟವಾಳ ಮುನಿಸಿಪಲ್ ಮೋಟರು ಸರ್ವಿಸಿಗೂ ಪ್ರಯೋಜನವಾಗುವುದು. ಕೊಟ್ರುವನಂಗಡಿಯಲ್ಲಿ ಒಂದು ಕಾರ್ಖಾನೆಯಿದೆ. ಇಂಥಾ ಕಡೆ ಮೋಟಾರು ಚಲಾವಣೆಗೆ ಅಪಾಯಕರ. ಸೇತುವೆಯ ಕಂಬಗಳಿಂದ ಗದ್ದೆ ಬೇಸಾಯಕ್ಕೆ ಯಾವ ಅಡ್ಡಿಯೂ ಇಲ್ಲ. ಸುಮಾರು ಮೂರ್ನಾಲ್ಕು ಎಕ್ರೆ ಗದ್ದೆಗಳನ್ನು ಮಾತ್ರವೇ ಎಕ್ವೈರ್ ಮಾಡಬೇಕಾಗುವುದು.

'ಬಂಟವಾಳ ನಿವಾಸಿ'.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ.

ಈ ಮೇಲಿನ ಮಂಡಳಿಯ ಆಶ್ರಯದಲ್ಲಿನ ವಾಚನಾಲಯವು ಹಲವು ವರ್ಷಗಳಿಂದ ಮುಂಬಯಿ, ರಾತ್ರಿಶಾಲೆಯ ಕೋಣೆಯಲ್ಲೇ ಇತ್ತು. ಈ ವಾಚನಾಲಯದ ಪ್ರಯೋಜನವು ಸರ್ವ ಜನರಿಗೂ ದೊರೆಯುವಂತೆ [illegible] ಮುಂದಿನ ಮೂರನೇ ಮಾಳಿಗೆಯಲ್ಲಿ ಪ್ರತ್ಯೇಕ [illegible] ಕೋಣೆಯನ್ನು ಬಾಡಿಗೆಗೆ ಮಾಡಿಕೊಂಡು ಕಳೆದ ಜೂನ್ ತಿಂಗಳ ತಾರೀಖು [illegible] ರಿಂದ ಈ ಕೋಣೆಗೆ ವರ್ಗಾಯಿಸಲಾಗಿ, ವಾಚನಾಲಯದ ಆವಶ್ಯಕತೆಯನ್ನು ನೋಡುವದಕ್ಕೆ ಶ್ರೀಯುತ ಕೃಷ್ಣ ಎ. ಕುಂದರರನ್ನು ನೇಮಕ ಮಾಡಲಾಗಿದೆ. ಆದುದರಿಂದ ಕನ್ನಡ ಭಾಷಾಭಿಮಾನಿಗಳೆಲ್ಲರೂ ವಾಚನಾಲಯದ ಪ್ರಯೋಜನವನ್ನು ಪಡೆಯಬೇಕೆಂದೂ, ಕನ್ನಡ ಗ್ರಂಥಗಳನ್ನೂ, ವಾರಪತ್ರಿಕೆ, ಪಕ್ಷಪತ್ರಿಕೆ, ಮತ್ತು ಮಾಸಪತ್ರಿಕೆಗಳನ್ನೂ ದಾನರೂಪವಾಗಿ ಒದಗಿಸಿ ಕೊಟ್ಟು ಈ ಧರ್ಮಾರ್ಥ ವಾಚನಾಲಯವನ್ನು ಪ್ರೋತ್ಸಾಹಿಸಿ ಕನ್ನಡ ಮಾತೆಯ ಆಶೀರ್ವಾದಕ್ಕೆ ಪಾತ್ರರಾಗಬೇಕಾಗಿ ಪ್ರಾರ್ಥಿಸುತ್ತೇವೆ.

ಮೊಗವೀರ ಧರ್ಮಾರ್ಥ ರಾತ್ರಿಶಾಲೆ—[illegible] ವಿಚಾರಣೆಗಾಗಿ ಮುಂಬಾಯಿ ನಗರಕ್ಕೆ ಬಂದಿದ್ದ ಉಡುಪಿ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ್ ಎಂ. ಎಲ್. ಏ., ರವರು ಈ ಶಾಲೆಯನ್ನು ಸಂದರ್ಶಿಸಿ ಶಾಲೆಯ ವಿದ್ಯಾರ್ಥಿಗಳನ್ನು ಸ್ವತಃ ಪರೀಕ್ಷಿಸಿ ನೋಡಿ, ಉಪಯುಕ್ತ ಸೂಚನೆಗಳನ್ನು ಕೊಟ್ಟಿರುವರಲ್ಲದೆ, ಗಣನೀಯ ಟಿಪ್ಪಣಿಯನ್ನು ಬರೆದು ಹೋಗಿರುವರು.

ಕಾರ್ಯದರ್ಶಿಗಳು.

ಮೇಲಣ ಈ ತತ್ವಗಳನ್ನು ಸಮಾಲೋಚಿಸಿದ್ದಲ್ಲಿ ಕೊಂಚಮಟ್ಟಿಗಾದರೂ ಬುದ್ಧಿವಿಚಾರವುಳ್ಳವರು ಈ ಖಾದೀ ಕಾರ್ಯಕ್ರಮಕ್ಕೆ ನೆರವಾಗದಿರುವರೇ!

ಹಿಂದು ಮಾತೆಯೇ ನಿನಗೆ ವಿಜಯವಾಗಲಿ!!

— ಖಾದಿಯ ತತ್ವಗಳು. —

೧ ಮನುಷ್ಯರಿಗೆ ಆಹಾರ ಮತ್ತು ವಸ್ತ್ರ ಅತ್ಯಾವಶ್ಯಕ. ಬೆಳೆಯು ಹೋಗಿ ಬರಗಾಲ ಬಂದಾಗ ಎಲ್ಲರೂ ದುಡ್ಡು ಕೊಟ್ಟು ತರುವುದು ಯಾರಿಗೂ ಸಾಧ್ಯವಲ್ಲ. ಅಂತಹ ಕಡೆಗಳಲ್ಲಿ ಕೂಲಿಯ ರಾಟೆಯು ಕಷ್ಟಕಾಲಕ್ಕೆ ಒದಗುವ ಸ್ನೇಹಿತನೂ ಸಹಾಯಕನೂ ಆಗಿದೆ.

೨ ವಸ್ತ್ರವನ್ನು ಕೊಂಡುಕೊಳ್ಳಲಿಕ್ಕೆ ಬಡರೈತನು ತನ್ನ ಬೆಳೆಯ ಬಹುಭಾಗವನ್ನು ಕಳೆದುಕೊಳ್ಳಬೇಕಾಗುತ್ತದೆ. ಆಗ ಅವನಿಗೆ ಉಂಟಾಗುವ ಸಾಲಕ್ಕಾಗಿ ಸಾಹುಕಾರನ ಸಹಾಯ ಬೇಕಾಗುತ್ತದೆ.

೩ ರೈತನು ತನಗೆ ಉದ್ಯೋಗವಿಲ್ಲದಾಗಲೇ ಸಾಹುಕಾರನಿಂದ ವಸ್ತ್ರ ಕೊಂಡುಕೊಳ್ಳುವುದಾಗಿ, ಸಾಹುಕಾರನಿಗೆ ಜೀವನೋಪಾಯವನ್ನು ಒದಗಿಸಿಕೊಡುತ್ತಿರುವುದಕ್ಕಿಂತ ಹೆಚ್ಚಿನ ಮೂರ್ಖತನವ್ಯಾವುದಿದೆ?

೪ ಒಂದಾಣೆಯ ಹಿಟ್ಟನ್ನು ತಂದು ರೊಟ್ಟಿ ಮಾಡಿ ಅಥವಾ ಅರ್ಧಸೇರು ಅಕ್ಕಿ ತಂದು ಗಂಜಿ ಮಾಡಿ ಹೊಟ್ಟೆ ಹಸಿವನ್ನು ಅಡಗಿಸುವ ಬದಲಿಗೆ, ಎಳೆಂಟಾಣೆಯ ತಿಂಡಿಪದಾರ್ಥಗಳನ್ನು ತಿಂದಲ್ಲಿ ಹಿತವಾದೀತೇ?

೫ ಬಡ್ಡ ರೈತನು ಕೊಂಡುಕೊಳ್ಳುವ ವಸ್ತ್ರದ ಮೌಲ್ಯವು ಅತನು ಕೊಡಲಿಕ್ಕಿರುವ ತೆರಿಗೆ ಕಂದಾಯಗಳ ಐದಾರು ಪಾಲಷ್ಟು ಇರುವುದು. ತೆರಿಗೆ ಕಂದಾಯಗಳನ್ನು ಕೊಡದಿರಲು ಸಾಧ್ಯವಲ್ಲವಾದರೂ, ವಸ್ತ್ರದ ಮಟ್ಟಿಗೆ ಮನಸ್ಸುಮಾಡಿದರೆ ಆ ಬಗ್ಗೆ ಕಾರ್ಯನಿರ್ವಾಹವನ್ನು ತಾನೇ ಇಟ್ಟುಕೊಳ್ಳಬಹುದು.

೬ ವಸ್ತ್ರದ ಬಗ್ಗೆ ರೈತನು ಎಣಿಸುವುದಕ್ಕಿಂತ ಹೆಚ್ಚಾದ ಸಾಲವು ಆಗುವುದಾದರೆ, ಅದರಿಂದ ಅವನಿಗಾಗುವ ತೃಪ್ತಿಯು ಅಷ್ಟಲ್ಲ.

೭ ಕೈರಾಟೆಯ ಮತ್ತು ಕೈಮಗ್ಗದ ಖಾದಿಯು ಗಿರಣಿ ವಸ್ತ್ರಕ್ಕಿಂತ ಗಟ್ಟಿಯೂ ಬಾಳ್ವಿಕೆಯುಳ್ಳದ್ದೂ ಆಗಿದೆ.

೮ ಕೈನೂಲುವುದನ್ನು ಕೃಷಿ ಅಥವಾ ಇತರ ಕೆಲಸವಿಲ್ಲದ ಕಾಲದಲ್ಲಿ ಮಾಡಲಾಗುವುದರಿಂದ ಕೃಷಿಗೆ ಅದರಿಂದೇನೂ ಬಾಧಕವಿಲ್ಲ.

೯ ದೇವರು ಹಗಲನ್ನು ಕೆಲಸಮಾಡಲಿಕ್ಕೆ ಮತ್ತು ರಾತ್ರಿಯನ್ನು ವಿಶ್ರಾಂತಿ ಪಡೆಯಲಿಕ್ಕೆ ಮಾಡಿರಲು, ಮೈಗಳ್ಳತನದಿಂದಿರುವುದಕ್ಕೆ ಯಾವ ಸಮಯವನ್ನೂ ಉಂಟುಮಾಡಿಲ್ಲ.

೧೦ ಮೈಗಳ್ಳನ ಮೆದುಳು ಪಿಶಾಚಿಯ ಕಾರ್ಯಶಾಲೆಯೆಂದಿದ್ದಂತೆ ಮೈಗಳ್ಳನ ಮನಸ್ಸು ಕೆಟ್ಟುಹೋಗಿ ಅವನು ಅಧೋಗತಿಯನ್ನೈದುವನು.

೧೧ ರೈತನು ವಸ್ತ್ರಕ್ಕಾಗಿ ಸಾಹುಕಾರನ ಬಳಿಗೆ ಹೋಗದಿದ್ದರೆ, ದಲಾಲಿ ಮುಂತಾದವರಿಂದ ಅವನು ಅನುಭವಿಸಬೇಕಾಗಿ ಬರುವ ನೈತಿಕ ಮತ್ತು ಆರ್ಥಿಕ ಅವನತಿಯನ್ನು ಹೊಂದುವುದಿಲ್ಲ.

೧೨ ಮನಸ್ಸಿದ್ದರೆ ದಾರಿಯು ಇದ್ದೇ ಇರುವುದು.

೧೩ [illegible] ಸರ್ವವ್ಯಾಪಿಯಾಗಲಾರದು; ಪ್ರತಿಯೊಬ್ಬನೂ ಕಲಿಯ ಬಲ್ಲ ತನ್ನ ಜೀವನಮಾರ್ಗವನ್ನು ಕಲಿಯುವನು.

೧೪ ಖಾದಿ ಪ್ರಚಾರಕನು ಯಾವಾಗಲೂ ಸಹಾಯಮಾಡಲು ಸಿದ್ಧನಿದ್ದಾನೆ.

೧೫ ಪ್ರತಿಯೊಬ್ಬನು ರೊಟ್ಟಿಯನ್ನು [illegible] ತನಗೆ ಬೇಕಾದಂತೆ ತಾನೇ ಮಾಡಿಕೊಳ್ಳುವಂತೆ, ತನಗೆ ಬೇಕಾದಂತೆ [illegible] ವಸ್ತ್ರವೂ ಮಾಡಿಕೊಳ್ಳಬಹುದು.

೧೬ ನಮಗೆ ಬೇಕಾದ ಆಹಾರ ಪದಾರ್ಥಗಳನ್ನು ನಮ್ಮ ಅಡಿಗೆ ಕೋಣೆಯಲ್ಲೇ ಬೇಕಾದಾಗ ಮಾಡಿ ಉಂಡುತಿಂದು ಸುಖಪಡುವಂತೆ, ನಾವೇ ನೂತು ನೇಯ್ದು ನಮಗೆ ಬೇಕಾದ ಧೋತ್ರ, ಅಂಗಿ ಮೊದಲಾದ ಉಪಯೋಗದ ವಸ್ತ್ರವನ್ನು ತಯಾರಿಸಬಹುದು.

೧೭ ಅಡಿಗೆ ಮಾಡಿದ್ದು ಸಾಲದಿದ್ದರೆ ಉಪಹಾರದ ಅಂಗಡಿಗಳಿಂದ ತಿಂಡಿ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಬದಲಿಗೆ ಅಂಗಡಿಗಳಿಂದ ಜೀನಸುಗಳನ್ನು ತಂದು ಅಡಿಗೆಮಾಡಿಕೊಳ್ಳುವಂತೆ ಹತ್ತಿಯನ್ನು ನಾವು ನಾವೇ ಬೆಳಸಿದ್ದರೂ ಹತ್ತಿಯನ್ನು ಕೊಂಡುಕೊಂಡು [illegible] ನೇಯ್ದು ವಸ್ತ್ರಮಾಡುವುದು ಯೋಗ್ಯ.

೧೮ ಬಟ್ಟೆ ವಸ್ತ್ರ ತಯಾರಿಸುವುದರಲ್ಲಿನ [illegible] ಪ್ರಯೋಗಗಳನ್ನು ತಾನೇ ಮಾಡಿದ್ದಲ್ಲಿ, ಹತ್ತಿಯ ಕ್ರಯಕ್ಕಿಂತ [illegible] ವಸ್ತ್ರ ದೊರೆಯಬೇಕಾಗುತ್ತದೆ.

೧೯ ದೇಶೀಯ ಅಂಗಡಿಗಳಲ್ಲಿ ವಸ್ತ್ರ ಕೊಂಡುಕೊಳ್ಳುವವನ ಹಣವು [illegible] ನಮ್ಮ ಜನಗಳ [illegible] ಸಹಾಯ.

೨೦ ಹತ್ತಿ ಹಿಂಜುವುದು ಧಾನ್ಯವನ್ನು ಕುಟ್ಟುವುದಕ್ಕಿಂತ ಸುಲಭ ಆಗಿದೆ; ಅದನ್ನು ಮನೆಮನೆಗಳಲ್ಲಿ ಮಾಡುವುದು ಉತ್ತಮ.

೨೧ ವರ್ಷಾವಧಿ ಬೇಕಾದ ಧಾನ್ಯಗಳನ್ನು ನಾವು ಸಂಗ್ರಹಿಸುವಂತೆ ಹತ್ತಿಯನ್ನು ಸಂಗ್ರಹಿಸಬೇಕು.

೨೨ ಕೃಷಿ ಕೆಲಸಗಳಲ್ಲಿ ಕುಟುಂಬದ ಪ್ರತಿಯೊ[illegible] ಸಹಕರಿಸುವಂತೆ, ತಂತಮ್ಮ ಬಿಡುವಿನಲ್ಲಿಯೂ ಪ್ರತಿಯೊಬ್ಬರೂ ಖಾದಿ ಕೈಗಾರಿಕೆಯಲ್ಲೂ ಸಹಕರಿಸಬೇಕು.

೨೩ ಕೃಷಿಯನ್ನು ಮಾಡತಕ್ಕ ಸಮಯವು ವರ್ಷದಲ್ಲಿ [illegible] ಖಾದಿಯ ಕೆಲಸಕ್ಕೆ ಇಡೀ ವರ್ಷವೇ ಅನುಕೂಲವಿದೆ.

೨೪ [illegible] ಮಾಡಿದ್ದು ಉತ್ತಮ, [illegible] ಮಧ್ಯಮ, ಮತ್ತು [illegible] ಎಂಬಂತೆ, ಹೊಟ್ಟೆಪಾಡಿಗಾಗಿ ಕೆಲಸ ಮಾಡುವವರಿಗಿಂತ ಆತ್ಮಸಂತೋಷದಿಂದ ಸ್ವತಃ ಕೆಲಸಮಾಡುವುದು ಖಾದಿಯ ಕೈಗಾರಿಕೆಯಲ್ಲಿ ಬಹಳ ಮೇಲಾಗಿದೆ.

೨೫ ಖಾದಿಯ ಪ್ರಚಾರದಲ್ಲಿ ಕೈಗೂಡುವವನು ಆತ್ಮಾವಲಂಬನೆಯನ್ನೂ ಬಾಂಧವ್ಯವನ್ನೂ ಬಲಪಡಿಸುವನು.

೨೬ ಕೊಂಡುಕೊಳ್ಳುವ ಮಟ್ಟಿಗಾದರೂ ಖಾದಿಯನ್ನು ಕೊಂಡುಕೊಂಡಲ್ಲಿ ತನ್ನ ಸ್ವದೇಶಾಭಿಮಾನ ವ್ಯಕ್ತವಾಗುವುದಲ್ಲದೆ, ಹೊಟ್ಟೆ ಹಸಿವಿನಿಂದ ಬಾಧಿಸಲ್ಪಡುತ್ತಿರುವ ದೀನರಿಗೆ ಅನ್ನದಾನ ಮಾಡಿದ ಪುಣ್ಯವೂ ಲಭಿಸುವುದು.

೨೭ ಉದ್ಯೋಗವೇ ಪುರುಷ ಲಕ್ಷಣವೆಂದಿರುವಂತೆ, ಸತತೋದ್ಯೋಗಕ್ಕೆ ಖಾದಿಯ ಕೆಲಸವು ಒಂದು ಸಾಧನವಾಗಿದೆ.

೨೮ ಖಾದಿಯ ಪ್ರಚಾರದಲ್ಲಿ ಮಾತೃಭೂಮಿಯ ಬಂಧನದ ವಿಮೋಚನವಾಗಿ, ದೇಶದಲ್ಲಿ ಸಂಪತ್ತು, ಸುಖವೂ, ಶಾಂತಿಯೂ ನೆಲೆಗೊಳ್ಳುವುದು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಶೋಕಮ ತೈಲ—ಇದು ಪೂರ್ವಕಾಲ ಆತ್ರೇಯ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದ್ದು. ಎಲ್ಲರಿಗೂ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂ ವೃದ್ಧರವರೆಗಿನ ಪ್ರಾಣಿವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮತ್ತು ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಒಂದು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಷ್ಟಾವಸ್ಥೆ!
ದಶಮೂಲ ಸುಖ[illegible]ದಔಷಧಿ!

ಈ. ಬಾಣಂತಿಯರ ಸಹಜೀವನಕ್ಕೆ ಜೀವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಂದ ವಂಶನ್ನು ಹೊರಗೆ ಹಾಕಿ ಶುದ್ಧಿಂದ ಪ್ರಸ್ತುತವಾದ ಗರ್ಭ ಕೋಶವನ್ನು ಒಂದೆರಡು ದಿನಗಳಲ್ಲೇ ಅಕುಂಚಿತಮಾಡುವದು.

ರಸಾಯನ ಗುಣದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾ[illegible] ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ದ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1[illegible] ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ [illegible]0—0. ಪೋಸ್ಟೇಜು ವಗೈರೆ ಬೇರೆ.

ತಪ್ಪಿ ಹೋಗದಂತೆ "[illegible]" ಎಂಬ ಪ್ರಸ್ತ ಕಕ್ಕೆ ಬರೆಯಿರಿ.

ಡಾ. ಪಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದ್ರಿತವಾದ ಬೆಳ್ಳಿ ಪುಡಿದಾರಹಗ್ಗ.

ESTD. 1896.

ಅನೇಕ ವರ್ಷ[illegible]ವ ಬೆಳ್ಳಿ ಪುಡಿದಾರಗಳು ತಯಾರುಮಾಡಿ [illegible] ವ್ಯಾಪಾರ ನಡೆಸುತ್ತಿದ್ದೇವೆ. [illegible] ನಮ್ಮ [illegible] ಹಗ್ಗಗಳು [illegible] ಮತ್ತು [illegible] ದಲ್ಲಿಯೂ, [illegible] ದಲ್ಲಿಯೂ [illegible] ದರ [illegible] ಹಾಕಿ ಕಳುಹಿಸುತ್ತೇವೆ.

ಕೆ. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫ ವ್ಯಾಪಾರಿ,
ಕಿನ್ನಿಪೇಟೆ, ಕೊಡಿ. (ದಕ್ಷಿಣ ಕನ್ನಡ).

ಅಪೂರ್ವ ಸುಸಂದರ್ಭ.

ಸ್ವಾಭಾವಿಕ ಶರೀರ ಪ್ರಕೃತಿಯನ್ನು ಸಂಪಾದಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

ಸ್ತ್ರೀಗಳಿಗೆ ಡಬ್ಬಿಗೆ ಬರೇ ರೂಪಾಯಿ 1/- ಮಾತ್ರ.

ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಅಥವಾ—
ಮೆಸ್ಸರ್ಸ್ ರೇಕ್ವೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, Bombay, and Puttur

ಬ್ರಾಂ. ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಬೊಂಬ್ಬಾಯಿ ಮತ್ತು ಪುತ್ತೂರು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ.
ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell ad, Bombay. No. 14.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ — ತೀರ್ಥಹಳ್ಳಿ — ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಿಗ್ಗೆ ೯ ಘಂಟೆಗೆ ಹೊರಡುತ್ತಾ ಇದ್ದದು ಸರಿಯಷ್ಟೆ. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. ೧೫—೪—೧೯೩೫ರ ಆರಭ್ಯ ಶಿವಮೊಗ್ಗಾದಿಂದ ಬೆಳಿಗ್ಗೆ ೮ರ ಘಂಟೆಗೆ ಹೊರಡಲು ಏರ್ಪಾಡು ಮಾಡಿದೆ.

ತೀರ್ಥಹಳ್ಳಿ — ಸಾಗರರಸ್ತೆ.

ಅನಂತಪುರ—ಸಾಗರಕ್ಕೆ 0—8—0. ತೀರ್ಥಹಳ್ಳಿ—ಸಾಗರಕ್ಕೆ ೨—೮—೦.

ಆರಗ, ಗುಡ್ಡೇಕೊಪ್ಪ, ಕೋಣಂದೂರು, ಹಾದಿಗಲ್, ಹುಮಚದಕಟ್ಟೆ, ರಿಪ್ಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪ್ಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳಗಳ ದೆಸೆಯಿಂದ ಕಳೆದ ಜೂನ್ ತಾ. ೮ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಕು ೬—೧೧—೧೯೩೪ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾ ಭಟ್,
ಮಾಲಿಕ,
ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

The Kanara Watch House Udipi, S. K.

ಗ್ಯಾರಂಟಿಯುಳ್ಳ ವಾಚುಗಳು! [illegible]

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್‌ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು

ನಿಮ್ಮಲ್ಲಿರುವ ವಾಚು, ಕ್ಲೋಕು, ಟೈಮ್‌ಪೀಸ, ಗ್ರಾಮೊಫೋನು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.
ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಪಟ್ಟಿ ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೊ. — ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.

ಬಂಟವಾಳ:— ಇಲ್ಲಿಯ ಆಸ್ಪತ್ರೆಯ ಉತ್ತರದಿಂದ ಬಡಗ್ಗೆ ಗುಡ್ಡೆಗೆ ಸುಮಾರು ನೂರು ಅಡಿ ಉದ್ದದ ಮಾರ್ಗವನ್ನು ಮಾಡಿಸಬೇಕೆಂದು ಊರ ಸಿವಾಸಿಗಳು ಜಿಲ್ಲಾ ಬೋರ್ಡಿನ ಪ್ರಸಿಡೆಂಟರಿಗೆ ೩೪೪ ಜನ, ಜಿಲ್ಲಾ ಬೋರ್ಡಿನ ಮೆಂಬರರು ಮಾಂಗಲೂರು ತಾಲೂಕು ಬೋರ್ಡಿಗೆ ಬರೆದಿದ್ದರಂತೆ. ೧೯೨೪ನೇ ಇಸವಿ ನೆರೆ ಬಂದು ಭರ್ತಿ ೬ ವರುಷಗಳಾದರೂ ಇಷ್ಟು ಸಣ್ಣ ಮಾರ್ಗವನ್ನು ಇನ್ನೂ ಮಾಡಿಸಲು ಸಾಧ್ಯವಾಗಲಿಲ್ಲ. ಈ ಮಾರ್ಗ ಮಾಡಿಸುವುದಕ್ಕೆ ರೂ. ೨೫೦ ಮಾತ್ರ ಸಾಕಾಗುವುದು. ರಿಲೀಫ್ ಕಮಿಟಿಯವರು ೩೫ ರೂಪಾಯಿ ಇದಕ್ಕಾಗಿ ಕೊಟ್ಟರೆ ಬಹಳ ಉಪಕಾರವಿತ್ತು.

ಸ್ವೀಕಾರ.

ಈ ಕೆಳಗಿನ ಪುಸ್ತಕಗಳು ನಮ್ಮ ಕೈಸೇರಿವೆ.

೧ ಜಾರ್ಜ್ ನಿಯುಮನ್ ಸ್ವಯಂ ದೋಧೆ—ಶ್ರೀ ಬಿ ವೆಂಕಟಪ್ಪಶೆಟ್ಟಿ, ಬಿ. ಎ. ಇವರಿಂದ ರಚಿಸಲ್ಪಟ್ಟದ್ದು. ಬೆಂಗಳೂರು ಸಿಟಿ, ಚಿಕ್ಕಪೇಟೆ ಎಚ್. ಎನ್. ರಾವ್ ಬ್ರದರ್ಸ್ ಇವರಿಂದ ಪ್ರಕಾಶಿಸಲ್ಪಟ್ಟಿತು. ಕ್ರಯ ಹದಿನೆರಡಾಣೆ.

೨ ಮುಗುಳು—ಶ್ರೀ ಕಟಪಾಡಿ ಹೊನ್ನಯ್ಯ ಶೆಟ್ಟರಿಂದ. ಪ್ರಕಾಶಕರು ಪಿ. ಎ. ಪೈ ಬ್ರದರ್ಸ್ ಉಡುಪಿ, ಕ್ರಯ ೦—೨—೯

೩. ಶೆಟ್ಟಿರಾಣಿ ಪರ್ಸಂಗೊ—ತುಳು ಸಾಹಿತ್ಯ ಮಾಲೆ ಪು. ೧. ಲೇಖಕ ಶ್ರೀ ಬಡಕಬೈಲು ಪರಮೇಶ್ವರಯ್ಯ, ಬಿ.ಎ.; ಪ್ರಕಾಶಕರು ಶ್ರೀ ಎಸ್. ಯು. ಪಣಿಯಾಡಿ, ಉಡುಪಿ; ಕ್ರಯ ೦—೮—೦.

ಇವುಗಳ ವಿಮರ್ಶೆಯನ್ನು ಯಥಾವಕಾಶವಾಗಿ ಕೊಡುವೆವು

ವಿವಿಧ ಸಮಾಚಾರಗಳು.

ಶ್ರೀ ಸರೋಜಿನಿ ದೇವಿಯವರ ಆಗಮನ.

ಶ್ರೀಮತಿ ಸರೋಜಿನಿ ದೇವಿಯವರು ಕಳೆದ ಸೋಮವಾರ ಪ್ರಾತಃಕಾಲ ಎಂಟು ಗಂಟೆಯ ಹೊತ್ತಿಗೆ ಮುಂಬಾಯಿಗೆ ಬಂದು ತಲಪಿ ಕಾಂಗ್ರೆಸ್ ಕಮಿಟಿಯವರಿಂದ ಸ್ವಾಗತವನ್ನು ಪಡೆದರು. ಅಮೇರಿಕದ ಪ್ರತಿಯೊಂದು ಪಟ್ಟಣದಲ್ಲಿಯೂ ಪ್ರತಿಯೊಬ್ಬರೂ ಹಿಂದೂಸ್ಥಾನದ ಕಡೆಗೆ ಸಹಾನುಭೂತಿಯನ್ನೇ ತೋರಿಸುತ್ತಿರುವರೆಂದೂ ಮಹಾತ್ಮಾಜಿಯವರನ್ನು ಅಲ್ಲಿನವರು ದೈವೀಕ ಪುರುಷರೆಂದು ಪರಿಗಣಿಸುತ್ತಿರುವರೆಂದೂ ಸರೋಜಿನೀದೇವಿಯವರೆಂದರು. ಅದು ಮಾತ್ರವಲ್ಲದೆ ಅಲ್ಲಿಯ ವಿಶ್ವವಿದ್ಯಾಲಯಗಳ ಪ್ರೊಫೆಸರರು ಹಿಂದೂಸ್ಥಾನದ ವಿದ್ಯಾರ್ಥಿಗಳ ಕಡೆಗೆ ವಿಶೇಷ ಅಭಿಮಾನಿಗಳಾಗಿರುವರಂತೆ.

* * *

ಭಯಂಕರ ವಾಸಸ್ಥಾನ.

ಪ್ರೊಫೆಸರ್ ಮಲ್ಲಾದ್ದಿ ಎಂಬಾತನು ಜ್ವಾಲಾಮುಖಿಯ ಉದ್ಭವಸ್ಥಾನವಾದ ಮೌಂಟ್ ವೆಸುವಿಯಸ್ ಅಗ್ನಿದ್ವಾರದ ಸಮೀಪದಲ್ಲೇ ವಸತಿ ಮಾಡಿಕೊಂಡಿರುವನಂತೆ. ಅಲ್ಲಿಂದಲೇ ಆತನು ಜ್ವಾಲಾಮುಖಿಗಳ ವಿಷಯವನ್ನು ತಿಳಿಸುತ್ತಲಿರುವನು. ಎಂಥಹ ಜ್ವಾಲಾಮುಖಿಯ ಸಮಯದಲ್ಲಾದರೂ ಆತನು ಕದಲಿರಲಿಲ್ಲ. ಒಂದೆರಡು ಸಲ ಆತನು ಉಳಿಯುವ ನೆಂಬ ಆಶೆಯೇ ಇರಲಿಲ್ಲ. ಈತನಿಗಿಂತ ಮೊದಲು ಅಲ್ಲಿ ವಾಸಮಾಡುತ್ತಿದ್ದ ಪ್ರೊಫೆಸರನು ೧೯೦೬ನೇ ಇಸವಿಯ ಜ್ವಾಲಾಮುಖಿಯ ಸಮಯ ಆತನ ಮನೆಯ ಸುತ್ತಲೂ ಉರಿಯುವ ಲಾವಾರಸದ ನದಿಯೇ ಹರಿಯಿತು. ತ್ರಿದಿನಾವಧಿ ಆತನು ಎಪ್ಪತ್ತು ತಾಸುಗಳ ವರೆಗೆ ಅದೇ ಮನೆಯಲ್ಲಿ ಉಳಕೊಂಡಿದ್ದನು. ದೂರದಿಂದ ನೋಡುವವರು ಆತನು ಸತ್ತನೆಂದೇ ಗ್ರಹಿಸಿದ್ದರು. ಆದರೆ ಎಪ್ಪತ್ತು ತಾಸುಗಳ ತರುವಾಯ ಆತನು ಬೇರೆಯವರಿಗೆ ಕಾಣಸಿಕೊಂಡನು. ಆವನಿಗಿಂತ ಮೊದಲಿನವನು ಲಾವಾರಸದಲ್ಲಿಯೇ ಬಿದ್ದು ಸತ್ತುಹೋಗಿದ್ದನಂತೆ.

* * *

ಮದುವೆಯಾಗದವರ ಮೇಲೆ ತೆರಿಗೆ.

ಇಂಗ್ಲಂಡಿನಲ್ಲಿ ಸದ್ಯದಲ್ಲಿಯೇ ಮದುವೆಯಾಗದೆ ಉಳಿಯುವವರ ಮೇಲೆ ತೆರಿಗೆಯನ್ನು ಹೊರಿಸಲಿರುವರು. ಈ ಕಾನೂನು ವಿಲಿಯಮ್ ಅರಸನ ಕಾಲದಲ್ಲಿ ಜ್ಯಾರಿಯಲ್ಲಿದ್ದಿತು. ಆದನ್ನೇ ಪುನಃ ಜ್ಯಾರಿಗೆ ತರುವ ಆಲೋಚನೆ. ಇಟಲಿ ಮತ್ತು ಫ್ರಾನ್ಸಿನಲ್ಲಿ ಈಗ ಬ್ರಹ್ಮಚಾರಿಗಳೂ ವಿಧುರರಾಗಿ ಹೆಂಡಿರನ್ನು ಬಿಟ್ಟವರೂ ತುಂಬ ತೆರಿಗೆಯನ್ನು ಕೊಡುತ್ತಲಿರುವರು. ಈ ತೆರಿಗೆಯು ಇನ್ನೂ ಕೆಲವು ದೇಶಗಳಲ್ಲಿಯೂ ಇರುತ್ತದೆ. ವಿಲಿಯಮನ ಕಾಲದಲ್ಲಿ ಡ್ಯೂಕನು ೧೨ ಪವನು ೧೦ ಶಿಲಿಂಗು, ಅರ್ಲ ಬಿಷಪನು ೧ ಪವನು ೧೧ ಶಿಲಿಂಗು, ಬಿಷಪನು ೫ ಪವನು, ಡೀನನು ೨ ಪವನು ೧೧ ಶಿಲಿಂಗು, ಕೆನನ್ ಅಥವಾ ಸಾಧಾರಣ ಪಾದರಿಯು ೧೩ ಶಿಲಿಂಗುಗಳಂತೆ ವರುಷಕ್ಕೆ ತೆರಿಗೆಯನ್ನು ಕೊಡಬೇಕಿತ್ತು. ಇನ್ನು ಬೇರೆಯಾದಾದರೂ ಮದುವೆಮಾಡಿಕೊಳ್ಳದೆ ಇದ್ದರೆ ವರುಷಕ್ಕೆ ಆರು ಶಿಲಿಂಗುಗಳನ್ನು ಕೊಟ್ಟರೆ ಸಾಕಾಗುತ್ತಿತ್ತು. ಮದುವೆಯಾಗದ ಹೆಂಗಸರ ಮೇಲೆ ಈ ತೆರಿಗೆಯನ್ನು ಹೊರಿಸುತ್ತಿದ್ದಿಲ್ಲ. ಏಕೆಂದರೆ ಮದುವೆಯಾಗದೆ ಉಳಕೊಳ್ಳಲು ಸ್ತ್ರೀಯರಿಗೆ ಮನಸ್ಸಿರುವುದಿಲ್ಲವಂತೆ.

* * *

ಬಾರ್ಡೋಲಿಯ ವಿಜಯ

ಬಾರ್ಡೋಲಿಯ ವಿಜಯದ ಸತ್ಪರಿಣಾಮದ ಕುರಿತು ಮಹಾತ್ಮಾಜಿಯವರು ಹೀಗೆ ತಿಳಿಸುವರು—ಬಾರ್ಡೋಲಿಯವರ ವಿಜಯದಿಂದ ಎಂಥಹ ಸತ್ಪರಿಣಾಮವಾಗಿದೆಯೆಂದು ನಾವು ಮೊದಲು ತಿಳಿಯಬೇಕು. ಇದರಿಂದ ಮುಂಬಾಯಿ ಸರಕಾರದ ಕಂದಾಯ ವಸೂಲಿಯ ಕುರಿತು ಸದ್ಯದಲ್ಲಿಯೇ ಪೂರ್ಣ ಪರೀಕ್ಷೆಯಾಗಿದೆ. ರೈತರಿಗೂ ಇಲಾಖೆಯಲ್ಲಿ ಸರಿಯಾದ ಹಾದಿಯಲ್ಲಿ ಸುಧಾರಣೆಯಾದುದಾದರೆ, ಮುನ್ಸಿಪಾಲಿಟಿ ಸ್ವರಾಜ್ಯ ಸಿಕ್ಕಿದಂತೆಯೇ ಸರಿ. ಸರಕಾರದವರು ಕೇವಲ ಹಣದ ಸಲುವಾಗಿಯೇ ನಮ್ಮನ್ನು ಆಳುವರು. ಹಣ ದೊರಕದಿದ್ದರೆ ತ್ರಿಟಿಷನಾಗಲಿ, ಇನ್ನಾರಾಗಲಿ ನಮ್ಮನ್ನಾಳಲು ಬರಲಾರನು. ಹಿಂದೂಸ್ಥಾನದ ಸರಕಾರದಲ್ಲಿ ರೆವೆನ್ಯೂ ಇಲಾಖೆಯಷ್ಟು ಅವ್ಯವಸ್ಥಿತವೂ, ತಪ್ಪು ಆಳುವಿಕೆಯುಳ್ಳದೂ ಆದ ಬೇರೆ ಇಲಾಖೆಯಿರಲಿಲ್ಲ. ಆದರೆ ಬಾರ್ಡೋಲಿಯವರು ಈ ಇಲಾಖೆಯು ಸರಿಯಾಗುವಂತೆ ಮಾಡಿದರು. ಮುಂಬಾಯಿ ಗವರ್ನರರು ವಿ. ಶಿವೇಶ್ವರರಿಗೆ ಬರೆದ ಪತ್ರದಿಂದ ನಾವು ಧೈರ್ಯಹೊಂದಿ ಕುಳಿತುಕೊಳ್ಳಲಾಗುವುದಿಲ್ಲ. ಮುಂಬಾಯಿ ಗವರ್ನರರು ಪ್ರತಿಜ್ಞೆಗೆ ಸರಿಯಾಗಿ ನಡೆಯುವವರಲ್ಲವಾದುದರಿಂದ ಆವನ್ನವರು ಪೂರ್ತಿಗೊಳಿಸುವಂತೆ ನಾವು ಜಾಗರೂಕರಾಗಿರಬೇಕು. ಬಾರ್ಡೋಲಿಯವರು ನಮಗೆ ಹಾದಿ ತೋರಿಸಿರುವರು. ಅದೇ ಸ್ವರಾಜ್ಯದ ಹಾದಿಯು. ವಿಲಿಯಗೆಟ್ಟೆಲ್ ಜನರು ಉಪವಾಸವಿರದಂತೆ ನೋಡಿಕೊಳ್ಳಲು ಅದೇ ಮುಖ್ಯ ಹಾದಿಯು.

* * *

ಅಫಘಾನದ ವಾರ್ತೆ.

ಕಾಬೂಲಿನಿಂದ ಬಂದು ತಲಪಿದ ಜನರು ಹೇಳುವದರಿಂದ ಕಾಬೂಲಿನಲ್ಲಿಯೂ, ಸುತ್ತಮುತ್ತಲಿನ ಪಟ್ಟಣಗಳಲ್ಲಿಯೂ ಹಬೀಬುಲ್ಲನ ಆಕ್ರಮದಿಂದ ತುಂಬ ತೊಂದರೆಗಳುಂಟಾಗುತ್ತಿವೆಯಂತೆ. ಆತನನ್ನು ಸೈನ್ಯಕ್ಕೆ ಸೇರಿಸುವಿಕೆ, ಸಾಹುಕಾರರುಗಳಿಂದ ಹೇರಳ ಹಣವನ್ನು ವಸೂಲು ಮಾಡುವಿಕೆ, ಇದೇ ಬಾಚಾ-ಸಾಕೋವಿನ ಕೆಲಸವಾಗಿರುತ್ತದೆ. ಇದು ಮಾತ್ರವಲ್ಲದೆ ಚಿಕ್ಕ ಪ್ರಾಯದ ಕೊಹಿಸ್ಥಾನಿಗಳನ್ನು ದೊಡ್ಡ ದೊಡ್ಡ ಹುದ್ದೆಯಲ್ಲಿ ನೇಮಿಸಿರುವುದರಿಂದ ಅವರ ವರ್ತನೆಯು ಚೆನ್ನಾಗಿರುವುದಿಲ್ಲ. ಹಬೀಬುಲ್ಲನು ಕಾಬೂಲಿನಲ್ಲಿ ಕೆಲವೇ ದಿನಗಳ ಹಿಂದೆ ಮುಲ್ಲಾ ಮತ್ತು ಮಾಲಿಕರ ಸಭೆಯೊಂದನ್ನು ಕರೆಸಿ, ತಾನು ಜನರ ಅಪೇಕ್ಷೆಯಂತೆ ಅಮಾನುಲ್ಲಾರವರನ್ನು ಓಡಿಸುತ್ತೇನೆಂದೂ, ಈಗಿನ ಯುದ್ಧವನ್ನು ನಿಲ್ಲಿಸಲು ಜನರ ಅಭಿಪ್ರಾಯವೇನೆಂದೂ ವಿಚಾರಿಸಿದನು. ಕೆಲವು ಮಾಲಿಕರು ಹಬೀಬುಲ್ಲನು ನಾದಿರಖಾನರನ್ನು ಆಮಂತ್ರಿಸಿ ಅವರ ಸ್ನೇಹವನ್ನು ಸಂಪಾದಿಸಬೇಕೆಂದರು. ಆದರೆ ಈ ಆಲೋಚನೆಯು ಹಬೀಬುಲ್ಲನಿಗೆ ಸರಿಬೀಳಲಿಲ್ಲ.

ಹಬೀಬುಲ್ಲನ ಪೇಶಾವರ ವ್ಯಾಪಾರಿ ಏಜಂಟನಾದ ಇಮಾಮ್‌ದೀನನು ಈಗ ಮುಂಬಾಯಿಗೆ ಬಂದು ಮರೆಮಾಡಿಕೊಂಡಿರುವನು. ಬಾಚಾ-ಇ-ಸಾಕೋವು ಅಪಾಯರಹಿತನಾಗಿ ಸ್ವಸ್ಥನಾಗಿರುವನೆಂದು ಆತನ ಹೇಳಿಕೆ.

ಪ್ಯಾರಿಸಿನಿಂದ ಹಿಟ್ಲ ಪ್ರಿಂಚವೇನನು ಒಬ್ಬ ಹೆಂಗಸಿನಿಂದಲೂ, ಇತರ ಇಬ್ಬರು ಅನುಯಾಯಿಗಳಿಂದಲೂ ಕೂಡಿಕೊಂಡು ಕಂದಹಾರಿಗೆ ಬಂದಿರುವನಂತೆ. ಆತನು ಅಲ್ಲಿಂದ ಕಾಬೂಲಿಗೆ ತೆರಳುವನು.

ಬಾಚಾಸಾಕೋವು ತನ್ನ ಸ್ಥಿತಿಯು ಈಗ ಯಾವ ತೆರನಿಂದಲೂ ಇಲ್ಲವನ್ನು ಎಂದು ನೆನೆಸಿ, ಮುಂದೆ ಆಗುವ ಸಂಗತಿಗಳನ್ನು ಧೈರ್ಯದಿಂದ ಎದುರಿಸೇನೆಂಬ ಧೃತಿಯಿಂದಿರುವನು. ತಾನು ಅಫಘಾನಿಸ್ಥಾನದಲ್ಲಿ ಬಲವಾದ ಪೋಲೀಸ್ ದಳವನ್ನು ಸ್ಥಾಪಿಸಿ ಶಾಂತಿರಕ್ಷಣೆಯ ಕಾರ್ಯವನ್ನು ಚೆನ್ನಾಗಿ ಕೈಕೊಳ್ಳುವೆನೆಂದು ಬಾಚಾ-ಸಾಕೋವಿನ ಹೇಳಿಕೆ. ಜನರ ದೂರುಗಳನ್ನು ಸರಿಯಾಗಿ ಕೇಳಿ ತಪ್ಪುಗಾರರಿಗೆ ತಕ್ಕುದಾದ ಶಿಕ್ಷೆಯು ಕೊಡಲ್ಪಡುವುದೆಂದೂ ಆತನು ಹೇಳುವನು. ಪರರಾಷ್ಟ್ರಗಳೊಡನೆ ಸಂಬಂಧವನ್ನು ಹೆಚ್ಚಿಸಿ ಬೆಳೆಸುವೆನೆನ್ನುವನು. ಹಿಂದೂದೇಶದೊಂದಿಗೆ ವಿಮಾನ ಸರ್ವಿಸನ್ನು ಇಡುವನಂತೆ. ತನ್ನನ್ನು ಕೊಲ್ಲಲು ಪ್ರಯತ್ನಿಸಿದವರ ಹೊರತು ಉಳಿದ ಎಲ್ಲಾ ಕೈದಿಗಳನ್ನೂ ಆತನು ಬಿಡುಗಡೆಮಾಡಲಿರುವನು. ಇವುಗಳೇ ಮಾತ್ರವಲ್ಲದೆ ಆತನು ದೇಶಹಿತಕಾರಿಯಾದ ಹಲವು ಸಂಗತಿಗಳ ಕುರಿತಾಗಿ ಯೋಚಿಸಿರುವನಂತೆ.

* * *

ಹೊಗೆಸೊಪ್ಪು ಸೇದುವುದರಿಂದ ಆಗುವ ಹಾನಿ.

ಹೊಗೆಸೊಪ್ಪಿನ ಬತ್ತಿಗಳನ್ನು ಸೇದಿಸುವುದರಿಂದ ಆಗುವ ಹಾನಿಯು ಅಷ್ಟಿಷ್ಟಲ್ಲ. ದೇಹದ ನರನಾಡಿಗಳ ಶಕ್ತಿಯನ್ನೆಲ್ಲ ಅದು ಕುಗ್ಗಿಸಿ ಬಿಡುತ್ತದೆ. ಹೆಚ್ಚಾಗಿ ಮಾನಸಿಕ ಪರಿಶ್ರಮ ಮಾಡುವವರು ಬೀಡಿ, ಚುಟ್ಟಾ, ಸಿಗರೇಟು—ಇವೊಂದನ್ನೂ ಮುಟ್ಟಬಾರದು. ವಿದ್ಯಾರ್ಥಿಗಳ ಮೂಗಿಗೆ ಅದರ ವಾಸನೆಯೇ ತಗಲಬಾರದು. ಅಮೇರಿಕದ ಪ್ರಸಿದ್ಧ ವಿದ್ಯಾನಿಲಯದ ನಾದ 'ಇಲಿನೋಯಿಸ್' ವಿದ್ಯಾಪೀಠದ ಡಾ| ಹಿಸ್ಟೆ ಎಂಬವರು ಹೀಗೆ ಹೇಳುತ್ತಾರೆ:—ಸಿಗರೇಟನ್ನು ಸೇದಿಸುತ್ತಿದ್ದ ಅಭ್ಯಾಸವಿದ್ದ ವಿದ್ಯಾರ್ಥಿಗಳಲ್ಲಿ ನೂರಕ್ಕೆ ೨ ಜನರು ಮಾತ್ರ ೧ನೇ ತರಗತಿಯಲ್ಲಿ ಉತ್ತೀರ್ಣರಾದರು.

ಇಂಥಹ ಈ ಮೋಹಕ ಬತ್ತಿಗಳನ್ನು ತಯಾರುಮಾಡುವ ವಿಧಾನವಾದರೋ ಬಹಳ ಸೋಗಸಾಗಿರುವುದು! ಹೆಚ್ಚಿನ ಸಿಗರೇಟುಗಳೆಲ್ಲ ಅರ್ಧ ಸೇದಿ ಬಿಸಾಡಿದ ಚುಟ್ಟಗಳಿಂದ ತಯಾರುಮಾಡಲ್ಪಡುತ್ತವೆ. ಬೀದಿ ಗುಡಿಸುವವರು ಅವನ್ನೆಲ್ಲ ಒಟ್ಟುಗೂಡಿಸಿ ಸಿಗರೇಟಿನ ಕಂಪೆನಿಯವರಿಗೆ ಮಾರುತ್ತಾರೆ. ಅಲ್ಲದೆ ಚುಟ್ಟಗಳನ್ನು ಸುತ್ತುವಾಗ ಅದರ ತುದಿಗೆ ಸಿಂಪು ಮುಟ್ಟಿಸಬೇಕಾಗುತ್ತದೆ. ಇದರ ಬದಲಾಗಿ ಕೆಲಸಗಾರರು ತಮ್ಮ ಬಾಯಿಂದ ಸದಾ ಜಿನುಗುತ್ತಿರುವ ಜೊಲ್ಲಿನ ರಸವನ್ನು ಸೇರಿಸುತ್ತಾರೆ. ಇದನ್ನು ಕಾರಖಾನೆಗಳಲ್ಲಿ ಪ್ರತ್ಯಕ್ಷ ಕಾಣಬಹುದು. ಜೆಫರ್‌ಸನ್ ಮೆಡಿಕಲ್ ಕಾಲೇಜಿನ ಅಧ್ಯಕ್ಷರು ಪ್ರೊಫೆಸರ್ ಹೋರ್‌ವಿಟ್ಸ್ ಸಾಹೇಬರು ಹೀಗೆ ಹೇಳುತ್ತಾರೆ:—ನಾನೊಮ್ಮೆ ಚುರುಟಿ ಸುತ್ತುವ ಕಾರಖಾನೆಗೆ ಹೋದೆನು. ಅಲ್ಲಿಯ ಭಯಂಕರ ಮತ್ತು ಭೀಭತ್ಸ ದೃಶ್ಯವು ನನ್ನನ್ನು ನಡುಗಿಸಿತು. ಕೆಲಸಗಾರನೊಬ್ಬನು ಚುಟ್ಟವನ್ನು ತನ್ನ ಬಾಯಿಂದಲೇ ಚೀಪಿ ಸರಿಗೊಳಿಸುತ್ತಿದ್ದನು. ಅವನು 'ಫಿರಂಗಿ' (ವ್ರಣಮೇಹ) ರೋಗ ಪೀಡಿತನಾಗಿದ್ದನು. ಅವನು ಗಲ್ಲಗಳು, ನಾಲಿಗೆ ತುಟಿಗಳುಳ್ಳವನಾಗಿದ್ದನು. ಅವನ ಗಂಟಲು, ನಾಲಿಗೆ ತುಟಿಗಳು ಹುಣ್ಣಾಗಿದ್ದವು. ಅದೇ ತುಟಿಗಳಿಂದ ಅವನು ಚುಟ್ಟವನ್ನು ಮುದ್ರಿಸುತ್ತಿದ್ದನು! (ರಾ. ಬಂಧು)

ವ್ಯಾಯಾಮ ವಿದ್ಯಾಪೀಠದ ವಾರ್ಷಿಕೋತ್ಸವ.

ಪ್ರಕಟಣೆ ನಂ. ೧.

ಬಾಗಲಕೋಟೆಯಲ್ಲಿರುವ ಹಿಂದುಸ್ಥಾನಿ ಸೇವಾದಳದ ವ್ಯಾಯಾಮ ವಿದ್ಯಾಪೀಠದ ಪ್ರಾರಂಭೋತ್ಸವವು ಕಳೆದ ವರ್ಷ ಆಗೋಸ್ತ ೧ನೆಯ ತಾರೀಕಿನ ದಿವಸ ಆಚರಿಸಲ್ಪಟ್ಟಿತು. ಕಾರಣ ಅದರ ನೆನಪಿಗಾಗಿ ವಿದ್ಯಾಪೀಠದ ಮೊದಲನೆಯ ವಾರ್ಷಿಕೋತ್ಸವವನ್ನಾದರೂ ಅದೇ ದಿವಸ ಅಂದರೆ ಬರುವ ಆಗಸ್ಟ ೧ನೆಯ ತಾರೀಕಿನ ದಿವಸ ಆಚರಿಸಬೇಕೆಂದು ನಿಶ್ಚಯಿಸಿರುತ್ತದೆ.

ಲೋಕಮಾನ್ಯ ಬಾಲಗಂಗಾಧರ ತಿಲಕರ ಪುಣ್ಯತಿಥಿಯಾದರೂ ಆ ದಿವಸವೇ ಇರುವುದರಿಂದ ಲೋಕಮಾನ್ಯರ ಭಾವಚಿತ್ರದ ಅನಾವರಣವನ್ನು ಸಹ ಆ ದಿವಸ ಮಾಡಬೇಕೆಂದು ನಿಶ್ಚಯಮಾಡಿರುತ್ತದೆ. ಆ ಬಗ್ಗೆ ಬಾರಡೋಲಿಯ ವೀರರಾದ ಶ್ರೀಯುತ ವಲ್ಲಭಭಾಯಿ ಪಟೇಲ ಮತ್ತು ಶ್ರೀಯುತ ಶ್ರೀನಿವಾಸ ಅಯ್ಯಂಗಾರ ಇವರಿಬ್ಬರನ್ನೂ ಕೇಳಿಕೊಂಡಿರುತ್ತದೆ. ಅವರಲ್ಲೊಬ್ಬರು ಅನಾವರಣಕಾರ್ಯವನ್ನು ಮಾಡಬಹುದೆಂದು ಆಶೆಯಿದೆ.

ವಾರ್ಷಿಕೋತ್ಸವದ ಕಾಲಕ್ಕೆ ಹಿಂದುಸ್ಥಾನೀ ಸೇವಾದಲದ ಕರ್ನಾಟಕ ಶಾಖೆಯ ನಾಲ್ಕನೆಯ ಸಮ್ಮೇಲನವನ್ನೂ ಸಮಗ್ರ ಕರ್ನಾಟಕದ ವ್ಯಾಯಾಮೋತ್ಸಾಹಿಗಳ ಪರಿಷತ್ತೊಂದನ್ನೂ ಕೂಡ ಕರೆದಿರುತ್ತದೆ.

ಹಿಂದುಸ್ಥಾನೀ ಸೇವಾದಲದ ಸಮ್ಮೇಲನಕ್ಕೆ ಆಂಧ್ರದ ಪ್ರಸಿದ್ಧ ಮುಖಂಡರಾದ ಶ್ರೀಯುತ ಜಿ. ವಿ. ಹರಿಸರ್ವೋತ್ತಮರಾವ ಎಮ್. ಎ ಎಮ್. ಎಲ್. ಸಿ. (ಇವರಿಗೆ ಕನ್ನಡದಲ್ಲಿ ಪರಿಚಯವುಂಟು) ಇವರು ಅಧ್ಯಕ್ಷರಾಗಲೊಪ್ಪಿರುವರು. ಸಮ್ಮೇಲನದಲ್ಲಿ ವಿಚಾರಿಸಲ್ಪಡತಕ್ಕ ಮುಖ್ಯ ವಿಷಯಗಳೆಂದರೆ (೧) ಸೇವಾದಲವದರ ಕರ್ನಾಟಕದಲ್ಲಿ ಇಷ್ಟರ ವರೆಗೆ ಮಾಡಿರುವ ಕಾರ್ಯಗಳ ಗುಣದೋಷ ವಿಮರ್ಶೆ (ಸುಧಾರಣೆಯ ದೃಷ್ಟಿಯಿಂದ) ಮತ್ತು (೨) ಹಿಂದುಸ್ಥಾನದ ಸದ್ಯದ ರಾಜಕೀಯ ಪರಿಸ್ಥಿತಿಯ ಮೇಲಿಂದ ಸಮಗ್ರ ಕರ್ನಾಟಕದ ಸ್ವಯಂಸೇವಕರ ಸಲುವಾಗಿ ಒಂದು ಪರಿಣಾಮಕಾರಕ ಕಾರ್ಯಕ್ರಮವನ್ನು ತಯಾರಿಸುವುದು

ಅಖಿಲ ಕರ್ನಾಟಕದ ವ್ಯಾಯಾಮೋತ್ಸಾಹಿಗಳ ಪ್ರಥಮ ಪರಿಷತ್ತು ಇದಕ್ಕೆ ಕರ್ನಾಟಕದ ಪ್ರಸಿದ್ಧ ವ್ಯಾಯಾಮಪಟುಗಳಾದ ಬೆಂಗಳೂರಿನ ಶ್ರೀಯುತ ಕೇ. ವ್ಹಿ. ಅಯ್ಯರ ಇವರು ಅಧ್ಯಕ್ಷರಾಗುವರು. ಪರಿಷತ್ತಿನ ಮುಂದೆ ಬರತಕ್ಕ ಮುಖ್ಯ ವಿಷಯವೆಂದರೆ ಅಖಿಲ ಕರ್ನಾಟಕದ ವ್ಯಾಯಾಮ ಶಾಲೆಗಳ ಉಪಯೋಗಕ್ಕಾಗಿ ವಾರ್ಷಿಕ ವ್ಯಾಯಾಮ ಶಿಕ್ಷಣ ಪದ್ಧತಿ (Graduated Course of Physical-culture) ಯೊಂದನ್ನು ತಯಾರಿಸುವುದು.

ಈ ಕಾಲಕ್ಕೆ ಕರ್ನಾಟಕದಲ್ಲಿ ರಾಜಕೀಯ ಕೆಲಸಗಳಲ್ಲಿ ತೊಡಗಿರುವ ಎಲ್ಲ ಕೆಲಸಗಾರರೂ ವ್ಯಾಯಾಮ ಪ್ರೇಮಿಗಳೂ ದಯವಿಟ್ಟು ಬಂದು ತಮ್ಮ ಜ್ಞಾನದ ಮತ್ತು ಅನುಭವದ ಸಂಪೂರ್ಣ ಸಹಾಯವನ್ನು ಕೊಟ್ಟು ಮೇಲಿನ ಕಾರ್ಯಗಳನ್ನು ಯಶಸ್ವಿಯಾಗಿ ಮಾಡಿಕೊಡಬೇಕೆಂದು ಆಗ್ರಹಪೂರ್ವಕ ವಿನಂತಿಯಿದೆ.

ಹಿಂದುಸ್ಥಾನೀ ಸೇವಾದಲ, } ನಾ. ಸು. ಹರ್ಡೀಕರ,
ಹುಬ್ಬಳ್ಳಿ ೮—೭—೨೯. } ಕಾರ್ಯದರ್ಶಿ.

ವಿದೇಶೀ ವಸ್ತ್ರ ಬಹಿಷ್ಕಾರ.

ಹಿಂದೂದೇಶದಲ್ಲಿ ತಯಾರಾದ ಹಾಗೂ ವಿದೇಶಗಳಿಂದ ಆಮದಾದ ವಸ್ತ್ರಗಳ ಕಳೆದ ೫೪ ವರ್ಷಗಳ ಲೆಕ್ಕ [illegible] ಒಟ್ಟಿನಲ್ಲಿ ವರ್ಷ ಒಂದರ ಸರಾಸರಿ 18 ಗಜ ವಸ್ತ್ರ ಬೇಕಾಗುವುದೆಂದೂ ಯುದ್ಧಕಾಲದಲ್ಲಿ ಬರೇ 8 ಗಜಗಳಷ್ಟು ವಸ್ತ್ರ ಉಪಯೋಗಿಸಲ್ಪಟ್ಟಿದೆಯೆಂದೂ ತಿಳಿಯುತ್ತದೆ. ಆ [illegible] ಗಜ ವಸ್ತ್ರವು ಪರದೇಶಗಳಿಂದ ಆಮದಾಗುತ್ತದೆ. [illegible] ಗಜ ವಸ್ತ್ರವು ಹಿಂದೂ [illegible] ಅಥವಾ ಕೈಮಗ್ಗಗಳಲ್ಲಿ ತಯಾರಾಗುತ್ತದೆ. ಆದುದರಿಂದ ವಿದೇಶೀ ವಸ್ತ್ರ ಬಹಿಷ್ಕಾರ [illegible] ಗಜ ವಸ್ತ್ರದ ಉತ್ಪತ್ತಿಯನ್ನು ಹೆಚ್ಚಿಸಬೇಕಾಗುತ್ತದೆ. ಹಿಂದೀ [illegible] ಕೋಟಿ ಅಂದರೆ [illegible] ಕೋಟಿ ಗಜ ವಸ್ತ್ರವು ತಯಾರಾಗಬೇಕಾಗಿದೆ. [illegible] 35 [illegible] ವನೆಂದು ಲೆಕ್ಕಮಾಡಿ, ವರ್ಷಕ್ಕೆ [illegible] ನೂಲು ಪಡೆದಿದ್ದರೆ. ವರ್ಷಾವಧಿ [illegible] ಗಜ ವಸ್ತ್ರ ತಯಾರಾಗುತ್ತದೆ. ಅಂದರೆ [illegible] ಕೋಟಿ ಗಜ ವಸ್ತ್ರ ತಯಾರಿಸಲಿಕ್ಕೆ 48 ಲಕ್ಷ ನೂಲುವವರು ಬೇಕಾಗುವರು. ಹಿಂದೂದೇಶದಲ್ಲಿ [illegible] ಲಕ್ಷ ಚರಕಗಳಲ್ಲಿ [illegible] ಲಕ್ಷ ಚರಕಗಳು ಮಾತ್ರ ನಡೆಯುತ್ತಲಿವೆ. ಆದುದರಿಂದ ಉಳಿದ ಚರಕಗಳನ್ನು ಪ್ರಚಾರಕ್ಕೆ ತರುವುದೇ ಪ್ರಾರಂಭದ ಕೆಲಸವಾಗಿದೆ. 32 ಕೋಟಿ ಜನಸಂಖ್ಯೆಯೊಳಗೆ ಇಷ್ಟನ್ನು ದೊರಕಿಸಿಕೊಳ್ಳುವುದು ಅಸಾಧ್ಯವೇ?

ಆದುದರಿಂದ ಪ್ರತಿ [illegible] ಜನರಿಗೆ [illegible] ಮಾಡುವಂತೆ [illegible] ನೂಲುವ ಕಾರ್ಯವನ್ನು ಕೈಕೊಂಡದ್ದಾದರೆ ನಮ್ಮ ಕಾರ್ಯ ಸಾಧನೆಯಾಗುತ್ತದೆ. [illegible] ನಿಮಿಷಗಳಲ್ಲಿ ವರ್ಷಾವಧಿ [illegible] ಕನಿಷ್ಠಪಕ್ಷ [illegible] ಸಂಖ್ಯೆಯು 11 ಕೋಟಿ ಇರುತ್ತದೆ. ಅದರ [illegible] ಲಕ್ಷ ಜನರು ಮಾತ್ರ ನೂಲು ನೂಲಲು ಪ್ರಾರಂಭಿಸಿದುದಾದರೆ, ಅವರ [illegible] ಅವಶ್ಯವಾಗಿ ಬೇಕಾಗುವಷ್ಟು ಹೆಚ್ಚಿನ ವಸ್ತ್ರವು ತಯಾರಾಗುತ್ತದೆ. [illegible] ಅವರಿಗೆ [illegible] ಹೆಚ್ಚಿನ ಉತ್ಪನ್ನವಾಗುವುದಲ್ಲದೆ, ಅವರ [illegible] ಸಂಬಂಧ [illegible] ಬಡಜನರ [illegible] ಅವರೇ [illegible] ಆದುದರಿಂದ ಈ ಕೆಳಗಿನ ಕಾರ್ಯಗಳನ್ನು [illegible] ಕೈಕೊಳ್ಳಬೇಕಾಗುವುದು:—

1 ವಿದೇಶೀ ಬಟ್ಟೆಯ ಬದಲಿಗೆ ಖಾದಿ ಉಪಯೋಗಿಸುವೆನೆಂದು ಕೊಳ್ಳುವುದು.

2 ಖಾದಿ ಕಾರ್ಯಕ್ಕೆ ದ್ರವ್ಯಸಹಾಯ ಮಾಡುವುದು.

3 ದೇಶಪ್ರೇಮಪೂರ್ವಕವಾದರೂ ತ್ಯಾಗಬುದ್ಧಿಯಿಂದ ದಿನಕ್ಕೆ ಕಡಿಮೆಯೆಂದರೆ ಅರ್ಧ ಗಂಟೆಯಾದರೂ ನೂಲುವುದು.

ಕೂಡಲೇ, ಈಗಲೇ, ಈ ಹೊತ್ತೆ ಕಾರ್ಯಕ್ಕೆ ಸಿದ್ಧರಾಗಿರಿ

... Public Conveyance Motor Service.
CHIKMAGALUR.
...ಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

ಟೆಲಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾವರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಗಂಟೆ ಅವಕಾಶ ಕೊಟ್ಟು 7¼ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ ಚಾವರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾವರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಸುಪ್ರಸಿದ್ಧ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟ್ಯಾಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾವರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡ್ರಾಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೆಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಸ್ಪ್ಯಾರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವತಿ ಕಲಾವತಿ ಮಾರ್ಗವಾಗಿಯೂ ಬಂಟವಾಳ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಸುಳಿ. ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವದಾದರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವದಾದರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಶಂಕರ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore S. K.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ.

O. P. No. 37/1929.

ಶಿವಪ್ಪ ಮರಕಾಲ—ಅರ್ಜಿದಾರ.

ಮತ್ತು

ಶಂಕರ ಮರಕಾಲ ಕೂಡಾ 2 ಜನರು—ಎದ್ರಿ ಅರ್ಜಿದಾರರು.

ಇವರೊಳಗೆ

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನಂದರೆ:—

ಅರ್ಜಿದಾರನು ತನ್ನ ಸಹೋದರ ಇತ್ತಲಾಗೆ ಮೃತಪಟ್ಟ ರಾಮುದಾಲಪ್ಪ ಮರಕಾಲನಿಗೆ ಇನ್ಸೂರಿನ ಬಾಬ್ತು ಬರತಕ್ಕ ಐವೇಜನ್ನು ವಸೂಲು ಮಾಡುವ ಬಗ್ಗೆ ತನಗೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಈ ಕೋರ್ಟಿಗೆ ಮಹಜರು ಮಾಡಿಕೊಂಡಿದ್ದಾನೆ. ಸದ್ರಿ ಅರ್ಜಿಯು ತನ್ಖಿಯ ಬಗ್ಗೆ ತಾ. 21-8-29ಕ್ಕೆ ಇಟ್ಟಿದೆ. ಯಾರಾದರೂ ಆಕ್ಷೇಪಿಸುವದಾದರೆ ಸದ್ರಿ ತಾರೀಕಿನಲ್ಲು ಕೋರ್ಟ ಮುಂದೆ ಬೆಳಿಗ್ಗೆ ಘಂಟೆ 11ಕ್ಕೆ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ತಾ. 15—7—1929. } K. L. Kudva.
Karkal } Pleader for Petitioner.

ಪುತ್ತೂರು ಡಿ. ಮುನ್ಸೀಫ ಕೋರ್ಟಿನಲ್ಲಿ.

O. P. ನಂಬ್ರ 60/1929.

ಅರ್ಜಿದಾರ—ಕೇಶವ ಯೆಳಚಿಲ್ಲಾಯ,

ಯೆದ್ರಿರು—ಸುಬ್ಬಮ್ಮ ಕೂಡಾ

ಯೆದ್ರಿರ ಗಂಡ ಹಾಲ ಮೃತಪಟ್ಟ ಮುಚ್ಚಿನ ನಾರಾಯಣ ಜೋಗಿತ್ತಾಯರಿಗೆ ಕಾವಳಮೂಡೂರು ಗ್ರಾಮದ ಕಾದೆ ದಾಸಾಚಾರ್ಯರ ಮಗ ಶ್ರೀನಿವಾಸಾಚಾರ್ಯರು ತಾ. 7—4—1926ರಲ್ಲು ರೂಪಾಯಿ 300ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಹಕ್ಕು ಮೃತನ ವಿಧವೆ ಸುಬ್ಬಮ್ಮನು ಅರ್ಜಿದಾರಗೆ ಎಂಡೋರ್ಸ್ ಮಾಡಿಕೊಟ್ಟಂತೆ ಸದ್ರಿ ಹ್ಯಾಂಡು ವಸೂಲಿಯ ಕುರಿತು ತನಗೆ ವಾರಿಸ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ಮೇಲ್ಕಂಡ ಅರ್ಜಿ ದಾಖಲು ಮಾಡಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಇದೇ ಬರುವ ಆಗೋಸ್ತು ತಾರೀಕು 7ಕ್ಕೆ ಈ ಕೋರ್ಟ ಮುಂದೆ ಖುದ್ದಾಗಿ ಆಗಲೀ ಕ್ರಮವಾಗಿ ಅಧಿಕಾರಹೊಂದಿದ ಮುಖ್ತಾಲೀಕರ ಮುಖಾಂತರವಾಗಲೀ ಬೆಳಿಗ್ಯೆ ಘಂಟೆ 10ಕ್ಕೆ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದು.

ತಾ. ... 25ನೇ } (Sd) M. Shiva Rao,
ಜುಲಾಯಿ, 1929. } *Pleader for petitioner.*

ದಿ ಕೆನರಾ ನರ್ಸರಿ.

ಕಸಿ ಮಾವಿನ ಗಿಡಗಳು. ಸಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಿಲ್ಲಾ, ಬೇರಳೆ, ಚಿಕ್ಕು, ದ್ರಾಕ್ಷಿ, ಅಂಜೂರ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಕಡೆಗೂ ಮಲೆನಾಡಿಗೂ ಒಗ್ಗದೆ ಸರಿಯಾಗಿ ಫಲ ಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್ನ್‌ಸ್ಟ್ರೀಟ್ ಡಿಪೋ ಮತ್ತು ಯಾಜಿಯವರಲ್ಲಿ ದೊರೆಯುವವು.

ಕೆ. ಮಂಜಪ್ಪ ಶೆಟ್ಟಿ } ಕೆ. ವಾಮನ ಶೆಣೈ
ದಿ. ಕೆನರಾ ನರ್ಸರಿ, } C/o ಶಾರದಾ ಛಾಪಖಾನೆ,
ಬೆಂದೂರುಗಾರ್ಡನ್ಸ್, ಕಾಪು ಪೋ. } ರಥಬೀದಿ. ಮಂಗಳೂರು ... ...
13|1928

THE COMMONWEALTH ASSURANCE CO., LIMITED, POONA CITY

ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ,
ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ರಾಭದಾಯಕವಾದ ಮತ್ತು ಅತ್ಯುತ್ತಮವಾದ ಪಾಲಿಸಿಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು.

2 ಅನಸ್ಪೀಕರು, ಪ್ರತಿಷ್ಠಿತರು ಆದ ಡ್ಯಾರೆಕ್ಟರರು.

3 ಹುಂಡಾ ಅನುಭವದ ವ್ಯವಸ್ಥಾಪಕ, ವಿಶ್ವಾಸಯುತ ಮತ್ತು ಸೌಹಾರ್ದದ ವರ್ತನೆ.

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಕರಾರುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ತ ಮತ್ತು ಪರಿಶ್ರಮಿಯಾದ ಏಜಂಟರುಗಳು ಬೇಕಾಗಿರುವರು.

ಪ್ರಸ್ತಾಪಗಳಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಲ್. ಕಾಶಿನಾಥ ಭಟ್ಟ, ಪಿ. ಅಭಯಶಂಕರ ದೇಶಪಾಂಡೆ
ಸ್ಪೆಷಲ್ ಏಜಂಟ್ ಚೀಫ್ ಮತ್ತು ಕಂಪ್ನಿ,
ಪಚ್ಚನಾಡಿ ಗ್ರಾಮ, ಮೆನೇಜಿಂಗ್ ಏಜಂಟ್ಸ್.
ಕನ್ನಡ ಫೂಡ್ಸ್ ದ. ಕ.

ಜಾನುವಾರು ರೋಗ ನಿವಾರಣೆ.

(ಮದ್ರಾಸ್ ಕೌನ್ಸಿಲ್ ಬಜೆಟ್ ಮೀಟಿಂಗಿನಲ್ಲಿ ವೆಟರ್ನರಿ ಖಾತೆಗೆ ಹಣ ಮಂಜೂರು ಮಾಡುವ ಸಂದರ್ಭದಲ್ಲಿ ಶ್ರೀ ಎ. ಕೆ. ಶೆಟ್ಟಿ ಅವರು ಅದರ ವಿಷಯವನ್ನು ಚರ್ಚಿಸಲು ಸೂಚಿಸಿ ತಂದು ಮಾಡಿದ ಭಾಷಣ.)

ಜಾನುವಾರುಗಳ ರೋಗ ರುಜಿನ ಮತ್ತು ಅವುಗಳ ನಿವಾರಣೋಪಾಯದ ಕುರಿತು ವ್ಯವಸಾಯ ಕಮಿಶನಿನವರು ಪರಾಮರ್ಶಿಸಿರುವರು. ರೋಗಗಳಿಗೆ ತುತ್ತಾಗಿ ಸಾಯುವ ಜಾನುವಾರುಗಳಿಂದ ಒಕ್ಕಲಿಗರಿಗೆ ಬಹಳ ಹಾನಿಯಾಗುತ್ತದೆ. ಸರಕಾರದ ರಿಪೋರ್ಟು ಪಡೆಯುವುದಕ್ಕಿಂತಲೂ ಅತಿ ಹೆಚ್ಚಿನ ಜಾನುವಾರುಗಳು ಮರಣಹೊಂದುತ್ತವೆ. ರೋಗ ಗುಣಹೊಂದಿ ಉಳಿದ ಜಾನುವಾರುಗಳು ಕೂಡ ದುರ್ಬಲವಾಗಿದ್ದು ವ್ಯವಸಾಯಕ್ಕೆ ತೊಡಕುಂಟಾಗುತ್ತದೆ. ಒಕ್ಕಲಿಗರು ಪಶುಗಳನ್ನು ಕೊಂಡುಕೊಳ್ಳುವುದಕ್ಕಾಗಿ ಸಹಕಾರಿ ಸಂಘಗಳಿಂದ ಪಡೆದುಕೊಳ್ಳುವ ಹಣದ ಪ್ರಮಾಣದಿಂದ ಜಾನುವಾರು ರೋಗದಿಂದಾಗುವ ನಷ್ಟದ ಅಭಿಪ್ರಾಯ ಮಾಡಿಕೊಳ್ಳಬಹುದು. ಇದು ಹೊರತು ದೇಶದಲ್ಲಿ ಸಾಂಕ್ರಾಮಿಕ ರೋಗಗಳು ಹಬ್ಬಿರುವುದರಿಂದ ಜಾನುವಾರು ಪೀಳಿಗೆಯನ್ನು ವೃದ್ಧಿಗೊಳಿಸಲು ಯಾವ ಖಾಸಗಿ ಯತ್ನವೂ ನಡೆಸಲು ಸಾಧ್ಯವಿರುವುದಿಲ್ಲ. ವ್ಯವಸಾಯ ಕಮಿಶನಿನವರು ಯುಕ್ತ ಸೂಚನೆಯಿತ್ತಿರುವಂತೆ ವೆಟರ್ನರಿ ಖಾತೆಯ ಪ್ರಬಲ ಕರ್ತವ್ಯವೆಂದರೆ ಸಾಂಕ್ರಾಮಿಕ ರೋಗಗಳನ್ನು ನಿಗ್ರಹಿಸುವುದು. ಉದಾಹರಣೆಗಾಗಿ ಗೋಮಾರಿ ರೋಗವು ಹಿಂದೂ ದೇಶದ ಘೋರ ರೋಗವಿದ್ದು ಅದಕ್ಕೆ ಬಲಿಬೀಳುವ ಜಾನುವಾರುಗಳೇ ಅಧಿಕವಾಗಿವೆ. ಈ ರೋಗವನ್ನು ನಿರ್ಮೂಲಿಸಲು ಅಥವಾ ಫಲಕಾರಿಯಾಗಿ ಹತೋಟಿಗೆ ತರಲು ಸಾಧ್ಯವಿದೆಯೆಂದು ಪಾಶ್ಚಾತ್ಯ ದೇಶಗಳ ಅನುಭವದಿಂದ ವೇದ್ಯವಾಗುತ್ತದೆ. ಸರಕಾರವು ಗೋಮಾರಿ ರೋಗವನ್ನು ಈ ದೇಶದಿಂದ ಹುಟ್ಟಡಗಿಸಲು ಕೆಲಸಮಾಡಿದರೆ ಬೇಸಾಯಗಾರರಿಗೆ ನಿಜವಾದ ಉಪಕಾರಮಾಡಿದಂತಾಗುವುದು. ವ್ಯವಸಾಯ ಕಮಿಶನಿನವರು ಈ ರೋಗವನ್ನು ಜಯಶೀಲವಾಗಿ ನಿರೋಧಿಸಬೇಕಾದರೆ ಕೈಕೊಳ್ಳುವ ಅವಶ್ಯವಿರುವ ಕಾರ್ಯಗಳ ಕುರಿತು ಚರ್ಚಿಸಿ, ಜಾನುವಾರುಗಳಿಗೆ ದಾಕು ಹಾಕುವ ಕ್ರಮವನ್ನು ಜಾರಿಗೆ ತರುವುದೇ ಅದಕ್ಕೆ ಫಲಪ್ರದವಾದ ಹಂಚಿಕೆಯೆಂದು ನಿರ್ಧರಿಸಿರುವರು. ಮೈಸೂರಿನ ಅನುಭವವು ಇದನ್ನು ಸಮರ್ಥಿಸುವುದಾಗಿದೆ. ವೆಟರ್ನರಿ ಖಾತೆಯವರು ಪಶುಗಳಿಗೆ ದಾಕು ಹಾಕುವ ವಿಷಯದಲ್ಲಿ ಇತ್ತಲಾಗಿ ವಿಶೇಷ ಆಸ್ಥೆಯನ್ನಿಟ್ಟಿರುವರೆಂಬುದು ಸಮಾಧಾನಕರವಿದೆ. ಆದರೆ ಗೋಮಾರಿಯಂತಹ ಭಯಂಕರ ರೋಗವನ್ನು ತಡೆಗಟ್ಟಬೇಕಾದರೆ ಜಾನುವಾರುಗಳಿಗೆ ದಾಕು ಹಾಕಲು ಹೆಚ್ಚಿನ ಸಿಬ್ಬಂದಿಯೂ ಹಣವೂ ಬೇಕಾಗಿದೆ. ವೆಟರ್ನರಿ ಅಸಿಸ್ಟಂಟ್ ಸರ್ಜನರ ಸಂಖ್ಯೆಯನ್ನು ಹೆಚ್ಚಿಸಿದರೂ ಯೋಗ್ಯತೆಯುಳ್ಳವರು ಉದ್ಯೋಗ ನೋಡಲು ಸಾಕಷ್ಟು ದೊರೆಯದ ಕಾರಣ ವರ್ಷಾಂತ್ಯದಲ್ಲಿ ೧೩ ಸ್ಥಾನಗಳು ಖಾಲಿಬಿದ್ದಿರುತ್ತವೆಂದು ತಿಳಿದುಬರುತ್ತದೆ. ಆದರೆ ಮದ್ರಾಸಿನ ವೆಟರ್ನರಿ ಕಾಲೇಜಿನಲ್ಲಿ ಕಲಿತವರು ಮದ್ರಾಸ್ ಪ್ರಾಂತ್ಯದಲ್ಲಿ ನೌಕರಿಗಾಗಿ ಕಾದು ಕಾದು ಸಾಕಾಗಿ ಮೈಸೂರು ನಾಗಪುರ ಮೊದಲಾದ ಇತರ ಸ್ಥಳಗಳಿಗೆ ಹೋಗುವರೆಂದು ನಾನು ಕೇಳುತ್ತೇನೆ. ಇಂಥವರನ್ನು ಗೋಮಾರಿ ರೋಗವನ್ನು ತಡೆಗಟ್ಟಲು ದಾಕು ಹಾಕುವ ಕೆಲಸಕ್ಕಾಗಿ ತಾತ್ಕಾಲಿಕವಾಗಿ ನೇಮಿಸಿ ಅವಶ್ಯ ದಿಕ್ಕಿಗೆ ಅವರನ್ನೇಕೆ ಕಳುಹಿಸಬಾರದು? ಇದರಿಂದ ಗೋಮಾರಿ ರೋಗ ನಿರೋಧಕ ಕಾರ್ಯವನ್ನು ಬಹಳವಾಗಿ ಮುಂದುವರಿಸಿದಂತಾಗುವುದು. ಪ್ರಾಂತದ ಯಾವುದಾದರೊಂದು ಭಾಗದಲ್ಲಿ ಗೋಮಾರಿ ರೋಗವು ತಲೆದೋರಿದಾಗ ಕೂಡಲೆ ಅಲ್ಲಿಗೆ ಕೆಲಸಕ್ಕಾಗಿ ಕಳುಹಿಸಲ್ಪಡುವಂತೆ ಆರಿಸಲ್ಪಟ್ಟ ವೆಟರ್ನರಿ ಅಸಿಸ್ಟಂಟರುಗಳ ರಿಸರ್ವ್ ಸಿಬ್ಬಂದಿಯೊಂದರ ಏರ್ಪಾಡು ಮಾಡಬೇಕೆಂದು ವ್ಯವಸಾಯ ಕಮಿಶನಿನವರು ಸೂಚಿಸಿರುವರು. ಇಂತಹ ಸಿಬ್ಬಂದಿಯೊಂದು ಈ ಕಾರ್ಯವನ್ನು ಮಾಡಬೇಕಾದರೆ ಅದರಲ್ಲಿ ಸಾಕಷ್ಟು ಮಂದಿ ಕೆಲಸಮಾಡಲಿರಬೇಕು. ಗೋಮಾರಿ ರೋಗವು ಹತೋಟಿಗೆ ತರಲ್ಪಡದಿರುವ ವರೆಗೆ ಕೆಲವೇ ಮಂದಿಯಿರುವ ರಿಸರ್ವ್ ಸಿಬ್ಬಂದಿಯಿಂದ ಪ್ರಯೋಜನಕಾರಿ ಕೆಲಸಮಾಡಲು ಸಾಧ್ಯವಿಲ್ಲ.

ಗೋಮಾರಿ ನಂಜು ಮತ್ತು ದಾಕುಹಾಕುವ ರಸತಯಾರಿಸುವ ವ್ಯವಸ್ಥೆ.

ಗೋಮಾರಿ ನಂಜು ಈಗ ಮದ್ರಾಸಿನ ವೆಟರ್ನರಿ ಕಾಲೇಜಿನಲ್ಲಿ ತಯಾರಿಸಲ್ಪಡುತ್ತದಾದರೂ ಅದು ಪ್ರಾಂತದ ಬೇರೆ ಬೇರೆ ಕಡೆಗಳಿಗೊದಗಿಸಿಕೊಡಲು ಸಾಕಾಗುವುದಿಲ್ಲ. ಉಟಕಮಂಡಿನಲ್ಲಿ ಮತ್ತು ಹೊಸೂರು ಜಾನುವಾರು ಕ್ಷೇತ್ರದಲ್ಲಿ ದಾಕು ಹಾಕಲ್ಪಟ್ಟ ಅನೇಕ ಜಾನುವಾರುಗಳು ೬ ತಿಂಗಳ ನಂತರ ಗೋಮಾರಿ ರೋಗ ತಗಲಿ ಸತ್ತುಹೋದವು. ನಂಜಿನ ಸಾಮರ್ಥ್ಯವು ಕಡಿಮೆಯಾಗಿದ್ದುದರಿಂದಲೇ ಹೀಗೆ ಮರಣ ಉಂಟಾಗಲು ಕಾರಣವೆಂದು ತಿಳಿದುಬರುತ್ತದೆ. ಈ ನಂಜಿನ ಸಾಮರ್ಥ್ಯವು ಒಂದು ವಾರದ ತನಕ ಮಾತ್ರ ಉಳಿಯುತ್ತದೆಂದು ತಿಳಿದುಬರುತ್ತದೆ. ಮೊದಲು ನಂಜನ್ನು ಮುಕ್ತೇಶ್ವರದಿಂದ ತರಿಸುತ್ತಿದ್ದರು. ಹೀಗೆ ಒಂದು ದಿಕ್ಕಿನಿಂದ ಇನ್ನೊಂದೆಡೆ ಒಯ್ಯಲ್ಪಡುವಾಗ ಅದರ ಶಕ್ತಿಯು ಕಳೆದುಹೋಗಿರಬಹುದು. ಈ ನಂಜನ್ನು ವೆಟರ್ನರಿ ಕಾಲೇಜಿನಲ್ಲೇ ತಯಾರಿಸುವರಾದರೂ ಆ ಬಗ್ಗೆ ಇಬ್ಬರು ಅಸಿಸ್ಟಂಟರು ಮಾತ್ರ ಕೆಲಸಮಾಡುತ್ತಿದ್ದು ಅವರು ಅದರೊಂದಿಗೆ ತಮ್ಮ ಇತರ ಕೆಲಸವನ್ನೂ ಮಾಡಿಕೊಳ್ಳಬೇಕಾಗಿರುವುದರಿಂದ ಅವರಿಂದ ಅದನ್ನು ಬೇಕಷ್ಟು ಪ್ರಮಾಣದಲ್ಲಿ ತಯಾರಿಸಲಸಾಧ್ಯವಾಗಿದೆಯೆಂದು ನಾನು ತಿಳಿಯುತ್ತೇನೆ. ಕೆಲವು ವೇಳೆ ಈ ನಂಜಿನ ದಾಕು ಹಾಕಿದ ೮-೧೦ ದಿವಸಗಳಲ್ಲಿ ಜಾನುವಾರು ಸಾಯುವ ಸಮಾಚಾರವು ಹಳ್ಳಿಗಳಿಂದ ಬಂದಿರುತ್ತದೆ. ದಾಕಿನ ರಸವು ಸಶಕ್ತವಾಗದಿರುವುದೇ ಇಂತಹ ಮರಣಗಳಿಗೆ ಕಾರಣವೆಂದು ಭಾವಿಸಲಾಗಿದೆ. ಮುಕ್ತೇಶ್ವರದಲ್ಲಿ ಮೊದಲಾಗಿ ಮತ್ತು ಎರಡನೇ ಸಲದ ರಕ್ತಸ್ರಾವದಿಂದ ತಯಾರಿಸಲ್ಪಡುವ ದಾಕಿನ ರಸವನ್ನು ಅಲ್ಲಿಯ ಗುಡ್ಡಗಳ ಜಾನುವಾರುಗಳ ಉಪಯೋಗಕ್ಕಾಗಿ ಅಲ್ಲಿಯೇ ಇರಿಸಲ್ಪಡುತ್ತದೆಂದೂ, ಮೂರನೇ ಸಲದ ರಕ್ತಸ್ರಾವದ ಹೀನತರದ ರಸ ಮಾತ್ರ ಇಲ್ಲಿಗೆ ಕಳುಹಿಸಲ್ಪಡುತ್ತದೆಂದೂ ತಿಳಿದುಬರುತ್ತದೆ. ಆದುದರಿಂದ ದಾಕಿನ ರಸ ಮತ್ತು ಗೋಮಾರಿ ರೋಗನಿರೋಧಕ ನಂಜನ್ನು ನಾವು ಇಲ್ಲಿಯೇ ತಯಾರಿಸುವ ವ್ಯವಸ್ಥೆ ಮಾಡುವುದು ಅಗತ್ಯವಾಗಿದೆ ಮತ್ತು ನಮಗೆ ಬೇಕಾದಷ್ಟು ಸಂಗ್ರಹವು ನಮ್ಮಲ್ಲಿರತಕ್ಕದ್ದು.

ಕಡ್ಡಾಯವಾಗಿ ದಾಕುಹಾಕಬೇಕು.

ಗೋಮಾರಿ ರೋಗ ಹಬ್ಬಿರುವ ಪ್ರದೇಶಗಳಲ್ಲಿ ಜಾನುವಾರುಗಳಿಗೆ ಕಡ್ಡಾಯವಾಗಿ ದಾಕು ಹಾಕುವಂತಾಗಬೇಕು. ಸರ್ವ ಸಾಮಾನ್ಯ ಒಕ್ಕಲಿಗನ ಜಾನುವಾರುಗಳಿಗೆ ಕಡ್ಡಾಯವಾಗಿ ದಾಕು ಹಾಕುವುದು ಉಚಿತವಲ್ಲೆಂದು ವ್ಯವಸಾಯ ಕಮಿಶನಿನವರು ತಮ್ಮ ವರದಿಯಲ್ಲಿ ಹೇಳುತ್ತಾರೆ. ಮದ್ರಾಸಿನಂತಹ ನಗರಗಳಲ್ಲಿ ಗೌಳಿಗರ ಗೋವುಗಳ ರಕ್ಷಣೆಗಾಗಿ ಕಡ್ಡಾಯವಾಗಿ ದಾಕು ಹಾಕಬೇಕೆಂದು ಸೂಚಿಸುತ್ತಾರೆ. ಬಳ್ಳಾರಿ ಮತ್ತು ನೆಲ್ಲೂರಿನಲ್ಲಿ ಗೋಮಾರಿ ರೋಗವು ಹಬ್ಬಿದಾಗ ಕಡ್ಡಾಯವಾಗಿ ದಾಕು ಹಾಕಿದುದರಿಂದ ಸತ್ಪರಿಣಾಮವಾಗಿದೆಯೆಂದು ತಿಳಿಯುತ್ತೇನೆ. ವೆಟರ್ನರಿ ಪೋಲೀಸ್ ಪಡೆಗಳಿಂದ ರೋಗ ಪ್ರಸಾರವನ್ನು ತಡೆಗಟ್ಟುವ ಅಧಿಕಾರವು ಸರಕಾರಕ್ಕಿಲ್ಲದಿದ್ದರೆ ಚೆನ್ನಾಗಿ ತರಬೇತಾದ ಸಿಬ್ಬಂದಿಯು ಎಷ್ಟಿದ್ದರೂ ಗೋಮಾರಿ ರೋಗ ಸಾಂಕ್ರಾಮಿಕವನ್ನು ನಿಗ್ರಹಿಸಲು ಸಾಧ್ಯವಿಲ್ಲ. ಜಾನುವಾರುಗಳ ಸಂಚಾರವನ್ನು ನಿಯಮಿತಗೊಳಿಸಿ ರೋಗಪೀಡಿತವಾದುವುಗಳನ್ನು ಪ್ರತ್ಯೇಕವಿರಿಸಿ ದಾಕು ಹಾಕುವ ವ್ಯವಸ್ಥೆಮಾಡಲು ಸರಕಾರಕ್ಕೆ ಸಾಧ್ಯವಾಗುವಂತಾಗಬೇಕು.

೧೩ನೇ ಪುಟಕ್ಕೆ ಮುಂದುವರಿಸಿಯದೆ.

ನಿಮಗಾಗಿ ಕಾದಿರುವ

ಮಕ್ಕಳಿರುವವು.

ಬಂಜೆಯಾದ ಹೆಂಗಸಿನ ಮನಸ್ಸಿನ ಸ್ಥಿತಿಯನ್ನು ಅರಿತಿರುವಿರಾ? ಅದನ್ನು ಮನುಷ್ಯನು ವರ್ಣಿಸಲಾರನು. ಅವಳಲ್ಲಿ ಫಲಿಸಲಾರದ ಅಪೇಕ್ಷೆಯು ತುಂಬಿರುವದು. ಜೀವನದ ಪೂರ್ಣ ಅಂಶವು ಅವಳ ಭಾಗ್ಯಕ್ಕಿಲ್ಲವು. ರಾತ್ರಿಹಗಲು, ಅವಳು ತನ್ನ ಅದೃಷ್ಟವನ್ನೇ ದೂರಿ, ತಮ್ಮ ಮಕ್ಕಳನ್ನು ಮುದ್ದಾಡುವ ಸುಖಿಗಳಾದ ತಾಯಂದಿರನ್ನು ಕಂಡೊಡನೆ ಮತ್ಸರವುಳ್ಳವಳಾಗುವಳು.

ಅಂತಹ ಹೆಂಗಸರಿಗೆ ಆಶೆಯನ್ನೂ ಉತ್ಸಾಹವನ್ನೂ ಹೆಚ್ಚಿಸಲು ನಮ್ಮ ಕೂಡೆ ಫೆಲೂನಾ ಮಾತ್ರೆ ಇದೆ. ವೈದ್ಯಕೀಯ [illegible] ಬಂಜೆತನವೆಂಬ [illegible]. ಬಂಜೆತನವು ಒಳಗಣ ಇಂದ್ರಿಯಗಳ [illegible] ಉಂಟಾಗುವದು. [illegible] ಇರಬಹುದು.

ಹೆಂಗಸರ ಫೆಲೂನಾ ಮಾತ್ರೆಗಳ ಮುಖ್ಯ ಕೆಲಸವೇನೆಂದರೆ ಅಂತಹ ಅಂತರಿಂದ್ರಿಯಗಳನ್ನು ಬಲಪಡಿಸಿ, ಸರಿಯಾಗಿ ಕೆಲಸ ಮಾಡುವಂತೆ ಸರಿಗೊಳಿಸುವವು. ಹೀಗಾದ ಮೇಲೆ ಮಕ್ಕಳು ಹುಟ್ಟುವವು.

ಇಷ್ಟು ಮಾತ್ರವಲ್ಲ. ಫೆಲೂನಾ ಮಾತ್ರೆಗಳು ರಕ್ತವನ್ನು ಹೆಚ್ಚಿಸಿ, ಆಹಾರ ಜೀರ್ಣಾಂಗಗಳನ್ನು ಸ್ವಚ್ಛಗೊಳಿಸುವವು. ಆರೋಗ್ಯದ [illegible] ಕೊಟ್ಟು ಸಂತೋಷಗೊಳಿಸುವವು.

[illegible] ಜೀವನವೇ ಉತ್ಸಾಹಭರಿತವೂ ಆನಂದಭರಿತವೂ ಆಗುವದು. [illegible] ಅವಳ ಸುಖಿಯಾಗಿರುವಳು.

ವಾಚಕರೆ! ನಿಮ್ಮಲ್ಲಿ ಯಾರಾದರೂ ಮಕ್ಕಳಿಲ್ಲದಿರುವಿರೆ? ಅವಕ್ಕೆಲ್ಲ ತಕ್ಕ ಕಾರಣಗಳಿವೆ.
ಫೆಲೂನಾ ಮಾತ್ರೆಗಳು ಅವುಗಳನ್ನು ಹೋಗಲಾಡಿಸಲಿ!



ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಸ್ಟೋರ್ಸ್‌ಗಳಲ್ಲೂ ಕೆಮಿಸ್ಟರಲ್ಲೂ ಉತ್ತಮ ಫೆಲೂನಾ ಮಾತ್ರೆಗಳು [illegible] ಬಾಟಲಿಗೆ ರೂ. [illegible]

ದಿ ರಿಪ್ರಸೆಂಟೇಟಿವ್,
ಪೋಸ್ಟ್ ಬಾಕ್ಸ್ 750, ಮುಂಬಯಿ.

ದಾದಾ ಎಂಡ್ ಕೋ.,
[illegible] ಬಜಾರ್ ರೋಡ್, ಮದರಾಸ.

ಗರ್ಭವತಿ ಮೊದಲಾದವುಗಳಿಗೆ ಫೆಲೂನಾ ಮಾತ್ರೆಗಳು [illegible]

ದಕ್ಷಿಣ ಆಫ್ರಿಕದ ಕೇಪ್ ಟೌನಿನ ಗ್ರಿಕ್ ರೆಮಿಡೀಸ್ ಇವರಿಂದ ತಯಾರಿಸಲ್ಪಟ್ಟಿತು.

N - 2a

[illegible] ತಾಲೂಕು ಬೋರ್ಡಿನ ಹೊಸ ಧೋರಣೆಯ ವಿದ್ಯಾಭ್ಯಾಸ.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಆದರೆ ಈಗ ಅನುಸರಿಸಬೇಕಾಗಿರುವುದು ಹೆತ್ತವರ ಮಧ್ಯೇತವೇ ಸರಿ. ಮಕ್ಕಳ ಆರೋಗ್ಯದ ಕುರಿತು ಎಚ್ಚರಿಕೆ ತೆಗೆದುಕೊಳ್ಳಲು, ಅವರು ಅಲ್ಲಲ್ಲಿ ನೇಮಿಸಿದ ಡಿಸ್ಪೆನ್ಸರಿಗಳ ಡಾಕ್ಟರರ ಮೂಲಕವಾದರೂ, ಅವರವರ ಹೋಬಳಿಗೆ ಸೇರಿದ ಶಾಲೆಗಳನ್ನು ಸಂದರ್ಶಿಸಿ ಮಕ್ಕಳ ಆರೋಗ್ಯದ ಕುರಿತು ಜಾಗ್ರತೆ ತೆಗೆದುಕೊಳ್ಳುವಂತೆ, ಗ್ರಾಮಸ್ಥರ ಸಭೆಗಳನ್ನು ಸೇರಿಸಿ ಭಾಷಣಗಳ ಮೂಲಕವೂ, ಮ್ಯಾಜಿಕ್ ಲ್ಯಾಂಟರ್ನ್ ಮೂಲಕವೂ ಪ್ರದರ್ಶಿಸುವಂತೆ ಮಾಡಿಸುವುದು ಅಧ್ಯಕ್ಷರ ಕೆಲಸವಿದೆ. ಈ ಸಂಸ್ಥಾನದ ಬೇರೆಬೇರೆ ಹಳ್ಳಿಗಳ ಶಾಲೆಗಳಲ್ಲಿ, ಮಕ್ಕಳು ಶಾಲೆಗೆ ಬಂದೊಡನೆಯೇ, ಕೈ ಕಾಲು ಮುಖ ತೊಳೆದು ಶಾಲೆಗೆ ಪ್ರವೇಶಿಸುವಂತೆಯೂ, ಅವರಿಗೆ ಕುಡಿಯಲಿಕ್ಕೆ ಒಳ್ಳೆಯ ನೀರನ್ನು ಒದಗಿಸುವಂತೆಯೂ ಕಟ್ಟಳೆಗಳನ್ನು ಮಾಡಿರುತ್ತಾರೆ. ಆದರೆ ನಮ್ಮ ಬೋರ್ಡಿನಲ್ಲಂತೂ ಈ ಎಲ್ಲಾ ಏರ್ಪಾಡಿಯ ಮೊದಲು, ಮಕ್ಕಳಿಗೆ ವಿದ್ಯಾಭ್ಯಾಸ ಹೊಂದಲು ಸರಿಯಾದ ಶಾಲಾ ಕಟ್ಟಡ ಸರಿಯಾದ ಶಾಲಾಸಾಮಗ್ರಿಗಳು ಇಲ್ಲದೇ ಇರುವಲ್ಲಿ, ಮೇಲೆ ಹೇಳಿದ ಸರಬರಾಯಿಗಳನ್ನು ಒದಗಿಸಿಕೊಳ್ಳುವುದೆಂದರೆ ಅದೇನೋ ಕಷ್ಟವೇ ಸರಿ. ಇಲ್ಲಿನ ಹೆಚ್ಚಿನ ವಿದ್ಯಾಭ್ಯಾಸ ಮಂದಿರಗಳೆಂದರೆ, ದೇವಸ್ಥಾನದ ಹೊಗಸಾಲೆ, ದೈವಸ್ಥಾನಗಳೇ ಸರಿ. ಇವುಗಳಲ್ಲಾದರೂ ಕೆಲವೇ ಶಾಲೆಗಳನ್ನು ಇಟ್ಟುಕೊಂಡು ಅಲ್ಲಿ ಸರಿಯಾದ ಶಿಕ್ಷಣವು ದೊರೆಯುವಂತೆ ಮಾಡುವುದು ನಮ್ಮ ಅಧ್ಯಕ್ಷ ಮಹಾಶಯರಿಗೇನೋ ಬಹಳ ಕಠಿಮೆಯಾಗಿ ಕಾಣುತ್ತದೆ. ಸುಮ್ಮನೇ ನೂರಾರು ಶಾಲೆಗಳನ್ನು ಇಟ್ಟುಕೊಂಡು, ಮಕ್ಕಳು ಇದ್ದಲ್ಲಿ ಉಪಾಧ್ಯಾಯರು ಇಲ್ಲದಂತೆಯೂ, ಮಕ್ಕಳು ಇಲ್ಲದಲ್ಲಿ ಹಲವು ಜನ ಉಪಾಧ್ಯಾಯರನ್ನು ನೇಮಕಮಾಡುವುದಾದರೂ, ಇವರ ಯಾವ ದೊಂದು ತರದ ಆಡಳಿತ [illegible]

[illegible]

'ಲೋಧ್ರ'ದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಶೀಸೆಯಿಂದಲೇ ಗುಣವಾಯಿತು.

ಶ್ರೀಮತಿ ಎಸ್. ಕನಕಮ್ಮ, ಕೇರಾಫ್ ಎಸ್. ನರಸಯ್ಯ, ಗ್ರಾಮ ಮ್ಯಾಜಿಸ್ಟ್ರೇಟ್, [illegible] ಇವರು ಬರೆದಿರುವುದು— ನಿಮ್ಮ ಒಂದು ಸಣ್ಣ ಬಾಟಲ್ ಲೋಧ್ರವನ್ನು ಉಪಯೋಗಿಸಿದ ಮಾತ್ರದಿಂದಲೇ ಗುಣವುಂಟಾಯಿತು. ಒಂದು ದೊಡ್ಡ ಶೀಸೆ ಲೋಧ್ರವನ್ನು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

ಶ್ರೀಮತಿ ಇಂದಿರಾಕುಮಾರಿ ದೇವಿ, ಮೆಟ್ಟೂರು, ಇವರು ಬರೆದಿರುವುದು—

ಸ್ವಾಮಿ, ನಾನು ಈಗ ತಮ್ಮ ಲೋಧ್ರವನ್ನು ಸೇವಿಸುತ್ತಿದ್ದೇನೆ. ಇದಕ್ಕೆ ಮುಂಚೆ ನನ್ನ ಋತುಕಾಲದಲ್ಲಿ ಬಹಳ ಬಾಧೆಯುಂಟಾಗುತ್ತಿತ್ತು ಮತ್ತು ಕ್ರಮತಪ್ಪಿ [illegible] ದಿನಗಳೊಳಗಾಗಿಯೇ ಬಹಿಷ್ಟೆಯಾಗುತ್ತಿದ್ದೆನು. [illegible] ವರ್ಷಗಳಕಾಲ ಆಂಗ್ಲ ಔಷಧಾಲಯಗಳಲ್ಲಿ ಔಷಧಿ ಸೇವಿಸಿಯೂ ಪ್ರಯೋಜನವಿಲ್ಲದಿರಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಹೇಳಿದರು. ಆದರೆ ನಾನು ಸಮ್ಮತಿಸಲಿಲ್ಲ. ಅನಂತರ ತಮ್ಮ ಪ್ರಸಿದ್ಧವಾದ ಲೋಧ್ರ ಎರಡು ಬಾಟಲ್ ತರಿಸಿ ಸೇವಿಸಿದೆನು. ಅಂದಿನಿಂದ ಕ್ರಮವಾಗಿ [illegible] ದಿನಕ್ಕೊಂದುಸಲ ಬಾಧೆಯಿಲ್ಲದೆ ಬಹಿಷ್ಟೆಯಾಗುತ್ತ ಸುಖವಾಗಿದ್ದೇನೆ. ಮಿಕ್ಕ ಇತರ ಬಾಧೆಗಳೂ ನಿವೃತ್ತಿಯಾಗಿವೆ. ದಯಮಾಡಿ ಈಗ ಎರಡು ಬುಡ್ಡಿ ಲೋಧ್ರ ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ಮಾಯವಾಯಿತು.

ಶ್ರೀಮತಿ ಜಯ ಲಕ್ಷ್ಮಮ್ಮ, ಬಾಲಿಕಾ ಪಾಠಶಾಲೆ, ಕುಣಿಗಲ್, ಇವರು ಬರೆದಿರುವುದು—

ಕಳೆದ ಮೂರು ವರುಷಗಳಿಂದಲೂ ನನಗೆ ಮುಟ್ಟು ಸರಿಯಾಗಿ ಆಗುತ್ತಿಲ್ಲ. [illegible] ಅಥವಾ [illegible] ತಿಂಗಳಿಗೊಂದುಸಾರಿಯಾಗುತ್ತಿದ್ದಿತು. ಈ ಸಂದರ್ಭಗಳಲ್ಲಿ ಸೊಂಟನೋವು, ಕಿಬ್ಬೊಟ್ಟೆ ನೋವು, ಮತ್ತು ನಿಶ್ಶಕ್ತಿಯುಂಟಾಗಿ ಬಹಳ ಕಷ್ಟಪಡುತ್ತಿದ್ದೆನು. ಈ ಸಮಯದಲ್ಲಿ ತಮ್ಮ 'ಲೋಧ್ರ' [illegible] ಬುಡ್ಡಿ ತರಿಸಿ ಸೇವಿಸಿದೆನು. ಅಂದಿನಿಂದ ಈ ಬಾಧೆಗಳೆಲ್ಲಾ ಮಾಯವಾಗಿ ಸಕಾಲಕ್ಕೆ ಬಹಿಷ್ಟೆಯಾಗುತ್ತ ಶರೀರಾರೋಗ್ಯವನ್ನು ಅನುಭವಿಸುತ್ತಿದ್ದೇನೆ. ಈ ದಿವ್ಯೌಷಧಿಯನ್ನು ಇಲ್ಲಿನ ಇನ್ನು ಸೇವಿಸಬೇಕೆಂದಿರುವುದರಿಂದ ಇನ್ನೂ ಎರಡು ಬುಡ್ಡಿ [illegible] ಕಳುಹಿಸುವುದು. ಸ್ತ್ರೀಯರ ಎಲ್ಲಾ ವ್ಯಾಧಿಗಳಿಗೂ 'ಲೋಧ್ರ'ವು ದಿವ್ಯೌಷಧಿಯೆಂದು ನಾನು ಖಂಡಿತವಾಗಿಯೂ ಹೇಳುತ್ತೇನೆ.

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ: "ಕೇಸರಿ" ಫೋನ್ 8486.

ಏಜಂಟರು— [illegible] ಕಂಪೆನಿ, (ದಿ ಊಲನ್ ಮಾರ್ಟ್) ಮಂಗಳೂರು.

[illegible]

ಮುಂದರಿಯುವುದು.

"ಅಸ್ಪೃಶ್ಯರ ನೆರೆನಿವಾರಕ ಸಮಿತಿ".

ಮುಂಬೈ [illegible] ಅಧಿಕೃತವಾದ [illegible] ಆರ್ಯ ಸಮಾಜ ಸಭಾ, ಕರ್ನಾಟಕ (ಫೋರ್ಟು) ಆರ್ಯಸಮಾಜ, [illegible] ಸ್ಟ್ರೀಟು, ಮತ್ತು ಹಲವು ಹಿತಚಿಂತಕರಿಂದ ಕೂಡಿದ ಒಂದು ಸಮಿತಿಯು, ಕ್ಷಾಮದಿಂದ ನರಳುವ ಸಮ್ಮಂಧ ಉಂಟಾದ ಮುಖಂಡರಾಗಿ, ಪ್ರಿನ್ಸಸ್ ಸ್ಟ್ರೀಟ್, [illegible], ಕಲ್ಬಾದೇವಿ, ಜವೇರಿ ಬಜಾರ್, ಮುಂತಾದ ಕಡೆಗಳಿಗೆ [illegible] ರಹವಾಗಿ ಹೋಗಿ, [illegible] ಎರಡು ಗಾಡಿ ತುಂಬ ವಸ್ತ್ರಗಳನ್ನು ಸಂಗ್ರಹಿಸಿ, ಹಿಂದುಸ್ಥಾನ ಸೇವಾ ಸಮಿತಿ (Servents of India Association)ಯ ದ್ವಾರ [illegible] ಅನಾಥ ದುಃಖಿತರಿಗೆ [illegible] ಸಹಾಯಮಾಡಿತು.

ಸ್ವಾತಂತ್ರ್ಯ ರಕ್ಷಣೆಯ ಕೊನೆಯ ಸಾಹಸ.

(ಅರ್. ರ್ಯಾಟ್ನ ರಿಜ್ ವರ್ಡ್ ಬ್ಯಾ ಏ ರಾಯಟರ್)

ನಾನು ಈಗ ಹೇಳುವ ಮಾತು ಇಂದಿನದಲ್ಲ; ನಿನ್ನಿನದಲ್ಲ; ಮೊನ್ನಿನದಲ್ಲ; ಹದಿಮೂರು ನೂರು ವರುಷಗಳ ಹಿಂದಿನದು. ನಾನೇ ಆಗಲಿ, ಮತ್ತೆ ಯಾರೇ ಆಗಲಿ, ಸಾವಿರಾರು ವರುಷಗಳ ಹಿಂದಿನ ಮಾತನ್ನು ಹೇಳಬೇಕಾದರೆ, ಬೇರೊಂದು ಇತಿಹಾಸವು ಆಧಾರವಿರಲೇಬೇಕೆಂದು ಯಾರಿಗಾದರೂ ತಿಳಿಯುವಂತಿದೆ. ಇತಿಹಾಸವು ಸಾವಿರಾರು ವರುಷಗಳ ಹಿಂದಿನ ಮಾತೇಕೆ? ಕೋಟ್ಯಾವಧಿ ವರುಷಗಳ ಹಿಂದಿನ ಮಾತನ್ನಾದರೂ ಹೇಳುತ್ತದೆ. ಆದರೆ ಅದನ್ನು ಬರೆಯುವವರು—ಇತಿಹಾಸವನ್ನು ಬರೆಯುವವರು ತಾಮ್ರ ಪಟಗಳ—ಶಿಲಾಲೇಖಗಳ—ನಾಣ್ಯಗಳ—ಇತಿಹಾಸಗಳ ಆಧಾರವನ್ನು ತೆಗೆದುಕೊಳ್ಳಲಿಕ್ಕೆ ಬೇಕು. ನಿಜ ಸಂಗತಿಗಳನ್ನು ಇತಿಹಾಸದಿಂದ ತೆಗೆದುಕೊಂಡು, ಅಥವಾ ಶಿಲಾಲೇಖ—ತಾಮ್ರ ಪಟಗಳ ಆಧಾರದಿಂದ ಶೋಧಿಸಿಕೊಂಡು, ಬರೆಯುವದೇ ಸಪ್ರಮಾಣವಾದ ಇತಿಹಾಸವೆನಿಸುತ್ತದೆ. ಹೊರತು ಬೇರೊಂದು ಇತಿಹಾಸವೆನಿಸದು; ಕಾದಂಬರಿ ಎಂದು ಮಾತ್ರ ಅನಿಸುತ್ತದೆ. ಹದಿಮೂರು ನೂರು ವರುಷಗಳ ಹಿಂದಿನ ಇತಿಹಾಸವು ನಮ್ಮ ಭರತಖಂಡದ ವಿಷಯಕ್ಕೆ ಏನು ಹೇಳುತ್ತದೆ? ಈಗಿನ ಬಲುಚಿಸ್ಥಾನ, ಅಫಘಾನಿಸ್ಥಾನ ಮುಂತಾದ ದೇಶಗಳಲ್ಲಿಯೂ ಅವುಗಳ ಸುತ್ತುಮುತ್ತಲಿರುವ ಪ್ರದೇಶಗಳಲ್ಲಿಯೂ ಹಿಂದೂ ಸಂಸ್ಕೃತಿಯು ಮತ್ತು ಸ್ವಾತಂತ್ರ್ಯದ ಬಾವುಟವು ಬಹಳ ಅಭಿಮಾನದಿಂದ ಫಡಫಡಿಸುತ್ತಿತ್ತು. ಯಾಕಂದರೆ ಆ ದೇಶಗಳೂ ಆ ಪ್ರದೇಶಗಳೂ ಈ ದೇಶದಲ್ಲಿಯೇ ಸಮಾವೇಶವಾಗಿದ್ದವು. ಅನೇಕ ಶತಕಗಳ ವರೆಗೆ ನಿರ್ಬಂಧವಾಗಿಯೂ ಮನಸೋಕ್ತವಾಗಿಯೂ ಸ್ವಾತಂತ್ರ್ಯವನ್ನು ಉಪಭೋಗಿಸಿದ ನಂತರ—ಹಿಂದೂ ಸಂಸ್ಕೃತಿಯ ಬಾವುಟವು ಫಡಫಡಿಸಿದ ನಂತರ—ಭಾರತೀಯ ಸ್ವಾತಂತ್ರ್ಯ ಲಕ್ಷ್ಮಿಯು ಶ್ರಾಂತಳಾದಳು; ಮುಹಮ್ಮದೀಯರ ಹಾವಳಿಯ ದೊಡ್ಡ ದೊಡ್ಡ ತೆರೆಗಳು ಹಿಂದೂಸ್ಥಾನದಲ್ಲಿ ಬಹಳ ಭರದಿಂದ ನುಗ್ಗಹತ್ತಿದವು; ಅಬ್ಬರದಿಂದ ಅಪ್ಪಳಿಸಹತ್ತಿದವು.

ಮಧ್ಯ ಏಶ್ಯಾ, ಮಿಸರ, ಆಫ್ರಿಕಾಖಂಡ, ಯುರೋಪಖಂಡದ ಕೆಲವು ಭಾಗಗಳಲ್ಲಿ ಮುಹಮ್ಮದೀಯರ ವಿಜಯಚಂದ್ರನು ಥಳಥಳಿಸಹತ್ತಲು, ಮುಹಮ್ಮದಾನುಯಾಯಿಗಳ ದೃಷ್ಟಿಯು ಸುವರ್ಣ ಭೂಮಿ ಎಂದು ಒಪ್ಪುವ ಭರತಖಂಡದ ಮೇಲೆ ಬಿತ್ತು. ಆ ದೃಷ್ಟಿಯು ಅವರಿಗೆ ಸುವರ್ಣ ದೃಷ್ಟಿಯಂತೆ ಆಯಿತು; ಭಾರತೀಯರಿಗೆ ಅದು ವಿಷಪೂರ್ಣ ದೃಷ್ಟಿಯೇ ಆಯಿತೆಂದು ಹೇಳಬಹುದು. ಯಾಕಂದರೆ, ಅನೇಕ ವರುಷಗಳ ವರೆಗೆ ತನ್ನ ನಿವಾಸ ಸ್ಥಾನವನ್ನು ಮಾಡಿಕೊಂಡಿದ್ದ ಲಕ್ಷ್ಮಿಯು ತನ್ನ ಸ್ವಭಾವಸಿದ್ಧವಾದ ಚಾಂಚಲ್ಯದ ಮೂಲಕ ಹಿಂದೂಸ್ಥಾನದ ಕಡೆಗೆ ಬೆನ್ನು ತಿರುಗಿಸಿದಳು. ಅಲ್ಲಿಂದ ಕೇಳುವದೇನದೆ? ಮನೆ-ಮನೆಗಳಲ್ಲಿಯೂ, ಸಮಾಜ-ಸಮಾಜಗಳಲ್ಲಿಯೂ ಒಡಕು-ಸಿಡಕುಗಳು ಹುಟ್ಟಿದವು; ಮಾತ್ಸರ್ಯವು ಒಂದು ಹೆಜ್ಜೆಯನ್ನು—ಅನೇಕ ಹೆಜ್ಜೆಗಳನ್ನು ಮುಂದಿಟ್ಟಿತು; ಕಲಹ-ಕೋಪವೆಂಬ ಪಿಶಾಚಿಯು ಥಳ್ ಥೈ-ಥಿರ್ ಕಾನ್ ಎಂದು ಕುಣಿಯಹತ್ತಿತು. ಇದರಿಂದ ಭಾರತ ವರ್ಷದ ಯಶೋಶಿಖರವು ಮಣ್ಣುಗೂಡಿತು; ಭಾರತ ವರ್ಷದ ಸ್ವಾತಂತ್ರ್ಯ ಸೂರ್ಯನು ಅಸ್ತಾಚಲವನ್ನು ಸೇರಿದನು!

ಮುಸಲ್ಮಾನರ ದೃಷ್ಟಿಯು ಹಿಂದೂಸ್ಥಾನದ ಮೇಲೆ ಬಿತ್ತು. ಆಗ್ಗೆ ಕಾಬೂಲದಲ್ಲಿ ಹಿಂದೂ ರಾಜನು—ಜಯಪಾಲನು ರಾಜ್ಯವಾಳುತ್ತಿದ್ದನು; ಅಲ್ಲಿ ಹಿಂದೂ ಧರ್ಮವು—ಸನಾತನವೈದಿಕ ಧರ್ಮವು ಪ್ರಸಾರದಲ್ಲಿತ್ತು. ಮುಸಲ್ಮಾನರ ಅಬ್ಬರಕ್ಕೆ ಜಯಪಾಲನು ತತ್ತರಿಸಿ ಹೋದನು. ಅದ್ದರಿಂದ ಮುಹಮ್ಮದ ಗಜನಿಯು ಕಾಬೂಲವನ್ನೂ ಅದರ ಸುತ್ತುಮುತ್ತಲಿನ ಪಂಜಾಬ ಪ್ರಾಂತವನ್ನೂ ತನ್ನ ಸ್ವಾಮಿತ್ವಕ್ಕೆ ಒಳಪಡಿಸಿಕೊಂಡನು. ಇದರಿಂದ ಮುಸಲ್ಮಾನರ ಅಧಿಕಾರವು ಹಿಂದೂಸ್ಥಾನದಲ್ಲಿ ಸ್ಥಿರವಾಯಿತು; ಆದರೆ ಸಂಪೂರ್ಣ ಹಿಂದೂಸ್ಥಾನವನ್ನು ಮುಹಮ್ಮದೀಯರಿಗೆ ಗಳಗ್ರಾಸ ಮಾಡಲಿಕ್ಕೆ ಬರಲಿಲ್ಲ. ಹಿಂದಕ್ಕೆ ಆರ್ಯರು ಅನಾರ್ಯರನ್ನು ಹಿಂದಕ್ಕೆ ಸರಿಸಿ, ತಮ್ಮ ಹೆಜ್ಜೆಯನ್ನು ಮುಂದೆ ಇಡಬೇಕಾದರೆ, ಅವರಗೂಡ ಹೇಗೆ ಬಡಿದಾಡುತ್ತಿದ್ದರೋ ಹಾಗೇ ಮುಸಲ್ಮಾನರು ಹಿಂದುಗಳ ಹೆಜ್ಜೆಯನ್ನು ಹಿಂದಕ್ಕೆ ಸರಿಸಬೇಕಾದರೆ, ಪ್ರತಿಯೊಂದು ಸರ್ತಿಯೂ ಬಡಿದಾಡಲೇ ಬೇಕಾಗುತಿತ್ತು; ಹೊಡೆದಾಡಲೇ ಬೇಕಾಗುತಿತ್ತು. ಅನ್ಯರ ಕೈಯೊಳಗಿನ ವಸ್ತುವನ್ನು ಕಸಕೊಳ್ಳಬೇಕಾದರೆ, ಯುಕ್ತಿಪ್ರಯುಕ್ತಿಗಳನ್ನಾದರೂ ಹೂಡಬೇಕು; ಇಲ್ಲವೆ ಶಕ್ತಿಯನ್ನಾದರೂ ಉಪಯೋಗಿಸಬೇಕು. ಇವುಗಳ ಹೊರತು ಪರಹಸ್ತಗತ ವಸ್ತುವು ಎಂದೂ ತಮ್ಮ ಕೈ ಸೇರದು. ಅಂದಮೇಲೆ ಹಿಂದೂ ಜನರು ತಮ್ಮ ಸ್ವಾತಂತ್ರ್ಯವನ್ನು ಅನ್ಯರ ವಶಕ್ಕೆ ಹೇಗೆ ಬಿಟ್ಟುಕೊಟ್ಟಾರು? ಅವರು ತಮ್ಮ ಜೀವ ಮೀರಿ ಯುದ್ಧ ಮಾಡಿದ್ದರಲ್ಲಿ ಆಶ್ಚರ್ಯವೇನು? ಮಾಡದಿದ್ದರೆ ಮಾತ್ರ ಆಶ್ಚರ್ಯವು. ಆದರೂ ಪ್ರತಿಯೊಂದು ಯುದ್ಧದಲ್ಲಿ ಮುಸಲ್ಮಾನರಿಗೇ ಜಯ ದೊರಕಿದೆ. ಯಾಕಂದರೆ—ಅವರಲ್ಲಿದ್ದ ಶೌರ್ಯವು ಹಿಂದುಗಳಲ್ಲಿರಲಿಲ್ಲ; ಅವರಲ್ಲಿದ್ದ ಯುದ್ಧೋಪಕರಣಗಳು ಹಿಂದುಗಳಲ್ಲಿರಲಿಲ್ಲ; ಅವರಲ್ಲಿದ್ದಷ್ಟು ಒಗ್ಗಟ್ಟು ಹಿಂದುಗಳಲ್ಲಿರಲಿಲ್ಲ. ಆದರೂ ಸ್ವಾತಂತ್ರ್ಯದ ಸಲುವಾಗಿ ಆತ್ಮದಾನ ಮಾಡುವಂಥ ವೀರಾಧಿವೀರರು ಹಿಂದುಗಳಾಗಿದ್ದರೆಂದು ಬಹಳ ಅಭಿಮಾನದಿಂದ ಹೇಳುತ್ತೇನೆ. ಆದರೆ ಆ ವೀರರೆಲ್ಲರು ಏಕೀಕರಣರಾಗಿ, ಪರಕೀಯರ ದಂಡಿಗೆ ಪ್ರತಿಭಟರಾಗಿ ನಿಂತಿದ್ದರೆ, ಅವರಿಗೇ ನಿಶ್ಚಯವಾಗಿ ಜಯವು ದೊರಕುತ್ತಿತ್ತು. ಆದರೆ, ಅವರಲ್ಲಿದ್ದ ಸ್ವಾರ್ಥವೂ ಮತ್ಸರವೂ ದ್ವಿಧಾಗವೂ ಅವರನ್ನು ಒಂದುಮಾಡಗೊಡಲಿಲ್ಲ. ಅದ್ದರಿಂದ ಹಿಂದೂಸ್ಥಾನದ ಸ್ವಾತಂತ್ರ್ಯವು ಪಾರತಂತ್ರ್ಯದ ರೂಪಾಂತರವನ್ನು ಹೊಂದಿತು, ಮತ್ತು ಹಿಂದೂಸ್ಥಾನದ ಬಹು ದೊಡ್ಡ ಭಾಗವು ಹಿಂದೂ ಧರ್ಮದಿಂದ ಬೇರೆಯಾಯಿತು. ಬಲುಚಿಸ್ಥಾನ, ಅಫಘಾನಿಸ್ಥಾನದಲ್ಲಿದ್ದ ಹಿಂದೂ ಧರ್ಮೀಯರು ಮುಹಮ್ಮದೀಯರಾದರು! ಹಿಂದೂ ಧರ್ಮದ ಒಡೆಯು ಅಂದಿನಿಂದ ಪ್ರಾರಂಭವಾದದ್ದು ಇಂದಿನ ವರೆಗೆ ನಡೆದ ಅದೆ. ಈ ಹಾನಿಯು ತುಂಬಬಾರದ ಹಾನಿಯಾಗಿರುತ್ತದೆಂದು ಯಾವ ಹಿಂದುವು ಮನದಲ್ಲಿ ಮಿಡುಕಲಿಕ್ಕಿಲ್ಲ! ಮಿಡುಕಿ ಮಾಡುವದೇನು? ಅಂತಃಕರಣಪೂರ್ವಕವಾಗಿ ಮಿಡುಕುತ್ತಿದ್ದರೆ, ಶುದ್ಧಿ-ಸಂಘಟನ ಕಾರ್ಯಕ್ಕೆ ಬೆಂಬಲಕೊಡಿರಿ, ಆ ಕಾರ್ಯದಲ್ಲಿ ಧುರೀಣರಾಗಿ ನಿಲ್ಲಿರಿ; ಮಹಾತ್ಮಾ ಗಾಂಧಿಯವರ ಚಳವಳಿಯಲ್ಲಿ ಭಾಗವಹಿಸಿರಿ; ಖಾದೀ ಖಾದೀ ಎಂಬ ಚತುರಾಕ್ಷರೀ ಮಂತ್ರವನ್ನು ಜಪಿಸಿರಿ, ಹಿಂದೂಸ್ಥಾನೀ ಸೇವಾದಲದಲ್ಲಿ ಸೈನಿಕರಾಗಿರಿ—ನಿಮ್ಮ ಕಾರ್ಯವು ಸಿದ್ಧಿಯಾಗುವದು.

ಇಸ್ಲಾಮಿ ಧರ್ಮವನ್ನು ಹಬ್ಬಿಸಿ, ಅಪರಿಮಿತ ದ್ರವ್ಯವನ್ನು ಸುಲಿಗೆ ಮಾಡಿ, ಮಹಮ್ಮದನು ಗಜನಿಯಲ್ಲಿ ಮರಣ ಹೊಂದಿದನು. ಮೃತ್ಯು ಸಮಯದಲ್ಲಿ ಅವನು ಅತ್ಯಂತ ಪರಿಶ್ರಮದಿಂದ ದೊರಕಿಸಿದಂಥ ರತ್ನ-ಸುವರ್ಣದ ರಾಶಿಗೆ ರಾಶಿಯನ್ನೇ ಸುರುವಿಸಿಕೊಂಡು "ಇಷ್ಟೆಲ್ಲ ಧನ ರಾಶಿಯನ್ನು ಹೇಗೆ ಬಿಟ್ಟು ಸಾಯಲಿ?" ಎಂದು ದೊಡ್ಡ ಧ್ವನಿ ತೆಗೆದು ಅತ್ತನೆಂದು ಹೇಳುತ್ತಾರೆ. "ಆಶೆ ತುಂಬಿದ ಮೇಲೆ ಕ್ಷಣಮಾತ್ರ ಇರಲಿಲ್ಲ; ಅತ್ತರೊಳು ಪುರಂದರ ವಿಠಲನ್ನು ಮನದೇ" ಎನುವಂತೆ ಅತ್ತರೇನು? ಕರೆದರೇನು? ಎದೆ ಎದೆ ಬಡಕೊಂಡರೇನು? ಆಯುಷ್ಯವು ತುಂಬಿದ ಬಳಿಕ ಒಂದು ಕ್ಷಣ ಹೊತ್ತಾದರೂ ಆ ವ್ಯಕ್ತಿಯು ಲೋಕದಲ್ಲಿ ಇರಗೊಡುವರೇ? ಮಹಮ್ಮದ ಗಜನಿಯ ಮೃತ್ಯು ನಂತರ ಅವನು ಮಾಡಿ ಇಟ್ಟಂಥ ವ್ಯವಸ್ಥೆಯು ಬಹು ದಿನಗಳ ವರೆಗೆ ಬಾಳಲಿಲ್ಲ. ಅವನ ಸಂತಾನದಲ್ಲಿಯೇ ಕಲಹ ಉತ್ಪನ್ನವಾಯಿತು. ಅವನ ವಂಶದವರು ದುರ್ಬಲರೂ ಧೈರ್ಯ ಹೀನರೂ ಇದ್ದರು. ಫಿರೋಜ ಕೋಟೆಯಲ್ಲಿದ್ದಂಥ ಅಲ್ಲಾವುದ್ದೀನ ಘೋರಿಯು ಗಜನಿಯ ಮೇಲೆ ದಾಳೀ ಮಾಡಿ ಅಲ್ಲಿದ್ದ ಬಹರಾಮಶಹನೆಂಬ ಅಧಿಕಾರಿಯ ಅಧಿಕಾರವನ್ನು ಮುರಿದು ಮೂಲೆಗೊತ್ತಿ ತನ್ನ ಅಧಿಕಾರವನ್ನು ಕೂಡ್ರಿಸಿದನು. ಅಲ್ಲಿಯ ಜನರ ಕುತ್ತಿಗೆಗಳನ್ನು ಹುಲ್ಲಿನಂತೆ ಚರಚರನೆ ಕೊಯ್ಯಿಸಿದನು; ದೊಡ್ಡ ದೊಡ್ಡ ರಾಜ ಮಂದಿರಗಳನ್ನು ನೆಲಸಮ ಮಾಡಿಸಿದನು; ಮತ್ತು ಗಜನೀ ಪಟ್ಟಣಕ್ಕೆ ಬೆಂಕಿ ಹಚ್ಚಿಸಿ, ಅದನ್ನು ಬೇಚಿರಾಖಮಾಡಿದನು. ಈ ಪ್ರಕಾರ ಮಹಮ್ಮದನ ಮೃತ್ಯು ನಂತರ ಅಲ್ಪ ಕಾಲದಲ್ಲಿಯೇ ಅವನ ವಂಶಜ ಮನೆಗಳು ಅನ್ಯರ ವಶವಾಗಲು, ಅವರು ಹಿಂದುಸ್ಥಾನಕ್ಕೆ ಬಂದರು. ಅವರಿಗೂ ಹಿಂದೂಸ್ಥಾನವು ಆಶ್ರಯಕೊಟ್ಟಿತು. "ವಿಷವೆರೆಯುವವರಿಗೆ ಹಾಲೆರೆಯುವದರಲ್ಲಿ ಹಿಂದೂಸ್ಥಾನವೆಂಬ ಆಕಳವು ಕೊಡಗೈಯಂತಿರುತ್ತದೆಂದು ಹಿಂದೂಸ್ಥಾನದ ಇತಿಹಾಸದಲ್ಲಿ—ಜಗತ್ತಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲಿಕ್ಕೆ ಏನು ತೊಂದರೆ ಅದೆ?" ಆದರೆ ಮಹಮ್ಮದ ಗಜನಿಯ ವಂಶಜರು, ಹಿಂದೂಸ್ಥಾನದಲ್ಲಿ ಭಾಳ ಕಾಲದ ವರೆಗೆ ಮಾತ್ರ ನಿಲ್ಲಲಿಲ್ಲ; ಇಷ್ಟೆ ಅಲ್ಲ, ಅವರ ಉತ್ತರಾಧಿಕಾರವು ಬಹಳೇ ವಿಪನ್ನಾವಸ್ಥೆಯಿಂದ ಮುಕ್ತಾಯವನ್ನು ಹೊಂದಿತು. ಹಿಂದೂಸ್ಥಾನವು ಗಜನಿಯ ಮನೆತನದವರ ಉಪಟಳದಿಂದ ಮುಕ್ತ ಹೊಂದಿತೆಂಬುದೇನೋ ನಿಜ; ಆದರೆ ಮಹಮ್ಮದ ಗಜನಿಯ ಸ್ಥಳದಲ್ಲಿ, ಮಹಮ್ಮದ ಘೋರಿಯು ಬಂದನು. "ಬೇಸತ್ತು ಬೇರೆಯಾದರೂ ಅತ್ತೆ ತನ್ನ ಪಾಲಿಗೆ ಬಂದೇಬಿಟ್ಟಳು" ಎಂಬಂತೆ ಹಿಂದೂಸ್ಥಾನವು ಪಾರತಂತ್ರ್ಯದಿಂದೇನೂ ಮುಕ್ತಹೊಂದಲಿಲ್ಲ. ಮತ್ತು ಮಹಮ್ಮದ ಘೋಜನಿಯ ಕಾಲದಲ್ಲಿ ಹಿಂದೂ ಜನರು ಸ್ವಾತಂತ್ರ್ಯ ಯುದ್ಧದ ಕೌಶಲ್ಯವನ್ನು ತೋರಿಸಿದರು. ಇದೇ ಅವರು ಮಾಡಿದ ಸ್ವಾತಂತ್ರ್ಯ ಯುದ್ಧದ ಕೊನೆಯ ಸಾಹಸವು!

ಅಲಾವುದ್ದೀನ ಘೋರಿಯು ಸತ್ತ ನಂತರ ಅವನ ಬಂಧುವಾದ ಮುಹಮ್ಮದ ಘೋರಿಯು ಸೈನ್ಯಾಧಿಕಾರಿಯಾದನು. "ನಾನು ಧರ್ಮ ಯುದ್ಧವನ್ನು ಹೂಡಿದ್ದೇನೆ. ಮುಹಮ್ಮದ ಪೈಗಂಬರರು ಸ್ಥಾಪಿಸಿದ ಧರ್ಮದ ಅಭಿಮಾನವು ನಿಜವಾಗಿ ನಿಮಗಿದ್ದರೆ ನೀವು ನನಗೆ ಸಹಾಯಮಾಡಿರಿ" ಎಂದು ಅವನು ಅನ್ನಲು, ಧರ್ಮ ಬುದ್ಧಿಯಿಂದ ಎಚ್ಚರ ಹುಟ್ಟಿದ ಐವತ್ತು ಸಾವಿರ ತರುಣ ತುರ್ಕರು ಮುಹಮ್ಮದೀಯ ಧರ್ಮದ ಧ್ವಜದ ಕೆಳಗೆ ಒಟ್ಟುಗೂಡಿದರು; ಅವರು ಹಿಂದೂಸ್ಥಾನದ ಕಡೆಗೆ ತಮ್ಮ ಮುಖವನ್ನು ತಿರುಗಿಸಿದರು. ಆ ಮುಖವೇ ಭಾರತೀಯರಿಗೆ ರಾಹುಮುಖವಾಯಿತು.

ಸಕೇತ.
ಆರ್. ವಿ. ಜಹಗೀರದಾರ
ನಾಗರಹಳ್ಳಿ.

೧೧ನೇ ಪುಟದಿಂದ ಮುಂದುವರಿಸಿದುದು

ಜಾನುವಾರು ರೋಗವಿಷಯಕವಾದ ಆಕ್ಟೊಂದು ಮದ್ರಾಸ ಪ್ರಾಂತದಲ್ಲಿ ೧೮೬೬ನೇ ಇಸವಿಯಷ್ಟು ಹಿಂದೆಯೇ ಮಂಜೂರಾಗಿರುವುದೆಂಬುದರಲ್ಲಿ ಸಂದೇಹವಿಲ್ಲ. ಈ ಆಕ್ಟಿನ ಮೇರೆಗೆ ಜಿಲ್ಲೆಯ ಅಧಿಕಾರಿಗಳು ಕೂಡಲೆ ಸ್ವಯಂನವಾದರೂ ಅವುಗಳನ್ನು ಫಲಕಾರಿಯಾಗಿ ಜ್ಯಾರಿಗೆ ತರುವುದು ಕಷ್ಟವಾಗಿದೆ. ಇದೇ ಹಿಂದೂ ದೇಶಕ್ಕಾಗಿ ಪಶುಗಳ ಅಂಟುರೋಗಗಳ ಆಕ್ಟೊಂದನ್ನು (Contagious Diseases of Animals Act) ಜ್ಯಾರಿಗೆ ತರಬೇಕೆಂದು ವ್ಯವಸಾಯ ಕಮಿಶನಿನವರು ಸೂಚಿಸಿರುತ್ತಾರೆ. ಜಾನುವಾರು ರೋಗನಿವಾರಣೆಯ ವಿಷಯದಲ್ಲಿ ಬ್ರಿಟಿಷ್ ಇಂಡಿಯಾದ ಜನತೆಯೊಂದಿಗೆ ಅಧೀನ ಸಂಸ್ಥಾನದವರೂ ಸಹಕರಿಸುವಂತೆ ಅವುಗಳೂ ಇಂತಹ ಆಕ್ಟೊಂದನ್ನು ಜ್ಯಾರಿಗೆ ತರುವಂತಾಗಬೇಕು. ಇದೇ ದೇಶದಲ್ಲಿ ವಿಕಸನಕಾರ್ಯ ಧೋರಣೆಯು ಸ್ವೀಕೃತವಾಗುವಂತೆ ಇಂತಹ ಅಖಿಲದೇಶೀಯ ಮಸೂದೆಯೊಂದನ್ನು ಜ್ಯಾರಿಗೆ ತರುವ ಆವಶ್ಯಕತೆಯನ್ನು ಮದ್ರಾಸ್ ಸರಕಾರವು ಇಂಡಿಯಾ ಸರಕಾರಕ್ಕೆ ಮನಗಾಣಿಸಬೇಕು.

ವೆಟರ್ನರಿ ಆಸ್ಪತ್ರೆಗಳು.

ಸರ್ವಸಾಧಾರಣವಾಗಿ ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಪಟ್ಟಣಗಳಲ್ಲಿ ಮಾತ್ರ ಸ್ಥಾಪಿತವಾಗುತ್ತವೆಂಬ ಯುಕ್ತವೂ ಪ್ರಾಮಾಣ್ಯವೂ ಆಗಿರುವ ದೂರಿನ ವಿಷಯವನ್ನು ವ್ಯವಸಾಯ ಕಮಿಶನಿನವರು ತಮ್ಮ ವರದಿಯಲ್ಲಿ ನಮೂದಿಸಿರುತ್ತಾರೆ. ಇದರಿಂದ ಹಳ್ಳಿಗರ ಜಾನುವಾರುಗಳ ಚಿಕಿತ್ಸೆಗೆ ಯಾವ ಸಹಾಯವೂ ದೊರೆಯಲು ಸಾಧ್ಯವಾಗುವದಿಲ್ಲ. ಆದುದರಿಂದ ಒಂದು ವೆಟರ್ನರಿ ಆಸ್ಪತ್ರೆಗೆ ಎರಡು ಅಥವಾ ಹೆಚ್ಚು ಸರ್ಜನರನ್ನು ನೇಮಿಸಿ ಒಬ್ಬರು ಆಸ್ಪತ್ರೆಯಲ್ಲಿರುವಾಗ ಇತರರು ಸುತ್ತುಮುತ್ತಿನ ಗ್ರಾಮಗಳಲ್ಲಿ ಸಂಚರಿಸುವಂತಾಗಬೇಕೆಂಬುದು ಕಮಿಶನಿನವರ ಸೂಚನೆ. ಈ ಕ್ರಮವು ಮದ್ರಾಸಿನಲ್ಲಿದೆ. ಮದ್ರಾಸಿನಲ್ಲಿ ೧೦೩ ಗೋವಾಸ್ಪತ್ರೆಗಳಿವೆ. ಆದರೆ ಇವುಗಳಲ್ಲಿ ನೇಮಕ ಹೊಂದಿರುವ ಸಂಚಾರಿಕ ಡಾಕ್ಟರರು ೮೮ ಮಂದಿ ಮಾತ್ರ. ಸರಿಯಾದ ಯೋಗ್ಯತೆಯುಳ್ಳ ಜನರು ದೊರೆಯದ ನಿಮಿತ್ತ ಇವುಗಳಲ್ಲಿಯೂ ಕೆಲವು ಖಾಲಿಬಿದ್ದಿರುತ್ತವೆ. ಇಲ್ಲಿಯೂ ತೊಂದರೆ ಎಂದರೆ ಸಿಬ್ಬಂದಿಯ ಅಭಾವವಾಗಿದೆ. ವೆಟರ್ನರಿ ಖಾತೆಗೆ ಹೆಚ್ಚು ಜನರನ್ನು ಆಕರ್ಷಿಸಬೇಕಾಗಿದೆ. ಆ ನೌಕರಿಗೆ ಹೆಚ್ಚು ಸಂಬಳವಿತ್ತು ಅವರಿಗೆ ಮುಂದಕ್ಕೂ ಹೆಚ್ಚಿನ ಬಡ್ತಿಯು ದೊರೆಯುವಂತಾಗಬೇಕು. ಸರಕಾರವು ಸರ್ಕಲ್ ಆಫೀಸರರ ಸಂಖ್ಯೆಯನ್ನು ೭ರಿಂದ ೧೪ಕ್ಕೇರಿಸಿರುವುದು. ಜಿಲ್ಲೆಯ ಬೇರೆ ಬೇರೆ ಗೋವಾಸ್ಪತ್ರೆಗಳ ಮತ್ತು ಸಂಚಾರಕರ ಕೆಲಸವನ್ನು ಪರೀಕ್ಷಿಸಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವಂತೆ ನೋಡಲು ಪ್ರತಿ ಜಿಲ್ಲೆಗೊಬ್ಬ ವೆಟರ್ನರಿ ಸರ್ಜನರಿರಬೇಕೆಂದು ವ್ಯವಸಾಯ ಕಮಿಶನಿನವರು ಸೂಚಿಸಿರುವರು. ಈಗ ಕೆಲಸಮಾಡುವ ಸಿಬ್ಬಂದಿಯೂ ಆಸ್ಪತ್ರೆಗಳ ಸಂಖ್ಯೆಯೂ ಅತಿ ಕಡಿಮೆಯಾಗಿದೆ. ಈಗಲೇ ಪ್ರತಿ ಜಿಲ್ಲೆಗೊಬ್ಬ ವೆಟರ್ನರಿ ಸರ್ಜನರನ್ನು ನೇಮಿಸುವ ಅವಶ್ಯವಿರಲಾರದು. ಆದರೆ ಕಾಲಾನುಭಾಗದಲ್ಲಿ ಕಮಿಶನಿನವರು ಸೂಚಿಸಿರುವ ಕೆಲಸಮಾಡಲು ಪ್ರತಿ ಜಿಲ್ಲೆಗೊಬ್ಬ ಸರ್ಜನರನ್ನು ನೇಮಿಸುವುದು ಅವಶ್ಯವಾಗಬಹುದು. ಈ ವಿಷಯಗಳಿಗೆಲ್ಲಾ ಮಾನ್ಯ ಡೆವೆಲಪ್‌ಮೆಂಟ್ ಮಂತ್ರಿಗಳು ಶೀಘ್ರಗಮನ ಕೊಡುವರೆಂದು ನಾನು ನಂಬುತ್ತೇನೆ.

೫೦ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

ಉಪಯೋಗಿಸಲ್ಪಟ್ಟ ಔಷಧಗಳು.

1. ಧಾತುಪುಷ್ಟಿ ಲೇಹ—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ಹಗಲು ಮೂರ್ಖರಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು ಕುಂದುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಮುಂತಾದ ರೋಗಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಕ್ರಯ ಡಬ್ಬಿ 1ಕ್ಕೆ ರೂ. 2—8—0. ಮೂರು ಡಬ್ಬಿಗಳಿಗೆ ರೂ. 7.

2. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನದೋಷಗಳು, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಅಂತರಿಕ ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರೈಸಿರುವವು. ಕ್ರಯ 1 ಬಾಟಲಿ ಔಷಧಕ್ಕೂ, ಒಂದು ಡಬ್ಬಿ ಮಾತ್ರೆಗೂ ರೂ. 2—4—0. ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ. 6—4—0.

3. ಮೇಹ ಕುಠಾರ—ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

4. ಮಲೇರಿಯಾ ನಿವಾರಣೆ—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದುಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಕೊಡುವಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—8—0. 3 ಬಾಟ್ಲಿಗಳಿಗೆ ರೂ. 4—4—0.

5. ಬಾಲಗ್ರಹ ಗುಟಿಕೆ—ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10. 3ಕ್ಕೆ ರೂ. 1—12—0.

6. ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ—ಬಾಣಂತಿಯರಿಗೆ. ಬಾಟ್ಲಿ 1ಕ್ಕೆ ರೂ. 1—8—0. 3ಕ್ಕೆ 4—4—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ, ಮಂಗಳೂರು, ದ. ಕ.

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಬಿಚ್ಛೆಯಿದೆಯೋ? ನಿಮಗೆ ತಿಳಿದಿಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ಕುರಿತಾದ ಐದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. ೧; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ ೪ ಮಾತ್ರ; ಪ್ರತಿ ತಿಂಗಳ ಕೂಲಂಕುಷ ವಿಚಾರವುಳ್ಳ ಒಂದು ವರುಷದ ಜಾತಕ ಫಲ ರೂ. ೩; ಐದು ವರ್ಷದ ಫಲ ರೂ. ೮; ಪ್ರತಿ ತಾರೀಖಿನ ವಿಚಾರವುಳ್ಳ ಒಂದು ವರ್ಷದ ಫಲ ರೂ. ೧೦. ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ಪತೀಶ್ವರಿ ತಾಯಿತಕ್ಕೆ ರೂ. ೩; ಟಪಾಲು ಆಣೆ ೪; ನಿಮಗಾಗಿಯೇ ಬೇರೆ ಜಾದೂ ತಾಯಿತಕ್ಕೆ ರೂ. ೫೦.

ಆಂಧ್ರ ಪತ್ರಿಕೆ—(ತೆಲುಗು ದೈನಿಕ ವಾರಪತ್ರಿಕೆ) ಮದ್ರಾಸು ತಾ. 8–2–1924ರಲ್ಲಿ ಬರೆದುದು – ತಿರುತ್ತಾಣಿಯಲ್ಲಿನ ಹನೂಮಾನ್ ಜ್ಯೋತಿಷಾಲಯದ ಜನರಲ್ ಮ್ಯಾನೇಜರು ವಿ. ಕೆ. ಶತಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. ಇದು 1923ನೇ ಇಸವಿ ನವಂಬರು ತಾ. ೧೫ರಲ್ಲಿ ಪ್ರಕಟವಾಯಿತು. ಅದರಲ್ಲಿ ಮಹಾತ್ಮಾಜಿಯವರು 1924ನೇ ಇಸವಿ ಫೆಬ್ರವರಿ ತಾ. ೬ರಲ್ಲಿ 7 ಘಂಟೆಗೆ ಕಾರಾವಾಸದಿಂದ ಮುಕ್ತರಾಗುವರೆಂದು ಬರೆದಿದ್ದರು. ಅದರಲ್ಲಿ ಹೇಳಿದಂತೆಯೇ ನಡೆದಿದೆ. ಇದುಕಾರಣ ಈ ಜೋತಿಷ್ಯರ ಅದ್ಭುತ ಶಕ್ತಿಸಾಮರ್ಥ್ಯಗಳನ್ನು ಸರ್ವರೂ ಪರೀಕ್ಷಿಸಲು ನಾವು ಶಿಫಾರಸು ಮಾಡುತ್ತೇವೆ.

V. K. Satagopachariar,
Hanuman Astrological Office,
TIRUTTANI, CHITTOOR DISTRICT,
Madras Presidency.

ವಿ. ಕೆ. ಶತಗೋಪಾಚಾರ್ಯರ್,
ಹನುಮಾನ್ ಎಸ್ಟ್ರೊಲೋಜಿಕಲ್ ಆಫೀಸ್,
ತಿರುತ್ತಾಣಿ, ಚಿತ್ತೂರು ಜಿಲ್ಲಾ,
ಮದರಾಸು ಸಂಸ್ಥಾನ.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.
ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

☞ ಫೆರ್ರೊಕ್ವಿನ್
FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ
ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3—4—0 ಮಾತ್ರ.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.
ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು ಉಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು
ಡೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡ.

ಪಾಟಿಗಳು ಮತ್ತು ಪ್ರಿಂಟೆಡ್ ಪುಸ್ತಕಗಳು. ... ವಿದ್ಯಾರ್ಥಿಗಳಿಗೆ ಬೇಕಾದ ಕಾಪಿಗಳು ಮತ್ತು ಸಾಧ ಪೆನ್ಸಿಲು ರಬ್ಬರು, ರಬ್ಬರುಗಳೂ ವಿವಿಧ ಪ್ರಾಕಾರದ ... ಇಂಕ್ ಬಾಟಲಿಗಳೂ ಹೊಸತಾಗಿ ತರಿಸುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಯಾರಾಗಿವೆ! ತಯಾರಾಗಿವೆ!!
ಎರಡನೇ ಮತ್ತು ಮೂರನೇ ದರ್ಜೆಯ
ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds ವಜ್ರಗಳು **Diamonds**
Bola Shirinivas Rao,
C/o BOLA MANGESH ROW & Co.,
MANGALORE.

Agents & Direct imporrters of Superior Daimonds of Antwerp
ವಿಲಾಯಿತಿಯಿಂದ ಸೀದಾ ತರಿಸುವ ಶ್ರೇಷ್ಠ ವಜ್ರಗಳು.
— ಮಾರಾಟಕ್ಕಿವೆ. —
ಬೋಳ ಶ್ರೀನಿವಾಸ ರಾವ್,
C/o ಬೋಳ ಮಂಗೇಶ ರಾವು.
ಮಂಗಳೂರು.

ತಯಾರಾಗಿವೆ ತಯಾರಾಗಿವೆ!
ಕಾಫಿ ಪ್ಲೆಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚೆಕ್‌ರೋಲ್‌ಗಳು
ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.
ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.
ಕೃಪೆಯಿಟ್ಟು, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds Diamonds!!!
Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಚುನ್ನಾಕ (first quality Selected) ಎಮ್. ಸ್ಟ್ರಡಲ್ಲಿನಿಂದ ಬಂದ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಕೊಳ್ಳಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು.

‘ಅಂಬಾ ತಾಯಿತ್’

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ ‘ತಾಯಿತ್’ ನಂಬಿಕೆಯನ್ನುಂಟು ಮಾಡಿದ್ದುತ್ತದೆ.

೧ನೇ ನಂಬ್ರ ೧॥ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೨೦೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ಹೆಂಗಿನಮನೆ,
ಸಕ್ಲೇಶಪುರ ಪೋಸ್ಟು ಕಡೂರ್ ಜಿಲ್ಲಾ

Edited Printed & Published by V. S. Kamath, at the M. T. A SHARADA PRESS, MANGALORE